MONDAY, JANUARY 2ND 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೩

ಪತ್ರದ ವರ್ಗಣಿ.

ಈ ಪಟ್ಟಿಯಲ್ಲಿ ಅಗಾವು

ರೂಪಾಯಿ 2-4-0.

ಮುದ್ದೆಯಾರ್ಡರಿಯಿಂದ

ರೂ. 3-0-0

ಪ್ರತಿ ಪ್ರತಿ ಪತ್ರ ಸೇರಿ

ರೂಪಾಯಿ 2-0

ಬಿಡಿ ಸಂಚಿಕೆಗೆ 0-1

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಥ

ಮಿಕ ಲೈನ (೧೫ ಎರ್ಡ್ ಇದ್ದ)

ಆ ಸಾಲಿಗಳವರೆಗೆ ರೂ ೧

ಆ ನಂತ್ರ ಪ್ರತಿಸಾಲಿಗೆ 0-2-0

ಕಡಿಂಗದ ಸಾಲು ಎಷ್ಟು

ಕೊಡ್ಡದಿರುವರೋ ಆ ಪರಾಪ

ದಿಂದ ಅಷ್ಟುಸಾಲುಗಳು ಹಿಡಿ

ಯಲ್ಪಡುವವು.

ಜಾಹಿರಾತುಗಳ ಬಗ್ಗೆ

ಪತ್ರವ್ಯಾರಮು ಪಡುತ್ತೆ ಪತ್ರ

ಪಲ್ಪಡುವದು

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕಾನಡಾವೃತ್ತ, ಸೋಮವಾರ, ತಾರೀಖು ೨ ಮಾಹೆ ಜನವರಿ ಸ ೧೯೨೩ನೇ ಇಸವಿ)

ಉಚಿತ] ನನ್ನ ಶಾಸ್ತ್ರೀಯವಾತ [ಉಚಿತ

ಶಾರೀರಕ ಶಿಕ್ಷಣ.



ಈ ಪುಸ್ತಕದಲ್ಲಿ ... ವ್ಯಾಯಾಮದ ... ಆರೋಗ್ಯದ ... ಶರೀರಗಾ ... ಉಂಟಾಗುವದು ... ಪುಸ್ತಕವನ್ನು ಓದಿ ... ಈ ಪುಸ್ತಕವನ್ನು ... ಕಳುಹಿಸಿಕೊಟ್ಟು ... ಈ ಯೋಜನೆಯಲ್ಲಿ ... ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ ವಿ ಕೃಷ್ಣರಾವ್

ಬಸವನಗುಡಿ ಬೆಂಗಳೂರ ಟ

ಜಿ ವಿ. ಪೀಲಂಗಿ ಮೋಟಾರ ಸರ್ವಿಸ.



ಶಿರ್ಶಿ—ಹುಬ್ಬಳ್ಳಿ

ಡೇಲಿ ಮೋಟಾರ ಸರ್ವೀಸು ಪ್ರಾರಂಭವಾಗಿರುವದು !

ಇಲ್ಲಿ ಈ ಸರ್ವೀಸ ಶಿರ್ಶಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಶಿರ್ಶಿಗೆ ...

ಟಿಕೀಟಿನ ದರ:— ಸೋಯಿ ! ಸೋಯಿ ! ಎಲ್ಲರಿಗಿಂತಲೂ ಸೋಯಿ !!!

... ಹುಬ್ಬಳ್ಳಿಯ ... ಸಾಯ್ಕು ... ಅವರ ... ಸಿಗುವವು

ಇತ್ತ ಲಕ್ಷ ಕೊಡಿರಿ.

ಹೊಸ ಮಳೆಗಾಲದ ಸಲುವಾಗಿಯೇ ಪ್ರಯಾಣಿಕರ ಬಗ್ಗೆ ಹೊಸ ಸೋಯಿ !

ದಿ ಬೆಳಗಾಂವ ಮೋಟರ ವರ್ಕ್ಸ ಆಂಡ ಟ್ರಾನ್ಸಪೋರ್ಟ ಕಂಪನಿ, ಬೆಳಗಾಂವ

Te "TRANSPORT" ALNAWAR.

ಅಳ್ನಾವರ ಕಾರವಾರ

ಕಾರವಾರ ಅಳ್ನಾವರ

ತಂತಿ ಪತ್ತೆ — "ಟ್ರಾನ್ಸಪೋರ್ಟ" ಅಳ್ನಾವರ

ನಿಯಮಿತ ಡೇಲಿ ಮೋಟರ ಸರ್ವೀಸ್ ಚಾಲುಇದೆ.

ಇದೇ ೧೯೨೨ನೇ ಜೂನ ೧ನೇ ತಾರೀಖಿನಿಂದಾ ಪ್ರಾರಂಭವಾಗುವದು.

ಬೆಳಗಾಂವದಿಂದ ಕಾರವಾರಕ್ಕೆ ಬರುವ ಹಾದಿಯಲ್ಲಿ ಮಲಪ್ರಭಾ ಹೊಳೆ ಇದ್ದು ಮಳೆಗಾಲದಲ್ಲಿ ನೀರು ತುಂಬಿ ದಾರಿಯು ಕಟ್ಟಾಗುವದು. ಪ್ರಯುಕ್ತ ಪ್ರಯಾಣಿಕರಿಗೆ ಸ್ವೈರಸೋಯಿ ಆಗಬೇಕೆಂಬವರ ಸಲುವಾಗಿಯೇ "ಅಳ್ನಾವರಕ್ಕೆ" ಬರುವ "ಮುಂಬಯಿ ಮೇಲ್" ನೋಡಿಕೊಂಡು ಹಳಿಯಾಳ ಯಲ್ಲಾಪೂರ ಅಂಕೋಲಾ ಮಾರ್ಗವಾಗಿ "ಅದೇ ದಿವಸ" ಕಾರವಾರಕ್ಕೆ ಮುಟ್ಟುವಂತೆಯೂ ಕಾರವಾರದಿಂದ ಬೆಳಿಗ್ಗೆ ಹೊರಟು "ಮುಂಬಯಿ ಮತ್ತು ಬೆಂಗಳೂರ" ಕಡೆಗೆ ಹೋಗುವ ಮೇಲ್ ಗಾಡಿಗಳಿಗೆ" ಅಳ್ನಾವರಕ್ಕೆ ಮುಟ್ಟುವಂತೆ ಯೋಗ್ಯ ವ್ಯವಸ್ಥೆ ಇಟ್ಟಿರುತ್ತದೆ "ಅಳ್ನಾವರದಲ್ಲಿ" ಪ್ರಯಾಣಿಕರಿಗೆ ಉಳಕೊಳ್ಳಲಿಕ್ಕೂ ಉಪಹಾರ ಮತ್ತು "ಊಟದ ಬಗ್ಗೆ ವಗೈರೆ ಯೋಗ್ಯ ವ್ಯವಸ್ಥೆಯೂ ಇರುವದು.

ಪುನಃಶ್ಚ

ಮಳೆಗಾಲದ ನಂತರ:-

ಸೂಚನೆ - ೧೯೨೨ನೇ ಸಪ್ಟಂಬರ ೧ನೇಯಿಂದಾ ಬೆಳಗಾಂವದಿಂದಾ ಕಾರವಾರಕ್ಕೆ "ಡೇಲಿ ಸರ್ವೀಸವು" ಚಾಲು ಇರುವದ ಟಿಕೇಟಿನ ದರಗಳು ... ಕಳಗಿನ ವಿಳಾಸದಲ್ಲಿ ಬರೆದು ತಿಳಕೊಳ್ಳಿರಿ.

ಹೆಚ್ಚಿನ ಸೂಚನೆ:- ಸ್ಪೇಶಲ್ ಮೋಟಾರಗಳು, ಅಗಾವು ತಿಳಿಸಿದ್ದಲ್ಲಿ ಯೋಗ್ಯ ದರದಿಂದ "ರಿಝರ್ವ" ಮಾಡಲ್ಪಡುವವು

Proprietor- THE BELGAUM MOTOR WORKS & TRANSPORT CO., BELGAUM

T - "TRANSPORT" BELGAUM.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ ವಿಭವ ಸಂ|| ದ

ಹೊಸ ಪಂಚಾಂಗಪಟ್ಟಿ

ಜಾಹೀರಾತು ಕೊಡಲಿಚ್ಛಿಸುವವರು

ಈ ಕೆಳಗಿನ ವಿಳಾಸಕ್ಕೆ

ಇದೇ ತಿಂಗಳ ತಾರೀಖು ೧೫ರ ಒಳಗಾಗಿ

ಪತ್ರವ್ಯವಹಾರ ಮಾಡತಕ್ಕದ್ದು.

ಪಂಚಾಂಗಗಳು ಈ ತಿಂಗಳ ೩೦ನೇ ತಾರೀಖಿನೊಳಗೆ

ಮಾರಾಟಕ್ಕೆ ಸಿದ್ಧವಾಗುತವೆ

ಬೇಕಾದವರ ಈಗಲೇ ತಿಳಿಸಬೇಕ

ನಿಯಮಿತ ಪ್ರತಿಗಳು ಮುದ್ರಿಸಲ್ಪಡುತವೆ

ಪತ್ತೆ. ಮೆನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

The Brittannia Life Assurance Company Ltd

He[illegible] Kit B[illegible]

[illegible]

ಈ ಕಂಪನಿಯಲ್ಲಿ ನಮ್ಮ ಭಾರತೀಯರಿಗೆ ಬೇಕಾದ [illegible] ಲಾಭ [illegible] ಕಡಿಮೆ ಕಂತಿನಿಂದ ಅಧಿಕ ಲಾಭ [illegible] ಇರುವ [illegible] ಗಿದ್ದು [illegible] ಇದರ ಕಂತುಗಳು ಬಹಳೇ ಕಡಿಮೆಯಾಗಿರುವದು ಆದುದರಿಂದ ಪ್ರತ ಪ್ರತ. ಈ ಕಂಪನಿಯಲ್ಲಿಯೇ ವಿಮೆಯನ್ನಿಳಿಸಲು ಜನರು ಹೇಳತಕ್ಕದ್ದು ಸಹಜವಾಗಿದೆ

ಈ ಸುಸಂಧಿಯನ್ನು [illegible] ಒಳ್ಳೇ ಮಹನೀಯರು ನಮ್ಮ ಏಜಂಟರಾಗಲು ಇದೇ ತಕ್ಕ ಸಮಯವು [illegible] ಆನ ಭವ ಪ ರಿಜಿಸ್ಟರು ಕರಾರುಗಳು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ದಿ ಬ್ರಿಟಾನಿಯಾ ಲೈಫ ಇನ್ಸುರೆನ್ಸು ಕಂಪನಿ ಲಿಮಿಟೆಡ್

ಹೆಡ್ ಆಫೀಸ [illegible]

ಮುಂಬಯಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ್,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸರುಕು ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಬೇಕಾದ ಜಾಗ ರೋಕ ಖರೇದಿ ಮಾಡಿ ಕಳಿಸುತ್ತೇವೆ ದಲಾಲಿ ಹೆಚ್ಚಿಗೆ ಕೊಡಬೇಕಿಲ್ಲ, ಖರೇದಿ ಚೌಕಸಿಯಿಂದಾಗುತದೆ ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುತದೆ ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗು ತರಿಸಿಕೊಳ್ಳಿ ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂಮೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂಮೆಂಟ್ಸ್‌ಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು, ಬಹುಮಾನಗಳ ವಿವರ – ಫೌಂಟನ ಪೇನಾ ೧ ಹೇರಾಯಿಲ್ ಬಾಟ್ಲಿ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಾಯಾರದ ಸರಪಣಿ ೧, ಸುವಾಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ್ ಗೊಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್‌ಲೇಸ್ ಎಂಬ ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸಟ್ ೧, ಕೈವಸ್ತ್ರ ೧ ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ ಬರೇ ರೂ ೪-೮-೦

ವಿಳಾಸ — **ಇಂಗ್ಲೀಷ ಎಂಪೋರಿಯಂ,**

ಪೋಸ್ಟ ಬಾಕ್ಸ ನಂ. ೧೦೫, ಮದರಾಸು.

ಟೇಬಲ್ ಟೈಂಪೀಸ ಇನಾಂ!

ಈ ನಕ್ಷೆಯಲ್ಲಿ ಕಂಡ ಪೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು ಇದಕ್ಕೆ ೧೪ ಕ್ಯಾರೆಕ್ಟ ನಿಬ್ಬು ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು ಈ ತಿಂಗಳೊಳಗಾಗಿ ಈ ಪೆನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.

ವಿಳಾಸ —ಪೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಕಲ್ಪತರು ಮಿಶ್ರಣ

ಮಲೇರಿಯಾ ನಾಶಕ

ಎಂದರೆ, ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಕೇಳಬಹುದು:-

ಏಷ ಕಲ್ಪತರುರ್ನಾಮ ರಸಃ ಪರಮ ದುರ್ಲಭಃ | ಅಸಾಧ್ಯಂ ಚಿರಕಾಲೋತ್ಥಂ ಜೀರ್ಣಂ ಚ ವಿಷಮಂ ಜ್ವರಮ್ | ಹಂತಿ ಜ್ವರಾತಿಸಾರಾ ಚ ಗ್ರಹಣೀಂ ಪಾಂಡು ಕಾಮಲಾಮ್ ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ ಅನೇಕ ಪ್ರಶಂಸಾಪತ್ರಗಳೂ ದೊರಕಿವೆ.

೬ ಔನ್ಸಿನ ಬಾಟ್ಲಿಗೆ ರೂ. ೧-೬-೦

ನಮ್ಮ ಪತ್ತೆ.— **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸವರ್ಥ ಫಾರ್ಮಸಿ, ಗಡ್ಡೆಕೇರಿ, ಮಂಗಳೂರು

ಕುಮಟಾ ಏಜಂಟ – ಕಲಬಾಗ ಮಾಧವ ರಾಮ ಶ್ಯಾನಭಾಗ.

ಮದ್ರಾಸದಲ್ಲಿ ರಾಷ್ಟ್ರೀಯ ಸಭೆಯ ನಾಲ್ವತ್ತೆರಡನೇ ಅಧಿವೇಶನ.

ಮದ್ರಾಸದೊಳಗಣ ಪ್ರಥಮ ಸಂವತ್ಸರದ ರಾಷ್ಟ್ರೀಯ ಸಭೆಯ ಅಧಿವೇಶನವು ಸೋಮ ಮಂಗಳ-ಬುಧ ವಾರಗಳಲ್ಲಿ ದಿಲ್ಲಿಯ ವಿಖ್ಯಾತ ವೈದ್ಯರೂ ಲೋಕನಾಯಕರಾದ ಡಾಕ್ಟರ ಮುಕ್ತಾರ ಅಹಮ್ಮದ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಸೋಮವಾರ ಅಪರಾಹ್ನ ೩ ಘಂಟೆಗೆ ಪ್ರಾರಂಭವಾಗುವದಿತ್ತು, ೧೨ ಘಂಟೆಯಿಂದಲೇ ಪ್ರೇಕ್ಷಕರೂ, ಪ್ರತಿನಿಧಿಗಳೂ ವಿಸ್ತೀರ್ಣವಾದ ಟಿಳಕ ಮಂಟಪದಲ್ಲಿ ಉತ್ಸಾಹಭರಿತರಾಗಿ ತಂಡೂಗಟ್ಟಿ ಸೇರಿದ್ದರು. ಸ್ವಾಗತ ಸಮಿತಿಗೆ ೩॥ ಸಾವಿರಕ್ಕೆ ಮಿಕ್ಕಿ ಸಭಾಸದರಾಗಿದ್ದರು. ಟಿಳಕ ಮಂಟಪವನ್ನು ಸಶೋಭಿತವಾಗಿ ಶೃಂಗರಿಸಲ್ಪಟ್ಟಿತ್ತು. ಅಧ್ಯಕ್ಷರ ದರ್ಶನವು ಎಲ್ಲರಿಗೂ ಕಾಣುವಂತೆ ಟಿಳಕ ಮಂಟಪದ ಮಹಾದ್ವಾರದಿಂದ ಜನಗಳೆಲ್ಲರು ಅತ್ಯಂತ ಸಮಾಧಾನದಿಂದ ಆಸನಸ್ಥರಾಗಿದ್ದರು. ನೇಮಿಸಿದ ಹೊತ್ತಿಗೆ ಸರಿಯಾಗಿ ೩ ಘಂಟೆಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ॥ ಅನ್ಸಾರಿಯವರು ಮಹಾತ್ಮಾ ಗಾಂಧಿ, ಮೌ॥ ಮಹಮ್ಮದ ಅಲ್ಲಿ, ಪಂಡಿತ ಮದನಮೋಹನ ಮಾಳವೀಯ, ಡಾ॥ ಬಿಸೆಂಟ, ಶ್ರೀ॥ ಸೇನಗುಪ್ತ, ಶೇಟ ಜಮನಾಲಾಲ ಬಜಾಜ ಪ್ರಭೃತಿ ಲೋಕನಾಯಕರ ಸಹಿತ ಮಂಟಪದಲ್ಲಿ ಸಾರಿದೊಡನೆ ಪ್ರಜೆಗಳೆಲ್ಲರೂ ಅತ್ಯಂತ ಉತ್ಸಾಹದಿಂದ ಸ್ವಾಗತವನ್ನಿತ್ತರು. ಅಧ್ಯಕ್ಷರ ಬಿಂದವೇರಿ ವಿರಾಜಿಸಿದ ಕೂಡಲೇ ವಿಲಾಯತಿಯ ಕಾಮಗಾರ ಪಕ್ಷದ ಮಿ॥ ಜೋನ್ಸ್ಟನರವರೂ, ಜಸ್ಟಿಸ್ ಪಕ್ಷದ ನಾಯಕರಾದ ರಾಜಾಸಾಹೇಬ—ಪಾನಗಲ್—ಕಲಕತ್ತೆಯ ರಾಜರವರೂ, ಮದ್ರಾಸ ಪ್ರಾಂತದ ಮಂತ್ರಿಗಳೂ, ಪ್ರಮುಖ ಲೋಕನಾಯಕರೂ ಆಸನಸ್ಥರಾಗಿದ್ದರು. ಸರ್ ವೆಂಕಟರತ್ನಂ, ಶ್ರೀ॥ ಟಿ. ರಂಗಾಚಾರ್ಯ, ಕೃಷ್ಣಸ್ವಾಮಿ ಅಯ್ಯಂಗಾರ, ವಿದ್ಯಾಸಾಗರ ಪ್ರಭೃತಿ ಸಜ್ಜನರು ಸೋದರರು ರಾಷ್ಟ್ರೀಯಗೀತ ಹಾಡುತ್ತ ಕೊಟ್ಟು ಕೂತುಕೊಂಡಿದ್ದರು. ೩॥ ಘಂಟೆಗೆ "ವಂದೇ ಮಾತರಮ್" ಸ್ವಾಗತದ ಪದ್ಯಗಳಾಗಿ, ಸಭಾಕಾರ್ಯಕ್ಕೆ ಪ್ರಾರಂಭವಾಯಿತು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ॥ ಸಿ ಎನ್ ಮುಥ ಲಿಂಗ ಮುದಲಿಯಾರರವರು ವಕ್ತೃತ್ವದಿಂದ ಸ್ವದೇಶಿ ಪ್ರತಿನಿಧಿ–ಪ್ರೇಕ್ಷಕರ ಸ್ವಾಗತ ಮಾಡಿದರು. ಶ್ರೀ॥ ಮುದಲಿಯಾರರವರ ಭಾಷಣವು ಅರ್ಧತಾಸು ನಡೆಯಿತು. ಶ್ರೀ॥ ಮುದಲಿಯಾರರವರು ಮೊಟ್ಟಮೊದಲು ಸಭಿಕರಿಗೆಲ್ಲ ಪರಮಾನಂದದಿಂದ ಸ್ವಾಗತವನ್ನಿತ್ತು ಸ್ವರಾಜ್ಯಪ್ರೇಮಿಗಳಾಗಿ ಸಭಾಕಾರ್ಯವನ್ನು ನಡೆಸಬೇಕಾಗಿರೆಂದು ಪ್ರಾರ್ಥನೆ ಮಾಡಿ ಬೋಧಿಸಿದರು. ದೈವಲೀಲೆಯಿಂದಲೇ ಸೈಮನ್ ಕಮಿಶನ ಘಟನೆಯಾಗಿರುತ್ತದಾಗಿಯೂ, ಸಮಸ್ತರೂ ಕೂಡಿ ನಮ್ಮ ಜೊತೆಗಾರರಾಗಿರುತ್ತಾರಾಗಿಯೂ ಶ್ರೀ॥ ಮುದಲಿಯಾರರವರು ಸಂತೋಷದಿಂದ ಉದ್ಗರಿಸಿದರು. ಸೈಮನ್ ಕಮಿಶನಿನ ಘಟನೆಯನ್ನು, ರಾಷ್ಟ್ರೀಯ ಸಭೆ-ಪರಿಷತ್ತು ಕಾಯಿದೆ ಕೌನ್ಸಿಲುಗಳ ತೀರ್ಮಾನಗಳನ್ನೂ ಪರ್ಯಾಲೋಚಿಸಿ, ಬ್ರಿಟಿಶ ಪಾರ್ಲಿಮೆಂಟು ಮಾಡಿದ ಅಪಮಾನಾಸ್ಪದ ಪ್ರಕಾರವನ್ನು ನಿಷೇಧಿಸಿದರು. ಭಾರತೀಯರ ಸ್ವಯಂನಿರ್ಣಯಾಧಿಕಾರವನ್ನೇ ಅಲ್ಲಗಳೆದದ್ದರಿಂದ ಈ ಕಮಿಶನಕ್ಕೆ ಎಲ್ಲೆಲ್ಲಿಯೂ ನಾವು ಅಸಹಕಾರ ಮಾಡತಕ್ಕದ್ದೆಂದೂ, ಯಾವದೇ ಪ್ರಕಾರದಿಂದ ಸಹಾಯ ಕೊಟ್ಟಲ್ಲಿ ಅದರಿಂದ ನಮ್ಮ ಮುಂದಿನ ದಾರಿಗೆ ಅತಂಕ ಒದಗುವದೆಂದೂ ಅವರು ನಿಶ್ಚಯಪೂರ್ವಕವಾಗಿ ಸೇರಿದರು. ಅಲ್ಪಸಂಖ್ಯಾಕರಿಗೂ, ನಿರಾಶ್ರಿತರಿಗೂ ಆಶ್ರಯ ಕೊಡುವದು ಹಿಂದುಸ್ಥಾನದ ಪರಂಪರೆಯು. ಬ್ರಿಟಿಶರು ಅಲ್ಪಸಂಖ್ಯಾಕರ ಸಂರಕ್ಷಣೆಯ ದೊಡ್ಡದೊಂದು ಭೂತವಾಗಿ ಮಾಡಿದ್ದಾರೆ. ಸೈಮನ್ ಕಮಿಶನಕ್ಕೆ ಬಹಿಷ್ಕಾರ ಹಾಕುವದೇ ಭಾರತೀಯರ ಸ್ವಾಭಿಮಾನವು. ಇಷ್ಟು ವಿಷಯ, ಸ್ವದೇಶಿ ಪ್ರಯೋಜನ, ಖಾದಿ, ರಾಷ್ಟ್ರೀಯ ಸಭೆಯ ಕೆಲವು ಮುಂತಾದವುಗಳ ವಿಷಯ ಮಾತನಾಡಿ ಅಸಹಕಾರದ ಮೇಲೆ ಸಂಪೂರ್ಣ ನಿಷ್ಠೆಯನ್ನು ಪ್ರದರ್ಶಿಸಿ ಅರ್ಧ ತಾಸಿನಲ್ಲಿಯೇ ತಮ್ಮ ಭಾಷಣವನ್ನು ಮುಗಿಸಿ ಡಾ॥ ಅನ್ಸಾರಿಯವರಿಗೆ ಹೂಮಾಲೆಗಳಿಂದ ಸತ್ಕರಿಸಿ, ಅಧ್ಯಕ್ಷರಪಾದ ಅಧಿಕಾರವನ್ನು ಅರ್ಪಿಸಿದರು. ಆಗ ಡಾ॥ ಅನ್ಸಾರಿಯವರ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳಿಗೆ ಉಪೇಕ್ಷೆ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೆ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೨—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

—— ೦ ——

೪ ಔನ್ಸಿಗೆ	ರೂ.	೩—೨—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಅಥವಾ ಮದ್ಯವು ಸೇರಿರುತ್ತದೆ, ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋದಿಲ್ ಒಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮುದ್ದಾದ ಸ್ಪರ್ಧಿಯಿಲ್ಲ.

THE ANGLO INDIAN DRUG & CHEMICAL CO., LTD.

POST BOX. 2082 **BOMBAY.**

ಸಹಕಾರವು ನಿರರ್ಥಕವಾಯಿತು; ಅಡ್ಡಗಟ್ಟೋಣವೂ ವಿಫಲವಾಯಿತು;

ವಕ್ತೃತ್ವಪೀಠವನ್ನೇರಿ ತಮ್ಮ ಹೂವಮಾಲೆಯನ್ನು ಮಹಾತ್ಮರ ಭಾವಚಿತ್ರದ ಮೇಲಿಟ್ಟರು. ಅಯ್ಯಂಗಾರಿಯವರ ಭಾಷಣ ನಡೆದಾಗ ಹೂವಮಾಲೆಗಳೊಳಗಿಂದ ಹೂವಿನ ಎಸಳುಗಳು ಮಹಾತ್ಮರ ಭಾವಚಿತ್ರದಮೇಲೆ ಪುಷ್ಪವೃಷ್ಟಿ ಮಾಡುತ್ತಿದ್ದವು. ಅಸಹಯೋಗದಿಂದುಂಟಾದ ನವಚೈತನ್ಯದ ಬಗ್ಗೆ ಮಹಾತ್ಮರ ಅಭಿನಂದನೆಯಾಗುತ್ತಿತ್ತು. ಡಾ| ಅಯ್ಯಂಗಾರಿಯವರ ತಮ್ಮ ಭಾಷಣವನ್ನು ೧ ತಾಸಿನ ತನಕ ಅಸ್ಖಲಿತವಾಗಿ ಓದಿದರು.

ಅಧ್ಯಕ್ಷರ ಭಾಷಣ.

ಭಾರತೀಯ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಈಗಿನ ಒಕ್ಕಟ್ಟಿನಲ್ಲಿ ನನಗೆ ಕರುಣಿಸಿದ ಕುರಿತು ನಾನು ಬಹಳೇ ಕೃತಜ್ಞನಾಗಿದ್ದೇನೆ. ೩೫ ವರುಷಗಳ ಹಿಂದೆ ನಾನು ಇದೇ ಮದ್ರಾಸ ನಗರದಲ್ಲಿ ಕಾಲೇಜ ಶಿಕ್ಷಣವನ್ನು ಹೊಂದುತ್ತಿದ್ದೆನು. ಆ ಕಾಲಕ್ಕೆ ಈ ಉಚ್ಚ ಪದವು ನನಗೆ ಪ್ರಾಪ್ತವಾಗುವದೆಂದು ಕನಸು ಮನಸ್ಸಿನಲ್ಲಿಯೂ ಇದ್ದಿಲ್ಲ. ಅಂದಿನಿಂದ ನಮ್ಮ ರಾಷ್ಟ್ರೀಯ ಪ್ರಯತ್ನಗಳು ತೀವ್ರವಾಗಿ ಬೆಳೆದಿವೆ. ತಾವೆಲ್ಲರೂ ನನಗೆ ನೆರವಾಗಿ ನನ್ನ ಕಡೆಯಿಂದ ಉಂಟು ಕಾರ್ಯವನ್ನು ನೆರವೇರಿಸಿಕೊಳ್ಳತಕ್ಕದ್ದು. ಸ್ವತಂತ್ರ ಹಿಂದುಸ್ಥಾನವೇ ನಮ್ಮೆಲ್ಲರ ಸಾಧ್ಯವಿದೆ. ಸ್ವತಂತ್ರ ಜನಾಂಗದಂತೆ ನಾವೂ ಇರಬೇಕೆಂಬುದೇ ನಮ್ಮೆಲ್ಲರ ಧ್ಯೇಯವಿದೆ. ಸಾಮ್ರಾಜ್ಯದಲ್ಲಿಯೇ ಸಮತೆ ದೊರೆತು ಸ್ವಾತಂತ್ರ್ಯಪ್ರಾಪ್ತಿಯಾಗುತ್ತಿದ್ದರೆ, ಅದು ನನಗೆ ಇಷ್ಟವೇ. "ಸಾಧ್ಯವಿದ್ದರೆ ಸಾಮ್ರಾಜ್ಯದೊಳಗೆ, ಅವಶ್ಯವಿದ್ದರೆ ಸಾಮ್ರಾಜ್ಯದ ಹೊರಗೆ" ಎಂದು ಮಹಾತ್ಮರು ಹೇಳುತ್ತಾರಲ್ಲವೇ? ಸಾಮ್ರಾಜ್ಯ ಪ್ರಸಾರಕ್ಕಾಗಿ ಭೂಖಂಡದಲ್ಲಿ ಶ್ರೀಮಂತರು ಒಡೆಯರಾಗಿ ಓಡಿಸುತ್ತಿದ್ದಾರೆ. ಗಂಟು ಕಟ್ಟುವದೇ ಇವರ ಧ್ಯೇಯವಾಗಿದೆ. ಸಾಮ್ರಾಜ್ಯವೆಂದರೆ, ವ್ಯಾಪಾರವು. ಹಿಂದುಸ್ಥಾನವು ನಮ್ಮ ದೊಡ್ಡ ಗಿರಾಕಿ ಇದ್ದ ದೊಡ್ಡ ಗಿರಾಕಿಯನ್ನು ನಮಗಿನ್ನೆಲ್ಲಿಯೂ ಸಿಗದು" ಎಂದು ಬ್ರಿಟಿಶ ಮುತ್ಸದ್ದಿಗಳೊಬ್ಬರಾದ ಮಿ| ಜೋಸೆಫ್ ಚೇಂಬರ್ಲೇನರವರು ನುಡಿದಿದ್ದಾರೆ. ಆದರಿಂದಲೇ ಬ್ರಿಟಿಶ್ಯರು ಪೂರ್ವ ಆಫ್ರಿಕಾದ ವೇಸ ಇಂಡೀಸ, ಏಶಿಯಾ, ಅಮೇರಿಕಾ, ಆಫ್ರಿಕಾ ಖಂಡಗಳಲ್ಲಿ ಜನಗಳ ಜೀವನದ ಮಹತ್ವದ ದೊಡ್ಡ ಜವಾಬದಾರಿಯನ್ನು ಇಚ್ಛಾಪೂರ್ವಕ ವಹಿಸಿಕೊಂಡಿದ್ದಾರೆ. ಹಿಂದುಸ್ಥಾನವು ಸ್ವತಂತ್ರವಾದರೆ ಈ ಧರ್ಮರಾಯರ ವ್ಯಾಪಾರವೆಲ್ಲ ಥಟ್ಟನೆ ನಿಂತುಬಿಡುವದು. ಯಾಕೆಂದರೆ, ಹಿಂದುಸ್ಥಾನವೇ ಧರ್ಮರಾಯರ ವ್ಯಾಪಾರ ಕೇಂದ್ರವಾಗಿರ ಬಹುದಲ್ಲವೇ?

ನಮ್ಮ ರಾಷ್ಟ್ರೀಯ ನಡಾವಳಿಯ ವಿಚಾರ.

ಹಿಂದುಸ್ಥಾನವನ್ನು ಸ್ವತಂತ್ರ ಮಾಡುವದೇ ಹಿಂದಿನ ದೊಡ್ಡ ಪ್ರಶ್ನೆ. ಇದುವರೆಗೂ ತನಕ ಸರಕಾರದೊಡನೆ ನಾವು ಸಹಕಾರ ಮಾಡಿದೆವು. ಸಹಕಾರ ಧೋರಣವು ಮೂಲದಲ್ಲಿಯೇ ದೋಷಪೂರ್ಣವಿತ್ತು. ಸರಕಾರಿಗೆ ಮಾತ್ರ ಸಹಕಾರವೆಂದು ಹೇಳಲ್ಪಟ್ಟಿದೆ. ಇಂಥಲ್ಲಿ ಸಹಕಾರದಿಂದ ನಮಗೇನೂ ಪ್ರಾಪ್ತಿಯಾಗಲಿಲ್ಲ. ಪ್ರಬಲ-ದುರ್ಬಲರೊಳಗಿನ ಸಹಕಾರವೆಂದರೆ, ದುರ್ಬಲರು ಪ್ರಬಲರಿಗೆ ಸರ್ವಪರಿಯಿಂದಲೂ ಅಧೀನವಾಗಿ ನಡೆಯುವದು. ಮೊಂಟೆಗ್ಯೂರವರು ತಮ್ಮ ರಿಪೋರ್ಟಿನಲ್ಲಿ ಈ ದೃಷ್ಟಿಯನ್ನು ಸೌಮ್ಯ ಶಬ್ದಗಳಿಂದ ಮಾರ್ಮಿಕವಾಗಿ ನಮೂದಿಸಿದ್ದಾರೆ. "ಹಿಂದುಸ್ಥಾನ ಶಾಶ್ವತ ಘಟನೆಯನ್ನು ಅಲ್ಲಿಯ ಸ್ಥಿತಿಯ ಮೇಲಿಂದಲೇ ನಿರ್ಣಯಿಸಬೇಕು. ಆದರೆ ಸಾಮ್ರಾಜ್ಯದ ಜವಾಬದಾರಿಯ ಸಂಗತಿಯ ವಿಚಾರದಿಂದ ಈ ಘಟನೆಯಲ್ಲಿ ವಿಶೇಷ ಲಕ್ಷ್ಯ ಕೊಟ್ಟ ಮಾಡತಕ್ಕದ್ದು." ಇದರಿಂದ ಕೌನ್ಸಿಲುಗಳನ್ನು ಕೈವಶ ಮಾಡಿಕೊಂಡು ಬ್ರಿಟಿಶರು ತಯಾರಿಸಿದ ರಾಜ್ಯಘಟನೆಯಂತೆ ಪ್ರತಿಬಂಧಗಳನ್ನೊಡ್ಡಿ, ಸರಕಾರವನ್ನ ಲೋಕಮತಕ್ಕೆ ಅಧೀನ ಮಾಡಲು ಪ್ರಯತ್ನ ಮಾಡಿದ್ದಾಯಿತು. ಈ ಧೋರಣದ ಪ್ರವರ್ತಕರಿಗೆ ರಾಜ್ಯಘಟನೆಯ ಕ್ಲಿಷ್ಟ ಪರಿಣಾಮಗಳ ಕಲ್ಪನೆಯಿರಲಿಲ್ಲ. ಬಿಲಾಯತಿಯಿಂದ ಇತ್ಯರ್ಥ ಮಾಡುವ ಪ್ರಕರಣಗಳಲ್ಲಿ ಪ್ರತಿನಿಧಿಗಳೇ ಬಹುಮತವಾಗಿ ನೇಮಿಸಲ್ಪಟ್ಟರೆ, ಯಾರಿಗಾದರೂ ನ್ಯಾಯ ದೊರಕುವದೇ? ಬಹುಮತವಿದ್ದ ಪ್ರಾಂತಿಕ ಕಾಯಿದೆ ಕೌನ್ಸಿಲುಗಳಲ್ಲಿಯೂ ಈ ಧೋರಣವು ಗಟ್ಟಲಿಲ್ಲ. ಅದರಿಂದ ಈ ಪ್ರಯತ್ನಗಳೆಲ್ಲ ನಿಷ್ಫಲವಾದವು. ನಿರರ್ಥಕತೆಯನ್ನು ಪ್ರತ್ಯಕ್ಷವಾಗಿ ಸಿದ್ಧಗೊಳಿಸಲು ಬುದ್ಧಿಶಾಲಿಗಳಾದ ಲೋಕನಾಯಕರು ತೊಡಗಿದ್ದರಿಂದ ರಾಷ್ಟ್ರೀಯತೆಗೆ ದೊಡ್ಡ ಪೆಟ್ಟು ಬಿದ್ದಿತು. ಅಸಹಯೋಗವನ್ನೂ ನಾವು ಕೈಕೊಂಡೆವು. ಹೀಗೆ ೩೫ ವರುಷಗಳ ತನಕ ಸಹಕಾರ, ೧-೧|| ವರುಷದ ತನಕ ಅಸಹಕಾರ, ೪ ವರುಷಗಳ ತನಕ ಅಡ್ಡಗಟ್ಟುವ ಪ್ರಯತ್ನಗಳು ನಡೆದವು. ಅಸಹಕಾರದಿಂದ ನಮಗೆ ನಷ್ಟವಾಗಲಿಲ್ಲ. ಅಸಹಕಾರಕ್ಕೆ ತಕ್ಕದಾಗಿ ನಾವೇ ನಡೆಯಲಿಲ್ಲ. ಅಸಹಕಾರಕ್ಕೆ ಯಾವ ಬದಿಯಿಂದ ಪುರಸ್ಕಾರ ಮಾಡುವದು ಈಗ ಸಾಧ್ಯವೂ ಇಲ್ಲ ಆದರೂ, ಅಸಹಯೋಗಪ್ರವೃತ್ತಿಯು ಹಿಂದುಸ್ಥಾನದಲ್ಲಿ ಶಕ್ತಿಯುತವಾಗಿ ಉಂಟಾಗಿದೆ. ಸರಕಾರದ ಅಮಲಬಜಾವಣೆ, ಆದರಿಂದ ನಮ್ಮ ಕಾರ್ಯಭಾಗವಾಗಬಹುದು. ನಾವಂತು ಹೀಗೆ ಮಾಡಬೇಕೆಂದಿದ್ದೇವೆ ಈಗ ನಾವೇನು ಮಾಡಬೇಕೆಂದರೆ ಹೊರಗಿನ ಜನರಲ್ಲಿಯೂ, ರಾಷ್ಟ್ರೀಯ ಸಭೆಯಲ್ಲಿಯೂ, ಕೌನ್ಸಿಲುಗಳಲ್ಲಿಯೂ ನಾವು ಐಕ್ಯಮತ್ಯದಿಂದಿರಬೇಕು, ಕೆಲವು ನಗರಗಳಲ್ಲಿ ಉಂಟಾಗುವ ದಂಗೆಗಳ ಉಪದ್ರವವನ್ನು ನಿವಾರಿಸಬೇಕಾಗಿದೆ. ಆದರೆ ಸಭೆಗಳನ್ನು ಎಷ್ಟರ ತನಕ ಪುರಸ್ಕರಿಸತಕ್ಕದ್ದು, ಎಷ್ಟಕ್ಕೆ ತಡಿಯತಕ್ಕದ್ದು, ಎಂಬುವನ್ನು ನಾವು ಜನರಿಗಾಗಿ ಅರಿತುಕೊಂಡ ವ್ಯಕ್ತಿಯ ಶಕ್ತಿ ಸಮಾಜಹಿತಗಳನ್ನರಿತುಕೊಂಡು, ಸಮಾಜ ಕಲ್ಯಾಣಕ್ಕಾಗಿ ವ್ಯಕ್ತಿ ಹಿತವನ್ನು ಅರ್ಪಿಸಲು ಕಲಿಯಬೇಕು. ಹಿಂದೂ-ಮುಸಲ್ಮಾನರ ಕಲಹಗಳನ್ನು ನಾಟಕೀಯ ವಿಷಯ ಬಿಡಬೇಕಾಗಿದ್ದಿಲ್ಲ. ನಿತ್ಯವೂ ಹಿಂದೂ-ಮುಸಲ್ಮಾನರ ದೊಂಬಿಯ ಸುದ್ದಿಗಳನ್ನು ನಾವು ಕೇಳುತ್ತಿರುತ್ತೇವೆ. ಇಬ್ಬರೂ ಪರಸ್ಪರ ಕಾದಾಟ ಮಾಡಿಕೊಂಡು ನಾಶ ಹೊಂದಲು ಬಯಸುತ್ತಾರೇನೆಂದು ಕಾಣುತ್ತದೆ. ಈ ದೊಡ್ಡ ಪ್ರಕರಣದಲ್ಲಿ ರಾಷ್ಟ್ರೀಯ ಸಭೆಯು ಮೂಕಳಂತಾಗಿದೆ. ಈ ಪ್ರಶ್ನೆಯನ್ನು ರಾಷ್ಟ್ರೀಯ ಸಭೆಯೇ ಪರಾಂಬರಿಸಿ ಇತ್ಯರ್ಥಗೊಳಿಸಬೇಕು. ಹಿಂದೂ ಮುಸಲ್ಮಾನರ ಪ್ರಶ್ನೆಯು ಸಂಸ್ಕೃತಿಗಳ ಕಾದಾಟವಾಗಿದೆ. ಈ ಸ್ವರೂಪವನ್ನು ಹಿಂದೂ-ಮುಸಲ್ಮಾನರು ಹಿಡಿಯುವದಿಲ್ಲ. ಹಿಂದೂ-ಮುಸಲ್ಮಾನರಿಗೆ ಯುರೋಪಿಯನ್ ಸಂಸ್ಕೃತಿಯ ಪರಿಚಯವಿದೆ. ಆದರೆ, ನೆರೆಹೊರೆಯ ಹಿಂದೂ ಯಾ ಮುಸಲ್ಮಾನರ ಧರ್ಮ ಯಾ ಸಂಸ್ಕಾರಗಳ ಪರಿಚಯವಿಲ್ಲ. ಅದರಿಂದ ಪರಸ್ಪರ ಆಚಾರ ವಿಚಾರಗಳನ್ನು ಸಹಾನುಭೂತಿಯಿಂದ ಪರಸ್ಪರರು ವಿಚಾರಿಸದಿಲ್ಲ. ಹಿಂದೂ-ಮುಸಲ್ಮಾನರು ಶಾಶ್ವತವಾಗಿ ನೆನಪಿನಲ್ಲಿಡತಕ್ಕ ಕೆಲವು ವಿಷಯಗಳಿವೆ. ಇಬ್ಬರೂ ಭಾರತೀಯರು. ಇಬ್ಬರೂ ಭರತಖಂಡದಲ್ಲಿಯೇ ಉಳಿದು, ಭರತಖಂಡದಲ್ಲಿಯೇ ಐಹಿಕ ದೇಹವನ್ನು ಭರತಭೂಮಿಗೇ ಅರ್ಪಿಸಬೇಕು. ಇಷ್ಟು ಅವರ ಸಂಬಂಧಗಳು ನಿಕಟವಾಗಿವೆ. ೭ ಕೋಟಿ ಮುಸಲ್ಮಾನರನ್ನು ಹೊರಹಾಕಲು ಹಿಂದುಗಳು ಬಯಸುವದು ತೀರ ಹಾಸ್ಯಾಸ್ಪದವು; ಹಾಗೆಯೇ ೨೫ ಕೋಟಿ ಸನಾತನಿಗಳ ಮೇಲೆ ನಿರಂಕುಶ ಕಾರಭಾರ ನಡಿಸೇವೆಂದು ಮುಸಲ್ಮಾನರು ಸ್ವಪ್ನದಲ್ಲಿ ಬಯಸಲಾಗದು. ಸ್ವರಾಜ್ಯವು ಹಿಂದು ರಾಜ್ಯವಲ್ಲ, ಮುಸಲ್ಮಾನರ ರಾಜ್ಯವೂ ಅಲ್ಲ; ಸಮಸ್ತರ ನ್ಯಾಯ್ಯ ಅಧಿಕಾರಗಳನ್ನು ಮನ್ನಿಸಿ ಪಾಲಿಸುವ ಸಮಸ್ತರ ರಾಜ್ಯಕ್ಕಾಗಿಯೇ ನಾವು ಪ್ರಯತ್ನಪಡುತ್ತಿದ್ದೇವೆ. ಜಾತಿಸೇವಕರು ಸ್ವಸಮಾಜದ ಆರ್ಥಿಕ, ನೈತಿಕ, ರಾಜಕೀಯ ಉನ್ನತಿ ಸಾಧಿಸಲು ಬಯಸಿದರೆ, ಅದಕ್ಕೆ ನನ್ನದೇನು ಅಡ್ಡಿ ಇದೆ? ಆದರೆ, ಯಾವದೇ ವ್ಯವಸಾಯಕ್ಕೆ ಶಾಂತತೆ ಇರಬೇಕು. ಶಾಂತತೆ ಮನ್ನಿಸದಿರುವದು ಸುಸಂಸ್ಕೃತ ಸಮಾಜಕ್ಕೆ ಉಚಿತವಲ್ಲ. ಎಲ್ಲರೂ ರಾಷ್ಟ್ರೀಯ ಸಭೆಯದ್ವಾರಾ ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಬೇಕು; ತಮ್ಮ ದೂರುಗಳನ್ನೂ ಪರಿಹರಿಸಿಕೊಳ್ಳಬೇಕು. ಪಾರತಂತ್ರ್ಯಶೃಂಖಲೆಯನ್ನು ಕುಂದರಿಸಿಕೊಳ್ಳುವವರು ತಮ್ಮತಮ್ಮೊಳಗೆ ಬಡಿದಾಡಿಕೊಳ್ಳಲಾರರು. ಸ್ವಸಮಾಜಕ್ಕಾಗಿ ಯಾ ಸ್ವಹಿತಕ್ಕಾಗಿ ಕೆಲವು ಅನುಕೂಲತೆಗಳನ್ನು ಸಂಪಾದಿಸಿಕೊಳ್ಳಹೋಗಿ ನಮ್ಮ ವೈರಿಯ ಕೈಗೊಂಬೆಗಳಾಗುತ್ತೇವೆ. ಅದರಿಂದ ಸ್ವಾಭಿಮಾನಕ್ಕಾಗಿಯೂ, ಸ್ವಾರ್ಥಕ್ಕಾಗಿಯೂ ನಾವು ವಿಶಾಲ ದೃಷ್ಟಿಯಿಂದ ವಿಚಾರ ಮಾಡತಕ್ಕದ್ದು. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರವರು ಭರತಖಂಡದಲ್ಲಿ ಸಂಚರಿಸಿ ರಾಜಕಾರಣದ ವಿಷಯ ಕಳೆದ ಮೇ ತಿಂಗಳಲ್ಲಿ ಮಂಜೂರು ಮಾಡಿಕೊಂಡ ಠರಾವನ್ನು ಅತ್ಯಂತ ಪ್ರಶಂಸನೀಯವಿದೆ. ಜಾತಿವಾರ ಮತದಾರ ಮಂಡಳಗಳನ್ನು ನಷ್ಟಪಡಿಸಿ, ಸಂಯುಕ್ತ ಮತದಾರ ಮಂಡಳಗಳನ್ನು ಅವರು ಕಲ್ಪಿಸಿದ್ದಾರೆ. ಜನಸಂಖ್ಯೆಗನುಸಾರವಾಗಿಯೇ ಪ್ರತಿನಿಧಿಗಳಿಂದೇರ್ಪಡುವ ನಿಧಾನವಾಗಿದ್ದರಿಂದ ಸಮಸ್ತ ಸಮಾಜಗಳಿಗೆ ತಕ್ಕದ್ದಾಗಿ ಪ್ರತಿನಿಧಿಗಳು ರಾಷ್ಟ್ರೀಯ ರಾಜ್ಯಭಾರದಲ್ಲಿ ಸೇರುವರು. ಧಾರ್ಮಿಕ ವಿಷಯಗಳಲ್ಲಿಯೂ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯು ನಿರ್ಧಾರಗಳನ್ನು ಕೈಕೊಂಡು ಸಮಾಜಗಳಲ್ಲಿ ಸೈರಣೆಯನ್ನುಂಟು ಮಾಡಲು ಯುಕ್ತವಾಗಿದೆ. ಇತ್ತಂಡದವರು ಕೆಲ ಮಟ್ಟಿಗೆ ತ್ಯಾಗ ಮಾಡಲು ಸಿದ್ಧರಾಗಿರಬೇಕು. ಈ ಪ್ರವೃತ್ತಿಯನ್ನು ಇತ್ತಂಡದವರೂ ಪ್ರದರ್ಶಿಸುವದು ಸಾಧ್ಯವಿದೆ. ರಾಷ್ಟ್ರೀಯ ಸಭೆಯು ನಿರ್ಧಾರಗಳನ್ನು ರಾಷ್ಟ್ರೀಯ ಸಭಾಭಿಮಾನಿಗಳ ಆಚಾರದಲ್ಲಿ ಪರಿಣಮಿಸಲು ಪ್ರಯತ್ನಪಡಬೇಕು. ವರ್ತಮಾನ ಪತ್ರಿಕೆಗಳ ಮೇಲೆ ಈ ಜವಾಬದಾರಿಯು ವಿಶೇಷವಿದೆ. ಅವರೇ ಮುಖ್ಯವಾಗಿ ಸಮಾಜದಲ್ಲಿ ಸೈರಣೆಯನ್ನುಂಟು ಮಾಡಬೇಕು. ಅಸ್ಪೃಶ್ಯರ ಕುರಿತು ಒಂದು ಮಾತು ಹೇಳದಿರಲಾರೆ. ಅಸ್ಪೃಶ್ಯರನ್ನು ಈಗಿನಂತೆಯೇ ನಡಿಸಿಕೊಳ್ಳುವದು ದೇಶಕ್ಕೆ ಕ್ಷೇಮಕರವಲ್ಲ.

ರಾಷ್ಟ್ರಕ್ಕಾಗಿ ಸೈರಣೆಯನ್ನು ತಾಳಿ.

ರಾಷ್ಟ್ರೀಯ ಸಭೆಯನ್ನೂ ಪುನರ್ಘಟಿಸಬೇಕು. ಅಸಹಯೋಗ ಪ್ರಯತ್ನದಲ್ಲಿ ನಮಗುಂಟಾದ ಅಪಯಶಸ್ಸಿನಿಂದ ರಾಷ್ಟ್ರೀಯ ಸಭೆಗೆ ಒಹಳ ನಷ್ಟವಾಯಿತು. ೧೯೨೦-೨೧ ನೇ ಇಸವಿಯಲ್ಲಿ ಗ್ರಾಮ-ಗ್ರಾಮಗ

ಅಸಹಯೋಗ ಕ್ರಮವನ್ನು ನಾವೇ ಪುರಸ್ಕರಿಸಲಿಲ್ಲ; ಹೀಗೆ ನಾವು ಸೋತೆವು.

ರಲ್ಲಿ ಕಾಂಗ್ರೆಸ ಕಮಿಟಿಗಳಿದ್ದವು. ಸಾಮಾಜಿಕ ಕಲಹಗಳಾದಂದಿನಿಂದ ದೇಶದಲ್ಲಿ ಬಂದು ಪ್ರಕಾರದ ಬೇಸರವುಂಟಾಯಿತು. ರಾಷ್ಟ್ರೀಯ ಸಭೆಗೆ ವಿರೋಧವು ಆಗಹತ್ತಿತು. ಮುಂಬಯಿ-ಕಲಕತ್ತೆಗಳಲ್ಲಿ ಅಖಿಲ ಭಾರತೀಯ ಕಾಂಗ್ರೆಸ ಕಮೇಟಿಯು ಮಾಡಿದ ಠರಾವುಗಳಿಂದ ಸಮಾಜಗಳಲ್ಲಿ ಸಮಾಧಾನವುಂಟಾಗಹತ್ತಿದೆ. ಬ್ರಾಹ್ಮಣೇತರ ಗೆಳೆಯರು ಪುನಃ ನಮ್ಮನ್ನು ಸೇರಿದ್ದಾರೆ. ಹಿಂದೀ ಕ್ರೈಸ್ತರಿಗೆ ನಮ್ಮೊಡನೆ ಬರುವ ಬಯಕೆಯಿದೆ. ಭಾರತೀಯರೊಡನೆ ಸೇರಿಕೊಳ್ಳದೆ, ನೀವು ದೂರ ಉಳಿದರೆ, ನಿಮ್ಮ ಕಲ್ಯಾಣವಿಲ್ಲ. ಈ ನಮೂನೆಯನ್ನು ಮುಸಲ್ಮಾನರು ಮಾಡಿ ನೋಡಿದ್ದಾರೆ. ಅವರಿಗೂ ಕ್ಷೇಮವಾಗಲಿಲ್ಲ. ಆದರಿಂದ ಎಲ್ಲರೂ ರಾಷ್ಟ್ರೀಯ ಸಭೆಯಲ್ಲೇ ಬಂದು ಸೇರಬೇಕು. ಅಪರಿಹಾರ್ಯವಾಗಿ ಉತ್ಪನ್ನವಾದ ಹಾಗು ಉದ್ಭವಿಸುವ ಮತಭೇದಗಳನ್ನು ತೀರ್ಮಾನಿಸಿಕೊಳ್ಳುವ ಸ್ಥಳವು ರಾಷ್ಟ್ರೀಯಸಭೆಯಾಗಿರುತ್ತದೆ. ಪ್ರತಿಯೊಬ್ಬರು ತಮ್ಮ ತಮ್ಮ ಧೋರಣವನ್ನು ರಾಷ್ಟ್ರೀಯ ಸಭೆಗೆ ತಿಳಿಸಿಕೊಳ್ಳಲಿ, ಅವರ ಕಡೆಯಿಂದ ಆ ಧೋರಣವನ್ನು ರಾಷ್ಟ್ರಹಿತವಾಗಿ ಅಂಗೀಕರಿಸಿಕೊಂಡು ರಾಷ್ಟ್ರಸೇವೆ ಮಾಡಲು ರಾಷ್ಟ್ರೀಯ ಸಭೆಯಲ್ಲಿ ಸೇರಬೇಕು. ಮತಭೇದವಿರುವದೆಂದು ಮೂಲ ಸಭೆಯನ್ನೇ ತೊರೆಯುವದು ಕ್ಷೇಮಕರವಲ್ಲ. ಚಿಕ್ಕ-ಪುಟ್ಟ ಮತಗಳ ಮೇಲೆ ಹೊಸ ಹೊಸ ಪಕ್ಷಗಳನ್ನೇರ್ಪಡಿಸುವದು ಸ್ವತಂತ್ರ ದೇಶಗಳಿಗೂ ಪ್ರಾಪ್ತವಲ್ಲ. ಅಂಥ ಬಳಿಕ, ನಮಗೆ ಹ್ಯಾಗೆ ಪೂರೈಸಬೇಕು? ಮೂಲ ಹಕ್ಕುಗಳಿಗಾಗಿಯೇ ನಾವು ಕಾದಾಡುತ್ತಿದ್ದಾಗ, ನಾವು ಪಕ್ಷಗಳನ್ನೇರ್ಪಡಿಸಿಕೊಂಡ ಜೈತ್ಯವನ್ನು ಬಿಡದೆಯೇ ಮಾಡಿದರೆ, ಯಾರಿಗೂ ಏನೂ ಲಾಭವಾಗುವದಿಲ್ಲ. ಕೌನ್ಸಿಲುಗಳನ್ನು ನಾವು ಇಂದು ಬಿಡುವದರಲ್ಲಿ ಕೌನ್ಸಿಲುಗಳನ್ನು ಸೇರಿದವರು ಮತಭೇದ ಮಾಡಿಕೊಂಡು ಪೃಥಕ್ ಪೃಥಕ್ ಕಾದಾಡದೆ, ಲೋಕಪಕ್ಷದವರೆಲ್ಲರೂ ಒಕ್ಕಟ್ಟಿನಿಂದ ಸರಕಾರಕ್ಕೆದುರಾಗಬೇಕು. ರಾಷ್ಟ್ರೀಯ ಸಭೆಯು ಕೊಡಬಹುದಾದ ಸೂಚನೆಗಳನ್ನು ಎಲ್ಲರೂ ನಿಷ್ಠೆಯಿಂದ ಪಾಲಿಸತಕ್ಕದ್ದು.

ಸೈಮನ್ ಕಮೀಶನ್ನು ನೇಮಿಸಿ, ಅನ್ಯಾಯದಾತರಾದ ಬ್ರಿಟಿಶರು ನಮಗೆ ಆಶ್ರಯ ಕೊಟ್ಟಿದ್ದಾರೆ. ಭಾರತೀಯರಿಗೆ ಕಳಕಳಿಯ ಸ್ವಮಯಾರ್ಜದೆ ಕೊಡಲಿಲ್ಲ. ಇದರಿಂದಾದರೂ ಎಚ್ಚರಾಗಿ ಐಕ್ಯಮತದಿಂದ ನಾವು ದುಡಿಯಬೇಕು. ಹಿಂದುಸ್ಥಾನದ ಭವಿತವ್ಯತೆಯನ್ನು ನಿರ್ಣಯಿಸುವ ಅಧಿಕಾರವನ್ನೇ ಸಾಮ್ರಾಜ್ಯ ಸರಕಾರವು ಅಪಹರಿಸಿಕೊಂಡಿದೆ. ಆ ಅಧಿಕಾರವನ್ನು ನಮ್ಮಿಂದ ಯಾರೂ ಅಪಹರಿಸಿಕೊಳ್ಳಲಾಗದು. ಪ್ರಜಾಪ್ರತಿನಿಧಿಗಳ ಪರಿಷತ್ತನ್ನು ಕರೆಯಿಸಿ, ಅವರು ತಯಾರಿಸಿದ ಘಟನೆಯನ್ನು ಪಾರ್ಲಿಮೆಂಟು ಮನ್ನಿಸಬೇಕಾಗಿ ಭಾರತೀಯ ಪ್ರತಿನಿಧಿಗಳು ಸೂಚಿಸಿದ್ದಾರೆ. ಇದೊಂದೇ ಶರ್ತಿನ ಮೇಲೆ ಭಾರತೀಯರು ಬ್ರಿಟಿಶರೊಡನೆ ಸಹಕಾರ ಮಾಡಬಲ್ಲರು. ಇದಕ್ಕೆ ವಿರೋಧವಾಗಿ ನೇಮಿಸಿದ ಕಮೀಶನಿನ ಗೋಜಿಗೆ ನಾವು ಯಾರೂ ಹೋಗಬಾರದು.

ಸ್ವರಾಜ್ಯ ಯೋಜನೆಯೊಂದನ್ನು ತಯಾರಿಸಿ, ರಾಷ್ಟ್ರದೊಳಗಿನ ಪ್ರತಿನಿಧಿಗಳೊಡನೆ ಚರ್ಚಿಸಿ ಅವಶ್ಯವುಳ್ಳ ತಿದ್ದುಪಾಟಿಗಳನ್ನು ಕೈಕೊಂಡು, ಆ ಯೋಜನೆಯನ್ನು ನಿರ್ದೋಷ ಮಾಡಬೇಕು. ದಬ್ಬಾಳಿಕೆಯ ಕಾನೂನಿನ್ವಯ ಸೆರೆಯಾಳಾದ ದೇಶಸೇವಕರ ವಿಷಯ ಬಹಳೇ ಖೇದಪಡಬೇಕಾಗಿದೆ. ಪಾರತಂತ್ರ್ಯದಲ್ಲಿ ದೇಶಾಭಿಮಾನವೇ ದೊಡ್ಡ ಅಪರಾಧವಾಗುತ್ತದೆ. ಕೋಮಾಗಾಟಾಮಾರೂ ಪ್ರಕರಣ, ಲಷ್ಕರಿ ಕಾಯಿದೆ, ಅಸಹಯೋಗ, ಅಕಾಲಿ ಸತ್ಯಾಗ್ರಹ, ಮಾಪಿಳೆ ದಂಗೆಗಳಲ್ಲಿ ೬೦ ಸಾವಿರ ದೇಶಸೇವಕರು ಸೆರೆಯಾಳಾದರು. ಇವರಿಗೆ ಯಾವುದಾದರೊಂದು ರೂಪದಿಂದ ನ್ಯಾಯದ ವಿಚಾರವೊಂದಾಗಿ ಬಂದಿದ್ದರೆ ಸಾಕಷ್ಟು ಪ್ರಾಪ್ತವಾಗಿತ್ತು. ದಬ್ಬಾಳಿಕೆಯ ಕಾನೂನಿನನ್ವಯ ಸೆರೆಯಾಳಾದವರಿಗೆ ನ್ಯಾಯ ಸುನಾವಣೆಯ ಭಾಗ್ಯವಿಲ್ಲ. ಹೀಗೆ ಮಾಡುವದು ನೀತಿಭ್ರಷ್ಟತೆಯು. ತಮ್ಮ ಕಾನೂನಿನಂತೆಯೇ ತಮ್ಮ ನ್ಯಾಯಾಸನಗಳಲ್ಲಿಯೂ ಅಪರಾಧಿಗಳೆಂದು ಹೇಳಲ್ಪಡುವವರ ವಿಚಾರ ಮಾಡಲು ಸರಕಾರಕ್ಕೆ ಧೈರ್ಯವಿಲ್ಲ. ಸ್ವಾತಂತ್ರ್ಯಪ್ರವೃತ್ತಿಯನ್ನು ಈ ಪ್ರಕಾರ ದಬ್ಬುವದು ಕ್ಷೇಮಕರವಲ್ಲ. ಅವರಿಗೆ ಬಿಡುಗಡೆ ಮಾಡಿ ನಿಲ್ಲದೆ ಇಂಥ ಅಕ್ರಮಗಳು ಇನ್ನುಮುಂದೆ ನಡೆಯದಂತೆ ಪ್ರಜಾಧಿಕಾರಗಳ ಜಾಹೀರನಾಮೆಯನ್ನು ನಾವು ಮನ್ನಿಸಿಕೊಳ್ಳಬೇಕು. ಇದಲ್ಲದೆ, ಭಾರತೀಯರಿಗೆ ಪರದೇಶಕ್ಕೆ ಹೋಗಲು ಪ್ರತಿಬಂಧವಿದೆ. ಪರದೇಶದಲ್ಲಿದ್ದವರಿಗೆ ಹಿಂದಿರುಗಲಿಕ್ಕೂ ಪ್ರತಿಬಂಧವೇ. ಹಿಂದುಸ್ಥಾನವನ್ನು ಸ್ವತಂತ್ರ ಮಾಡುವದೇ ನಮ್ಮ ಧ್ಯೇಯವೆಂದು ನಾವು ಹೇಳಿದ್ದೇವಷ್ಟೇ. ಆ ಧ್ಯೇಯ ಸಾಧನೆಗಾಗಿ ನಾವು ಪರದೇಶಗಳೊಳಗಿನ ವ್ಯಾಪಾರವನ್ನು ಪರಾಂಬರಿಸಬೇಕು. ಅದನ್ನು ದುರ್ಲಕ್ಷಿಸಿ ನಮಗೆ ಹಾನಿಯಾಗಿದೆ. ಯುರೋಪ ಖಂಡವು ಒನ್ನೂರಿನಿಂದ ಏಶಿಯಾ ಖಂಡಕ್ಕೆ ಖಂಡಶಃ ಇದಿರಾಗಿ ಅದನ್ನು ಸೋಲಿಸಿದೆ. ಏಶಿಯಾ ಖಂಡದೊಳಗಿನ ಸಂಸ್ಕೃತಿಯೂ, ನಮ್ಮ ಸಂಸ್ಕೃತಿಯೂ ತಕ್ಕಮಟ್ಟಿಗೆ ಒಂದೇ. ಅದರಿಂದ ದೇಶಬಂಧು ಚಿತ್ತರಂಜನದಾಸರು ನುಡಿದಂತೆ ನಾವು ಏಶಿಯಾ ಖಂಡವನ್ನು ಒಕ್ಕಟ್ಟಿಗೆ ತರಿಸಲು ಪ್ರಯತ್ನಿಸಬೇಕು. ಚೀನ ದೇಶಕ್ಕೆ ಸೇನೆಕಳುಹಲಿಕ್ಕಿದ್ದ ಶುಕ್ರಿಯಾ ಪದಕವನ್ನು ದೃಷ್ಟಿಯಿಂದ ವಿಚಾರಿಸಿದರೆ, ಮಹತ್ವದ್ದೆ. ಇದಕ್ಕೆ ಸರಕಾರವು ಬುದ್ಧ್ಯಾ ಅಡ್ಡಗಟ್ಟಿತು. ಪ್ರಜೆಗಳ ಆರೋಗ್ಯ ಮಾನವು ಬಹುಮಟ್ಟಿಗೆ ಕುಗ್ಗಿದೆ. ೫೦ ವರ್ಷಗಳೀಚೆ ನಮ್ಮಲ್ಲಿಯ ಆರೋಗ್ಯಸ್ಥಿತಿಯು ಕೆಟ್ಟಿದೆ. ಕಾಲರಾ, ಪ್ಲೇಗು, ಇನ್‌ಫ್ಲುಎಂಝಾ, ಮಲೇರಿ, ಜ್ವರಗಳಿಂದ ವರ್ಷಂಪ್ರತಿ ಲಕ್ಷಾವಧಿ ಜನರು ಸಾಯುತ್ತಾರೆ. ಮದ್ಯಪ್ರಚಾರದಿಂದಲೂ ರಾಷ್ಟ್ರೀಯ ಆರೋಗ್ಯಕ್ಕೆ ಕುಂದು ಇನ್ನಷ್ಟು ಅಸ್ಪದವಾಯಿತು. ಪ್ರಜೆಗಳು ಕಷ್ಟಪಡಲಿ, ನೀರಿಯು ಕೆಂಗೆಡಲಿ, ದೇಸಾಯರು ಕಳೆಗುಂದಲಿ, ಕೂಲಿಕಾರರು ಅಸ್ತಿಪಂಜರರಾಗಲಿ, ಹೊಟ್ಟೆ ತುಂಬ ಕೂಳಿಲ್ಲದೆ ಬಳಲಲಿ; ಅವರ ಮದ್ಯವನ್ನು ಸರಕಾರವು ಪ್ರತಿಬಂಧಿಸಲೊಲ್ಲದು. ಮಧ್ಯಮ ತರಗತಿಯವರ ಸ್ಥಿತಿಯೂ ನೆಟ್ಟಗಿಲ್ಲ. ಸಾಕಷ್ಟು ಕೆಲಸ ಸಿಗದೆ, ಉಳಕೊಳ್ಳಲು ನಿರ್ಮಲ ಹವೆಯ ಮನೆಗಳ ಸಿಗದೆ ಕ್ಷಯವ್ಯಾಧಿಯಿಂದ ಅವರು ಬಳಲುತ್ತಿರುತ್ತಾರೆ. ಚಿಕಿತ್ಸಾಲಯಗಳನ್ನು ಅಲ್ಲಲ್ಲಿ ಸ್ಥಾಪಿಸಬೇಕು. ಗ್ರಾಮಸುಧಾರಣೆಯನ್ನು ಜಂಟಾಗಿ ಕೈಕೊಳ್ಳಬೇಕು. ಶಿಕ್ಷಣ ಕೊಟ್ಟ ಹೊರತು ಆರೋಗ್ಯಪಾಲನದ ಯೋಜನೆಗಳನ್ನು ತಿಳಕೊಳ್ಳಬರುವದಿಲ್ಲ. ಅದರಿಂದ ಶಿಕ್ಷಣ ಪ್ರಸಾರ ಮಾಡಬೇಕು. ರಾಷ್ಟ್ರವು ನಿಶ್ಶಸ್ತ್ರವಾದ್ದರಿಂದ ದೈಹಿಕ ಬಲವನ್ನು ದೃಢವಾಗಿ ಬೆಳಸಿಕೊಳ್ಳಲು ಜನರ ಲಕ್ಷವಿಲ್ಲ. ಜನರು ದುರ್ಬಲರಾದರು. ತಮ್ಮ ರಕ್ಷಣೆಯನ್ನು ಪರರಿಗೇ ವಹಿಸಹತ್ತಿದರು. ಅದರಿಂದ ಹಳೇ ಕಾಲದಿಂದಿದ್ದ ಗರಡೀಮನೆಗಳು ಕ್ರಮವಾಗಿ ನಾಮಶೇಷವಾದವು. ಅವುಗಳೊಡನೆ ಸ್ವಾವಲಂಬನವೂ, ಸ್ವಾಭಿಮಾನವೂ, ಲಯಹೊಂದಿದವು. ಶಸ್ತ್ರಗಳ ಕಾನೂನವನ್ನು ರದ್ದುಪಡಿಸಿದರೆ, ಶಾಂತತೆಯು ಭಂಗವಾಗುವದೆಂದು ಸರಕಾರವು ಭೀತಿಪಡುತ್ತದೆ. ಈ ಭೀತಿಯು ತೀರ ನಿರಾಧಾರವಾದದ್ದು. ಸಂಸ್ಥಾನಗಳಲ್ಲಿ ಶಸ್ತ್ರಗಳ ಕಾನೂನಿಲ್ಲ. ಅಲ್ಲಿ ದೊಂಬಿಗಳಿವೆಯೇ? ದೇಶರಕ್ಷಣೆಗೆಂದು ಪರ್ಮಾನೆಂಟ ಸೇನೆ ಎಷ್ಟು ಕೆಂದಾಯ ವ್ಯಯವಾಗುತ್ತದೆ. ಪ್ರಜೆಗಳು ಹೀಗೆ ನಿರಾಧಾರಿಯಾದಾಗ, ದೇಶದ ಸಂರಕ್ಷಣವನ್ನು ಈ ಪ್ರಕಾರ ನಡೆಸುವದು ಎಂದಾದರೂ ಸಾಧ್ಯ ಮಾತೇ?

(೮ ನೇ ಪಾನಿನ ಮೇಲೆ ಮುಂದರಿಸಿದೆ)

कारवारांत मुंबई!!!

अर्थात्

आमचा टोप्यांचा जंगी कारखाना !

आमच्या कारखान्यांत मखमल, बनात, फर, वेलीच्या, जरीच्या वगैरे हरएक तन्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टॉवेल, चौक, लहान-मोठे पंचे, सीतपाट, चौलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या !

टीपः—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ताः— मेसर्स गोविंद माधव शेणवि, फोवकार अँड सन्स.

पोस्ट— हुंकेरि (कारवार.)

ಕಾನಡಾ ವೃತ್ತ.

ಮಿತಿ ಪ್ರಭವ ಸಂ। ಪುಷ್ಯ ಶು। ೧೦ ಮಿ, ಸೋಮವಾರ

ಹೀಗೆ ನಡೆಯತಕ್ಕದ್ದು.

ಮದ್ರಾಸದೊಳಗೆ ಅಖಿಲ ಭಾರತೀಯ ಲೋಕನಾಯಕರಾದ ಡಾ। ಮುಖ್ತಾರ ಅಹಮ್ಮದ ಅನ್ಸಾರಿಯವರ ಅಧಿಪತ್ಯದಲ್ಲಿ ಸೇರಿದ ರಾಷ್ಟ್ರೀಯ ಸಭೆಯ ೪೩ ನೇ ಅಧಿವೇಶನದ ಸಂಕ್ಷಿಪ್ತ ವೃತ್ತಾಂತವನ್ನು ಪರ್ಯಾಲೋಚಿಸಿದರೆ, ಮತಮತಾಂತರಗಳ ಗೊಂದಲದಲ್ಲಿ ರಾಷ್ಟ್ರೀಯ ಸಭೆಯು, ರಾಷ್ಟ್ರಕಾರ್ಯದ ಹಡಗವನ್ನು ಕುಶಲತೆಯಿಂದ ನಡಿಸಿ, ಸ್ವರಾಜ್ಯ ಮಾರ್ಗವನ್ನು ಆಕ್ರಮಣ ಮಾಡಹತ್ತಿದೆಂದು ತಿಳಿಸಲು ಬಹು ಸಂತೋಷವಾಗುತ್ತದೆ. ಅಸಹಯೋಗದ ವೈಭವ ಕಾಲದಲ್ಲಿ ಉಂಟಾದ ರಾಷ್ಟ್ರೋಲ್ಲಾಸವು ಕ್ಷಣಭಂಗುರವಾಗಿ, ಜಾತಿಮತ್ಸರಗಳಿಂದಲೂ, ವೈಷಮ್ಯಗಳಿಂದಲೂ ರಾಷ್ಟ್ರಸ್ಥಿತಿಯು ಕಂಗೆಟ್ಟಾಗ ಮದ್ರಾಸದ ರಾಷ್ಟ್ರೀಯ ಸಭೆಯು ಸೇರಿತ್ತು. ಅಧ್ಯಕ್ಷರಾದ ಡಾ। ಅನ್ಸಾರಿಯವರು ನುಡಿದಂತೆ, ರಾಷ್ಟ್ರಚಿತ್ತವು ಬಹು ಚಂಚಲ ಕೊಂಡಿದೆ. ಬ್ರಿಟಿಶರೊಡನೆ ಸಹಕಾರ ಮಾಡಿಯೂ ಕಾರ್ಯಭಾಗವಾಗುವದಿಲ್ಲ, ಅಡ್ಡಗಟ್ಟಿದ್ದರಿಂದಲೂ ಬ್ರಿಟಿಶರು ಉದ್ದಟ ಮಾರ್ಗ ಬಿಟ್ಟು ರಾಜಮಾರ್ಗಕ್ಕೆ ಬರುವದಿಲ್ಲ, ರಾಜಮಾರ್ಗಕ್ಕೆ ತರಲು ಅಡ್ಡಗಟ್ಟೋಣವು ಸಮರ್ಥವಿಲ್ಲ. ಅಸಹಯೋಗವೋ, ಬಲು ಕಠಿಣ ವ್ರತವು. ಅದಕ್ಕೆ ತಕ್ಕ ಸ್ವಾರ್ಥತ್ಯಾಗವನ್ನೂ, ಸಾಹಸವನ್ನೂ, ವೈರಾಗ್ಯವನ್ನೂ, ಕಷ್ಟ-ನಷ್ಟಗಳನ್ನೂ ಸಹಿಸಲು ಈಗಿನ ನೀತಿಭ್ರಷ್ಟತೆಯಲ್ಲಿ ಅಸಾಧ ಮಾತು. ಹೀಗೆ ಮೂರು ಮಾರ್ಗಗಳು ರಾಷ್ಟ್ರಕಾರ್ಯಕ್ಕೆ ಪ್ರತಿಕೂಲವಾದಾಗ ಮುಂದಿನ ದಾರಿಯನ್ನು ಕಲ್ಪಿಸುವ ಮಹತ್ತ್ವವಾದ ಜವಾಬದಾರಿಯು ಮದ್ರಾಸದ ರಾಷ್ಟ್ರೀಯ ಸಭೆಯ ಮೇಲೆ ಬಿದ್ದಿತ್ತು. ಇದೊಂದು ಸಂಕ್ರಮಣ ಕಾಲವು. ಸಂಧಿಕಾಲದಲ್ಲಿ ಭಾರತೀಯರು, ಮಾನಧನ ಭಾರತೀಯರು ಹೇಗೆ ನಡಕೊಳ್ಳಬೇಕೆಂಬುದೇ ಪ್ರಶ್ನೆ. ಆ ಪ್ರಶ್ನೆಯನ್ನು ಈ ಅಧಿವೇಶನವು ಬಲು ಚಾತುರ್ಯದಿಂದ ಬಿಡಿಸಿ ಪ್ರಜೆಗಳಿಗೆ ದಾರಿ ತೋರಿಸಿಕೊಟ್ಟಿದೆ.

ಅತ್ಯಂತ ಮಾರ್ಮಿಕ ತೀರ್ಮಾನವು ರಾಷ್ಟ್ರೀಯ ಸ್ವಾತಂತ್ರ್ಯದ್ದು. ಸೈನ್ಯದಾಡಳಿತೆಯನ್ನೂ, ಸಾಮಾನ್ಯ ರಾಜ್ಯಭಾರವನ್ನೂ ನಡಿಸುವ ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯವು ಹಿಂದೀ ಪ್ರಜೆಗಳಿಗುಂಟೆಂಬ ಸಾಮಾನ್ಯ ಸಿದ್ಧಾಂತವು ಮೊಟ್ಟಮೊದಲು ಇದೇ ಅಧಿವೇಶನದಲ್ಲಿ ಪ್ರಕಟವಾಯಿತು. ಸಂಪೂರ್ಣ ಸ್ವಾತಂತ್ರ್ಯವೆಂದ ಕೂಡಲೆ ಹೌಹಾರುವವರನೇಕರಿದ್ದರು. ಬ್ರಿಟಿಶರ ಆಧಿರಾಜ್ಯವಿರದಿದ್ದರೆ, ಹಿಂದುಸ್ಥಾನದಲ್ಲೆಲ್ಲ ಅರಾಜಕತೆಯುಂಟಾಗಿ ದೇಶದಲ್ಲಿ ಅನರ್ಥಗಳುಂಟಾಗಬಹುದೆಂಬ ಭೀತಿಯು ಯಾವಾಗಲೂ ಹೇಳಲ್ಪಡುತ್ತಿತ್ತು. ಅದೀಗ ದೂರವಾಗಿದೆ. ಇನ್ನು ಆ ಭೀತಿಯನ್ನು ಯಾರೂ ಹೇಳಲಾಗದು. ಅದಕ್ಕೆ ಭಾರತೀಯರು ಹೆದರುವವರಲ್ಲ. ಈ ತೀರ್ಮಾನನ್ನು ಪಂಡಿತ ಮದನ ಮೋಹನ ಮಾಲವೀಯರವರೂ, ಬಿಝೆಂಟ ಅಮ್ಮನವರೂ ಮನ್ನಿಸಿದ್ದಾರೆಂದು ನಮೂದಿಸಲು ನಮಗೆ ಆನಂದವಾಗುತ್ತದೆ. ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ಈ ವಿಷಯವು ಚಿರಸ್ಮರಣೀಯವಾಗಿರುವದು. ಸ್ಯಾಯಮನ್ ಕೂಟಕ್ಕೆ ರಾಷ್ಟ್ರೀಯ ಸಭೆಯು ಕೊಟ್ಟ ಪ್ರತ್ಯುತ್ತರವಿದು. ಸ್ಯಾಯಮನ್ ಕೂಟವನ್ನು ನೇಮಿಸಿ ಬ್ರಿಟಿಶರು ಸ್ವಯಂನಿರ್ಣಯದ ಹಕ್ಕನ್ನು ಅಲ್ಲಗಳೆದಾಗ, ಸ್ವಾತಂತ್ರ್ಯವನ್ನು ಪ್ರಕಟಿಸಿ ಭರತಖಂಡವು ಇನ್ನು ಅಪಮಾನಗಳನ್ನು ಎಷ್ಟುಕಾಲ ಸಹಿಸಲಾರದೆಂದು ಬ್ರಿಟಿಶರಿಗೆ ಸಾರಿ ಹೇಳಿದೆ. ಸ್ಯಾಯಮನ್ ಕೂಟವನ್ನು ನೇಮಿಸಿ ಬ್ರಿಟಿಶರು ಅನ್ಯಾಯ ಪರಂಪರೆಯ ಮಂದಿರಕ್ಕೆ ಕಳಸವನ್ನೇರಿಸಿದ್ದಾರೆ. ಇನ್ನೂ ಹಟವಾದಿಗಳಾಗಿ [illegible] ನಡಕೊಂಡರೆ, ಭರತ ಖಂಡದ ಪ್ರಜಾಮತಕ್ಕೆ ಇದಿರಾಗಿ, ಅಧಿರಾಜ್ಯವನ್ನು ನಡಿಸುವದು ಸಾಧ್ಯವಿಲ್ಲದಾಗಿಯೂ, ಇಷ್ಟಕ್ಕೇ ಹಕಗಳನ್ನು ತೀರಿಸಬೇಕಾಗುವವೂ. ರಾಷ್ಟ್ರೀಯ ಸಭೆಯದ್ವಾರಾ ಭಾರತಪುತ್ರರು ಬ್ರಿಟಿಶರಿಗೆ ಮುಂಜಾಗ್ರತೆ ಕೊಟ್ಟಿದ್ದಾರೆ. ಮುಂಜಾಗ್ರತೆಯ ಮರ್ಮವನ್ನರಿತು ಬ್ರಿಟಿಶರ ಸಾಮ್ರಾಜ್ಯಮದವು ಇಳಿದರೆ, ಬ್ರಿಟಿಶರಿಗೂ, ಭಾರತೀಯರಿಗೂ ಕ್ಷೇಮವಾಗಬಲ್ಲದು.

ಹಿಂದು-ಮುಸಲ್ಮಾನರ ಸಂಬಂಧದ ಐಕ್ಯತೀರ್ಮಾನವು ಪ್ರಕೃತ ಸ್ಥಿತಿಯಲ್ಲಿ ತೀರ ವ್ಯವಹಾರಿಕವಿದೆ, ಹಿಂದು ಮುಸಲ್ಮಾನಾದಿ ದೇಶಬಾಂಧವರು ರಾಷ್ಟ್ರದ ವಿಪನ್ನಾವಸ್ಥೆಯನ್ನು ಲಕ್ಷಿಸದೆ, ತಮ್ಮ ತಮ್ಮ ಹಕ್ಕುಗಳಿಗಾಗಿ ಬಡಿದಾಡಿಕೊಳ್ಳುತ್ತಿರುವದು ಎಂದೆಂದಿಗೂ ಕ್ಷೇಮಕರವಲ್ಲ. ಹಕ್ಕುಗಳ ಮಾತು ಹಾಗಿರಲಿ, ಅವುಗಳನ್ನು ನಾವು ಈ ಮುಂದೆ ನಿರ್ಮಲಚಿತ್ತದಿಂದ ಇತ್ಯರ್ಥಪಡಿಸಿಕೊಳ್ಳುವ. ಸದ್ಯಕ್ಕೆ ಅನ್ಯೋನ್ಯ ಪ್ರೇಮಸಂಪಾದನೆಗಾಗಿ ಹಕ್ಕುಗಳನ್ನು ಉಪೇಕ್ಷಿಸಿ ಸ್ವಾರ್ಥತ್ಯಾಗ ಮಾಡುವ. ಡಾ। ಅನ್ಸಾರಿ ಪ್ರಭೃತಿ ಲೋಕನಾಯಕರು ಗೋಹತ್ಯೆ ಮಾಡುವದಿಲ್ಲೆಂದು. ಇಸ್ಲಾಮ ಧರ್ಮಕ್ಕೆ ಅವರೆಂದಾದರೂ ಚ್ಯುತರಾದಾರೇ? ಇಸ್ಲಾಮ ಧರ್ಮವು ಅಷ್ಟು ಕ್ಷುದ್ರ ಬುದ್ಧಿಯದೇ? ಇಸ್ಲಾಮ ಧರ್ಮವು ಪರಧರ್ಮಗಳನ್ನು ಸಹಿಸುತ್ತದೆ. ಪರಧರ್ಮಗಳಿಗಾಗಿ ಅವಶ್ಯವುಳ್ಳ ತ್ಯಾಗಗಳನ್ನೂ ಬೋಧಿಸುತ್ತದೆ. ವಾದ್ಯಘೋಷಗಳನ್ನು ಮಸೀದಿಗಳ ಮುಂದೆ ನಿಲ್ಲಿಸುವದರಿಂದ ಸನಾತನ ಧರ್ಮವು ಮುಳುಗಿಹೋಗದು. ಹೀಗಿರಲು, ಚಿಕ್ಕ-ಪುಟ್ಟ ನೆವಗಳ ಮೇಲೆ ಹಿಂದು-ಮುಸಲ್ಮಾನರು ಶಾಂತತೆಯ ಭಂಗ ಮಾಡಿ ಅನರ್ಥಪರಂಪರೆಯನ್ನು ಉಂಟುಮಾಡಿ, ದೇಶಕ್ಕೆ ಅಹಿತ ಮಾಡುತ್ತಾರೆ. ರಾಷ್ಟ್ರೀಯ ಸಭೆಯು ಪ್ರಜೆಗಳಿಗೆ ಸೈರಣೆ ತಾಳಲು ಬೋಧಿಸಿದೆ. ರಾಜ್ಯಭಾರದಲ್ಲಿರುವ ಜಾತಿಭೇದಪೋಷಕ ಏರ್ಪಾಟುಗಳನ್ನು ಪರಿಹರಿಸಲಿಕ್ಕೂ ರಾಷ್ಟ್ರೀಯ ಸಭೆಯು ನಿರ್ಧಾರ ಮಾಡಿ, ಸಾಮಾಜಿಕ ವೈಮನಸ್ಸಿನ ವಿಕಾರಹೇತುಗಳನ್ನು ಪರಿಹರಿಸಲುದ್ಯುಕ್ತವಾಗಿದೆ. ಮೌ। ಮಹಮ್ಮದ ಅಲ್ಲಿ, ಪಂಡಿತ ಮದನಮೋಹನ ಮಾಲವೀಯ, ಮೌ। ಅಬುಲ್ ಕಲಮ್ ಅಝಾದ ಪ್ರಭೃತಿ ಲೋಕನಾಯಕರು ಈ ತೀರ್ಮಾನವನ್ನು ಮನ್ನಿಸಿ ಅದರಂತೆ ನಡಕೊಳ್ಳಲು ನಿರ್ಧಾರ ಮಾಡಿದ್ದರಿಂದ, ಹಿಂದು-ಮುಸಲ್ಮಾನರ ಕಲಹಗಳು ಇನ್ನು ಉಂಟಾಗವೆಂದು ನಾವು ವಿಶ್ವಾಸಪೂರ್ವಕವಾಗಿ ಹೇಳುವೆವು. ಪಂಡಿತ ಮಾಲವೀಯರು ಹಿಂದು ಮಹಾಸಭೆಯ ಪ್ರವರ್ತಕರೂ, ಸೂತ್ರಚಾಲಕರೂ ಇದ್ದು, ಅವರಂಥವರು ಹಿಂದು-ಮುಸಲ್ಮಾನರ ಐಕ್ಯಕ್ಕಾಗಿ ಈ ತೀರ್ಮಾನವನ್ನು ಮನ್ನಿಸಿದ ಬಳಿಕ, ಹಿಂದು ಸಮಾಜವು ಸಂತೋಷದಿಂದ ಈ ತೀರ್ಮಾನವನ್ನು ಮನ್ನಿಸಲು ಬದ್ಧವಿದೆ. ಪಂಡಿತ ಮಾಲವೀಯಜೀಯವರಷ್ಟು ನಿರ್ಮಲ ಚಿತ್ತದ ಸನಾತನ ಧರ್ಮಾಭಿಮಾನಿಗಳೂ, ಧರ್ಮಾಚಾರಿಗಳೂ ಬೇರೊಬ್ಬರಿಲ್ಲೆಂದು ಹೇಳಿದರೆ, ಅತಿಶಯೋಕ್ತಿಯಾಗದು.

ಸ್ಯಾಯಮನ್ ಕೂಟಕ್ಕೆ ಬಹಿಷ್ಕರಿಸುವ ತೀರ್ಮಾನವನ್ನು ಕೈಕೊಂಡು ರಾಷ್ಟ್ರೀಯ ಸಭೆಯು ಬ್ರಿಟಿಶ ಸಾಮ್ರಾಜ್ಯವಾದಿಗಳಿಗೆ ಪ್ರತ್ಯಕ್ಷವಾಗಿ ಇದಿರಾಗಿದೆ. ಬಹಿಷ್ಕಾರ ಉಪಾಯಗಳು ಎಲ್ಲ ಪ್ರಕಾರಗಳಿಂದಲೂ ಸಾಗತಕ್ಕದ್ದು. ಖಾಸಗಿ ಸಮಾರಂಭಗಳಿಗೂ ಕೂಡ ಹೋಗಲಾಗದು. ಹೀಗೆ ಬಹಿಷ್ಕರಿಸುವ ನಿಷ್ಠುರ ನಿರ್ಧಾರವನ್ನು ರಾಷ್ಟ್ರೀಯ ಸಭೆಯೊಳಗಿನ ವಿಚಾರಶೀಲರೂ ಸಹ ಕೈಕೊಂಡಿದ್ದಾರೆ. ಖಾಸಗಿ ಸತ್ಕಾರ ಸಮಾರಂಭಗಳನ್ನು ಹೊರ್ತುಪಡಿಸುವ ಉಪಸೂಚನೆಯನ್ನು ರಾಷ್ಟ್ರೀಯ ಸಭೆಯು ಧಿಕ್ಕರಿಸಿದ್ದು ಯಥಾಯೋಗ್ಯವಾಯಿತು. ಸ್ಯಾಯಮನ್ ಕೂಟವು ಖಾಸಗಿ ಕಾರಣಗಳಿಗಾಗಿ ಹಿಂದುಸ್ಥಾನಕ್ಕೆ ಬರಲುದ್ಯುಕ್ತವಾಗಿಲ್ಲ. ಅದು ಬರುವದು ರಾಜಕಾರಣದ ಉದ್ದೇಶ್ಯ. ಅದರೊಳಗೆ ಖಾಸಗಿ-ಸಾರ್ವಜನಿಕವೆಂಬ ಭೇದಗಳನ್ನು ಕಲ್ಪಿಸಿ ಅಡ್ಡಹಾದಿಯಿಂದ ಸ್ಯಾಯಮ

ಕೂಟಕ್ಕೆ ಸ್ವಾಗತ ನೀಡುವದು ಎಂದಿಗೂ ಶ್ರೇಯಸ್ಕರವಲ್ಲ. ಖಾಸಗಿ ಸ್ವಾಗತದ ಇಂಬು ಗೊಟ್ಟರೆ, ಅದು ಎಲ್ಲಿ ತನಕ ಮುಟ್ಟೀತೆಂದು ಹೇಳಲಿಕ್ಕಾಗ್ಗೆ ಬರುವದಿಲ್ಲ. ಖಾಸಗಿಯೆಂದು ಸ್ವಾರ್ಥಿಗಳಿಗೆ ಸ್ವಾರ್ಥ ಸಾಧಿಸಲು ಇಂಬು ಮಾಡಿಕೊಟ್ಟಂತಾಗುತ್ತದೆ. ಹೀಗೆ ಯಾವದೇ ಪ್ರಕಾರದ ಸೇವಕ್ಕೆ ಆಸ್ಪದ ಕೊಡದೆ, ಸೈಮನ್ ಕೂಟವನ್ನು ಎಲ್ಲ ಪ್ರಕಾರದಿಂದಲೂ ಬಹಿಷ್ಕರಿಸಬೇಕೆಂದು ಕೈಕೊಂಡ ತೀರ್ಮಾನವು ಸಾಮಾನ್ಯರಿಗೂ ಕೂಡ ನಿಶ್ಚಯವಾದ ದಾರಿಯನ್ನು ತೋರಿಸುತ್ತದೆ.

ಹೀಗೆ ಮದ್ರಾಸದೊಳಗಿನ ರಾಷ್ಟ್ರೀಯ ಸಭೆಯು ಭರತ ಖಂಡದ ಪ್ರಸ್ತುತ ಪರಿಸ್ಥಿತಿಯ ವಿಚಾರದಿಂದ ಜನಸಾಮಾನ್ಯರಿಗೆ ಸಾಧ್ಯವಿದ್ದ ಉಪಾಯಗಳನ್ನೇ ಬೋಧಿಸಿದೆ. ಈ ತೀರ್ಮಾನಗಳನ್ನು ಆಚರಿಸಲು ವಿಶೇಷ ಪರಾಕ್ರಮ ಬೇಡ; ಸಾಹಸ ಬೇಡ; ಸ್ವಾರ್ಥತ್ಯಾಗ ಬೇಡ. ಸ್ವಾಭಿಮಾನಿ ಪ್ರಪಂಚಿಕರು ನಿತ್ಯ ವ್ಯವಹಾರದಲ್ಲಿ ಪ್ರದರ್ಶಿಸುವಷ್ಟು ಸಭ್ಯತೆಯಿಂದ ದೇಶಾಭಿಮಾನಿ ಪ್ರಜೆಗಳು ನಡಕೊಂಡರಾಯಿತು. ವಿಶೇಷ ಸ್ವಾರ್ಥಕ್ಷೇಪವಾಗದೆ, ನೆರೆಹೊರೆಯವರನ್ನು ಸುಲಿದು ಆತ್ಮಪ್ರತಿಷ್ಠೆಯನ್ನು ಪಡೆಯಲು ಪ್ರಯತ್ನಿಸುವವರಿಗೆ ಮಾತ್ರ ಈ ತೀರ್ಮಾನಗಳಿಂದ ಕಷ್ಟವಿದೆ. ಆದರೆ, ರಾಷ್ಟ್ರಹಿತಕ್ಕಾಗಿ ಈ ಪ್ರವೃತ್ತಿಯನ್ನು ತ್ಯಜಿಸಬೇಕು. ಸ್ವಾರ್ಥವೇ ಮಾನವನ ಸಾಧ್ಯವಲ್ಲ. ಆದಷ್ಟರ ಮಟ್ಟಿಗೆ ಪ್ರಾಪಂಚಿಕರು ಪರಾರ್ಥವನ್ನು ಸಂಗ್ರಹಿಸಬೇಕು. ಆಳವಾಗಿ ವಿಚಾರಿಸಿದರೆ, ಪರಾರ್ಥಸಂಗ್ರಹವೇ ಸ್ವಾರ್ಥಕ್ಕೆ ಪೋಷಕವಾಗುತ್ತದೆ. ಇದನ್ನರಿತು ಮದ್ರಾಸದೊಳಗಿನ ರಾಷ್ಟ್ರೀಯ ಸಭೆಯ ತೀರ್ಮಾನಗಳನ್ನು ಅಖಿಲ ಭಾರತೀಯರೂ ಪಾಲಿಸಿದರೆ, ಇನ್ನೆರಡು ವರ್ಷಗಳಲ್ಲಿ ಸ್ವರಾಜ್ಯ ಕೊಡುತ್ತೇವಾಗಿ ಪಂಡಿತ ಮಾಲವೀಯರವರು ಅಭಿವಚನ ಕೊಟ್ಟಿದ್ದಾರೆ. ಮಹಾತ್ಮರ ಅಸಹಯೋಗ ವ್ರತವನ್ನು ಪುರಸ್ಕರಿಸುವ ಸಾಮರ್ಥ್ಯವಿಲ್ಲದಿದ್ದಾಗ್ಯೂ, ಡಾ. ಅನ್ಸಾರಿಯವರ ನೇತೃತ್ವದಲ್ಲಿ ನಡೆದ ರಾಷ್ಟ್ರೀಯ ಸಭೆಯು ವಿಧಿಸಿದ ಸಾಮಾನ್ಯ ಪರಾರ್ಥದ ಆಜ್ಞೆಗಳನ್ನು ಪಾಲಿಸುವಷ್ಟು ಸದ್ಬುದ್ಧಿಯು ನಮ್ಮಲ್ಲಿರಬೇಕು. ಅದನ್ನಷ್ಟು ಅಭಿಮಾನದಿಂದ ಪಾಲಿಸಿಕೊಂಡು ದೇಶೋದ್ಧಾರ ಮಾರ್ಗವನ್ನು ಸುಕರ ಮಾಡಿಕೊಳ್ಳೆಂದು ನಾವು ಜಗಚ್ಚಾಲಕನೆಡೆಗೆ ಪ್ರಾರ್ಥಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬೀಳುತ್ತಿದೆ. ಜ್ವರದ ರೋಗಗಳಿವೆ.

ಕುಮಟೆಯ ಗಿಬ್ಬ ಹೈಸ್ಕೂಲಿಗೂ, ಅಂಕೋಲೆಯ ಎಜ್ಯುಕೇಶನ್ ಹೈಸ್ಕೂಲಿಗೂ ಆದ ಕ್ರಿಕೆಟ್ ಪಂದ್ಯಾಟದಲ್ಲಿ ಅಂಕೋಲೆಯವರು ಗೆದ್ದರು. ಗಿಬ್ಬ ಹೈಸ್ಕೂಲಿನವರು ಸೋತರು; ವಿಪರೀತ ಸೋತರು. ಗಿಬ್ಬ ಹೈಸ್ಕೂಲಿನವರಿಂದ ೨ ಇನಿಂಗ್ಸ ಯಾನೆ ಆಟಗಳಲ್ಲಿ ಕೂಡಿ ಅಂಕೋಲೆಯವರು ಒಂದು ಆಟದಲ್ಲಿ ಮಾಡಿದಷ್ಟು ಓಟಗಳನ್ನು ಮಾಡಲಾಗಲಿಲ್ಲ. ಇದಕ್ಕಾಗಿ ಗಿಬ್ಬ ಹೈಸ್ಕೂಲಿಗೆ ಜಿಲ್ಲಾ ಎಜ್ಯುಕೇಶನಲ್ ಇನ್ಸ್ಪೆಕ್ಟರರಾದ ಮಿ|| ಉಗ್ರಾಣಕರರವರು ದೊಡ್ಡದೊಂದು ಸರ್ಟಿಫಿಕೇಟು ಕೊಟ್ಟಿದ್ದಾರೆ. ಆಟೋಟಗಳಲ್ಲಿ ಗಿಬ್ಬ ಹೈಸ್ಕೂಲಿನವರು ವಿಶೇಷ ಪರಿಶ್ರಮಪಟ್ಟು ಮುಂದುವರಿಯುತ್ತಾರಂತೆ. ವಿಶೇಷ ಪರಿಶ್ರಮಪಟ್ಟು ಕಲಿಸಿದ ಆಟೋಟಗಳ ಅವಸ್ಥೆಯು ಹೀಗಾದ ಬಳಿಕ, ವಿಶೇಷ ಪರಿಶ್ರಮ ಕೊಳ್ಳದ ಅಭ್ಯಾಸಕ್ರಮದ ಸ್ಥಿತಿಯು ಹೇಗಿರಬಹುದೆಂದು ಊಹಿಸಿ ತಿಳಿಯಬೇಕು. ಸಾರ್ವಜನಿಕ ಕಾರ್ಯಗಳ ಹೆಚ್ಚಿನ ಮೂಲಕ ಇಷ್ಟಾದರೂ ಪ್ರಗತಿಯಾಗುವದು ಒಂದು ತೆರದಿಂದ ಭಾಗ್ಯವೇ. ಗೆರಸಪ್ಪೆ ಜೋಗಿನ ದಯಾತ್ರೆಯ ಕಾಲಕ್ಕೆ ಇಲ್ಲಿ ಶಿಕ್ಷಕರು ಕೆಲ ಹುಡುಗರೊಡನೆ ಗೆರಸಪ್ಪೆ ಜೋಗಿಗೆ ಹೋಗಿ ಬಂದರು. ಅರ್ಧ ಖರ್ಚು ಶಾಲೆಯ ನಿಧಿಯೊಳಗಿಂದ ಬಿಟ್ಟಂತೆ ಕೆಲವು ವಿದ್ಯಾರ್ಥಿಗಳ ಯಾತ್ರೆಗಾಗಿ ಶಾಲೆಯ ನಿಧಿಯೊಳಗಿಂದ ಖರ್ಚು ಮಾಡುವ ಆವಶ್ಯಕತೆಯೇನ? ಜೋಗಿಗೆ ಹೋಗಿ ಶಾಲೆಗೆ ಹಿತವಾಗುವ ಯಾವ ಬೋಧವಾಯಿತೆಂದು ತಿಳಿಯಲಿಲ್ಲ. ಶಿಕ್ಷಕರ ಅರ್ಧ ಖರ್ಚನ್ನು ಶಾಲೆಯೇ ತೆತ್ತಿತೇನು?

ಪತ್ರಕರ್ತರೊಬ್ಬರು ತಿಳಿಸುವದೇನಂದರೆ.— ಮೊನ್ನೆ ಸ.ಯಂಕಾ ಇಲ್ಲಿಯ ಬಗಲೋಟಿಯ ಏಜಂಟರು ನನಗೆ ಕರೆಕಳುಹಿದರು. ಕಂಪನಿಯ ಸಾಹೇಬರು ಬಂದಿದ್ದರೆಂದೂ, ಅವರು ನಮ್ಮೊಡನೆ ಮಾತಾಡಬಯಸುತ್ತಾರೆಂದೂ ಹೇಳಿ ಕಳಿಸಿಕೊಟ್ಟಿದ್ದರು. ನಾವು ಆಫೀಸಿಗೆ ಹೋದೆವು. ಸಾಹೇಬರು ಇಂಗ್ಲೀಷಿನಿಂದ ಮಾತಾಡುತ್ತಿದ್ದರು. ನಮಗೆ ಇಂಗ್ಲೀಷು ಬರುವದಿಲ್ಲ, ಆದ್ದರಿಂದ ಅವರ ಮಾತುಗಳನ್ನು ಇನ್ನೊಬ್ಬರು ತಿಳಿಸಿಕೊಟ್ಟರು. ಈಗ ಬೋಟಿಯವರು ಈಗ ಪ್ರಯಾಣಿಕರ ಟಿಕೀಟಿನ ದರವನ್ನು ಇಳಿಸಿದ್ದಾರೆ, ಮೋಟಾರುಗಳ ಮೇಲೆ ಹೋಗದೆ ಈಗ ಬೋಟಿಯಿಂದಲೇ ಪ್ರಯಾಣ ಬೆಳೆಸಬೇಕಾಗಿ ಹೇಳಿದರು. ಮೋಟಾರಿನಿಂದ ಜನರು ಹೋದರೆ ಕಂಪನಿಗೆ ನಷ್ಟವಾಗುತ್ತದೆಂದೂ ಹೇಳಿದರು. "ಮೋಟಾರುಗಳಿರುವ ತನಕ ಈ ದರವಿರುವದು ಮುಂದೆ ಪುನಃ ಏರುವದೆಂದು," ನಮ್ಮಲ್ಲೊಬ್ಬರು ನುಡಿದರು, ಸಾಹೇಬರು ಸಮರ್ಪಕ ಉತ್ತರ ಕೊಡಲಿಲ್ಲ. ಇದರ ಅರ್ಥ ನಮಗೆ ತಿಳಿಯಿತು. ಮೋಟಾರು ಹೋದ ಬಳಿಕ, ದರ ಏರಿಸಿ ನಮಗೆ ಪುನಃ ಸುಲಿಯುವ ಹಂಚಿಕೆಯದು. ಪತ್ತಲಿನ ಹಾಸಲನ್ನು ಇಳಿಸಲು ನಾವು ಸೂಚಿಸಿದೆವು. ಮೊದಲು ಮಾಲಕ್ಕೆ ೩ ಪಸೆಂಟ ಇತ್ತು, ಈಗ ೮ ಆಣೆ ತನಕ ಹೋಗಿದೆ ಎಂದು ನಾವು ಹೇಳಿದೆವು. ಹಾಗೆ ಇಳಿಸಲಾಗುವದಿಲ್ಲವಾಗಿ ಸಾಹೇಬರ ಪ್ರಸಾದವಾಯಿತು. ದರ ಇಳಿಸಿದರೆ, ಕಂಪನಿಗೆ ನಷ್ಟವಾಗುತ್ತದಂತೆ. ಅಧಿಕ ಬೆಲೆ ಮುಂತಾದ ಸಾಮಾನುಗಳನ್ನು ಬೋಟಿಗೆ ಒಯ್ಯಲು ಇನ್ನೇನು ಪತ್ರವುಗಳನ್ನು ಬರೆಯಿರಿ, ಎಂದು ಹೇಳಿದರೆ, ಆ ಸರಕಿಗೆ ತಾವು ಲೆಕ್ಕಿಸುವದಿಲ್ಲೆಂಬ ಅರ್ಥದ ಉದ್ಗಾರವಾಯಿತು. ಅವರ ಪತ್ತಲಿಗಾಗಿ ದಲಾಲ ತಾವು ಪತ್ರವುಗಳನ್ನಿಟ್ಟರೆಂದೂ ಸ್ಪಷ್ಟವಾಗಿ ಹೇಳಲಾಯಿತು. "ನಿಮ್ಮ ಬೋಟಿಯು ರಾತ್ರಿ ಮುಂಬಯಿಗೆ ಹೋಗಲು ಹೊರಡುತ್ತದೆ. ನಾವು ಮುಂಜಿನ ಭಾಗಕ್ಕೆ ಪತ್ತಲು ಒಯ್ದು ಬೋಟಿಯ ಧಕ್ಕೆಯ ಮೇಲೆ ಇಡಬೇಕಾಗುತ್ತದೆ. ಅದರಿಂದ ಪತ್ತಲಿನ ಬೋಟಿಯನ್ನು ಇಲ್ಲಿ ೨ ತಾಸು ನಿಲ್ಲಿಸಿರಿ ಅದರಿಂದ ನಿಮಗೆ ಅನಾನುಕೂಲವಾಗದು ಮಾರ್ಗದಲ್ಲಿ ವ್ಯಾಪಾರದ ಮೂಲಕ ಬೋಟಿ ಕಾರವಾರದಲ್ಲಿ ಹ್ಯಾಗೂ ನಿಲ್ಲಬೇಕು. ಮೊದಲು ಪತ್ತಲು ಪಡಾವುಗಳ ಮೇಲೆ ಕಳಿಸುವದರಿಂದ ಕಳವಿಗೆ ಆಸ್ಪದವಾಗುತ್ತದೆ." ಇತ್ಯಾದಿ ಹೇಳಿದರೆ, ಒಪ್ಪಾಕಲ್ಲಾರ ಬೋಟಿಯ ಕಪ್ತಾನನೊಡನೆ ಆಲೋಚಿಸುವೆವಾಗಿ ಆಶಾಸನವಾಯಿತು. "ಸಣ್ಣ ಹಿಂದರದ ಮೇಲಿನ ಹೊಳೆಯು ಕ್ರಮೇಣ ಕೆಸರಿನಿಂದ ತುಂಬಿಕೊಳ್ಳಿಗಿದೆ. ಆದ್ದರಿಂದ ಪತ್ತಲು ತುಂಬಿದ ಪಡಾವುಗಳನ್ನು ಒಯ್ಯಲು ಆತಂಕವಾಗುತ್ತದೆ; ಅದನ್ನಷ್ಟು ಕಂಪನಿಯವರು ತೆಗಸಬಹುದು;" ಎಂದು ಹೇಳಲು, ಕಲೆಕ್ಟರರಿಗೆ ಅರ್ಜಿ ಮಾಡಿ ತಮ್ಮ ಕಂಪನಿಗೆ ಬರೆಕೊಳ್ಳಬೇಕಾಗಿ ಉಪದೇಶವಾಯಿತು. ಅಂತು ನಮ್ಮ ಅನುಕೂಲತೆಯ ಕಡೆಗೆ ಅವರು ಲಕ್ಷ್ಯಕೊಡಲಿಲ್ಲ. ಮೋಟಾರುಗಳನ್ನು ನಿರ್ಮೂಲಿಸಲು ಬೋಟಿ ಕಂಪನಿಯವರು ಕೊಡಮಾಡಿದ ಉಪಕಾರವನ್ನು ಅವರು ಪ್ರಕಟಿಸಬಂದಿದ್ದರು. ಈ ಬೋಟಿ ಕಂಪನಿಗೆ ನಾವು ಅರಿತಿದ್ದೇವೆ. ಇದರೊಡನೆ ಹೋರಾಟವಾಡಿದ ಕೂರಕು, ಅದರ ಮುಪ್ಪು ಇಳಿಯುವದಿಲ್ಲ. ಮುಂಬಯಿ ಟಿಕೇಟಿನ ದರ ಅದ್ದಂತೆಯೇ ಇದೆ! ಇಂಥ ಕಂಪನಿಯ ಅನುಕೂಲತೆಗಳ ಗೋಜಿಗೆ ದಯವಿಟ್ಟು ಹೋಗಲಾಗದು. ಮೋಟಾರಿನ ಪೆಟ್ಟು ತಗಲುವ ನಾಂಗಳೂರು-ಮಂಗಳೂರು ಟಿಕೇಟು ತನಕ ಮಾತ್ರ ದರ ಇಳಿದಿದೆ. ದರ ಇಳಿದದ್ದಾದರೂ ಹೆಚ್ಚು ಇಳಿಯಲಿಲ್ಲ ೫-೬ ವರ್ಷಗಳ ಹಿಂದಿನ ವಿಚಾರ ಮಾಡಿದರೆ, ಅವು ಏರಿಕೆಯ ದರಗಳೇ! ಇಷ್ಟಾದ."

ಗೋಕರ್ಣ— ಇಲ್ಲಿಯ ಶ್ರೀ ಜೀರ್ಣೋದ್ಧಾರದ ಕುರಿತು ಭಜನ ಸಪ್ತಾಹಕ್ಕೆ ಪ್ರಾರಂಭವಾಗಿದೆ. ಶ್ರೀ ಚಿತ್ರಾಪುರ ಮಠಾಧೀಶರು ಭಂಡಿಕೇರಿಯಲ್ಲಿ ಮಠವನ್ನು ಜೀರ್ಣೋದ್ಧಾರ ಮಾಡುವ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಮುಕ್ತಿಯ ಸಾಧುಗಳೊಬ್ಬರು ಉತ್ಸವಾಂಕ್ಕೆ ಇಲ್ಲಿ ಬಂದು ಶ್ರೀ ಮಹಾಬಲೇಶ್ವರ ದೇವಸ್ಥಾನದ ತನಕ ಹೋಗಿ ಮರಳಿದರು. ಸಾಧುಗಳು ಇಲ್ಲಿ ಶ್ರೀ ಮಹಾಬಲೇಶ್ವರ ದೇವಸ್ಥಾನದ ಒಳಹೋಗಲು ಅಪೇಕ್ಷಿಸಿದರಂತೆ. ಬಾಲಕರು ಸಿದು ಮಾಸದಿಂದ ನಿರೀಕ್ಷಿಸಬೇಕಾಯಿತು, ಒಳಪ್ರವೇಶಿಸಲು ಸ.ಧು ಪುರುಷರಿಗೆ ಕೊಡಬೇಕಾಯಿತು.

ಶಿರಸಿ—ಪ್ಲೇಗಿನ ಬೆದರಿಕೆ ತೋರಿತು. ವಾರಕ್ಕೆ ಒಬ್ಬಿಬ್ಬರು ರೋಗಕ್ಕೆ ಬೀಳುತ್ತಿದ್ದರೂ, ಯಾರೂ ಸ್ಥಳಾಂತರ ಮಾಡುವಷ್ಟು ಭೀತರಿಲ್ಲ. ಇನ್ನೂ ಕಾಲೆಗಳಿಗೆ ಮಾತ್ರ ಪ್ಲೇಗಿನ ಮೂಲಕ ೧೫ ದಿನ ಸೂಟಿಯು ದೊರಕಲಾರದು. ಇಂಥ ತಿಕ್ಕಿತು ಚಳಿ ಬಿಡದಿದ್ದ ಬಳಿಕ, ಇಲಿಗಳಿಗೆ ರಜೆಯಾಕೆ? ಗ್ರಾಮಶಾಂತಿಯಾಯಿತು. ಗೃಹಗಳನ್ನು ಅವರವರು ನಿರ್ಮಲಗೊಳಿಸಿದರೆ ಪ್ಲೇಗರಾಜನಿಗೆ ಸ್ವಲ್ಪ ವಿಶ್ರಾಂತಿ ದೊರೆಯುತ್ತಿತ್ತು.

ಇಲ್ಲಿಯ ಪರಸ್ಪರ ಸಹಕಾರಿ ಸಂಘದವರು ಸಪ್ತಾಕ್ರಮದ ಧರ್ಮಾರ್ಥ ವಾಚನಾಲಯಕ್ಕೆ ರೂ ೫೦ ನ್ನು ಕೊಟ್ಟಿದ್ದಾರೆ.

ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ಇಲ್ಲಿಯ ಚಿಕಿತ್ಸಕ ಅಂಗಡಿಕಾರರು ಬಹಳ ಮುಂದರಿದಿದ್ದಾರೆ. ಚಹಾ ಕುಡಿಯು ಸ್ಪೃಶ್ಯರು ಅವರಿಗೆ ನೆರವಾಗುತ್ತಾರೆ ಸಾಗಲಿ!

ರೇಡಿಯೋ ಬ್ರಾಡ್‌ಕಾಸ್ಟಿಂಗ ಎಂಬ ಹೆಸರಿನಿಲ್ಲದ ಮುಂಬಯಿ ಅತ್ಯಂತ ದಿನಂಪ್ರತಿ ನಡೆಯುವ ಗಾಯನ-ವಾದನಗಳನ್ನು ಶಿರಸಿಯಲ್ಲಿಯೇ ಕುಳಿತಲ್ಲಿ ಕೇಳುವ ವಿದ್ಯುದ್ಯಂತ್ರದ ಸಾಹಿತ್ಯಗಳು ಇಲ್ಲಿಯ ಪಂಡಿತ ಜನರ ಲೈಬ್ರರಿಯಲ್ಲಿ ಬಂದು ಬಿದ್ದಿವೆ. ಪ್ರಾತ್ಯಕ್ಷಿಕಗಳು ಶೀಘ್ರವೇ ಆರಂಭವಾದ್ದರಿಂದ ಹೊತ್ತು ಹೋಗದ ವಿಲಾಸಿಗಳಿಗೆ ಹೊತ್ತು ಕಳೆಯುವದೊಂದು ನೂತನ ಸಾಧನ!!

ಕಾಸರಕೋಡ— ಬೆಳ್ಳಿಯ ಧಾರಣೆ ಇಳಿಯುತ್ತಿದೆ. ತಂಗಿನ ಎಣ್ಣೆಯ ದರವೂ ಇಳಿಯುತ್ತಿದೆ. ಗುಣವಂತೇಶ್ವರ ದೇವಸ್ಥಾನದ ಭಜನ ಸಪ್ತಾಹವು ಮುಗಿದು ಬ್ರಾಹ್ಮಣ ಸಂತರ್ಪಣೆ ಮುಂತಾದವು ನೆರವೇರಿದವು.

ಗೆರಸಪ್ಪೆ—ಇಲ್ಲಿಯ ಲೋಕಲ್‌ಬೋರ್ಡಿನ ಮಾರ್ಗಕ್ಕೆ ಪರಾಗಸದ ದುರುಸ್ತಿ ಕೆಲಸವು ಆಗಲಿಲ್ಲ. ಗಾಡಿಕಾರರಿಗೂ, ಪಾಂಥಸ್ಥರಿಗೂ ಬಹಳ ಕಷ್ಟ. ಬೋರ್ಡಿನವರು ಕಣ್ತೆರೆದು ನೋಡಬೇಕು.

ಹಳಿಯಾಳ— ಪ್ಲೇಗಿನ ಕಾಟ ಸಹಿಸಲಾರದೆ ಊರವರು ಸ್ಥಳಾಂತರ ಮಾಡಲಾರಂಭಿಸಿದ್ದಾರೆ. ಗ್ರಾಮತ್ಯಾಗ ಮಾಡಿದವರಿಗೂ ಪ್ಲೇಗು ಬೆನ್ನಟ್ಟುತ್ತಿದೆ. ದೈವಹತರಾದವರಲ್ಲಿ ಅನೇಕರು ಹೋಗುತ್ತಿದ್ದಾರೆಂದು ಭಕ್ತಜನರು ಮಾಡ ನವಿರುವದಲ್ಲವೇ? ಬುಡುಬುಡಿಕೆ ತನಕ ಪ್ಲೇಗು.

ಈ ಪತ್ರಿಕೆಯ ಸಂಚಿಕೆಯೊಡನೆ ಮುಂಬಯಿಯ ಗಣೇಶ ರಾಮಚಂದ್ರ ಕರ್ವೆ ಮತ್ತು ಕಂಪನಿ ಇವರ ಇಂಗ್ಲೀಷ ಔಷಧಿಯ ಕರಪತ್ರ ಹಂಚಿರುತ್ತದೆ.

ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯದ ಠರಾವು; ಸೈಮನ್ ಕೂಟಕ್ಕೆ ಬಹಿಷ್ಕಾರ.

ರಾಷ್ಟ್ರೀಯ ಸಭೆಯ ವೃತ್ತಾಂತ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಇವುಗಳನ್ನು ಸಾವೆಲ್ಲರೂ ಮುಂದೆ ತಯಾರಿ ಮಾಡಬೇಕು. ಹಿಂದು-ಮುಸಲ್ಮಾನರು ರಾಷ್ಟ್ರೀಯ ಸಭೆಯ ಒಪ್ಪಂದವನ್ನು ಮನ್ನಿಸಿಕೊಳ್ಳಬೇಕು. ದೇಶ ಕುಂಬ ಎಲ್ಲರೂ ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಂಡು ರಾಷ್ಟ್ರೀಯ ಕಾರ್ಯಕ್ರಮವನ್ನು ಪುರಸ್ಕರಿಸಬೇಕು. ಸೈಮನ್ ಕೂಟದ ಗೋಜಿಗೆ ಯಾರೂ ಹೋಗಲಾಗದೆಂದು ನಾನು ಹೇಳುತ್ತೇನೆ. ಭಾರತೀಯ ಹಾಗು ಬ್ರಿಟಿಶ ಪ್ರತಿನಿಧಿಗಳನ್ನು ಒಟ್ಟಿಗೆ ಸೇರಿಸಿಕೊಂಡು, ವಿಚಾರದಿಂದ ರಾಜ್ಯಘಟನೆಯನ್ನು ನಿರ್ಮಿಸುವದೇ ಎಲ್ಲಕ್ಕೂ ಯೋಗ್ಯವಾದ ಮಾರ್ಗವೆಂದು ನಾನು ಹೇಳುತ್ತೇನೆ

ಇತ್ಯಾದಿ ಭಾಷಣವನ್ನು ಡಾ| ಅನ್ಸಾರಿಯವರು ಮಾಡಿ ಸ್ಥಾನಾಪನ್ನರಾದ ಬಳಿಕ, "ವಂದೇ ಮಾತರಮ್", "ಮಹಾತ್ಮಾ ಗಾಂಧಿ ಕಿ ಜಯ", "ಅನ್ಸಾರಿ ಕಿ ಜಯ" "ಅಲ್ಲಾ ಹೋ ಅಕಬರ" ಎಂಬ ಜಯಘೋಷಗಳಾದವು. ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಶ್ರೀ| ರಂಗಸ್ವಾಮಿ ಅಯ್ಯಂಗಾರರವರು ಪಂಡಿತ ಮೋತಿಲಾಲ ನೆಹರೂ, ಲಾಲಾ ಲಜಪತರಾಯ, ಹಕೀಮ ಅಜಮಲಖಾನ ಮುಂತಾದವರ ಕಡೆಯಿಂದ ಬಂದ ತಂತಿಗಳನ್ನು ಓದಿ ತೋರಿಸಿದರು.

ಆ ಬಳಿಕ, ಅಧ್ಯಕ್ಷರು ಶೋಕದ ಠರಾವುಗಳನ್ನು ಸೂಚಿಸಿದರು. ವರ್ಷದೊಳಗಿನ ಮೃತರಾದ ಅನೇಕ ವ್ಯಕ್ತಿಗಳಿಗೆ ಗುರಿಯಾದ ದೇಶಭಕ್ತರ ಕುರಿತು ಸಹಾನುಭೂತಿ ವ್ಯಕ್ತ ಮಾಡಲಾಯಿತು. ಚೀನ ದೇಶದೊಡನೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ಅಲ್ಲಿ ಕಳುಹಿದ ಹಿಂದೀ ಸೈನ್ಯವನ್ನು ಹಿಂದಕ್ಕೆ ಕರೆಯಬೇಕೆಂದು ಸರಕಾರಕ್ಕೆ ಸೂಚಿಸಲಾಯಿತು. ಆ ವೇಳೆ, ಪಂಡಿತ ಜವಾಹರಲಾಲ ನೆಹರೂರವರು ಸರಕಾರವು ಸದ್ಯಕ್ಕೆ ನಡೆಸುತ್ತಿರುವ ಯುದ್ಧ ತಯಾರಿಯನ್ನು ನಿಷೇಧಿಸುವ ಠರಾವನ್ನು ಸೂಚಿಸಿದರು. ಪಂಡಿತ ಜವಾಹರಲಾಲರು ಮುಂದಿನ ಯುದ್ಧಕ್ಕಾಗಿ ಹಿಂದುಸ್ಥಾನದ ಸರಹದ್ದುಗಳಲ್ಲಿ ನಡೆಸುತ್ತಿರುವ ತಯಾರಿಯನ್ನು ಉಲ್ಲೇಖಿಸಿ, ಇದರಿಂದ ಹಿಂದುಸ್ಥಾನಕ್ಕೆ ನಷ್ಟವಿದೆಯೆಂದು ಹೇಳಿ, ಹೀಗೆ ಯುದ್ಧ ತಯಾರಿ ಮಾಡಲು ಹಿಂದುಸ್ಥಾನದವರ ಒಪ್ಪಿಗೆಯಿಲ್ಲವಾಗಿಯೂ ಹೇಳಿದರು. ಅನುಮೋದನದ ಬಳಿಕ, ಸೋಮವಾರದ ಅಧಿವೇಶನವು ಸಮಾಪ್ತವಾಯಿತು.

ಮಂಗಳವಾರದ ಹಕೀಕತು

ಮಂಗಳವಾರಕ್ಕೆ ರಾಷ್ಟ್ರೀಯ ಸಭೆಗೆ ೧೧ ಘಂಟೆಗೆ ಪ್ರಾರಂಭವಾಯಿತು. ಕಪ್ಪು ಕಾಯದೆಯನ್ನು ಉಲ್ಲಂಘಿಸಿ ನಾಗಪುರದಲ್ಲಿ ಸೆರೆಯಾಳಾದ ಸೇನಾಪತಿ ಬಾಪಟರಿಗೆ ಅಭಿನಂದಿಸಲಾಯಿತು. ಉಪೋಷಣದ ಕುರಿತು ಸಹಾನುಭೂತಿಯೂ ವ್ಯಕ್ತಪಡಿಸಲಾಯಿತು. ಬ್ರಹ್ಮದೇಶವನ್ನು ಪ್ರತ್ಯೇಕ ಮಾಡುವ ಸಾಮ್ರಾಜ್ಯ ಸರಕಾರದ ಪ್ರಯತ್ನಗಳು ನಿಷೇಧಿಸಲಾದವು. ಈ ಠರಾವನ್ನು ಶ್ರೀ| ಮೊಂಗಮೊಂಗಜೀಯವರು ಬ್ರಹ್ಮದೇಶದವರಾಗಿ ಪ್ರಸ್ತಾಪಿಸಿದರು. ಬ್ರಿಟಿಶ ಸಾಮ್ರಾಜ್ಯದ ಸ್ವಾರ್ಥವನ್ನು ಚೆನ್ನಾಗಿ ಬೈಲಿಗೆಳೆದರು. ಆವೇಳೆ ಪಂಡಿತ ಜವಾಹರಲಾಲ ನೆಹರೂರವರು ಒಂದು ಮಹತ್ವದ ಠರಾವನ್ನು ಸೂಚಿಸಿದರು. ಭಾರತೀಯರ ಧ್ಯೇಯವು ಸಂಪೂರ್ಣ ರಾಷ್ಟ್ರೀಯ ಸ್ವರಾಜ್ಯವಿದೆ. ಬ್ರಿಟಿಶರು ಹಿಂದುಸ್ಥಾನದ ಸ್ವಯಂನಿರ್ಣಯದ ಹಕ್ಕನ್ನು ಅಲ್ಲಗಳೆದ ಬಗ್ಗೆ ಅವರಿಗೆ ಈ ಠರಾವನ್ನು ಮನ್ನಿಸಿ ರಾಷ್ಟ್ರೀಯ ಸಭೆಯು ಉತ್ತರವನ್ನಿತ್ತಿರುವದಾಗಿಯೂ ಪಂಡಿತ ಜವಾಹರಲಾಲರವರು ಒತ್ತಿ ಹೇಳಿದರು. ಶ್ರೀ| ವ್ಹಿ. ಎಲ್. ಶಾಸ್ತ್ರಿಗಳವರು ಬ್ರಿಟಿಶ ಸಾಮ್ರಾಜ್ಯದ ಹೊರಗೆ ಸ್ವರಾಜ್ಯವಿರಬೇಕಾಗಿ ಪ್ರತಿಪಾದಿಸಿ, ಠರಾವನ್ನು ವಿರೋಧಿಸಿದರು. ಶ್ರೀ| ಸತ್ಯಮೂರ್ತಿಯವರು ಅವರಿಗೆ ಚೊಕ್ಕ ಉತ್ತರ ಕೊಟ್ಟರು. ಬ್ರಿಟಿಶರು ಬಿಟ್ಟು ಹೋಗಿದ್ದಂತೆ, ನಾವೂ ಹಿಂದುಸ್ಥಾನದಲ್ಲಿ ಅಧಿಕಾರವಂತರಾಗಿರಬೇಕೆಂದು ಯಾರಿಗೆ ಅನಿಸುವದಿಲ್ಲವಾಗಿ ಕೇಳಿ, ಪಾರತಂತ್ರ್ಯದಲ್ಲಿ ನರಳುತ್ತಿದ್ದವರು ಈ ಠರಾವನ್ನು ಎಲ್ಲರೂ ಮನ್ನಿಸಬೇಕೆಂದರು. ಮೌಲಾನಾ ಶೌಕತ ಅಲ್ಲಿಯವರ ಅನುಮೋದನ ಕೇಳಿದ ಬಳಿಕ, ಠರಾವು ಮಂಜೂರಾಯಿತು.

ಆ ವೇಳೆ ಬಂಗಾಲದ ಡಾ| ದಾಸಗುಪ್ತರವರು ಬಂಗಾಲದ ಸೆರೆಯಾಳಾದವರನ್ನು ಕೂಡಲೆ ಬಿಡುಗಡೆ ಮಾಡಬೇಕೆಂಬ ಠರಾವನ್ನು ಸೂಚಿಸಿದರು. ಈ ಠರಾವಿನಲ್ಲಿ ಲಸ್ಕರಿ ಕಾಯದೆ ಮುಂತಾದ ನ್ಯಾಯವಿಲ್ಲದ ಸೆರೆಯಾಳಾದವರಿಗೂ ಬಿಡುಗಡೆ ಮಾಡಬೇಕಾಗಿ ಉಲ್ಲೇಖಿಸಲಾಗಿತ್ತು. ಡಾ| ದಾಸಗುಪ್ತರವರು ಬಂಗಾಲದೊಳಗಿನ ಹೃದಯದ್ರಾವಕ ಕಥೆಯನ್ನು ಹೇಳಿದರು. ೫ ವರ್ಷಗಳ ತನಕ ೧೫೦ ಮಂದಿ ದೇಶಭಕ್ತರು ಬಂಧಿಖಾನೆಗಳಲ್ಲಿ ಕಷ್ಟಗಳನ್ನು ಅನುಭವಿಸುತ್ತಿರುವರಾಗಿಯೂ ಅನೇಕರಿಗೆ ರೋಗಬಾಧೆಯುಂಟಾಗಿರುವದಾಗಿಯೂ ಹೇಳಿದರು. ಶ್ರೀ| ಶರತ್‌ಚಂದ್ರ ಚಕ್ರವರ್ತಿ ಎಂಬವರಿಗೆ ಯೋಗ್ಯ ಔಷಧೋಪಚಾರ ದೊರೆಯದೆ ಅವರು ತೀರಿಕೊಂಡಂತೆಯೂ ಅವರು ಹೇಳಿದರು. ಈ ಠರಾವು ಮಂಜೂರಾದ ಬಳಿಕ, ಶ್ರೀಯುತ ಶ್ರೀನಿವಾಸ ಅಯ್ಯಂಗಾರರವರು ಸೈಮನ್ ಕಮೀಶನನ್ನು ಬಹಿಷ್ಕರಿಸುವ ಠರಾವನ್ನು ಸೂಚಿಸಿದರು. ಕಮೀಶನು ಹಿಂದುಸ್ಥಾನಕ್ಕೆ ಬಂದಾಗಲೂ ಭಾರತೀಯರು ಒಕ್ಕಟ್ಟಾಗಿ ಬಹಿಷ್ಕರಿಸುವರು; ಹೇಗೆ ಹೋರಾಡಿಯೂ ಕೂಟಕ್ಕೆ ಬಹಿಷ್ಕಾರ ಹಾಕಬೇಕು. ಅವಶ್ಯವುಳ್ಳ ಪ್ರಚಾರದ ಕಾರ್ಯವನ್ನು ರಾಷ್ಟ್ರೀಯ ಸಭೆಯು ಕೈಕೊಳ್ಳತಕ್ಕದ್ದು. ಕಾಯದೆ ಕೌನ್ಸಿಲುಗಳ ಸಭಾಸದರ್‍ಯಾರೂ ಈ ಕೂಟದ ಯಾವದೇ ಕೆಲಸದಲ್ಲಿ ಪ್ರವೇಶಿಸಲಾಗದು; ಸಾಕ್ಷಿ ಕೊಡಲಾಗದು; ಸತ್ಕಾರ ಸಮಾರಂಭಗಳಲ್ಲಿ ಪ್ರವೇಶಿಸಲಾಗದು, ಆಲೋಚಕ ಮಂಡಳದಲ್ಲಿ ಸೇರಲಾಗದು. ಕೌನ್ಸಿಲುಗಳಿಗೆ ಹೋಗಲಾಗದು; ಬಹಿಷ್ಕಾರವನ್ನು ದೃಢವಡಿಸಲಿಕ್ಕೆ ಹೋರಾಡಬಹುದು. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದವರು ಇತರ ಪಕ್ಷಗಳೊಡನೆ ಸಹಕಾರ್ಯ ಬೆಳೆಸಿ, ಬಹಿಷ್ಕಾರವನ್ನು ಸಂಪೂರ್ಣವಾಗಿ ಸಾಧಿಸಬೇಕು. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರು ಸೈಮನ್ ಕೂಟದಿಂದ ದೇಶದಲ್ಲುಂಟಾದ ಐಕ್ಯಭಾವವನ್ನು ಮನಗಂಡು ಪ್ರಶಂಸಿಸಿ, ಠರಾವನ್ನು ಐಕ್ಯಮತ್ಯದಿಂದ ಮಂಜೂರ ಮಾಡಬೇಕೆಂದರು. ಪ್ರೆಸಿಡೆಂಟ ಅಮ್ಮನವರು ಬ್ರಿಟಿಶರ ಕೃತಘ್ನತೆಯನ್ನು ಬಣ್ಣಿಸಿದರು. "ನೀವು ನಮಗೆ ಬಹಿಷ್ಕರಿಸಿದಿರಿ; ನಾವು ನಿಮಗೆ ಬಹಿಷ್ಕರಿಸುತ್ತೇವೆ;" ಹೀಗೆ ಭಾರತೀಯರು ಬ್ರಿಟಿಶರಿಗೆ ಹೇಳಬೇಕು. ಪಂಡಿತ ಮದನಮೋಹನ ಮಾಲವೀಯರವರು ಈ ಠರಾವನ್ನು ಅನುಮೋದಿಸಲು ನಿಂತ ಕೂಡಲೆ, ಟಾಳಕ ಮಂಟಪವೆಲ್ಲ ಜಯಘೋಷದಿಂದ ತುಂಬಿಹೋಯಿತು. ಮಾಲವೀಯಜೀಯವರ ಬ್ರಿಟಿಶ ರಾಜ್ಯದ ಇತಿಹಾಸವನ್ನು ಆ ಮೂಲಾಗ್ರ ವಿವರಿಸಿ, ಯುದ್ಧ ಕಾಲದಲ್ಲಿ ಸಂಪೂರ್ಣ ಜವಾಬದಾರ ಸ್ವರಾಜ್ಯದ ವಚನ ದೊರೆಯಿತಾಗಿಯೂ, ಯುದ್ಧ ಮುಗಿದ ಬಳಿಕ, ಸಮಸ್ತ ವಚನಗಳು ಮರೆಯಾಯಿತಾಗಿಯೂ ಉದ್ಗರಿಸಿ, ಈ ಕೂಟವನ್ನು ಬಹಿಷ್ಕರಿಸುವದೇ ಪ್ರಧಾನ ಭಾರತೀಯರ ಕರ್ತವ್ಯವೆಂದರು. ಅನೇಕ ಉಪಸೂಚನೆಗಳು ಸೂಚಿಸಲ್ಪಟ್ಟವು ಆದರೆ, ಅವ್ಯಾವವೂ ಮಂಜೂರಾಗಲಿಲ್ಲ. ಮೂಲ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಬುಧವಾರದ ಹಕೀಕತು.

ಬುಧವಾರಕ್ಕೆ ಬೆಳಗಿನ ೮ ಘಂಟೆಗೆ ಅಧಿವೇಶನಕ್ಕೆ ಪ್ರಾರಂಭವಾಗುವದಿತ್ತು; ಆದರೆ, ವಿಷಯನಿರ್ಧಾರಕ ಮಂಡಳವು ರಾತ್ರಿ ೩ ಘಂಟೆಯ ತನಕ ಚರ್ಚೆ ಮಾಡುತ್ತಿದ್ದುದರಿಂದ, ಅಧಿವೇಶನವು ೧ ಕ್ಕೆ ಪ್ರಾರಂಭವಾಯಿತು. ದಕ್ಷಿಣ ಆಫ್ರಿಕೆ ಹಾಗು ಪೂರ್ವ ಆಫ್ರಿಕೆಗಳಲ್ಲಿ ಭಾರತೀಯರ ಸ್ಥಿತಿಯ ಕುರಿತು ಠರಾವುಗಳಾದವು. ಆ ಮೇಲೆ ಹಿಂದು-ಮುಸಲ್ಮಾನರ ಐಕ್ಯದ ಕುರಿತು ಠರಾವನ್ನು ಸೌ| ಸರೋಜಿನಿ ನಾಯಡೂರವರು ಸೂಚಿಸಿದರು. ಈ ಠರಾವಿನಲ್ಲಿ ಎರಡು ಭಾಗಗಳಿವೆ. ಒಂದು ಭಾಗದಲ್ಲಿ ರಾಜಕೀಯ ವಿಷಯವೂ, ಇನ್ನೊಂದು ಭಾಗದಲ್ಲಿ ಸಾಮಾಜಿಕ ವಿಷಯವೂ ಇತ್ಯರ್ಥಗೊಳಿಸಲ್ಪಟ್ಟಿದೆ. ಸಂಯುಕ್ತ ಮತದಾರ ಮಂಡಳಗಳನ್ನು ರಚಿಸಬೇಕು. ಲೋಕಸಂಖ್ಯೆಯ ಮಾನದಿಂದ ಸಮಾಜಗಳಿಗೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕು. ಸಿಖ ಮುಂತಾದ ಇತರ ಅಲ್ಪಸಂಖ್ಯಾಕರಿಗೆ ಅವರ ಸಂಖ್ಯೆಗೂ ಮಿಕ್ಕಿ ಪ್ರತಿನಿಧಿಗಳನ್ನು ಕೊಡಬೇಕು. ವಾಯವ್ಯ ಸರಹದ್ದಿನ ಮೇಲಿನ ಪ್ರಾಂತ, ಹಾಗು ಬ್ರಿಟಿಶ ಬಲೂಚಿಸ್ಥಾನಗಳಲ್ಲಿ ರಾಜ್ಯಸುಧಾರಣೆ ಮಾಡಬೇಕು. ಆಂಧ್ರ, ಸಿಂಧ, ಕರ್ನಾಟಕ ಪ್ರಾಂತಗಳನ್ನು ಪ್ರತ್ಯೇಕ ಪ್ರಾಂತಗಳಾಗಿ ರಚಿಸಬೇಕು. ಮನೋದೇವತೆಯು ಯಾವಾಗಲೂ ಸ್ವತಂತ್ರವಿರಬೇಕು. ಅದರ ಪ್ರೇರಣೆಯಂತೆ ನಡೆಯಲು ಎಲ್ಲರಿಗೂ ಸ್ವಾತಂತ್ರ್ಯವಿರಬೇಕು. ಧಾರ್ಮಿಕ ವಿಷಯಗಳಲ್ಲಿ ಆಯಾ ಧರ್ಮದ ಕಾಯಿದೆ ಕೌನ್ಸಿಲಿನೊಳಗಿನ ಪ್ರತಿನಿಧಿಗಳ ಮುಕ್ಕಾಲು ವಿರೋಧವಾಗಿ ಕಾನೂನುಗಳನ್ನು ಪಾಸುಮಾಡಿಸಲಾಗದು. ಹಿಂದು ಮುಸಲ್ಮಾನರ ಹಕ್ಕುಗಳೇನೂ ಇರಲಿ, ವಾದ್ಯಘೋಷವನ್ನು ಬೇಕಾದಲ್ಲೆ, ಬೇಕಾದಾಗ ಮಾಡಲಿಕ್ಕೆ ಹಿಂದುಗಳಿಗೆ ಹಕ್ಕಿರುವದಾಗಿ ಗ್ರಹಿಸುವಾ; ಮುಸಲ್ಮಾನರಿಗೆ ಗೋಹತ್ಯ ಮಾಡಲು ಹಕ್ಕಿರುವದಾಗಿ ಗ್ರಹಿಸುವಾ; ಆದರೆ, ಹಿಂದು-ಮುಸಲ್ಮಾನರು ಪರಸ್ಪರ ಭಾವನೆಗಳನ್ನು ಮನ್ನಿಸುವದಕ್ಕಾಗಿ ತಮ್ಮ ಹಕ್ಕುಗಳನ್ನು ಬಲಾತ್ಕಾರದಿಂದ ಅನುಷ್ಠಾನದಲ್ಲಿ ತರಲು ಉದ್ಯುಕ್ತರಾಗಬಾರದೆಂದು ರಾಷ್ಟ್ರೀಯ ಸಭೆಯು ಹಿಂದು-ಮುಸಲ್ಮಾನರಿಗೆ ಆಗ್ರಹ ಮಾಡುತ್ತದೆ. ಹಿಂದು-ಮುಸಲ್ಮಾನರಿಗೆ ಯಾ ಬೇರೆ ಸಮಾಜದವರಿಗೆ ಧರ್ಮಾಂತರ ಮಾಡಲು ಅಧಿಕಾರವಿದೆ, ಆದರೆ, ಪ್ರಾಯಸ್ಥರಿಗೆ ಯಾರೂ ಧರ್ಮಾಂತರ ಮಾಡಲಾಗದು. ಧರ್ಮಾಂತರ ಮಾಡುವಾಗ ರಹಸ್ಯತನವನ್ನಾಗಲಿ, ಐಹಿಕ ಸುಖದ ಅಭಿಲಾಷೆಯನ್ನಾಗಲಿ ಮುಂದೊಡ್ಡಲಾಗದು. ಧರ್ಮಾಂತರ ಹೊಂದಿದ ಬಗ್ಗೆ ಸಂತೋಷ ವ್ಯಕ್ತಪಡಿಸಬಾರದು. ಧರ್ಮಾಂತರದ ಕ್ರಮಗಳ ಕುರಿತು

ಹಕೀಮ್ ಅಜಮಲಖಾನರವರ ನಿಧನ; ಭಾರತೀಯರ ದುರ್ದೈವ!

...ತ್ರರು ಬಂದಾಗ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳವು ಅಕ್ಟೋಬರಿನ ಹೇಳಿಕೆ ಪರಾಂಬರಿಸಿ ಐಕ್ಯತೆಗೊಳಿಸಬೇಕು. ಈ ಠರಾವನ್ನು ಸಾ...ಮೋದಿಸಿದೇವಿಯವರು ಸೂಚಿಸುವಾಗ, ಚಿತ್ತವೇಧಕ ಭಾಷಣ ಮಾಡಿದರು. ಇದೊಂದು ಸ್ಥಿರತೆಯು ...ಜಾಹೀರನಾಮೆಯೊಂದೂ, ಇದರಿಂದ ಹಿಂದು-ಮುಸಲ್ಮಾನರೊಳಗೆ ನಡೆಯುತ್ತಿರುವ ಅಸ್ಪೃಶ್ಯ ಕಲಹಗಳು ಅಂತ್ಯವಾಗುವವೆಂದೂ ನುಡಿದರು. ಮ್ಯಾ... ಅಬ್ದುಲ್ ಕಲಾಮು ಅಝಾದರವರು ಇಸ್ಲಾಮು ಧರ್ಮ... ಪರಧರ್ಮಸ್ಥೈರತೆಯನ್ನು ಬೆಳ್ಳಿಸಿದರು. ಶ್ರೀ|| ...ಗತ್ ನಾರಾಯಣಲಾಲರವರು ಠರಾವಿನ ಭಾಷೆಯು ಸಂಶಯಾಸ್ಪದವೆಂದು ವಿರೋಧಿಸಿದರು. ಸರದಾ... ಶಾದೂಲ ಸಿಂಗರವರು ಠರಾವನ್ನು ಅನುಮೋದಿ...ವಾಗ ಇಂಥ ವಿಷಯಗಳನ್ನು ಅಯಾ ಸಮಾಜದ ...ಧ್ಯಕ್ಷರಿಗೇ ಒಪ್ಪಿಸಿದ್ದು ಶ್ರೇಯಸ್ಕರವಾಯಿತೆಂದು ನುಡಿ...ದು, ಠರಾವನ್ನು ಅಂತಃಕರಣಪೂರ್ವಕವಾಗಿ ಅನುಮೋದಿಸಿದರು. ಸರಕಾರವು ಹಿಮ್ಮೆ ಹಿಂದುಗಳಿಗೆ, ...ನ್ನೊಮ್ಮೆ ಮುಸಲ್ಮಾನರಿಗೆ ಬೆನ್ನು ತಟ್ಟಿ ರಾಜ್ಯವಾಳುತ್ತದೆಂಗು ಶ್ರೀ|| ಸೇನಗುಪ್ತರು ನುಡಿದು, ರಾಷ್ಟ್ರೀಯ ಸಭೆಗೆ ಪಂಚ ಅಧಿಕಾರ ಕೊಟ್ಟದ್ದು ಶ್ರೇಯಸ್ಕರವೆಂದು ಅಭಿಪ್ರಾಯಪಟ್ಟರು. ರಾಷ್ಟ್ರೀಯ ಸಭೆಯು ...ಲ್ಪಸಂಖ್ಯಾಕರ ಪಕ್ಷಪಾತಿಯೆಂದು ಈ ಠರಾವಿನಿಂದ ಸಿದ್ಧವಾಗುತ್ತದಾಗಿ ಮೌ|| ಮಹಮ್ಮದ ಅಲ್ಲಿಯವರು ನುಡಿದರು. ಈ ಠರಾವಿನಂತೆ ಸಮಸ್ತ ಜಂ...ದವರು ನಡೆಕೊಂಡಲ್ಲಿ ೨ ವರ್ಷಗಳೊಳಗೆ ಸ್ವರಾಜ್ಯ ಸಿಗುವದೆಂದು ಪಂಡಿತ ಮಾಲವೀಯರವರು ಉ...ರಿಸಿದರು. ಹಿಂದು-ಮುಹಮ್ಮದೀಯರ ಐಕ್ಯದ ...ಬುನಾದಿಯಲ್ಲಿ ಈ ಠರಾವನವಿದ್ದು, ಈ ...ಲಗಟ್ಟಿನ ಮೇಲೆ ಸ್ವರಾಜ್ಯದ ಸುಶೋಭಿತ ಮಂದಿರವನ್ನು ನಾವೇರ್ಪಡಿಸಬಹುದೆಂದು ಶ್ರೀಯುತ ಶ್ರೀನಿವಾಸ ಅಯ್ಯಂಗಾರರವರು ನುಡಿದ ಬಳಿಕ, ಅಧ್ಯಕ್ಷರು ಈ ಠರಾವನ್ನು ಸಭೆಯ ಮುಂದಿಟ್ಟರು. ಅ...ಕ್ಕೆ ಅಧ್ಯಕ್ಷರು ಮಹತ್ವದ ವಚನಗಳನ್ನು ...ದರು. "ಇಂದಿಗೆ ನೀವು ಸ್ವತಂತ್ರ ಹಿಂದುಸ್ಥಾನದ ...ಬುನಾದಿಯನ್ನು ಹಾಕಿದ್ದೀರಿ. ಏಕೆ?— ಆ ಧ್ಯೇಯವ... ಕಡೆಗಾಣಿಸಲು ಮಾರ್ಗಕ್ರಮಣ ಮಾಡಿದ್ದೀರಿ. ...ಮುಸಲ್ಮಾನರು ಗೋವಧ ಮಾಡಬಾರದೆಂದು ಗೆಳೆಯರೊಬ್ಬರು ಹೇಳಿದರು. ನಾನು ಗೋಹತ್ಯ ಮಾಡುವದನ್ನು ಬಿಟ್ಟು ಬಹಳ ದಿನಗಳಾದವು. ಇಲ್ಲಿದ್ದ ಮುಸಲ್ಮಾನರು ಗೋಮಾಂಸವನ್ನು ತಿನ್ನುವದಿಲ್ಲ. ಹಿಂದುಸ್ಥಾನದೊಳಗಿನ ಸಮಸ್ತ ಮುಸಲ್ಮಾನರೂ ಹಿಂದುಗಳಿಗಾಗಿ ಸಂತೋಷದಿಂದ ಶಾಶ್ವತವಾಗಿ ಗೋಹತ್ಯವನ್ನು ತ್ಯಜಿಸಬೇಕಾಗಿ ನನ್ನ ಅಂತಃಕರಣಪೂರ್ವಕ ...ಯಾಚನೆ ಇರುತ್ತದೆ." ಚಪ್ಪಾಳಿಗಳ ಘೋಷದಲ್ಲಿ ಅಧ್ಯಕ್ಷರ ಭಾಷಣವನ್ನು ಎಲ್ಲರೂ ಮನ್ನಿಸಿ, ಠರಾವನ್ನೂ ಮನ್ನಿಸಿದರು. ಇಷ್ಟಕ್ಕೆ ಮುಂಜಾವಿನ ಅಧಿವೇಶನವು ಸಮಾಪ್ತವಾಯಿತು.

ರಾಷ್ಟ್ರೀಯ ಸಭೆಯ ಸಮಾರೋಪ.

ಸಾಯಂಕಾಲ ೫ ಘಂಟೆಗೆ ರಾಷ್ಟ್ರೀಯ ಸಭೆಯ ...ಧಿವೇಶನವು ಪುನಃ ಪ್ರಾರಂಭವಾಯಿತು. ಶ್ರೀ|| ಜಮ...ದಾಸ ಮೇಹತಾರವರು ಸ್ವರಾಜ್ಯ ಘಟನೆ ತಯಾರಿ...ಸ ಅಧಿಕಾರವು ಭಾರತೀಯರದೆಂತಲೂ, ಅದು ...ಮನ್ ಕಮಿಶನ್ನಿಂದ ಲಭಿಸದೆಂದೂ ಶ್ರೀ|| ಜ...ನಾದಾಸರವರು ಹೇಳಿದರು. ಡಾ|| ವರದರಾಜುಲು ನಾಯುಡುರವರು ಅನುಮೋದಿಸಿದ ಬಳಿಕ, ಸ್ವರಾಜ್ಯ ಘಟನೆಯನ್ನು ತಯಾರಿಸುವ ಠರಾವು ಮಂಜೂರಾಯಿತು. ಸಂಸ್ಥಾನಿಕರು ತಮ್ಮ ತಮ್ಮ ಸಂಸ್ಥಾನಗಳಲ್ಲಿ ಪ್ರಜೆಗಳಿಗೆ ಸ್ವರಾಜ್ಯಾಧಿಕಾರಗಳನ್ನು ಕೊಡಬೇಕಾಗಿ ಠರಾವಾಯಿತು. ಪ್ರಾಂತಿಕ ಪರಿಸ್ಥಿತಿಯನ್ನು ವಿಚಾರಿಸಿ, ವಿಶಿಷ್ಟ ಬ್ರಿಟಿಶ ಸರಕುಗಳನ್ನು ಪ್ರಾಂತಿಕ ಕಾಂಗ್ರೆಸ ಕಮೀಟಿಗಳು ಕಲ್ಪಿಸಬೇಕಾಗಿಯೂ ಠರಾವಾಯಿತು. ಪಂಡಿತ ಜವಾಹರಲಾಲ ನೆಹರೂ, ಶ್ರೀ|| ಸುಭಾಶಚಂದ್ರ ಬೋಸ, ಡಾ|| ಶ್ರೇಬ ಖುರೇಶಿಯವರು ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟರು. ಮುಂದಿನ ರಾಷ್ಟ್ರೀಯ ಸಭೆಯ ಅಧಿವೇಶನವು ಕಲಕತ್ತೆಯಲ್ಲಿ ನಿಮಂತ್ರಿಸಲ್ಪಟ್ಟಿತು. ಇಷ್ಟಕ್ಕೆ ಸಭಾಕಾರ್ಯವು ಮುಗಿಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ|| ಮುಥುಲಿಂಗ ಮುದಲಿಯಾರರವರು ಪ್ರತಿನಿಧಿ-ಪ್ರೇಕ್ಷಕರ ಉಪಕಾರ ಮನ್ನಿಸಿ ತಮ್ಮ ಭಾಷಣವನ್ನು ಮುಗಿಸುವಷ್ಟರಲ್ಲಿ ಸಭಿಕರೆಲ್ಲರೂ ಆನಂದಭರಿತರಾಗಿ ಒಮ್ಮೆಲೇ ಎದ್ದು ನಿಂತು, "ಮಹಾತ್ಮಾ ಗಾಂಧೀಕಿ ಜಯ್," "ಅನ್ಸಾರಿಕಿ ಜಯ್," "ವಂದೇ ಮಾತರಮ್," "ಅಲ್ಲಾ ಹೋ ಅಕಬರ" ಮುಂತಾದ ಜಯಘೋಷಗಳನ್ನು ಮಾಡಿದರು. ಲಾಲಾ ಶಂಕರಲಾಲರವರು ಅತಿಥಿಗಳ ಪರವಾಗಿ ಸ್ವಾಗತ ಸಮಿತಿಯವರ ಉಪಕಾರ ಮನ್ನಿಸಿದ ಬಳಿಕ, ಡಾ|| ಅನಸಾರಿಯವರ ಸಭಾ ವಿಸರ್ಜನ ಭಾಷಣವನ್ನು ಮಾಡಿದರು. ಹಿಂದು-ಮುಸಲ್ಮಾನರು ಐಕ್ಯ ಠರಾವಿನಂತೆ ನಡೆಕೊಂಡು ದೇಶದಲ್ಲುಂಟಾದ ಆತ್ಮಘಾತಕ ಅಂತಃಕಲಹಗಳನ್ನು ಸಂಪೂರ್ಣವಾಗಿ ಲಯಪಡಿಸಿ, ನೀವು ಸಮರ್ಥರಾದರೆ, ಸ್ವರಾಜ್ಯವು ನಿಮ್ಮ ಹಸ್ತಗತವಾಯಿತೆಂದು ತಿಳಕೊಳ್ಳಿರಿ. ಸೈಮನ್ ಕಮಿಟಿಯನ್ನು ಐಕ್ಯಮತ್ಯದಿಂದ ಬಹಿಷ್ಕರಿಸಿದರೆ, ನಮಗೆ ಸ್ವರಾಜ್ಯವು ಶೀಘ್ರವೇ ಪ್ರಾಪ್ತವಾಗುವದು. ಠರಾವುಗಳನ್ನು ಆಚಾರದಲ್ಲಿ ಪರಿಣಮಿಸಲು ಪ್ರತಿಜ್ಞೆ ಮಾಡಿ ಮಂಟಪದೊಳಗಿಂದ ಎದ್ದು ನಡೆಯಿರಿ. ಸ್ವಾಗತ ಸಮಿತಿಯವರೂ, ಸ್ವಯಂಸೇವಕರೂ ಸಭಾಕಾರ್ಯವನು ಅತ್ಯಂತ ದಕ್ಷತೆಯಿಂದ ನಡಿಸಿದ ಬಗ್ಗೆ ನಾನವರಿಗೆ ಋಣಿಯಾಗಿದ್ದೇನೆ. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರವರು ನಿಮ್ಮ ಪ್ರಾಂತದೊಳಗಿನ ದೇಶೋದ್ಧಾರ ಪ್ರಯತ್ನಗಳ ಸೂತ್ರಧಾರರು. ಅವರ ಉಪಕಾರಗಳನ್ನೂ ನಾನು ಮನ್ನಿಸುತ್ತೇನೆ. ಅವರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತಿಯಾಗಲೆಂದೂ ನಾನು ಬಯಸುತ್ತೇನೆ. ವಿಚಾರವಿಲ್ಲದೆ ಸೆರೆಯಲ್ಲಿ ನರಳುವ ಬಂಗಾಲದೊಳಗಿನ ದೇಶಾಭಿಮಾನಿಗಳಿಗೆ ನೀವು ಯಾವಾಗಲೂ ಸ್ಮರಿಸುತ್ತಿರಿ." ಹೀಗೆ ಹೇಳಿ, ಡಾ|| ಅನ್ಸಾರಿಯವರು ಸಮಾರೋಪ ಮಾಡಿದ ಬಳಿಕ, ಅಧ್ಯಕ್ಷರ ಆಭಾರ ಮನ್ನಿಸೋಣಾಗಿ, ಸಭೆಯು ವಿಸರ್ಜನವಾಯಿತೆಂದು ಜಾಹೀರ ಮಾಡೋಣಾಯಿತು. ಆಗ, "ಅನ್ಸಾರಿಕಿ ಜಯ" "ಮಹಾತ್ಮಾ ಗಾಂಧಿಕೆ ಜಯ" "ಅಲ್ಲಾಹೋ ಅಕಬರ" "ವಂದೇ ಮಾತರಮ್" ಮುಂತಾದ ಜಯಘೋಷಗಳು ಏಕಸಮನೆ ನಡೆದು ಮಂಟಪವೆಲ್ಲ ದುಮುದುಮಿಸಿತು. ಡಾ|| ಅನಸಾರಿಯವರ ಅಧಿಪತ್ಯದಲ್ಲಿ ನಡೆದ ೪೨ ನೇ ರಾಷ್ಟ್ರೀಯ ಸಭೆಯ ಮದ್ರಾಸದ ಅಧಿವೇಶನವು ಈ ಪ್ರಕಾರ ಯಶಸ್ವಿಯಾಗಿ ಕೊನೆಗಂಡಿತು.

ಡಾ|| ಹಕೀಮ ಅಜ್ಮಲಖಾನರು.

ಅಖಿಲ ಭರತ ಖಂಡದಲ್ಲಿ ಸಮಸ್ತ ಪ್ರಜೆಗಳಿಗೆ ಆದರಣೀಯರಾದ ಹಕೀಮ ಅಜಮಲಖಾನರವರು ಹೃದ್ರೋಗದಿಂದ ಕಳೆದ ಗುರುವಾರಕ್ಕೆ ಕಾಲಾಧೀನರಾದರೆಂದು ತಿಳಿಸಲು ಅತ್ಯಂತ ಮನೋವ್ಯಥೆಯುಂಟಾಗುತ್ತದೆ. ಹಕೀಮಸಾಹೇಬರು ಭಾರತೀಯ ರಾಜಕಾರಣದಲ್ಲಿ ಪ್ರಶಾಂತ ಚಿತ್ತದಿಂದಲೂ, ಮುಗ್ಧತೆಯಿಂದಲೂ ದುಡಿದಿರುವ ನಿಷ್ಕಾಮ ದೇಶಸೇವಕರು. ಮಹಾತ್ಮರ ಜೊತೆಗೆ ಅಸಹಕಾರದ ಕಾರ್ಯಕ್ರಮವನ್ನು ಅವರು ಪುರಸ್ಕರಿಸಿ ಮಾಡಿದ ದೇಶಸೇವೆಗೆ ಪ್ರತಿಫಲವಾಗಿ ಭಾರತೀಯರು ಅವರಿಗೆ ಅಹಮದಾಬಾದದ ರಾಷ್ಟ್ರೀಯ ಸಭೆಗೆ ಅಧ್ಯಕ್ಷಸ್ಥಾನವನ್ನಿತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಹಿಂದು-ಮುಸಲ್ಮಾನರೊಳಗೆ ಐಕ್ಯಭಾವವನ್ನು ನೆಲಿಸುವದಕ್ಕಾಗಿ ಅವರು ಯಾವಾಗಲೂ ದುಡಿಯುತ್ತಿದ್ದರು. ಅಫಘಾನಿಸ್ಥಾನದ ಅಮೀರರಾದ ಅಮಾನುಲ್ಲಾಖಾನರವರಿಗೆ ಹಿಂದುಸ್ಥಾನಕ್ಕೆ ಬರಮಾಡಿಕೊಳ್ಳಲು ಹಕೀಮಸಾಹೇಬರೇ ಕಾರಣರೆಂದು ಪಾಡಕರಿಗೆ ತಿಳಿದರೆ, ಹಕೀಮಸಾಹೇಬರ ಸೇವೆಯ ಅರಿವುಂಟಾಗಿ, ಭಾರತ ಮಾತೆಗೆ ಒದಗಿದ ವಿರಹತಾಪವು ಗೋಚರವಾಗುವದು. ರಾಷ್ಟ್ರೀಯ ಸಭೆಯು ಅಖಿಲರ ಸಮ್ಮತಿಯಿಂದ ಹಿಂದು-ಮುಸಲ್ಮಾನರ ಐಕ್ಯ ಠರಾವನ್ನು ಕೈಕೊಂಡ ದಿನವೇ ಹಕೀಮಸಾಹೇಬರು ತೀರಿಕೊಂಡ ಸುದ್ದಿಯನ್ನು ಕೇಳಿದರೆ, ಅವರ ಕಾರ್ಯವು ತೀರಿತೆಂದು ಮನಃಶಕ್ತಿಯಿಂದಲೇ ಗ್ರಹಿಸಿ, ಹಕೀಮಸಾಹೇಬರು ಪರಲೋಕವನ್ನೈದಿದರೆಂದು ಪರಮಾಪ್ತರುಗಳು ಗ್ರಹಿಸಿದರೇನಾಶ್ಚರ್ಯ! ಹಕೀಮಸಾಹೇಬರು ವೈದ್ಯಶಾಸ್ತ್ರ ನಿಪುಣರಿದ್ದು, ಆಯುರ್ವೇದ-ಯುನಾನಿ ಪದ್ಧತಿಯಿಂದ ಚಿಕಿತ್ಸೆ ನಡಿಸುತ್ತಿದ್ದರು. ಈ ಪದ್ಧತಿಗಳನ್ನು ಪ್ರಜೆಗಳಲ್ಲಿ ಪ್ರಸಾರ ಮಾಡುವದಕ್ಕಾಗಿ ಟಿಬಿ ಕಾಲೇಜನ್ನು ಡಾ|| ವಾ|| ಗಳು ತಮ್ಮ ಅತ್ಯಂತ ಪ್ರೀತಿಯ ಗೆಳೆಯರಾದ ಮಹಾತ್ಮರ ಹಸ್ತದಿಂದ ಪ್ರಾರಂಭಿಸಿದರು. ಈ ಕಾಲೇಜು ಈಗ ಸುಸ್ಥಿತಿಯಲ್ಲಿದ್ದು, ಹಕೀಮಸಾಹೇಬರ ಸ್ಮಾರಕವಾಗಿದೆ. 'ಜಮಿಯಾ' ಎಂಬ ಮುಹಮ್ಮದೀಯ ಸಂಸ್ಥೆಯನ್ನು ಹಕೀಮಸಾಹೇಬರು ಸ್ಥಾಪಿಸಿ, ಸ್ವತಂತ್ರ ವಿದ್ಯೆಯನ್ನೂ ಕಲ್ಪಿಸಿದ್ದಾರೆ. ಹೀಗೆ ಅಖಿಲರಿಗೂ ಮಾನ್ಯರಾದ ಕರ್ತೃತ್ವಶಾಲಿಗಳಾದ ಲೋಕನಾಯಕರು ಗುರುವಾರಕ್ಕೆ ರಾಮಪುರದಲ್ಲಿ ಕಾಲಾಧೀನರಾದರು. ಹಕೀಮಸಾಹೇಬರ ಗುಣ ಸಂಕೀರ್ತನೆಯನ್ನು ಎಷ್ಟೆಂದು ಹೇಳಬರದು. ಅಸಹಕಾರದ ಬಿರುಗಾಳಿಯಲ್ಲಿ ವಿವೇಕದಿಂದ ದೇಶಸೇವೆಯನ್ನು ಮಾಡಿದ ಧನಾರ್ಹ್ಯರವರು. ಇದೇ ರಾಷ್ಟ್ರವೇ ಹಕೀಮಸಾಹೇಬರ ಬಗ್ಗೆ ಮರುಗುತ್ತದೆ. ಈ ಸಂಧಿಕಾಲದಲ್ಲಿ ಅವರಿರಬೇಕಾಗಿತ್ತೆಂದು ಮೌಲಾನಾ ಮಹಮ್ಮದ ಅಲ್ಲಿ ಜೆನ್ನಾರವರು ಉದ್ಗರಿಸುತ್ತಾರೆ. ಆದರೆ, ನಮ್ಮ ಕೈಯಲ್ಲೇನಿದೆ? ವಿಧಿಘಟನೆಗೆ ಹೊರತಾಗಿ ನಡೆಕೊಳ್ಳಬೇಕಲ್ಲವೇ! ಪುಣ್ಯಾತ್ಮರಿಗೆ ಜಗದ್ವ್ಯಾಪಕನು ಸದ್ಗತಿಯನ್ನೀಯಲೆಂದು ಪ್ರಾರ್ಥಿಸುವದೊಂದೇ ನಮ್ಮ ಕೈಯಲ್ಲಿರುವ ಉಪಾಯ. ಅದನ್ನಷ್ಟು ನಾವು ಭಕ್ತಿಪೂರ್ವಕವಾಗಿ ಮಾಡುವೆವು.

ಮಹಾತ್ಮರ ಆತ್ಮಚರಿತ್ರೆ.

(೩೧) ಉಪೋಷಣ.

ಹಾಲು ಹಾಗು ಧಾನ್ಯಗಳನ್ನು ಬಿಟ್ಟು ಫಲಾಹಾರದ ಪ್ರಯೋಗ ಮಾಡುತ್ತಿರುವಾಗಲೇ ಸಂಯಮದ ಒಂದು ಸಾಧನವೆಂದು ಉಪೋಷಣದನ್ನು ನಾನು ಪ್ರಾರಂಭಿಸಿದೆನು. ಮಿ|| ಕಾಲಿನಬಾಕ್‍ರವರು ನನ್ನಂತೆ ನಡೆದುಕೊಳ್ಳಲು ಆರಂಭಿಸಿದರು. ನನಗೆ ಹಿಂದಾಗ ಉಪೋಷಣ ಮಾಡುವ ಅಭ್ಯಾಸವಿತ್ತು. ಆ ಕಾಲಕ್ಕೆ ಆರೋಗ್ಯದ ಸಾಧನವಾಗಿ ನಾನು ಉಪವಾಸ ಮಾಡುತ್ತಿದ್ದೆ. ಇಂದ್ರಿಯ ನಿಗ್ರಹಕ್ಕೆ ಉಪೋಷಣವು ಅವಶ್ಯವಿರುವದೆಂದು ಗೆಳೆಯರೊಬ್ಬರು ನನಗೆ ಹೇಳಿದರು. ನಾನು ವೈಷ್ಣವ ಪರಂಪರೆಯವನು. ತರತರದ ಕಠಿಣ ವ್ರತಗಳನ್ನು ಕೈಕೊಳ್ಳುವ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವನು. ಆದದರಿಂದ ಹಿಂದುಸ್ಥಾನದಲ್ಲಿದ್ದಾಗ ಏಕಾದಶಿ ಮುಂತಾದ ಉಪವಾಸಗಳನ್ನು ನಾನು ಮಾಡುತ್ತಿದ್ದೆ. ಇದನ್ನೆಲ್ಲ ನನ್ನ ತಾಯಿಯ ಅನುಕರಣೆಯಾಗಿ ಮತ್ತು ತಾಯಿ ತಂದೆಗಳ ಸಂತೋಷಕ್ಕಾಗಿ ನಾನು ಇವನ್ನೆಲ್ಲ ಮಾಡುತ್ತಿದ್ದೆ. ಆ ಕಾಲಕ್ಕೆ ಉಪವಾಸದ ಮಹಿಮೆಯು ನನಗೆ ತಿಳಿದಿದ್ದಿಲ್ಲ, ಆ ಮಹಿಮೆಯಲ್ಲಿ ನನಗೆ ಶ್ರದ್ಧೆಯೂ ಇರಲಿಲ್ಲ. ಆದರೆ ಗೆಳೆಯರು ಉಪವಾಸ ಮಾಡಿ ಪಡೆದ ಲಾಭವನ್ನು ಕಂಡೆನು. ಬ್ರಹ್ಮಚರ್ಯ ಪಾಲನೆಗೆ ಬೆಂಬಲವೆಂದು ಅವರಿಗೆ ಹೇಳಿ ಏಕಾದಶೀ ದಿನ ಉಪವಾಸ ಮಾಡಲಾರಂಭಿಸಿದೆನು. ಹಿಂದು ಜನರು ಉಪವಾಸದ ದಿನ ಹಾಲು ಹಣ್ಣು ಹಂಪಲಗಳನ್ನು ತಿನ್ನುವ ವಾಡಿಕೆಯಿದೆ. ಆ ಪ್ರಕಾರದ ಉಪವಾಸವನ್ನು ನಿತ್ಯವೂ ನಾನು ನಡಿಸುತ್ತಿದ್ದೆ. ಆದರಿಂದ ಏಕಾದಶೀ ದಿನ ಸಂಪೂರ್ಣವಾಗಿ ಉಪೋಷಣ ಮಾಡಹತ್ತಿದೆನು. ನೀರನ್ನಷ್ಟೇ ಕುಡಿಯಲಾರಂಭಿಸಿದೆನು.

ಈ ಪ್ರಯೋಗ ನಡೆದಾಗಲೇ ನಮ್ಮ ಹಿಂದು ಜನರ ಶ್ರಾವಣ ಮಾಸವೂ ಮುಸಲಮಾನರ ರಮಝಾನ ತಿಂಗಳೂ ಕೂಡಿ ಬಂದವು. ನಮ್ಮ ಗಾಂಧಿ ಕುಟುಂಬದವರು ವೈಷ್ಣವ ವ್ರತಗಳಂತೆ ಸ್ಮಾರ್ತ ವ್ರತಗಳನ್ನೂ ನಡಿಸುತ್ತಿದ್ದರು. ವೈಷ್ಣವ ಶೈವ ದೇವಾಲಯಗಳಿಗೂ ಭೇದಭಾವವಿಲ್ಲದೆ ಹೋಗುತ್ತಿದ್ದರು. ನಮ್ಮ ಮನೆತನದ ಕೆಲವರು ಇಡೀ ಶ್ರಾವಣ ಮಾಸದಲ್ಲಿ ಪ್ರದೋಷವನ್ನಾಚರಿಸುತ್ತಿದ್ದರು. ನಾನು ಅದನ್ನು ಕೈಕೊಂಡೆ.

ಈ ವಿಶಿಷ್ಟ ಪ್ರಯೋಗಗಳ ಟಾಲ್‍ಸ್ಟಾಯ್ ಹೊಲದಲ್ಲಿ ಕೈಕೊಳ್ಳಲಾಗಿದ್ದವು. ಅಲ್ಲಿ ನಾನೂ ಮಿ|| ಕಾಲಿನಬಾಕ್‍ರವರೂ ಉಳಕೊಂಡಿದ್ದೆವು. ನಮ್ಮ ಜೊತೆಗೆ ಕೆಲವು ಸತ್ಯಾಗ್ರಹಿಗಳ ಕುಟುಂಬಗಳು ಸಹ ಉಳಕೊಳ್ಳುತ್ತಿದ್ದರು. ಅವರಲ್ಲಿ ಹುಡುಗರೂ ಚಿಕ್ಕ ಮಕ್ಕಳಿದ್ದರು. ಹುಡುಗರಿಗಾಗಿ ನಾವೊಂದು ಶಾಲೆಯನ್ನೇರ್ಪಡಿಸಿದ್ದೆವು. ೪-೫ ಮಂದಿ ಮುಸಲ್ಮಾನರಿದ್ದರು. ಮುಸಲ್ಮಾನರಿಗೆ ಅವರ ಧರ್ಮಶಾಸ್ತ್ರದಲ್ಲಿ ಹೇಳಿದ ವ್ರತಗಳನ್ನೆಲ್ಲ ಕೈಕೊಳ್ಳಲು ನಾನು ಯಾವಾಗಲೂ ಅವರಿಗೆ ಉತ್ತೇಜನ ಕೊಡುತ್ತಿದ್ದೆ. ದಿನಾ ನಮಾಜ ಪ್ರಾರ್ಥನೆಯನ್ನು ಅವರು ಮಾಡುತ್ತಾರೇನೆಂದು ನಾನು ನೋಡುತ್ತಿರುತ್ತಿದ್ದೆ. ಕ್ರಿಸ್ತರೂ, ಪಾರಸಿಗಳೂ ನಮ್ಮ ಜೊತೆಯಲ್ಲಿದ್ದರು. ಅವರವರ ಧಾರ್ಮಿಕ ವ್ರತಗಳನ್ನು ಕೈಕೊಳ್ಳುವಂತೆ ಅವರಿಗೂ ನಾನು ಉತ್ತೇಜನ ಕೊಡುತ್ತಿದ್ದೆ. ಶ್ರಾವಣ ತಿಂಗಳಲ್ಲಿ ಮುಸಲ್ಮಾನ ಬಾಲಕರಿಗೆ ರಮಝಾನ ಉಪವಾಸವನ್ನು ಕೈಕೊಳ್ಳಲು ನಾನು ಮನವೊಲಿಸಿದೆನು. ನಾನಂತು ಪ್ರದೋಷ ವ್ರತವನ್ನು ಕೈಕೊಳ್ಳಲು ನಿರ್ಧಾರ ಮಾಡಿದ್ದೆ. ಹಿಂದೂ, ಪಾರಸೀ, ಕ್ರಿಸ್ತ ಹುಡುಗರಿಗೂ ನನ್ನ ಜೊತೆಗೆ ಉಪವಾಸ ಮಾಡಲು ನಿಮಂತ್ರಿಸಿದೆನು. ಯಾವದೇ ಸ್ವಾರ್ಥತ್ಯಾಗದ ಸಂಗತಿಯಲ್ಲಿ ಪರರ ಜೊತೆಗೆ ಸೇರಿ ನಡೆಯುವದು ಯಾವಾಗಲೂ ಕಲ್ಯಾಣಪ್ರದವೆಂದು ನಾನವರಿಗೆ ತಿಳಿಸಿ ಹೇಳಿದೆನು. ನನ್ನ ಆಶ್ರಮದೊಳಗಿನವರಿಗೆ ನನ್ನ ಸೂಚನೆಯು ಗ್ರಾಹ್ಯವಾಯಿತು. ಮುಸಲ್ಮಾನರಂತೆ ಪ್ರತಿಯೊಂದು ದಿನದಲ್ಲಿಯೂ ಹಿಂದೂ, ಪಾರಸೀ ಹುಡುಗರು ನಡೆಯಲಿಲ್ಲ. ಹಾಗೆ ನಡೆಕೊಳ್ಳುವದು ಅವಶ್ಯವೂ ಇದ್ದಿಲ್ಲ. ಮುಸಲ್ಮಾನ ಹುಡುಗರಿಗೆ ಸೂರ್ಯಾಸ್ತವಾದನಕ ಅನ್ನಗ್ರಹಣ ಮಾಡಬರುತ್ತಿದ್ದಿಲ್ಲ. ಆದರೆ ದಿನಿಷ್ಟರು ಮುಸಲ್ಮಾನ ಗೆಳೆಯರಿಗಾಗಿ ಮುಂಚೆಯೆ ಅನ್ನವನ್ನು ತಯಾರಿಸಿ ಸೂರ್ಯಾಸ್ತವಾದ ಬಳಿಕ್ಕ ಅವರಿಗೆ ಬಡಿಸುತ್ತಿದ್ದರು. ಹಿಂದು ಹಾಗು ಇತರ ಹುಡುಗರು ಮುಸಲ್ಮಾನರ ಜೊತೆಗೆ ಸಾಯಂಕಾಲದವರೆಗೆ ಉಣ್ಣುತ್ತಿದ್ದಿಲ್ಲ. ಮುಸಲ್ಮಾನರ ಹೊರತು ಉಳಿದವರೆಲ್ಲರೂ ಪ್ರದೋಷ ಜಾಗರಣ ಮಾಡುತ್ತಿದ್ದರು.

ಸಂಪೂರ್ಣ ಹಾಗು ಅಪೂರ್ಣ ಉಪೋಷಣಗಳಿಂದ ಲಾಭವಾಗುತ್ತದೆಂದು ಎಲ್ಲರಿಗೂ ತಿಳಿಯಿತು, ಮತ್ತು ಎಲ್ಲರೊಳಗೆ ಅನ್ಯೋನ್ಯ ಪ್ರೇಮವು ಉಂಟಾಯಿತು. ಟಾಲ್‍ಸ್ಟಾಯ್ ಹೊಲವೆಂಬ ಆಶ್ರಮದಲ್ಲಿ ನಾವೆಲ್ಲರೂ ವನಸ್ಪತ್ಯಾಹಾರಿಗಳಾಗಿದ್ದೆವು. ನನಗಾಗಿ ಎಲ್ಲರೂ ವನಸ್ಪತ್ಯಾಹಾರವನ್ನೇ ಸೇವಿಸಲು ಸಂತೋಷದಿಂದ ಒಪ್ಪಿಕೊಂಡಿದ್ದರು. ಇದನ್ನು ನಾನು ಕೃತಜ್ಞತಾಬುದ್ಧಿಯಿಂದ ಇಲ್ಲಿ ನಮೂದಿಸುತ್ತೇನೆ. ರಮಝಾನ ದಿನಗಳಲ್ಲಿ ಮುಸಲ್ಮಾನ ಹುಡುಗರಿಗೆ ಮಾಂಸ ತಿನ್ನಲಾಗದೆ ಬಹಳ ಬೇಸರವಾಗಿರಬೇಕು. ಆದರೆ, ಒಬ್ಬರೂ ಕೂಡ ತಮಗುಂಟಾದ ಬೇಸರವನ್ನು ತೋರ್ಪಡಿಸಲಿಲ್ಲ. ವನಸ್ಪತ್ಯಾಹಾರವನ್ನು ರುಚಿರುಚಿಯಿಂದಲೂ ಅವರು ಸೇವಿಸುತ್ತಿದ್ದರು. ಆಶ್ರಮದ ಸಾಮಾನ್ಯತೆಗೆ ಅನುಸಾರವಾಗಿ ಹಿಂದು ಬಾಲಕರು ಮುಸಲ್ಮಾನ ಹುಡುಗರಿಗಾಗಿ ವನಸ್ಪತಿಗಳ ಪದಾರ್ಥಗಳನ್ನು ತಯಾರಿಸುತ್ತಿದ್ದರು. ಈ ಅಧ್ಯಾಯದಲ್ಲಿ ಉಪವಾಸದ ಮೇಲೆ ಹೆಚ್ಚು ವಿಸ್ತಾರವಾಗಿ ನಾನ ವಿಷಯಾಂತರ ಮಾಡಿದ್ದೇನೆ. ಈ ಸಂತೋಷಪ್ರದ ಸಂಗತಿಗಳನ್ನು ಬೇರೆಕಡೆಯಲ್ಲಿ ವರ್ಣಿಸಲಾಗುವದಿಲ್ಲ. ಅಪ್ರತ್ಯಕ್ಷವಾಗಿ ನನ್ನದೊಂದು ಸ್ವಭಾವ ಲಕ್ಷಣವನ್ನು ವರ್ಣಿಸಿದ್ದೇನೆ. ಒಳ್ಳೆಯದೆಂದು ನನಗೆ ತೋರಿದ ಯಾವುದೇ ಸಂಗತಿಯ ಕೆಲಸದಲ್ಲಿ ಜೊತೆಗಾರರನ್ನು ಸೇರಿಸಿಕೊಳ್ಳಲು ನಾನು ಯಾವಾಗಲೂ ಪ್ರಯತ್ನಪಡುತ್ತೇನೆ. ಈ ಹುಡುಗರಿಗೆ ಸಂಪೂರ್ಣ-ಅಪೂರ್ಣ ಉಪವಾಸ ಮಾಡುವ ಅಭ್ಯಾಸವಿದ್ದಿಲ್ಲ, ಹೊಸಬರವರು. ಪ್ರದೋಷ, ರಮಝಾನ ಉಪವಾಸಗಳಿಂದ, ಮನೋನಿಗ್ರಹಕ್ಕಾಗಿ ಉಪವಾಸ ಮಾಡುವದು ಹಿತವೆಂದು ಅವರಿಗೆ ತಿಳಿಸಿಹೇಳಲು ನನಗೆ ಸುಲಭವಾಯಿತು.

ಹೀಗೆ ಜನರ ಮನದಲ್ಲಿ ಸಂಯಮದ ಗಾಳಿ ಬೀಸಹತ್ತಿತು. ಆಶ್ರಮದೊಳಗಿನವರೆಲ್ಲರೂ ಸಂಪೂರ್ಣ-ಅಪೂರ್ಣ ಉಪವಾಸಗಳಲ್ಲಿ ನನ್ನೊಡನೆ ಸೇರಲುದ್ಯುಕ್ತರಾದರು. ಇದರಿಂದ ಅವರಿಗೆ ಹಿತವೇ ಆಯಿತು. ಈ ತ್ಯಾಗದಿಂದ ಮಾನಸಿಕ ಪರಿಶುದ್ಧತೆಯು ಎಷ್ಟರ ಮಟ್ಟಿಗೆ ಆಯಿತೆಂದೂ, ಶಾರೀರಿಕ ವಾಂಛೆಗಳನ್ನು ಅಡಗಿಸಲು ಎಷ್ಟರಮಟ್ಟಿಗೆ ಅನುಕೂಲವಾಯಿತೆಂಬುದೂ ನಿಶ್ಚಯಪೂರ್ವಕವಾಗಿ ನಾನು ಹೇಳಲಾರೆ. ನನ್ನ ಮಟ್ಟಿಗೆ ಮಾತ್ರ ಕಾಯಿಕ ಹಾಗು ಮಾನಸಿಕ ಕಲ್ಯಾಣವು ಬಹುಮಟ್ಟಿಗಾಯಿತೆಂದು ನಿಶ್ಚಯಪೂರ್ವಕವಾಗಿ ನಾನು ಹೇಳಬಲ್ಲೆ. ಆದರೆ, ಇದೇ ನಿರ್ಬಂಧಗಳಿಂದ ಎಲ್ಲರಿಗೂ ಇದೇ ಪ್ರಕಾರ ಫಲಪ್ರಾಪ್ತಿಯಾದೀತೆಂದು ನಾನು ಹೇಳಲಾರೆ. ಮನೋನಿಗ್ರಹಕ್ಕಾಗಿ ಉಪೋಷಣವನ್ನು ಕೈಕೊಂಡಿದ್ದರೆ ಮಾತ್ರ ವಿಷಯವಾಸನೆಯು ಉಪವಾಸದಿಂದ ದೂರವಾಗಬಲ್ಲದು. ಭಗವದ್ಗೀತೆಯ ೨ ನೇ ಅಧ್ಯಾಯದೊಳಗಿನ ಈ ಕೆಳಗಿನ ಸುಪ್ರಸಿದ್ಧ ಶ್ಲೋಕವನ್ನು ಎಲ್ಲರೂ ಲಕ್ಷದಲ್ಲಿಡುವಂತಾಗಿದೆ.

"ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ। ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ॥"

(ನಿರಾಹಾರಿ ದೇಹದೊಳಗಿಂದ ವಿಷಯಗಳು ಓಡುತ್ತವೆ, ಆದರೆ, ಪರಮಾತ್ಮನ ದರ್ಶನದಿಂದ ರಸಾಸ್ವಾದ ಕ್ಷಯವೇ ಲಯವಾಗುತ್ತದೆ) ಉಪವಾಸ ಹಾಗು ಇತರ ವ್ರತಗಳು ಸಂಯಮ ಸಾಧನೆಯ ಉಪಾಯಗಳು. ಆದರೆ, ಅವುಗಳಿಂದಲೇ ಸರ್ವಸಾಧ್ಯವಾಗವದಿಲ್ಲ. ಕಾಯಿಕ ಉಪವಾಸದ ಜೊತೆಗೆ ಮಾನಸಿಕ ಉಪವಾಸವೂ ಸಾಗದಿದ್ದರೆ ಆತ್ಮವಂಚನೆಯಾಗಿ ಅನರ್ಥವಾಗುವದು.

ಮಹಾತ್ಮರ ಅನುಭವಗಳು.

ಮಹಾತ್ಮರು ಹಿಂದು ಪ್ರಾಂತದಲ್ಲಿ ಸಂಚರಿಸಿ ರಾಷ್ಟ್ರೀಯ ಸಭೆಗೆ ಚಿತ್ತೈಸಿದರು. ಓರಿಸಾ ಅಥವಾ ಉತ್ಕಲ ಪ್ರದೇಶದಲ್ಲಿ ಮಹಾತ್ಮರಿಗೆ ವಿಚಿತ್ರವಾದ ಅನುಭವವು ಬಂತು. ಅಲ್ಲಿ ಪ್ರಜೆಗಳು ಬಹಳೇ ಬಡವರು. ಹೊಟ್ಟೆ ಹೊರೆಕೊಳ್ಳುವದೇ ಅಲ್ಲಿ ಕಠಿಣವಾಗಿದೆ. ಅಲ್ಲಿಯ ಮನೆಗಳೆಲ್ಲವೂ ಚಿಕ್ಕದಾಗಿದ್ದು, ಮಣ್ಣಿನಿಂದ ಕಟ್ಟಿದವು, ಕಿಡಿಕಿಗಳಿದ್ದರೆ ಪುಣ್ಯ. ದನಗಳಿಗೆ ಮೇವು ಸಿಗದು. ಹಿಂದೆ ಆಕಳುಗಳು ದಿನಾ ೪ ರತ್ತಲು ಹಾಲು ಕೊಡುತ್ತಿದ್ದವೆಂದು ಡಾ|| ಹಂಟರರವರು ತಮ್ಮ 'ಒರಿಸಾ' ಎಂಬ ಗ್ರಂಥದಲ್ಲಿ ಬರೆದಿದ್ದಾರೆ. ಈಗ ಅರ್ಧ ರತ್ತಲ ಹಾಲು ಸಿಕ್ಕುವದೆ ಹೆಚ್ಚಾಯಿತು. "ದನಗಳಿಗೆ ಕಾಳು ಕಡಿ ಯಾರು ಹತ್ತಿಕಾಳು ಹಾಕುವದಿಲ್ಲೇನು?" ಎಂದು ಮಹಾತ್ಮರ ಜೊತೆಗಾರರು ಕೇಳಿದರಂತೆ! ತಮ್ಮ ಹೊಟ್ಟೆಗೆ ಸಾಲದೆಂದು ಅಲ್ಲಿ ಒಬ್ಬನು ನುಡಿದನು. ಅನ್ನೊಂದು ಗ್ರಾಮದಲ್ಲಿ ನೇಕಾರನಿಗೆ ಮಾತನಾಡಿಸಿದರು. ಗಿರಣಿಯ ನೂಲಿನ ಆಧಾರದಿಂದ ತನಗೆ, ೫೫ ವರ್ಷಗಳ ಹಿಂದೆ, ಆತನು ದಿನಾ ೧೦ ಆಣೆ ದುಡಿಯುತ್ತಿದ್ದನಂತೆ. ಈಗ ೪ ಆಣೆ ಕೂಲಿ ಸಿಗಬೇಕಾದರೆ ಪಡಬಾರದ ಕಷ್ಟ. ಮೊದಲು ನೇಕಾರರು ಮಾಡಿದ ಅರಿವೆಗೆ ಬಹಳ ಬೇಡಿಕೆ ಇತ್ತು. ಈಗ ಅದಕ್ಕೆ ಕೇಳುವವರಿಲ್ಲ. ಚಮಗಾರರ ಗತಿಯು ಇದೇ. ಚಮಗಾರರಿಗೆ ಚರ್ಮವೇ ಸಿಗುವದಿಲ್ಲ. ಸತ್ತ ದನಗಳ ಚರ್ಮವನ್ನೆಲ್ಲ ಪಡಕೊಳ್ಳುವ ಅಧಿಕಾರವನ್ನು ಆ ಗ್ರಾಮದ ಸಂಸ್ಥಾನಿಕರು ಒಬ್ಬನಿಗೆ ಸಮಾಲಿಗೆ ಕೊಟ್ಟುಬಿಟ್ಟಿದ್ದರಂತೆ. ಅಲ್ಲಿ ಒಂದು ಅಫೀಮಿನ ಅಂಗಡಿಯಿದೆ. ದಿನಾ ೪೫-೫೦ ರೂಪಾಯಿಗಳ ಅಫೀಮು ಮಾರಾಟವಾಗುತ್ತದೆ. ಈ ಗ್ರಾಮವು ಸಂಸ್ಥಾನದೊಳಗಿದ್ದ ಕೆಲಸ ಗ್ರಾಮಕ್ಕಿಂತ ಸ್ವಲ್ಪ ಸಂಪನ್ನವಿದೆ. ಆದರೂ ಅಲ್ಲಿಯೂ ಒತ್ತರವೂ ವಿಶೇಷ ಬಡತನದ ಕಾಲಕವೂ ಬೇರೆ ಯಾವ ಕಾರಣದಿಂದಲೋ, ಆ ಪ್ರದೇಶದಲ್ಲಿ ಬಹ

ಚಳಿಯಿಂದ ಸುಮ್ಮನೆ ಏನೂ ತೋಚದಂತೆ ಏಕೆ ಕುಳಿತಿರುವಿರಿ?
ಸಂಘವಿಯವರ ತಯಾರಿಸಿದ ಬಟ್ಟೆಗಳನ್ನು ಉಪಯೋಗಿಸಿರಿ!!

ಟ್ವೀಡ ಕೋಟು ೧ಕ್ಕೆ ೧ ೪-೦, ಚೀಟಿನ (ಗರಿಗಳ) ಕೋಟ್ ೧ಕ್ಕೆ ರೂ ೧-೦-೦
ಕೋಟಾಪುರ ಚಿಕ್ಕದ ಕೋಟು ೧ಕ್ಕೆ ೩-೮-೦, ಕಿಕಾರ (Sporting) ಕೋಟು ೧ಕ್ಕೆ ೯-೮-೦
ಉಣ್ಣೆಯ ಮತ್ತು ಘಾಣ ಸರ್ಜಿನ ಬಟ್ಟೆ ೧ಕ್ಕೆ ೯ ೮ ೦ ನಿಲುವಂಗಿ (Overcoat) ೧ಕ್ಕೆ ರೂ ೧೨
ಇವುಗಳಲ್ಲದೆ ಇನ್ನು ಅನೇಕ ತರತರದ ಬಟ್ಟೆ ಬರಿಗಳೂ ಸಹ ನಮ್ಮಲ್ಲಿ ಅಗ್ಗ ದರದಿಂದ ಸಿಗುವವು!

ಬ್ರಾಂಚ್ ಆಫೀಸು:-- ಬುಧವಾರ ಪೇಟೆ, ಪುಣಾ ಸಿಟಿ.
ಸಂಘವಿ ಬ್ರದರ್ಸ, ಗಿರಗಾಂವ ಟ್ರಾಮ್ ನಾಕಾ, ಗಿರಗಾಂವ, ಮುಂಬಯಿ.
SANGHAVI.

ಒಬ್ಬರಿಗೆ 'ಗಾಂಧಿ' ಎಂದು ಹೇಳಿದರೆ, ಜೆರೆ [illegible] ಮಹಾತ್ಮರ ಆದರಿಂದ ಗಾಂಧಿ ದರ್ಶನದ ಮಾತು [illegible]ಳಬೇಕು, ಗದ್ದಲದಲ್ಲಿ ಸ್ಮಶಾನ ಶಾಂತಿ ಬೀಸು [illegible] ವಿಶ್ರಾಂತಿ ಅಲ್ಲಿಯು ಶಾಂತಿ [illegible] ಆವರು ಮಹಾತ್ಮರಿಗೆ ಅಲ್ಲಿಯ ಜನರ [illegible] ಸ್ಥಿತಿಯನ್ನು ಹೇಳಿದರು, [illegible] ಬಿಲ್ಲಿನ ಪಕ್ಕದಲ್ಲಿಂತು ಮಹಾತ್ಮರಿಗೆ ವ್ಯವಸ್ಥೆ [illegible] ಸ್ಥಳಗಳಲ್ಲಿ ಸವೆದ ಕ್ಷಿಯೇ ಪ್ರಜೆಗಳು [illegible] ಕೊಟ್ಟರು. ಪುಣೆಪುರದಲ್ಲಿ ಅಸ್ಪೃಶ್ಯರು ಮಹಾತ್ಮ [illegible] — ಒಂದನೆಯ ದಿನಗಳನ್ನು ಅರ್ಪಿಸಿ [illegible] ಅವರ ಲಿಲಾಂಪಿಗೆ ಹಾಕೋಣ [illegible] ಒಂದು [illegible] ಹೀಗೆ ಒಂದಷ್ಟೇ [illegible] ಪುಗಳಲ್ಲ [illegible] ಕಡಲು [illegible] ವೈಲಿಂದ [illegible] 'ಪ್ಪೃಶ್ಯರನ್ನು ಮಹಾತ್ಮರಿಗೆ [illegible] ಒಂದು [illegible] ಮಾಡಿದನು [illegible] ಕಟ್ಟಿಗೆ [illegible] ತಕ್ಕೊಂಡು ಬೋಳ್ಗರ ಪೇಟೆಯಲ್ಲಿ ಮಾರಲಿಂದಿ [illegible] ಮಹಾತ್ಮರ ಬಳಿ ಒಂದು ಕಟ್ಟಿಗೆ ಹುಲ್ಲಿನ [illegible] ನ್ನು ಕಲ್ಲಿನಲ್ಲಿ ಹಿಡಿದು. ಸಂತೋಷವಾಗಿ ಎದ್ದು [illegible] ನಮಸ್ಕಾರ ಮಾಡಿ, ಆ ಹುಲ್ಲನ್ನು [illegible] ಲ ದ್ರವ್ಯ [illegible] ಮಹಾತ್ಮರಿಗೆ [illegible] ಇದೇನೆಂದು ಅವರು ಕೇಳಿದರು [illegible] ಒಂದನೆಯ [illegible] ಇದು [illegible] ಮಹಾತ್ಮರ [illegible] ನಗೀನಾದಿಂದ ಕೊಡಬೆಂದು ಮಹಾತ್ಮರು [illegible] ಹೇಳಿದರು. ಅವನು ಕಟ್ಟಿ [illegible] ಕಾಸು [illegible] ಮಹಾತ್ಮರು [illegible] ದ್ದೇನಂದರೆ — ನಿನ್ನ [illegible] ನನಗೆ ಬೇಕಾಗಿಲ್ಲ, [illegible] ಕಟ್ಟಿನ ಬಲೆಯು [illegible] ಬೇಕು." ಎನು [illegible] ನೆ' ದು ಅವನು [illegible]

ಮಹಾತ್ಮರು ಬೇಡಿಕೊಂಡಿದ್ದೇನಂದರೆ — ಇನ್ನು [illegible] ನೀನು ನಿನ್ನ ಬಾಯಲ್ಲಿ ಹುಲ್ಲು [illegible] ಹಿಡಿದ ಬಾರದ, ಹಾಗೆ ಹಿಡಿಯುವದು [illegible] ಎಂದಿಗೂ ನೀನು [illegible] ಕುಡಿಯ [illegible] ಕುಡಿದ [illegible] ಸೇರುತ್ತಾನೆ ಎಂದಿಗೂ ಮೃತ ಮಾಂಸ ನನ್ನು ನೀನು ತಿನ್ನಬಾರದು ಹಾಗೆ ತಿನ್ನುವದು ಹಿಂದೂ ಧರ್ಮಕ್ಕೆ ಎಂದೂ ಸಮ್ಮತವಲ್ಲ [illegible] ಮಾಂಸವನ್ನು ಎಂದೂ ತಿನ್ನುವದಿಲ್ಲ " ಅವನ್ನು [illegible] — [illegible] ಮಾಂಸ ಸೇವಿಸಬೇಕಾದ್ದರೆ, ನನ್ನ ಜಾತಿಯವರು ನನಗೆ ಬ[illegible] ಹಿಷ್ಕರಿಸುವರು " ಹಾಗಾದರೆ, ಬಹಿಷ್ಕಾರವನ್ನು ನೀನು ಅನುಭವಿಸಬೇಕು, ಅವಶ್ಯವಿದ್ದರೆ ಗ್ರಾಮವನ್ನು ತ್ಯಜಿಸಬೇಕು " ಎಂದು ಮಹಾತ್ಮರು ನುಡಿದರು. ಅದಕ್ಕೆ [illegible] ಒಪ್ಪಿಕೊಂಡನು. ಮಹಾತ್ಮರ ದರ್ಶನ ಕೊಳ್ಳಲು ಪ್ರಜೆಗಳು ಅಧಿಕಾರಿಗಳ ಭೀತಿ [illegible] ಮಹಾತ್ಮರಿಗೆ ಬೋಳ್ಗರದಲ್ಲಿ ತಿಳಿದುಬಂದ [illegible] ನುಡಿದದ್ದೇನಂದರೆ — ಭೀತಿಯು ಚಳಿಜ್ವರಕ್ಕಿಂತ ಕೆಟ್ಟ ರೋಗವು [illegible] ರೋಗಗಳು ಶರೀರವನ್ನು [illegible] ಮಾತ್ರ [illegible] ಆತ್ಮವನ್ನೇ ಕೊಲ್ಲುತ್ತದೆ [illegible] ಸರ್ಕಾರದ ಸೂಕ್ಷ್ಮ [illegible] ಗ್ರಹಿಕೆ [illegible] ಬೇಕಿದೆ [illegible] " ಹೀಗೆ ಮಹಾತ್ಮರು [illegible] ಯನ್ನು ತ್ಯಜಿಸಲು ಬೋಧಿಸಿದಾಗ್ಯೂ, ಇದರಿಂದ ಕಾರ್ಯ ಭಾಗವಾದೀತೆಂದು ಅವರಿಗೆ ಮನವರಿಕೆಯಾಗಲಿಲ್ಲ 'ನಾ ನಿಲ್ಲ ೩ ದಿನ [illegible] ೩ ತಿಂಗಳು [illegible] ೩ ವರ್ಷ ಇಲ್ಲಿ ಕಳೆಯಬೇಕು " ಎಂದು ಮಹಾತ್ಮರು ಉದ್ಗರಿಸಿದರು. ಉತ್ಕಲ ಪ್ರದೇಶದ ಬಡಜನರು [illegible] ಅವರಿಗೆ [illegible] ಒಂದು [illegible] ಕರ್ಝಿನ್ [illegible] ಅವರಿಗೆ [illegible] ಪ್ರಜೆಗಳಿಂದು [illegible] ಕೊಳ್ಳುವದಲ್ಲ, [illegible] ಕರ್ಝಿನ್ [illegible] ಈ [illegible] ಮನಸ್ಸಿನಿಂದ [illegible] ಸದ್ಯಕ್ಕೆ [illegible] ಲಕ್ಷ ರೂಪಾಯಿ ಸಂಗ್ರಹಿಸಬೇಕಾದರೆ, [illegible] ದೀನಬಂಧು ಎಂಡ್ರ್ಯೂಸರವರು ಉದ್ಗರಿಸು [illegible] ಗುಜರಾಥಕ್ಕೆ ೩॥ ಕೋಟಿ ರೂಪಾಯಿಗಳು [illegible] ಈ ಪ್ರಾಂತದಿಂದ ಇಲ್ಲಿ ೧ ಕೋಟಿ ರೂಪಾಯಿ [illegible]

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ — ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ— ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ. ಪ್ರಯಾಣಿಕರಿಗೆ ಅನುಕೂಲವಾಗಲು ಎಲ್ಲಾ ಸ್ಥಳಗಳಲ್ಲೂ ಏಜಂಟರನ್ನು ನಿಯಮಿಸಲಾಗಿದೆ. ಹೆಚ್ಚಿನ ಸಮಾಚಾರವನ್ನು ಕೇಳಿಸಿದಲ್ಲಿ ತಿಳಿಸಲ್ಪಡುವದು.

M. Manjappa.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಔಷಧ [illegible] ಬಹಳ ಹಿತವಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು [illegible] ನಿಜವಾಗಿ [illegible] ಅನುಭವಕ್ಕೆ ಬರುವದು [illegible] ಮುಕ್ತವಾದೇ [illegible] ಮೂತ್ರವಿಸರ್ಜನದ ಪ್ರಾಲದಲ್ಲಿ ಅಥವಾ ಶೌಚಕ್ಕೆ ಹೋಗುವ ವೀರ್ಯ ವು ಬಿಂದುಗುವದು — [illegible] ನಿರ್ಮೂಲವಾಗುವದು [illegible] ದಿವಸಗಳಲ್ಲಿಯೇ [illegible] ಈ ದ್ರಾಕ್ಷಾರ್ಕಮಧುವಿನ ಸೇವನ ಮಾಡಿ ಇದರೊಳಗಿನ ಗುಣ [illegible] ಇದರಿಂದ [illegible] ಬಹಳ ದಿವಸದಲ್ಲಿ [illegible] ಚನ್ನಾಗಿ ಆಗುತ್ತದೆ. ಇದರ ಅನು [illegible] ದಿವಸದ [illegible] ಎಷ್ಟೋ ದಿವಸದ [illegible] ಒಂದು ವಾರದಲ್ಲಿ ನಾಶವಾಗುವದು ಈ ವಿಷಯಕ್ಕೆ [illegible] ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ [illegible] ೧೦ ದಿವಸ [illegible] ಒಂದು ಬಾಟಲಿಯಿಂದ ಗುಣ [illegible] ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ ೧। ರೂಪಾಯಿ [illegible] ಬಾಟಲಿಯ ಕಿಮ್ಮತ [illegible] ಅಂದರೆ, ಟಪಾಲ ಖರ್ಚು [illegible] ಬಾಟಲಿಗಳ ಕಿಮ್ಮತು [illegible] ೧ ಬಾಟಲಿ [illegible] ಖರ್ಚು ಬೇರೆ [illegible] ೧ ಬಾಟ್ಲಿಗೆ [illegible] ೩ ಬಾಟ್ಲಿಗೆ [illegible]
[illegible] — ದ್ರಾಕ್ಷಾರ್ಕಮಧು ಆಫೀಸ ಪ್ರೋ. ನಿಪ್ಪಾಣಿ ಜಿ ಬೆಳಗಾಂವ

೧೦೦೦ ರೂಪಾಯಿ ಇನಾಮು

ನಿಪ್ಪಾಣಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ್.

ವೀರ್ಯವು ತೆಳುವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ [illegible], ಧಾತುಕೋಶದಲ್ಲಿಯ ಉಷ್ಣತೆ ಏರಿಸೋಣ (ಹಾರ್ಟ ಡಿಸೀಜ) ಮೂಲವ್ಯಾಧಿ ಮಳೇಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆ ಬಾರದಿರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಶಕ್ತಿ ಬರುವದು, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವ ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕವು ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೦) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಓದಿಕೊಳ್ಳಿರಿ

ಮುಂಜಾನೆ ೨ ತೊಲೆಯು ೧ ಸಾರಿ, ರಾತ್ರಿಯು ಭೋಜನವಾದ ನಂತರ ೨ ತೊಲೆಯು ಒಂದು ಸಾರಿ ಇದನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯ ಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವಿ ಪಿ ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचे

द्राक्षासव-

एक रत्तलास किंमत १॥ रुपये,

रामबाण औषध

- सर्दि घालविणारे
- भूक वाढविणारें
- शाच्यास साफ करणारे
- झोप आणणार
- शक्ति देणारें
- तेजस्वीपणा आणणारें

विश्वास रोचकर

पंचाहत्तार मानवा,

झंडुफार्मस्युटिकल्‌वर्क्स लिमिटेड

मुंबई नं: १४

ऐजट— मेसर्स पंडित आणी कंपनी, तीर्थहळ्ळी

सिर्सि एजंट एल् एल् धारप्पा आणि [illegible]

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಕಂಟಿತಲೆನೋವು, ತಲೆಯ ಪ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು [illegible] ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತದೆ, ಯಾರು ಬೆಟ್ಟಿಸೆ [illegible] ನಶ್ಯದ [illegible] ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದ [illegible] ಎಲ್ಲವೂ ಪರಿಮಾಳವಾಗುವದು. ಇದನ್ನು ಅನೇಕ [illegible] ಕುಟುಂಬ ಔಷಧವಾಗಿ ಉಪಯೋಗಿಸುತಾರೆ. [illegible]

[illegible] ಡಜನ್ ೧ ಕ್ಕೆ ರೂ. ೨-೮-೦ ವ್ಹಿ. ಪಿ. ೦-೮-೦ [illegible] ವಿಳಾಸವನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

[illegible] ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಹಿಂದುಸ್ಥಾನದಲ್ಲಿ [illegible]

'ನೆಶನಲ್ ಇನ್ಶ್ಯೂರನ್ಸ ಕಂಪನಿ, (ಲಿಮಿಟೆಡ್)

ಜೀವ ವಿಮೆಯ ಮಂಡಳಿ.

ಮೂಲಧನವು ಒಂದು ಕೋಟಿ [illegible] ಕಳೆದ ವರುಷ [illegible] ೨೦,೦೪೪ ರೂಪಾಯಿಗಳ ಲಾಭವು [illegible].

ಎಂಡೋಮೆಂಟ ಪತ್ರಗಳ ಮೇಲೆ [illegible] 11 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ [illegible] 10 [illegible]

ಹೊಂದಿದ 1000 ರೂಪಾಯಿಗಳ [illegible] ನಮ್ಮಲ್ಲಿ ಸುಮಾರು 1-10 [illegible] ನಮ್ಮ [illegible]

ಎಲ್ಲಾ [illegible] ಕರ್ನಾಟಕಕ್ಕೆ [illegible]

ಬಿ. ಸಿ. ಸಿರಾಳಕೊಪ್ಪ, [illegible] ಬಿಲ್ಡಿಂಗ, ಹುಬ್ಬಳ್ಳಿ

P D Churi, Branch Secretary. Alice Building, Hornby Road, BOMBAY

ಕಿರೋಸಿನ್ ಸ್ಟವ ಕಪಾಲ ಗಾಣ.

[illegible] ರಿಂದ ೬೦ ರ ವರೆಗೆ ರಸ ಹೊರಡುವದು.

ಗಂಟೆಯೊಂದಕ್ಕೆ ೧೯೦೦ ಪೌಂಡ ಕಬ್ಬನ್ನು ಹಿಂಡಸವು

ಬೆಲೆ ೨೯೦ ರೂ. ಹೂಡ್ಲೆ ಡಿಲಿವ್ಹರಿ

[illegible] ಮತ್ತು [illegible] ಇವರಲ್ಲಿ ಸಿಗುವದು

[illegible] ಭಾಗಗಳು ಅರ್ಧ ಉಕ್ಕಿನಿಂದ [illegible] ಎತ್ತರ ೧೧ ಇಂಚು, ಅಕ್ಸೆಲ್ [illegible] ಬೇರಿಂಗ [illegible] ನಿಲ್ಲುವದಕ್ಕೆ [illegible] ಸುಗಾರಕ [illegible]

[illegible] ಕಣೆಗಳು ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಅದರಲ್ಲಿ [illegible] ಹಿಂಡಿ ಹಿಪ್ಪಿಯಾಗಿ ಬರುವದು. ಮಿಕ್ಕ ಗಾಣಗಳಂತೆ [illegible] ಸಾಗುವದು. ನಾಲ್ಕು ಎತ್ತುಗಳು ಬೇಕು

ಅಭಿಪ್ರಾಯ —"ಕಪಾಲ ಗಾಣದಿಂದ ಹಿಪ್ಪಿಯಲ್ಲಿ ವ್ಯರ್ಥ ಹೋಗುವ ರಸ [illegible] ಅಂದರೆ ೧೦ ರೂ. ಲಾಭವಾಯಿತು [illegible] ದಿವಸ [illegible] ರೂ ಲಾಭವಾಯಿತೆಂದು [illegible] ಆನಂದ [illegible] ತಮ್ಮ ರಾಜನಗೌಡಾ ಪಾಟೀಲ, ಸವದಿ [illegible] ಬೆಳಗಾಂವ "

ಕಿರೋಸಿನ್ಸ್ಟವ ಬಂಧು ಲಿಮಿಟೆಡ್; } ಕಿರೋಸ್ಕರವಾಡಿ, ಜಿಲ್ಹಾ ಸಾತಾರಾ

S U. Narayenacharya & CO.

Chaukhamba, BENARES CITY.

ನಮ್ಮಲ್ಲಿ ಎಲ್ಲಾ [illegible] ಸಿಗುತ್ತವೆ. [illegible]

[illegible] ವಿಳಾಸ—ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ

ಅಮೃತಾಂಜನದ

ಉಪಯೋಗದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, [illegible] ಮುಂತಾದ ಎಲ್ಲ [illegible] ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದು [illegible] ಚಿಕ್ಕ ನೋವಿನಿಂದಲೇ ಜೀವಕ್ಕೆ [illegible] ಅಮೃತಾಂಜನದ ಒಂದು ಸಣ್ಣ ಬುಟ್ಟಿಯಿಂದ [illegible] ಪರಿಹರಿಸಬಹುದು. ಬೆಲೆ ರೂ ೦-೧೦-೦

ಎಲ್ಲ ಕಡೆಯಲ್ಲಿಯೂ ಸಿಗುತ್ತದೆ ಅಥವಾ ಅಮೃತಾಂಜನ ಡಿಪ್ಪೊ, ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, JANUARY 9TH 1928.

ವರ್ಷ ೧೨

ಸಂಚಿಕೆ ೧೪

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು

ರೂಪಾಯಿ 2-4-0

ಮನೆಯಾರ್ಡರಿಯಿಂದ

ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

सर्वोत्तिष्ठितकर्ता कैश्वता वसति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ।

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ರಾಥ ಮ್ಯಾಟಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-

೮ ಸಂತ್ರ ಪ್ರತಿಸಾಲಿಗೆ 0-2-0.

ಹೆಚ್ಚಿಂಗಳ ಸಾಲು ಎಷ್ಟು ಹೊತ್ತರಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯಾರ ಯಾ ಖಚುಕ್ತ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೯ ಮಾಹ ಜನವರಿ ಸನ್ ೧೯೨೮ನೇ ಇಸವಿ.)*-

ಉಚಿತ!] ನನ್ನ ಶಾಸ್ತ್ರೀಯ ಮಾದ [ಉಚಿತ!!

ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ ಮತ್ತು ನನ ಶಿಷ್ಯರ ಅಂಗಸೌಷ್ಠವವನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂಧಿತೆಂಬ ವರ್ಣನೆಯ ಕೊಡಲ್ಪಟ್ಟಿರುವದು ನನಲ್ಲಿ ಕಲಿಸುವವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದ ದಪತಿವೊಬ್ಬರೂ ತಮ್ಮ ದೇಹವನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುವರು ಟಪಾಲು ಖರ್ಚಿಗೆ ಒಂದು ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತವಾಗದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್

ಬಸವನಗುಡಿ, ಬೆಂಗಳೂರ ಸಿಟಿ

ಜಿ. ಪ್ಹಿ. ಪೇಲಂಗಿ ಮೋಟಾರ ಸರ್ವ್ಹೀಸ.

ಕುಮಟಾ— ಶಿರ್ಶಿ



ಶಿರ್ಶಿ— ಕುಮಟಾ

ಡೇಲಿ ಮೋಟಾರ ಸರ್ವ್ಹೀಸು ಪ್ರಾರಂಭವಾಗಿರುವದು!

ಇದಲ್ಲದೆ, ಈ ಸರ್ವ್ಹೀಸು ಶಿರ್ಶಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವ ವರೆಗೂ ನಡೆಯುತ್ತಿದೆ. ಸ್ಪೇಶಲ್ ಭಾಡಿಗೆ ಬೇಕಾದವರು ಹಿಂದಿನ ದಿವಸ ಮುಂಚಿತ ತಿಳಿಸಬೇಕು

ಟಿಕೀಟಿನ ದರ:— ಸೋಯಿ! ಅತಿ ಸೋಯಿ!! ಎಲ್ಲರಿಗಿಂತಲೂ ಸೋಯಿ!!!

ಬೆ ಕಾಡಲ್ಲಿಯ ಟಿಕೀಟುಗಳೂ, ವಿಶೇಷ ಮಾಹಿತಿಯೂ ಕುಮಟಾ ಏಜಂಟ ಜಾನಪ್ಪಾ ರಾಮನಾಯ್ಕ ಮುದಗಾಂವಕರ ಇವರ ಕಡೆಗೆ ಸಿಗುವವು.

ಇತ್ತ ಲಕ್ಷ ಕೊಡಿರಿ.

ಫಕ್ತ ಮಳೆಗಾಲದ ಸಲುವಾಗಿಯೇ ಪ್ರಯಾಣಿಕರ ಬಗ್ಗೆ ಹೊಸ ಸೋಯಿ!

ದಿ ಬೆಳಗಾಂವ ಮೋಟರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ, ಬೆಳಗಾಂವ

Tel.-
"TRANSPORT"
ALNAWAR.

ತಂತಿ ಪತ್ರ —
"ಟ್ರಾನ್ಸಪೋರ್ಟ"
ಅಳ್ನಾವರ.

ಅಳ್ನಾವರ ಕಾರವಾರ



ಕಾರವಾರ ಅಳ್ನಾವರ

ನಿಯಮಿತ ಡೇಲಿ ಮೋಟರ ಸರ್ವ್ಹೀಸ್ ಚಾಲುಅದೆ.

ಇದೇ ೧೯೨೭ನೇ ಜೂನ ೧೫ ನೇ ತಾರೀಖಿನಿಂದಾ ಪ್ರಾರಂಭವಾಗುವದು.

ಬೆಳಗಾಂವದಿಂದ ಕಾರವಾರಕ್ಕೆ ಬರುವ ಹಾದಿಯಲ್ಲಿ ಮಲಪ್ರಭಾ ಹೊಳೆ ಇದ್ದು ಮಳೆಗಾಲದಲ್ಲಿ ನೀರು ತುಂಬಿ ದಾರಿಯು ಕಟ್ಟಾಗುವದು. ಪ್ರಯುಕ್ತ ಪ್ರಯಾಣಿಕರಿಗೆ ಗೈರಸೋಯಿ ಆಗಬಾರದೆಂಬದರ ಬಗ್ಗೆಯೇ "ಅಳ್ನಾವರಕ್ಕೆ" ಬರುವ "ಮುಂಬಯಿ ಮೇಲ್" ಸೋದಿಕೊಂಡು ಹಳಿಯಾಳ ಯಲ್ಲಾಪೂರ ಅಂಕೋಲಾ ಮಾರ್ಗವಾಗಿ "ಅದೇ ದಿವಸ" ಕಾರವಾರಕ್ಕೆ ಮುಟ್ಟುವಂತೆಯೂ ಕಾರವಾರದಿಂದ ಬೆಳಿಗ್ಗೆ ಹೊರಟು "ಮುಂಬಯಿ ಮತ್ತು ಬೆಂಗಳೂರ" ಕಡೆಗೆ ಹೋಗುವ ಮೇಲ್ ಗಾಡಿಗಳಿಗೆ" ಅಳ್ನಾವರಕ್ಕೆ ಮುಟ್ಟುವಂತೆ ಯೋಗ್ಯ ವ್ಯವಸ್ಥೆ ಇಟ್ಟಿರುತ್ತದೆ. "ಅಳ್ನಾವರದಲ್ಲಿ" ಪ್ರಯಾಣಿಕರಿಗೆ ಉಳಕೊಳ್ಳಲಿಕ್ಕೂ ಉಪಹಾರ ಮತ್ತು ಊಟದ ಬಗ್ಗೆ ವಗೈರೆ ಯೋಗ್ಯ ವ್ಯವಸ್ಥೆಯೂ ಇರುವದು.

ಪುನಃಶ್ಚ

ಮಳೆಗಾಲದ ನಂತರ:-

ಸೂಚನೆ:- ೧೯೨೭ನೇ ಸಪ್ಟಂಬರ ೧ನೇಯಿಂದಾ ಬೆಳಗಾಂವದಿಂದಾ ಕಾರವಾರಕ್ಕೆ "ಡೇಲಿ ಸರ್ವ್ಹೀಸವು" ಚಾಲು ಇರುವದು. ಟಿಕೀಟಿನ ದರಗಳು ಅಳ್ನಾವರಿಯ ಏಜಂಟರ ಆಫೀಸಿನಲ್ಲಿ ಇಲ್ಲವೇ ಕೆಳಗಿನ ವಿಳಾಸದಲ್ಲಿ ಬರೆದು ತಿಳುಕೊಳ್ಳಿರಿ.

ಹೆಚ್ಚಿನ ಸೂಚನೆ:- ಸ್ಪೇಶಲ್ ಮೋಟಾರಗಳು, ಆಗಾವು ತಿಳಿಸಿದ್ದಲ್ಲಿ ಯೋಗ್ಯದರದಿಂದ "ರಿಝರ್ವ" ಮಾಡಲ್ಪಡುವವು.

Proprietor:- THE BELGAUM MOTOR WORKS & TRANSPORT C

Tel. "TRANSPORT" B.

ಬಗ್ಗೋಣ ಗಣಪತಿ ತಿಮ್ಮಣ್ಣ ಪಂಡಿತರವರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ ವಿಭವ ಸಂವತ್ಸರದ

ಹೊಸ ಪಂಚಾಂಗದಲ್ಲಿ

ಜಾಹೀರಾತು ಕೊಡಲಿಚ್ಛಿಸುವವರು

ಈ ಕೆಳಗಿನ ಪತೆಗೆ
ಇದೇ ತಿಂಗಳ ತಾರೀಖು ೧೫ ರ ಒಳಗಾಗಿ
ಪತ್ರವ್ಯವಹಾರ ಮಾಡತಕ್ಕದ್ದು
ಪಂಚಾಂಗಗಳು ಈ ತಿಂಗಳ ೩೦ನೇ ತಾರೀಖಿನೊಳಗೆ
ಮಾರಾಟಕ್ಕೆ ಸಿದ್ಧವಾಗುತ್ತವೆ
ಬೇಕಾದವರ ಶೀಘ್ರವೇ ತಿಳಿಸಬೇಕ
ನಿಯಮಿತ ಪ್ರತಿಗಳು ಮುದ್ರಿಸಲ್ಪಡತಕ್ಕವ
ಪತ್ತೆ:- ಮೆನೇಜರ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

The Brittannia Life Assurance Company Ltd

*Head Office Kitta Building
Fort BOMBAY.*

ಈ ಕಂಪನಿಯಲ್ಲಿ ನಮ್ಮ ಭಾರತೀಯರಿಗೆ ಬೇಕಾದ ಸವಲತು, ಸಲಭ ಕಂತು, ಹೆಚ್ಚಿನ ಗಳಿತಂಶ ಬಿಕ್ಕಟ್ಟಿನಿಂದ ಆಪತ್ತೆ ಸೋದಶಕ್ಕೆ ಬುದ್ಧಿ-ಕೌಶಲ್ಯತೆಯುಳ್ಳ ಆಡಳಿತದಾರರ ಜವಾಬ್ದಾರಿ ಗಿದ್ದು ಶ್ರೀಮಂತತ್ವದಲ್ಲಿ ವಿಮೆಯ ಸ್ವೀಕರಿಸಬಹುದು ಇದರ ಕಂತುಗಳು ಬಹಳೇ ಕಡಿಮೆಯಾಗಿರುವವು. ಆದುದರಿಂದ ಪುನಃ ಪುನಃ ಈ ಕಂಪನಿಯಲ್ಲಿಯೇ ವಿಮೆಯನ್ನಿಳಿಸಲುಬಹುದೆಂದು ಹೇಳತಕ್ಕದ್ದು ಸಾಹಜಿಕದ ಮಾತಾಗಿದೆ

ಈ ಸುಸಂಧಿಯನ್ನು ನೋಡಿ ಬೇಕಾದ ಮಹನೀಯರು ನಮ್ಮ ಏಜಂಟರಾಗಲು ಇದೇ ತಕ್ಕ ಸಮಯವು ಬೇಕಾದ ಅನುಭವ, ಪ್ರತಿಷ್ಠಿತ ಸರತುಗಳು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಬ್ರಿಟಾನಿಯಾ ಲೈಫ ಇನ್ಸುರೆನ್ಸ
ಕಂಪನಿ ಲಿಮಿಟೆಡ್
ಹೆಡ್ ಆಫೀಸ-ಕೀರ್ತಿ ಬಿಲ್ಡಿಂಗ ಫೋರ್ಟ,
ಮುಂಬಯಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,
ಕಾಳಬಾದೇವಿ ರೋಡ,
ಮುಂಬಯಿ ನಂ ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಬೆಸ್ತರ ಸಂಗರೋಕ ಖರೇದಿ ಮಾಡಿ ಕಳಿಸುತ್ತೇವೆ ದಲಾಲಿ ಹೆಚ್ಚಿಗೆ ತೆಗೆದುಕೊಳ್ಳುವದಿಲ್ಲ, ಖರೇದಿ ಚೌಕಶಿಯಿಂದಾಗುತದ. ಪೇಟೆಯ ಧರಿಯ ಧಾರಣೆಯೇ ಆಕರಿಸಲ್ಪಡುತದೆ ಗಿರಾಕಿಗಳಿಗೆ ಅನುಕೂಲವಾಗುವ ತೆರನು, ಲಾಭವಾಗ ವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ, ಹೆಚ್ಚಿನ ಮಾಹಿತಿ ಬಗ್ಗೆ ಕಟಲಾಗು ತರಿಸಿಕೊಳ್ಳಿ ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ - ಫೌಂಟೆನ ಪೇನಾ ೧ ಹೇರಪಿನ್ ಬಾಕ್ ೧ ವಜ್ರದ ಗುಂಡಿಗಳು ೪ ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೋಪು ಪೇನಾ ಕತ್ತರಿ ರೋಲ್ಡ್ ಗೋಲ್ಡ್ ಬಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್‌ಲೇಸ್ ಎಂಬ ರತ್ನದ ಹಾರ ೧, ದಂತದ ಬಾಚಣಿಗೆ ೧ ಕೈ ಗುಂಡಿಗಳ ಸೆಟ್ ೧, ಕೈವಸ್ತ್ರ ೧ ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ ಬರೇ ರೂ ೪-೮-೦

ವಿಳಾಸ — **ಇಂಗ್ಲೀಷ ಎಂಪೋರಿಯಂ,**
ಪೋಸ್ಟ ಬಾಕ್ಸ ನಂ ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ!



ಈ ಸಕ್ಕೆಯಲ್ಲಿ ಕಂಡ ಫೌಂಟನ್ ಪೇನವು ಪಿರಾಯ ತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನ ಪಿಬ್ ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಒಪ್ಪವಾಗಿ ಬರುವವು ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೆಬಲ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.
ವಿಳಾಸ —ಓಟೆರ್ ವಾಚ್ ಕಂಪನಿ ಪೋ ಬಾಕ್ಸ ನಂ. ೨೭ ಮದರಾಸು

ಕಲ್ಪತರು ಮಿಶ್ರಣ

ಮಲೇರಿಯಾ ಸ್ಪೆಸಿಫಿಕ್

ಎಂದರೆ,
ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಹೇಳಬಹುದು -

ವಿಷ ಕಲ್ಪತರುನಾಮಾ ರಸಃ ಪರಮ ದುರ್ಲಭಃ | ಅಸಾಧ್ಯಂ ಜೀರ್ಣ ಶೀತೋತ್ಥಂ ಜೀರ್ಣಂ
ಚ ವಿಷಮ ಜ್ವರಂ | ಹಂತಿ ಜ್ವರಾತಿಸಾರಂ ಚ ಗ್ರಹಣೀಂ ಪಾಂಡು ಕಾಮಲಾಂ ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಶ್ರೇಯದಾಯಕವೆಂದು ಸಿದ್ಧವಾಗಿರುತ್ತದೆ ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಭೀತಿಯು ತಟ್ಟಲಾರದು ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗಿದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗೆ ರೂ. ೧-೬-೦

ನಮ್ಮ ಪತ್ತೆ:--- **ವೈದ್ಯ ಬಿ. ಆರ್. ಹರಿದಾಸ,**
ಶ್ರೀ ಸವರ್ಣ ಫಾರ್ಮಸಿ, ಗಡ್ಡೆಕೇರಿ, ಮಂಗಳೂರು
ಕುಮಟಾ ಏಜಂಟ - ಕಲಬಾಗ ಮಾಧವ ರಾಮ ಶ್ಯಾನಭಾಗ.

ಹಿಂದು ಮಹಾ ಸಭೆ.

ಮಹಾಸಭೆಯ ಧ್ಯೇಯಗಳ ನಿರೂಪಣೆ.

ಪಂಡಿತ ಮದನ ಮೋಹನ ಮಾಲವೀಯರವರ ಅಧ್ಯಕ್ಷತೆಯಲ್ಲಿ ಹಿಂದು ಮಹಾಸಭೆಯ ಅಧಿವೇಶನವು ರಾಷ್ಟ್ರೀಯ ಸಭೆಯ ಬಿಳಕ ಮಂಟಪದಲ್ಲಿ ಗುರುವಾರ ... ಆನೇಗೆ ನೆರವೇರಿತು, ಆ ಸಮಯ ಪಂಡಿತ ಮದನ ಮೋಹನ ಮಾಲವೀಯರವರು ಮಾಡಿದ ಚಾತುರ್ಯಪರಿಪೂರ್ಣವಾದ ಭಾಷಣವನ್ನು ಮಾಡಿದರು ಮೊದಲು ಪಂಡಿತ ಮದನ ಮೋಹನ ಮಾಲವೀಯರವರು ಹಿಂದು ಮಹಾಸಭೆಯ ಅಧ್ಯಕ್ಷಸ್ಥಾನವನ್ನು ತಮಗೆ ಸಮರ್ಪಿಸಿದ ಕುರಿತು ಉಪಕಾರವನ್ನಿತ್ತು, ಹಿಂದು ಮಹಾಸಭೆಯ ಧ್ಯೇಯಗಳನ್ನು ವಿವರಿಸಿದರು:- "ಯಾವದೇ ಸಮಾಜದೊಡನೆ ವಿರೋಧ ಬೆಳೆಸಲಿಕ್ಕಾಗಲಿ, ಕಾದಾಡಲಿಕ್ಕಾಗಲಿ ಹಿಂದು ಮಹಾಸಭೆಯು ಸ್ಥಾಪನೆಯಾಗಲಿಲ್ಲ ಅದು ಸಂಪೂರ್ಣವಾಗಿ ರಾಷ್ಟ್ರೀಯವಿರುತ್ತದೆ. ಸನಾತನ ಧರ್ಮದಾತೆ ಎಷ್ಟ ಧರ್ಮವನ್ನು ಪಾಲಿಸಲಿಕ್ಕೆ ಹಿಂದು ಮಹಾಸಭೆಯು ಬದ್ಧವಿದೆ, ಹಿಂದು ಸಮಾಜದೊಳಗಿನ ಭಿನ್ನ ಭಿನ್ನ ಮತಗಳೊಳಗೆ ಐಕ್ಯಭಾವವನ್ನು ನೆಲಿಸಲು ಈ ಮಹಾಸಭೆಯು ಪ್ರಯತ್ನಪಡುತ್ತದೆ. ಮತ್ತು ಹಿಂದು ಹಾಗು ಇತರ ಸಮಾಜಗಳೊಳಗೆ ಬಂಧುಭಾವವನ್ನು ಉಂಟುಮಾಡಿ, ಹಿಂದೀ ರಾಷ್ಟ್ರವನ್ನು ಸ್ವತಂತ್ರವಾಗಿ ಮಾಡಲಿಕ್ಕೆ ಹಿಂದು ಮಹಾಸಭೆಯು ದುಡಿಯುತ್ತದೆ ಈ ಧ್ಯೇಯಮಾನುಸಾರವಾಗಿಯೇ ಹಿಂದು ಮಹಾಸಭೆಯು ಈ ತನಕ ಠರಾವುಗಳನ್ನು ಕೈಕೊಂಡಿದೆ. ರಾಷ್ಟ್ರಧರ್ಮಕ್ಕೆ ವಿರೋಧವಾದ ಯಾವದೇ ಠರಾವನ್ನು ಈ ತನಕ ಹಿಂದು ಮಹಾಸಭೆಯು ಕೈಕೊಂಡಿಲ್ಲ ಹಿಂದು ಧರ್ಮ ತತ್ವವು ಬಹಳ ವಿಶಾಲವಿದೆ, ಸಮಸ್ತ ಜನಾಂಗಗಳ ಕ್ಷೇಮಚಿಂತನ ಮಾಡಲು ಹಿಂದು ಧರ್ಮವು ನಮಗೆ ಕಲಿಸುತ್ತದೆ. ಆದರಿಂದ ನಾವೆಲ್ಲರೂ ಸಮಸ್ತ ಸಮಾಜಗಳೊಡನೆ ಮಿತ್ರಭಾವದಿಂದಿದ್ದು ರಾಷ್ಟ್ರದ ಪ್ರತಿಷ್ಠೆಯನ್ನೂ ಸಂಪದಭಿವೃದ್ಧಿಯನ್ನೂ ಉಂಟು ಮಾಡಬೇಕು ಹಿಂದು ಮಹಾಸಭೆಯವರು ಸಾಮಾಜಿಕ-ಧಾರ್ಮಿಕ ವಿಚಾರಗಳಲ್ಲಿ ಮಾತ್ರ ನಿಮಗೆ ಮಾರ್ಗ ತೋರಿಸಿಕೊಡುತ್ತಾರೆ ಹಿಂದುಗಳಿಗೆ ಹಿಂದು ಧರ್ಮದ ಶಿಕ್ಷಣ ಕೊಡಲು ಆಜ್ಞಾಪಿಸುತ್ತದೆ ಕ್ರೈಸ್ತರೂ, ಮುಸಲ್ಮಾನರೂ ಧರ್ಮಶಿಕ್ಷಣ ಕೊಡುವಂತೆ, ಹಿಂದುಗಳಾದವರೂ ನಡೆಕೊಳ್ಳಬೇಕೆಂದು ಹಿಂದು ಮಹಾಸಭೆಯ ಆಜ್ಞೆ. ದೇವಾಲಯಗಳೊಳಗಿನ ವಿನಿಯೋಗಗಳನ್ನು ಯಥಾವಿಧಿ ಸಾಂಗಗೊಳಿಸಿ ಧರ್ಮಬಾಂಧವರ ಕಲ್ಯಾಣ ಮಾಡಲು ಹಿಂದು ಮಹಾಸಭೆಯ ಅಪ್ಪಣೆಯಿದೆ ಕ್ರೈಸ್ತ ಪಾದ್ರಿಗಳೂ, ಮುಸಲ್ಮಾನ ಮುಲ್ಲಾರವರೂ ಧರ್ಮಬೋಧೆಯ ಕಾರ್ಯವನ್ನು ಸ್ವಧರ್ಮಬಾಂಧವರಲ್ಲಿಯೂ, ಪರಧರ್ಮೀಯರಲ್ಲಿಯೂ ಮಾಡುತ್ತಾರೆ. ಪರಧರ್ಮದಲ್ಲಿ ಜನ ಜನಿಸಿದರೆ, ಯಾರ್ಯಾರೂ ಧರ್ಮಾಂತರ ಹೊಂದಬಹುದೆಂದು ಅತಿ. ಹಿಂದು ಧರ್ಮೀಯರೂ ಹೀಗೆಯೇ ನಡೆಕೊಳ್ಳಬೇಕು. ಶ್ರೀ ಶಂಕರಾಚಾರ್ಯ ಹಾಗು ಶ್ರೀ ರಾಮಾನುಜಾಚಾರ್ಯರವರು ಹೀಗೆಯೇ ಧರ್ಮಬೋಧೆಯ ಕಾರ್ಯವನ್ನು ಮಾಡಿದರು. ಬ್ರಿಟಿಶರ ಆಗಮನದಿಂದ ಪಾಶ್ಚಾತ್ಯ ಸಂಸ್ಕೃತಿಗೆ ನಾವು ಬೆಚ್ಚಿಹೋಗಿದ್ದೇವೆ. ಬ್ಯಾಬಿಲ ನಮಗೆ ಗೊತ್ತಿದ್ದಷ್ಟು, ಸ್ವಧರ್ಮ ಶಾಸ್ತ್ರಗಳನ್ನು ನಾವರಿತಿರುವದಿಲ್ಲ. ಮದ್ರಾಸ ಇಲಾಖೆಯಲ್ಲಿ ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯರವರ ಧರ್ಮಬೋಧೆಯ ಕಾರ್ಯವನ್ನು ಇಲ್ಲಿಯ ಸಂಸ್ಕೃತ ಪಾಠ್ಯ ವಿಶಾರದರಾದ ವಿದ್ವಜ್ಜನರ ಕಡೆಯಿಂದ ಹಿಂದು ಮಹಾಸಭೆಯು ಸಾಗಿಸಬಹುದು. ಕ್ರೈಸ್ತರು ಅನಾಥಾಲಯಗಳನ್ನು, ವಿಧವಾಶ್ರಮಗಳನ್ನು ನಡಿಸಿ, ಅನಾಥ-ವಿಧವೆಯರ ದೀಕ್ಷಾದಾನ ಮಾಡುತ್ತಾರೆ. ಅದರಂತೆ ಧರ್ಮರಕ್ಷಣೆಗಾಗಿ ನಾವಾದರೂ ಇಂಥ ಸಂಸ್ಥೆಗಳನ್ನೇರ್ಪಡಿಸಬೇಕು. ಕ್ರೈಸ್ತರು ಸ್ಥಾಪಿಸಿದ ಶಾಲೆಗಳಲ್ಲಿ ಬ್ಯಾಬಿಲ ಗ್ರಂಥವನ್ನು ಕಲಿಯಲೇಬೇಕು; ವಿದ್ಯಾರ್ಥಿಗಳು ಬೇಕಾದ ಪಂಥದವರಿರಲಿ. ಹಿಂದು ಶಾಲೆಗಳಲ್ಲಿ ಈ ನಿರ್ಬಂಧಗಳಿಲ್ಲ. ನ್ಯಾಯ ಹಾಗು

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ, ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕುರಿತು ...ಕೊಡಬೇಕು. ಕೂದಲುಗಳನ್ನು ಅಲಕ್ಷ್ಯ ಮಾಡಿದರೆ, ಅವು ಬಾಡುವವು, ಮತ್ತು ...ದುರುವವು. ನೀವು ಅವಕ್ಕೆ ಚಲೋ ಕೂದಲೆಣ್ಣೆ ಕೊಡಬೇಕು. ಶ್ರೇಷ್ಠವಾದ ...ದಲೆಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹಿಮ್ಮ...ದ ಕೊಳೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ...ಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ...ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆ...ತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೆ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚವೆಚ್ಚ	,,	೦—೧೬—

...ವನ್ನು ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

— ೦ —

...ಔಂಸಿಗೆ	ರೂ.	೨—೦—೦
...ಔಂಸಿಗೆ	,,	೧—೪—೦
...ಡ್ರ್ಯಾಮಿಗೆ	,,	೦—೧೨—೦
...ಅಂಚೆವೆಚ್ಚ	,,	೦—೬—೦

...ಒಟ್ಟೋ-ದಿಲ್ ಬಹಾರ

...ಖರೀದಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಹಿಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಎಂಬುವ ಮದ್ಯವು ಸೇರಿರುತ್ತದೆ, ಆದದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋ-ದಿಲ್ ಬಹಾರದಿಂದ ತಾಜಾ ತಾಜಾ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.ದಿಲ್ಲ

THE ANGLO INDIAN DRUG & CHEMICAL CO. LTO.

POST BOX, 2082 **BOMBAY.**

ಸತ್ಯವಂತೆ ವರ್ತಿಸಲು ಹಿಂದು ಧರ್ಮವು ನಿಮಗೆ ಹೇಳುತ್ತದೆ, ನಾವು ಆರ್ಯರು, ನಾವು ದ್ರಾವಿಡರು, ಎಂಬ ಕ್ಷುಲ್ಲವಾದವನ್ನು ಬಿಡಿಸಬೇಡಿ. ಬ್ರಾಹ್ಮಣ-ಬ್ರಾಹ್ಮಣೇತರ ವಾದವು ಈ ಪ್ರಾಂತದಲ್ಲಿ ವಿಶೇಷವಿದೆ. ಈ ಭೇದವು ಯಾವ ಶಾಸ್ತ್ರದಲ್ಲಿಯೂ ಹೇಳಲ್ಪಟ್ಟಿಲ್ಲ. ಈ ಜಗಳದ ಮೇಲೆ ಸಮಸ್ತರೂ ಪ್ರೇಮದಿಂದಿರಬೇಕೆಂದು ನಾವು ನಿಮ್ಮನ್ನು ಪ್ರಾರ್ಥಿಸುತ್ತಿರುತ್ತೇನೆ. ಬ್ರಾಹ್ಮಣ-ಬ್ರಾಹ್ಮಣೇತರ ವಾದವನ್ನು ಬಿಟ್ಟುಬಿಡಿ. ಇದಕ್ಕೆ ಶಾಸ್ತ್ರಾಧಾರವಿಲ್ಲ; ಇದು ಅಶಾಸ್ತ್ರೀಯವಾಗಿರುತ್ತದೆ. ಇಷ್ಟರೂ ಬಂಧುಭಾವದಿಂದುಳ್ಳಕೊಳ್ಳಿರಿ. ಈ ಕಲಹವನ್ನು ಹೆಚ್ಚಿಸಲಾಗಿದ್ದರೆ, ನಿಮಗೆ ಎಂದೆಂದಿಗೂ ಸ್ವಾತಂತ್ರ್ಯಪ್ರಾಪ್ತಿಯಾಗಲಾರದು. ನಿಮ್ಮ ಅಂತಃಕಲಹಗಳ ಮೂಲಕ ದನಗಾವಲಿಲ್ಲದ ದನಗಳ ಹಿಂಡಿನಂತೆ ನಿಮ್ಮ ಗತಿಯಾಗಿದೆ. ಅಸ್ಪೃಶ್ಯೋದ್ಧಾರದ ಕುರಿತು ಇತ್ತಿತ್ತ ಮದ್ರಾಸ ಇಲಾಖೆಯಲ್ಲಿ ಬಹಳ ಪ್ರಯತ್ನಗಳಾಗಿವೆ. ಆದರೆ, ಇನ್ನೂ ಈ ಪ್ರಯತ್ನ ನಡೆಯಲೇಬೇಕು. ದೇವಸ್ಥಾನಗಳಲ್ಲಿ ಹೋಗಿ ಶ್ರೀದೇವರಿಗೆ ಪೂಜಿಸಲು ಪ್ರತಿಯೊಬ್ಬ ಮಾನವನಿಗೆ ಅಧಿಕಾರವಿದೆ. ಶ್ರೀ ಕಾಶೀ ಕ್ಷೇತ್ರದಲ್ಲಿ ಶ್ರೀ ವಿಶ್ವನಾಥ ದೇವಾಲಯವನ್ನು ಅಸ್ಪೃಶ್ಯರು ಪ್ರವೇಶಿಸಿ, ಶ್ರೀ ದೇವರಿಗೆ ಪೂಜಿಸುತ್ತಾರೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರವಿದೆ. ಮಹಂತರು ಲೋಕಾಭಿರಾಮನನ್ನು ಪೂಜಿಸಲು ಅಸ್ಪೃಶ್ಯರಿಗೆ ಆತಂಕ ಮಾಡುವದಿಲ್ಲ. ಪರಮಾತ್ಮನ ನಾಮೋಚ್ಚಾರ ಮಾತ್ರದಿಂದ ಮಾನವನು ಪವಿತ್ರನಾಗುತ್ತಾನೆಂದು ಭಗವದ್ಗೀತೆಯಲ್ಲಿ ವಚನವಿದೆ. ಪರಮಾತ್ಮನಿಗೆ ಬೇಕಾದದ್ದು ನಿರ್ಮಲ ಮನಸ್ಸು; ನಿರ್ಮಲ ಮನಸ್ಸಿನಿಂದ ಪರಮಾತ್ಮನ ಪ್ರಾರ್ಥನೆ ನಡಿಸುವವನಿಗೆ ಪರಮಾತ್ಮನ ಸನ್ನಿಧಿಯಲ್ಲಿ ಆತಂಕವಿಲ್ಲ. ಮನಸ್ಸಿನಿಂದ ನಿರ್ಮಲವಿದ್ದವನು ಪರಮಾತ್ಮನಿಗೆ ವಿಶೇಷವಾಗಿ ಗ್ರಾಹ್ಯನಾಗುತ್ತಾನೆ. ಶರೀರದಿಂದ ನಿರ್ಮಲವಿದ್ದವನಿಗಿಂತ ಚಿತ್ತದಿಂದ ನಿರ್ಮಲವಿದ್ದವನೇ ಆತನಿಗೆ ಹೆಚ್ಚು ಗ್ರಾಹ್ಯನು." ಇತ್ಯಾದಿ ಹೇಳಿ, ಪಂಡಿತ ಮಾಲವೀಯರವರು ಹಿಂದು ಮಹಾಸಭೆಯ ಧ್ಯೇಯಗಳಂತೆ ವರ್ತಿಸಲು ಸಭಿಕರಿಗೆ ಬೋಧಿಸಿ ಸ್ವಸ್ಥಾನಾಪನ್ನರಾದರು.

ತೀರ್ಮಾನಗಳು.

ಮೊಟ್ಟಮೊದಲು ಹಕೀಮ ಅಜಮಲಖಾನ ಸಾಹೇಬರವರ ನಿಧನದ ಕುರಿತು ದುಃಖಪ್ರದರ್ಶನ ಮಾಡಲಾಯಿತು. ಶ್ರೀ ವಿಜಯರಾಘವಾಚಾರ್ಯರವರು ಸೈಮನ್ ಕಮಿಟಿಯನ್ನು ಬಹಿಷ್ಕರಿಸುವ ನಿರ್ಧಾರವನ್ನು ಪ್ರಸ್ತಾಪಿಸಿ ಮನ್ನಿಸಿಕೊಂಡರು. ರಾಷ್ಟ್ರೀಯ ಸಭೆಯು ತೀರ್ಮಾನಿಸಿದಂತೆ ಸೈಮನ್ ಕಮಿಟಿಯನ್ನು ಬಹಿಷ್ಕರಿಸಬೇಕಾಗಿ ತೀರ್ಮಾನದಲ್ಲಿ ಉಲ್ಲೇಖವಿದೆ. ಸ್ವರಾಜ್ಯಯೋಜನೆಯನ್ನು ಹಿಂದು ಮಹಾಸಭೆಯು ರಾಷ್ಟ್ರೀಯಸಭೆ ಪ್ರಭೃತಿ ಸಂಸ್ಥೆಗಳೊಡನೆ ಆಲೋಚಿಸಿ ತಯಾರಿಸತಕ್ಕದ್ದೆಂಬ ತೀರ್ಮಾನವು ಮಂಜೂರಾಗಿದೆ. ಯೋಜನೆಯನ್ನು ತಯಾರಿಸುವ ಕಾಲಕ್ಕೆ ತ್ರಿಗುಣಗಳನ್ನು ಲಕ್ಷದಲ್ಲಿಡಬೇಕು. (೧) ಬ್ರಿಟಿಶ ರಾಷ್ಟ್ರದಂತೆ ಮಧ್ಯವರ್ತಿ - ಪ್ರಾಂತಿಕ— ಸ್ಥಾನಿಕ ಎಂಬ ಕಾರಭಾರಿ ಮಂಡಳಗಳನ್ನೇರ್ಪಡಿಸತಕ್ಕದ್ದು. (೨) ಸಂಸ್ಥಾನಿಕರೂ, ಸ್ವರಾಜ್ಯ ಸರಕಾರವೂ ಒಟ್ಟುಗೂಡಿ ಸಂಯುಕ್ತ ಸರಕಾರವಾಗಬೇಕು. (೩) ಮತಾಧಿಕಾರವು ಜಾತಿಗಳ ಮೇಲೆ ಹೊಂದಿರಬಾರದು; ಸಂಯುಕ್ತ ಮತದಾರ ಮಂಡಳಗಳಿರಬೇಕು. ಮತದಾನದ ಅಧಿಕಾರವು ಸಮಸ್ತರಿಗಿರಬೇಕು. ಅಫಘಾಣಿಸ್ಥಾನದ ಅರಸರಾದ ಅಮಾನುಲ್ಲಾ ಖಾನರವರು ಗೋಧನದ ಕುರಿತು ಪ್ರದರ್ಶಿಸಿದ ಆದರಭಾವವನ್ನು ಹಿಂದು ಮಹಾಸಭೆಯು ಕೃತಜ್ಞತಾಪೂರ್ವಕವಾಗಿ ಮನ್ನಿಸಿರುತ್ತದೆ. ಹಿಂದು ಬಾಂಧವರ ಧರ್ಮಭಾವನೆಗಳನ್ನು ಮನ್ನಿಸಲಿಕ್ಕೆ ಮುಸಲ್ಮಾನರಿಗೆ ಕೊಟ್ಟ ಉಪದೇಶದ ಬಗ್ಗೆ ಹಿಂದು ಮಹಾಸಭೆಯು ಕೃತಜ್ಞವಿದೆಂಬ ಠರಾವು ಹಿಂದು ಸಭೆಯಲ್ಲಿ ಮಂಜೂರಾಯಿತು. ಗೋಪ್ರತಿಪಾಲನದ ಕುರಿತು ಹಿಂದು ಮಹಾಸಭೆಯು ಮುಸಲ್ಮಾನರಿಗೆ ಮನ ಒಲಿಸುವ ತೀರ್ಮಾನವನ್ನು ಕೈಕೊಂಡಿದೆ:— ಹಿಂದುಗಳಿಗೆ ಗೋವು ಅತ್ಯಂತ ಪವಿತ್ರವಾದದ್ದು; ಗೋಹತ್ಯವಾದರೆ, ಧಾರ್ಮಿಕ ಹಿಂದುಗಳಿಗೆ ಭಯಂಕರವಾದ ಮನೋವ್ಯಥೆಯಾಗುತ್ತದೆ, ಗೋಪ್ರತಿಪಾಲನಕ್ಕಾಗಿ ಪ್ರಾಣಾರ್ಪಣ ಮಾಡಲಿಕ್ಕೂ ಹಿಂದುಗಳು ಬದ್ಧರಿದ್ದಾರೆ. ಗೋವಿನ ಆಹುತಿಕೊಡಬೇಕೆಂದು ಇಸ್ಲಾಮ ಧರ್ಮದಲ್ಲಿ ಹೇಳಲ್ಪಟ್ಟಿಲ್ಲ. ಹಿಂದುಗಳ ಧರ್ಮಭಾವನೆಯನ್ನು ಮನ್ನಿಸುವದಕ್ಕಾಗಿ ಅನೇಕ ಮುಸಲ್ಮಾನ ಸಂಸ್ಥಾನಿಕರು ಗೋಹತ್ಯವನ್ನು ಪ್ರತಿಬಂಧಿಸಿದ್ದಾರೆ. ಈ ಪ್ರತಿಬಂಧವನ್ನು ಮನ್ನಿಸದ ಸ್ಥಳಗಳಲ್ಲಿ ಹಿಂದು-ಮುಸಲ್ಮಾನರೊಳಗೆ ಅನೇಕ ಉದ್ವೇಗಜನಕ ಕಲಹಗಳಾಗಿವೆ. ಇತ್ತೀಚೆಗಲ್ಲಿಯೂ ಪ್ರಾಣಹಾನಿಗಳಾಗಿವೆ. ಈ ಕಲಹಕಾರಣವನ್ನು ನಿರ್ಮೂಲಿಸುವದಕ್ಕಾಗಿ ಗೋಹತ್ಯವನ್ನು ಯಾವದೇ ಕಾರಣದಿಂದ ಕೈಕೊಳ್ಳದೆ, ಹಿಂದು-ಮುಸಲ್ಮಾನ ಸಮಾಜಗಳಲ್ಲಿ ಪ್ರೇಮಭಾವವನ್ನು ಉಂಟು ಮಾಡಬೇಕಾಗಿ ಹಿಂದು ಮಹಾಸಭೆಯು ಅಂತಃಕರಣಪೂರ್ವಕವಾಗಿ ಬಿನ್ನೈಸುತ್ತದೆ. ವಾದ್ಯಘೋಷದ ಕುರಿತು ಹಿಂದು ಮಹಾಸಭೆಯು ಕಾರ್ಯಕಾರಿ ಮಂಡಳಕ್ಕೆ ಆಜ್ಞೆಯನ್ನಿತ್ತಿದೆ; ಏನಂದರೆ - ಅಖಿಲ ಮುಸಲ್ಮಾನ ಸಮಾಜದ ಲೋಕನಾಯಕರೊಡನೆ ವಿಚಾರಿಸಿ ಮಸೀದಿಗಳ ಮುಂದಿನ ವಾದ್ಯಘೋಷದ ಕುರಿತು ಅವಶ್ಯವುಳ್ಳ ನೇಮಗಳನ್ನೇರ್ಪಡಿಸತಕ್ಕದ್ದು; ಹಾಗು ಆ ನೇಮಗಳನ್ನು ಸ್ವಸಮಾಜದ ಕಡೆಯಿಂದ ಪಾಲಿಸಿಕೊಳ್ಳತಕ್ಕದ್ದು. ಹಿಂದುಗಳೊಳಗೆ ಅವಶ್ಯವುಳ್ಳ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕಾಗಿಯೂ ಹಿಂದು ಮಹಾಸಭೆಯು ತನ್ನ ಕಾರ್ಯಕಾರಿ ಮಂಡಳಕ್ಕೆ ಆಜ್ಞೆ ಮಾಡಿದೆ. ಹೀಗೆಲ್ಲ ಕಾರ್ಯವಾದ ಬಳಿಕ, ಮದ್ರಾಸದೊಳಗಿನ ಹಿಂದು ಮಹಾಸಭೆಯ ವಿಶೇಷ ಅಧಿವೇಶನವು ಪರಿಸಮಾಪ್ತಿಗೈದಿತು. ಹಿಂದುಗಳೆಲ್ಲರೂ ಮಹಾಸಭೆಯ ಆಜ್ಞೆಯನ್ನು ಪಾಲಿಸಿ, ದೇಶದಲ್ಲಿ ಅನ್ಯೋನ್ಯಪ್ರೇಮಭಾವವನ್ನು ಬೆಳಿಸಲು ನೆರವಾಗತಕ್ಕದ್ದು.

ಮುಸಲ್ಮಾನ ಬಾಂಧವರ ನಿರ್ಧಾರ.

ಸೈಮನ್ ಕಮಿಟಿಯ ನಿಷೇಧ ವಿಷಯದಲ್ಲಿ ಮಹಮ್ಮದೀಯರೊಳಗೆ ಮತಭೇದವಾಗಿ ಮುಸ್ಲೀಮ ಲೀಗದ ಅಧ್ಯಕ್ಷರಾದ ಸರ್ ಮಹಮ್ಮದ ಶಫೀಯವರು ಅಧ್ಯಕ್ಷಸ್ಥಾನವನ್ನು ತ್ಯಜಿಸಿದರು. ಬೆರಿಸ್ಟರ ಜಿನ್ನಾ ಪ್ರಭೃತಿ ಮಹಮ್ಮದೀಯ ಲೋಕನಾಯಕರು ಸೈಮನ್ ಕಮಿಟಿಯನ್ನು ಬಹಿಷ್ಕರಿಸಬೇಕೆನ್ನುವವರು; ಇವರು ಕಲಕತ್ತೆಯಲ್ಲಿ ಮಿ। ಯಾಕೂಬರವರನ್ನು ಅಧ್ಯಕ್ಷರಾಗಿ ನೇಮಿಸಿ ಸೈಮನ್ ಕಮಿಟಿಯನ್ನು ಬಹಿಷ್ಕರಿಸಬೇಕೆಂದು ತೀರ್ಮಾನಿಸಿದರು. ಜಾಲಿಯನ್‌ವಾಲಾಬಾಗಿಗಿಂತ ಸೈಮನ್ ಕಮಿಟಿಯ ನೇಮಣೂಕಿಯು ಕ್ರೂರವಾದದ್ದೆಂದು ಬೆರಿಸ್ಟರ ಜಿನ್ನಾರವರು ಉದ್ಗರಿಸಿದರು. ಜಾಲಿಯನ್‌ವಾಲಾಬಾಗದಲ್ಲಿ ಭಾರತೀಯರ ಪ್ರೇತದ ಕೊಲೆಯಾಯಿತು; ಸೈಮನ್ ಕಮಿಟಿಯ ನೇಮಣೂಕಿಯಿಂದ ಭಾರತೀಯ ಆತ್ಮದ ಕೊಲೆಯಾಗುತ್ತದೆ; ಎಂದು ಬೆರಿಸ್ಟರ ಜಿನ್ನಾರವರು ಉದ್ಗರಿಸಿ, ಸೈಮನ್ ಕಮಿಟಿಗೆ ಎಲ್ಲೆಲ್ಲಿಯೂ ಆಶ್ರಯ ಕೊಡಬಾರದಾಗಿ ಸಭಿಕರಿಗೆ ವಿಧಿಸಿದರು. ಸರ್ ಮಹಮ್ಮದ ಶಫೀಯವರು ಅಧ್ಯಕ್ಷರಾಗಿ ಲಾಹೋರಿನಲ್ಲಿ ಸಭೆ ಸೇರಿಸಿ, ಸೈಮನ್ ಕಮಿಟಿಗೆ ಸ್ವಾಗತವನ್ನಿತ್ತರು; ಆದರೆ, ಲಾಹೋರದ ಸಭೆಗೆ ಕಿಮ್ಮತ್ತಿಲ್ಲ. ಅಖಿಲ ಭಾರತೀಯ ಮುಸಲ್ಮಾನ ಲೋಕನಾಯಕರೆಲ್ಲರೂ ಕಲಕತ್ತೆಯಲ್ಲಿಯೇ ಕೂಡಿದ್ದರಿಂದ ಸೈಮನ್ ಕಮಿಟಿಯ ಬಹಿಷ್ಕಾರ ನಿರ್ಧಾರವನ್ನೇ ಮುಸಲ್ಮಾನರು ಕೈಕೊಂಡಿದ್ದಾರೆಂದು ನಿಶ್ಚಯವಾಗಿ ಹೇಳಬಹುದು. ಬೆರಿಸ್ಟರ ಜಿನ್ನಾರವರು ನಾಮದಾರ ಆಗಾಖಾನರವರಿಗೂ ಬಹಿಷ್ಕಾರವನ್ನು ಕೈಕೊಳ್ಳಲು ಬಿನ್ನೈಸಿಕೊಂಡರು. ಬ್ರಿಟಿಶ ಸರಕಾರದೊಡನೆ ಮುಸಲ್ಮಾನರು ಸನದಶೀರ ಯುದ್ಧವನ್ನೇ ಜಾಹೀರ ಮಾಡಿದ್ದಾರೆಂದೂ ತಮ್ಮ ಕಡೆಯಿಂದ ಒಪ್ಪಂದದ ಮಾತುಕತೆ ಎತ್ತಲ್ಪಡಲಿಕ್ಕಿಲ್ಲೆಂದೂ ಬೆರಿಸ್ಟರ ಜಿನ್ನಾರವರು ಒತ್ತಿ ಹೇಳಿದರು.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वत हातमागांवरील नानातऱ्हेच्या डिझायनच्या रंगी-बेरंगी चादरें, फॅशनेबल बाथ टोवेल, चौक, लहान-मोठे पंचे, सीडपाट, चीलपाट, शर्टिंग- कोटिंग- वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीपः– आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ताः– मेसर्स गोविंद माधव शेणवि, फोवकार अँड सन्स.

पोस्ट— मुंकेरि (कारवार.)

ಚಿತ್ರವೇಧಕ ಸುದ್ದಿಗಳು.

— ಮುಂಬಯಿಯ ದಾದರ ಪೋಲೀಸ ಕೋರ್ಟಿನಲ್ಲಿ ಅಬ್ದುಲ್ ರಹಿಮಾನ ಎಂಬ ಕೈದಿಯು ಜೈಲಿನೊಳಗಿನ ಶಿಸ್ತನ್ನು ಭಂಗಿಸಿದ ಬಗ್ಗೆ ಅತನ ಮೇಲೆ ಖಟ್ಲೆ ಹೂಡಲಾಯಿತು. ಖಟ್ಲೆಯ ವಿಚಾರ ಮುಗಿಯಿತು. ಮ್ಯಾಜಿಸ್ಟ್ರೇಟರು ೯ ತಿಂಗಳ ಶಿಕ್ಷೆ ವಿಧಿಸಿದರು. ನಿಮಿಷಾರ್ಧದಲ್ಲಿ ಅಬ್ದುಲ್ ರಹಿಮಾನನು ಬೇಡಿಗಳನ್ನು ತುಂಡರಿಸಿಕೊಂಡು, ಅವನ್ನು ಮ್ಯಾಜಿಸ್ಟ್ರೇಟರ ಕಡೆಗೆ ಒಗೆದನು; ಮ್ಯಾಜಿಸ್ಟ್ರೇಟರಿಗೆ ತಾಗಲಿಲ್ಲ. ಅತನ ಗುರಿಯೇನು ತಪ್ಪಿದ್ದಿಲ್ಲ. ಪೂರ್ವಪುಣ್ಯದಿಂದಲೇ ಮ್ಯಾಜಿಸ್ಟ್ರೇಟರು ಪಾರಾದರೆಂದು ವಕೀಲರು ಮ್ಯಾಜಿಸ್ಟ್ರೇಟರಿಗೆ ಅಭಿನಂದಿಸಿದರು. — ಅಮೇರಿಕೆಯಲ್ಲಿ ವರ್ಷಾಸನ ೧೦ ಲಕ್ಷ ಡಾಲರಕ್ಕೆ ಹೆಚ್ಚಿನ ಉತ್ಪನ್ನವಿದ್ದವರು ೨೩೮ ಮಂದಿಗಳಿದ್ದಾರೆ. — ಪರದೇಶದಿಂದ ಒಂದು ಶಕ್ತಿವರ್ಧಕ ಪಾನಕವು ಹಿಂದುಸ್ಥಾನಕ್ಕೆ ಬಂದಿದೆ. ಅದರ ಹೆಸರು "ಟಾನಿಕ್ ಫುಡ್ ವಿನರೆಜು" ಎಂದಿದೆ. ಈ ಪಾನಕದೊಳಗೊಂಡ ದ್ರವ್ಯಗಳು ಬಾಟ್ಲಿಯ ಮೇಲೆ ನಿರ್ದೇಶಿಸಲಾಗಿವೆ:—"ಹುರಿದ ಜವೆಗೋದಿ, ಹಾಲು, ಕೋಕೋ ಮುಂತಾದ ಸ್ವಾಭಾವಿಕ ದ್ರವ್ಯಗಳಿಂದ ಮಾಡಿದ್ದು." ಇಂಗ್ಲಂಡದಲ್ಲಿಯೂ ಇದು ಶಕ್ತಿವರ್ಧಕ ಪಾನಕವು ಮಾರಲ್ಪಡುತ್ತದೆ. ಜವೆಗೋದಿ, ಹಾಲು, ತತ್ತಿ, ಕೋಕೋ ಮುಂತಾದ ಸ್ವಾಭಾವಿಕ ದ್ರವ್ಯಗಳಿಂದ ಮಾಡಿದ್ದು- ತತ್ತಿ ಶಬ್ದವು ಹಿಂದುಸ್ಥಾನದಲ್ಲಿ ಕಳಿಸಿದ ಬಾಟ್ಲಿಗಳ ಮೇಲೆ ಬರೆಯಲಾಗಲಿಲ್ಲ. ಭಾರತೀಯರ ಧರ್ಮಭಾವನೆಗೆ ಇದೆಂದು ಮನ್ನಣೆ. — ವಿಲಾಯತಿಯ ...ನ ಮಿ॥ ಜೋರ್ಜ ವಿಲ್‌ಕಿನ್ಸರವರು ೭೦ ವರ್ಷದ ಮುದುಕರು. ತಮ್ಮ ಮೊಮ್ಮಗಳ ಮದುವೆಗೆ ಹೋಗಿದ್ದರು. ಆ ಕಾಲಕ್ಕೆ ಮೊಮ್ಮಗಳ ಅತ್ತೆಯನ್ನು ಅವರು ಕಂಡರು. ಇವರಿಗೂ, ಅವಳಿಗೂ ದೋಸ್ತಿಯುಂಟಾಯಿತು. ಅವಳ ಪ್ರಾಯ ೬೦ ವರುಷ; ಅವಳು ಫ್ರೋಸೆಟ್‌ರವರ ಹೆಂಡತಿಯಾಗಿದ್ದಳು. ವಿಲ್‌ಕಿನ್ಸರವರಿಗೂ ಫ್ರೋಸೆಟ್‌ರವರಿಗೂ ದೋಸ್ತಿ ಬೆಳೆದ. ಸಮ್ಮಕ್ಕೆ ಇಬ್ಬರೂ ಮದುವೆಯಾದರು. ಫ್ರೋಸೆಟ್‌ರವರು ವಿಲ್‌ಕಿನ್ಸರ ಮೂರನೇ ಹೆಂಡತಿಯು. ವಿಲ್‌ಕಿನ್ಸರವರಿಗೆ ೧೧ ಮಕ್ಕಳಿದ್ದಾರೆ. ಆ ಮಕ್ಕಳಿಂದ ೫೧ ಮಂದಿ ಮೊಮ್ಮಕ್ಕಳಾಗಿದ್ದಾರೆ. ಇವರಿಂದ ವಿಲ್‌ಕಿನ್ಸರವರಿಗೆ ... ಮಂದಿ ಮರಿಮಕ್ಕಳಾಗಿದ್ದಾರೆ. ಆದರೂ, ಅವರು ಕಾಮದೇವನ ಬಾಧೆಯೊಳಗಿಂದ ಮುಕ್ತರಾಗಲಿಲ್ಲ. — ಅಮೇರಿಕೆಯಲ್ಲಿ ಮೋಟಾರು ಬಂಡಿಗಳ ಕಾರಖಾನೆಯವರೊಳಗೆ ಪೈಪೋಟಿ ಪ್ರಾರಂಭವಾಗಿದೆ. ಫೋರ್ಡ-ವಿಲಿಯವರ ಹಿಸ್ಥರಲೆಂಡ-ಚಸರಲೆಟ್ ಮುಂತಾದ ಬಂಡಿಗಳ ಬೆಲೆಯು ಒಂದೊಂದು ಪವನಿಂದ ಇಳಿಯಲಾರಂಭಿಸಿದೆ. ಇನ್ನೂ ಇಳಿಯುವ ಲಕ್ಷಣವಿದೆ. ಮಾನವರಿಗೆ ಮೋಟಾರಾರೂಢರಾಗುವ ಸುಯೋಗ ಬಂದಿದೆ. ಆದರೆ, ಯಾರೂ ಗಾಬರಿ ಮಾಡಲಾಗದು. ಬೆಲೆಗಳು ಸಂಪೂರ್ಣ ಇಳಿಯುವವರೆಗೆ ಎಲ್ಲರೂ ನಿರೀಕ್ಷಿಸುತ್ತಿರಬೇಕು. ಇಲ್ಲದಿದ್ದರೆ, ಮುಂದೆ ಪಶ್ಚಾತ್ತಾಪಕ್ಕೆ ಕಾರಣವಾಗುವದು. ಯಾಕಂದರೆ, ದಿನಾಲು ದರಗಳು ಇಳಿಯುತ್ತಿರತಕ್ಕವೆ. ...ಡರ್ಡ ಆಯಿಲ್ ಕಂಪನಿಯಿಂದ ರಶಿಯಾ ದೇಶವು ದೊಡ್ಡ ಸಾಲವನ್ನು ತಕ್ಕೊಳ್ಳಬೇಕೆಂದು ನಿರ್ಧರಿಸಿದೆ. ಜರ್ಮನಿಯೂ ದೊಡ್ಡದೊಂದು ಸಾಲ ಎತ್ತಲಿಕ್ಕೆ ಬಳಿ ಮಾಡುವ ಆಲೋಚನೆಯಲ್ಲಿದೆ. ಜರ್ಮನಿಯ ಜನಾ-ಟುರ್ಜ ಪತ್ರಿಕೆಯಲ್ಲಿ ೧॥ ಕೋಟಿ ರೂಪಾಯಿಗಳು ಚಿತ್ರಗುಪ್ತ ಹಾಗು ಪರ್ಯಾಯಾಸಪತ್ರಿಕೆಗಳಿಗಾಗಿ ಮುಂಜೂರಾಗಿವೆ. ಇವೆಲ್ಲ ಯುದ್ಧ ತಯಾರಿಯೆಂದು ಜರ್ಮನಿಯೊಳಗಿನ ಶಾಂತಿದೇವಿಯ ಉಪಾಸಕರು ಗಾಬರಿಗೆಟ್ಟಿದ್ದಾರೆ. — ತ್ರಾವಣಕೋರ ಸಂಸ್ಥಾನದೊಳಗಿನ ಕೋಟಿಯಂ ಗ್ರಾಮದ ನಾಯರ ಜಾತಿಯವನೊಬ್ಬನು ಇಳುವಾ ಜಾತಿಯ ಸ್ತ್ರೀಯನ್ನು ಮದುವೆ ಮಾಡಿಕೊಂಡನು. ಜಾತಿಯ ನಿರ್ಬಂಧಗಳನ್ನು ಮುರಿಯಲಿಕ್ಕೆ ಕಾಮದೇವನೇ ಯೋಗ್ಯನಿದ್ದಾನೆ. ಮದ್ರಾಸದ ಬಳಿ ಎಗ್ಮೋರದಲ್ಲಿ ಒಂದು ಸತ್ಯಾಗ್ರಹವಾಯಿತು. ಪ್ರಯಾಣಿಕರು ಟಿಕೀಟು ಕೊಂಡಿದ್ದರು. ತಿನ್ನೆವೆಲ್ಲಿ-ಮಧುರೆಗೆ ಹೋಗುವ ಪ್ರಯಾಣಿಕರು ಉಗಿಬಂಡಿಯ ಮೇಲೆ ಎಲ್ಲಿ ಹುಡುಕಿದರೂ ಸ್ಥಳ ದೊರಕಲಿಲ್ಲ. ೨ ಡಬ್ಬೆಗಳು ಖಾಲಿ ಇದ್ದವು. ಸಂತ ಥೋಮಸ್ ಮೌಂಟ ಸ್ಟೇಶನಿನಲ್ಲಿ ಕೆಲವು ಸೈನಿಕರು ಹತ್ತುವವರಿದ್ದರು. ಅವರಿಗಾಗಿ ಎರಡು ಡಬ್ಬೆಗಳನ್ನು ಇಟ್ಟಿದ್ದರು. ಆ ಡಬ್ಬೆಗಳಲ್ಲಿ ಈ ಪ್ರಯಾಣಿಕರು ಸೇರಿಕೊಂಡರು. ಡಬ್ಬೆಗಳಿಂದ ಇಳಿಯಲು ಪ್ರಯಾಣಿಕರಿಗೆ ಹೇಳಲಾಯಿತು; ಅವರು ಎಷ್ಟಕ್ಕೂ ಒಪ್ಪಲಿಲ್ಲ. ಆ ಡಬ್ಬೆಗಳನ್ನು ಬಂಡಿಯಿಂದ ಪ್ರತ್ಯೇಕಿಸಿದರು. ಕಡೆಗೆ ಎಲ್ಲ ಪ್ರಯಾಣಿಕರು ಇಳಿದು ಕಂಬಿಗಳ ಮೇಲೆ ಮಲಕೊಂಡು ಉಗಿಬಂಡಿಗೆ ಹೋಗಗೊಡಲಿಲ್ಲ. ಬಳಿಕ, ಆ ಎರಡು ಡಬ್ಬೆಗಳನ್ನು ಪುನಃ ಜೋಡಿಸಿ ಅವರಿಗೆ ಕುಳ್ಳಿರಿಸಿಕೊಂಡು ಉಗಿಬಂಡಿಯು ಹೊರಟಿತು. ಸೈನಿಕರಿಗಾಗಿ ಬೇರೆ ಎರಡು ಡಬ್ಬೆಗಳು ಹಚ್ಚಲ್ಪಟ್ಟವು. ಸತ್ಯಾಗ್ರಹದ ಪ್ರಭಾವ. — ನೋರ್ಫೋಕ್‌ದೊಳಗಿನ ಮಿಸೆಸ್ ಲೀನರ ಕೋಟ್ಸ ಎಂಬವಳು ಇನ್ನೊಂದು ತಿಂಗಳಲ್ಲಿ ೧೦೫ ವರ್ಷ ದಾಟಳಿಗುತ್ತಾಳೆ. ಅವಳಿಗೆ ಇನ್ನೂ ಸ್ಮರಣಶಕ್ತಿಯು ಚಲೋ ಇದೆ; ಶ್ರವಣಶಕ್ತಿಯೂ ಚಲೋ ಇದೆ. ಇನ್ನೂ ಪತ್ರಗಳನ್ನು ಸ್ವತಃ ಬರೆಯುತ್ತಾಳೆ. ನಿತ್ಯವೂ ವರ್ತಮಾನಪತ್ರಗಳನ್ನು ಓದಿಸಿ ಕೇಳುತ್ತಾಳೆ. ಅವಳು ೫ ವರ್ಷಗಳ ಹಿಂದೆ, ೧೦೦ ವರ್ಷಗಳಾದಾಗ ಬ್ರಿಟಿಶ ಸಾಮ್ರಾಜ್ಞಿಯವರಾದ ಮೇರಿಯವರೂ, ನೊರ್ವೇ, ಸ್ಪೇನ, ರುಮಾನಿಯಾ, ರಶಿಯಾ ದೇಶಗಳ ಮಹಾರಾಣಿಯವರೂ ಲೀನರ ಕೋಟ್ಸರವರಲ್ಲಿಗೆ ಹೋಗಿ ಅಭಿನಂದಿಸಿದರು. ಕೋಟ್ಸರವರು ಇನ್ನೂ ಚಿರಾಯುಗಳಾಗಲಿ! — ಬ್ರಿಟನ್‌ದೊಳಗಿನ ನೊರ್ಥೇಂಪ್ಟನ್ ಕೌಂಟಿಯಲ್ಲಿ ಒಬ್ಬನಿಗೆ ೩೦ ಮಕ್ಕಳಿದ್ದಾರೆ. ಇವರಲ್ಲಿ ೨೯ ಮಂದಿ ಹುಡುಗಿಯರು; ಒಬ್ಬನೇ ಹುಡುಗನು. ಕನ್ಯಾದಾನದ ಮಹಾಪುಣ್ಯ! ವಿಲಾಯತಿಯಲ್ಲಾದ್ದರಿಂದ ಈತನು ಬದುಕಿದ್ದಾನೆ. ಹಿಂದುಸ್ಥಾನದಲ್ಲಾಗಿದ್ದರೆ ವರದಕ್ಷಿಣೆ ಕೊಟ್ಟು ಪೂರ್ಣ ಸತ್ತು ಹೋಗುತ್ತಿದ್ದ!! — ಲಂಡನಿನೊಳಗಿನ ಮ್ಯುನಿಸಿಪಾಲಿಟಿಯ ಅಧ್ಯಕ್ಷರಿಗೆ ಒಬ್ಬಳು ಪತ್ರ ಬರೆದಿದ್ದಾಳೆ:— "ನನಗೆ ೨೪ ಮಕ್ಕಳಾಗಿದ್ದಾರೆ; ಅವರಲ್ಲಿ ೧೬ ಮಗಂದಿರು; ೮ ಮಂದಿ ಮಗಳಂದಿರು; ಮಹಾಯುದ್ಧದಲ್ಲಿ ಮೂವರು ಮಗಂದಿರಿಗೆ ಆಹುತಿಯಾಯಿತು. ಈಗ ೧೨ ವರ್ಷದ ಒಳಗಿನ ಪ್ರಾಯದ ೧೨ ಮಂದಿ ಹುಡುಗರಿಗೆ ನಾನು ಸಾಕಬೇಕಾಗಿದೆ. ಬಹಳ ಕಷ್ಟ. ಹೆರವಾಗಬೇಕು." ಇತ್ಯಾದಿ ಬರೆದಿದ್ದಾಳೆ. ಮಕ್ಕಳಾದರೂ ಕಷ್ಟ! ಮಕ್ಕಳಿಲ್ಲದಿದ್ದರೂ ಕಷ್ಟ!! — ಮೆಂಚೆಸ್ಟರ ಕೋರ್ಟಿನಲ್ಲಿ ಒಂದು ವಿಚಿತ್ರ ದಾವೆ. "ಕೊನ್‌ಸ್ಟಿಟ್ಯೂಶನಲ್ ಕ್ಲಬ್ಬ" ಎಂಬ ಸಂತೋಷ ಕೂಟದ ಮೇಲೆ ದಾವೆ. ಮೆರಿಯನ್ ಪೋಕರ ಎಂಬ ಸ್ತ್ರೀಯು ವಾದಿ; ೧೫ ಪವನು ಬೇಡಿದ್ದಾಳೆ. ಕ್ಲಬ್ಬಿನ ಆಫೀಸು ಮಾರ್ಗದ ಬದಿಗಿರುವ ದ್ವಾರದ ಮಾಳಿಗೆಮೇಲೆ ಉಂಟು. ಮೇ ೨೧ನೇ ತಾರೀಖಿಗೆ ಪೋಕರಳು ಮನೆಗೆ ಹೋಗುವದಕ್ಕಾಗಿ ಟ್ರಾಮು ಬಂಡಿಯನ್ನು ನಿರೀಕ್ಷಿಸುತ್ತಾ ಮಾರ್ಗದ ಮೇಲೆ ನಿಂತುಕೊಂಡಿದ್ದಳು. ಥಕ್ಕನೆ ಆ ಕ್ಲಬ್ಬಿನ ಕಿಡಕಿಯ ಬಾಗಿಲದ ಒಂದು ಕನ್ನಡಿಯು ಕಳಚಿತು; ಚೂರುಚೂರಾಯಿತು; ಇವಳ ಮೈಮೇಲೆ ಕೆಲವು ಹಾರಿದವು. ಆದರೆ, ಪೆಟ್ಟೇನಾಗಲಿಲ್ಲ. ಆ ಕಾಲಕ್ಕೆ ಇವಳು ಬಸುರಿದ್ದಳು. ಟ್ರಾಮು ಬಂಡಿಯಿಂದ ಹೋಗುತ್ತಿರುವಾಗಲೇ ಇವಳಿಗೆ ಅಸ್ವಸ್ಥತೆಯುಂಟಾಯಿತು. ಮನೆಗೆ ಮುಟ್ಟಿದಳು. ಅಲ್ಲಿ ೨-೩ ಬಾರಿ ಮೂರ್ಛೆ ಹೊಂದಿದಳು. ತಿಂಗಳು ತುಂಬಲಿಲ್ಲವಾಗಿತ್ತು; ಅಕಾಲದಲ್ಲಿಯೇ ಒಂದು ಕೂಸನ್ನು ಹಡೆದಳು. ಕೂಸು ತೀರಿಕೊಂಡಿತು. ಕನ್ನಡಿ ಬಿದ್ದು ಉಂಟಾದ ಗಾಬರಿಯಿಂದ ಅಕಾಲದಲ್ಲಿ ಪ್ರಸೂತಿಯಾಗಿ ನಷ್ಟವಾಯಿತೆಂದು ಇವಳ ದಾವೆ. ನ್ಯಾಯಮೂರ್ತಿಗಳು ವಾದಿನಿಯ ಬಗ್ಗೆ ಸಹಾನುಭೂತಿಯನ್ನು ಪ್ರದರ್ಶಿಸಿದರು. ಆದರೆ, ಆ ಕಾಲದಲ್ಲಿ ಪ್ರಸೂತಿಯಾಗಲು ಅವಳ ಶರೀರಸ್ಥಿತಿಯೇ ಕಾರಣವೆಂದು ದಾವೆಯನ್ನು ಕಿತ್ತುಹಾಕಿ ಬಿಟ್ಟರು. ಕನ್ನಡಿ ಬೀಳೋಣಕ್ಕೂ, ಪೋಕರಳ ಅಕಾಲ ಪ್ರಸೂತಿಗೂ ಸಂಬಂಧವೇನಿಲ್ಲೆಂದು ನ್ಯಾಯಮೂರ್ತಿಗಳ ಅಭಿಪ್ರಾಯ. ಕನ್ನಡಿ ಬಿದ್ದದ್ದು ಕ್ಲಬ್ಬಿನ ಅಜಾಗ್ರತೆಯಿಂದೆಂದೂ ನ್ಯಾಯಮೂರ್ತಿಗಳು ಸಮ್ಮತಿಸಿದ್ದಾರೆ. — ಚೀನದೇಶದೊಳಗಿನ ಪೇಕಿಂಗ ಸರಕಾರದ ಉದ್ಯೋಗಿಕ ಖಾತೆಯವರು ಅಕ್ಟೋಬರ ತಿಂಗಳ ಪಗಾರವನ್ನು ಸಹ ಕೊಡಲು ಸರಕಾರದ ಸ್ಥಿತಿಯಿಲ್ಲೆಂದು ಕಳೆದ ತಿಂಗಳಿನಲ್ಲಿ ಪ್ರಕಟಿಸಿದರು. ಈ ಸುದ್ದಿಯನ್ನು ಕೇಳಿದೊಡನೆ, ಕಾರಕೂನರೊಬ್ಬರ ಎದೆ ಹಾರಿ ಹೋಯಿತು; ಹಾಗೆಯೇ ಪ್ರಾಣವೂ ಹಾರಿ ಹೋಯಿತು! ಈ ಕಾರಕೂನರ ಸ್ಥಿತಿ ಕೇಳಿ, ಇನ್ನೊಬ್ಬ ಕಾರಕೂನರೂ ಮೂರ್ಛೆ ಹೊಂದಿದರು; ಆದರೆ ಅವರು ಬದುಕಿದ್ದಾರೆ. ಪಗಾರ ಸಿಗದೆಂದು ಕೇಳಿದವರು ತೀರಿಕೊಂಡರು; ಮರಣ ಕೇಳಿದವರು ಬದುಕಿದ್ದಾರೆ! ಹೊಟ್ಟೆಯ ಗೋಳೇ ದೊಡ್ಡ ಚಿಂತೆಯಲ್ಲವೇ? ಮರಣ ಹೊಂದಿದ ಕಾರಕೂನರ ಕುಟುಂಬಕ್ಕೆ ೩ ತಿಂಗಳ ಪಗಾರವನ್ನು ಸರಕಾರವು ಒಮ್ಮೆಲೇ ಕೊಟ್ಟುಬಿಟ್ಟಿತು. ಈ ಕಾರಕೂನರಿಗೆ ೭೦ ರೂಪಾಯಿ ಸಂಬಳ ಸಿಗುತ್ತಿತ್ತು. ಉಳಿದ ಕಾರಕೂನರಿಗೆ ಸಂಸಾರ ಖರ್ಚಿನ ಬಗ್ಗೆ ೩೦ ರೂಪಾಯಿಗಳಂತೆ ಕೊಡಬೇಕೆಂದು ಉದ್ಯೋಗಿಕ ಖಾತೆಯವರು ತಿಪ್ಪಾಟದ ಹುಕುಮುಗಳನ್ನು ಹೊರಡಿಸಿದ್ದಾರೆ. ಒಬ್ಬ ಕಾರಕೂನರ ಪ್ರಾಣಾರ್ಪಣದಿಂದ ಅನೇಕ ಕಾರಕೂನರ ಕಷ್ಟ ನಿವಾರಣೆಯಾಯಿತು. ಪುಣ್ಯವಂತರು!! — ಕ್ರೈಸ್ತ ಯುಗಾದಿಯ ಉತ್ಸವದಲ್ಲಿ ಸಂಗಮನೇರ ಮಾಮಲೇದಾರರಿಗೂ ರಾವಸಾಹೇಬ! ಆನಂದ ತಾಲೂಕಿನ ಪೋಲೀಸ ಪಟೇಲರಿಗೂ ರಾವಸಾಹೇಬ!! ಹೀಗೆ ಬಿರುದುಗಳು ದೊರಕಿವೆ. ಇಷ್ಟಿದ್ದೂ ಒಂದೇ ತರಗತಿಯವರೇನು?

ಕಾನಡಾ ವೃತ್ತ.

ಮಿತಿ ಪ್ರಭವ ಸಂ। ಪುಷ್ಯ ಕೃ॰ ೧ ವೆ, ಸೋಮವಾರ

ಬರೇ ಕಣ್ಣುಮುಚ್ಚಣಿಕೆ!

ಸ್ಯಾಮನ್ ಕೂಟವನ್ನು ಸಾಮ್ರಾಜ್ಯ ಸರಕಾರವು ನಿರ್ಮಿಸಿ, ಭಾರತೀಯರ ಮೇಲೆ ಹೊರಿಸಿದ ಶಾಶ್ವತವಾದ ಅಪೌರುಷೇಯದ ಅಪಮಾನಕ್ಕೆ ಭರತ ಖಂಡವು ಐಕ್ಯಮತ್ಯದಿಂದ ಎದುರಾಗುವದನ್ನು ನೋಡಿ, ಮನಸ್ಸು ಸಂತೋಷಪಡುತ್ತದೆ. ಸಾಮ್ರಾಜ್ಯ ಸರಕಾರವು ರಾವಣನಂತೆ ವಿರೋಧಶಕ್ತಿಯನ್ನು ತಾಳಿ ಭರತ ಖಂಡದಲ್ಲಿ ಐಕ್ಯಮತ್ಯವನ್ನುಂಟು ಮಾಡಿ ಭರತ ಖಂಡದ ಉದ್ಧಾರವನ್ನು ಅಕಲ್ಪಿತವಾಗಿ ಯೋಜಿಸಿದ ಬಗ್ಗೆ ಭರತಪುತ್ರರು ಮನಃಪೂರ್ತಿಯಿಂದಲೇ ಉಪಕಾರ ಮನ್ನಿಸುತ್ತಾರೆ. ಮನ್ನಿಸಲು ಬದ್ಧರಿದ್ದಾರೆ. ಚಿಕ್ಕ-ಪುಟ್ಟ ಮತಭೇದಗಳಿಂದಲೂ, ಕ್ಷುದ್ರ ಧರ್ಮಕಲ್ಪನೆಗಳಿಂದಲೂ ಭರತ ಖಂಡದಲ್ಲಿ ಪ್ರಜೆಗಳು ಭಿನ್ನ ಭಿನ್ನರಾದಾಗ, ಸ್ಯಾಮನ್ ಕೂಟದ ಮಂತ್ರವನ್ನು ಸಾಮ್ರಾಜ್ಯ ಸರಕಾರವು ಜಪಿಸಿ, ನಮಗೆಲ್ಲರಿಗೆ ಬಂಧುಭಾವದಿಂದ ಬಿಗಿದುಹಾಕಿದೆ. ರಾಷ್ಟ್ರೀಯ ಸಭೆ, ನೇಮಸ್ತರ ಸಭೆ, ಹಿಂದು-ಮುಸಲ್ಮಾನರ ಸಭೆ ಮುಂತಾದ ರಾಷ್ಟ್ರದೊಳಗಿನ ಸುವಿಚಾರ ಸಂಸ್ಥೆಗಳು ಸಭೆಸೇರಿ ಯಾವದೇ ಪ್ರಕಾರದಿಂದ, ಯಾವದೇ ಸ್ಥಿತಿಯಲ್ಲಿ ಸ್ಯಾಮನ್ ಕೂಟಕ್ಕೆ ಎಡೆಗೊಡಬಾರದೆಂದು ನಿಶ್ಚಯಪೂರ್ವಕವಾಗಿ ವಿಧಿಸಿದ್ದಾರೆ. ವಿಚಾರಶೀಲರೆಂದು ಖ್ಯಾತಿಗೊಂಡ ಸ್ವತಂತ್ರ ವಿಚಾರದ ಪ್ರಸಿದ್ಧ ಲೋಕನಾಯಕರಾದ ಬೆರಿಸ್ಟರ ಮಹಮದ ಅಲ್ಲಿ ಜಿನ್ನಾರವರಂತು ಸನಪತೀರ ಯುದ್ಧಕ್ಕೇ ಸನ್ನದ್ಧರಾಗಲು ಬೋಧಿಸುತ್ತಾರೆ. ಸರಕಾರದೊಡನೆ ಒಪ್ಪಂದದ ಮಾತುಕಥೆ ಮಾಡುವ ಕಾರಣ ಸಹ ಇರುವದಿಲ್ಲವಾಗಿಯೂ ಬೆರಿಸ್ಟರ ಜಿನ್ನಾರವರ ಅಭಿಪ್ರಾಯವಿದೆ. ಹೀಗೆಲ್ಲ ಭರತಪುತ್ರರ ಬಹಿಷ್ಕಾರ ಯುದ್ಧದ ತಯಾರಿ ನಡೆದಿದೆ.

ಸರಕಾರವು ಸ್ಯಾಮನ್ ಕೂಟವನ್ನು ಬರಮಾಡಿಕೊಳ್ಳುವ ತಯಾರಿಯಲ್ಲಿದೆ. ಸದ್ಯಕ್ಕೆ ಸ್ಯಾಮನ್ ಕೂಟಕ್ಕೆ ಅವಶ್ಯವುಳ್ಳ ಮಾಹಿತಿಯನ್ನು ಸಂಗ್ರಹಿಸುವದಕ್ಕಾಗಿ ಮಂಡಳವೊಂದು ನಿರ್ಮಾಣವಾಗಿದೆ. ಆ ಮಂಡಳವು ಸರಕಾರಿ-ನಿಮಸರಕಾರಿ ಸಂಸ್ಥೆಗಳ ಕಡೆಯಿಂದ ಮಾಹಿತಿಯನ್ನು ತರಿಸುತ್ತಿದೆ. ಆದರೆ, ಈ ವಿಷಯದ ಅಂದರಕಿ ಬಾತನ್ನು "ಸಂಡೇ ಟ್ಯಾಮ್ಸ್" ಪತ್ರಿಕೆಯು ಪ್ರಕಟಿಸಿದೆ. ಇದರ ಮೇಲಿಂದ ಸರಕಾರದ ನಿಜರೂಪವು ಥಳ್ಳನೆ ಪ್ರಜೆಗಳಿಗೆ ಹೊಳೆಯುವದು. ಬಂಗಾಲ ಸರಕಾರವು ತನ್ನ ಇಲಾಖೆಯಲ್ಲೆಲ್ಲ ನವಂಬರ ೧೦ ನೇ ತಾರೀಖಿಗೆ ಒಂದು ಗುಪ್ತ ಸರ್ಕ್ಯುಲಾರನ್ನು ಹೊರಡಿಸಿದೆ. ಈ ಸರ್ಕ್ಯುಲಾರಿನಂತೆ ಸರಕಾರಿ ನೌಕರರು ಸ್ಯಾಮನ್ ಕೂಟಕ್ಕೆ ಬ್ರಿಟಿಶ ರಾಜ್ಯಭಾರದ ಸ್ಥಿತಿಯನ್ನು ವರ್ಣಿಸತಕ್ಕದ್ದು. "ಸರಕಾರಿ ನೌಕರರ ನಿಯಮಾವಲಿಯಂತೆ ಅವರು ಭಾರತ ಮಂತ್ರಿಗಳ ಯಾ ಬ್ರಿಟಿಶ ಹಿಂದುಸ್ಥಾನದೊಳಗಿನ ಯಾವದೇ ಸರಕಾರದ ಕೃತ್ಯಗಳನ್ನು ಟೀಕಿಸಲಾರರು. ಸ್ಯಾಮನ್ ಕೂಟದಂಥ ಬಾಹ್ಯ ಕಾಹಿ ಮಂಡಳದ ಸನ್ನಿಧಿಯಲ್ಲಿ ಸರಕಾರಿ ನೌಕರರೆಲ್ಲರೂ ಈ ನಿಯಮವನ್ನು ಅಕ್ಷರಶಃ ಪಾಲಿಸತಕ್ಕದ್ದು. ತಪ್ಪ ಖಾತೆಯ ಯಾವದೇ ಕೃತ್ಯವನ್ನು ಅವರು ಟೀಕಿಸಲಾಗದು. ಧೋರಣವನ್ನೂ ಟೀಕಿಸಲಾಗದು. ಖಾತೆಯಲ್ಲಿ ಉಂಟಾದ ಹಾಗು ಉಂಟಾಗುವ ದೂರುಗಳನ್ನು ಸಾರ್ವಜನಿಕವಾಗಿ ದೂರಿಕೊಳ್ಳಲಾಗದು. ಆ ಕುರಿತು ಮೇಲಧಿಕಾರಿಗಳಿಗಾಗಲಿ, ಸರಕಾರಕ್ಕಾಗಲಿ ಬರೆಕೊಳ್ಳಬೇಕು. ಇತ್ತ ಈ ನಿಯಮಗಳನ್ನು ಅಲಕ್ಷಿಸಿದ್ದು ಕಂಡುಬಂದದ್ದರಿಂದ ಗುಪ್ತ ಸರ್ಕ್ಯುಲಾರು ಹೊರಡಿಸಲಾಗಿದೆ."

ಇದರ ಮೇಲಿಂದ ಸರಕಾರದ ಅಂತರಂಗವು ಸ್ಫುಟವಾಗುತ್ತದೆ. ಹಿಂದುಸ್ಥಾನ ಸರಕಾರದ ಧೋರಣ ಹಾಗು ಕೃತ್ಯಗಳನ್ನು ಪರಾಂಬರಿಸಿ, ಅವುಗಳಲ್ಲಿ ತಿದ್ದುಪಾಟಗಳನ್ನು ಸೂಚಿಸಲಿಕ್ಕಾಗಿ ದಯಾಳು ಪಂಚಮ ಜಾರ್ಜರು ಸರ್ ಜ್ಹಾನ್ ಸ್ಯಾಮನ್‌ರವರ ಆಧಿಪತ್ಯದಲ್ಲಿ ಮಂಡಳವನ್ನು ನೇಮಿಸಿದ್ದಾರೆ. ಬ್ರಿಟಿಶ ರಾಜ್ಯಧೋರಣವನ್ನು ಈ ತನಕ ನಡಿಸಿದ ಅಧಿಕಾರಿಗಳೇ ರಾಜ್ಯಧೋರಣದ ಅನುಭವವನ್ನು ವಿವರಿಸಲು ಸರ್ವಥಾ ಯೋಗ್ಯರು. ಹೀಗಿರಲು, ಅವರಿಗೆ ಸ್ತೋತ್ರಪಾಠಗಳನ್ನೇ ಅಪ್ರತ್ಯಕ್ಷವಾಗಿ ಹಾಡಹೇಳುವದೂ, ಅವರ ಸಾಕ್ಷಿಯ ಮೇಲಿಂದ ರಾಜ್ಯಧೋರಣವು ಸುಸೂತ್ರವಾಗಿ ನಡೆದದೆಂದು ಜಗತ್ತಿಗೆ ಜಾಹೀರು ಮಾಡುವದೂ ಪಾಪ-ಪುಣ್ಯಗಳ ಅರಿವಿದ್ದವರಿಗೆ ಎಂದೂ ಶೋಭಿಸದು. ಭಾರತೀಯರ ಉಪಕಾರಕ್ಕಾಗಿ ಪರಮಾತ್ಮನ ಪ್ರತಿನಿಧಿಗಳಾಗಿ ಭರತ ಖಂಡದ ರಾಜ್ಯದಾಡಳಿತವನ್ನು ನಡಿಸುವ ನಿಸ್ಪೃಹಿಗಳಿಗಂತು ಈ ಕೃತ್ಯವು ಅತೀವ ನಿಂದ್ಯವಾದದ್ದೀ. ನಾನು ಹೊಡೆದ ಹಾಗೆ ಮಾಡುತ್ತೇನೆ; ನೀವು ಅತ್ತ ಹಾಗೆ ಮಾಡಿ, ಎಂಬ ನ್ಯಾಯದಿಯಂತೆ ಭಾರತೀಯರಿಗೂ, ಲೋಕಕ್ಕೂ ವಂಚಿಸುವ ಕಣ್ಣುಮುಚ್ಚಣಿಕೆಯ ಆಟವಿದು. ಇಂಥ ಆಟದಿಂದ ಶಾಶ್ವತವಾಗಿ ವಂಚನೆಯನ್ನು ನಡಿಸುವದು ಎಂದೆಂದಿಗೂ ಸಾಧ್ಯವಿಲ್ಲ. ಹಾಗೆ ಸಾಧ್ಯವಿರುವದಾಗಿ ಗ್ರಹಿಸುವದು ಬರೇ ಮೂರ್ಖತನವು.

ಮೇಲ್ಕಂಡ ಗುಪ್ತ ಸರ್ಕ್ಯುಲಾರಿನಿಂದ ಒಂದು ಸಿದ್ಧಾಂತವನ್ನು ವಿಚಾರಿಗಳು ಮನ್ನಿಸಬಹುದು. ಬ್ರಿಟಿಶ ರಾಜ್ಯಭಾರದಲ್ಲಿ ಲೋಕಹಿತವನ್ನು ಪ್ರದರ್ಶಿಸುವ ನಿಯಮಗಳ ನಿರ್ಮಾಣವಾಗಿರುತ್ತದೆ. ಆದರೆ, ಆ ನಿಯಮಗಳಂತೆ ಸಿಗಬಹುದಾದ ಲಾಭವನ್ನು ಪಡೆಯಲಿಕ್ಕೆ ಅಳರಸರ ಕುಹಕಗಳೇ ಅಡ್ಡಬರುತ್ತವೆ. ನಿಯಮಗಳನ್ನೇ ನೋಡಿ ಸಂತೋಷಪಡಬೇಕಲ್ಲದೆ, ನಿಯಮಗಳಲ್ಲಿ ವಿಧಿಸಿದ ಲಾಭವು ಕೈಗೆ ಸಿಕ್ಕೀತೆಂದು ಯಾರೂ ತಿಳಿಯಲಾಗದು. ಹಾಗೆ ಸಿಗಬೇಕೆಂಬ ಹೇತುವಿನಿಂದ ಅವುಗಳ ನಿರ್ಮಾಣವೂ ಆಗಿರಲಿಲ್ಲ. ಬರೇ ತೋರಿಕೆಗಾಗಿ ಇಂಥ ನಿಯಮಗಳ ನಿರ್ಮಾಣವಾಗುತ್ತದೆ. ಸ್ಯಾಮನ್ ಕೂಟದ ಚೌಕಶಿಯ ಅಧಿಕಾರವು ಪರಮಾತ್ಮನಿಗಿಂತ ಹೆಚ್ಚಾದದ್ದು. ಸರ್ವಾಧಿಕಾರವು ಈ ಕೂಟಕ್ಕೆ ಕೊಡಲ್ಪಟ್ಟರೆ. ಚೌಕಶಿಯ ಕ್ರಮವನ್ನು ಸಹ ಕೂಟವೇ ನಿರ್ಧರಿಸಬಹುದು. ಸರಕಾರಿ ಅಧಿಕಾರಿಗಳು ಕೂಟಕ್ಕೆ ಇತ್ಥಂಭೂತ ಅಧ್ಯಂತ ಸ್ಥಿತಿಯನ್ನು ಕರೆದ ಕರೆಗೆ ಹೇಳಲು ಬದ್ಧರಿದ್ದಾರೆ. ಇದಲ್ಲ ತೋರಿಸುವ ಹಲ್ಲು; ಒಳಗಿನ ಹಲ್ಲೇ ಬೇರೆ. ಈಗಿನ ರಾಜ್ಯಧೋರಣಕ್ಕೆ ವಿರುದ್ಧವಾಗಿ ಒಂದು ಶಬ್ದವು ಸಹ ಅಧಿಕಾರಿಗಳ ಕಡೆಯಿಂದ ಕೂಟಕ್ಕೆ ತಿಳಿಸಲಾಗದು. ಅನಧಿಕಾರಿಗಳು ಅಂಥ ಸುದ್ದಿ ಹೇಳಿದರೆ ಅವುಗಳಿಗೆ ಬೆಲೆಯಿಲ್ಲ. ಇಂಥ ಸ್ಥಿತಿಯಲ್ಲಿ ಸ್ಯಾಮನ್ ಕೂಟವು ಬರೇ ಕಣ್ಣುಮುಚ್ಚಣಿಕೆಯ ಆಟವೆಂದು ಸಂಬೋಧಿಸಿದರೆ, ಅಯಥಾರ್ಥವಾಗುವದೇನು? ವಿಶೇಷವಾಗಿ ವಿಚಾರಿಸಿದರೆ, ಈ ಸರ್ಕ್ಯುಲಾರಿನಿಂದ ಸ್ಯಾಮನ್ ಕೂಟದಲ್ಲಿ ಒಳಗೊಂಡ ದುಷ್ಟತನ ವ್ಯಕ್ತವಾಗ ಕಣ್ಣುಮುಚ್ಚಣಿಕೆಯ ಆಟದಲ್ಲಿ ಕಾಣುವ ಚಿಕ್ಕ ಮಕ್ಕಳ ಹುಡುಗಾಟಿಕೆಯ ನಿಷ್ಕಪಟತನವಾಗಲಿ, ಉಲ್ಹಾಸವಾಗಲಿ ಈ ಕೂಟದಲ್ಲಿ ದೃಗ್ಗೋಚರವಾಗದು. ಆದರೂ, ಆದಷ್ಟು ಔದಾರ್ಯವನ್ನು ತೋರ್ಪಡಿಸುವದಕ್ಕಾಗಿ 'ಬರೇ ಕಣ್ಣುಮುಚ್ಚಣಿಕೆಯ ಆಟವೆಂದು ನಾವು ಸಂಬೋಧಿಸಿದ್ದೇವೆ. ಪ್ರಜೆಗಳೆಲ್ಲರೂ ಇದರ ಮರ್ಮವನ್ನರಿತು ಲೋಕನಾಯಕರು ವಿಧಿಸಿದ ಹಾಗು ವಿಧಿಸಬಹುದಾದ ಉಪಾಯಯೋಜನೆ ಮಾಡಿ ಬಹಿಷ್ಕಾರವನ್ನು ಪಾಲಿಸಬೇಕಾಗಿ ಆಗ್ರಹಪೂರ್ವಕ ನಾವು ಹೇಳುವೆವು.

— ಸ್ಯಾಮನ್ ಕೂಟವನ್ನು ಬಹಿಷ್ಕರಿಸುವ ಒಂದು ಉಪಾಯವು ಸ್ವರಾಜ್ಯ ಯೋಜನೆಯನ್ನು ತಯಾರಿಸುವದು. ಅದಕ್ಕಾಗಿ ರಾಷ್ಟ್ರೀಯ ಸಭೆಯವರು ರಾಷ್ಟ್ರದೊಳಗಿನ ಸಕಲ ಪಕ್ಷದವರ ಕಡೆಯಿಂದ ಸೂಚನೆಗಳನ್ನು ವಿನಂತಿಸಿದ್ದಾರೆ. ಇದೇ ತಿಂಗಳಲ್ಲಿ ಎಲ್ಲ ಪಕ್ಷದವರ ಸಭೆಯೊಂದು ಮುಂಬಯಿ ಯಾ ಕಲಕತ್ತೆಯಲ್ಲಿ ಸೇರುವದುಂಟು. ರಾಷ್ಟ್ರೀಯ ಸಭೆಯ ತೀರ್ಮಾನದಂತೆ ಶ್ರೀ ಸತ್ಯಮೂರ್ತಿಗಳವರು ಮದ್ರಾಸ ಕಾಯದೆ ಕೌನ್ಸಿಲಿನಲ್ಲಿ ಕೈಕೊಂಡ ಖಾತೆ ಮಂತ್ರಿಗಳ ಅಧಿಕಾರಗಳನ್ನು ತ್ಯಜಿಸಿದ್ದಾರೆ.

ಸ್ಫುಟ ಸೂಚನೆಗಳು.

೧. ಅಫಘಾನಿಸ್ಥಾನದ ಅಮೀರರಾದ ಅಮಾನುಲ್ಲಾಖಾನರವರ ಸತ್ಕಾರ ಸಮಾರಂಭವು ಫಿರಾಂಸಿಯಲ್ಲಿ ಮುದದಿಂದ ಸಾಗಿದೆ. ಸಾರ್ವಭೌಮ ಪಂಚಮ ಜಾರ್ಜರು ಅಮಾನುಲ್ಲಾಖಾನರವರಿಗೆ ಮಾರ್ಚ ೧೫ನೇ ತಾರೀಖಿನಿಂದ ೧೮ನೇ ತನಕ, ೪ ದಿನ ಬಕಿಂಗಹೆಮ್ ಅರಮನೆಯಲ್ಲಿ ಇಳಿಸಿಕೊಂಡು ಸತ್ಕಾರ ಮಾಡುವರು. ಈ ಸತ್ಕಾರ ಸಮಾರಂಭಗಳಿಂದ ಯಾರೂ ಮರುಳಾಗಬಾರದು. ಇಂದಿನ ಪ್ರಧಾನ ಲೇಖನದಲ್ಲಿ ಊಹಿಸಿದಂತೆ, ಬ್ರಿಟಿಶರಿಗೆ ತಿನ್ನುವ ಹಲ್ಲು ಬೇರೆ; ತೋರುವ ಹಲ್ಲು ಬೇರೆಯಾಗಿರುತ್ತವೆ! ಬ್ರಿಟಿಶ ರಾಜಕಾರಣಿಗಳೆಲ್ಲರೂ ಅಮಾನುಲ್ಲಾಖಾನರವರ ಸಂಚಾರವನ್ನು ಎವೆಯಿಕ್ಕದೆ ದಿಟ್ಟಿಸಿ ನೋಡುತ್ತಿದ್ದಾರೆ. ಅಮಾನುಲ್ಲಾಖಾನರವರು ಇಜಿಪ್ತದಲ್ಲಿದ್ದು ಇಜಿಪ್ತ ದೇಶದೊಡನೆ ಒಪ್ಪಂದವನ್ನು ಮಾಡಿಕೊಳ್ಳುವ ತಯಾರಿಯಲ್ಲಿದ್ದಾರೆ. ಅಫಘಾನ ಪ್ರಜೆಗಳು ಒಪ್ಪಂದದಿಂದ ಇಜಿಪ್ತದೊಡನೆ ಸ್ನೇಹಭಾವ ಬೆಳಿಸಲು ಉತ್ಸುಕರಾಗಿದ್ದಾರೆ. ಏನ್ನೆಂತಾ, ಅನೇಗೆ ಅಮೀರರು ಇಟಲಿಯ ನೇಪಲ್ಸಕ್ಕೆ ಮುಟ್ಟುವವರಿದ್ದರು. ಅಲ್ಲಿ ಅಫಘಾನ ಸರಕಾರದ ರಾಯಭಾರಿಗಳೆಲ್ಲರೂ ಅಮೀರರಿಗೆ ಭೆಟ್ಟಿಯಾಗುವವರಿದ್ದರು. ರಶಿಯಾ, ಜರ್ಮನಿ ಮುಂತಾದ ದೇಶಗಳಿಗೆ ಅಮಾನುಲ್ಲಾಖಾನರವರು ಸಂಚರಿಸಿ ಇರಾಣಕ್ಕೆ ಹೋಗುವರು. ಅಮಾನುಲ್ಲಾಖಾನರವರ ಸಂಚಾರದಿಂದ ಏಶಿಯಾಖಂಡದೊಳಗಿನ ಭಿನ್ನ ಭಿನ್ನ ರಾಷ್ಟ್ರಗಳೊಳಗೆ ಐಕ್ಯಸೂತ್ರ ನಿರ್ಮಾಣವಾಗಿ ಏಶಿಯಾ ಖಂಡದಲ್ಲಿ ನವಚೈತನ್ಯವುಂಟಾಗುವದೆಂದು ಬಹಳವರು ಹೇಳುತ್ತಾರೆ. ಏಶಿಯಾ ಖಂಡವು ಎಚ್ಚತ್ತರೆ, ಬ್ರಿಟಿಶ ರಾಜಕಾರಣಧುರಂಧರರ ಉಪಕಾರದ ಸಾಮ್ರಾಜ್ಯಕ್ಕೆ ದೊಡ್ಡ ಪ್ರತಿಬಂಧವುಂಟಾಗುತ್ತದೆ. ಅದರಿಂದ ಬ್ರಿಟಿಶ ರಾಜಕಾರಣಿಗಳು ಎವೆಯಿಕ್ಕದೆ ಅಮಾನುಲ್ಲಾಖಾನರವರಿಗೆ ದಿಟ್ಟಿಸಿ ನೋಡುತ್ತಿದ್ದಾರೆ. ಅಮಾನುಲ್ಲಾಖಾನರವರ ಸಂಚಾರವು ಅಪೇಕ್ಷೆಯಂತೆಯ ಯಶಸ್ವಿಯಾಗಿ ಏಶಿಯಾ ಖಂಡದ ಉದ್ಧಾರವಾಗಲೆಂದು ಭರತಪುತ್ರರೆಲ್ಲರೂ ಅಂತಃಕರಣಪೂರ್ವಕವಾಗಿ ಬಯಸುತ್ತಾರೆ

---

೨. ಸ್ವಾರ್ಥಿಗಳ ವ್ಯಾಪಾರವನ್ನು ಗ್ರಹಿಸುವದೇ ಕಷ್ಟ. ಫ್ರಾನ್ಸ-ಅಮೇರಿಕಾ ದೇಶಗಳಲ್ಲಿ ರಣದೇವಿಯನ್ನು ಹಿಂದಕ್ಕಟ್ಟುವ ದೊಡ್ಡದೊಂದು ಹವ್ಯಾಸ ನಡೆದಿದೆ. ಫ್ರೆಂಚರು ಕೆಲವು ಸೂಚನೆಗಳನ್ನು ಮಾಡಿ ಅವನ್ನು ಅಮೇರಿಕೆಯವರು ಅಂಗೀಕರಿಸಿ, ಶಾಂತಿದೇವಿಯನ್ನು ಪ್ರಸ್ಥಾಪಿಸುವ ತಮ್ಮ ಪ್ರಯತ್ನಗಳಿಗೆ ನೆರವಾಗಬೇಕಾಗಿ ಬೇಡಿಕೊಂಡರು. ಪ್ರತಿಯಾಗಿ ಅಮೇರಿಕೆಯ ಪ್ರಧಾನರಾದ ಮಿ। ಫ್ರೆಂಕ ಕೆಲೊಗ್‌ರವರು ತಮ್ಮ ಸೂಚನೆಗಳನ್ನು ಪ್ರಕಟಿಸಿದ್ದಾರೆ. ಆ ಸೂಚನೆಗಳನ್ನು ಫ್ರೆಂಚರು ಅಂಗೀಕರಿಸಿ ರಣದೇವಿಯನ್ನು ಹೊರತಳ್ಳುವ ತಮ್ಮ ಪ್ರಯತ್ನಗಳಿಗೆ ನೆರವಾಗಬೇಕಾಗಿ ಪ್ರಧಾನರು ಅಗ್ರಹ ಮಾಡಿದ್ದಾರೆ. ಒಂದು ಸಣ್ಣ ಶರ್ತವೆ ಫ್ರೆಂಚರು ಈ ಸೂಚನೆಗಳಲ್ಲಿ ಏನೂ ತಿದ್ದುಪಾಟಿಗಳನ್ನು ಸೂಚಿಸಲಾಗದು. ಅಂಥವುಗಳು ಹಿಮ್ಮೇಲೇ ತಿರಸ್ಕರಿಸಲ್ಪಡುವವು. ಅಮೇರಿಕೆಯವರ ಹೇಳಿಕೆಗೆ ಕಣ್ಮುಚ್ಚಿ ಫ್ರೆಂಚರು ಒಪ್ಪಿಕೊಂಡರೆ, ಅಮೇರಿಕೆಯವರು ಭೂತಲದಲ್ಲಿ ಶಾಂತಿಸಾಮ್ರಾಜ್ಯವನ್ನು ಸ್ಥಾಪಿಸಿ, ಭೂತಲಕ್ಕೆ ಉಪಕಾರ ಮಾಡುವರು. ತಿಳಿಯಿತೇನು? ಇದೇ ಪ್ರಕಾರ ಇತರ ರಾಷ್ಟ್ರಗಳಿಗೂ ಅಮೇರಿಕೆಯವರು ಶಾಂತತಾಪಾಲನದ ಕರಾರುಮೆಯನ್ನು ಕಳುಹುವವರಿದ್ದಾರೆ. ನಮ್ಮ ಬ್ರಿಟಿಶರಾದರೋ, ಬಲು ಧೂರ್ತ ಪ್ರಾಣಿಗಳಲ್ಲವೇ? ಯುರೋಪ ಖಂಡವಲ್ಲ ಅಮೇರಿಕೆಯವರು ಕರಾರುಮೆಗಳನ್ನು ಕೈಕೊಳ್ಳುವದೇ ಬ್ರಿಟಿಶರಿಗೆ ಸೇರುವದಿಲ್ಲ. ಹಾಗೆ ಅಮೇರಿಕೆಯ ಕೈಯೊಳಗೆ ನೆರೆಯ ರಾಷ್ಟ್ರಗಳು ಬಿದ್ದರೆ, ತಮ್ಮ ಕಾರ್ಯಸಾಧನೆಗೆ ಮುಂದೆ ಪ್ರತಿಕೂಲವಾಗಬಹುದೆಂದು ಬ್ರಿಟಿಶರ ಅನುಮಾನ. ಅದರಿಂದ ಈ ವ್ಯಾಪಾರಗಳನ್ನು ಅವರು ಜಾಗ್ರತೆಯಿಂದ ನಿರೀಕ್ಷಿಸುತ್ತಿದ್ದಾರೆ. ಪರಸ್ಪರ ಸಂದೇಹಗಳನ್ನು ಅಡಗಿಸಿಟ್ಟುಕೊಂಡು ಶಾಂತತೆಯ ಕರಾರುಗಳನ್ನು ಕೈಕೊಳ್ಳಲಾರಂಭಿಸುವದರಿಂದ ಯಶಸ್ಸು ಪ್ರಾಪ್ತವಾದೀತೇನು? ಸ್ವಾರ್ಥಕ್ಕೆ ಅಡ್ಡಿಯಾಗದಂತೆಯೂ, ಇನ್ನೂ ಯಥಾರ್ಥವಾಗಿ ಹೇಳಬೇಕಾದರೆ, ವಿಶೇಷ ಸ್ವಾರ್ಥ ಸಾಧಿಸಲು ಅನುಕೂಲವಾಗುವಂತೆಯೂ ಶಾಂತತೆಯ ನೆವದಿಂದ ಏನಾದರೊಂದು ಯೋಜನೆಯನ್ನು ಕೈಕೊಳ್ಳಲು ಸ್ವಾರ್ಥಪರಾಯಣರಾಗಿ ಅಮೇರಿಕಾ ಪ್ರಭೃತಿ ರಾಷ್ಟ್ರಗಳು ತೊಡಗಿವೆ. ಇಂಥ ಯೋಜನೆಗಳಿಂದ ಯುದ್ಧಕ್ಕೆ ತಡೆ ಬಿದ್ದೀತೇ? ಯುದ್ಧ ವಾಗುವದಂತು ನಿಶ್ಚಯ ಅದರಿಂದರೇ ಯುದ್ಧ ಬೇಡ, ಯುದ್ಧಬೇಡವೆಂಬ ಕೋಲಾಹಲವೆದ್ದಿದೆ ಆದರೆ, ಯುದ್ಧ ಹೂಡಿದ ಪಾಪ ಹೊರಲು ಯಾರೂ ಸಿದ್ಧರಿಲ್ಲ ಲೋಕಾಪವಾದವನ್ನು ಪರಿಹರಿಸಿಕೊಳ್ಳುವದಕ್ಕಾಗಿ ಶಾಂತಿದೇವಿಯ ಉಪಾಸನೆಯು ನಡೆದಿದೆ ನಡೆಯಲಿ, ಸ್ವಾರ್ಥಿಗಳ ಕುಹಕಗಳು ದಿನಾ ಹೊರಬೀಳುವವು. ಅದಾಪರಸ್ತು ಒಂದು ಉಪಕಾರವೇ.

---

೩. ಪರಸ್ಪರ ಸಹಕಾರದ ಗುಣಸಂಕೀರ್ತನವನ್ನೇ ಸಹಕಾರಿಗಳು ಪರಸ್ಪರವಾಗಿ ನಡಿಸಿ, ಜನರಿಗೆ ಇದೊಂದು ಲೋಕಕಲ್ಯಾಣದ ಸರಕಾರಿ ಅನುಗ್ರಹವೆಂದು ಬೋಧಿಸುತ್ತಾರೆ. ಈ ವಿಷಯ ನಾವು ಈ ಹಿಂದೆಯೇ ನಮ್ಮ ವಿಚಾರಗಳನ್ನು ಪ್ರದರ್ಶಿಸಿರುವೆವು. ಸಹಕಾರಿ ಖಾತೆಯ ಅಧಿಪತಿಗಳಾದ ಮಿ। ಕೋಲಿನ್ಸರವರು ಸಭ್ಯಕ್ಕೆ ಬರೆದ ಒಂದು ರಿಪೋರ್ಟ ಕಳೆದ ಮಂಗಳವಾರದ 'ಹೆರಲ್ಡ' ಪತ್ರಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ ಮಿ। ಕೋಲಿನ್ಸರವರಿಗೆ ಈಗಿನ ಸಹಕಾರಿ ಧರ್ಮದ ಸರಕಾರಿ ಅನುಷ್ಠಾನಗಳು ಒಪ್ಪಿಗೆಯಿಲ್ಲ. ಅವರ ರಿಪೋರ್ಟಿನಲ್ಲಿ ಒಳಗೊಂಡ ಕೆಲವು ಸಂಗತಿಗಳನ್ನು ನಾವು ಉಲ್ಲೇಖಿಸುವೆವು ನೀರಾ ಹಾಗು ಪಧರ್ಾ ನದಿಗಳಿಗೆ ಕಾಲುವೆ ಹೊಡೆದು ಬೇಸಾಯವನ್ನುದ್ಧರಿಸುವ ಸಹಕಾರಿ ಸಂಘಗಳಾದವು. ಈ ಕಾಲುವೆ 'ಸೊಪ್ಯಾಟಿಗಳ' ಎಷ್ಟೊ ಪ್ರಯತ್ನಮಾಡಿದರೂ ಕಾಲುವೆಯೊಳಗಿಂದ ಎದ್ದೇಳಲಿಲ್ಲವು. ಬಹುದಿಂದ ತುದಿಯ ತನಕ ಈ ಸಂಘಗಳ ಕಥೆಯೇ ಹೀಗೆ, ಸಂಘಗಳ ಜನನವು ಚಿತ್ತವೇಧಕವಿದೆ. ಈ ಸಂಘಗಳ ಸಭಾಸದರಾಗಿದ್ದ ರೈತರ ಕಡೆಯಿಂದ ಸರಕಾರಕ್ಕೆ ೩॥ ಲಕ್ಷಕ್ಕೆ ಮಿಕ್ಕಿ ತಗಾವಿ ಸಾಲ ಸಲ್ಲುವದಿತ್ತು. ರೈತರಿಗೆ ಅದನ್ನು ಸಲ್ಲಿಸಲಾಗಲಿಲ್ಲ, ಸರಕಾರಕ್ಕೆ ಅದನ್ನು ಧರ್ಮ ಮಾಡಲು ಬಿದಾಯಕವಿರಲಿಲ್ಲ. ಅದರಿಂದ ಪರಸ್ಪರವಾಗಿ ಹಣ ಎತ್ತುವಳಿ ಮಾಡುವ ಪರಸ್ಪರ ಸಹಕಾರದ ಅಸ್ತ್ರ ಯ ಕೊಳ್ಳಲ್ಪಟ್ಟಿತು. ಪ್ರಾಂತಿಕ ಸರಕಾರಿ ಬೇಂಕಿನಲ್ಲಿ ಬೇಕಷ್ಟು ಹಣ ಇತ್ತು. ಅದಕ್ಕೆ ಗಿರಾಕಿ ಇರಲಿಲ್ಲ ಅದರಿಂದ "ನೀರಾ ಕೆನೊಲ" ಹಾಗು "ಪಧರ್ಾ ಕೆನೊಲು" ಎಂಬ ಸಂಘಗಳು ಪರ್ಯಾಪ್ತಿಕರಾದವು ಧ್ಯೇಯವೇನೆಂದು ಬಲ್ಲಿರಾ? ನೀರಾ-ಪಧರ್ಾ ನದಿಗಳಿಗೆ ಕಾಲುವೆ ತೆಗೆದು, ಆ ಕಾಲುವೆಗಳಿಂದ ದೊರೆತ ನೀರಿನಿಂದ ಸುತ್ತಮುತ್ತಲಿನ ಹೊಲಗಳಲ್ಲಿ ವಿಶೇಷ ಪೈರು ಬೆಳಿಸಿ ಬಡ ಬೇಸಾಯಗಾರರಿಗೆ ಸಮೃದ್ಧ ಮಾಡುವದು. ಬೇಸಾಯಗಾರರ ಉಪಕಾರಕ್ಕಾಗಿ ಈ ಸಂಘಗಳ ನಿರ್ಮಾಣವಾಯಿತು. ಇದು ಲೋಕೋಪಕಾರದ ವೇಷ. ಸಂಘಗಳ ನಿರ್ಮಾಣವಾಯಿತೆಂದು ಕಾಲುವೆ ಅಗಿಯಲು ಅವಶ್ಯವಾದ್ದ ನಿಧಿಯೇನು ದೊರಕುವದಿಲ್ಲ. ಅದರಿಂದ ಪ್ರಾಂತಿಕ ಸಹಕಾರಿ ಬೇಂಕಿನ ಬಳಿ ಸಾಲ ಕೇಳಲಾಯಿತು, ಸರಕಾರವು ಯಾವಾಗಲೂ ಬೇಸಾಯಗಾರರಿಗೆ ಅನುಕೂಲವಾಗಿ ನಡೆಸಲು ತಯಾರು, ಪ್ರಾಂತಿಕ ಬೇಂಕಿಗೆ ತನ್ನ ಹಣ ಕೊಡಲಿಕ್ಕಾದರೂ ಸರಕಾರಿ ಅಪ್ಪಣೆ ಬೇಕು. ಅಪ್ಪಣೆ ಕೇಳಲು, ಸರಕಾರವು ಕೊಟ್ಟುಬಿಟ್ಟಿತು; ಒಂದು ಮಾತ್ರ ಕರಾರು ಹಾಕಲಾಯಿತು. ಮೊಟ್ಟಮೊದಲು ಸರಕಾರಕ್ಕೆ ಸಲ್ಲತಕ್ಕ ತಗಾವಿ ಸಾಲವನ್ನು ಬೇಸಾಯಗಾರರು ತೆತ್ತು ಬಿಡಬೇಕು. ಬೇಂಕು ಆ ಸಾಲವನ್ನು ಮೊಟ್ಟಮೊದಲು ಮುಟ್ಟಿಸಿ, ಉಳಿದ ಹಣವನ್ನು ಕಾಲುವೆಗಳಿಗಾಗಿ ಈ ಸಂಘಗಳ ಸ್ವಾಧೀನಪಡಿಸಿತು. ಸಂಘಗಳು ಸರಕಾರಿ ಅಧಿಕಾರಿಗಳ ಕಿತ್ತಾಯದಿಂದಲೇ ನಿರ್ಮಾಣ ಹೊಂದಿದವೆಂದು ರಿಜಿಸ್ಟ್ರಾರರೇ ಹೇಳಿದ ಬಳಿಕ, ನಾವೇನು ಹೇಳುವದದೆ? ಈ ಎರಡು ಸಂಘಗಳ ಸ್ಥಿತಿಯನ್ನು ಪರಾಂಬರಿಸುವವರಲ್ಲಿ ಸಹಕಾರಿ ಅಧಿಕಾರಿಗಳ ಚೈತನ್ಯಹರಣವಾಗುತ್ತದೆಂದು ಮಿ। ಕೋಲಿನ್ಸರವರು ನಮೂದಿಸಿದ್ದಾರೆ. ಸರಕಾರಕ್ಕೆ ಸಲ್ಲುವ ತಗಾವಿ ಸಾಲಗಳನ್ನು ವಸೂಲ ಮಾಡುವ ಸರಕಾರವು ಪರಸ್ಪರ ಸಹಕಾರದ ರೂಪವನ್ನು ತಾಳಿತೆಂದು ಹೇಳುವದು ಯಥಾರ್ಥವಲ್ಲವೇ? ಸಹಕಾರ ಧರ್ಮದ ಉದ್ಯೋಗದ ಕಾರ್ಯವನ್ನು ದೇಶದಲ್ಲಿ ನಡಿಸಿ, ಲೋಕೋದ್ಧಾರ ಮಾಡುವ ಕೋಓಪರೇಟಿವ್ ಇನ್‌ಸ್ಟಿಟ್ಯೂಟ ಸಂಸ್ಥೆಯಿಂದ ಸಹಕಾರಕ್ಕೇನೂ ಪ್ರಯೋಜನವಿಲ್ಲೆಂದು (Weakest link in co-operation) ರಿಜಿಸ್ಟ್ರಾರರು ನಮೂದಿಸಿದ್ದಾರೆ ಸಹಕಾರಿ ಪುರುಷರ ಪಾಗು ಅನಭಿಜ್ಞರ (faddists and ignoramuses) ವೇಷವಿದೆಂದು 'ಹೆರಲ್ಡ' ಪತ್ರಿಕೆಯು ಅಭಿಪ್ರಾಯ ಪಟ್ಟಿದೆ. ಇನ್ನಾದರೂ ಈ ಪರಸ್ಪರ ಸಹಕಾರದ ಪುರಾಣವನ್ನು ಸಾಕುಮಾಡಿದರೆ, ಪ್ರಜೆಗಳು ಸಹಕಾರಿ ಹರಸುವರು

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಮಾನ್ಯ, ಬೋಳ ಬೀಳುತ್ತದೆ, ಮೇಲೆ ಕಳೆ, ಫಲವೃಕ್ಷಗಳಿಗೆ ಬಂದ ಹೂ ಉದುರಿ ಹೋಗಲು ಅನುಕೂಲ. ಭತ್ತವು ಅಲ್ಪಸ್ವಲ್ಪ ಇಳಿಯುತ್ತಿದೆ ದರ ಏರಿತು. ಒಕ್ಕಲಿಗರು ಬೆಳೆ ಬಿಡಿಯಲಾರಂಭಿಸಿದ್ದಾರೆ. ಬೆಳೆಯ ಪರಿಣಾಮ ಅಷ್ಟಕ್ಕಷ್ಟೆ. ಹುಬ್ಬ-ಉತ್ತರಾ ನಕ್ಷತ್ರಗಳ ಮಳೆ ಬೀಳದೆ ಬಹಳ ನಷ್ಟ. ಕ್ಷಯ ಸಂವತ್ಸರಕ್ಕಿಂತ ಪ್ರಭವ ಸಂವತ್ಸರದಲ್ಲಿ ಕಷ್ಟ!! ಮೆಣಸು ಮಾತ್ರ ಬಹಳ ಇಳಿಯುತ್ತದೆ. ದರವೂ ಅರ್ಧಕ್ಕಿಂತಲೂ ಕಡಿಮೆಯಾಯಿತು. ಆದರೆ, ಅಕ್ಕಿ ತುಟ್ಟಿಯಾದಾಗ, ಮೆಣಸು ಅಗ್ಗವಾಗಿ ಪ್ರಯೋಜನವೇನು?

ಇಲ್ಲಿಯ ಮ್ಯುನಿಸಿಪಾಲಿಟಿಯವರು ಮೀನು ಪೇಟೆಗೆ ಹೋಗುವ ಓಣಿಯೊಳಗಿಂದ ಒಂದಲ್ಲ, ಎರಡಲ್ಲ; ೪೦೦-೫೦೦ ಫೂಟು ಮಣ್ಣು ಅಗೆದು ನಾಗರ ಜಾತಿಯ ನಾಗಪ್ಪ ನಾಯ್ಕನ ಮೇಲೆ ಇಲ್ಲಿಯ ದಾ

ನಾಡಕರ್ಣಿಯವರ ಕೋರ್ಟಿನಲ್ಲಿ ಫಿರ್ಯಾದ [illegible] ಮಾಡಿದ್ದರು ಮೆಜಿಸ್ಟ್ರೇಟ ವಿಚಾರದಿಂದ ಎನ್ನುವದನ್ನು [illegible] ತಿಳಿಸುತ್ತಿದ್ದಾರೆ ಮ್ಯುನಿಸಿಪಾಲಿಟಿಯ ವರ [illegible] ಕೊಟ್ಟು ವ್ಯವಹರಿಸಿದ್ದರು ಮ್ಯುನಿಸಿಪಾಲಿಟಿಯ [illegible] ಯಿಂದಲೇ ಮ್ಯುನಿಸಿಪಾಲಿಟಿಯ ಹೇಳಿಕೆ [illegible] ಇದಿಲ್ಲವೆಂಬ ಮೆಜಿಸ್ಟ್ರೇಟರ ಅಭಿಪ್ರಾಯ [illegible] ಮ್ಯುನಿಸಿಪಾಲಿಟಿಯ ವರ ೧೦೦—೨೦೦ ರೂಪಾಯಿ [illegible] ಖರ್ಚ ಮಾಡಿ ವ್ಯವಹರಿಸ [illegible] ಪಾಲಿಟಿಯಲ್ಲಿ ಉಂಟಾದ ಪಕ್ಷಭೇದದ [illegible] ನಿದು? ಮ್ಯುನಿಸಿಪಾಲಿಟಿಯ [illegible] ಸೊತ್ತಿನ ರಕ್ಷಣೆಯ ಜಾಗ್ರತೆಯ [illegible] ಹೊಸದಾದಂಥ ಮಾರ್ಗಕ್ಕೆಂದು [illegible] ಅತಿಕ್ರಮ ಮಾಡಿ [illegible] ಮಾಡಿ ಅವರಿಗೆ ನ್ಯಾಯ [illegible] ನಾಡಕರ್ಣಿಯವರ [illegible] ಪ್ರಕರಣದಲ್ಲಿ [illegible]

ಇಲ್ಲಿಯ ಸಬಜಡ್ಜ [illegible]

[illegible]

ಹಂದಿಗೋಣದ [illegible] ಕೆಳದ [illegible] ಕೊಂಡ ಬಿಡಳ [illegible] ಗ್ರಾ [illegible] ಕುಂದಗೋಳ [illegible] ಕುಡಿದ ಹೋಯಿತೆ [illegible] ಜಾತಿಯ [illegible] ಹೊಯಿತು [illegible] ದೆಯುವರಿಗೆ ತಿಳಿಸಿದನು [illegible] ಪರಲೋಕಕ್ಕೆ [illegible] ಕಾರಿಯಲ್ಲಿನ [illegible] ಪ್ರಶಂಸೆಗೆ ಪಾತ್ರರಿದ್ದಾರೆ.

ಗೋಕರ್ಣ— ಶ್ರೀ [illegible] ಹನುಮ [illegible] ವಾರ್ಷಿಕ [illegible] ಕೆ ೧೨ ನೆಗೆ ನೆರವೇರಿತ [illegible] ವಾರದ ರಾವ ಶ್ಯಾನಭೋಗ [illegible] ಅಧ್ಯಕ್ಷರಿದ್ದರು ನಿಧಿಯ ಕಾರ್ಯಕಲಾಪ [illegible] ಅಧ್ಯಕ್ಷರ [illegible] ಬೇಕೆಂದು ಅಧ್ಯಕ್ಷರ ಬೋಧಿಸಿದರು ಅನಂತರ ಶ್ರೀ ಅನಂತ ನಾರಾಯಣ [illegible] ಯಲ್ಲಿ ಕಾರ್ಯಕಾರಿ ಮಂಡಳಿ [illegible] ತ್ರೆ ಮಹಾ ಸಾಧು ಕಬೀರದಾಸ [illegible] ಗಿ ವಾರ್ಷಿಕ ಉತ್ಸವ ಸಮಾರಂಭವು ಕೊನೆಗೊಂಡಿತ

ಅಂಕೋಲಾ— ಇಲ್ಲಿಯ [illegible] ಬೊಬ್ರು [illegible] ದೇನಂದರೆ — [illegible] ಲ್ಲಿವಿಕ್ಟೋರಿಯಾ [illegible] ವಚನವಿ

ದೆ - ಅನ್ಯರಾಜ್ಯಕ್ಕೆ ಪಕ್ಕಗಳಿಗೂ ಬಾಧೆ ಕರುವಗ [illegible] ನಾವೆಂದೂ ಮನ್ನಿಸುವದಿಲ್ಲ" ಆದರೆ ಈ ವಚನವು [illegible] ದಲ್ಲಿ ವಿಪರೀತವಾದದ್ದು ಕಂಡ ಬರುತ್ತದೆ [illegible] ಈಗಿನ ಕಾಲವಾಗಿ ಬಿಟ್ಟಿದೆ [illegible] ದ್ದರಿಂದ ಉಂಟಾದ [illegible] ಭಯಂಕರ ಅನ್ಯಾಯ ವಾಗುವದೆಂದು [illegible] ಎಲ್ಲರೂ ಬೇಡ, [illegible] ಆದರೆ ಛತ್ರಿಯು ಮಂಜೂರಾಗಿ [illegible] ಆ ಛತ್ರಿಯನ್ನು ಸ್ವೀಕರಿಸದೆ [illegible] ಪ್ರವಃ ಕೊಳ್ಳುವ [illegible] ಈ ಛತ್ರಿಯು [illegible] ಸಂಬಂಧವುಳ್ಳದ್ದು [illegible] ಹೊಸಬರು [illegible] ಛತ್ರಿಯು ಮಂಜೂರಾಗಿತ್ತು [illegible] ಅನ್ಯರಿಗೆ [illegible]

[illegible]

ಕಾರವಾರ— [illegible] ವಿಪರೀತ [illegible]

[illegible]

ಈ [illegible] ಸಾಹೇಬರಾದ ಮಿ| [illegible] ದಿನಗಳಿಂದ [illegible]

ಹೊಸ ಡಿಸ್ಟ್ರಿಕ್ಟ ಜಡ್ಜರಾದ [illegible] ಇಲ್ಲಿ ಬಂದು [illegible] ಅಧಿಕಾರವನ್ನು [illegible] ಈ ತನಕ ಡಿಸ್ಟ್ರಿಕ್ಟ ಜಡ್ಜರಾಗಿದ್ದ ಮಿ| ಕಿಂಡರ್ಸ್ಲೀಯವರಿಗೆ ಇಲ್ಲಿಯ ವಕೀಲರು [illegible] ಕಿಂಡರ್ಸ್ಲೀಯವರು [illegible] ದ್ದಾರೆ [illegible]

ಪಟ್ಟಿದ್ದಾರೆ ಮಿ| ಕಿಂಡರ್ಸ್ಲೀಯವರು ದಡಾಳುಗಳು ಅವರದೊಂದು ನಾಯಿಯಿತ್ತು ಆ ನಾಯಿಯನ್ನು ಅವರು ಬಹು ಪ್ರೀತಿಯಿಂದ ಸಾಕಿ ಸಲಹಿದ್ದರು [illegible] ಆ ನಾಯಿಯು ಸತ್ತುಹೋಯಿತು. ಉಪಚಾರ ಮಾಡಿದರೂ ಬದುಕಲಿಲ್ಲ ಆ ನಾಯಿಗೆ ಮಿ| ಕಿಂಡರ್ಸ್ಲೀಯವರು ೧೦೦ ರೂಪಾಯಿ ಖರ್ಚ ಮಾಡಿ ಗೋರಿ ಕಟ್ಟಿಸಿದ್ದಾರೆ ನಾಯಿಯ ಸಾವಿನಿಂದುಂಟಾದ ಪಶ್ಚಾತ್ತಾಪವನ್ನು ವಕೀಲರ [illegible] ವ್ಯಕ್ತಪಡಿಸಿದರು ಗುರುವಾರಕ್ಕೆ ಮಿ| ಕಿಂಡರ್ಸ್ಲೀಯವರು ಆಗಬೋಟ ಹತ್ತಿ ಗೋವಾ [illegible] ಕ್ಕೆ ತೆರಳಿದರು ಹೊಸ ಜಡ್ಜರಾದ ಮಿ| ಸೇನರವರು ವಿವಾದಗಳನ್ನು [illegible] ಡಿಸ್ಟ್ರಿಕ್ಟ ಜಡ್ಜರಾಗಿ ಅವರು [illegible] ದ್ದು ಇಲ್ಲಿಗೆ [illegible]

ಶಿರ್ಸಿ — [illegible] ಏನೊ [illegible] ಬಂದಿಲ್ಲೆಂದು [illegible] ಜನರು [illegible] ತೆಗಿಸಿಕೊಳ್ಳುತ್ತಿದ್ದಾರೆ [illegible] ವಿಚಾರವು ಅಲ್ಲಲ್ಲಿ ನಡೆದಿದೆ ಶ್ರೀ| [illegible] ಜಾತ್ರೆ [illegible] ಮಾಡಿದರೆ, [illegible] ಗುರುವಾರಕ್ಕೆ [illegible] ಕೊಂಡು [illegible] ಕಾರಣ ತಿಳಿಯಲಿಲ್ಲ

ಪಂಡಿತ ಜನರಲ್ ಲ್ಯಾಬ್ರರಿಯಲ್ಲಿ [illegible] ಎಂಬ ವಿಷಯವುಳ್ಳ [illegible] ಹಾಗು [illegible] ಕೇಳಲು [illegible] ಕೊಟ್ಟಿರುವ [illegible] ಬಿಲ್ಲ

[illegible] ಈ ಸಾರೆ [illegible]

ನಮ್ಮ [illegible] ಪ್ರಸಿದ್ಧ [illegible] ಶ್ರೀಮಾನ [illegible] ದಿಂದ ಕಳೆದ ರವಿವಾರ [illegible] ಇಲ್ಲಿ ಬಂದು [illegible] ಅವರು [illegible]

ಕಾಸರಕೋಡ— [illegible] ಶ್ರೀ [illegible] ಭಜನೆಯಾಯಿತು [illegible] ಬ್ರಾಹ್ಮಣಸಂತರ್ಪಣೆಯಾಯಿತು [illegible] ಗೋಪಾಲಕೃಷ್ಣನು [illegible] ಜಾರ [illegible] ವೈಭವದಿಂದ [illegible] ಯಿತು

— [illegible] ವೆಂಕಟೇಶ [illegible] ಜ್ಞಾನಕೋಶ [illegible] ಗ್ರಂಥ [illegible]

— [illegible] ಪ್ರದರ್ಶನ [illegible] ಪ್ರದರ್ಶನ [illegible] ಇರುತ್ತಾರೆ [illegible]

— [illegible] ಜನರು [illegible]

ವೃತ್ತಸಾರ.

— ವೀರಶೈವ ಮಹಾಸಭೆಯು ಇದೇ ತಿಂಗಳ ೨೮ ೨೯ ...ನೇಗೆ ಬೆಂಗಳೂರಿನಲ್ಲಿ ಅಂತ್ಯಗೊಂಡಿತು. ರಾ॥ ಬ॥ ...ಂಬಳಿಯವರು ಅಧ್ಯಕ್ಷರಾಗಿದ್ದರು. ವೀರಶೈವ ಸಮಾಜ...ಲ್ಲಿ ಶಿಕ್ಷಣಪ್ರಸಾರ, ಗೋಪ್ರತಿಪಾಲನ, ಕರ್ನಾಟಕ ಏಕೀ...ಕರಣ, ಖಾದಿ ಪ್ರಸಾರ, ಬೆಳಗಾಂವ ಕಾಲೇಜ ಸ್ಥಾಪನೆ ...ಮುಂತಾದ ಠರಾವುಗಳು ಮಂಜೂರಾಗಿವೆ. ದೇಶಕ್ಕೆ ವಿಶೇ...ಷವಾಗಿ ಸಂಬಂಧಿಸಿದ ಪ್ರಸ್ತುತ ರಾಜಕೀಯ ವಿಷಯಗಳ ...ಕುರಿತು ಮಹಾಸಭೆಯು ತೀರ್ಮಾನಗಳನ್ನು ಕೈಕೊಳ್ಳ...ದ್ದಕ್ಕೆ ವಿಜಾಪುರದ ರಾ॥ ಸಾ॥ ಹಳಕಟ್ಟಿಯವರು ವಿಷಾ...ದ ಪ್ರದರ್ಶನ ಮಾಡುತ್ತಾರೆ. ಕೆಲ ವೀರಶೈವರು ಧಾರವಾ...ಡದ ಸಮಾಜಸ್ಥರಾದ ಮಿ॥ ಗುತ್ತೀಗಾರರ ಕೋರ್ಟಿನಲ್ಲಿ ...ದಾವೆಯನ್ನು ದಾಖಲ ಮಾಡಿ, ಈ ಸಭೆಯನ್ನು ನೆರಿಸದಂ...ತೆ ಜಂಗಾಮಿ ಪ್ರತಿಬಂಧಕ ಹುಕುಮನ್ನು ಪಡೆದಿದ್ದರು. ...ಆ ಹುಕುಮು ಸಭೆ ಸೇರುವ ದಿನವೇ ವಿಚಾರದಿಂದ ಸಮಾಜ...ಸ್ಥರು ರದ್ದು ಮಾಡಿದರು.

— ಶೃಂಗೇರಿಯ ಶ್ರೀಮಜ್ಜಗದ್ಗುರುಗಳು ಹಿಂಸೆಯನ್ನು ...ಮಾಡಿ ಕೂಡಲಾಗದೆಂದು ಆಜ್ಞಾಪಿಸಿ ಹೊರಡಿಸಿ...ದ್ದಾರೆ. ದಾವಣಗೆರೆಯ ಪ್ರಾಣಿದಯಾ ಜ್ಞಾನಪ್ರಸಾರಕ ...ಸಂಘದವರು ಈ ಆಜ್ಞಾಪತ್ರವನ್ನು ಪ್ರಕಟಿಸಿ ದೇವಿಗಳ ...ಸಂತೋಷಕ್ಕಾಗಿ ಪಶುವಧೆಯನ್ನು ಕೈಕೊಳ್ಳಬಾರದಾಗಿ ...ಉಪದೇಶಿಸಿದ್ದಾರೆ.

— ಸಾತಾರೆಯಲ್ಲಿ ಹಿಂದುಸ್ಥಾನೀ ಸೇವಾದಲದ ಶಿಬಿರವೊಂ...ದು ಸ್ಥಾಪನೆಯಾಗಿರುತ್ತದೆ.

— ವಿಜಾಪುರ ಮ್ಯುನಿಸಿಪಾಲಿಟಿಯಲ್ಲಿ ಸ್ವಲ್ಪ ಗೊಂದಲ ...ವಾಗಿದೆ. ಅಧ್ಯಕ್ಷರು ಮ್ಯುನಿಸಿಪಾಲಿಟಿಯ ನಿಧಿಯ ...ನ್ನು ತಮ್ಮ ...ಸ್ವಂತ ಕಾರ್ಯಕ್ಕೆ ಉಪಯೋಗಿಸಿದರಂತೆ. ಅಧ್ಯಕ್ಷರು ...ರಾಜೀನಾಮೆ ಕೊಡಬೇಕೆಂದು ... ಅನೇಕರ ... ನಮ್ಮಾಗ ಮಾಡಿದರು.

— ಧುಳೆಯ ಹೈಸ್ಕೂಲಿನಲ್ಲಿ ಭಗವದ್ಗೀತೆಯನ್ನು ಕಲಿಸ...ಲು ... ಗೀ ... ಶಿಕ್ಷಕರನ್ನು ಇಟ್ಟುಕೊಳ್ಳುವದಕ್ಕಾಗಿ ಅಲ್ಲಿಯ ...ಶ್ರೀಮಂತ ಬಾಲಮುಕುಂದ ಹಿಗಣೀಕರ ದಾನಧರರು ...೦೦೦ ರೂಪಾಯಿಗಳನ್ನು ಅರ್ಪಿಸಿದ್ದಾರೆ. ಶ್ರೀ॥ ದಾಮೋದ...ರ ಭೋಳಾನಾಥರವರು ನಾಲ್ಕು ರೂಪಾಯಿಗಳನ್ನರ್ಪಿಸಿ...ದ್ದಾರೆ.

— ಮಧ್ಯಪ್ರಾಂತದ ಚಮಾಕ ಗ್ರಾಮದಲ್ಲಿ ಮಾಕರ ...ಸಂಕ್ರಮಣ ಕಾಲಕ್ಕೆ ಪಕ್ಷ್ಯಿ-ವಿಮಾನಗಳ ಪ್ರದರ್ಶನ ...ವಾಗುವದಿದೆ. ಹಿಂದುಸ್ಥಾನದಂಥ ಬಡ ದೇಶದಲ್ಲಿ ಇಂಥ ...ಪ್ರದರ್ಶನವೇಕೆ?

— ಬ್ರಿಟಿಶ ಇವಾ-ಖರ್ಚಿನ ಪತ್ರಿಕೆಯಲ್ಲಿ ಈ ವರುಷ ...ದ ಆಯ-ವ್ಯಯಗಳ ಜಾಯಿಗೂಡುವದಿಲ್ಲ. ೪೦ ಲಕ್ಷ ...ದಷ್ಟು ಕೊರತೆ ಬೀಳಲಿರುವದಂತೆ !!

— ನಾಗಪುರದೊಳಗಿನ ಶಸ್ತ್ರಾಸ್ತ್ರ ಕಾನೂನನ್ನು ಉಲ್ಲಂಘಿ...ಸಲು ಪ್ರಜಾಸೈನ್ಯವನ್ನೇರ್ಪಡಿಸಿದ ಸೇನಾಪತಿ ಶ್ರೀ॥ ಆವಾ...ರಿಗಳವರು ಜೈಲಿನಲ್ಲಿ ಉಪೋಷಣ ಮಾಡುತ್ತಿದ್ದಾರೆ. ಅವ...ರು ತೀರಿಕೊಂಡರೆಂದು ಮಧ್ಯದಲ್ಲಿಯೇ ಸುದ್ದಿ ಬಿದ್ದಿತ್ತು. ...ಆರೋಗ್ಯ ಸ್ಥಿತಿಯು ತೀರ ಕೆಟ್ಟಿದೆ. ಅವರಿಗೆ ನೋಡಲು ...ಜೈಲಿನ ಅಧಿಕಾರಿಗಳು ಎಷ್ಟೆಷ್ಟು ಕೊಡುವದಿಲ್ಲ. ದೂರ...ದಿಂದ ಸಹ ನೋಡಗೊಡ ವದಿಲ್ಲ. ಬಲಾತ್ಕಾರದಿಂದ ...ಆಹಾರ ...ಮಾಯವರ ಹೊಟ್ಟೆಯಲ್ಲಿ ಅಧಿಕಾರಿಗಳು ಆಹಾರವ...ನ್ನು ತುಂಬುತ್ತಾರೆ.

— ಮಂಗಳವಾರ ತಾರೀಖು ೨೭ನೇಗೆ ಕರಾಚಿಯಿಂದ ...ಮಧ್ಯಪ್ರದೇಶಗಳಿಗೆ ೪ ವಿಮಾನಗಳು ಹೊರಟು ...ರಂಗಳೂರಿಗೆ ಹೋಗಿ ಅಲ್ಲಿಂದ ಬುಧವಾರ ೧೧ ಘಂಟೆಗೆ ...ಹೊಟ್ಟಿಗೆ ತಲಪಿದವು. ಮುಂಜಾವು ೬॥ ಘಂಟೆಗೆ ಅವು ...ಕರಾಚಿಯಿಂದ ಹೊರಟಿದ್ದವು. ಮಧ್ಯಾಹ್ನ ೧॥ ಘಂಟೆಗೆ ...ಅವು ಮಂಗಳೂರಿಗೆ ಮುಟ್ಟಿದವು. ೪೫೦ ಮೈಲಿನ ಪ್ರವಾ...ಸವು ೮॥ ತಾಸಿನಲ್ಲಿ ಮುಗಿಸಲ್ಪಟ್ಟಿತು. ವಿಮಾನಗಳ...ನ್ನು ನೋಡಲು ಸಾವಿರಾರು ಜನರು ಹೋಗಿದ್ದರು.

— ಗವ್ಹರ್ನರರ ಪಟಾರಿನಲ್ಲಿ ಅಲಹಾಬಾದದ ಮ್ಯುನಿಸಿಪಾಲಿಟಿಯ ಸಭಾಸದರಿಗೆ ಗವ್ಹರ್ನರರು ಹಿಂಬದಿಗೆ ಆಸನಗಳನ್ನು ನೇಮಿಸಿಕೊಟ್ಟದ್ದರಿಂದ ಸಭಾಸದರಿಗೆ ಅಪಮಾನವಾಗಿ ಪಟಾರವನ್ನು ಬಹಿಷ್ಕರಿಸುವ ತೀರ್ಮಾನವಾಗಿದೆ.

— ಕಾಶೀ ಮೇಳೆಯ ಸಮಯ ಪ್ರಯಾಗ ಕ್ಷೇತ್ರದಲ್ಲಿ ದೋಣಿಗಳ ಮೇಲೆ ಯಾತ್ರಿಕರನೇಕರು ಹೋಗಿ ಸಂಗಮದಲ್ಲಿ ಸ್ನಾನ ಮಾಡುತ್ತಾರೆ. ದೋಣಿಕಾರರ ಮೇಲೆ ಟೆಕ್ಸ ಹೇರಲಾಗಿದೆ. ಈ ಟೆಕ್ಸಿಗೆ ನಿಷೇಧವೆಂದ ಕಾಶೀ ಮೇಳೆಯ ಕಾಲದಲ್ಲಿ ದೋಣಿಗಳನ್ನು ಹಾಕಬಾರದೆಂದು ನಿರ್ಧರಿಸಿದ್ದಾರೆ.

— ಫ್ರಾನ್ಸ ದೇಶದ ಸೇಂಟ ಜೀನ ಎಂಬ ಗ್ರಾಮದಲ್ಲಿ ಬೇಸಾಯಗಾರನೊಬ್ಬನು ಹೊಲವನ್ನು ಅಗಿಯುವಾಗ ಒಂದು ಕತ್ತಿಯು ಸಿಕ್ಕಿತು. ಆ ಕತ್ತಿಯು ೬ ರತ್ತಲು ಭಾರವಿತ್ತು. ಚೊಕ್ಕ ಚಿನ್ನದ ಕತ್ತಿ ಹಿಂದುಸ್ಥಾನದಲ್ಲಿ ಆಗಿದರೆ, ಮೂರ್ತಿಗಳೂ, ಶಿಲಾಲೇಖಗಳೂ ದೊರೆಯುತ್ತವೆ! ಪಾಶ್ಚಾತ್ಯ ದೇಶದಲ್ಲಿ ಲಭ್ಯವಾಗುವದು ಕತ್ತಿ!! ಇದರ ಮೇಲಿಂದ ಅವರ ಆಗಿನ ಸಂಸ್ಕೃತಿಯು ಅರಿವಾಗುತ್ತದೆ.

— ಬೊಂಬೆ ಸ್ಟೀಮ ನೆವಿಗೇಶನ್ ಕಂಪನಿಯವರು ಹೊಸ ಪ್ರಾವಿನ ದೋಣಿಯನ್ನು ತಂದಿದ್ದಾರೆ. ಹೆಸರು "ಸಾವರ್ಕರ"ಯೆಂದು. ಇದರ ಮೇಲೆ ೧ ಸಾವಿರ ಪ್ರಯಾಣಿಕರು ಹಿಡಿಯಬಲ್ಲರು. ಸದ್ಯಕ್ಕೆ ಈ ದೋಣಿಯು ಕರಾಚಿಯ ಕಡೆಗೆ ಕಳಿಸಲಾಗಿದೆ.

— ಕೋರಿಯಾ ದೇಶದ ಒಂದು ಮದುವೆಯಲ್ಲಿ ದೊಡ್ಡ ಔತಣವಾಯಿತು. ವಿಷದ ಪದಾರ್ಥವು ಕೆಟ್ಟು ವಿಷವಾಗಿ ೨೭ ಮಂದಿಗಳು ತೀರಿದರು. ೫೦೦ ಮಂದಿಗಳು ಅಸ್ವಸ್ಥರಾಗಿದ್ದಾರೆ.

— ರಶಿಯಾ ದೇಶದ ಸೋವಿಯೆಟ್ ಸರಕಾರವು ಹೊಲಂಡ ದೇಶದಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಲಿಕ್ಕಿದೆ.

— ಮೊಸ್ಕೋ ಪಟ್ಟಣದಲ್ಲಿಯೂ, ನೆರೆಹೊರೆಯಲ್ಲಿಯೂ ಒಂದು ಪ್ರಕಾರದ ರೋಗವು ಉಂಟಾಗಿದೆ. ಈ ರೋಗಕ್ಕೆ ಮೊಟ್ಟಮೊದಲು ಭಯಂಕರವಾದ ನೋವು ಉಂಟಾಗುತ್ತವೆ, ಕೂದಲೆ ಮೋರೆಯು ಬೀಗುತ್ತದೆ, ಜ್ವರ ಬರುತ್ತದೆ. ಏನು ಕಾರಣವೆಂದು ಡಾಕ್ಟರರಿಗೆ ತಿಳಿಯಲಿಲ್ಲ. ೩೦ ಮಂದಿಗಳು ಕಾಲವಾದರು. ಯಮನಿಗೊಂದು ನೆವ.

— ಸೋವಿಯೆಟ್ ಸರಕಾರವು ರಶಿಯಾ ದೇಶದೊಳಗೆ ಮೋಸಗಾರ ಬಂಧಿಗಳ ಉದ್ಯೋಗವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿವೆ.

— ಟಿಕೇಟ ಪ್ರಕರಣದಲ್ಲಿ ಮುಂಬಯಿಯ ಹೈಕೋರ್ಟ ವಕೀಲರಾದ, ಪ್ರಸಿದ್ಧ ಮುಂದಾಳುಗಳಾದ ಮಿ॥ ನರಿಮಾನರವರು ಕೊಟ್ಟ ಸಾಕ್ಷಿಯಿಂದ ತಮ್ಮ ಮಾನನಷ್ಟವಾಯಿತೆಂದು ಮುಸರಿಂಜೆಂಡಿಂಗ ಇಂಜಿನಿಯರರಾದ ಮಿ॥ ಟಿ ಹಾವೇರಿಯವರು ಮಾಡಿದ ಫಿರ್ಯಾದಿಯ ವಿಚಾರವು ಕಳೆದ ವರುಷ ಅಂತ್ಯವಾಯಿತು. ಖಟ್ಲೆಯು ಆರು ತಿಂಗಳ ವರೆಗೆ ನಡೆಯಿತು. ಫಿರ್ಯಾದಿಯ ಜಬಾನಿಯು ೧೮ ದಿನ ನಡೆಯಿತು. ಸುಮಾರು ೨೭೩ ಪ್ರಕರಣಗಳು ಖಟ್ಲೆಯಲ್ಲಿ ದಾಖಲ ಆಗಿರುತ್ತವೆ. ಇನ್ನೂ ತನಕ ಮೇಜಿಸ್ಟ್ರೇಟರು ಇನ್ನೂ ತೀರ್ಪು ಕೊಡಲಿಲ್ಲ.

— ಮುಂಬಯಿಯಲ್ಲಿ ಗಿರಣಿ ಕೂಲಿಕಾರರು ಸಂಪು ಮಾಡಿದ್ದಾರೆ. ಸುಮಾರು ೧,೫೦೦ ಮಂದಿಗಳು ನಿರುದ್ಯೋಗಿಗಳಾಗಿ ಮನೆಯಲ್ಲಿ ಕೂತುಕೊಂಡಿದ್ದಾರೆ.

— ಅಲ್ವಾರ ಮಹಾರಾಜರಿಗೆ ಪುತ್ರಸಂತಾನವಾಗಿದೆ. ಪುತ್ರೋತ್ಸವಕ್ಕಾಗಿ ಮಹಾರಾಜರು ತೆರದ ಬಾಗಿಲಿಗೆ ಹಿಂದು ರೂಪಾಯಿಯಂತೆ ಕರ ವಸೂಲ ಮಾಡುವ ಹುಕುಮು ಹೊರಡಿಸಿದ್ದಾರೆ. ಮಹಾರಾಜರು ಪುತ್ರೋತ್ಸವದ ಆನಂದಸಾಗರದಲ್ಲಿ ತೇಲಾಡುತ್ತಿರುವಾಗ, ಬೇಸಾಯಗಾರರು ಗೋಳಿಡುತ್ತಾರೆ.

— ಸಂಯುಕ್ತ ಪ್ರಾಂತದ ಕೌನ್ಸಿಲಿನ ಸಭಾಸದರಾದ ಚೌಧರಿ ಮೋಹನಸಿಂಗರವರು ಇಲೆಕ್ಷನಿನಲ್ಲಿ ನೀತಿಭ್ರಷ್ಟ ಕೆಲಸವನ್ನು ಮಾಡಿ ಕೌನ್ಸಿಲಿನ ಸಭಾಸದ ಸ್ಥಾನವನ್ನು ಪಡೆಕೊಂಡ ಬಗ್ಗೆ ಅಲಹಾಬಾದದ ಹೈಕೋರ್ಟು ಅವರಿಗೆ ೩ ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದೆ.

— ಬ್ರಿಟನದಲ್ಲಿ ಮಂಜು ಬಿದ್ದು ಥೇಮ್ಸ ನದಿಯು ಹುಕ್ಕೇರಿ ಬಂತು. ಇತರ ಕಡೆಗಳಲ್ಲಿಯೂ ಮಂಜಿನಿಂದ ಬಹಳ ಹಾನಿಯಾಗಿದೆ.

— ಅಮೇರಿಕೆಯವರು ನಿಕಾರಾಗ್ವೆ ಎಂಬ ಚಿಕ್ಕ ರಾಷ್ಟ್ರದ ಮೇಲೆ ಸಾಗಿಹೋಗಿದ್ದಾರೆ. ವಿಮಾನದೊಳಗಿಂದ ಬಾಂಬುಗಳನ್ನು ಎಸೆಯುತ್ತಾರೆ. ೧೦೦೦ ನೌಕಾಸೈನ್ಯವೂ ಅಲ್ಲಿ ನಿಯಂತ್ರಿಸಲಾಗಿದೆ. ಆ ದೇಶದಲ್ಲಿ ಸುವ್ಯವಸ್ಥೆಗಾಗಿ ಇಷ್ಟೆಲ್ಲ ಆಯಾಸ ನಡೆದಿದೆ. ದೊಡ್ಡ ರಾಷ್ಟ್ರಗಳ ಬಳಿ ಚಿಕ್ಕ ಚಿಕ್ಕ ರಾಷ್ಟ್ರಗಳು ಉಳಿಯುವದಿರಲಿಲ್ಲ.

— ಅಮೇರಿಕೆಯವರು ಸೌ॥ ಸರೋಜಿನಿ ದೇವಿಯವರಿಗೆ ನಿಮಂತ್ರಿಸಿದ್ದಾರೆ. ಭರತ ಖಂಡದ ಸ್ಥಿತಿಯನ್ನು ಸೌ॥ ಯವರ ಕಡೆಯಿಂದ ತಿಳಕೊಳ್ಳಲು ಈ ನಿಮಂತ್ರಣವಂತೆ. ಡಾ॥ ಅನ್ಸಾರಿಯವರು ಅವರಿಗೆ ಅಮೇರಿಕೆಗೆ ಕಳುಹುವಂತೆ ಏರ್ಪಾಟು ಮಾಡಬೇಕಾಗಿ ಮಹಾತ್ಮರ ಅಪೇಕ್ಷೆ.

— ಮುಂಬಯಿ ಹೈಕೋರ್ಟು ಗುರುವಾರ ತಾ. ೫ ನೇಗೆ ಪ್ರಾರಂಭವಾಯಿತು. ಮುಖ್ಯ ನ್ಯಾಯಾಧೀಶರಾದ ಸರ್ ಮಾರ್ಟೆನ್ ಹಾಗು ನ್ಯಾಯಮೂರ್ತಿ ಬ್ಲೇಕ್‌ವೆಲ್ಲರವರು ಮೂಲ ತೀರ್ಪುಗಳ ಮೇಲೆ ಅಪೀಲುಗಳನ್ನು ವಿಚಾರಿಸುತ್ತಾರೆ. ಇತರ ದಿವಾಣಿ ಅಪೀಲುಗಳನ್ನು ನ್ಯಾಯಮೂರ್ತಿ ಪಾಟಕರ-ಬೇಕರರವರು ಇತ್ಯರ್ಥಪಡಿಸುತ್ತಾರೆ. ಫೌಜದಾರಿ ಅಪೀಲುಗಳನ್ನು ನ್ಯಾ॥ ಮೂ॥ ಬ್ರೂಮ್‌ಫೀಲ್ಡ್-ಮಿರ್ಜಾರವರು ಕೇಳಿಕೊಳ್ಳುತ್ತಾರೆ. ನ್ಯಾ॥ ಮೂ॥ ಕೆಂಪ - ಕ್ರಂಪ-ದಾವರರವರು ಮೂಲ ದಾವೆಗಳ ವಿಚಾರ ಮಾಡುತ್ತಾರೆ. ನ್ಯಾ॥ ಮೂ॥ ಮದಗಾಂವಕರರವರು ಮೂಲ ಖಟ್ಲೆಗಳ ವಿಚಾರ ಮಾಡುತ್ತಿದ್ದಾರೆ.

— ಇಟಾಲಿಯ ಗೆಂಝೋನೋ ದಂಡೆಗುಂಟ ಭೂಕಂಪವಾಯಿತು. ಜನರು ಮನೆಗಳನ್ನು ಬಿಟ್ಟು ಹೊರ ಮಗ್ಗಲಿಗೆ ಮಲಕೊಳ್ಳಲಾರಂಭಿಸಿದ್ದಾರೆ.

— ಕಪ್ಪು ಸಮುದ್ರದಲ್ಲಿ ರಶಿಯಾ ದೇಶದ "ಟಿಗೋರುಸಾ" ಎಂಬ ಉಗಿಹಡಗವು ಬಿರುಗಾಳಿಗೆ ಸಿಲುಕಿ ಎಲ್ಲಿ ಪ್ರಯಾಣಿಕರ ಸಹಿತ ಮುಳುಗಿ ಹೋಯಿತು. ಹಡಗದ ಮೇಲೆ ೨೫೦ ಮಂದಿಗಳಿದ್ದರು, ಅವರಲ್ಲಿ ೫೦ ಮಂದಿಗಳು ವಿದ್ಯಾರ್ಥಿಗಳು.

ಮಹಾತ್ಮರ ಆತ್ಮಚರಿತ್ರ.

(೩೨) ಶಿಕ್ಷಕನ ಕೆಲಸ

ದಕ್ಷಿಣ ಆಫ್ರಿಕೆಯ ಸತ್ಯಾಗ್ರಹ ವೃತ್ತಾಂತದಲ್ಲಿ ಹೇಳಲ್ಪಡದ ಯಾ ಅಲ್ಪಾಂಶದಿಂದ ಉಲ್ಲೇಖವಾದ ಸಂಗತಿಗಳನ್ನಷ್ಟೇ ಈ ಪ್ರಕರಣಗಳಲ್ಲಿ ನಾನು ವರ್ಣಿಸುತ್ತೇನೆಂಬುದನ್ನು ವಾಚಕರು ಲಕ್ಷದಲ್ಲಿಡತಕ್ಕದ್ದು. ಅಂದರೆ, ಈಗಿನ ಪ್ರಕರಣಗಳೊಳಗಿನ ಪರಸ್ಪರ ಸಂಬಂಧವು ವಾಚಕರಿಗೆ ಸುಲಭವಾಗಿ ಗ್ರಹಿಕೆಯಾಗುವದು. ತೊಲಸ್ತೊಯ್ ಆಶ್ರಮದ ವ್ಯಾಪ್ತಿಯು ಬೆಳೆದ ಹಾಗೆ ಅಲ್ಲಿಯ ಬಾಲ-ಬಾಲಕಿಯರ ಶಿಕ್ಷಣದ ಏರ್ಪಾಟನ್ನು ಯೋಜಿಸುವ ಅಗತ್ಯವಾಯಿತು. ಹಿಂದು, ಮುಸಲ್ಮಾನ, ಪಾರ್ಸಿ, ಕ್ರೈಸ್ತ ಹುಡುಗರೂ, ಕೆಲವು ಹಿಂದು ಹುಡುಗಿಯರೂ ವಿದ್ಯಾರ್ಥಿಗಳಾಗಿದ್ದರು. ಇವರಿಗೆ ಪ್ರತ್ಯೇಕ ಶಿಕ್ಷಕರನ್ನು ನೇಮಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅದರ ಅವಶ್ಯಕತೆಯೂ ನನಗೆ ತೋರಲಿಲ್ಲ. ಆ ಕಾಲಕ್ಕೆ ಯೋಗ್ಯರಾದ ಹಿಂದೀ ಶಿಕ್ಷಕರು ದೊರೆಕುವದು ದುರ್ಲಭವಾಗಿತ್ತು. ಒಮ್ಮೆ ದೊರೆತರೂ, ಜೊಹಾನಿಸಬರ್ಗದಿಂದ ೨೧ ಮೈಲು ದೂರವಿರುವ ಸ್ಥಳದಲ್ಲಿ ಅಲ್ಪ ವೇತನವನ್ನು ಕೊಂಡು ಬರಲೊಪ್ಪುವವರು ಯಾರೂ ಇರಲಿಲ್ಲ. ನಮ್ಮ ಬಳಿಯಾದರೂ ವಿಶೇಷ ದ್ರವ್ಯ ಸಂಗ್ರಹವಿರಲಿಲ್ಲ. ನಮ್ಮ ತೊಲಸ್ತೊಯ್ ಆಶ್ರಮದ ಹೊರಗಿನಿಂದ ಶಿಕ್ಷಕರನ್ನು ಕರೆಸುವ ಅವಶ್ಯಕತೆಯು ನನಗೆ ತೋರಲಿಲ್ಲ. ಪ್ರಚಲಿತ ಶಿಕ್ಷಣ ಪದ್ಧತಿಯಲ್ಲಿ ನನಗೆ ನಂಬಿಗೆಯಿರಲಿಲ್ಲ. ಅನುಭವದಿಂದಲೂ, ಪ್ರಯೋಗದಿಂದಲೂ ಯೋಗ್ಯವಾದ ಪದ್ಧತಿಯನ್ನು ಶೋಧಿಸಲು ನಾನು ಬಯಸುತ್ತಿದ್ದೆ. ಅದರೆ, ನನ್ನದೊಂದು ಗ್ರಹಿಕೆ ಇತ್ತು, ಅದೇನೆಂದರೆ — ನಿರ್ದೋಷವಾದ ಪರಿಸ್ಥಿತಿಯಲ್ಲಿ ತಾಯಿ—ತಂದೆಗಳೇ (ಮಕ್ಕಳಿಗೆ) ಯೋಗ್ಯ ಶಿಕ್ಷಣವನ್ನು ಕೊಡಬಲ್ಲರು, ಪರರ ಸಹಾಯವನ್ನು ಅತಿ ಅಲ್ಪಾಂಶದಿಂದ ಮಾತ್ರ ಕೊಳ್ಳುವರು. ತೊಲಸ್ತೊಯ್ ತೋಟವು (ಆಶ್ರಮವು) ಒಂದು ಕುಟುಂಬವಾಗಿತ್ತು, ನಾನೇ ಪಿತೃಸ್ಥಾನದಲ್ಲಿದ್ದೆ. ಅದರಿಂದ ಚಿಕ್ಕ ಮಕ್ಕಳ ಶಿಕ್ಷಣದ ಭಾರವನ್ನು ನಾನೇ ನಿರ್ವಹಿಸಬೇಕಾಗಿತ್ತು.

ನನ್ನ ಗ್ರಹಿಕೆಯಲ್ಲಿ ದೋಷಗಳಿದ್ದವೆಂದು ನಾನೊಪ್ಪುತ್ತೇನೆ. ಬಾಲ ಬಾಲಕಿಯರೆಲ್ಲರೂ ಚಿಕ್ಕಂದಿನಿಂದ ನನ್ನ ಸಂಗಡ ಇರಲಿಲ್ಲ. ಭಿನ್ನ ಭಿನ್ನ ಪರಿಸ್ಥಿತಿಯಲ್ಲಿಯೂ ಸಂಸ್ಕಾರಗಳಲ್ಲಿಯೂ ಅವರು ಹುಟ್ಟಿ ಬೆಳೆದಿದ್ದರು. ಹಾಗು ಅವರ ಧರ್ಮವು ಭಿನ್ನ ಭಿನ್ನವಾಗಿತ್ತು. ಇಂಥ ಮಕ್ಕಳ ಪಿತೃಪಾಲಕ ಸ್ಥಾನವನ್ನು ನಾನು ವಹಿಸಿಕೊಂಡರೂ, ಅವರಿಗೆ ಸಂಪೂರ್ಣ ನ್ಯಾಯವಾಗಿ ನಡೆಯಲು ನನಗೆ ಸಾಧ್ಯವಾಗುವದು ಹೇಗೆ?

ಆದರೆ, ಮಾನಸಿಕ ಸಂಸ್ಕಾರ ಯಾನೆ ಶೀಲವನ್ನು ತಯಾರಿಸುವದೇ ಯಾವಾಗಲೂ ಶಿಕ್ಷಣದ ಪ್ರಥಮ ಕರ್ತವ್ಯವೆಂದು ನನ್ನ ದೃಢವಾದ ನಂಬಿಗೆ ಇತ್ತು. ವಯೋಮಾನವನ್ನೂ, ಪರಿಸ್ಥಿತಿಯನ್ನೂ ಲೆಕ್ಕಿಸದೆ, ಎಲ್ಲರಿಗೂ ನೀತಿ ಶಿಕ್ಷಣವನ್ನು ಕಲಿಸಬಹುದೆಂದೂ ನನ್ನ ನಂಬಿಗೆ. ಅವರ ಬಳಿಯಲ್ಲಿ ತಂದೆಯಂತೆ ಹಗಲಿರುಳು ಉಳಕೊಳ್ಳಲು ನಾನು ನಿರ್ಧರಿಸಿದೆನು. ಶಿಕ್ಷಣದ ಮೂಲಾಧಾರವೇ ಶೀಲದ ತಯಾರಿಯೆಂದು ನಾನು ಗ್ರಹಿಸಿದೆನು. ಶೀಲಗಟ್ಟು ದೃಢವಾಗಿದ್ದರೆ ಉಳಿದ ವಿಷಯಗಳನ್ನು ಬಾಲ ಬಾಲಕಿಯರು ತಮ್ಮತಮ್ಮ ಗೆಳೆಯರ ಸಹಾಯದಿಂದ ಕಲಿತುಕೊಳ್ಳುವರೆಂದು ನಾನು ಮನಗಂಡಿದ್ದೆ.

ಜೊತೆಗೆ ಸಾಹಿತ್ಯ ಶಿಕ್ಷಣವನ್ನೂ ಕಲಿಸುವದವಶ್ಯವಾಗಿ ನಾನು ಗ್ರಹಿಸಿದೆನು. ಶ್ರೀ॥ ಕಾಲಿನಬಾಕ್ ಹಾಗು ಪ್ರಾಗಜಿ ದೇಸಾಯಿಯವರ ಸಹಾಯದಿಂದ ಕೆಲವು ವರ್ಗಗಳನ್ನು ತೊರೆಡಿಸಿದೆನು. ದೇಹದಾರ್ಢ್ಯವನ್ನು ನಾನು ಅಲಕ್ಷಿಸಲಿಲ್ಲ. ನಿತ್ಯದ ಕಾರ್ಯಕ್ರಮದಲ್ಲಿ ಶಾರೀರಿಕ ವ್ಯಾಯಾಮವು ಅವರಿಗೆ ದೊರೆಯುತ್ತಿತ್ತು. ಹೇಗೆಂದರೆ, ನಮ್ಮ ತೋಟದಲ್ಲಿ ಆಳುಗಳಿರಲಿಲ್ಲ. ಅಡಿಗೆಯಿಂದ ಹೊಲಸು ಗುಡಿಸುವ ಕೆಲಸದ ತನಕ ಅಲ್ಲಿಯ ಎಲ್ಲ ಕೆಲಸವನ್ನು ಆಶ್ರಮವಾಸಿಗಳು ಮಾಡಬೇಕಾಗಿತ್ತು. ಫಲವೃಕ್ಷಗಳ ಜೋಪಾನ ಮಾಡಬೇಕಾಗಿತ್ತು. ತೋಟಗಳಲ್ಲಿ ಗೆಯ್ಯುವದೂ ಇತ್ತು. ಶ್ರೀ॥ ಕಾಲಿನ ಬಾಕರವರಿಗೆ ತೋಟದ ಕೆಲಸ ಮಾಡುವದೆಂದರೆ ಬಹಳ ಪ್ರೀತಿ. ಸರಕಾರಿ ಪ್ರಯೋಗ ತೋಟದಲ್ಲಿ ಈ ಕೆಲಸದ ಅನುಭವವನ್ನು ಅವರು ಕೆಲವು ಕಾಲ ಪಡೆದಿದ್ದರು. ಅಡಿಗೆ ಕೆಲಸವಿಲ್ಲದ ಪ್ರತಿಯೊಬ್ಬರು ತೋಟಗಳಲ್ಲಿ ಕೆಲ ಹೊತ್ತು ದುಡಿಯಲೇ ಬೇಕಾಗಿತ್ತು. ಚಿಕ್ಕ ಮಕ್ಕಳು ಬಹುಮಟ್ಟಿಗೆ ಈ ಕೆಲಸವು ವಿಶೇಷವಾಗಿ ಬೀಳುತ್ತಿತ್ತು. ಅವರು ಹೊಂಡಗಳನ್ನು ಅಗೆಯಬೇಕಾಗಿತ್ತು. ವೃಕ್ಷಗಳನ್ನು ಕಡಿಯಬೇಕಾಗಿತ್ತು. ಹೊರೆಗಳನ್ನು ಎತ್ತಿಕೊಡಬೇಕಾಗಿತ್ತು. ಇದರಿಂದ ಅವರಿಗೆ ಚೆನ್ನಾಗಿ ವ್ಯಾಯಾಮವಾಗುತ್ತಿತ್ತು. ಈ ಕೆಲಸವನ್ನು ಅವರು ಸಂತೋಷದಿಂದ ಮಾಡುತ್ತಿದ್ದರು. ಸಾಮಾನ್ಯವಾಗಿ ಬೇರೆ ಅಂಗಸಾಧನೆ ಯಾ ಆಟ ಓಟಗಳು ಅವರಿಗೆ ಅವಶ್ಯವಿರಲಿಲ್ಲ. ಒಮ್ಮೊಮ್ಮೆ ಕೆಲವರು ಯಾ ಎಲ್ಲವರೂ ಸಹ ಜತ್ತಿನ ಸವ ಹೇಗೆ ಮೈಗಳ್ಳರಾಗುತ್ತಿದ್ದರು. ಈ ಚೇಷ್ಟೆಗಳನ್ನು ಕೆಲವು ಬಾರಿ ನಾನು ಅಲಕ್ಷಿಸುತ್ತಿದ್ದೆ. ಆದರೆ ಆಗಾಗ್ಗೆ ಅವರ ಕಡೆಯಿಂದ ಕೆಲಸವನ್ನು ನಿಷ್ಠುರತನದಿಂದ ಮಾಡಿಸಿಕೊಳ್ಳುತ್ತಿದ್ದೆ. ಈ ನಿಷ್ಠುರತನವು ಅವರಿಗೆ ಸೇರುತ್ತಿದ್ದಿಲ್ಲ. ಆದರೆ ಅವರು ನನಗೆ ವಿರೋಧಿಸಿದ್ದೇನ ನೆನಪಿಲ್ಲ. ನಿಷ್ಠುರನಾಗ ವಾಗ ನಾನು ಅವರೊಡನೆ ಚರ್ಚೆ ಮಾಡಿ ಕೆಲಸ ಮಾಡುವದರಲ್ಲಿ ಹುಡುಗಾಟಿಕೆ ಮಾಡುವದು ಯೋಗ್ಯವಲ್ಲವೆಂದು ಅವರಿಗೆ ಬಿಂಬಿಸುತ್ತಿದ್ದೆ. ಹೀಗುಂಟಾದ ಮನವರಿಕೆಯು ಕ್ಷಣಭಂಗುರವಾಗಿತ್ತು. ಕ್ಷಣದಲ್ಲಿಯೇ ಕೆಲಸ ಬಿಟ್ಟು ಅವರು ಆಟವಾಡಲು ಓಡುತ್ತಿದ್ದರು. ಹ್ಯಾಗಿದ್ದರೂ, ನಮ್ಮ ಪ್ರಪಂಚವು ಸಾಗಿತ್ತು. ಅವರೆಲ್ಲರೂ ದೃಢಕಾಯರಾದರು. ನಮ್ಮ ಆಶ್ರಮದಲ್ಲಿ ಅಸ್ವಸ್ಥತೆಯಿರಲಿಲ್ಲ. ಹವೆ, ನೀರು, ನಿಯಮಿತ ಆಹಾರಸೇವನೆ ಮುಂತಾದವುಗಳೂ ಈ ಸ್ಥಿತಿಗೆ ಹೆಚ್ಚಾಗಿ ಕಾರಣವಾಗಿರಬೇಕೆಂದು ನಿಸ್ಸಂದೇಹವಾಗಿ ಹೇಳಬಹುದು.

ಈ ಸಂದರ್ಭದಲ್ಲಿ ಔದ್ಯೋಗಿಕ ಶಿಕ್ಷಣದ ವಿಷಯವಾಗಿಯೂ ಒಂದು ಮಾತು ಹೇಳುವೆನು. ಮಕ್ಕಳಿಗೆಲ್ಲ ಒಂದಿಲ್ಲೊಂದು ಉಪಯೋಗಕರವಾದ ಕೈಗಾರಿಕೆಯನ್ನು ಕಲಿಸಬೇಕೆಂದು ನನ್ನ ಆಲೋಚನೆ ಇತ್ತು. ಅದಕ್ಕಾಗಿ ಶ್ರೀ॥ ಕಾಲಿನ್ ಬಾಕರವರು ಟ್ರ್ಯಾಪಿಸ್ಟ ಧರ್ಮಾಶ್ರಮದಲ್ಲಿ ಹೋಗಿ ಪಾದರಕ್ಷೆ ಹೊಲಿಯುವದನ್ನು ಕಲಿತುಬಂದರು. ಅವರಿಂದ ಅದನ್ನು ನಾನು ಕಲಿತೆನು. ಹಾಗು ಅದನ್ನು ಕಲಿಯಲಿಚ್ಛಿಸುವ ವಿದ್ಯಾರ್ಥಿಗಳಿಗೆಲ್ಲ ಆ ಕಲೆಯನ್ನು ಕಲಿಸಿದೆನು. ಶ್ರೀ॥ ಕಾಲಿನ್‌ಬಾಕರವರಿಗೆ ತಕ್ಕಮಟ್ಟಿಗೆ ಬಡಿಗೆಯ ಕೆಲಸವು ಬರುತ್ತಿತ್ತು. ಆದರಿಂದ ಬಡಿಗೆ ಕೆಲಸ ಕಲಿಸುವ ಬಗ್ಗೆ ನಾವೊಂದು ಚಿಕ್ಕ ಶಾಲೆಯನ್ನಿಟ್ಟೆವು. ಅಡಿಗೆ ಮಾಡುವದಂತು ಬಹುತರವಾಗಿ ಎಲ್ಲರಿಗೆ ಬರುತ್ತಿತ್ತು.

ಇದೆಲ್ಲವೂ ಅವರಿಗೆ ನೂತನವಾಗಿದ್ದಿತು. ತಾವು ಇಂಥ ವಿಷಯಗಳನ್ನು ಯಾವಾಗಲಾದರೊಂದು ದಿನ ಕಲಿಯುವ ಪ್ರಸಂಗ ಬಂದೀತೆಂದು ಅವರು ಸ್ವಪ್ನದಲ್ಲಿ ಸಹ ಯೋಚಿಸಿದ್ದಿಲ್ಲ. ದಕ್ಷಿಣ ಆಫ್ರಿಕೆಯಲ್ಲಿ ದೊರೆಕಿದ ಶಿಕ್ಷಣವೆಂದರೆ ಸಾಮಾನ್ಯ ಓದು ಬರಹ ಹಾಗು ಗಣಿತವಷ್ಟೇ. ನಮ್ಮ ಟಾಲ್‌ಸ್ಟಾಯ್ ತೋಟದಲ್ಲಿ ಒಂದು ನಿಯಮವನ್ನೇ ನಾವು ಮಾಡಿದ್ದೆವು. ಶಿಕ್ಷಕರು ಮಾಡಲಾಗದ ಕೆಲಸವನ್ನು ವಿದ್ಯಾರ್ಥಿಗಳಿಗೆ ಮಾಡಲು ಹೇಳಲಾಗದು. ಅದರಿಂದ ಶಿಕ್ಷಕರು ವಿದ್ಯಾರ್ಥಿಗಳಿಗೆ ಯಾವದೊಂದು ಕೆಲಸವನ್ನು ಹೇಳಿದ ಕೂಡಲೆ, ಅವರೊಡನೆ ಒಬ್ಬ ಶಿಕ್ಷಕರು ಸಹಕಾರಿಗಳಾಗಿ ಸ್ವತಃ ಕೆಲಸ ಮಾಡುತ್ತಿದ್ದರು. ಅದರಿಂದ ಚಿಕ್ಕ ಮಕ್ಕಳು ತಮ್ಮ ಪಾಠಗಳನ್ನೆಲ್ಲ ಸಂತೋಷದಿಂದ ಕಲಿಯುತ್ತಿದ್ದರು. ಶೀಲವರ್ಧನವನ್ನೂ, ಸಾಹಿತ್ಯ ಶಿಕ್ಷಣವನ್ನೂ ಈ ಮುಂದೆ ಹೇಳುವೆನು.

ಮಹಾತ್ಮರ ಸುದ್ದಿ.

ಮಹಾತ್ಮರು ರಾಷ್ಟ್ರೀಯ ಸಭೆಯ ಕಾರ್ಯವನ್ನು ಮುಗಿಸಿ ಸಾಬರಮತಿಯ ಆಶ್ರಮಕ್ಕೆ ಹೋಗಿ ಉಳಿದಿದ್ದಾರೆ. ಅಲ್ಲಿ ಮಹಾತ್ಮರು ಕೆಲವು ಕಾಲದ ವರೆಗೆ ವಿಶ್ರಾಂತಿಗಾಗಿ ಉಳಕೊಳ್ಳುವರೆಂದು ಪ್ರಕಟಗೊಂಡಿದೆ. ಮಹಾತ್ಮರ ಪ್ರಕೃತಿಯು ಬಹು ಕ್ಷೀಣವಾಗಿದೆ. ಅದರಿಂದ ಮಹಾತ್ಮರು ರಾಷ್ಟ್ರೀಯ ಸಭೆಯ ಕಾಲಕ್ಕೆ ಮದ್ರಾಸದಲ್ಲಿ ವಿಶೇಷವಾಗಿ ಇರಲಿಕ್ಕಿಲ್ಲೆಂದು ಜಾಹೀರಾಗಿತ್ತು. ಆದರೆ ಅಲ್ಲಿ ಹೋದ ಬಳಿಕ, ಅಲ್ಲಿಯ ಸ್ಥಿತಿಯ ವಿಚಾರದಿಂದ ಮಹಾತ್ಮರು ಕೊನೆತನಕ ಉಳಕೊಂಡರು. ಹಿಂದು-ಮುಸಲ್ಮಾನರ ಐಕ್ಯದ ಠರಾವಿನ ಕಬ್ಬಯೋಜನೆಯ ಮೇಲೆಯೇ ಭಯಂಕರವಾದ ಚರ್ಚೆಯಾಗಿ ಪ್ರತಿನಿಧಿಗಳಲ್ಲಿ ಐಕ್ಯಮತ್ಯವಾಗದೆ ಐಕ್ಯಭಂಗವಾಗುತ್ತದೇನೆಂದು ಚಿಂತೆಯಾದಾಗ, ಮಹಾತ್ಮರೇ ಆ ಠರಾವಿನ ಕಬ್ಬಯೋಜನೆಯನ್ನು ಉತ್ತಟ್ಟನವರಿಗೂ ಗ್ರಾಹ್ಯವಾಗುವಂತೆ ತಿದ್ದಿಸಿ ರಾಷ್ಟ್ರಸೇವೆ ಮಾಡಿದರು. ಐಕ್ಯ ಠರಾವನ್ನು ತಿದ್ದಿಸಿದ ವಿಶೇಷ ಶ್ರೇಯಸ್ಸು ಮಹಾತ್ಮರಿಗೂ, ಅಧ್ಯಕ್ಷರಾದ ಡಾ॥ ಅನ್ಸಾರಿಯವರಿಗೂ ಸಲ್ಲತಕ್ಕದ್ದು. ಮಹಾತ್ಮರು ಕಳೆದ ಶಿಗವೇ ಬಾರ್ಡೋಲಿಗೆ ಅಹಮದಾಬಾದ ಸತ್ಯಾಗ್ರಹಾಶ್ರಮಕ್ಕೆ ಮುಟ್ಟಿದರು. ಮದ್ರಾಸದಿಂದ ಹೊರಡುವ ಪೂರ್ವದಲ್ಲಿ ಕ್ಷಯ ವ್ಯಾಧಿಯ ಚಿಕಿತ್ಸಕ ತಜ್ಞರಾದ ಡಾ॥ ಮುತ್ತುರವರು ಮಹಾತ್ಮರ ದೇಹಪರೀಕ್ಷೆಯನ್ನು ಸೂಕ್ಷ್ಮವಾಗಿ ಮಾಡಿ, ಈ ಕೆಳಗಿನ ರಿಪೋರ್ಟನ್ನು ಪ್ರಕಟಿಸಿದ್ದಾರೆ — "ಮಹಾತ್ಮರ ಅವಯವಗಳಿಗೆ ಬಾಧೆ ತಟ್ಟುವಂಥ ರೋಗಬಾಧೆಯಿಲ್ಲ. ನಾಡಿಯು ಸ್ಥಿರದಿಂದಲೂ, ನಿಯಮಿತವಾಗಿಯೂ ನಡೆಯುತ್ತಿದೆ. ರಕ್ತಾಭಿಸರಣದ ವೇಗವು ಅಸಾಮಾನ್ಯವಿದ್ದರೂ, ಆ ಕಡೆ ಹೆಚ್ಚಿನ ಲಕ್ಷ ಕೊಡದೆ ಮಹಾತ್ಮರ ಮನಸ್ಥಿತಿಯ ಕಡೆಗೇ ಹೆಚ್ಚು ಲಕ್ಷ ಕೊಡತಕ್ಕದ್ದು. ಮಹಾತ್ಮರು ಕೈಕೊಳ್ಳುವ ಕೆಲಸಗಳನ್ನು ನೆರವೇರಿಸುವಷ್ಟು ಸಾಮರ್ಥ್ಯವು ಅವರಲ್ಲಿಲ್ಲದಿದ್ದರೂ ಅವರ ಮನಸ್ಸು ಒಂದೇ ಸವನೆ ಬಹು ಕಾಲದ ವರೆಗೆ ವಿಚಾರ ಮಾಡುತ್ತಿರುತ್ತದೆ. ಈವಾಗ ಕಾರ್ಯಬಂದವರೊಡನೆ ಮಾತಾಡುತ್ತಲೇ ಅವರು ಆಹಾರ ಕೊಳ್ಳುತ್ತಾರೆ. ಸಾಕಷ್ಟು ವಿಶ್ರಾಂತಿಯಾಗಲಿ, ನಿದ್ರೆಯಾಗಲಿ ಮಹಾತ್ಮರಿಗೆ ದೊರಕುವದಿಲ್ಲ. ಅದರಿಂದ ಪಚನ

ಚಳಿಯಿಂದ ಸುಮ್ಮನೆ ಏನೂ ತೋಚದಂತೆ ಏಕೆ ಕುಳಿತಿರುವಿರಿ?
ಸಂಘವಿಯವರ ತಯಾರಿಸಿದ ಬಟ್ಟೆಗಳನ್ನು ಉಪಯೋಗಿಸಿರಿ!!

ಟ್ವೀಡ ಕೋಟು ಗಕ್ಕೆ ೧ ೪—೦. ಚೀಟಿನ (ಗಿರೆಗಳ) ಕೋಟು ೧ ಕ್ಕೆ ರೂ ೧—೦—೦.
ಕೊಲ್ಲಾಪುರ ಚಿಕ್ಕಿನ ಕೋಟು ೧ ಕ್ಕೆ ೩-೮-೦, ಕಾರಿ (Sport ng) ಕೋಟು ೧ ಕ್ಕೆ ೯-೮-೦.
ಉಣ್ಣೆಯ ಮಕ್ಕಳ ಭಾರೀ ಸರ್ಜನ ಬಟ್ಟೆ ೧ ಕ್ಕೆ ೯-೮ ೦ ನಿಲುವಂಗಿ (Overcoat) ೧ ಕ್ಕೆ ರೂ ೧೨
ಇವುಗಳಲ್ಲದೆ ಇನ್ನೂ ಅನೇಕ ತರತರದ ಬಟ್ಟೆ-ಅರಿಗಳೂ ಸಹ
ನಮ್ಮಲ್ಲಿ ಅಗ್ಗ ದರದಿಂದ ಸಿಗುವವು!

ಬ್ರಾಂಚ್ ಆಫೀಸು:— ಬುಧವಾರ ಪೇಟೆ, ಪುಣಾ ಸಿಟಿ.

ಸಂಘವಿ ಬದರ್ಸ, ಗಿರಗಾಂವ ಟ್ರಾಮ್ ನಾಕಾ, ಗಿರಗಾಂವ, ಮುಂಬಯಿ.

SANGHAVI

ಯೋಗ ಅಶಾಂತವಾಗಿ ರಕ್ತಾಭಿಸರಣದ ವೇಗವು ಹೆಚ್ಚಿ ಮಹಾತ್ಮರು ಓ ತಾಸು ನಿದ್ರೆ ಮಾಡಬೇಕು, ಮಧ್ಯಾಹ್ನ ೨ ತಾಸು ವಿಶ್ರಾಂತಿ ಪಡೆಯಬೇಕು, ಆಹಾರವನ್ನು ಸ್ವಲ್ಪ ಪ್ರಶಾಂತ ಚಿತ್ತದಿಂದ ಕೊಳ್ಳಬೇಕು ಮಹಾತ್ಮರಿಗೆ ಅವರು ಶಕ್ತಿಶಾಲಿಗಳಾಗಿ ಕಾಣಹೋಗಬಾರದು. ಜನಸೇವೆಯ ಕೆಲಸಗಳನ್ನು ಅವರಿಗೆ ಹೆಚ್ಚಾಗಿ ತೋರಿಸಕೂಡದು. ಮೋಟಾರ ಸಂತೆಗಳಲ್ಲಿಯೂ ಉಗಿಬಂಡಿಗಳಲ್ಲಿಯೂ ಮಹಾತ್ಮರು ನಿದ್ರೆ ಮಾಡಬೇಕಾದ ಪ್ರಸಂಗಗಳನ್ನು ಜನರು ಉಂಟುಮಾಡಕೂಡದು. ಅವನ್ನು ಅವರ ಕೆಲಸವನ್ನು ತಗ್ಗಿಸಲು ಪ್ರಯತ್ನಪಟ್ಟರೆ, ಮಹಾತ್ಮರ ಆಯುರಾರೋಗ್ಯವನ್ನು ಪ್ರಜೆಗಳು ಬೆಳೆಸಿದಂತಾಗುವದು. ” ಡಾ॥ ಮಾಳೋದಕರು ಇನ್ನೂರ ವರುಷ- ವ್ಯಾಯಾಮತತ್ತ್ವಗಳ ಕುರಿತು ಮಹಾತ್ಮರಿಗೆ ಸೂಚನೆಗಳನ್ನು ಕೊಟ್ಟಿರುತ್ತಾರೆ. ಮತ್ತು ಸ್ವತಃ ಭಾರತೀಯ ಪ್ರಜೆಗಳ ದೈನ್ಯವನ್ನು ವಿಚಾರಿಸಿ, ನಾಲ್ಕನೆಯ ಸತ್ಯಾಗ್ರಹಾಶ್ರಮದಲ್ಲಿ ನಿರ್ಭಯವಾಗಿ ಉಳಕೊಂಡು ಆಯುರಾರೋಗ್ಯ ಹೊಂದಬೇಕೆಂದು ಪ್ರಜೆಗಳೆಲ್ಲರೂ ಮಹಾತ್ಮರಿಗೆ ಪ್ರಾರ್ಥಿಸತಕ್ಕದ್ದು.

ವಿವಿಧ ವಿಷಯಗಳು.

ಬ್ರಿಟಿಶ ಸಾಮ್ರಾಜ್ಯದಲ್ಲಿ ಪ್ರಜೆಗಳಿಗೆ ಶಸ್ತ್ರಧಾರಣ ಮಾಡುವ ಸ್ವಾತಂತ್ರ್ಯವಿಲ್ಲ. ನಿಶ್ಶಸ್ತ್ರ ಪ್ರಜೆಗಳನ್ನು ಆಳುವದಕ್ಕೆ ಅನುಕೂಲವೆಂದು ಸರಕಾರದ ಅಭಿಪ್ರಾಯ. ಆದರೆ, ಸಿಖ ಜನರಲ್ಲಿ ‹ ಕಿರ್ಪಾನ › ವೆಂಬ ಕತ್ತಿಯನ್ನು ಧರಿಸಬೇಕೆಂದು ಸಿಖ ಧರ್ಮದ ಆಜ್ಞೆ ಇರುತ್ತದೆ. ಅದರಂತೆ ಹಿಂದೂ ಧರ್ಮದಲ್ಲಿಯೂ ಆತ್ಮರಕ್ಷಣೆಗಾಗಿ ಬ್ರಾಹ್ಮಣ «ದಂಡಧಾರಣ" ಮಾಡಬೇಕೆಂದು ಶಾಸ್ತ್ರಾಜ್ಞೆಯುಂಟು. ವಿಷ್ಣುಯಾಗದ ರೀತಿಯಿಂದ ಬ್ರಹ್ಮಚಾರಿಗಳಿಗೂ, ಸನ್ಯಾಸಿಗಳಿಗೂ ದಂಡಧಾರಣದ ದೀಕ್ಷೆಯು ವಿಧಿಸಲ್ಪಡುತ್ತದೆ. ಆದರೆ, ದುಂಡ್ರಗಳ ಸ್ವಾರ್ಥ-ಗೂಢಾರ್ಥಗಳ ಕಡೆಗೆ ದುರ್ಲಕ್ಷ್ಯವಾಗುತ್ತಿರುವದರಿಂದ ಏನೊಂದೂ ಪ್ರಯೋಜನವಾಗುವದಿಲ್ಲ. ಆದ್ದರಿಂದ « ಲಾಠಿಯ ಶಿಕ್ಷಣ " ವನ್ನು ಧರ್ಮದೀಕ್ಷೆಯೆಂದು ಎಲ್ಲರೂ ಅಭ್ಯಾಸಿಸಬೇಕೆಂದು ಕೆಲವು ಧರ್ಮಶಾಸ್ತ್ರಜ್ಞರ ಸೂಚನೆ ಇರುತ್ತದೆ.

ಶುದ್ಧಿಯ ಚಳವಳಿಯು ನಡೆದಂದಿನಿಂದ ಈ ವರೆಗೆ ೪॥ ಲಕ್ಷ ಜನರನ್ನು ಹಿಂದೂ ಧರ್ಮದಲ್ಲಿ ಸೇರಿಸಿಕೊಂಡಿರುತ್ತದೆ.

ಇತ್ತೀಚೆಗಾಗಿ ದೊಡ್ಡ ದೊಡ್ಡ ಶಹರಗಳಲ್ಲಿ ಸ್ಟೋವ್‍ಗಳಿಂದ ವಿಶೇಷ ಅಪಘಾತಗಳಾಗುತ್ತಲಿವೆ. ಮುಂಬಯಿಯಲ್ಲಿ ಒಂದೆಡೆಗೆ ಒಂದೇ ಸ್ಟೋವಿನಿಂದ ೧೦ ಜನರು ಮೃತ್ಯುಕ್ಕೆ ಎರವಾದರು.

ಅಮೇರಿಕೆಯ «ಕ್ರೀಮಂತರ" ಶ್ರೀಮಂತಿಕೆಯೂ, ರೀಯುಧ ಕೊಳಿಕಾರರ ಸುಖಸಾಧನಗಳೂ ಎಲ್ಲೆಲ್ಲಿಯೂ ಕೇಳಬರುತ್ತವೆ.

ಮಹಾತ್ಮಾ ಗಾಂಧಿಯವರೊಡನೆ ಕಂಕರಭಾವ ದೇವ ಎಂಬ ಮಹಾರಾಷ್ಟ್ರದ ಮುಖಂಡರೊಬ್ಬರು ಮಾತ ಮಾಡಿ ಎಪ್ರಿಲ್ ಕೊನೆಯ ಒಳಗಾಗಿ ಸಮುದ್ರತೀರ ಕಾಯಿದೆಯನ್ನು ಭಂಗಿಸುವ ಎರಡು ನೂರು ಜನರನ್ನು ಮಹಾರಾಷ್ಟ್ರದಲ್ಲಿ ತೋರಿಸಿಕೊಡುತ್ತೇವೆಂದು ಹೇಳಿರುವರು. ಅವರಿಗೆ ಈ ವರೆಗೆ ಎಂಬತ್ತು ನೂರು ಜನರು ಮಾತ್ರ ದೊರೆತಿರುವರು. ನಮ್ಮ ಕರ್ನಾಟಕದಲ್ಲಿಯೂ ಈ ತರದ ಪ್ರಯತ್ನವಾಗಲಾರದೇನು?

ರಾಜ್ಯಕ್ರಾಂತಿಗಾಗಿ ಗುಪ್ತವಾದ ಮತ್ತು ಅತ್ಯಾಚಾರದ ಚಳವಳಿಯನ್ನು ನಡಿಸಿದ್ದಕ್ಕಾಗಿ ನೂರಾರು ಜನರಿಗೆ ಅಂದಮಾನ ಕರಿನೀರಿನ ಶಿಕ್ಷೆಯು ಕೂಡ ಆಗಿತ್ತು. ಅಂಥವರೆಲ್ಲ ಕೆಲ ವರ್ಷದ ಹಿಂದೆ ಬಿಡುಗಡೆಹೊಂದಿರುವರು ಅವರೆ ಸರಕಾರದ ಹಾರಾಂಟು ತಪ್ಪಿಸಿಕೊಂಡು ಪರದೇಶಗಳಲ್ಲಿ ಹೋಗಿದ್ದು ಕೊಂಡ ಅನೇಕ ಜನರಿಗೆ ಇಷ್ಟತ್ತು ವರ್ಷಗಳು ಕಳೆದರೂ ತಿರುಗಿ ಹಿಂದುಸ್ಥಾನದಲ್ಲಿ ಕಾಲಿಡಲು ಸ್ವಾತಂತ್ರ್ಯವಿಲ್ಲವಂತೆ.

ಯುರೋಪಿಯನ್‌ರು ತಮ್ಮದೊಂದು ಅಂತರ್ರಾಷ್ಟ್ರೀಯ ಸಂಘವನ್ನು ಸ್ಥಾಪಿಸಿರುವಂತೆ, ಏಷಿಯಾ ಖಂಡದ ರಾಷ್ಟ್ರಗಳೆಲ್ಲ ಕೂಡಿ ತಮ್ಮದೊಂದು ಸ್ವತಂತ್ರ ಅಂತರಾಷ್ಟ್ರೀಯ ಸಂಘವನ್ನು [illegible]

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ - ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸ್ತ್ರ್ಯ ವಿಧಾನವು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. **M. Manjappa.**

PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಇನನೆಂದಿಯುವುದಕ್ಕಿನ ಕರಿಯ ಹೋಗಿ ಮುಖವಾಣೀ ಪೂರ್ಣಸತ್ವವು ಉಳ್ಳದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಶರೀರವು ಹಾಗೂ ಕಾಮಿನಿಂದ ಶೋಷಿತವಾದ ಶರೀರವು ನಿರೋಗಿಯಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮೊದಲಾದ ಅನೇಕ ರೋಗಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೫ದಿವಸ ಸಾಲುವ ಒಂದೇ ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩-೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಹನ್ನೆರಡಕ್ಕೆ ೧೩-೮-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಪೆಶ.

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಹಿಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿದ್ದುದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ವರಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯು ಒಂದು ವರಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫॥ ರೂ ೩ ಡಬ್ಬಿಗೆ ೧೫॥ ರೂ ೬ ಡಬ್ಬಿಗೆ ೨೭ ರೂ, ೧೨ ಡಬಿಗೆ ೫೦ ರೂ.

[illegible]

शंडूचें

द्राक्षासव- एक रतलास किंमत १॥ रुपये,

रामबाण औषध

सर्दि घालविणारे
भूक वाढविणारे
श्वासोच्छ्वास साफ करणारे
झोप आणणार
शक्ति देणारें
तेजस्वीपणा आणणारें

पिण्यास सांगतर

कॅटलाग मागवा,

शंडु फार्मास्युटिकल वर्क्स लिमिटेड

मुंबई नं. १४

ऐजट— मेसर्स पंडित आणी कंपनी,

तीर्थहळळी

सिरिस एजट एस एल धाकप्पा आणि ब्रदर

ಹಿಂದುಸ್ಥಾನದಲ್ಲೇ ಅತ್ಯಂತ ಅಗ್ರಗಣ್ಯವಾದ 'ನೆಶನಲ್ ಇನ್‌ಶ್ಯೂರನ್ಸ್ ಕಂಪೆನಿ (ಲಿಮಿಟೆಡ)' ಎಂಬ

ಜೀವ ವಿಮೆಯ ಮಂಡಲಿ

ವ ಹಲದನವು ಒಂದು ಕೋಟಿಯನ್ನು ಅಂಕ್ರ ಹಿಡಿ ಕಳೆದ ವರಷ ಲಕ್ಷ್ಯಾಂತರದ ಮೇಲೆ 5 40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬೋನಸ ಕೊಟ್ಟಿರುವದು

ಹೋದ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅಷ್ಟೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿ ಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಕಡಿಮೆ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,**

ಬಿ ಸಿ ಸಿರಾಳಕೊಪ್ಪ, *Branch Secretary*

ಲೋಕಮಂಡಿ ಬಿಲ್ಡಿಂಗ, Alice Building

ಹುಬ್ಬಳ್ಳಿ *Hornby Road,*

BOMBAY

S. U. Narayanacharya & CO

Chaukamba, BENARES CITY,

ನಮ್ಮಲ್ಲಿ ಎಲ್ಲ ತರದ ರೇಶ್ಮೆ ಶಿತಾಂಬರ ಬನಾರಸ ಕಣ, ಜರಿ ಸೀರೆ, ಶಾಲು, ರೋಮಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಶಿಂಗರಫ ಇತ್ಯಾದಿ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು

ವಿಳಾಸ- ಶಿರೋಮಣಿ ನಾರಾಯಣಾಚಾರ್ಯ

ಮತ್ತು ಕಂಪನಿ ಚೌಕಂಬಾ, ಕಾಶೀಕ್ಷೇತ್ರ

ಸುಲಭ ಕ್ರಯ ಸುಲಭ ಕ್ರಯ!!

ಡಾಕ್ಟರ ಜಿ. ಬೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪೀನಸಿ, ಒಂಟೆತಲೆನೋವು, ತಲೆಯ ಭ್ರಮೆಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಇಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಗುಟಕವನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ವೈದ್ಯರು ತಮ್ಮ ಗೃಹದಲ್ಲಿ ಕಟಿಬಿಟ ಔಷಧವಾಗಿ ಉಪಯೋಗಿಸುತಾರೆ ಮಾದರಿ ಬಿಸ ಪುಕ್ಕಟೆ ಕಳಿಸಲಾಗುವದು

ಬುಡಿ ಒ ಡಕ್ಕೆ ಕಯ ರೂ ೦ ೧೦ ೦ ಒ ಲಾ ಒ ಡಜನ್ ೧ಕ್ಕೆ ರೂ ೨-೮-೦ ವ್ಹಿ. ಪಿ. ೦-೮-೦ ದಯುವಿಟ್ಟು ನಿಮ್ಮ ಹೆಸರನ್ನು ಅಡ್ರೆಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ

ದಿ ... ಟಿಸವ ಅಂಡ ಕಂಪನಿ ಲಿಮಿಟೆಡ್ ಪ್ರೋ. ಬಾ ೫೧೦, ಪೋರ್ಕ್‌ಟೌನ, ಮದರಾಸ

ಕಿರ್ಲೋಸ್ಕರ ಕಮಾಲ ಗಾಣ.



ಶೇಕಡಾ ೭೮ ರಿಂದ ೭೦ ರ ವರೆಗೆ ರಸ ಹೊರಡುವದು

ಗಂಟೆಯೊಂದಕ್ಕೆ ೧೦೦೦ ಪೌಂಡ ಕಬ್ಬನ್ನು ಹಿಂಡತದು

ಬೆಲೆ ೨೫೦ ರೂ ಕೂಡ್ಲೆ ಡಿಲಿವ್ಹರಿ

ಸಿರಸಿಯಲ್ಲಿ ಎಸ್ ಎಲ್ ಧಾಕಪ್ಪಾ ಮತ್ತು ಬ್ರದರ್ಸ, ಇವರಲ್ಲಿ ಸಿಗುವದು

ರಚನೆ- ಈ ಗಾಣದಲಿಯ ಎರಕ ಹೊಯ್ದ ಭಾಗಗಳು ಅರ್ಧ ಉಕ್ಕಿನಿಂದ ಕೂಡಿದ ಧಾತುವಿನಿಂದ ತಯಾರಾಗಿರುತ್ತವ ರಹಿಗಳ ಎತ್ತರ ೧೧ ಇಂಚು, ಅಕ್ಸಲ್ ಉಕ್ಕಿನವು ಚಕ್ರ, ಅಕ್ಸಲ್, ರೋಲರ ಇವು ಬೇರೆ ಬೇರೆ ಇರುತ್ತವೆ ಬೇಅರಿಂಗ ಗನ್‌ಮೆಟಲ್‌ದವು ಇರುತ್ತವೆ ಎಂತೆಂಥ ಸತತವಾಗಿ ನಿಲ್ಲುವದಕ್ಕೆ ಏರ್ಪಾಡು ಮಾಡಿರತ್ತೇವ ಬಾಳಿಕೆಯಲ್ಲಿ ಸುಬುರಣೆ ಮಾಡಿರತ್ತವೆ

ವೈಶಿಷ್ಟ್ಯ- ರಹಿಗಳು ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಅಡಕಿನಲ್ಲಿ ಸಿಕ್ಕು ಕಡೆಗೆ ಬರುವವರಲ್ಲಿ ಹಿಂಡಿ ಹಿಪ್ಪಿಯಾಗಿ ಬರುವದು. ಮಿಕ್ಕ ಗಾಣಗಳಂತೆ ಇಬ್ಬರು ಬೇಕಾಗದೆ ಒಬ್ಬನಿಂದಲೇ ಸಾಗುವದು ನಾಲ್ಕು ಎತ್ತುಗಳು ಬೇಕು

ಅಭಿಪ್ರಾಯ- "ಕಮಾಲ ಗಾಣದಿಂದ ಸಿಪ್ಪಿಯಲ್ಲಿ ವ್ಯರ್ಥ ಹೋಗುವ ರಸದಿಂದ ... ಮಣ ಬೆಲ್ಲ ಅಂದರೆ ೧೦ ರೂ ಲಾಭವಾಯಿತು. ೨೪ ದಿವಸ ಗಾಣವಾಡಿಸಲು ನನಗೆ ಒಟ್ಟು ೨೪೦ ರೂ ಲಾಭವಾಯಿತೆಂದು ತಿಳಿಸಲ್ಕೆ ಆನಂದವಾಗುತ್ತದೆ ತಮ್ಮ ರಾಜನಗೌಡಾ ಪಾಟೀಲ, ನನಲಗಿ ಜಿ. ಬೆಳಗಾಂವ "

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನದ

ಬಾಹ್ಯ ಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ

ತಲೆನೋವು, ಬೆನ್ನುನೋವು ಸಂಧಿವಾತ, ಚಳಿ, ಕೆಮ್ಮು, ಕಟ್ಟಿಗಾಯ ಮುಂತಾದ ಎಲ್ಲ ತರದ ನೋವಿಗೆ ಇದರಿಂದ ಗುಣ ಬರುತ್ತದೆ ಮೇಲ್ಕಂಡ ರೋಗಗಳಲ್ಲೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು ನೋವು ಚಿಕ್ಕದೆಂದು ಯಾರೂ ತಿರಸ್ಕರಿಸಲಾಗದು ಚಿಕ್ಕ ನೋವಿನಿಂದಲೇ ಜೀವಕ್ಕೆ ಸುಖ ದೊರೆಯುವದಿಲ್ಲ. ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಅಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ ೦—೧೦—೦

ಎಲ್ಲ ಕಡೆಯಲ್ಲಿಯೂ ಸಿಕ್ಕುವದು ಅಥವಾ **ಅಮೃತಾಂಜನ ಡಿಪೋ,**

ಮುಂಬಯಿ ಮತ್ತು ಮದ್ರಾಸ

…B. NO. B. 1270 MONDAY, JANUARY 16TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೫

ಪತ್ರದ ವರ್ಗಣಿ.
ಊರಲ್ಲಿ ಅಗಾವು
ರೂಪಾಯಿ 2-4-0
ಪೋಸ್ಟಖರ್ಚಿನಿಂದ
ರೂ. 3-0-0.
ಬಂದಮೇಲೆ ಕೊಡುವದಾದರೆ
ರೂಪಾಯಿ 3-2-0.
ಒಂದು ಸಂಚಿಕೆಗೆ 0-1-0.

ಜಾಹೀರಾತುಗಳ ದರ.
ಕನ್ನಡ, ಇಂಗ್ಲೀಷ, ಮ್ಯಾಳ್ಮ ಪೈಕಾ (೧೨ ಪಾಯಿಂಟ್ ಟಾಯ್ಪ)
ಆ ಸಾಲುಗಳವರೆಗೆ ರೂ. 1-0-
ಆ ಮೇಲಿನ ಪ್ರತಿಸಾಲಿಗೆ 0-2-0.
ಹೆಚ್ಚಿಗೆ ಸಾಲು ಎಷ್ಟು ಕೊಡಬೇಕಾಗಿದ್ದರೆ ಆ ದರದಿಂದ ಅಕ್ಷರಗಳಿಗೆ ತಕ್ಕ ದರ ಕೊಡಬೇಕು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ನಿರ್ಣಯ ಮಾಡಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೬ ಮಾಹೆ ಜನವರಿ ಸನ್ ೧೯೨೮ನೇ ಇಸವಿ)

[ಜಾ] ನವ ಶಾಸ್ತ್ರೀಯವಾದ [ಉಚಿತ]
ಶಾರೀರಕ ಶಿಕ್ಷಣ.



ಈ ಪುಸ್ತಕದಲ್ಲಿ ನವ ಶಾಸ್ತ್ರೀಯ ಅಂಗಸೌಷ್ಠವವನ್ನು ಶಾರೀರಕ ಸೊಗಸಾದ ಚಿತ್ರಗಳಿಂದ ವಿವರಿಸಿ ಅಂತಹ ಶರೀರ ಸ್ವಾಸ್ಥ್ಯ ಹೇಗೆ ಹೊಂದಬೇಕೆಂಬುದನ್ನು ತಿಳಿಸಲ್ಪಟ್ಟಿದೆ… ಈ ಪುಸ್ತಕವನ್ನು ಓದಿ… ಪುಸ್ತಕವನ್ನು ಕಳೆದುಕೊಳ್ಳದೆ, ಅಂಚೆಯಲ್ಲಿ… ಈ ಪುಸ್ತಕಕ್ಕೆ ಬರೆಯಿರಿ
ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಜಿ. ವ್ಹಿ. ಶೇಲಂಗಿ ಮೋಟಾರ ಸರ್ವ್ಹೀಸ.

ಕುಮಟಾ—ಶಿರ್ಶಿ

ಶಿರ್ಶಿ—ಕುಮಟಾ

ಡೇಲಿ ಮೋಟರ ಸರ್ವ್ಹೀಸ ಪ್ರಾರಂಭವಾಗಿರುವದು

ಇದಲ್ಲದೆ, ಈ ಸರ್ವ್ಹೀಸು ಶಿರ್ಶಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವ ವರೆಗೆ ನಡೆಯುತ್ತಿದೆ. ಸ್ಪೇಶಲ್ ಭಾಡಿಗೆಗೆ ಬೇಕಾದವರು ಹಿಂದು ದಿವಸ ಮುಂಚಿತ ತಿಳಿಸಬೇಕು.

ಟಿಕೇಟಿನ ದರ:— ಸೋಯಿ! ಅತಿ ಸೋಯಿ!! ಎಲ್ಲ[illegible]!!!

ಬೇಕಾದಲ್ಲಿಯ ಟಿಕೇಟುಗಳೂ, ವಿಶೇಷ ಮಾಹಿತಿಯೂ ಕುಮಟಾ ಏಜಂಟ ಕಾಶಪ್ಪಾ ರಾಮ ನಾಯ್ಕ ಮುದಗಾಂವಕರ ಇವರ ಕಡೆಗೆ ಸಿಗುವವು

ಇತ್ತ ಲಕ್ಷ ಕೊಡಿರಿ.

ಘಕ್ತ ಮಳೆಗಾಲದ ಸಲುವಾಗಿಯೇ ಪ್ರಯಾಣಿಕರ ಬಗ್ಗೆ ಹೊಸ ಸೋಯಿ!

ದಿ ಬೆಳಗಾಂವ ಮೋಟರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ, ಬೆಳಗಾಂವ

Tel
"TRANSPORT."
ALNAWAR.

ತಂತಿ ಪತ್ರ —
"ಟ್ರಾನ್ಸಪೋರ್ಟ"
ಅಳ್ನಾವರ.

ಅಳ್ನಾವರ ಕಾರವಾರ



ಕಾರವಾರ ಅಳ್ನಾವರ

ನಿಯಮಿತ ಡೇಲಿ ಮೋಟರ ಸರ್ವ್ಹೀಸ್ ಚಾಲುಅದೆ.

ಇದೇ ೧೯೨೭ನೇ ಜೂನ ೧೫ ನೇ ತಾರೀಖಿನಿಂದಾ ಪ್ರಾರಂಭವಾಗುವದು.

ಬೆಳಗಾಂವದಿಂದ ಕಾರವಾರಕ್ಕೆ ಬರುವ ಹಾದಿಯಲ್ಲಿ ಮಲಪ್ರಭಾ ಹೊಳೆ ಇದ್ದು ಮಳೆಗಾಲದಲ್ಲಿ ನೀರು ತುಂಬಿ ದಾರಿಯು ಕಟ್ಟಾಗುವದು. ಪ್ರಯುಕ್ತ ಪ್ರಯಾಣಿಕರಿಗೆ ಗೈರಸೋಯಿ ಆಗಬಾರದೆಂಬದರ ಬಗ್ಗೆಯೇ "ಅಳ್ನಾವರಕ್ಕೆ" ಬರುವ "ಮುಂಬಯಿ ಮೇಲ್" ನೋಡಿಕೊಂಡು ಹಳಿಯಾಳ ಯಲ್ಲಾಪೂರ ಅಂಕೋಲಾ ಮಾರ್ಗವಾಗಿ "ಅದೇ ದಿವಸ" ಕಾರವಾರಕ್ಕೆ ಮುಟ್ಟುವಂತೆಯೂ ಕಾರವಾರದಿಂದ ಬೆಳಿಗ್ಗೆ ಹೊರಟು "ಮುಂಬಯಿ ಮತ್ತು ಬೆಂಗಳೂರ" ಕಡಿಗೆ ಹೋಗುವ ಮೇಲ್ ಗಾಡಿಗಳಿಗೆ" ಅಳ್ನಾವರಕ್ಕೆ ಮುಟ್ಟುವಂತೆ ಯೋಗ್ಯ ವ್ಯವಸ್ಥೆ ಇಟ್ಟಿರುತ್ತದೆ. "ಅಳ್ನಾವರದಲ್ಲಿ" ಪ್ರಯಾಣಿಕರಿಗೆ ಉಳಕೊಳ್ಳಲಿಕ್ಕೂ ಉಪಹಾರ ಮತ್ತು ಊಟದ ಬಗ್ಗೆ ವಗೈರೆ ಯೋಗ್ಯ ವ್ಯವಸ್ಥೆಯೂ ಇರುವದು.

ಪುನಃಶ್ಚ

ಮಳೆಗಾಲದ ನಂತರ:-

ಸೂಚನೆ:- ೧೯೨೭ನೇ ಸಪ್ಟಂಬರ ೧ನೇಯಿಂದಾ ಬೆಳಗಾಂವದಿಂದಾ ಕಾರವಾರಕ್ಕೆ "ಡೇಲಿ ಸರ್ವ್ಹೀಸವು" ಚಾಲು ಇರುವದು. ಟಿಕೇಟಿನ ದರಗಳು ಅಳ್ನಾವರದಲ್ಲಿಯ ಏಜಂಟರ ಆಫೀಸಿನಲ್ಲಿ ಇಳಿವೇ ಕೆಳಗಿನ ವಿಳಾಸದಲ್ಲಿ ಬರೆದು ತಿಳಕೊಳ್ಳಿರಿ.

ಹೆಚ್ಚಿನ ಸೂಚನೆ:- ಸ್ಪೆಶಲ್ ಮೋಟಾರಗಳು, ಅಗಾವು ತಿಳಿಸಿದ್ದಲ್ಲಿ ಯೋಗ್ಯ ದರದಿಂದ "ರಿಝರ್ವ" ಮಾಡಲ್ಪಡುವವು.

THE BELGAUM MOTOR WORKS & TRANSPORT CO.

ಬಗ್ಲೋಣ ರಾಮಾ ತಿಮ್ಮಣ್ಣಾ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ ವಿಭವ ಸಂ|| ದ

ಹೊಸ ಪಂಚಾಂಗಪಟ್ಟಿ

ಜಾಹೀರಾತಿ ಕೊಡಬೇಕೆನ್ನುವವರು

ಈ ಕೆಳಗಿನ ಪತ್ತೆಗೆ

ಇದೇ ೧೦ ನೇ ತಾರೀಖಿನ ಒಳಗಾಗಿ

ಪತ್ರವ್ಯವಹಾರ ಮಾಡತಕ್ಕದ್ದು

ಪಂಚಾಂಗಗಳು ಈ ತಿಂಗಳ ೩ ನೇ ತಾರೀಖಿನ ಸುಮಾರಿಗೆ

ಮಾರಾಟಕ್ಕೆ ಸಿದ್ಧವಾಗುತವೆ.

ಬೇಕಾದವರು ಶ್ರೀ ಘ್ರವೇ ತಿಳಿಸಬೇಕು

ನಿಯಮಿತ ಪ್ರತಿಗಳು ಮುದ್ರಿಸಲ್ಪಡುವವು

ಪತ್ತೆ:- ಮೆನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

The Brittannia Life Assurance Company Ltd

Head Office Kir i B ilin

F rt BOMBAY

ಈ ಕಂಪನಿಯಲ್ಲಿ ನಿಮ್ಮ ಜೀವಿತವನ್ನು ವಿಮಾ ಮಾಡಿಸುವದರಿಂದ ಆಗುವ ಲಾಭಗಳು ... ಹೆಚ್ಚಿನ ... ತಾಂಶ, ವಿಶ್ವಸ್ತನಿಂದ ಆಡಳಿತ, ... ಮತ್ತು ... ಯುಳ್ಳ ಡೈರೆಕ್ಟರರು ... ಇವರ ಕಂತುಗಳು ಬಹಳೇ ಕಡಿಮೆಯಾಗಿರುವವು ಆದ್ದರಿಂದ ಪುನಃ ಪುನಃ ಈ ಕಂಪನಿಯಲ್ಲಿಯೇ ವಿಮೆಯನ್ನಿಳಿಸಲು ಬಹುದೆಂದು ... ಸುಲಭವಾಗಿದೆ

ಈ ಸಂಬಂಧವನ್ನು ... ಬೇಕಾದ ಮಾಹಿತಿಯನ್ನು ನಮ್ಮ ಏಜಂಟರಾಗಲು ಇದೇ ವೇಳೆಕ್ಕೆ ಸಮಯವು ... ಅನುಭವ ... ಜನರು ಈ ಕೆಳಗಿನ ವಿಳಾಸಕ್ಕೆ ಬರೆಯಕೊಳ್ಳಿ

ದಿ ಬ್ರಿಟಾನಿಯಾ ಲೈಫ ಇನ್ಸುರೆನ್ಸ ಕಂಪನಿ ಲಿಮಿಟೆಡ್

... ಬಿಲ್ಡಿಂಗ ... ಫೋರ್ಟ,

ಮುಂಬಯಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ... ವಸ್ತುಗಳನ್ನು ... ಯನ್ನೂ, ಪಿಶ್ಯಾ ಕಡಿಮೆ ... ಮಾತ್ರ ತೆಗೆದು ಕೊಂಡು ... ಖರೀದಿ ಮಾಡಿ ಕಳಿಸುತ್ತೇವೆ ... ಹೆಚ್ಚಿಗೆ ಕೊಡುವದರಲ್ಲಿ ... ಗಳು, ... ಬೆಲೆಗೆ ... ಅರ್ಪಿಸಲ್ಪಡುತ್ತದೆ. ಗಿರಾಕಿಗಳಿಗೆ ಅನುಕೂಲವಾಗುವ ಹಾಗೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಟಲಾಗು ತರಿಸಿಕೊಳ್ಳಿ ... ಈಗ

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(... ಸಮಗ್ರ ... ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ... ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ... ಚಿತ್ರ ಕೆಲಸ ಮಾಡಲ್ಪಟ್ಟಿರುವದು. ... ಕೆಂಪು ಕಲ್ಲುಗಳನ್ನು ಗಟ್ಟಿ ಮೋಪಿಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು ಬಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವಮೆಂಟ್ಸುಗಳಿಂದ ಈ ಗಡಿಯಾರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧವಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ – ಫೌಂಟನ ಪೇನಾ ೧, ... ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧ ... ೧ ... ೧ ... ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ... ಹಾರ ೧, ದಂತದ ಬಾಚಣಿಗೆ ೧ ... ಗುಂಡಿಗಳ ಸೆಟ್ ೧, ಕೈವಸ್ತ್ರ ೧ ಈ ೧೫ ಬಹುಮಾನಗಳು ... ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ ಬೆಲೆ ರೂ ೪-೮-೦

ಪತ್ತೆ — **ಇಂಗ್ಲೀಷ ಎಂಪೋರಿಯಂ,**

ಪೋಸ್ಟ ಬಾಕ್ಸ ನಂ ೧೦೫, ಮದರಾಸು

ಟೇಬಲ್ ಟೈಂಪೀಸ ಇನಾಂ



ಈ ಚಿತ್ರದಲ್ಲಿ ತೋರಿಸಿದಂತ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು ಇದಕ್ಕೆ ೧೪ ... ಕ್ಯಾರೆಟ್ ನಿಬ್ ... ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹಳ ಚನ್ನಾಗಿ ಇರುತವೆ ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಇನಾಮವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ ೨-೮-೦.

ಪತ್ತೆ —ಸಿಟಿ ... ವಾಚ್ ಕಂಪನಿ ಪೋ ಬಾಕ್ಸ ನಂ. ೨೭ ಮದರಾಸು.

ಕಲ್ಪತರು ಮಿಶ್ರಣ

ಎಂದರೆ,

ಚಳಿ ಜ್ವರದ ಮೇಲೆ ದಿವ್ಯೌಷಧ

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಹೇಳಿರುವದು:-

ಏಷ ಕಲ್ಪತರ ನಾಮ ರಸಃ ಪರಮ ದುರ್ಲಭಃ | ಅಸಾಧ್ಯಂ ಚಿರಕಾಲೀನಂ ... ಷ ವಿಷಮ ಜ್ವರಮ್ | ಹಂತಿ ಜ್ವರಾತಿಸಾರ ... ಗ್ರಹಣೀಂ ಪಾಂಡು ಕಾಮಲಾಮ್ ||

ಎಂಟಂತೆ ... ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ... ರುಪಿಸಂತೆ ಶ್ರೇಯೋದಾಯಕವೆಂದು ಸಿದ್ಧವಾಗಿರುತ್ತದೆ ಜಂಗಲದೊಳಗಿನ ಹಳ್ಳಿಗಳು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ... ಇಲ್ಲದಾರದು ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗೆ ರೂ. ೧-೬-೦

ನಮ್ಮ ಪತ್ತೆ — **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸವರ್ಣ ಫಾರ್ಮಸಿ, ಗಡ್ಡೆಕೇರಿ, ಮಂಗಳೂರು

ಕ ಜಿಲ್ಲಾ ಏಜಂಟ — ಕಲಬಾಗ ಮಾಧವ ರಾವ ಶ್ಯಾನಭಾಗ

ವಿವಿಧ ಸಂಗ್ರಹ.

ದೇಶ ಸಂಚಾರಕರು.

ಕಳೆದ ಮಂಗಳವಾರ ತಾರೀಖು ೧೦ನೇಗೆ ೩೩೪ ಮಂದಿ ದೇಶಸಂಚಾರಕರು ಮುಂಬಯಿಯಲ್ಲಿ ಬಂದಿಳಿದಿದ್ದಾರೆ. ಇವರೊಳಗೆ ೧೦೦ ಮಂದಿ ಬ್ರಿಟಿಶರು; ಉಳಿದವರು ಅಮೇರಿಕೆಯವರು. ಇವರು ಭೂಪ್ರದಕ್ಷಿಣೆ ಮಾಡಿ ಮರಳುವ ನಿಶ್ಚಯಮಾಡಿದ್ದಾರೆ. ಮೊದಲು ೧೦೦ ಮಂದಿ ಬ್ರಿಟಿಶರು ಇಂಗ್ಲಂಡದ ಸೌದೆಂಪ್ಟನ್ ಪಟ್ಟಣದೊಳಗಿಂದ ಅಮೇರಿಕೆಯ ಕ್ವಿಬೆಕ್ ಪಟ್ಟಣಕ್ಕೆ ಹೋಗಿ, ಅಲ್ಲಿಂದ ನ್ಯೂಯಾರ್ಕ ಪಟ್ಟಣಕ್ಕೆ ಹೋಗಿ ಅಲ್ಲಿಂದ ೩೩೪ ಮಂದಿಗಳನ್ನು ಕೂಡಿಕೊಂಡು ನಮ್ಮ ಕಡೆ ಹೊರಟು ಬಂದಿದ್ದಾರೆ. ಸಂಚಾರಕರ ಮಂಡಳಿಯಲ್ಲಿ ಎಳೆ ಹುಡುಗಿಯರಿದ್ದಾರೆ. ಪ್ರಾಯ ಕಳೆದ ಮುದುಕಿಯರೂ ಇದ್ದಾರೆ. ಸುಂದರ ಹುಡುಗರು ಇದ್ದಾರೆ. ಮುದುಕರೂ ಇದ್ದಾರೆ! ಎಲ್ಲರೂ ಶ್ರೀಮಂತರೆಂದು ಬೇರೆ ಹೇಳಬೇಕಾಗಿಲ್ಲ. ಅಮೇರಿಕೆಯಿಂದ ಮುಂಬಯಿಗೆ ಬರಲು ಅವರಿಗೆ ೧ ತಿಂಗಳು ತಗಲಿತು. ಈಗ ಇವರು ದಿಲ್ಲಿ, ಆಗ್ರಾ, ಕಾಶಿ ಮುಂತಾದ ಸ್ಥಳಗಳಿಗೆ ಹೋಗಿ ಬರಲು ಎಲ್ಲರೂ ಕೂಡಿ ಎಲ್ಲ ಪಟ್ಟಣಗಳಿಗೆ ಹೋಗುವ ಆಲೋಚನೆಯಲ್ಲಿಲ್ಲ. ಕೆಲಕೆಲವರು ಕೆಲವು ಪಟ್ಟಣಗಳಿಗೆ ಹೋಗುವರು. ನಾಳೆ ೧೭ನೇ ತಾರೀಖಿನೊಳಗೆ ಅಖಿಲ ಭರತ ಖಂಡದ ಸಂಚಾರ ಮುಗಿಸಿ, ಪುನಃ ಮುಂಬಯಿಗೆ ಬಂದು, ಅದೇ ದೋಣಿಯನ್ನು ಹತ್ತಿ ಕೊಲಂಬೋ ಪಟ್ಟಣಕ್ಕೆ ಹೋಗಲಿರುವರು. ಅಲ್ಲಿಂದ ಜಪಾನ ಮುಂತಾದ ದೇಶಗಳಿಗೆ ಹೋಗಿ ಎಪ್ರಿಲ್ ತಿಂಗಳಿನಲ್ಲಿ ಸ್ವದೇಶಗಳಿಗೆ ಹೋಗಿ ಮುಟ್ಟುವರು. ೩-೪ ತಿಂಗಳಲ್ಲಿ ಭೂಪ್ರದಕ್ಷಿಣೆ ಮಾಡಿ ಸಂಚಾರಿಗಳಿಗೆ ಏನು ಬೋಧವಾಗುವದೆಂದು ಯಾರೂ ತರ್ಕಿಸಬಹುದು!

* *

ಪದಭ್ರಷ್ಟ ಇಂದೂರ ಮಹಾರಾಜರಿಗೆ ಮದುವೆ!

ಇಂದೂರ ಮಹಾರಾಜರಿಗೆ ೩ ನೇ ಮದುವೆಯಾಗಲಿಕ್ಕಿದೆ. ಈಗಿನ ಹೆಣ್ಣು ಅಮೇರಿಕೆಯವಳು, ಅವಳ ಹೆಸರು ಕುಮಾರಿ ನೆನ್ಸಿ ಮಿಲ್ಲರ ಎಂದು. ಇವಳಿಗೂ, ಮಹಾರಾಜರಿಗೂ ಅಮೇರಿಕೆಯಲ್ಲಿಯೇ ಭೆಟ್ಟಿಯಾಯಿತು. ಇವಳು ಮಿಲ್ಲರ ಕುಟುಂಬದವಳು. ಕೆಲಿಫೋರ್ನಿಯಾದಲ್ಲಿ ಇವಳ ದೊಡ್ಡ ಮನೆಯಿದೆ. ಮಹಾರಾಜರು ಅಲ್ಲಿ ಹೋದಾಗ ಅವರ ಬಹಳೇ ಸತ್ಕಾರವಾಯಿತು. ಮಹಾರಾಜರು ೧೫ ದಿನಗಳ ತನಕ ಅಲ್ಲಿದ್ದರು. ಕೆಲಿಫೋರ್ನಿಯಾದಲ್ಲೇ ಮಹಾರಾಜರು ಇವಳೊಡನೆ ಸಂಸಾರ ನಡಿಸುವರೆಂದು ಒಂದು ಸುದ್ದಿ ಹಬ್ಬಿತ್ತು. ಆದರೆ, ಈಗ ಹಿಂದುಸ್ಥಾನದಲ್ಲಿಯೇ ಮದುವೆಯಾಗುವ ನಿಶ್ಚಯವಾಗಿದೆ! ಮಿಲ್ಲರಳವಳು "ಜೆನಿವಾ" ಹಡಗದಿಂದ ಡಿಶಂಬರ ೨೬ ನೇ ತಾರೀಖಿಗೆ ಮುಂಬಯಿಯಲ್ಲಿ ಬಂದಿಳಿದಳು, ೩೧ ನೇ ತಾರೀಖಿಗೆ ಮಹಾರಾಜರು ಕೊಲಂಬೋ ಪಟ್ಟಣಕ್ಕೆ ಬಂದಿಳಿದರು. ಮಹಾರಾಜರನ್ನು ಕಾಣಲು ಮಿಲ್ಲರಳು ಕೊಲಂಬೋ ಪಟ್ಟಣಕ್ಕೆ ತೆರಳಿದ್ದಾಳೆಂದು ಸುದ್ದಿಯಿದೆ. ಮಿಲ್ಲರಳು ಸುಸ್ವರೂಪದ ಹೆಂಗಸು; ಮುಖಮುದ್ರೆಯು ಚಿತ್ತಾಕರ್ಷಕವಿದೆ, ಇದೇನು ಹೇಳಬೇಕಾಗಿಲ್ಲ, ಚಿತ್ತಾಕರ್ಷಕವಿದ್ದದರಿಂದಲೇ ಪೂರ್ವದ ಇಬ್ಬ ಹೆಂಡಿರಿದ್ದ ಮಹಾರಾಜರು ಅವಳಿಗೆ ಮೋಹಿತರಾದರು. ಆಧುನಿಕ ಪದ್ಧತಿಯಂತೆ ಇವಳ ಕೂದಲುಗಳನ್ನು ಹೆಣಕೊಳ್ಳುವದಿಲ್ಲ, ಕೂದಲುಗಳನ್ನು ಸಾಮಾನ್ಯ ಹಿಂದು ಪದ್ಧತಿಯಂತೆ ಗುಡಿಯಾಗಿ ಕಟ್ಟಿಕೊಳ್ಳುತ್ತಾಳೆ. ಇವಳ ಉಡಿಗೆ ತೊಡಿಗೆಗಳು ಬಹು ಸೊಗಸಾಗಿದ್ದವು. ಬಹುತರವಾಗಿ ಇವಳು ಯುರೋಪಿಯನ್ ಸ್ತ್ರೀಯಾಣಿಕರೊಡನೆ ಸೇರಿ ನಡಕೊಳ್ಳುತ್ತಿದ್ದಳು, ಭೋಜನವನ್ನು ಭಾರತೀಯರೊಡನೆ ಕೊಳ್ಳುತ್ತಿದ್ದಳು. ಮಾತಾಡುವದೇ ಕಷ್ಟ; ಮಾತಾಡುವದಾದರೂ ಹಿಂದೀಯರೊಡನೆಯೇ. ಮಹಾರಾಜರಿಗೆ ಮೊಟ್ಟಮೊದಲು ಇವಳ ಭೆಟ್ಟಿಯು ಎಲ್ಲಾಯಿತು, ಹ್ಯಾಗಾಯಿತು ಎಂಬುದು ಇನ್ನೂ ತಿಳಿಯಲಿಲ್ಲ. ಭೆಟ್ಟಿಯಾದದ್ದೇನೋ ನಿಜ. ಆ ಭೆಟ್ಟಿಯೇ ಗೆಳೆತನವಾಯಿತು. ಮುಂದೆ ಮದುವೆಯಾಗಿ ಆ ಗೆಳೆತನವನ್ನು ದೃಢಪಡಿಸಬೇಕಾಗಿ ಗೊತ್ತಾಗಿದೆ. ಮುಂಬಯಿಯಲ್ಲಿ ಅಮೇ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತಾರೆ. ಕೂದಲು ಮನೋಹರವಾಗಿರಬೇಕೆಂದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನ ಎಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮಲಗುವಾಗ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

½ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ ದಿಲ್ಲ

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ರಿಕೆಯ ರಾಯ ಬಾರಿಗಳಿದ್ದಾರೆ, ಅವರಿಗೆ ಮಿಲ್ಲರಳು ಬರುವ ಸುದ್ದಿ ಮುಂಚಾಗಿ ತಿಳಿದಿತ್ತು. ಅವಳಿಗೆ ಮದುವೆಯಾಗದಂತೆ ಪರಿಪರಿಯಿಂದ ಹೇಳಿದ್ದಾಯಿತಂತೆ! ಆದರೂ, ಅವಳೇನು ಲಕ್ಷಿಸಲಿಲ್ಲ. ನಿಶ್ಚಯವಾಗಿ ಮದುವೆಯಾಗುವದಿದೆ. ಮಿಲ್ಲರಳ ಜೊತೆಗೆ ಅವಳ ಅಜ್ಜಿಯೂ ಬಂದಿದ್ದಾಳೆ. ಇವರೂ, ಒಬ್ಬ ದಾಸಿಯೂ ಗುಪ್ತ ಹೆಸರು ಧರಿಸಿಕೊಂಡು ಮುಂಬಯಿಯಿಂದ ಕೊಲಂಬೋ ಮುಖವಾಗಿ ಹೊರಟಿದ್ದಾರೆ. ಮಹಾರಾಜರ ಪರಿವಾರದ ಮಿ|| ಅಬ್ದುಲ್ ರಶೀದರವರೂ, ಕೆಪ್ಟನ್ ಆರ್. ಬಿ. ಜಾಧವರವರೂ ಅವರ ಜೊತೆಗಿದ್ದಾರೆ. ೧೯೨೫ ಇಸ್ವಿಯಲ್ಲಿ ಮಹಾರಾಜರು ಪದಭ್ರಷ್ಟರಾಗಿ ಯುರೋಪ ಖಂಡಕ್ಕೆ ಸಂಚಾರಕ್ಕಾಗಿ ಹೊರಟಿದ್ದರು, ಸಂಚಾರದಿಂದ ಹೆಣ್ಣು ಸಂಪಾದಿಸಿಕೊಂಡು ಸ್ವದೇಶಕ್ಕೆ ಮರಳಿದ್ದಾರೆ! ಮಿಲ್ಲರಳ ತಾಯಿಯು ಮದುವೆಯಾಗಬಾರದೆಂದು ಹೇಳಿದಾಗ್ಯೂ ಅವಳು ಕೇಳಲಿಲ್ಲ. ಇದೆಲ್ಲ ವೃತ್ತಾಂತ ವರ್ತಮಾನಪತ್ರಗಳಲ್ಲಿ ಪ್ರಕಟವಾದ ಸಂಧಿಯು ಮಹಾರಾಜರಿಗೆ ಕೊಲಂಬೋದಲ್ಲಿ ತಿಳಿಯಿತು. ತುಕೋಜಿರಾಯರಿಗೆ ಮದುವೆಯಾಗದಂತೆ ಅನೇಕ ಆಪ್ತೇಷ್ಟರ ಕಡೆಯಿಂದಲೂ ಇತರ ಕಡೆಗಳಿಂದಲೂ ಒತ್ತಾಯವಾಗಹತ್ತಿದೆ. ಬ್ರಿಟಿಶ ಅಧಿಕಾರಿಗಳೂ ಈ ಮದುವೆಯನ್ನು ಪುರಸ್ಕರಿಸಲಿಲ್ಲ. ಆದರೂ ತುಕೋಜಿರಾಯರು ಕೊಲಂಬೋದಿಂದಲೇ ಯುರೋಪ ಖಂಡಕ್ಕೆ ಮರಳಿ ಹೋಗುವವರಿದ್ದಾರಂತೆ. ಮಿಲ್ಲರಳಂತೂ ಎಷ್ಟಕ್ಕೂ ರಾಣಿಯಾಗಲೊಲ್ಲಳು. ವರ್ತಮಾನ ಪತ್ರಿಕೆಯ ಪ್ರತಿನಿಧಿಗಳು ಮಿಲ್ಲರಳ ಬಳಿ ಹೋಗಿ ಇದರ ಹಕೀಕತವನ್ನು ಕೇಳಬಯಸಿದರು. ಅವರಿಗ್ಯಾರಿಗೂ ಅವಳು ಏನೊಂದನ್ನೂ ಹೇಳಲಿಲ್ಲ. ಈ ದೂರದಲ್ಲಿಯೂ ಮಹಾರಾಜರಿಗೆ ವಿಶೇಷ ಆತುರತೆಯಿಂದ ಬರಮಾಡಿಕೊಳ್ಳುವ ಲಕ್ಷಣಗಳಿಲ್ಲವಂತೆ. ತೀರ್ಥಾಟನಕ್ಕಾಗಿ ತ್ರಿದಂಡಿ ಸನ್ಯಾಸವೇಷವನ್ನು ಧರಿಸಿ ಹೊರಟ ಅರ್ಜುನನು ಸುಭದ್ರಾದೇವಿಗೆ ಕರೆತಂದಂತಾಯಿತ!! ಅದು ಪೌರಾಣಿಕ ಕಥೆ! ಇದು ಅರ್ವಾಚೀನ ಕಥೆ!! ಅರ್ಜುನನೂ ಆ ಕಾಲದಲ್ಲಿ ಪದಭ್ರಷ್ಟನಾಗಿದ್ದನು!!!

* * *

೪೪ ಸಾವಿರದ ದಾವೆಗೆ ೬೦ ಸಾವಿರ ಖರ್ಚು!

ಸದ್ಯಕ್ಕೆ ವಿಲಾಯತಿಯೊಳಗಿನ ಪರಿಷ್ಟ ನ್ಯಾಯಾಸನವೆಂದ ದೊರೆಗಳ ಆಸ್ಥಾನವು ಒಂದು ತೀರ್ಪನ್ನು ಕೊಟ್ಟಿದೆ. ಆ ಪ್ರಕರಣದಲ್ಲಿಯ ವಿವಾದದ ರಕಮು ೪೪ ಸಾವಿರ ಪವನು! ದಾವೆಯ ಹಕೀಕತು ಈ ಪ್ರಕಾರವಿದೆ — ಬೆಲ್ಜಮ ದೇಶದ ರಾಜಧಾನಿಯಾದ ಬ್ರುಸಲ್ಸ ಪಟ್ಟಣದಲ್ಲಿ ಮಿ|| ಜೋನಸ್ ಲೀಕ ಎಂಬ ಮಹಾನುಭಾವರಿದ್ದಾರೆ. ಅವರಿಗೆ ಟಪಾಲ ಸ್ಟಾಂಪುಗಳನ್ನು ಸಂಗ್ರಹಿಸುವ ಹುರುಳು ಬಹಳ! ಬಹಳ ಸ್ಟಾಂಪುಗಳನ್ನು ಸಂಗ್ರಹಿಸಿದ್ದರು!! ಅವುಗಳ ವಿಮೆಯನ್ನೂ ಇಳಿಸಿದ್ದರು!!! ಬರ್ಲಿನ್‌ಕ್ಕೆ ಅವರು ಹೋಗಿದ್ದರು, ಅಲ್ಲಿಯ ಅವರ ಶಯನಾಗಾರದಿಂದ ಆ ಸ್ಟಾಂಪುಗಳು ಕಳವಿಗೆ ಹೋದವು. ಅದರಿಂದ ೪೪ ಸಾವಿರ ಪವನುಗಳ ದಾವೆಯು ವಿಮೆ ಕಂಪನಿಯವರ ಮೇಲೆ ದಾಖಲಾಯಿತು! ಮೂಲ ಕೋರ್ಟಿನಲ್ಲಿ ಲೀಕರವರ ಸ್ಟಾಂಪು ಕಳವಾದದ್ದು ನಿಜವೆಂದು ತೀರ್ಮಾನಿಸಿತು, ಆದರೆ, ನಷ್ಟವಾಗಿಲ್ಲೆಂದು ಕೋರ್ಟಿನ ಅಭಿಪ್ರಾಯವಾಯಿತು. ಅಪೀಲಿನಲ್ಲಿ ಲೀಕರವರು ಗೆದ್ದರು. ದೊರೆಗಳ ಆಸ್ಥಾನದಲ್ಲಿ ೧೪ ದಿನಗಳ ತನಕ ವಿವಾದಗಳು ನಡೆದವು. ಮೂವರ ನ್ಯಾಯಮೂರ್ತಿಗಳಲ್ಲಿ ಇಬ್ಬರು ಲೀಕರವರಿಗೆ ವಿರುದ್ಧವಾದ ಅಭಿಪ್ರಾಯ ಕೊಟ್ಟು ಅಪೀಲ ಕೋರ್ಟಿನ ತೀರ್ಮಾನವನ್ನು ರದ್ದುಪಡಿಸಿದರು. ತೀರ್ಪು ೧೭ ಸಾವಿರ ಶಬ್ದಗಳುಳ್ಳದ್ದು. ಖರ್ಚು ೬೦ ಸಾವಿರ; ಕಾಯಿದೆಯ ಖರ್ಚಿದು!! ಕಾಂಟ್ರಾಕ್ಟಿಗೆ ಗ್ರಾಹ್ಯವಾಗದ ಖರ್ಚು ಎಷ್ಟಾಗಿರುತ್ತದೋ ಏನೋ!

* * *

ಮುದುಮಗನ ಮೇಲೆ ಮುದುಮಗಳ ದಾವೆ.

ಲಿವ್ಹರಪೂಲಿನ ಕೋರ್ಟಿನಲ್ಲಿ ಹೆಣ್ಣುಮಗಳೊಬ್ಬಳು ತನ್ನ ಪ್ರೇಮಪಾತ್ರನ ಮೇಲೆ ದಾವೆ ಹೂಡಿ ೧೦೦ ಪವನು ನಷ್ಟ ಪಡೆದುಕೊಂಡಿದ್ದಾಳೆ. ದಾವೆಯ ಹಕೀಕತು ಭಯಂಕರ ಮನೋರಂಜಕವಿದೆ. ಹೆಣ್ಣುಮಗಳ ಹೆಸರು ಜೇಡ ಎಂದು; ಗಂಡಸಿನ ಹೆಸರು ಥೊಮಸ್ ಎಂದು. ಇಬ್ಬರಿಗೂ ಪ್ರೇಮ ಬೆಳೆದು ಹೀಗೆ ಪ್ರೇಮಚೇಷ್ಟೆ ನಡೆಯುತ್ತಿರುವಾಗ ಥೊಮಸ್‌ನು ಭವಿಷ್ಯದ ಅರ್ಧಾಂಗಿಯ ಉಮೇದ್ವಾರಿಯನ್ನು ವಿಶೇಷ ಉತ್ಸಾಹದಿಂದ ನಡಿಸಲು ವ್ಯಕ್ತನಾಗಿ ಜೇಡಳನ್ನು ಮೋಟಾರಿನಲ್ಲಿ ಕೂಡಿಸಿಕೊಂಡು ಹೋಗುತ್ತಿದ್ದನು; ಹುಡುಗನೊಬ್ಬನು ಸೈಕಲಿನ ಮೇಲೆ ಕೂತು ಇದಿರಾಗಬಂದನು. ಆತನನ್ನು ತಪ್ಪಿಸಿಕೊಳ್ಳಲು ಥೊಮಸ್‌ನು ಮೋಟಾರನ್ನು ಅಡ್ಡತಿರುಗಿಸಲು ಮೋಟಾರು ಹಿಂದು ಮುಂದಕ್ಕೆ ಅಪ್ಪಳಿಸಿ, ಜೇಡಳವಳಿಗೆ ಪೆಟ್ಟಾಯಿತು. ಅವಳ ಮೋರೆಗೂ, ಕುತ್ತಿಗೆಗೂ ಗಾಯಗಳಾದವು. ಥೊಮಸ್‌ನು ಅಜಾಗ್ರತೆಯಿಂದ ಮೋಟಾರು ಹೊಡೆದು ತನಗೆ ಗಾಯಗಳನ್ನುಂಟುಮಾಡಲು ಕಾರಣನೆಂದು ನಷ್ಟಭರಣಿಯ ದಾವೆ. ಗಾಯವಾಗಿ ಮೋರೆಯ ಮೇಲೆ ಎದ್ದ ಕಲೆಗಳಿಂದ ತನಗೆ ಉಂಟಾದ ನಷ್ಟವನ್ನು ಅವಳು ಬೇಡಿದ್ದಾಳೆ. ದಾವೆಯು ಶುರುವಾಯಿತು. ಜೇಡಳು ಥೊಮಸನ ಬಳಿ ಹೋಗಿ ಮುದ್ದಿಟ್ಟುಕೊಳ್ಳುತ್ತಿದ್ದಾಳೆ!! ಇನ್ನೂ ಇಬ್ಬರಿಗೂ ಮದುವೆಯಾಗುವದಾಗಿದೆ; ಆದರೂ, ದಾವೆಯು ಜಗ್ಗಿಟ ತಪ್ಪದು. ಪಾಶ್ಚಾತ್ಯ ಸಂಸ್ಕೃತಿಯ ನಮೂನೆ ನೋಡಿರಿ.

* * *

ಸ್ತ್ರೀಯರ ಮಾನ ರಕ್ಷಿಸಿರಿ.

ಫ್ರಾನ್ಸ ದೇಶದ ಪಾರೀಸ ಕೋರ್ಟಿನಲ್ಲಿ ಒಂದು ಫಿರ್ಯಾದಿಯು ಕಳೆದ ೭ನೇ ತಾರೀಖಿಗೆ ಇತ್ಯರ್ಥವಾಯಿತು. ಸಾವುಕಾರರೊಬ್ಬರು ಒಬ್ಬ ಹೆಂಗಸಿನ ಮೇಲೆ ಬಲಾತ್ಕಾರ ಮಾಡಲುದ್ಯುಕ್ತರಾಗಿದ್ದರು. ಅದನ್ನು ಕೆಲಸದವನೂ, ಮಾಲಕನೂ ಆದ ಪುಣ್ಯಾತ್ಮನೊಬ್ಬನು ನೋಡಿದನು. ಆತನು ಕೂಡಲೆ ಸಾವುಕಾರನಿಗೆ ಗುಂಡು ಹಾಕಿ ಕೊಂದನು. ಕೊಲೆಪಾತಕದ ಖಟ್ಲೆಯಾಯಿತು. ನ್ಯಾಯಮೂರ್ತಿಗಳು ಆತನಿಗೆ ದೋಷಮುಕ್ತ ಮಾಡಿ ಬಿಟ್ಟುಕೊಟ್ಟರು. ಸ್ತ್ರೀ ಮಾನಭಂಗರಕ್ಷಣೆಗಾಗಿ ಆತನು ಕೊಲೆ ಮಾಡಿದನೆಂದೂ, ಅದು ನ್ಯಾಯಕ್ಕೆ ಗ್ರಾಹ್ಯವೆಂದೂ ನ್ಯಾ|| ಮೂ|| ಗಳ ಅಭಿಪ್ರಾಯ. ಪಾಶ್ಚಾತ್ಯ ದೇಶದಲ್ಲಿಯೂ ಸ್ತ್ರೀ ಮಾನರಕ್ಷಣೆಯು ಎಲ್ಲಕ್ಕೂ ಶ್ರೇಷ್ಠವೆಂದು ತಿಳಿಯುವ ಹಾಗಿದೆ.

* * *

ಗಡ್ಡ-ಮೀಸೆಗಳುಳ್ಳ ಕೂಸು.

ಅಮೇರಿಕೆಯ ಬ್ರಾಝಿಲ ದೇಶದ ರಾಜಧಾನಿಯಾದ ರಿಯೋ ಡಿ ಜಾನೀರಿಯೋ ಪಟ್ಟಣದಲ್ಲಿ ಒಕ್ಕಲತಿಯೊಬ್ಬಳು ಕಳೆದ ೧೦ ನೇ ತಾರೀಖಿಗೆ ಜನನವಾಗಿ ಒಂದು ಕೂಸನ್ನು ಹೆತ್ತಿದ್ದಾಳೆ. ಆ ಕೂಸಿಗೆ ಗಡ್ಡ-ಮೀಸೆಗಳಿವೆ. ಸೃಷ್ಟಿಕರ್ತನ ಲೀಲೆ!

* * *

ಅಮೀರರಾದ ಅಮಾನುಲ್ಲಾ ಖಾನರವರ ದಿನಚರ್ಯೆ.

“ಖಿಲಾಫತ ಡೇಲಿ” ಯಲ್ಲಿ ಅಫಘಾಣಿಸ್ಥಾನದ ಅಮೀರರಾದ ಅಮಾನುಲ್ಲಾ ಖಾನರವರ ದಿನಚರ್ಯೆಯು ಪ್ರಕಟವಾಗಿದೆ. ಅಮಾನುಲ್ಲಾ ಖಾನರವರು ನಸುಕು ಹರಿಯುವದರೊಳಗೆ ಏಳುತ್ತಾರೆ; ಮುಖ ಅಡ್ಡಾಡಹೋಗುತ್ತಾರೆ. ಕಾಲಿನಿಂದಲೂ, ಮೋಟಾರಿನಿಂದಲೂ ಅಡ್ಡಾಡಹೋಗುತ್ತಾರೆ. ಆ ಸಮಯದಲ್ಲಿ ಯಾರೂ ಅಮೀರರ ಜೊತೆಯಲ್ಲಿರುವದಿಲ್ಲ. ದೇಶದಲ್ಲಿ ಹೋಗುತ್ತಾರೆ; ಎಲ್ಲಿ ಹೋಗುತ್ತಾರೆಂದು ಯಾರಿಗೂ ತಿಳಿಯುವದಿಲ್ಲ. ಚಿಕ್ಕಪುಟ್ಟ ಊರುಗಳಲ್ಲಿ ಸಹ ಹೋಗಿ ಆರೋಗ್ಯ ಖಾತೆಯವರು ಸರಿಯಾಗಿ ವ್ಯವಸ್ಥೆ ನಡಿಸಿದ್ದಾರೇನೆಂದು ಕಣ್ಣಾರೆ ನೋಡುತ್ತಾರೆ. ಸಂಚಾರದಿಂದ ಮರಳಿದ ಬಳಿಕ, ಫಲಾಹಾರ ಮಾಡುತ್ತಾರೆ. ಆ ಮೇಲೆ ರಾಜ್ಯಾಡಳಿತೆಯ ಬೆಳಗಿನ ಕೆಲಸ. ೮ ಘಂಟೆಯಿಂದ ೩ ಘಂಟೆಯ ತನಕ ರಾಜ್ಯಕಾರಭಾರವನ್ನು ನೋಡುತ್ತ ಕೂಡುತ್ತಾರೆ. ಒಂದು ಘಂಟೆಗೆ ಊಟ. ಅದನ್ನು ಪ್ರಧಾನರ ಜೊತೆಗಾಗಲಿ ಗೆಳೆಯರ ಜೊತೆಗಾಗಲಿ, ಒಬ್ಬರೇ ಆಗಲಿ ಕೊಳ್ಳುತ್ತಾರೆ. ಆಹಾರ ಸಾಮಗ್ರಿಗಳು ತೀರ ಸಾಮಾನ್ಯ. ಅಕ್ಕಿ ಉಣ್ಣುವದು ಅಪರೂಪ. ಕಾಡ್ಲಿ ರೊಟ್ಟಿ, ಮಾಂಸದ ಸಾರು, ಕುರಿ ಮಾಂಸದ ೨-೩ ಬಗೆಯ ಪದಾರ್ಥ; ಇಷ್ಟೇ ಅವರ ನಿತ್ಯದ ಆಹಾರ. ಮಿಷ್ಟಾನ್ನ—ಮಿಠಾಯಿ ಮೊದಲಾದವುಗಳನ್ನು ತಿನ್ನುವದು ಅಪರೂಪ. ಹಣ್ಣು-ಹಂಪಲಗಳ ಮೇಲೆ ಅವರಿಗೆ ಬಹು ಪ್ರೀತಿ. ಹಗಲಿಗೆ ಅವರು ಎಂದೂ ಅಂತಃಪುರಕ್ಕೆ ಹೋಗುವದಿಲ್ಲ. ನಿತ್ಯದ ಕೆಲಸವಾದ ಬಳಿಕ, ಕೆಲಹೊತ್ತು ಟೆನಿಸ್ ಚೆಂಡಾಟವನ್ನಾಡುತ್ತಾರೆ; ಆಮೇಲೆ ಪಹರೆಕಾರರೊಡನಾಗಿ ಹೊರ ಅಡ್ಡಾಡುತ್ತಾರೆ. ಈ ಸಮಯದ ಬಡಬಗ್ಗರ ದೂರುಗಳನ್ನು ಕೇಳಿಕೊಳ್ಳುತ್ತಾರೆ. ಯಾರಾದರೊಬ್ಬರು ಕಾಲು ನೋತು ಕೂತುಕೊಂಡರೆ, ಅವರಿಗೆ ತಮ್ಮ ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಅವರಿಗೆ ಬೇಕಾದಲ್ಲಿ ಒಯ್ದುಬಿಡುತ್ತಾರೆ. ಕುದುರೆಯ ಮೇಲೆ ಸವಾರಿ ಮಾಡುವದರಲ್ಲಿ ಇವರಿಗೆ ವಿಶೇಷ ಪ್ರೀತಿ. ಯಾರಿಗೂ ಇವರು ಗೊತ್ತಿರಿಸದಿ. ಸಾಯಂಕಾಲದ ಸಂಚಾರ ಮುಗಿಸಿ ಇವರು ಅಂತಃಪುರವನ್ನು ಸೇರುತ್ತಾರೆ. ಅಲ್ಲಿ ತಮ್ಮ ಪತ್ನಿಯ ಪರಿವಾರದ ಸಹಾ ಮನುಷ್ಯರೊಡನೆ ಭೋಜನ ಮಾಡುತ್ತಾರೆ. ಅಮಾನುಲ್ಲಾ ಖಾನರವರಿಗೆ ಒಬ್ಬಳೇ ಪತ್ನಿ. ಇನ್ನೊಬ್ಬರನ್ನೂ ಅವರು ಮದುವೆ ಮಾಡಿಕೊಳ್ಳಲಿಕ್ಕಿಲ್ಲ. ಇಬ್ಬರೂ ಬಹು ಪ್ರೇಮದಿಂದಿದ್ದಾರೆ. ಸಂತತಿಗೆ ೭ ಮಕ್ಕಳಾಗಿದ್ದಾರೆ. ೪ ಮಂದಿ ಕುಮಾರಿಯರು, ೩ ಮಂದಿ ಮಗಂದಿರು. ಅಮೀರರ ಜೊತೆಗೆ ಆಡುವ ರಹಿಮತುಲ್ಲಾ ಖಾನರವರು ೮ ವರ್ಷ ವಯಸ್ಸಿನವರು. ಅಮಾನುಲ್ಲಾ ಖಾನರವರಿಗೆ ಫ್ರೆಂಚ, ಟರ್ಕಿ, ಇರಾಣಿ ಭಾಷೆಗಳು ಬರುತ್ತವೆ. ಕೆಲಮಟ್ಟಿಗೆ ಉರ್ದು ಭಾಷೆಯೂ ಬರುತ್ತದೆ. ಇಂಥ ಅರಸರಿಗೆ ಪ್ರಜೆಗಳು ಪ್ರೀತಿಸುವದು ಸಹಜವಲ್ಲವೆ?

* * *

ವಿಚಿತ್ರ ಪ್ರಸಂಗ, ಹೆಂಡತಿ-ಹೆಂಗಸಲ್ಲ.

ರತ್ನಾಗಿರಿ ಜಿಲ್ಲೆಯ ಒಂದು ಘಟಸ್ಫೋಟದ ಪ್ರಕರಣವು ಮುಂಬಯಿ ಹೈಕೋರ್ಟಿನಲ್ಲಿ ಸದ್ಯಕ್ಕೆ ತೀರ್ಮಾನವಾಯಿತು. ರತ್ನಾಗಿರಿ ಜಿಲ್ಲೆಯ ಮುದಸಗಡ ಎಂಬಲ್ಲಿ ರಾ। ಚವ್ಹಾಣ ಎಂಬ ಪೋಲೀಸ ಸಬ್ ಇನ್ಸಪೆಕ್ಟರಿದ್ದಾರೆ. ಅವರು ತಾ. ೨೪-೬-೧೯೨೬ನೇಗೆ ಅನಸೂಯಾಬಾಯಿಯನ್ನು ಮದುವೆಯಾದರು. ಒಂದು ವಾರದ ಮೇಲೆ ಅನಸೂಯಾ ಬಾಯಿಯ ಸ್ತ್ರೀ-ಅವಯವಗಳು ಸರಿಯಾಗಿಲ್ಲವೆಂದು ತಿಳಿದುಬಂತು. ಈ ಸಂಗತಿಯನ್ನು ಮಾವಂದಿರಿಗೆ ಚವ್ಹಾಣರು ತಿಳಿಸಿದರು. ಮಾವನು ಗಾಬರಿಗೆಟ್ಟನು. ಎಲ್ಲವನ್ನೂ ಗುಪ್ತವಾಗಿಡುವ ದೆಸೆಯಿಂದ ಘಟಸ್ಫೋಟವನ್ನು ತಾನು ಕೇಳುವದಿಲ್ಲವಾಗಿ ಅಳಿಯನಿಗೆ ಬರಕೊಟ್ಟನು. ಅಳಿಯನು ಹಾಕಿದ ಚಿನ್ನವನ್ನೂ ತಿರುಗಿ ಕೊಟ್ಟನು; ಮದುವೆಯ ಬಗ್ಗೆ ಖರ್ಚು ಮಾಡಿದ ೫೫೦ ರೂಪಾಯಿಗಳನ್ನೂ ಕೊಡಲೊಪ್ಪಿದನು. ಕೆಲವು ಕಾಲವಾದ ಮೇಲೆ ನಾಟಕವು ಬೇರೆಯಾಯಿತೆಂತ ಕಾಣುತ್ತದೆ! ಅನಸೂಯಾ ಬಾಯಿಯು ವೆ ಜಸ್ಟೀಸ ಕೋರ್ಟಿನಲ್ಲಿ ಘಟಸ್ಫೋಟದ ಅರ್ಜಿಯನ್ನು ದಾಖಲ ಮಾಡಿದಳು. ಗಂಡನು ತನಗೆ ನಿಷ್ಕಾರಣವಾಗಿ ತೊರೆದನಾಗಿಯೂ ಅವಳ ಸಾಧನೆ. ರಾ। ಚವ್ಹಾಣರವರು ಉತ್ತರ ಕೊಟ್ಟದ್ದೇನಂದರೆ.— ಅನಸೂಯಾಬಾಯಿಯು ಹೆಂಗಸಲ್ಲ, ಆದರಿಂದ ಆಕೆಯೊಡನೆ ನಾನು ಮದುವೆಯಾಗಿದ್ದೇನೆಂದು ಹೇಳಬರದು. ಮದುವೆಯು ಅಸಿದ್ಧವಾಗಿರುತ್ತದೆ. ವೈದ್ಯಪ್ರಮಾಣಗಳನ್ನು ಕೊಡಲು ಅವರು ಸಿದ್ಧರಿದ್ದರು. ಮಾವನು ತಮ್ಮ ಮಗಳು ಸ್ತ್ರೀಯೆಂದು ತಮಗೆ ಠಕ್ಕಿಸಿದರಾಗಿಯೂ ರಾ। ಚವ್ಹಾಣರವರು ಸಾಧಿಸಿದರು. ಮೆಜಿಸ್ಟ್ರೇಟರು ಮದುವೆಯ ಗ್ರಾಹ್ಯಾಗ್ರಾಹ್ಯತೆಯನ್ನೂ, ನೀತಿಯನ್ನೂ ದಿವಾಣಿ ಕೋರ್ಟಿನಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕಾಗಿ ಅಭಿಪ್ರಾಯಪಟ್ಟು, ತಿಂಗಳಿಗೆ ೩೦ ರೂಪಾಯಿಗಳಂತೆ ಘಟಸ್ಫೋಟವನ್ನು ಕೊಡಬೇಕೆಂದು ಹುಕುಮು ಮಾಡಿದರು. ಶಾಸ್ತ್ರದಂತೆ ನಡಿಸಿದ ಮದುವೆಯನ್ನು ರದ್ದು ಮಾಡುವ ಅಧಿಕಾರವು ಮೆಜಿಸ್ಟ್ರೇಟರಿಗಿರುವದಿಲ್ಲವಾಗಿ ಮೆಜಿಸ್ಟ್ರೇಟರು ನಮೂದಿಸಿದ್ದಾರೆ; ಅನಸೂಯಾಬಾಯಿಯ ಅವಯವಗಳು ಸದೋಷವಿದ್ದಾಗ್ಯೂ, ಅವಳು ಸಾಮಾನ್ಯವಾಗಿ ಸ್ತ್ರೀ ಇದ್ದು, ಮಾವನು ಠಕ್ಕಿಸಿದನೆಂಬ ಅಳಿಯನ ಸಾಧನೆಯನ್ನು ಅಲ್ಲಗಳೆದಿದ್ದಾರೆ. ನ್ಯಾಯಮೂರ್ತಿ ಪ್ರೊಸೆಟ್-ಮಿರ್ಜಾಕರವರು ಮೂಲ ಕೋರ್ಟಿನ ತೀರ್ಮಾನ್ನೇ ಎತ್ತಿಹಿಡಿದು ಅಪೀಲನ್ನು ರದ್ದು ಮಾಡಿದರು. ವೈದ್ಯರ ಪುರಾವೆಯನ್ನು ಈ ಪ್ರಕರಣದಲ್ಲಿ ತೊಂದಿದ್ದರೆ(?), ಕೋರ್ಟಿನ ಸಮಯವು ಅಪವ್ಯಯವಾಗುತ್ತಿತ್ತೆಂದು ನ್ಯಾಯಮೂರ್ತಿಗಳ [illegible]. ದಿವಾಣಿ ಕೋರ್ಟಿನಿಂದ ವಿವಾಹರದ್ದು [illegible] ವನ್ನು ತಂದರಿಸುವ ತನಕ ಫೌಜದಾರಿ ಕೋರ್ಟಿನವರು ವಿವಾಹವನ್ನು ಮನ್ನಿಸಲು ಫೌಜದಾರಿ ಕೋರ್ಟು ಬದ್ಧವಿರುವದಾಗಿಯೂ ನ್ಯಾಯಮೂರ್ತಿಗಳ ಹೇಳಿಕೆ.

ನೀಲ ಪ್ರತಿಮೆಯ ಸತ್ಯಾಗ್ರಹ.

ಮದ್ರಾಸದೊಳಗಿನ ನೀಲ ಪ್ರತಿಮೆಯ ಉಚ್ಚಾಟದ ಪ್ರಯತ್ನಗಳಿಗೆ ಪುನಃ ಕಳೆ ಏರಿದೆ. ಬುಧವಾರ ಮದ್ರಾಸದಲ್ಲಿ ಒಂದು ಸಭೆಯಾಯಿತು. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರು ಸಭಾಪತಿಗಳಿದ್ದರು. ಬಿಹಾರದ ಸುಪ್ರಸಿದ್ಧ ಅಸಹಯೋಗಿಗಳಾದ ಶ್ರೀ। ರಾಜೇಂದ್ರ ಪ್ರಸಾದರವರು ನೀಲ ಪ್ರತಿಮೆಯನ್ನು ಪದಭ್ರಷ್ಟ ಮಾಡುವ ಪ್ರಯತ್ನಗಳಿಗೆ ಮನಃಪೂರ್ವಕ ಆಶೀರ್ವಾದವನ್ನಿತ್ತರು. ಈ ಸತ್ಯಾಗ್ರಹಕ್ಕೆ ಸ್ಥಳಿಕ ದೇಶಾಭಿಮಾನಿಗಳು ನೆರವಾಗಬೇಕಾಗಿಯೂ ತಾವು ಕೂಡ ಈ ಸಮರದಲ್ಲಿ ಸೇರುವೆವಾಗಿಯೂ ವಚನ ಕೊಟ್ಟಿದ್ದಾರೆ. ಅವಶ್ಯವಿದ್ದರೆ, ಬಿಹಾರದಿಂದ ಸತ್ಯಾಗ್ರಹಿಗಳನ್ನು ಕರಿಸುವೆವಾಗಿಯೂ ಅಭಿವಚನವನ್ನಿತ್ತಿದ್ದಾರೆ. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರು ಸಮಾರೋಪ ಮಾಡುವಾಗ, ಒಂದು ಮಾತನ್ನು ಹೇಳಿದರು. "ಹಯಾತರಿದ್ದ ಬ್ರಿಟಿಶರಂತು ನಮಗೆ ಅಡಿಗಡಿಗೆ ಅಪಮಾನ ಮಾಡಿ ನಮ್ಮ ಪಾರತಂತ್ರ್ಯವನ್ನು ನಮಗೆ ತಿಳಿಸುತ್ತಿದ್ದಾರೆ. ಮೃತಾತ್ಮರೂ ಕೂಡ ಮೂರ್ತಿರೂಪದಿಂದ ಉಳಿದು ನಮ್ಮ ಪಾರತಂತ್ರ್ಯವನ್ನು ಹೀಯಾಳಿಸುತ್ತಿದ್ದಾರೆ," ಎಂದರು. ಅದೇ ದಿನ ಇಬ್ಬ ಸತ್ಯಾಗ್ರಹಿಗಳ ಮೇಲೆ ಖಟ್ಲೆಯಾಗಿ ಅವರಿಗೆ ಒಂದು ತಿಂಗಳ ಜಾಮೀನ ಸಜೆಯಾಗಿದೆ. ಸತ್ಯಾಗ್ರಹಿಗಳು ಜಾಮೀನ ಕೊಡದೆ ಸೆರೆಮನೆಯನ್ನು ಸೇರಿದ್ದಾಗ, ಸತ್ಯಾಗ್ರಹಿಗಳೊಬ್ಬರು ಜೈಲಿನಲ್ಲಿ ತಮಗೆ ಚಲೋ ಆಹಾರ ಸಿಗುವದಿಲ್ಲವಾಗಿ ದೂರಿಕೊಂಡರು. ಸೆರೆಮನೆಯಲ್ಲಿ ಸಿಗುವದೇ ಅಂಥ ಆಹಾರವೆಂದು ಮೆಜಿಸ್ಟ್ರೇಟರು ನುಡಿದರು. 'ಹಾಗಾದರೆ, ನನಗೆ ಗುಂಡುಹಾಕಿ ಕೊಂದೇ ಬಿಡಿರಿ," ಎಂದು ಸತ್ಯಾಗ್ರಹಿಗಳು ಪ್ರತ್ಯುತ್ತರ ಕೊಟ್ಟರು. ವಿಶೇಷ ಅಪರಾಧ ಮಾಡಿದರೆ, ಅಂಥ ಶಿಕ್ಷೆ ಕೊಡಲಾದೀತೆಂದು ಮೆಜಿಸ್ಟ್ರೇಟರು ದೊತ್ತಸ್ತನ ಮಾತಾಡಿದರು. ಅಂತು ನೀಲ ಪ್ರತಿಮೆಯ ಸತ್ಯಾಗ್ರಹ ಸಮರಕ್ಕೆ ಜರೀ ಕಳೆ ಏರುತ್ತ ನಡೆದಿದೆ.

ಜೋಧಪುರದಲ್ಲಿ ಹಾಗಲವಾಡಿ ದರಬಾರು!

"ತರುಣ ರಾಜಸ್ಥಾನ" ಪತ್ರಿಕೆಯ ಸಂಪಾದಕರಾದ ಶ್ರೀ। ಶಂಕರಲಾಲರವರು ಜೋಧಪುರಕ್ಕೆ ಹೋಗಿದ್ದರು. ಅಲ್ಲಿ ಪೋಲೀಸ ಶಿಪಾಯಿಯು ಅವರ ಹೆಸರ-ಪತ್ತೆ ಕೇಳಿಕೊಂಡನು, ಇನ್ನೂ ಅನಾವಶ್ಯಕ ವಿಷಯಗಳನ್ನೂ ಇಷ್ಟ ಕೇಳಿಕೊಂಡನು. ಈ ವಿಷಯ ವಿಚಾರಿಸಿದರೆ, ಶಿಪಾಯಿಯು ನುಡಿದದ್ದೇನಂದರೆ.— " ಇಲ್ಲಿ ಕಾಯಿದೆಯಿಲ್ಲ; ನೀವು ತಕರಾರಿಸಿದರೆ, ನಿಮ್ಮನ್ನು ಸೆರೆಮನೆಯಲ್ಲಿ ಹಾಕಿಬಿಡುವೆನು" ಪೋಲೀಸ ಶಿಪಾಯಿಯ ಅನ್ಯಾಯವೇನಿಲ್ಲ. ಖಾದಿಯ ಅಂಗಿ-ಟೊಪ್ಪಿಗೆಗಳನ್ನು ಧರಿಸುವವರ ವಿಷಯ ವಿಶೇಷ ಮಾಹಿತಿಯನ್ನು ಪಡಕೊಳ್ಳಬೇಕೆಂದು ಅವರಿಗೆ ದರ್ಬಾರದಿಂದ ಕಠಿಣವಾದ ಹುಕುಮಾಗಿದೆ. ಅದನ್ನು ಪಾಲಿಸದಿದ್ದರೆ, ವಿಶೇಷ ಶಿಕ್ಷೆಯಾಗುವದೆಂದೂ ಶಿಪಾಯಿಯರಿಗೆ ವಿಧಿಸಲಾಗಿದೆ. ಬಿಕಾನೇರದಲ್ಲಿಯೂ ಇದೇ ಪ್ರಕಾರದ ಹುಕುಮುಗಳಾಗಿರುವವೆಂದು ಪ್ರಕಟವಾಗಿದೆ; ಇನ್ನೂ ಕಠಿಣ ತರದ ಹುಕುಮಾಗದಿದ್ದ ಬಗ್ಗೆ ಜನರು ನಿರಂಕುಶ ಸಂಸ್ಥಾನಿಕರ ಉಪಕಾರ ಮನ್ನಿಸತಕ್ಕದ್ದು.

ನೋಟೀಸು.

ಹೊನ್ನಾವರ ಕಸಬೆಯಲ್ಲಿರುವ ವೆಂಕಟೇಶ ಸುಬ್ರಾಯ ಪೈ ಆದ ನಾನು ಇದರ ಮೂಲಕ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ:— ಹೊನ್ನಾವರ ತಾಲೂಕ ಹೊನ್ನಾವರ ಕಸಬಾ ಗ್ರಾಮದ ಸರ್ವೆ ನಂಬರ ೫೩ ಎಕ್ರೆ ೨-೧೬-೦ ಆಕಾರ ರೂಪಾಯಿ ೨೪-೦-೦ ರಲ್ಲಿ ಅಡಮಾಸ ೩೦ ಗುಂಟೆ ಬಾಗ್ಯಾತ ಸ್ಥಳವು ನನ್ನ ಮಾಲ್ಕಿ ವ ಮೂಲಗೇಣಿ ಹಕ್ಕಿನದಿದ್ದು, ಅದರಲ್ಲಿ ನನಗೆ ಪಕ್ಕಲಾದ ಪತ್ರಾಪತ್ರದ ಸುಬ್ರಾಯ ಗುಲವಾಡಿ ಅಪ್ರಾಪ್ತ ರಕ್ಷಕ ವ ಹಿತಚಿಂತಕ ಜನಿತ ತಾಯಿ ಶೀತಾಬಾಯಿ ಕೋಂ ಸುಬ್ರಾಯ ಗುಲವಾಡಿ ಇವರು ಸದ್ರಿ ಸ್ಥಳದಲ್ಲಿ ನನಗೆ ಪಕ್ಕಲಾಗಿರುವ ಪ್ರಕಾರ ನಡಿಯುವೇ ಸ್ಥಳ ಅರೂಪ ಕೆಡವಿದ ಕಗ್ಗೆ. ಕಾರಣಗಳ ಮೇಲಿಂದ ನಾನು ಸದ್ರಿಯವರಿಗೆ ತಾ. ೧೪-೧-೨೮ ಕ್ಕೆ ಕಾಯಿದೆಯಂತೆ ರಿಜಿಸ್ಟ್ರಿ ನೋಟೀಸು ಕೊಟ್ಟು ಸದ್ರಿಯವರ ನನಗೆ ಹಕ್ಕು ರದ್ದುಪಡಿಸಿದ್ದೇನೆ. ಕಾರಣ ಸದ್ರಿಯವರಿಗೆ ಸದ್ರಿ ಸ್ಥಳದಲ್ಲಿ ನನಗೆ ಅಥವಾ ಯಾವದೇ ತರದ ಹಕ್ಕು ಇರುವದಿಲ್ಲಾ. ಇದು ಸರ್ವಶ್ರುತವಾಗಿ ಬಾಹೀರ ಆಗುವಂತೆ ಈ ನೋಟೀಸು ಕೊಟ್ಟಿರುತ್ತದೆ.

ಹೊನ್ನಾವರ, ೧೬-೧-೨೮. | ವೆಂಕಟೇಶ ಸುಬ್ರಾಯ ಪೈ. ಹೊನ್ನಾವರ.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

हा शिवाय

आमच्या स्वंत हातमागांवरील नानातऱ्हेच्या हिमायतनची रंगी-बेरंगी चादरें, फॅशनेबल बाथ टॉवेल, चौक, लहान-मोठे पंचे, सीतपाट, चौलपाट, शर्टिंग-कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.

पोस्ट— मुंकेरि (कारवार.)

ಕಾನಡಾ ವೃತ್ತ.

ಮಿತಿ ಪ್ರಭವ ಸಂ॥ ಪುಷ್ಯ ಕೃ ॥ ೯ ಮಿ, ಸೋಮವಾರ

ಧೀರರಾಗಿರಿ.

ಸ್ಯಾಮನ್ ಕೂಟದ ಬಹಿಷ್ಕಾರ ಪ್ರಯತ್ನಗಳು ಭರದಿಂದ ಸಾಗಿವೆ ಸರ್ ತೇಜಬಹಾದ್ದೂರ ಸಪ್ರು, ಸರ್ ಅಲೀ ಇಮಾಮರವರಂಥ ಬ್ರಿಟಿಶರ ಮೂಲಾಧಾರರೂ ಸಹ ಕಿಡಿಕಿಡಿ ಕೆಂಡಾಗಿದ್ದಾರೆ ಸ್ಯಾಮನ್ ಕೂಟವನ್ನು ಬಹಿಷ್ಕರಿಸುವದೊಂದೇ ಉಪಾಯವು ಈ ಸಮಯ ಮಾನಧನ ಭರತಪುತ್ರರಿಗೆ ಹೇಳಲ್ಪಟ್ಟ ರುತ್ತರಾಗಿ ಮಹಾನುಭಾವರು ಸಾ... ಬ್ರಿಟಿಶ ಸರಕಾರದ ಪೌರುಷತ್ವ ಕೇಳುವ (day of reconing) ಪ್ರಸಂಗವು ಸಮೀಪಿಸಬಂದಿರುತ್ತದಾಗಿಯೂ ಅವರ ಹೇಳಿಕೆ ಇಗೆ ಮಧ್ಯಪ್ರಾಂತದೊಳಗಿನ ಜಮೀನದಾರರು ಸ್ಯಾಮನ್ ಕೂಟವನ್ನು ಬಹಿಷ್ಕರಿಸಲೇಬೇಕೆಂದು ಬಾಂಧವರಿಗೆ ಬೋಧಿಸಿದ್ದಾರೆ ಸ್ಯಾಮನ್ ಕೂಟವು ಮುಂಬಯಿಯಲ್ಲಿ ಬಂದಿಳಿಯುವ ದಿವಸ ತಮಗೆ ರಜೆ ಸಿಗಬೇಕಾಗಿ ಮುಂಬಯಿಯೊಳಗಿನ ಕೂಲಿಕಾರರು ಈಗಲೇ ತೀರ್ಮಾನಿಸಿಕೊಂಡಿದ್ದಾರೆ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದವರು ನಿನ್ನೆ ಶ್ರೀ ಕಾಶೀಕ್ಷೇತ್ರದಲ್ಲಿ ಸೇರಿ ಸ್ಯಾಮನ್ ಕೂಟವನ್ನು ಸುಸಂಘಟಿತವಾಗಿ ಬಹಿಷ್ಕರಿಸುವ ಉಪಾಯಗಳನ್ನು ಕಲ್ಪಿಸುವವರಿದ್ದರು ಇಂದಿಗೂ ಅವರು ಆಲೋಚನೆ ನಡಿಸುವವರಿದ್ದಾರೆ ಭಿನ್ನ ಭಿನ್ನ ಪಕ್ಷಗಳ ಪ್ರತಿನಿಧಿಗಳೊಡನೆ ರಾಷ್ಟ್ರೀಯ ಸಭೆಯವರು ಯೋಚಿಸಿ ಈ ಉಪಾಯಗಳನ್ನು ಯೋಜಿಸುವವರಿದ್ದಾರೆ ಹೀಗೆ ಸಮುಷ್ಟಿ ಪ್ರಜೆಗಳೂ ಒಕ್ಕಟ್ಟಿಗೆ ಸೇರಿ ರಾಷ್ಟ್ರದ ಮಾನರಕ್ಷಣೆಯ ವಿಚಾರಗಳನ್ನು ನಡಿಸಿರುವರು.

ಪ್ರತಿಯಾಗಿ ಸರಕಾರದ ಉದ್ಯೋಗವೂ ನಡೆದಿದೆ ದೇಶಬಾಂಧವರೊಳಗಣ ಕೆಲವು ಸ್ವಾರ್ಥಪರಾಯಣರೂ, ಅಳರಸರಿಗೆ ಬೆಂಬಲವನ್ನೀಯುಹತ್ತಿದ್ದಾರೆ ಸರ್ ಮಹಮ್ಮದ ಶಫೀ ಪ್ರಭೃತಿ ಪಂಜಾಬದೊಳಗಿನ ಕೆಲವು ಮುಸಲ್ಮಾನರು ಸ್ಯಾಮನ್ ಕೂಟದ ರಚನೆಯನ್ನು ಒಂದು ಬಾಯಿಯಿಂದ ನಿಷೇಧಿಸಿ, ಅದೇ ಬಾಯಿಯಿಂದ ಸ್ವಾಗತ ಮಾಡಿದ್ದಾರೆ. ದಿಲ್ಲಿಯಲ್ಲಿ ಕೆಲ ಹಿಂದು ಜನರು ಲಾಹೋರದೊಳಗಿನ ಮುಸಲ್ಮಾನರಿಗೆ ಬೆಟ್ಟು ತೋರಿಸಿ ಸ್ಯಾಮನ್ ಕೂಟವನ್ನು ಹಿಂದುಗಳೂ ಬರಮಾಡಿಕೊಳ್ಳಬೇಕೆಂದು ದಿಲ್ಲಿಯಲ್ಲಿ ಸೇರಿದ ಬಹಿಷ್ಕಾರದ ಸಭೆಯಲ್ಲಿ ಗೊಂದಲವನ್ನೆಬ್ಬಿಸಿದರು. ಮುಂಬಯಿಯ ಡಾ॥ ಅಸ್ವಲೇ ಮುಂತಾದ ಬ್ರಾಹ್ಮಣೇತರರು ಸ್ಯಾಮನ್ ಕೂಟಕ್ಕೆ ಸ್ವಾಗತವನ್ನೀಯಲು ಟೊಂಕಕಟ್ಟಿದ್ದಾರೆ ಆದರೆ, ಈ ಪ್ರಯತ್ನಗಳು ಸಾಫಲ್ಯವಾಗುವ ಚಿನ್ಹಗಳಿಲ್ಲ. ಅಷ್ಟು ಸ್ಯಾಮನ್ ಕೂಟವು ತ್ಯಾಜ್ಯವಿದೆ. ಅದನ್ನು ಬೋಧಿಸುವರ ವಿಚಾರಪರಂಪರೆಯು ಕೂಡ ದೋಷಾಸ್ಪದವಿದೆ. ನಮಗೇನಾದರೂ, ಯಾವಾಗಾದರೂ ಸಿಗಬಹುದೆಂಬ ಕನ್ನಡಿಯೊಳಗಿನ ಗಂಟನ್ನು ತೋರಿಸಿ ಬಹಿಷ್ಕಾರವನ್ನು ಬಗ್ಗುಬಡಿಯುವ ಪ್ರಯತ್ನಗಳು ಯಶಸ್ವಿಯಾಗುವ ಚಿನ್ಹಗಳಿಲ್ಲ

ಹೀಗೆ ದೇಶದಲ್ಲಿ ಬಹಿಷ್ಕಾರವು ಪ್ರಬಲವಾಗುತ್ತ ನಡೆದಾಗ ಸರಕಾರ ಪಕ್ಷದಿಂದ ನಡೆಯುವ ಆಕ್ಷೇಪಗಳನ್ನು ನಾವು ಚೆನ್ನಾಗಿ ವಿಚಾರಿಸತಕ್ಕದ್ದು ಸ್ಯಾಮನ್ ಮಂಡಳದ ರಚನೆ ಹೇಗಿದ್ದಾಗ್ಯೂ, ಅದರಿಂದ ಭಾರತೀಯರಿಗೆ ಪ್ರಾಂತಿಕ ಕಾರಭಾರದಲ್ಲಿ ಸರ್ವಾಧಿಕಾರ ದೊರೆಯುವದೆಂದೂ, ಹಿಂದುಸ್ಥಾನದ ರಾಜ್ಯಾಡಳಿತೆಯಲ್ಲಿ ದ್ವಿದಲ ರಾಜ್ಯಪದ್ಧತಿಯು ರೂಢವಾಗುವದೆಂದೂ ಬಂದು ಸುದ್ದಿ ಹಬ್ಬಿಗೆ ಸ್ಯಾಮನ್ ಸಾಹೇಬರು ಕಲ್ಪಿಸಿದ ರಾಜ್ಯಭಾರದ ಯೋಜನೆಯ ಅನುಷ್ಠಾನ ಮಾಡಲು ಸ್ಯಾಮನ್ ಸಾಹೇಬರಿಗೆ ಇಂಗ್ಲೀಷ್ ದೊರೆಗಳ ತರ್ವಾಯ ಸಾರ್ವಭೌಮರು ಭರತಭೂಮಿಗೆ ಸರ್ವಾಧಿಪತಿಗಳಾಗಿ ನೇಮಿಸಿ ಕಳುಹುವರೆಂದೂ ಇನ್ನೊಂದು ಸುದ್ದಿ ಬಹಳ ರಾಜ್ಯಾಧಿಕಾರಗಳು ದೊರಕಬಹುದೆಂಬ ಆಶೆಯಿಂದ--ದ ರಾಶೆಯಿಂದ ಅಜ್ಞ ಪ್ರಜೆಗಳು ಸ್ಯಾಮನ್ ಕೂಟಕ್ಕೆ ಬರಮಾಡಿಕೊಳ್ಳುವ ಪ್ರಯತ್ನವಿದೆಂದು ಈ ಸುದ್ದಿಯು ಸಂಗಡಲೇ ಪ್ರಕಟ ಹೊಂದಿದೆ. ಅಮೃತತುಲ್ಯ ಫಲಾಶೆಯ ಕಡೆಗೆ ನೋಡಿ ವಿಷವೃಕ್ಷವನ್ನು ನೆಟ್ಟುಕೊಳ್ಳುವರೆಂದು ಯಾರಾದರೂ ಅನುಮಾನಿಸಿದರೆ, ಅದು ತೀರ ಮೂರ್ಖತನದ್ದೆಂದು ನಾವು ಹೇಳುವೆವು. ಮುಕ್ಸದ್ದಿ ಬ್ರಿಟಿಶರ ಸಹವಾಸದಿಂದ ಭರತಪುತ್ರರಿಗೆ ಅನೇಕ ಬಗೆಯಿಂದ ನಷ್ಟವಾದಾಗ್ಯೂ ಒಂದು ಲಾಭವಾಗಿದೆ. ಬ್ರಿಟಿಶರ ಆಟಹಳಗಳನ್ನು ಅವರು ಅರಿತುಕೊಂಡಿದ್ದಾರೆ ಕನ್ನಡಿಯೊಳಗಿನ ಗಂಟು ತೋರಿಸಿ, ಸಾಮಾನ್ಯ ಪ್ರಜೆಗಳಿಗೆ ಮೋಹಿಸುವದು ಎಂದಿಗೂ ಸಾಧ್ಯವಿಲ್ಲ ಮುಂದಣ ರಾಜ್ಯಭಾರದ ಯೋಜನೆಯು ಈಗಾಗಲೇ ಪಕ್ಕಾ ವಾಗಿದ್ದರೆ, ವಿಚಾರದ ಫಾರ್ಸು ಏಕೆ? ಅದರಂತೆ ರಾಜ್ಯಭಾರವನ್ನು ಒಮ್ಮೆಲೇ ಪ್ರಾರಂಭಿಸಿದರಾಯಿತಲ್ಲವೇ ?

ಗಾಳಿಸುದ್ದಿಗಳನ್ನು ಬಿಟ್ಟು ಕೆಲವು ಸಾದಾರ ಸುದ್ದಿಗಳನ್ನು ಹೇಳುವೆವು. ಸ್ಯಾಮನ್ ಕೂಟದ ಅಧ್ಯಕ್ಷರಾದ ಸರ್ ಜೆಸ್ಟನ್ ಸ್ಯಾಮನ್‌ರು ಸದ್ಯಕ್ಕೆ ಖಾಸಗಿ ನಾತೆಯಿಂದ ನಮ್ಮ ಭರತಭೂಮಿಗೆ ಚಿತ್ತೈಸುವವರಿದ್ದಾರೆ. ಮಹಾನುಭಾವರು ವಿಲಾಯತಿಯೊಳಗಿನ ದೊಡ್ಡ ಬೆರಿಸ್ಟರರಿದ್ದು, ನಮ್ಮ ಕಡೆ ದೊಡ್ಡ ದೊಡ್ಡವರ ಪರಿಚಯವು ಇವರಿಗೆ ವಿಶೇಷ ಉಂಟು. ಲೋಕಮಾನ್ಯರು ಚಿರೋಲರವರ ಮೇಲೆ ಮಾಡಿದ ಮಾನನಷ್ಟದ ಮೊಕದ್ದಮೆಯಲ್ಲಿ ಸ್ಯಾಮನ್‌ರವರು ಲೋಕಮಾನ್ಯರ ಪರವಾಗಿ ವಾದಾಡಿದ್ದರು. ಬೆರಿಸ್ಟರ ನಾತೆಯಿಂದ ಸಂಪಾದಿಸಿದ ಪ್ರಣ್ಯಸಂಗ್ರಹವನ್ನು ಅವರು ಈ ಸಂಬಂಧದಲ್ಲಿ ವ್ಯಯ ಮಾಡಿ ತಮ್ಮ ಕೂಟಕ್ಕೆ ಲೋಕಬೆಂಬಲವನ್ನು ಸಂಪಾದಿಸಲುದ್ಯುಕ್ತರಾಗಿರುವರೆಂದು ತಿಳಿಯುತ್ತದೆ. “ ಕೇಸರೀ ” ಕರ್ತರಾದ — ಯಥಾರ್ಥವಾಗಿ ಹೇಳಬೇಕಾದರೆ — “ ಕೇಸರೀ” ಕರ್ತರಾಗಿದ್ದ ಶ್ರೀ॥ ಕೇಳಕರ ನರಸೋಪಂತರವರು ಇನ್ನೂ ತಮ್ಮ ಬಹಿಷ್ಕಾರ ನಿರ್ಧಾರವನ್ನು ಕೈಕೊಳ್ಳದೆ ತ್ರಿಶಂಕುಗಳಾಗಿ ಜೋಕಾಲಿ ಹೊಡೆ....ವದು ಸ್ಯಾಮನ್ ಸಾಹೇಬರ ದಾಕ್ಷಿಣ್ಯಕ್ಕಾಗಿಯೋ ಎಂದು ನಾವು ಅನುಮಾನಿಸುವೆವು. ಆದರೆ, ನರಸೋಪಂತರಿಗೆ ತ್ರಿಶಂಕುಗಳಾಗಿ ಭಾರತೀಯ ರಾಜಕಾರಣದಲ್ಲಿ ಮೆರೆಯುವದು ಸಾಧ್ಯವಿಲ್ಲ. “ ಪ್ರಕೃತಿ ಸ್ವಾಸ್ಥ್ಯವಿಲ್ಲ, ವಿಶ್ರಾಂತಿ ಬೇಕು ” ಎಂಬ ನೆವ ಮಾಡಿ ನಮ್ಮ ನರಸೋಪಂತರು “ಕೇಸರಿ”ಯನ್ನು ಲೋಕಮಾನ್ಯರ ಧೀರ ಮೊಮ್ಮಗಂದಿರಾದ ಶ್ರೀ॥ ಗಜಾನನ ವಿಶ್ವನಾಥ ಕೇತಕರರಿಗೆ ಒಪ್ಪಿಸಿ, ಹಿಂದೆ ಸರಿದಿದ್ದಾರೆ. ಶ್ರೀ॥ ನರಸೋಪಂತರಿಗೆ ಹಿಮ್ಮೆಟ್ಟಿಸುವಷ್ಟು “ ಕೇಸರಿ ” ಪ್ರಪಂಚದಲ್ಲಿ ಅವಸ್ಥಾಂತರವನ್ನುಂಟು ಮಾಡಿದ ಸ್ಯಾಮನ್ ಕೂಟದ ನಿಷೇಧವನ್ನು ನಾವು ಹೇಳಬೇಕೇನು ? “ ಕೇಸರಿ ”ಯು ಈಗ ಬಹಿಷ್ಕಾರವನ್ನು ಗರ್ಜಿಸಹತ್ತಿದೆ. ಪ್ರಜಾ ...ನ ವಿಕಾರ ಹೇತುಗಳಿಗೆಂದೂ ಬಲಿಬೀಳದೆ, ಬಹಿಷ್ಕಾರವನ್ನು ನಿಷ್ಠುರತನದಿಂದ ಪಾಲಿಸಬೇಕಾಗಿದೆ.

ವಿಕಾರ ಹೇತುವೆಂದು ನಾವು ಮುದ್ದಾಂ ಹೇಳಿರುವೆವು. ಅಖಿಲ ಪ್ರಜೆಗಳ ಐಕ್ಯವಾಕ್ಯವನ್ನು ನೋಡಿ, ಸಾಮ್ರಾಜ್ಯ ಸರಕಾರವೂ, ಹಿಂದುಸ್ಥಾನ ಸರಕಾರವೂ ದಿಗಿಲು ಬಿದ್ದಿವೆ. ಪಾರ್ಲಿಮೆಂಟಿನ ಸಾರ್ವಭೌಮತ್ವವನ್ನೂ, ಅಲ್ಲಿ ಮಂಜೂರಾದ ಕಾನೂನಿನ ಪಾವಿತ್ರ್ಯ...ರ ಮಾಹಾತ್ಮ್ಯಗಳನ್ನೂ ವರ್ಣಿಸಿ ಹೇಳಿದ್ದಾಯಿತು. ಆದರೂ, ಭಾರತೀಯರ ಬಹಿಷ್ಕಾರ ನಿರ್ಧಾರವು ಬಯಲಾಗದು. ಈಗೇನೋ ಸರ್ ಚಿಮನಲಾಲ ಸೆಟಲವಡ, ಸರ್ ಶಿವಸ್ವಾಮಿ ಅಯ್ಯರರವರಂಥ ನೇಮಸ್ತ ಮಹಾನುಭಾವರಿಗೆ ಸ್ಯಾಮನ್ ಕೂಟದ ಪಕ್ಷಪಾತಿಗಳಲ್ಲಿ ಸೇರಿಸಿಕೊಳ್ಳುವ ದುರಾಲೋಚನೆ ನಡೆದಿರಬೇಕಾಗಿ ಮುಂಬಯಿಯ “ ಟೈಮ್ಸ ಅಫ್ ಇಂಡಿಯಾ” ಪತ್ರಿಕೆಯ ಮೇಲಿಂದ ತಿಳಿಯುತ್ತದೆ. “ಟೈಮ್ಸ”

ಕರ್ತರು ನೇಮಸ್ತರಿಗೆ ಮಹಜರಿ ಸ್ತುತಿಸಿ, ಅವರಿಗೆ ಗ್ರಾಹ್ಯವಾಗಬಹುದಾದ ತಿದ್ದುಪಾಟುಗಳನ್ನು ಕೈಕೊಳ್ಳಲು ಸರಕಾರಕ್ಕೆ ಉಪದೇಶಿಸುತ್ತಾರೆ. ಸ್ಟೈಮನ್ ಸಾಹೇಬರೂ, ಸರ್ವಾಧಿಪತಿ ಇರ್ವಿನ್ ದೊರೆಗಳೂ ಈ ವಿಚಾರ ನಡಿಸಬೇಕಾಗಿ "ಟ್ಯಾಮ್ಸ್" ಕರ್ತರ ಅಂಬೋಣ. ನೇಮಸ್ತರಿಗೆ ಹಿಂದೆ ಜರಿದ, ಮುಂಬಯಿಯಿಂದ ಸಂಬೋಧಿಸಿದ "ಟ್ಯಾಮ್ಸ್" ಪತ್ರಿಕೆಯು ಧರಿಸಿದ ಪಾದ್ರಿ ವೇಷವನ್ನು ನೋಡಿದರೆ, ಸರಕಾರವು ಐಕ್ಯಮತ್ಯದ ಬಹಿಷ್ಕಾರ ನಿರ್ಧಾರದಿಂದ ದಿಙ್ಮೂಢವಾಗಿರುವದೆಂದು ನಿಸ್ಸಂಶಯವಾಗಿ ಹೇಳಬಹುದು. ಈಗ ಪ್ರಜೆಗಳಿಗೆ, ವಿಶೇಷವಾಗಿ ಮುಸಲ್ಮಾನರಿಗೆ ಸರಕಾರವು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಕೆಲವು ಆಸೆಗಳನ್ನು ತೋರಿಸಬಹುದು. ಹಿಂದುಗಳಿಗೆ ಬೊಟ್ಟು ತೋರಿಸಿ ಮುಸಲ್ಮಾನರಿಗೆ, ಮುಸಲ್ಮಾನರಿಗೆ ಬೊಟ್ಟು ತೋರಿಸಿ ಹಿಂದುಗಳಿಗೆ, ಬ್ರಾಹ್ಮಣರಿಗೆ ಬೊಟ್ಟು ತೋರಿಸಿ ಬ್ರಾಹ್ಮಣೇತರರಿಗೆ, ಸ್ಟೈಮನ್ ಕಮಿಟಿಯಲ್ಲಿರುವ ಸ್ವರ್ಗಸುಖವನ್ನು ಗುಪ್ತವಾಗಿ ನಿರೂಪಿಸಬಹುದು. ಆದರೆ, ಯಾವದಕ್ಕೂ ನಾವು ಬಲಿಬೀಳಲಾಗದು. ಚಿಕ್ಕ ಪುಟ್ಟ ರೊಟ್ಟಿ ತುಂಡುಗಳನ್ನು ನೋಡಿದ ಕೂಡಲೆ ಬಾಯಿ ತೆರೆಯುವ ಸ್ವಭಾವವು ನಾಯಿಯದು. ಅಂಥ ವೃತ್ತಿಯನ್ನು ಸ್ವೀಕರಿಸದೆ, ನಮ್ಮ ಧ್ಯೇಯವನ್ನೂ, ಮಾನವನ್ನೂ, ಅಂತಿಮ ಸಾಧ್ಯವನ್ನೂ ಚನ್ನಾಗಿ ಲಕ್ಷ್ಯದಲ್ಲಿಟ್ಟು ಧೀರರಂತೆ ವರ್ತಿಸತಕ್ಕದ್ದು. ಹರಿಶ್ಚಂದ್ರ ಮಹಾರಾಜನು ದೇಶಭ್ರಷ್ಟನಾಗಿ ಕ್ಷೇತ್ರಕ್ಕೆ ಹೋಗುತ್ತಿರುವಾಗ, ವಿಶ್ವಾಮಿತ್ರನು ರಚಿಸಿದ ಮಾಯಾಸುಖವನ್ನು ಧೀರವೃತ್ತಿಯಿಂದ ತ್ಯಜಿಸಿ ಕಾಲು ಮಾಡಿದಂತೆ ನಾವಾದರೂ ನಡೆಯಬೇಕಾಗಿದೆ. ನಮ್ಮ ಪ್ರಯತ್ನಗಳು ಮಿಗಿಲಾದ ಹಾಗೆ ವಿಕಾರ ಹೇತುಗಳು ಹೆಚ್ಚೆಚ್ಚಾಗಿ ನಿರ್ಮಾಣ ಹೊಂದುವವು. ಆದರೂ, ನಾವು ಅವುಗಳಿಗೆ ಬಲಿಬೀಳಲಾಗದು. ನಮ್ಮ ರಾಷ್ಟ್ರೋದ್ಧಾರ ಮಾರ್ಗವನ್ನು ನಿಷ್ಠೆಯಿಂದಲೂ, ತ್ಯಾಗದಿಂದಲೂ, ನಿರ್ಧಾರದಿಂದಲೂ ಆಕ್ರಮಿಸತಕ್ಕದ್ದು. ಐಕ್ಯಮತ್ಯದಿಂದ ಕೈಕೊಂಡ ಬಹಿಷ್ಕಾರನಿರ್ಧಾರದಿಂದಲೇ ಘಟನೆಯು ತಿದ್ದುಪಡಿಯಾಗುವ ಲಕ್ಷಣ ತೋರುತ್ತಿವೆ. ಅದನ್ನು ನಾವು ಆಚರಿಸಿದರೆ, ನಮ್ಮ ಭಾಗ್ಯಕ್ಕೇನು ಕಡಿಮೆ ?

ಗೇರುಸೊಪ್ಪೆಯ ಜೋಗಿನಲ್ಲಿ ರಭಸದಿಂದ ಬೀಳುವ ಜಲಪಾತಗಳಿಂದ ವಿದ್ಯುಚ್ಛಕ್ತಿಯನ್ನು ನಿರ್ಮಿಸಿ ವಿದ್ಯುತ್ತಿನ ಕಾರಖಾನೆಗಳನ್ನು ತೆರೆಯಬೇಕೆಂದು ಮೈಸೂರಿನ ಸರ್ ವಿಶ್ವೇಶ್ವರಯ್ಯನವರ ಸಂಕಲ್ಪವಿದೆ. ಆ ಕುರಿತು ಹಿಂದುಸ್ಥಾನ ಸರಕಾರದೊಡನೆ ಪತ್ರವ್ಯವಹಾರವೂ ನಡೆದಿರುತ್ತದೆ.

— ಮೈಸೂರ ಸರಕಾರವು ಅಸ್ಪೃಶ್ಯರಿಗೆ ೫ ಎಕ್ರೆಯಂತೆ ಭೂಮಿಯನ್ನು ಉಚಿತವಾಗಿ ಕೊಡಲುದ್ಯುಕ್ತವಾಗಿದೆ. ಹೀಗೆ ಧರ್ಮಪಡೆದವರು ೧೫ ವರುಷಗಳ ಒಳಗೆ ತಮ್ಮ ಭೂಮಿಯನ್ನು ಪರಾಧೀನ ಮಾಡಲಾಗದು.

ಸ್ಫುಟ ಸೂಚನೆಗಳು.

೧. ಸನ್ಯಾಸಿಗಳ ಸಂಸಾರದ ಕಥೆಯು ಯಾವಾಗಲೂ ಚಿತ್ತವೇಧಕವಿರುತ್ತದೆ. ಶಸ್ತ್ರಸನ್ಯಾಸಿಗಳ ಯುದ್ಧದ ಕಥೆಯಂತು ವಿಶೇಷವಾಗಿ ಮನೋರಂಜಕವಾದದ್ದು. ಅಮೇರಿಕೆಗೂ, ಫ್ರಾನ್ಸ ದೇಶಕ್ಕೂ ನಡೆದ ಶಸ್ತ್ರಸನ್ಯಾಸದ ಮಾತುಕಥೆಗಳನ್ನು ನಾವು ಈ ಹಿಂದೆ ಉಲ್ಲೇಖಿಸಿರುವೆವು. ಅಮೇರಿಕೆಯ ಪ್ರಧಾನ ರಾಜ ಮಿ॥ ಕೆಲಾಗ್‌ರವರು ತಮ್ಮದೇ ಹಟವನ್ನು ಫ್ರೆಂಚರ ಮೇಲೆ ಹೊರಿಸಿ ನಡಿಸಿದ ಶಾಂತಿ ಪ್ರಯತ್ನಕ್ಕೆ ಫ್ರೆಂಚರಿಂದ ಅನುಕೂಲವಾದ ಉತ್ತರ ದೊರಕುವದು ಕಠಿಣ ಮಾತು. ಇತ್ತ ಅಮೇರಿಕೆಯವರೂ ಫ್ರೆಂಚರೂ ಯುದ್ಧದ ಹಡಗುಪಡೆಗಳನ್ನು [illegible] ತಯಾರಿಸುತ್ತಲಿದ್ದಾರೆ. ಇದನ್ನೆಲ್ಲ ನೋಡಿ ಜರ್ಮನಿಯು ಕೈ ಮುಚ್ಚುಗಿಸಿಕೊಂಡು ಕೂಡ್ರಲಾರದು. ಅವರೂ ಸಂರಕ್ಷಣ ತಯಾರಿಯನ್ನು ನಡಿಸಿದ್ದಾರೆ. ಬೆಲ್ಜಮ್ ದೇಶಕ್ಕೂ, ಫ್ರಾನ್ಸ ದೇಶಕ್ಕೂ ಜರ್ಮನಿಯಿಂದ ಸಿಗಬಹುದಾದ ಖಂಡಣಿಯ ಬಾಬುಗಾರಿಕೆಯ ಎಷ್ಟು ವಿವಾದ ಉಂಟಾಗಿದೆ. ಬಲ್ಗೇರಿಯಾ, ಯುಗೋಸ್ಲಾವಿಯಾ ಮುಂತಾದ ಬಾಲ್ಕನ್ ಪ್ರದೇಶಗಳಲ್ಲಿ ಒಪ್ಪಂದವಾಗಿ ಅವರೆಲ್ಲರೂ ಒಮ್ಮನಸ್ಕರಾಗಿದ್ದಾರೆ, ತುರ್ಕಸ್ಥಾನವು ಗಾಬರಿಗೊಟ್ಟಿದೆ. ಈ ದೇಶಗಳೂ, ಇಟಲಿಯೂ ಒಕ್ಕಟ್ಟಾಗಿ [illegible] ಈ ತುರ್ಕಸ್ಥಾನದ ಮೇಲೆ ಇಟಾಲಿಗೆ ಸಾಗಿಬರಲು ಅನುಕೂಲವಾಯಿತೆಂದು ತುರ್ಕರ ಅನುಮಾನ. ರಶಿಯಾ ಖಂಡದವರು ಹಿಕ್ಕಟ್ಟಾಗಿ ತಮ್ಮದೊಂದು ರಾಷ್ಟ್ರಸಂಘವನ್ನು ಏರ್ಪಡಿಸಿಕೊಂಡು ಆತ್ಮಸಂರಕ್ಷಣ ಮಾಡಿಕೊಳ್ಳಬೇಕೆಂದು ತುರ್ಕರ ಅಭಿಪ್ರಾಯ. ಶಸ್ತ್ರಸನ್ಯಾಸಕೊಂಡು ಭೂತಲದಲ್ಲಿ ಶಾಂತಿಯನ್ನು ನೆಲಿಸಲು ಹೊರಟ ದೇಶಗಳು ಆತ್ಮಸಂರಕ್ಷಣದ ಹೆಸರಿನಿಂದ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸುತ್ತಿದ್ದಾರೆ. ಇಬ್ಬರ ಜಗಳದಲ್ಲಿ ಇನ್ನೊಬ್ಬರಿಗೆ ಲಾಭ ಎಂಬಂತೆ ಅಮೇರಿಕೆಗೆ ಬೊಟ್ಟು ತೋರಿಸಿ ಫ್ರೆಂಚರು, ಇಬ್ಬರಿಗೂ ಬೊಟ್ಟು ತೋರಿಸಿ ಜರ್ಮನರು, ಬಾಲ್ಕನ್ ದೇಶದೊಳಗಿನ ಪ್ರಯತ್ನಗಳನ್ನು ನೋಡಿ ತುರ್ಕರು, ಹೀಗೆ ಎಲ್ಲರೂ ಯುದ್ಧದ ತಯಾರಿಯನ್ನೇ ನಡಿಸಿದ್ದಾರೆ; ಯುದ್ಧವನ್ನೇ ಧ್ಯಾನಿಸುತ್ತಿದ್ದಾರೆ. ಯುದ್ಧದ ಭವಿಷ್ಯಗಳಂತು ಅಲ್ಲಲ್ಲಿಯ ದೂರದೃಷ್ಟಿಯುಳ್ಳ ಮುತ್ಸದ್ದಿಗಳು ವರ್ತಿಸುತ್ತಿದ್ದಾರೆ. ಇತ್ತಾಗಿ ಭೂತಲದಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವದಕ್ಕಾಗಿ ಮಹಾನುಭಾವರು ದೊಡ್ಡ ದೊಡ್ಡ ಜಾಹೀರನಾಮೆಗಳನ್ನು ಹೊರಡಿಸುತ್ತಿದ್ದಾರೆ.

---

೨. ಅಮೇರಿಕೆಯವರು ಶಾಂತಿದೇವಿಯ ಉಪಾಸನೆ ಮಾಡುವ ಒಂದು ಕ್ರಮವನ್ನು ಹೇಳುವೆವು. ಮಧ್ಯ ಅಮೇರಿಕೆಯಲ್ಲಿ ನಿಕಾರಾಗ್ವೇ ಎಂಬದೊಂದು ಸಂಸ್ಥಾನವಿದೆ. ಆ ಸಂಸ್ಥಾನದಲ್ಲಿ ಅಂತಃಕಲಹಗಳಾಗಿವೆ, ಸೇನಾಪತಿ ಸೆಂಡಿನೋರವರು ಲೋಕಶಾಹಿ ಪಕ್ಷದವರು. ಅವರು ಸೋತುಹೋದರು; ಅವರಿಗೆ ದೇಶಾಂತರಕ್ಕೆ ಹೋಗಬೇಕಾಯಿತು. ಈ ಅಂತಃಕಲಹದ ವಿಷಯ ಅಮೇರಿಕೆಗೇನೂ ಸಂಬಂಧವಿಲ್ಲ. ಆದರೂ, ನಿಕಾರಾಗ್ವೇ ಸಂಸ್ಥಾನದ ದಕ್ಷಿಣ ದಿಕ್ಕಿಗಿದ್ದ ಪನಾಮಾ ಕಾಲುವೆಯ ಸಂರಕ್ಷಣದ ನೆವ ಮಾಡಿ ಸೇನಾಪತಿ ಸೆಂಡಿನೋರವರನ್ನು ಹಲವು ನಾಶಮಾಡಲು ಅಮೇರಿಕೆಯವರು ತೊಡಗಿದ್ದಾರೆ. ವಿಮಾನಗಳ ಮೇಲಿಂದ ಲೋಕಶಾಹಿ ಪಕ್ಷದ ಮೇಲೆ ಬಾಂಬುಗಳನ್ನು ಎಸೆಯುತ್ತಾರೆ. ಯುದ್ಧದ ಹಡಗುಪಡೆಗಳನ್ನು ಹಚ್ಚು ಸೆಂಡಿನೋರವರ ಮೇಲೆ ಸಾಗಿ ಹೋಗಿದ್ದಾರೆ. ಇತ್ತಾಗಿ ಅಮೇರಿಕೆಯವರು ಲೋಕಶಾಹಿಯ ಪುರಸ್ಕಾರರು. ನಿಕಾರಾಗ್ವೇಯಲ್ಲಿ ಸೆಂಡಿನೋರವರನ್ನು ನಿರ್ಮೂಲ ಮಾಡುವ ವೇಷ ತಾಳಿ, ಸಂಸ್ಥಾನವನ್ನು ಬಗಲಲ್ಲಿ ಹಾಕುವ ಉದ್ಯೋಗವಿದೆಂದು ಮಾನವ ಸ್ವಭಾವವನ್ನರಿತವರು ಉದ್ಗರಿಸುತ್ತಾರೆ. ಅಮೇರಿಕೆಯಲ್ಲಿ ಈ ಲೋಕೋಪಕಾರದ ಹೇತುವಾಗಿ ಪ್ರಯತ್ನಗಳು ನಡೆದಿವೆ. ಶಾಂತಿಮಾತೆಯ ಆರಾಧನೆಯನ್ನು ಅಮೇರಿಕೆಯವರು ಸರಿಯಾಗಿ ನಡಿಸುತ್ತಿಲ್ಲವೇ ?

---

೩. ಪರಸ್ಪರ ಸಹಕಾರದ ಒಂದು ವೇಷವನ್ನು ಇಂದಿಗೆ ನಮೂದಿಸುವೆವು. ದೇಸಾಯರನ್ನುದ್ಧರಿಸುವದಕ್ಕಾಗಿ ಮುಂಬಯಿ ಸರಕಾರವು ಚಿಕ್ಕ ಪುಟ್ಟ ಹೊಲಗಳನ್ನು ಕಾಯಿದೆಯ ಬಲದಿಂದ ಒಟ್ಟುಗೂಡಿಸಲು ಒಂದು ಕಾನೂನನ್ನು ಏರ್ಪಡಿಸಲಿಕ್ಕಿದೆ. ಈ ಕಾನೂನು ದೇಸಾಯಿಗಾರರ ಹಿತದಲ್ಲಿ. ಆದರಿಂದ ಮಹಾರಾಷ್ಟ್ರದೊಳಗಿನ ಸಹಕಾರಿ ಸಂಘಗಳೂ ತಮ್ಮ ಕಡೆಯ ಸಭಾಸದರಿಗೆ ಈ ಕಾನೂನಿನ ರಚನೆಯನ್ನು ತಿಳಿಸಿಹೇಳಿ, ಆ ಕುರಿತು ಪ್ರಯತ್ನ ಮಾಡುವದರಿಲ್ಲ. ಹೀಗೆ ಪ್ರಯತ್ನ ಮಾಡಲು ಬಡಜನರ ಹಣವನ್ನು ಸರಕಾರವು ಮುಂದೂರ ಮಾಡಲಿಕ್ಕಿಲ್ಲೆಂದು ಸರ್ಕಾರಗಳೂ ಹೊರಟವೆಯಂತೆ. ಮುಂಬಯಿಯ ಸಹಕಾರಿ ಇನ್‌ಸ್ಟಿಟ್ಯೂಟದವರು ಈ ಕಾನೂನನ್ನು ಆಶೀರ್ವದಿಸಿ ಬರಮಾಡಿಕೊಳ್ಳುವವರಂತೆ. ಸರಕಾರಿ ಅಧಿಕಾರಿಗಳ ಪ್ರೇರಣೆಯಿಂದ ಇದೆಲ್ಲ ವ್ಯಾಪಾರ ನಡೆದಿದೆ. ಸಹಕಾರಿ ಸಂಘಗಳಿಗೆ ಲೋಕೋಪಕಾರ ಮಾಡಲು ಸರಕಾರದ ಅಪ್ಪಣೆ ಬೇಕು. ಸರಕಾರ ಹಾಗೂ ಪ್ರಜೆಗಳ ಲೋಕೋಪಕಾರದ ಕಲ್ಪನೆಗಳು ಭಿನ್ನ ಭಿನ್ನವಾಗಿರುವಾಗ, ಸರಕಾರಿ ಆಶ್ರಯದಲ್ಲಿ ಜನನವಾದ ಪರಸ್ಪರ ಸಹಕಾರದಿಂದ ಲೋಕಕ್ಕೆ ಲಾಭವಾಗುವದೇ ?

---

೪. ಧಾರವಾಡದ 'ಕರ್ಮವೀರ' ಪತ್ರಿಕೆಯಲ್ಲಿ ಪ್ರಾಥಮಿಕ ಶಿಕ್ಷಣದ ಗೋಳು ವರ್ಣಿಸಲ್ಪಟ್ಟಿದೆ. ಬೆಳಗಾವಿ ಜಿಲ್ಲಾಬೋರ್ಡ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಿ ಪ್ರಜೆಗಳಿಗೆಲ್ಲ ಜ್ಞಾನಸೇವನ್ನು ಮಾಡುವ ಡಂಗುರ ಸಾರಿ, ಲೋಕಲ್ ಫಂಡನ್ನು ಇಮ್ಮಡಿ ಮಾಡಿಬಿಟ್ಟಿತು. ಹೊಸ ಶಾಲೆಗಳಾಗದಿದ್ದರೂ, ಇದ್ದ ಶಾಲೆಗಳಾದರೂ ಸುಧಾರಿಸುವವೆಂದು ಯಾರೂ ಎಣಿಸಬಹುದು. ಆದರೆ, ಇದ್ದ ಶಾಲೆಗಳು ಕ್ರಮವಾಗಿ ಕಡಿಮೆಹೋಗಿವೆ. ೪೦ ಹುಡುಗರಿಗೆ ಒಬ್ಬ ಶಿಕ್ಷಕನಂತೆ ಏರ್ಪಾಡು ಮಾಡುವ ಹುಕುಮುಗಳು ಹೊರಟಿವೆ. ಇದರಿಂದ ಶಿಕ್ಷಕರು ಕಡಿಮೆಯಾಗಿ ಅದರ ಜೊತೆಗೆ ಮೇಲಿನ ಇಯತ್ತೆಗಳೂ ತೆಗೆಯಲ್ಪಡುವವು. ೬ ಇಯತ್ತೆಗಳಿದ್ದಲ್ಲಿ ೪ ಇಯತ್ತೆ, ೪-೫ ಇಯತ್ತೆಗಳಿದ್ದಲ್ಲಿ ೨-೩ ಇಯತ್ತೆ, ಹೀಗೆ ಪ್ರಾಥಮಿಕ ಶಿಕ್ಷಣವು ಪ್ರಗತಿ ಮಾಡುವದು. ಸರ್ ನಾರಾಯಣ ಚಂದಾವರಕರರು ನುಡಿದಂತೆ, ಬೆಳಗಾವಿಯ ಲೋಕಲ್ ಬೋರ್ಡು ಬಾಲದ ಕಡೆಗೆ ಪ್ರಗತಿ ಮಾಡುತ್ತ ನಡೆದಿದೆ

ಲೋಕಲ್ ಫಂಡು ಇಷ್ಟು ಮಾಡಿದ ಕೂಡಲೆ, ಸರಸ್ವತೀ ದೇವಿಯು ಬ್ರಹ್ಮಲೋಕವನ್ನು ತ್ಯಜಿಸಿ, ಬೆಳಗಾವಿಯಲ್ಲಿ ಒಮ್ಮೆಲೇ ಆಸ್ಥಾನ ಹೂಡುವದೆಂದು ಮಹಾನುಭಾವರು ರಚಿಸಿದ ಕಲ್ಪನಾ ಸೃಷ್ಟಿಯು ಮಾಯವಾಗಿ ಎಲ್ಲಿಯೋ ಹೋಗಿ ಬಿಟ್ಟಿದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯವರು ಮಾತ್ರ ಬಾಯ್ಬುಡಿಕೆಗೆ ಒಲಿಬೀಳದೆ, ಲೋಕಲ್ ಫಂಡನ್ನು ಇಷ್ಟು ಮಾಡುವ ಹಿಡಿ ಅಧಿಕಾರವನ್ನು ಇನ್ನೂ ಕಾಯ್ದುಕೊಂಡಿದ್ದಾರೆ. ಬೆಳಗಾವಿಯವರು ಅದನ್ನೂ ಕಳಕೊಂಡರು! ಇತ್ತ ಪ್ರಗತಿಯೂ ಇಲ್ಲ! ಅತ್ತ ಅಧಿಕಾರವೂ ಹೋಯಿತು!! ವಿಚಾರವಿಲ್ಲದೆ ಯಾವದೊಂದು ಕೆಲಸ ಮಾಡಿದರೆ, ಆಗುವ ಅವಸ್ಥೆಯಿದು!!

[illegible]

೫. ಹಳಿಯಾಳದ ಪ್ರಸಿದ್ಧ ನಾಗರಿಕರಾದ ರಾವಬಹಾದ್ದೂರ ಗೋಪಾಳ ಅನಂತ ಗಿರಿಯವರು ಅಘಾತಂಗ ವಾಯುವಿಕಾರದಿಂದ ಕಳೆದ ವಾರ ಧಾರವಾಡದಲ್ಲಿ ತಿರಿಕೊಂಡರೆಂದು ತಿಳಿಸಲು ವ್ಯಸನವಾಗುತ್ತದೆ. ಗೋಪಾಳರಾಯರು ಔದಾರ್ಯವಂತ ಪುರುಷರು. ಇವರ ಚರಿತ್ರೆಯನ್ನು ವಿಚಾರಿಸಿದರೆ, ಮಾನವನ ದೈವವು ಪ್ರಬಲವಿದ್ದರೆ, ಆತನು ಎಷ್ಟು ಉನ್ನತ ಪದವಿಗೇರಬಹುದೆಂಬುದು ಗ್ರಹಿಕೆಯಾಗುತ್ತದೆ. ರಾವಬಹಾದ್ದೂರರು ೧೮೫೫ ನೇ ಇಸ್ವಿಯಲ್ಲಿ ಹುಟ್ಟಿದಾಗ, ಇವರ ಮನೆತನವು ತೀರ ಬಡತನದಲ್ಲಿತ್ತು. ಸಾಮಾನ್ಯ ಪ್ರಪಂಚವನ್ನು ನಡಿಸುವದೂ ಕೂಡ ಕಠಿಣವಾಗಿತ್ತು. ೧೫ ವರ್ಷದವರಾಗಿಯೆ ಗೋಪಾಳರಾಯರು ಹಳಿಯಾಳದ ದೇಶಪಾಂಡೆಯವರಲ್ಲಿ ಕಾರಕೂನಿಯನ್ನು ನಡಿಸಿ ಚರಿತಾರ್ಥ ಸಾಗಿಸಬೇಕಾಯಿತು. ಮುಂದೆ ೧೮—೨೦ ವರುಷಗಳಲ್ಲಿ ಗೋಪಾಳರಾಯರು ಕಾರಕೂನಿಯನ್ನು ತ್ಯಜಿಸಿ ಸಣ್ಣ ಒಂದು ಅಂಗಡಿಯನ್ನು ತೆರೆದರು, ಬಳಿಕ ಅಂಗಡಿಯನ್ನೂ ಬಿಟ್ಟರು. ಜಂಗಲ ಖಾತೆಯ ಕಂಟ್ರಾಕ್ಟು, ಮಾರ್ಗ ದುರುಸ್ತಿಯ ಕಂಟ್ರಾಕ್ಟುಗಳನ್ನು ಗೋಪಾಳರಾಯರು ಪಡೆದು, ಲಕ್ಷಾವಧಿ ರೂಪಾಯಿಗಳನ್ನು ಸಂಗ್ರಹಿಸಿದರು. ದ್ರವ್ಯಸಂಗ್ರಹವನ್ನು ಲೋಭಿಗಳಂತೆ ಗೋಪಾಳರಾಯರು ರಾಶಿ ಹಾಕಿಡಲಿಲ್ಲ; ಯಥೇಚ್ಛವಾಗಿ ಲೋಕೋಪಕಾರಗಳಲ್ಲಿ ವ್ಯಯ ಮಾಡಿದರು. ಹಳಿಯಾಳದಲ್ಲಿ ವಾಚನಾಲಯವನ್ನು, ರೋಗಿ ವಾಸವಾಗಿರಲು ವ್ಯವಸ್ಥೆಯನ್ನೂ ಮಾಡಿದರು; ಮೂಕ ಜನಾವರುಗಳಿಗಾಗಿ ಚಿಕಿತ್ಸಾಲಯವನ್ನು ಏರ್ಪಡಿಸಿದರು; ದೇವಾಲಯಗಳ ಜೀರ್ಣೋದ್ಧಾರ ಮಾಡಿದರು. ಗೋಪಾಳರಾಯರ ಹಿರಿಯರು ರಾಮದೇವರ ಗುಡಿಯನ್ನು ಹಿಂದೆ ಕಟ್ಟಿಸಿದ್ದರು; ಅದನ್ನೂ ಉದ್ಧರಿಸಿ, ಶ್ರೀ ದೇವರ ವಿನಿಯೋಗಗಳಿಗೆ ಅವಶ್ಯವಿದ್ದ ಆಸ್ತಿಯನ್ನು ಶ್ರೀ ದೇವರಿಗೆ ಅರ್ಪಿಸಿದರು. ಹಳಿಯಾಳದವರು ಮ್ಯುನಿಸಿಪಾಲಿಟಿಯ ಅಧ್ಯಕ್ಷಸ್ಥಾನವನ್ನು ಗೋಪಾಳರಾಯರಿಗೆ ಅರ್ಪಿಸಿ, ತಮ್ಮ ಆದರಭಾವವನ್ನು ವ್ಯಕ್ತಪಡಿಸಿದ್ದಾರೆ. ಸರಕಾರವು ಗೋಪಾಳರಾಯರಿಗೆ ರಾವಸಾಹೇಬ—ರಾವಬಹಾದ್ದೂರ ಕಿತಾಬುಗಳನ್ನಿತ್ತು ಸತ್ಕರಿಸಿದೆ. ರಾವಬಹಾದ್ದೂರರು, ಧಾರವಾಡದಲ್ಲಿಯೂ, ಸಿರಸಿಯಲ್ಲಿಯೂ ವಾಚನಾಲಯ-ದವಾಖಾನೆಗಳನ್ನೇರ್ಪಡಿಸಿದ್ದಾರೆ. ಕರ್ನಾಟಕ ಕಾಲೇಜಿಗೂ, ಹೈಸ್ಕೂಲಿಗೂ, ನಮ್ಮ ಗಿಬ್ಬ ಹೈಸ್ಕೂಲಿಗೂ ಗೋಪಾಳರಾಯರು ದ್ರವ್ಯಸಹಾಯ ಮಾಡಿ, ಜ್ಞಾನಪ್ರಸಾರದ ಕುರಿತು ತಮಗಿರುವ ಆಸ್ಥೆಯನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಲೋಕೋಪಕಾರ ಮಾಡಿ ಸರಕಾರ-ಪ್ರಜೆಗಳಿಗೆ ಆದರಭೂತರಾದ ರಾವಬಹಾದ್ದೂರ ಗೋಪಾಳರಾಯರ ನಿಧನದಿಂದ ಎಲ್ಲರೂ ಮರುಗುತ್ತಾರೆ. ಗೋಪಾಳರಾಯರು ಧಾರವಾಡದಲ್ಲಿ ವಿದ್ಯುಚ್ಛಕ್ತಿಯನ್ನು ಪೂರೈಸುವ ಕಾರಖಾನೆಯನ್ನು ಹೊರಡಿಸುವವರಿದ್ದರು. ವಯಾತೀತ ಕಾಲದಲ್ಲಿಯೂ ರಾವಬಹಾದ್ದೂರರು ವಿಶೇಷ ಧರ್ಮಕೃತ್ಯಗಳನ್ನೂ, ಸಾಹಸ ಕಾರ್ಯಗಳನ್ನೂ ಕೈಕೊಳ್ಳುವವರಿದ್ದರು. ಆದರೆ, ಪರಮಾತ್ಮನು ಅವರಿಗೆ ಕೂಡಲೆ ಒಳಮಾಡಿಕೊಂಡದ್ದರಿಂದ ನಿರುಪಾಯವಾಯಿತು. ಗೋಪಾಳರಾಯರ ಹೆಂಡತಿ ಹಾಗು ಮಗಂದಿರ ದುಃಖದಲ್ಲಿ ನಾವೂ ಪಾಲುಗಾರರಿದ್ದೇವೆಂದರುಹಿ, ಈ ಚಿಕ್ಕ ಲೇಖವನ್ನು ಮುಗಿಸುವೆವು. ಗೋಪಾಳರಾಯರಿಗೆ ಸದ್ಗತಿಯನ್ನೀಯಬೇಕೆಂದೂ ಶ್ರೀ ಗೋಪಾಲಕೃಷ್ಣನ ಬಳಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಮಾನ್ಯ ಜ್ವರಾದಿ ರೋಗಗಳ ಹಾವಳಿಯು ಸಾಗಿದೆ.

ಈ ತಾಲೂಕ ತೊರ್ಕೆಯಲ್ಲಿ ನಾಮಧಾರಿ ಸಮಾಜದ ಪರಿಷತ್ತು ಸೇರಿ ಸಮಾಜೋನ್ನತಿಯ [illegible] ವಿಜಾಪುರದ ಕಲೆಕ್ಟರರಾದ ರಾ| ವೆಂಕಣ್ಣಾ ಹೊಸಬನಾಯ್ಕ ಇವರು ಸಭಾಪತಿಗಳಿದ್ದರು.

ಇಲ್ಲಿಯ ನ್ಯೂ ಪಿಕ್ಚರ್ ಪ್ಯಾಲೇಸದಲ್ಲಿ "ಕರ್ನಾಟಕ ಏಕೀಕರಣ" ವಿಷಯದ ಕುರಿತು ಬಾಗಲಕೋಟೆಯ 'ಕನ್ನಡಿಗ' ಪತ್ರಿಕೆಯ ಸಂಪಾದಕರಾದ ಶ್ರೀ ಮಂಗಳವೇಢೆ ಶ್ರೀನಿವಾಸರಾಯರ ಉಪನ್ಯಾಸವಾಯಿತು. ಕರ್ನಾಟಕ ಏಕೀಕರಣ ಪ್ರಶ್ನದ ಈ ವರೆಗಿನ ವೃತ್ತಾಂತವನ್ನು ಶ್ರೀ ಶ್ರೀನಿವಾಸರಾಯರು ವರ್ಣಿಸಿದರು. ಬೆಳಗಾವಿಯಲ್ಲಿ ಸೇರಿದ ರಾಷ್ಟ್ರೀಯ ಸಭೆಯಾದಂದಿನಿಂದ ಏಕೀಕರಣದ ಪ್ರಯತ್ನಗಳು ನಡೆದಿರುವವಾಗಿಯೂ, ಬಾಗಲಕೋಟೆಯಲ್ಲಿ ಈ ವರುಷ ಸೇರಲಿರುವ ಏಕೀಕರಣ ಪರಿಷತ್ತಿಗೆ ನಮ್ಮಲ್ಲಿಯ ನಾಗರಿಕರು ಹೆಚ್ಚಾಗಿ ಹೋಗಬೇಕಾಗಿಯೂ ಶ್ರೀ ಶ್ರೀನಿವಾಸರಾಯರು ಬಿನ್ನಹ ಮಾಡಿಕೊಂಡರು. ಬ್ರಿಟಿಶ ರಾಜ್ಯಭಾರದಲ್ಲಿ ಜನತೆಯ ಅನುಕೂಲತೆಯೇ ಪ್ರಾಮುಖ್ಯವಾಗಿ ಗಣನೆಯಾಗುತ್ತಿದ್ದದರಿಂದ ಕರ್ನಾಟಕದ ಭಾಗಗಳು ಚದರಿಬಿದ್ದಿರುತ್ತವಾಗಿಯೂ, ಅದರಿಂದ ಕರ್ನಾಟಕದ ಉದ್ಧಾರಕ್ಕೆ ಬಹಳ ಪ್ರತಿಬಂಧವು ಆಗಿರುತ್ತದಾಗಿಯೂ ಶ್ರೀ ಶ್ರೀನಿವಾಸರಾಯರು ದಾಸಾನುಭಾವರ ವಚನಾಧಾರಗಳಿಂದ ತಿಳಿಸಿಹೇಳಿದರು. ಭಾಷಾವಾರ ಪ್ರಾಂತರಚನೆಯಿಂದ ರಾಷ್ಟ್ರದ ಉನ್ನತಿಯಾಗುವದಾಗಿ ಪಾಡಿಗಂತ—ಹೋಲ್ಡರನೆಸ್ ಪ್ರಭೃತಿಯವರ ವಚನಗಳಿಂದ ನಿರೂಪಿಸಿದರು. ಎಕ್ಸನ್ ಸ್ಪ್ರೆಟ್ ಎಂಬುವರು ಬರೆದ ಪ್ರಬಂಧದೊಳಗಿನ ವಚನಗಳನ್ನು ಓದಿಹೇಳಿ, ಒಂದೇ ಭಾಷೆಯ ಪ್ರದೇಶಗಳು ಚದರಿಕೊಂಡಿದ್ದರಿಂದ ದೇಶೋದ್ಧಾರದ ಪ್ರಯತ್ನಗಳು ಸುಸಂಘಟಿತವಾಗಿ ಸಾಗುವದಿಲ್ಲೆಂದೂ ವಂಗಭಂಗವನ್ನು ರದ್ದುಮಾಡಲು ಬಂಗಾಲಿಗಳು ಪ್ರಯತ್ನ ಮಾಡಿದ ಮರ್ಮವಾದರೂ ಇದೇ ಎಂದು ಶ್ರೀಯುತರು ಒತ್ತಿಹೇಳಿದರು. ಕರ್ನಾಟಕ ಸ್ಥಿತಿಯು ವಂಗಭಂಗದ ಸ್ಥಿತಿಗಿಂತ ವಿಶೇಷ ಕಠಿಣ ತರದ್ದಿದೆ. ಉತ್ತರ ದಿಕ್ಕಿನಿಂದ ಮಹಾರಾಷ್ಟ್ರೀಯರು, ಪೂರ್ವದಿಂದ ಆಂಧ್ರರು, ದಕ್ಷಿಣ ದಿಕ್ಕಿನಿಂದ ಮಲಬಾರ-ತಮಿಳರು, ಕರ್ನಾಟಕದ ಮೇಲೆ ದಾಳಿಯನ್ನಿತ್ತು ಕರ್ನಾಟಕವನ್ನು ಆಕ್ರಮಿಸುತ್ತಿದ್ದಾರೆಂದೂ ಅವರು ಹೇಳಿದರು. ಕರ್ನಾಟಕಕ್ಕೊಂದು ರಾಜಧಾನಿಯಿರುವದಿಲ್ಲವಾಗಿಯೂ ಅದರ ಹೇಗೆ, ಆ ವಿಷಯವನ್ನೂ ನಾವು ಆಲೋಚಿಸಬೇಕಾಗಿ ಗೊತ್ತಾಯಿತು. ನಮ್ಮ ಜಿಲ್ಲೆಯ ಭಟಕಳ ಬಂದರವು ಕರ್ನಾಟಕದ ರಾಜಧಾನಿಯಾಗಲು ಯೋಗ್ಯವಿರುವದಾಗಿ ಕೆಲ ಮಹನೀಯರ ಅಭಿಪ್ರಾಯವಿರುತ್ತದಂತೆ. ವಿಜಾಪುರದ ಕಲೆಕ್ಟರರಾದ ನಮ್ಮಲ್ಲಿಯ ರಾ| ವೆಂಕಣ್ಣಾ ಹೊಸಬನಾಯ್ಕರವರು ಭಟಕಳ ಬಂದರವನ್ನು ಕರ್ನಾಟಕದ ರಾಜಧಾನಿಯನ್ನಾಗಿ ಏರ್ಪಡಿಸುವ ವಿಚಾರದವರಂತೆ. ಭಟಕಳವು ಒಂದು ಬದಿಗಿದ್ದರೂ, ಆಗಿಬಂದಿ, ಮೋಟಾರು, ಆಕಾಶಯಾನಗಳಿಂದ ಅದು ಸಮೀಪವಾಗುವದೆಂದು ಪ್ರತಿಪಾದಕರ ಅಭಿಪ್ರಾಯವು. ಕರ್ನಾಟಕವು ಸ್ವಾಭಾವಿಕ ಸಂಪತ್ತಿಯಿಂದ ಸಮೃದ್ಧವಿದೆ. ಹತ್ತಿ ಬೆಳೆಯುತ್ತದೆ, ಗಣಿಗಳಿವೆ, ಹೀಗೆ ವಿಪುಲ ಸಂಪತ್ತಿಯುಳ್ಳ ಕರ್ನಾಟಕವು ಸುಸಂಘಟಿತವಾದರೆ, ಕರ್ನಾಟಕದ ಸಮೃದ್ಧಿಯು ವಿಶೇಷವಾಗುವದೆಂದೂ ಶ್ರೀ ಶ್ರೀನಿವಾಸರಾಯರು ಒತ್ತಿಹೇಳಿದರು. ಕರ್ನಾಟಕದ ಏಕೀಕರಣಕ್ಕೆ ಸರಕಾರದ ಪ್ರತಿಬಂಧವಿಲ್ಲ. ಪ್ರಾಂತಿಕ ಕಾಯದೆ ಕೌನ್ಸಿಲಿನೊಳಗಿನ ಸಭಿಕರು ಬಹುಮತದಿಂದ ಠರಾವ ಮಾಡಿದರೆ ಅದನ್ನು ಅಂಗೀಕರಿಸಲು ಹಿಂದುಸ್ಥಾನ ಸರಕಾರವು ಬದ್ಧವಿದೆ. ಪಾರ್ಲಿಮೆಂಟು ನೇಮಿಸಿದ ಸಂಯುಕ್ತ ಪಾರ್ಲಿಮೆಂಟು ಮಂಡಳದ ರಿಪೋರ್ಟಿನಲ್ಲಿ ಈ ಕಾನೂನು ಉಲ್ಲೇಖವಾಗಿದೆ. ಈ ಪ್ರಕಾರ ಕರ್ನಾಟಕಸ್ಥರು ಪ್ರಯತ್ನ ಮಾಡಿದ್ದು ತೋರುವದಿಲ್ಲ. ಪ್ರಾಂತಿಕ ಕಾಯದೆ ಕೌನ್ಸಿಲಿನ ಮೆಂಬರರ ಒಪ್ಪಿಗೆ ದೊರೆಯುವದಿದ್ದಿಲ್ಲ. ಕರ್ನಾಟಕದೊಳಗಿನ ಕೌನ್ಸಿಲು ಸಭಾಸದರು ಒಮ್ಮನಸ್ಸಿನವರಾದರೆ, ಏಕೀಕರಣದ ಕಾರ್ಯವನ್ನು ಸಾಧಿಸಿಕೊಳ್ಳುವಷ್ಟು ಕಾಯದೆಯ ಅನುಕೂಲ್ಯವಿರುವದಾಗಿಯೂ ಶ್ರೀ ಶ್ರೀನಿವಾಸರಾಯರು ತಿಳಿಸಿ ಹೇಳಿದರು. ಈ ಕಾನೂನಿನ ಮೂಲಕವಾಗಿಯೇ ಪರಿಷತ್ಕಾಯದೆ ಕೌನ್ಸಿಲಿನಲ್ಲಿ ನಾಮದಾರ ಬೆಳವಿಯವರ ಠರಾವು, ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ನಾ| ಯಮ್. ರಾಮರಾಯರ ಠರಾವೂ ನಿಯಮಬಾಹ್ಯವಾದವಾಗಿಯೂ ಶ್ರೀಯುತರು ಹೇಳಿದರು. ರಾಷ್ಟ್ರೀಯ ಸಭೆಯವರು ಸೈಮನ್ ಕಮಿಟಿಯ ವಿಷಯ ಕೈಕೊಳ್ಳಬಹುದಾದ ಬಹಿಷ್ಕಾರದ ಯೋಜನೆಗಳನ್ನು ಪರಾಂಬರಿಸಿ ಏಕೀಕರಣವನ್ನು ಪ್ರತಿಪಾದಿಸಲು ರಾಷ್ಟ್ರಸಭೆಯಲ್ಲಿ ಇಂಬಿದ್ದರೆ, ಸೈಮನ್ ಕಮಿಟಿಯ ಬಳಿ ಏಕೀಕರಣವನ್ನು ಪ್ರತಿಪಾದಿಸಬೇಕಾಗಿ ಪರಿಷತ್ತಿನ ವಿಚಾರವಿರುವದಾಗಿಯೂ ಶ್ರೀ ಶ್ರೀನಿವಾಸರಾಯರು ನಿವೇದಿಸಿ, ಪರಿಷತ್ತಿಗೆ ಸಭಿಕರು ಬಂದು ಈ ವಿಷಯದ ತಮ್ಮ ವಿಚಾರಗಳನ್ನು ತಿಳಿಸಿ, ಏಕೀಕರಣ ಕಾರ್ಯಕ್ಕೆ ಸಹಾಯ ನೀಡಬೇಕಾಗಿ ಬಿನ್ನೈಸಿಕೊಂಡರು. ಆ ವೇಳೆ ಶ್ರೀ ಕಾಂತಿಯವರ ಚಿಕ್ಕ ಉಪನ್ಯಾಸವಾಯಿತು. ಕರ್ನಾಟಕವು ಚದರಿಹೋದ್ದರಿಂದ ಕನ್ನಡ ಭಾಷೆಯು ಭಿನ್ನವಾಗಿರುತ್ತದಾಗಿ ಅವರು ಹೇಳಿದರು. ಮೈಸೂರಿನ ಕನ್ನಡವೇ ಬೇರೆ, ಆಂಧ್ರ ಸಹವಾಸದಲ್ಲಿರುವ ಬಳ್ಳಾರಿಯ ಕನ್ನಡವೇ ಬೇರೆ; ಧಾರವಾಡ-ಬೆಳಗಾವಿಗಳ ಕನ್ನಡವೇ ಬೇರೆ, ನಮ್ಮ ಉತ್ತರ-ದಕ್ಷಿಣ ಕನ್ನಡ ಜಿಲ್ಹೆಗಳ ಕನ್ನಡದ ಮಾದರಿಯೇ ಬೇರೆ. ಕರ್ನಾಟಕದ ಎಲ್ಲ ಪ್ರಾಂತಗಳು ಒಕ್ಕಟ್ಟಾಗಿದ್ದರೆ, ಕರ್ನಾಟಕ ಭಾಷೆಗೆ ಒಂದೇ ಸಂಸ್ಕಾರವು ಪ್ರಾಪ್ತವಾಗಿ, ಕನ್ನಡವು ಉದ್ಧಾರಹೊಂದುತ್ತಿತ್ತಾಗಿ ಶ್ರೀ ಕಾಂತಿಯವರು ಬಹು ಸೊಗಸಾಗಿ ಹೇಳಿದರು. ಆ ವೇಳೆ ಶ್ರೀ ಕಲ್ಯಾಣಪುರಕರ ಶ್ರೀಪಾದರಾಯರು ಉಪನ್ಯಾಸಕರ ಆಭಾರ ಮನ್ನಿಸಿದರು. ಧಾರವಾಡವೇ ಕರ್ನಾಟಕದ ರಾಜಧಾನಿಯಾಗಲು ಈಗಿನ ಮಟ್ಟಿಗೆ ಯೋಗ್ಯವಿರುವದಾಗಿಯೂ, ಅಲ್ಲಿ ಶಿಕ್ಷಣಾಲಯಗಳೂ, ಕರ್ನಾಟಕಕ್ಕೆ ದಾರಿ ತೋರಿಸಿ ಕೊಡಬಹುದಾದ ವಿಚಾರಿ ಪುರುಷರೂ ವಾಸವಾಗಿರುತ್ತಾರಾಗಿಯೂ, ಸ್ವಾಭಾವಿಕ ಅನುಕೂಲ್ಯಗಳಿಗಿಂತ ಈ ವಿಷಯಗಳಿಗೇ ಹೆಚ್ಚು ಪ್ರಾಧಾನ್ಯ ಕೊಡಬೇಕಾಗಿಯೂ ಸಧ್ಯಕ್ಕೆ ಭಟಕಳವನ್ನು ರಾಜಧಾನಿಯಾಗಿ ಕಲ್ಪಿಸುವದು ವ್ಯವಹಾರಿಕ ರಾಜಕಾರಣವಲ್ಲವಾಗಿಯೂ ಅಭಿಪ್ರಾಯಪಟ್ಟರು. ಈ ತರದ ನಾವು ವಿಜಾಪುರ ಧಾರವಾಡಗಳೊಳಗಿನ ಮುಂದಾಳುಗಳ ಕೈಕೆಳಗೆ ಕೆಲಸ ಮಾಡುತ್ತ ಬಂದಿರುತ್ತೇವಾಗಿಯೂ ಉದ್ಗರಿಸಿದರು. ಬಿಡಬರಕ ವಿಧಿಗಳಾದ ಬಳಿಕ, ಸಭೆಯು ವಿಸರ್ಜನಹೊಂದಿತು.

ಒಬ್ಬರು ಇಲ್ಲಿಯ ಮ್ಯುನಿಸಿಪಾಲಿಟಿಯ ಆಸ್ಪತ್ರೆ ವಿಷಯ ವಿಸ್ತಾರವಾದ ಪತ್ರ ಬರೆದು ತಿಳಿಸುವದೇನಂದರೆ:— ಇಲ್ಲಿಯ ಆಸ್ಪತ್ರೆಯ ಡಾಕ್ಟರರು ಇಲ್ಲಿ ಬಂದು ೮-೧೦ ವರ್ಷಗಳಾದವು. ಮುಂಚೆ ಮುಂಚೆ ಬಂದಾಗ ಡಾಕ್ಟರರು ಬಹು ಹುರುಪಿನಿಂದ ಕೆಲಸ ಮಾಡುತ್ತಿದ್ದರು; ಈಗ ಇಲ್ಲಿ ಖಾಸಗಿ ಡಾಕ್ಟರರ ಪ್ರಸ್ಥವು ಹೆಚ್ಚು ಬೆಳೆದಿದ ಪ್ರಕಾರ ...ದೆ ಮ್ಯುನಿಸಿಪಾಲಿಟಿಯ ಆಸ್ಪತ್ರೆಯಲ್ಲಿ ರೋಗಿಗಳ ಉಪಚಾರವು ಸರಿಯಾಗಿ ಸಾಗುವದಿಲ್ಲೆಂದು ಯಾರೂ ತಿಳಿಯಬಹುದು. ಡಾಕ್ಟರರಿಗೆ ಹೀಗೆ ೮-೧೦ ವರ್ಷಗಳ ತನಕ ಒಂದೇ ಸ್ಥಳದಲ್ಲಿ ಇಟ್ಟುಕೊಳ್ಳುವದು ಪ್ರಶಸ್ತವಲ್ಲ. ಮ್ಯುನಿಸಿಪಾಲಿಟಿಯವರು ಅಸಡ್ಡೆ ಕಣ್ಮುಚ್ಚಿಕೊಂಡಿರುವ ಕಾರಣವೇನು? ಈಗಿರುವ ಡಾಕ್ಟರರ ಬದಲಿ ವಿಷಯ ಸದ್ಯಕ್ಕೆ ಮ್ಯುನಿಸಿಪಾಲಿಟಿಯಲ್ಲಿ ಕೆಲವು ಪ್ರಶ್ನೆ ನಡೆದಿದ್ದವು. ಈಗ ವಿಶೇಷ, ಎಲ್ಲವೂ ಸ್ತಬ್ಧವಾದ ಮ್ಯುನಿಸಿಪಾಲಿಟಿಯ ಡಾಕ್ಟರರು ಹುರುಪಿನಿಂದ ...ದರೆ ಬಡವರು ಖಾಸಗಿ ಡಾಕ್ಟರರ ಬಳಿ ಹೋಗುವ ಪ್ರಸಂಗ ಬರುವದಿಲ್ಲ. ಆದರಿಂದ ಈ ಡಾಕ್ಟರರಿಗೆ ಇಲ್ಲಿಂದ ವರ್ಗ ಮಾಡಿ, ಬೇರೆ ಡಾಕ್ಟರರನ್ನು ಮ್ಯುನಿಸಿಪಾಲಿಟಿಯವರು ತರಿಸತಕ್ಕದ್ದು." ಇತ್ಯಾದಿ.

ಕಾರವಾರ— ಸಿದ್ದಿಲ(?) ... ಬಂದಿರುತ್ತಾರೆ ಪ್ಲೇಗಿನ ಹಾವಳಿಗಿಂತ ಕೋಲಾಹಲವೇ ದೊಡ್ಡದಾಗಿರುತ್ತದೆ. ಒಬ್ಬರು ಸತ್ತರೆ, ೨-೩ ಜನರು ಸತ್ತರೆಂದು ಹೇಳುತ್ತಾರೆ. ಆದರಿಂದ ಸಂತೆ ಸಹ ಕೂಡುವದು ಕಠಿಣವಾಗಿದೆ. ಬ್ರಾಹ್ಮಣಗಲ್ಲಿ-ಚಿಕ್ಕಲಗಲ್ಲಿಗಳಲ್ಲಿ ಕೆಲವು ಇಲಿಗಳು ಸತ್ತಿರುತ್ತವೆ. ಮ್ಯುನಿಸಿಪಾಲಿಟಿಯವರು ಹಸ್ತಪತ್ರಿಕೆಗಳನ್ನು ಪ್ರಕಟಿಸಿದ್ದಾರೆ. ಜನರಿಗೆ ಸ್ವಚ್ಛತೆ ಕಾಯಬೇಕೆಂದು ಉಪದೇಶಿಸಿದ್ದಾರೆ. ಫಿನಾಯಿಲು ಉಚಿತವಾಗಿ ಕೊಡುವರು. ಡಾಕ್ಟರರು ಚುಚ್ಚುತ್ತಿದ್ದಾರೆ. ಪರಊರುಗಳಿಂದ ಆಮದಾಗುವ ಜಿನಸುಗಳನ್ನು ಪ್ರತಿಬಂಧಿಸುವ ಅಧಿಕಾರವು ಮ್ಯುನಿಸಿಪಾಲಿಟಿಗೆ ದೊರೆತಿದೆ. ಬೆಳಗಾವಿ-ಹುಬ್ಬಳ್ಳಿ ಕಡೆಗಳಿಂದ ಆಮದಾಗುವ ಮಾಂಸ-ಕೋಳಿ ಕಾಯಿಪಲ್ಲೆಗಳನ್ನು ಮ್ಯುನಿಸಿಪಾಲಿಟಿಯವರು ಒಳಸೇರಗೊಡಬಾರದು. ಬ್ರಾಹ್ಮಣಗಲ್ಲಿ ಹಾಗು ಚಿಕ್ಕಲಗಲ್ಲಿಗಳಂಥ ಹೊಲಸು ಕೇರಿಗಳನ್ನು ಸ್ವಚ್ಛ ಮಾಡಿಸಬೇಕು. ಮೋಟಾರುಗಳ ಓಡಾಟದಿಂದ ಧೂಳಿ ಏಳುವ ಮಾರ್ಗಗಳ ಮೇಲೆ ನೀರು ಹಾಕಿಸಬೇಕು. ಮೋಟಾರುಗಳ ವೇಗದ ಮೇಲೆ ಪೋಲೀಸರು ಕಾವಲಿಡತಕ್ಕದ್ದು. ರಾ। ಜೋಶಿ ವಕೀಲರ ತಮ್ಮನ ಹುಡುಗಿಯು ನಿಧನ ಹೊಂದಿದಳು; ಕ್ರೈಸ್ತ ಜಾತಿಯ ...ಗನೊಬ್ಬನ ಹುಡುಗನೂ ತೀರಿದನು.

ಇಲ್ಲಿಯ ಪ್ರಸಿದ್ಧ ವಕೀಲರಾದ ರಾ। ಶಿವರಾಮ ರಂಗಪ್ಪ ನಾಡಕರ್ಣಿಯವರು ತಾ. ೧೦ನೇ ಆದಿತ್ಯವಾರ(?) ಊಟ ತೀರಿಸಿಕೊಂಡು ಕೋರ್ಟಿಗೆ ಹೋಗುತ್ತಿರುವಾಗ ಒಮ್ಮೆಲೆ(?) ... ಹೃದಯಕ್ರಿಯೆ ನಿಂತು ದೇಹಾವಸಾನ ಹೊಂದಿದರು. ಕೂಡಲೆ ಡಾ। ತೆಲಂಗರವರು ಬಂದು ಉಪಚಾರ ಮಾಡಿದಾಗ್ಯೂ ಹಾರಿಹೋದ ಪ್ರಾಣಜ್ಯೋತಿಯು ಮರಳಿ ಬರಲಿಲ್ಲ. ಅತ್ತಿತ್ತ ಕೆಲವು ವರ್ಷಗಳ ಪ್ರಕೃತಿಯು ನೆಟ್ಟಗಿಲ್ಲಾಗಿತ್ತು. ಆದರೆ ಇಷ್ಟು ಅನಪೇಕ್ಷಿತವಾಗಿ ಅವರು ಕಾಲವಾದರೆಂದು ಯಾರೂ ಎಣಿಸಿದ್ದಿಲ್ಲ. ರಾ। ನಾಡಕರ್ಣಿಯವರಿಗೆ ಸರಕಾರಿ ವಕೀಲ ವರ್ಗದಲ್ಲಿ ಬಹಳ ಆದರವಿತ್ತು. ಆ ದಿನ ಮಧ್ಯಾಹ್ನ, ವಕೀಲರೂ ಕೋರ್ಟಿನಲ್ಲಿ ಕಾಸ್ತವೂ(?) ಕೆಲಸ ಮಾಡಿ ಮೃತಾತ್ಮರಿಗೆ ಪೂಜ್ಯಭಾವವನ್ನು ವ್ಯಕ್ತಪಡಿಸಿದರು. ವಕೀಲ ವರ್ಗದವರು ಮೊನ್ನೆ ಶನಿವಾರಕ್ಕೆ ಸಭೆಸೇರಿ ದುಃಖಪ್ರದರ್ಶನ ಮಾಡಿದರು ಮೃತಾತ್ಮರ ಆಪ್ತೇಷ್ಟರ ಬಳಿ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಶ್ರೀ ನಾ। ನಾಡಕರ್ಣಿಯವರು ವಿಶೇಷ ವ್ಯಥೆಪಡದೆ ಮರಣಪಟ್ಟದ್ದು ಅವರ ಭಾಗ್ಯವೇ!

ಇಲ್ಲಿಯ ಜಿಲ್ಲಾ ಲೋಕಲ್ಬೋರ್ಡಿನ ಪರಿಷತ್ತಿಗೆ ಅಧ್ಯಕ್ಷರೆಂದು ರಾ। ಬಾ। ಕಲ್ಯಾಣಪೂರಕರರನ್ನು ನೇಮಿಸುವ ಆಲೋಚನೆ ನಡೆದಿದೆ. ಜಿಲ್ಲೆಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಜಿಲ್ಲೆಯವರಿಗೇ ಒಪ್ಪಿಸುವದು ಪ್ರಶಸ್ತ ತೋರುವದಿಲ್ಲ. ಇಷ್ಟಾಗಿ ರಾ। ಬಾ। ರವರು ಲೋಕಲ್ಬೋರ್ಡ ಕೆಲಸವನ್ನು ವಿಶೇಷ ನಡಿಸಿದ್ದು ತೋರುವದಿಲ್ಲ ಪರಜಿಲ್ಲೆಯಿಂದ ಅನುಭವಿಕರನ್ನು ಅಧ್ಯಕ್ಷಸ್ಥಾನಕ್ಕೆ ನಿಯಂತ್ರಿಸುವ ವಿಚಾರ ನಡಿಸುವದುತ್ತಮ.

ಶಿರ್ಶಿ— ಪ್ಲೇಗಿನ ಪ್ರಭಾವವು ಪ್ರಬಲವಾಗುತ್ತಿರುವದರಿಂದ ಪುರವಾಸಿಗಳೆಲ್ಲ ವನವಾಸಿಗಳಾಗುವ ಪ್ರಸಂಗ ಬಂದಿದೆ. ಇನ್ನಿತ ಶಾಲೆಗಳಿಗೆ ೧೫ ದಿನಗಳ ರಜೆಯು ಎರಡನೇ ಸಲ ಸಿಕ್ಕಿದೆ. ಇಂಗ್ಲಿಷ ಶಾಲೆಗೆ ಮಾತ್ರ ರಾಜನ ಮಾಸ್ತ್ಯಯಾತ್ರೆಯ ಬಗ್ಗೆ ಬಂದರು ದಿನ ನಡುವೆ ವಿಶ್ರಾಂತಿ ಸಿಗುತ್ತದೆ "ತಮ್ಮ ತಮ್ಮ ಮನೆಗಳಲ್ಲಿಯ ಇಲಿಗಳಿಗೆ ಅಕ್ಷಯ್ಯ ಆಯುಷ್ಯವು ಲಭಿಸಲಿ; ಅವಕ್ಕೆ ಮೃತ್ಯುವು ಎಂದೂ ಬಾರದಿರಲಿ." ಎಂದು ಜನರೆಲ್ಲ ಹಾರೈಸುತ್ತಿರುವರು ಉಭಯರಿಗೂ ಸಂಕಟ ಪ್ರಾಪ್ತವಾಗಿರುವದರಿಂದ ಮನುಷ್ಯ-ಮೂಷಕರಲ್ಲಿ ಗಾಢವಾದ ಪ್ರೇಮಬಂಧಗಳು ಬೆಳೆಯುತ್ತಲಿವೆ!! ಶ್ರೀ ಅಮ್ಮನವರ ಸಾನ್ನಿಧ್ಯದಲ್ಲಿಯ ಪ್ರಜೆಗಳಿಗೇ ದುರವಸ್ಥೆಯು ಪ್ರಾಪ್ತವಾದ ಬಳಿಕ ಭಕ್ತರುಗಳಿಗೆಯು ಭಯಭರಿತವಾಗಿದೆ; ಇನ್ನು ಕಾರಕರಾರು?

ಇಲ್ಲಿಯ ಪ್ಲೇಗಿನವರು(?) ತಿಳಿಸುವದೇನಂದರೆ — ಸ್ಕೂಲ ಬೋರ್ಡಿನ ಕಾರಭಾರದಲ್ಲಿ ದಿನ ದಿನಕ್ಕೆ ಸ್ಥಿತಿಯು ಮತ್ತೂ ಕೆಟ್ಟಿತು. ೮-೧೦ ವರ್ಷಗಳ ತನಕ ಶಾಲೆಯ ಹವಿಯಲ್ಲಿ ಕೆಲಸ ಮಾಡಿ ದಣಿದವರಿಗೆ ಉತ್ತಮ ಹುದ್ದೆ ... ೪-೫ ವರ್ಷ ... ತಮ್ಮ ತಮ್ಮ ಮನೆ ಬಾಗಿಲಿಗೇ ... ಸ್ಕೂಲ ಬೋರ್ಡಿನವರು ಹೀಗೆ ಕಣ್ಮುಚ್ಚಿ ನಡೆಕೊಂಡರೆ, ಶಿಕ್ಷಕರಿಗೆ ಹಾದಿಕಾರ್ಯಾರು? ಇತ್ಯಾದಿ—

ಹಳಿಯಾಳ— ಹಗಲಿಗೆ ಪೋಲೀಸ, ರಾತ್ರೆ ಚಳಿ, ಚಳಿಜ್ವರ ಮುಂತಾದ ರೋಗರುಮಿಗಳು ತಲೆಯೆತ್ತುತ್ತಿವೆ ಪ್ಲೇಗು ಕಾಲಿಟ್ಟು ಗ್ರಾಮಸಂಚಾರಕ್ಕೆ ಹೋಗುತ್ತಿದ್ದಾನೆ. ಗ್ರಾಮದವರು ಊರು ಬಿಡುತ್ತಲಿದ್ದಾರೆ.

ಇಲ್ಲಿಯ ನಾಗರಿಕರಾದ ರಾ। ಬಾ। ಗೋಪಾಲ ಅನಂತ ಗಿರಿಯವರು ಕಾಲವಾದ ಬಗ್ಗೆ ಜನರೆಲ್ಲರೂ ಮರುಗುತ್ತಾರೆ ರಾವಬಹಾದ್ದೂರರವರು ಕಟ್ಟಿಸಿದ ಶ್ರೀ... ದೇವರ ಗುಡಿಯ ಕಲಶವು ... ಗೋಪಾಳರಾಯರು ನವಲ್ಲಿ ಅನೇಕ ಪ್ರಕಾರದ ಲೋಕೋಪಕಾರದ ಕೆಲಸಗಳನ್ನು ಮಾಡಿದ್ದಾರೆ ಹಳಿಯಾಳದಲ್ಲಿ ನೀರಿನ ಕೊರತೆಯನ್ನು ಪರಿಹರಿಸುವದಕ್ಕಾಗಿ ನೀರಿನ ಪೂರೈಕೆಯ ಯೋಜನೆಯನ್ನು ಕೈಕೊಳ್ಳಬೇಕೆಂದು ಗೋಪಾಳರಾಯರು ಯೋಚಿಸಿದ್ದರು. ೧೩ನೇ ಗುರುವಾರಕ್ಕೆ ಮುನಿಸಿಪಾಲಿಟಿಯ ಶಾಲೆಗಳಿಗೆ ರಜೆಕೊಡಲಾಯಿತು ಸಾರ್ವಜನಿಕ ಸಭೆಯಾಗಿ ದುಃಖದ ಠರಾವುಗಳಾದವು ಉಪನ್ಯಾಸಕರು ಗೋಪಾಳರಾಯರ ವರ್ಣನೆಯನ್ನು ಮಾಡಿ ಅವರ ಪರಂಪರೆಯನ್ನು ಉತ್ತರಾಧಿಕಾರಿಗಳು ಪಾಲಿಸಬೇಕೆಂದರು. ಗೋಪಾಳರಾಯರಿಗೆ ಸದ್ಗತಿ ಕೊಡಲೆಂದು ಪರಮಾತ್ಮನ ಕಡೆ ಪ್ರಾರ್ಥಿಸಿಕೊಂಡರು.

ಮುನಿಸಿಪಾಲಿಟಿಯ ಇಲೆಕ್ಷನು ಫೇಬ್ರುವರಿ ತಾರೀಖು ೧೩ನೇಗೆ ಇರುತ್ತದೆ. ಇನ್ನು ತನಕ ಯಾವದೇ ವ್ಯವಸ್ಥೆಯಾದದ್ದು ತೋರುವದಿಲ್ಲ ಉಮೇದ್ವಾರರು ಕೊಡತಕ್ಕ ಅರ್ಜಿಯ ತಾರೀಖು ಸಹ ತಿಳಿಯಲಿಲ್ಲ ಸುಧಾರಿಸಿದ ಮತದಾರ ಪತ್ರಿಕೆಯು ಕಾಣುವದಿಲ್ಲ. ಮುನಿಸಿಪಾಲಿಟಿಯವರು ಇತ್ತ ಲಕ್ಷ್ಯಕೊಡಬೇಕು.

ಕಾಸರಕೋಡ— ಇಲ್ಲಿಯ ಶ್ರೀ ಗೋಪಾಲಕೃಷ್ಣ ದೇವಾಲಯದಲ್ಲಿ ಧನುರ್ಮಾಸದ ನಿಮಿತ್ತ ಬ್ರಾಹ್ಮಣ ಸಂತರ್ಪಣೆಯಾಯಿತು. ಮಕರ ಸಂಕ್ರಮಣದ ಉತ್ಸವವು ಜರುಗಿತು. ಧರ್ಮಸ್ಥಳಕ್ಕೆ ಹೋದ ಯಾತ್ರಸ್ಥರ ಎರಡನೇ ತಂಗಡವು ಮರಳಿತು. ತಿರುಪತಿ ಯಾತ್ರೆಗೆ ಕೆಲವರು ಹೊರಟರು. ಊರ ಅಕ್ಕಿಯ ಧಾರಣೆ ಇಳಿಯುತ್ತಿದ್ದರೂ ಪೇಟೆ ಅಕ್ಕಿಯ ದರವು ಏರಿಕೆಯಲ್ಲಿದೆ, ಯಾತ್ರಸ್ಥರ ಸಂತರ್ಪಣೆಗಳಿಂದ ಪೇಟೆಗೆ ಅಕ್ಕಿಗೆ ಗಿರಾಕಿ ಬೆಳೆದದರಿಂದಲೋ ಏನೋ!

ಭಟ್ಕಳ— ಇಲ್ಲಿಯ ವೇ। ಮ। ವಿ. ಭಟ್ ರಾಮಭಟ್ಟರವರು ಬರೆಯುವದೇನಂದರೆ — "ಭವಿಷ್ಯತ್ ಮಕರ ಸಂಕ್ರಾಂತಿಯ ಫಲವು.- ಶಾಲಿವಾಹನ ಶಕೆ ... ಹಿಂದೆ ಆಗಿಹೋದ ಯುಗಾದಿಯು ಇದೇ ಶಕದ ಚೈತ್ರ ಶುದ್ಧ ೧ ರವಿವಾರ ಪ್ರಭವ ಸಂವತ್ಸರವು ಆರಂಭವಾದ್ದರಿಂದ ಸೂರ್ಯನು ರಾಜನಾಗಿಯೂ, ಅದರ ನಂತರ ಸೌರಮಾನ ಸಂಕ್ರಾಂತಿಯು ಬುಧವಾರ ಬಂದ ಪ್ರಯುಕ್ತ ಬುಧನು ಮಂತ್ರಿಯಾಗಿ "ಮಂತ್ರೀ ... ರೋಗ..." ಎಂಬಂತೆ ಜನರು ಇಲ್ಲಿಯ ವರೆಗೆ ಬಹಳೇ ತರದಿಂದ ಪಾಪಕರವಾದ ದುಂದೋಷದಿಂದ ಇಲ್ಲದ ದುಃಖವನ್ನು ಹೊಂದಿದರು ಇದರಂತೆಯೇ ಮುಂದೆ ಬರುವ ೬ ತಿಂಗಳು ಬಹಳೇ ಬಿಕ್ಕಟ್ಟಿನದು. ಅಂತಲೆ, ಅತೀ ದುಃಖದಾಯಕವಾದದ್ದು. ಯಾಕಂದರೆ ಇದೇ ನಡೆಯುವ ಪುಷ್ಯ ಮಾಸದ ಪ್ರತಿಪದೆಯು ರವಿವಾರವೇ ಬಂದದ್ದಲ್ಲದೆ ಮಕರ ಸಂಕ್ರಾಂತಿಯು ಸಹಾ ವ್ಯತಿಪಾತಯೋಗದ ದಿವಸ ಬಂದು ಹಾಗೂ ಅಗದೀ ಪಾಪವಾರವಾದ ಶನಿವಾರ ದಿವಸ ಉತ್ತರಾಯಣದ ಮಕರ ರಾಶಿಗೆ ಸೂರ್ಯನು ಪ್ರವೇಶ ಮಾಡಿದದರಿಂದ ಮತ್ತೂ ಅದರ ಮರುದಿವಸ ತಿಂಗಳ ಗತುವು ಸಹ ರವಿವಾರವಾದ ಪಾಪವಾರ ಬಂದದ್ದರಿಂದಲೂ ಜನರಿಗೆ ತಪ್ಪದೇ ಕಲಹದಿಂದ ಮೃತ್ಯುಭೀತಿಯು ಹೆಚ್ಚಾಗಿ ಬರುವದು. ಕಾರಣ ಜನರು "ಸತ್ಯೇಕಂ ಸತ್ಯ ಸಂಕಲ್ಪಂ ಸತ್ಯಂ ಸತ್ಯ ವ್ರತಂ ಹರಿಂ॥ ಸತ್ಯಚರಿಯಂ ಸತ್ಯಯೋನಿಂ ಸತ್ಯ ಕೀರ್ತಿಂ ಜಪಂ ಭಜೆ॥ ಮಾನಾನಾಂ ಕರ್ಮಹೀನಾನಾಂ ಮನಸಾನಾಂ ದುರಾತ್ಮನಾಂ ॥ ಜೀವನಂ ಕರಿ ನಾಮ್ನೈವ ಗತಿರ್ನಾಸ್ತಿ ವಿದ್ಯತೇ॥" ಎಂಬ ನಾರದೋಕ್ತಿಯಂತೆ ಜನರು ನಡೆಯುವದಲ್ಲದೆ ಜನರು ತಮ್ಮ ತಮ್ಮ ಗೃಹಸ್ವಚ್ಛತೆಯಿಂದಲೂ, ಮಿತಾಹಾರದಿಂದಲೂ, ಸ್ವಚ್ಛ ಹವೆಯಿಂದಲೂ ಅತೀ ಜಾಗರೂಕರಾಗಿರಬೇಕಾಗಿರುತ್ತದೆ. ಮತ್ತು ತಮ್ಮ ತಮ್ಮ ಗ್ರಾಮ ಗಡಿಯಲ್ಲಿರತಕ್ಕಂಥಾ ಕ್ಷೇತ್ರಪಾಲಾದಿ ದೇವತೆಗಳಿಗೆ ಆಯಾಯ ಸ್ಥಳದ ಪೂರ್ವಾಚಾರದಂತೆ ಭಜನ-ಪೂಜಾದಿ ಸತ್ಕರ್ಮಗಳಿಂದ ಈ ದೋಷವನ್ನು ಕಳಕೊಳ್ಳಬೇಕಾಗಿ ನಾನು ಜಗತ್ಕರ್ತನಾದ ಶ್ರೀ ಪರಮೇಶ್ವರನಿಗೆ ಸದಾ ಪರೋಪಕಾರಾರ್ಥವಾಗಿ ಸರ್ವರಿಗೊಪ್ಪ(ಪ್ರೀತಿಯಾದಿಯಾಗಿ) ಕ್ಷೇಮಾಯುರಾರೋಗ್ಯವನ್ನು ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ.

ವೃತ್ತಸಾರ.

— ಮೀರಜೆಯಲ್ಲಿ ಅಂಬಾಬಾಯಿ ಹಾಲೀನ ಸಂಸ್ಥೆಯವರು ನಾಗರಿಕರ ಮೋಸದಲ್ಲಿ ೪ ಲಕ್ಷ ರೂಪಾಯಿಗಳ ... ಗಳನ್ನು ಹಾಕಿದ್ದಾರೆ.

— ಬರೋಡೆಯ ಗಾಯಕವಾಡರವರು ಸೌಭಾಗ್ಯವತಿ ಯುವರಾಣಿಸಹ ಶುಕ್ರವಾರಕ್ಕೆ ವಿಲಾಯತಿಯಿಂದ ಬಂದು ತಲ್ಪಿದರು.

— ರಾಧಮೇಳದ(?) ಸಮಯ ಪ್ರಯಾಗಕ್ಷೇತ್ರದಲ್ಲಿ ದೊಡ್ಡ ಜಾತ್ರೆಯಾಗುತ್ತದೆ ಸಂಗಮದಲ್ಲಿ ಸ್ನಾನ ಮಾಡಿ ಪಾವನರಾಗಲು ಲಕ್ಷಾವಧಿ ಜನರು ಸೇರುತ್ತಾರೆ. ದೋಣಿಕಾರರಿಗೆ ಈ ಪರ್ವಕಾಲದಲ್ಲಿ ... ದೋಣಿಕಾರರು ದೋಣಿಗಳನ್ನು ಸಂಗಮದಲ್ಲಿ ಸಂಚರಿಸಬೇಕಾದರೆ ಲೈಸನ್ಸು ಪಡೆಯತಕ್ಕದ್ದು. ಲೈಸನ್ಸು ಫೀ ಏರಿಸಲಾಯಿತು. ಆದರಿಂದ ದೋಣಿಕಾರರು ದೋಣಿಗಳನ್ನು ಹೊರಡಿಸಲಿಕ್ಕಿಲ್ಲೆಂದು ಸತ್ಯಾಗ್ರಹ ಮಾಡಿದ್ದಾರೆ. ದೋಣಿಯ ಹಾಸಲನ್ನು ಸರಕಾರವು ಏರಿಸಿದೆ. ಅದಕ್ಕೆ ಬೇಕಾಗಿ ಏರಿಸಿದ ಲೈಸನ್ಸಿನ ಹಣವನ್ನು ಭರ್ತಿ ಮಾಡಿಕೊಳ್ಳಲು ಸರಕಾರವು ದೋಣಿಕಾರರಿಗೆ ಬೋಧಿಸಿ ನೋಡಿತು. ಪರಸ್ಪರ ವ್ಯವಹಾರ ನಡಿಸಿ ಏರಿಸಿದ ಲೈಸನ್ಸು ಫೀಯನ್ನು ಕೊಡಲು ದೋಣಿಕಾರರು ಒಪ್ಪುವದಿಲ್ಲ. ಅಧಿಕಾರಿಗಳು ಬೇರೆ ಕಡೆಯಿಂದ ದೋಣಿಗಳನ್ನು ತರಿಸಿದ್ದರು. ಮೊನ್ನೆ ಮಕರ ಸಂಕ್ರಮಣಕ್ಕೆ ಏನೂ ವ್ಯವಸ್ಥೆಯಾಯಿತೆಂಬುದು ತಿಳಿಯಲಿಲ್ಲ.

ಮಹಾತ್ಮರ ಆತ್ಮಚರಿತ್ರೆ.

(೩೩) ವಾಙ್ಮಯ ಶಿಕ್ಷಣ.

ಟೋಲ್‌ಸ್ಟಾಯ್ ಆಶ್ರಮದಲ್ಲಿ ಶಾರೀರಿಕ ಶಿಕ್ಷಣದ ಕುರಿತು ನಾವು ಮಾಡಿದ ಏರ್ಪಾಟನ್ನು ಹಿಂದಣ ಅಧ್ಯಾಯದಲ್ಲಿ ವಿವರಿಸಿದ್ದೇವೆ. ಅದರಲ್ಲಿಯೇ ಔದ್ಯೋಗಿಕ ಶಿಕ್ಷಣದ ಕ್ರಮವೂ [illegible]. ಇದರಿಂದ ನನಗೆ ಹೆಚ್ಚಿನ ಸಮಾಧಾನವಾಗದಿದ್ದಾಗ್ಯೂ, ಈ ಕಾರ್ಯವು ತಕ್ಕಮಟ್ಟಿಗೆ ಯಶಸ್ವಿಯಾಯಿತೆಂದು ಹೇಳಬಹುದು. ಆದರೆ, ವಾಙ್ಮಯಾತ್ಮಕ ಶಿಕ್ಷಣದ ವಿಷಯವು ವಿಶೇಷ ಪರಿಶ್ರಮದ ಕೆಲಸವಾಗಿತ್ತು. ಇದಕ್ಕೆ ಅವಶ್ಯವುಳ್ಳ ಸಾಹಿತ್ಯವಾಗಲಿ, ಶಿಕ್ಷಣದ ಸಹಕಾರಿಯಾಗಲಿ ನನ್ನಲ್ಲಿರಲಿಲ್ಲ. ಈ ವಿಷಯಕ್ಕೆ ತಗಲುವಷ್ಟು ಸಮಯವು ನನಗೆ ಸಿಕ್ಕುತ್ತಿರಲಿಲ್ಲ. ಶಾರೀರಿಕ ಪರಿಶ್ರಮದಿಂದ ದಿನಾ ನಾನು ದಣಿದು ಹೋಗುತ್ತಿದ್ದೆ. [illegible] ಬೇಕಾದಾಗಲೇ ಶಾಲಾ ವರ್ಗಗಳನ್ನು ಕಲಿಸ ಬೇಕಾಗಿತ್ತು. [illegible] ಕಲಿಸಲು ಚೈತನ್ಯ [illegible] ಕುಳಿತು ನಿದ್ದೆಗೆ ಹೋಗುವದೇ ಕಠಿಣ ಕೆಲಸ [illegible] ದಿನಾ ಬೆಳಗ್ಗೆ ಹೊಲಗದ್ದೆಗಳಲ್ಲಿಯೂ, [illegible] ಬೇಕಾಗಿತ್ತು. ಆದರಿಂದ [illegible] ಲಾಭವಾದ ಶಿಕ್ಷಣ ನಡಿಸಬೇಕಾಗಿ [illegible] ಗೆ ಯೋಗ್ಯವಾದ ಸಮಯವು [illegible] ತಮಿಳು—ಗುಜರಾಥಿ ಹಾಗು ಉರ್ದು [illegible] ನಾವು ಕಲಿಸುತ್ತಿದ್ದೆವು. ಹುಡುಗರು ಸ್ವಭಾಷೆಯಿಂದ ಅವರಿಗೆ ಪಾಠ ಹೇಳಿ ಕೊಡುತ್ತಿದ್ದೆವು. ಹಿಂಗ [illegible] ದ ಗುಜರಾಥಿ ಹುಡುಗರಿಗೆ ಕೆಲ ಮಟ್ಟಿಗೆ [illegible] ಭಾಷೆಯನ್ನು ಕಲಿಸುವದು ಅವಶ್ಯವಿತ್ತು. ಹಾಗು [illegible] ಸಾಧಾರಣ ಭೂಗೋಲ-ಗಣಿತಗಳ ಪ್ರಾಥಮಿಕ ಜ್ಞಾನಗಳ [illegible] ಎಲ್ಲ ವಿದ್ಯಾರ್ಥಿಗಳಿಗೆ ಹೇಳಿಕೊಡುವದು. ಅವಶ್ಯವಿದ್ದ ತಮಿಳ-ಉರ್ದು ಭಾಷೆಗಳನ್ನು ಕಲಿಸುವ ಕೆಲಸವನ್ನು ನಾನು ಕೈಕೊಂಡಿದ್ದೆ. ನಾನು ತಮಿಳ ಕಲಿತದ್ದು [illegible] ಯಾಣದಲ್ಲಿ ಹಾಗು ಜೈಲಿನಲ್ಲಿ. ಪೋಪರವರ « ತಮಿಳ ಹ್ಯಾಂಡಬುಕ್ » ಎಂಬುವದೊಂದು ಚಲೋ ಗ್ರಂಥವನ್ನು ಬರೆದಿದ್ದಾರೆ. ನಾನು ಓದಿದ್ದೇ [illegible]. [illegible] ಸತತ ಪ್ರಯಾಣದ ವೇಳೆಯಲ್ಲಿ ಉರ್ದು ಲಿಪಿಯ ಜ್ಞಾನವನ್ನು ನಾನು ಸಂಗ್ರಹಿಸಿದ್ದೆ. ಮುಸಲ್ಮಾನ [illegible] ಗಳೊಡನೆ ಒಳ್ಳೇ ಪರಿಚಯವು ಬೆಳೆಸಿದ್ದರಿಂದ ಪರ್ಶಿಯನ್ ಹಾಗು ಅರಬಿ ಶಬ್ದಗಳನ್ನು ಕಲಿತುಕೊಂಡಿದ್ದೆ. ಅಷ್ಟೇ ಉರ್ದು ಭಾಷೆಯ ಜ್ಞಾನವಾಗಿತ್ತು. [illegible] ಕಲಿತಷ್ಟೇ ಸಂಸ್ಕೃತವನ್ನು ನಾನು ಬಲ್ಲವನಾಗಿದ್ದೆ, [illegible] ರಾಥಿಯಾದರೂ ಅಷ್ಟೇ. ಈ ಬಂಡವಲಿನಿಂದ ನನ್ನ ಉದ್ಯೋಗ ನಡೆಯಬೇಕಾಗಿತ್ತು. ನನ್ನ ಸಹಕಾರಿಗಳು ನನಗಿಂತ ಈ ವಿಷಯ ಕಡಿಮೆ ಜ್ಞಾನ ಉಳ್ಳವರು. ಆದರೆ, ದೇಶಭಾಷೆಗಳ ಪ್ರೇಮದಿಂದಲೂ, ಶಿಕ್ಷಣ ಸಾಮರ್ಥ್ಯ ವಿರುವದೆಂಬ ಆತ್ಮವಿಶ್ವಾಸದಿಂದಲೂ, ವಿದ್ಯಾರ್ಥಿಗಳ ಅಜ್ಞಾನ ಹಾಗು ಔದಾರ್ಯಗಳಿಂದಲೂ ನನ್ನ ಕೆಲಸವು ನೆರವೇರಿತು.

ತಮಿಳ ಹುಡುಗರೆಲ್ಲರೂ ದಕ್ಷಿಣ ಆಫ್ರಿಕೆಯಲ್ಲಿ ಹುಟ್ಟಿ ಬೆಳೆದಿದ್ದರು. ಅವರಿಗೆ ತಮಿಳು ಮಾತಾಡಲು ಚನ್ನಾಗಿ ಬರುತ್ತಿದ್ದಿಲ್ಲ. ಬರೆಯಲಿಕ್ಕೇನು ಬರುತ್ತಿದ್ದಿಲ್ಲ. ಹೀಗೆ ಅವರಿಗೆ ಬರಹವನ್ನೂ, ವ್ಯಾಕರಣದ ಮೂಲ ತತ್ವವನ್ನೂ ಕಲಿಸಬೇಕಾಯಿತು. ಈ ಕೆಲಸವು ಸುಲಭವಿತ್ತು. ವಿದ್ಯಾರ್ಥಿಗಳು ನನಗಿಂತ ಬಲ್ಲವರಾಗಿದ್ದರು. ಇಂಗ್ಲಿಷ ತಿಳಿಯದ ತಮಿಳ ಜನರು ನನಗೆ ಕಾಣಬಂದಾಗ ಅವರ ಮಾತುಗಳನ್ನು ವಿದ್ಯಾರ್ಥಿಗಳೇ ನನಗೆ ತಿಳಿಸಿ ಹೇಳುತ್ತಿದ್ದರು. ನನ್ನ ಅಜ್ಞಾನವನ್ನು ವಿದ್ಯಾರ್ಥಿಗಳಿಗೆ ನಾನು ತಿಳಿಸಿದ್ದರಿಂದ ನನ್ನ ವ್ಯವಹಾರವೆಲ್ಲ ಮುದದಿಂದ ಸಾಗಿತ್ತು. ನನ್ನ ವಾಸ್ತವ ಸ್ಥಿತಿಯನ್ನು ನಾನವರಿಗೆ ಚನ್ನಾಗಿ ತಿಳಿಸಿದೆನು. ಅದರಿಂದ ಭಾಷೆಯ ಜ್ಞಾನದ ವಿಷಯ ನಾನು ಅಜ್ಞಾನ [illegible] ಲಿವ [illegible] ಗಿದ್ದರೂ ನನ್ನ ಮೇಲಿನ ಪ್ರೀತಿಯಾಗಲಿ, ಆದರ ಬಹುಮಾನವಾಗಲಿ ಎಳ್ಳಷ್ಟೂ ಕುಂದಲಿಲ್ಲ. ಮುಸಲ್ಮಾನ ವಿದ್ಯಾರ್ಥಿಗಳಿಗೆ ಉರ್ದು ಲಿಪಿಯನ್ನು ಕಲಿಸುವದು ಅದಕೂ [illegible] ಕೆಲಸವಾಗಿತ್ತು. [illegible] ಓದಲು ಅವರಿಗೆ [illegible] ಬರಹವನ್ನು ಸುಧಾರಿಸುವದೂ ನನ್ನ ಕೆಲಸವಾಗಿತ್ತು. ಆ ವಿದ್ಯಾರ್ಥಿಗಳು ಓದು ಬರಹ ದ [illegible] ಪರಂಪರೆಯವರಲ್ಲ. ಆದರೆ, ಅವರಿಗೆ ವಿಶೇಷವಾಗಿ ಕಲಿಸುವಂಥಾದ್ದೇನೂ ಇರಲಿಲ್ಲವಾಗಿ ನನಗೆ ಕೊಂಚ ಬಿಂಕ. ಸೋಮಾರಿತನವನ್ನು ಬಿಟ್ಟು ಹೋಗಲಾಡಿಸಿ, ಅವರ ಪಠಣ ಕ್ರಮದ ಮೇಲೆ ಮೇಲ್ವಿಚಾರಣೆ ಇಡುವದೇ ನನ್ನ ಕೆಲಸವಾಗಿತ್ತು. ಇಷ್ಟಕ್ಕೇ ನಾನು ಸಮಾಧಾನಪಡುತ್ತಿದ್ದೆ. ಆದರಿಂದ ಬೇರೆ ಬೇರೆ ವಯಸ್ಸಿನ ಬೇರೆ ಬೇರೆ ವಿಷಯಗಳನ್ನು ಒಂದೇ ವರ್ಗದಲ್ಲಿ ಕಲಿಯುವ ಹುಡುಗರನ್ನು ನಾನು ಸಾಗಿಸಿಕೊಂಡು ಹೋಗುತ್ತಿದ್ದೆ.

[illegible] ನಾನು [illegible] ವಿವಾದ [illegible] ಆ ಕಾಲಕ್ಕೆ ನನಗೆ ಕ್ರಮಿಕ ಪುಸ್ತಕಗಳ ಆವಶ್ಯಕತೆ ತೋರಲಿಲ್ಲ. ಆ ಕಾಲಕ್ಕೆ [illegible] ಪುಸ್ತಕಗಳ ಉಪಯೋಗವನ್ನೂ ಕೂಡ [illegible] ಸಹ ಅಲ್ಲಿ ಗ್ರಂಥಗಳ [illegible] ಅವಶ್ಯಕತೆ [illegible] ವಿದ್ಯಾರ್ಥಿಯು ನಿಜವಾದ [illegible] ಪುಸ್ತಕಗಳು [illegible] ಪುಸ್ತಕಗಳಲ್ಲದೇ [illegible] ನನಗೆ [illegible] ಹಚ್ಚಿನ [illegible] ಹೀಗಾಗಿ ನನ್ನ [illegible] ಬರದಿಂದ [illegible] ನಾನು ಓದಿದ [illegible] ನಾನು ಕಲಿತ [illegible] ಅವರಿಗೆ ನಾನು [illegible] ಈ [illegible] ಇಂದಿಗೂ ಅವ [illegible] ಹೇಳಬಲ್ಲೆ. ಗ್ರಂಥಗಳಿಂದ ಕಲಿತ [illegible] ಅವರಿಗೆ [illegible] ನೇರವಾಗಿ ಬಾಯಿಂದ ಹೇಳಿದ [illegible] ಅವರು ಸ್ಮರಣೆಯಿಂದ ಹೇಳುತ್ತಿದ್ದರು [illegible] ಆಗಾಗ [illegible] ಸಂಕಟವು [illegible] ಕೇಳುವದೆಂದರೆ ಅವರಿಗೆ [illegible] ವಿಷಯಗಳನ್ನು [illegible] ವರ್ಣಿಸಲಾಗದು [illegible] ಕೇಳಿ ಅವರು ನನಗೆ ಪ್ರಶ್ನೆಗಳನ್ನು ಕೇಳು [illegible] ಅವರ [illegible] ವಿಷಯವನ್ನು [illegible] ನನಗೆ ತಿಳಿಯುತ್ತಿತ್ತು

—— [illegible] ದೇವ [illegible] ಕೆಲವು ಭಾಗಗಳು [illegible] ಖಾದಿ

— [illegible] ರಾಷ್ಟ್ರೀಯ ಸಭೆಗ ಆಂಕು [illegible] ೨೦೧೧೩೯ ಖರ್ಚಿಯಾಗಿ ೧೬೦೦೦೦ ಉತ್ಪನ್ನವಾಯಿತು. ಅರ್ಧ ಲಕ್ಷ ರೂಪಾಯಿಗಳು ರಾಷ್ಟ್ರೀಯ ಸಭೆಯ ಶಾಖೆಯಾಗಿ [illegible] ೧೨॥ ಸಾವಿರ ಪ್ರೇಕ್ಷಕ ಟಿಕೇಟುಗಳು ಖರ್ಚಾದವು. ೩೦೦ ಮಂದಿ ಪ್ರಮುಖರು [illegible] ಚಿತ್ರ್ಯವಿದ್ದರು ೨॥ ಸಾವಿರ ಜನರು ಸ್ವಾಗತ ಮಂಡಲದ ಸಭಾಸದರಾಗಿದ್ದಾರೆ. ೩೧೫೦ ಮಂದಿ ಪ್ರತಿನಿಧಿಗಳು ಬಂದಿದ್ದರು

— [illegible] ತಾರೀಖು ೧ ನೇಗೆ [illegible] ತದ [illegible] ಗ್ರಾಮದ ಬಳಿಯಲ್ಲಿರುವ ಶಿವ ದೇವಾಲಯವು ಸುಟ್ಟು ಬೂದಿಯಾಯಿತು. ಈ ದೇವಾಲಯವು ೨೦೦ ವರ್ಷಕ್ಕಿಂತಲೂ ಪುರಾತನವಾದದ್ದೆಂದು ಹೇಳುತ್ತಾರೆ.

ಖಾದಿಯ ಪ್ರದರ್ಶನ.

ಮದ್ರಾಸ ರಾಷ್ಟ್ರೀಯ ಸಭೆಯ ಸಮಯ ಖಾದಿಯ ಪ್ರದರ್ಶನವನ್ನು ಮಹಾತ್ಮರು ತೆರೆದರು. ಈ ಪ್ರದರ್ಶನದಲ್ಲಿ ತರತರದ ಖಾದಿ ಇಟ್ಟಿದ್ದರು. ಬಳ್ಳೇ [illegible] ಗು ನೂಲಿನಿಂದ ತಯಾರಾದ ಖಾದಿಯನ್ನು ಅಲ್ಲಿ ಕಾಣಬಹುದಿತ್ತು. ಖಾದಿಯ ಕ್ರಮಗಳೂ ಅಲ್ಲಿ ಪ್ರತ್ಯಕ್ಷ ತೋರಿಸಲ್ಪಡುತ್ತಿದ್ದವು. ಚರಕದ ಮೇಲೆ ನೂಲು ತೆಗೆಯುವ ಕ್ರಮವು ನಡೆದಿತ್ತು. ಚರಕದ ಮೇಲೂ ನೂಲು ತೆಗೆಯುತ್ತಿದ್ದರು. [illegible], ಒಕ್ಕಿ ಕೊಡುವ ಕ್ರಮಗಳನ್ನೂ ಅಲ್ಲಿ ಕಣ್ಣಾರೆ ಕಾಣಬಹುದು. ನೂಲುಗಾರರಿಗೂ, ಹತ್ತಿ ಹಸನ ಮಾಡುವವರಿಗೂ ಇನಾಮುಗಳು ಹಂಚಲ್ಪಟ್ಟವು. ಎಳೆ ವಯಸ್ಸಿನ [illegible] ಗಾಂಧಿ ಎಂಬುವರು ೬ ತಾಸುಗಳಲ್ಲಿ ೩೧ ನಂಬರದ ೧೬೦೦ ಗಜ ನೂಲನ್ನು ನೂತು [illegible] ಲ್ಲಿ ಮೊದಲನೇ ಇನಾಮು ಪಡೆದರು. ಶ್ರೀ। ವೇದಧರ ಎಂಬುವರು ೧೪೨೬ ಗಜ ನೂಲನ್ನು ನೂತು ೨ನೇ ಇನಾಮು ಪಡೆದರು, ನೂಲಿನ ನಂಬರು ೧೪॥ ಇತ್ತು. ಆದರಿಂದ ಅವರು ೨ನೇ ನಂಬರಿಗೆ ಬಂದರು ಶ್ರೀ। ವೇಣುಗೋಪಾಲ [illegible] ೬ ತಾಸಿನಲ್ಲಿ ೧೫೫೦ ನಂಬರದ ೩೧೯ ಗಜ ನೂಲನ್ನು ನೂತು ನಂಬರಿನ ಸ್ಪರ್ಧೆಯಲ್ಲಿ ಮೊದಲನೇ ನಂಬರದ ಇನಾಮನ್ನು ಪಡೆದರು. ಶ್ರೀ। ಚೋಖಲಿಂಗಯ್ಯರವರಿಗೆ ೩ನೇ ಇನಾಮು [illegible]. ಇವರು ೧೪೫ ನಂಬರದ ೩೧೪ ಗಜ ನೂಲನ್ನು ನೂತರು. ಶ್ರೀ। ಕೇಶವ ಗಾಂಧಿಯವರಿಗೆ ನಾಲ್ಕನೇ ಇನಾಮು ದೊರೆಯಿತು; ಇವರು ೧೦೩ ನಂಬರಿನ ೩೪೬ ಗಜ ನೂಲನ್ನು ನೂತರು ಶ್ರೀ। ರಾಜಗೋಪಾಲ ಗಣಪತಿ ಶಾಸ್ತ್ರಿಯವರು ಚರಕದ ಮೇಲೆ ನೂಲು ತೆಗೆಯುವದರಲ್ಲಿ ಕೇವಲ ೧ ತಾಸಿಗೆ ೪೫ ನಂಬರದ ೧೬೦೦ ಗಜ ನೂಲನ್ನು ನೂತರು ಶ್ರೀ। ಕಾಂತಿಪರೇಖರವರು ತಾಸಿಗೆ ೨೬ ತೊಲೆ ಹತ್ತಿಯನ್ನು ಹಿಂಜಿ ಮೊದಲನೇ ಇನಾಮು ಪಡೆದರು. ಮುಂಬಯಿಯ [illegible] ಬುರವರು ವಿಧವಿಧದ ಚಿಕ್ಕ ಹಾಗು ಕಸೂತಿ ಕೆಲಸಗಳನ್ನು ತಮ್ಮ ಅಂಗಡಿಯಲ್ಲಿ ಸುಶೋಭಿತವಾಗಿ ಇಟ್ಟು ಖಾದಿಯ ವೈಭವವನ್ನು ವೈಭವಶಾಲಿಗಳಿಗೆ ಪ್ರದರ್ಶಿಸಿ ಚಿತ್ತಾಕರ್ಷಣ ಮಾಡುತ್ತಿದ್ದರು. [illegible] ಅಂಗಡಿಯಲ್ಲಿ ತರತರದ ಖಾದಿಯ ರತ್ನಗಂಬಳಿಗಳನ್ನೂ, ಮೇಜಿನ ಮೇಲೆ ಹಾಸುವ ಸೊಬಗಿನ ಅಲಂಕಾರಗಳನ್ನೂ ಪ್ರದರ್ಶಿಸಿ, ವಿಲಾಸಿಗಳಿಗೂ, ರಸಿಕರಿಗೂ ಖಾದಿಯ [illegible] ಮನೋಹರತೆಯನ್ನು ವ್ಯಕ್ತಪಡಿಸುತ್ತಿದ್ದರು ಒಬ್ಬ [illegible] ಖಾದಿಯಿಂದ ಚಿತ್ರಗಳಿಗೆ [illegible] ತಯಾರಿಸಿ ವಿಲಾಸಿಗಳ [illegible] ದಿಗ್ದರ್ಶನ ಮಾಡಿದ್ದರು. ಪ್ರದರ್ಶನದಲ್ಲಿ [illegible] ರಿಂದ ತಲೆಬ್ಯಾರಿಯ [illegible] ಸ್ತ್ರೀ-ಪುರುಷರು [illegible] ಸಿಗುವಂತಹ ಸಾಮುಗ್ರಿಗಳನ್ನು ಪಡೆದು [illegible] ಖಾದಿಗಳು ೩೦೦ ನಂಬರದ [illegible] ಪಡೆದು ತಮ್ಮ [illegible] ದೇಶದವರೂ, ಸಿಂಹಲ [illegible] ಗ [illegible] ಕೊಂಡರು. ಯುರೋಪಿಯರು [illegible] ನ್ನು ಕೊಳ್ಳುವ ನೋಟ ನೋಡಿ, ಖಾದಿಯ [illegible] ಆನಂದವಾಯಿತು. ಯುರೋಪಿಯನ್ [illegible] ನಮ್ಮ ದೇಶಬಾಂಧವರು ಈಗಲಾದರೂ [illegible] ತ್ಸಾಹಿಸಿದರೆ, ಆನಂದವೇ. ಪಂಡಿತ [illegible] ಮುಂತಾದವರು ಪ್ರದರ್ಶನವನ್ನು ನೋಡಿ ಬಹಳ ಸಂತೋಷಪಟ್ಟರು. ಇಂಥ ಪ್ರದರ್ಶನಗಳಿಂದ [illegible] ಖಾದಿಯ ಪ್ರಸಾರವನ್ನು [illegible] ಮಾಲವೀಯರವರು ಸಂತೋಷದಿಂದ [illegible] ಪ್ರದರ್ಶನವು ೯ ದಿನಗಳ ವರೆಗೆ ನಡೆದಿತ್ತು. [illegible] ಗಳಲ್ಲಿ ೩೪ ಸಾವಿರ ಜನರು ನೋಡಿದರು [illegible] ಸಾವಿರ ರೂಪಾಯಿಗಳ ಖಾದಿಯ ಮಾರಾಟವಾಯಿತು.

ಕೆಲವು ವಿಷಯಗಳು.

— ಒಂದಿ, ಜಮಖಂಡಿ ಸಂಸ್ಥಾನಗಳಲ್ಲಿ ಕೃಷ್ಣಾ ಆರೋಗ್ಯ [illegible] ಮುಂದಾದ ಕೋಳೀಗೋಸ್ಕರ ಸಂಸ್ಥೆಗಳಿಗೆ [illegible]; ಮೇಲಾಗಿ ಸಂಸ್ಥಾನಿಕರಿಗೆ ಕೂಲಿ. ಆದರೆ, ಕಳ [illegible] ಕ್ರೈಸ್ತ [illegible] ದೊಡ್ಡ ಅಧಿಕಾರಿಗಳಿಗೆ [illegible] ಭೋಜನ ಸಮಾರಂಭಗಳ ಮಾಡು ನೋಡಿದರೆ, ಬಿಸ್ಕಿಟ್ ಹೀಗೆ ಅನ್ಯಾಯ ಆದ [illegible] ಸಿಕರಿಗೆ [illegible] ದೊರಕಾಸ್ತದೆ? ಎಂದು "[illegible] ರಾಜಸ್ಥಾನ" ಪತ್ರಿಕೆಯು ಪ್ರಶ್ನೆ ಆದಕ್ಕೆ [illegible] - ಹೀಗೆ ಅನ್ಯಾಯವಾಗುತ್ತಿದ್ದದರಿಂದಲೇ [illegible] ಪ್ರಜೋಪಯೋಗಿ ವಿಷಯಗಳಿಗೆ ಹಣವಿಲ್ಲ.

— ಚೀನದೊಳಗಿನ [illegible] ಕ್ರಿಡೆ ಕದಲ್ಲಿ ಭಯಂಕರ [illegible] ಬಿದ್ದಿದೆ. ೪೦ ಲಕ್ಷ ಜನರು ಗೋಳಿಡುತ್ತಿದ್ದಾರೆ. ಕೆಲವರು ಹೊಟ್ಟೆಗೆ [illegible] ತಡೆಕೊಳ್ಳಲಾರದೆ, [illegible] ತೊಗಟೆ [illegible] ತಿಂದು ಆಯುಷ್ಯಹರಣ ಮಾಡುತ್ತಾರೆ. [illegible] ಜನಕ ಮಾನವನಿಗೆ ಯಾ [illegible] ಸ್ಥಿತಿ ಬಂದೀತೆಂದು ಯಾರು ಹೇಳಬಲ್ಲನು?

— [illegible] ಸಲ್ಲಿ ಮಹಾಯುದ್ಧವಾಗುವದೆಂ [illegible] ಫ್ರಾನ್ಸ ದೇಶದಲ್ಲಿ [illegible] ನಿಸಿದ ಅಧಿಕಾರಿಗಳ ಅಭಿಪ್ರಾಯ [illegible] ಈ ಕಾಲಕ್ಕೆ ಅಮೇರಿಕೆಯು [illegible], ಬ್ರಿಟಿಶ [illegible] ಯಿಂದ [illegible] ಕಾದಾಡಲಿಕ್ಕಿಲ್ಲವಾಗಿಯೂ [illegible] ಇದರಿಂದ ಮುಂದ [illegible] ಯುದ್ಧವಾಗದಂತೆ ಫ್ರಾನ್ಸ ದೇಶವು ಜಾಗ್ರತ ಕೊಳ್ಳಬೇಕಂತೆ! [illegible] ಶಾಂತತೆಯು [illegible] ದೇಶಕ್ಕೆ ಹೋದ [illegible] ರಾಷ್ಟ್ರಸಂಘದಿಂದ ೧೫ ವರ್ಷಗಳ ಜನಕ ಶಾಂತತೆ ದೊರೆ [illegible] ಫ್ರೆಂಚ ಕಾರಬಾರಿಗಳ ಅಭಿಮತ!

— ಇಂಗ್ಲೆಂಡದಲ್ಲಿಯ ಕೂಲಿಕಾರ ಪಕ್ಷವು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ದಯಪಾಲಿಸುವದೆಂದು ಅನೇಕ [illegible] ಬಾಯಿ ತೆರೆದು ಕೂತಿದ್ದರು. ಆದರೆ ನಮ್ಮ ದೇಶಕ್ಕೆ ಅವಮಾನಕಾರಕವಾದ [illegible] ಮಿಕದ ಬಗ್ಗೆ [illegible] ದೇಶದಲ್ಲೆಲ್ಲ [illegible] ಕಮಿಶನ್ನಿನ ವಿಷಯದ ಪಾರ್ಲಮೆಂಟಿನಲ್ಲಿ ಈ [illegible] ಕೂಲಿಕಾರ ಪಕ್ಷದವರು ವಿರೋಧಿಸಲಿಲ್ಲ ಆದ್ದರಿಂದ ಪ್ರತಿಯೊಬ್ಬ ಇಂಗ್ಲೀಷರು [illegible] ಪ್ರತಿಯೊಬ್ಬರೂ [illegible] ನಮ್ಮಲ್ಲಿಯ ವಿಶ್ವಾಸ [illegible] ನಮ್ಮ ಮೇಲೆ ಇಂಥ ಅಪಮಾನದ ಪ್ರಸಂಗಗಳನ್ನು [illegible] ಕೇವಲ ಮಿಸ್ ಮೇಯೋಳಂಥ [illegible] ಹೆಂಗಸು ಕೂಡ ಜಗತ್ತಿನಲ್ಲೆಲ್ಲ ಹಿಂದುಸ್ಥಾನದ ಬಗ್ಗೆ [illegible] ಅಪಖ್ಯಾತಿಯನ್ನು ಬೀರುತ್ತಿದ್ದರೂ ನಾವು [illegible] ಕೊಂಡು ಕೂತ್ರಬೇಕಾಗುತ್ತದೆ" ಎಂದು [illegible] ಪ್ರಲಾಪ

— [illegible] ಜಿಲ್ಲೆಯ ಪಾಲನಿ ಗ್ರಾಮದ ದೇವಾಲಯದಲ್ಲಿ ಶ್ರೀದೇವರಿಗೆ ನಿತ್ಯ ವಿನಿಯೋಗವಿಲ್ಲ. [illegible] ವಿನಿಯೋಗವನ್ನು ಸರಿಯಾಗಿ ನಡಿಸದ [illegible] ದೇವಾಲಯದ [illegible] ಅವನಿಗೆ [illegible] ಮಾಡಿದರಂತೆ. ಎಲ್ಲ [illegible] ಒಕ್ಕಟ್ಟಾಗಿ ದೇವರಿಗೆ ನಿತ್ಯಪೂಜೆಯನ್ನೂ ಮಾಡುವರಿಲ್ಲವಾಗಿ ಮದ್ರಾಸದ "ತಮಿಳನಾಡು" ಪತ್ರಿಕೆಯಲ್ಲಿ ಪ್ರಕಟವಾಗಿದೆ. ದೇವ [illegible] ಇನ್ನಾದರೂ ಬುದ್ಧಿ ಕಲಿಯುವನೆ ನು?

— ಶಿರಪುರದಲ್ಲಿ ಒಂದು ಅನರ್ಥವಾಯಿತು. ಹೆಂಡರು ಮಕ್ಕಳಿದ್ದ ಕೂಲಿಕಾರನೊಬ್ಬನು ಒಂದು ಕೊಲೆಯ ಪ್ರಕರಣದಲ್ಲಿ ಸಿಲುಕಿ ಗಲ್ಲಿಗೇರಿಸಲ್ಪಟ್ಟನು. ಆತನ ಮರಣ ಕಾಲಕ್ಕೆ ಹೆಂಡತಿಯು ತನ್ನ ಗತಿಯೇನೆಂದು ಅವನ ಬಳಿ ಕೇಳಿದಳು. [illegible] ನಿನ್ನ ಹಾಗು ಮಕ್ಕಳ ಜೋಪಾನ ಮಾಡುವನಾಗಿ ಆತನು ಹೆಂಡತಿಗೆ ಹೇಳಿ [illegible] ಹಿದನು. ಗಂಡನಿರುವಾಗಲೂ ಹೆಂಡರು-ಮಕ್ಕಳಿಗೆ ಹೊಟ್ಟೆ [illegible] ಅನ್ನ [illegible] ತ್ತಿರಲಿಲ್ಲ. ದಿನಕ್ಕೊಂದು ಊಟ [illegible]

ಗ್ಯವಾಗಿತ್ತು. ಇದನ್ನೆಲ್ಲ ನೋಡಿ, ಆ ಹೆಂಡತಿಯು ಬೇಸರಪಟ್ಟು ಗಂಡನ ಕಲಿಮಾಯು ತನ್ನ ಅವಸ್ಥೆಯನ್ನು ಕೇಳುವವರ್‍ಯಾರಿಲ್ಲವೆಂದು ಗ್ರಹಿಸಿ, ಚಿಕ್ಕ ಮಕ್ಕಳನ್ನು ಬಾವಿಯ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.



ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಶಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ

ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ವ್ಯವಸ್ಥಾ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು [illegible] ವರ್ಷದ ಮುದುಕರ ಕಾಮವಿಕಾರ [illegible] ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಲಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ [illegible] ಹೋಗಿ [illegible] ನಪ್ರೇಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ವಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ[illegible]ವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುತದೆ. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦—೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲು ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೧-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ.

ವೀರ್ಯವು ತಿಳಿ ನಾಗ ವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಸಿಕ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಸಾಫ ಆಗುತದೆ. ಧಾತು ಶುದ್ಧವಾಗಿ ಘಟ್ಟ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನವಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಪುಲಾಸಾ ಮಾಡಿರುತ್ತವೆ. ಓದಿಕೊಳ್ಳಿರಿ

ಮುಂಜಾನೆ ೨ ತೊಲಿಯು ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫॥ ರೂ. ೩ ಡಬ್ಬಿಗೆ ೧೪॥ ರೂ. ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. [illegible] ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

अंकूचें

द्राक्षासव-

एक रतलाम किंमत १ ।रुपये

रामबाण औषध

सर्दि घालविणारें
मूक वाढविणारें
शौच्यास साफ करणारें
झोंप आणणारें
शक्ति देणारें
तेजस्वीपणा आणणारें

पिण्यास रुचिकर

रुचाटलाग मागवा,

ऊफार्मास्युटिकलवर्क्स लिमिटेड

मुंबई नं. १४

ऐजट— मेसर्स पांडत आणी कंपनी.

तीर्थहळी

मिरिस एजट एस एल धाकप्पा आणि ब्रदर

ಸುಲಭ ಕ್ರಯು! ಸುಲಭ ಕ್ರಯು!!

ಡಾಕ್ಟರ ಜೀ. ಬೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದ ಲಟ್ಟ ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ- ಪಿನಶಿ, ಒಂಟತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಠರಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಬಟ್ಟಿನ. ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಸಭ್ಯರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

ಬುಡಿ ೭ ರಶ್ಯಿ ಕ ಚು, ರೂ ೧ ೪ ೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ ಪಿ. ೦-೮-೦ ರಯವಾಡಿ ನಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಗುರುಸಿನವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ, ಮದರಾಸ

ಹಿಂದುಸ್ಥಾನದಲ್ಲಿಯೇ ಅತ್ಯಂತ ಅಗ್ರವಾದ 'ನೆಶನಲ ಇನ್‌ಶ್ಯೂರನ್ಸ ಕಂಪೆನಿ, (ಲಿಮಿಟೆಡ್)

ಎಂಬ

ಜೀವ ವಿಮೆಯ ಮಂಡಲಿ

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದ

ಕಳೆದ ವರುಷ ಲೆಕ್ಕಾಚಾರದ ಮೇಲೆ 8 40,04- ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 1(ರೂಪಾಯಿಸಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 1) ರೂಪಾಯಿಸಂತೆಯೂ ಬೋನಸ ಕೊಟ್ಟಿರುವವು

ಹೊರಗಣ 1000 ರೂಪಾಯಿಗಳ ವಿಮೆ ವಷ್ಟು ಕಂತು ಕೊಡ ನಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಸಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,**

ಬಿ ಸಿ ಸಿರಾಳಕೊಪ್ಪ, *Branch Secretary,*

ಲೋಬಂದಿ ಬಿಲ್ಡಿಂಗ, Alice Building

ಹುಬ್ಬಳ್ಳಿ *Hornby Road,*

BOMBAY

8 U. Narayanacharya & CO

Chaukamba, BENARES CITY,

ನಮ್ಮಲ್ಲಿ ಎಲ್ಲಾ ತರಹ ಬೆಳ್ಳಿ ಹಿತ್ತಾಳೆ ಪಾತ್ರೆ ಜರಿ ಸೀರೆ, ಶಾಲು ತರವಾರಿ ರುದ್ರಾಕ್ಷಿ, ಶಾಲಗ್ರಾಮ ಲಿಂಗಗಳು ಮತ್ತು ಶ್ರೀಕಾಶಿ ಮೊದಲಾದ ವಸ್ತುಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾದೀತು

ವಿಳಾಸ - ಶಿರೋಮಣಿ ನಾರಾಯಣ ಶಾಚಾರ್ಯ

ವ ಕ್ರ ಕಂಠವಿ ಚೌಕ ಬಾ ಕಾಶೀಕ್ಷೇತ್ರ,

ಕಿರ್ಲೋಸ್ಕರ ಕಮಾಲ ಗಾಣ.



ಶೇಕಡಾ ೭೮ ರಿಂದ ೭೯ ರ ವರೆಗೆ ರಸ ಹೊರಡುವದು

ಗಂಟೆಯೊಂದಕ್ಕೆ ೧೧೦೦ ಪೌಂಡ ಕಬ್ಬನ್ನು ಹಿಂಡುವದು

ಬೆಲೆ ೨೯೦ ರೂ. ಕೂಡ್ಲಿ ಡಿಲಿವ್ಹರಿ

ಮೆ॥ ಎಲ ಎಸ್ ಎಲ್ ಧಾಕಪ್ಪಾ ಮತ್ತು ಬ್ರದರ್ಸ್, ಇವರಲ್ಲಿ ಸಿಗುವದು

ರಚನೆ— ಈ ಗಾಣದಲ್ಲಿಯ ಎರಕ ಹೊಯ್ದ ಭಾಗಗಳು ಅರ್ಧ ಉಕ್ಕಿನಿಂದ ತಯಾರಿಸಿದ ಧಾತುವಿನಿಂದ ತಯಾರಾಗಿರುತ್ತವೆ ಕಣೆಗಳ ಎತ್ತರ ೧೧ ಇಂಚು ಆಕ್ಸಲ್ ಪಿನಿಯನ್ ... ..., ರೋಲರ ಇವು ಬೇರೆ ಬೇರೆ ಇರುತ್ತವೆ ಬೇಅರಿಂಗ ಗನ ಮೆಟಲ್‌ದವು ಇರುತ್ತವೆ ಎಂಜಿನು ಸತತವಾಗಿ ನಿಲ್ಲುವದಕ್ಕೆ ಏರ್ಪಾಡು ಮಾಡಿರುತ್ತೇವೆ ಎಲ್ಲಾ ತರಹದಲ್ಲಿ ಸುಧಾರಣೆ ಮಾಡಿರುತ್ತದೆ

ವೈಶಿಷ್ಟ್ಯ ಕಣೆಗಳು ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಒಡನೆ ನಲ್ಲಿ ಸಿಕ್ಕು ಕಡಗೆ ಬರುವದರಲ್ಲಿ ಹಿಂದಿ ಹಿಪ್ಪೆಯಾಗಿ ಬರುವದು ಮಿಕ್ಕ ಗಾಣಗಳಂತೆ ಇಬ್ಬರು ಬೇಕಾಗಿದೆ ಒಬ್ಬನಿಂದಲೇ ಸಾಗುವದು ನಾಲ್ಕು ಎತ್ತುಗಳು ಬೇಕು

ಅಭಿಪ್ರಾಯ— ತಮ್ಮ ಗಾಣದಿಂದ ಸಿಪ್ಪೆಯಲ್ಲಿ ವ್ಯರ್ಥ ಹೋಗುವ ರಸ ದಿನಾ ದಿನಾಲು ೪॥ ಮಣ ಬೆಲ್ಲ ಅಂದರೆ ೧೦ ರೂ. ಲಾಭವಾಯಿತು ೨೯ ದಿವಸ ಗಾಣಾಡಿತು ನನಗೆ ಒಟ್ಟು ೨೯೦ ರೂ. ಲಾಭವಾಯಿತೆಂದು ತಿಳಿಸಲು ಆನಂದವಾಗುತ್ತದೆ ತಮ್ಮ ರಾಜನಗೌಡಾ ಪಾಟೀಲ, ಸವಲಗಿ ಜಿ. ಬೆಳಗಾಂವ "

ಕಿರ್ಲೋಸ್ಕರ ಬಂಧು ಲಿಮಿಟೆಡ್;} ಕಿರ್ಲೋಸ್ಕರವಾಡಿ ಜಿ॥ ಸಾತಾರಾ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ

ತಲೆನೋವು ಬೆನ್ನುನೋವು ಸಂಧಿವಾತ, ಚೇಳು, ಹಾವು ... ... ಮುಂತಾದ ಎಲ್ಲ ತರದ ನೋವಿಗೆ ಇದರಿಂದ ಗುಣವಾಗುವದು ... ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು ... ಯಾರೂ ತಿರಸ್ಕರಿಸಲಾಗದು ಚಿಕ್ಕ ನೋವಿನಿಂದಲೇ ... ದೊರೆಯುವದಿಲ್ಲ, ಅಮೃತಾಂಜನದ ಒಂದು ಸಣ್ಣ ಬಾಟ್ಲಿ ... ನೋವುಗಳನ್ನು ಕೂಡಲೇ ಪರಿಹರಿಸಬಹುದು, ಬೆಲೆ ರೂ ० १०-०

ಎಲ್ಲ ಕಡೆಯಲ್ಲಿಯೂ ಸಿಗುತ್ತದೆ ಅಥವಾ **ಅಮೃತಾಂಜನ ಡಿಪೊ,**

ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, JANUARY 23RD 1923.

ವರ್ಷ ೧೨

ಕಾನಡಾವೃತ್ತ.

ಸಂಚಿಕೆ ೧೩

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ದರಿಯಿಂದ ರೂ. 3-0-0.
ಟ ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

परकार्यहितकर्ता ख्यातिमाप्नोति लोके अनयधर्महितकर्ता लभ्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಪಾಯಿಂಟ್ ಉದ್ದ) ೮ ಸಾಲುಗಳವರೆಗೆ ರೂ 1-0-
೮ ನಂತ್ರ ಪ್ರತಿಸಾಲಿಗೆ 0-1-0.
ತಿಂಗಳ ಸಾಲು ಎಷ್ಟು ಹೊತ್ತಿರುವದೋ ಆ ಮಾನದಿಂದ ಅಪ್ಪುಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೭೩ ಮಾಹೆ ಜನವರಿ ಸನ್ ೧೯೨೩ನೇ ಇಸವಿ)

ನವ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ.



ಈ ಪುಸ್ತಕದಲ್ಲಿ ನವ ವತ ಶನ ಟಿಪ್ಯರ ಅಂಗಸೌಷ್ಟವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಒಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ಇನ್ನೂ ಶರಬಿಯಾತಂದವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿ ದಷ್ಟಪುಷ್ಟರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವು ತಿಳಿಯುತ್ತದೆ ಟಪಾಲು ಹಾಕಲು ಎರಡು ಸ್ಟ್ಯಾಂಪುಗಳನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ ಈ ಸದವಕಾಶವನ್ನು ಕಳೆದುಕೊಳ್ಳದೆ, ಕಾಲಾತೀತವಾಗದ ಇನ್ನೊಂದು ತಿಂಗಳೊಳಗೆ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಜಿ. ವ್ಹಿ. ಪೇಲಂಗಿ ಮೋಟಾರ ಸರ್ವ್ಹೀಸ

ಕುಮಟಾ — ಶಿರ್ಸಿ



ಶಿರ್ಸಿ — ಕುಮಟಾ

ಡೇಲಿ ಮೋಟಾರ ಸರ್ವ್ಹೀಸ ಪ್ರಾರಂಭವಾಗಿರುವದು

ಇದಲ್ಲದೆ, ಈ ಸರ್ವ್ಹೀಸು ಶಿರ್ಸಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವರೆಗೂ ನಡೆಯುತ್ತಿದೆ. ಸ್ಪೇಶಲ್ ಭಾಡಿಗೆಗೆ ಬೇಕಾದವರು ಒಂದು ದಿವಸ ಮುಂಚಿತ ತಿಳಿಸಬೇಕು.

ಟಿಕೇಟಿನ ದರ:— ಸೋಯಿ! ಅತಿ ಸೋಯಿ! ಎಲ್ಲರಿಗೆ ತಿಳಿಯಲು ಸೋಯಿ!!

ಬೇಕಾದಲ್ಲಿಯು ಟಿಕೇಟುಗಳೂ, ವಿಶೇಷ ಮಾಹಿತಿಯೂ ಕುಮಟಾ ಏಜಂಟ ಜಾನಪ್ಪಾ ರಾಮನಾಯ್ಕ ದುದಗಾಂವಕರ ಇವರ ಕಡೆಗೆ ಸಿಗುವವು

ಇತ್ತ ಲಕ್ಷ ಕೊಡಿರಿ.

ಫಕ್ತ ಮಳೆಗಾಲದ ಸಲುವಾಗಿಯೇ ಪ್ರಯಾಣಿಕರ ಬಗ್ಗೆ ಹೊಸ ಸೋಯಿ!

ದಿ ಬೆಳಗಾಂವ ಮೋಟರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ, ಬೆಳಗಾಂವ

Tel.-
"TRANSPORT"
ALNAWAR.

ಅಳ್ನಾವರ — ಕಾರವಾರ

ಕಾರವಾರ — ಅಳ್ನಾವರ

ತಂತಿ ಪತ್ರ —
"ಟ್ರಾನ್ಸಪೋರ್ಟ"
ಅಳ್ನಾವರ.

ನಿಯಮಿತ ಡೇಲಿ ಮೋಟರ ಸರ್ವ್ಹೀಸ್ ಚಾಲು ಅದೆ.

ಇದೇ ೧೯೨೭ನೇ ಜೂನ ೧೫ ನೇ ತಾರೀಖಿನಿಂದಾ ಪ್ರಾರಂಭವಾಗುವದು.

ಬೆಳಗಾಂವದಿಂದ ಕಾರವಾರಕ್ಕೆ ಬರುವ ಹಾದಿಯಲ್ಲಿ ಮಲಪ್ರಭಾ ಹೊಳೆ ಇದ್ದು ಮಳೆಗಾಲದಲ್ಲಿ ನೀರು ತುಂಬಿ ದಾರಿಯು ಕಟ್ಟಾಗುವದು. ಪ್ರಯುಕ್ತ ಪ್ರಯಾಣಿಕರಿಗೆ ಗೈರಸೋಯಿ ಆಗಬಾರದೆಂಬದರ ಬಗ್ಗೆಯೇ "ಅಳ್ನಾವರಕ್ಕೆ" ಬರುವ "ಮುಂಬಯಿ ಮೇಲ್" ನೋಡಿಕೊಂಡು ಹಳಿಯಾಳ ಯಲ್ಲಾಪೂರ ಅಂಕೋಲಾ ಮಾರ್ಗವಾಗಿ "ಅದೇ ದಿವಸ" ಕಾರವಾರಕ್ಕೆ ಮುಟ್ಟುವಂತೆಯೂ ಕಾರವಾರದಿಂದ ಬೆಳಿಗ್ಗೆ ಹೊರಟು "ಮುಂಬಯಿ ಮತ್ತು ಬೆಂಗಳೂರ" ಕಡಿಗೆ ಹೋಗುವ ಮೇಲ್ ಗಾಡಿಗಳಿಗೆ" ಅಳ್ನಾವರಕ್ಕೆ ಮುಟ್ಟುವಂತೆ ಯೋಗ್ಯ ವ್ಯವಸ್ಥೆ ಇಟ್ಟಿರುತ್ತದೆ. "ಅಳ್ನಾವರದಲ್ಲಿ" ಪ್ರಯಾಣಿಕರಿಗೆ ಉಳಕೊಳ್ಳಲಿಕ್ಕೂ ಉಪಹಾರ ಮತ್ತು ಊಟದ ಬಗ್ಗೆ ವಗೈರೆ ಯೋಗ್ಯ ವ್ಯವಸ್ಥೆಯೂ ಇರುವದು.

ಪುನಃಶ್ಚ

ಮಳೆಗಾಲದ ನಂತರ:-

ಸೂಚನೆ:- ೧೯೨೭ನೇ ಸಪ್ಟಂಬರ ೧ನೇಯಿಂದಾ ಬೆಳಗಾಂವದಿಂದಾ ಕಾರವಾರಕ್ಕೆ "ಡೇಲಿ ಸರ್ವ್ಹೀಸವು" ಚಾಲು ಇರುವದು. ಟಿಕೇಟಿನ ದರಗಳು ಅಲ್ಲಲ್ಲಿಯ ಏಜಂಟರ ಆಫೀಸಿನಲ್ಲಿ ಇಲ್ಲವೆ ಕೆಳಗಿನ ವಿಳಾಸದಲ್ಲಿ ಬರೆದು ತಿಳುಕೊಳ್ಳಿರಿ.

ಹೆಚ್ಚಿನ ಸೂಚನೆ:- "ಸ್ಪೇಶಲ್ ಮೋಟಾರಗಳು, ಅಗತ್ಯವು ತಿಳಿಸಿದ್ದಲ್ಲಿ ಯೋಗ್ಯ ದರದಿಂದ "ರಿಝರ್ವ" ಮಾಡಲ್ಪಡುವವು.

Proprietor:- THE BELGAUM MOTOR WORKS & TRANSPORT CO.

ಹೊಸ ಪಂಚಾಂಗ.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ
ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ.

ಪ್ರತಿ ೧ ಕ್ಕೆ ರೂ ೦—೩—೦
ಪ್ರತಿ ೨೫ ಕ್ಕೆ ರೂ ೩—೮—೦
ಪ್ರತಿ ೫೦ ಕ್ಕೆ ರೂ ೬—೮—೦
ಪ್ರತಿ ೧೦೦ ಕ್ಕೆ ರೂ ೧೨ ೦—೦

ಪತ್ತೆ – ಮೆನೇಜರ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟ

The Brittannia Life Assuran Company Ltd
Head Office [illegible]

ಈ ಕಂಪನಿಯಲ್ಲಿ ನಮ್ಮ ಭಾರತೀಯರಿಗೆ ಬೇಕಾದ ಸವಲತ್ತು ಸುಲಭ [illegible] ಬಿಕ್ಕಟ್ಟಿನಿಂದ ಆಡಳಿತ ನೋಡಕಾರಿ–ಕೌಶಲ್ಯವು ಆಡಳಿತದಾರರು [illegible] ಗಿದ್ದು ಕ್ಷಣದಲ್ಲಿ [illegible] ಇವರ ಕಂಪನಿಗಳು ಬಹಳೇ ಕಡಿಮೆಯವಾಗಿರುವವು [illegible] ಕಂಪನಿಯಲ್ಲಿ [illegible] ಕೇಳತಕ್ಕದ್ದು [illegible]

ಈ ಸುಸಂಧಿಯನ್ನು [illegible] ಬೇಕಾದ ಮಹನೀಯರು ನಮ್ಮ ಏಜಂಟರಾಗಲು ಇದೇ ತಕ್ಕ ಸಮಯವು [illegible] ಅನುಭವ, ಮ [illegible] ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ದಿ ಬ್ರಿಟಾನಿಯಾ ಲೈಫ ಇನ್ಸುರೆನ್ಸು ಕಂಪನಿ ಲಿಮಿಟೆಡ್
ಹೆಡ್ ಆಫೀಸ [illegible] ಬಿಲ್ಡಿಂಗ ಫೋರ್ಟ,
ಮುಂಬಯಿ

ಗೋಪಾಳ ಸಖಾರಾಮ
ಮತ್ತು ಕಂಪನಿ.

ಕಮಿಶನ್ ಏಜಂಟ್ಸ,
ಕಾಳಬಾದೇವಿ ರೋಡ,
ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ ಸ್ಥಿತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಹೆಚ್ಚಿನ ಜಾಗರೂಕ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ. ಖರೇದಿ ಚೌಕಶಿಯಿಂದಾಗುವದ, ಪೇಟೆಯಲ್ಲಿರುವ ದಾರಣೆಯೇ ಆಕರಿಸಲ್ಪಡುವದ. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ,

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನವ ರೀತಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವ್‌ಮೆಂಟ ಮಾಡಿರುವದು. ಗಾಳಿ ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್‌ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ಸಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ – ಫೌಂಟನ ಪೇನ ೧ [illegible] ೧ ಪಚ್ಚದ ಗುಂಡಿಗಳ ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, [illegible] ೧ ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್ [illegible] ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸಟ್ ೧, ಕೈವಸ್ತ್ರ ೧ ಈ ೧೫ ಬಹುಮಾನಗಳು [illegible] ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ ಒರ್ರೇ ರೂ ೪ ೮-೦

ವಿಳಾಸ — **ಇಂಗ್ಲೀಷ ಎಂಪೋರಿಯಂ,**
ಪೋಸ್ಟ ಬಾಕ್ಸ ನಂ ೧೦೫, **ಮದರಾಸು.**

ಟೇಬಲ್ ಟೆನ್ನಿಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೆನವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನ ಧನಿಬ್ಬು ಹಾಕಿದೆ. ಇದರಲ್ಲಿ ಬರೆಯುವ [illegible] ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೆನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟ್ಯಾಂಸೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟ್ಯಾಂಸೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.
ವಿಳಾಸ — ಸೀಟಿರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು

ಕಲ್ಪತರು ಮಿಶ್ರಣ
ಮಲೇರಿಯಾ ಸ್ಪೆಸಿಫಿಕ್

ಎಂದರೆ, **ಚಳಿ ಜ್ವರದ ಮೇಲೆ ದಿವ್ಯೌಷಧ.**

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಹೇಳಬಹುದು:-

ವಿಷ ಕಲ್ಪತರುನಾಮಾ ರಸಃ ಪರಮ ದುರ್ಲಭಃ | ಅಸಾಧ್ಯಂ ಚಿರಕಾಲೋತ್ಥಂ ಜೀರ್ಣಂ
ಚ ವಿಷಮ ಜ್ವರಮ್ | ಹಂತಿ ಜ್ವರಾತಿಸಾರೌ ಚ ಗ್ರಹಣೀಂ ಪಾಂಡು ಕಾಮಲಾಮ್ ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ. ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು. ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗೆ ರೂ ೧-೬-೦
ನಮ್ಮ ಪತ್ತೆ:- **ವೈದ್ಯ ಬಿ. ಆರ್. ಹರಿದಾಸ,**
ಶ್ರೀ ಸರ್ವಾರ್ಥ ಫಾರ್ಮಸಿ, ಗದ್ದೆಕೇರಿ, ಮಂಗಳೂರು

ವಿವಿಧ ಸಂಗ್ರಹ.

ದೀನರ್ಯಾರು?

ದೀನರಕ್ಷಕನಾದ ಜಗತ್ಪಾಲಕನ ಅನುಗ್ರಹಕ್ಕೆ ಪಾತ್ರರಾಗಬೇಕಾದರೆ, ಮಾನವರು ದೀನರಾಗಬೇಕು, ಅಂದರೆ, ಮಾನವರ ವೃತ್ತಿಯು ದೀನವಾಗಿರಬೇಕು. ಶ್ರೀಮಂತರಿದ್ದರೂ, ಅವರು ಬಡವರಂತೆ ವರ್ತಿಸಬೇಕು. ಶ್ರೀಮಂತನು ಬಡವನಾಗಿ ವರ್ತಿಸುವ ಬಗೆಯೊಂದನ್ನು ಮಹಾತ್ಮರು ಉದಾಹರಿಸಿದ್ದಾರೆ. ಈಗ ಮಹಾತ್ಮರು ಸಾಬರಮತಿಯ ಸತ್ಯಾಗ್ರಹಾಶ್ರಮದಲ್ಲಿ ವಿಶ್ರಮಿಸುತ್ತಿದ್ದಾರೆ. ಆ ಆಶ್ರಮದಲ್ಲಿ ಚಳಿಗಾಲ ತೀರಿದ ಕೂಡಲೆ ಮಲೇರಿಯಾ ಯಾನೆ ಚಳಿಜ್ವರಕ್ಕೆ ಪ್ರಾರಂಭವಾಗುತ್ತದೆ. ಈ ಜ್ವರ ಬಾಧೆಯನ್ನು ಪರಿಹರಿಸಲು ಅನೇಕ ಡಾಕ್ಟರರ ಆಲೋಚನೆ ಪಡೆಕೊಳ್ಳಲಾಯಿತು. ಈ ಜ್ವರವು ನುಸಿಗಳ ಕಡಿತದಿಂದ ಉಂಟಾಗುತ್ತಿದ್ದುದರಿಂದ ರಾತ್ರಿ ಮಲಗಬೇಕಾದರೆ, ನುಸಿಗಳಿಗೆ ಇಂಬುಗೊಡದಂತೆ ಬಲೆಯನ್ನು ಹಾಕಿಕೊಂಡು, ಹಿಳಗೆ ಮಲಗಬೇಕೆಂದು ಡಾಕ್ಟರರ ಅಭಿಪ್ರಾಯ. ಇಂಥ ಬಲೆಯನ್ನು ಪೂರೈಸಿಕೊಳ್ಳುವದು ಎಲ್ಲರಿಗೂ ಅಸಾಧ್ಯ ಮಾತು. ತೀರ ಬಡವರೂ ಕೂಡ ಕೈಕೊಳ್ಳಬಹುದಾದ ಉಪಾಯವನ್ನು ಸೂಚಿಸಲು ಡಾಕ್ಟರರಿಗೆ ಕೇಳಿಕೊಳ್ಳಲಾಯಿತು. ಆಗ ಅವರು ಹಿಂದು ಉಪಾಯವಿರುವದೆಂದು ಹೇಳಿದರು. ಮೈಯನ್ನು ಭದ್ರವಾಗಿ ಹೊದ್ದುಕೊಳ್ಳಬೇಕು; ಮೋರೆಗೆ ಸೀಮೆಎಣ್ಣೆಯನ್ನು ಉದ್ದುಕೊಳ್ಳಬೇಕು. ಮಹಾತ್ಮರು ಮಸಿ ಬಲೆಯನ್ನು ಉಪಯೋಗಿಸುತ್ತಿದ್ದರು; ಈ ಉಪಾಯ ತಿಳಿದ ಕೂಡಲೆ, ಮಹಾತ್ಮರ ಅದನ್ನು ತೆಗೆಯಹೇಳಿ, ತೀರ ನಿರಾಧಾರಿಯಂತೆ ಸೀಮೆ ಎಣ್ಣೆಯನ್ನು ಮೋರೆಗೆ ಹಚ್ಚಿಕೊಂಡು ಹೊದ್ದುಕೊಂಡು ಮಲಗುತ್ತಾರೆ. ಇದು ದೀನರಕ್ಷಕನ ಅನುಗ್ರಹ ಸಂಪಾದಿಸುವ ಬಗೆ. ಶ್ರೀಮಂತರು, ಎಲ್ಲ ರೀತಿಯಿಂದಲೂ ಅನುಕೂಲವಿದ್ದವರು ಆ ಅನುಕೂಲ್ಯಗಳನ್ನು ಧಿಕ್ಕರಿಸಿ, ಅನಾಥರ ಸ್ಥಿತಿಯನ್ನು ಕಲ್ಪಿಸಿಕೊಂಡು ಅದಕ್ಕೆ ತಕ್ಕದಾಗಿ ನಡಕೊಂಡರೇನೇ ಅವರು ದೀನರೆನಿಸಿಕೊಳ್ಳುತ್ತಾರೆ, ದೀನರಕ್ಷಕನ ಸಂರಕ್ಷಣೆಯನ್ನು ಪಡೆಕೊಳ್ಳಲು ಅರ್ಹರಾಗುತ್ತಾರೆ.

* * *

ಸ್ಯಾಮನ್ ಸಾಹೇಬರ ವಕೀಲಿಯ ಉತ್ಪನ್ನ ವರ್ಷಾಸನ ಅರ್ಧ ಲಕ್ಷ ಹಣವು!!

ಹಿಂದಿನ ಸಾಲಿನಲ್ಲಿ ಮೊಂಟೆಗ್ಯೂ ಸ್ವರಾಜ್ಯದ ತಿದ್ದುಪಾಟಗಳನ್ನು ಸೂಚಿಸಲು ಹಿಂದುಸ್ಥಾನಕ್ಕೆ ಬರಲಿಕ್ಕಿದ್ದ ಸೈಮನ್ ಕಮೀಟಿಯ ಅಧ್ಯಕ್ಷರಾದ ಸರ್ ಜೊನ್ ಸ್ಯಾಮನ್‌ರವರು ದೊಡ್ಡ ಬೆರಿಸ್ಟರರು; ಅವರು ತಮ್ಮ ವಕೀಲಿಯನ್ನು ತ್ಯಜಿಸಿದ್ದಾರೆ. ಇನ್ನು ಆ ಉದ್ಯೋಗವನ್ನು ಅವರು ಕೈಕೊಳ್ಳಲಿಕ್ಕಿಲ್ಲ. ಸ್ಯಾಮನ್ ಕಮಿಟಿಯ ಕೆಲಸ ಮುಗಿದ ಬಳಿಕ ಸಹ ವಕೀಲಿಯನ್ನು ನಡಿಸುವದು ಅಶಕ್ಯವೆಂದು ಅವರು ಗ್ರಹಿಸಿ, ವಕೀಲಿಗೆ ರಾಜಿನಾಮೆ ಕೊಟ್ಟಿದ್ದಾರೆ. ಸರ್ ಜೊನ್ ಸ್ಯಾಮನ್‌ರವರು ಈಗಿನ ಬೆರಿಸ್ಟರರಲ್ಲಿ ಬಹಳ ಶ್ರೇಷ್ಠರೆಂದು ಹೇಳಲಿಕ್ಕಡ್ಡಿಯಿಲ್ಲ. ವರ್ಷಾಸನ ಅರ್ಧ ಲಕ್ಷ ಹಣಗಳನ್ನು ಅವರು ಸಂಪಾದಿಸುತ್ತಿದ್ದರು. ದೊಡ್ಡ ದೊಡ್ಡ ಮೊಕದ್ದಮೆಗಳಲ್ಲಿ ಅವರು ಬೆರಿಸ್ಟರಿರುತ್ತಿದ್ದರು. ಸ್ಯಾಮನ್ ಸಾಹೇಬರೊಡನೆ ಹಿಂದುಸ್ಥಾನಕ್ಕೆ ಅವರ ಹೆಂಡತಿ ಬರಲಿಕ್ಕಿಲ್ಲವಂತೆ. ಬಹಿಷ್ಕಾರಕ್ಕೆ ಹೆದರಿಯೋ ಏನೋ! ಕೆಲ ತಿಂಗಳಾದ ಬಳಿಕ, ಅವರು ಹಿಂದುಸ್ಥಾನಕ್ಕೆ ಬಂದು, ಗಂಡನೊಡನೆ ಅಡ್ಡಾಡುವರು. ಇಂಗ್ಲೀಷ್ ದೊರೆಗಳ ಕರುಣೆಯು, ಸ್ಯಾಮನ್ ಸಾಹೇಬರು ಸರ್ವಾಧಿಪತಿಗಳಾಗುವರೆಂದು ಗಾಳಿ ಸುದ್ದಿ. ಇದೆಲ್ಲ ವಿಚಾರದಿಂದಲೋ ಏನೋ, ಸ್ಯಾಮನ್ ಸಾಹೇಬರು ವಕೀಲಿಯನ್ನು ಸಂಪೂರ್ಣವಾಗಿ ತ್ಯಜಿಸಿದ್ದಾರೆ.

* * *

ಪೈಶಾಚ ವಿವಾಹ!

ಉದಯಪುರದ ಯುವರಾಜರಿಗೆ ಎರಡನೇ ಮದುವೆಯು ಕಾಂಕ್ಷೆಯಾಗಿದೆ. ಜೋಧಪುರ ಸಂಸ್ಥಾನದ ಖುದಾಲಾ ಜಾಹಗೀರದಾರರ ಮಗಳು ಮದುಮಗಳಿಯು! ಮದುಮಗನ ಪ್ರಾಯ ೩೦ ವರುಷ; ಮದು

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅವುಗಳ ಕರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರೂ.		೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—:o:—

½ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೩—೦

ಓಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ!"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋದಿಲ್ ಬಹಾರದಿಂದ ತಾಜ ತಾಜಾ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.ದಿಲ್ಲ

THE ANGLO INDIAN DRUG & CHEMICAL CO., LTD.

POST BOX, 2082 **BOMBAY.**

ಮಗಳ ವಯಸ್ಸು ೧೭ ವರುಷ; ಮದುಮಗನಿಗೆ ಹೆಂಡತಿಯಿದ್ದಾಳೆ; ಧನವಾರ್ಜಿತದ ಜೇನ! ಸವಿದಾಡದೇ ಕಾದರೆ, ಬೇರೆಯವರು ಕೈಹಿಡಿಯಬೇಕು. ಈ ಸಂಗತಿ ತಿಳಿದು, ಮದುವಳತಿಯು ಉಪೋಷಣ ಮಾಡುತ್ತಿದ್ದಾಳೆ. ಯುವರಾಜರಿಗೆ ಮದುವೆಯಾಗಲು ಎಷ್ಟಕ್ಕೂ ಮದುವಳತಿಯ ಒಪ್ಪಿಗೆ ಇಲ್ಲ. ಉದಯಪುರ ಸಂಸ್ಥಾನದ ಮಹಾರಾಜರಾದ ಮಹಾರಾಣಾರವರೂ ಇದಕ್ಕೊಪ್ಪುವದಿಲ್ಲ. ಜೋಧಪುರದ ಮಹಾರಾಜರಿಗೂ ಈ ವಿವಾಹವು ಸೇರುವದಿಲ್ಲ. ಇತ್ತ ಮದುವೆಯ ತಯಾರಿ ನಡೆದಿದೆ. ಯುವರಾಜರು ೩ ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಿ, ಮದುವೆಯ ಎಲ್ಲ ತಯಾರಿ ನಡಿಸಿದ್ದಾರೆ. ಮದ್ದು ಗುಂಡುಗಳು ಖುದಾಲಿಗೆ ರವಾನೆಯಾದವು. ಎರಡು ಉಗಿಬಂಡಿ ತುಂಬ ೨೦೦ ಮಂದಿಗಳ ಮದುಮಗನ ದಿಬ್ಬಣವು ೭ ತಾ॥ಗೆ ಹೋಯಿತು. ಅನೇಕ ನರ್ತಕಿಯರೂ ಹೋಗಿದ್ದಾರೆ. ಮಂಗಳವಾರಕ್ಕೆ ಮದುಮಗನು ಉಗಿಬಂಡಿಯ ಮೇಲೆ ಆರೂಢನಾಗಿ ಠಾಣು ಮಾಡಿದನು. ಇತ್ತ ಅಪಶಕುನಗಳಾಗುತ್ತವೆ. ಮದ್ದು ಗುಂಡು ತುಂಬಿದ ಹಿಂದು ವ್ಯಾಗನು ಚಿತ್ತೂರಗಡದಲ್ಲಿ ಸ್ಫೋಟವಾಗಿ ಇಬ್ಬರು ಮಡಿದರು, ಮೋಟಾರ ಬಂಡಿಯು ಒಂದು ನದಿಯಲ್ಲಿ ಬಿದ್ದು ಇನ್ನಿಬ್ಬರು ತೀರಿಕೊಂಡರು. ಮದುವಳತಿಯ ಹಿತಚಿಂತಕರಿಗೂ ಈ ಮದುವೆಯು ಒಪ್ಪಿಗೆಯಿಲ್ಲ. ಈ ಅಪಶಕುನಗಳಿಂದ ಭಗವಂತನು ಈ ಮದುವೆ ಆಗಬಾರದೆಂದು ಮುಂಜಾಗ್ರತೆಯನ್ನೀಯುತ್ತಾನೆಂದೂ ಇವರ ಹೇಳಿಕೆ. ಇಷ್ಟಾದರೂ, ಯುವರಾಜರು ಮದುವೆಯಾಗೇ ತೀರುವರು. ಮದುವಳತಿಯ ತಂದೆಯಾದ ಜಾಹಗೀರದಾರರಿಗೂ ಸದ್ಬುದ್ಧಿ ಬರದು. ಇದು ಪೈಶಾಚ ವಿವಾಹವಲ್ಲವೇ?

***

ದೇವಾವತಾರವೇ ?

ಕಲಕತ್ತೆಯ "ಅಮೃತಬಝಾರ" ಪತ್ರಿಕೆಯಲ್ಲಿ ಸೋನಾಮುಖಿ ಗ್ರಾಮದಿಂದ ಡಾ॥ ಬಿ ಬಿ ಘೋಷ ಎಂ. ಬಿ. ರವರು ಬರೆಯುವದೇನಂದರೆ — ಪುರುಲಿಯಾ ಗ್ರಾಮದಲ್ಲಿ ಬಾಬು ಲಂಬೋದರದೇ ಎಂಬೊಬ್ಬ ವಕೀಲರಿದ್ದಾರೆ. ಗಿರಿಬಾಲದಾಸಿ ಎಂಬವಳು ಅವರ ಸಹೋದರಿ. ಇವಳು ವಿಧವೆಯಾಗಿ ತವರಮನೆಯಲ್ಲಿ ಇದ್ದಾಳೆ. ಅವಳು ಅನ್ನವನ್ನು ಕೊಳ್ಳುವದಿಲ್ಲ; ನೀರನ್ನು ಕೊಳ್ಳುವದಿಲ್ಲ. ಮನೆಯ ಕೆಲಸಗಳನ್ನೆಲ್ಲ ನಿತ್ಯದಂತೆ ನಡಿಸುತ್ತಾಳೆ. ಆರೋಗ್ಯವು ಕೆಟ್ಟದ್ದೇನು ತೋರುವದಿಲ್ಲ; ಶಕ್ತಿಯೂ ಕುಂದಿಲ್ಲ. ಹೀಗೆ ಅವಳು ಅನ್ನ ನೀರು ಕೊಳ್ಳದೆ ೪೦ ವರ್ಷಗಳಾದವು! ಗ್ರಾಮದೊಳಗಿನ ಸಭ್ಯಗೃಹಸ್ಥರು ಗಿರಿಬಾಲದಾಸಿಯನ್ನು ನೋಡಿ, ಆಶ್ಚರ್ಯಪಟ್ಟಿದ್ದಾರೆ! ಮಾನವ ಪ್ರಾಣಿಗೆ ೪೦ ವರ್ಷಗಳ ತನಕ ಯಾವದೇ ಪ್ರಕಾರದ ಆಹಾರಕೊಳ್ಳದೆ, ಹ್ಯಾಗೆ ಉಳಕೊಳ್ಳಬರುತ್ತದೆಂದು ವೈದ್ಯರ್ಯಾರಾದರೂ ಹೇಳಬಲ್ಲರೇನು ?

***

ಭಯಂಕರ ಪ್ರಕಾರ.

ಸದ್ಯಕ್ಕೆ ಮುಂಬಯಿ ಹೈಕೋರ್ಟಿನಲ್ಲಿ ನ್ಯಾಯಮೂರ್ತಿ ಫೇಸೆಟ್-ಮಿರ್ಝಾಕರರು ಹಿಂದು ಫೌಜದಾರಿ ಮೊಕದ್ದಮೆಯನ್ನು ಇತ್ಯರ್ಥಪಡಿಸಿದರು. ಸಾತಾರಾ ಜಿಲ್ಲೆಯ ಇಸ್ಲಾಮಪುರದಲ್ಲಿ ಸೇನರ ಭೌರಾಸಿವರವ ಪಟಕಿ ಎಂಬೊಬ್ಬ ಮಾಮಲೇದಾರರಿದ್ದರು. ಇವರಿಗೆ ೧ ನೇ ವರ್ಗದ ಮೆಜಿಸ್ಟ್ರೇಟ ಅಧಿಕಾರವಿತ್ತು. ಇವರ ಕೋರ್ಟಿನಲ್ಲಿ ನಾಲ್ವರ ಮೇಲೆ ಕೊಲೆ ಮಾಡಿದ ಆರೋಪ ಬಂದು ತನಿಖಿ ನಡೆಯಿತು. ಭಾನದೇಖೂಂ ಎಂಬೊಬ್ಬ ಆರೋಪಿಗಳ ನೆಳೆಯರು, ಅವರು ಅಲ್ಲಿಯ ತಾಲೂಕ ಲೋಕಲ್ ಬೋರ್ಡಿನ ಅಧ್ಯಕ್ಷರಾದ ರಾ॥ ಜಾಡೀಲಕರರವರ ಮಾರಿಫತು ಮೆಜಿಸ್ಟ್ರೇಟರ ಬಳಿ ಮಾತು-ಕಥೆ ನಡಿಸಿ ಮೆಜಿಸ್ಟ್ರೇಟರಿಗೆ ೩೦೦ ರೂಪಾಯಿ ಲಂಚ ಕೊಟ್ಟು ಮೂವರಿಗೆ ನಿರ್ದೋಷರಾಗಿ ಬಿಡಿಸಿಕೊಟ್ಟರು. ನಾಲ್ಕನೇಯವನ ಮೇಲಿನ ಕೊಲೆಯ ಆರೋಪವು ಘಾಯದ ಆರೋಪವಾಗಿ ಪರಿಣಮಿಸಿತು. ಅದಕ್ಕೂ ಮೆಜಿಸ್ಟ್ರೇಟರು ಶಾಸನ ಮಾಡದೆ, ಜಾಮೀನು ಶಿಕ್ಷೆಯ ಮೇಲೆ ಬಿಟ್ಟುಕೊಟ್ಟರು. ಇದರ ಬಗ್ಗೆ ಮೆಜಿಸ್ಟ್ರೇಟರ ಮೇಲೆ ಖಟ್ಲೆಯಾಗಿ, ೨ ವರುಷಗಳ ಸಶ್ರಮ ಶಿಕ್ಷೆ, ೧೦೦೦ ರೂಪಾಯಿ ದಂಡ ವಿಧಿಸಲ್ಪಟ್ಟಿತು. ಸೆಶನ್ಸ ಜಡ್ಜರು ಅಪೀಲನ್ನು ತಿರಸ್ಕರಿಸಿದರು, ನ್ಯಾಯಮೂರ್ತಿಗಳೂ ತಿರಸ್ಕರಿಸಿದರು. ತಾಲೂಕ ಲೋಕಲ್ ಬೋರ್ಡಿನ ಅಧ್ಯಕ್ಷರೂ ಇಂಥ ಪ್ರಕಾರಗಳಲ್ಲಿ ಪ್ರವೇಶಗೊಳ್ಳುವಷ್ಟು ನೀತಿಭ್ರಷ್ಟರಾದದ್ದನ್ನು ನೋಡಿ, ಮನಸ್ಸು ಬೇಸರಗೊಳ್ಳುತ್ತದ

***

ಭಯಂಕರ ಆಶ್ಚರ್ಯದ ಸಂಗತಿ !

ನಮ್ಮ ಬಾದಶಹರು ಯಾವಾಗಲೂ ಪ್ರಜಾಹಿತಕಾರಿಗಳು, ನಮ್ಮ ಭರತ ಭೂಮಿಯ ಕಲ್ಯಾಣವನ್ನೇ ಅವರು ಮನಮುಟ್ಟಿ ಬಯಸುತ್ತಾರೆ. ಭರತಪುತ್ರರು ಪ್ರಗತಿ ಹೊಂದಿ ಬ್ರಿಟಿಶ ಪ್ರಜೆಗಳೊಡನೆ ಸಮಾನಸ್ಕಂದರಾಗಿ ನಡೆಯುವಂತೆ ಏರ್ಪಾಟ ಮಾಡಲು ಬಾದಶಹರು ಇಚ್ಛಿಸುತ್ತಾರೆ, ಇತ್ಯಾದಿ ನಂಬಿಗೆಯನ್ನು ಹಿಂದೀ ಪ್ರಜೆಗಳು ಈಗಿನ ತನಕ ಶ್ರದ್ಧೆಯಿಂದ ನಂಬಿಕೊಂಡು ಬಂದಿದ್ದಾರೆ! ಸಾಮ್ರಾಜ್ಯದ ಪ್ರಧಾನರು ಬಾದಶಹರ ಸದಿಚ್ಛೆಯನ್ನು ಅನುಷ್ಠಾನದಲ್ಲಿ ತರಗೊಡದದಿಲ್ಲವಾಗಿಯೂ ಹಿಂದು ಕಲ್ಪನೆ ಇತ್ತು. ನಾಗಪುರದ 'ಹಿತವಾದ' ಪತ್ರಿಕೆಯಲ್ಲಿ ಪ್ರಕಟವಾದ ಈಗಿನ ಬಾದಶಹರಾದ ಪಂಚಮ ಜಾರ್ಜರ ತಂದೆಯವರಾದ ಎಡ್ವರ್ಡ ಬಾದಶಹರ ಕೆಲವು ಪತ್ರಗಳು ಪ್ರಕಟ ಹೊಂದಿವೆ. ಅವುಗಳನ್ನು ಓದಿ ಭರತ ಪುತ್ರರಲ್ಲಿ ಗಡಿಬಿಡಿಯುಂಟಾಗಿದೆ. ಆ ಕಾಲದಲ್ಲಿ ವಂಗಭಂಗದ ಕಲ್ಲೋಲವೆದ್ದಿತ್ತು. ಹಸಾದರೆಂದು ತುಣುಕನ್ನು ಭರತ ಪುತ್ರರ ಕಡೆ ಒಗೆದು, ಅವರನ್ನು ಸಮಾಧಾನಪಡಿಸಲು ಭಾರತ ಮಂತ್ರಿಗಳಾದ ಮೋರ್ಲೆಯವರೂ, ಸರ್ವಾಧಿಪತಿಗಳಾದ ಮಿಂಟೋರವರೂ ಪ್ರಯತ್ನಪಡುತ್ತಿದ್ದರು. ಸತ್ಯೇಂದ್ರ ಪ್ರಸನ್ನ ಸಿಂಹರವರಿಗೆ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದಲ್ಲಿ ನೇಮಿಸಬೇಕೆಂದು ಭಾರತ ಮಂತ್ರಿಗಳಾದ ಮೋರ್ಲೆ ದೊರೆಗಳು ಎಡ್ವರ್ಡ ಬಾದಶಹರ ಬಳಿ ಶಿಫಾರಸು ಮಾಡಿದರು. ಬಾದಶಹರು ಇದ್ದಲ್ಲಿಂದ ಬಾದಶಹರು ಬರೆದದ್ದೇನಂದರೆ;—"ನನ್ನ ವಿಚಾರಗಳು ಪುರಾತನದ್ದಾಗಿರಬಹುದು; ಆದರೆ, ನನ್ನ ಮಗನು ಸದ್ಯಕ್ಕೆ ಹಿಂದುಸ್ಥಾನದಲ್ಲಿ ಅಡ್ಡಾಡಿ ಮರಳಿ ಬಂದಿದ್ದಾನೆ. ಆತನು ನನ್ನ ಅಭಿಪ್ರಾಯಗಳಿಗೇ ಸರಿದೂಗುತ್ತಾನೆ. ಭಾರತೀಯರನ್ನು ಹಿಂದುಸ್ಥಾನ ಸರಕಾರದ ಕಾರಭಾರಿ ಮಂಡಳದಲ್ಲಿ ಸೇರಿಸಿಕೊಂಡರೆ, ಹಿಂದ ಸ್ಥಾನದಲ್ಲಿ ಬ್ರಿಟಿಶ ಸಾಮ್ರಾಜ್ಯವನ್ನು ಕಾಪಾಡಿಕೊಳ್ಳಲು ಮುಂದೆ ಅಪಾಯ ಸಂಭವಿಸುವ ಹಾಗಿದೆ. ಸರ್ವಾಧಿಪತಿಗಳಿಗೂ, ವಿಲಾಯತಿಯೊಳಗಿನ ಇಂಡಿಯಾ ಆಫೀಸಿಗೂ ನಡೆದ ಪತ್ರವ್ಯವಹಾರವನ್ನು ಭಾರತೀಯ ಕಾರಕೂನರ ಬಳಿ ಬರೆಯಲಿಕ್ಕಾಗಲಿ, ಟೈಪ ಮಾಡಲಿಕ್ಕಾಗಲಿ ಕೊಡುವದು ಸಹ ಭಯಂಕರವಿರುತ್ತದೆ. ಇಂಥ ಪ್ರಸಕ್ತಿಯಲ್ಲಿ ಹಿಂದುಸ್ಥಾನ ಸರಕಾರದ ಕಾರಭಾರಿ ಮಂಡಳದಲ್ಲಿಯೇ ಗುಪ್ತ ವಿಷಯಗಳನ್ನು ಭಾರತೀಯರೊಡನೆ ಆಲೋಚಿಸುವದು ಭಯಂಕರವಿದೆ. (ಭಾರತೀಯರನ್ನು ನೇಮಿಸಿದರೆ, ವ್ಹಿಕ್ಟೋರಿಯಾ ಮಹಾರಾಣಿಯವರ ಅಭಿವಚನವನ್ನು ಪಾಲಿಸಿದಂತಾಗುವದೆಂದೂ, ಇದರಿಂದ ಬಾದಶಹರಿಗೆ ಶಾಶ್ವತವಾದ ಕೀರ್ತಿಯು ಪ್ರಾಪ್ತವಾಗುವದೆಂದೂ ಬರೆದದ್ದಕ್ಕೆ) ಮಹಾರಾಣಿಯವರ ನಾಮನಿರ್ದೇಶ ಮಾಡುವದು ಅಸಂಬದ್ಧವಿದೆ. ಅವಳು ಸಹ ಈ ನೇಮಣೂಕಿಯನ್ನು ಸಮ್ಮತಿಸುತ್ತಿದ್ದಳೆಂದು ನನಗೆ ತೋರುವದಿಲ್ಲ. ಹಿಂದುಸ್ಥಾನ ಸರಕಾರಕ್ಕೆ ಇದರಿಂದ ಬಾಧೆ ತಟ್ಟದಂತೆ ಪರಮಾತ್ಮನೇ ಕಾಯಬೇಕು. ಮೋರ್ಲೆ ದೊರೆಗಳೂ, ಸರ್ವಾಧಿಪತಿಗಳೂ ಐಕ್ಯಮತ್ಯ' ಈ ಕುರಿತು ಶಿಫಾರಸು ಮಾಡುತ್ತಾರೆ. ಆದರಿಂದ ಸಿಂಹರೆಂಬೊಬ್ಬರನ್ನು ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳದಲ್ಲಿ ನೇಮಿಸಿಕೊಳ್ಳಲು ನಿರುಪಾಯದಿಂದ ನಾನು ಸಹಿ ಹಾಕುತ್ತೇನೆ. ಈ ಹೊಸ ಯೋಜನೆಯು ನನಗೆ ಎಷ್ಟಕ್ಕೂ ಸಮ್ಮತವಿಲ್ಲೆಂದು ನಾನು ಸ್ಪಷ್ಟವಾಗಿ ನಮೂದಿಸುತ್ತೇನೆ." ಇದನ್ನು ಉಲ್ಲೇಖಿಸಿ, 'ಹಿತವಾದ' ಪತ್ರಿಕೆಯು ಆಶ್ಚರ್ಯ ಪ್ರದರ್ಶನ ಮಾಡಿದೆ. ಬಾದಶಹರ ಬಗ್ಗೆ ಪರಮಾವಧಿಯ ಆದರವಿದ್ದವರಿಗಂತು ಇದನ್ನು ಕೇಳಿ, ಎದೆಹಾರುವದೆಂದೂ 'ಹಿತವಾದ' ಕರ್ತರು ನಮೂದಿಸುತ್ತಾರೆ. ಅಹುದು, ಎದೆ ಹಾರುತ್ತದೆ. ಮಾಡುವದೇನು? ಅರಸರೇ ಪ್ರಜೆಗಳಿಗೆ ಹೀಗೆ ನಡಿಸಿಕೊಳ್ಳಹತ್ತಿದ್ದರೆ, ಅದಕ್ಕೆ ಮಾರುಗತ್ಯಗಾರರ್ಯಾರಿದ್ದಾರೆ? ವಿಧಿಘಟನೆಯೆಂದು ಸುಮ್ಮಗುಳಿಯಬೇಕಲ್ಲವೇ ?

***

ಇಂದೂರಿನ ತುಕೋಜಿ ಮಹಾರಾಜರ ಪ್ರಣಯ ಕಥೆ.

ತುಕೋಜಿ ಮಹಾರಾಜರ ಪ್ರಣಯ ಕಥೆಯ ವೃತ್ತಾಂತವನ್ನು ವಿಸ್ತೃತವಾಗಿ ಯಾರೂ ಹೇಳಲೊಲ್ಲರು. ಪ್ರಣಯ ಕಥೆಯೊಳಗಿನ ಪ್ರಮುಖ ಪಾತ್ರಗಳಾದ ಇಂದೂರ ಮಹಾರಾಜರಾಗಲಿ, ಮಿಲ್ಲರಳಾಗಲಿ ಶಬ್ದವನ್ನು ಸಹ ಮಾತಾಡುವದಿಲ್ಲ. ತುಕೋಜಿರಾಯರೂ, ಮಿಲ್ಲರಳೂ ಕೋಲಂಬೊದೊಳಗಿನ "ಸುವಾಂಗ ಈಲಿಯಾ" ಭುವನದಲ್ಲಿ ಉಳಿಯುತ್ತಾರೆ. ಸಾಹಸಿಗ ವರ್ತಮಾನಪತ್ರಕರ್ತರೊಬ್ಬರು ಮಹಾರಾಜರಿಗೆ ಭೆಟ್ಟಿಯಾಗಿ, ಈ ವಿಷಯದ ಸತ್ಯಸ್ಥಿತಿಯನ್ನು ಹೇಳಲು ಪೃಚ್ಛಿಸಿದರು. ಆಗ ವರ್ತಮಾನಪತ್ರಿಕಾಕರ್ತರಿಗೆ ಸಂಗತಿಯನ್ನು ಹೇಳುವದು ತಮ್ಮ ಪ್ರಘಾತವಿಲ್ಲೆಂದು ತುಕೋಜಿರಾಯರು ಹೇಳಿ ಅವರಿಗೆ ಹಿಂತಿರುಗಿ ಕಳಿಸಿದರು. ಮಿಲ್ಲರಳು ಬಳಿಯಲ್ಲಿಯೇ ಇದ್ದಳು; ಅವಳು ಸುಮ್ಮಗಿದ್ದಳು. ಮಹಾರಾಜರ ಪರಿವಾರದಲ್ಲಿ ಮಿ॥ ಅಬ್ದುಲ ರಶೀದ ಎಂಬವರೊಬ್ಬರಿದ್ದಾರೆ. ಇವರು ಮಹಾರಾಜರ ಖಾಸಗಿ ಕಾರ್ಯದರ್ಶಿಗಳು. ಇವರೂ, ಕೆಪ್ಟನ್ ಬೋರಾದೆ ಎಂಬ ಒಬ್ಬ ಮಹಾರಾಷ್ಟ್ರೀಯರೂ ಮುಂಬಯಿಗೆ ಬುಧವಾರಕ್ಕೆ ಹೋಗಿದ್ದರು. ಅವರೂ ವೃತ್ತಾಂತವನ್ನು

ನಿಷೇಧಿಸಲಿಲ್ಲ. ವರ್ತಮಾನಪತ್ರಗಳಲ್ಲಿ ಪ್ರಕಟವಾಗಿದ್ದ ಸುದ್ದಿಯು ಪ್ರಮಾಣವಲ್ಲೆಂದು ಅವರು ಉದ್ಗರಿಸಿದರು. ಪತ್ರಿಕಾ ಪ್ರತಿನಿಧಿಗಳು ಅದನ್ನು ತಿದ್ದುತ್ತೇವೆಂದು ಅಭಿವಚನವನ್ನೀಯಲು, "ಮಹಾರಾಜರಿಗೆ ಇನ್ನೆಲ್ಲ ವೃತ್ತಾಂತದ ಕುರಿತು ಬೇಸರ ಬಂದಿದೆ" ಎಂದು ಉದ್ಗರಿಸಿದರು. ವೃತ್ತಾಂತವ್ಯಾವುದೆಂದು ಸ್ಪಷ್ಟವಾಗಲಿಲ್ಲ. ತುಕೋಜಿರಾಯರು ಇನ್ನೂ ಅಸ್ವಸ್ಥರಾಗಿದ್ದಾರೆ. ಮಿಲ್ಲರಳಿಗೆ ಅವರ ಆರೋಗ್ಯದ್ದೇ ಚಿಂತೆಯಾಗಿದೆ. ಯಾವಾಗಲೂ ಮಹಾರಾಜರ ಬಳಿಯಲ್ಲಿದ್ದುಕೊಂಡು ಮಹಾರಾಜರಿಗೆ ದಾದಿಯಂತೆ ಜಾಗ್ರತೆಯಿಂದ ಆರೈಕೆ ಮಾಡುತ್ತಿದ್ದಾಳೆ. ಮಹಾರಾಜರಿಗೆ ಇಂದೂರಿನಲ್ಲಿ ಈ ಮದುವೆಯಾಗಬೇಕೆಂದು ಪ್ರಯತ್ನಗಳು ನಡೆದಿವೆ. ಕ್ರೈಸ್ತ ಧರ್ಮದಂತೆ ಮಿಲ್ಲರಳಿಗೆ ಮದುವೆಯಾಗಲು ಮಹಾರಾಜರಿಗೆ ಅನುಕೂಲವಿಲ್ಲ. ಈಗಾಗಲೇ ಇಬ್ಬರು ಹೆಂಡಂದಿರಿದ್ದಾರೆ. ಅದರಿಂದ ಮಿಲ್ಲರಳನ್ನು ಆರ್ಯಸಮಾಜದವರ ಬೆಂಬಲದಿಂದ ಹಿಂದೂ ಧರ್ಮದೀಕ್ಷೆ ಕೊಟ್ಟು ಮದುವೆಯನ್ನು ನೆರವೇರಿಸುವ ಏರ್ಪಾಟಾಗಿದೆಯೆಂದು ಇಂದೂರಿನಲ್ಲಿ ಸುದ್ದಿ ಹಬ್ಬಿದೆ. ದಿಲ್ಲಿಯ "ಹಿಂದುಸ್ಥಾನ ಟೈಮ್ಸ್" ಪತ್ರಿಕೆಯಲ್ಲಿ ಮಿಲ್ಲರಳು ತುಕೋಜಿರಾಯರಿಗೆ ಗಂಟು ಬಿದ್ದ ವೃತ್ತಾಂತವು ಪ್ರಕಟವಾಗಿದೆ. ಅದು ಚಿತ್ತವೇಧಕವಿದೆ.— ಮಹಾರಾಜರು ಮೊಟ್ಟಮೊದಲು ಕಿರಿ ಹೆಂಡಂದಿರಾದ ಇಂದಿರಾಬಾಯಿಯವರೊಡನೆ ಸ್ವಿಜರ್ಲೆಂಡದ ಲ್ಯುಸರ್ನ ಸರೋವರದ ಬಳಿ ಉಳಕೊಂಡಿದ್ದರು. ಅಲ್ಲಿ ಅವರಿಗೆ ಮಿಲ್ಲರಳ ಪರಿಚಯವಾಯಿತು. ಆ ಪರಿಚಯವು ಬೆಳೆಯುತ್ತ ಹೋದ ಹಾಗೆ ಮಹಾರಾಜರಿಗೆ ಅವಳೊಡನೆ ಮತ್ತೂ ವಿಶೇಷ ಪರಿಚಯ ಬೆಳೆಸುವ ಆಶೆಯಾಯಿತು. ಅದರಿಂದ ಮಹಾರಾಜರು ಮಹಾರಾಣಿಯವರಿಗೆ ಒಬ್ಬೊಂಟಿಗರಾಗಿ ಲ್ಯುಸರ್ನದಲ್ಲಿ ಬಿಟ್ಟು, ತಾವು ಪಾರೀಸ್ ಪಟ್ಟಣಕ್ಕೆ ನಡೆದರು. ಪಾರೀಸದಲ್ಲಿ ಮಿಲ್ಲರಳೊಡನೆ ಕೋರ್ಟಿಂಗ ಯಾನೆ ವಧುವಿನ ಉಮೇದ್ವಾರಿ ನಡೆಯಿತು. ಮಿಲ್ಲರಳೂ ತುಕೋಜಿರಾಯರ ಪತ್ನಿಯಾಗಲು ಅವಶ್ಯವುಳ್ಳ ಪೂರ್ವತಯಾರಿಯನ್ನು ಮಾಡುತ್ತಿದ್ದಳು. ಮಿ|| ಅಬ್ದುಲ್ ರಶೀದರೆಂಬುವರು ಮಿಲ್ಲರಳಿಗೆ ಹಿಂದು ಹುಡುಗಿಯಂತೆ ಸೀರೆಗಳನ್ನು ಉಟ್ಟುಕೊಳ್ಳಲು ಕಲಿಸುತ್ತಿದ್ದರು. ಪಾರೀಸ ಪಟ್ಟಣದಲ್ಲಿ ಅಮೂಲ್ಯವಾದ ಸೀರೆಗಳು ಕೊಳ್ಳಲ್ಪಟ್ಟವು. ಹೀಗೆ ಕೆಲವು ತಿಂಗಳು ಸಾಗಿದವು. ಮಿಲ್ಲರಳು ಕೆಲಿಫೋರ್ನಿಯಾಕ್ಕೆ ತುಕೋಜಿರಾಯರನ್ನು ಬರಹೇಳಿ ಹೋದಳು. ಮಹಾರಾಜರು ನ್ಯೂಯೋರ್ಕ ಪಟ್ಟಣಕ್ಕೆ ಹೋಗಿ ಮುಟ್ಟುವಷ್ಟರಲ್ಲಿ ಅಲ್ಲಿ ಮಿಲ್ಲರಳು ಅವರಿಗೆ ಭೆಟ್ಟಿಯಾದಳು. ಇಬ್ಬರೂ ಜೊತೆಯಲ್ಲಿ ಅಮೇರಿಕಾ ಖಂಡದಲ್ಲೆಲ್ಲ ಸಂಚರಿಸಿದರು. ಇತ್ತ ಮಹಾರಾಣಿ ಇಂದಿರಾಬಾಯಿಯವರು ತುಕೋಜಿರಾಯರನ್ನು ಹಾರೈಸುತ್ತಿದ್ದರು. ಪ್ರಣಯ ಕಥೆ ಯಾವುದೂ ಅವರಿಗೆ ಗೊತ್ತಿರಲಿಲ್ಲ. ಥಕ್ಕನೆ ಅಮೇರಿಕೆಯಿಂದ ಒಂದು ತಂತಿ ಬಂತು. ಇಂದೂರಕ್ಕೆ ಒಮ್ಮಿಂದೊಮ್ಮೆಲೇ ಹೊರಟು ಹೋಗಬೇಕೆಂದು ಆ ತಂತಿಯಲ್ಲಿ ಅಪ್ಪಣೆ ಇತ್ತು. ಮಹಾರಾಣಿಯವರು ದಿಗಿಲು ಬಿದ್ದರು, ಇಂದೂರಿಗೆ ಮರಳಿದರು. ಮಹಾರಾಜರು ಮಿಲ್ಲರಳಿಗೆ ಶಾಸ್ತ್ರದಂತೆ ಹಿಂದು ಧರ್ಮದೀಕ್ಷೆ ಕೊಡುವ ನಾಶಿಕದ ಕ್ಷೇತ್ರ ಪುರೋಹಿತರಿಗೆ ೩೦ ಸಾವಿರ ರೂಪಾಯಿಗಳನ್ನು ಕೊಡ ಮಾಡಿದ್ದಾರಂತೆ. ಮೇಲಾಗಿ ಮಹಾರಾಜರ ಖಾಸಗಿ ಕಾರ್ಯದರ್ಶಿಗಳ ಅಧಿಕಾರವೂ ಪುರೋಹಿತರಿಗೆ ಕೊಡಲಾಗುವದು! ಅಮೇರಿಕೆಯಿಂದ ಹಿಂದುಸ್ಥಾನಕ್ಕೆ ಬರುವ ಮುಂಚೆ ಮಹಾರಾಜರು ಗ್ರಹಬಲವನ್ನು ಆಲೋಚಿಸಿ ಬಂದಿದ್ದರಾಗಿಯೂ, ಈ ತಿಂಗಳ ಕೊನೆಯ ವಾರವು ಅಂದರೆ, ಬರುವ ವಾರವೇ ವಿವಾಹ ಕಾರ್ಯಕ್ಕೆ ಸರ್ವ ಪರಿಯಿಂದ ಅನುಕೂಲವಿರುವದಾಗಿಯೂ ಜ್ಯೋತಿಷ ಶಾಸ್ತ್ರಜ್ಞರು ಹೇಳಿದ್ದರಂತೆ! ಅದರಿಂದ ಈ ವಾರದಲ್ಲಿ ಲಗ್ನ ಮಾಡಿಕೊಳ್ಳಬೇಕೆಂಬ ಪ್ರಯತ್ನಗಳು ನಡೆದಿವೆ. ಸ್ತ್ರೀ ಲಂಪಟನ ಮೋಹಪ್ರತಾಪ ನೋಡಿರಿ. ಮದುಮಗಳಿಗಾಗಿ ಮಹಾರಾಜರ ಪರಿವಾರದವರು ಚಿನ್ನವನ್ನೂ, ಅರಿವೆ-ಅಂಚರಿಗಳನ್ನೂ ಖರೇದಿ ಮಾಡುತ್ತಿದ್ದಾರಂತೆ. ಇನ್ನೂ ಈ ಪ್ರಕರಣವು ಸಂಪೂರ್ಣವಾಗಲಿಲ್ಲ. ದಿನ ಹೋದ ಹಾಗೆ ಪ್ರಜೆಗಳ ಕುತೂಹಲವು ಬೆಳೆಯುತ್ತಲಿದೆ. ಗೌಪ್ಯದ ಮೂಲಕ ಪ್ರಣಯ ಕಥೆಗೆ ಮತ್ತಿಷ್ಟು ಕಳೆ ಏರಿದೆ.

⁂

ಅಲ್ಲಾಹು ಪ್ರಸಲಾತಾಂ' ದಾವೆ.

ಮುಸಲ್ಮಾನರಲ್ಲೊಂದು ಗಾದೆ ಮಾತಿದೆ. ಗೊಲ್ಲರವನೊಬ್ಬನ ಕೋಳಿಯು ಕಾಣೆಯಾಯಿತು. ಆತನು ಅಲ್ಲಾ ದೇವರ ಬಳಿ ಪ್ರಾರ್ಥನೆ ಮಾಡಿದ್ದೇನಂತರೆ.— "ದೇವರೇ, ನನ್ನ ಕೋಳಿಮರಿ ಸಿಕ್ಕಿದರೆ, ನಿನಗೆ ನನ್ನ ಇಡೀ ಕುರಿ ಹಿಂಡನ್ನೇ ಬಲಿಕೊಡುವೆನು," ಇದನ್ನು ಕೇಳಿ, ಆತನ ಹೆಂಡತಿಯು ದಿಗಿಲು ಬಿದ್ದಳು! "ಇದೆಂಥ ಪ್ರಾರ್ಥನೆ? ಕೋಳಿಮರಿ ಹೋದರೆ ಹೋಗಲಿ, ಅದಕ್ಕಾಗಿ ಕುರಿ ಹಿಂಡನ್ನು ಬಲಿಕೊಡಬಹುದೇ?" ಎಂದು ಉದ್ಗರಿಸಿದಳಂತೆ. "ಛೇ, ನಿನಗೇನು ಹುಚ್ಚು ಹಿಡಿದಿರುವದೇ? ನಾನು ಅಷ್ಟು ಮೂರ್ಖನೆಂದು ತಿಳಿದೆಯಾ? ಅಲ್ಲಾದೇವರಿಗೆ ಆಶೆ ತೋರಿಸಿದೆನು, ಇಷ್ಟೇ! ಕೋಳಿಮರಿ ಸಿಕ್ಕಿದ ಬಳಿಕ, ಅಲ್ಲಾ ದೇವರಿಗೂ, ನನಗೂ ಎಲ್ಲಿಯ ಗಂಟು?" ಎಂದೇನೋ ಆತನು ಹೇಳಿದ್ದನಂತೆ! ಅದೇ ಪ್ರಕಾರದ ದಾವೆಯೊಂದು ಮದ್ರಾಸ ಹೈಕೋರ್ಟಿನಲ್ಲಿ ಸದ್ಯಕ್ಕೆ ತೀರ್ಮಾನವಾಗಿದೆ. ಮುಹಮ್ಮದ್ ಉಸ್ಮಾನರವರು ಕೆಲವು ಬರುಕರಿಯ ಬಗ್ಗೆ ಒಂದು ಕಂಪನಿಯ ಮೇಲೆ ದಾವೆ ದಾಖಲ ಮಾಡಿದ್ದರು. ಈ ದಾವೆಯಲ್ಲಿ ತಮಗನುಕೂಲವಾಗಿ ನಿರ್ಣಯ ಮಾಡಿಕೊಳ್ಳುವ ದೆಸೆಯಿಂದ ಮೆ|| ಮು|| ಬಾಲಸುಂದರಂ ಮುದಲಿಯಾರರವರ ಕಡೆಯಿಂದ ದೇವಾಲಯದಲ್ಲಿ ಕೆಲವು ವಿನಿಯೋಗಗಳನ್ನು ನಡಿಸಿದರು. ದಾವೆಯಲ್ಲಿ ಗೆದ್ದರೆ, ೫ ಸಾವಿರ ರೂಪಾಯಿಗಳನ್ನು ಕೊಡುತ್ತೇನಾಗಿಯೂ ಅಭಿವಚನವನ್ನಿತ್ತರು. ಉಸ್ಮಾನರಿಗೆ ಜಯವಾಯಿತು. ೩೨ ಸಾವಿರ ರೂಪಾಯಿ ಪ್ರಾಪ್ತಿಯಾಯಿತು. ಬಾಲಸುಂದರಂ ಮುದಲಿಯಾರರವರು ೫೦೦೦ ರೂಪಾಯಿಗಳನ್ನು ಕೇಳಲು, ಉಸ್ಮಾನರು ಕೊಡಲಿಲ್ಲ. ಅದರಿಂದ ಮುದಲಿಯಾರರವರು ಉಸ್ಮಾನರ ಮೇಲೆ ದಾವೆ ಮಾಡಿದರು. ದೇವಾಲಯದಲ್ಲಿ ವಿನಿಯೋಗಗಳನ್ನು ನಡಿಸಿದ್ದರಿಂದ ಉಸ್ಮಾನರು ದಾವೆಯಲ್ಲಿ ಗೆದ್ದರೆಂದು ಯಾರೂ ಹೇಳಲಿಕ್ಕಿಲ್ಲವಾಗಿ ನ್ಯಾಯಮೂರ್ತಿ ಪೋಲರರವರು ಅಭಿಪ್ರಾಯಪಟ್ಟು ದಾವೆಯನ್ನು ಕಿತ್ತೊಗೆದು ಬಿಟ್ಟರು. ಬಾಲಸುಂದರಂ ರವರು ಅದೇ ವಿನಿಯೋಗಗಳನ್ನು ನಡಿಸಿದ್ದರೆ, ಗೆಲ್ಲುತ್ತಿದ್ದರೋ ಏನೋ?

— ರಾ|| ಬ|| ಗೋಪಾಳ ಅನಂತ ಗಿರಿಯವರ ಸ್ಮಶಾನ ಯಾತ್ರೆಗೆ ದಿ|| ಬ|| ಶ್ರೀನಿವಾಸರಾವ ರೊದ್ದ, ಶ್ರೀ ವಿನಾಯಕ ರಾವ ಜೋಶಿ ಪ್ರಭೃತಿ ನೂರಾರು ಜನರು ಹೋಗಿದ್ದರು.

— ಪ್ರಯಾಗ ಕ್ಷೇತ್ರದೊಳಗಿನ ದೋಣಿಕಾರರ ಸಂಪು ಅಂತ್ಯವಾಯಿತು. ಅಧಿಕಾರಿಗಳು ಕೊನೆಗೆ ದೋಣಿಕಾರರ ಹೇಳಿಕೆಯನ್ನು ಮನ್ನಿಸಬೇಕಾಯಿತು. ಸತ್ಯಾಗ್ರಹದ ಸೋಂಕು ಆಳರಸರು ಬಗ್ಗುವರಿಲ್ಲ.

— ಅಮೇರಿಕೆಯ ನೌಕಾಸೈನ್ಯ ಖಾತೆಯ ಕಾರ್ಯದರ್ಶಿಗಳಾದ ರೊಬಿನ್‌ಸನ್‌ರವರು ೧೬|| ಕೋಟಿ ರೂಪಾಯಿಗಳನ್ನು ಹಡಗಿಗೆ ಮಂಜೂರ ಮಾಡಿಸಿಕೊಂಡಿದ್ದಾರೆ. ಮೊದಲು ೧ ಅಬ್ಜ ೮ ಕೋಟಿ ರೂಪಾಯಿಗಳು ಮಂಜೂರಾಗಿದ್ದವು. ಅಮೇರಿಕೆಯವರು ಭೂತಲದಲ್ಲಿ ಶಾಂತತೆಯನ್ನು ನೆಲಿಸುವ ಪಕ್ಷದವರು, ಈಗಾದರೂ ತಿಳಿಯಿತೇನು?

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टोवेल, चौक, लहान--मोठे पंचे, सीडपाट, चीलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:-आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणावि, फोवकार अँड सन्स.

पोस्ट— मुंकेरि (कारवार.)

ಕಾನಡಾ ವೃತ್ತ.

ವಿ.ತಿ ಪ್ರಭವ ಸಂ। ಪುಷ್ಯ ಕೃ। ೯ ಮಿ, ಸೋಮವಾರ

ಮಂಗ ಹಣಕುತ್ತಿದೆ!

ಇಸಾಪನು ಚಂತಕಥೆಗಳನ್ನು ಬರೆದು ನೀತಿ ಪಾಠಗಳನ್ನು ಬೋಧಿಸಿದ್ದಾನೆ. ಒಂದು ಕಥೆಯು ಹೀಗಿದೆ—ಬೆಕ್ಕುಗಳೆರಡು ಬಕಧ್ಯಾನ ಮಾಡಿ ಒಂದು ಮನೆಯಿಂದ ಬೆಣ್ಣೆಯ ಮುದ್ದೆಯನು ಕದ್ದು ತಂದವು. ಅದನ್ನು ಹಂಚಿಕೊಳ್ಳಲು ಇಬ್ಬರಿಗೂ ತಿಳಿಯಲಿಲ್ಲ; ಇಬ್ಬರಿಗೂ ಒಪ್ಪಿಗೆಯಾಗಲಿಲ್ಲ. ಈ ಮುದ್ದೆ ದೊಡ್ಡದಾಯಿತು, ಈ ಮುದ್ದೆ ಸಣ್ಣದಾಯಿತು, ಎಂದು ಅವು ಜಗಳಾಡಿಕೊಳ್ಳಹತ್ತಿದವು. ಬಳಿಯಲ್ಲಿ ಒಂದು ಮರವಿತ್ತು, ಆ ಮರದ ಮೇಲೆ ಒಂದು ಮಂಗ ಕೂತಿತ್ತು, ಅದು ಹಣಕಿ ನೋಡಿತು. ಒಮ್ಮೆಲೇ ಅಲ್ಲಿ ಬಂದು ಇಬ್ಬರಿಗೂ ಸಮಾಧಾನ ಹೇಳಿ, ನ್ಯಾಯಮೂರ್ತಿಯಾಯಿತು. ತಕ್ಕಡಿಯು ಬ್ರಿಟಿಶ ನ್ಯಾಯದ ಲಕ್ಷಣವು ಆದನ್ನು ಮಂಗವು ಸಂಪಾದಿಸಿಕೊಂಡಿತು. ಬೆಣ್ಣೆಯ ಮುದ್ದೆಯು ಎರಡು ಹೋಳು ಮಾಡಿತು, ಒಂದು ಬದಿಗಿಷ್ಟು, ಇನ್ನೊಂದು ಬದಿಗಿಷ್ಟು, ಹಾಕಿ ತೂಕ ಮಾಡಿತು. ಒಂದು ಬದಿಗೆ ಹೆಚ್ಚಾಗಿ ತಕ್ಕಡಿಯು ಬಾಗಿತು, ತೂಕವನ್ನು ಸರಿಪಡಿಸುವದಕ್ಕಾಗಿ ಬೆಣ್ಣೆಯ ಒಂದು ತುತ್ತನ್ನು ಮಂಗವು ನುಂಗಿತು. ಕೂಡಲೆ, ಇನ್ನೊಂದು ಬದಿಗೆ ತಕಡಿ ಬಾಗಿತು. ಅದರದೊಂದು ತುತ್ತನ್ನು ಮಂಗವು ತಿಂದಿತು ಹೀಗೆ ಎಷ್ಟು ನುಂಗಿದರೂ, ಮುದ್ದೆಗಳು ಸರಿಯಾಗುವದಿಲ್ಲ. ಉಪಾಯದಿಂದ ಸರಿಪಡಿಸಿದ ಬಳಿಕ, ಮಂಗವು ಎರಡೂ ಮುದ್ದೆಗಳನ್ನು ಕೊಂಡು, ನ್ಯಾಯನಿರ್ಣಯದ ವೇತನವೆಂದು ಬಾಯಲ್ಲಿ ಹಾಕಿಕೊಂಡು ಮರದಿಂದ ಅತ್ತಿಂದ ಇತ್ತ, ಇತ್ತಿಂದ ಅತ್ತ ಹಾರ್ಯಾಡುತ್ತ ನಡೆಯಿತಂತೆ. ಇದೊಂದು ಇಸಾಪನ ಕಥೆ

ಈ ಕಥೆಯನ್ನು ಇಂದಿಗೆ ಹೇಳುವ ಕಾರಣವೇನೆಂದು ಬಲ್ಲಿರಾ? ಹಿಂದು-ಮುಸಲ್ಮಾನರೊಳಗೆ ಉಂಟಾದ ಕಲಹಗಳನ್ನು ಲಕ್ಷಿಸಿ, ಸಾಮ್ರಾಜ್ಯ ಸರಕಾರವು ಭರತಪುತ್ರರಿಗೆ ಅಪಮಾನಾಸ್ಪದವಾದ ಸ್ಯಾಮನ್ ಕೂಟವನ್ನು ನೇಮಿಸಿತು. ಸ್ಯಾಮನ್ ಕೂಟವನ್ನು ಹಿಂದುಸ್ಥಾನದೊಳಗಿನ ಪಕ್ಷಗಳು ಸ್ವಾರ್ಥಪರಾಯಣರಾಗಿ ಸ್ವಾಗತೀಕರಿಸುವರೆಂದು ಅವರ ಅಂದಾಜಿತ್ತು. "ಮುಸಲ್ಮಾನರಂತು ನಮ್ಮ ಬಗಲಲ್ಲಿದ್ದಾರೆ, ಹಿಂದುಗಳು ಮುಸಲ್ಮಾನರ ಸ್ವಾರ್ಥಸಾಧನೆಗೆ ಆತಂಕಪಡಿಸುವದಕ್ಕಾಗಿ ಸ್ಯಾಮನ್ ಕೂಟವನ್ನು ಬರಮಾಡಿಕೊಳ್ಳುವರು. ಹಿಂದು ಮುಸಲ್ಮಾನರು ಹೀಗೆ ಬಟ್ಟಿದರೆ, ರಾಷ್ಟ್ರೀಯ ಸಭೆಯ ಬಹಿಷ್ಕಾರ ನಿರ್ಧಾರವು ಹಾರಿಹೋಗುವದೆಂದೂ ಸಾಮ್ರಾಜ್ಯಕರ್ತರ ಅಂದಾಜಿತ್ತು. ಹಿಂದು-ಮುಸಲ್ಮಾನರು ಒಟ್ಟಾಗುತ್ತಾರೇನೆಂದು ನೋಡಲು ಸರ್ವಾಧಿಪತಿಗಳ ವಿದ್ಯಮಾನ ಸಿಮ್ಲಾದಲ್ಲಿ ಐಕ್ಯ ಪರಿಷತ್ತಿನ ಯೋಜನೆಯೂ ಆಯಿತು! ಅದರಿಂದ ಯಾವದೂ ಫಲನಿಷ್ಪತ್ತಿಯಾಗಲಿಲ್ಲ ಹೀಗೆ ಪ್ರಸೂತಿವೇದನೆಗಳನ್ನನುಭವಿಸಿ, ಸ್ಯಾಮನ್ ಕೂಟವು ಜನನಹೊಂದಿತು ಜನ್ಮ ಹೊಂದಿದ್ದೇ ತಡ, ನಾಲ್ಕೂ ಬದಿಯಿಂದ ನಿಷೇಧಗಳುಂಟಾಗಿ, ಹಿಂದು-ಮುಸಲ್ಮಾನರೂ, ಸಮಸ್ತ ರಾಷ್ಟ್ರೀಯರೂ ಒಕ್ಕಟ್ಟಾಗಿ ಬಹಿಷ್ಕಾರವನ್ನು ಬೋಧಿಸಿದರು. ಈಗ ಏನು ಮಾಡಬೇಕೆಂದು ಸಾಮ್ರಾಜ್ಯಕರ್ತರಿಗೆ ತಿಳಿಯದಾಗಿದೆ. ಕೂಟದ ಘಟನೆಯನ್ನು ಈಗ ತಿದ್ದುಪಡಿ ಮಾಡಿದರೆ, ಪ್ರತಿಷ್ಠೆಗೆ ಕುಂದು ಬರುತ್ತದೆ. ಹಾಗೆಯೇ ಮುಂದರಿದರೆ, ಬಹಿಷ್ಕಾರದ ಸತ್ಕಾರವಾಗುತ್ತದೆ ಆದರಿಂದ ಸಾಮ್ರಾಜ್ಯಕರ್ತರು ಭರತಪುತ್ರರಲ್ಲಿ ಉಂಟಾಗುವ ಮತಭೇದವನ್ನು ಕೊಂಚುಹಾಕಿ ನಿರೀಕ್ಷಿಸುತ್ತಿದ್ದಾರೆಂದು "ಫ್ರೀ ಪ್ರೆಸ್ ವಾರ್ತಾವಾಹಕ" ಸಂಸ್ಥೆಯವರು ಬ್ರಿಟಿಶ ದೇಶದ ರಾಜಕಾರಣಸೂತ್ರಗಳನ್ನು ಪರ್ಯಾಲೋಚಿಸಿ ಪ್ರಕಟಿಸಿದ್ದಾರೆ ಸಂಧಾನದ ಮಾತುಕಥೆ ನಡಿಸಲು ಈಗ ಸಾಧ್ಯವಿರುವದಿಲ್ಲವಾಗಿ ಬ್ರಿಟಿಶ ರಾಜಕಾರಣ ಧುರಂಧರರ ಅಂಬೋಣ. ಬಹಿಷ್ಕಾರ ಪ್ರಯತ್ನವು ಅಷ್ಟು ಮೇರೆದಪ್ಪಿ ಸಾಗಿದೆ ರಾಷ್ಟ್ರೀಯ ಸಭೆಯವರು ಕಾಯಿದೆ ಕೌನ್ಸಿಲನ್ನು ಬಹಿಷ್ಕರಿಸುವ ನಿರ್ಧಾರದಿಂದಂತು ಸ್ಯಾಮನ್ ಕೂಟಕ್ಕೆ ಒಪ್ಪಂದದ ಮಾತುಕಥೆಯನ್ನೆತ್ತಲು ದೊಡ್ಡ ಪ್ರತಿಬಂಧ ಉಂಟಾಗಿದೆ ಆದರಿಂದ ಭಾರತೀಯರು ತಯಾರಿಸಿದ್ದ ಸ್ವರಾಜ್ಯ ಘಟನೆಯ ವಿಷಯ ಪ್ರಜೆಗಳೊಳಗೆ ಮತಭೇದವುಂಟಾದಾಗ, ಪ್ರಮುಖ ಪಕ್ಷಗಳಿಗೆ ಬರಮಾಡಿಕೊಂಡು, ಸ್ಯಾಮನ್ ಕೂಟದ ವೇಷವನ್ನು ಕಾಣಿಸಲು ಬ್ರಿಟಿಶರು ಉದ್ಯುಕ್ತರಾಗಿದ್ದಾರೆ. ಇಸಾಪನ ನೀತಿಕಥೆಯ ಭಾಷೆಯಲ್ಲಿ ಹೇಳಬೇಕಾದರೆ, ಈಗ ಮಂಗವು ಬೆಕ್ಕುಗಳ ಬಡದಾಟವನ್ನು ನಿರೀಕ್ಷಿಸಹತ್ತಿದೆಂದು ಧಾರಾಳವಾಗಿ ಹೇಳಬಹು.)

ಆದರಿಂದ ಭರತಪುತ್ರರು ಈಗ ಜಾಗರೂಕರಾಗಿರತಕ್ಕದ್ದು. ಬಹಿಷ್ಕಾರ ನಿರ್ಧಾರದಿಂದಲೇ ಸ್ಯಾಮನ್ ಕೂಟದ ಗೋಣು ಮುರಿದಿದೆ. ಕಳೆದ ಗುರುವಾರಕ್ಕೆ ಈ ಸ್ಯಾಮನ್ ಕೂಟವು ಭರತಭೂಮಿಗೆ ಬರಲು ಹೊರಟಿದೆ. ಆ ಕಾಲಕ್ಕೆ ಸ್ಯಾಮನ್ ಕೂಟದವರಿಗೆ ದೊಡ್ಡದೊಂದು ಮೆರವಣಿಗೆಯಿಂದಲೂ, ಸಂಭ್ರಮದಿಂದಲೂ, ಸಡಗರದಿಂದಲೂ ಇಲ್ಲಿಗೆ ಕಳಿಸುವ ವಿಚಾರವಿತ್ತು. ಸ್ಯಾಮನ್ ರವರು ಇದಕ್ಕೆ ಸ್ವಲ್ಪಕ್ಕೂ ಒಪ್ಪಲಿಲ್ಲ. ಗೌರವಪಾಲನೆಕ್ಕಾಗಿ ಸರ್ವಾಧಿಪತಿಗಳ ದಿಲ್ಲಿಯ ಅರಮನೆಯಲ್ಲಿ ಸ್ಯಾಮನ್ ಕೂಟದವರು ಠಾಣ್ಯಾಹೂಡಬೇಕೆಂದು ಭಾರತ ಮಂತ್ರಿಗಳ ಅಪೇಕ್ಷೆಯಿತ್ತು. ಬೇರೆ ಕಡೆಯಲ್ಲುಳಕೊಂಡರೆ, ಕಮೀಶನರರ ಪ್ರತಿಷ್ಠೆಗೆ ಕಡಿಮೆಯಾಗುತ್ತದೆಂದೂ ಅಧಿಕಾರಿಗಳ ಅಂಬೋಣ. ಆದರೆ, ಸ್ಯಾಮನ್ ಸಾಹೇಬರು ಅದನ್ನೂ ಧಿಕ್ಕರಿಸಿ, "ಇಂಡಿಯನ್ ಪಾರ್ಲಿಮೆಂಟರಿ ಹೊಸ್ಟೆಲ್" ಎಂಬ ವಸತಿಗೃಹದಲ್ಲಿ ಉಳಕೊಳ್ಳುವವರಿದ್ದಾರೆ. ಕಾರಣವು ಸ್ಪಷ್ಟವಿದೆ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರು ಅಲ್ಲಿಯೇ ಹೆಚ್ಚಾಗಿ ಉಳಕೊಳ್ಳುತ್ತಾರೆ. ಪ್ರಮುಖರು ಸಾಮಾಜಿಕ ಸತ್ಕಾರ ಸಮಾರಂಭಗಳನ್ನು ಸಹ ಕೊಡಬಾರದೆಂದು ರಾಷ್ಟ್ರೀಯ ಸಭೆ ಪ್ರಭೃತಿ ಸಂಸ್ಥೆಗಳು ವಿಧಿಸಿದ್ದರಿಂದ ಪ್ರಮುಖರ ಭೆಟ್ಟಿಯಾಗಬೇಕಾದರೆ, ಅವರಿದ್ದಲ್ಲಿಗೇ ತಾವು ಹೋಗಿರಬೇಕೆಂದು ಸ್ಯಾಮನ್ ಸಾಹೇಬರ ಗುಪ್ತ ಆಲೋಚನೆ. ಕೂಟದವರಲ್ಲಿದ್ದರೆಂದು ವರಿಷ್ಠ ಕಾಯಿದೆ ಕೌನ್ಸಿಲಿನ ಲೋಕಪಕ್ಷದವರು ಆ ವಸತಿಗೃಹಕ್ಕೆ ಹೋಗದಿದ್ದರೆ ಮಾತ್ರ ಸ್ಯಾಮನ್ ಸಾಹೇಬರ ಧೂರ್ತ ವಿಚಾರವು ಒಮ್ಮೆಲೇ ಬಯಲಾಗುವದು.

ಅದಿಂತಿರಲಿ, ಬಹಿಷ್ಕಾರದ ನಿರ್ಧಾರದಿಂದ ಸಾಮ್ರಾಜ್ಯಕರ್ತರಲ್ಲುಂಟಾದ ಗಾಬರಿಯನ್ನು ನೋಡಿ, ನಮಗೆ ಸಂತೋಷವಾಗುತ್ತದೆ. ಮತ್ತೂ ಅವರು ಗಾಬರಿಗೆಡುವಂತೆ ನಿರ್ಧಾರವಂತರಾಗಬೇಕಾಗಿಯೂ ನಾವು ಪ್ರಜೆಗಳಿಗೆ ಪ್ರಾರ್ಥಿಸುವೆವು. ರಾಜ್ಯಘಟನೆಯ ಏರ್ಪಾಟಿನಲ್ಲಿ ಹಕ್ಕುಗಳು ಹೆಚ್ಚು-ಕಡಿಮೆಯಾದಾಗ್ಯೂ, ಇಬ್ಬರೂ ದೇಶಬಾಂಧವರೆಂದೆಣಿಸಿಕೊಂಡು, ಬಡದಾಡಿಕೊಳ್ಳದೆ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗಿರಬೇಕು ಹಕ್ಕುಗಳು ಹೆಚ್ಚು-ಕಡಿಮೆಯಾದಾಗ್ಯೂ, ಮುಸಲ್ಮಾನರಾಗಲಿ, ಹಿಂದುಗಳಾಗಲಿ, ಇತರ ದೇಶಬಾಂಧವರಾಗಲಿ ಅನುಭವಿಸುವರು, ದೇಶಬಾಂಧವರಲ್ಲದ ಬ್ರಿಟಿಶರು ಅನುಭವಿಸಲಿಕ್ಕಿಲ್ಲ. ನಾವು ಬಡದಾಡಿಕೊಂಡರೆ ಇಬ್ಬರ ಕಾಲ ಮೇಲೆಯೇ ಕೊಡ್ಲಿ ಬರುತ್ತದೆ. ಯಾರಿಗೂ ಹಕ್ಕು ಸಿಗುವದಿಲ್ಲ, ಇಬ್ಬರ ಹಕ್ಕುಗಳನ್ನೂ ಬ್ರಿಟಿಶರು ಅಪಹರಿಸುತ್ತಾರೆ. ಒಂದು ಬಾರಿ ರಾಷ್ಟ್ರದ ಅಧಿಕಾರವು ಭರತಪುತ್ರರಿಗೆ ಪ್ರಾಪ್ತವಾದರೆ, ಅದನ್ನು ನಾವು ಉಪಾಯದಿಂದ ಮುಂದೆ ಸರಿಪಡಿಸಿಕೊಳ್ಳಬಹುದು ಈಗಲೇ ನಮ್ಮ ನ್ಯಾಯವನ್ನು ಇತ್ಯರ್ಥಪಡಿಸಿಕೊಳ್ಳುವ ದುರಾಶೆಗೆ ಬಲಿಬೀಳದೆ, ಬ್ರಿಟಿಶರಿಂದ ರಾಷ್ಟ್ರಾಧಿಕಾರವನ್ನು ಸೆಳೆಕೊಳ್ಳಲು ಪ್ರಯತ್ನಪಡಬೇಕು. ಅದೂರದೃಷ್ಟಿಯ ಸ್ವಾರ್ಥಪರಾಯಣ ದೇಶಬಾಂಧವರು ತಮ್ಮ ಪಾತ್ರತೆಯನ್ನು, ರಾಷ್ಟ್ರದ ಮೇಲೆ ಒದಗಿರುವ ಆಪತ್ತ

ನ್ನು ವಿಚಾರಿಸದೆ ಸ್ವಾರ್ಥಲೋಲುಪರಾದರೆ, ಬಲ್ಲಿದವರು ಔದಾರ್ಯವಂತರಾಗಿ ಅದನ್ನು ಪೂರೈಸಬೇಕು. ಹೇಗಾದರೂ ಬಡಿದಾಡಿಕೊಳ್ಳಲಾಗದು. ಆದರಿಂದ ರಾಷ್ಟ್ರಕ್ಕೆ ಕ್ಷೇಮವಿಲ್ಲ. ಅದನ್ನೇ ಬ್ರಿಟಿಶರು ಹಾರೈಸುತ್ತಿದ್ದಾರೆಂಬುದು ತಿಳಿದ ಬಳಿಕ, ನಾವು ಮತ್ತಿಷ್ಟು ಜಾಗರೂಕರಾಗಿರಬೇಕಲ್ಲವೇ! ಇದಕ್ಕಾಗಿಯೇ ಇಸಾಪನು ಮಂಗ-ಬೆಕ್ಕುಗಳ ಕಥೆಯನ್ನು ಹೇಳಿ, ನಮಗೆ ನೀತಿಪಾಠವನ್ನು ಹೇಳಿದ್ದಾನೆ. ಮಂಗನು ಮರದಲ್ಲಿ ಕುಳಿತು, ಹಣಿಕಿ ನೋಡುತ್ತಿದ್ದಾಗ, ಬೆಕ್ಕುಗಳು ತಮ್ಮೊಳಗೆ ಸಂಧಾನ ಮಾಡಿಕೊಂಡಿದ್ದರೆ, ಇಡೀ ಬೆಣ್ಣೆಯ ಮುದ್ದೆಯು ಎರಡೂ ಬೆಕ್ಕುಗಳೊಳಗೆ, ಹೆಚ್ಚು-ಕಡಿಮೆ ಮಾಡದಾಗ್ಯೂ, ಪಾಲಾಗಿ ಹೋಗುತ್ತಿತ್ತು. ಸ್ವಾರ್ಥಲೋಲುಪರಾಗಿ ನಿಷ್ಠುರ ನ್ಯಾಯಬುದ್ಧಿಯಿಂದ ಪ್ರೇರಿತರಾದ ಮೂಲಕ ಮಂಗಚೇಷ್ಟೆಗೆ ಇಂಬು ದೊರಕಿತು. ಭಾರತೀಯರು ಇದನ್ನರಿತುಕೊಂಡು ಮುಂಜಾಗ್ರತೆ ವಹಿಸಬೇಕಾಗಿ ನಾವು ಸೂಚಿಸುವೆವು.

ಸ್ಫುಟ ಸೂಚನೆಗಳು.

೧. ಕಾಶೀ ಕ್ಷೇತ್ರದಲ್ಲಿ ಕಳೆದ ತಾ ೧೫ ನೇ ರವಿವಾರಕ್ಕೆ ಸೇರಿದ ಸಮಸ್ತ ಪಕ್ಷಗಳ ಲೋಕನಾಯಕರ ಸಮ್ಮೇಲನದ ವೃತ್ತಾಂತವು ಪ್ರಕಟವಾಗಿದೆ. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ| ಅನಸಾರಿಯವರು ಈ ಸಮ್ಮೇಲನದ ಸಭಾಪತಿಗಳಾಗಿದ್ದರು. ನೇಮಸ್ತ ಪಕ್ಷದವರೂ, ಬಿಯೋಂಟ ಅಮ್ಮನವರ ಪಕ್ಷದ ಹೋಮರೂಲ ಲೀಗದವರೂ, ಅಸ್ಪೃಶ್ಯರ ಪ್ರತಿನಿಧಿಗಳೂ ಈ ಸಮ್ಮೇಲನದಲ್ಲಿ ಸೇರಿದ್ದರು. ಸಮ್ಮೇಲನದಲ್ಲಿ ನಡೆದ ಚರ್ಚೆಯು ವಿಸ್ತಾರಪೂರ್ವಕ ತಿಳಿಯಲಿಲ್ಲ. ವರ್ತಮಾನಪತ್ರಗಳಿಗೆ ಸಮ್ಮೇಲನದಲ್ಲಿ ಇಂಬಿರಲಿಲ್ಲ. ಆದರೆ ಚರ್ಚೆಯು ಸಭ್ಯತೆಯಿಂದಲೂ ವಿವೇಕದಿಂದಲೂ ನಡೆದು, ಐಕ್ಯಮತ್ಯದಿಂದ ಬಹಿಷ್ಕಾರ ಉಪಾಯಗಳು ಕಲ್ಪಿಸಲ್ಪಟ್ಟವೆಂದು ಫ್ರೀ ಪ್ರೆಸ್ ವಾರ್ತಾವಾಹಕ ಸಂಘದವರು ಪ್ರಕಟಿಸುತ್ತಾರೆ. ಇದನ್ನು ಕೇಳಿ, ನಮ್ಮಂತೆ ದೇಶಾಭಿಮಾನಿ ವಾಚಕರಿಗೂ ಸಂತೋಷವಾಗುವದು. ಸೈಮನ್ ಕಮಿಟಿಯು ಫೆಬ್ರುವರಿ ೩ ನೇ ತಾರೀಖಿಗೆ ಮುಂಬಯಿ ಬಂದರದಲ್ಲಿ ಬಂದಿಳಿಯುತ್ತದೆ. ಆಗಮನದ ಪ್ರೀತ್ಯರ್ಥ ಅಖಿಲ ಭರತ ಖಂಡದಲ್ಲಿ ಅಂದು ಸಮಸ್ತ ಪ್ರಾಪಂಚಿಕ ವ್ಯವಹಾರವನ್ನು ನಿಲ್ಲಿಸಿ, ಹರತಾಳವನ್ನಾಚರಿಸತಕ್ಕದ್ದು. ೪॥ ಘಂಟೆಗೆ ಸಭೆ ಸೇರಿಸಿ, ಸೈಮನ್ ಕಮಿಟಿಯನ್ನು ನಿಷೇಧಿಸುವ ತೀರ್ಮಾನವನ್ನು ಕೈಕೊಳ್ಳತಕ್ಕದ್ದು. ಕಾಯದೆ ಕೌನ್ಸಿಲುಗಳಲ್ಲಿ ಪ್ರತಿನಿಧಿಗಳಿಗೆ ಬಹಿಷ್ಕಾರವನ್ನು ಪಾಲಿಸಲು ಆಜ್ಞೆ ಮಾಡತಕ್ಕದ್ದು. ನಮ್ಮ ಸ್ವರಾಜ್ಯ ಘಟನೆಯನ್ನು ತಯಾರಿಸುವ ಅಧಿಕಾರವು ನಮ್ಮದೇ ಎಂದು ಸ್ಪಷ್ಟವಾಗಿ ನಮೂದಿಸಿ, ಅದನ್ನು ತಯಾರಿಸಲು ಪ್ರಾಥಮಿಕ ಸಭೆಯನ್ನೊಂದು ಪುರಸ್ಕರಿಸಬೇಕು. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದವರೂ, ಇತರ ಸಂಘದ ಪ್ರತಿನಿಧಿಗಳೂ ಘಟನೆಯ ಮಸೂದೆಯನ್ನು ಫೆಬ್ರುವರಿ ೧೫ ನೇ ತಾರೀಖಿನೊಳಗೆ ತಯಾರಿಸಿಕೊಂಡು ಅದನ್ನು ಸಮಸ್ತ ಪಕ್ಷಗಳ ಪ್ರತಿನಿಧಿಕ ಸಭೆಯಲ್ಲಿ ಮಂಜೂರ ಮಾಡಿಕೊಳ್ಳತಕ್ಕದ್ದು. ನೇಮಸ್ತ ಪಕ್ಷದ ಸರ್ ತೇಜಬಹಾದ್ದೂರ ಸಪ್ರೂ, ಶ್ರೀ| ಚಿಂತಾಮಣಿಯವರಂಥ ವಿವೇಕಿಗಳೆನಿಸು ಖ್ಯಾತಿಗೊಂಡವರೂ ಕೂಡ ಶ್ರೀ ಕಾಶೀಕ್ಷೇತ್ರದಲ್ಲಿ ಸೇರಿದ ಪರಿಷತ್ತಿನಲ್ಲಿ ಹಾಜರಿದ್ದರೆಂದು ತಿಳಿದು, ಬ್ರಿಟಿಶ ದೇಶದಲ್ಲಿ ದೊಡ್ಡ ಕಲ್ಲೋಲವೆದ್ದಿದೆ. ಅನ್ಯಾಯಕ್ಕಾದರೂ ಸೀಮೆ ಇರುವದಲ್ಲವೇ? ಶ್ರೀ ಕಾಶೀಕ್ಷೇತ್ರದ ಅಧಿಪತಿಯಾದ ಶ್ರೀ ವಿಶ್ವನಾಥನು ನಮ್ಮ ಭಾರತೀಯರಿಗೆ ಸದ್ಬುದ್ಧಿಯನ್ನಿತ್ತು, ಅವರ ಕಡೆಯಿಂದ ಬಹಿಷ್ಕಾರವನ್ನು ಐಕ್ಯಮತ್ಯದಿಂದಲೂ, ದಕ್ಷತೆಯಿಂದಲೂ, ನಿರ್ದಾಕ್ಷಿಣ್ಯವಾಗಿಯೂ ಪಾಲಿಸಿಕೊಳ್ಳಲೆಂದು ನಾವು ಭಕ್ತಿಪೂರ್ವಕವಾಗಿ ಪ್ರಾರ್ಥಿಸುವೆವು

---

೨. ನಮ್ಮ ಪುಣೆಯ ನಾಮದಾರರ ರಘುನಾಥರಾವ ಪರಾಂಜಪೆಯವರ ನಡತೆಯನ್ನು ನೋಡಿ, ನಮಗೆ ವ್ಯಸನವಾಗಿದೆ. ನಾಮದಾರರು ವಿದ್ವಾಂಸರೆಂದೂ, ದೇಶಾಭಿಮಾನಿಗಳೆಂದೂ ನಾವೊಪ್ಪುವೆವು; ನಿಸ್ಪೃಹರೆಂದು ಹೇಳಲಿಕ್ಕೂ ನಮ್ಮ ತಯಾರಿಯಿತ್ತು. ಆದರೆ, ಮೊಂಟೆಗ್ಯೂ ಸ್ವರಾಜ್ಯದ ಉದಯವಾದಂದಿನಿಂದ ನಾಮದಾರರು ನಡಿಸಿದ ಜಿಗಿದಾಟವನ್ನು ನೋಡಿ, ನಮಗೆ ಬೇಸರವಾಯಿತು. ಆದರೂ, ಸ್ವಾಭಾವಿಕ ಮಾನವರಂತೆಯೂ, ನೇಮಸ್ತರ ಪರಂಪರೆಯಂತೆಯೂ ಅವರು ವರ್ತಿಸುತ್ತಿದ್ದರೆಂದು ಗ್ರಹಿಸಿ, ನಾವು ಸುಮ್ಮಗಿದ್ದೆವು. ಆದರೆ, ಸೈಮನ್ ಕಮಿಟಿ ವಿಷಯ ಇವರು ಕೈಕೊಂಡ ಧೋರಣವನ್ನು ನೋಡಿ, ನಮಗೆ ತೀರ ವ್ಯಸನವಾಗಿದೆ. ಪರಾಂಜಪೆಯವರು {ಸ್ವಾರ್ಥಕ್ಕೋಸ್ಕರ ದೊರೆಗಳೆಂಬ ಸೈಮನ್ ಕಮಿಟಿಯ ಒಬ್ಬ ಸಭಾಸದರಿಗೆ ಕೊಟ್ಟ ಔತಣ ಸಮಾರಂಭಕ್ಕೆ ಹೋಗಿದ್ದರು. ಔತಣವೇನೋ ರುಚಿರುಚಿಯಾಗಿರಬಹುದು, ಮಿಷ್ಟಾನ್ನ ಪಕ್ವಾನ್ನ ಭೋಜ್ಯಗಳು ಬೇಕಷ್ಟು ಸಿಗುವವು; ಆದರೆ, ಅವುಗಳಿಗೆ ಮೆಚ್ಚಿ ನಾಮದಾರ ಪರಾಂಜಪೆಯವರು ಔತಣಕ್ಕೆ ಅನುಗ್ರಹಿಸಿದರೆಂದು ನಾವು ಹೇಳಿದರೆ, ನಮಗೆಲ್ಲರೂ ದೂರುವರು, ಅವರೀಗ ಹಾಗೆ ನಾವು ಹೇಳಲಾರೆವು; ಹೇಳುವದೂ ಇಲ್ಲ. ಆದರೆ, ನಾಮದಾರರು ಅಲ್ಲಿ ಏಕೆ ಹೋದರು? ಹೇಗೆ ಹೋದರು? ಎಂಬುದು ನಮಗೆಷ್ಟು ವಿಚಾರಿಸಿದರೂ ಹೊಳೆಯದು. ನಾಮದಾರರು ನೇಮಸ್ತ ಪಕ್ಷದವರು, ನೇಮಸ್ತ ಪಕ್ಷದವರಂತೂ ಬಹಿಷ್ಕಾರದ ನಿರ್ಧಾರ ಮಾಡಿದ್ದಾರೆ. ಅದನ್ನು ನಾಮದಾರರು ಅರಿತ ವಿಷಯವೇ. ಇಂಡಿಯಾ ಆಫೀಸಿನಲ್ಲಿ ನಾಮದಾರರು ಭಾರತ ಮಂತ್ರಿಗಳ ಆಲೋಚನೆಯ ಮಂಡಳದಲ್ಲಿ ಸಭಾಸದರಾಗಿರುತ್ತ ಅವರಿಗೆ ಈ ವಿಷಯ ಒಂದು ಮಾತನ್ನೂ ಕೇಳಲಿಲ್ಲ. ಇಂಡಿಯಾ ಆಫೀಸಿಗೆ ಹೋದರೆ, ಹಿಂದುಸ್ಥಾನದ ರಾಜ್ಯಧೋರಣದಲ್ಲಿ ಅವಸ್ಥಾಂತರ ಉಂಟಾಗುವಾಗ ತಮ್ಮಂಥವರು ಅಲ್ಲಿದ್ದರೆ, ಲೋಕಕ್ಕೆ ಲಾಭವಿರುವದಾಗಿ ನಾಮದಾರರು ಲೋಕೋಪಕಾರಕ್ಕಾಗಿ ವಿಲಾಯತಿಗೆ ಹೋಗಿದ್ದರು. ಸೈಮನ್ ಕಮಿಟಿಯಂಥ ಮಹತ್ವದ ವಿಷಯದಲ್ಲಿಯೂ ಒಂದು ಮಾತನ್ನು ಸಹ ಭಾರತ ಮಂತ್ರಿಗಳು ಕೇಳದ ಬಳಿಕ, ಅಂಥ ಆಫೀಸಿನಲ್ಲಿ ನಾಮದಾರರು ಇದ್ದೇನು ಫಲವಾಯಿತು? ಸ್ವಾಭಿಮಾನವಿದ್ದಿದ್ದರೆ ನಾಮದಾರರು ಅಧಿಕಾರಕ್ಕಾಗಿ ಮಾಡಿ ಹಿಮ್ಮೆಟ್ಟಿ ಹೊರಟು ಬರಬೇಕಾಗಿತ್ತು. ಅದು ಅವರಿಗೆ ಶೋಭಿಸುತ್ತಿತ್ತು. ಅದನ್ನು ಬಿಟ್ಟು ಔತಣ ಸಮಾರಂಭಕ್ಕೆ ಅವರು ಹೋಗಿದ್ದರೆಂದು ಕೇಳಿ, ಭರತಪುತ್ರರಿಗೆಲ್ಲ ನಾಚಿಕೆ ಎನಿಸುತ್ತಿದೆ. ನಾಮದಾರರವರಂಥ ದೊಡ್ಡವರ ಯೋಗ್ಯತೆಯು ಈ ಪ್ರಕಾರ ಇರುವದರಿಂದಲೇ ಅಡಿಗಡಿಗೂ ಭರತಪುತ್ರರಿಗೆ ಅಪಮಾನವನ್ನು ಸಹಿಸಬೇಕಾಗುತ್ತದೆ. ಆದರಿಂದಲೇ ಮಹಾತ್ಮರೂ, ರಾಷ್ಟ್ರೀಯ ಸಭೆಯವರೂ ಸರಕಾರದಿಂದ ಘಟಿಸಲ್ಪಟ್ಟ ನಿರುಪಯೋಗಿ ಅಧಿಕಾರಸ್ಥಾನಗಳನ್ನು ಲೋಕೋಪಕಾರಕ್ಕಾಗಿ ಸ್ವೀಕರಿಸಬಾರದೆಂದು ಹೇಳುತ್ತಾರೆ. ಅಧಿಕಾರ ಪ್ರಾಪ್ತಿಯಾದೊಡನೆ ದೇಶಾಭಿಮಾನಕ್ಕೂ, ಸ್ವಾಭಿಮಾನಕ್ಕೂ ಮಾನವನು ಧಾರೆಯೆರೆಯಲು ಸಿದ್ಧನಾಗುತ್ತಾನೆ. ನಾಮದಾರರ ಈ ಅವಸ್ಥಾಂತರವನ್ನು ಕೇಳಿ, ಭರತಪುತ್ರರೆಲ್ಲರೂ ವ್ಯಸನಪಡುತ್ತಾರೆ.

---

೩. ಚಿಮಣಿ ಎಣ್ಣೆಯ ಕಂಪನಿಗಳೊಳಗೆ ಮೇಲಾಟ ಪ್ರಾರಂಭವಾಗಿದೆ. ಅಮೇರಿಕೆಯ ಸ್ಟಂಡರ್ಡ ಆಯಿಲ್ ಕಂಪನಿಯು ಕಡೆಗೆ; ಒಂದು ಪರ್ಶಿಯನ್ ಮುಂತಾದ ಉಳಿದ ಬ್ರಿಟಿಶ ಕಂಪನಿಗಳು ಒಂದು ಬದಿಗೆ; ಹೀಗೆ ಮೇಲಾಟ ನಡೆದಿದೆ. ಬೇರೆ ದೇಶದ ತನಕ ಈ ಮೇಲಾಟ ಹಬ್ಬಿದೆ. ಆಗಿಂದಾಗ ದರಗಳು ಕುಗ್ಗುತ್ತಿವೆ. ತಬ್ಬೆಯ ಮೇಲೆ ೧ ರೂಪಾಯಿಗೆ ಮಿಕ್ಕಿ ಈ ತನಕ ದರ ಕುಗ್ಗಿದೆ. ಬ್ರಿಟಿಶ ಕಂಪನಿಯವರು ಆ ಅಮೇರಿಕೆಯ ಸ್ಟಂಡರ್ಡ ಆಯಿಲ್ ಕಂಪನಿಯ ಮೇಲಾಟದಿಂದ ತಮ್ಮನ್ನು ಸಂರಕ್ಷಿಸಲು ಹಿಂದುಸ್ಥಾನ ಸರಕಾರದ ಬಳಿ ಪ್ರಾರ್ಥಿಸಿಕೊಂಡಿರುತ್ತಾರೆಂದು ಮುಂಬಯಿಯ ಪತ್ರಕ ವರ್ಗದಲ್ಲಿ ಸುದ್ದಿಯಿದೆ, ಹಿಂದುಸ್ಥಾನ ಸರಕಾರವು ಈ ಪ್ರಕರಣದಲ್ಲಿ ಬ್ರಿಟಿಶ ಕಂಪನಿಗಳ ಪಾಲಕರಾಗಲು ಕಾರಣವೇನಿಲ್ಲ. ಹಿಂದುಸ್ಥಾನದ ಮಟ್ಟಿಗೆ ಇಬ್ಬರೂ ಪರಕೀಯರೇ. ಸ್ಟಂಡರ್ಡ ಆಯಿಲ್ ಕಂಪನಿಯವರು ಮುಣುಗಿದರೂ ಹಿಂದುಸ್ಥಾನಕ್ಕೆ ಬಾಧೆಯಿಲ್ಲ; ಬ್ರಿಟಿಶ ಕಂಪನಿಗಳು ದಿವಾಳಿ ತೆಗೆದರೂ ಹಿಂದುಸ್ಥಾನಕ್ಕೆ ಲಾಸು ನಷ್ಟವಿಲ್ಲ. ಮೇಲಾಗಿ ಕೇಳಿದರೆ, ಮೇಲಾಟದಿಂದ ಹಿಂದುಸ್ಥಾನಕ್ಕೆ ಲಾಭವಿದೆ. ಚಿಮಣಿ ಎಣ್ಣೆಯನ್ನು ಬಡಬಗ್ಗರು ಕೂಡ ಉಪಯೋಗಿಸುತ್ತಾರೆ, ಎಲ್ಲ ಕಂಪನಿಗಳು ಒಟ್ಟಾಗಿ ದರ ಏರಿಸಿಕೊಂಡು ನಮ್ಮಲ್ಲಿಯ ಬಡವರನ್ನು ಸುಲಿದು ಕೋಟ್ಯಾಧೀಶರಾದರು. ಕಂಪನಿಗಳ ಶೇರುದಾರರಿಗೆ ೧೦೦ ಕ್ಕೆ ೧೦೦ ರಂತೆ ಲಾಭ ದೊರಕಿತು. ಮೇಲಾಟವು ಹೀಗೆಯೇ ಸಾಗಿ ಚಿಮಣಿ ಎಣ್ಣೆಯು ಅಗ್ಗವಾದರೆ, ಹಿಂದುಸ್ಥಾನದ ಬಡ ಪ್ರಜೆಗಳಿಗೆ ನಾಲ್ಕು ಕೋಟಿ ರೂಪಾಯಿಗಳ ತನಕ ಉಳಿತಾಯವಾಗುವದೆಂದು ತಿಳಿಯುತ್ತದೆ. ಹೀಗೆ ಸ್ವಂತ ಪ್ರಜೆಗಳಿಗೆ ಪರಸ್ಪರ ಲಾಭವಾಗುವ ಸಂದರ್ಭದಲ್ಲಿ ಹಿಂದುಸ್ಥಾನ ಸರಕಾರವು ಬ್ರಿಟಿಶ ಕಂಪನಿಗಳ ಪರವಾಗಿ ನಿರ್ಬಂಧಗಳನ್ನೇರ್ಪಡಿಸಿ, ಚಿಮಣಿ ಎಣ್ಣೆಯನ್ನು ತುಟ್ಟಿ ಮಾಡತಲಿಕ್ಕಿಲ್ಲವಾಗಿ ಪ್ರಜೆಗಳದೊಂದು ನಂಬಿಗೆ.

---

೪. ಬ್ರಿಟಿಶರು ಯಾವಾಗಲೂ ಧೂರ್ತರು. ಪರಾರ್ಥದ ವೇಷ ಹಾಕಿ ಸ್ವಾರ್ಥ ಸಾಧಿಸುವದರಲ್ಲಂತು ಅವರ ಕೈಹಿಡಿಯುವವರು ಬೇರೊಬ್ಬರಿಲ್ಲ. ರಶಿಯಾ ದೇಶವೆಂದರೆ, ಈಗಿನ ದೊಡ್ಡದೊಂದು ಭೂತವು. ಅದನ್ನು ಮುಂದೆ ಮಾಡಿ ಯಾರೂ

ಲೋಕೋಪಕಾರಿಗಳೆಂದು ಜಗತ್ತಿನಲ್ಲಿ ಖ್ಯಾತಿ ಪಡೆಯಬಹುದು. ಸ್ಟೆಂಡರ್ಡ ಅಯಿಲ್ ಕಂಪನಿಯವರು ರಶಿಯಾ ದೇಶದಿಂದ ಚಿಮಣಿ ಎಣ್ಣೆ ತರುತ್ತಾರೆ. ಆದರಿಂದ ಅದು ರಶಿಯಾ ದೇಶದ ತರ್ಫೇನದಾಯಿತು. ಅದಕ್ಕೆ ಬ್ರಿಟಿಶ ದೇಶವು ಒಕ್ಕಟ್ಟಾಗಿ ಸೋಲಿಸಬೇಕು, ಎಂಬಿದೊಂದು ಹೂಲಿಯನ್ನು ಎಬ್ಬಿಸಿ, ಹಿಂದುಸ್ಥಾನ ಸರಕಾರದ ಸಂರಕ್ಷಣೆ ಬೇಡುವ ಹಂಚಿಕೆ ನಡೆಯಿತೆ! ಸ್ಟೆಂಡರ್ಡ ಅಯಿಲ್ ಕಂಪನಿಯವರು ಬ್ರಿಟಿಶ ಕಂಪನಿಗಳಿಗೆ ಕನ್ನಡಿ ತೋರಿಸಿದರು. ಕಂಪನಿಗಳ ಚಿಮಣಿ ಎಣ್ಣೆಯು ಆಮದಿನ ಮೇಲಿಂದ ಅವರು ತರುವದಾದರೂ ರಶಿಯಾ ದೇಶದ ಎಣ್ಣೆಯೇ ಎಂದು ಸ್ಟೆಂಡರ್ಡ ಅಯಿಲ್ ಕಂಪನಿಯವರು ಸಿದ್ಧಪಡಿಸಿದ್ದರೆ! ರಕ್ಷಿತವನ್ನು ರಕ್ಷಕರ ಕಡೆಯಿಂದ ಅಡಗಿಸಿಡಲಿಕ್ಕಾಗುತ್ತದೇನು? ಅದೇನೂ ಇರಲಿ ನಮಗೆ ಬೇಕಾದದ್ದು ಅಗ್ಗವಾದ ಚಿಮಣಿ ಎಣ್ಣೆ! ರಶಿಯಾ ದೇಶದಿಂದ ಬರಲಿ, ವಿಲಾಯತಿಯಿಂದ ಬರಲಿ!! ಬ್ರಿಟಿಶರಿಗೂ, ರಶಿಯಾ ದೇಶಕ್ಕೂ ಕಲಹಗಳಿದ್ದರೆ, ಅವರವರೇ ನೋಡಿಕೊಳ್ಳುವರು!!! ಬಡ ಭಾರತೀಯರು ಅದರೊಳಗೆ ಸೇರಿಕೊಳ್ಳುವದೇತಕ್ಕೆ? ಬಡ ವಿರಾಟನಿಗೆ ದ್ರೋಣ ಸಮರದ ಗೊಡವೆ ಏಕೆ?

ಮುಂದಿನ ಸೋಮವಾರ
'ವೃತ್ತ'ಕ್ಕೆ ರಜೆ!

ರವಿವಾರ ತಾರೀಖು ೨೯ ನೇಗೆ ರಥಸಪ್ತಮಿ. ನಮ್ಮ ಕುಮಟೆಯಲ್ಲಿ ರಥೋತ್ಸವ ಆದರಿಂದ ನಮ್ಮ ಮುದ್ರಣಾಲಯಕ್ಕೆ ರಜೆ, 'ವೃತ್ತ'ಕ್ಕೆ ರಜೆ. ಮುಂದಿನ 'ವೃತ್ತ'ದ ಸಂಚಿಕೆಯು ಸೋಮವಾರ ತಾರೀಖು ~~೫~~--೨--೩೮ ನೇಗೆ ಹೊರಡುವದು.

ಇತಿ, ಮೆನೇಜರ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ಸಾಮಾನ್ಯ ಧಾರೇಶ್ವರ—ಹೆಗಡೆ ರಥೋತ್ಸವಗಳು ಸಾಂಗವಾಗಿ ನೆರವೇರಿದವು. ಧಾರೇಶ್ವರ ರಥೋತ್ಸವದ ಸಮಯ ಶಾಂತತೆಯನ್ನು ಭಂಗಪಡಿಸಿದಂತೆ ರಾ॥ ಶ್ರೀಧರ ಕೃಷ್ಣ ಭಟ್ಟ ಮುಂತಾದವರ ಮೇಲೆ ಶ್ರಿ. ಶ್ರೀ ಕಲಮು ೧೪೪ ರನ್ವಯ ಹುಕುಮುಗಳು ಹೊರಡಿಸಲಾದವು. ಪ್ರಸಾದ ಕಡಿ ಹಂಚುವಾಗ ಶಾಂತತೆ ಭಂಗವಾಗುತ್ತದಾಗಿ ಪೋಲೀಸರು ರಿಪೋರ್ಟ ಮಾಡಿದ್ದರು.

ಶುಕ್ರವಾರ ಶ್ರೀಪರಾನ್ನ ಟಪಾಲ ಮೋಟಾರು ಕಾರವಾರ ಕಡೆ ಹೋಗುತ್ತಿರುವಾಗ ಮುಂಚಿನ ಗಾಲಿಯ ಬಳಿ ಬಸ್ಸಿನಿಗೆ ತಾಗಿ ಗಾಯವಾಯಿತು. ಮೋಟಾರಿನವನು ಅವನಿಗೆ ಮೋಟಾರಿನಲ್ಲಿ ಹಾಕಿಕೊಂಡು ಗೋಕರ್ಣ ಆಸ್ಪತ್ರಿಗೆ ಒಯ್ದು ಔಷಧೋಪಚಾರ ನಡಿಸಿದನು. ಅಲ್ಲಿಯ ದವಾಖಾನೆಯಲ್ಲಿ ಯಾಕೆ ಒಯ್ಯಲಿಲ್ಲ? ಪೋಲೀಸರ ಚೌಕಶಿ ನಡೆದಿದೆ.

ಸಾತಾರೆಯ ಕಿರ್ಲೋಸ್ಕರ ಕಾರಖಾನೆಯ ಪ್ರತಿನಿಧಿಗಳಾದ ಶ್ರೀ ಲ. ಕೃ. ಬಾಗಲರವರು ನಿಮಿತ್ತ ಕಡೆ ಸಂಚರಿಸಿ ಹೋದರು. ಕಿರ್ಲೋಸ್ಕರ ಕಂಪನಿಯಲ್ಲಿ ತರತರದ ರೆಂಟೆಗಳೂ, ಕಬ್ಬಿನ ಗಾಣಗಳೂ, ಆಲಿಗಳೂ ತಯಾರಾಗುತ್ತಿವೆ. ಈ ಕಂಪನಿಯ ಸಾಮಗ್ರಿಗಳು ಬಹು ಬಾಳಿಕೆಯವು ಇದನ್ನು ತಿಳಿಯದೆ, ರೈತರು ಪರದೇಶದ ಗಾಣಗಳನ್ನೂ, ರೆಂಟೆಗಳನ್ನೂ ಉಪಯೋಗಿಸುವದು ದೇಶಕ್ಕೆ ಕ್ಷೇಮವಲ್ಲ. ಬೇಸಾಯದ ಅಧಿಕಾರಿಗಳೂ ಸಹ ಈ ಕಂಪನಿಯ ಸಾಮಗ್ರಿಗಳ ಕುರಿತು ಪ್ರಶಂಸೆಯನ್ನು ಪ್ರದರ್ಶಿಸಿದ್ದಾರೆ. ನೀರು ಎತ್ತುವ ರಾಟಿಗಳೂ ಈ ಕಂಪನಿಯಲ್ಲಿ ತಯಾರಾಗುತ್ತಿವೆ. ಅನೇಕ ತರದ ಕಬ್ಬಿಣದ ಸಾಮಾನುಗಳೂ ಇಲ್ಲಿ ತಯಾರಾಗುತ್ತಿವೆ. ಕಾರಣ, ಈ ಕಂಪನಿಯಲ್ಲಿ ಮೊಟ್ಟಮೊದಲು ವಿಚಾರಿಸಿ, ಅಲ್ಲಿ ಸಿಗದಿದ್ದಲ್ಲಿ ಮಾತ್ರ ಪರದೇಶದ ಸಾಮಾನುಗಳನ್ನು ಕೊಳ್ಳಬೇಕು. ಇತ್ಯಾದಿ ಬುದ್ಧಿ ಸ್ವದೇಶಭಕ್ತರು ಬರೆಯುತ್ತಾರೆ.

ಕಳೆದ ತಾ ೧೬ ನೇಗೆ ಮ್ಯುನಿಸಿಪಾಲಿಟಿ ಸಭೆಯಲ್ಲಿ ಝಾಡಮಾಲಿಗಳ ಮೇಲೂ, ನಾಮಧಾರಿ ಜಾತಿಯ ನಾಗಪ್ಪ ನಾಯ್ಕನ ಮೇಲೂ ನಡಿಸಿದ ಫಿರ್ಯಾದಿಗಳ ವಕೀಲರ ಬಿಲುಗಳು ಸರ್ವಾನುಮತಿಯಿಂದ ಮಂಜೂರಾದವು. ಝಾಡಮಾಲಿಯ ಫಿರ್ಯಾದಿಯಲ್ಲಿ ರೂಪಾಯಿ ೨೫ ನಾಗಪ್ಪನಾಯ್ಕನ ಫಿರ್ಯಾದಿಯಲ್ಲಿ ರೂಪಾಯಿ ೭೫ ಹೀಗೆ ೧೦೦ ರೂಪಾಯಿ ಮಂಜೂರಾಗಿವೆ ಈ ಬಿಲುಗಳಿಗೆ ವಿರೋಧಕರು ಹ್ಯಾಗೆ ಸಮ್ಮತಿ ಕೊಟ್ಟರು?

ಹೊನ್ನಾವರ— ಚಳಿ ಚಲೋ ಬೀಳುತ್ತಿದೆ ರೋಗರಾಯಿಯ ದರ್ಶಿ ... ಕೇಳಬರುವದಿಲ್ಲ. ಜಿಲ್ಹಾಧಿಪತಿಗಳ ಮುಕ್ಕಾಂ ಇಲ್ಲಿ ಉಂಟು! ಸರ್ಕಸ್ ಕಂಪನಿಯ ಪ್ರಯೋಗಗಳಾದವು. ಕೊನೆಯ ಕಸರತ್ತು ಪ್ರೇಕ್ಷಣೀಯವಿವೆ. ಹೆಣ್ಣು ಮಗುವಿನ ಕಸರತ್ತನ್ನು ನೋಡಿದರೆ, ಆಶ್ಚರ್ಯವಾಗುತ್ತದೆ.

ಮ್ಯುನಿಸಿಪಾಲಿಟಿಯ ಇಲೆಕ್ಷನು ಇದೇ ಬರುವ ಫೆಬ್ರುವರಿ ೧ ನೇ ತಾರೀಖಿಗೆ ಉಮೇದ್ವಾರರ ಗಡಿಬಿಡಿ, ಮತದಾರರ ಗೊಂದಲ ಮತಗಳನ್ನು ಹಂಚಿಹಾಕುವ ಬಗೆ ತೋರದೆ, ಮತದಾರರು ಚಿಂತಿಸುತ್ತಿದ್ದಾರೆ. ೧೫ ಆಸನಗಳಿಗೆ ೩೫ ಮಂದಿಗಳು ಸ್ಪರ್ಧಿಸುತ್ತಿದ್ದಾರೆ. ಯೋಗ್ಯರೇ ಆರಿಸಿ ಬರಬೇಕೆಂದು ನಮ್ಮ ಅಪೇಕ್ಷೆ.

ಇಲ್ಲಿಯ ಟಿಪ್ಪರ ಸಭಾ ಮಂದಿರದಲ್ಲಿ ಶ್ರೀ॥ ಶ್ರೀನಿವಾಸರಾವ ಮಂಗಳವೇಡೆಯವರು "ಕರ್ನಾಟಕ ಏಕೀಕರಣದ ಕುರಿತು ಉಪನ್ಯಾಸವಿತ್ತರು. ಶ್ರೀ॥ ಮಂಜನಾಥ ಭಟ್ಟ ಕರ್ಕಿಯವರು ಅಧ್ಯಕ್ಷರಾಗಿದ್ದರು. ಭಾಷಣದ ಕಲ್ಪನೆಯು ಸಭಿಕರಿಗೆ ಸಮ್ಮತವಾಗಿದೆ ಇಲ್ಲಿಂದ ಏಕೀಕರಣ ಪರಿಷತ್ತಿಗೆ ಹೆಚ್ಚಿನ ಜನರು ಹೋಗುವರಾಗಿ ಅಂದಾಜಿದೆ.

ಈ ತಾಲೂಕಿನ ಹಳ್ಳಿಗಳಲ್ಲಿ ಕಾಗ ಬೆಳೆಯು ಒಂದುತರವಾಗಿ ಕೀಟ ಹಾಯುತ್ತ ಗೆಲುಗಳು ಸಸಿಗಳನ್ನು ತಿಂದು ನಾಶಮಾಡಿಬಿಟ್ಟವು. ತೀರ್ಥ ಸಹ ಹುಟ್ಟುವದು ಕರಿಣಿ ಹಳ್ಳೂರ, ಹಲನಳ್ಳಿ, ಕಕ್ಕ, ತಬಗೋಡ ಹಿನ್ನೂರ ಕುದ್ರಿಗೆ, ಹೇರಂಗಡಿ ಮುಂತಾದ ಹಳ್ಳಿಗಳಲ್ಲಿ ಅರ್ಧಕ್ಕೆ ಮಿಕ್ಕಿದ ಕ್ಷೇತ್ರದೊಳಗಿನ ಸಸಿಗಳು ನಾಶವಾದವು. ಬೇಸಾಯ ಖಾತೆಯವರು ಅಲ್ಲಿ ಹೋಗಿ ಪ್ರತಿಬಂಧಕ ಉಪಾಯಗಳೇನಾದರೂ ಯೋಚಿಸಬೇಕು.

ಹಳದೀಪುರ ಗ್ರಾಮದ ಶ್ರೀ ವಿಷ್ಣು ದೇವಸ್ಥಾನದಲ್ಲಿ ಶನಿವಾರ ಸಪ್ತಪ್ರಹರೋತ್ಸವವಾಯಿತು.

ಭಟಕಳ— ವೇ॥ ಬ್ರಿ॥ ಭಟ್ಟರವರು ಬರೆಯುವದೇನೆಂದರೆ—ಇದೇ ಬರುವ ಮಾಘ ಶುದ್ಧ ೭ಮಿಗೆ ಅಶ್ವಿನಿ ನಕ್ಷತ್ರವಿದೆ. ಸೂರ್ಯ ಮಾತ್ರ ಅನಂತ ಎಂಬ ಎರಡು ಶುಭ ಯೋಗಗಳಿವೆ. ಬೆಳಗಿನ ೧೦ ಘಂಟೆಯ ಮುಹೂರ್ತದಲ್ಲಿ ಮೀನಲಗ್ನವಿದ್ದು ಗುರುವು ಸತ್ಕ್ಷೇತ್ರನಾಗುತ್ತಾನೆ ಹಗಲಿಗೆ ರವಿಯು ಏಕಾದಶದಲ್ಲಿ ಇರುತ್ತಾನೆ ಆದರಿಂದ ಈ ಸಮಯ ರಥೋತ್ಸವವನ್ನು ಜರುಗಿಸಿದರೆ ಶ್ರೀದೇವರ ಅನುಗ್ರಹವು ವಿಶೇಷವಿದೆ. ಶುಭ ಮುಹೂರ್ತವನ್ನು ಕಳಕೊಳ್ಳಬಾರದು ಇತ್ಯಾದಿ.

ಅಂಕೋಲಾ— ಜ್ವರದ ಹಾವಳಿ ಹೇಳಲಾಸಲ್ಲ ಜನರೆಲ್ಲರೂ ಗಾಬರಿಯಾಗಿದ್ದಾರೆ. ಹವಾಮಾನದಲ್ಲಿ ಹೆಚ್ಚಿನ ಸ್ಥಿತ್ಯಂತರವೇನೂ ಕಾಣಬರುವದಿಲ್ಲ. ಅತಿಥಿ ಸತ್ಕಾರದಿಂದ ಹೆಸರಾದ ಇಲ್ಲಿಯ ರಾ॥ ಮಂಜಯ್ಯ ಪ್ರಭುಗಳ ಮನೆಯ ರಾ॥ ಅನಂತ ಪ್ರಭುಗಳು ಗುರುವಾರಕ್ಕೆ ಕ್ಷಯರೋಗಬಾಧೆಯಿಂದ ವೈಕುಂಠವಾಸಿಗಳಾದರು. ೨೩ ವರ್ಷ ಪ್ರಾಯದ ಹರೆಯದವರು ಅತಿಥಿಸತ್ಕಾರ ಮಾಡಿ ಜನರ ಕಡೆಯಿಂದ ಹರಸಿಕೊಂಡ ಮನೆತನದ ಮೇಲೆ ದೊಡ್ಡ ಆಪತ್ತು. ವಿಧಿಘಟನೆ!

ಕಾರವಾರ— ಈ ವಾರದಲ್ಲಿ ಪ್ಲೇಗಿನಿಂದ ಯಾರೂ ಅಸ್ವಸ್ಥರಾಗಲಿಲ್ಲ, ಮಡಿದದ್ದೂ ಇಲ್ಲ. ಮುಂಬಯಿ 'ಟೈಮ್ಸ' ಪತ್ರಿಕೆಯಲ್ಲಿ ೧೫ ಜನರು ಸತ್ತರು, ೧೯ ಮಂದಿಗಳು ಪ್ಲೇಗಿನಿಂದ ಬೇನೆ ಬಿದ್ದಿದ್ದರೆಂಬ ಸುದ್ದಿಯು ನಿರಾಧಾರವಿದೆ. ಮುನಿಸಿಪಾಲಿಟಿಯವರೂ, ಜನರೂ ಮುಂಜಾಗ್ರತೆಯ ಯೋಜನೆಯನ್ನು ಕೈಕೊಂಡಿದ್ದಾರೆ. ಕಾಲುವೆಗಳಲ್ಲಿಯ ಹೊಲಸು ಸ್ವಚ್ಛಮಾಡಲ್ಪಟ್ಟಿದೆ. ಮುನಿಸಿಪಾಲಿಟಿಯ ಚೀಫ ಆಫೀಸರರೂ, ಶ್ರೀ॥ ಮುಜುಮದಾರರೂ ಸ್ವಚ್ಛತೆಯನ್ನು ಕಾಯ್ದಿಡಲು ಜನರಿಗೆ ಬೋಧಿಸುತ್ತಾರೆ. ಪೇಟೆಯಲ್ಲಿ ಜನರು ಬದ್ದಲು ಸಂಗ್ರಹಿಸುವ ಉಗ್ರಾಣಗಳಲ್ಲಿ ವಾಸಿಸುತ್ತಾರೆ. ಇದು ಸರಿಯಲ್ಲ ಮನೆ ಕಟ್ಟಿಕೊಳ್ಳಲಿಕ್ಕೆ ಯೋಗ್ಯ ಸ್ಥಳ ದೊರೆಯದ್ದರಿಂದ ಜನರು ಹೀಗೆ ಅಪಚಾರವನ್ನನುಭವಿಸಬೇಕಾಗುತ್ತದೆ. ಗಾಳಿಮಂದಿರ ತೋಟದಲ್ಲಿ ಜನರಿಗೆ ಮನೆ ಕಟ್ಟಿಕೊಳ್ಳಲು ಸ್ಥಳವಾಡಿ ಕೊಡಬೇಕು. ಅಥವಾ ಭಟ್ಟಿಯ ಸಮೀಪ ಸ್ಥಳವಿದೆ. ಅಲ್ಲಿಯಾದರೂ ಸಂಕಾರವು ಮನೆಕಟ್ಟಿಕೊಳ್ಳಲು ಜಾಗಮಾಡಿ ಕೊಡಬೇಕು ಜಂಗಲ ಖಾತೆಯವರು ಗಾಳಿಮರಗಳನ್ನು ಕೊಯ್ದಿದ್ದಾರೆ ಅಲ್ಲಿ ಹೊಸ ಸಸಿಗಳನ್ನು ನೆಡುವ ತಯಾರಿ ನಡೆದಿದೆ. ಪಟ್ಟಣದ ಬಳಿ ಕಾದಿಟ್ಟ ಜಂಗಲು ಮಾಡುವದು ಸರಕಾರೀ ರೀತಿಗೆ ವಿರೋಧವಾದದ್ದು. ಅದರಿಂದ ಅಲ್ಲಿಯ ಗಾಳಿಮರಗಳನ್ನೆಲ್ಲ ಕೊಯ್ದು ಜನರಿಗೆ ಉಳಿಯಗೊಡಬೇಕು. ಆರೋಗ್ಯ ಖಾತೆಯ ಅಸಿಸ್ಟಂಟ ಡಾಯರೆಕ್ಟರರು ಇಲ್ಲಿ ಬಂದಿದ್ದಾರೆ. ಎರಡು ಇಲಿಗಳನ್ನು ತಪಾಸ ಮಾಡಿ ಅವು ಪ್ಲೇಗ ಇಲಿಗಳೆಂದು ಅಭಿಪ್ರಾಯಪಟ್ಟಿದ್ದಾರೆ ನೆಟ್ಟ ಮಿತ್ರಸಮಾಜದಲ್ಲಿ ಅವರದೊಂದು ಉಪನ್ಯಾಸವಾಯಿತು.

ಪ್ರಿಂಸಿ ಸಾಹೇಬರಾದ ರಾ॥ ವಿವೇಕರರು ಗುಣಹೊಂದುತ್ತಲಿದ್ದಾರೆ.

ಮುನಿಸಿಪಾಲಿಟಿಯವರು "ಮೋಟಾರ ಬಸ್ಸುಗಳ ಮಾರ್ಗಗಳ ಮೇಲಾದರೂ, ನೀರು ಹಾಕುವ ವಿರ್ಯಾಟಮಾಡಬೇಕಾಗಿ ಮತದಾರರೊಬ್ಬರ ವಿನಂತಿ.

ಶಿರಸಿ— ಪ್ಲೇಗರಾಜನು ಊರಲ್ಲಿ ಮಕಾಂ ಮಾಡಿದ್ದರ ಉದ್ದೇಶ ನಾಗರಿಕರಲ್ಲಿ ಕಾಡುಗಳನ್ನು ಸೇರಲು ಕಾಲಿಗಳ ತಾತ್ಪೂರ್ತಿಕ ವಸಾಹತನ್ನು ಬಾಡಿಕೊಳ್ಳಬೇಕಾಗುತ್ತದೆ ಅಂಥವರು ಆಜನ್ಮ ವನವಾಸಿಗಳ ವಾಸಮಾಡುವ ಬುಡಬುಗ್ಗರ ಸ್ಥಿತಿಯನ್ನು ನೆನಿಸಿ, ತಮ್ಮ ಕಷ್ಟವನ್ನು ಮರೆಯುವರು ಉತ್ತಮ ಕೆಲವರು ಹೊರಗೆ ಬಂಗ್ಲೆಗಳನ್ನು ಕಟ್ಟಿಟ್ಟಿರುವರು

ಹುಡುಗರು—ಮಕ್ಕಳನ್ನು ಜನರು ಹೆಚ್ಚಾಗಿ ಪರಊರುಗಳಿಗೆ ರವಾನೆ ಮಾಡುತ್ತಿದ್ದಾರೆ!

— ಕರ್ನಾಟಕ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ರಾ॥ ರಾ॥ ಶ್ರೀ ಹುಕ್ಕೇರಿಕರರವರು 'ನಾಗರಿಕರ ಕೃತಿ' ಎಂಬ ಗ್ರಂಥವನ್ನು ಬರೆಯುವವರಿಗೆ ೧೦೦ ರೂಪಾಯಿಗಳ ಬಹುಮಾನವನ್ನು ಕೊಡುವರು ನಾಗರಿಕರಿಗೆ ಹಕ್ಕು—ಬಾಧ್ಯತೆಗಳೆಲ್ಲ ತಿಳಿಗನ್ನಡದಲ್ಲಿ ಬರೆಯಬೇಕು. ಮೂರು ತಿಂಗಳೊಳಗೆ ಗ್ರಂಥ ಬರೆದು ಕಳುಹಬೇಕು ಫೆಬ್ರುವರಿ ೧೫ ರೊಳಗೆ ೨ ರೂಪಾಯಿ ಫೀಯನ್ನು ನಿವೇದಿಸಿ, ತಮ್ಮ ಹೆಸರನ್ನು ನೋಂದಿಸಬೇಕು.

ವೃತ್ತಸಾರ.

— ಗಲಗಲಿಯಲ್ಲಿ ಶ್ರೀ ಹುಬ್ಬಳ್ಳಿಯವರು ಗೀತಾಶ್ರಮವನ್ನು ಸ್ಥಾಪಿಸಿದ್ದಾರೆ. ಶ್ರೀ ಮದ್ಭಗವದ್ಗೀತೆಯು ಇಲ್ಲಿ ಕಲಿಸಲ್ಪಡುವದು.

— ಹುಬ್ಬಳ್ಳಿಯ ಸ್ವಾಮೀ ವಿಶ್ವೇಶ್ವರ ಸರಸ್ವತಿಯವರು ನಮಸ್ಕಾರಪ್ರಿಯರು. ಅವರು ಕರ್ನಾಟಕದಲ್ಲೆಲ್ಲ ತಿರುಗಿ ನಮಸ್ಕಾರವನ್ನು ಪ್ರಚಾರಗೊಳಿಸಿದರು. ಬಡೋದೆ-ಕಾಠೇವಾಡ ಪ್ರಾಂತಗಳಲ್ಲಿ ಆತ್ಮಾಭಿವೃದ್ಧಿಮಾಡಕ್ಕೆ ಹೋಗಿ ಬಂದಿರುವರು. ಅಲ್ಲಿಂದ ಇವರು ನೇಪಾಳಕ್ಕೆ ಪಶುಪತಿನಾಥನ ಯಾತ್ರೆಗೆ ತೆರಳುವವರಿದ್ದಾರೆ.

— ಮುಂಬಯಿ ಪ್ರಾಂತದ ಸ್ಥಾನಿಕ ಸ್ವರಾಜ್ಯದ ಸಂಸ್ಥೆಗಳ ಆಡಳಿತೆಯನ್ನು ಪರಾಂಬರಿಸಿ, ಸರಕಾರವು ಒಂದು ರಿಪೋರ್ಟನ್ನು ಪ್ರಕಟಿಸಿದೆ. ಮುನಿಸಿಪಾಲಿಟಿ, ಲೋಕಲ್ಬೋರ್ಡುಗಳು ತೆರಿಗೆದಾರರ ಹಿತವನ್ನು ಲಕ್ಷಿಸದೆ ಅಕ್ರಮಗಳನ್ನಾಚರಿಸಿದರೆಂದು ಆಡಳಿತೆಯನ್ನು ಪರೀಕ್ಷಿಸಿದ ಅಧಿಕಾರಿಗಳ ಅಭಿಪ್ರಾಯವಾಗಿದೆ. ಮುನಿಸಿಪಾಲಿಟಿಯ ಸಭಾಸದರೊಬ್ಬರು ಮುನಿಸಿಪಾಲಿಟಿಯ ಹೊಲಗಸನ್ನು ತಮ್ಮ ಭೂಮಿಯಲ್ಲಿ ತುಂಬಿಕೊಂಡು ವಂಚನೆ ಮಾಡಿದರು. ಹೀಗೆ ವಂಚನೆ ಮಾಡುವ ಅಭ್ಯಾಸವು ಆ ಸಭಾಸದರಿಗಿತ್ತು. ಆದರಿಂದ ಮುನಿಸಿಪಾಲಿಟಿಯವರು ವಿಚಾರ ಮಾಡಿ ಅವರಿಗೆ ಪದಭ್ರಷ್ಟ ಮಾಡಬೇಕಾಗಿ ತೀರ್ಮಾನಿಸಿದರು. ಮುಂದೇನಾಯಿತೋ ಏನೋ! ಆ ಠರಾವು ರದ್ದಾಗಿ ಇಂಥ ದುಷ್ಕೃತ್ಯಕಾರರು ಗಂಟು ಕಟ್ಟಿಕೊಂಡಿಯಿತು. ಇಂಥ್ಯಾ ಅನೇಕ ಅಕ್ರಮಗಳು ನಿರ್ದೇಶಿಸಲ್ಪಟ್ಟಿವೆ. ಇವೆಲ್ಲವನ್ನು, ಕಲೆಕ್ಟರರೂ ತಮ್ಮ ಅಧಿಕಾರಕಕ್ಷೆಯೊಳಗಿನ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮೇಲೆ ಕಾವಲಿಡಬೇಕಾಗಿ ಸರಕಾರವು ವಿಧಿಸಿದೆ.

— ಮಾಸೂರ ಗ್ರಾಮದ ಬ್ರಹ್ಮಚರ್ಯಾಶ್ರಮದ ಮಹತ್ವವು ಈಗ ಧಾರವಾಡದಲ್ಲಿರುತ್ತದೆ. ಶ್ರೀ|| ವಿನಾಯಕ ಮಹಾರಾಜರ ಭಗವದ್ಗೀತೆಯ ಮೇಲಿನ ಪ್ರವಚನಗಳು ಪ್ರತ್ಯಹ ಇಂಗ್ಲಿಷ ಶಾಲೆಯ ಪಟಾಂಗಣದಲ್ಲಿ ನಡೆಯುತ್ತಿವೆ. ಒಂದು ಒಂದೂವರೆ ಸಾವಿರ ಸ್ತ್ರೀ-ಪುರುಷರು ಪ್ರವಚನಗಳನ್ನು ಕೇಳಲು ಸೇರುತ್ತಾರೆ. ದಿನಾ ೧೨೦೦ ನಮಸ್ಕಾರ ಹಾಕುವ ೫-೬ ಜನ ಸ್ತ್ರೀಯರು ಮಹಾರಾಷ್ಟ್ರದಲ್ಲಿರುತ್ತಾರಾಗಿ ಬ್ರಹ್ಮಚರ್ಯಾಶ್ರಮದ ಲೆಕ್ಕದ ಮೇಲಿಂದ ತಿಳಿಯುತ್ತದೆ. ೧೨೦೦ ನಮಸ್ಕಾರ ಹಾಕುವ ನ್ಯೈದು ಸಾವಿರ ಹೆಣ್ಣು ಮಕ್ಕಳಿದ್ದಾರೆ. ನಾಲ್ಕೈದು ನೂರು ನಮಸ್ಕಾರ ಹಾಕುವ ಸುಮಾರು ೩೦ ಸ್ತ್ರೀಯರಿದ್ದಾರೆ.

— ಮೈಸೂರ ಸರಕಾರವು ಪ್ರಾಥಮಿಕ ಶಿಕ್ಷಣವನ್ನು ಸಂಸ್ಥಾನದಲ್ಲಿ ಎಲ್ಲರಿಗೂ ಒತ್ತಾಯದಿಂದ ಕಲಿಸುವದು. ಗ್ರಾಮದವರು ಶಿಕ್ಷಣಾಲಯದ ಮೂರನೇ ಒಂದು ಪಾಲು ಖರ್ಚು ತೆರಬೇಕು; ಉಳಿದ ಖರ್ಚನ್ನು ಸರಕಾರವು ತೆರುವದು.

— ಜಮಖಂಡಿಯಲ್ಲಿ ನ್ಯಾಯಾಧೀಶರಾಗಿದ್ದ ನರಹರ ಬಾಳಕೃಷ್ಣ ಜೋಶಿ, ಎಮ್. ಏ, ಎಲ್ ಎಲ್., ಬಿ. ಯವರು ದಾವನಗೇರಿಯಲ್ಲಿ ಇದ್ದಾರೆ. ಅವರು ೭೦ ವರ್ಷದ ಮುದುಕರು. ಅವರು ದಿನಾ ಕೈಯಿಂದ ನೂಲುತ್ತಾರೆ. ಆ ನೂಲಿನಿಂದ ೧೬೦ ಗಜ ಬಟ್ಟೆಯನ್ನು ತಯಾರಿಸಿದ್ದಾರೆ. ಉಣ್ಣೆಯನ್ನು ನೂತು ಒಂದು ಕಂಬಳಿಯನ್ನು ತಯಾರಿಸಿದ್ದಾರೆ. ಅನ್ನು ಕಾಲಿನ ನೂಲು ಹಸನಾದದ್ದು. ಮುದುಕರ ಉದ್ಯೋಗಶೀಲತೆಯನ್ನು, ದೇಶಾಭಿಮಾನವನ್ನು ನೋಡಿ ಆನಂದವಾಗುತ್ತದೆ.

— ಮಹಾರಾಷ್ಟ್ರೀಯ ಜ್ಞಾನಕೋಶವನ್ನು ಪ್ರಕಟಿಸಿದ ಡಾ|| ಶ್ರೀಧರ ವೆಂಕಟೇಶ ಕೇತಕರರವರು ಕನ್ನಡದಲ್ಲಿಯೂ ಒಂದು ವಿಶ್ವಕೋಶವನ್ನು ತಯಾರಿಸಲುದ್ಯುಕ್ತರಾಗಿದ್ದಾರೆ. ಕರ್ನಾಟಕದೊಳಗಿನ ವಿದ್ವಾಂಸರು ಜ್ಞಾನಕೋಶಕ್ಕೆ ತಗಲುವ ಸಾಹಿತ್ಯವನ್ನು ಪೂರೈಸಲು ಟೊಂಕ ಕಟ್ಟಿದರೆ, ಅದಕ್ಕೆ ಅವಶ್ಯವುಳ್ಳ ದ್ರವ್ಯಸಹಾಯವನ್ನು ತಾವು ಪಡೆಯುವೆವಾಗಿಯೂ, ಪ್ರಕಟಿಸುವ ಜವಾಬುದಾರಿಯನ್ನು ಸಹ ತಾವು ಕೈಕೊಳ್ಳುವೆವಾಗಿಯೂ ಹೇಳಿದ್ದಾರೆ. ಕನ್ನಡಿಗರೂ ವಿಚಾರಿಸತಕ್ಕ ವಿಷಯ.

— ಬೇಸಾಯೋದ್ಧಾರವನ್ನು ಕಲ್ಪಿಸುವದಕ್ಕಾಗಿ ಸಾರ್ವಭೌಮ ಪಂಚಮ ಜಾರ್ಜರು ನೇಮಿಸಿದ ಕಮಿಶನಿನ ರಿಪೋರ್ಟು ಇದೇ ಬರುವ ೭-೪-೨೮ರನೇಗೆ ಪ್ರಕಟವಾಗುವದು. ಈ ಕಮಿಶನಿಗೆ ೧೬ ಲಕ್ಷ ರೂಪಾಯಿ ಖರ್ಚು ತಗಲಿತಂತೆ! ಈ ತನಕ ಇಷ್ಟು ಖರ್ಚು ಯಾವದೇ ಕಾಲದಲ್ಲಿ 'ತಗಲಿದ್ದಿಲ್ಲವಂತೆ! ಸಹಜವಿದೆ. ದೊಂಬೆಗಳ್ಳ ಸ್ವರಾಜ್ಯವಿದು. ಮೇಲಾಗಿ ಬಡ ಬೇಸಾಯಗಾರರನ್ನು ಶ್ರೀಮಂತರನ್ನಾಗಿ ಪರಿಣಮಿಸುವ ಕಮಿಶನು!!

— ಬ್ರಹ್ಮದೇಶದ ಥಿಬೋ ಅರಸರ ಅಳಿಯಂದಿರಾದ ಲರಿನ್ ಯುವರಾಜರು ಸರ್ವಾಧಿಪತಿಗಳಿಗೊಂದು ಪತ್ರ ಬರೆದು ಮಾವಂದಿರ ಉತ್ತರ ಕ್ರಿಯೆಯನ್ನು ನಡಿಸಲು ಅಪ್ಪಣೆ ಬೇಡಿದ್ದಾರೆ. ಅದನ್ನು ಕೊಡದಾಗಿದ್ದರೆ, ತಮಗೆ ಅನ್ಯಾಯ ಮಾಡಿದ ಬ್ರಹ್ಮದೇಶದ ಗವರ್ನರರಾದ ಸರ್ ಹಾರಕೋರ್ಟ ಬಟಿಲರವರೊಡನೆ ಮಲ್ಲಯುದ್ಧ ಮಾಡಲು ಒಪ್ಪಿಗೆ ಬೇಡಿದ್ದಾರೆ. ಸರ್ವಾಧಿಪತಿಗಳಿಗೆ ಪಂಚರಾಗಲಿಕ್ಕೆ ಯುವರಾಜರು ಬಿನ್ನೈಸಿಕೊಂಡಿದ್ದಾರೆ. ಅಧಿಕಾರಬಲದಿಂದ ಮಾಡಿದ ಅನ್ಯಾಯಗಳನ್ನು ಪರಿಹರಿಸಿಕೊಳ್ಳಲು ಯುವರಾಜರು ಬಾಹುಬಲದ ಪ್ರಯೋಗ ಮಾಡಲುದ್ಯುಕ್ತರಾಗಿದ್ದಾರೆ.

ಲಕ್ಷ್ಯದಲ್ಲಿರಲಿ!

ಶುಕ್ರವಾರ ತಾರೀಖು ೩ ನೇಗೆ ಸ್ಯಾಮನ್ ಕಮಿಟಿಯ ಆಗಮನ ಪ್ರೀತ್ಯರ್ಥ ಎಲ್ಲರೂ ಹರತಾಳವನ್ನಾಚರಿಸಬೇಕಾಗಿ [ಲೋಕನಾಯಕರು ಶ್ರೀ ಕಾಶೀಕ್ಷೇತ್ರದಿಂದ ವಿಧಿಸಿದ ಆಜ್ಞೆಯನ್ನು ಎಲ್ಲರೂ ತಪ್ಪದೆ ಪಾಲಿಸಿ, ದೇಶೋದ್ಧಾರ ಕಾರ್ಯದಲ್ಲಿ ನೆರವಾಗಬೇಕು. ಅಪರಾಹ್ನ ೪|| ಘಂಟೆಗೆ ಸಭೆ ಸೇರಿ, ನಿಷೇಧ ಪ್ರದರ್ಶನ ಮಾಡಬೇಕು.

— ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಸ್ಯಾಮನ್ ಕಮಿಟಿಯನ್ನು ನಿಷೇಧಿಸುವ ತೀರ್ಮಾನವಾಗಿರುತ್ತದೆ.

— ನಾಗಪುರದ ಶಸ್ತ್ರಾಸ್ತ್ರಗಳ ಕಾನೂನಿನ ಸತ್ಯಾಗ್ರಹ ಸೇನಾಪತಿಗಳಾದ ಆವಾರಿಯವರು ನಾಗಪುರದ ಜೈಲಿನಲ್ಲಿ ಉಪವಾಸ ಮಾಡಹತ್ತಿ ೩|| ತಿಂಗಳಾಗುತ್ತ ಬಂದವು. ಜೈಲಿನ ಅಧಿಕಾರಿಗಳು ಅವರಿಗೆ ಬಲತ್ಕಾರದಿಂದ ಆಹಾರ ಹಾಕುತ್ತಿದ್ದಾರೆ. ಖಾದಿಯನ್ನೇ ಧರಿಸಲು ಆವಾರಿಯವರು ಆಗ್ರಹ ಮಾಡುವದರಿಂದ, ಅವರು ಜೈಲಿನಲ್ಲಿ ನಗ್ನರಾಗಿದ್ದಾರೆ. ದೇಶಬಾಂಧವರು ದೇಶೋದ್ಧಾರಕ್ಕಾಗಿ ಅನುಭವಿಸಬೇಕಾದ ಕಷ್ಟಗಳಿವು!

— ಖೊಟ್ಟಿ ನಾಣ್ಯಗಳನ್ನು ತಯಾರಿಸಿದ ಅಪರಾಧದ ಮೇಲೆ ಕಲಕತ್ತೆಯಲ್ಲಿ ಒಬ್ಬ ಮಾರವಾಡಿಯನ್ನು ಸೆರೆ ಹಿಡಿದರು. ಕೂಡಲೆ ಆತನು ತನ್ನ ಕಿಸೆಯಲ್ಲಿದ್ದ ೪-೬ ಖೊಟ್ಟಿ ನಾಣ್ಯಗಳನ್ನು ಜಗಿದು ತಿಂದು ಬಿಟ್ಟನು. ಬಾಯಿಯಿದ್ದವರು ಬದುಕುತ್ತಾರಲ್ಲವೇ!

— ಸ್ಯಾಮನ್ ಕಮಿಟಿಯು ಮುಂಬಯಿಯಲ್ಲಿ ಬಂದಿಳಿದ ದಿನ ಮುಂಬಯಿಯಲ್ಲೆಲ್ಲ ಕರೇ ಪತಾಕೆಗಳನ್ನು ಹಚ್ಚಿ ಹರತಾಳ ಪಾಲಿಸಬೇಕೆಂದು ಮುಂಬಯಿಯ ಕಾಂಗ್ರೆಸ ಕಮೀಟಿಯವರು ನಿರ್ಧರಿಸಿದ್ದಾರೆ. ಇದರಿಂದಲೇ ಏನೋ, ಸ್ಯಾಮನ್ ಕಮಿಟಿಯು ಮುಂಬಯಿಯಲ್ಲಿ ಇಳಿಯದೆ ಒಮ್ಮೆಲೆ ಪಂಜಾಬಾಭಿಮುಖವಾಗಿ ತೆರಳುವದು. ಮುಂಬಯಿಯಲ್ಲಿ ಎರಡು ದಿನ ಉಳಕೊಳ್ಳುವ ಕಾರ್ಯಕ್ರಮವಿತ್ತು. ಅದು ರದ್ದಾಯಿತು!

— ಪುಣೆಯಲ್ಲಿ ಸ್ಕೂಲಬೋರ್ಡು ಜಿಲ್ಲಾಬೋರ್ಡಿಗೆ ಲೆಕ್ಕಿಸದೆ ಅನೇಕ ಅಕ್ರಮಗಳನ್ನಾಚರಿಸುತ್ತದೆ. ಜಿಲ್ಲಾ ಬೋರ್ಡಿನ ಮನ್ನಣೆ ಪಡೆಯದೆ ಕೆಲವರನ್ನು ಸ್ಕೂಲ ಬೋರ್ಡು ನೇಮಿಸಿಕೊಂಡಿತು. ಒಂದು ಕಡೆಗಂತು ಮಂಜೂರು ಮಾಡಿಕೊಂಡ ಶಿಕ್ಷಕರ ಜಾಗೆಗಳನ್ನು ಬೇರೆಕಡೆಯಲ್ಲಿ ನೇಮಿಸಿದೆ. ಹೀಗೆಲ್ಲ ವ್ಯವಹಾರ ನಡೆದಿದೆ.

ಹೊನ್ನಾವರ ಮತದಾರರಿಗೆ ಎಚ್ಚರಿಕೆ.

ಮತದಾರರೇ,

ಇದೇ ಬರುವ ಫೆಬ್ರುವರಿ ೧ ನೇ ತಾರೀಖಿಗೆ ನಿಮ್ಮ ಮುನಿಸಿಪಾಲಿಟಿಯ ಇಲೆಕ್ಷನ ಉಂಟು. ನಾ ಮುಂದೆ, ನಾನೇ ಮುಂದೆ ಎಂದು ೨೫ ಉಮೇದ್ವಾರರು ಮುಂದಾಗಿ ಬಂದಿದ್ದಾರೆ. ನೀವು ಹನ್ನೆರಡೇ ಮಂದಿಗಳನ್ನು ಆರಿಸಿ ಕಳಿಸತಕ್ಕದ್ದುಂಟು. ನಿಮ್ಮ ಮುನಿಸಿಪಾಲಿಟಿಯ ಹಿತಾಹಿತದ ವಿಚಾರ ಮಾಡಿ ನೀವು ಮತದಾನ ಮಾಡಬೇಕು. ಹೊನ್ನಾವರ ಮುನಿಸಿಪಾಲಿಟಿಯು ಸಂಪತ್ತು ತಕ್ಕಮಟ್ಟಿಗೆ ಚಲೋದಿದೆ. ಆದರೆ, ಅದರ ವಿನಿಯೋಗವು ಮಾತ್ರ ಸರಿಯಾಗಿ ನಡೆಯುವದಿಲ್ಲ. ಮೋಟಾರ ಧೂಳಿಯಿಂದ ಪ್ರಯಾಣಿಕರ ಬಾಯಿತುಂಬ, ಕಣ್ಣು ತುಂಬ ಧೂಳಿ; ಮಾರ್ಗಗಳ ಪಕ್ಕದ ಮೇಲಿದ್ದ ಚಹ, ಮಿಠಾಯಿ ಅಂಗಡಿಗಳೊಳಗಿನ ತಿಂಡಿ-ತಿನಸುಗಳ ಮೇಲೂ ಧೂಳಿ. ಈ ಧೂಳಿಯಿಂದ ಆರೋಗ್ಯವು ಬಹು ಮಟ್ಟಿಗೆ ಕೆಟ್ಟಿದೆ; ಕೆಡುತ್ತಲಿದೆ. ಅದನ್ನು ಪರಿಹರಿಸಲು ಮೆಂಬರರ ಲಕ್ಷ್ಯವಿಲ್ಲ. ದೀಪದ ಕಂಬಗಳಿದ್ದಾವೆ, ದೀಪ ಹುಡುಕಬೇಕು, ಕೆಲ ದೀಪಗಳಿಗಂತೂ ಬುರುಡೆಯಿಲ್ಲ, ಕೆಲವು ಲಾಂಟ್ರಗಳು ಒಡೆದು ಹೋಗಿವೆ. ಇದರಿಂದ ಕೈಯಲ್ಲಿ ದೀಪವಿದ್ದರೆ ಬೆಳಕಿಗೆ ಬರಗಾಲವಿಲ್ಲ. ಈ ವ್ಯವಸ್ಥೆಯನ್ನು ನೋಡುವಂಥವರಿರಬೇಕು. ಅವಶ್ಯವಿದ್ದರೆ, ದೀಪದ ಕಂಬಗಳನ್ನು ಹೆಚ್ಚಿಸಬೇಕು ಸಾಧ್ಯವಿದ್ದರೆ ಗ್ಯಾಸ ದೀಪಗಳನ್ನು ಹಚ್ಚಬಹುದು. ಮನೆ ತೆರಿಗೆ ಬಹಳವಾಗಿ ಏರಿದೆ, ವಿಪರೀತ ಏರಿದೆ, ಅದನ್ನು ತಗ್ಗಿಸುವ ಆಲೋಚನೆಯಾಗಬೇಕು. ಇವನ್ನೆಲ್ಲ ಸಾಧಿಸಬಲ್ಲ ಉಮೇದ್ವಾರರಿಗೇ ನೀವಾಗಿ ಮತ ಕೊಡಬೇಕು. ನಿಮ್ಮ ಬಾಗಿಲ ಮೆಟ್ಟು ಸವಿಸುತ್ತಾರೆಂದು ಸಿಕ್ಕಸಿಕ್ಕವರಿಗೆ ಮತಕೊಟ್ಟು ಉಪಕಾರ ಮಾಡಹೋಗಬೇಡಿ. ಒಮ್ಮೆ ಮತ ಕೊಟ್ಟ ಬಳಿಕ, ೩ ವರುಷಗಳ ತನಕ ನೀವು ಆ ಮೆಂಬರರು ಕೊಡತಕ್ಕಂಥ ಸುಖ ದುಃಖಗಳನ್ನು ಸಹಿಸಲೇಬೇಕಾಗುತ್ತದೆ. ಅದಕ್ಕಾಗಿ ಆಲೋಚನೆ ಮಾಡಿ ಕಾರ್ಯದಕ್ಷರಿಗೇ ಮತ ಕೊಡಿರಿ.

ಹೊನ್ನಾವರ,
ತಾ. ೨೧-೧-೧೯೨೮. } ಓರ್ವ ಮತದಾರ.

ಮಹಾತ್ಮರ ಆತ್ಮಚರಿತ್ರ.

(೩೪) ಪರಮಾರ್ಥ ಸಾಧನೆ

ವಿದ್ಯಾರ್ಥಿಗಳಿಗೆ ಪಾರಮಾರ್ಥಿಕ ಶಿಕ್ಷಣ ಕೊಡುವ ಕೆಲಸವು ಶಾರೀರಿಕ ಹಾಗು ಮಾನಸಿಕ ಶಿಕ್ಷಣ ಕೊಡುವ ಕೆಲಸಕ್ಕಿಂತ ಕಠಿಣವಾಗಿತ್ತು. ಪರಮಾರ್ಥ ಶಿಕ್ಷಣಕ್ಕಾಗಿ ಧಾರ್ಮಿಕ ಗ್ರಂಥಗಳ ಮೇಲೆ ನಾನು ಹೆಚ್ಚಿಗೆ ನಂಬಿಗೆ ಇಡಲಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯು ಸ್ವಧರ್ಮಶಾಸ್ತ್ರಗಳ ಸ್ವಧರ್ಮಗ್ರಂಥಗಳ ಸಾಮಾನ್ಯಜ್ಞಾನವನ್ನು ತಿಳಕೊಳ್ಳಬೇಕೆಂದು ನನ್ನ ಗ್ರಹಿಕೆ ಇತ್ತು. ಅದಕ್ಕಾಗಿ ನನ್ನ ಶಕ್ತ್ಯನುಸಾರ ಪ್ರಯತ್ನವನ್ನು ನಾನು ಮಾಡಿದ್ದೆನೆ. ಆದರೆ ಈ ಶಿಕ್ಷಣವು ಬೌದ್ಧಿಕ ಶಿಕ್ಷಣದ ಒಂದು ಅಂಗವು (ಪಾರಮಾರ್ಥಿಕ ಶಿಕ್ಷಣವಲ್ಲ). ಟಾಲ್‌ಸ್ಟಾಯ್ ಆಶ್ರಮದ ಹುಡುಗರ ವಿದ್ಯಾರ್ಥಿಗಳ ಶಿಕ್ಷಣವನ್ನು ಕೈಕೊಳ್ಳುವ ಮೊದಲು ಪರಮಾರ್ಥಿಕ ಶಿಕ್ಷಣವು ಸ್ವತಂತ್ರ ಶಿಕ್ಷಣವೆಂದು ನನ್ನ ಗ್ರಹಿಕೆ ಇತ್ತು. ಪರಮಾರ್ಥವನ್ನು ಸಾಧಿಸಬೇಕಾದರೆ ಶೀಲ ಸಂಪಾದನ ಮಾಡಬೇಕು, ಪರಮಾತ್ಮನ ಜ್ಞಾನ ಪಡೆಯಬೇಕು, ಆತ್ಮಸಾಕ್ಷಾತ್ಕಾರಕ್ಕಾಗಿ ಪ್ರಯತ್ನಪಡಬೇಕು. ವಿದ್ಯಾರ್ಥಿಗಳಿಗೆ ದೊರಕತಕ್ಕ ಶಿಕ್ಷಣದ ಪ್ರಮುಖ ಅಂಗವು ಇದೇ. ಪಾರಮಾರ್ಥಿಕ ವೃತ್ತಿಗೆ ಸಂಸ್ಕಾರ ಕೊಡದಿರುವ ಶಿಕ್ಷಣವು ನಿಷ್ಪ್ರಯೋಜಕವೆಂದು ಮೇಲಾಗಿ ಕೇಳಿದರೆ ಅನಿಷ್ಟವೆಂದೂ ನನ್ನ ಅಭಿಪ್ರಾಯವಾಗಿತ್ತು.

ಚತುರ್ಥಾಶ್ರಮದ ಯೋನೆ ಸನ್ಯಾಸಾಶ್ರಮವನ್ನು ಕೈಕೊಂಡಾಗಲೇ ಮಾನವನಿಗೆ ಆತ್ಮಸಾಕ್ಷಾತ್ಕಾರವಾಗಬಲ್ಲದೆಂಬವದೊಂದು ಮೂಢ ನಂಬಿಗೆ ಇದೆ. ಆದರೆ, ಆತ್ಮಸಾಕ್ಷಾತ್ಕಾರದ ಅಮೂಲ್ಯ ಅನುಭವಕ್ಕಾಗಿ ಮಹಾತೀತ ಕಾಲದ ತನಕ ತಯಾರಿ ಮಾಡಿದ್ದವರು ಆತ್ಮಸಾಕ್ಷಾತ್ಕಾರವನ್ನು ಪಡೆಯುವದಿಲ್ಲೆಂದು ಎಲ್ಲರಿಗೂ ಗೊತ್ತಿದ್ದ ವಿಷಯ. ಅವರು ಮುಪ್ಪಿನಲ್ಲಿ ಬಾಲ್ಯವನ್ನು ಪಡೆಯುತ್ತಾರೆ. ಅವರ ಸ್ಥಿತಿಯು ತೀರ ದೀನವಾಗುತ್ತದೆ, ಅವರು ಭೂಭಾರವೆನಿಸುತ್ತದೆ. ೧೯೧೧—೧೨ನೇ ಇಸ್ವಿಯ ಸುಮಾರಿನಲ್ಲಿ ನಾನು ಕಲಿಯುತ್ತಿದ್ದಾಗ ಈ ಅಭಿಪ್ರಾಯಗಳನ್ನು ಹೊಂದಿದ್ದೇನೆಂಬ ಚಲೋ ಸ್ಮರಣೆಯಿಲ್ಲದ ಆದರೆ, ಇವನ್ನು ಇದೇ ಪ್ರಕಾರ ಆವಿಷ್ಕರಿಸಿದ್ದಿಲ್ಲ.

ಹಾಗಾದರೆ, ಪಾರಮಾರ್ಥಿಕ ಶಿಕ್ಷಣವನ್ನು ಕೊಡುವದು ಹೇಗೆ ಹೇಗೆ? ಮಕ್ಕಳಿಗೆ ಮಂತ್ರಗಳನ್ನು ಸ್ಮರಿಸಿ ಪಾರ ಹೇಳಲು ಕಲಿಸಿದೆನು. ನೀತಿಶಾಸ್ತ್ರದ ಗ್ರಂಥಗಳನ್ನು ಅವರಿಗೆ ನಾನು ಓದಿ ಹೇಳಿದೆನು. ಆದರಿಂದ ನನಗೆ ಸಮಾಧಾನವೆನಿಸಲಿಲ್ಲ. ವಿದ್ಯಾರ್ಥಿಗಳೊಡನೆ ನನ್ನ ಪರಿಚಯವು ಬೆಳೆದ ಹಾಗೆ ಪುಸ್ತಕಗಳ ಆಧಾರದಿಂದ ಪಾರಮಾರ್ಥಿಕ ಶಿಕ್ಷಣವನ್ನು ಕೊಡಬರದೆಂದು ನನಗೆ ಹೊಳೆಯಿತು. ಶಾರೀರಿಕ ಶಿಕ್ಷಣವನ್ನು ಪ್ರತ್ಯಕ್ಷ ಶಾರೀರಿಕ ಪ್ರಯೋಗಗಳಿಂದಲೇ ಕೊಡಬೇಕು, ಬೌದ್ಧಿಕ ಶಿಕ್ಷಣವನ್ನು ಬುದ್ಧಿ ಪ್ರಯೋಗಗಳಿಂದಲೇ ಹೇಳಬೇಕು, ಹಾಗೆಯೇ ಪಾರಮಾರ್ಥಿಕ ಶಿಕ್ಷಣವನ್ನು ಪರಮಾರ್ಥ ವೃತ್ತಿಯ ಪ್ರತ್ಯಕ್ಷ ಪ್ರಯೋಗದಿಂದಲೇ ಕೊಡಬೇಕು. ಶಿಕ್ಷಕನ ಚಾರಿತ್ರ್ಯ ಹಾಗು ಶೀಲದ ಮೇಲೆ ಪರಮಾರ್ಥ ವೃತ್ತಿಯ ಪ್ರಯೋಗವು ಸರ್ವಥಾ ಅವಲಂಬಿಸಿರುತ್ತದೆ. ಶಿಕ್ಷಕನು ಯಾವಾಗಲೂ ಬಹಳೇ ಜಾಗ್ರತೆಯಿಂದ ನಡಕೊಳ್ಳಬೇಕು. ವಿದ್ಯಾರ್ಥಿಗಳು ಪ್ರತ್ಯಕ್ಷ ಇರಲಿ ಇರದಿರಲಿ, ಶಿಕ್ಷಕನು ಸ್ವಚಾರಿತ್ರ್ಯದಿಂದ ದೂರ ದೂರ ಇರುವ ವಿದ್ಯಾರ್ಥಿಗಳ ಪರಮಾರ್ಥ ವೃತ್ತಿಗೆ ಸಂಸ್ಕಾರ ಕೊಡಬಹುದು. ನಾನು ಸ್ವತಃ ಸುಳ್ಳನಾಗಿ ವಿದ್ಯಾರ್ಥಿಗಳಿಗೆ ಸತ್ಯವಂತರಾಗಿ ವರ್ತಿಸುವದು ಎಂದಿಗೂ ಸಾಧ್ಯವಿಲ್ಲ. ಹೆಣ್ಣಾದ ಶಿಕ್ಷಕನು ಕೂಡ ವಿದ್ಯಾರ್ಥಿಗಳನ್ನು ಎಂದಿಗೂ ಧೈರ್ಯವಂತರನ್ನಾಗಿ ಮಾಡಲಾರನು. ನಿಗ್ರಹವಿಲ್ಲದ ಶಿಕ್ಷಕನು ನಿಗ್ರಹದ ಸಾಮರ್ಥ್ಯವನ್ನು ವಿದ್ಯಾರ್ಥಿಗಳಿಗೆ ಕಲಿಸಲಾರನು. ಆದರಿಂದ ನನ್ನ ಜೊತೆಯಲ್ಲಿರುವ ಹುಡುಗ ಹುಡುಗಿಯರಿಗೆ ನಾನು ಶಾಶ್ವತವಾದ ಆದರ್ಶವಾಗಿರಬೇಕೆಂದು ನನಗೆ ತಿಳಿಯಿತು. ಹೀಗೆ ವಿದ್ಯಾರ್ಥಿಗಳೇ ನನ್ನ ಶಿಕ್ಷಕರಾದರು. ವಿದ್ಯಾರ್ಥಿಗಳ ಬಗ್ಗೆ ಬರೀ ಒಳ್ಳೇ ಸ್ವಭಾವದಿಂದಲೂ, ನಿಷ್ಪಕ್ಷಪಾತದಿಂದಲೂ ನಡಕೊಳ್ಳಬೇಕೆಂಬ ಪಾಠವನ್ನು ನಾನು ಕಲಿತೆನು. ಟಾಲ್‌ಸ್ಟಾಯ್ ಆಶ್ರಮದಲ್ಲಿ ದಿನಾ ಹೆಚ್ಚುಹೆಚ್ಚಾಗಿ ನಾನು ಕೈಕೊಂಡ ಶಿಸ್ತು ನಿಗ್ರಹವು ಆ ವಿದ್ಯಾರ್ಥಿಗಳ ಬಗ್ಗೆಯೇ ಪ್ರಾಮುಖ್ಯವಾಗಿ ಇರುತ್ತದೆಂದು ಧಾರಾಳವಾಗಿ ಹೇಳಬಹುದು.

ಒಬ್ಬ ವಿದ್ಯಾರ್ಥಿಯ ಹೇಳಿದ ಮಾತ ಕೇಳುವವನಲ್ಲ, ನಿರಂಕುಶನಾಗಿ ನಡೆಯುತ್ತಿದ್ದನು, ಸುಳ್ಳನು, ಕಿರಿಗೇಡಿಯು, ಜಗಳಗಂಟನು. ಒಮ್ಮೆ ಅವನು ಪ್ರಚಂಡವಾದ ಜಗಳವನ್ನಾಡಿದನು. ನನಗೆ ಸಿಟ್ಟು ತಲೆಗೇರಿತು. ವಿದ್ಯಾರ್ಥಿಗಳಿಗೆ ನಾನೆಂದೂ ಶಾಸನ ಮಾಡುವವನಲ್ಲ. ಆದರೆ, ಈ ಬಾರಿ ನನಗೆ ಬಹಳ ಸಿಟ್ಟು ಬಂತು. ಅವನೊಡನೆ ನಾನು ಬುದ್ಧಿವಾದ ಮಾಡಲೆತ್ನಿಸಿದೆನು. ಆತನು ನಿಷ್ಠುರನಿದ್ದನು. ನನ್ನೊಡನೆಯೂ ಅಧಿಕಪ್ರಸಂಗ ಮಾಡಹತ್ತಿದನು. ಕೊನೆಗೆ ಬಳಿಯಲ್ಲಿದ್ದ ರೂಲನ್ನು ತೆಗೆದುಕೊಂಡು ಅವನ ಮೇಲೆ ಹೊಡೆದನು. ಹೊಡೆಯುತ್ತಿರುವಾಗ ನನ್ನ ಮೈ ನಡುಗಿತು. ಅದನ್ನು ಅವನು ನೋಡಿದನು. ವಿದ್ಯಾರ್ಥಿಗಳಿಗೆಲ್ಲ ಇದೊಂದು ನೂತನ ನೋಟವಾಗಿತ್ತು. ಆ ಹುಡುಗನು ಅಳಹತ್ತಿದನು. ಬಳಿಕ ನನಗೆ ಕ್ಷಮೆ ಬೇಡಿಕೊಂಡನು. ಹೊಡತದಿಂದ ಉಂಟಾದ ನೋವಿಗೆ ಅವನು ಅಳಲಿಲ್ಲ. ಆತನಿಗೆ ಇಚ್ಛೆ ಇದ್ದರೆ ನನಗೆ ಆತನು ಹಾಗೆಯೇ ಹೊಡೆಯಬಹುದಿತ್ತು. ೧೭ ವರ್ಷದ ದಂಡಹುರಿಯಾದವನಾಗಿದ್ದನವನು. ಈ ಪ್ರಕಾರ ಹಿಂಸೆಯ ಪ್ರತ್ಯಕ್ಷ ಕೃತ್ಯದಿಂದ ಉಂಟಾದ ದುಃಖವನ್ನು ಆತನು ಗ್ರಹಿಸಿದನು. ಇನ್ನು ಮುಂದೆ ನನ್ನ ಮಾತನ್ನು ಆತನು ಉಲ್ಲಂಘಿಸಲಿಲ್ಲ. ಆದರೆ ಆ ಹಿಂಸೆಯ ಕೃತ್ಯದ ಬಗ್ಗೆ ನಾನು ಈಗಲೂ ಪಶ್ಚಾತ್ತಾಪಪಡುತ್ತೇನೆ. ಆ ದಿನ ನಾನು ನನ್ನಲ್ಲಿರುವ ದೈವಾಂಶವನ್ನು ಪ್ರದರ್ಶಿಸದೆ, ಪಶುತ್ವವನ್ನೇ ಪ್ರಕಟಿಸಿದೆನು.

ಶಾರೀರಿಕ ಶಾಸನ ಮಾಡಿದ್ದು ನಾನು ಯಾವಾಗಲೂ ಒಪ್ಪುವದಿಲ್ಲ. ಒಂದೇ ಬಾರಿ ನನ್ನ ಮಗಂದಿರಲ್ಲೊಬ್ಬರಿಗೆ ಶಾರೀರಿಕ ದಂಡನೆ ಕೊಟ್ಟ ನೆನಪು ಆದೆ. ಆದರಿಂದ ರೂಲಿನಿಂದ ನಾನು ಶಿಕ್ಷೆ ಕೊಟ್ಟದ್ದು ಯೋಗ್ಯವೋ ಅಯೋಗ್ಯವೋ ಎಂಬುದನ್ನು ನಿರ್ಣಯಿಸಲು ನನ್ನಿಂದಾಗಲಿಲ್ಲ. ಬಹುಶಃ ಅದು ಅಯೋಗ್ಯವಾಗಿರಬೇಕು. ಯಾಕೆಂದರೆ ನಾನು ಸಿಟ್ಟಿಗೆ ಒಳಗಾಗಿ ಶಾಸನ ಮಾಡಲುದ್ಯುಕ್ತನಾದೆನು. ನನಗುಂಟಾದ ವೇದನೆಯ ಪ್ರದರ್ಶನವೇ ಆ ಶಾಸನವಾಗಿದ್ದರೆ ಅದನ್ನು ನಾನು ಸಮರ್ಥಿಸುತ್ತಿದ್ದೆ. ಆದರೆ ನನ್ನ ಹೇತುವು ನಿರ್ಮಲವಿದ್ದಿಲ್ಲ. ಈ ಸಂಗತಿಯಿಂದ ನಾನು ಆಲೋಚನೆಯಲ್ಲಿ ಬಿದ್ದೆನು. ವಿದ್ಯಾರ್ಥಿಗಳಿಗೆ "ದ್ವಾಪರ" ...ರ ಯೋಗ್ಯತೆಯ ಕ್ರಮವನ್ನು ನಾನು ಕಲಿತೆನು. ಆ ಪ್ರಸಂಗದಲ್ಲಿ ಹೊರತು ಬೇರೆ ಯಾವ ರೀತಿಯನ್ನು ಅನುಸರಿಸಿದರೆ ಏನು ಪರಿಣಾಮವಾಗುತ್ತಿತ್ತೆಂಬುದನ್ನು ನಾನು ಹೇಳಲಾರೆ. ಹುಡುಗನು ಆ ಸಂಗತಿಯನ್ನು ಬೇಗನೆ ಮರೆತುಬಿಟ್ಟನು. ವಿಶೇಷ ತಿದ್ದುಪಾಟವನ್ನು ಆತನು ಹೊಂದಲಿಲ್ಲ. ನನಗೆ ಮಾತ್ರ ವಿದ್ಯಾರ್ಥಿಗಳನ್ನು ಹ್ಯಾಗೆ ನಡಿಸಿಕೊಳ್ಳಬೇಕೆಂಬ ಶಿಕ್ಷಕರ ಕರ್ತವ್ಯವು ಚನ್ನಾಗಿ ಹೊಳೆಯಿತು. ಈ ಸಂಗತಿಯಾದ ಬಳಿಕ ಕೆಲ ಹುಡುಗರು ತಪ್ಪು ನಡಕೊಳ್ಳುತ್ತಿದ್ದರು. ಆದರೆ ನಾನು ಅವರಿಗೆ ಶಾರೀರಿಕ ಶಾಸನ ಕೊಡಲಿಲ್ಲ. ಹೀಗೆ ನನ್ನ ಕೈಕೆಳಗಿದ್ದ ಹುಡುಗ-ಹುಡುಗಿಯರಿಗೆ ಪಾರಮಾರ್ಥಿಕ ಶಿಕ್ಷಣ ಕೊಡುತ್ತಿರುವಾಗ್ಗೆ ಪರಮಾರ್ಥದ ಸಾಮರ್ಥ್ಯವು ನನಗೆ ಹೆಚ್ಚೆಚ್ಚಾಗಿ ಹೊಳೆಯಹತ್ತಿತು.

— ಮುದ್ರಾಪ್ರಾಂತದ ಸಂಸ್ಕಾರವು ಆಯುರ್ವೇದ ಅಭ್ಯಾಸಕ್ಕೆ ಉತ್ತೇಜನ ಕೊಡಲೋಸುಗ ಮಾಸಿಕ ೩೫ ರೂಪಾಯಿಗಳ ೧೦ ಶಿಷ್ಯವೃತ್ತಿಗಳನ್ನು ಕೊಡಬೇಕೆಂದು ನಿರ್ಧರಿಸಿದೆ. ವಿದ್ಯಾರ್ಥಿಗಳು ಕಾಶಿಯ ಹಿಂದು ವಿಶ್ವವಿದ್ಯಾಲಯಕ್ಕೆ ಕಳಿಸಲ್ಪಡುವರು.

(೩೫) ಹಿಟ್ಟಿನಲ್ಲಿರುವ ಉಪ್ಪು !

ಟಾಲ್‌ಸ್ಟಾಯ್ ಫಾರ್ಮಿನಲ್ಲಿರುವಾಗ ಕಾಲಿನ್‌ಬಾಕ್‌ರವರು ನನಗೊಂದು ಸಂಗತಿಯನ್ನು ಹೇಳಿದರು. ಆ ಕಾಲದ ತನಕ ನನಗೆ ಆ ವಿಷಯ ಹೊಳೆದಿದ್ದಿಲ್ಲ. ಆಶ್ರಮದೊಳಗಿನ ಕೆಲವು ಹುಡುಗರು ನಿರಂಕುಶರೂ, ಅವಿಧೇಯರೂ ಇದ್ದರೆಂದು ಈ ಮೊದಲೇ ಹೇಳಿದ್ದೇನೆ. ಕೆಲವರಂತು ತಿರಿದುಂಡುವವರಿದ್ದರು. ಇಂಥವರ ಜೊತೆಯಲ್ಲಿ ನನ್ನ ಮೂವರು ಮಗಂದಿರರೂ, ಇತರ ಹುಡುಗರೂ ದಿನಾ ಸಹವಾಸ ಬೆಳಸಬೇಕಾಗಿತ್ತು. ಇದು ಮಿ। ಕಾಲಿನ್‌ಬಾಕ್‌ರವರಿಗೆ ಸರಿದೋರಲಿಲ್ಲ. ಅವಿಧೇಯ ಹುಡುಗರ ಜೊತೆಗೆ ನನ್ನ ಮಗಂದಿರರನ್ನು ಇಡುವದು ಪ್ರಶಸ್ತವಲ್ಲವೆಂದು ಅವರು ತಿಳಿದು, ಯಾವಾಗಲೂ ಅದನ್ನೇ ವಿಚಾರಿಸುತ್ತಿದ್ದರು.

ಒಂದು ದಿನ ಅವರು ನುಡಿದದ್ದೇನಂದರೆ — "ನಿಮ್ಮ ಹುಡುಗರನ್ನು ಕೆಟ್ಟ ಸ್ವಭಾವದ ಹುಡುಗರ ಜೊತೆಗೆ ಇಡುವದು ನನಗೆ ಸೇರುವದಿಲ್ಲ. ಇದರ ಪರಿಣಾಮವು ಒಂದೇ. ದುಷ್ಟ ಸಹವಾಸದಿಂದ ನಿಮ್ಮ ಹುಡುಗರು ನೀತಿಭ್ರಷ್ಟರಾಗುವರು." ಆ ಕಾಲಕ್ಕೆ ಆ ಪ್ರಶ್ನೆಯಿಂದ ನನಗೇನು ತೊಂದರೆ ಎನಿಸಲಿಲ್ಲ. ಅದಕ್ಕೆ ನಾನು ಈ ಪ್ರಕಾರ ಉತ್ತರ ಕೊಟ್ಟಂತೆ ಕಾಣುತ್ತದೆ: "ನನ್ನ ಹುಡುಗರೊಳಗೂ, ಈ ತಿರಿದುಂಬುವ ಹುಡುಗರೊಳಗೂ, ವ್ಯತ್ಯಾಸ ನಾನು ಕಲ್ಪಿಸಲಾರೆ. ಎಲ್ಲರಿಗೂ ನಾನು ಹೊಣೆಯಾಗಿದ್ದೇನೆ. ನನ್ನ ನಿಮಂತ್ರಣ ಮೇರೆಗೆ ಆ ಹುಡುಗರು ನನ್ನ ಬಳಿ ಬಂದಿರುತ್ತಾರೆ. ಅವರಿಗೇನಾದರೂ ಹಣಕೊಟ್ಟು ನಾನು ಇಲ್ಲಿಂದ ಕಳುಹಿದರೆ, ಅವರು ಕೂಡಲೆ ಜೋಹಾನ್ಸಬರ್ಗಿಗೆ ಹೋಗಿ ತಮ್ಮ ಪೂರ್ವಪದ್ಧತಿಯನ್ನೇ ಅನುಸರಿಸುವರು. ಸತ್ಯ ಮಾತು ಹೇಳಲೇನು? ಹುಡುಗರನ್ನು ನನ್ನಲ್ಲಿಗೆ ಕಳುಹಿ, ಹುಡುಗರೂ, ಹುಡುಗರ ಪಾಲಕರೂ ನನ್ನ ಮೇಲೊಂದು ಉಪಕಾರ ಮಾಡಿರುವರೆಂದು ಅವರ ಗ್ರಹಿಕೆ ಇದೆ. ಆ ಹುಡುಗರಿಗೆ ಇಲ್ಲಿ ಬಂದು ಉಂಟಾಗುವ ಅನಾನುಕೂಲಗಳನ್ನು ನಾನು ಬಲ್ಲೆ, ನೀವೂ ಬಲ್ಲವರೇ ಇದ್ದೀರಿ. ಆದರೆ, ನನ್ನ ಕರ್ತವ್ಯವು ಸ್ಪಷ್ಟವಿದೆ. ಅವರಿಗೆ ನಾನು ಇಲ್ಲಿ ಇಟ್ಟುಕೊಳ್ಳಲೇಬೇಕು. [illegible] ನನ್ನ ಮಗಂದಿರರು ಕೂಡ ಅವರೊಡನೆ ವಾಸವಾಗಿರಲೇಬೇಕು. ನನ್ನ ಮಗಂದಿರರು ಇತರ ಹುಡುಗರಿಗಿಂತ ಶ್ರೇಷ್ಠ ತರಗತಿಯವರೆಂದು ನನ್ನ ಹುಡುಗರಿಗೆ ಕಲಿಸಬೇಕೆಂಬ ನಿಮ್ಮ ಇಚ್ಛೆಯಿಲ್ಲವಷ್ಟೇ. ಆ ತರದ ಶ್ರೇಷ್ಠತೆಯ ವಿಚಾರವನ್ನು ಅವರ ತಲೆಯಲ್ಲಿ ಸೇರಿಸಿದರೆ, ಅವರಿಗೆ ತಪ್ಪುದಾರಿ ತೋರಿಸಿಕೊಟ್ಟಂತಾಗುವದು. ಇತರ ಹುಡುಗರೊಡನೆ ಸಹವಾಸ ಬೆಳಸುವದರಿಂದ ಅವರಿಗೊಂದು ಚಲೋ ಶಿಕ್ಷಣ ದೊರೆತಂತಾಗುವದು. ಇಷ್ಟಾನಿಷ್ಟಗಳನ್ನು ತಾವು ತಿಳಿಯಲಿಕ್ಕೆ ಅವರು ಕಲಿಯುವರು. ನಿಜವಾಗಿ ನನ್ನ ಮಗಂದಿರರೊಳಗೆ ಸಚ್ಛೀಲವಿದ್ದರೆ, ಅದರಿಂದ ಅವರ ಸಂಗತಿಯು ಬೆಳಸುವ ವಿದ್ಯಾರ್ಥಿಗಳಿಗೆ ಹಿತವಾಗುವದೆಂದು ನಾವ್ಯಾಕೆ ಗ್ರಹಿಸಬಾರದು? ಏನೇ ಇರಲಿ ಅವರಿಗೆ ನಾನು ಇಲ್ಲಿ ಇಟ್ಟುಕೊಳ್ಳಲೇಬೇಕು. ಆದರಿಂದೇನಾದರೂ ಅಪಾಯಸಂಭವಿಸುವದಿದ್ದರೆ ಅದಕ್ಕೆ ನಾನು ತಯಾರಿರಬೇಕು." ಮಿ। ಕಾಲಿನ್‌ಬಾಕ್‌ರವರು ತಲೆದೂಗಿ ಸುಮ್ಮಗಾದರು.

ಪರಿಣಾಮ ನೋಡಿದರೆ, ಕೆಟ್ಟದಾಯಿತೆಂದು ಹೇಳುವದು. ಈ ಪ್ರಯೋಗದಿಂದ ನನ್ನ ಮಗಂದಿರರಿಗೆ ಹಾನಿಯಾಯಿತೆಂದು ನನಗನಿಸುವದಿಲ್ಲ. ಅವರಿಗೆ ಕೆಲವಟ್ಟಿಗೆ ಲಾಭವಾಯಿತೆಂದೇ ನಾನು ತಿಳಿಯುತ್ತೇನೆ. ದೊಡ್ಡಸ್ತನದ ಭಾವನೆ ನಾದರೂ ಇದ್ದರೆ ಅದು ನಷ್ಟವಾಯಿತು. ಮತ್ತು ಎಲ್ಲ ತರಗತಿಯ ಬಾಲಕರೊಡನೆ ಸೇರಿ ನಡಕೊಳ್ಳಲು ಅವರು ಕಲಿತರು. ಹೀಗೆ ಅವರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅವರಿಗೆ ಶಿಸ್ತು ಪ್ರಾಪ್ತವಾಯಿತು.

ಇದರಿಂದಲೂ, ಇದೇ ಪ್ರಕಾರದ ಇತರ ಪ್ರಯೋಗಗಳಿಂದಲೂ ನನಗೊಂದು ಮಾತು ತಿಳಿದುಬಂದಿದೆ. ಸಾ

...ವರ ಹುಡುಗರನ್ನು ದಿನ್‌ನಿತ್ಯದ ಸಹವಾಸದಲ್ಲಿ ...ಗಳನ್ನು ಕಲಿಸುವದರಿಂದ ಸುಸ್ವಭಾವದವರಾಗೆ ನಿಶ್ಚ ...ಗುವದಿಲ್ಲ. ಆದರೆ, ಪಾಲಕರೂ ತಂದೆ-ತಾಯಿಗಳೂ ... ಪ್ರಯೋಗ ನಡೆಯುವಾಗ ಬಹಳ ಜಾಗ್ರತೆಯನ್ನು ...ಬೇಕು.

ಮಾನವರ ಸಂಸರ್ಗ ಬಿಡದೆ ಬೆಳೆಸಿದ ಹುಡುಗರು ...ನವರ ಮೇಲಿನಷ್ಟು ಮನೋಹರತೆ ಒಳಗಾಗುವದು ...ಎಂದು ಮಾನಿಗೂ ತಿಳಿಯಬಾರದು. ವಿವಿಧ ಪ್ರಕಾರದ ಚಿ ...ವನೆಗಳು ಹಾಗು ಪರಂಪರೆಯ ಬಾಲ್ಯಶಾಲೆಯು ...ಟ್ಟಿಗೆ ಅದ್ಭುತ ಶಿಕ್ಷಕರ ಸಹ್ಯವಾಗಿಲ್ಲವಾಗುತ್ತವೆಂಬು ...ವಾಕು ನಿಜ. ಅಂಥ ಪ್ರಕೃತಿಯಲ್ಲಿ ಶಿಕ್ಷಕರು ಶಿಷ್ಯನ ...ಣ್ಣ ಹಾಕಿ ತಮ್ಮ ವಿದ್ಯಾರ್ಥಿಗಳ ಚೇಷ್ಟೆಗಳನ್ನು ನಿರೀಕ್ಷಿ ...ಸುತ್ತಿರಬೇಕು.

— ಮೈಸೂರಿನ ದಿವಾನರು ಮುದನೂರಿಗೆ ಹೋಗಿದ್ದರು ದಿವಾನರ ಆಗಮನೋತ್ಸವದ ಪ್ರೀತ್ಯರ್ಥ ಶ್ರೀಮಂತ ರಾಜ ನ್ನು ಆ ಧುರಾಯುಕ್ತ ಬಂಧುಗಳು ಅನ್ನಛತ್ರಕ್ಕಾಗಿ ೩೦ ಸಾವಿರ ರೂಪಾಯಿಗಳನ್ನರ್ಪಿಸಿದರು ಸ್ವತಃ ಮಧುರಾಯ ...ನವರು ೧೫ ಸಾವಿರ ರೂಪಾಯಿಗಳನ್ನು ವಿದ್ಯಾರ್ಥಿಗಳ ನ ...ಕ್ಕಾಗಿ ಅರ್ಪಿಸಿದರು. ಪಾವಗಡ್ಡದ ಶ್ರೀ ರಂಗಪ್ಪ ನವರು ೧೦ ಸಾವಿರ ರೂಪಾಯಿಗಳನ್ನೂ ಶ್ರೀ ಬಸಪ್ಪನವ ರು ೫ ಸಾವಿರ ರೂಪಾಯಿಗಳನ್ನೂ ಅರ್ಪಿಸಿದರು ಶ್ರೀಮಂತ ರಿಗೆ ದಾನವೇ ಶೋಭೆ.

— ರಾಜಕೀಯ ಮುಂದಾಳುಗಳಿಗೆ, ಸಮಾಚಾರಪತ್ರಿಕೆಗಳಿಗೆ ಆದೇಶ ದೊರೆಗಳು ಪರೋಪಕಾರಿಯಾಗಿ ಬಿಡುಗಡೆ ಮಾಡು ವದಾಗಿದೆಯೆಂದು ಪ್ರಕಟವಾಗಿದೆ. ಸ್ಟ್ಯಾಲಿನ್ ಕಾಟದ ಬಹಿಷ್ಕಾರ ನಿರ್ಧಾರದ ಒಲವನ್ನು ತಗ್ಗಿಸುವ ಉಪಾಯ ವೆನಿಸಿತು?

— ಕೊಲ್ಲಾಪುರದ ಆರ್ಯ ಸಮಾಜದವರು ಸ್ವಾಮಿ ಶ್ರ ...ನಂದರ ಸ್ಮಾರಕ್ಕಾಗಿ ಶ್ರದ್ಧಾನಂದ ಮಂದಿರವನ್ನು ಕ ಟ್ಟುವ ಸಂಕಲ್ಪ ಮಾಡಿದ್ದಾರೆ ೩೧ ಸಾವಿರ ರೂಪಾಯಿಗಳು ಬಿಟ್ಟಾಗಿವೆ. ಛತ್ರಪತಿಯವರು ಸ್ಥಳ ಕೊಟ್ಟಿದ್ದಾರೆ.

— ಪಾಶಕಸಂಸ್ಕೃತ 'ಶಿವಯ ಊರುಬಿಯಲ್ಲಿ ಶ ...ದರಿ ಯ ಮಹೋತ್ಸವವು ದರ್ಶನದಂತೆ ವಿಜೃಂಭ ಣೆಯಿಂದ ನಡೆಯಿತು ಈ ಸಿ.ಪಯಾರಾಯ ಸ್ವಾಮಿಗಳು ಶ್ರೀ ವೃತ್ತಿಗೆ ಮುಕ್ತ ಸ್ವಾಮಿಗಳು

— ಪಂಡಿತ ಮದನ ಮೋಹನ ಮಾಲವೀಯರವರು ಬಹಿ ಷ್ಕಾರವನ್ನ ಬಿಕ್ಕಟ್ಟಿನಿಂದ ಪುರಸ್ಕರಿಸಿ ಪರದೇಶೀ ಬಟ್ಟೆ ಗಳನ್ನು ಸಾಪ್ತಿ ಸಂಪೂರ್ಣವಾಗಿ ಬಹಿಷ್ಕರಿಸಿದರೆ, ೧೯೩೦ ನೇ ಇಸ್ವಿಯಲ್ಲಿ ಸ್ವರಾಜ್ಯಪ್ರಾಪ್ತಿಯಾಗುವದೆಂದು ಹೇಳಿದ್ದಾ ರೆ ಆ ಇಂಡು ಪಂಡಿತಜೀಯವರು ಒಂದು ಯೋಜನೆ ಯನ್ನೂ ತಯಾರಿಸಿದ್ದಾರೆ!

— ಸರ್ವಾಧಿಕಾರಿ ಅಮ್ಮನ್ ದೊರೆಗಳು ತಮ್ಮ ಅಧಿಕಾ ರತ್ಯಾಗ ಮಾಡುವವರಿದ್ದಾರೆಂದು ವಿಲಾಯತಿಯಲ್ಲಿ ಸುದ್ದಿ ಹಬ್ಬಿದೆ ಸಾಮ್ರಾಜ್ಯ ಸಂಚಾರದಿಂದ, ಸರ್ವಾಧಿಕಾರಿಗಳಿ ಗೂ ಅಲ್ಪಾವಧಿಯಲ್ಲಿಯೇ ಅನೇಕ ಮತಭೇದ ಕಾಣ ...ಕೊಂಡುದರಿಂದ ಸ್ಟ್ಯಾಲಿನ್ ಕಾಟದ ಸ್ಟ್ಯಾಲಿನ್ ಸಾಹೇಬರು ಅವರ ಗುಡಿಯನ್ನೇರುವರೆಂದು ...ಂದು ಸುದ್ದಿ ಬೇರಾಯ ಅಮೀರನ ಅಧ್ಯಕ್ಷರಾದ ಶಿನ್‌ಶಿಫ್ ಗೋ ದೊರೆಗಳು ಸರ್ವಾಧಿಕಾರಿಗಳಾಗಿ ಬರುವರೆಂದು ಪ ತ್ರಿಕೆಯ ಸುದ್ದಿ

— ಒಂದು ವರ್ತಮಾನ ಪತ್ರದಲ್ಲಿ ಈ ಪ್ರಕಾರ ಒಂದು ಜಾಹೀರಾತು ಪ್ರಕಟವಾಗಿದೆಂದು 'ಹೆರಲ್ಡ ಪತ್ರಿಕೆಯ ಲ್ಲಿ ಉಲ್ಲೇಖವಾಗಿದೆ. ಅದೇನಂದರೆ— "ಎಸ್ ಎ ಬಿ ಎಲ್ ಪಾಸಾದವನಿಗೆ ಒಂದು ಹೆಣ್ಣು ಬೇಕು ಮ ದುವೆಗನು ಶಿಕ್ಷಿತ ಸ್ವಯಾತು ಕುಲೀನ ಬ್ರಾಹ್ಮಣ ಜ್ಞ ತಿಯವನು ಉದ್ಯೋಗಗಳಲ್ಲಿ ನ್ಯಾಸನೆಯಿದ್ದಾಗ್ಯೂ ಅ ...ಯಲ್ಲಿ ಪರಿಪಕ್ವತೆ ಮಾತ್ರ ವಿಶೇಷ ಬೇಕು ಎ ಸ್ ಎ, ಬಿ ಎಲ್, ರಾದವರು ಪರಿಪಕ್ವತೆಗೆ ಮದುವೆಯಾ ಗುತ್ತಾರೇನು?

— ಪಂಡಿತ ಮದನ ಮೋಹನ ಮಾಲವೀಯರವರು ರಜ ಪುತಾನಾ ಸಂಸ್ಥಾನದಲ್ಲಿ ಸಂಚರಿಸಿ ೧೧ ಲಕ್ಷ ರೂಪಾ ಯಿಗಳನ್ನು ಶ್ರೀ ಕಾಶೀ ಕ್ಷೇತ್ರದೊಳಗಣ ಹಿಂದು ವಿಶ್ವವಿ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವಿಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ - ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ. (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೇರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ರುಚಿಕರವಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುವದು. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದುತ್ಪನ್ನವಾದ ರೋಗಗಳು ಹೋಗುವವು ೬೦ ೭೦ ವರ್ಷದ ಮುದುಕರ ಶಾರೀರಿಕ ಶಕ್ತಿ ಪುನಃ ವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಇದನ್ನುಪಯೋಗಿಸಿದ ಕೂಡಲೆ ಹೊಟ್ಟೆ ಹಸಿವು ಹೆಚ್ಚಾಗುವದು ... ಅಶಕ್ತತೆ ... ರಕ್ತದೋಷ ... ಮುಂತಾದ ರೋಗಗಳು ... ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ಮುಂತಾದ ... ದಿನದಲ್ಲಿ ಗುಣವಾಗಿ ... ಇದರ ಬೆಲೆ ... ಒಂದು ಬಾಟಲಿಗೆ ... ಒಂದು ಬಾಟಲಿಯ ಕಿಮ್ಮತ್ತು ೧॥ ರೂಪಾಯಿ ... ಅಂಚೆ ಖರ್ಚು ಬೇರೆ ...

ವ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೀ. ವಿಠ್ಠಲ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ವದೇ.]

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥು ನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋ ಗೋಣ, ಸ್ತ್ರೀಸ್ಪರ್ಶಮಾತ್ರ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕ್ಷೀಣತೆಯಲ್ಲಿಯು ಉಷ್ಣತೆ ಏರೋದು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿ ಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚು ತ್ತದೆ ವೀರ್ಯಸ್ಥಂಭನೆಯಾಗಿ ಶರೀರವು ಪುಷ್ಟವಾಗಿ ಸುಂದರ ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಹಿಂದಿನಂತೆ ಹಕ್ಕಿನಿಂದು ಅನುಭವಿಸಿರಿ (೫೦) ಪರಿಪತ್ರಿಗಳು ಮುಕು ಭಕ್ತಿಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಓದಿನೋಡುತ್ತ ಕಾಣುತ್ತದೆ ಓದಿಕೊಳ್ಳಿರಿ.

ಪ್ರಾತಃಕಾಲ ೨ ತೊಲೆಯು ೧ ಪಡಿ, ರಾತ್ರಿಯ ಭೋಜನವಾದ ನಂತರ ೨ ತೊಲೆಯು ಒಂದು ಪಡಿ ಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯ ಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಅಳ ತೊಲೆ ಯ ಒಂದು ಡಬ್ಬಿಗೆ ೫॥ ರೂ ೩ ಡಬ್ಬಿಗೆ ೧೫॥ ರೂ ೬ ಡಬ್ಬಿಗೆ ೨೭ ರೂ, ೧೨ ಡಬ್ಬಿಗೆ ೫೦ ರೂ ವಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನ ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಹೊಸ ಪಂಚಾಂಗ.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ.

ಪ್ರತಿ ೧ಕ್ಕೆ ರೂ ೦—೩—೦.
ಪ್ರತಿ ೨೫ ಕ್ಕೆ ರೂ. ೩—೮—೦
ಪ್ರತಿ ೫೦ ಕ್ಕೆ ರೂ. ೬—೮—೦
ಪ್ರತಿ ೧೦೦ ಕ್ಕೆ ರೂ ೧೨—೦—೦

ಪತ್ತೆ:- ಮೆನೇಜರ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

The Brittannia Life Assurance Company Ltd
Head Office Kitti Building
Fort, BOMBAY.

ಈ ಕಂಪನಿಯಲ್ಲಿ ನಮ್ಮ ಭಾರತೀಯರಿಗೆ ಬೇಕಾದ ಸವಲತು, ಸುಲಭ ಕರಾರು, ಹೆಚ್ಚಿನ ಫಲಿತಾಂಶ, ನಿಶ್ಚಿತ್ಪಟ್ಟನಿಂದ ಆಡಳಿತ ನಡೆಸುವ ಬುದ್ಧಿ-ಕೌಶಲ್ಯತೆಯುಳ್ಳ ಅಧಿಕಾರಿಗಳು ಇದ್ದು ಕ್ಷಣಮಾತ್ರದಲ್ಲಿ ವಿಮೆಯನ್ನಿಳಿಸಬಹುದು. ಇದರ ಕಂತುಗಳು ಬಹಳೇ ಕಡಿಮೆಯಾಗಿರುವವು ಆದುದರಿಂದ ಪುನಃ ಪುನಃ ಈ ಕಂಪನಿಯಲ್ಲಿಯೇ ವಿಮೆಯನ್ನಿಳಿಸಬೇಕೆಂದು ಹೇಳತಕ್ಕದ್ದು ಸಾಹಜಿಕದ ಮಾತಾಗಿದೆ.

ಈ ಸುಸಂಧಿಯನ್ನು ನೋಡಿ ಬೇಕಾದ ಮಹನೀಯರು ನಮ್ಮ ಏಜಂಟರಾಗಲು ಇದೇ ತಕ್ಕ ಸಮಯವು. ಬೇಕಾದ ಅನುಭವ, ಏಜನ್ಸಿಯ ಕರಾರುಗಳು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ದಿ ಬ್ರಿಟಾನಿಯಾ ಲೈಫ ಇನ್ಸುರೆನ್ಸ ಕಂಪನಿ ಲಿಮಿಟೆಡ್
ಹೆಡ್ ಆಫೀಸ-ಕಿಟ್ಟಿ ಬಿಲ್ಡಿಂಗ ಫೋರ್ಟ,
ಮುಂಬಯಿ.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,
ಕಾಳಬಾದೇವಿ ರೋಡ,
ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಕಲ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಬೆಪಾರಿ ಕಾಗದ ರೋಖ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ; ಖರೇದಿ ಮಾಡಿಕೊಡುವ ಮಾಲಿನ ಪೇಟೆಯಲ್ಲಿರುವ ಧಾರಣೆಗಿಂತ ಅಧಿಕವಿಸಲ್ಲದುದರಿಂದ ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗ ತರಿಸಿಕೊಳ್ಳಿ. ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ ೪-೮-೦)
(ಈ ಗಡಿಯಾರಕ್ಕೆ ಸರಕಾರದ ಛಾಪು ಹಾಕಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ! ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ - ಫೌಂಟೆನ ಪೇನಾ ೧, ಹೇರಾಯಿಲ್ ಬಾಟಲಿ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್‌ಲೇಸ ಎಂಬ ಕತ್ತಿನ ಹಾರ ೧, ಪಂತಪ ಬಾಹಣೆಗೆ ೧ ಕೆ ಗುಂಡಿಗಳ ಸಟ್ ೧, ಕೈವಸ್ತ್ರ ೧ ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ ಬರೇ ರೂ.೪-೮-೦

ಪತ್ತೆ — **ಇಂಗ್ಲೀಷ ಎಂಪೋರಿಯಂ,**
ಪೋಸ್ಟ ಬಾಕ್ಸ ನಂ. ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ



ಈ ಪಟ್ಟೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು, ಇದಕ್ಕೆ ೧೪ ಕ್ಯಾರೆಟ್ಟಿನಂಥ ನಿಬ್ಬ ಹಾಕಿದೆ. ಇದರಿಂದ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೆನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.
ಪತ್ತೆ—ಸಿಟೆರ್ ವಾಚ್ ಕಂಪನಿ ಪೋ ಬಾಕ್ಸ ನಂ. ೨೬ ಮದರಾಸು.

ಕಲ್ಪಕರು ಮಿಶ್ರಣ

ಎಂದರೆ,
ಚಳಿ ಜ್ವರದ ಮೇಲೆ ದಿವ್ಯೌಷಧ

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಹೇಳಬಹುದು -

ವಿಷ ಕಲ್ಪಕಗುನಾಮ ರಸಃ ಪರಮ ಪ ಲಭಃ | ಅಸಾಧ್ಯಂ ಚಿರಕಾಲೋತ್ಥಂ ಜೀರ್ಣಂ
ಚ ವಿಷಮ ಜ್ವರಮ್ | ಹಂತಿ ಜ್ವರಾತಿಸಾರಂ ಚ ಗ್ರಹಣೀಂ ಪಾಂಡು ಕಾಮಲಾಮ್ ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪಕರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪಕರು ಮಿಶ್ರಣವು ಅನುಭವದಿಂದಲೂ ಕಲ್ಪಕರು ಎನಿಸುವಂತೆ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ. ಜಂಗಲದೊಳಗಣ ಹಳ್ಳಿಗರು ಕಲ್ಪಕರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು. ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪಕರು ಮಿಶ್ರಣದಿಂದ ಪರಿಹಾರವಾಗುತ್ತದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ.

೬ ಔನ್ಸಿನ ಬಾಟ್ಲಿಗೆ ರೂ. ೧-೬-೦.

ನಮ್ಮ ಪತ್ತೆ:- **ವೈದ್ಯ ಬಿ. ಆರ್. ಹರಿದಾಸ,**
ಶ್ರೀ ಸನಾತನ ಫಾರ್ಮಸಿ, ಗಡ್ಡಿಕೇರಿ, ಮಂಗಳೂರು
ಕುಮಟಾ ಏಜಂಟ – ಕಲಬಾಗ ಮಾಧವ ರಾಮ ಶ್ಯಾನಭಾಗ

ವಿವಿಧ ಸಂಗ್ರಹ.

ಬ್ರಿಟಿಶ ರಾಜ್ಯಪದ್ಧತಿಯ ಫಲ.

ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಸ್ವಾತಂತ್ರ್ಯವೋ? ಸ್ವರಾಜ್ಯವೋ?" ಎಂಬ ಲೇಖ ಬರೆಯುವಾಗ, ಬ್ರಿಟಿಶ ರಾಜ್ಯಪದ್ಧತಿಯಿಂದ ಭರತ ಖಂಡದಲ್ಲಿ ಉಂಟಾದ ಅವಸ್ಥಾಂತರಗಳನ್ನು ಸಂಕ್ಷಿಪ್ತವಾಗಿಯೂ, ಚಿತ್ತವೇಧಕವಾಗಿಯೂ ಬಣ್ಣಿಸಿದ್ದಾರೆ. ಅವರು ಬರೆಯುವದೇನಂದರೆ.- "ಇಂಗ್ಲಿಷರ ... ಗವನ್ನು ಧಿಕ್ಕರಿಸಲು ನಾನು ಹೇಟಾಡುತ್ತಿದ್ದೇನೆ, ... ದಕ್ಕಾಗಿ ಬೇಕಾದ ತ್ಯಾಗವನ್ನು ಮಾಡಲು ಸಿದ್ಧನಿದ್ದೇನೆ, ಅರಾಜಕತೆಯನ್ನೂ ನಾನು ಅಂಗೀಕರಿಸುವೆನು. ಯಾಕೆಂದು ಕೇಳುತ್ತೀರಾ? ಬ್ರಿಟಿಶ ರಾಜ್ಯದಿಂದುಂಟಾದ ಶಾಂತತೆಯು ಸ್ಮಶಾನಶಾಂತತೆಯಿರುತ್ತದೆ. ಇಡೀ ರಾಷ್ಟ್ರಕ್ಕೇ ವ್ಯಕ್ತಿಪ್ರಾಯ ಮಾಡುವ ಸ್ಥಿತಿಗಿಂತ ಬೇರೆ ಯಾವದೇ ಸ್ಥಿತಿಯು ಒಳಿತು. ಈ ರಾಷ್ಟ್ರದ ... ರ ಷಂಡತನದಿಂದ ಈ ಸಮೃದ್ಧ ದೇಶವು ... ತರವಾಗಿ ನಾಶವನ್ನೈದಿದೆ. ಇದರಲ್ಲೂ ನಷ್ಟ, ... ರದಲ್ಲೂ ನಷ್ಟ, ನೀತಿಯೂ ಭ್ರಷ್ಟವಾಗಿದೆ ಈ ... ದ ತಿಯಿಂದ ಹುಟ್ಟಿದ ನ್ಯಾಯಾಸನಗಳಲ್ಲಿ ನ್ಯಾಯ ... ಗುವದಿಲ್ಲ, ಸತ್ಯದ ಕೊಲೆಯಾಗುತ್ತದೆ ... ದನ್ನು ನಾನು ನಿತ್ಯವೂ ಕಣ್ಣಾರೆ ಕಾಣುತ್ತೇನೆ. ನಾನು ಈಗಲೇ ಬರಿಸಾರ ಪ್ರಾಂತದಿಂದ ಮರಳಿದ್ದೇನೆ. ಅಲ್ಲಿ ಪ್ರಜೆಗಳಿಗೆ ಭಯಂಕರವಾಗಿ ಪೀಡಿಸಲಾಗುತ್ತಾರೆ. ಈ ರಾಜ್ಯಪದ್ಧತಿಯು ತನ್ನ ಪಾಪಿ ಆಯುಷ್ಯವನ್ನು ಬೆಳಿಸಿಕೊಳ್ಳುವದಕ್ಕಾಗಿ ನನ್ನ ದೇಶಬಾಂಧವರನ್ನೇ - ಕೂಲಿಗೊಂಡೆಗಳಾಗಿ ಸಾಧಿಸುತ್ತದೆ. ಖುದಾ ಹಳ್ಳಿಯಲ್ಲಿ ಗುಂಡು ಹಾಕಿ ಕೊಡೆಯುತ್ತೇವೆಂದು ಪ್ರಜೆಗಳಿಗೆ ಬೆದರಿಕೆ ಹಾಕಿ, ತೀರ್ವೆಯನ್ನೇರಿಸುವ ಯೋಜನೆಗೆ ಪ್ರಜೆಗಳಿಂದ ಒಪ್ಪಿಗೆ ಕೊಳ್ಳೋಣಾಯಿತೆಂದು ... ಅನೇಕ ಪ್ರತಿಜ್ಞಾಪತ್ರಗಳಿವೆ. ಈ ರಾಜ್ಯಪದ್ಧತಿಯಲ್ಲಿ ಅಪರಿಮಿತವಾದ ದುಂದುಗಾರಿಕೆ ನಡೆಯುತ್ತದೆ. ನಮ್ಮಲ್ಲಿಯ ರಾಜರೂ, ಮಹಾರಾಜರೂ ಅದಕ್ಕೆ ಮರುಳಾಗಿ ದುಂಗಗಳಂತೆ ಅದನ್ನು ಅನುಕರಿಸಿ ತಮ್ಮ ಪ್ರಜೆಗಳಿಗೆ ಸುಲಿಯುತ್ತಾರೆ ಈ ನಡತೆಯ ಪರಿಣಾಮವನ್ನು ಅವರು ಲಕ್ಷಿಸ ಪದಿಲ್ಲ ಬ್ರಿಟಿಶವ್ಯಾಪಾರವು ನೀತಿಭ್ರಷ್ಟವಿದೆ. ಅದನ್ನು ಸಂರಕ್ಷಿಸಿಕೊಳ್ಳುವದಕ್ಕಾಗಿ ಬೇಕಾದ ಅಧಮ ಉಪಾಯಗಳನ್ನು ಈ ರಾಜ್ಯಪದ್ಧತಿಯು ಕೈಕೊಳ್ಳುತ್ತದೆ. ೩೦ ಕೋಟಿಜನಾಂಗವನ್ನು ೧ ಲಕ್ಷ ಜನರು ತಮ್ಮ ಅಂಕೆಯಲ್ಲಿಡುವ ಉದ್ದಿಶ್ಯ ಅಪರಿಮಿತವಾಗಿ ಸೈನ್ಯ ಖರ್ಚು ಮಾಡಲ್ಪಡುತ್ತದೆ ಇದರಿಂದ ಲಕ್ಷಾವಧಿ ಜನರು ಅರೆಹೊಟ್ಟೆ ಉಂಡು ಕಾಲಹರಣ ಮಾಡಬೇಕಾಗುತ್ತದೆ, ಮಾದಕ ಪದಾರ್ಥಗಳನ್ನು ಸೇವಿಸಹಚ್ಚಿ ಸಾವಿರಾರು ಮಂದಿಗಳಿಗೆ ಭ್ರಷ್ಟಗೊಳಿಸುತ್ತದೆ." ಮಹಾತ್ಮರಂಥ ಸಾಧುಶ್ರೇಷ್ಠರೂ, ಅಹಿಂಸಾವಾದಿಗಳೂ, ಔದಾರ್ಯವಂತರೂ, ಗುಣೈಕದೃಷ್ಟಿಯುಳ್ಳವರೂ, ಸತ್ಯಸಂಧರೂ ಕೊಟ್ಟ ಈ ಅಭಿಪ್ರಾಯವನ್ನು ಬ್ರಿಟಿಶ ಸಾಮ್ರಾಜ್ಯಕರ್ತರು ಪರಾಂಬರಿಸತಕ್ಕದ್ದು. ಬ್ರಿಟಿಶ ರಾಜ್ಯದಿಂದಲೇ 'ಹಿಂದುಸ್ಥಾನಕ್ಕೆ ಸ್ವರ್ಗಪ್ರಾಪ್ತಿಯಾಯಿತೆಂದು ತಿಳಿಯುವ ಪುಣ್ಯಾತ್ಮರೂ ಇದನ್ನು ವಿಚಾರಿಸತಕ್ಕದ್ದು

***

ಬ್ರಿಟಿಶರ ದುಂದುಗಾರಿಕೆಯ ಮಾದರಿ.

ನಮ್ಮಲ್ಲಿಯ ಸರಕಾರಕ್ಕೆ ಹಣದ ಬಹಳ ಅಡಚಣೆ. ಶಿಕ್ಷಣ, ಆರೋಗ್ಯ ಮುಂತಾದ ಲೋಕೋಪಕಾರಿ ಕಾರ್ಯಗಳಿಗೆ ಸರಕಾರದ ಹತ್ತರ ಹಣವಿಲ್ಲ. ಒಮ್ಮೆ ಹೇರಿದ ಕರವು ಕೋಳಿ ನುಂಗಿದ ಕಲ್ಲಿನಂತೆ ಪುನಃ ಇಳಿಸುವ ಗೊಡವೆ ಇಲ್ಲ! ಏನಿಸಬೇಕಾದರೆ, ೧೦ ವರ್ಷಗಳ ಬಗ್ಗೆ ಅತಿ ಹೇಳಿ, ಅಪತ್ಕಾಲ-ಪ್ರಯೋಗ ಮುಂತಾದವುಗಳಿಗೆ ಬೊಟ್ಟು ತೋರಿಸಿ ಮುಗ್ಗಿಸಿಕೊಳ್ಳುತ್ತಾರೆ ಈಗೇನು ಅವತ್ತಿಲ್ಲ, ಅದರೂ, ಆ ಕಾಯಿದೆಯನ್ನು ಸ್ಥಿರಪಡಿಸುವ ಕಾನೂನು ಮುಂದಿನ ಮುಂಬಯಿ ಕೌನ್ಸಿಲಿನಲ್ಲಿ ಸೂಚಿಸಲ್ಪಡುವದಿದೆ ಸದ್ಯಕ್ಕೆ ಹಿಂದುಸ್ಥಾನ ಸರಕಾರದಲ್ಲಿ ನಡೆದ ಒಂದು ಪ್ರಕಾರವನ್ನು ಕೇಳಿ! ಹಿಂದುಸ್ಥಾನ ಸರಕಾರದ ಫಿನೆನ್ಸ ಕಮಿಟಿ ಯಾನೆ ಅರ್ಥಿಕ ಮಂಡಳವು ಸರ್ವಾಧಿಕಾರಿಗಳ ಅರಮನೆಯಲ್ಲಿ ವಿಶೇಷ ಖರ್ಚು ಮಾಡಲು

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಜಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂದಲಿ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—:0:—

೪ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೦—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಓಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ನಾನಾತರ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಓಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.ದಿಲ್ಲ

THE ANGLO INDIAN DRUG & CHEMICAL CO. LTD.

POST BOX, 2082 BOMBAY.

ಒಟ್ಟು ೮೯ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿದೆ. ವಿಶೇಷ ಖರ್ಚು ಮಾಡಲು ಇನ್ನೇ ಸಮಯವಿಲ್ಲವೇ? ಈ ರಕಮಿನ ವಿವರವೇನೆಂದರೆ — ಅಡಿಗೆ ಪಾತ್ರೆಗಳನ್ನು ಕೊಳ್ಳಲು ೪೧ ಸಾವಿರ ರೂಪಾಯಿ, ಹಿ ಹೋ! ಹೋ! ಹೋ!! ಸರ್ವಾಧಿಪತಿಗಳು ಉಣ್ಣುವದೆಷ್ಟು? ಈಗಿರುವ ಪಾತ್ರೆಗಳೇನಾದವು? ಸಾರು ಬಿಚ್ಚಿಗಾಗಿ ೨೫ ಸಾವಿರ ರೂಪಾಯಿಗಳು! ಕಲಾಕೌಶಲ್ಯದ ಸಾಮಾನುಗಳಿಗಾಗಿ ೧೩ ಸಾವಿರ!! ಗ್ರಂಥಸಂಗ್ರಹಕ್ಕಾಗಿ ೧೦ ಸಾವಿರ!!! ಪರರ ಹಣ ಸಿಕ್ಕಿದರೆ, ಕೋಟ್ಯಾವಧಿ ರೂಪಾಯಿಗಳನ್ನು ಸಹ ಖರ್ಚು ಮಾಡಲು ಸಾಧ್ಯವಿದ್ದು ತಿಯಲ್ಲ ಇಂಥಿನೆ ನಾವು ಬಡವರಿದ್ದುದರಿಂದ ಸಾವಿರಾರು ರೂಪಾಯಿಗಳೇ ಹೋಗುತ್ತವೆ!

* * *

ಬ್ರಿಟಿಶ ರಾಜ್ಯದೊಳಗಣ ದುಂದುಗಾರಿಕೆಯ ಇನ್ನು ಕೆಲವು ಉದಾಹರಣೆಗಳು!

ಈಗಿನ ರಾಜ್ಯಪದ್ಧತಿಯಲ್ಲಿ ಪ್ರಜೆಗಳ ಬೇಡಿಕೆಗಳಿಗೆ ಲಕ್ಷ್ಯ ಕೊಡುವ ಒಂದು ಸುಲಭ ಯುಕ್ತಿಯಿದೆ. ವಿಶೇಷ ವಾದವೆದ್ದು ಲೋಕಜಾಗೃತಿಯುಂಟಾದಾಗ ಅವರಿಗೆ ಸಮಾಧಾನಪಡಿಸಲು ರಾಜ್ಯನಿರ್ವಾಹಕರು ಚೌಕಶಿ ಮಂಡಳಗಳನ್ನು ನೇಮಿಸುತ್ತಾರೆ. ಈ ಚೌಕಶಿ ಮಂಡಳಗಳಿಗೆ ವಿಪರೀತ ಖರ್ಚು ಬರತಕ್ಕದಾಗಿ ಚರ್ಚಿನ ವಿಷಯ ಚೌಕಶಿ ಮಾಡಿದ ಇನ್ನೊಂದು ಚೌಕಶಿ ಮಂಡಳವು ಅಭಿಪ್ರಾಯಪಟ್ಟು, ಚೌಕಶಿ ಮಂಡಳಗಳನ್ನು ಹೀಗೆ ನೇಮಿಸಬಾರದಾಗಿ ಸೂಚನೆ ಮಾಡಿತ್ತು. ಆ ಸೂಚನೆಯನ್ನು ನಮ್ಮ ಹಿಂದುಸ್ಥಾನ ಸರಕಾರವು ಉಲ್ಲಂಘಿಸಿ ನಡೆದದ್ದಕ್ಕೆ ಇಂಚಕೇಪ ಕಮೀಟಿಯವರು ೧೯೧೩ ನೇ ಇಸ್ವಿಯ ಎಪ್ರಿಲ್ ೧ನೇ ತಾರೀಖಿನಿಂದ ೧೯೨೨ನೇ ಇಸ್ವಿ ಮಾರ್ಚ ಅಖೇರ ತನಕ ಸರಕಾರದಿಂದ ೬೫ ಚೌಕಶಿ ಮಂಡಳಗಳು ನೇಮಿಸಲ್ಪಟ್ಟವೆಂದು ಆಕ್ಷೇಪಿಸಿತು. ಅವುಗಳಿಗಾಗಿ ೬೮ ಲಕ್ಷ ಖರ್ಚು ಬಿತ್ತು. ಅವುಗಳ ವಿವರ:—ಜೈಲು ಚೌಕಶಿ ಮಂಡಳಕ್ಕೆ ೨½ ಲಕ್ಷ, ಇಸ್ಲಿಂಗಟನ್ ಚೌಕಶಿ ಮಂಡಳಕ್ಕೆ ೧೮½ ಲಕ್ಷ, ಸಂಧಾರಣೆಯ ಮಂಡಳಕ್ಕೆ ೬ ಲಕ್ಷ, ಉಗಿಬಂಡಿಯ ಮಂಡಳಕ್ಕೆ ೪½ ಲಕ್ಷ; ಕಲಕತ್ತೆಯ ವಿಶ್ವವಿದ್ಯಾಲಯದ ಮಂಡಳಕ್ಕೆ ೩½ ಲಕ್ಷ, ಆರ್ಥಿಕ ಮಂಡಳಕ್ಕೆ ೨½ ಲಕ್ಷ, ಸಕ್ಕರೆ ಮಂಡಳಕ್ಕೆ ೩½ ಲಕ್ಷ; ಔದ್ಯೋಗಿಕ ಮಂಡಳಕ್ಕೆ ೩ ಲಕ್ಷ; ನಾಣ್ಯ ಮಂಡಳಕ್ಕೆ ೩ ಲಕ್ಷ ೨ ಲಕ್ಷಕ್ಕೆ ಮಿಕ್ಕದ ಇನ್ನೂ ಅನೇಕ ಮಂಡಳಗಳಿವೆ. ೯ ವರ್ಷಗಳಲ್ಲಿ ಚೌಕಶಿ ಮಂಡಳಗಳಿಗೆ ೬೮ ಲಕ್ಷ ರೂಪಾಯಿ ಖರ್ಚಾದದ್ದು ವಿಪರೀತವಾಯಿತೆಂದು ಇಂಚಕೇಪ ಕಮೀಟಿಯವರು ಹೇಳಿದ ಬಳಿಕ, ೫ ವರ್ಷಗಳಲ್ಲಿ ೧ ಕೋಟಿ ರೂಪಾಯಿ ಖರ್ಚು ಮಾಡಿ ಸರಕಾರವು ಮಂಡಳಗಳ ಮೇಲೆ ಮಂಡಳಗಳನ್ನು ನೇಮಿಸಿಬಿಟ್ಟಿತು. ಲೀ ಮಂಡಳ, ಶೀ ಮಂಡಳ, ಸ್ಕೀನ ಮಂಡಳ, ನೌಕಾ ಮಂಡಳ, ನ್ಯಾಯ ಮಂಡಳ ಸಹಕಾರಿ ಮಂಡಳ, ಸುಧಾರಣಾ ವಿಚಾರ ಮಂಡಳ, ನಾಣ್ಯದ ಇನ್ನೊಂದು ಮಂಡಳ, ಕರ ವಿಚಾರ ಮಂಡಳ, ಕಲ್ಲಿದ್ದಲಿಯ ಕುರಿತು ಎರಡು ವಿಚಾರ ಮಂಡಳಗಳು, ಹತ್ತಿಯ ಕುರಿತು ಒಂದು ವಿಶೇಷ ವಿಚಾರ ಮಂಡಳ, ಉಕ್ಕಿನ ಕುರಿತು ೬ ವಿಚಾರ ಮಂಡಳಗಳು, ಬೇಸಾಯ ಕಮಿಶನು; ಹೀಗೆ ಮಂಡಳಗಳು ನೇಮಿಸಲ್ಪಟ್ಟವು.

ಮತ್ತೆ ಇಂಚಕೇಪ ಕಮೀಟಿಯಂಥವರು ಖರ್ಚು ಕಡಿಮೆ ಮಾಡಬೇಕೆಂದು ಶಿಫಾರಸು ಮಾಡಿದರೆ, ನಮ್ಮ ಹಿಂದುಸ್ಥಾನ ಸರಕಾರವು ಮತ್ತು ಮಾರಿಗೆ ಚೌಕಶಿ ಮಂಡಳಗಳನ್ನು ನೇಮಿಸಿ ೫ ವರ್ಷಗಳಲ್ಲಿ ಇನ್ನೆರಡು ಕೋಟಿ ರೂಪಾಯಿಗಳನ್ನು ಖರ್ಚ ಮಾಡಿ ಬಿಡುವದು. ಈ ಕಮೀಟಿಗಳ ಕುರಿತು "ಇಂಗ್ಲಿಶಮನ್" ಎಂಬ ಸರಕಾರ ಪಕ್ಷಪಾತಿ ಪತ್ರಿಕೆಯಲ್ಲಿ ಕೆನಿ ಸ್ಕ್ರಿಟ್ ಎಂಬವರು ಚರ್ಚಾ ಪತ್ರವನ್ನು ಕೊಟ್ಟಿದ್ದಾರೆ. "ಎಲ್ಲಾ ಕಮಿಟಿಗಳೂ, ಕಮಿಶನುಗಳೂ ನಿಷ್ಪ್ರಯೋಜಕವೆಂದು ನನ್ನ ಹೇಳಿಕೆ. ಇಲ್ಲಿ ಕೆಲವು ಅಗತ್ಯವಾಗಿದ್ದವು ಅಹರೆ, ಮೇಲ್ಕಂಡ ಅಂಕಿಗಳನ್ನು ನೋಡಿದರೆ, ವಿಚಾರ ಮಾಡುವ ಪ್ರಸಂಗ ಬಂದಿದೆ. ೫ ವರ್ಷಗಳ ಹಿಂದೆ ಇಂಚಕೇಪ ದೊರೆಗಳು ೬೮ ಲಕ್ಷ ರೂಪಾಯಿ ಖರ್ಚ ಮಾಡಿದ್ದು ಅಯೋಗ್ಯವಾಯಿತೆಂದು ನುಡಿದರು. ಇತ್ತ ೫ ವರ್ಷಗಳಲ್ಲಿ ೧ ಕೋಟಿಯ ತನಕ ಖರ್ಚಾಗಿದೆ [illegible] ರಗಳು [illegible] ಮಾಡಿದ ವು [illegible] ಕಮಿಶನು [illegible] ಕಮಿಟಿ [illegible] ಹೇಳಿದರು [illegible] ಚೌಕಶಿ ಮಾಡಲು [illegible] ಕಮೀಟಿಯ [illegible] ಸರಕಾರಕ್ಕೆ ಅವಶ್ಯಕವೆಂದು [illegible] ಪ್ರಯಾಸವಾಗಿದೆ, ಮನೋಭಾವದಿಂದ, [illegible] ಮಾಡಿಗ ಸಮಿತಿಗಳು ನೇಮಿಸಲ್ಪಡುತ್ತವೆ."

* * *

ತುಕೋಜಿ ಮಹಾರಾಜರ ಪ್ರಣಯ ಲೀಲೆ

ತುಕೋಜಿ ಮಹಾರಾಜರಿಗೆ ಮಿಸ್ಲರ ಕೂಡನೆ ಮದುವೆಯಾಗಲು [illegible] ಕೂಡಿದ್ದ ವಾರ್ತೆ ಶುಭವೆಂದು ತಿಳಿಸಲಾಗಿತ್ತು. ಆ ವಾರವು ಕಳೆದುಹೋಯಿತು. ಆದರೂ, ಆ ವಿಷಯದ ಚರ್ಚೆಯು ಇನ್ನೂ ಬಯಲಾಗಲಿಲ್ಲ. ಶುಕೋಜೀರಾಯರು ಕೋಲುಂಬೋದಲ್ಲಿದ್ದು, ಇನ್ನೂ ಸಂಪೂರ್ಣವಾಗಿ ಗುಣ ಹೊಂದಲಿಲ್ಲ. ಮಿಸ್ಲರು ಮಹಾರಾಜರ ಬಳಿಯಲ್ಲಿಯೇ ಮಹಾರಾಜರ ಶುಶ್ರೂಷೆ ಮಾಡುತ್ತ ಇದ್ದಾಳೆ. ಮಿಸ್ಲರಳಿಗೆ ಹಿಂದು ಧರ್ಮದೀಕ್ಷೆಯನ್ನು ಕೊಡಲು ಮಹಾರಾಜರು ಮಾಡಿದ ಪ್ರಯತ್ನಗಳು ಸಫಲವಾಗುವ ಲಕ್ಷಣಗಳು ಕಾಣುತ್ತಿವೆ. ಮುಂಬಯಿಯ ಶಿವಾಜಿ ಮಂದಿರದ ಹಿಂದಿನ ಕಾರ್ಯಕರ್ತರುಗಳಾದ ಡಾ| ಸವರಕರರವರು ಮಹಾರಾಜರಿಗೆ ತಂತಿ ಕಳಿಸಿ, ಮಿಸ್ಲರಳಿಗೆ ಮರಾಠರು ಸ್ವಸಮಾಜದಲ್ಲಿ ಸೇರಿಸಿಕೊಳ್ಳಲು ಸಿದ್ಧರಿರುವರೆಂದು ಫೆಬ್ರುವರಿ ೨ ನೇ ತಾರೀಖಿಗೆ ತಿಳಿಸಿದರು. ಮಹಾರಾಜರು ಉಪಕಾರ ಮನ್ನಿಸಿ, ಮುಂದೆ ತಿಳಿಸುವೆವಾಗಿ ಉತ್ತರ ಕೊಟ್ಟಿದ್ದಾರೆ. ಡಾ| ಸಾವರಕರರವರೂ ಮಹಾರಾಜರಿಗೆ ಹಿಂದು ಶ ಕಿ ಬಿಟ್ಟಿದ್ದಾರಂತೆ ಹಿಂದು ಧರ್ಮದಲ್ಲಿ ಮಿಸ್ಲರಳನ್ನು ಸೇರಿಸಿಕೊಳ್ಳಲು ಸಾಧ್ಯವಿರುವದಾಗಿ ಅಭಿಪ್ರಾಯಪಟ್ಟು, ಆ ವಿಷಯ ಮಹಾರಾಜರ ಹಿತ ಮಾಡುವದು ಅವಶ್ಯವಿಲ್ಲವಾಗಿ ತಿಳಿಸಿದ್ದಾರೆ. ಡಾ| ಸವರಕರರವರೂ, ಸಾವರಕರರವರೂ ಮಿಸ್ಲರಳ ಹಿಂದು ಧರ್ಮಾಂತರದ ವಿಷಯ ಪ್ರಯತ್ನಪಡುವದೇಕೆ? ಅವರಿಂದ ಹಿಂದು ಧರ್ಮಕ್ಕೆ ಪ್ರೋತ್ಸಾಹವಿದೆಯೇ? ಮಹಾರಾಜರಿಗೆ ಇಷ್ಟ ಹೆಂಡಂದಿರಿರುತ್ತಾ ನ ಮತ್ತೊಬ್ಬಳನ್ನು ಮದುವೆ ಮಾಡಿಕೊಳ್ಳಲು ಅನುಕೂಲತೆಗಳನ್ನು ಹುಡುಗಿಸಿ ಕೊಡುವದು ಪ್ರಾಯಶ್ಚಿತ್ತವು?

* * *

ಒಂದು ಕೋರ್ಟಿನ ವ್ಯವಹರಣೆ.

ಅಲಿಪುರದ ೧ನೇ ವರ್ಗದ ಎಡಿಶನಲ್ ಸಬಜಡ್ಜ ಕೋರ್ಟಿನಲ್ಲಿ ಒಂದು ಹಿಕೆ ಹಾಗು ಲೆಕ್ಕಾಚಾರದ ದಾವೆಯ ವಿಚಾರವು ನಡೆಯುತ್ತಿದೆ. ಈ ದಾವೆಯನ್ನು ಕಲ್ಕತ್ತಾ ಮಾರವಾಡಿಗಳು ಒಬ್ಬರು [illegible] ಮುಂತಾದವರ ಮೇಲೆ ದಾಖಲು ಮಾಡಿದ್ದಾರೆ. ಈ ದಾವೆಯು ೧೯೨೭ ನೇ ಇಸ್ವಿಯಲ್ಲಿ ದಾಖಲಾಯಿತು. ಇನ್ನೂ ವಿಚಾರವಾಗುತ್ತಿದೆ. ಲೆಕ್ಕ ಪತ್ರ ತಪಾಸಣೆಗಾಗಿ ರಾಯಬಹಾದ್ದೂರ [illegible] ಕಮಿಶನರರನ್ನಾಗಿ ನೇಮಿಸಿತು. [illegible] ಸಬಜಡ್ಜರಾಗಿ ನಿವೃತ್ತಿ ಹೊಂದಿದವರು ೭ ವರ್ಷಗಳ ತನಕ ಲೆಕ್ಕ ತಪಾಸಣೆ ಮಾಡಿದರು. ಆ [illegible] ಕಮಿಶನರಿಗೆ [illegible] ರೂಪಾಯಿ ವೇತನ ಸಿಕ್ಕಿತು. [illegible] ಕೆಲವು ಬಾಬುಗಳನ್ನು ವಿಚಾರಿಸಲಿಲ್ಲವಾದ್ದರಿಂದ [illegible] ಅಡ್ವೋಕೇಟ [illegible] ಭಟ್ಟಾಚಾರ್ಯ ಜಿಯವರು [illegible] ನೇಮಿಸಲ್ಪಟ್ಟರು. ಇವರು [illegible] ವಿಚಾರ ಮಾಡಿ ೧೯೨೫ನೇ ಇಸ್ವಿಯ [illegible] ರಿಪೋರ್ಟ ಬರೆದರು. ಇವರು [illegible] ಬಾಬಾವಿಗಳನ್ನೂ, ರಶೀದಿಗಳನ್ನೂ [illegible] ರಿಪೋರ್ಟ ಒಪ್ಪಿಸಿದ್ದರು. ಆ ರಿಪೋರ್ಟ, ದಾಖಲೆಗಳೂ ಕೋರ್ಟಿಗೆ [illegible] ದಾಖಲೆಗಳನ್ನು ವಹಿಸಿಕೊಳ್ಳುವಾಗ [illegible], ಅನೇಕ ದಾಖಲೆಗಳಿಗೆ [illegible] ಅವರಿಂದ ಆ ಬಾಬಾವಿಗಳನ್ನು ಕಮಿಶನರರ [illegible] ಪ್ರತಿಯ ಮೇಲಿಂದ ಪುನಃ [illegible] ಕೋರ್ಟು [illegible] ವಿಚಾರವು ಪುನಃ ಪ್ರಾರಂಭವಾಯಿತು. ಈಗಲೇ [illegible] ವರ್ಷಗಳಿಂದವು ಎರಡನೇ ಕಮಿಶನರರು ೧೯ ಸಾವಿರ ರೂಪಾಯಿ ಫೀ ಪಡೆದರು. ವಕೀಲರ ಫೀ ಎಷ್ಟೆಂದು ಕಲ್ಪಿಸಿರಿ. [illegible] ಎಲ್ಲಾ ಫೀ ಕೊಟ್ಟು ವಾದಿ ಪ್ರತಿವಾದಿಗಳ [illegible] ಉಳಿಯುವದೆಷ್ಟು ಎಂಬುದನ್ನು ವಿಚಾರ ಮಾಡಿ ನೋಡಲು ತಿಳಿಯದು.

— ಅಫಗಾಣಿಸ್ಥಾನದ ಅಮೀರರು ಅಮೇರಿಕೆಯವರು ನಿಮಂತ್ರಣವಿತ್ತಿದ್ದರೆ ಆ ಕಾರಣ ಅಫಘಾನ ಅಮೇರಿಕೆಯ ಲಿಗಾಧಿಗಳ ಸ್ವಾಗತದ ತಯಾರಿ ನಡೆಯುತ್ತಿದ್ದಾರೆ.

— ಮಾಲಘಾಟ ಮುನಿಸಿಪಾಲಿಟಿಯವರು ಆಯುರ್ವೇದ ಔಷಧಾಲಯಕ್ಕಾಗಿ ಒಂದು ನೋಟೀಸನ್ನು ತೆಗೆದರು. ಮಧ್ಯಪ್ರಾಂತ ಸರಕಾರದ ಅಪ್ಪಣೆ ಬೇಕಿದ್ದರೂ ಸರಕಾರವು ಅದನ್ನು ತಳ್ಳಿಹಾಕಿದೆ.

ಸೂರ್ಯ ನಮಸ್ಕಾರ.

ಗ್ರಂಥ ವಿಮರ್ಶೆ.

ಔಂಧ ಸಂಸ್ಥಾನಾಧಿಪರಾದ ಶ್ರೀಮಂತ ಭಾವನರಾವ ಶ್ರೀನಿವಾಸರಾವ ಉರ್ಫ ಬಾಳಾಸಾಹೇಬ ಪಂತ ಪ್ರತಿನಿಧಿ, ಬಿ ಎ, ಇವರು ಪ್ರಕಟಿಸಿದ ಸೂರ್ಯನಮಸ್ಕಾರ ಗ್ರಂಥವನ್ನು ನೋಡಿ, ನಮಗೆ ಸಂತೋಷವಾಗಿದೆ ಈ ಗ್ರಂಥವು ಇಂಗ್ಲಿಷಿನಲ್ಲಿದ್ದು, ಬಾಳಾಸಾಹೇಬರು ಹಿಂದೆ 'ಪುರುಷಾರ್ಥ' ಪತ್ರಿಕೆಯಲ್ಲಿ ಪ್ರಕಟಿಸಿದ ಸೂರ್ಯನಮಸ್ಕಾರ ಲೇಖಗಳ ಇಂಗ್ಲಿಷ ಭಾಷಾಂತರವೆ ಇದರಲ್ಲಿದ್ದಾಗಿದೆ. ಇದಲ್ಲದೆ, ಆಹಾರ ಪದಾರ್ಥಗಳ ಕುರಿತು ಶ್ರೀಮಂತರು ಪ್ರತ್ಯೇಕ ಅಧ್ಯಾಯವನ್ನು ಬರೆದಿದ್ದಾರೆ ಈ ಗ್ರಂಥವು ಸುಮಾರು ೧೦೦ ಪುಟಗಳದ್ದು. ಸೂರ್ಯನಮಸ್ಕಾರ ರೀತಿಯು ಚಿತ್ರಗಳಿಂದ ಪ್ರತ್ಯಕ್ಷ ತೋರಿಸಲ್ಪಟ್ಟಿದೆ ಸೂರ್ಯ ನಮಸ್ಕಾರ ಹಾಕುವ ಮಂತ್ರಗಳು ಬೀಜ ಮಂತ್ರಗಳ ಸಹಿತ ಮೂಲ ಸಂಸ್ಕೃತ ಭಾಷೆಯಲ್ಲಿ ಕೊಡಲಾಗಿವೆ. ಸೂರ್ಯ ನಮಸ್ಕಾರದಿಂದ ಅವಯವಗಳಿಗಾಗುವ ವ್ಯಾಯಾಮವು ಪ್ರತಿ ಪ್ರತ್ಯೇಕವಾಗಿ ಚಿತ್ರಗಳಲ್ಲಿ ನಿರ್ದೇಶಿಸಲ್ಪಟ್ಟಿವೆ ಈ ಚಿತ್ರಗಳು ನಿಜವಾಗಿಯೂ ಬೋಧಪ್ರದವಿವೆ. ಸೂರ್ಯ ನಮಸ್ಕಾರಗಳಿಂದ ತಮಗೂ, ತಮ್ಮ ರಾಣಿ ಸಾಹೇಬರಿಗೂ, ರಾಜ್ಯ ಕಿಲೋರ್ಸ್ಕರ ಮೊದಲಾದವರಿಗೂ ಉಂಟಾದ ಆರೋಗ್ಯ ವೈಭವವನ್ನು ಶ್ರೀಮಂತರು ಗ್ರಂಥದಲ್ಲಿ ಕೊಟ್ಟಿದ್ದಾರೆ ಸೂರ್ಯ ನಮಸ್ಕಾರ ಮಂತ್ರೋಚ್ಚಾರದಿಂದ ನಾಲಿಗೆಗೂ ಯೋಗ್ಯ ಸಂಸ್ಕಾರ ದೊರತು ವಾಕ್ಪಟುತ್ವವು ಪ್ರಾಪ್ತವಾಗುತ್ತದೆಂದೂ ಬಾಳಾಸಾಹೇಬರವರು ಶಾಸ್ತ್ರ ಪ್ರತಿಪಾದಿಸಿದ್ದಾರೆ. ದೃಷ್ಟಿಯು ಸಹ ಸುಧಾರಿಸುತ್ತದಾಗಿಯೂ ಬಾಳಾಸಾಹೇಬರ ಅಭಿಪ್ರಾಯವಿದೆ. ಮೇಲಾಗಿ 'ಫಿಜಿಕಲ್ ಕಲ್ಚರ್' ಎಂಬ ಮಾಸಪತ್ರಿಕೆಯಲ್ಲಿ ಮಿ ಬಿ ಎನ್ ಲೆಸ್ಲರ ಪೆಸ್ಲರ್ ಎಂಬ ಯುರೋಪಿಯನ್‌ರು ಸೂರ್ಯ ನಮಸ್ಕಾರ ಪ್ರಯೋಗದಿಂದ ಹೊಂದಿದ ಲಾಭಗಳನ್ನು ಒಂದೇ ಅಧ್ಯಾಯದಲ್ಲಿ ವಿವರಿಸಿ, ಈಗಿನ ಸುಶಿಕ್ಷಿತರಿಗೆ ಒಂದು ದೊಡ್ಡ ಆಧಾರವನ್ನು ಕೊಟ್ಟಿದ್ದಾರೆ. ಸೂರ್ಯ ನಮಸ್ಕಾರಗಳ ಕುರಿತಾದ ಆಕ್ಷೇಪ ಖಂಡನೆಯನ್ನು ೯ ನೇ ಅಧ್ಯಾಯದಲ್ಲಿ ಬಾಳಾಸಾಹೇಬರವರು ಸಪ್ರಮಾಣವಾಗಿ ಖಂಡಿಸಿದ್ದಾರೆ. ಅಲ್ಲಲ್ಲಿ ಪಾಶ್ಚಾತ್ಯ ಜನರ ಮುಖ್ಯ ತಜ್ಞರಂಥವರ ಅಭಿಪ್ರಾಯಗಳನ್ನು ಕೊಟ್ಟು, ಖಂಡಿಸಿದ್ದಾರೆ ಸೂರ್ಯನಮಸ್ಕಾರದ ವ್ಯಾಯಾಮ ಮಾಡಲು ಖರ್ಚೇನಿಲ್ಲವಾಗಿಯೂ, ಚರಾಚರ ವಸ್ತುಗಳಿಗೆ ಚೈತನ್ಯವನ್ನು ಕೊಡುವ ಸೂರ್ಯನಾರಾಯಣನಿಂದ ಅವಶ್ಯವುಳ್ಳ ಚೈತನ್ಯವು ಪ್ರಾಪ್ತವಾಗಿ, ಧರ್ಮವನ್ನೂ ಕೂಡ ಉಂಟಾಗುವದೆಂದೂ ಬಾಳಾಸಾಹೇಬರು ವಿಶದೀಕರಿಸಿದ್ದಾರೆ ಸೂರ್ಯ ನಮಸ್ಕಾರದಿಂದ ಹಿಂದು ಧರ್ಮದ ಸೂರ್ಯಪೂಜೆ ಮಾಡಿದಂತಾಗುವದೆಂದು ಪರ ಧರ್ಮೀಯರು ಸೂರ್ಯ ನಮಸ್ಕಾರವನ್ನು ತ್ಯಜಿಸಬಾರದು ಯಾಕೆಂದರೆ ಹಿಂದು ಧರ್ಮದಲ್ಲಿ ನಿತ್ಯಸ್ನಾನ ಮಾಡಬೇಕೆಂದಿದೆ ಇತರರು ಹಾಗೆ ಮಾಡುವದೆಂದ ಅವರು ಹಿಂದು ಧರ್ಮದ ದೀಕ್ಷೆಯನ್ನು ಪಡೆಯುವರು ಸೂರ್ಯ ನಮಸ್ಕಾರವನ್ನು ಔಂಧದೊಳಗಿನ ಸ್ವಸಂಸ್ಥಾನದಲ್ಲಿ ಪ್ರಾರಂಭಿಸಿದ್ದಾರೆ ಈ ವ್ಯಾಯಾಮ ಮಾಡುವ ಹೈಸ್ಕೂಲಿನ ವಿದ್ಯಾರ್ಥಿಗಳ ಛಾಯಾಚಿತ್ರಗಳು ಈ ಗ್ರಂಥದಲ್ಲಿ ಕೊಡಲ್ಪಟ್ಟಿವೆ ಇವನ್ನು ನೋಡಿದರೆ, ಬಹಳ ಸಂತೋಷವಾಗುತ್ತದೆ ಈ ವ್ಯಾಯಾಮವನ್ನು ನಮ್ಮಲ್ಲಿ ಶಾಲೆ ಮಹಾಶಾಲೆಯುಗಳೆಲ್ಲವೂ ಕೈಕೊಳ್ಳಬೇಕಾಗಿ ನಾವು ಆಗ್ರಹಪೂರ್ವಕವಾಗಿ ಸೂಚಿಸುವೆವು ಇದಕ್ಕೆ ಖರ್ಚು ಬೀಳುವದಿಲ್ಲ, ಕ್ರಿಕೆಟ ಮುಂತಾದ ಪಂಕೀಯ ಆಟ-ಓಟಗಳಿಗಿಂತ ಸೂರ್ಯ ನಮಸ್ಕಾರದ ವ್ಯಾಯಾಮವು ಹಿತಕರನಿಂದಲೂ, ಪಾರಮಾರ್ಥಿಕದಿಂದಲೂ ಶ್ರೇಷ್ಠತರವಾದುದೆಂಬುದು ಈ ಗ್ರಂಥ ವಾಚನದಿಂದ ಯಾರಿಗೂ ಮನವರಿಕೆಯಾಗದೆ ಇರಲಾರದು ಶ್ರೀಮಂತರು ಆಹಾರ-ವಿಹಾರದ ಸೂಚನೆಗಳನ್ನು ಒಂದು ಅಧ್ಯಾಯದಲ್ಲಿ ಮಾಡಿ, ಆರೋಗ್ಯಪಾಲನವನ್ನು ಕೈಕೊಳ್ಳಲು ಬೋಧಿಸಿದ್ದಾರೆ. ಈ ಸೂಚನೆಗಳನ್ನು ತಾಯಿ-ತಂದೆಗಳು ವಿಶೇಷವಾಗಿ ಲಕ್ಷ್ಯದಲ್ಲಿಡಬೇಕು ಪುತ್ರವಾತ್ಸಲ್ಯಕ್ಕೊಳಗಾಗಿ ಅನಾರೋಗ್ಯಕರ ಸವಿ ಸವಿ ತಿಂಡಿ-ತಿನಸುಗಳನ್ನು ಬಾಲ-ಬಾಲಿಕೆಯರಿಗೆ ಕೊಟ್ಟು, ಅವರ ಆರೋಗ್ಯವನ್ನು ಕೆಡಿಸಲು ಸ್ವತಃ ತಾಯಿತಂದೆಗಳೇ ಕಾರಣರಾಗಲಾರರು ಆದೀ ಗ್ರಂಥವು ಎಲ್ಲರಿಗೂ ಬೋಧಪ್ರದವಿದೆ ಪ್ರಾಯ ಕಳೆದವರೂ ಕೂಡ ಸೂರ್ಯ ನಮಸ್ಕಾರಗಳನ್ನು ಮಾಡಿ ತಮ್ಮ ದೇಹವನ್ನು ನಿರೋಗಿಯಾಗಿ ಕಾಯ್ದುಕೊಳ್ಳಬಹುದು ಸ್ವತಃ ಬಾಳಾಸಾಹೇಬರವರು ೬೦ ವರ್ಷದ ಮುದುಕರಿದ್ದು, ಬೆಳಗಿನ ೩॥ ಘಂಟೆಗೆ ಎದ್ದು ಪ್ರಾತರ್ವಿಧಿಯನ್ನೂ, ಶೀತ ಜಲಸ್ನಾನವನ್ನೂ ತೀರಿಸಿಕೊಂಡು, ೪ರಿಂದ ೫ರ ವರೆಗೆ ಸೂರ್ಯ ನಮಸ್ಕಾರ ಹಾಕುತ್ತಾರೆ, ವರ್ತಮಾನಪತ್ರಗಳನ್ನು ಓದುತ್ತಾರೆ, ಬಣ್ಣದ ಚಿತ್ರಗಳನ್ನು ತೆಗೆಯುತ್ತಾರೆ, ಲೇಖ ಬರೆಯುತ್ತಾರೆ ದರಬಾರಿನ ಕೆಲಸ ನೋಡುತ್ತಾರೆ ಕೀರ್ತನ ಮಾಡುತ್ತಾರೆ, ರಾಣಿಸಾಹೇಬರಿಗೂ, ಹುಡುಗರಿಗೂ ಇಂಗ್ಲಿಷ ಮರಾಠಿ ಸಂಸ್ಕೃತ ಭಾಷೆಗಳನ್ನು ಕಲಿಸುತ್ತಾರೆ ಅಂದ ಬಳಿಕ, ಸೂರ್ಯನಮಸ್ಕಾರದ ಮಹಿಮೆಯನ್ನು ಇನ್ನೇನು ಹೇಳಬೇಕು? ಪುಸ್ತಕದ ಮುದ್ರಣವು ಬಲು ಸೊಗಸಾಗಿದೆ. ಶ್ರೀಮಂತರು ಪುಸ್ತಕದ ಜೊತೆಗೆ ನಮಸ್ಕಾರ ಪ್ರಯೋಗವನ್ನು ಪ್ರಾರಂಭ ಮಾಡಬಯಸುವವರಿಗಾಗಿ ಸಂಕಲ್ಪವನ್ನೂ, ಬೀಜ ಮಂತ್ರಗಳನ್ನೂ, ನಮಸ್ಕಾರದ ೧೦ ಸ್ಥಿತಿಗಳನ್ನೂ ಒಂದು ನಕಾಶೆಯಲ್ಲಿ ತೋರಿಸಿದ್ದಾರೆ. ಪುಸ್ತಕದ ಬೆಲೆಯು ಒಂದೇ ರೂಪಾಯಿ, ನಕಾಶೆಯ ಬೆಲೆ ೨ ಆಣೆ. ಅಮೂಲ್ಯ ಗ್ರಂಥವಿದು! ಪ್ರತಿಯೊಬ್ಬರೂ, ವಿಶೇಷವಾಗಿ ಕನ್ನಡದ ಬಾಲಕರೂ ಇದನ್ನು ಓದಿ, ಈ ವ್ಯಾಯಾಮವನ್ನು ತಮ್ಮಲ್ಲಿ ಪ್ರಾರಂಭಿಸಿ. ರಾಷ್ಟ್ರದ ಆರೋಗ್ಯಪಾಲನದಲ್ಲಿ ನೆರವಾಗಬೇಕಾಗಿ ನಾವು ಆಗ್ರಹಪೂರ್ವಕವಾಗಿ ಸೂಚಿಸಿ, ಇಂಥ ಗ್ರಂಥವನ್ನು ಪ್ರಕಟಿಸಿದ ಬಗ್ಗೆ ಶ್ರೀಮಂತ ಬಾಳಾಸಾಹೇಬ ಪಂತ ಪ್ರತಿನಿಧಿಗಳನ್ನು ಅಂತಃಕರಣಪೂರ್ವಕವಾಗಿ ಅಭಿನಂದಿಸುವೆವು

— ಚೀನ ದೇಶಕ್ಕೆ ಬ್ರಿಟಿಷರು ೧೦೦೦೦ ಟನ್ನಿನ ಕತ್ತರಿಯ ದ ಯಾನ ಜಲಯಾನಗಳನ್ನು ಕಳಿಸಿದ್ದಾರೆ ಇವು ನಾ-೦ಡಿಯಾ ವೇಗಗಳೊಳಗೆ ನಿಲ್ಲುವ ಬೆಳದದರಿಂದ ಚೀನ ದೇಶದಲ್ಲಿ ತಮ್ಮ ವ್ಯಾಸಂಗವು ಲಯವಾಗಬಹುದೆಂಬ ಭೀತಿ ಈ ಜಪಾನದವರಿಗೆ ಉಂಟಾಗಿರುವದಂತೆ !



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಕನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ.—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागावरील नानातऱ्हेच्या डिझायनची रंगी-बेरंगी चादरें, फॅशनेबल बाथ टोवेल, चौक, लहान--मोठे पंचे, सीडपाट, चीलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या !

टीपः—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ताः— मेसर्स गोविंद माधव शेणवि, फोवकार अँड सन्स.

पोस्ट— मुंकेरि (कारवार.)

ಬಿ.ಎ.ಸಿ ೮೯ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿದೆ. ವಿಶೇಷ ಖರ್ಚು ಮಾಡಲು ಇದೇ ಸಮಯವಲ್ಲವೇ? ಈ ರಕಮಿನ ವಿವರವೇನೆಂದರೆ— ಅಡಿಗೆ ಪಾತ್ರೆಗಳನ್ನು ಕೊಳ್ಳಲು ೪೧ ಸಾವಿರ ರೂಪಾಯಿ; ಓ ಹೋ ಹೋ ಹೋ!! ಸರ್ವಾಧಿಪತಿಗಳು ಉಣ್ಣುವದೆಷ್ಟು? ಈಗಿರುವ ಪಾತ್ರೆಗಳೇನಾದವು? ನೀರು ಬಿಸಿ ಮಾಡುವುದಕ್ಕಾಗಿ ೫೫ ಸಾವಿರ ರೂಪಾಯಿಗಳು! ಕಲಾಕೌಶಲ್ಯದ ಸಾಮಾನುಗಳಿಗಾಗಿ ೧೩ ಸಾವಿರ!! ಗ್ರಂಥಸಂಗ್ರಹಕ್ಕಾಗಿ ೧೦ ಸಾವಿರ!!! ನರರ ಹಣ ಶಿಕ್ಕಿದರೆ, ಕೋಟ್ಯಾವಧಿ ರೂಪಾಯಿಗಳನ್ನು ಸಹ ಖರ್ಚು ಮಾಡಲು ನಮ್ಮ ರಾಜ್ಯಪದ್ಧತಿಯಲ್ಲಿ ಅನುಕೂಲವಿದೆ, ನಾವು ಬಡವರಿದ್ದದರಿಂದ ಸಾವಿರಾರು ರೂಪಾಯಿಗಳೇ ಹೋಗುತ್ತವೆ!

* * *

ಬ್ರಿಟಿಶ ರಾಜ್ಯದೊಳಗಣ ದುಂದುಗಾರಿಕೆಯ ಇನ್ನು ಕೆಲವು ಉದಾಹರಣೆಗಳು !

ಈಗಿನ ರಾಜ್ಯಪದ್ಧತಿಯಲ್ಲಿ ಪ್ರಜೆಗಳ ಜೀವನಕ್ಕೆ ಅತ್ಯವಶ್ಯಕವಾದ ಒಂದು ಸುಲಭ ಉಪಾಯವಿಲ್ಲದೆ [illegible] ವಿಶೇಷ ವಾದವೆದ್ದು ಲೋಕಜಾಗೃತಿಯುಂಟಾದಾಗ ಅವರಿಗೆ ಸಮಾಧಾನಪಡಿಸಲು ರಾಜ್ಯನಿರ್ವಾಹಕರು ಚೌಕಶಿ ಮಂಡಳಗಳನ್ನು ನೇಮಿಸುತ್ತಾರೆ. ಈ ಚೌಕಶಿ ಮಂಡಳಗಳಿಗೆ ವಿಪರೀತ ಖರ್ಚು ಬರುತ್ತದಾಗಿ ಖರ್ಚಿನ ವಿಷಯ ಚೌಕಶಿ ಮಾಡಿದ ಇನ್ನೊಂದು ಚೌಕಶಿ ಮಂಡಳವು ಅಭಿಪ್ರಾಯಪಟ್ಟು, ಚೌಕಶಿ ಮಂಡಳಗಳನ್ನು ಹೀಗೆ ನೇಮಿಸಬಾರದಾಗಿ ಸೂಚನೆ ಮಾಡಿತ್ತು. ಆ ಸೂಚನೆಯನ್ನು ನಮ್ಮ ಹಿಂದುಸ್ಥಾನ ಸರಕಾರವು ಉಲ್ಲಂಘಿಸಿ ಮುರಿದಿದೆ. ಇಂಚಕೇಪ ಕಮೀಟಿಯವರು ೧೯೧೩ ನೇ ಇಸ್ವಿಯ ಎಪ್ರಿಲ್ ೧ನೇ ತಾರೀಖಿನಿಂದ ೧೯೨೨ನೇ ಇಸ್ವಿ ಮಾರ್ಚ ಅಖೈರ ತನಕ ಸರಕಾರದಿಂದ ೬೫ ಚೌಕಶಿ ಮಂಡಳಗಳು ನೇಮಿಸಲ್ಪಟ್ಟವೆಂದು ಅಕ್ಷೇಪಿಸಿತು, ಅವುಗಳಿಗಾಗಿ ೬೮ ಲಕ್ಷ ಖರ್ಚು ಬಿತ್ತು. ಅವುಗಳ ವಿವರ:—ಪೈಲು ಚೌಕಶಿ ಮಂಡಳಕ್ಕೆ ೩॥ ಲಕ್ಷ; ಇಸ್ಲಿಂಗಟನ್ ಚೌಕಶಿ ಮಂಡಳಕ್ಕೆ ೧೦॥ ಲಕ್ಷ, ಸುಧಾರಣೆಯ ಮಂಡಳಕ್ಕೆ ೬ ಲಕ್ಷ; ಆಗಿಬಂದಿಯ ಮಂಡಳಕ್ಕೆ ೪॥ ಲಕ್ಷ; ಕಲಕತ್ತೆಯ ವಿಶ್ವವಿದ್ಯಾಲಯದ ಮಂಡಳಕ್ಕೆ ೩॥ ಲಕ್ಷ, ಆರ್ಥಿಕ ಮಂಡಳಕ್ಕೆ ೨॥ ಲಕ್ಷ; ಸಕ್ಕರೆ ಮಂಡಳಕ್ಕೆ ೨॥ ಲಕ್ಷ, ಔದ್ಯೋಗಿಕ ಮಂಡಳಕ್ಕೆ ೩ ಲಕ್ಷ; ನಾಣ್ಯ ಮಂಡಳಕ್ಕೆ ೨ ಲಕ್ಷ ೨ ಲಕ್ಷಕ್ಕೆ ಮಿಕ್ಕಿದ ಇನ್ನೂ ಅನೇಕ ಮಂಡಳಗಳಿವೆ. ೯ ವರ್ಷಗಳಲ್ಲಿ ಚೌಕಶಿ ಮಂಡಳಗಳಿಗೆ ೬೮ ಲಕ್ಷ ರೂಪಾಯಿ ಖರ್ಚಾದದ್ದು ವಿಪರೀತವಾಯಿತೆಂದು ಇಂಚಕೇಪ ಕಮೀಟಿಯವರು ಹೇಳಿದ ಬಳಿಕ, ೫ ವರ್ಷಗಳಲ್ಲಿ ೧ ಕೋಟಿ ರೂಪಾಯಿ ಖರ್ಚು ಮಾಡಿ ಸರಕಾರವು ಮಂಡಳಗಳ ಮೇಲೆ ಮಂಡಳಗಳನ್ನು ನೇಮಿಸಿಬಿಟ್ಟಿತು. ಲೀ ಮಂಡಳ, ಕೀ ಮಂಡಳ, ಸ್ಕೀನ ಮಂಡಳ, ನೌಕಾ ಮಂಡಳ, ನ್ಯಾಯ ಮಂಡಳ ಸರಹದ್ದಿ ಮಂಡಳ, ಸುಧಾರಣಾ ವಿಚಾರ ಮಂಡಳ, ನಾಣ್ಯದ ಇನ್ನೊಂದು ಮಂಡಳ, ಕರ ವಿಚಾರ ಮಂಡಳ, ಕಲ್ಲಿದ್ದಲಿಯ ಕುರಿತು ಎರಡು ವಿಚಾರ ಮಂಡಳಗಳು, ಹತ್ತಿಯ ಕುರಿತು ಒಂದು ವಿಶೇಷ ವಿಚಾರ ಮಂಡಳ, ಅಫೀಮಿನ ಕುರಿತು ೬ ವಿಚಾರ ಮಂಡಳಗಳು, ಬೇಸಾಯ ಕಮಿಶನು; ಹೀಗೆ ಮಂಡಳಗಳು ನೇಮಿಸಲ್ಪಟ್ಟವು. ಮತ್ತೆ ಇಂಚಕೇಪ ಕಮೀಟಿಯಂಥವರು ಖರ್ಚು ಕಡಿಮೆ ಮಾಡಬೇಕೆಂದು ಶಿಫಾರಸು ಮಾಡಿದರೆ, ನಮ್ಮ ಹಿಂದುಸ್ಥಾನ ಸರಕಾರವು ಮಾತ್ರ ಚೌಕಶಿ ಮಂಡಳಗಳನ್ನು ನೇಮಿಸಿ ೬ ವರ್ಷಗಳಲ್ಲಿ ಇನ್ನೆರಡು ಕೋಟಿ ರೂಪಾಯಿಗಳನ್ನು ಖರ್ಚ ಮಾಡಿಬಿಡುವದು. ಈ ಕಮೀಟಿಗಳ ಕುರಿತು "ಇಂಗ್ಲಿಶಮನ್" ಎಂಬ ಸರಕಾರ ಪಕ್ಷಪಾತಿ ಪತ್ರಿಕೆಯಲ್ಲಿ ಕೆನಿಸೆಕ್ಸಿಟ್ ಎಂಬವರು ಚಲೋ ಎಚ್ಚರಿಕೆ ಕೊಟ್ಟಿದ್ದಾರೆ. "ಎಲ್ಲಾ ಕಮೀಟಿಗಳೂ, ಕಮಿಶನುಗಳೂ ನಿಷ್ಪ್ರಯೋಜಕವೆಂದು ನನ್ನ ಹೇಳಿಕೆ ಇಲ್ಲ. ಕೆಲವು ಅಗತ್ಯವಾಗಿದ್ದವು ಆದರೆ, ಮೇಲ್ಕಂಡ ಅಂಕಿಗಳನ್ನು ನೋಡಿದರೆ ವಿಚಾರ ಮಾಡುವ ಪ್ರಸಂಗ ಬಂದಿದೆ. ೫ ವರ್ಷಗಳ ಹಿಂದೆ ಇಂಚಕೇಪ ಜೊತೆಗೆ [illegible] ಲಕ್ಷ ರೂಪಾಯಿ ಖರ್ಚು ಮಾಡಿದ್ದು ಅಯೋಗ್ಯವಾಯಿತೆಂದು [illegible] ಇತ್ತ ೫ ವರ್ಷಗಳಲ್ಲಿ ೧ ಕೋಟಿಯ [illegible] ಕೆಲವು ಮಂಡಳಗಳು [illegible] ಮಾಡಿದವು. [illegible] [illegible] ಮಂಡಳಗಳ [illegible] [illegible] ಖರ್ಚು ಮಾಡಿ [illegible] ಕಮಿಶನು [illegible] ಚೌಕಶಿ ಮಾಡಲು ಹಿಂದುಸ್ಥಾನ ಸರಕಾರವು [illegible] ಕಮಿಶನ [illegible] [illegible] ಬರುವ ಜೊತೆಗೆ ಒಂದು ಮಾತನ್ನು ಹೇಳಬೇಕು. ಸರಕಾರವು ಅವಳಿತೆ [illegible] [illegible] ಪ್ರಯಾಸವಾಗಿದೆ; ಮುಂದೆ [illegible] ದ [illegible] ಮಾಡಲಿಕ್ಕೆ ಕಮಿಟಿಗಳು ನೇಮಿಸಲ್ಪಡುತ್ತವೆ."

* * *

ತುಕೋಜಿ ಮಹಾರಾಜರ ಪ್ರಣಯ ಲೀಲೆ.

ತುಕೋಜಿ ಮಹಾರಾಜರಿಗೆ ಮಿಸ್ಲರನೊಡನೆ ಮದುವೆಯಾಗಲು [illegible] ಕೂಸೆಯ ಪೂರ್ವ ಶುಭವೇನು ತಿಳಿಯಲಾಗಿತ್ತು. ಆ ಪಾಡವು ಕಳೆದು ಹೋಯಿತು; ಆದರೂ, ಆ ವಿಷಯದ ಚರ್ಚೆಯು ಇನ್ನೂ ಬಯಲಾಗಲಿಲ್ಲ. ತುಕೋಜಿರಾಯರು ಕೈಬಿಟ್ಟಿದ್ದಾರೆಂದು ಲಂಡನ್ನಿಂದ ಹಿಡಿಲ್ಪಟ್ಟು, ಇನ್ನೂ ಸಂಪೂರ್ಣವಾಗಿ ಗುಣ ಹೊಂದಲಿಲ್ಲ ಮಿಸ್ಲರಳು ಮಹಾರಾಜರ ಬಳಿಯಲ್ಲಿಯೇ ಮಹಾರಾಜರ ಶುಶ್ರೂಷೆ ಮಾಡುತ್ತ ಇದ್ದಾಳೆ. ಮಿಸ್ಲರಳಿಗೆ ಹಿಂದು ಧರ್ಮದೀಕ್ಷೆಯನ್ನು ಕೊಡಲು ಮಹಾರಾಜರು ಮಾಡಿದ ಪ್ರಯತ್ನಗಳು ಸಫಲವಾಗುವ ಲಕ್ಷಣಗಳು ಕಾಣುತ್ತವೆ. ಮುಂಬಯಿಯ ಶಿವಾಜಿ ಮರಾಠಾ ಮಿಶನಿನ ಕಾರ್ಯದರ್ಶಿಗಳಾದ ಡಾ|| ಸುರತಕರರವರು ಮಹಾರಾಜರಿಗೆ ತಂತಿ ಕೊಟ್ಟು ಮಿಸ್ಲರಳಿಗೆ ಮರಾಠರು ಸ್ವಸಮಾಜದಲ್ಲಿ ಸೇರಿಸಿಕೊಳ್ಳಲು ಸಿದ್ಧವಿರುವರಾಗಿ ಫೆಬ್ರುವರಿ ೩ ನೇ ತಾರೀಖಿಗೆ ತಿಳಿಸಿದರು, ಮಹಾರಾಜರು ಉಪಕಾರ ಮನ್ನಿಸಿ, ಮುಂದೆ ತಿಳಿಸುವೆವಾಗಿ ಉತ್ತರ ಕೊಟ್ಟಿದ್ದಾರೆ. ಡಾ|| ನಾವರಕರರವರೂ ಮಹಾರಾಜರಿಗೆ ಒಂದು ತಂತಿ ಕೊಟ್ಟಿದ್ದಾರಂತೆ ಹಿಂದು ಧರ್ಮದಲ್ಲಿ ಮಿಸ್ಲರಳನ್ನು ಸೇರಿಸಿಕೊಳ್ಳಲು ಸಾಧ್ಯವಿರುವದಾಗಿ ಅಭಿಪ್ರಾಯಪಟ್ಟು, ಆ ವಿಷಯ ಮಹಾರಾಜರು ಚಿಂತೆ ಮಾಡುವದು ಅವಶ್ಯವಾಗಿ ತಿಳಿಸಿದ್ದಾರೆ. ಡಾ|| ಸುರತಕರರವರೂ, ಸಾವರಕರರವರೂ ಮಿಸ್ಲರಳ ಹಿಂದು ಧರ್ಮಾಂತರದ ವಿಷಯ ಪ್ರಯತ್ನಪಡುವದೇಕೆ? ಅದರಿಂದ ಹಿಂದು [illegible] ಧರ್ಮಕ್ಕೆ ಮೋಕ್ಷವಿದೆಯೇ? ಮಹಾರಾಜರಿಗೆ ಇಷ್ಟ ಹೆಂಡದಿರಿರುತ್ತ [illegible] ನ ಹರನೇಯವರನ್ನು ಮದುವೆ ಮಾಡಿಕೊಳ್ಳಲು ಅನುಕೂಲತೆಗಳನ್ನು ಹುಡುಕಿ ಕೊಡುವದು ಧರ್ಮವೇನು?

* * *

ಒಂದು ಕೋರ್ಟಿನ ವ್ಯವಹರಣೆ.

ಅಲಿಪ್ಪುರದ ೧ನೇ ವರ್ಗದ ಎಡಿಶನಲ್ ಸಬಜಜ್ಜ ಕೋರ್ಟಿನಲ್ಲಿ ಒಂದು ಹಳೆ ಹಾಗು ಬಿಕ್ಕಟ್ಟಿನ ದಾವೆಯ ವಿಚಾರವು ನಡೆಯುತ್ತಿದೆ. ಈ ದಾವೆಯನ್ನು [illegible] ಮಾರ ಬಿಜಯರವರು ಸತ್ಯಶಾಲ ಬ್ಯಾನರ್ಜಿ [illegible] ಮುಂತಾದವರ ಮೇಲೆ ಹಾಕಿದ್ದಾರೆ. ಈ ದಾವೆಯು ೧೯೧೭ ನೇ ಇಸ್ವಿಯಲ್ಲಿ ದಾಖಲಾಯಿತು, ಇನ್ನೂ ವಿಚಾರವಾಗುತ್ತಿದೆ. ಲೆಖ್ಖವನ್ನು [illegible] [illegible] ಕ್ಕಾಗಿ ರಾಯಬಹಾದೂರ [illegible] ಬ್ಯಾನರ್ಜಿ [illegible] ಯವರನ್ನು ಕಮಿಶನರಾಗಿ ನೇಮಿಸಿತು. [illegible] ಹಿಂದೆ ಸಬಜಜ್ಜರಾಗಿ [illegible] ೭ ವರ್ಷಗಳ ತನಕ ಲೆಖ್ಖ ತಪಾಸು ಮಾಡಿ [illegible] ರಿಪೋರ್ಟ ಮಾಡಿದರು. ಆ ಕಮಿಶನರು ತಮ್ಮ [illegible] ರೂಪಾಯಿ ವೇತನ ಶಿಕ್ಕಿತು. [illegible] ಕೆಲವು ಬಾಬುಗಳನ್ನು ವಿಚಾರ [illegible]. ಆಗ ಹೈಕೋರ್ಟ ವಕೀಲರಾದ ಬಾಬು [illegible] ಕುಮಾರ ಭಟ್ಟಾಚಾರ್ಯರವರು ಕಮಿಶನರಾಗಿ ನೇಮಿಸಲ್ಪಟ್ಟರು. ಇವರು ೪ ವರ್ಷ [illegible] ವಿಚಾರ ಮಾಡಿ ೧೯೨೫ನೇ ಇಸ್ವಿಯ ಅಗಸ್ಟ ತಿಂಗಳಿನಲ್ಲಿ ರಿಪೋರ್ಟ ಬರೆದರು. ಇವರು [illegible] ಜಬಾನಿಗಳನ್ನೂ, ರಶೀದಿಗಳನ್ನೂ [illegible] ಕಂಡು ರಿಪೋರ್ಟು [illegible] ಆ ರಿಪೋರ್ಟೂ, ದಾಖಲೆಗಳೂ ಕೋರ್ಟಿಗೆ [illegible]. ದಾಖಲೆಗಳನ್ನು ಪರಿಶೀಲಿಸಿಕೊಳ್ಳುವಾಗ [illegible], ಅನೇಕ ದಾಖಲೆಗಳಿಗೆ ಫೋರ್ಜರಿ [illegible] ಆದರಿಂದ ಆ ಜಬಾನಿಗಳನ್ನು ಕಮಿಶನರರ ಖರ್ಚಿನಿಂದ [illegible] ಪ್ರತಿಯ ಮೇಲಿಂದ ಪ್ರತ [illegible] ಬೇಕಾಗಿ ಕೋರ್ಟ [illegible] ಮಾಡಿದೆ. ವಿಚಾರವು ಪೂರ್ತಿ ಮುಗಿದಿಲ್ಲ ಬಿಟ್ಟಿತು. ಈಗಲೇ ೧೧ ವರ್ಷಗಳಾದವು. ಎರಡನೇ ಕಮಿಶನರರು ೧೦ ಸಾವಿರ ರೂಪಾಯಿ ಫೀ ಪಡೆದರು. ವಕೀಲರ ಫೀ ಎಷ್ಟೆಂದು ಕಲ್ಪಿಸಿರಿ. [illegible] ಎಲ್ಲಾ ಫೀ ಕೊಟ್ಟು ಪಾಡಿ ಪ್ರತಿವಾದಿಗಳು [illegible] ದಾವೆಯ ವಿಚಾರ ಮುಗಿಯುವ ತನಕ [illegible].

— ಅಫಗಾಣಿಸ್ಥಾನದ ಅಮೀರರಿಗೆ ಅಮೇರಿಕೆಯವರು ನಿಮಂತ್ರಣವಿತ್ತಿದ್ದಾರೆ. ಆ ಕುರಿತು ಅಫಘಾನ ಅಮೇರಿಕೆಯ ರಾಯಭಾರಿಗಳು ಸ್ವಾಗತದ ತಯಾರಿ ಮಾಡುತ್ತಿದ್ದಾರೆ.

— ಶೋಲಾಪುರ ಮುನಿಸಿಪಾಲಿಟಿಯವರು ಆಯುರ್ವೇದ ಔಷಧಾಲಯಕ್ಕಾಗಿ ಒಂದು ಸ್ಥಳವನ್ನು ದಾನ ಕೊಟ್ಟು ವೈದ್ಯರ ಸರಕಾರದ ಅಪ್ಪಣೆ ಬೇಡಿದ್ದರು. ಸರಕಾರವು ಅದನ್ನು ಅಲ್ಲಗಳೆದಿದೆ.

ಸೂರ್ಯನಮಸ್ಕಾರ.

ಗ್ರಂಥ ವಿಮರ್ಶೆ.

ಔಂಧ ಸಂಸ್ಥಾನಾಧಿಪರಾದ ಶ್ರೀಮಂತ ಭಾವನರಾವ ಶ್ರೀನಿವಾಸರಾವ ಉರ್ಫ ಬಾಳಾಸಾಹೇಬ ಪಂತ ಪ್ರತಿನಿಧಿ, ಬಿ. ಎ., ಇವರು ಪ್ರಕಟಿಸಿದ ಸೂರ್ಯನಮಸ್ಕಾರ ಗ್ರಂಥವನ್ನು ನೋಡಿ, ನಮಗೆ ಸಂತೋಷವಾಗಿದೆ. ಈ ಗ್ರಂಥವು ಇಂಗ್ಲಿಷಿನಲ್ಲಿದ್ದು, ಬಾಳಾಸಾಹೇಬರು ಈ ಹಿಂದೆ 'ಪ್ರಭಾತ' ಪತ್ರಿಕೆಯಲ್ಲಿ ಪ್ರಕಟಿಸಿದ ಸೂರ್ಯನಮಸ್ಕಾರ ಲೇಖಗಳ ಇಂಗ್ಲಿಷ ಭಾಷಾಂತರವೇ ಇದರಲ್ಲಿ [illegible]ವಾಗಿದೆ. ಇದಲ್ಲದೆ, ಆಹಾರ ಪದಾರ್ಥಗಳ ಕುರಿತು ಶ್ರೀಮಂತರು ಪ್ರತ್ಯೇಕ ಅಧ್ಯಾಯವನ್ನು ಬರೆದಿದ್ದಾರೆ. ಈ ಗ್ರಂಥವು ಸುಮಾರು ೧೦೦ ಪುಟಗಳದ್ದು. ಸೂರ್ಯನಮಸ್ಕಾರ ವಿಧಿಯು ಚಿತ್ರಗಳಿಂದ ಸ್ಪಷ್ಟ ತೋರಿಸಲ್ಪಟ್ಟಿವೆ. ಸೂರ್ಯನಮಸ್ಕಾರ ಹಾಕುವ ಮಂತ್ರಗಳು ಬೀಜ ಮಂತ್ರಗಳ ಸಹಿತ ಮೂಲ ಸಂಸ್ಕೃತ ಭಾಷೆಯಲ್ಲಿ ಕೊಡಲಾಗಿವೆ. ಸೂರ್ಯನಮಸ್ಕಾರದಿಂದ ಆಗುವ [illegible] ವ್ಯಾಯಾಮವು ಪ್ರತ್ಯೇಕವಾಗಿ ಚಿತ್ರಗಳಲ್ಲಿ ನಿವೇದಿಸಲ್ಪಟ್ಟಿವೆ. ಈ ಅಧ್ಯಾಯಗಳು ನಿಜವಾಗಿಯೂ ಬೋಧಪ್ರದವಿವೆ. ಸೂರ್ಯನಮಸ್ಕಾರಗಳಿಂದ ತಮಗೂ, ತಮ್ಮ ರಾಣೀ ಸಾಹೇಬರಿಗೂ, ರಾಜಶ್ರೀ ಕಿರ್ಲೋಸ್ಕರ ಮೊದಲಾದವರಿಗೂ ಉಂಟಾದ ಆರೋಗ್ಯ ವೈಭವವನ್ನು ಶ್ರೀಮಂತರು ಗ್ರಂಥದಲ್ಲಿ ಕೊಟ್ಟಿದ್ದಾರೆ. ಸೂರ್ಯನಮಸ್ಕಾರ ಮಂತ್ರೋಚ್ಚಾರದಿಂದ ನಾಲಿಗೆಗೂ ಯೋಗ್ಯ ಸಂಸ್ಕಾರ ದೊರೆತು ವಾಕ್ಶುದ್ಧಿಯು ಪ್ರಾಪ್ತವಾಗುತ್ತದೆಂದೂ ಬಾಳಾಸಾಹೇಬರವರು ಸಶಾಸ್ತ್ರ ಪ್ರತಿಪಾದಿಸಿದ್ದಾರೆ. ದೃಷ್ಟಿಯು ಸಹ ಸುಧಾರಿಸುತ್ತದಾಗಿಯೂ ಬಾಳಾಸಾಹೇಬರ ಅನುಭವವಿದೆ. ಮೊನ್ನೆ 'ಫಿಜಿಕಲ್ ಕಲ್ಚರ್' ಎಂಬ ಮಾಸಪತ್ರಿಕೆಯಲ್ಲಿ ಮಿ. ಬಿ. ಎಚ್. ಲೆನ್ಸರ [illegible] ಎಂಬ ಯುರೋಪಿಯನ್ನರು ಸೂರ್ಯನಮಸ್ಕಾರ ಪ್ರಯೋಗದಿಂದ ಹೊಂದಿದ ಲಾಭಗಳನ್ನು ಅನೇಕ ಅಧ್ಯಾಯದಲ್ಲಿ ವಿವರಿಸಿ, ಈಗಿನ ಸುಶಿಕ್ಷಿತರಿಗೆ ಒಂದು ದೊಡ್ಡ ಆಧಾರವನ್ನು ಕೊಟ್ಟಿದ್ದಾರೆ. ಸೂರ್ಯನಮಸ್ಕಾರಗಳ ಕುರಿತು ಆಕ್ಷೇಪ ಖಂಡನೆಯನ್ನು ೯ ನೇ ಅಧ್ಯಾಯದಲ್ಲಿ ಬಾಳಾಸಾಹೇಬರವರು ಸಪ್ರಮಾಣವಾಗಿ ಖಂಡಿಸಿದ್ದಾರೆ. ಅಲ್ಲದೆ ಪಾಶ್ಚಾತ್ಯ ಬರಹಗಾರರ [illegible] ಅಭಿಪ್ರಾಯಗಳನ್ನು ಕೊಟ್ಟು, ಖಂಡಿಸಿದ್ದಾರೆ. ಸೂರ್ಯನಮಸ್ಕಾರದ ವ್ಯಾಯಾಮ ಮಾಡಲು ಖರ್ಚಿಲ್ಲವಾಗಿಯೂ, ಚರಾಚರ ವಸ್ತುಗಳಿಗೆ ಚೈತನ್ಯವನ್ನು ಕೊಡುವ ಸೂರ್ಯನಾರಾಯಣನಿಂದ ಅವಶ್ಯವುಳ್ಳ ಚೈತನ್ಯವು ಪ್ರಾಪ್ತವಾಗಿ, ಧರ್ಮ [illegible] ಉಂಟಾಗುವದೆಂದೂ ಬಾಳಾಸಾಹೇಬರು ವಿಶದೀಕರಿಸಿದ್ದಾರೆ. ಸೂರ್ಯನಮಸ್ಕಾರದಿಂದ ಹಿಂದು ಧರ್ಮದ ಸೂರ್ಯಪೂಜೆ ಮಾಡಿದಂತಾಗುವದೆಂದು ಪರಧರ್ಮೀಯರು ಸೂರ್ಯನಮಸ್ಕಾರವನ್ನು ತ್ಯಜಿಸಲಾಗದು. ಯಾಕೆಂದರೆ ಹಿಂದು ಧರ್ಮದಲ್ಲಿ [illegible] ಇತರರು ಹಾಗೆ ಮಾಡುವದರಿಂದ ಅವರು ಹಿಂದು ಧರ್ಮದ ದೀಕ್ಷೆಯನ್ನು ಪಡೆಯಲಾರರು. ಸೂರ್ಯನಮಸ್ಕಾರವನ್ನು ಔಂಧದೊಳಗಿನ ಸ್ಕೂಲಿನಲ್ಲಿ ಪ್ರಾರಂಭಿಸಿದ್ದಾರೆ. ಈ ವ್ಯಾಯಾಮ ಮಾಡುವ ಸ್ಕೂಲಿನ ವಿದ್ಯಾರ್ಥಿಗಳ ಭಾವಚಿತ್ರಗಳು ಈ ಗ್ರಂಥದಲ್ಲಿ ಕೊಡಲ್ಪಟ್ಟಿವೆ. ಇವನ್ನು ನೋಡಿದರೆ, ಬಹಳ ಸಂತೋಷವಾಗುತ್ತದೆ. ಈ ವ್ಯಾಯಾಮವನ್ನು ನಮ್ಮಲ್ಲಿ [illegible] ಶಾಲೆಗಳಲ್ಲಿಯೂ ಕೈಕೊಳ್ಳಬೇಕಾಗಿ ನಾವು ಆಗ್ರಹಪೂರ್ವಕವಾಗಿ ಸೂಚಿಸುವೆವು. ಇದಕ್ಕೆ ಖರ್ಚಿಲ್ಲ, ಕ್ರಿಕೆಟ ಮುಂತಾದ ಖರ್ಚಿನ ಆಟಗಳಿಗಿಂತ ಸೂರ್ಯನಮಸ್ಕಾರದ ವ್ಯಾಯಾಮವು [illegible] ದಿಂದಲೂ, ಮಾರ್ಗದರ್ಶಕರಿಂದಲೂ ಶ್ರೇಷ್ಠತರವಾಗಿಯದೆಂಬುದು ಈ ಗ್ರಂಥ ವಾಚನದಿಂದ ಯಾರಿಗೂ ಮನವರಿಕೆಯಾಗುವದು. ಶ್ರೀಮಂತರು ಆಹಾರ-ವಿಹಾರದ ಸೂಚನೆಗಳನ್ನು ಒಂದು ಅಧ್ಯಾಯದಲ್ಲಿ ಕೊಟ್ಟು, ಆರೋಗ್ಯಪಾಲನವನ್ನು ಕೈಕೊಳ್ಳಲು ಬೋಧಿಸಿದ್ದಾರೆ. ಈ ಸೂಚನೆಗಳನ್ನು ತಾಯಿ-ತಂದೆಗಳು ವಿಶೇಷವಾಗಿ ಲಕ್ಷ್ಯದಲ್ಲಿಡಬೇಕು. ಪುತ್ರವಾತ್ಸಲ್ಯಕ್ಕೋಸ್ಕರ ಅನಾರೋಗ್ಯಕರ ಸವಿ ಸವಿ ತಿಂಡಿ-ತಿನಸುಗಳನ್ನು ಬಾಲ-ಬಾಲಕಿಯರಿಗೆ ಕೊಟ್ಟು, ಅವರ ಆರೋಗ್ಯವನ್ನು ಕೆಡಿಸಲು ಸ್ವತಃ ತಾಯಿತಂದೆಗಳೇ ಕಾರಣರಾಗಬಾರದು. ಈ ಗ್ರಂಥವು ಎಲ್ಲರಿಗೂ ಬೋಧಪ್ರದವಿದೆ. ವಯಸ್ಸು ಕಳೆದವರೂ ಕೂಡ ಸೂರ್ಯನಮಸ್ಕಾರಗಳನ್ನು ಮಾಡಿ, ತಮ್ಮ ದೇಹವನ್ನು ನಿರೋಗಿಯಾಗಿ ಕಾಪಾಡಿಕೊಳ್ಳಬಹುದು. ಸ್ವತಃ ಬಾಳಾಸಾಹೇಬರವರು ೬೦ ವರ್ಷದ ಮುದುಕರಿದ್ದು, ಬೆಳಗಿನ ೫ ಘಂಟೆಗೆ ಎದ್ದು ಪ್ರಾತರ್ವಿಧಿಯನ್ನೂ, ಶೀತ ಜಲ ಸ್ನಾನವನ್ನೂ ತೀರಿಸಿಕೊಂಡು, ೪೦೦ ಸೂರ್ಯನಮಸ್ಕಾರ ಹಾಕುತ್ತಾರೆ; ವರ್ತಮಾನಪತ್ರಗಳನ್ನೂ ಓದುತ್ತಾರೆ, ಬಣ್ಣದ ಚಿತ್ರಗಳನ್ನು ತೆಗೆಯುತ್ತಾರೆ, ಬೇಟೆ ಹೊರಡುತ್ತಾರೆ. ಆಡಳಿತೆಯ ಕೆಲಸ ನೋಡುತ್ತಾರೆ, ಕೀರ್ತನೆ ಮಾಡುತ್ತಾರೆ; ರಾಣಿಸಾಹೇಬರಿಗೂ, ಹುಡುಗರಿಗೂ ಇಂಗ್ಲಿಷ ಮರಾಠಿ-ಸಂಸ್ಕೃತ ಭಾಷೆಗಳನ್ನು ಕಲಿಸುತ್ತಾರೆ. ಅಂದ ಬಳಿಕ, ಸೂರ್ಯನಮಸ್ಕಾರದ ಮಹಿಮೆಯನ್ನು ಇನ್ನೇನು ಹೇಳಬೇಕು? ಪುಸ್ತಕದ ಮುದ್ರಣವು ಬಲು ಸೊಗಸಾಗಿದೆ. ಶ್ರೀಮಂತರು ಪುಸ್ತಕದ ಜೊತೆಗೆ ನಮಸ್ಕಾರ ಪ್ರಯೋಗವನ್ನು ಪ್ರಾರಂಭ ಮಾಡಬಯಸುವವರಿಗಾಗಿ ಸಂಕಲ್ಪವನ್ನೂ, ೧೩ ಮಂತ್ರಗಳನ್ನೂ, ನಮಸ್ಕಾರದ ೧೦ ಸ್ಥಿತಿಗಳನ್ನೂ ಒಂದು ಸಕಾಗದಲ್ಲಿ ತೋರಿಸಿದ್ದಾರೆ. ಪುಸ್ತಕದ ಬೆಲೆಯು ಒಂದು ರೂಪಾಯಿ; ಸಕಾಗದ ಬೆಲೆ ೨ ಆಣೆ. ಅಮೂಲ್ಯ ಗ್ರಂಥವಿದು! ಪ್ರತಿಯೊಬ್ಬರೂ, ಮುಖ್ಯವಾಗಿ ಶಾಲೆಯ ಬಾಲಕರೂ ಇದನ್ನು ಓದಿ, ಈ ವ್ಯಾಯಾಮವನ್ನು ಕೂಡಲೆ ಪ್ರಾರಂಭಿಸಿ. ರಾಷ್ಟ್ರದ ಆರೋಗ್ಯಪಾಲನದಲ್ಲಿ ನೆರವಾಗಬೇಕಾಗಿ ನಾವು ಆಗ್ರಹಪೂರ್ವಕವಾಗಿ ಸೂಚಿಸಿ, ಇಂಥ ಗ್ರಂಥವನ್ನು ಪ್ರಕಟಿಸಿದ ಬಗ್ಗೆ ಶ್ರೀಮಂತ ಬಾಳಾಸಾಹೇಬ ಪಂತ ಪ್ರತಿನಿಧಿಗಳನ್ನು ಅಂತಃಕರಣಪೂರ್ವಕವಾಗಿ ಅಭಿನಂದಿಸುವೆವು.

— ಚೀನ ದೇಶಕ್ಕೆ ಬ್ರಿಟಿಷರು ೧೦೦೦೦ ಟನ್ನಿನ ಕ್ರೂಯಿಜರ ಯಾನೆ ಜಲಯಾನಗಳನ್ನು ಕಳಿಸಿದ್ದಾರೆ. ಬ್ರಿಟನ-ದೇಶದ ವ್ಯಾಪಾರಿಗಳೊಳಗೆ ಗಳಿತನ ಬೆಳೆದದರಿಂದ ಚೀನ ದೇಶದಲ್ಲಿ ತಮ್ಮ ವ್ಯಾಪಾರವು ಲಯವಾಗಬಹುದೆಂಬ ಭೀತಿ ಈ ಜಲಯಾನಗಳು ರವಾನೆಯಾಗಿರುವವಂತೆ!



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಕನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೋರ್ಥಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्यां, जरीच्या वगैरे दरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागावरील नानातऱ्हेच्या डिझायनचीं रंगी-बेरंगी चादरें, फॅशनेबल बाथ टोवेल, चौक, लहान--मोठे पंचे, सीडपाट, चीलपाट, शर्टिंग--कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीपः—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ताः— मेसर्स गोविंद माधव शेणवि, फोवकार अँड सन्स.

पोस्ट— मुंकेरि (कारवार.)

ಕಾನಡಾ ವೃತ್ತ.

ಮಿತಿ ಪ್ರಭವ ಸಂ॥ ಮಾಘ ಬ ೧ ದೆ ಸೋಮವಾರ

ಹಿಂದುಗಳಿಗೆ ಸಂಸ್ಕೃತ.

ಪಾಶ್ಚಾತ್ಯರ ಸಹವಾಸವು ನಮ್ಮ ಭಾರತೀಯರಿಗೆ ಪ್ರಾಪ್ತವಾದಂದಿನಿಂದ ಭಾರತೀಯರಲ್ಲೊಂದು ಪ್ರಕಾರದ ಉನ್ಮಾದಾವಸ್ಥೆಯು ಉಂಟಾಗಿದೆ. ಪಾಶ್ಚಾತ್ಯವೆಂಬುದನ್ನೆಲ್ಲ ಕಂಡಕಂಡಲ್ಲಿ ಹಿಡಿಯುವದೇ ದೊಡ್ಡದೊಂದು ಪುರುಷಾರ್ಥವಾಗಿದೆ. ಧರ್ಮಾಭಿಮಾನವೂ ದೇಶಾಭಿಮಾನವೂ, ಪುರಾತನ ಪರಂಪರೆಯ ಅಭಿಮಾನವೂ ತೀರ ನಷ್ಟವಾಗಿ ಹೋಗಿರುವದು. ಭೌತಿಕ ಉನ್ನತಿಯು ಮಾತ್ರ ತಲೆಗೇರಿ ಸಂಸ್ಕೃತವೆಂದ ಕೂಡಲೆ ತಲೆಕೆಳಗೆ ಆಗ [illegible] ಈಗಿನ ಯುಗದ ಭಾಷೆಯಲ್ಲ ಅದರೊಳಗೇನಿದೆ? ಎಂಬಂತೆ ನಮ್ಮಲ್ಲಿಯ ಆಂಗ್ಲ ಶಿಕ್ಷಿತರು ಹೀಯಾಳಿಸುತ್ತಾರೆ. ಪ್ರಸ್ತುತ ಬ್ರಿಟಿಶ ರಾಜ್ಯಪದ್ಧತಿಯಿಂದ ನಿರ್ಮಾಣಗೊಂಡಿದ ಶಿಕ್ಷಣ ಕ್ರಮದಲ್ಲಿ ಸಂಸ್ಕೃತ ಭಾಷೆಗೆ ಬಂದ ಅವಸ್ಥೆಯಿಂದ ನಮ್ಮಲ್ಲಿಯ ಸುಶಿಕ್ಷಿತರೆಂದು ಮೆರೆಯುವವರಿಗೆ ಸಂಸ್ಕೃತದ ನಿಜವಾದ ಜ್ಞಾನ ದೊರಕದೆ, ಸಂಸ್ಕೃತವನ್ನು ಯಥೇಷ್ಟವಾಗಿ ಹೀಯಾಳಿಸಲು ಅನುಕೂಲವಾಗಿದೆ. ಇಂಥ ಪ್ರಸಕ್ತಿಯಲ್ಲಿ ಸಂಸ್ಕೃತದ ಮಹಿಮೆಯನ್ನು ಅರಿತು ಅದರ ಪರಂಪರೆಯನ್ನು ಪೂರ್ವವತ್ ಪ್ರಸ್ಥಾಪಿಸುವದಕ್ಕಾಗಿ ಮೈಸೂರ ದರಬಾರವು ನಡಿಸಿದ ಪ್ರಯತ್ನಗಳನ್ನು ಉಲ್ಲೇಖಿಸಿ ಸನಾತನ ಪರಂಪರೆಯ ಹಿಂದುಗಳಿಗೆ ಎಚ್ಚರ ಕೊಡುವದು ವಿಹಿತವು.

ಕಳೆದ ವಾರದಲ್ಲಿ ಮೈಸೂರು ಬೆಂಗಳೂರು ನಗರಗಳಲ್ಲಿ ಎರಡು ಪಾರಿತೋಷಕ ಸಮಾರಂಭಗಳು ಜರುಗಿದವು. ಮಹಾರಾಜರು ಮೈಸೂರಲ್ಲಿ ಒಂದು, ಬೆಂಗಳೂರಿನಲ್ಲಿ ಒಂದು ಹೀಗೆ ಎರಡು ಕಡೆಗಳಲ್ಲಿ ಸಂಸ್ಕೃತ ವಿದ್ಯಾಲಯಗಳನ್ನು ಸ್ಥಾಪಿಸಿದ್ದಾರೆ. ಮೈಸೂರಿನೊಳಗಿನ ವಿದ್ಯಾಲಯದಲ್ಲಿ ವೇದವೇದಾಂಗಗಳ ಅಧಿಕಾರವಿದ್ದ ಬ್ರಾಹ್ಮಣರಿಗಷ್ಟೇ ಪ್ರವೇಶವಿದೆ. ಬೆಂಗಳೂರಿನ ವಿದ್ಯಾಲಯದಲ್ಲಿ ಸಮಸ್ತರೂ ಪ್ರವೇಶಗೊಂಡು, ಸಂಸ್ಕೃತ ಭಂಡಾರವನ್ನು ಯಥೇಷ್ಟ ಸೂರೆ ಮಾಡಬಹುದು. ಈ ಶಾಲೆಗಳಲ್ಲಿ ಮಧ್ಯಸ್ಥವಾದ [illegible] ಸುಮುಹೂರ್ತಕ್ಕೆ ಪಾರಿತೋಷಕ ಸಮಾರಂಭಗಳು ಜರುಗಿದವು. ಮೈಸೂರಿನ ಸಮಾರಂಭದಲ್ಲಿ ಮಹಾರಾಜರ ಗುರುಗಳಾದ ಶ್ರೀಪರಕಾಳ ಸ್ವಾಮಿಗಳವರು ಸಭಾಧ್ಯಕ್ಷರು. ವಿದ್ಯಾಲಯದಲ್ಲಿ ೩೭೦ ಮಂದಿ ವಿದ್ಯಾರ್ಥಿಗಳಿದ್ದು ವೇದವಿದ್ಯೆಯನ್ನು ಕಲಿಯುವದಕ್ಕಾಗಿ ಮಹಾರಾಜರು ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯನ್ನು ಕೊಡುತ್ತಾರೆ. ಅನ್ನಛತ್ರಗಳನ್ನು ಇಟ್ಟಿದ್ದಾರೆ. ಮಹಾರಾಜರು ವಿಶೇಷ ಅನುಕೂಲ್ಯಗಳನ್ನು ಪೂರೈಸುವದಕ್ಕಾಗಿ ಇನ್ನು ೩೫ ಸಾವಿರ ರೂಪಾಯಿಗಳನ್ನೂ ೫೦ ಎಕ್ರೆ ನೆಲವನ್ನೂ ಅರ್ಪಿಸಿದ್ದಾರೆ. ಶ್ರೀಸ್ವಾಮಿಗಳು ಸಂಸ್ಕೃತ ವಿದ್ಯಾಭ್ಯಾಸದ ಲಾಭಗಳನ್ನು ವಿವರಿಸಿ ಅದರಿಂದ ಈಗ ಚರಿತಾರ್ಥವನ್ನು ಕೂಡ ಸಾಗಿಸಬಹುದೆಂದು ನುಡಿದರು. ಶ್ರೀಸ್ವಾಮಿಗಳ ಭಾಷಣಕ್ಕಿಂತ ಪ್ರಕೃತ ಪರಿಸ್ಥಿತಿಯಲ್ಲಿ ಇಂದ ಸಮಾರಂಭದ ವಿಷಯ ಬೆಂಗಳೂರಿನ [illegible] ಮೈಸೂರಿನ ದಿವಾಣ [illegible] ಮಹಮ್ಮದ ಇಸ್ಮಾಯಿಲ್ [illegible] ಈಗಿನವರಿಗೆ ಹೆಚ್ಚು ಗ್ರಾಹ್ಯ [illegible] ಮಿ॥ ಮಿರ್ಝಾರವರು ದಿವಾಣ [illegible] ದರಿಂದ ಅವರ ಭಾಷಣವನ್ನು ಅನುವಾದಿಸುವೆಂದು [illegible] ದಿವಾಣರು ಮೊಟ್ಟಮೊದಲು ಒಂದು ಮಾತನ್ನು ಪ್ರಸ್ತಾಪಿಸಿದರು. ರಾಷ್ಟ್ರಕ್ಕೆ ಉಚ್ಚಸ್ಥಾನ ಸಿಗಬೇಕಾದರೆ ಆ ರಾಷ್ಟ್ರದ ಧ್ಯೇಯವು [illegible] ಉಚ್ಚವಿರಬೇಕು, ಆ ಧ್ಯೇಯಸಂಗ್ರಹಕ್ಕಾಗಿ ರಾಷ್ಟ್ರದ [illegible], ರಾಷ್ಟ್ರಕ್ಕೆ ಆ ಧ್ಯೇಯದಿಂದ ಭೂತಲದಲ್ಲಿ ಉಚ್ಚ ಶ್ರೇಷ್ಠ ಸ್ಥಾನವು ಪ್ರಾಪ್ತವಾಗುತ್ತದೆ. ವ್ಯವಹಾರಿಕ ಸ್ಥಿತಿಯು ಎಷ್ಟೇ ಪ್ರಕಾರದ್ದಿದ್ದರೂ ರಾಷ್ಟ್ರದ ಉಚ್ಚಸ್ಥಿತಿಯು ಆ ರಾಷ್ಟ್ರದ ಧ್ಯೇಯದ ಮೇಲೆಯೇ ಸಂಪೂರ್ಣವಾಗಿ ಅವಲಂಬಿಸಿರುತ್ತದಾಗಿ ದಿವಾಣರು ಬಿಚ್ಚಿ ಹೇಳಿದರು. ಇದನ್ನು ಸುಶಿಕ್ಷಿತರೆಲ್ಲರೂ ಚೆನ್ನಾಗಿ ಲಕ್ಷ್ಯದಲ್ಲಿಡತಕ್ಕದ್ದು.

ಧ್ಯೇಯವು ಸ್ವಭಾಷೆಯಲ್ಲಿಯೇ ಸ್ಫುಟವಾಗಿದ್ದಿರುತ್ತದೆ. ಸ್ವಭಾಷೆಯ ಅಭ್ಯಾಸದಿಂದಲೇ ಸ್ವತ್ವ-ಸ್ವಾಭಿಮಾನಗಳು ಪ್ರಾಪ್ತವಾಗುತ್ತವೆ. ಸಂಸ್ಕೃತ ಭಾಷೆಯ ಮೂಲಕವಾಗಿಯೇ ಹಿಂದು ಧರ್ಮವು ಇನ್ನೂ ಜೀವಂತವಾಗಿರುವದೆಂದು ನಾವು ತಿಳಿಯತಕ್ಕದ್ದಾಗಿ ದಿವಾಣರು ನಿಶ್ಚಯಪೂರ್ವಕವಾಗಿ ನುಡಿದರು. ಸಂಸ್ಕೃತವು ಹಿಂದು ಧರ್ಮದ ಮರ್ಮವಾಗಿರುತ್ತದಾಗಿಯೂ ಮಿ॥ ಇಸ್ಮಾಯಿಲ್‌ರವರು ಬೋಧಿಸಿದರು. ದೊಡ್ಡ ದೊಡ್ಡ ಸಾಮ್ರಾಜ್ಯಗಳು ಬೊಬ್ಬುಳಿಯಂತೆ ಕಣ್ಮುಂದೆ ನಾಶವಾಗುತ್ತಿರುವಾಗ ಹಿಂದು ಧರ್ಮವು ಸಂಸ್ಕೃತ ಭಾಷೆಯ ಆಧಾರದಿಂದ ಕಾಲವಶವಾಗದೆ ಬಾಳಿಕೊಂಡಿದೆ. ಆದರಿಂದ ಸಂಸ್ಕೃತವನ್ನು ಭಾರತೀಯರ್ಯಾರೂ ಮರೆಯಲಾರರು. ಈಗಿನ ಸಂಸ್ಕೃತವು ನಿತ್ಯ ವ್ಯವಹಾರಕ್ಕೆ ಕಠಿಣವೆನಿಸುತ್ತಿದ್ದರೆ, ದೇಶಕಾಲಮಾನಕ್ಕನುಸಾರವಾಗಿ ತಿದ್ದುಪಾಟುಗಳನ್ನು ಕೈಕೊಂಡು ಸಂಸ್ಕೃತದಲ್ಲಿ ಸೌಲಭ್ಯವನ್ನುಂಟು ಮಾಡಬೇಕಾಗಿಯೂ ದಿವಾಣರು ಸೂಚಿಸಿದರು. ಸಂಸ್ಕೃತದಿಂದಲೇ ಹಿಂದುಸ್ಥಾನದ ಸ್ವತ್ವವು ಬಾಳಿಕೊಂಡಿರಬೇಕಾದ್ದರಿಂದ ಸಂಸ್ಕೃತದ ಪ್ರಸಾರವನ್ನು ದೇಶತುಂಬ ನಡಿಸಬೇಕಾಗಿಯೂ ದಿವಾಣರು ಅಂತಃಕರಣಪೂರ್ವಕವಾಗಿ ಉದ್ಗರಿಸಿದರು. ಹಿಂದು ಬಾಂಧವರಿಗೆ ಸಂಸ್ಕೃತವನ್ನು ಕಲಿಯಲು ಮಿ॥ ಇಸ್ಮಾಯಿಲ್‌ರವರು ವಿಶೇಷವಾಗಿ ಬೋಧಿಸಿದರು. ಲೋಕದಲ್ಲಿ ಸಂಸ್ಕೃತದ ಪ್ರಸಾರವಾದ ಹಾಗೆ ಅದರ ಸಾಮರ್ಥ್ಯವೂ, ಪ್ರತಿಷ್ಠೆಯೂ ಹೆಚ್ಚುಗುವದೆಂದೂ ಅದನ್ನು ಕಳಕೊಂಡರೆ, ನಾವು ಭಾಗ್ಯಹೀನರಾಗುವೆವೆಂದೂ ದಿವಾಣರು ಒತ್ತಿಹೇಳಿ, ಸಂಸ್ಕೃತ ವಿದ್ಯಾಭ್ಯಾಸವನ್ನು ಪ್ರಸಾರ ಮಾಡಲು ಸಂಸ್ಥಾನವು ಸಹ ವಿಶೇಷ ಪ್ರಯತ್ನಪಡುವದಾಗಿಯೂ ಅಪ್ಪಣೆಯನ್ನಿತ್ತರು. ಪುರಾತನ ಪಂಡಿತರ ಕೂಪಮಂಡೂಕ ವೃತ್ತಿಯನ್ನು ಪರಿಹರಿಸುವದಕ್ಕಾಗಿ ಭಿನ್ನ ಭಿನ್ನ ಧರ್ಮಗಳ ತತ್ವಜ್ಞಾನವನ್ನು ಬೋಧಿಸುವ ವ್ಯಾಖ್ಯಾನಮಾಲೆಯನ್ನು ಈ ವಿದ್ಯಾಲಯಗಳಲ್ಲಿ ಸಂಸ್ಥಾನದಿಂದ ಕಲ್ಪಿಸಲ್ಪಡುವದಾಗಿಯೂ ದಿವಾಣರು ಹೇಳಿದರು.

ದಿವಾಣರಾದ ಮಿ॥ ಮಿರ್ಝಾ ಮಹಮ್ಮದ ಇಸ್ಮಾಯಿಲ್‌ರವರ ವಿಚಾರಗಳನ್ನು ಹಿಂದುಗಳು ಮನಮುಟ್ಟಿ ವಿಚಾರಿಸತಕ್ಕದ್ದು. ಸಂಸ್ಕೃತವನ್ನು ಕಲಿಯುವದು ಕಠಿಣವೆನಿಸಿದ್ದರಿಂದಲೇ ಹಿಂದುಗಳ ಸ್ಥಿತಿಯು ಗತಿಗೇಡಾಗಿದೆ. ಧರ್ಮಜ್ಞಾನವಿಲ್ಲ, ಸ್ವಾಭಿಮಾನವಿಲ್ಲ. ಹೀಗಾಗಿ ಹಿಂದುಗಳು ತ್ರಿಶಂಕುಗಳಾಗಿ ಜೋಕಾಲಿ ಹೊಡೆಯುತ್ತಿದ್ದಾರೆ. ಶಿಕ್ಷಣ ಕ್ರಮದಲ್ಲಿ ಸಂಸ್ಕೃತಕ್ಕೆ ಪ್ರಾಧಾನ್ಯವಿಲ್ಲದ್ದರಿಂದ ಹಿಂದುಗಳು ಬರೇ ಹೊಟ್ಟೆ ಹೊರಕೊಳ್ಳುವ ಯಂತ್ರಗಳಾಗಿ [illegible] ಣವಿಸಿದ್ದಾರೆ. ಧರ್ಮಲಕ್ಷಣಗಳೆಲ್ಲ ನಿಸ್ತೇಜನ ಹೊಂದಿವೆ. ಶಾಸ್ತ್ರದಂತೆ ಉಪನಯನ ವಿಧಿಯೋ, ಪಾಣಿಗ್ರಹಣ ವಿಧಿಯೋ, ಏನೇನೋ ನಡಿದರೂ ಹಿಂದುಗಳಿಗೆ ಮಂತ್ರಜ್ಞಾನವಿಲ್ಲ, ತಂತ್ರವಂತು ಗೊತ್ತೇ ಇಲ್ಲ. ಆದರಿಂದ ವಿಧಿಗಳಲ್ಲಿ ಹೇಳಲ್ಪಟ್ಟ ಐಹಿಕ ಹಾಗು ಪಾರಮಾರ್ಥಿಕ ಸಂಸ್ಕಾರಗಳು ಹಿಂದುಗಳಿಗೆ ಲಭಿಸದೆ, ಪುರಾತನ ವಿಧಿಗಳೇ ನಿಷ್ಪ್ರಯೋಜಕವೆಂದು ಎನಿಸೋಣಾಗಿವೆ. ದಿವಾಣರು ನುಡಿದಂತೆ, ಹಿಂದು ಧರ್ಮವು ಈ ತನಕ ಬಾಳಿಕೊಂಡಿದ್ದದ್ದು ಸಂಸ್ಕೃತ ಭಾಷೆಯಲ್ಲಿ ಹೇಳಲ್ಪಟ್ಟ ಧ್ಯೇಯಗಳಿಂದಲೇ ಎಂದು ನಾವು ಎಣಿಸಿದರೆ, ಸಂಸ್ಕೃತವನ್ನು ಕಲಿಯದೆ ಹಿಂದು ಧರ್ಮಕ್ಕೆ ಹಿಂದುಗಳು ಮಾಡುವ ಅನ್ಯಾಯವು ಸ್ಫುಟವಾಗುವದು. ಸಂಸ್ಕೃತದಲ್ಲಿ ಹೇಳಲ್ಪಟ್ಟ ಧ್ಯೇಯಗಳು ದೊಡ್ಡ ದೊಡ್ಡ ಸಾಮ್ರಾಜ್ಯಗಳ ತತ್ವಗಳಿಗಿಂತ ಶ್ರೇಷ್ಠವಾದವುಗಳೆಂದು ಹಿಂದು ಧರ್ಮದ ಬಾಳಿಕೆಯೇ ಡಂಗುರ ಸಾರಿ ಹೇಳು

ತ್ತಿರುವಾಗ, ಹಿಂದುಗಳು ಆ ಕಡೆ ಕಿವಿಗೊಡದೆ, ಆಂಗ್ಲ ಭಾಷೆಯು ಬೆನ್ನಿಗೆ ಹಿಡಿಯುತ್ತಿರುವದು ವ್ಯಾಮೋಹವಲ್ಲವೇ? ಹಿಂದುಗಳು ವಿಚಾರಿಸಲಿ. ವಿಶೇಷವಾಗಿ ಹಿಂದು ವಿದ್ಯಾರ್ಥಿಗಳು ಇತ್ತ ಹೆಚ್ಚಿನ ಲಕ್ಷವನ್ನಿತ್ತು ಸಂಸ್ಕೃತದ ಅಭ್ಯಾಸ ಮಾಡಲಿ. ಅಂದರೆ ಮಾತ್ರ ಸಂಸ್ಕೃತದ ಸಾಮರ್ಥ್ಯವು ಅವರಿಗೆ ಸ್ಪಷ್ಟವಾಗಿ ಹೊಳೆಯುವದು.

ಸ್ಫುಟ ಸೂಚನೆಗಳು.

೧ ಮುಂಬಯಿಯ ಹ್ಯಾಕೋರ್ಟ ವಕೀಲರಾದ ಮಿ॥ ಖುರ್ಶೇದ ನರಿಮಾನರವರನ್ನು ನಾವು ಅಂತಃಪೂರ್ವಕವಾಗಿ ಅಭಿನಂದಿಸುವೆವು. ಮುಂಬಯಿ ನಗರದ ವ್ಯಾಪವನ್ನು ಬೆಳೆಸಿ, ಸಮುದ್ರದ ಕೆಲ ಭಾಗವನ್ನು ಪಟ್ಟಣದಲ್ಲಿ ಸೇರಿಸುವ ದೊಡ್ಡದೊಂದು ವಿಶಾಲ ಸೃಷ್ಟಿಗಾಗಿ ಡೆವ್ಹಲಪ್‌ಮೆಂಟ ಅಥವಾ ಅಭಿವೃದ್ಧಿ ಖಾತೆಯನ್ನು ಸರಕಾರವು ನಿರ್ಮಿಸಿತು. ಈ ಖಾತೆಯವರು ಸಾವಿರಾರು—ಲಕ್ಷಾವಧಿ ರೂಪಾಯಿಗಳನ್ನು ಲಂಚ ತಿಂದು ಪ್ರಜೆಗಳ ಹಣದ ಅಪವ್ಯಯ ಮಾಡಿದರೆಂದು ಸರಕಾರಿ ಚೌಕಶಿ ಮಂತ್ರಿಗಳಿಗೆ ಮಿ॥ ನರಿಮಾನರವರು ಹೇಳಿದ ಬಗ್ಗೆ, ಖಾತೆಯ ಸುಪರಿಂಟೆಂಡಿಂಗ ಇಂಜನಿಯರರಾದ ಮಿ॥ ಟಿ ಹಾರ್ವೇಯವರು ಮಾನನಷ್ಟದ ಫಿರ್ಯಾದವನ್ನು ಮುಂಬಯಿಯ ಮಿ॥ ದಸ್ತೂರ ಇವರ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಖಲ ಮಾಡಿಸಿದ್ದರು. ಈ ಫಿರ್ಯಾದಿಯು ೧ ವರ್ಷದ ತನಕ ನಡೆದು, ಕೊನೆಗೆ ಮಿ॥ ನರಿಮಾನರವರು ನಿರ್ದೋಷಿಗಳಾಗಿ ಬಿಡುಗಡೆಯಾದರೆಂದು ತಿಳಿಸಲು ಸಂತೋಷವಾಗುತ್ತದೆ. ನರಿಮಾನರವರು ಈ ಕಾರ್ಯವನ್ನು ಧೈರ್ಯದಿಂದಲೂ, ಸಾಹಸದಿಂದಲೂ ಸ್ವತಃ ತಾವೇ ನಡಿಸಿ, ಅಮೂಲ್ಯ ಸೇವೆಯನ್ನು ಮಾಡಿದ್ದಾರೆ. ೧ ವರುಷದ ತನಕ ಅವರು ವಕೀಲಿಯನ್ನು ಬಿಡಬೇಕಾಯಿತು. ಹೀಗೆಲ್ಲ ದೇಶಕ್ಕಾಗಿ ಸಾಹಸ ಮಾಡಿದ ಬಗ್ಗೆ ಮಿ॥ ನರಿಮಾನರವರಿಗೆ ನಾವು ಮತ್ತೊಮ್ಮೆ ಅಭಿನಂದಿಸಿ ಮುಂದಾಗುವೆವು.

---

೨ ಮೆಜಿಸ್ಟ್ರೇಟರಾದ ಮಿ॥ ದಸ್ತೂರರವರ ತೀರ್ಪು ಮಹತ್ವದ್ದಿದೆ. ಲಂಚ ತಿಂದ ಆರೋಪವನ್ನು ವರಿಷ್ಠ ಅಧಿಕಾರಿಗಳ ಮೇಲೆ ಹಾಕಿ ಮಿ॥ ನರಿಮಾನರವರು ಮಾಡಿದ್ದು ಸಾಧಾರಣವೇ ಇಲ್ಲ. ಕೆಲವು ಅಧಿಕಾರಿಗಳು ಲಂಚ ತಿನ್ನುತ್ತಿದ್ದರೆಂಬ ಪುರಾವೆ ಇರತಕ್ಕದಾಗಿಯೂ, ಪ್ರಕೃತ ಫಿರ್ಯಾದಿಯು ಲಂಚ ತಿಂದ ಕರಿತು ಪುರಾವೆ ಸಿಗುತ್ತದಿಲ್ಲವಾಗಿಯೂ, ಅಂಥ ಪುರಾವೆ ಸಿಗುವದು ಕಠಿಣವೆಂದೂ, ನರಿಮಾನರವರಿಗೆ ದೊರೆತ ಕೆಲವು ಅಲಕ್ಷ್ಯ ಸರಕಾರಿ ದಾಖಲೆಗಳು ಭಕ್ಕನೆ ಕಾಣೆಯಾಗಿರುವವೆಂದೂ, ಫಿರ್ಯಾದಿಯು ವಿಷಯವಾದ ಉಕ್ತಿಯ ಕಂಡಿಗಳನ್ನು ವಿಪರೀತವಾಗಿ ತಿರಿಸಿದ ರೀತಿಯು ಫಿರ್ಯಾದಿಯು ಹೇಳಿದ-ಯಾವದೇ ಸಿದ್ಧಾಂತವು ಸುಸಂಗತವಿರುವದಿಲ್ಲವಾಗಿಯೂ ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟಿದ್ದಾರೆ. ಡೆವ್ಹಲಪ್‌ಮೆಂಟ ಖಾತೆಯಲ್ಲಿ ಸಾವಿರಾರು ರೂಪಾಯಿಗಳನ್ನು ಸರಕಾರಿ ಅಧಿಕಾರಿಗಳು ಲಂಚ ತಿನ್ನುತ್ತಿರುವಾಗ, ಅದು ನಮ್ಮ ಸರಕಾರಕ್ಕೆ ಹ್ಯಾಗೆ ಗೋಚರವಾಗಲಿಲ್ಲೆಂಬದು ನಮಗೆ ಸ್ವಲ್ಪವೂ ತಿಳಿಯದು. ಮುಂಬಯಿಯ ಶಾಯದೆ ಕೌನ್ಸಿಲಿನಲ್ಲಿ ಈ ವಿಷಯ ಕೇಳಿದ ಸೂಚಕ ಪ್ರಶ್ನೆಗಳಿಗೆ ಸರಕಾರವು ಕೊಟ್ಟ ಉತ್ತರಗಳು ಸಾಧಾರವಲ್ಲೆಂದು ಸರಕಾರಿ ದಾಖಲೆಗಳ ಮೇಲಿಂದಲೇ ಸಿದ್ಧವಾಗಿರುತ್ತದಾಗಿ ಮೆಜಿಸ್ಟ್ರೇಟರು ಬರೆಯುತ್ತಾರೆ. ಹೀಗೆಲ್ಲ ಸ್ವತಃ ಅವ್ಯವಸ್ಥೆಯ ನ್ಯಾಯಮೂರ್ತಿ, ಸತ್ಯವನ್ನು ಹೇಳಿದ—ಬರೇ ದೇಶಸೇವಾಬುದ್ಧಿಯಿಂದ ಹೇಳಿದ—ಮಿ॥ ನರಿಮಾನರವರ ಮೇಲೆ ಖಟ್ಲೆ ಮಾಡಲು ಸುಪರಿಂಟೆಂಡಿಂಗ ಇಂಜನಿಯರರಾದ ಮಿ॥ ಹಾರ್ವೇಯವರಿಗೆ ಸರಕಾರವು ಪರವಾನಗಿ ಕೊಟ್ಟದನ್ನು ನೋಡಿದರೆ ಸನ್ಮಾನಿತ ಕಲೆಕ್ಟೇರಿಕ ವ ಪುರಾತನ ಕಾಗಲವಾಡಿಯ ಪರಬಾರದ ನೆನಪಾಗುತ್ತದೆ. ಅಂಗ್ರಾಯಿಯಲ್ಲಿ ಈ ಪ್ರಕಾರ ನಡೆದೀತೆಂದು ನಾವೆಂದೂ ಎಣಿಸಿದ್ದಿಲ್ಲ. ಬ್ರಿಟಿಶರು ವಿಚಾರ ಮಾಡತಕ್ಕ ವಿಷಯ.

---

೩ ಮಿ॥ ನರಿಮಾನರವರ ತೀರ್ಪಿನಿಂದ ಇನ್ನೊಂದು ಮಾತು ಸಿದ್ಧವಾಯಿತು. ಡೆವ್ಹಲಪ್‌ಮೆಂಟ ಖಾತೆಯ ಕುರಿತು ಮಿ॥ ನರಿಮಾನರವರು ದೂರಿಕೊಂಡಾಗ, ಈ ದೂರುಗಳನ್ನೆಲ್ಲ ಪರಾಂಬರಿಸುವದಕ್ಕಾಗಿ ಸರಕಾರವು ಮಿ॥ ಗ್ರಿಮ್‌ವುಡ್ ಮೆ. ರ್‍ಸರವರ ಅಧ್ಯಕ್ಷತೆಯಲ್ಲಿ ಒಂದು ಶೋಧಕ ಮಂಡಳವನ್ನು ನೇಮಿಸಿತು. ಆ ಮಂಡಳವು ಮಿ॥ ನರಿಮಾನರವರ ಆಕ್ಷೇಪಗಳೆಲ್ಲ ನಿರಾಧಾರವಾದವುಗಳೆಂದು ಅಭಿಪ್ರಾಯಪಟ್ಟಿತು. ಶೋಧಕ ಮಂಡಳದ ಅಭಿಪ್ರಾಯವು ಪ್ರಮಾಣವಲ್ಲೆಂದು ಮೆಜಿಸ್ಟ್ರೇಟರಾದ ಮಿ॥ ನರಿಮಾನರವರು ಪರಸ್ಪರ ತೋರಿಸಿಕೊಟ್ಟಿದ್ದಾರೆ. ಈ ಉದಾಹರಣೆಯ ಮೇಲಿಂದ ಸರಕಾರವು ವಿಶೇಷ ಖರ್ಚು ನಡಿಸಿ ನೇಮಿಸುವ ಶೋಧಕ ಮಂಡಳಗಳ ಶಿಫಾರಸುಗಳು ಎಷ್ಟರ ಮಟ್ಟಿಗೆ ಯಥಾರ್ಥವಿರುತ್ತವೆಂಬದು ಗೊತ್ತಾಗುತ್ತದೆ. ಮೆರ್‍ಸರವರಿಗೆ ಕಲಬುರ್ಗಿಯ ಶೋಧಕ ಮಂಡಳದ-ಕೆಲಸ ಮಾಡಿ ಭರತಖಂಡದ ಕಲ್ಯಾಣ ಮಾಡಿದ್ದಕ್ಕಾಗಿ ಅವರಿಗೆ ಸರಕಾರವು ಕಳೆದ ಕ್ರಿಸ್ತ ಯುಗಾದಿಯ ಸಮಯ 'ಸರ್' ಎಂಬ ಪದದಾನ ಕೊಟ್ಟಿತ್ತು. ಇದೆಲ್ಲ ಈಗ ತೀರ ದೊಡ್ಡ ನಾಟಕವೆಂದು ಪ್ರಜೆಗಳಿಗೆ ಗೊತ್ತಾದ ಹಾಗಾಯಿತು. ಶೋಧಕ ಮಂಡಳದ ಶೋಧಗಳಾದರೂ ಸರಕಾರಿ ಧೋರಣಕ್ಕೆ ಅನುಸಾರವಾಗಿಯೇ ಇರುತ್ತವಾಗಿ ಸಿದ್ಧವಾದಂತಾಯಿತು. ಹೀಗೆಲ್ಲ ಸರಕಾರದ ಕುತಂತ್ರಗಳನ್ನು ಹೊರಗೆಡಹಿ ಮಿ॥ ನರಿಮಾನರವರು ಮಾಡಿದ ದೇಶಸೇವೆಯು ಅಮೂಲ್ಯವಿದೆ. ಅದಕ್ಕಾಗಿ ಮಿ. ನರಿಮಾನರವರಿಗೆ ನಾವು ಇನ್ನೊಮ್ಮೆ ಹರಿಸುವೆವು.

---

೪. ಶಾನವಾರದಲ್ಲಿ ಜರಗಲಿಕ್ಕಿದ್ದ ಸ್ಥಾನಿಕ ಸ್ವರಾಜ್ಯ ಪರಿಷತ್ತಿಗೆ ಇಲ್ಲಿಯ ರಾವಬಹಾದ್ದೂರ ಕರ್ಮಾಕರರವರಿಗೆ ಅಧ್ಯಕ್ಷರನ್ನಾಗಿ ನೇಮಿಸಿದ್ದಾರಾಗಿ ತಿಳಿದು, ಸ್ಮರಣವಾಗುತ್ತದೆ. ರಾವಬಹಾದ್ದೂರರು ನ್ಯಾಯಾಸನದ ಕೆಲಸವನ್ನು ವಿಷ್ಣುರ ನ್ಯಾಯಬುದ್ಧಿಯಿಂದಲೂ, ನಿಷ್ಪಕ್ಷಪಾತಬುದ್ಧಿಯಿಂದಲೂ ನಡಿಸಿದ್ದಾರೆಂದು ಗ್ರಹಿಸಲಿಕ್ಕೆ ನಾವು ತಯಾರಿದ್ದೆವೆ. ಜಿಕನ್ಯಾಕುಡಿ, ಗದಗ, ಬೆಳಗಾವಿ, ಹಾವೇರಿ, ಹುಬ್ಬಳ್ಳಿಗಳಲ್ಲಿ ರಾವಬಹಾದ್ದೂರರ ನ್ಯಾಯದಾನದ ಮಾಧುರಿಯನ್ನು ಬಲ್ಲದವರಂತು ಬಲ್ಲರು. ಆದರೆ, ಈ ಗುಣವು ಸ್ಥಾನಿಕ ಸ್ವರಾಜ್ಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ನಿರ್ವಹಿಸಲು ಸಾಲದೆಂದು 'ಪಬ್ಲಿಕ್ ಒಪೀನಿಯನ್' ಎಂಬ ಇಂಗ್ಲಿಷ ಪತ್ರಿಯಿಂದ ನಮ್ಮೆಡೆಗೆ ಬಂದ ಪತ್ರಕರ್ತರು ಹೇಳುತ್ತಾರೆ. ಇದು ವಾಸ್ತವವಾಗಿರುವದೆಂದು ಪ್ರಮಾಣ ಹೇಳುವರು. ರಾವಬಹಾದ್ದೂರರಿಗೆ ಈ ಆಸನವನ್ನರ್ಪಿಸಿ, ಶಾನವಾರದ ಸ್ವಾಗತ ಸಮಿತಿಯವರು ತಪ್ಪು ಮಾಡಿದ್ದಾರೆಂದು ನಮ್ಮ ಅಭಿಪ್ರಾಯವಿದೆ. ರಾವಬಹಾದ್ದೂರರಿಗೆ ಅಧ್ಯಕ್ಷಸ್ಥಾನ ಕೊಡತಕ್ಕದೆಂಬ ಇತ್ತ ಕಡೆಯಿಂದ ಕೆಲವು ಆರ್ಜಿಗಳು ಸಾದರವಾಗಲಿಕ್ಕಿರುವವಾಗಿಯೂ ತಿಳಿಯುತ್ತದೆ. ಅದೇನೂ ಇರಲಿ. ಮ್ಯುನಿಸಿಪಾಲಿಟಿ, ಲೋಕಲ್ ಬೋರ್ಡುಗಳಂಥ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಈ ತನಕ ರಾವಬಹಾದ್ದೂರರು ಸೇರಿರಲಿಲ್ಲೆಂಬದನ್ನು ರಾವಬಹಾದ್ದೂರರೇ ಒಪ್ಪತಕ್ಕ ವಿಷಯ. ಇಂಥ ಪ್ರಸಕ್ತಿಯಲ್ಲಿ ಅಧ್ಯಕ್ಷಸ್ಥಾನವನ್ನು ಅವರು ವಹಿಸಿಕೊಂಡು ಹೇಳುವದೇನಿದೆ? ಅದೇನಿದ್ದರೂ, ಈ ಸಮ್ಮೇಲನಗಳೆಲ್ಲ ಬರೇ ತೋರಿಕೆಯವು ನಿರುದ್ಯೋಗಿಗಳಿಗೊಂದು ಉದ್ಯೋಗವು. ಇವಕ್ಕೆ ಕೇಳುವವರ್‍ಯಾರಿಲ್ಲ, ಹೇಳುವವರ್‍ಯಾರು ಬೇಡ. ಹೀಗೆ ಸ್ವಲ್ಪ ಕಯಿಷ್ಟು, ಸಭಾಪತಿಸ್ಥಾನದ ಮಂಟಪದ ಶೋಭೆಗಾಗಿ ರಾವಬಹಾದ್ದೂರರ ಯೋಜನೆಯಾಗಿದ್ದರೆ, ನಮ್ಮದೇನೂ ಆಕ್ಷೇಪವಿಲ್ಲ. ಮಂಟಪದ ಶೋಭೆಯ ಕಾರ್ಯವನ್ನು ರಾವಬಹಾದ್ದೂರರು ದಕ್ಷತೆಯಿಂದ ನಿಸ್ಸಂದೇಹವಾಗಿ ನಡಿಸ್ಯಾರೆಂದು ನಾವು ಹೇಳಬಲ್ಲೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಥಕ್ಕನೆ ತಿದ್ದುಪಟವಾಗಿದೆ. ವಿಶೇಷ ಚಳಿ ಬೀಳುತ್ತದೆ.

ಶುಕ್ರವಾರಕ್ಕೆ ಇಲ್ಲಿ ಹರತಾಳದ ಕಾರಣ ಕೆಲವು ಅಂಗಡಿಗಳು ಮುಚ್ಚಿಕೊಂಡಿದ್ದವು, ಕೆಲವು ತೆರೆದುಕೊಂಡಿದ್ದವು. ಆ ದಿವಸ ಹುಳಿಬಿದ್ದದ್ದರಿಂದ ಕೆಲವರು ನಿರುಪಾಯವಾಗಿ ಅಂಗಡಿಗಳನ್ನು ಮುಚ್ಚಿದರು. ನಮ್ಮ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾ॥ ಅಣ್ಣಪ್ಪ ರಾಮಚಂದ್ರ ಶ್ಯಾನಭಾಗರು ಆ ದಿನ ಹರತಾಳವನ್ನಾಚರಿಸಲಿಲ್ಲೆಂದು ತಿಳಿಸಲು ವ್ಯಸನವಾಗುತ್ತದೆ. ಅವರ ಪದಾರೋಹಣ ಮಾಡಿಕೊಂಡಿತ್ತು ಶ್ರೀಕ್ಷೇತ್ರದಲ್ಲಿ ಸಮಸ್ತ ಪಕ್ಷದವರು ಒಪ್ಪಿಸುತ್ತದಿಂದ ಹೊರಡಿಸಿದ ಆಜ್ಞೆಯನ್ನು ಕೂಡ ಪಾಲಿಸುವಷ್ಟು ಸದ್ಬುದ್ಧಿಯು ರಾ॥ ಶ್ಯಾನಭಾಗರಲ್ಲಿ ಉಳಿದಿಲ್ಲವೆಂದು ಅನೇಕರು ಗ್ರಹಿಸಿದ್ದಿಲ್ಲ. ಆದಿವಸ್ಸಕ್ಕೆ ಸಭೆ ಸೇರಲಿಲ್ಲ.

ಇಲ್ಲಿಯ ಮ್ಯುನಿಸಿಪಾಲಿಟಿಯ ಸಾಧಾರಣ ಸಭೆಯು ಶನಿವಾರ ತಾರೀಖು ೩೦ ನೇಗೆ ಸೇರಿತು. ಆ ಸಭೆಯ ಹೊನಲಬೆಂತ ವಾರ್ತೆಗಳ ಪ್ರಕರಣವಿತ್ತು. ರಾ॥ ಶೇಷಗಿರಿ ಕಾಮತರವರು ಮ್ಯುನಿಸಿಪಾಲಿಟಿಯ ಪಕ್ಕದ ಆ ಘಟ್ಟ ಹರದ ಜಾಗೆಯೊಳಗಿಂದ ಆ ಘಟ್ಟ ಜಾಗವನ್ನು ಹರಿಯ ಗದ್ದೆಗಳಲ್ಲಿ ಕಾಲುವೆಗಳನ್ನು ಬಿಡಿಸಲು ಬಿಟ್ಟು, ಆ ಘಟ್ಟದ ಮಾರ್ಗ ಮಾಡಬೇಕಾಗಿ ಒಂದು ಠರಾವಿನ ಸೂಚನೆಯನ್ನು ಓದಿದರು. ರಾ॥ ಕಲ್ಯಾಣಪುರಕರರವರು ೧೯೨೬ ನೇ ಇಸ್ವಿಯಲ್ಲಿ ಬಜೆಟಿನ ಕಾಲಕ್ಕೆ ಮಂಜೂರಾದಂತೆ ಆ ಘಟ್ಟ ಹರದ ಮಾರ್ಗವನ್ನು ಬಿಡಬೇಕಾಗಿ ಉಪಸೂಚನೆ ತಂದರು. ಮಧ್ಯದಲ್ಲಿ ರಾ॥ ಸೋಂಕಪ್ಪ ಮಾಂಗುರಿಂಗ ಶ್ಯಾನಭಾಗರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ರಾ॥ ಅಣ್ಣಪ್ಪ ರಾಮಚಂದ್ರ ಶ್ಯಾನಭಾಗರಿಗೆ ಅರ್ಜಿ ಮಾಡಿದ್ದರು:— ಠರಾವಿನ ಅರ್ಜಿ ಈಚೆ ಸಭೆ ಮುಗಿಸಬೇಕು, ಅಂತರೆ, ಅಧ್ಯಕ್ಷರಾದ ರಾ॥ ಅಣ್ಣಪ್ಪ ರಾಮಚಂದ್ರ ಶ್ಯಾ. ಹೊಂಗಿರರಾದ ರಾ॥ ಸ್ವಾಳಪ್ಪ ಶಿಪ್ಪಯ್ಯ ಶ್ಯಾ ಹಾಗು ಆ ಹೊನ್ನಾವರದ ರಾ॥ ಸೋಂಕಪ್ಪ ಮಾಂಗುರಿಂಗ ಶ್ಯಾನಭಾಗರ ಪಕ್ಕದ ಗದ್ದೆಗಳಿದ್ದು, ಆ ಗದ್ದೆಗಳಲ್ಲಿ ಬೇಗನೆ ಹಸ್ತ ಕ್ಷೇಪಿಸುವ ಮಾರ್ಗದರ್ಶನವಾಗುವಾಗಲೇ ಮ್ಯುನಿಸಿಪಾ

ಲಿಯುವರು ಮಾರ್ಗದ ಎರಡೂ ಪಕ್ಕಗಳಿಗೆ ಮೂಗಾಲು ಗಳನ್ನು ಹಾಕಿ, ಅವನ್ನು ಶಾಶ್ವತವಾಗಿ ದುರುಸ್ತು ಇಡುವ ವ್ಯವಸ್ಥೆ ಮಾಡಬೇಕಾಗಿಯೂ, ಇಲ್ಲದಿದ್ದರೆ ಪರಂಪರಾಗತ ಹಕ್ಕಿನಂತೆ ಈ ಮಾರ್ಗದ ಮೇಲೆ ಬೇಲಿ ಕಟ್ಟದ ಕಡೆ ಇಡಲು ಅಪ್ಪಣೆ ಕೊಡಬೇಕಾಗಿಯೂ ವಿನಂತಿ ಮಾಡಿಕೊಂಡಿದ್ದರು. ರಾ| ಶೇಷಗಿರಿ ಕಾಮತರು ರಾ| ಸ್ವರ ದೇಶಪಾಯ ಪರಂಪರಾಗತ ಹಕ್ಕನ್ನು ಮನ್ನಿಸಿದರು. ಸೂಚನೆ ಉಪಸೂಚನೆಗಳಿಗೆ ಮತ ಕೊಳ್ಳಲಾಯಿತು. ರಾ| ಕಾಮತರ ಸೂಚನೆಗೆ ರಾ| ಗಾವಸ್ಕರ, ಕೇಶವ ಪೈ, ಮಲ್ಲಪ್ಪ, ರಾಮರಾವ ಹನುಮಂತ ಶ್ಯಾನಭಾಗ, ಸಿ| ಟಿ ಸ್ವಾಮಿ ಗಸ್ಪರ ಡಿಸೋಜಾ ಹೀಗೆ ಆರು ೬ ಮತಗಳು ಬಿದ್ದವು. ರಾ| ಕಲ್ಯಾಣಪುರಕರರ ಸೂಚನೆಗೆ ರಾ| ನರಸಿಂಹ ಶ್ಯಾನಭಾಗ, ಗೋವಿಂದ ಪೈ, ಗಂಗಾಧರ ಶ್ಯಾನಭಾಗ, ಸೀತಾರಾಮ ಭಾಗವತ, ಗಣಪಯ್ಯ ಗೌಡಯ್ಯಾ, ಮಿ| ಆಲಿವಿನ ಹಾ. ಹಿಮ ಸಾಹೇಬ ಹೀಗೆ ೭ ಮತಗಳು ಬಿದ್ದವು. ಅಧ್ಯಕ್ಷರಾದ ರಾ| ಅಣ್ಣಪ್ಪನವರು ತಮ್ಮ ಸ್ವಂತ ಮತವನ್ನು ರಾ| ಕಾಮತರಿಗೆ ಒಪ್ಪಿಸಿ ನ ಆಗ ಳನ್ನು ಎರಡೂ ಬದಿಗಳಲ್ಲಿ ಸರಿಪಡಿಸಿಕೊಂಡರು. ಹದಿನೇಳೇ ಅಧ್ಯಕ್ಷರು ತಮ್ಮ ಮತವನ್ನು ರಾ| ಕಾಮತರಿಗೆ ಒಪ್ಪಿಸಿ, ಅವರ ಸೂಚನೆಯನ್ನೇ ಮುಂದೂಡ ಮಾಡಿಕೊಂಡರು. ಟ್ರಸ್ಟು ಮಾರ್ಗಕ್ಕೆ ಪ್ರವೇಶವಾದ ರಕಮಿನೊಳಗೇ ಹಳ್ಳಿಯ ಮಾರ್ಗದ ರಚನೆಯಾಗಬೇಕೆಂದ ಗಾಪ್ ಮಾಡ ಇರುವುದು ಆಗಲಿಲ್ಲ. ಇದು ಸಾರ್ವಜನಿಕ ಹಣದ ಅಪವ್ಯಯವಲ್ಲವೇ? ಹೊನ್ನಾವರದ ರಾ| ರಾಮ ಹನುಮಂತ ಶ್ಯಾನಭಾಗರು ಬಾಗು ಹೂಡಿದ್ದರು. ಆ ಟ್ರಸ್ಟು ಮಾರ್ಗಕ್ಕೆ ಕಳೆದ ವರುಷ ಅವರು ಸಮ್ಮತಿ ಕೊಟ್ಟಿದ್ದರು. ಈ ವರುಷ ಆ ಟ್ರಸ್ಟಿಗೆ ಕಳೆದುಹೋಗಿಸಿದರೆ ರಾ| ಅಣ್ಣಪ್ಪನವರು ಹೊನ್ನಾವರ ತಾಲೂಕಿನಿಂದ ಆರಿಸಿ ಬಂದ ಮೆಂಬರರು ಹೊನ್ನಾವರ ಮಾರ್ಗಕ್ಕೆ ಪ್ರತಿಕೂಲರಾಗಿ ಪರಿಣಮಿಸಿದರು. ವ್ಯವಸಾಯ ಬಾಬತಕ್ಕೆ ಸುಮಾರು ೩ ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ. ಅವನ್ನು ಈ ಬೇಂಕಿನಲ್ಲಿಡಬೇಕೆಂದೆ. ಗೋಕರ್ಣ ಪಟ್ಟಣ ವ್ಯವಸ್ಥೆಯೊಳಗೆ ೩೦೦ ಸಾವಿರ ರೂಪಾಯಿ ಹಣ ಅಗುವವರೆಗೆ ನಿರಿಸಿದ ಮುಕ್ತಿಗಳನ್ನು ಇರಿಸಬಹುದು. ಮಾರ್ಗಗಳ ಮೇಲೆ ನೀರು ಹಾಕುವ ವಿಚಾರ ಸದಾ ಚಲ ಮುಂದೂಡಲ್ಪಟ್ಟಿತು. ಕಮಿಟಿಯು ನೇಮಕವಾಗಿದೆ.

ಇಲ್ಲಿಯ ಸ್ಟೆಂಡರ್ಡ ಆಯಿಲ್ ಕಂಪನಿಯ ಆಫೀಸಿನಲ್ಲಿಯೂ, ಮಾರಿಯರ ಮಹಾಮನೆಯಲ್ಲಿಯೂ ಕಳವುಗಳಾದವು. ಪೋಲೀಸರ ಚೌಕಶಿ ನಡೆದಿದೆ.

ಇಲ್ಲಿಯ ರಥ ಸಪ್ತಮಿಯ ಉತ್ಸವವು ಸಾಂಗವಾಗಿ ನೆರವೇರಿತು.

'ಪಬ್ಲಿಕ್ ಒಪಿನಿಯನ' ಎಂಬವರು ಇಂಗ್ಲಿಷಿನಿಂದ ಬರೆಯುವದೇನಂದರೆ:— ಕಾರವಾರ ಜಿಲ್ಲೆಯ ಸ್ಥಾನಿಕ ಸ್ವರಾಜ್ಯ ಪರಿಷತ್ತಿನ ಅಧ್ಯಕ್ಷರು ನವನ್ನು ರಾ| ಕಲ್ಯಾಣಪುರಕರರಿಗೆ ಒಪ್ಪಿಸಿದ್ದು ಅಪ್ರಶಸ್ತವು. ರಾ| ಬ| ರಿಗೆ ಸ್ಥಾನಿಕ ಸ್ವರಾಜ್ಯದ ಮಾಹಿತಿಯಿಲ್ಲ. ಅಂಥವರು ಪರಿಷತ್ತಿನ ವಿಚಾರವನ್ನು ಹೇಗೆ ಸಾಗಿಸಬಲ್ಲರು? ನಿಜವಾಗಿ ಕಳೆದ ಕ್ಕೆ ಪರಿಷತ್ತಿನ ಯೋಜನೆಯಾಗಲಿಲ್ಲ. ರಾ| ಬ| ರು ಇದಾಗಿ ಅಧ್ಯಕ್ಷಸ್ಥಾನವನ್ನು ತ್ಯಜಿಸಬೇಕೆಂದು ಸೂಚನೆ. ಸ್ಥಾನಿಕ ಸಮಿತಿಯವರು ಪರಿಷ್ಕಾರಗಳಿಂದ ಯಾರಾದರೂ ಒಬ್ಬರನ್ನು ನಿಯಮಿಸಬಹುದಾಗಿತ್ತು. ಅಥವಾ ಈ ಜಿಲ್ಲೆಯೊಳಗಿನವರನ್ನೇ ಸೂಚಿಸಿ, ಆ ಕಾರಣ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಂದ ಮತಗಳನ್ನು ತರಿಸಿ, ಬಹುಮತದಂತೆ ಆರಿಸಬಹುದಿತ್ತು. ಇತ್ಯಾದಿ.

ಹಿರೇಗುತ್ತಿಯ ರಾ| ನಾಗಪ್ಪ ಬೀರಣ್ಣ ನ್ಯಾಕ ಕೆರೆಮನೆ ಅವರು ತಿಳಿಸುವದೇನಂದರೆ:— ಕಳೆದ ಡಿಸಂಬರ ತಾರೀಖು ೩೦-೩೧ನೇಗೆ ವಿಜ್ಞಾನ-ಅಂಕೋಲಾ ಹಿರೇಮ ಮು ಸಾಹತದ ಸಮಾಜಮಿತ್ರರು ತೊರ್ಕೆಯ ಶ್ರೀ ಕಂಗಾಳ ಪರಮೇಶ್ವರಿ ದೇವಾಲಯದ ವಿಸ್ತೀರ್ಣ ಪಟಾಂಗಣದಲ್ಲಿ ಸಭೆ ನೆರೆದಿ ಸಮಾಜಕ್ಕೆ ಸಂಬಂಧಿಸಿದ ವಿಷಯಗಳನ್ನು ಆಶ್ಚರ್ಯಪಡಿಸಿದರು. ಚಿಕ್ಕ ಪುಟ್ಟ ಜಾತಿಯ ಪ್ರಶ್ನೆಗಳನ್ನು ವಿಚಾರಿಸಲು ೫ ಜನ ಗುಂಪಳಿಕಾರರನ್ನು ನೇಮಿಸಿದ್ದಾರೆ. ಅವರು ಯಾರೆಂದರೆ - (ಹಿರೇಗುತ್ತಿ) ರಾ| ಹಮ್ಮಣ್ಣ ಸಣ್ಣ ನ್ಯಾಕ, ನಾಗಪ್ಪ ಬೀರಣ್ಣ ನ್ಯಾಕ ಕೆರೆಮನೆ, (ತೊರ್ಕೆ) ಸಣ್ಣತಮ್ಮ ಪರಮೇಶ್ವರ ನ್ಯಾಕ ಪಟೇಲ, ಸಣ್ಣಪ್ಪ ದೇವಣ್ಣ ನ್ಯಾಕ ಪಟೇಲ, (ಮೊರ್ಬಾ) ದೇವಣ್ಣ ರಾಮ ನ್ಯಾಕ ಈ ಸಭೆಗೆ ವಿಜಾಪುರದ ಕಲೆಕ್ಟರರಾದ ರಾ| ವೆಂಕಣ್ಣಾ ಹೊಸಬು ನ್ಯಾಕರವರು ಅಧ್ಯಕ್ಷರಿದ್ದರು. ೧೦೦೦ಕ್ಕೆ ಮೇಲ್ಪಟ್ಟು ಜನರು ಸೇರಿದ್ದರು.

ಗೋಕರ್ಣ— ಇಲ್ಲಿಯ ಕಳೆದ ದಿವಸ ಶ್ರೀಮಾನ್ ಕಮಿಟಿ ಬಹಿಷ್ಕಾರದ ಬಗ್ಗೆ ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಭಗವಾನ್ ಶೂರ್ಯನಾರಾಯಣ ಸ್ವಾಮಿ ಸಹ ಹರತಾಳವನ್ನಾಚರಿಸಿದ್ದನು. ಅದೇ ದಿವಸ ಅಕಾಲ ವೃಷ್ಟಿಯೂ ಆಯಿತು.

ರಾತ್ರಿ ಸಮಿಯಿಸಿತ್ತು ಬಂತು. ಜಾತ್ರೆ ಕಾಲಕ್ಕೆ ಮಹಾಬಲ ಊರ (ಸಂಕದ ಕಟ್ಟೆ) ಹೊರಗೆ ಇರುವ ವ್ಯವಸ್ಥೆ ಮಾಡುವರು. ಬಳ್ಳಾರಿ ಇತ್ತ ಕಡೆಗೆ ಅಧಿಕಾರಿಗಳು ಲಕ್ಷ್ಯ ಪುರಸಬೇಕು.

ಹೊನ್ನಾವರ— ಇಲ್ಲಿಯ ಸುಬ್ರಾವರರಿಗೆ ಕುಲದ ಬಗೆ ವಾಗ್ಣೀಗಳ ಅವರ ಸ್ಥಳದಲ್ಲಿ ರಾ| ಹಿಕಳೆ ಬೇರೆ ಹಾಜರಾಗಿದರೆ. ರಾ| ಸುಬ್ರಾವರವರು ಇಲ್ಲಿ ಬಂದ ೬—೭ ವರುಷಗಳಾದವು. ಕೆಲವು ಪ್ರಸಂಗಗಳಲ್ಲಿ ಅವರು ಪುರಸ್ಕರಿಸಿದ ನಡೆನಡಾವಳಿ ಜನರಿಗೆ ಗ್ರಾಹ್ಯವಾಗದಿದ್ದರೂ, ಅವರು ಈ ಕನಕ ತಮ್ಮ ಕಾರ್ಯವನ್ನು ದಕ್ಷತೆಯಿಂದ ನಡಿಸಿದ್ದಾರೆ. ರೋಗಿಗಳಿಗೆ ಎಡೆಬಿಡದೆ ದ್ಯೌಷಧ ಕೊಡುವದರಲ್ಲಿ ಅವರು ಪ್ರವೀಣರಿದ್ದರು. ಅದರಿಂದ ಅವರನ್ನು ಇಲ್ಲೇ ಇಡಬೇಕಾಗಿ ಇಲ್ಲಿಯವರು ಸರ್ಜನ್ ಜನರಲ್‍ರವರಿಗೆ ಅಂತ ಮಾಡಿದ್ದರು. ಆದರೆ, ಅದು ನಿಷ್ಫಲವಾಯಿತು. ರಾ| ಹಿಕಳೆಯವರು ರಾ| ಸುಬ್ರಾವರವರಂತೆ ಬೆಲೆಬಾಳುವರ ನಡಿಸಿ ಲೋಕಸಂಗ್ರಹ ಮಾಡುವರಾಗಿ ಕೋರಿಕೆ.

ಚಿಕ್ಕನಾಡಕ್ಕೆ ಸ್ಟೀಮರ್ ಕಮಿಟಿಯ ಆಗಮನದ ಪ್ರೀತ್ಯರ್ಥ ಇಲ್ಲಿನ ಪೇಟೆಯು ಮುಚ್ಚಿದ್ದಿತ್ತು. ಸಾಹುಕಾರರು ಬೀಡು ಬಿಡಲಿಲ್ಲ; ಆದಾಯ ಪತ್ರಿಕೆಯೂ ಬರಲಿಲ್ಲ. ಅವಸ್ಥೆ ೧೪ ಘಂಟೆಗೆ ಟೌನ ಹಾಲಿನಲ್ಲಿ ಶ್ರೀ ಕೇರಳದ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನೆರೆದು ನಿಷೇಧಕರ ಠರಾವುಗಳಾದವು.

ಇಲ್ಲಿಯ ಚಂದ್ರಸೇನರಾಯರ ಇಲೆಕ್ಷನಿನ ಗಡಿಬಿಡಿ ಮುಗಿಯಿತು. ಈ ಕೆಳಗಿನಂತೆ ೪ ಜಾಗೆಗಳಿಗೆ ಬಂದ ಸಭಾಸದರು ಆರಿಸಿ ಬಂದಿದ್ದಾರೆ. ರಾ| ಬಳ್ಕೂರ ಕೃಷ್ಣಪ್ಪ ಸೂಂಕಪ್ಪ ವೆಂಕಾರಿ, ಶೇಷಗಿರಿ ವೆಂಕಟೇಶ ಶೆಟ್ಟಿ, ನಾಗಪ್ಪ ಪಾಂಡುರಂಗ ಪೈ, ಗಣಪತಿ ನಾಗಪ್ಪ ಶಿರೋಡಕರ, ಮಾದಪ್ಪ ಗಣಪ ಹೆಗಡೆ, ಮಾಧವ ಪಾಂಡುರಂಗ ಶ್ಯಾನಭಾಗ ಶಿರಾಲಿ, ಪರಮೇಶ್ವರ ಗಣೇಶ ಶೆಟ್ ಎಂ. ಎ, ಎಲ್ ಎಲ್. ಬಿ., ಮಂಜುನಾಥ ನಾರಾಯಣಪ್ಪ ವಜ್ರಸ, ರಾಮಕೃಷ್ಣ ರಘುಗಿರಿ ಪೈ, ಉಪೇಂದ್ರ ವಿನೋಬ ನಾಯ್ಕ ಬಿ ಎ., ಎಲ ಎಲ್. ಬಿ., ರಾಮಚಂದ್ರ ಪರಮೇಶ್ವರ ನ್ಯಾಕ, ರಾಮಚಂದ್ರ ನಾಮನ ಶ್ಯಾನಭಾಗ.

ಬೆಂಕಿಪೆಟ್ಟಿಗೆ ಕಾರಖಾನೆಯ ನಿಜಂಟರಿಂದ ಊರಲ್ಲಿ ಹೇಳಿ ಎಷ್ಟಾದ್ರೂ ಯಾಕೆ ಸಂಚಾರ ಕೊಂಡು ಸಾರಾಗಿ ಚಿಕ್ಕಿಸಿದ ಕಾರಣ ಇಲ್ಲಿ ಬಿಟ್ಟಿಯ ವಿಚಾರ ನಡೆದಿದೆ ಆರೋಪಿಯು ವಿಜಾಪುರ ಜೈಲಿನಲ್ಲಿ ಬೇರೊಂದು ಕಾರಣದ ಮೂಲಕ ಸೂರ್ಯಾಶ್ರಮದ ಆತ್ಮಹತ್ಯವನ್ನು ಪಡೆಯುತ್ತಿದ್ದನು. ಇಲ್ಲಿಂದ ಹಿಡಿಕೊಂಡು ಬಿಟ್ಟ ನಡೆದಿದೆ.

ಕಾಸರಕೋಡ— ರಾಷ್ಟ್ರೀಯ ಸಭೆಯ ಚಳ್ಳಕೆಯಂತೆ, ಇಲ್ಲಿ ಚಿಕ್ಕನಾಡಕ್ಕೆ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಅಂದು ದೊಳ ಸುರಿಯಿತು. ನಿಡಿಲು ಬಿದ್ದು ಒಬ್ಬ ಗಾಮಕ್ಕಲ ಜಾತಿಯವನ ಹೆತ್ತಲೊಳಗಿನ ತೆಂಗಿನ ಮರವು ಸುಟ್ಟುಹೋಯಿತು.

ಕಾರವಾರ— ಪೇಟೆಯ ಆಚೆ-ಈಚೆ ಸಹ ಇಲಿಗಳು ಬೀಳಲಾರಂಭಿಸಿವೆ. ಕಲೆಕ್ಟರರ ಕಚೇರಿಯಲ್ಲಿಯೂ ಒಂದು ಪ್ಲೇಗಿನ ಇಲಿ ಬಿತ್ತು. ಕ್ರಿಸ್ತ ಜಾತಿಯ ಹುಡುಗನೊಬ್ಬನು ತೀರಿಕೊಂಡನು. ಇನ್ನೊಬ್ಬನಿಗೆ ಜ್ವರ ಬಂದಿದೆ. ದರ್ಜಿ ಕೆಲಸ ಮಾಡುವ ಹುಡುಗನೊಬ್ಬನಿಗೂ ಜ್ವರ ಬಂದಿತ್ತು. ಆತನನ್ನು ಅಲ್ಲಿಗಡ್ಡೆಗೆ ಕಳಿಸಿದ್ದಾರೆ. ಜನರೆಲ್ಲರೂ ಗಾಬರಿಯಾಗಿದ್ದಾರೆ. ಅಲ್ಲಲ್ಲಿಯವರು ಗ್ರಾಮತ್ಯಾಗ ಮಾಡುತ್ತಿದ್ದಾರೆ. ಇದರಿಂದಲೂ ಪ್ಲೇಗು ಹರಡಿರಬಹುದೆಂದು ಸಾಕು. ಜನರಿಗೆ ಬಿಡಾರ ಕಟ್ಟಿ ಕೊಳ್ಳಲು ಗಾಳಿಯದ ಹೋಡಿನಲ್ಲಿ ಸ್ಥಳ ಕೊಟ್ಟರೆ ಉಪಕಾರವಿದೆ. ದರ್ಜಿಯ ಹುಡುಗನು ತೀರಿಕೊಂಡನು. ಹೀಗೆ ೬ ಮರಣಗಳು ಈ ತನಕ ಸಂಭವಿಸಿದವು. ಶುಕ್ರವಾರಕ್ಕೆ ಮಳೆ ಬಿದ್ದದರಿಂದ ಜನರಿಗೆ ಹೊಂಬೀಳು ಬಾರಲು ಸಾಕು. ಕೆಂಪು ರಕ್ತ ಬಣ್ಣದ ನೀರು ಕೋಟೆಗಳ ಬಾವಿಯಲ್ಲಿ ಪ್ಲೇಗು ಸಂಭವಿಸಿದ ಬಳಿಯ ಅಡ್ಡ ಶಹರಕ್ಕೆ ಬಿಟ್ಟಿದೆ. ಕೂಡಲೆ ಕೋಟೆಗಳ ಪ್ರಾಕಾರವು ಕ್ರಿಮಿನಾಶಕ ಔಷಧಿಯಿಂದ ಸಿಂಪಡಿಸಲಾಯಿತು. ಸುಯೋಗಕ್ಕೆ ಅದೇ ನಗರವು ಚಿಕ್ಕಿಂತ ಕಾಣುತ್ತದೆ. ಶುಕ್ರವಾರಕ್ಕೆ ಜಾಹೀರವಾಗಿ ಎಲ್ಲರಿಂದಲೂ ಹರತಾಳಾಚರಣೆಯಾಯಿತು. ಪ್ಲೇಗಿನ ಮೂಲಕ ಸಭೆ ನೇರಿಸಲಾಗಲಿಲ್ಲ.

ಇಲ್ಲಿಯ ಪೋಲೀಸ ಸುಪರಿಂಟೆಂಡೆಂಟರಾದ ಮಿ| ರೊಬರ್ಟಸನ್‍ರವರಿಗೆ ದರ್ಗಾವಾಯಿತು ಮಿ| ರೊಬರ್ಟಸನ್ನವರ ಕಾರಕೀರ್ದಿಯಲ್ಲಿ ಪೋಲೀಸರ ಕೆಲಸವು ಚೆನ್ನಾಗಿ ಸಾಗಿತೆಂದು ಹೇಳಬಹುದು. ಗೋಕರ್ಣ ಜಗ್ಗೇರಿ ಗ್ರಾಮಗಳಲ್ಲಿ ಖೂನಿ ಪ್ರಕರಣವನ್ನು ಶೋಧಿಸುವ ಪ್ರಯತ್ನವನು ಅವರು ತ್ವರಿತವಾಗಿ ಬುದ್ಧಿಯಿಂದ ನಡಿಸಿದ್ದಾರೆ. ಕೆಳ ಪೋಲೀಸ ಅಧಿಕಾರಿಗಳ ಕಡೆಯಿಂದ ಕೆಲಸ ಮಾಡಿಸಿಕೊಳ್ಳಲು ಅವರು ನಿಪುಣರಿದ್ದರು. ಮೋಟಾರುಗಳ ವಿಷಯ ಅವರು ಏರ್ಪಡಿಸಿದ ಕೆಲವು ನಿಯಮಗಳು ಉಪಯುಕ್ತವಾದವುಗಳಾಗಿದ್ದರೂ, ಅವರ ಕಾರಕೀರ್ದಿಯಿಂದ ಒಟ್ಟಿನ ಮೇಲೆ ಹಿತವಾಯಿತೆಂದು ಹೇಳಬಹುದು.

ಸದಾಶಿವಗಡ— ಇಲ್ಲಿಯ ಶಿಕ್ಷಣ ಸಂಘದ ಕಡೆಯಿಂದ ಇಲ್ಲಿಯ ಶಾಲೆಯ ೧ನೇ ವರ್ಧಂತಿಯು ಮಹೋತ್ಸವವು ಕಳೆದ ಮಾಹದಲ್ಲಿ ನೆರವೇರಿತು. ಕಾರವಾರದ ವಕೀಲರಾದ ಶ್ರೀ ಕೃಷ್ಣರಾವ ಹಳದೀಪೂರಕರರವರು ಸಭಾಧ್ಯಕ್ಷರಿದ್ದರು. ಶ್ರೀ ಹಳದೀಪೂರಕರರವರು ಸಭಾಧ್ಯಕ್ಷರಿದ್ದರು. ಶ್ರೀ ಹಳದೀಪೂರಕರರು ಹುಡುಗರಿಗೆ ಆತಿಶಾಸ್ತ್ರ, ಪ್ರಯೋಗ ಗ್ರಂಥಗಳನ್ನು ಓದಬೇಕಾಗಿದ್ದಾಗ ಸ್ವಾತಂತ್ರ್ಯ ನಿರೀಕ್ಷಣ ಬುದ್ಧಿಯನ್ನು 'ಸ್ವಾತಂತ್ರ್ಯ ನಿರೀಕ್ಷೆಯಿಂದ' ಬೆಳೆಸಿಕೊಳ್ಳಬೇಕಾಗಿದೆ ಎಂದು ಬೋಧಿಸಿದರು. ಸ್ವಗೃಹ-ಸ್ವಸರ್ಕಾರ-ಮಂದಿರ-ಸ್ವಗ್ರಾಮ-ಸ್ವದೇಶಗಳ ಬಗ್ಗೆ ಅಭಿಮಾನವು ಹೆಚ್ಚಬೇಕಾಗಿಯೂ ಅಂತಃಕರಣಪೂರ್ವಕವಾಗಿ ಹೇಳಿದರು. ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾದ ಶ್ರೀ ಗೋಪಕ ರಾವ ನಾಡಕರ್ಣಿಯವರು ಮಾಡಿದ ಭಾಷಣವು ಮನನೀಯವಿದೆ. ಈ ಶಾಲೆಯ ಏಳಿಗೆಗೆ ಬಂದು ಸರಕಾರಿ ಸಹಾಯ ವಿದೆ ಅದನ್ನು ಈ ಶಾಲೆಗೆ ಕೊಡಬೇಕಾಗಿ ಕಲೆಕ್ಟರಿಂದ ಮಿ| ಗೋಂಗೋಡೆಯವರಿಗೆ ಕಾಲೇಜಿಯರಿಗಳು ಅರ್ಜಿ ಮಾಡಿದ್ದರು. ಆ ಅರ್ಜಿಯು ತಿರಸ್ಕರಿಸಲ್ಪಟ್ಟಿತು. ಪೋಲೀಸರ ಬಗ್ಗೆ ಸಭ್ಯ ಸ್ಥಳ ಪಡೆದಿರುತ್ತಾಗಿಯೂ ಕಲೆಕ್ಟರರಿಂದ ಉತ್ತರ ದೊರಕಿತು. ಆದರೆ ಕಲವರು ಈಗಿನ ಕಲೆಕ್ಟರರಾದ ಮಿ| ಬ್ರಾಮ್ಫಿಲ್ಡಯವರಿಗೆ ಪುನಃ ಒಂದು ಗೃಹಿತಕೊಟ್ಟು, ಬ್ರಾಹ್ಮಣೇತರರ ಬಗ್ಗೆ ಹೊಸ ಶಾಲೆಯನ್ನು ನಿರ್ಮಿಸುವ ವಿಚಾರ ನಡಿಸಿದ್ದಾರಂತೆ! ಹೊಸ ಶಾಲೆಯ ಕಾರಣವೇ ತಿಳಿಯುವದಿಲ್ಲ. ಈಗಿನ ಶಾಲೆಯಾಗಿ ೩ ವರ್ಷಗಳಾದವು. ಮೊದಲಿನಿಂದ ವಿದ್ಯಾರ್ಥಿಗಳು ಬ್ರಾಹ್ಮಣೇತರರೇ! ಕೆಲವು ಮರಾಠಾ ವಿದ್ಯಾರ್ಥಿಗೆ ಳಿಗಂತೂ ವಿಶೇಷ ಅನುಕೂಲತೆಗಳು! ಈ ಶಾಲೆಯಲ್ಲಿ ಶಿಕ್ಷಕರೆಲ್ಲ ಬ್ರಾಹ್ಮಣೇತರರು; ಇನ್ನು

ರು. ಮುಸಲ್ಮಾನರು ಹೀಗೆ ಜಾತಿಬೇಧವಿಲ್ಲದೆ ಈ ಜನಕ ಸಹಿತು ಬಂದಾಗ ಹೊಸ ಇಂಗ್ಲಿಷ ಶಾಲೆಯನ್ನು ಸ್ಥಾಪಿಸುವರೇಕೆ? ಕೆಳಗಿನ ಶಾಲೆಗೆ ಹಿತವಾಗುವದರಿಂದ ಪ್ರಶಸ್ತಿಗೃಹವನ್ನು ತೆರೆಯಬಹುದು; ಕಾರವಾರದಂತ ಪಟ್ಟಣದಲ್ಲಿ ಸಹ ಎರಡು ಶಾಲೆಗಳಿಲ್ಲ; ಹೀಗಿರುವಾಗ, ಸದಾಶಿವಗಡದಂಥ ಚಿಕ್ಕ ಪಟ್ಟಣದಲ್ಲಿ ಎರಡು ಶಾಲೆಗಳನ್ನು ತೆರೆಯಿಸುವದು ವ್ಯರ್ಥವ್ಯಯವು; ಇತ್ಯಾದಿ ವಾಕಾದಿ ದೇ. ರಾಜಸಾಹೇಬ ಬಾಲಕೃಷ್ಣ ನ್ಯಾಕರು ೬೯೧ ಗಣಪತ ವಾಕಳಕರಯವರ ಹೇಳಿಗೆ ಕರೆದೊಯಿದರು. ಕಲೆಕ್ಟರು ಅಳವಾಗಿ ವಿಚಾರಿಸಿ ಮುಂದರಿಯಬೇಕಾಗಿ ವಿನಂತಿ.

ಚೆಂಡಿಯೆ— ಅಖಿಲ ಭಾರತೀಯ ರಾಷ್ಟ್ರೀಯ ಸಭೆಯು ತೀರ್ಮಾನಿಸಿದಂತೆ ಚೆಂಡಿಯ-ತೋಡೂರ ಬಾರುಗಳಲ್ಲಿ ಸೈಮನ್ ಕಮಿಷನ ಆಗಮನ ನಿಷೇಧಾರ್ಥವಾಗಿ ಶುಕ್ರವಾರಕ್ಕೆ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಬೇಸಾಯಗಾರರು ಸಂಸಾರದ ಸಣ್ಣ ಪುಟ್ಟ ಕೆಲಸಗಳನ್ನು ಸಹ ಮಾಡಬಾರದೆಂದು ದೈವಸಂಕಲ್ಪವಿತ್ತೆಂಬಂತೆ ಶ್ರೀ ದೇವರು ಆಕಾಲದಲ್ಲಿ ಮೇಘವಾಹನನನ್ನು ಕಳಿಸಿ ಜನರಿಗೆ ಪ್ರತಿಬಂಧ ಮಾಡಿತು. ಪ್ರಾಥಮಿಕ ಶಾಲೆಗೆ ವಿದ್ಯಾರ್ಥಿಗಳು ಸಹ ಹೋಗಲಿಲ್ಲ. ಶಿಕ್ಷಕರು ಸುಮ್ಮನೆ ಕುಳಿತುಕೊಂಡು ಕಾಲ ಕಳೆದರು.

ಅವ್ಸರ್ಸೆ— ಸ್ಯಾಮನ್ ಕಮಿಶನನ್ನು ನಿಷೇಧಿಸುವದಕ್ಕಾಗಿ ಇಲ್ಲಿ ಶುಕ್ರವಾರಕ್ಕೆ ಹರತಾಳವು ಆಚರಿಸಲ್ಪಟ್ಟಿತು. ಸೂರ್ಯನಾರಾಯಣನು ಅಂದು ಮೋಡಗಳಡಿಗೆ ಮಾಯವಾಗಿದ್ದನು. ಮಳೆ ಬೀಳುತ್ತಿತ್ತು. ಅಂಗಡಿಗಳು ಮುಚ್ಚಿಕೊಂಡಿದ್ದವು ದಾಕ್ತರ ಕಗ್ಗತ್ತಲೆ ಚಂದ್ರನು ಹೊಳೆ ಸಹ ನೋಡಲಿಲ್ಲ. ಹೀಗೆಲ್ಲ ಹರತಾಳವು ಸಂಪೂರ್ಣವಾಗಿ ಆಚರಿಸಲಾಯಿತು.

ಅಂಕೋಲಾ— ಚಳಿ ಸುಮಾರು ಜ್ವರದ ಹಾವಳಿ ಇನ್ನೂ ಕಡಿಮೆಯಾಗಿಲ್ಲ ಹೋಟಲುಗಳ ಓಡಾಟ ನೋಡಿದರೆ, ಕಾಂಪೋಂಡಿನ ಪ್ಲೇಗರಾಜನು ನಿಮಿತ್ತಕಧಿಕಾರದ್ದಾನೇನೆಂಬಂತೆ ಭಾಸವಾಗುತ್ತದೆ.

ಎಲ್ಲ ಕಡೆಯಂತೆ, ಶುಕ್ರವಾರಕ್ಕೆ ಇಲ್ಲಿ ಸಂಪೂರ್ಣ ಹರತಾಳ ಆಚರಣೆಯಾಯಿತು ಶುಕ್ರವಾರಕ್ಕೆ ಇಲ್ಲಿ ಸಂತೆ. ಆದರೂ, ಅಂಗಡಿಗಳೆಲ್ಲವೂ ಮುಚ್ಚಿಕೊಂಡಿದ್ದವು ಕಾಯಿ-ಪಲ್ಲೆಯ ಪೇಟೆ ಸಹ ಮುಚ್ಚಿಕೊಂಡಿತ್ತು. ಪ್ರಾಥಮಿಕ-ಇಂಗ್ಲಿಷ ಶಾಲೆಗಳು ತೆರೆಕೊಂಡಿದ್ದರೂ, ಹುಡುಗರು ಅತ್ತ ಸುಳಿಯಲಿಲ್ಲ. ಮೇಘರಾಜನು ಆ ಕಾಲದಲ್ಲಿ ಮಳೆ ಸುರಿಸಿ, ಭೂಮಿ ಮಾತೆಯು ಶೋಕದಲ್ಲಿ ಮುಳುಗಿರುವಳೆನ್ನುವದನ್ನು ವ್ಯಕ್ತಪಡಿಸಿದನು.

ಕಳೆದ ಸಂಚಿಕೆಯಲ್ಲಿ ರಾ॥ ಅನಂತ ಪ್ರಭುಗಳು ತೀರಿಕೊಂಡರೆಂದು ತಪ್ಪು ಗ್ರಹಿಕೆಯಿಂದ ಒದೆದು ಹೋಗಿತ್ತು. ತೀರಿಕೊಂಡವರು ಅವರ ಮಗ ದತ್ತಾತ್ರಯ ಪ್ರಭುಗಳವರು. ಪ್ರಮಾದವನ್ನು ರಾ॥ ಅನಂತ ಪ್ರಭುಗಳವರು ಕ್ಷಮಿಸಬೇಕಾಗಿ ವಿನಂತಿ.

ಸಿದ್ದಾಪುರ— ಊರಲ್ಲಿ ರೋಗರಾಯಿ ವಿಶೇಷ [illegible] ಮನೆಯಲ್ಲಿ ಹಾಸಿಗೆ ಬಿದ್ದಿರುತ್ತದೆ ಹಾಗೇ ಜಾತ್ರೆ ಮತವರಿ ನಡೆದಿದೆ. ನಾಳೆ ಜಾತ್ರೆ. ಜಾತ್ರೆಯ ಸಮಯ ಸಿದ್ಧಿಪೀಠದ ರಕ್ಷಣೆಗಾಗಿ ಹಂಗಾಮಿ ಚಿಕಿತ್ಸಾಲಯ ಸ್ಥಾಪಿಸಬೇಕೆಂದಿದೆ. ವರ್ತಕರಿಗೆ ಓಡುವದು ಕಠಿಣ ನೋಟು, ಅವನ್ನು ಚಿಲ್ಲರೆ ಮಾಡಲು ಕಚೇರಿಗೆ ಹೋದರೆ, ಸರ್ಕಾರದವರು ಮಂಗಳವಾರೇತರ ದಿನಗಳಲ್ಲಿ ಪ್ರತಿಬಂಧ ಹೇಳುತ್ತಾರೆ ಹೀಗಾಗಿ ವರ್ತಕರಿಗೆ ತೊಡಕುಗಳುಂಟಾಗಿವೆ.

ಇಲ್ಲಿಯ ಎಲ್ಲ ರಸ್ತೆಗಳ ಮೇಲೆ ಮೋಟಾರುಗಳು ನಿಪ್ರತಿಬಂಧವಾಗಿ ಅಡ್ಡಾಡುತ್ತವೆ ಸಂಚಾರ ನಿಯಮವಾದ ಕಾನೂನುಗಳ ಓಡಾಟವು ಕಡ್ಡಾಯವಿಲ್ಲ. ಮಾರ್ಗಗಳ ಧೂಳಿನಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದರಿಂದ ಮಾರ್ಗಗಳನ್ನು ನಿರೀಕ್ಷಣೆ ಮಾಡಿಕೊಳ್ಳುವದು ಶ್ರೇಯಸ್ಕರವಿದೆ.

ಇಲ್ಲಿಯ ಮಾರ್ಗದ ಮೇಲೆ ಈಗ ಮೋಟಾರು ಓಡಾಡುತ್ತಿವೆ. ಬಾಜಾರ ರೋಕಲ್ಲೇರಿಯವರು. ಮೊದಲು ಈ ಗ್ರಾಮಗಳ ಸ್ಥಿತಿ ಹಲವು ಸಾಕ್ಷಾತ್ ಮೋಟಾರು ರೋಡಿಯು ಓಡಾಟದಿಂದ ತೀರ ಕಂಗೆಟ್ಟಿದೆ. ಬೋರ್ಡಿನವರು ಮುಂಬೆಸಂತೆ ಕಾಲಗಳಿಗೆ ಮಾತ್ರ ಹಿಡಿತವಿಡಬೇಕಾಗಿ ಅಪೇಕ್ಷೆ.

ಮಿ॥ ರೋಸ್ ಎಂಬುವರೊಬ್ಬರು ಇಲ್ಲಿಕರೆ ಸಂಚರಿಸಿ ಹೋದರು. ಅವರ ಆಗಮನ ಇನ್ನು ಇತರರ ಸುದ್ದಿಗಳು ಕೇಳಬರುತ್ತಿವೆ. ಇವರು ದೊಡ್ಡ ಚಹದ ಕಂಪನಿಯ ಪ್ರತಿನಿಧಿಗಳಂತೆ. ನಮ್ಮ ಕಡೆಯಲ್ಲಿ ಚಹದ ತೋಟವನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆಯ ವಿಚಾರವನ್ನು ಸರ್ಕಾರ ಇವರು ಇತ್ಯರ್ಥಪಡಿಸಲು ಬಂದಿದ್ದಾಗಿ ಒಂದು ಸುದ್ದಿ. ಮುಂಚೆಯೇ ಸರಕಾರವು ೧ ಸಾವಿರ ಎಕ್ರೆ ಪ್ರದೇಶವನ್ನು ಅವರಿಗೆ ಕೊಡಮಾಡಿರುವದಂತೆ ಆ ಪ್ರದೇಶದ ಚತುಸ್ಸೀಮೆಗಳನ್ನು ತಮ್ಮ ಇಷ್ಟದಂತೆ ನಿರ್ಣಯಿಸಿಕೊಳ್ಳಲು ರೋಸ್ ರವರ ಅನುಗ್ರಹವಾಗಿದೆಯಂತೆ. ಹೀಗೆಲ್ಲ ಸುದ್ದಿಯು ಮೇಲೆ ಸುದ್ದಿ! ಏನಾಗುತ್ತದೋ ನೋಡಬೇಕು!!

[ರಾ॥ ನಾಗೇಶ ಗಣೇಶ ನಗರೆ ದೊಡ್ಮನೆ ಇವರು ಕೊಳ್ಳಿ ರೋಗದ ವಿಷಯಿನ ಕುರಿತು ಬರೆದ ಲೇಖವು ಸ್ಥಳಸಂಕೋಚದ ಮೂಲಕ ಪ್ರಕಟಿಸಲಾಗಲಿಲ್ಲ ಮುಂದೆ ಪ್ರಕಟವಾಗುವದು ಸಂ]

ಶಿರ್ಸಿ— ೫-೬ ದಿನಗಳಿಂದ ಮೋಡ ಕವಿ ಕವಿದು ಬರುತ್ತಿದೆ. ಪ್ಲೇಗಿನ ಸಂಕಟಕ್ಕೆ ಜನರು ಕುಟುಂಬ ಸಹಿತ ಹೊರಬೀಳು ಮಾಡುತ್ತಿದ್ದಾರೆ ಶಾಲೆಗಳಿಗೆ ಪ್ಲೇಗ ಇಲಿಗಳು ಸತ್ತು ಬೀಳುತ್ತಿವೆ. ಶಾಲೆಗಳಿಗೆ ಯಾಕೆ ಹೋಗುತ್ತವೆಂದು ಎಲ್ಲರೂ ಒಂದು ಪ್ರಶ್ನೆ ಕೇಳುತ್ತಾರೆ.

ಶುಕ್ರವಾರಕ್ಕೆ ಇಡೀ ಊರಿನ ೧ಟ ಹರತಾಳ. ಹಗಲೆಲ್ಲ ದೊಡ್ಡ ಮಳೆ; ಹೊರಬೀಳಲು ಅವಕಾಶವಾಗಲಿಲ್ಲ. ಮಂಡಳೀಯಾಧಿಕಾರಿಗಳು ಕೂಡ ಸೈಮನ್ ಕಮಿಟಿಕ್ಕೆ ನಿಷೇಧ ಮಾಡಬೇಕೆಂಬ ಲಕ್ಷಣವೇನಿದು?

ಮ್ಯುನಿಸಿಪಾಲಿಟಿಯ ೩ ವರ್ಷಗಳ ಅವಧಿಯು ಮುಗಿಯಿತು. ಹೊಸ ಚುನಾವಣೆಯು ೧ನೇ ತಾರೀಖಿಗೆ ನಡೆಯಿತು. ೩೦ ಉಮೇದ್ವಾರರೊಳಗಿಂದ ೧೨ ಮಂದಿಗಳು ಆರಿಸಲ್ಪಟ್ಟರು ಸಾರ್ವಜನಿಕ ಸೇವೆಯನ್ನು ಮಾಡುವ ವೀರರಿಗೆ ನಮ್ಮೀ ಭರತ ಖಂಡದಲ್ಲಿ ಕೊರತೆಯಿಲ್ಲ.

ಶ್ರೀ ಮಾರಿಯಮ್ಮನ ದೇವಸ್ಥಾನದವರು ಇಲ್ಲಿಯ ಬಿಡಕಿ ಬೈಲಿನಲ್ಲಿ ಸಾರ್ವಜನಿಕ ಹಿತವುಯೋಗಕ್ಕಾಗಿ ಬಾವಿ ತೆಗೆಯಲುದ್ಯುಕ್ತರಾಗಿದ್ದಾರೆ. ವರ್ತಕರ ಗಾಡಿಕಾರರಿಗೆ ಇದರಿಂದ ಬಲು ಅನುಕೂಲವಾಗಿದೆ.

ರೇಡಿಯೋ ಎಂಬ ವಿಲಾಸಯಂತ್ರವನ್ನು ಇಲ್ಲಿ ತರಿಸಿದ್ದು ಸಾರ್ವಜನಿಕ ಉಪಯೋಗಕ್ಕಂತೆ ಅವರಿಂದ ಮುನಿಸಿಪಾಲಿಟಿಯವರು ಇದಕ್ಕೆ ೧೫೦೦ ರೂಪಾಯಿ ಕೊಟ್ಟರು. ಇದಲ್ಲದೆ, ಕರು ೧೫೦ ರೂಪಾಯಿ ೧೫ ಬಂಕೆ ೪೦ ಸಭಾಸದರಿಂದ ೪೦೦ ರೂಪಾಯಿಗಳು ಎಕತ್ರೀಕರಣವು. ಇದನ್ನು ಮಿತ್ರಸಮಾಜದಲ್ಲಿ ಸ್ಥಾಪಿಸಿದ್ದಾರೆ. ಜನರಿಗೆ ಒಂದು ದಿನ ಸಹ ಅಲ್ಲಿ ಸರಿಯಾಗಿ ಕೇಳಲಾಗಲಿಲ್ಲ ಮಿತ್ರಸಮಾಜವು ದೊಡ್ಡ ಪ್ರತಿಷ್ಠಿತ ಜನರ ಕೂಟವು. ಇವರು ಸಾಮಾನ್ಯರನ್ನು ಸಮಾಗಮದಲ್ಲಿ ಸೇರಿಸಿಕೊಳ್ಳುವರೆಂಬ ಕಲ್ಪನೆ ಬಹುದು ಅಪ್ರಶಕ್ತವು ಇಂಥ ಕೆಲಸಗಳಿಗೆ ಮ್ಯುನಿಸಿಪಾಲಿಟಿಯವರು ತಮ್ಮ ಹಣ ಕೊಡುವದು ಪ್ರಶಸ್ತವಲ್ಲ ಯುವಜ್ಞಮೇ?

ತೆಂಗಿನ ಕಾಯಿ ಬಹಳ ದುರ್ಲಭವಾಗಿದೆ. ಜನರು ಪೇಚಾಡುತ್ತಿದ್ದಾರೆ.

ನಮ್ಮೂರಲ್ಲೊಂದು ಚಮತ್ಕಾರ! ಸ್ವಲ್ಪ ಹಾಗದಲ್ಲಿ, ಅಲ್ಪ ಕಾಲದಲ್ಲಿ ಬಾವಿ ಕಟ್ಟಬಹುದು! ಸರಕಾರವು ಉಚಿತವಾಗಿ ಬಾವಿ ಕಟ್ಟಿಸಿಕೊಡಲುದ್ಯುಕ್ತವಾಗಿದೆ. ಇಲ್ಲಿ "ಕಾಲುಕಟಾ ಡೆವ್ಹಲಪ್‌ಮೆಂಟ ಎಸೋಸಿಯೇಶನ್" ಎಂಬ ನಮ್ಮ ತಾಲೂಕನ್ನು ಅಭಿವೃದ್ಧಿಗೈಯುವ ಸಂಸ್ಥೆಯು ಸ್ಥಾಪಿತವಾಗಿದೆ. ರಾವಸಾಹೇಬ ಪಾಟೀಲರು ಇದರ ಅಧ್ಯಕ್ಷರು. ಯಂತ್ರದ ಸಹಾಯದಿಂದ ಹಾರೆ ಹೊಡೆದು ಬೇಣದ ಮೇಲೆ ನರದಿಂದ ನೀರನ್ನು ಮೇಲೆ ತರುವ ಪ್ರಯೋಗ ನಡೆದಿದೆ. ಈ ಪ್ರಯೋಗವು ನಡೆದದ್ದು ರಾವಸಾಹೇಬ ಪಾಟೀಲರ ಬೇಣದ ಮೇಲೆ ಹೊಸ ವರ್ಷದಿಂದ ಇದು ನಡೆಯುತ್ತದೆ. ದೊಡ್ಡ ಪಾಟಕನೆಂಬಂತೆ ಮುಕ್ತಾಲದಲ್ಲಿ ಸಹ ಜನರು ನೋಡಲು ಕಂಡುಗಟ್ಟಾಗಿ ಹೋಗುತ್ತಿದ್ದರು. ತೆಂಗಳಿಗೆ ಕಾವಲಿಗಾಗಿ ೩೫೦ ರೂಪಾಯಿ ಖರ್ಚು ಬಿದ್ದಿತ್ತದೆ; ಇಷ್ಟಕ್ಕೆ ೬೦೦ ರೂಪಾಯಿಗಳು ಬರೇ ಕಾವಲಿಗೇ ಖರ್ಚಾದವು. ಬಾವಿಯಲ್ಲಿ ಹಾಕತ್ತ ಕಲ್ಲೇರು ತೆಗೆದರೂ ನೀರು ಕಾಣುವದಿಲ್ಲ. ನೀರು ಸಿಗುವ ಸಂಭವ ಸಹ ಕಾಣುವದಿಲ್ಲ; ಆದರೂ, ಪಾಟಕರು ನಿರಾಶರಾಗಲಿಲ್ಲ. ಪ್ರಯೋಗವು ನಡೆದೇ ಇದೆ. ಪರಸ್ಪರ ಪ್ರಜೆಗಳ ಹಣ ಹೀಗಿತ್ತದೆಂದು ಈ ಮುಂದು ನಡೆದದ್ದೇನು? ಡೆವ್ಹಲಪ್‌ಮೆಂಟ ಅಂದರೇ ಮುಂದ್ಯಾಗಾರಿಕೆಯೇನು?

ವೃತ್ತಸಾರ.

— ಶುಕ್ರವಾರ ತಾ. ೩ನೇಗೆ ಮುಂಬಯಿ, ಮದ್ರಾಸ, ಕಲಕತ್ತೆಗಳಲ್ಲಿ ಹರತಾಳ ಆಚರಣೆಯಾಯಿತು. ಮದ್ರಾಸದಲ್ಲಿ ಯುರೋಪಿಯನ್‌ರೀವರು ತಮ್ಮ ಕಾರ್ಖಾನೆಗಳನ್ನು ತೆರೆದಿಟ್ಟ ಮೂಲಕ ಕೆಲವು ಜನರು ಕಿಡಿಕಿಗಳ ಮೇಲೆ ಕಲ್ಲುಗಳನ್ನೆಸೆದರಂತೆ. ಆದರಿಂದ ಪೋಲೀಸರು ಬಂದು ಬಂದೂಕು ಹಾರಿಸಿದರು. ನಾಲ್ವರು ಸತ್ತರು; ಕೆಲವರಿಗೆ ಗಾಯಗಳಾದವು. ಕಲಕತ್ತೆಯಲ್ಲಿಯೂ ವಿದ್ಯಾರ್ಥಿಗಳು ದೊಂಬಿಯನ್ನೆಬ್ಬಿಸಿದರೆಂದು ಪೋಲೀಸರು ಅವರಿಗೆ ಪಡಿಸಿಕೊಟ್ಟಿ ೧೦-೨೦ ಮಂದಿಗಳನ್ನು ಗಾಯಗೊಳಿಸಿದರಂತೆ! ಸರ್ ಜೊನ್ ಸೈಮನ್‌ರವರು ಮುಂಬಯಿ ಬಂದರದಲ್ಲಿ ಕಾಲಿಟ್ಟೊಡನೆ ವರ್ತಮಾನಪತ್ರಿಕೆಯ ಪ್ರತಿನಿಧಿಗಳು ಅವರು ಮುಲಾಕಾತನ್ನು ಬೇಡಿದರು. ಸೈಮನ್ ಸಾಹೇಬರು ಕೊಡಲೊಪ್ಪಲಿಲ್ಲ.

ಜಾಹೀರ ನೋಟೀಸು.

ಚಂದಾವರ ಹೊಳೆಗೆ ಹಾಕುತ್ತಿದ್ದ "ಸಾಲುಕಟ್ಟಿಗೆ" ಒಂದು ಪಂಕ್ತಿಯನ್ನು ಕಟ್ಟಲಿಕ್ಕಿದ್ದು, ಸದ್ರಿ ಕೆಲಸದ ಕಂಟ್ರಾಕ್ಟ ವಹಿಸಲಿಚ್ಛಿಸುವವರು ಬರುವ ಫೆಬ್ರುವರಿ ೧೫ ನೇ ತಾರೀಖಿನ ದಿವಸ ಮಧ್ಯಾಹ್ನ ೩ ಘಂಟೆಗೆ ಕುಮಟಾ ತಾಲೂಕ ಹೊಳೆಗದ್ದೆಯ ದೇವಿಮನೆಗೆ ಬರತಕ್ಕದ್ದು. ತಾ. ೬-೨-೧೯೨೮.

ಜಿ. ಜಿ. ಶಾಸ್ತ್ರಿ,
ಚೇರಮನ್,
ಸಾಲುಕಟ್ಟಾ ಡೆಮ್ ಕನ್‌ಸ್ಟ್ರಕ್ಶನ್ ಎಂಡ್ ಇರಿಗೇಶನ್ ಸೊಸೈಟಿ.

ಮಹಾತ್ಮರ ಆತ್ಮಚರಿತ್ರ.

(೩೬) ಪ್ರಾಯಶ್ಚಿತ್ತಕ್ಕಾಗಿ ಉಪೋಷಣವ್ರತ

ದಿನ ಹೋದಹಾಗೆ ಬಾಲ ಬಾಲಿಕೆಯರಿಗೆ ಯೋಗ್ಯ ಶಿಕ್ಷಣ ಕೊಟ್ಟು ಪೋಷಣ ಮಾಡುವದು ಕಠಿಣ ಕೆಲಸವೆಂದು ನನಗೆ ತಿಳಿದು ಹತ್ತಿತು. ಅವರ ಶಿಕ್ಷಕನೆಂದೂ ಪಾಲಕನೆಂದೂ ನಾನು ಹೇಳಿಸಿಕೊಳ್ಳಬೇಕಾದರೆ ನಾನು ಅವರ ಅಂತಃಕರಣವನ್ನು ಸ್ವಾಧೀನಪಡಿಸಿಕೊಳ್ಳಬೇಕು. ಅವರ ಸುಖದುಃಖಗಳಲ್ಲಿ ನಾನು ಪಾಲುಗಾರನಾಗಬೇಕು. ಪ್ರತಿನಿತ್ಯವೂ ಅವರಿಗೆ ತೋರುವ ಕಠಿಣ ಕೆಲಸಗಳನ್ನು ಅವರ ಸಹಾಯದಿಂದ ನಾನು ನೆರವೇರಿಸಿಕೊಳ್ಳಬೇಕು. ಹರೆಯದವರಲ್ಲಿ ಅವರ ಅಂತಃಕರಣಗಳಲ್ಲಿ ಉಂಟಾಗುವ ಆಕಾಂಕ್ಷೆಗಳಿಗೆ ಯೋಗ್ಯ ಮಾರ್ಗ ತೋರಿಸಿಕೊಡಬೇಕು.

ಸೆರೆಮನೆಯಿಂದ ಕೆಲವು ಸತ್ಯಾಗ್ರಹಿಗಳ ಬಿಡುಗಡೆ ಹೊಂದಿದ ಬಳಿಕ ಟಾಲಸ್ಟಾಯ್ ಆಶ್ರಮದಲ್ಲಿ ಬಹಳ ಜನ ಉಳಿಯಲಿಲ್ಲ. ಫೀನಿಕ್ಸ್ ಗ್ರಾಮದವರಷ್ಟೇ ಉಳಿದರು. ಆದರಿಂದ ನಾನು ಫೀನಿಕ್ಸ್‌ಕ್ಕೆ ಸ್ಥಳಾಂತರ ಮಾಡಿದೆನು. ಈ ಸ್ಥಳದಲ್ಲಿ ನನ್ನ ಸತ್ವಪರೀಕ್ಷೆಯ ಕಾಲ ಬಂದಿತು. ಜೊಹಾನ್ಸ್‌ಬರ್ಗ್, ಫೀನಿಕ್ಸ್ ಪಟ್ಟಣಕ್ಕೆ ನಾನು ಆಗಿಂದಾಗ ಓಡಾಡಬೇಕಾಗುತ್ತಿತ್ತು. ಒಮ್ಮೆ ನಾನು ಜೋಹಾನ್ಸ್‌ಬರ್ಗ ಪಟ್ಟಣದಲ್ಲಿದ್ದ ಆ ಕಾಲಕ್ಕೆ ಆಶ್ರಮದೊಳಗಿನ ಇಬ್ಬರು ನೀತಿಭ್ರಷ್ಟರಾದರೆಂದು ಸುದ್ದಿ ಬಂತು. ಈ ಸುದ್ದಿ ಕೇಳಿದೊಡನೆ ನನ್ನ ಎದೆ ಒಡೆಯಿತು. ಸತ್ಯಾಗ್ರಹ ಸಂಗ್ರಾಮದಲ್ಲಿ ನಾನು ಸೋಲಬಿದ್ದರೂ ಹಿಮ್ಮೆಟ್ಟಿದ್ದರೂ, ಇಷ್ಟು ನಾನು ಗಾಬರಿಯಾಗಿದ್ದಿಲ್ಲ. ಅದೇ ದಿನವೇ ಆಗಿಗಾಡಿ ಹತ್ತಿ ಫೀನಿಕ್ಸ ಪಟ್ಟಣಕ್ಕೆ ಹೊರಟೆನು. ಮಿ। ಕಾಲಿನಬಾಕ್‌ರವರು ಈ ಸುದ್ದಿ ತಂದಿದ್ದರು. ಅವರು ನನ್ನ ಸ್ಥಿತಿ ನೋಡಿದ್ದರು. ಆದರಿಂದ ನನಗೆ ಒಬ್ಬೊಂಟಿಗನಾಗಿ ಹೋಗಗೊಡದೆ, ನನ್ನ ಜೊತೆಗೆ ತಾವೂ ಸಹ ಬರುವವನಾಗಿ ಹಟಹಿಡಿದು ನನ್ನ ಜೊತೆಗೆ ಬಂದಿದ್ದರು.

ಹಾದಿಯ ಮೇಲೆ ಹೋಗುತ್ತಿರುವಾಗ ನನ್ನ ಕರ್ತವ್ಯವೇನೆಂಬುದು ನನಗೆ ಸ್ಪಷ್ಟವಾಯಿತು. ಶಿಕ್ಷಕರೂ ಪಾಲಕರೂ ಕೆಲವು ಮಟ್ಟಿಗಾದರೂ ಚಿಕ್ಕ ಮಕ್ಕಳ ಅಧಃಪತನಕ್ಕೆ ಜವಾಬುದಾರರಾಗಿರುತ್ತಾರೆಂದು ನನಗೆ ತೋರಿತು. ಆದರಿಂದ ಈ ವಿಷಯ ನಾನು ಕೈಕೊಳ್ಳಬೇಕಾದ ಕರ್ತವ್ಯವೂ ನನಗೆ ಸೂರ್ಯಪ್ರಕಾಶದಂತೆ ಸ್ಪಷ್ಟವಾಗಿ ಹೊಳೆಯಿತು. ನನ್ನ ಹೆಂಡತಿಯು ಈ ವಿಷಯ ನನಗೆ ಈ ಮುಂಚೆಯೇ ಸೂಚನೆ ಕೊಟ್ಟಿದ್ದಳು. ಆದರೆ ನನ್ನ ಸ್ವಭಾವವು ನಂಬುವಂಥದು, ಆದರಿಂದ ಆವಳ ಮುಂಜಾಗ್ರತೆಯನ್ನು ನಾನು ಲಕ್ಷಿಸಲಿಲ್ಲ. ಈ ವಿಷಯ ನಾನು ಕೆಲಮಟ್ಟಿಗೆ ಪ್ರಾಯಶ್ಚಿತ್ತ ಪಡೆದರೆ, ನೀತಿಭ್ರಷ್ಟರಾದವರಿಗೆ ನನ್ನ ಕಷ್ಟದ ಪರಿಣಾಮವೂ, ಅವರ ಅಧಃಪತನದ ಗಂಭೀರತೆಯೂ ಅವರಿಗೆ ಹೊಳೆಯುವವೆಂದು ನಾನು ಗ್ರಹಿಸಿದೆನು. ಆದರಿಂದ ೭ ದಿವಸಗಳ ತನಕ ಉಪೋಷಣ ಮಾಡಬೇಕೆಂದು ಉಪೋಷಣ ಪ್ರಾಯಶ್ಚಿತ್ತವನ್ನು ವಿಧಿಸಿಕೊಂಡೆ, ಹಾಗೂ ೪। ತಿಂಗಳ ತನಕ ಒಪ್ಪತ್ತು ಊಟ ಮಾಡುವ ಶಿಕ್ಷೆಯನ್ನು ವಿಧಿಸಿಕೊಂಡೆ. ಮಿ। ಕಾಲಿನಬಾಕ್‌ರವರು ನನಗೆ ಈ ಪ್ರಯತ್ನದಿಂದ ಹಿಂಜರಿಸಲು ಬಹಳ ಪ್ರಯತ್ನಪಟ್ಟರು. ಆ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ಕೊನೆಗೆ ನನ್ನ ಪ್ರಾಯಶ್ಚಿತ್ತ ಪ್ರಕಾರವು ವಿಹಿತವೆಂದು ಅವರಿಗೂ ಅನಿಸಿತು. ಮತ್ತು ನನ್ನ ಜೊತೆಗೆ ಅವರೂ ಉಪೋಷಣವ್ರತ ಮಾಡಲು ಹಟ ಹಿಡಿದರು. ಅವರಿಗೆ ನನ್ನಿಂದ ವಿರೋಧಿಸಲಾಗಲಿಲ್ಲ. ಅಷ್ಟು ಆತ್ಮೀಯನಾಗಿ ಅವರು ನನ್ನನ್ನು ಪ್ರೀತಿಸುತ್ತಿದ್ದರು.

ಪ್ರಾಯಶ್ಚಿತ್ತ ನಿರ್ಧಾರದಿಂದ ನನಗೆ ಬಹಳ ಮಟ್ಟಿಗೆ ಲಘುವೆನಿಸಿತು. ಅಪರಾಧಿ ಆಶ್ರಮವಾಸಿಗಳ ಮೇಲಿನ ಸಿಟ್ಟು ತಗ್ಗಿಹೋಗಿ ಅವರ ವಿಷಯ ನನ್ನ ಮನಸ್ಸಿನಲ್ಲಿ ಬರೀ ದಯಾಬುದ್ಧಿಯುಂಟಾಯಿತು ! ಈ ಪ್ರಕಾರ ಒಮ್ಮೆ ಪ್ರತಿಗೆ ಸಮಾಧಾನ ಹೊಂದಿ ನಾನು ಫೀನಿಕ್ಸ ಪಟ್ಟಣಕ್ಕೆ ಮುಟ್ಟಿದೆನು. ಅಲ್ಲಿ ಹೋದ ಬಳಿಕ ಚೌಕಸಿ ನಡಿಸಿ ಅವಶ್ಯವುಳ್ಳ ಕೆಲವು ಸಂಗತಿಗಳನ್ನು ತಿಳಕೊಂಡೆನು. ನನ್ನ ಪ್ರಾಯಶ್ಚಿತ್ತ ನಿರ್ಧಾರದಿಂದ ಎಲ್ಲರಿಗೂ ವ್ಯಸನವಾಯಿತು ಆದರೆ, ಅದರಿಂದ ಆಶ್ರಮದಲ್ಲಿ ವಾತಾವರಣವು ನಿರ್ಮಲವಾಯಿತು. ಪಾತಕಕೃತ್ಯದ ಭಯಂಕರ ಸ್ವರೂಪವು ಎಲ್ಲರಿಗೂ ಹೊಳೆಯಿತು. ಬಾಲಬಾಲಿಕೆಯರಿಗೂ, ನನಗೂ ಇರುವ ಆಪ್ತತ್ವವು ವಿಶೇಷವಾಗಿ ಬೆಳೆಯಿತು. ಇದೇ ಸಂಗತಿಯಿಂದ ಇನ್ನೊಂದು ಪ್ರಕಾರವು ಸಂಭವಿಸಿತು. ಇದರಿಂದ ೧೪ ದಿವಸಗಳ ತನಕ ನಾನು ಉಪವಾಸ ಮಾಡಬೇಕಾಯಿತು. ಈ ಉಪೋಷಣದಿಂದ ಕನಸು ಮನಸ್ಸಿನಲ್ಲಿ ಸಹ ಎಣಿಸದ ಫಲಪ್ರಾಪ್ತಿಯಾಯಿತು.

ಶಿಷ್ಯರು ಪಾತಕದತ್ತ ಪ್ರವೃತ್ತರಾದಾಗ ಶಿಕ್ಷಕರು ಉಪೋಷಣ ಮಾಡಬೇಕೆಂದು ನಾನು ಈ ವಿವರವನ್ನು ಹೇಳಲಿಲ್ಲ. ಆದರೂ, ಕೆಲವು ಪ್ರಸಂಗಗಳಲ್ಲಿ ಇಂಥ ಭಯಂಕರ ಉಪಾಯಗಳನ್ನು ಕೈಕೊಳ್ಳಬೇಕಾಗುತ್ತದೆಂದು ನನ್ನ ಅಭಿಪ್ರಾಯವಿದೆ. ಈ ಉಪಾಯವನ್ನು ಕೈಕೊಳ್ಳುವ ಪೂರ್ವದಲ್ಲಿ ಶಿಕ್ಷಕರು ನಿರ್ಮಲಚಿತ್ತರಾಗಿರಬೇಕು. ಪಾರಮಾರ್ಥಿಕ ಪಾತ್ರತೆಯೂ ಅವರಲ್ಲಿರಬೇಕು. ಗುರುಶಿಷ್ಯರಲ್ಲಿ ಪ್ರೇಮವಿಲ್ಲದಾಗ, ಶಿಷ್ಯರ ಪಾತಕದಿಂದ ಗುರುವಿಗೆ ಪಶ್ಚಾತ್ತಾಪವಾಗದಿದ್ದಾಗ, ಗುರುವಿನ ಬಗ್ಗೆ ಶಿಷ್ಯನಲ್ಲಿ ಪೂಜ್ಯಭಾವವಿಲ್ಲದಾಗ ಉಪವಾಸವನ್ನು ಮಾಡುವದು ವಾಸ್ತವವಲ್ಲ ಮೇಲಾಗಿ ಕೇಡಿನದು. ಇಂಥ ಉಪಾಯಗಳಿಂದ ಅಹಿತವಾಗುವ ಸಂಭವವೂ ಉಂಟು. ಇಂಥ ಪ್ರಸಂಗದಲ್ಲಿ ಉಪವಾಸದ ಯೋಗ್ಯಾಯೋಗ್ಯತೆಯ ಕುರಿತು ವಾದಕ್ಕೆ ಇಂಬಿದ್ದಾಗ್ಯೂ ಶಿಷ್ಯರು ಮಾಡಿದ ಆಕೃತ್ಯಗಳಿಗೆ ಶಿಕ್ಷಕರು ಹೊಣೆಯೆಂಬ ತತ್ವವನ್ನು ಯಾರೂ ಅಲ್ಲಗಳೆಯಲಾರರು.

ಮೊದಲನೇ ಪ್ರಾಯಶ್ಚಿತ್ತ ವಿಧಿಯು ನಮಗೇನೂ ಕಠಿಣವೆನಿಸಲಿಲ್ಲ. ದಿನದ ಕೆಲಸಗಳೆಲ್ಲ ನಾನು ನಿತ್ಯದಂತೆ ನಡಿಸಿದೆನು. ಪ್ರಾಯಶ್ಚಿತ್ತ ಕಾಲದಲ್ಲೆಲ್ಲ ನಾನು ಫಲಾಹಾರವನ್ನು ಸೇವಿಸಿ ಕಳೆದೆನು. ಎರಡನೇ ಬಾರಿ ಉಪೋಷಣ ಮಾಡಿದಾಗ, ಕೊನೆಯ ಭಾಗವು ನನಗೆ ಸ್ವಲ್ಪ ಕಠಿಣವೆನಿಸಿತು. ಆ ಕಾಲಕ್ಕೆ ರಾಮನಾಮದ ಭಯಂಕರ ಮಹಿಮೆಯು ನನಗೆ ತಿಳಿದಿದ್ದಿಲ್ಲ. ಆದರಿಂದ ಕಷ್ಟ ಸಹಿಸುವ ಸಾಮರ್ಥ್ಯವೂ ಆ ಪ್ರಮಾಣದಿಂದ ಕಡಿಮೆಯಾಗಿತ್ತು. ಉಪೋಷಣದ ಶಾಸ್ತ್ರವನ್ನು ನಾನು ಆ ಕಾಲಕ್ಕೆ ಅರಿತಿದ್ದಿಲ್ಲ. ಉಪವಾಸ ಕಾಲಕ್ಕೆ ವಿಪರೀತ ನೀರು ಕುಡಿಯಬೇಕೆಂಬುದನ್ನು ನಾನು ಅರಿತಿದ್ದಿಲ್ಲ. ನಾಕರಿಕ ಬಂದರೂ, ರುಚಿಯೆನಿಸದಿದ್ದರೂ, ನೀರು ಕುಡಿಯಲೇ ಬೇಕೆಂಬುದನ್ನು ನಾನು ಅರಿತುಕೊಂಡಿದ್ದಿಲ್ಲ. ಮೊದಲನೇ ಸಲ ಉಪವಾಸ ಮಾಡಿದಾಗ ಕಷ್ಟವೆನಿಸಲಿಲ್ಲವೆಂಬುದರ ಮೇಲಿಂದ ಎರಡನೇ ಬಾರಿ ನಾನು ದುಲಕ್ಷ್ಯ ಮಾಡಿದೆನು. ಹೊದಲು, ಮೊದಲನೇ ಸಲ ನಿತ್ಯವೂ ಕ್ಯೂನೆಯವರ ಸೂಚನೆಗಳಂತೆ ಜಳಕ ಮಾಡುತ್ತಿದ್ದೆನು, ಎರಡನೇ ಸಲ ೨-೩ ದಿವಸಗಳಾದ ಮೇಲೆ ನಾನು ಅದನ್ನು ಬಿಟ್ಟುಬಿಟ್ಟೆನು. ನೀರು ಕುಡಿಯುವದಂತು ತೀರ ಕಡಿಮೆ ಯಾಕೆಂದರೆ, ನೀರು ಕುಡಿಯಲು ರುಚಿಯಾಗುತ್ತಿದ್ದಿಲ್ಲ, ನಾಕರಿಕೆಯೂ ಬರುತ್ತಿತ್ತು. ಇದರಿಂದ ಗಂಟಲು ಒಣಗಿತು, ದನಿ ಬಿತ್ತು, ಕೊನೆಯ ದಿನಗಳಲ್ಲಂತು ನಾನು ಮಾತಾಡಿದರೆ ಚನ್ನಾಗಿ ಕೇಳಬರುತ್ತಿದ್ದಿಲ್ಲ. ಆದರೂ, ನನ್ನ ಕೆಲಸವನ್ನೆಲ್ಲ ನಾನು ಸಾಗಿಸಿದೆನು. ಬರೆಯಲೇಬೇಕಾದಾಗ, ಬಾಯಿಂದ ಹೇಳಿ ಬರೆಸುತ್ತಿದ್ದೆನು. ನಿತ್ಯವೂ ರಾಮಾಯಣಾದಿ ಧರ್ಮಗ್ರಂಥಗಳ ಶ್ರವಣಮಾಡುತ್ತಿದ್ದೆನು. ಅಗತ್ಯದ ಪ್ರಸಂಗಗಳಲ್ಲೆಲ್ಲ ಚರ್ಚೆ ಮಾಡಲಿಕ್ಕೂ, ಯೋಗ್ಯ ಸೂಚನೆ ಕೊಡಲಿಕ್ಕೂ ನನಗೆ ಶಕ್ಯವಿತ್ತು.

— ಅಹಮ್ಮದಾಬಾದದ ಗುಜರಾಥ ವಿದ್ಯಾಪೀಠದ ಪುನರ್ಘಟನೆ ಮಾಡಿ ವಿದ್ಯಾರ್ಥಿಗಳಿಗೆ ತಕ್ಕ ಶಿಕ್ಷಣ ಕೊಡಲು ಮಹಾತ್ಮರು ಇನ್ನು ಮುಂದೆ ವಿದ್ಯಾಪೀಠದಲ್ಲಿಯೇ ಉಳಕೊಳ್ಳುವರು.

ವಿವಿಧ ವಿಷಯಗಳು.

ಯೂರೋಪದ ರಾಷ್ಟ್ರಗಳಿಗೆ ಶಸ್ತ್ರಸನ್ಯಾಸ ಮಾಡಿ ಶಾಂತತೆಯನ್ನು ಪಡೆಯಬೇಕೆಂದು ಲವಲವಿಕೆ ! ಆದರೆ ಪ್ರತಿಸ್ಪರ್ಧಿ ರಾಷ್ಟ್ರದ ಭೀತಿಯಿಂದ ಯಾವ ರಾಷ್ಟ್ರವೂ ಶಸ್ತ್ರಸನ್ಯಾಸ ಮಾಡಲಿಕ್ಕೆ ಧೈರ್ಯಪಡುವದಿಲ್ಲ. ರಾಷ್ಟ್ರಸಂಘದ ನೀತಿ ಮೇಲೆ !! ಆದ್ದರಿಂದ ಅಂತರರಾಷ್ಟ್ರೀಯ ಪರಿಷತ್ತಿನ ಅಧಿವೇಶನಕ್ಕೆ ರಶಿಯಾ ಪ್ರತಿನಿಧಿಗಳು ಮುದ್ದಾಂ ಹೋಗಿದ್ದರು. ಪರಿಷತ್ತಿನಲ್ಲಿ ಶಸ್ತ್ರಸನ್ಯಾಸದ ಪ್ರಶ್ನೆ ಬಂತು. "ಯಾವ ರಾಷ್ಟ್ರವು ಎಷ್ಟು ಪ್ರಮಾಣದ ಮೇಲೆ ಶಸ್ತ್ರಗಳನ್ನು ಕಡಿಮೆ ಮಾಡಬೇಕು ಆ ಪ್ರಮಾಣವನ್ನು ನಿಶ್ಚಯಿಸಿ ವ್ಯವಹಾರದಲ್ಲಿ ತರುವವರಾರು? ಮೇಲಾಗಿ ಅಷ್ಟು ಪ್ರಮಾಣದ ಮೇಲೆ ಶಸ್ತ್ರಗಳು ಕಡಿಮೆ ಮಾಡಲ್ಪಟ್ಟಿವೆಯೋ ಎಂದು ಪರೀಕ್ಷೆ ಮಾಡುವವರು ಯಾರು? ಈ ವರೆಗಿನ ಅನುಭವದಿಂದ ಇದು ಶಕ್ಯವೆಂದು ತೋರುವದಿಲ್ಲ" ಆದರೆ "ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು, ಯುದ್ಧೋಪಯೋಗಿ ಹಡಗುಗಳು ಮುಂತಾದ ಯಾವತ್ತು ಸಾಧನಗಳನ್ನು ಸಂಪೂರ್ಣವಾಗಿ ನಾಶ ಮಾಡಬೇಕು. ಮದ್ದಿನ ಕಾರಖಾನೆಗಳನ್ನೂ ಲಷ್ಕರೀ ಶಿಕ್ಷಣ ವ್ಯವಸ್ಥೆಯನ್ನು, ಲಷ್ಕರೀ ಖಾತೆಯನ್ನೂ ಕೂಡ ಸಂಪೂರ್ಣವಾಗಿ ಬಂದು ಮಾಡಬೇಕು. ಆದರೆ ಮಾತ್ರ ನಿಜವಾದ ಶಾಂತತೆಯು ನೆಲೆಗೊಳ್ಳಬಹುದು" ಎಂಬುದಾಗಿ ರಶಿಯಾದ ಪ್ರತಿನಿಧಿಗಳು ಹೇಳಿದರು!!

ಈ ಸೂಚನೆಯು ಅವ್ಯವಹಾರ್ಯವೆಂದೂ, ಅಶಕ್ಯಕೋಟಿಯೊಳಗಿನದೆಂದೂ ಬ್ರಿಟಿಶ್ ಮೊದಲಾದ ರಾಷ್ಟ್ರಗಳು ಉಪಹಾಸ ಮಾಡಿದವು! ರಶಿಯಾ ರಾಷ್ಟ್ರವು ತನ್ನ ದೇಶದ ಮಟ್ಟಿಗೆ ಸಂಪೂರ್ಣ ಶಸ್ತ್ರಸನ್ಯಾಸವನ್ನು ವ್ಯವಹಾರ್ಯವಾಗಿ ಮಾಡಿ ತೋರಿಸಿರುವರೂ ನೀವು ಅನುಸರಿಸ ಬಾರದೋ ಎಂದು ಕೇಳಿದ್ದಕ್ಕೆ ಉತ್ತರವೇ ಇಲ್ಲ!' ಪರರಾಷ್ಟ್ರಗಳನ್ನು ಅಂಕಿತದಲ್ಲಿಟ್ಟುಕೊಂಡು "ಸ್ವಾತಂತ್ರ್ಯ-ಸಮತೆ ಶಾಂತತೆ"ಗಳ ಬಡಿವಾರದ ಮಾತುಗಳನ್ನಾಡುವ ಸಾಮ್ರಾಜ್ಯಕಾಂಕ್ಷಿ ಸರಕಾರಗಳಿಗೆ ಸಂಪೂರ್ಣ ಶಸ್ತ್ರಸನ್ಯಾಸ ಮಾಡಲಿಕ್ಕೆ ಹ್ಯಾಗೆ ಸಾಧ್ಯವಾಗಬೇಕು? (ಅವರಿಗೆ ಅದೆಂದಿಗೂ ಅವ್ಯವಹಾರ್ಯವೇ ಸರಿ!!

ಮುಂಬಯಿ ಇಲಾಖೆಯಲ್ಲಿ ಅಸ್ಪೃಶ್ಯರ ಸಲುವಾಗಿಯೆ ೫೦೦ ಶಾಲೆಗಳುಂಟು. ೩೬೦೦೦ ಅಸ್ಪೃಶ್ಯ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದು, ೪೩೬ ಅಸ್ಪೃಶ್ಯವರ್ಗದ ಶಿಕ್ಷಕರು ನೇಮಿಸಲ್ಪಟ್ಟಿರುತ್ತಾರೆ.

ಬಿಹಾರ ಪ್ರಾಂತದ ಅನಾಗರಿಕ ಜನರಲ್ಲಿ ೧೩೦೦೦ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು ೧೩೮ ಜನರು ಮೆಟ್ರಿಕ್' ಪರೀಕ್ಷೆ ಪಾಸಾಗಿರುವರು.

ಅಮರಾವತಿ ಎಂಬಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಹಾಗೂ ಅಸ್ಪೃಶ್ಯರ ಸಹಭೋಜನವಾಯಿತು. ಸಹಭೋಜನದಲ್ಲಿ ಸೇರಿದ ಬ್ರಾಹ್ಮಣರನ್ನು ಬ್ರಾಹ್ಮಣವರ್ಗದವರು ಬಹಿಷ್ಕರಿಸಿದರು ಮರಾಠರನ್ನು ಮರಾಠರು ಬಹಿಷ್ಕರಿಸಿದರು ಇಷ್ಟೇ ಅಲ್ಲ, ಸಹಭೋಜನದಲ್ಲಿ ಸೇರಿದ ಚಮಗಾರರನ್ನು ಚಮಗಾರರೂ, ಹೊಲೆಯರನ್ನು ಹೊಲೆಯ ವರ್ಗದವರೂ ಬಹಿಷ್ಕರಿಸಿ, ತಮ್ಮ ಧರ್ಮನಿಷ್ಠೆಯನ್ನು ವ್ಯಕ್ತಪಡಿಸಿದರು! ಗೌರವರ್ಣರು? ಉಚ್ಚವರ್ಣರು? ಸಹಭೋಜನವಾದಿಗಳು ಎಲ್ಲ ಜಾತಿಗಳಿಗಿಂತ ನೀಚರೇನು? ಈ ಗ್ರಾಮ್ಯ ಪ್ರಕರಣವು ಕೊನೆಗೆ ಕೋರ್ಟಿನ ಬಾಗಿಲಿಗೆ ಹೋಗಬೇಕಾಗಿದೆ.

ಅಮೇರಿಕೆಯಲ್ಲಿ ಚಿಕಗೋ ಎಂಬಲ್ಲಿ ಆಗಿಬಂದಿರುವ ಅಪಘಾತದಿಂದ ನೂರಾರು ಜನರು ಪ್ರತಿವರ್ಷ ಸಾಯುತ್ತಾರೆ ಅವರ ಬಗ್ಗೆ ಲುಕ್ಸಾನಭರಪಾಯಿ ಕೊಡಲ್ಪಡುತ್ತದೆ. ಅನೇಕ ವರ್ಷಗಳಿಂದ ಇದೇ ಪ್ರಕಾರ ನಡೆಯುತ್ತ ಬಂದಿದೆ. ಅಪಘಾತಗಳಾಗದಂತೆ ವ್ಯವಸ್ಥೆ ಮಾಡುವದಕ್ಕಿಂತ ದಂಡ ತೆರುವದೇ ಸೋವಿಯೆಂದು ಜನರ ನಿರ್ಧಾರ

ಬಂದಿದೆಯಂತೆ!! ಅಂದು ಮಾನವ ಹೇಳಿಕೆಯಿಂತ ಪ್ರತಿಗೆ ಬೆಲೆ ಹೆಚ್ಚು!

ಬೌದ್ಧ ಧರ್ಮವು ಹಿಂದೂ ಧರ್ಮದಲ್ಲಿಯ ಒಂದು ಪಂಥವೇ ಸರಿ. ಆದ್ದರಿಂದ ಬೌದ್ಧರನ್ನು ಹಿಂದೂ ಜನರಲ್ಲಿ ಎಣಿಸಬಹುದು. ಹೀಗೆ ಮಾಡಿದರೆ ಚೀನ-ಜಪಾನ-ಸಿಯಾಮ ಮುಂತಾದ ಕಡೆಯ ಜನರೆಲ್ಲ ಹಿಂದೂವರ್ಗದಲ್ಲಿ ಸೇರಿ ಸರಾಸರಿ ೬೫ ಕೋಟಿ ಹಿಂದೂ ಜನರಾಗುತ್ತಾರೆ. ಅಂದರೆ ಜಗತ್ತಿನಲ್ಲಿಯ ಜನಸಂಖ್ಯೆಯ ಅರ್ಧ ಪಾಲು ಹಿಂದೂಗಳೇ ಎನ್ನಬಹುದು!

ಒಂದು ಸಂಸ್ಥಾನದಲ್ಲಿ ಸಂಕ್ರಾಂತಿ ದಿನ ಎಳ್ಳು ಸಕ್ಕರೆಯ ಹಾಗೂ ವಿಧವಿಧ ಪಕ್ವಾನ್ನಗಳ ಪ್ರದರ್ಶನವಾಗಿ ಬಹುಮಾನ ಹಂಚಲ್ಪಟ್ಟಿತು. ಇನ್ನೊಂದೆಡೆಯಲ್ಲಿ ಶಿಕೋಳೆಗಳ ಪ್ರದರ್ಶನವಾಯಿತು!!

ಹಿಂದುಸ್ಥಾನದಲ್ಲಿ ಬ್ರಾಹ್ಮಣ ವರ್ಗದಲ್ಲಿಯೇ ೮೦೦ ಕ್ಕಿಂತ ಹೆಚ್ಚು ಒಳಜಾತಿಗಳಾಗಿರುತ್ತವೆ. ಅವರಲ್ಲಿ ಅನ್ನವ್ಯವಹಾರವೂ ಮಾನ್ಯವಾಗಿಲ್ಲ!

ಹಿಂದುಸ್ಥಾನವು ಸ್ವರಾಜ್ಯವನ್ನು ನಡಿಸುವದಕ್ಕೆ ಯೋಗ್ಯತೆಯುಳ್ಳದ್ದಿರುವದೇ ಎಂದು ಪರೀಕ್ಷಿಸಲಿಕ್ಕೆ ಸೈಮನ್ ಕಮಿಶನನ್ನು ಪಾರ್ಲಮೆಂಟಿನಿಂದ ನೇಮಿಸಲ್ಪಟ್ಟಿದೆ! ಆದರೆ “ಬ್ರಿಟಿಶರು ಹಿಂದುಸ್ಥಾನವನ್ನು ಆಳಲಿಕ್ಕೆ ಯೋಗ್ಯರೋ?” ಅವರ ಆಳಿಕೆಯಲ್ಲಿ ಸಾಂಪತ್ತಿಕ, ನೈತಿಕ, ಸಾಮಾಜಿಕ, ಶಾರೀರಿಕ, ಔದ್ಯೋಗಿಕ ಹಾನಿಯು ಹಿಂದುಸ್ಥಾನದಲ್ಲಿ ಎಷ್ಟಾಯಿತು? ಎಂಬುದರ ವರದಿಯನ್ನು ಕಯಾರಿಸಿ ಜಗತ್ತಿನಲ್ಲಿಯೂ, ಪಾರ್ಲಮೆಂಟಿನಲ್ಲಿಯೂ ಜಾಹೀರಪಡಿಸಲಿಕ್ಕೆ ಹಿಂದೀ ಜನರ ಕಮಿಶನ್ನೊಂದನ್ನು ಹಿಂದೀ ಜನರೇ ನೇಮಿಸಬೇಕೆಂದು ಮಾಲವೀಯರ ಸೂಚನೆ.

— ಕಲಕತ್ತೆಯಲ್ಲಿ ಅಗಿಯುವಾಗ ಪುರಾತನ ಕಾಲದ ಒಂದು ಕಾಲುವೆಯು ಗೋಚರವಾಗಿದೆ. ಕಾಲುವೆಯು ಅಚ್ಚುಕಟ್ಟಾಗಿ ಕಟ್ಟಲ್ಪಟ್ಟಿದೆ. ಸುರಾಜ ಉದ್ದೌಲನ ಅಂತಃಪುರಕ್ಕೆ ನದಿಯಿಂದ ನೀರು ಪೂರೈಸುವ ಕಾಲುವೆ ಇದೆಂದು ಕೆಲವರು ಹೇಳುತ್ತಾರೆ. ಕಾಲುವೆಯು ಸ್ಥಿತಿಯು ಮೇಲಿಂದ ಹಾಗೆ ಕಾಣುತ್ತದಂತೆ!

— ಮಹಾತ್ಮರ ಮೂರನೇ ಮಗನಿದ್ದಿರುವ ಶ್ರೀ ರಾಮದಾಸ ಗಾಂಧಿಯವರು ಗುರುವಾರ ತಾ ೨೬ ನೇಗೆ ಕುಮಾರಿ ನಿರ್ಮಲಾದೇವಿಯವರೊಡನೆ ಸಾಬರಮತಿಯ ಸತ್ಯಾಗ್ರಹಾಶ್ರಮದಲ್ಲಿ ಮದುವೆ ಮಾಡಿಕೊಂಡರು. ಸೌ॥ ನಿರ್ಮಲಾದೇವಿಯವರು ಕಾಠೇವಾಡದೊಳಗಿನ ಲಕ್ತರ ಎಂಬ ಕುಲೀನ ಮನೆತನದವರು. ಆಶ್ರಮದಲ್ಲಿಯೇ ಅವಳ ಶಿಕ್ಷಣ ಹೊಂದಿದ್ದಳು. ಧಾರ್ಮಿಕ ಸಂಸ್ಕಾರಗಳು ಮಾತ್ರ ಮಾಡೋಣಾದವು, ಅನಾವಶ್ಯಕವಾದ ವಿಧಿಗಳು ನಡೆಯಲಿಲ್ಲ. ಮಹಾತ್ಮರು ವಧೂ-ವರರನ್ನು ಆಶೀರ್ವದಿಸಿದರು.

— ಸಿಂಧೂ ನದಿಯಲ್ಲಿ ದೋಣಿಯು ಮೇಲೆ ಮೇಳೆದಷ್ಟು ಸಾಮಾನು ಹಾಗು ಜನರನ್ನು ಹೇರಿಕೊಂಡಿದ್ದರಿಂದ ದೋಣಿ ಮಗುಚಿ ೧೪ ಮಂದಿಗಳು ಜಲಸಮಾಧಿ ಹೊಂದಿದರು. ದೋಣಿಕಾರರಿಗೆ ಮುಂಜಾಗ್ರತೆ ಕೊಟ್ಟರೂ, ಅವರು ಕೇಳಲಿಲ್ಲವಂತೆ. ಪ್ರಯಾಣಿಕರಲ್ಲಿ ಹೆಂಗಸರು ಹುಡುಗರು ಹೆಚ್ಚಾಗಿದ್ದರು.

— ವೇದಾಂತ ಹಾಗು ಮೀಮಾಂಸೆ ಶಾಸ್ತ್ರಗಳಲ್ಲಿ ಪಾರಂಗತರಾದ ಮ.ಮ. ಮಹಾಮಹೋಪಾಧ್ಯಾಯ ವೆಂಕಟಸುಬ್ರಹ್ಮಣ್ಯ ಶಾಸ್ತ್ರಿಗಳವರು ಗುರುವಾರಕ್ಕೆ ತೀರಿಕೊಂಡರು. ಅವರು ಮದ್ರಾಸದೊಳಗಿನ ಸಂಸ್ಕೃತ ಹಾಗು ವೇದಾಂತ ಶಾಲೆಯ ಮುಖ್ಯಾಧ್ಯಾಪಕರಿದ್ದರು.

— ಶ್ರೀ॥ ಸುಭಾಷಚಂದ್ರ ಬೋಸರವರು ಅರಾಜಕತೆಯ ಕಂಠಿನ ನಾಯಕರೆಂದು ಕಲಕತ್ತೆಯ ‘ಸ್ಟೇಟ್ಸಮನ್’ ಪತ್ರಿಕೆಯವರು ಪ್ರಕಟಿಸಿದ್ದರು. ಆದರಿಂದ ಶ್ರೀ॥ ಬೋಸರವರು “ಸ್ಟೇಟ್ಸಮನ್” ಪತ್ರಿಕೆಯ ಮೇಲೆ ಮಾನನಷ್ಟದ ಮೊಕದ್ದಮೆಯನ್ನು ಕಲಕತ್ತೆಯ ಹೈಕೋರ್ಟಿನಲ್ಲಿ ದಾಖಲಪಡಿಸಿದ್ದರು. ಮೂಲ ದಾವೆಯು ತಿರಸ್ಕರಿಸಲ್ಪಟ್ಟಿತು, ಅಪೀಲಿನಲ್ಲಿ ಬೋಸರವರಿಗೆ ೧ಸಾ೨ರ ರೂಪಾಯಿ ಕೊಡಲ್ಪಟ್ಟಿವೆ.

— ಹಿಂದುಸ್ಥಾನ ಸರಕಾರವು ಸೈಮನ್ ಕಮಿಟಿಯ ಸಮಯ ಲೋಕಸಂಗ್ರಹ ಮಾಡುವದಕ್ಕಾಗಿ ಬಂಗಾಲದೊಳಗೆ ಪಬ್ಲಿಸಿಟಿಯ ಕಾನೂನಿನನ್ವಯ ಸೆರೆಬಿದ್ದವರನ್ನು ಬಿಡುಗಡೆ ಮಾಡುವ ಆಲೋಚನೆಯಲ್ಲಿದೆಯೆಂದು ಕವಳ್ಳಿದ, ಮಾಡಿದ ನಾಟಾ ಮಹಾರಾಜರಿಗೆ ಪಾನ-

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ - ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ. (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಸ್ವಾಕ್ಯಾ ವಿಚಾರವು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಅಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ಥ, ಕಫ ಈ ತ್ರಿದೋಷಗಳ ವಿಕಾರದಿಂದಾದ್ದ ಬೇನೆಯೂ ಹೋಗುವದು. ೬೦ ೭೦ ವರ್ಷದ ಮುದಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಆನ ಬಲಕ್ಕೆ ಒದಗುವದು ಜನನೇಂದ್ರಿಯದೊಳಗಿನ ಶಿಥಿಲತೆ ಹೋಗಿ ನಿಜವಾದ ಪುಂಸತ್ವಶಕ್ತಿಯು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ನಿಂತುಹೋಗುವದು — ಪರನಾರಿ ಹಾಗೂ ಕಾಮಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೆ ದಿವಸದಲ್ಲಿ ಗುಣ ಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟ ಮಾಡಿದರೂ ಅನ್ನ ಪಚನವಾಗಿ ಹಸಿವೆ ಜಾಸ್ತಿಯಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿನಸವೇ ಒದಗುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ಬಿಸಿ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚ ಹಚ್ಚುವದಿಲ್ಲ. ತಿಜನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತಿಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ, ಸ್ವಪ್ನಾವಸೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮ ಊತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗುವ ಕಾಮುವಾಸನೆಯು ಹುಟ್ಟು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಹಿಂದಾವರ್ತಿ ತಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಗಳು “ಮೈಸೂರ ಸ್ಟಾರ” ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲೆಯ ೧ ವಡಿ, ರಾತ್ರಿಯು ಭೋಜನವಾದ ನಂತರ ೨ ತೊಲೆಯ ಒಂದು ವಡಿಯನ್ನು ತಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ೬೪ ತೊಲೆಯ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೪। ರೂ. ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವ್ಹಿ. ಪಿ. ಖರ್ಚ ಬೇರೆ. ೩ ಡಬ್ಬಿಗಳನ್ನು ತಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव-

एक रत्तलास किंमत १॥ रुपये.

रामबाण औषध

खर्दि वाढविणारें

भूक वाढविणारें

शौच्यास साफ करणारें

झोंप आणणारें

शक्ति देणारें

तेजस्वीपणा आणणारें

— विश्वास ठेवीकर

कॅटलाग मागवा,

झंडुफार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणी कंपनी, तीर्थहळ्ळी

सिर्सि एजंट एस एल. धाकप्पा आणि ब्रदर

ಸುಲಭ.ಕ್ರಯ! ಸುಲಭ.ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನ್ಯಶದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಿಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ--- ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜೀವಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕಿಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಸಭ್ಯರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ... ಪುಕ್ಕಟ ... ಕಳಿಸಲಾಗುವದಿಲ್ಲ.

... ಡಬಿ ... ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ... ಸಿಗ್ನ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

... ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಕಮಾಲ ಗಾಣ.



ಶೇಕಡಾ ೬೪ ರಿಂದ ೭೦ ರ ವರೆಗೆ ರಸ ಹೊರಡುವದು

ಗಂಟೆಯೊಂದಕ್ಕೆ ೧೧೦೦ ಪೌಂಡ ಕಬ್ಬನ್ನು ಹಿಂಡುವದು.

ಬೆಲೆ ೨೯೦ ರೂ. ಕೂಡ್ಲೆ ಡಿಲಿವ್ಹರಿ

ಸಿರ್ಸಿಯಲ್ಲಿ ಎಸ್ ಎಲ್. ದಾಕಪ್ಪಾ ಮತ್ತು ಬ್ರದರ್ಸ, ಇವರಲ್ಲಿ ಸಿಗುವದು.

... ಈ ಗಾಣದಲ್ಲಿಯ ಎರಕ ಹೊಯ್ದ ಭಾಗಗಳು ಅರ್ಧ ಉಕ್ಕಿನಿಂದ ... ತಯಾರಿಸಿರುತ್ತವೆ ಕಣೆಗಳ ಎತ್ತರ ೧೧ ಇಂಚು, ಅಕ್ಸಲ್ ... ಅಕ್ಸಲ್, ರೋಲರ ಇವು ಬೇರೆ ಬೇರೆ ಇರುತ್ತವೆ. ಬೇಅರಿಂಗ ... ಇರುತ್ತವೆ ಎಂಣೆಯು ಸತತವಾಗಿ ನಿಲ್ಲುವದಕ್ಕೆ ಏರ್ಪಾಡು ಮಾಡಿರುತ್ತೇವೆ ಬಸತಳಿಯಲ್ಲಿ ಸುಧಾರಣೆ ಮಾಡಿರುತ್ತದೆ.

ವೈಶಿಷ್ಟ್ಯ — ... ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಅದರಿನಲ್ಲಿ ಸಿಕ್ಕು ಕಡೆಗೆ ಬರುವದರಲ್ಲಿ ಹಿಂದೆ ಹಿಪ್ಪಿಯಾಗಿ ಬರುವದು ಮಿಕ್ಕ ಗಾಣಗಳಂತೆ ಇಬ್ಬರು ಬೇಕಾಗದ ಒಬ್ಬನಿಂದಲೇ ಸಾಗುವದು ನಾಲ್ಕು ಎತ್ತುಗಳು ಬೇಕು.

ಅಭಿಪ್ರಾಯ.— "ಕಮಾಲ ಗಾಣದಿಂದ ಸಿಪ್ಪಿಯಲ್ಲಿ ವ್ಯರ್ಥ ಹೋಗುವ ರಸದಿಂದ ದಿನಾಲು ೩॥ ಮಣ ಬೆಲ್ಲ ಅಂದರೆ ೧೦ ರೂ. ಲಾಭವಾಯಿತು ೩೪ ದಿವಸ ಗಾಣ ಮಾಡಿತು ನನಗೆ ಒಟ್ಟು ೨೪೦ ರೂ ಲಾಭವಾಯಿತೆಂದು ತಿಳಿಸಲು ಆನಂದವಾಗುತ್ತದೆ ತಮ್ಮ ರಾಜನಗೌಡಾ ಪಾಟೀಲ, ಸವಳಗಿ ಜಿ. ಬೆಳಗಾಂವ."

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಹಿಂದುಸ್ಥಾನದಲ್ಲಿಯೇ ಅತ್ಯಂತ ಅಗ್ಗವಾದ

'ನೆಶನಲ್ ಇನ್‌ಶ್ಯೂರನ್ಸ ಕಂಪನಿ, (ಲಿಮಿಟೆಡ್)

ಎಂಬ

ಜೀವ ವಿಮೆಯ ಮಂಡಲಿ

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 5 40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬಹುಮಾನ ಕೊಟ್ಟಿರುವವು

ಹೊಂಗಡ 1000 ರೂಪಾಯಿಗಳ ವಿಮೆ ಎಷ್ಟು ಕಂತು ಕೊಡಲಿಕ್ಕೋ ಅಷ್ಟೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರವನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ...

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು

ಕರ್ನಾಟಕಕ್ಕೆ ಏಜಂಟರು - **P D Churi,**

ಬಿ ಸಿ. ಸಿದ್ದಾಳಕೊಪ್ಪ, *Branch Secretary*

ಲೋಖಂಡಿ ಬಿಲ್ಡಿಂಗ, Alice Building,

ಹುಬ್ಬಳ್ಳಿ. *Hornby Road,*

BOMBAY

S U. Narayanacharya & CO

Chaukamba, BENARES CITY,



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ ಜರಿಕಣ, ಜರಿ ಸೀರೆ, ಶಾಲ್ಕೆರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಶಿಂಗರ್ ... ಮೊದಲಾದ ಮಾಲಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾಗುವದು

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಮತ್ತು ಕಂಪನಿ ಚೌಕಂಬಾ. ಕಾಶೀಕ್ಷೇತ್ರ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು ಸಂಧಿವಾತ, ಚಳಿ, ಕೆಮ್ಮು, ಸುಟ್ಟಗಾಯ ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣವಾಗುತದೆ. ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು 'ನೋವು ಚಿಕ್ಕದೆಂದು ದೊರಕಿ ತಿರಸ್ಕರಿಸಲಾಗದು ಚಿಕ್ಕ ನೋವಿನಿಂದಲೇ ದೇಹಕ್ಕೆ ... ದೊರೆಯುವದಿಲ್ಲ, ಅಮೃತಾಂಜನದ ಒಂದು ಸಣ್ಣ ಬುಡ್ಡಿಯಿಂದ ... ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ ೦—೧೦—೦

ಎಲ್ಲ ... ಲ್ಲಿಯೂ ... ಕ್ಕುದೆ. ಅಥವಾ **ಅಮೃತಾಂಜನ ಡಿಪ್ಪೊ,**

ಮುಂಬಯಿ ಮತ್ತು ಮದ್ರಾಸ

Printed and Published by Krishnarao Keshav Shenvi (Editor) at his Star of Kanara Press Kumta

REG. NO. B. 1270

MONDAY, FEBRUARY 13TH, 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೮

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ.1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಚಿಹ್ನೆಗಳ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿದುಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೧೩ ಮಾಹೆ ಫೇಬ್ರುವರಿ ಸನ್ ೧೯೨೮ನೇ ಇಸವಿ)

ಹೊಸ ಅಂಗಡಿ! ಹೊಸ ಮಾಲು!!

ಕುಮಟಿ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೀಲ ಸಾಮಾನು, ಕಬ್ಬಿಣದ ಸಾಮಾನು, ಹಲತರದ ಮೊಳೆ, ಪೇಟೆಂಟ ಔಷಧಗಳು, ಕಾಚಿನ ಸಾಮಾನು, ಮುಂತಾದ ಎಲ್ಲ ಥರದ ಮಾಲು ಬಹು ಅಗ್ಗವಾಗಿ ದೊರೆಯುತ್ತದೆ!

ಗಿರಾಕಿ ದಾಗರಿಗೆ ಮುನಾಫೆ ಸಿಗುವಂತೆ ಸ್ಪೆಶಲ್ ಹೋಲ್ ದರಗಳು ಇಡಲ್ಪಟ್ಟಿವೆ !!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮಾಲು ಪಡೆಯಲು ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನ್ನಡ)

ಜಿ. ವ್ಹಿ. ವೇಲಿಂಗಿ ಮೋಟಾರ ಸರ್ವ್ಹೀಸ.



ಕುಮಟಾ—ಶಿರ್ಸಿ ಶಿರ್ಸಿ—ಕುಮಟಾ

ಡೇಲಿ ಮೋಟಾರ ಸರ್ವ್ಹೀಸ ಪ್ರಾರಂಭವಾಗಿರುವದು

ಅಲ್ಲದೆ, ಈ ಸರ್ವ್ಹೀಸು ಶಿರ್ಸಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವವರೆಗೂ ನಡೆಯುತ್ತಿದೆ, ಸ್ಪೆಶಲ್ ಫ್ರಿಶಿಗೆ ಬೇಕಾದವರು ಹಿಂದು ದಿವಸ ಮುಂಚಿತ ತಿಳಿಸಬೇಕು.

ಟಿಕೇಟಿನ ದರ:— ಸೋವು ಅತಿ ಸೋವು!! ಎಲ್ಲರಿಗಿಂತಲೂ ಸೋವು!!!

ಪೇಟಾದಲ್ಲಿಯ ಟಿಕೇಟುಗಳೂ, ವಿಶೇಷ ಮಾಹಿತಿಯೂ ಕುಮಟಾ ಏಜಂಟ ಜಾನಪ್ಪಾ ರಾಮನಾಯ್ಕ ಮುಡಗಾಂವಕರ ಇವರ ಕಡೆಗೆ ಸಿಗುವವು.

ನನ್ನ ಶಾಸ್ತ್ರೀಯ ವಾದ

ಶಾರೀರಕ ಶಿಕ್ಷಣ.



ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಟವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಹೊಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿರುವವರ ಅಭಿಪ್ರಾಯಗಳೂ ಅದರಲ್ಲಿಯವೆ. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೩ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ.

ದಿ ಬೆಳಗಾಂವ ಮೋಟರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ, ಬೆಳಗಾಂವ

ಇವರ

ಬೆಳಗಾಂವ— ಕಾರವಾರ

ನಿಯಮಿತ ಡೇಲಿ ಮೋಟರ ಸರ್ವ್ಹೀಸ್ ಚಾಲು ಇದೆ.



ಪ್ರತಿ ದಿವಸ "ಬೆಳಗಾಂವದಿಂದಾ ಬೆಳಗಿನ ೮ ವೆ ಮುಂಬೈದಿಂದ ಬಂದ ಮೇಲ ನೋಡಿ ೧೦॥ ಘಂಟೆಗೆ, ಈ ರೀತಿ ಎರಡು ಮೋಟರಗಳು ಹೊರಟು "ಖಾನಾಪೂರ, ಅಳ್ನಾವರ, ಹಳಿಯಾಳ, ಯಲ್ಲಾಪುರ, ಅಂಕೋಲಾ ಮಾರ್ಗವಾಗಿ "ಕಾರವಾರಕ್ಕೆ ಅನುಕ್ರಮವಾಗಿ ಸಂಜೆ ೫ ವ ೭ ಘಂಟೆಗೆ ತಲ್ಪುವವು. ಇದೇ ರೀತಿ ಕಾರವಾರದಿಂದ ಬೆಳಗಿನ ೭ ವ ೮ ಘಂಟೆಗೆ ಎರಡೂ ಮೋಟರುಗಳು ಹೊರಟು ಅದೇ ಮಾರ್ಗವಾಗಿ "ಮುಂಬೈಗೆ ಹೋಗುವ ಮೇಲಿಗೆ" ತಲ್ಪುವಂತೆ ಬೆಳಗಾಂವಿಗೆ ತಲ್ಪುವವು. ಪ್ರತಿ ಒಂದು ಸ್ಟೇಶನದಲ್ಲಿ ಪ್ರಯಾಣಿಕರಿಗೆ ಉಳಕೊಳ್ಳಲಿಕ್ಕೆ ವಗೈರೆ ಸೋಯಿ ಇರುವದು. ಹೆಚ್ಚಿನ ಮಾಹಿತಿ ಅಲ್ಲಲ್ಲಿಯ ಏಜಂಟರ ಆಫೀಸಿನಲ್ಲಿ ಯಾ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

☞ ಸ್ಪೆಶಲ್ ಮೋಟರುಗಳು ಯೋಗ್ಯ ದರದಿಂದ ಬಾಡಿಗೆಗೆ ಸಿಗುವವು

Proprietors.- **THE BELGAUM MOTOR WORKS & TRANSPORT CO., BELGAUM.**

Tel - "TRANSPORT", BELGAUM | ತಂತಿ ಪತ್ತೆ:- 'ಟ್ರಾನ್ಸಪೋರ್ಟ' ಬೆಳಗಾಂವ.

ಹೊಸ ಪಂಚಾಂಗ.

ಬಗ್ಗೋಣ ರಾಮಾಂತಿಮ್ಮಣ್ಣ ಪಂಡಿತರವರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿವೆ.

ಪ್ರತಿ ೧ ಕ್ಕೆ ರೂ ೦—೩—೦.
ಪ್ರತಿ ೨೫ ಕ್ಕೆ ರೂ. ೩—೮—೦.
ಪ್ರತಿ ೫೦ ಕ್ಕೆ ರೂ ೬—೮—೦
ಪ್ರತಿ ೧೦೦ ಕ್ಕೆ ರೂ. ೧೨—೦—೦

ಪತ್ತೆ:- ಮೆನೇಜರ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

The Brittannia Life Assurance Company Ltd
Head Office - Kirti Building,
Fort, BOMBAY.

ಈ ಕಂಪನಿಯಲ್ಲಿ ನಮ್ಮ ಭಾರತೀಯರಿಗೆ ... ದ ಸವಲತು, ಸುಲಭ ಕಹು, ಹೆಚ್ಚಿನ ಫಾಯಿದೆ ತಂಠ, ಬಿಕ್ಕಟ್ಟಿನಿಂದ ಆಡಳಿತ ನೂ ... ಖುದಿ-ಕೌಶಲ್ಯತೆಯ ಎಲ್ಲ ಅಡಳಿತದಾರರು ... ಗಿವೆ. ಕ್ರಮವಾತ್ರವಲ್ಲಿ ವಿಮೆಯನ್ನಿಳಿಸಿ ... ಇವರ ಕಂತುಗಳು ಬಹಳೇ ಕಡಿಮೆಯಾಗಿರುವವು. ಆದುದರಿಂದ ಪುನಃ ಪುನಃ ಈ ಕಂಪನಿಯಲ್ಲಿಯೇ ವಿಮೆಯನ್ನಿಳಿಸಲು ಜನರು ಹೇಳತಕ್ಕದ್ದು ಸಾಹಜಿಕದ ಮಾತಾಗಿದೆ

ಈ ಕಂಪನಿಯನ್ನು ನೋಡಿ ಬೇಕಾದ ಮಾ... ನೀಯರು ನಮ್ಮ ಏಜಂಟರಾಗಲು ಇ... ತಕ್ಕ ಸಮಯವು ಬೇಕಾದ ಅನುಭವ ವ... ಏಜನ್ಸಿಯ ... ಗಳು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ದಿ ಬ್ರಿಟಾನಿಯಾ ಲೈಫ ಇನ್ಸುರೆನ್ಸ ಕಂಪನಿ ಲಿಮಿಟೆಡ್
ಹೆಡ್ ಆಫೀಸ-ಕೀರ್ತಿ ಬಿಲ್ಡಿಂಗ ಫೋರ್ಟ,
ಮುಂಬಯಿ.

ಗೋಪಾಳ ಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,
ಕಾಳಬಾದೇವಿ ರೋಡ,
ಮುಂಬಯಿ ನಂ ೨.

ಮುಂಬಯಿಯಲ್ಲಿ ಸಿಗುವ ಸಕಲ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ಖಾತ್ರಿ ಜೆಲ್ಲಿ ... ರೋಕ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ; ಖರೀದಿ ಚೌಕಿಯಿಂದಾಗ... ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುವವು ... ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗು ತರಿಸಿಕೊಳ್ಳಿ ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ.)

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು ಒಂದು ವಿಶೇಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ಸಾಟೀ ಹೋಗಲುವದರಿಂದ ಪ್ರಶಂಸಿಸನವಿಲ್ಲ. ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ ಪೇನಾ ೧, ಕೇಂಠಾಯಿಲ ಬಾಟ್ಲ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್ಲೆಸ್ ಒಂಬ ಕಲ್ಲಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸಟ್ ೧, ಕೈ ವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ ಬರೇ ರೂ. ೪-೮-೦

ವಿಳಾಸ:— **ಇಂಗ್ಲೀಷ ಎಂಪೋರಿಯಂ,**
ಪೋಸ್ಟ, ಬಾಕ್ಸ್ ನಂ. ೧೦೫, ಮದರಾಸು.

ಟೇಬಲ್ ಟ್ಯಾಂಪೀಸ ಇನಾಂ



ಈ ಚಿತ್ರದಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿ ೧೪ ಕ್ಯಾರೆಟ್ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಸ ನಿಬ್ ... ಶಾಯಿ ... ಬರೆಯುವದರಿಂದ ಅಕ್ಷರಗಳು ಒಳ್ಳೇ ಚನ್ನಾಗಿ ಬರುವವು. ಈ ತಿಂಗಳೊಳಗಾಗಿ ಈ ಪೆನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟ್ಯಾಂಪೀಸನ್ನು ಉಚಿತವಾಗಿ ಕೊಡುವೆವು.

ಇನಾಂ ಟೇಬಲ್ ಟ್ಯಾಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.
ವಿಳಾಸ—ಪೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಕಲ್ಪತರು ಮಿಶ್ರಣ

ರಿಜಿಸ್ಟರ್ಡ್ ...

ಎಂದರೆ,
ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯು ರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ತಿಳಿಯಬಹುದು:-

ವಿಷ ಕಲ್ಪತರುನಾಮಾ ರಸಃ ಪರಮ ದುರ್ಲಭಃ | ... ಜೀರ್ಣಂ ...
... | ಹಂತಿ ಜ್ವರಾತಿಸಾರೌ ಚ ಗ್ರಹಣೀಂ ... ||

ಎಂಟಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರು ... ಶ್ರೇಷ್ಠ ದಾಯಕವೆಂದು ಸಿದ್ಧವಾಗಿರುತ್ತದೆ. ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗ ಚಳಿಜ್ವರದ ಬಾಧೆಯು ತಟ್ಟಲಾರದು. ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ.

೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೧-೬-೦.
ನಮ್ಮ ಪತ್ತೆ:— **ವೈದ್ಯ ಬಿ. ಆರ್. ಹರಿದಾಸ,**
ಶ್ರೀ ಸವರ್ಥ ಫಾರ್ಮಸಿ, ಗಡ್ಡಿಕೇರಿ, ಮಂಗಳೂರು.
ಕುಮಟಾ ಏಜಂಟ:— ಅಲಬಾಗ ಮಾಧವ ರಾಮ ಶ್ಯಾನಭಾಗ.

೧೮ ಶತಮಾನದಲ್ಲೋ, ಹದಿನೆಂಟು ಶತಮಾನಗಳ ಶಾಂತಿಯೋ ?

(ಲೇಖಕ - ವಿಠ್ಠಲ ಅನಂತ ಹೆಗಡ್ಡೆ, ಶಿರ್ಸಿ.)

ಪ್ರತ್ಯಕ್ಷ ರೀತಿಯಲ್ಲಿ ಸುವಿಚಾರ ಶಿಕ್ಷಣ ಪ್ರಚಾರಗಳಿಂದ ಪ್ರತಿಕೂಲಿಗಳ ಸಂಹಾರವಾಗುತ್ತಿದ್ದರೂ ಅಪ್ರತ್ಯಕ್ಷ ರೀತಿಯ ಲೋಕಕಲ್ಯಾಣಾರ್ಥವಾಗಿಯೂ, ಸುಭಿಕ್ಷಾರ್ಥವಾಗಿ ... ಎಂತ ಎರಡು ವರ್ಷಕ್ಕೊಮ್ಮೆ ನಮ್ಮ ನಾಡುಗಳಲ್ಲಿ ... ಶ್ರೀ ಮಾರಿಯಮ್ಮನ ಜಾತ್ರೆಯು ಕೂಡ ಪರಸ್ಪರ ... ''ಇವರ ಜಾತ್ರೆ ... ' ಎಂತ ... ಪ್ಲೇಗ ... ಜಗನ್ಮಾತೆಯ ... ಕೂಡ ... ಅದು, ೧ ... ಪ್ಲೇಗ ... ತನ್ನ ರಾಜ್ಯವನ್ನು ... ಈ ವರ್ಷವಾದರೂ ... ನಿಶ್ಚಯವು ... (ಜಾತ್ರೆ) ... (ಪ್ಲೇಗ) ... (ಪ್ಲೇಗ) ... (ಜಾತ್ರೆ) ... ಎಂಬ ... ಇಲ್ಲಿಯ ... ಯಾಕೆಂದರೆ ಪ್ಲೇಗ ಹೋದ ... ಜಾತ್ರೆ ... ಜಾತ್ರೆ ... ಪ್ಲೇಗ ... ದೇವರ ...

ಹೇಳುವ ಮಾತಿನಲ್ಲಿರುವ ಗೂಢಾರ್ಥವಾದರೂ ಏನಾಗಿರಬಹುದೆಂತ ಯಾರಾದರೂ ಲಕ್ಷ್ಯಕೊಡಬೇಕಾಗಿರುವದಲ್ಲವೇ? ಆದ್ದರಿಂದ ಅದನ್ನಷ್ಟು ಇಲ್ಲಿ ಸ್ಪಷ್ಟೀಕರಿಸುವೆನು.

ಅಂದಂತಹ ಶಕ್ತಿಯುಳ್ಳವರಾಗಿದ್ದ ... ಶಕ್ತಿಯ ... ಪ್ರಜೆಗಳನ್ನು ... ಹೋಗದು ... ಅಸಂತುಷ್ಟರಾದ ... ತಮ್ಮ ... ಸ್ವಾರ್ಥಕ್ಕಾಗಿ ... ಪ್ರಜೆಗಳನ್ನು ... ಬಿಡರು ... ಶ್ರೀ ... ಭೂತ-ಪಿಶಾಚಿಗಳು ಸಂತುಷ್ಟರಾಗಿರಬೇಕಾದರೆ ... ಜಾತ್ರೆ ... ರಕ್ತಮಾಂಸ ... ಕೃತ್ಯ (?)ಗಳು ... ಅಂತ ಕೂಲಿಸು ... ಭೂತ-ಪಿಶಾಚಿಗಳಿಗೆ ಅವುಗಳ ... ರಕ್ತಮಾಂಸ ... ''ಸಂತುಷ್ಟರಾಗಿ ಶ್ರೀ ... ಕೇಳದೆ ... ದೇವಿಗಳ ... ದೇವ ... ದೇವಿಗಳು ... ಪ್ಲೇಗ ... ಜಾತ್ರೆ ... ಪ್ಲೇಗ ... ಮೊದಲು ... ಪ್ಲೇಗ ...

ಭೂತ-ಪಿಶಾಚಿಗಳನ್ನು ಸಂತುಷ್ಟಗೊಳಿಸಿ, ಪ್ಲೇಗದ ನಿವಾರಣೆ ಮಾಡಿ, ಲೋಕಕಲ್ಯಾಣ ಮಾಡಬೇಕೆಂತ ನಿರ್ಧರಿಸಿದರು ಮಾತ್ರ ಈ ಸತ್ಯಶೋಧಕ್ಕೆ (?) ಹಿಂಸಾವಾದಿಗಳಷ್ಟೇ ಅಲ್ಲ, ... ಮೇಲಾಗಿ ... ಅಹಿಂಸಾವಾದಿಗಳಾಗಿದ್ದರೂ ... ಮಾತ್ರ ... ವಿರೋಧಿಸಿದರೆ ಎಲ್ಲ ದೇವತೆಯು ... ಪಿಶಾಚಿಗಳ ಕೋಪಕ್ಕೆ ಗುರಿಯಾಗಬೇಕಾಗುವದೋ ಎಂತ ... ''ಗತಾನುಗತಿಕೋ ಲೋಕಃ'' ಎಂಬಂತೆ ೧ ... ತಲೆ ಪಟ್ಟಿಯನ್ನು *(Poll tax)* ಕೊಟ್ಟದ್ದರಿಂದ ರೂಪಾಯಿ ೨೦೦ ವಸೂಲಾದವು ಮತ್ತು ಈ ರೀತಿಯಲ್ಲಿ ... ಅದನ್ನು ... ''ಬೇ ಬೆ '' ಎಂತ ... ಭೂತ ಪಿಶಾಚಿಗಳು ... ಕೃತಕೃತ್ಯರಾದರು! ಮತ್ತು ... ಈ ಕೂಲಿಯ ... ಭೂತ ಪಿಶಾಚಿಗಳು ... ಸೊಕ್ಕಿರಿ, ... ಕಲ್ಪನೆಯೇ ...

(೧೧ ನೇ ಪಾನಿನ ಮೇಲೆ ಮುಂದರಿಸಿದೆ)

ಮನೋಹರವಾದ ಕೂದಲನ್ನು ಬೆಳೆಸಬೇಕೆ !

ಆದರೆ, ಕೆಲವು ಸ್ತ್ರೀಯರು ... ತಮ್ಮ ... ವಾಗಿ ಕಾಣುವುದಕ್ಕೆ, ಕೂದಲು ಮೃದುವಾಗಿರಬೇಕಾದರೆ, ... ಕೂದಲುಗಳನ್ನು ... ಅವುಗಳಿಗೆ ... 'ಕೂದಲನ್ನು' ... ಕೂದಲನ್ನಾವುದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್)

... ಚಿಕ್ಕಪ ... ತಲೆಯು ... ಶಿಕ್ಷಕ ... ಕೂದಲುಗಳಿಗೆ ... ಯುಕ್ತವೆ.

ಎಲ್ಲಾ ಔಷಧೀ ಅಂಗಡಿಕಾರರಲ್ಲಿ ಈ ಕೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

——o:——

೨ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

... ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ... ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಓಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲು ... ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ... ಓಟ್ಟೋ-ದಿಲ್ ಬಹಾರದಿಂದ ... ಹೂವಿನ ... ಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಜಾಹೀರ ವಿನಂತಿ.

ಶ್ರೀ

ಮಹಾಶಿವರಾತ್ರಿಯ ದಿನ ಶ್ರೀಮತ್ ಸಿದ್ಧಭಡಂಗನಾಥ ಲಿಂಗದರ್ಶನದಿಂದ ಪರಮ ಪುಣ್ಯವನ್ನು ಪಡೆಯಿರಿ!

ಹಳಿಯಾಳ ತಾಲೂಕ ಕವಳೆಯಲ್ಲಿ ಶ್ರೀಮತ್ ಸಿದ್ಧಭಡಂಗನಾಥಲಿಂಗ ದೇವಾಲಯದಲ್ಲಿ ಪ್ರತಿವರ್ಷ ಮಹಾಶಿವರಾತ್ರಿಯ ಜಾತ್ರೆಯಾಗುತ್ತದೆ. ಆ ಮೊದಲು ಮಹಾಶಿವರಾತ್ರಿಯ ದಿನ ರಾತ್ರಿ ೮ ಘಂಟೆಯಿಂದ ಮರುದಿನ ಬೆಳಗಿನ ೮ ಘಂಟೆಯ ವರೆಗೆ ಉತ್ಸವಾದಿ ಕಾರ್ಯಗಳೂ, ಭಕ್ತರ ದರ್ಶನ ಸ್ನಾನಾದಿ ಕಾರ್ಯಗಳೂ ನಡೆಯುತ್ತಿದ್ದವು, ಆದರೆ ರಾತ್ರಿಯಲ್ಲಿ ಗುಪ್ತದಲ್ಲಿರುವ ಗುಹೆಯನ್ನು ಪ್ರವೇಶಿಸಿ ಶ್ರೀ ಸಿದ್ಧಲಿಂಗ ದರ್ಶನ ಪಡೆದುಕೊಂಡು ತಿರುಗಿ ಬರುವದು, ಬಹುದೂರದಿಂದ ಬರುವ ಅಪರಿಚಿತ ಭಕ್ತರಿಗೆ ಕಠಿಣವಾಗುವದು. ಆದ ಕಾರಣ, ಈ ವರ್ಷ ತಾರೀಖು ೧೯-೨-೧೯೨೮ ನೇ ರವಿವಾರ ಮಹಾಶಿವರಾತ್ರಿಯ ದಿನ ಮುಂಜಾನೆ ೮ ಘಂಟೆಯಿಂದ ತಾರೀಖು ೨೦-೨-೧೯೨೮ ನೇ ಸೋಮವಾರ ಮುಂಜಾನೆ ೮ ಘಂಟೆಯ ವರೆಗೆ ಜಾತ್ರೆಯ ಕಾರ್ಯಕ್ರಮವನ್ನು ಇಟ್ಟಿದೆ.

ಸಮಸ್ತ ಭಕ್ತ ಜನರು ಇದನ್ನು ತಿಳಕೊಂಡು ಬಂದು, ಶ್ರೀಮತ್ ಸಿದ್ಧಲಿಂಗ ದರ್ಶನ ಪಡೆದು ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಪುಣ್ಯಸಂಪಾದನ ಮಾಡಬೇಕೆಂದು ಕೋರುತ್ತೇವೆ.

ವಿ. ಸೂ:- ಶ್ರೀ ದೇವಾಲಯವನ್ನು ಪ್ರವೇಶಿಸಬೇಕಾದರೆ ವ್ಯವಸ್ಥಾಪಕರಾದ ಶ್ರೀ॥ ಚೂಡಾಮಣಿ ಭೀಮ ದೇಸಾಯಿ ಸರವೀರ ಇವರ ಅಪ್ಪಣೆಯನ್ನು ಪಡೆದುಕೊಳ್ಳಬೇಕು.

ಹುಕಳಿ, ತಾಲೂಕ ಯಲ್ಲಾಪೂರ, ಜಿಲ್ಲಾ ಕಾನಡಾ
ತಾರೀಖು ೮—೨—೧

ಚೂಡಾಮಣಿ ಭೀಮ ದೇಸಾಯಿ, ಸರವೀರ,
ವ್ಯವಸ್ಥಾಪಕ
ಕಾಮತ ನಾಗಪ್ಪಾ ಕಾಮತ
ಮೊಕ್ತೇಸರ.

ಬೇಕು! ಏಜಂಟರು ಬೇಕು!!

ನಮ್ಮ ಕಂಪನಿಯ ಉತ್ತಮ ಕೃತಿಯ ಶರ್ಟ—ಕೋಟು ಮುಂತಾದವುಗಳಿಗೆ ಯೋಗ್ಯವಾದ ಬಟ್ಟೆಗಳನ್ನು ಮಾರುವ ಖಟಪಟಿ ಏಜಂಟರು ಬೇಕು!! ಚಲೋ ಕಮೀಶನ್ ದೊರೆಯುತ್ತೆ. ಶರ್ತು ವಗೈರೆ ಬಗ್ಗೆ ಇಂಗ್ಲೀಷಿನಿಂದ ಪತ್ರವ್ಯವಹಾರ ಮಾಡಿರಿ.

ಪತ್ತೆ:- **THE WEST COAST Weaving ESTABLISHMENT, Cannanore. MALABAR.**

ವಿವಿಧ ಸಂಗ್ರಹ.

ಬೆಂಗ್ಳೂರ ಪಾವಟೇಯವರು.

ಕರ್ನಾಟಕದ ಪ್ರಮುಖರಾದ ಶ್ರೀ ಪಾವಟೇಯವರು ಪಾಶ್ಚಾತ್ಯ ದೇಶದೊಳಗಿನ ತಮ್ಮ ಅಭ್ಯಾಸಕ್ರಮವನ್ನು ಮುಗಿಸಿಕೊಂಡು, ಮರಳಿ ಬೆಳಗಾವಿಗೆ ಬಂದಿರುವರು. ಪಾವಟೇಯವರಿಗೆ ಲಿಂಗಾಯತ ಶಿಕ್ಷಣ ಸಂಸ್ಥೆ, ಕನ್ನಡ ವಾಚನಾಲಯ ಮುಂತಾದ ಸಂಸ್ಥೆಗಳ ಪರವಾಗಿ ಸ್ವಾಗತ ಮಾಡಲಾಯಿತು. ಧಾರವಾಡದ 'ಕರ್ನಾಟಕವೃತ್ತ' ಮತ್ತು 'ಧನಂಜಯ' ಪತ್ರಿಕೆಯ ಪ್ರತಿನಿಧಿಗಳು ರಾ॥ ಪಾವಟೇಯವರ ಕಡೆಯಿಂದ ಕೆಲವು ವಿಷಯಗಳನ್ನು ಸ್ಪಷ್ಟೀಕರಿಸಿಕೊಂಡರು. ಆ ಸ್ಪಷ್ಟೀಕರಣವು ಮಹತ್ವದ್ದಿದೆ. ವಿಲಾಯತಿಯೊಳಗಿನ ಶಿಕ್ಷಣ ಪದ್ಧತಿಗೂ, ಇಲ್ಲಿಯ ಶಿಕ್ಷಣ ಪದ್ಧತಿಗೂ ಅಜಗಜಾಂತರವಿದೆ. ಅಲ್ಲಿಯ ಶಿಕ್ಷಣ ಸಂಸ್ಥೆಗಳ ಸಹಾಯದಿಂದ ವಿದ್ಯಾರ್ಥಿಗಳು ಯಥೇಚ್ಛವಾದ ಶಿಕ್ಷಣಕ್ರಮವನ್ನು ಕೈಕೊಳ್ಳಬಹುದು, ಕ್ರಮಿಕ ಪುಸ್ತಕಗಳನ್ನು ಸೇರಿಸಬಹುದು. ಸರಕಾರದ ಅಂಕಿತದಲ್ಲಿ ... ಶ್ರೀ॥ ಪಾವಟೇಯವರು ವಿಸ್ತೃತ ಉಪನ್ಯಾಸ ಕೊಡತಕ್ಕವರಿದ್ದಾರೆ. ವಿಲಾಯತಿಯಲ್ಲಿ ಕನ್ನಡಿಗರ ... ಗ್ರಂಥದಿಂದ ಭಾರತೀಯ ವಿಷಯ ಸಹಭಾವ್ಯ ವಿತ್ತು; ಆ ಗ್ರಂಥವನ್ನು ... ಹೆಚ್ಚು. ಇಂತಹ ಸ್ವತಂತ್ರ ಗ್ರಂಥಗಳನ್ನು ಓದುವವರು ಕಡಿಮೆ. ವಿಲಾಯತಿಯೊಳಗಿನ ವರ್ತಮಾನ ಪತ್ರಿಕೆಗಳಲ್ಲಿ ಹಿಂದೂಸ್ಥಾನದ ವಿಷಯಕವಾದ ಸುದ್ದಿಗಳು ಅಪ್ರಮುಖವಾಗಿ ಪ್ರಕಟಿಸಲ್ಪಡುತ್ತವೆ. ಅಭ್ಯಾಸಕ್ರಮ ಮುಗಿದ ಬಳಿಕ, ೩ ತಿಂಗಳುಗಳ ವರೆಗೆ ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ಇಟಾಲಿ ದೇಶಗಳಲ್ಲಿ ಶ್ರೀ ಪಾವಟೇಯವರು ಪ್ರವಾಸ ಬೆಳಿಸಿ ದೊಡ್ಡ ದೊಡ್ಡ ಶಿಕ್ಷಣಾಲಯಗಳನ್ನು ನೋಡಿ ಬಂದಿದ್ದಾರೆ. ಬೆಳಗಾವಿಯಲ್ಲಿ ಸ್ಥಾಪನೆಯಾಗಲಿರುವ ಹೊಸ ಲಿಂಗರಾಜ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಜಾಗೆ ಸಿಗದು, ಸಮಸ್ತ ಜಾತಿಯವರು ಹಿರೇ-ತನ ಶ್ರೀ॥ ಪಾವಟೇಯವರು ಆಲೋಚಿಸಿ ಶಿಕ್ಷಣಾಲಯವನ್ನು ಆದರ್ಶಭೂತವಾಗಿ ಮಾಡಿಸಲು ನಿರ್ಧಾರವಳ್ಳವರಾಗಿದ್ದಾರೆ. ಶ್ರೀ॥ ಪಾವಟೇಯವರು ಯೋಗ್ಯತಾವಂತ ಪುರುಷರಿದ್ದು, ಹೊಸ ಕಾಲೇಜಿನಿಂದ ಕರ್ನಾಟಕ ವ್ಯಕ್ತಿಯನ್ನು ಕರ್ನಾಟಕದಲ್ಲಿ ಉಂಟು ಮಾಡಿ, ಕರ್ನಾಟಕದ ಉದ್ಧಾರಕ್ಕೆ ನೆರವಾಗಬೇಕಾಗಿ ನಮ್ಮದೊಂದು ಹಾರೈಕೆ.

* * *

ಛಾಲಿಸಿ, ಪಾರತಂತ್ರ್ಯದ ಫಲ!

ಪಾರತಂತ್ರ್ಯದಿಂದ ಭಾರತೀಯರ ಸ್ವಾಭಿಮಾನವು ಬಯಲಾಗಿದೆ. ಹಿಂದುಸ್ಥಾನದಲ್ಲಿ ವಿಲಾಯತಿಯ ಸಾಹೇಬರಂತೆ ಉಳಕೊಳ್ಳುವದಕ್ಕಾಗಿ ಭಾರತೀಯರಾದ ನಾವು ನಿತ್ಯವೂ ಕೋಟಿ ದ್ರವ್ಯವ್ಯಯ ಮಾಡುತ್ತೇವೆ. ಹಿಂದುಸ್ಥಾನದೊಳಗಣ ಮಾಂಡಲೀಕರಾದ ಸಂಸ್ಥಾನಿಕರ ಹಾಗು ಸಾರ್ವಭೌಮ ಬ್ರಿಟಿಶರ ಸಂಬಂಧಗಳನ್ನು ವಿಚಾರಿಸಿ, ಆ ಕುರಿತು ಸೂಚನೆಗಳನ್ನು ಸಾದರಪಡಿಸಲು ಸರ್ ಹಾರ್ಕೋರ್ಟ ಬಟ್ಲರರವರಿಗೆ ಯಜಮಾನರಾಗಿ ಒಂದು ಚೌಕಶಿ ಮಂಡಳವು ನೇಮಿಸಲ್ಪಟ್ಟಿದೆ. ಈ ಬಟ್ಲರ ಮಂಡಳದ ವಿಚಾರವು ನಡೆದಿದೆ. ಬಟ್ಲರ ಮಂಡಳದ ಸನ್ನಿಧಿಯಲ್ಲಿ ಸಂಸ್ಥಾನಿಕರ ವಿಷಯ ಕಾಯಿದೆಯ ಮುದ್ದೆಗಳನ್ನು ಪ್ರತಿಪಾದಿಸಲಿಕ್ಕಾಗಿ ಸರ್ ಲೆಸ್ಲೀಸ್ಕಾಟರವರು ಹಿಂದುಸ್ಥಾನಕ್ಕೆ ಬಂದಿದ್ದಾರೆ. ಅವರ ಫೀ ೫೫ ಸಾವಿರ ಪವಂಡು ಇದಲ್ಲದೆ, ಊಟ, ತಿಂಡಿ-ತಿನಸು ಮುಂತಾದ ಖರ್ಚಿನ ಸಲುವಾಗಿ ದಿನಾ ೨೦೦ ಪವಂಡಿನಂತೆ ಇವರಿಗೆ ಕೊಡತಕ್ಕದ್ದಾಗಿದೆ. ಎಂಥ ಕಾಯಿದೆಯ ವಿಷಯ ಹೇಳುತ್ತಾರೋ, ದೇವರೇ ಬಲ್ಲ! ಅಷ್ಟು ಸಂಕೀರ್ಣ ಪ್ರಶ್ನೆಗಳು ಎಲ್ಲಿ ಉಂಟಾಗಿವೆಯೋ, ಪರಮಾತ್ಮನಿಗೇ ಗೊತ್ತು!! ಅವನ್ನು ಹೇಳಲಿಕ್ಕೆ ಹಿಂದುಸ್ಥಾನದಲ್ಲಿ ಯಾರೂ ಸಿಗಲಿಲ್ಲವೇ? ಅಷ್ಟು ನಮ್ಮ ಭರತಭೂಮಿಯು ಭಾಗ್ಯಹೀನವಾಯಿತೇ?

* *

ಮಹಾತ್ಮರ ಪ್ರಕೃತಿ.

ಮಹಾತ್ಮರು ರವಿವಾರ ತಾ. ೫ನೇ ಸಾಯಂಕಾಲಕ್ಕೆ ಸತ್ಯಾಗ್ರಹಾಶ್ರಮದಲ್ಲಿ ನೂಲುತ್ತಿರುವಾಗ, ಥಟ್ಟನೆ ಮೂರ್ಛೆಹೊಂದಿದರು. ಆ ದಿನ ವಿದ್ಯಾಪೀಠದಿಂದ ಆಶ್ರಮಕ್ಕೆ ಅವರು ನಡಕೊಂಡು ಹೋಗಿದ್ದರು. ಇದನ್ನು ನೋಡಿದೊಡನೆ, ಆಶ್ರಮದೊಳಗಿನವರು ಓಡಿ ಬಂದು, ಮಹಾತ್ಮರಿಗೆ ಹಾಸಿಗೆಯ ಮೇಲೆ ಮಲಗಿಸಿದರು. ಕೆಲವು ನಿಮಿಷಗಳ ತನಕ ಮಹಾತ್ಮರಿಗೆ ಸ್ಮೃತಿ ಬರಲಿಲ್ಲ. ಡಾಕ್ಟರರಿಗೆ ಕರೆ ಕಳಿಸಲಾಯಿತು. ಡಾಕ್ಟರರು ಬರುವಷ್ಟರಲ್ಲಿ ಮಹಾತ್ಮರಿಗೆ ಸ್ಮೃತಿ ಬಂದು, ಮಹಾತ್ಮರ ಸೋಮವಾರದ ಮೌನವ್ರತಕ್ಕೆ ಪ್ರಾರಂಭವಾಯಿತು. ಆದರಿಂದ ಪ್ರಕೃತಿ ಮಾನವನ್ನು ಮಹಾತ್ಮರಿಂದ ತಿಳಕೊಳ್ಳಾಗಲಿಲ್ಲ. ಮಹಾತ್ಮರ ನಾಡಿ ಪರೀಕ್ಷೆ ಮಾಡಿ, ವಿಪರೀತ ಆಯಾಸದ ಮೂಲಕ ಅವರು ಮೂರ್ಛೆಹೊಂದಿದರೆಂದು ಡಾಕ್ಟರರು ಅಭಿಪ್ರಾಯಪಟ್ಟಿದ್ದಾರೆ. ಮಹಾತ್ಮರು ಈಗ ಡಾಕ್ಟರರ ಸೂಚನೆಗಳಂತೆ ವರ್ತಿಸಲು ಒಪ್ಪಿಕೊಂಡಿದ್ದಾರೆ. ನಾಡಿ ಚಲೋ ಇದೆ, ಆದರೆ, ರಕ್ತಾಭಿಸರಣದ ವೇಗವು ೨೦೮ರ ತನಕ ಏರಿದೆ. ಮಹಾತ್ಮರಿಗೆ ವಿಶ್ರಮಿಸಲು ಡಾಕ್ಟರರು ಸೂಚಿಸಿದ್ದಾರೆ. ಆಶ್ರಮದಲ್ಲಿ ಯಾರೊಡನೆಯೂ ಅವರು ಮಾತನಾಡಬಾರದು; ಏನೊಂದೂ ಓದಲೂ ಬಾರದು. ಮದ್ದು ಕೊಳ್ಳುವ ಅವಶ್ಯಕತೆಯಿಲ್ಲ. ಮೊದಲು, ಮಹಾತ್ಮರು ನೂಲುವದನ್ನು ಬಿಡಲು ಒಪ್ಪಲಿಲ್ಲ, ಆದರೆ, ಡಾಕ್ಟರರ ಒತ್ತಾಯದ ಮೂಲಕ ಅವರು ಅದನ್ನೂ ತ್ಯಜಿಸಲು ಒಪ್ಪಿಕೊಂಡಿದ್ದಾರೆ. ಮಹಾತ್ಮರು ದೇಶದ ಸ್ಥಿತಿಯನ್ನು ಆಲೋಚಿಸಿ, ವಿಶೇಷ ಆಯಾಸವನ್ನು ಕೈಕೊಳ್ಳದೆ, ದೇಹದ ಸ್ಥಿತಿಯನ್ನು ಕಾಪಾಡಿಕೊಳ್ಳಬೇಕಾಗಿ ಎಲ್ಲರೂ ಬೇಡಿಕೊಳ್ಳುತ್ತಾರೆ.

— ಪಂಡಿತ ಮೋತಿಲಾಲ ನೆಹರೂರವರು ವಿಲಾಯತಿಯ ಪ್ರವಾಸ ಮುಗಿಸಿ, ಹಿಂದುಸ್ಥಾನಕ್ಕೆ ಮರಳಿಬಂದರು. ಪಂಡಿತ ಮೋತಿಲಾಲರು ಇಜಿಪ್ತ, ಮೊಸ್ಕೋ ಮುಂತಾದ ದೇಶಗಳನ್ನು ಸಂಚರಿಸಿ, ಮರಳಿದ್ದಾರೆ. ಸ್ವಪ್ರಯತ್ನಗಳಿಂದಲೇ ಭರತಖಂಡದ ಉದ್ಧಾರವಾಗಬೇಕೆಂದೂ, ಸೈಮನ್ ಕಮಿಟಿಯ ಸೂಚನೆಗಳು ಹಿಂದುಸ್ಥಾನದವರಿಗೆ ಸಮಾಧಾನಕರವಾಗಲಿಕ್ಕಿಲ್ಲವೆಂದೂ ಪಂಡಿತ ಮೋತಿಲಾಲರ ಹೇಳಿಕೆ. ಬ್ರಿಟಿಶರು ಯುದ್ಧದ ತಯಾರಿ ಮಾಡುತ್ತಿದ್ದರಾಗಿ ಬೇರೆ ದೇಶದಲ್ಲಿ ಬಂದು ಬಾವನೆ ಇದೆಯಂತೆ ರಾಷ್ಟ್ರೀಯ ಸಭೆಯ ಠರಾವುಗಳನ್ನು ಕಾಪಾಡಿಕೊಳ್ಳಲು ನಾವು ಎಲ್ಲರೂ ಒಂದಾಗಬೇಕೆಂಬುದನ್ನು ಪಂಡಿತಜೀಯವರು ನುಡಿದರು.

ಸ್ಯಾಯಮನ್ ಕೂಟಕ್ಕೆ ಭರತ ಭೂಮಿಯಲ್ಲಿ ದೊರೆತ ಸಂಭಾವನೆ.

ಸ್ಯಾಯಮನ್ ಕೂಟವು ಭರತ ಭೂಮಿಯಲ್ಲಿ ಬಂದಿಳಿದ ಶುಕ್ರವಾರ ೩ ನೇ ತಾರೀಖಿಗೆ ಅಖಿಲ ಭರತ ಖಂಡದೊಳಗಿನ ಸಕಲ ಲೋಕನಾಯಕರು ವಿಧಿಸಿದ ಆಜ್ಞಾರೂಪದಂತೆ, ಭರತಖಂಡದೊಳಗಿನ ಪ್ರಮುಖ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ ನಿವ್ಯ್ಯವಹಾರವು ಸ್ಥಾಪಿಸಲ್ಪಟ್ಟಿತು. ಎಲ್ಲರೂ ಆ ದಿನ ನಿವ್ಯ್ಯವಹಾರವನ್ನು ಸ್ವೀಕರಿಸಿ, ಸ್ಯಾಯಮನ್ ಕೂಟದ ಆಗಮನದ ಧಿಃಕ್ಕಾರ ಸೂಚಕವನ್ನಾಚರಿಸಿದರು. ಕಪ್ಪು ಪತಾಕೆಗಳು, ಸ್ಯಾಯಮನ್‌ರಿಗೆ ಮರಳಿಹೋಗಲು ಆಜ್ಞೆಗಳು ಆ ದಿನ ಅಲ್ಲಲ್ಲಿ ಹೊರಡಿಸೋಣಾಗಿದ್ದವು. ಬಹಿಷ್ಕಾರಕ್ಕೆ ಸಹಕಾರಿಯಾಗಿ ಪಂಚಮಹಾಭೂತಗಳು ನೆರವಾಗಿದ್ದವು. ಸ್ಯಾಯಮನ್ ಕೂಟವು ಏರಿಬಂದ "ರಾಜಪುತಾನಾ" ಎಂಬ ಹಡಗು ಮುಂಬಯಿ ಬಂದರದಲ್ಲಿ ಸೇರುತ್ತಿರುವ ಸಮಯ ಸಿರಡ್ಡು ಆಕಾಶವು ಕಾರ್ಮೋಡಗಳಿಂದ ಕವಿದಿದ್ದಿತು. ಸ್ಯಾಯಮನ್ ಕೂಟದವರು ಬೋಟಿಯಿಂದಿಳಿಯುವ ಸಮಯ ಮೇಘರಾಜನು ಅವತರಿಸಿ, ಸ್ಯಾಯಮನ್ ಕೂಟದವರಿಗೆಲ್ಲ ಕಣ್ಣುಗಾಣದಂತೆ ಮಾಡಿಬಿಟ್ಟನು. ಭರತ ಭೂಮಿಯಲ್ಲಿ ಈ ರಾಜಸ್ತ್ರೀಗಳಿಗೆಲ್ಲ ಹೋದಹೋದಲ್ಲಿ ಕತ್ತಲಾಗುವದೆಂದೂ ಮುಂದಾಗ್ರಹೆಯನ್ನಿತ್ತನು

ಮುಂಬಯಿಯಲ್ಲಿ ದೊಡ್ಡ ಹರತಾಳ. ವಿದ್ಯಾರ್ಥಿಗಳೂ, ಗಿರಣಿಯೊಳಗಿನ ಕೂಲಿಕಾರರೂ, ಇತರರೂ ಕಪ್ಪು ಪತಾಕೆಗಳನ್ನು ಕೊಂಡು, 'ಸ್ಯಾಯಮನ್ ಸಾಹೇಬರೇ, ಬೆನ್ನು ತಿರುವಿರಿ; ನಿಮ್ಮ ಪ್ರಸಾದ ಸಾಕು; ನಿಮಗೆ ನಾವು ವಿಮುಕ್ತಿಸಲಿಲ್ಲ;" ಇತ್ಯಾದಿ ಘೋಷಣೆಗಳಿಂದ ಸತ್ಕರಿಸಿದರು. ಆ ದಿನ ಕೂಲಿಕಾರರು ಸ್ಯಾಯಮನ್‌ರವರ ಪ್ರತಿಮೆಗಳನ್ನು ರಚಿಸಿ ಮೆರವಣಿಗೆಯಿಂದೊಯ್ದು ಅವನ್ನು ಸುಟ್ಟುಹಾಕಿದರು. ವಿದ್ಯಾರ್ಥಿಗಳ ತೀವ್ರ ನಿಷೇಧವನ್ನು ತಾಳಲಾರದೆ, ಪೋಲೀಸ ಸಾರ್ಜಂಟರಾದ ಮಿ| ಕಾರ್ಟರರವರು ಕೆಲವರಿಗೆ ಹೊಡೆದರಂತೆ. ಅದರಿಂದ ೫ ಮಂದಿ ವಿದ್ಯಾರ್ಥಿಗಳು ಸಾರ್ಜಂಟರ ಮೇಲೆ ಮುಂಬಯಿಯ ಚೀಫ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದವನ್ನು ದಾಖಲ ಮಾಡಿದ್ದಾರೆ. ಸಾರ್ಜಂಟರವರ ಮೇಲೆ ಸಮನ್ಸ ಹೊರಡಿಸೋಣಾಗಿದೆ.

ಮದ್ರಾಸದೊಳಗಿನ ಕಥೆಯು ಹೆಚ್ಚು ಭಯಂಕರವಿದೆ. ಶುಕ್ರವಾರಕ್ಕೆ ಅಲ್ಲಿ ಜೋರಾದ ಹರತಾಳವಾಯಿತು. ಟ್ರಾಮುಗಳೂ ನಿಲ್ಲಿಸೋಣಾಗಿದ್ದವು. "ಹೆರಿಸನ್ ಕಂಪನಿ" ಎಂಬ ಯುರೋಪಿಯನ್‌ರ ಸರಾಯಿ ಅಂಗಡಿಯು ತೆರೆದಿತ್ತು. ಅದನ್ನು ಮುಚ್ಚಲು ಕೆಲ ಜನರು ಹೇಳಿದರು; ಅವರು ಒಪ್ಪಲಿಲ್ಲ. ಜನರು ಕಲ್ಲುಗಳನ್ನು ಎಸೆದರು. ಹೈಕೋರ್ಟಿಗೆ ಹೋಗುತ್ತಿದ್ದ ಒಬ್ಬ ವಕೀಲರ ಮೋಟಾರ ಬಂಡಿಯನ್ನು ಜನರು ಅತ್ತಗಟ್ಟಿ ಸುಟ್ಟುಬಿಟ್ಟರು. ಪೋಲೀಸರು ಬಂದು ಗುಂಡು ಹಾರಿಸಿದರು. ೬ ಮಂದಿಗಳು ಮಡಿದರು. ಸರಕಾರಿ ಎಡ್ವೊಕೇಟ ಜನರಲ್‌ರವರಿಗೆ ಘಾಯಗಳಾಗಿವೆ. ಕೆಲವು ಅಧಮರು ರಾಷ್ಟ್ರೀಯ ಸಭೆಯವರ ಮೇಲೆ ಕಲ್ಲುಗಳನ್ನು ಎಸೆದರು. ಲಾಠಿಯಿಂದ ಹೊಡೆದರು. ಈ ಗಡಿಬಿಡಿಯು ಬಹು ಕಾಲ ಬಾಳಲಿಲ್ಲ. ಮಾರನೇ ದಿನ ನಿತ್ಯ ವ್ಯವಹಾರವು ನಿತ್ಯದಂತೆ ನಡೆದಿತ್ತು. ರಾಷ್ಟ್ರೀಯ ಸಭೆಯವರು ಹರತಾಳದ ದಿನ ನಡೆದ ಅನಾಚಾರಗಳ ಕುರಿತು ಚೌಕಶಿ ಮಾಡುವವರಿದ್ದಾರೆ. ಪೋಲೀಸರೂ ಈ ಅಧಮ ವ್ಯಾಪಾರಗಳನ್ನು ಕೈಕೊಂಡಿರುವರೆಂದು ಶ್ರೀ| ಸತ್ಯಮೂರ್ತಿಗಳ ಹೇಳಿಕೆ. ಕೋಟಿಯ್ಯುನ್ ಕಾಲೇಜಿನ ವಿದ್ಯಾರ್ಥಿಗಳು ಈ ದಿನ ಉಪೋಷಣವನ್ನಾಚರಿಸಿ ತಮ್ಮ ನಿಷೇಧವನ್ನು ವ್ಯಕ್ತಪಡಿಸಿದರು. ಹೇಳಿಕೆ ಇದೇ ಬರುವ ಗುರುವಾರ ೧೬ ನೇಗೆ ಸ್ಯಾಯಮನ್ ಕೂಟವು ಮದ್ರಾಸಕ್ಕೆ ಹೋಗುತ್ತದೆ. ಆ ಸಮಯ ಹರತಾಳವನ್ನಾಚರಿಸಲು ಅಲ್ಲಿ ಹರತಾಳ ಪ್ರಚಾರಣೆ ಕಮೀಟಿಯು ನೇಮಿಸಲ್ಪಟ್ಟಿದೆ. ಹರತಾಳದ ಕುರಿತು ಸಭೆಗಳನ್ನು ಸೇರಿಸಬಾರದವಾಗಿಯೂ ಹಸ್ತ ಪತ್ರಿಕೆಗಳನ್ನು ಹಂಚಬಾರದೆಂತಲೂ ಶ್ರೀ| ಸತ್ಯಮೂರ್ತಿ, ಡಾ| ವರದರಾಜುಲು ನಾಯುಡು, ಯಾಕುಬ ಹಸನ್, ಶ್ರೀ| ಟಿ ಪ್ರಕಾಶಂ ಪ್ರಭೃತಿ ಮುಂದಾಳುಗಳ ಮೇಲೆ ಕ್ರಿ ಪ್ರೊ. ಕೋಡ ೧೪೪ನೇ ಕಲಮಿನನ್ವಯ ಪ್ರತಿಬಂಧಕ ಹುಕುಮುಗಳು ಹೊರಟಿವೆ. ಶ್ರೀ| ಸತ್ಯಮೂರ್ತಿಗಳವರು ಈ ಹುಕುಮಿನ ನಕಲನ್ನು ಸ್ವೀಕರಿಸುವಾಗ, ಎಲ್ಲ ವಿಷಯ ಹುಕುಮುಗಳಿವೆ ಈ ಹುಕುಮಿನ ನಕಲಿನ್ನೊಂದು ಮಾಡಿಕೊಡಲು ಹುಕುಮಿಲ್ಲವಾಗಿ ಹಕ್ಕು ದಾರಿಯಾದ ಬಂದ ಆಫೀಸರರೊಡನೆ ವಿನೋದದಿಂದ ಮಾತಾಡಿದರು ಇದಲ್ಲದೆ, ಸಾರ್ವಜನಿಕ ಮೆರವಣಿಗೆಗಳನ್ನು ಹೊರಡಿಸಬಾರದೆಂದು ಸಾರ್ವಜನಿಕ ಜಾಹೀರನಾಮೆಗಳು ಅಲ್ಲಲ್ಲಿ ಅಂಟಿಸೋಣಾಗಿವೆ ಬೆಂಗಳೂರಿನಿಂದ ಮದ್ದು ಗುಂಡುಗಳನ್ನು ತುಂಬಿಕೊಂಡ ವಾಹನಗಳು ಒಯ್ಯಲ್ಪಟ್ಟಿವೆ. ಶ್ರೀ| ಸತ್ಯಮೂರ್ತಿ ಆದಿಗಳು ಸಭೆ ಸೇರಿಸಿ ಈ ವಿಷಯ ವಿಚಾರ ನಡಿಸಿದರು ಮುಂದೇನು ಮಾಡತಕ್ಕದ್ದೆಂಬ ಕುರಿತು ಪ್ರಮುಖರ ವಿಚಾರವಾಯಿತು. ಮಹಾಜನ ಸಭೆಯಲ್ಲಿ ಗುರುವಾರ ತಾರೀಖು ೯ನೇ ದಿನ ರಾತ್ರಿ ಇನ್ನೊಮ್ಮೆ ಸಭೆಯಾಗುವದಿತ್ತು. ಪ್ರತಿಬಂಧಕ ಹುಕುಮನ್ನು ಶಾಂತತೆಯಿಂದ ಮುರಿಯಬೇಕೆಂಬ ನಿರ್ಧಾರವು ಕೈಕೊಳ್ಳಸೋಣಾಗುವದಂತೆ. ಹರತಾಳದ ದಿನ ಮದ್ರಾಸದಲ್ಲಿ ಅತ್ಯಾಚಾರ ಮಾಡಿದ ಕಾರಣದ ಮೇಲೆ ಕೆಲವರಿಗೆ ಸೆರೆಹಿಡಿಯೋಣಾಯಿತು. ನೆಲ್ಲೂರ ಜಿಲ್ಹೆಯ ಆದಿದ್ರಾವಿಡರು ಆ ದಿನ ಉಪವಾಸವನ್ನು ಮಾಡಿದರು; ಕೆಲಸವನ್ನಂತೂ ಮಾಡಲೇ ಇಲ್ಲ. ನೆಲ್ಲೂರಿನೊಳಗಿನ ಸಹಕಾರಿ ಬೇಂಕುಗಳು ಆ ದಿನ ಮುಚ್ಚಲ್ಪಟ್ಟಿದ್ದವು. ಸಹಕಾರಿ ಸಂಘದ ರಿಜಿಸ್ಟ್ರಾರರು ಬಹಳ ದಬಾವಣೆ ಹಾಕಿದರು: ಬೇಂಕಿನ ವ್ಯವಹಾರವನ್ನು ನಿಲ್ಲಿಸಿದರೆ, ಕಾರಭಾರಿ ಮಂಡಳದ ಮೇಲೆ ನಷ್ಟಭರವಾಯಿಯು ಕುರಿತು ಕಾಯಿದೆಸೂಕ್ತ ಇಲ್ಲದ ಮಾಡಿಸಲ್ಪಡುವದಾಗಿಯೂ ಹೆದರಿಸಿ ನೋಡಿದರು. ಆದರೂ, ಬೇಂಕಿನವರು ಆ ಕಡೆ ಕಿವಿಗೊಡದೆ, ಬೇಂಕಿನ ಕೆಲವನ್ನು ಹತಿಸುವದ ಯಾ ಮಾಡುವದು ತಮ್ಮ ಅಧಿಕಾರ ಕಕ್ಷೆಯೊಳಗಿನದೆಂದು ಹೇಳಿ, ಬೇಂಕನ್ನು ಮುಚ್ಚಿಯೇ ಬಿಟ್ಟರು.

ಕಲಕತ್ತೆಯೊಳಗಿನ ಸ್ಥಿತಿಯು ಮತ್ತೊಂದು ವಿಶೇಷ. ಅಲ್ಲಿಯ ಗದ್ದಲ ಇನ್ನೂ ದೊಡ್ಡದು. ವಿದ್ಯಾರ್ಥಿಗಳ ಗೊಂದಲವೇ ಅಲ್ಲಿ ವಿಶೇಷ. ವಿದ್ಯಾರ್ಥಿಗಳು ಬಹು ಪ್ರಯತ್ನದಿಂದ ರಾಷ್ಟ್ರೀಯ ನಿಷೇಧ ಕಾರ್ಯದಲ್ಲಿ ನೆರವಾಗಿದ್ದರು ಅಲ್ಲಲ್ಲಿ ಸ್ವಯಂಸೇವಕರಾಗಿಯೂ ಅವರು ದುಡಿದರು. ಟ್ರಾಮ್ ಬಂಡಿಗಳೂ ವಿಶೇಷ ನಡೆಯಲಿಲ್ಲ ಹೈಕೋರ್ಟಿನಲ್ಲಿ ಪ್ರಕರಣಗಳಿದ್ದವರ ಹೊರತು, ಉಳಿದವರ್ಯಾರೂ ಹೈಕೋರ್ಟಿನ ಕಡೆ ಹೋಗಲಿಲ್ಲ. ಕಾಲೇಜುಗಳಿಗೆ ವಿದ್ಯಾರ್ಥಿಗಳು ರಾಮ ರಾಮ ಹೊಡೆದಿದ್ದರು ಪೋಲೀಸರು ಮಾತ್ರ ನಿರಪರಾಧಿ ಜನಗಳಿಗೆ ಬಿಡುಗಡೆ ಕಲಹವನ್ನೆಬ್ಬಿಸುವ ದುರಾಲೋಚನೆಯಿಂದ ಹೊಡೆದರು; ಬಡೆದರು. ಚಿಕ್ಕ ಪುಟ್ಟ ಬಾಲಕರಿಗೂ ಲಾಠಿಗಳಿಂದ ಹೊಡೆದರು. ಚಿಕ್ಕ ಪುಟ್ಟ ನೆವದ ಮೇಲೆ ಬಹಳ ಮಂದಿಗೆ ಸೆರೆಹಿಡಿದರು. ಸುಮಾರು ೧೭೦ಕ್ಕೆ ಮಿಕ್ಕಿ ಜನಗಳಿಗೆ ಸೆರೆಹಿಡಿಯೋಣಾಗಿದೆ. ಕೆಲವರ ಮೇಲೆ ಖಟ್ಲೆಗಳಾಗಿವೆ ಕೆಲವರಿಗೆ ಮೆಜಿಸ್ಟ್ರೇಟರು ಮುಚ್ಚಳಿಕೆ ಕೊಟ್ಟು ಬಿಡೋಣಾಯಿತು; ಕೆಲವರಿಗೆ ದಂಡ ವಿಧಿಸೋಣಾಯಿತು; ದಂಡ ಕೊಡದ್ದರಿಂದ ಕೋರ್ಟಿನ ಕೆಲಸ ಮುಗಿಯುವ ತನಕ ಶಿಕ್ಷೆ ವಿಧಿಸೋಣಾಯಿತು. ಟ್ರಾಮ ಬಂಡಿಗಳನ್ನು ನಡಿಸದೆ, ಹರತಾಳದ ದಿನ ಕೆಲಸವನ್ನು ನಿಲ್ಲಿಸಿದ, ಬಗ್ಗೆ ಕಂಪನಿಯೊಳಗಿನ ೧೦೦ಕ್ಕೆ ಮಿಕ್ಕಿ ಟ್ರಾಮ ಕೂಲಿಕಾರರಿಗೆ ಕೆಲಸದಿಂದ ನಿಶ್ಚಿತ ಮಾಡಲಾಗಿದೆ. ಕಾಲೇಜು ಬಾಗಿಲಿನಲ್ಲಿ ಕೆಲ ವಿದ್ಯಾರ್ಥಿಗಳು ಸತ್ಯಾಗ್ರಹವನ್ನಾಚರಿಸಿದರು. ಅದರಿಂದ ಮುಖ್ಯಾಧ್ಯಾಪಕರು ಪೋಲೀಸರಿಗೆ ತಂದು ಅವರಿಗೆ ಹೊಡೆದೋಡಿಸಿದರು. ಅದರಿಂದ ಎಲ್ಲ ವಿದ್ಯಾರ್ಥಿಗಳು ಕಾಲೇಜಿಗೆ ಬಹಿಷ್ಕಾರ ಹಾಕಿದ್ದಾರೆ. ಬೇಥೂನ ಕಾಲೇಜಿನ ಅಧಿಕಾರಿಗಳು ಹರತಾಳದ ದಿನ ಗೈರಹಾಜರಾದ ಬಗ್ಗೆ ಕ್ಷಮಾಪತ್ರಿಕೆಯನ್ನು ಬೇಡಿದರು. ಇಬ್ಬರೇನೋ ಕೊಟ್ಟರಂತೆ; ಉಳಿದವರ್ಯಾರೂ ಕೊಡಲಿಲ್ಲ; ಕೊಟ್ಟವರೂ ಪತ್ರಿಕೆಗಳನ್ನು ಹಿಂತಿರುಗಿ ಪಡೆದುಕೊಂಡರು. ಅದರಿಂದ ಕಾಲೇಜು ಮುಚ್ಚಲ್ಪಟ್ಟಿದೆ. ಯಾವಾಗ ತೆರೆಯಿತೆಂದು ಈಗ ಜಾಹೀರಾಗಿಲ್ಲ. ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಇದೇ ಕಥೆ. ಹಿಂದು ವಸತಿಗೃಹದೊಳಗಿಂದ ವಿದ್ಯಾರ್ಥಿಗಳನ್ನು ಹೊರಹಾಕಲು ಕಾಲೇಜಿನ ಅಧಿಕಾರಿಗಳು ತಯಾರಾಗಿದ್ದರು. ಆದರೆ ಶಿಕ್ಷಣ ಮಂತ್ರಿಗಳ ಮಧ್ಯಸ್ಥಿಕೆಯಿಂದ ಅನೇಕ ಹರ್ಷದ ವಿದ್ಯಾರ್ಥಿಗಳಿಗೆ ಮಾತ್ರ ಹೊರಹಾಕಲ್ಪಡಲಿಲ್ಲವಂತೆ! ಹೊಸ ಕಾಯಿದೆಯ ಪ್ರಕಾರ [illegible] ನಡೆದಿವೆ. ಬಂಗಾಲ ಸರಕಾರವು ಹರತಾಳವನ್ನು ಶಾಸನಾರ್ಹ ಅಪಕೃತ್ಯದ ಸದರಿನಲ್ಲಿ ಸೇರಿಸುವ ಆಲೋಚನೆ ನಡಿಸಿರುವದಂತೆ. ಕಾಯಿದೆ ಪಂಡಿತರಾದ ಎಡ್ವೊಕೇಟ ಜನರಲ್‌ರವರ ಅಭಿಪ್ರಾಯ ಕೇಳೋಣಾಗಿದೆ. ನೀತಿಯೊಂದನ್ನು ಬಿಟ್ಟರೆ, ಬೇಕಾದ ಕಾಯಿದೆಯನ್ನು ರಚಿಸಬಹುದು; ಉಣ್ಣುವದನ್ನೂ ಪ್ರತಿಬಂಧಿಸಬಹುದು.

ಬಿಹಾರ ಪ್ರಾಂತದ ಪಾಟಣಾ ಪಟ್ಟಣದಲ್ಲಿ ಶುಕ್ರವಾರ ದಿನ ವಿದ್ಯಾರ್ಥಿಗಳು ಶಾಲೆಗೆ ಬರಲಿಲ್ಲವೆಂದು ೩೫೦ ವಿದ್ಯಾರ್ಥಿಗಳ ಹೆಸರುಗಳು ತೆಗೆಯಲ್ಪಟ್ಟವು. ವಿದ್ಯಾರ್ಥಿಗಳು ಅಂತಃಕರಣಪೂರ್ವಕವಾಗಿ ಮಾಫಿ ಬರಕೊಟ್ಟ ಹೊರತು, ಅವರಿಗೆ ಪ್ರವೇಶ ಸಿಗಲಾರದೆಂದು ವಿಧಿಸೋಣಾಯಿತು ಇಬ್ಬರಕರ್ತೆಯಿಂದ ಮಾಫಿಕೊಡ್ಬೇಕಾದರೆ ಸಾಕಾಯಿತು; ಬೇರೆ ಯಾರೂ ಬರಕೊಡಲಿಲ್ಲ. ಕೊನೆಗೆ ಪ್ರವೇಶ ಫೀ ಕೊಂಡು ಎಲ್ಲರಿಗೆ ಕಾಲೇಜಿನಲ್ಲಿ ಪುನಃ ಸೇರಿಸಿಕೊಳ್ಳಲಾಯಿತು.

ಪಂಜಾಬ ಸರಕಾರವು ಹರತಾಳದ ಪ್ರಯತ್ನಕ್ಕೆ ಇದಿರಾಗುವದಕ್ಕಾಗಿ ಸುಸಂಘಟಿತ ಪ್ರಯತ್ನ ಮಾಡಿತೆಂದು ಅಲ್ಲಿಯ ಬಹಿಷ್ಕಾರ ಪ್ರಚಾರ ಮಂಡಳದವರು ಪ್ರಕಟಿಸಿದ್ದಾರೆ. ಪೋಲೀಸರು ನಾಲ್ವರು ವಿದ್ಯಾರ್ಥಿಗಳಿಗೆ ಸೆರೆ ಹಿಡಿದಿದ್ದರು ಆದರೆ, ಅವರ ಮೇಲೆ ಖಟ್ಲೆ ಮಾಡದೆ ಬಿಟ್ಟುಕೊಟ್ಟರು. ಕಾಲೇಜ ಅಧಿಕಾರಿಗಳಿಗೆ ಬರಕೊಂಡಿದ್ದಾರೆ.

ದಿಲ್ಲಿಯಲ್ಲಿ ಸ್ಯಾಯಮನ್ ಕೂಟದವರು ಹೋದಾಗ, ಅಲ್ಲಿಯೂ ಭಯಂಕರವಾದ ಹರತಾಳ ಆಚರಣೆಯಾ-

(೮ ನೇ ಪಾನಿನ ಮೇಲೆ ಮುಂದುವರಿಸಿದೆ)

ಕಾನಡಾ ವೃತ್ತ.

ವಿ॰ತಿ ಪ್ರಭವ ಸಂ ಮಾಘ ಶು ೬ ಮಿ, ಸೋಮವಾರ

ವಯಂ ವಯಂ, ಯೂಯಂ ಯೂಯಂ!

ಸ್ಯಾಯಮನ್ ಕೂಟಕ್ಕೆ ಬಹಿಷ್ಕಾರ ಹಾಕುವ ಪ್ರಥಮ ಸತ್ಕಾರ ಸಮಾರಂಭವು ಒಕ್ಕೊಲೆ ಹ. ರುಷಿನಿಂದಲೂ, ಅನೇಕವಿಂದಲೂ, ಸಾಹಸದಿಂದಲೂ, ಐಕ್ಯಮತ್ಯದಿಂದಲೂ ಕೊನೆಗಂಡಿತೆಂದು ತಿಳಿಸಲು ಬಹಳೇ ಸಂತೋಷವಾಗುತ್ತದೆ ರಾಷ್ಟ್ರೀಯ ಸಭೆಯ ಕಾರ್ಯದರ್ಶಿಗಳಾದ ಪಂಡಿತ ಜವಾಹರಲಾಲ ನೆಹರೂರವರು, ಎಲ್ಲ ಕಡೆ ಬಂದ ವರದಿಗಳ ಮೇಲಿಂದಲೂ ಈ ಸಂಗತಿಯನ್ನು ಪ್ರಕಟಿಸಿದ್ದಾರೆ ಭಾರತೀಯ ಪ್ರಜೆಗಳನ್ನು ಪಾರತಂತ್ರ್ಯದಲ್ಲಿಟ್ಟು, ಸ್ವಸಾಮ್ರಾಜ್ಯಾಧಿಕಾರ ಬೇಕ್ಷಿಸುವವರು ಹರತಾಳದ ಸಸ್ವರೂಪವನ್ನು ಬಹಿರಂಗವಾಗಿ ಪ್ರಕಟಿಸದಿದ್ದ ಲಂಡನಿನೊಳಗಿನ "ಟ್ಯಾಯ್ಮ್ಸ್" ಪತ್ರಿಕೆಯಲ್ಲಿಂತು "ಸ್ಯಾಯಮನ್ ಕೂಟಕ್ಕೆ ಪ್ರಾರಂಭದ ಸ್ವಾಗತವಾಯಿತು, ಸ್ವಾಗತಪರ ೪೦ ತಂತಿಗಳು ಸ್ಯಾಯಮನ್‌ರ ಕೈಸೇರಿವೆ" ಮುಂತಾದ ಕಪಟ ನಾಟಕದ ಸುದ್ದಿಗಳು ಪ್ರಕಟವಾಗಿಂದವೆ ಬಹಿಷ್ಕಾರದ ಸುದ್ದಿಗಳನ್ನು ಪ್ರಕಟಿಸಲು ಅಲ್ಲಿಯ ವರ್ತಮಾನಪತ್ರಿಕೆಗಳು ಎಷ್ಟು ಮಾತ್ರ ಒಪ್ಪವಿಲ್ಲ. ಸಾಮ್ರಾಜ್ಯ ಸರಕಾರವು ಸರ್ ಜೊನ್ ಸ್ಯಾಯಮನ್‌ರವರಿಗೆ ಈ ಕೂಟದ ಆದಿ[illegible]ವನ್ನಿತ್ತು, ವರ್ತಮಾನಪತ್ರಿಕೆಗಳ ಬಾಯಿ ಅವಲಕ್ಕಿ ಹಾಕಿದೆಂದು " ಪ್ರೆಸ್' ಎಂಬ ವಾರ್ತಾವಾಹಕರು ಪ್ರಕಟಿಸುತ್ತಾರೆ ಅದಿಂತಿರಲಿ. ಕೋಳಿಗೆ ಬುಟ್ಟಿಯ ಕೆಳಗೆ ಮುಚ್ಚಿಡುವದರಿಂದ, ಬೆಳಕಾಗದೆಂದು ಮುದುಕಿಯೇನೋ ತಿಳಿದಿದ್ದಳಂತೆ ! ಅದೇ ರೀತಿ, ಜನಸಾಮಾನ್ಯ ಬ್ರಿಟಿಶರು ತಿಳಕೊಂಡರೂ, ನಮಗೇನು ಪರಿವೆಯಿಲ್ಲ ಮೂರ್ಖತನಕ್ಕಾಗಿ ಮುಂದೆ ಅವರೇ ಪಶ್ಚಾತ್ತಾಪಪಡಬೇಕಾದೀತು ಭಾರತೀಯರು ತಮ್ಮ ದೇಶೋದ್ಧಾರದ ಪ್ರಯತ್ನಗಳನ್ನು ಮತ್ತೂ ತೀಕ್ಷ್ಣವಾಗಿ ಸಾಗಿಸಿದರೆ, ಬ್ರಿಟಿಶರು [illegible]ವಾಗಿ ಇಲ್ಲಿಯ ಸ್ಥಿತಿಯನ್ನು ಒಲ್ಲೆಂದರೂ, ತಿಳಕೊಳ್ಳಬೇಕಾದೀತು ಇರಲಿ ಸದ್ಯಕ್ಕೆ ಒಂದು ಮಾತು ಸಿದ್ಧವಿದೆ ಭಾರತೀಯರು ಹರತಾಳವನ್ನಾಚರಿಸಿ, ಸ್ಯಾಯಮನ್ ಕೂಟಕ್ಕೆ ಬರಮಾಡಿಕೊಂಡರು

ಸ್ಯಾಯಮನ್ ಸಾಹೇಬರಿಗೆ ಬಹಿರಂಗವಾಗಿ ಬಹಿಷ್ಕಾರದ ಸುದ್ದಿಯು ಪ್ರಕಟವಾಗದಿದ್ದರೂ ಅಂತರಂಗದಿಂದ ಭಾರತೀಯರ ಮನೋಗತವು ಅವರಿಗೆ ತಿಳಿದದೆ ಅದರಿಂದ ಚೌಕಶಿಯ ಕಾರ್ಯಕ್ರಮದಲ್ಲಿ ಕೆಲವು ತಿದ್ದುಪಾಟಗಳನ್ನು ಅವರು ಸೂಚಿಸಿ, ಭಾರತೀಯರಿಗೂ ಸಮಾನ ಅಧಿಕಾರಗಳನ್ನು ತಾವು ಕೊಡಲುದ್ಯುಕ್ತರಾಗುತ್ತೇವೆಂಬರ್ಥದ ಪ್ರಕಟಣೆಯನ್ನೊಂದು ಹೊರಡಿಸಿದ್ದಾರೆ ಈ ಪ್ರಕಟಣೆಯಂತೆ, ಸ್ಯಾಯಮನ್ ಸಪ್ರಗ್ರಹಗಳ ಜೊತೆಗೆ ೭ ಮಂದಿ ಹಿಂದೀ ಕಾಯಿದೆ ಕೌನ್ಸಿಲು ಸಭಾಸದರದೊಂದು ಮಂಡಳ[illegible] ರಚನೆಯಾಗಬೇಕು ಹೀಗೆ ಆರಿಸಲ್ಪಟ್ಟ [illegible] ಮಂದಿಗಳ ಕೂಟದ ಅಧ್ಯಕ್ಷಸ್ಥಾನವು ಸ್ಯಾಯಮನ್ ಕೂಟದ ಅಧ್ಯಕ್ಷರಾದ ಸರ್ ಜೊನ್ ಸ್ಯಾಯಮನ್‌ರವರೇ ನಿರ್ವಹಿಸುವರು [illegible] ಬಿದ್ದಾಗ, ಸ್ಯಾಯಮನ್ ಸಾಹೇಬರಿಗೆ [illegible] ಕೌನ್ಸಿಲು ಸಭಾಸದರಿಗೆ [illegible]ಸಿ ಅವರ ಪರೋಕ್ಷ ಸ್ಯಾಯಮನ್ ಕೂಟದ [illegible]ನ್ನು ಸಂಗ್ರಹಿಸುವರು. [illegible] ನ್ಯಾಯಬುದ್ಧಿಯುವರೆಂದೂ ತಮ್ಮ [illegible] ಬುದ್ಧಿಯನ್ನು ನಂಬಿಕೊಂಡು ತಮ್ಮ ಮಂಡಳದೊಡನೆ ಸಾಹಚರ್ಯ ಬೆಳಿಸಬೇಕೆಂ[illegible] ಸರ್ ಜೊನ ಸ್ಯಾಯಮನ್‌ರವರು ಪ್ರಕಟಿಸಿ[illegible] ಪಾರ್ಲಿಮೆಂಟಿಗೆ [illegible]ದರಾಗುವ ರಿಪೋರ್ಟ [illegible] ಸ್ಯಾಯಮನ್ ಕೂಟದವರು, ಹೊರತು ಕೌನ್ಸಿಲು [illegible] ಸದರನ್ನು ಅವಶ್ಯವಿದ್ದರೆ, ಕೌನ್ಸಿಲು ಸಭಾಸದರ ರಿಪೋರ್ಟ ತಮ್ಮ ರಿಪೋರ್ಟಿನ [illegible] ಪ್ರಕಟಿಸಲ್ಪಡುವದೆಂ[illegible] ಸರ ಜೊನ ಸ್ಯಾಯಮನ್‌ರವರು ಪ್ರಕಟಿಸಿದ್ದರೆ [illegible] ಸಮಾಧಾನ ಹೇಳಿದಂತೆ ಮಾತ ಒಂದು ಮಾತನ್ನು ಮಾತ್ರ ಸಿಕ್ಕಿಯ ಪೂರ್ವಕವಾಗಿ ನುಡಿದಿದ್ದಾರೆ ಬೇಕಾದ್ದು ಸಂ[illegible] ಕೈಕೊಂಡ ಕಾರ್ಯವನ್ನು ತಾವು [illegible]ವೆಂದು ಸ್ಯಾಯಮನ್‌ರವರು [illegible] ಪೂರ್ವಕವಾಗಿ ಹೇಳುತ್ತಾರೆ. ಅಂದರೆ ಭಾರತೀಯರು ಬರಲಿ, ಬರದಿರಲಿ, ತಮ್ಮ ಕಾರ್ಯವು ನಡೆಸುವದು, ನೀವು ಬಂದರೆ, ತಮಗೆ ಸಂತೋಷವಿದೆ, ಎಂಬರ್ಥದ ಗೌರವೋಕ್ತಿಗಳನ್ನು ಸರ್ ಜೊನ್ ಸ್ಯಾಯಮನ್‌ರವರು [illegible]ದ ತಿಳಿಸಿದ್ದಾರೆ

ಅಖಿಲ ಭಾರತೀಯ ಲೋಕನಾಯಕರು ಸ್ಯಾಯಮನ್‌ರವರ ಪ್ರಕಟಣೆಯನ್ನು ಚೆನ್ನಾಗಿ ಪರಾಂಬರಿಸಿ, ಅವರ ಸ್ಪಷ್ಟೀಕರಣದಲ್ಲಿ ತಥ್ಯಾಂಶವೇನಿಲ್ಲೆಂದು ವಿಚಾರದಿಂದ ಅಭಿಪ್ರಾಯಪಟ್ಟಿದ್ದಾರೆ. ಎಲ್ಲ ಪ್ರಸಂಗಗಳಲ್ಲಿಯೂ ಸ್ಯಾಯಮನ್ ಕೂಟಕ್ಕೆ ಬಹಿಷ್ಕಾರದಿಂದಲೇ ಸತ್ಕರಿಸಬೇಕೆಂಬ ನಿರ್ಧಾರವನ್ನು ಪ್ರಸ್ತಾಪಿಸಿದ್ದಾರೆ. ಸ್ಯಾಯಮನ್‌ರವರು ಸಾಹಚರ್ಯ, ಸಮಾನತೆ ಮುಂತಾದ ನ್ಯಾಯ ತತ್ವಗಳನ್ನು ಅಲ್ಲಲ್ಲಿ ನಿರೂಪಿಸಿದರೂ, "ವಯಂ ವಯಂ, ಯೂಯಂ ಯೂಯಂ" ಎಂಬ ನ್ಯಾಯನೀತಿಯು ಪ್ರಕಟಣೆಯಿಂದಲೇ ಸಿದ್ಧವಿದೆ. [illegible]ಗಳ ಜನರ್ಸ್ ಮಂಡಳವು ಬಂದಾದರೂ, ಸ್ಯಾಯಮನ್ ಕೂಟದ ಅಧ್ಯಕ್ಷರೆ ಸಂಯುಕ್ತ ಮಂಡಳದ ಅಧ್ಯಕ್ಷರು; ಪ್ರಾಧಾನ್ಯ ಅವರಿಗೇ. ರಿಪೋರ್ಟ [illegible]ವಾಗಲೂ ಭಾರತೀಯರ ರಿಪೋರ್ಟಿಗೆ ಪುರವಣಿಯೇ ವಿಧಿಕಲ್ಪಿಸಿದೆ, ಮುಖ್ಯ ರಿಪೋರ್ಟ ಸ್ಯಾಯಮನ್ ಕೂಟದವರದೇ ಸ್ಯಾಯಮನ್ ಕೂಟದ ಯಜಮಾನರಿಗೆ ಯುಕ್ತ ಕಂಡಾಗ ಕೌನ್ಸಿಲು ಸಭಾಸದರು ಸ್ಥಾನತ್ಯಾಗ ಮಾಡಬೇಕು. ಅಂದರೆ, ಕೌನ್ಸಿಲು ಸಭಾಸದರು, ಮಂಡಳದಲ್ಲಿ ಸ್ಯಾಯಮನ್‌ರ ಅನುಗ್ರಹವಿದ್ದರೆ, ಕೂತುಕೊಳ್ಳಬೇಕು; ಇಲ್ಲದಿದ್ದರೆ ಬಿಡಬೇಕು; ಬಾ ಅಂದರೆ, ಒಳಬರಬೇಕು, ಹೋಗು ಅಂದರೆ, ಹೊರಹೋಗಬೇಕು. ಇಷ್ಟಾಗಿ, ಸರ್ ಜೊನ್ ಸ್ಯಾಯಮನ್‌ರವರು ದೊಡ್ಡ ನಿಷ್ಪಕ್ಷಪಾತಿ ಗೃಹಸ್ಥರು; ಭಾರತೀಯರಿಗೆ ಸಮಾನಸ್ಕಂದರಾಗಿ ನಡಿಸಿಕೊಳ್ಳಲು ಪ್ರವೃತ್ತರಾದವರು. ಹೀಗಿದ್ದು, ಭಾರತೀಯ ಕೌನ್ಸಿಲು ಸಭಾಸದರು ಕೇಳಲಾಗದ ವಿಷಯವನ್ನು ಸ್ಯಾಯಮನ್ ಮಂಡಳದವರು ಕೇಳಬೇಕೇತಕ್ಕೆ? ಹಿಂದುಸ್ಥಾನದ ಉದ್ಧಾರವು ಭಾರತೀಯರಿಗಿಂತ ಬ್ರಿಟಿಶರಿಗೆ ಹೆಚ್ಚಾಗಿ ಇಷ್ಟವಿರುವದೆಂದು [illegible]ರೂ ಹೇಳರು. ಹಾಗಿದ್ದರೆ, ಎಲ್ಲ ಸಂಗತಿಗಳನ್ನು ಕೇಳಿಕೊಳ್ಳಲು ಸ್ಯಾಯಮನ್ ಕೂಟದ ಜೊತೆಗೆ ಕೂತುಕೊಳ್ಳಲು ಭಾರತೀಯ ಸಭಾಸದರು ಅನರ್ಹರಾದರೇ? ಸ್ಯಾಯಮನ್‌ರವರಂಥ ನಿಷ್ಪಕ್ಷಪಾತಿ ಹಾಗು ನ್ಯಾಯಬುದ್ಧಿಯ ಪುರುಷರು ಹೀಗೆ ಹೇಳುತ್ತಾರೆಂದು ಭಾರತೀಯರ್ಯಾರೂ ಈಗ ನಂಬರು ಸ್ಯಾಯಮನ್‌ರವರೇನೋ ತಾವು ನ್ಯಾಯಬುದ್ಧಿಯುವರಂತೆ ! ಅವರ ಆಯುಷ್ಯವು ಬಹುಮಟ್ಟಿಗೆ ವಕೀಲಿಯಲ್ಲೇ ಕಳೆಯಿತು. ವಕೀಲರ ಕೆಲಸವು ಪ್ರಾಯಶಃ ಪ್ರತಿಪಾದನೆಯದು. ವಕೀಲರಿಗಿಂತ ನ್ಯಾಯಾಧೀಶರ ನ್ಯಾಯಬುದ್ಧಿಯು ಹೆಚ್ಚು ನಿರ್ಮಲವೆಂದು ಯಾರೂ ಹೇಳ್ಯಾರು ರೀಡಿಂಗ ದೊರೆಗಳು ನ್ಯಾಯಾಧೀಶರಿದ್ದು, ಅವರ ನ್ಯಾಯಬುದ್ಧಿಯು ಹಿಂದುಸ್ಥಾನದ ಹವೆಯಲ್ಲಿ ನಡೆಯಲಿಲ್ಲ ಅಂದಲ್ಲಿ "ಸರ್ ಜೊನ್ ಸ್ಯಾಯಮನ್‌ರವರ ನ್ಯಾಯಬುದ್ಧಿ ಉಳಿದೀತೆಂಬ್ಯಾದು ನಾವೇನು ತಿಳಿಯುವದಿಲ್ಲ, ಯಾರೂ ತಿಳಿಯಲಾರರು. ಅಖಿಲ ಭಾರತೀಯ ಲೋಕನಾಯಕರೂ ನಂಬಲಿಲ್ಲ ಸವಿ ಸವಿ ಮಾತುಗಳನ್ನಾಡಬಲ್ಲ ಬ್ರಿಟಿಶ ಮಹಾನುಭಾವರ ಸವಿ ಸವಿ ವಚನಗಳನ್ನು ಭಾರತೀಯರು ನಂಬಿ, ನಂಬಿ ಕೆಟ್ಟಿದ್ದಾರೆ; ಇನ್ನು ಅವರು ಮೋಸಹೋಗಲಾರರು ಸ್ಯಾಯಮನ್‌ರವರಂತು ಕೈಕೊಂಡ ಕಾರ್ಯವನ್ನು ನಿರ್ವಹಿಸಲು ಎದೆತಟ್ಟಿ ಮುಂದಾಗಿದ್ದಾರೆ. ಅವರು ಮುಂದಾಗಿ ಹೋಗಲಿ; ನಾವೂ ಮುಂದಾಗುವ ಸ್ಯಾಯಮನ್‌ರವರ ಮಾ

ಗಾರವೇ ಬೇರೆ; ಭಾರತೀಯರ ಮಾರ್ಗವೇ ಬೇರೆ. ಬ್ರಿಟಿಷರು ಪಾರತಂತ್ರ್ಯಶೃಂಖಲೆಯನ್ನು ಭದ್ರಪಡಿಸಲು ಮುಂದಾದವರು, ನಾವು ಭಾರತೀಯರು ಅದನ್ನು ತುಂಡರಿಸಿ ಸ್ವತಂತ್ರರಾಗಿ ಉದ್ಧಾರ ಹೊಂದಲು ಆತುರಗೊಂಡವರು. ನಮಗೂ, ಸೈಮನ್‌ರವರ ಕಮಿಟಿಗೂ ಒಂದು ಕಡೆ ಸಮಾನಸ್ಕಂದರಾಗಿ ಭೆಟ್ಟಿಯಾಗುವದು ಎಷ್ಟಕ್ಕೂ ಅಸಾಧ್ಯ ಮಾತು. ಇಂಥ ಸಂದರ್ಭದಲ್ಲಿ ಡಾ| ಅನ್ಸಾರಿ, ಲಾಲಾ ಲಜಪತರಾಯ, ಪಂಡಿತ ಮದನ ಮೋಹನ ಮಾಲವೀಯ ಪ್ರಭೃತಿ ಲೋಕನಾಯಕರು "ವಯಂ ವಯಂ, ಯೂಯಂ ಯೂಯಂ|" ಎಂಬರ್ಥದ ಬಹಿಷ್ಕಾರದ ನಿರ್ಧಾರವನ್ನು ಪುನಃ ಪ್ರಸ್ಥಾಪಿಸಿದ್ದಾರೆ. ಸಮಸ್ತ ಪ್ರಜೆಗಳೂ ಈ ಆಜ್ಞೆಯನ್ನು ಶಿರಸಾ ಮನ್ನಿಸಿಕೊಂಡು ವರ್ತಿಸಬೇಕಾಗಿ ನಾವು ಬಿನ್ನೈಸಿಕೊಳ್ಳುವೆವು.

ಸ್ಫುಟ ಸೂಚನೆಗಳು.

೧. ಮುಂಬಯಿಯೊಳಗಿನ "ಪ್ರೆಸಿಡೆನ್ಸಿ ಎಸೋಸಿಯೇಶನ್" ಎಂಬ ಪ್ರತಿಷ್ಠಿತ ಲೋಕಪಕ್ಷೀಯ ಸಂಸ್ಥೆಯ ಅಧ್ಯಕ್ಷರಾದ ಸರ್ ದಿನಶಾ ಪಟಿಟ ಬೆರೊನೆಟ್ ರವರು, ಜಂಗಲ ಖಾತೆಯ ಕಾರ್ಯದರ್ಶಿಗಳ ಕಡೆ ಜಂಗಲ ದೂರುಗಳ ವಿಷಯ ಸಾದರಪಡಿಸಿದ ಅರ್ಜಿಯ ಪ್ರತಿಯೊಂದು ನಮ್ಮ ಕಡೆ ಬಂದಿದೆ. ಅದರೊಳಗೆ ನಮ್ಮ ಮುಂಬಯಿ ಇಲಾಖೆಯೊಳಗಿನ ಜಂಗಲ ದೂರುಗಳು ಸಂಕ್ಷಿಪ್ತವಾಗಿ ವಿವರಿಸಲ್ಪಟ್ಟಿವೆ. ಮೇಲಾಗಿ ಸರಕಾರವು ಕೈಕೊಳ್ಳಬೇಕಾದ ಉಪಾಯಗಳೂ ಸೂಚಿಸಲಾಗಿವೆ. ಚೌಕಶಿ ಮಂಡಳದಲ್ಲಿ ಕನ್ಸರ್ವೇಟರರು ತಮ್ಮ ತಮ್ಮ ಸರ್ಕಲುಗಳ ದೃಷ್ಟಿಗೆ ಸಭಾಸದರಾಗಿದ್ದದರಿಂದ ಅವರನ್ನು ಹೊರತುಪಡಿಸಿದರೆ, ಬಹುಮತದ ರಿಪೋರ್ಟ ಬಿನಸರಕಾರಿ ಸಭಾಸದರದೇ ಇರುತ್ತದಾಗಿಯೂ, ಅದನ್ನೇ ಸರಕಾರವು ಮನ್ನಿಸಬೇಕಾಗಿತ್ತಾಗಿಯೂ ಸಾಮಾನ್ಯವಾಗಿ ಹೇಳಿ, ದೂರುಗಳನ್ನು ಆಲೋಚಿಸಿರುವರು. ಗೋಚರಾವ ಫೀಯನ್ನು ಏರಿಸಿದ್ದೂ ಏರಿಸುವ ಪ್ರಕಾರವೂ ಆಕ್ಷೇಪಾರ್ಹವಿವೆ. ಇದನ್ನು ಏರಿಸಬೇಕೆಂದು ಜಂಗಲ ಅಧಿಕಾರಿಗಳು ಸರಕಾರಕ್ಕೆ ಬರಕೊಂಡ ಕೂಡಲೆ, ಅವರ ಬರಹದಂತೆ ಸರಕಾರವು ಫೀಯನ್ನು ಏರಿಸಿ ಬಿಡುತ್ತದೆ. ಕಾಯಿದೆ ಕೌನ್ಸಿಲಿನ ಕಡೆ ಈ ವಿಷಯವೇ ಬರುವದಿಲ್ಲ. ಸರಕಾರವು ಜಂಗಲ ಖಾತೆಯ ಕೈಯಲ್ಲಿ ಸೂತ್ರಗೊಂಬೆಯಾಗಿದೆ, ಈನಕ ಗೋಚರಾವನ್ನು ಏರಿಸುವ ಯಾವದೇ ಸೂಚನೆಯನ್ನು ಸರಕಾರವು ಅರ್ಜಿಗಳೆದಿಲ್ಲವಾಗಿ ಮಿ| ಎಡಿಯವರು ಬೇಸಾಯ ಕಮಿಶನ್ನಿಗೆ ಹೇಳಿದ್ದಾರೆ. ಇಷ್ಟು ಸಾಲದೇ?

೨. ಗೋಚರಾವನ್ನು ಏರಿಸುವ ಕಾರಣವೇನೆಂದು ಬಲ್ಲಿರಾ? ದನಗಳೊಳಗಿಂದ ನಿಷ್ಪ್ರಯೋಜಕವಾದವುಗಳನ್ನು ಹೆಕ್ಕಿ ತೆಗೆದು, ಜನರು ಪ್ರಯೋಜನವುಳ್ಳವುಗಳನ್ನೇ ಇಟ್ಟುಕೊಂಡು, ಅಷ್ಟನ್ನೇ ಜಂಗಲುಗಳಲ್ಲಿ ಮೇಯಬಿಡಬೇಕು. ಗೋಚರಾವ ಫೀ ಇಷ್ಟು ಏರಿಸಿದರೂ, ದನಗಳ ಸಂಖ್ಯೆಯು ಇನ್ನೂ ಕುಗ್ಗಲಿಲ್ಲ. ಅದರಿಂದ ಗೋಚರಾವ ಫೀಯನ್ನು ಇನ್ನೂ ವಿಪರೀತವಾಗಿ ಏರಿಸಿ, ಜಂಗಲುಗಳಲ್ಲಿ ಜಕೋ ದನಗಳಿಗೆ ಹೊಟ್ಟೆ ತುಂಬ ಮೇವು ಸಿಗುವಂತೆ ಯೋಜನೆಯಾಗತಕ್ಕದ್ದಿದೆ. ಮುದುಕ ಹಾಗು ಊನ ದನಗಳನ್ನು ಸಂಪೂರ್ಣವಾಗಿ ನಾಶಮಾಡುವದೇ ಗೋಚರಾವ ಫೀಯನ್ನು ಏರಿಸುವ ಕಾರಣ. ಈ ಕುರಿತು ಸರ್ ದಿನಶಾ ಪಟಿಟರವರು ಸಂಯುಕ್ತ ಪ್ರಾಂತದ ಸರಕಾರವು ನೇಮಿಸಿದ ತಮ್ಮ ಕುಮಾಂವ ಜಿಲ್ಲೆಯ ಜಂಗಲ ಚೌಕಶಿಯ ರಿಪೋರ್ಟಿನೊಳಗಿನ ವಿಧಾನಗಳನ್ನು ಕೊಟ್ಟು ಖಂಡಿಸಿದ್ದಾರೆ. "ಗೊಬ್ಬರಸೊಪ್ಪಿನ ಕೆಲಸವನ್ನು ದನಗಳು ಮಾಡುತ್ತವೆ, ಮುದುಕ ದನಗಳೂ, ಊನಾಂಗದ ದನಗಳೂ ಈ ಕೆಲಸವನ್ನು ಸಾಗಿಸುತ್ತವೆ. ಗೊಬ್ಬರಸೊಪ್ಪಿನಿಂದ ಬೇಸಾಯಕ್ಕೆ ಬಹಳೇ ಅನುಕೂಲವಿದೆ. ಇದನ್ನಷ್ಟು ನಾವು ಗ್ರಹಿಸಿದರೆ, ದನಗಳ ಸಂಖ್ಯೆಯನ್ನು ನಿಯಂತ್ರಿಸುವದು ದೊಡ್ಡ ತಪ್ಪೆಂದು ತಿಳಿಯುವ ಹಾಗಿದೆ." ಹೀಗೆ ಹೇಳಿ, ಆ ಚೌಕಶಿ ಮಂಡಳದವರು ದನಗಳನ್ನು ಎಣಿಸಬಾರದಾಗಿಯೂ, ಗೋಚರಾವ ಫೀಯನ್ನು ಎತ್ತಬಾರದಾಗಿಯೂ, ದನಗಳಿಗೆ ಮೇಯಲು ಸಂಪೂರ್ಣ ಸ್ವಾತಂತ್ರ್ಯವಿರಬೇಕಾಗಿಯೂ ಶಿಫಾರಸು ಮಾಡಿದರು. ಅದನ್ನು ಪ್ರಾಂತಿಕ ಸರಕಾರವು ಅಂಗೀಕರಿಸಿದೆ. ಇಂಥ ಪ್ರಸ್ಥಿತಿಯಲ್ಲಿ ನಮ್ಮ ಮುಂಬಯಿ ಸರಕಾರವು ಜಂಗಲ ಅಧಿಕಾರಿಗಳ ಶಿಫಾರಸುಗಳಂತೆ ಕಾಯಿದೆ ಕೌನ್ಸಿಲಿನಲ್ಲಿ ಸಹ ಆಲೋಚಿಸದೆ ಗೋಚರಾವ ಫೀಯನ್ನು ಜಕೋ ದನಗಳ ಹಿತಕ್ಕಾಗಿ ಏರಿಸುವದು ಮಹದನ್ಯಾಯವೆಂದು ಸರ್ ದಿನಶಾ ಪಟಿಟರವರು ನಮೂದಿಸಿದ್ದಾರೆ. ೧|| ಲಕ್ಷದ ಮಟ್ಟಿಗೆ ಉತ್ಪನ್ನವಿರುವದರಿಂದ ಈ ಫೀಯನ್ನು ಪ್ರಜೆಗಳಿಗೆ ಸೂಟ ಬಿಟ್ಟರೆ, ಸರಕಾರಕ್ಕೆ ಹೇಳತಕ್ಕಷ್ಟು ನಷ್ಟವಿಲ್ಲವಾಗಿಯೂ ಅವರು ಬರೆದಿದ್ದಾರೆ.

೩. ಪ್ಯಾವರ ಜಂಗಲುಗಳ ವಿಷಯ ಸರ್ ದಿನಶಾ ಪಟಿಟರವರು ತರಿ ಭೂಮಿಗೆ ೨ ಎಕರೆಯಂತೆ ಕುಮಕಿ ಕೊಡತಕ್ಕದ್ದಾಗಿ ಶಿಫಾರಸು ಮಾಡಿದ್ದಾರೆ. ಇದೇ ಪ್ರಮಾಣವನ್ನು ಕಲೆಕ್ಟರರಾದ ಮಿ| ಟವ್ವರ, ಕನ್ಸರವೇಟರರಾದ ಮಿ| ಕೊವರ್ಟನ್, ಡಿಪ್ಟಿ ಜನಲ ಫಾರೆಸ್ಟ ಆಫೀಸರರಾಗಿದ್ದ ಮಿ| ಎಡಿ, ಈ ಮೂವರು ಯಲ್ಲಾಪುರದಲ್ಲಿ ಸೇರಿ ಒಮ್ಮನಸ್ಸಿನಿಂದ ಶಿಫಾರಸು ಮಾಡಿದ್ದರಾಗಿಯೂ ಅವರು ಬರೆದಿದ್ದಾರೆ. ಜನಸಾಮಾನ್ಯರಿಗೆ ಕೊಡತಕ್ಕ ಪ್ಯಾವರ ಜಂಗಲನ್ನು ಪ್ರತ್ಯೇಕಿಸಿ, ಜಂಗಲ ಪಂಚಾಯತುಗಳ ಸ್ಥಾಪನ ಬಡಿಸಬೇಕಾಗಿಯೂ ಪಟಿಟರವರು ಸೂಚಿಸಿ, ಜಂಗಲ ಪಂಚಾಯತುಗಳ ಘಟನೆಯ ಕ್ರಮವನ್ನು ತಿಳಿಯಲು ಮದ್ರಾಸ ಪ್ರಾಂತಕ್ಕೆ ಮೂವರದೊಂದು ಶಿಷ್ಟಮಂಡಳವನ್ನು ಕಳಿಸಹೇಳಿದ್ದಾರೆ — ಮುಲ್ಕಿ ಅಧಿಕಾರಿಗಳೊಬ್ಬರು; ಜಂಗಲ ಅಧಿಕಾರಿಗಳು ಎರಡನೆಯವರು, ಲೋಕಪಕ್ಷದವರು ಮೂರನೇಯವರು; ಹೀಗೆ ಮೂವರು ಮದ್ರಾಸಕ್ಕೆ ಹೋಗಿ ಅಲ್ಲಿಯ ಪಂಚಾಯತುಗಳ ಕೆಲಸ ನೋಡಿ, ಅವನ್ನು ನಮ್ಮ ಪ್ರಾಂತದಲ್ಲಿ ಸ್ಥಾಪಿಸಲು ತಕ್ಕದಾದ ಘಟನೆಯನ್ನು ತಯಾರಿಸಬೇಕಾಗಿಯೂ, ಆನಕ ಪರಿಗೆ ಮುಲ್ಕಿ ಖಾತೆಯವರು ಪ್ಯಾವರ ಜಂಗಲಿನ ಆಡಳಿತೆಯನ್ನು ನಿರ್ವಹಿಸಬೇಕಾಗಿಯೂ ಸೂಚಿಸಿದ್ದಾರೆ.

೪. ಹಂದಿ, ಆನೆ, ಹುಲಿಗಳಾದಿ ಕಾಡು ಪ್ರಾಣಿಗಳಿಂದ ನಮ್ಮ ಇಲಾಖೆಯಲ್ಲಿ ಹೇರಳ ಬೆಳೆಯೂ, ಪಶುಗಳೂ, ಜನರೂ ನಷ್ಟಗೊಳ್ಳುತ್ತಾರೆ. ಈ ಕುರಿತು ಸರಕಾರವು ಮುಳ್ಳು ಸರಿಗೆಯ ಬೇಲಿಯನ್ನು ಹಾಕಲು ಬೋಧಿಸುತ್ತಾರೆ. ಇದು ಬಹು ತುಟ್ಟಿ ಬೀಳುತ್ತದೆಂದೂ, ಸಾಮಾನ್ಯ ಬೇಸಾಯಗಾರರಿಗೆ ಇದನ್ನು ಹಾಕುವದು ಸಾಧ್ಯವಿಲ್ಲವಾಗಿಯೂ ಸರ್ ದಿನಶಾ ಪಟಿಟರವರು ಅಭಿಪ್ರಾಯಪಟ್ಟಿದ್ದಾರೆ. ಬೇಲಿಗಳ ಕುರಿತು ನಿರ್ಮಾಣಗೊಂಡಿದ್ದ ಸಹಕಾರಿ ಸಂಘಗಳು ಪಕ್ಷಪಾತದಿಂದಲೂ, ಅಪ್ರಾಮಾಣಿಕತನದಿಂದಲೂ ಹಿಮ್ಮನಸ್ಸಿನಿಂದಲೂ ಸಾಗುವದಿಲ್ಲ. ಅದರಿಂದ ಪ್ರಜೆಗಳಿಗೆ ತುಪಾಕಿ ಲೈಸನ್ಸುಗಳನ್ನು ಹೆಚ್ಚಾಗಿ ಕೊಟ್ಟು ಬೇಟೆಯಾಡಲು ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಬೇಕು. ಬೇಟೆಯಾಡುವ ವ್ಯಸನಾಧೀನರಾಗಿ ರೈತರು ತುಪಾಕಿಗಳನ್ನು ಉಪಯೋಗಿಸಲಿಕ್ಕಿಲ್ಲ. ಅವಶ್ಯವಿದ್ದರೆ, ಬೇಟೆ ಪ್ರದೇಶವನ್ನು ಸರಕಾರವು ಕಡಿಮೆ ಮಾಡಿ ಜನರು ಅಲ್ಲಿ ಪ್ರವೇಶಿಸದಂತೆ ನಿಯಮಗಳನ್ನು ಮಾಡಬಹುದು.

೫. ಗ್ರಾಮ ಶಿಕ್ಷೆಯ ನಮೂನೆಯನ್ನು ಸರ್ ದಿನಶಾ ಪಟಿಟರವರು ವರ್ಣಿಸಿ, ದಾವಾಗ್ನಿಯ ಕುರಿತು ಬೇಸಾಯಗಾರರಿಗೆ ದಂಡಿಸುವದು ಅನ್ಯಾಯವೆಂದು ಅಭಿಪ್ರಾಯಪಟ್ಟಿದ್ದಾರೆ. ದಾವಾಗ್ನಿಯನ್ನು ನಂದಿಸಬರದಿದ್ದರೆ, ದನಗಳ ಪ್ರಮಾಣದಂತೆ ಶಿಕ್ಷೆ ವಿಧಿಸುವದು ಕಾಡು ಯುಗದೊಳಗಿನದೆಂದು ಸರ್ ದಿನಶಾ ಪಟಿಟರವರು ಅಭಿಪ್ರಾಯಪಟ್ಟು, ಅದನ್ನು ಒಮ್ಮೆಲೇ ರದ್ದುಪಡಿಸಬೇಕಾಗಿ ಹೇಳಿದ್ದಾರೆ. ಗ್ರಾಮದವರು ಪ್ರಯತ್ನ ಮಾಡಿದ್ದಾಗ್ಯೂ, ಅಗ್ನಿನಾರಾಯಣನು ಪ್ರಬಲನಾಗಿದ್ದರೆ, ಎಲ್ಲರೂ ತಮ್ಮ ದೌರ್ಬಲ್ಯದ ಬಗ್ಗೆ ವಿಶೇಷ ಗೋಚರಾವ ಫೀಯನ್ನು ಶಿಕ್ಷೆಯೆಂದು ತೆರಬೇಕು. ಗ್ರಾಮದವರು ಪ್ರಯತ್ನ ಮಾಡಿದ ಯಾ ಮಾಡದಿದ್ದ ಸಂಗತಿಯನ್ನು ಹೇಳುವ ಸಂಪೂರ್ಣ ಜವಾಬ್ದಾರಿಕೆಯು ಜಂಗಲ ಅಧಿಕಾರಿಗಳ ಮೇಲಿರುವದರಿಂದ ಗ್ರಾಮದವರೆಲ್ಲರೂ ಸ್ಥಳೀಕ ಜಂಗಲ ಅಧಿಕಾರಿಗಳ ದಾಸಾನುದಾಸರಾಗಿರಬೇಕಾಗಿರುತ್ತದೆ. ಈ ಪದ್ಧತಿಯನ್ನು ನಿರ್ಮೂಲಿಸಿ, ದಾವಾಗ್ನಿಯನ್ನು ನಂದಿಸಲು ಬಂದ ಗ್ರಾಮದವರಿಗೆ ಇನಾಮುಗಳನ್ನು ಹಂಚುವ ಪದ್ಧತಿಯನ್ನು ಪ್ರಾರಂಭಿಸಬೇಕಾಗಿಯೂ ಸರ್ ದಿನಶಾ ಪಟಿಟರವರು ಸೂಚಿಸುತ್ತಾರೆ.

೬. ಸರ್ ದಿನಶಾ ಪಟಿಟರವರು ಕೊನೆಗೆ ನಮ್ಮ ಉತ್ತರ ಕನ್ನಡ ಜಿಲ್ಲೆಯ ವಿಷಯ ವಿಶೇಷ ಸಂಗತಿಗಳನ್ನು ನಮೂದಿಸಿದ್ದಾರೆ. ಅವು ವಿಚಾರಾರ್ಹವಿವೆ. ಕಾನಡಾ ಜಿಲ್ಲೆಯೊಳಗಿನ ಕ್ಷೇತ್ರಫಲದಲ್ಲಿ ಶೇಕಡಾ ೮೩ ರಷ್ಟು ಪ್ರದೇಶವು ಕಾಡು ಸದರಿನಲ್ಲಿ ಸೇರಿಸಲ್ಪಟ್ಟಿದೆ. ಉಳಿದ ೧೭ ರಷ್ಟು ಕ್ಷೇತ್ರವು ಸಾಗು ಕ್ಷೇತ್ರವೆಂದು ಎಣಿಸಲ್ಪಡುತ್ತದೆ. ಸಾಗು ಕ್ಷೇತ್ರದಲ್ಲಿ ಪ್ರತ್ಯಕ್ಷ ಸಾಗು ಆಗುವದು ಮೂರರಲ್ಲಿ ೨ ಪಾಲು, ಉಳಿದ ೧ ಪಾಲು ಯಾವಾಗಲೂ ಬಂಜರು ಬೀಳುವದೇ. ಪುರಾತನ ಕಾಲದಲ್ಲಿ, ಅಂದರೆ, ಜಂಗಲು ನಿರ್ಬಂಧನಗಳಿಲ್ಲದಾಗ, ಸುತ್ತು ಮುತ್ತು ಅಡವಿಯಿದ್ದಾಗ್ಯೂ, ಮಧ್ಯದೊಳಗಿನ ಗದ್ದೆಗಳು ಸಾಗು ಆಗುತ್ತಿದ್ದವು. ಈಗ ಅಂಥ ಪ್ರದೇಶಗಳನ್ನು ಕಾಣುವದಪರೂಪವಾಗಿವೆ. ಹೀಗೆ ಸಾಗು ಕ್ಷೇತ್ರವು ದಿನೇ ದಿನೇ ಕುಗ್ಗುತ್ತಿರುವದರಿಂದ ಜನಸಂಖ್ಯೆಯೂ ಕುಗ್ಗಿತು. ೧೯೦೧ನೇ ಇಸ್ವಿಯಲ್ಲಿ ೪ ಲಕ್ಷ ೪೪ ಸಾವಿರ ಲೋಕಸಂಖ್ಯೆಯಿತ್ತು;

ತ್ತು; ೧೦ ವರ್ಷಗಳಲ್ಲಿ ೩೪ ಸಾವಿರ ತಗ್ಗಿತ; ೧೯೨೧ನೇ ಇಸ್ವಿಯಲ್ಲಿ ಪುನಃ ೩೯ ಸಾವಿರ ತಗ್ಗಿತು; ಅಂದರೆ, ಆ ವರುಷ ೪ ಲಕ್ಷ ೧ ಸಾವಿರ ಜನಸಂಖ್ಯೆಯಾಯಿತು. ಕನ್ನಡ ಜಿಲ್ಲೆಯಲ್ಲಿ ಶೀರ್ವೆಯು ಮಾನ ಹೆಚ್ಚಿನದು; ಮೊಟ್ಟಮೊದಲು ಶೀರ್ವೆ ಕೂಡ್ರಿಸಿದವರು ಸರ್ ಥೋಮಸ್ ಮುಂದ್ರೋರವರು. ಅವರು ಆ ಕಾಲಕ್ಕೆ ಕಲೆಕ್ಟರರಿದ್ದರು. ಅವರು ಆಗ ಆಕರಿಸುವ ಶೀರ್ವೆಯು ಶಾಶ್ವತವಾಗಿ ಒಂದೇ ಇರುವದೆಂದು ಹೇಳಿ ಕೂಡ್ರಿಸಿದರು; ಮುಂದೆ ಶೀರ್ವೆ ಪರಿಶಿಷ್ಟದಾಗ ಸರಕಾರದ ಮೇಲೆ ೫ ಸಾವಿರ ದಾವೆಗಳು ದಾಖಲಾದವು. ಒಂದು ಪ್ರಕರಣವನ್ನು ಪರೀಕ್ಷಾರ್ಥವಾಗಿ ಮುಂಬಯಿ ಯ ಹೈಕೋರ್ಟಿನವರು ವಿಚಾರಕ್ಕೆ ಹಿಡಿದು, ಮುಂದ್ರೋರವರ ವಚನವು ಅಧಿಕಾರಾತಿಕ್ರಮವಾದ್ದೆಂದು ನಿರ್ಣಯಿಸಿದರು. ವ ... ಶೀರ್ವೆ ಪರಿಸೋಣಾಯಿತು "ಈ ಜಿಲ್ಲೆಯೊಳಗಿನ ಜನರಿಗೆ ಜಂಗಲು ಉತ್ಪನ್ನದ ... ತರುವ ಹಕ್ಕುಗಳಿವೆ. ಹುಬ್ಬಳ್ಳಿ ಕಾರವಾರಗಳೊಳಗೆ ಉಗಿಬಂಡಿಯಾಗುವದು, ಭೂಮಿಯ ಬೆಲೆ ಏರುವದು, ... ಆಧಾರ ಹಿಡಿದು ಶೀರ್ವೆ ಪರಿಸೋಣಾಯಿತು. ಹುಬ್ಬಳ್ಳಿ-ಕಾರವಾರಗಳ ಉಗಿಬಂಡಿಯ ಯೋಜನೆಯು ಬಯಲಾಯಿತು, ಜಂಗಲದೊಳಗಿನ ಹಕ್ಕುಗಳು ಅರಣ್ಯ ಖಾತೆಯ ಅಧಿಕಾರದಿಂದ ಕಸಿಯಲ್ಪಟ್ಟವು. ಆದರೆ, ಇವುಗಳ ಜೊತೆಗೆ ಏರಿದ ಶೀರ್ವೆ ಮಾತ್ರ ನಷ್ಟವಾಗದೆ ಉಳಿದಿದೆ. ಹೀಗೆಲ್ಲ ನಮ್ಮ ಕನ್ನಡ ಜಿಲ್ಲೆಯ ಸ್ಥಿತಿಯನ್ನು ವಣಿಸಿ, ಸರ್ ದಿನಶಾ ಪೆಟಿಟರವರು ನಮ್ಮ ಜಿಲ್ಲೆಯ ಪುಷ್ಟಿಗೆ ವಿಶೇಷ ಉಪಾಯಗಳನ್ನು ಸರಕಾರವು ಕೈಕೊಳ್ಳಬೇಕಾಗಿ ಸೂಚಿಸಿದ್ದಾರೆ - (೧) ಗೋಚರಾಯ ಫೀ ಮಾಫಿ ಆಗಬೇಕು; (೨) ಗಾಯರಾನಗಳನ್ನು ನಿರ್ಮಿಸಿ, ಅಲ್ಲಿ ವನಗಳಿಗೆ ಉಚಿತವಾಗಿ ಮೇಯಗೊಡಬೇಕು, (೩) ಜಂಗಲು ಪ್ರದೇಶಗಳಲ್ಲಿ ಆರೋಗ್ಯ ಸಾಧನೆಯಾಗುವಂತೆ ಉಪಾಯಯೋಜನೆ ಮಾಡಬೇಕು ೧ ಎಕ್ರೆ ತೋಟಕ್ಕೆ ೯ ಎಕ್ರೆಯಂತೆ ಬೆಟ್ಟ ಕೊಡಬೇಕು. ಬೆಟ್ಟವನ್ನು ತೋಟದ ಮಾಲೀಕರಿಗೆ ಖಾತೆ ಹಾಕಿ ಕೊಡಬೇಕು. ಮುಂತಾದ ಸೂಚನೆಗಳನ್ನು ಸರ್ ದಿನಶಾ ಪೆಟಿಟರವರು ಮುಂಬಯಿಯ ಪ್ರೆಸಿಡೆನ್ಸಿ ಎಸೋಸಿಯೇಶನ್ ಸಂಸ್ಥೆಯ ಅಧ್ಯಕ್ಷ ಅಧಿಕಾರದಿಂದ ಮಾಡಿದ್ದಾರೆ. ಈ ಸೂಚನೆಗಳನ್ನು ಸರಕಾರವು ಮನ್ನಿಸಲಿ, ಮನ್ನಿಸದಿರಲಿ; ನಾವು ಮಾತ್ರ ಸರ್ ದಿನಶಾ ಪೆಟಿಟರವರಿಗೆ ಆಭಾರಿಯಾಗಿದ್ದೇವೆ ಜನರೂ ಆಭಾರಿಯಾಗಿದ್ದಾರೆ.

ಸ್ವೀಕಾರ— ಶ್ರೀ ಕಾಶೀಕ್ಷೇತ್ರದ ಶಿರೋಮಣಿಯು ನಾರಾಯಣಾಚಾರ್ಯ ಮತ್ತು ಕಂಪನಿಯವರು ಪ್ರಕಟಿಸಿದ ಉಡುಪಿ ಪರ್ಯಾಯೋತ್ಸವದ ಮಾಹಿತಿ ಒಳಗೊಂಡ ಕಟಲಾಗನ್ನು ನಾವು ಸ್ವೀಕರಿಸುವೆವು ಉಡುಪಿ ಶ್ರೀ ಕೃಷ್ಣ ದೇವಾಲಯದಲ್ಲಿ ಪರ್ಯಾಯ ಮಹೋತ್ಸವದ ಸಮಯ ನಡೆಯುವ ವಿನಿಯೋಗಗಳು ವಿವರಿಸಲ್ಪಟ್ಟಿವೆ ಶ್ರೀ ಕೃಷ್ಣ, ಶ್ರೀಮನ್ಮಧ್ವಾಚಾರ್ಯ, ಶ್ರೀ ಮಧ್ವಾದಿರಾಜರು ಹಾಗು ಈಗಿನ ಅಷ್ಟಮಠಾಧಿಪರ ಛಾಯಾಚಿತ್ರಗಳು ಕೊಡಲ್ಪಟ್ಟಿವೆ. ಬೆಲೆ ೦-೦-೬. ೧ ಆಣೆಯಗಾಲ ಸ್ಟಾಂಪು ಕಳಿಸಿದ್ದಲ್ಲಿ ಶ್ರೀ ಕಾಶೀ ಕ್ಷೇತ್ರದ ವಕಾಲೆಯೊ ಇವರೊಂದಿಗೆ ಕಳಿಸಲ್ಪಡುವದು.

ಸ್ಥಾನಿಕ ವೃತ್ತಾಂತ.

ಶಿವೇಶ್ವರ— ಚಳಿ ಸಾಮಾನ್ಯ. ಜ್ವರಾದಿ ರೋಗಗಳು ನಡೆದಿವೆ ಶಿವರಾತ್ರಿಯ ಪರ್ವಕಾಲದ ಬಗ್ಗೆ ಯಾತ್ರಿಕರು ಬರಲಾರಂಭಿಸಿದರು. ರಾ। ಗೋನಹಳ್ಳಿಯವರು ೧೦ ೧೫ ಜನರು ಕೂಡ್ರುವ ಮೋಟಾರು ಲಾಂಚನ್ನು ತರಿಸಿದ್ದಾರೆ ಈ ವಾರದಲ್ಲಿ ಅದು ಹಳ್ಳದ ಸಾಹುಕಟ್ಟಿಗಳಿಗೆ ಓಡಾಡಹುದು

ಇಲ್ಲಿಯ ವರ್ತಕರು ಉಗಿಹಡಗದ ಕಂಪನಿಯ ಆಫೀಸಿನಲ್ಲಿ ಸಾಮಾನು ಕಳ್ಳರು ... ಬಿಳಿ ಹುಗಿದು ... ಕೋಳಿಯನ್ನು ... ಜನ ಪ್ರಗಳ ... ಅನುಕೂಲಮಾಡಿಕೊಡುವದಕ್ಕಾಗಿ ಸರಕಾರಕ್ಕೆ ಅರ್ಜಿ ಮಾಡುವ ನಿರ್ಧಾರಮಾಡಿದ್ದಾರೆ

ಹಗಲಿನ ... ಧೀವಿಜಾತಿಯ ಗೋಕರ್ಣಸಾಂತು ಬಿನ್ ದೇವಪ್ಪ ... ಬಂದಿನ ಘಟ್ಟದ ... ಜೋಗಿದ್ದನು ... ತನ ... ಹಗಡೆಯಲ್ಲಿ ಬಾವಿಯಲ್ಲಿ ಬಿದ್ದು ತೀರಿಕೊಂಡನು, ಅವನ ಉತ್ತರಕ್ರಿಯೆ ಮಾಡುವ ವೆಚ್ಚದಿಂದ ಸಾಂತನ ... ಹಗಡೆಗಳೊಡನೆ ... ಸಾಂತುಗೆ ... ಮಾತ್ರಕಂತೆ ಮಾಡಿ ... ಈ ಹಸು ಮೋಟಾರಿನ ... ದೇಹಾವಸಾನ ... ಒಬ್ಬನೇ ಮಗನಿದ್ದನಂತೆ ...

ಸಾಣಿಕಟ್ಟೆಯ ಉಪ್ಪಿನ ಸಾವುಕಾರ ಸಂಘವು ಉಪ್ಪಿನ ... ಪ್ರಾರಂಭಿಸಿದ ಸಾವುಕಾರರ ಸಂಘದಿಂದ ಪ್ರತ್ಯೇಕವಾಗಿ ಹೋದ ರಾ। ವ ೦ಗೇಶ ನಾಡಕರ್ಣಿಯವರ ಉಪ್ಪು ಸಾವುಕಾರರ ಲೋಕೋಪಕಾರಿ ಸಹಕಾರಿ ಉಪ್ಪಿನ ... ಆದರಿಂದ ಸಂಘವು ... ಉಪ್ಪಿನ ... ತಪ್ಪಿದ ... ಸಾವುಕಾರರ ... ಉಪ್ಪಿನ ದ ಪ್ರ ರೂ ೪-೧-೦ ಕ್ಕೆ ... ರಾ। ವಂಗೇಶ ನಾಡಕರ್ಣಿಯವರ ಉಪ್ಪು ... ಕ್ಕೆ ಬೀಳುತ್ತದಂತೆ. ಸ ... ಉಪ್ಪಿನ ... ಉಪ್ಪಿನ ಸಾವುಕಾರರ ... ಸ್ವಾಧೀನವಿರುತ್ತದೆಂದು ... ಉಪ್ಪಿನ ...

ಸಹಕಾರಿ ... ಪರಿಸ್ಥಿತಿಯನ್ನು ತಿಳಿಸಿದರೆ ನಾವು ... ಪ್ರಕಟಿಸುವೆವು ಸಂಪಾದಕ]

ದಾರೇಶ್ವರದಲ್ಲಿ ... ಖಾತೆಯವರು ಹೊಸ ... ಮಾರ್ಗದ ಗದ್ದೆಗಳೂ ... ಹಿತ್ತಲುಗಳೊಳಗಿಂದಲೂ ಹೋಗುತ್ತದೆ. ಆದರೆ, ಮಾರ್ಗರಚನೆ ... ಗದ್ದೆಗಳೊಳಗೆ ಪೈರು ನಾಶವಾಗುತ್ತದೆಂದು ... ಮಾಲೀಕರು ಹೇಳಲಿಲ್ಲ. ಆ ... ಸರಕಾರಿ ... ಹಾಕಿ ಒಂದೊಂದು ... ಮಾಡಿಕೊಟ್ಟು ... ಕೊಡಬೇಕೆಂಬ ... ಸರಕಾರದ ... ಇಲ್ಲ ಅನಾದಿ ಕಾಲದಿಂದ ಗದ್ದೆಯಿರುವ ಸ್ಥಳದಲ್ಲಿ ಹೊಸದಾಗಿ ಮಾರ್ಗರಚನೆಯಾಗುತ್ತಿದ್ದರಿಂದ ಹೊಸ ಮಾರ್ಗದ ಹಿಂದೆ-ಮುಂದೆ ಪೈರು ಬೆಳೆಯುವ ... ಹೇಳಲಿಲ್ಲ ಮಾರ್ಗರಚನೆಯು ... 'ಎಕ್ಸಾಯಿಜು' ಪ್ರಕರಣ ಪೂರ್ಣವಾಗುವ ಮುಂಚೆಯೇ ಗದ್ದೆಗಳ ಒಡೆಯರು ಸಮ್ಮತಿ ಕೊಟ್ಟರು. ಹೊನ್ನಾವರ ಮಾರ್ಗದ ವಿಷಯದಲ್ಲಿ ಮಾತ್ರ ರಾ। ಸಾಂತಪ್ಪ ಪೈರು ಇಂಥ ... ಪರಂಪರಾಗತ ಹಕ್ಕು ... ಗಳನ್ನು ... ಮುಂದೊಡ್ಡುತ್ತಾರೆ? ಮಾರ್ಗದ ಸ್ಥಳವೂ ಅವರ ಮನೆತನದ್ದಲ್ಲ; ಅವರು ಧರ್ಮಕ್ಕೆ ಕೊಟ್ಟದ್ದೂ ಅಲ್ಲ ಹೀಗಿದ್ದು, ಅವರ ... ಕ್ಕಾಗಿ ಮ್ಯುನಿಸಿಪಾಲಿಟಿಯೊಳಗಿನ ಅಧಿಕಾರಿಗಳು ಪಕ್ಷ ...

ವು ಯಾಕೆ ಹಿಡಿದೊಗಡಿಸುತ್ತದೆ? ಇತ್ಯಾದಿ ಒಬ್ಬರು ಕೇಳಿ, ಕುಮಟಾ ಮ್ಯುನಿಸಿಪಾಲಿಟಿಯಲ್ಲಿ ಕೌನ್ಸಿಲರರಾಗಿರುವದರಿಂದಲೇ ರಾ। ಸಾಂತಪ್ಪನವರು ಅಂಥ ಹಕ್ಕುಗಳನ್ನು ಹೇಳಲುದ್ಯುಕ್ತರಾದರೆಂದು ಉತ್ತರ ಕೊಟ್ಟಿದ್ದಾರೆ.'

ಗಿಬ್ಸ ಹೈಸ್ಕೂಲಿನ ಚಾಲಕ ಮಂಡಳದ ಅಧಿಪರಾದ ರಾವಬಹಾದ್ದೂರ ಪಂಡಿತರವರು ಇಲ್ಲಿಯ ಮ್ಯುನಿಸಿಪಾಲಿಟಿಗೆ ಒಂದು ಅರ್ಜಿ ಮಾಡಿ ಗಿಬ್ಸ ಹೈಸ್ಕೂಲಿಗೆ ೧೦೦೦ ರೂಪಾಯಿಗಳ ದ್ರವ್ಯಸಹಾಯ ಬೇಡಿದ್ದಾರಂತೆ. ಚಾಲಕ ಮಂಡಳದ ಉಪಾಧ್ಯಕ್ಷರಾದ ರಾ। ... ಅಧ್ಯಕ್ಷ - ಉಪಾಧ್ಯಕ್ಷರಿರುವಾಗ, ಹೀಗೆ ೧೦೦೦ ರೂಪಾಯಿ ಬೇಡಿದ್ದು ... ಸೇಮುಸ್ತಾಯಿತು. ಈ ಹಣವು ಮಂಜೂರಾಗದಿದ್ದರೆ ಆಶ್ಚರ್ಯ!! ಇತ್ಯಾದಿ ಮಾತಾಡುವರೊಬ್ಬರು ಹೀರಿಯುತ್ತಾರೆ

ಇಲ್ಲಿಯ ಸಬಜಜ್ಜ ಕೋರ್ಟಿನಲ್ಲಿ ಕಾರಕೂನರಾಗಿ ಹೈಕೋರ್ಟ ವಕೀಲಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ರಾ। ಜಿ. ಎಚ್ ಗಂಗೊಳ್ಳಿಯವರು ಹೊನ್ನಾವರದಲ್ಲಿ ವಕೀಲಿ ಮಾಡಲುದ್ಯುಕ್ತರಾಗಿ, ತಮ್ಮ ಕಾರಕೂನಿಗೆ ರಾಜೀನಾಮೆಯನ್ನಿತ್ತಿದ್ದಾರೆ.

ಹೊನ್ನಾವರ— ಚಳಿ ವಿಶೇಷವಿಲ್ಲ, ಮೋಡಗಳಾಗುತ್ತಿವೆ ರೋಗರಾಯಿ ಕೇಳಬರ್ಕುಂಥಾದ್ದಿಲ್ಲ. ಕಾರವಾರದಲ್ಲಿ ಪ್ಲೇಗು ಹುಟ್ಟಿದ್ದರಿಂದ, ಇಲ್ಲಿಯ ಮ್ಯುನಿಸಿಪಾಲಿಟಿಯವರು ಈಗಿನಿಂದಲೇ ಮುಂಜಾಗ್ರತೆ ಕೊಳ್ಳಹತ್ತಿದ್ದಾರೆ. ಮಾರ್ಗದ ಪಕ್ಕಗಳಲ್ಲಿ ಹೊಲಸು ಮಾಡಬಾರದಾಗಿಯೂ, ಸ್ವಚ್ಛತೆಯನ್ನು ಕಾಪಾಡಬೇಕಾಗಿಯೂ ಡಂಗುರ ಸಾರಿದ್ದಾರೆ.

ಅಗ್ರಹಾರದಲ್ಲಿ ರಥೋತ್ಸವದ ಸಮಯ ಪ್ರತಿ ವರ್ಷದ್ವಿತದವಿಯ ಸಮಾರಾಧನೆ ನಡೆಯುತ್ತದೆ ಒಂದು ಜೂಗಾರು ಮಂಡದ ಖಟ್ಲೆ ವಿಚಾರ ನಡೆದಿದೆ ಇದರಿಂದ ಸಾಕಷ್ಟು ಎಚ್ಚರಿಕೆಯಾದೀತು, ಜೂಗಾರು ಮಂಡಗಳು ರಭಸದಿಂದ ನಡೆಯುತ್ತವಾಗಿ ತಿಳಿಯುತ್ತದೆ. ಗ್ರಾಮದ ಪಟೇಲರು ಕರ್ತವ್ಯದಕ್ಷರಾದರೆ, ಈ ವ್ಯಾಪಾರವನ್ನು ಪ್ರತಿಬಂಧಿಸಲು ಪೋಲೀಸರಿಗೆ ಅನುಕೂಲ

ಇಲ್ಲಿಯ ಹಳೆ ಬಜಾರ ಪುರದಲ್ಲಿ ಈ ತನಕ ಮೂರು ಸಪ್ತಾಹೋತ್ಸವಗಳು ನಡೆದವು ಇನ್ನು ಒಂದೆರಡು ನಡೆಯುವವಿವೆ ... ಗಡಿಬಿಡಿಯಲ್ಲಿ ಅವನ್ನು ಬಗೆಬಗೆಯ ಸಂಗ್ರಹವನ್ನು ಸಂಗ್ರಹಿಸಲು ಪ್ರಯತ್ನಪಡುವದು ... ಯೋಗ್ಯವು ಭಾವಿಕರು ನೆನಮಾಗಬೇಕು.

ಇತ್ತಲಾಗಿ ಸಲಗಸ ... ಬೆಳ್ಳುಳ್ಳಿ, ನಮಕೀನ್ಯ ಸಣ್ಣದೊಡ್ಡ ಗರ್ನಲುಗಳನ್ನು ... ಹಬ್ಬ, ದೀಪಾವಳಿ ಹಬ್ಬಗಳ ಸಮಯ ಮಾರುತ್ತಿದ್ದರು. ನಲಕ್ಕೆ ಹೊಡೆದು ಮನರಂಜನ ಮಾಡಿಕೊಳ್ಳುವ ವಿಷಯವಿದು! ಇವುಗಳನ್ನು ತಯಾರಿಸುವದು ಕಾಯಿದೆಯಿಂದ ಪ್ರತಿಬಂಧಿಸಲ್ಪಟ್ಟಿದೆ, ಈ ವ್ಯಾಪಾರ ಮಾಡುವ ಇಲ್ಲಿಯ ಇಬ್ಬ ವ್ಯಾಪಾರಿಗಳ ಪೋಲೀಸರಿಂದ ಪತ್ತೆ ಹಚ್ಚಿ ಇಲ್ಲಿಯ ಮಾಮಲೇದಾರರು ... ಡಿವಿಜನಲ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಖಟ್ಲೆ ಮಾಡಿಕೊಟ್ಟರು ಇಬ್ಬರ ಕಡೆ ಸಿಕ್ಕಿದ ಸಾಮಾನು, ಹಚ್ಚೆಂಕರೆ ... ಇಬ್ಬರೂ ಕಾಯಿದೆಯಂತೆ ಗುನ್ಹೆಯಾಗುತ್ತದೆಂದು ಮೇಜಿಸ್ಟ್ರೇಟರ ... ಬೇಡಿದರು ಮೆಜಿಸ್ಟ್ರೇಟರು ... ಮುಕ್ಕಾಮಿನಲ್ಲಿ ೧೦೦..೧೦೦ ರೂಪಾಯಿ ದಂಡ ವಿಧಿಸಿದ್ದಾರೆ ಶಿಕ್ಷೆಯು ಭಯಂಕರವಾಯಿತು!

ಶಿರಸಿ— ಮೋಡಗಳು ಕವಿಕವಿದು ಹರಿತ್ತಿವೆ ಗುರುವಾರಕ್ಕೆ ದೊಡ್ಡ ಮಳೆಬಿತ್ತು.

ಗೇರಸಪ್ಪೆ ಜೋಗಿನ ಯಾತ್ರೆಗೆ ಹೋಗುವ ಯುರೋಪಿಯನ್ನರ ಮೋಟಾರಿನವರ ಕಡೆಯಿಂದ ಟೋಲ ನಾಕೆಯವರು ಟೋಲ ವಸೂಲ ಮಾಡುವದಿಲ್ಲವಾಗಿ ಒಂದು ಸುದ್ದಿ ಹಬ್ಬಿದೆ. ಪೊಂಬುರಾ ಚೌಕಿ ವಗೈರೆವರೇನು?

ಪ್ರತಿ ವರ್ಷಕ್ಕೆ ಇನಕಮ್ ಟೆಕ್ಸ ಕೊಡುವವರ ಸಂಖ್ಯೆಯು ಏರುತ್ತಿದೆ ಇನಕಮ್ ಟೆಕ್ಸಿನ ರಕಮು ಹೆಚ್ಚುಗುತ್ತಿದೆ ಇನಕಮ್ ಮಾತ್ರ ಹೆಚ್ಚುವದಿಲ್ಲವೆಂದು

ದು ವ್ಯಾಪಾರಸ್ಥರ ಹೇಳಿಕೆ. ಬೆಸ್ತ ಮಾಡಿದ ಯೋಗದಿಂದಾದರೂ, ಹಜ್ಜಿನ ಲಾಭವಾಗಲೆಂದು ಅವರು ಹಾರೈಸುತ್ತಾರೆ.

ಪರ್ಕಳರು ಪುರಾತನ ಕಾಲದಿಂದ "ಧರ್ಮಾದಾಯ" ಎಂಬ ನಿಧಿಯನ್ನು ಅಮದು-ರಫ್ತು ಆಗುವ ಸರಕುಗಳ ಮೇಲೆ ಎತ್ತುತ್ತಾರೆ ಈ ನಿಧಿಯು ವಿನಿಯೋಗವು ಧರ್ಮೋಪಯೋಗವಾದ ಹಾಗು ರಾಷ್ಟ್ರೀಯ ಕಾರ್ಯಗಳಲ್ಲಿ ಆಗುವಂತೆ ಪರ್ಕಳರೂ, ನಿಯುಕ್ತಿಗಳೂ ತಕ್ಕ ಯೋಜನೆ ಮಾಡಬೇಕಾಗಿ ನಾಗರಿಕರೊಬ್ಬರು ತಿಳಿಸುತ್ತಾರೆ.

ಸಿದ್ದಾಪುರ— ಬುಧವಾರ ತಾ. ೩ ನೇಗೆ ಚಂದ್ರೋದಯ ನಮ್ಮಲ್ಲಿ ವಿಶೇಷವಾಗಿ ಆಚರಿಸಲ್ಪಟ್ಟಿತು ಸ್ವಾರ್ಥಪರಾಯಣರಾದ ಒಬ್ಬಿಬ್ಬರು ಜೂಜಿನ ದುಕಾನದ್ವಾರದ ತಮ್ಮ ಅಂಗಡಿಗಳನ್ನು ತೆರೆದಿಟ್ಟು, ಜೂಜು ವ್ಯಸನಾಧೀನರಿಂದ ಕೆಲವು ದುಡ್ಡು ಸೆಳೆಕೊಂಡರು. ಆಶ್ಚರ್ಯವೇನಿಲ್ಲ!

ಶ್ರೀ ಕಲಗೇರಿ ಬಾಲಸಿದ್ಧೇಶ್ವರ ನಾಟಕ ಮಂಡಳಿಯವರು ೩ ೪ ಪ್ರಯೋಗಗಳನ್ನು ಮಾಡಿ ರಾಮಪುರ ಜಾತ್ರೆಗೆ ತೆರಳಿದರು. "ರಾಕ್ಷಸೀ ಮಹತ್ವಾಕಾಂಕ್ಷೆ" ಪ್ರಯೋಗಕ್ಕೆ ವಿಶೇಷ ಜನಸಂದಣಿ ಕೂಡಿತ್ತು. ಆ ದಿನದ ಪ್ರಯೋಗ ನೋಡಿ, ಹೊಸೂರ ಪಟೇಲ ರಾ। ಅಣ್ಣಾಜಿ ಗೌಡರು ಬಾಲಕರೊಂದಿಗೆ ರಾ। ಜಟ್ಟಪ್ಪನವರಿಗೆ ಸುವರ್ಣ ಪದಕವನ್ನಿತ್ತು ಉತ್ತೇಜಿಸಿದರು.

ಮಾರಿಜಾತ್ರೆಯ ಗಡಿಬಿಡಿ ನಡೆದಿದೆ. ಬುಧವಾರ ತಾ. ೮ ನೇಗೆ ಮಾರೀಕೋಣದ ಬಲಿಯಾಯಿತು. ಸೂರ್ಯನಾರಾಯಣನು ಈ ಹಿಂಸೆಯನ್ನು ನೋಡಲಾಗದೆ, ಮೋಡಗಳ ಹಿಂದುಗಡೆ ಮೋರೆಯನ್ನು ಅಡಗಿಸಿಕೊಂಡನು, ಮೇಘರಾಜನು ಅಶ್ರುಧಾರೆಯನ್ನು ಸುರಿದನು. ಜಾತ್ರೆಯ ಸಮಯ ಶ್ರೀಸಾಯಿ ಬಾಲೆಯವರು ಚಿಕ್ಕ ಪ್ರದರ್ಶನವನ್ನೊಂದನ್ನು ಏರ್ಪಡಿಸಿದರು. ಆರೋಗ್ಯ ಪಾಲನದ ಬಗ್ಗೆ ಶಾಸ್ತ್ರರು ಹೊಲಸಾಗದಂತೆ ಅಲ್ಲಲ್ಲಿ ಸ್ವಚ್ಛತೆ ಕಾಪಾಡಲು ಅಂಗಡಿಕಾರರಿಗೆ ತಿಳಿಸಿಕೊಳ್ಳುತ್ತಿದ್ದರು ಆಗಿಂದಾಗ ತಾವು ತಪಾಸ ಮಾಡುತ್ತಿದ್ದರು. ಹಂಗಾಮಿ ದವಾಖಾನೆಯನ್ನೇರ್ಪಡಿಸಿ, ಜನರಿಗೆ ಉಪಕಾರ ಮಾಡಿದರು.

ಸಾಗರ ಸಮೀಪ ಹೊಸ್ಬಳ್ಳಿ ಎಂಬ ಗ್ರಾಮವಿದೆ. ಅಲ್ಲಿಯ ರಾ। ವೀಣೆ ಹನುಮಂತಪ್ಪನವರು ಇಲ್ಲಿ ಬಂದು ತಮ್ಮ ವೀಣಾವಾದ್ಯ ಪ್ರಾವೀಣ್ಯವನ್ನು ಪ್ರದರ್ಶಿಸಿದರು. ೨೦-೨೫ ವರ್ಷಗಳಿಂದ ಇವರು ಸಂಗೀತ ಶಾಸ್ತ್ರವನ್ನು ಅಭ್ಯಾಸ ಮಾಡುತ್ತಿದ್ದಾರೆ ೨-೩ ಪದಕ ಬೈಠಕಿಗಳಾದವು.

ಕಾರವಾರ— ಪ್ಲೇಗಿನ ಭೀತಿ ಇನ್ನೂ ಕಡಿಮೆಯಾಗಿಲ್ಲ. ಜನರು ಹೊರಬೀಳು ಕಟ್ಟುತ್ತಿದ್ದಾರೆ. ಅಲ್ಲಿಗದ್ದೆ ಮುಂತಾದ ಪರಿಹೊರೆಯ ಗ್ರಾಮಗಳಲ್ಲಿ ಬಿಡಾರಗಳಾಗುತ್ತಿವೆ. ಪೇಟೆ ಬರಿಯಂತು ಸಂಪೂರ್ಣವಾಗಿ ಬಿಡಲ್ಪಟ್ಟಿದೆ. ಗಾಡಿಕಾರನ ಹುಡುಗಿಯೊಬ್ಬಳು ತೀರಿಕೊಂಡಳು ಇಬ್ಬರು ಅಸ್ವಸ್ಥ ಬಿದ್ದಿದ್ದಾರೆ. ಸದಾಶಿವಗಡದಲ್ಲಿಯೂ ಒಬ್ಬ ತೀರಿಕೊಂಡ ಸುದ್ದಿಯಿದೆ. ಗುಡಿಮಂದದ ತೋಟವು ಸದ್ಯಕ್ಕೆ ಕಡಿಯಲ್ಪಟ್ಟಿತು. ಅಲ್ಲಿ ಜನರಿಗೆ ಉಳಕೊಳ್ಳಲು ಅನುಕೂಲವಿತ್ತು, ಆದರೆ ಅಲ್ಲಿ ಪ್ರವೇಶಿಸದಂತೆ ಜಂಗಲ ಅಧಿಕಾರಿಗಳು ಬೇಲಿಯನ್ನು ಕಟ್ಟುತ್ತಿದ್ದಾರೆ ಭಾಪುರೆ! ಅಧಿಕಾರಿಗಳು ಈ ಸಮಯ ಈ ಕಡೆಗಿದ್ದರೆ ಒಳಿತಾಗುತ್ತಿತ್ತು. ಕಲೆಕ್ಟರರು ದೂರ ಸಂಚಾರಕ್ಕೆ ಹೋಗಿದ್ದಾರೆ. ಅಸಿಸ್ಟಂಟ ಕಲೆಕ್ಟರರಾದ ಮಿ। ವ್ಯಾಸರವರ ಮುಖ್ಯಸ್ಥಾ ಇಲ್ಲಿಲ್ಲ. ನಮ್ಮ ಜಿಲ್ಲೆಯ ಪ್ರವಾಸಿಂದಿಯಲ್ಲ ಚಂದಿಯಲ್ಲಿ ನಡೆಯಿತು. ಜಿಲ್ಲೆಯ ಗ್ರಾಮಾಧಿಕಾರಿಗಳಿಗೆ ಬಹಳ ತೊಂದರೆಯಾಯಿತು; ಉಳಕೊಳ್ಳಲಿಕ್ಕೆ ಅಲ್ಲಿ ಸ್ಥಳಾನುಕೂಲತೆಯಿಲ್ಲ. ಪೋಲಧಿಕಾರಿಗಳು ಹೀಗೆ ಬ್ಯಾಗಳ್ಳರಾಗಲಾಗದು. ಜನರ ಕುಂದು ಕೊರತೆ ಅವರ ಸಂಕಟಪರಂಪರೆಗಳನ್ನರಿತುಕೊಂಡು, ಅವನ್ನು ನಿವಾರಿಸಲು ಕಾಲಕಾಲಕ್ಕೆ ಉಪಾಯಯೋಜನೆ ಮಾಡಬೇಕು ಅಂಥ ಪ್ರಸಂಗಗಳಿಗೆ ಅಡಿಯಾಗುವದಕ್ಕಾಗಿಯೇ ದೊಡ್ಡ ದೊಡ್ಡ ಅಧಿಕಾರಿಗಳನ್ನು ನೇಮಿಸುತ್ತಾರೆ. ಪ್ಲೇಗಿನ ಮೂಲಕ ಖಚಿತರವಾಗಿ ಇಲ್ಲಿಯ ಎಲ್ಲ ಶಾಲೆಗಳು ಮುಚ್ಚಲ್ಪಟ್ಟಿವೆ. ಇಲ್ಲಿಯ ಕ್ರೈಸ್ತ ಬಾಂಧವರು ತಮ್ಮ ದೇವರ ಮೆರವಣಿಗೆಯನ್ನು ತೆಗೆದು ಪ್ಲೇಗು ಪಿಡುಗಿನ ನಿವಾರಣವಾಗಲು ಪ್ರಾರ್ಥಿಸಿಕೊಂಡರು ಸ್ಥಾನಿಕ ಸ್ವರಾಜ್ಯ ಸಂಸತ್ತಿನ ವಿಚಾರವು ಸದ್ಯಕ್ಕೆ ನಿಲ್ಲಿಸಲ್ಪಟ್ಟಿದೆ ಜಿಲ್ಹಾ ಬೋರ್ಡಿನ ಸಭೆಯು ಅಂಕೋಲೆಯಲ್ಲಿ ತಾ. ೨೦ ನೇಗೆ ಸೇರುವದಿದೆ.

ಮ್ಯುನಿಸಿಪಾಲಿಟಿಯ ಇಲೆಕ್ಷನು ಮುಗಿಯಿತು. ಪ್ಲೇಗಿನ ಗಡಿಬಿಡಿಯಲ್ಲಿ ಇಲೆಕ್ಷನಿನ ಗಡಿಬಿಡಿ ಕೇಳಬರಲಿಲ್ಲ. ಮಿ। ಕಾಟಸೋ, ಚಂದಾವರಕರ, ಕೊರ್ಡು ನ್ಯಾಕ, ಎಸ್. ಜಿ. ಕಾಬೇಕರ, ಶ್ರೀನಿವಾಸ ಭುಸ್ಕಳೆ, ವಾಲೀಕರ, ಪಟೇಲ, ರಾ। ಸಾ। ಬೋರಕರ, ಶ್ಯಾಣಿ ಇವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು ಎರಡು ವಾರ್ಡುಗಳಲ್ಲಿ ಹೋರಾಟವಿತ್ತು. ಅವುಗಳೊಳಗಿಂದ ಮಿ। ಬೈಂದೂರಕರ, ಸಿಂಧೇ, ಕೆನಲ್ ವಿಠ್ಠಲ ಶೇಟ, ಫ್ರಾಂಸಿಸ ಸಾವಂತ ಹಾಗು ಡಾ। ಪಾವಸ್ಕಾರರವರು ಆರಿಸಲ್ಪಟ್ಟರು. ಮಿ। ಕಾಟಸೋರವರು ಪುನಃ ಅಧ್ಯಕ್ಷರಾಗಿ ನೇಮಿಸಲ್ಪಡುವರಂತೆ! ಈ ತನಕ ಅವರು ಮ್ಯುನಿಸಿಪಾಲಿಟಿಯ ಕೆಲಸವನ್ನು ಬಹು ದಕ್ಷತೆಯಿಂದ ಎಲ್ಲ ಸಭಾಸದರ ಸಮ್ಮತಿಯಿಂದಲೂ ನಡಿಸಿ ಜನರ ಆದರಪಾತ್ರರಾಗಿದ್ದಾರೆ.

ಕಳೆದ ೫ ನೇ ತಾರೀಖಿಗೆ ಇಲ್ಲಿಯ ರಾ। ದ.ರಾ ರಿಬಾಯಜೀ ಬೋರಕರ ಇವರು ತಮ್ಮ ಹಿತ್ತಲಿನಲ್ಲಿ ಬಂದ ಒಂದು ಹುಲಿಯನ್ನು ಬಹು ಚಾತುರ್ಯದಿಂದ ಕೊಂದರು. ರಾತ್ರೆ ೧೦॥ ಘಂಟೆಗೆ ಕೊಂದರು. ಈ ಹುಲಿಯು ಇತ್ತ ಕಡೆ ಬಹಳ ಗದ್ದಲ ಮಾಡುತ್ತಿತ್ತು ಜನರು ಬಹಳವಾಗಿ ರಾ। ಬೋರಕರರವರನ್ನು ಹೊಗಳುತ್ತಾರೆ. ಹುಲಿಯು ೬ ಅಡಿ ಉದ್ದವಿತ್ತು.

ವೃತ್ತಸಾರ.

— ಅಖಿಲ ಭಾರತೀಯ ಕೊಂಗ್ರೆಸ 'ಕಮಿಟಿಯ ಕಾರ್ಯಕಾರಿ ಮಂಡಳವು ಸ್ವರಾಜ್ಯ ಘಟನೆಯ ಆಲೋಚನೆಯಲ್ಲಿ ತೊಡಗಿದೆ. ಶುಕ್ರವಾರಕ್ಕೆ ಮತ್ತೆ ಸಭೆಸೇರಿತ್ತು, ಶನಿವಾರಕ್ಕೆ ಪುನಃ ಸೇರುವದಿತ್ತು

— ಸರ್ ಜೋನ್ ಸ್ಯಾಯಮನ್‌ರವರು ಹಿಂದುಸ್ಥಾನಕ್ಕೆ ಬಂದು ಪ್ರಕಟಿಸಿದ ಪ್ರಕಟಣೆಯು ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಹೊರಡುವ ಮುಂಚೆಯೇ ಬರೆಯಲ್ಪಟ್ಟಿದ್ದಂತೆ!! ಇದು ನಿಜವಿದ್ದರೆ, ಭಾರತೀಯರಿಗೆ ವಂಚಿಸುವ ಬ್ರಿಟೀಶ ವ್ಯಾಪಾರಗಳನ್ನು ತೋರಿ, ಖಾತೆಯು ಖಾತ್ರಿಯಾಗುತ್ತದೆ. ಅಂಥ ಪ್ರಸಂಗದಲ್ಲಿ ಸ್ಯಾಯಮನ್‌ರವರ ಮೇಲೆ ಮಾಡಿದ ರೂ ನಂಬಿಗೆ ಇಡುವ ಬಗೆ ಹೇಗೆ?

ಸ್ಯಾಯಮನ್ ಕೂಟಕ್ಕೆ ಭರತ ಭೂಮಿಯಲ್ಲಿ ದೊರೆತ ಸಂಭಾವನೆ.

(೫ ನೇ ಪುಟದಿಂದ ಮುಂದರಿದಿದ್ದು.)

ಬಹಾಯಿತು. ವಿದ್ಯಾರ್ಥಿಗಳು ಪತಾಕೆಗಳಿಂದಲೂ, ನಿಷೇಧಾರ್ಥದ ಘೋಷದಿಂದಲೂ, ಪ್ರಕಟಣೆಗಳಿಂದಲೂ ಸ್ಯಾಯಮನ್ ಕೂಟಕ್ಕೆ ಹಿಂತಿರುಗಹೇಳಿದರು. ಪೋಲೀಸರು ಹಿಂತಿರುಗಹೇಳುವ ಪ್ರಕಟಣೆಗಳು ಸ್ಯಾಯಮನ್ ಕೂಟಕ್ಕೆ ಕಾಣಬಾರದೆಂದು, ಪಾಲಾಗಿ ನಿಂತುಕೊಂಡರು. ವಿದ್ಯಾರ್ಥಿಗಳು ಅವನ್ನು ಎರೆಸಿರಿಸಿ ಸ್ಯಾಯಮನ್‌ರವರಿಗೆ ತೋರಿಸಿದರು. ಅವನ್ನು ನೋಡಿ, ಸ್ಯಾಯಮನ್‌ಸಾಹೇಬರು ನಸುನಕ್ಕರಂತೆ!

ಸ್ಯಾಯಮನ್ ಕೂಟದವರು ಇಳಕೊಂಡಲ್ಲಿ ಕಾಯಿದೆ ಕೌನ್ಸಿಲಿನ ಸಭಾಸದರಿರುತ್ತಿದ್ದಾಗ್ಯೂ, ಎಲ್ಲರೂ ಹಿಂದೇ ಪಡಸಾಲೆಯಲ್ಲಿ ಊಟ ಕೊಳ್ಳುತ್ತಿದ್ದಾಗ್ಯೂ, ಶಿಷ್ಟಾಚಾರದ ಮಾತು-ಕಥೆಗಳು ಕೂಡ ನಡೆಯುವದಿಲ್ಲ. ಸ್ಯಾಯಮನ್ ಕೂಟಕ್ಕೆ ಭೆಟ್ಟಿಯಾಗಲು ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ ವಿಠ್ಠಲಭಾಯಿ ಪಟೇಲರು ಕೂಡ ಹೋಗುವದಿಲ್ಲವಂತೆ.

ಕರಾಚಿಯ ಯುರೋಪಿಯನ್‌ರಾದ ಮಿ। ಮಿಯಕ್‌ರವರು ಹರತಾಳಕ್ಕೆ ಪ್ರತಿಕಾರವಾಗಿ ಮೂರು ದಿನಗಳ ತನಕ ಹರತಾಳವನ್ನಾಚರಿಸಬೇಕಾಗಿ ಸೂಚಿಸಿದ್ದಾರೆ. ಹರತಾಳದ ದಿನ ತೆರೆದಿಟ್ಟ ಅಂಗಡಿಗಳಲ್ಲಿ ಈ ಮೂರು ದಿನಗಳ ತನಕ, ಹರತಾಳದ ವಿರೋಧಕರು ವ್ಯಾಪಾರ ಮಾಡಿ ಬೇಕಾದ ಸಾಮಾನುಗಳನ್ನು ಪೂರೈಸಿಕೊಳ್ಳಬೇಕು; ಹರತಾಳವನ್ನಾಚರಿಸಿದ ಅಂಗಡಿಗಳಿಗೆ ಹೋಗಬಾರದು.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत ह्यातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टॉवेल, चौक, लहान-मोठे पंचे, सीसपाट, चीलपाट, शर्टिंग--कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:-आमच्या कोणत्याहि मालावर घाऊक व्यापाऱ्यांस भरपूर कामिशन दिलें जाईल.

पत्ता:- मेसर्स गोविंद माधव शेणवि, फोवकार अँड सन्स.
पोस्ट— सुंकेरी (कारवार.)

ಮಹಾತ್ಮರ ಆತ್ಮಚರಿತ್ರ

(೩೭) ಗೋಖಲೇಯವರಿಗೆ ಭೆಟ್ಟಿ.

ದಕ್ಷಿಣ ಆಫ್ರಿಕೆಯೊಳಗಿನ ಅನೇಕ ಜ್ಞಾಪಕ ಸಂಗತಿಗಳನ್ನು ಈಗ ಬಿಟ್ಟು ನಾನು ಮುಂದಾಗಬೇಕು. ೧೯೧೪ ನೇ ಇಸ್ವಿಯಲ್ಲಿ ಸತ್ಯಾಗ್ರಹ ಸಂಗ್ರಾಮವು ಅಂತ್ಯವಾಯಿತು. ಆ ಸಮಯ ಗೋಖಲೆಯವರು ಲಂಡನ್ ಮಾರ್ಗವಾಗಿ ಸ್ವದೇಶಕ್ಕೆ ಮರಳಲು ನನಗೆ ತಿಳಿಸಿದರು. ಅದರಂತೆ ಜುಲೈ ತಿಂಗಳಿನಲ್ಲಿ ಸೌ॥ ಕಸ್ತೂರಬಾಯಿ ಹಾಗು ಕಾಲೆನಬ್ಯಾಕರವರೊಡನೆ ನಾನು ಇಂಗ್ಲಂಡಕ್ಕೆ ಹೊರಟೆನು.

ಸತ್ಯಾಗ್ರಹದ ಸಮಯ ೩ನೇ ವರ್ಗದಲ್ಲಿ ನಾನು ಪ್ರವಾಸ ಮಾಡಲಾರಂಭಿಸಿದ್ದೆ. ಈ ಪ್ರಯಾಣದಲ್ಲಿಯೂ ನಾನು ೩ನೇ ವರ್ಗದ ಟಿಕೀಟುಗಳನ್ನೇ ತೆಗೆದೆನು. ಈ ಬೋಟಿನ ಹಡಗದ ಮೂರನೇ ವರ್ಗದ ಸ್ಥಳ ... ಹಿಂದುಸ್ಥಾನದೊಳಗಿನ ಹಡಗ ... ಗಾಡಿಗಳೊಳಗಿನ ವ್ಯವಸ್ಥೆ ... ಹಿಂದುಸ್ಥಾನದಲ್ಲಿ ... ಕುಳಿತುಕೊಳ್ಳಲು ಸಹ ಸ್ಥಳ ಸಿಗುವದೇ ದುರ್ಲಭ, ಮಲಗುವ ಮಾತೇ ... ಹೊಲಸಂತು ಬಹಳವಿರುತ್ತದೆ. ಲಂಡನ್ನಿಗೆ ಹೋಗುವಾಗ ನಮಗೆ ಬೇಕಾದಷ್ಟು ಸ್ಥಳವಿತ್ತು. ... ಸ್ವಚ್ಛತೆಯಿತ್ತು. ಉಗಿಹಡಗದ ಕಂಪನಿಯವರು ನಮಗಾಗಿ ... ವ್ಯವಸ್ಥೆ ಮಾಡಿದ್ದರು. ಕಂಪನಿಯವರು ನಮಗೆ ... ಒಳ್ಳೇ ಸ್ಥಳವನ್ನೇ ಕಾಯ್ದಿಟ್ಟಿದ್ದರು. ನಾವು ಫಲಾಹಾರಿಗಳು. ಆದ್ದರಿಂದ ನಮಗೆ ಹಣ್ಣು-ಹಂಪಲಗಳನ್ನು ಒದಗಿಸಬೇಕೆಂದು ... ಮಾನ್ಯನಾಗಿ ... ವರ್ಗದ ಪ್ರಯಾಣಿಕರಿಗೆ ಹಣ್ಣು-ಹಂಪಲ ದೊರೆಯುವದು ದುರ್ಲಭವು. ಇದರಿಂದ ಅನುಕೂಲತೆಗಳ ... ೧೮ ದಿನಗಳ ಪ್ರವಾಸವು ಬಹಳ ಸುಖದಾಯಕ ವಾಯಿತು.

ಈ ಪ್ರಯಾಣದ ಕೆಲವು ಸಂಗತಿಗಳನ್ನು ಹೇಳತಕ್ಕದ್ದು ಯೋಗ್ಯವು. ಕಾಲೆನ್‌ಬ್ಯಾಕರವರಿಗೆ ದುರ್ಬೀನುಗಳ ಮೇಲೆ ಪ್ರೀತಿ ಬಹಳ. ಅವರು ಒಂದೆರಡು ದುರ್ಬೀನುಗಳನ್ನು ಬಹಳ ಹಣ ಕೊಟ್ಟು ಕೊಂಡುಕೊಂಡಿದ್ದರು. ಒಂದರ ಕುರಿತು ನಿತ್ಯವೂ ನಮ್ಮೊಳಗೆ ವಾದ ವಿವಾದ ನಡೆಯುತ್ತಿತ್ತು. "ನಾವು ಸಾಮಾನ್ಯ ಜೀವನ ಕ್ರಮ ನಡೆಸಲು ವ್ರತವನ್ನು ಕೈಕೊಂಡಿದ್ದೇವೆ. ಇಂಥ ದುರ್ಬೀನುಗಳನ್ನು ಇಟ್ಟುಕೊಳ್ಳುವದರಿಂದ ಅದಕ್ಕೆ ಬಾಧೆ ಬರುವದಿಲ್ಲವೆ?" ಎಂದು ನಾನು ... ಕೇಳುತ್ತಿದ್ದೆನು. ಒಂದು ದಿನ ನಾವಿಬ್ಬರು ... ಮೇಲಿನ ನಮ್ಮ ಕೋಣೆಯ ಕಿಡಕಿಯ ಹತ್ತಿರ ನಿಂತುಕೊಂಡಿದ್ದೆವು. ಅಲ್ಲಿ ಈ ಕುರಿತು ದೊಡ್ಡದೊಂದು ವಾದವಾಯಿತು.

ನಾನು ನುಡಿದದ್ದೇನಂದರೆ — "ನಮ್ಮೀರ್ವರೊಳಗೆ ವಾದವನ್ನುಂಟುಮಾಡಲು ಈ ವಸ್ತುವನ್ನು ಇಟ್ಟುಕೊಳ್ಳುವದಕ್ಕಿಂತ ಇದನ್ನು ಸಮುದ್ರದೊಳಗೆ ಒಗೆದು, ನೀವು ಏಕೆ ಈ ವಾದ ವಿಷಯವನ್ನು ಅಂತ್ಯಗೊಳಿಸಬಾರದು?"

ಕಾಲೆನ್‌ಬ್ಯಾಕರವರು ನುಡಿದದ್ದೇನಂದರೆ — "ಆಗಬಹುದು, ಆ ಹೊಲಸು ವಸ್ತುವನ್ನು ಒಗೆದು ಬಿಡಿರಿ."

"ಹೇಳಿದಂತೆ ನಾನು ಒಗೆಯುವೆನು" ಎಂದು ನಾನು ನುಡಿದನು.

ತಟ್ಟನೆ "ನಾನು ಖರೇ ಹೇಳಿದ್ದು" ಎಂದು ಕಾಲೆನ್‌ಬ್ಯಾಕರವರು ನುಡಿದರು.

ಕೂಡಲೆ, ಅದನ್ನು ನಾನು ಸಮುದ್ರದೊಳಗೆ ಒಗೆದೆನು. ಅದರ ಬೆಲೆ ೭ ಪವಂಡಿತ್ತು. ಬೆಲೆಯು ಅಷ್ಟು ಮಹತ್ವದ್ದಿಲ್ಲ, ಆದರೆ ಕಾಲೆನ್‌ಬ್ಯಾಕರವರಿಗೆ ಅದರ ಮೇಲಿದ್ದ ಪ್ರೀತಿಯೇ ಅದಕ್ಕಿಂತ ಹೆಚ್ಚಿನ ಬೆಲೆಯುಳ್ಳದ್ದಾಗಿತ್ತು. ಆದರೆ, ಒಮ್ಮೆ ಅದನ್ನು ಅವರು ತ್ಯಜಿಸಿದ ಬಳಿಕ, ಅಂದಿನಿಂದ ಅವರಿಗೆ ಆ ಬಗ್ಗೆ ಪಶ್ಚಾತ್ತಾಪವಾಗಲಿಲ್ಲ. ಕಾಲೆನ್‌ಬ್ಯಾಕ ಹಾಗೂ ನನ್ನೊಳಗಿನ ಅನೇಕ ವಿವಾದಾತ್ಮಕ ಸಂಗತಿಗಳಲ್ಲಿ ಇದೊಂದು ಮಾದರಿಯದಾಗಿದೆ. ಈ ಪ್ರಕಾರ ನಾವೀರ್ವರೂ ದಿನಾ ಹೊಸ ಹೊಸ ಸಂಗತಿಗಳನ್ನು ಕಲಿಯುತ್ತಿದ್ದೆವು. ಇಬ್ಬರೂ ಸತ್ಯದ ಮಾರ್ಗವನ್ನು ಅನುಸರಿಸಲು ಪ್ರಯತ್ನಪಡುತ್ತಿದ್ದರೇ. ಸತ್ಯಸಾಧನ ಮಾಡುವಾಗ ಸಿಟ್ಟು-ಸ್ವಾರ್ಥ-ದ್ವೇಷಾದಿ ವಿಕಾರಗಳನ್ನು ಸಹಜವಾಗಿಯೇ ನಾವು ತ್ಯಜಿಸಬೇಕಾಗುತ್ತದೆ. ಇಲ್ಲದಿದ್ದರೆ ಸತ್ಯವನ್ನು ಸಾಧಿಸುವದು ಅಶಕ್ಯ ವಾಗುವದು. ವಿಕಾರವಶನಾಗುವ ಮನುಷ್ಯನ ಹೇತು ಶುದ್ಧವಿದ್ದರೂ, ಅವನು ಸತ್ಯವನ್ನು ಪಡೆಯಲಾರನು. ಸತ್ಯ ... ಆತನಿಗೆ ಸತ್ಯ ದೊರೆಯದು. ... ಸಂಪೂರ್ಣವಾಗಿ ನೆರವೇರಿತೆಂದರೆ ... ರಾಗ-ದ್ವೇಷ, ಸುಖ-ದುಃಖ ... ದ್ವಂದ್ವಗಳೊಳಗಿಂದ ಮುಕ್ತನಾಗುವನೆಂದು ತಿಳಿಯುವದು.

ನಾನು ಪ್ರಯಾಣಕ್ಕೆ ಹೊರಟ ಕೆಲವು ದಿನಗಳಲ್ಲಿ ... ಉಪವಾಸದಿಂದ ... ಆಗ ನನಗೆ ... ಶಕ್ತಿ ... ವ್ಯಾಯಾಮವನ್ನು ... [illegible] ... ಹಸಿವೆಯು ... ತಿಂಡಿಯನ್ನು ಜೀರ್ಣಿಸಲಾರದಾದೆನು ... ವ್ಯಾಯಾಮದಿಂದ ... [illegible] ... ಅಲ್ಲಿ ... ಅವರು ... ಆದರೆ ನನ್ನ ... ಕೆಲವು ದಿನಗಳ ... [illegible]

... [illegible] ... ಪಾಡಿದನು ... [illegible] ... ಜಾಗ್ರತೆ ... [illegible]

... [illegible] ... ಜಲಯಾನ [illegible]

ಗಳೊಳಗಿಂದ ಹಡಗವನ್ನು ಸುರಕ್ಷಿತವಾಗಿ ನಡಿಸಿಕೊಂಡು ಹೋಗುವದು ಕಠಿಣವಾಗಿತ್ತು. ಅದರಿಂದ ಸೌಥಾಂಪ್ಟನ್ನಿಕ್ಕೆ ಮುಟ್ಟಲು ಸುಮಾರು ೨ ದಿನಗಳು ಹಿಡಿದವು. ಮಹಾಯುದ್ಧವು ಅಗಸ್ಟ ೪ನೇ ತಾರೀಖಿಗೆ ಪ್ರಾರಂಭವಾಯಿತು. ನಾವು ಲಂಡನಿಗೆ ೬ನೇ ತಾರೀಖಿಗೆ ತಲ್ಪಿದೆವು

ಗಡಿ-ಶಾಂತಿಯೋ-ಹದ್ದು ಕಾಗೆಗಳ ಶಾಂತಿಯೋ ?

(೩ ನೇ ಪಾನದಿಂದ ಮುಂದರಿದದ್ದು.)

ರುತ್ತದೆಂಬುದಕ್ಕೆ ಏನೂ ಸಂದೇಹವಿಲ್ಲ. ಯಾಕಂದರೆ ಗಡಿ-ಶಾಂತಿಯಿದ್ದ ಮರುದಿವಸವೇ ಅಲ್ಲಿಗೆ ಹೋಗಿ ನೋಡಲಾಗಿ, ಶಾಸ್ತ್ರಕ್ಕಾಗಿ ಇಟ್ಟ ಕೆಲವು ಬುಟ್ಟಿಗಳು, ಸಹ ಹಾಗೆಯೇ ಇದ್ದವಲ್ಲದೆ, ಅನ್ನದ ರಾಶಿಯನ್ನೂ, ಅದರ ಮೇಲಿನ ಕಡಿದ ಕಾಯಿ[illegible]ಯನ್ನೂ ಭೂತ-ಪಿಶಾಚಿಗಳ ಬದಲಾಗಿ ಆರೋಗ್ಯಖಾ[illegible] (*Sanitary Department*) ಹದ್ದು-ಕಾಗೆಗಳೇ ತಿಂದು ತೀರಿಸಲು ತೊಡಗಿರುವದು ಕಂಡುಬಂತು.

ಇನ್ನು ಈ ಕ್ರೂರವಾದ ಅನಾಗರಿಕ ಆಚರಣೆಯಿಂದಾದ ಲೋಕಕಲ್ಯಾಣವನ್ನು ಕೇಳಿರಿ. ಗಡಿಶಾಂತಿಯಾಗಿ ಈಗ ಸ್ವಲ್ಪ ಹೆಚ್ಚು-ಕಡಿಮೆ ೧ ತಿಂಗಳಾಗಿರಬಹುದು. ಇಷ್ಟರಲ್ಲಿಯೇ ಪ್ಲೇಗು, ಮೈಲಿ ಮೊದಲಾದ ರೋಗಗಳಿಂದಾದ ಮರಣ ಸಂಖ್ಯೆಯು ಎಂಟ್ಟು ಹತ್ತರಷ್ಟು. ಮತ್ತು ಇದರ ಮೂಲದಿಂದ ಈ ಪರಮ ಪವಿತ್ರವಾದ ಗಡಿಶಾಂತಿಯಾಗುವ ದಕ್ಷಿಣ ದಿಕ್ಕಿನ ಪುರದ ಜನರೆಷ್ಟು ಸಾವು ಇರುತ್ತದೆಂಬುದು ಮುನಿಸಿಪಾಲಿಟಿಯ ಲೆಕ್ಕದ ಮೇಲಿಂದ ಖಾತ್ರಿಯಾಗುತ್ತದೆ. ಇದ್ದರಿಂದ ವಾಚಕರೇ, ಇದಕ್ಕೆ ಗಡಿ-ಶಾಂತಿ ಅನ್ನಬೇಕೋ, ಹದ್ದು-ಕಾಗೆಗಳ ಶಾಂತಿ ಎನ್ನಬೇಕೋ, ನೀವೇ ಹೇಳಿರಿ !!

ಒಟ್ಟಿನಲ್ಲಿ "ದಯಾ ಧರ್ಮದ ಮೂಲ ಹೌ" ಎಂದರೆ ದಯೆಯೇ ಧರ್ಮದ ಮೂಲವಾಗಿದ್ದು, ಗಡಿಶಾಂತಿ ಎಂಬ ನಿರ್ದಯ ಮತ್ತು ಅಧರ್ಮ ಕೃತ್ಯದಿಂದ ಲೋಕ ಕಲ್ಯಾಣವೆಂತು ಆಗಬಲ್ಲದು. ಇದಕ್ಕೆ ತನು-ಮನ-ಧನಗಳಿಂದ ಸಹಾಯ ಮಾಡತಕ್ಕ ಮಹಾಮಹಿಮರು, ನಿರಪರಾಧಿಯಾದ ಮೂಕ ಪ್ರಾಣಿಗಳ ಕೊಲೆಯಿಂದುಂಟಾದ ಪಾಪದ ಪಾಲನ್ನು ಮಾತ್ರ ಪಡೆದಾರೆಂಬುದಕ್ಕೆ ಸಂದೇಹವಿಲ್ಲ. ಸಾರಾಂಶವೇನಂದರೆ, ನಮ್ಮ ಈ ಅಜ್ಞಾನಮೂಲಕವಾದ ಅಸಾಧ್ಯ ಕೃತ್ಯಗಳನ್ನು ಕಂಡು, ಸುಧಾರಿಸಿದ ರಾಷ್ಟ್ರಗಳು ನಗುತ್ತಿರುವಷ್ಟು ಇದ್ದರಿಂದ ಈ ಶಾಸ್ತ್ರಾಸ್ತ್ರವನ್ನೂ, ಅದರ ಕೃತ್ಯ ... ಕಾರ್ಯಕ್ಕೆ ಪ್ರತ್ಯಕ್ಷ ರೀತಿಯಿಂದ ಸಹಾಯ ಮಾಡಿದವರು ಈಗಾದರೂ ಅನುಭವ ಪಡೆದು, ಇನ್ನು ಮೇಲಾದರೂ ಇಂಥ ನೀಚ ಕಾರ್ಯಗಳು ತಪ್ಪಿಸುವದು ಅವರ ಕರ್ತವ್ಯ ... ವಿಹಿತವಲ್ಲವೇ ?



ಏಜಂಟರು ಬೇಕು! ಏಜಂಟರು ಬೇಕು!!

ಸ್ವಸ್ತಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಕುನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ದೊಡ್ಡ ಟೇಬಲುಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತವೆ

ಸಮ್ಮ ವಿಳಾಸ:—

ದಿ ನಾರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಧಾರವಾಡ.

ಕೊಳೆ ರೋಗಕ್ಕಾಗಿ.

ಸಿದ್ದಾಪುರದಿಂದ ಶ್ರೀ ನಾಗೇಶ ಗಣೇಶ ಹೆಗಡೆ ದೊಡ್ಮನೆ, ಇವರು ತಾ ೨೯-೧-೨೮ ನೇಗೆ ಬರೆಯುವದೇನಂದರೆ:—

ನಮ್ಮ ಅಡಿಕೆ ತೋಟಗಳಿಗೆ ತಗಲುವ ಕೊಳೆ ರೋಗದಿಂದ ನಮ್ಮ ಸ್ಥಿತಿಯು ಕಂಗೆಟ್ಟಿದೆ. ಬಹು ದಿನಗಳಿಂದ ನಾವು ನಷ್ಟಹೊಟ್ಟು ದೀನರಾಗಿದ್ದೇವೆ. ಮೈಸೂರು ಮಹಾರಾಜರ ಸರಕಾರವು ತಮ್ಮ ಸಂಸ್ಥಾನದಲ್ಲಿ ರೈತರಿಗೊದಗುವ ಕಷ್ಟಗಳನ್ನು ಅರಿತುಕೊಂಡು, ಅದನ್ನು ಪರಿಹರಿಸುವದಕ್ಕಾಗಿ ಬಹು ಪ್ರಯತ್ನಿಸಿದರಿಂದ "ಬೋರ್ಡೋ ಮಿಕ್ಶ್ಚರ್" ಎಂಬ ಔಷಧಿಯನ್ನು ತಯಾರಿಸಿರುತ್ತದೆ. ಈಗ ೨೦-೨೨ ವರ್ಷಗಳಿಂದ ಮೈಸೂರು ಸಂಸ್ಥಾನದಲ್ಲಿ ಈ ಔಷಧಿಯಿಂದ ಕೊಳೆಯು ಪ್ರತಿಕಾರವಾಗುತ್ತಿದೆ. ರೈತರಿಗೆ ಈ ಕಾರ್ಯಕ್ಕೆ ಅವಶ್ಯವುಳ್ಳ ಔಷಧಿಗಳು ಸಹ ಮೈಸೂರು ಸರಕಾರದ ಕಡೆಯಿಂದ ಪೂರೈಸಲ್ಪಡುತ್ತವೆ. ಸುಮಾರು ವರುಷಗಳಿಂದ ನಮ್ಮಲ್ಲಿಯು ಬೇಸಾಯ ಬುತೆಯುವದು ಉಬದೇ ಮಾಡುತ್ತಿದ್ದರೆ. ಅವುಗಳ ವಿಷಯು ಅಲ್ಲದ ಸಂಶಯಗಳನ್ನು ನಾವು ಎಣಿಸಿಕೊಂಡು, ಅಲ್ಪಾಂಶದಿಂದ ಸಹ ಪ್ರಯೋಜನವಹೆಯುವದಿಲ್ಲ. ಔಷಧ ಪ್ರಯೋಗದಿಂದ ಮರಗಳೇ ಸಾಯ್ದು ಹೋಗುತ್ತವೆ; ಬುಳ್ಳಿಗಳು ಸಂದುಗೆರೆಯುತ್ತವೆ, ಮುಂತಾದ ಕಲ್ಪನೆಗಳು ನಮ್ಮಲ್ಲಿ ರೂಢವಾಗಿವೆ. ಇದನ್ನು ಪರಿಹರಿಸುವದಕ್ಕಾಗಿ ಬೇಸಾಯ ಖಾತೆಯ ಡೈರೆಕ್ಟರರಾದ, ಫಿಲ್ಡುಮನ್‌ರೂ, ನಮ್ಮ ಜಿಲ್ಹೆಯ, ಅಂದರೆ, ಹೊನ್ನಾವರ-ಸಿರ್ಸಿ-ಸಿದ್ದಾಪುರ ಕಡೆಯ ಕೆಲವು ಪ್ರಮುಖರನ್ನು ಮೈಸೂರು ಸಂಸ್ಥಾನದ ಸಾಗರ ತಾಲೂಕಿಗೆ ಕರೆದೊಯ್ದರು. ಸಿದ್ದಾಪುರ ತಾಲೂಕಿನ ಕಾನುಲೇದಾರರೂ ಬೆಟ್ಟದ ಒತ್ತರಸೀಮರರೂ, ತಾಲೂಕ ಲೋಕಲ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಗೋಪಾಳರಾವ ದೇವರಾದರೂ ಅತ್ತ ಹೋಗಿದ್ದರು; ನಾನೂ ಹೋಗಿದ್ದೆ. ಸಾಗರ ತಾಲೂಕಿನಲ್ಲಿ ೧೫-೨೦ ವರ್ಷಗಳಿಂದ ಕೊಳೆ ರೋಗದ ಔಷಧಿಯು ಪ್ರಯೋಗ ಮಾಡಿದ ೧೫ ಭೀಮನಕೋಣೆ ವೆಂಕಟಗಿರಿಯಪ್ಪನವರ ತೋಟವನ್ನು ನಾವು ನೋಡಿದೆವು, ಇತರ ಬೆಳೆಗಳಿಂದ ಬೇಸಾಯದ ಹೊಲವನ್ನೂ ನೋಡಿದೆವು. ಅವರ ತೋಟದಿಂದ ನಾನು ತೋಟಗಾರಿಗೆ ಜಾಹೀರ ಮಾಡಿಕೊಳ್ಳುವದೇನಂದರೆ:— ನಮ್ಮ ಸಂಶಯಗಳೆಲ್ಲ ನಿರಾಧಾರವಾದವುಗಳು, ಕೊಳೆ ಔಷಧಿಯ ಪ್ರಯೋಗದಿಂದ ಮರಗಳಿಗಾಗಲಿ, ಶಿಂಗಳಿಗಾಗಲಿ ಎಳ್ಳಷ್ಟು ಅಪಾಯವಿಲ್ಲ. ಅಪಾಯವಾದದ್ದು ನಮಗೆ ಕಾಣಲಿಲ್ಲ. ಅಡಿಕೆ ಮರಗಳೂ, ಮೆಣಸಿನ ಬಳ್ಳಿಗಳೂ, ತೋಟದೊಳಗಿನ ಇತರ ಬೆಳೆಗಳೂ ಸುರಕ್ಷಿತವಾಗಿ ಬೆಳೆಯುತ್ತವೆ, ಯಾವದಕ್ಕೂ ಅಕ್ಷೇಮವಾಗುವದಿಲ್ಲ. ರಾ. ಭೀಮನಕೋಣೆ ವೆಂಕಟಗಿರಿಯಪ್ಪನವರೂ, ಮೈಸೂರು-ಮುಂಬೈ ಸರಕಾರದ ಅಧಿಕಾರಿಗಳೂ, ಮೈಸೂರು ವ್ಯವಸಾಯ ಇಲಾಖೆಯ ಫಿಲ್ಡುಮನ್‌ರೂ ಸಮಾಧಾನವಾಗಿಯೂ, ಸಪ್ರಮಾಣವಾಗಿಯೂ ನಮಗೆ ತಿಳಿಸಿಕೊಟ್ಟರು. "ಬೋರ್ಡೋ ಮಿಕ್ಶ್ಚರ್"ವನ್ನು ಉಪಯೋಗಿಸಿ ತೋಟಗಳಿಗೊದಗುವ ಕೊಳೆಯ ಹಾನಿಯನ್ನು ನಿವಾರಿಸಿಕೊಳ್ಳಬೇಕಾಗಿ ಸ್ನೇಹಭಾವದಿಂದ ಅವರು ವಿನ್ನೈಸಿಕೊಂಡರು. ಇನ್ನು ಈ ವಿಷಯ ವಿಳಂಬವಾಗದು. "ಬೋರ್ಡೋ ಮಿಕ್ಶ್ಚರು" ಕೊಳೆ ರೋಗದ ಮೇಲೆ ತಯಾರಿಸಿದ ಸಿದ್ಧೌಷಧವೆಂದು ಎಲ್ಲರೂ ಎಣಿಸಿ, ಪ್ರಯೋಜನ ಪಡೆಯಬೇಕಾಗಿ ನಾನು ವಿನ್ನೈಸಿಕೊಳ್ಳುತ್ತೇನೆ.

— ಅಮೇರಿಕೆಯೊಳಗಿನ ಕೋಟ್ಯಾಧೀಶರ ಮಗಳಾಗಿ ಸ್ವತಃ ಕೋಟ್ಯಾಧೀಶಳಾದ ಕುಮಾರಿ ಬಿಬಿಲ್ ವೇಯರ ಎಂಬವಳು ಅಲ್ಲಿ ಒಬ್ಬ ಕಾರಕೂನನ ಕೈ ಹಿಡಿದು ಪಲಾಯನ ಮಾಡಿದಳು. ಪುಣ್ಯವಂತನಿಗೆ ಮರಣ ಸುಖ!

— ಚೀನದೊಳಗಿನ ಕಾಂಟುಂಗ ಪ್ರದೇಶದಲ್ಲಿ ಭಯಂಕರವಾದ ಬರ ಬಿದ್ದಿದೆ. ಜನರು ಆಹಾರ ಪದಾರ್ಥಗಳಿಗಾಗಿ ಮಕ್ಕಳನ್ನು ಮಾರುತ್ತಿದ್ದಾರೆ.

— ಜಾವಾ ದ್ವೀಪದೊಳಗಿನ ಜ್ವಾಲಾಮುಖಿಯು ಪುನಃ ಉರಿಯುವ ಲಕ್ಷಣಗಳಾಗಿವೆ. ಜನರು ಭೀತಿಗೊಂಡು ಪಲಾಯನ ಮಾಡಿದರು. ೪೬ ವರ್ಷ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸವಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯೂ ಹೋಗುವದು ೬೦-೭೦ ವರ್ಷದ ಮುದುಕರ ಶಾವಘಟವು ತರುಣರಂತೆ ಬಲಾಢ್ಯವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಮಾಡಲಾರದೆ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ಕೋಪಿತವಾದ ಶರೀರವು ನಿರೋಗಿಯಾಗುವದು. ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು. ಏಳನೇ ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೫ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಝನಿಗೆ ೧೩-೦-೦

ಪತ್ತೇವಾರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗುವದರಿಂದುಂಟಾದ ರೋಗಗಳಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯವಿಫಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕ್ಷೀಣದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಕುತು ಸಂತತಿ ಆಗಲಿಕ್ಕೆ ಸಹಾಯಕವ ಆಗುತ್ತದೆ. ಶಕ್ತಿಸುಖ ಬಯಸುವಂಥವರು ಹಿಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಜಾ) ಪನಸ್ಪತಿಗಳು ಮತು ಭಸ್ಮಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಕೊಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲೆಯು ೧ ಸಲ, ರಾತ್ರಿಯ ಭೋಜನವಾದ ನಂತರ ೨ ತೊಲೆಯು ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀಸಂಗವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೪೨ ತೊಲೆಯ ಒಂದು ಡಬ್ಬಿಗೆ ೫॥ ರೂ, ೩ ಡಬ್ಬಿಗೆ ೧೫। ರೂ. ೬ ಡಬ್ಬಿಗೆ ೨೭ ರೂ, ೧೨ ಡಬಿಗೆ ೫೦ ರೂ.; ವಿ. ಪಿ. ಖರ್ಚು ಬೇರೆ. ೩ ಡಬಿ ಗಳನು ತಕ್ಕೊಂಡರೆ ನಿಮ್ಮ ಮನಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- एक रेसलास किंमत १॥ रुपये.

रामबाण औषध

सर्दि बाढविणारें
भूक वाढविणारें
शौच्यास साफ करणारें
झोपें आणणारें
शक्ति देणारें
तेजस्वीपणा आणणारें

विन्यास शीचकर

पेचाटलाग मागवा,

झंडुफार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणी कंपनी, तीर्थहळ्ळी

सिर्सि एजंट एस. एल. घाकप्पा आणि सन्स

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯವರ

ಸುಗಂಧಿ ನೃಶದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾದಿಗಳು ಯಾವವೆಂದರೆ— ಪಿನಶಿ, ಒಂಟಿತಲೆಸೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾದಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಹೇಳಲ್ಪಟ್ಟ ರೋಗ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಪಕ ಶಕ್ತಿಯನ್ನು ಹೆಚ್ಚು ಮಾಡುವ, ಮೂರು ಜಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ... ಮಿಶ್ರಮಾಡಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ... ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ ಮಾದರಿ ... ಕಾಗದಿಂದ

ಬಡಿ ... ದಕ್ಕೆ ಕ್ರಯ ರೂ ೦-೪-೦, ... ಡಜನ್ ೧ಕ್ಕೆ ರೂ ೩-೦-೦ ವ್ಹಿ ಪಿ. ೦-೮-೦ ದಯಮಾಡಿ ... ಅಪ್ಪಣೆ ... ರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ ... ಕಾರ್ಪರೇಷನ್ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಕಬ್ಬಿನ ಗಾಣ.

ಶೇಕಡಾ ೬೮ ರಿಂದ ೭೦ ರ ವರೆಗೆ ರಸ ಕೊಡತಕ್ಕದು



ಗಂಟೆಯೊಂದಕ್ಕೆ ೧೧೦೦ ಪೌಂಡ ಕಬ್ಬನ್ನು ಹಿಂಡುವದು.

ಕಿಂಮತ್ತು ... ರೂ. ಕೂಡ್ಲೆ ಡಿಲಿವ್ಹರಿ

ಶಿರಸಿಯಲ್ಲಿ ಎಸ್. ಎಲ್. ... ಮತ್ತು ಬ್ರದರ್ಸ್, ಇವರಲ್ಲಿ ಸಿಗುವದು

ರಚನೆ— ... ಭಾಗಗಳು ಅರ್ಧ ಉಕ್ಕಿನಿಂದ ... ಮಾತು ... ತಯಾರಾಗಿರುತ್ತವೆ ಕಣೆಗಳು ... ಇಂಚು ಆಕ್ಸಲ್ ... ಚಕ್ರ, ... ರೋಲರ ಇವು ಬೇರೆ ಬೇರೆ ಇರುತ್ತವೆ ಬೇಅರಿಂಗ ... ಇರುತ್ತವೆ ಎಂಣೆಯು ಸತತವಾಗಿ ನಿಲ್ಲುವದಕ್ಕೆ ಏರ್ಪಾಡು ಮಾಡಿ ... ಸುಧಾರಣೆ ಮಾಡಿರುತ್ತವೆ

ವೈಶಿಷ್ಟ್ಯ— ತಜೆಗರು ತ್ರಿಕೋಣಾಕೃತಿಯಲ್ಲಿ ... ಕಬ್ಬು ಅಡಕಿನಲ್ಲಿ ಸಿಕ್ಕು ... ಹಿಂದೆ ಹಿಪ್ಪೆಯಾಗಿ ಬರುವದು ಮಿಕ್ಕ ಗಾಣಗಳಂತೆ ... ಸಾಗುವದು ... ಎತ್ತುಗಳು ಬೇಕು

ಅಭಿಪ್ರಾಯ— "ನಿಮ್ಮ ಗಾಣದಿಂದ ... ಯಲ್ಲಿ ವ್ಯರ್ಥ ಹೋಗುವ ರಸ ... ಬೆಲ್ಲ, ಅಂದರೆ ೧೦ ರೂ ಲಾಭವಾಯಿತು ... ದಿವಸ ... ೨೪೦ ರೂ ಲಾಭವಾಯಿತೆಂದು ತಿಳಿಸಲು ಆನಂದವಾಗುತ್ತದೆ ... ರಾಜನಗೌಡಾ ಪಾಟೀಲ, ... ಬೆಳಗಾಂವ"

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಜಿಂದ ಸ್ಥಾಪನೆಯಲ್ಲಿ ಅತ್ಯಂತ ಅಗ್ರಗಣ್ಯ

ನೆಶನಲ್ ಇನ್ಶ್ಯೂರನ್ಸ ಕಂಪೆನಿ, (ಲಿಮಿಟೆಡ್)

ಎಂಬ

ಜೀವ ವಿಮೆಯ ಮಂಡಲಿ.

ಸಂಗ್ರಹವು ಒಂದು ಕೋಟಿಯನ್ನು ಮೀರಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 8 40,014 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ ... ರೂಪಾಯಿಯಂತೆಯೂ, ಪೂರ್ತಿ ಜೀವ ಪಿಮೆ ... ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ... ಬೋನಸ ಕೊಟ್ಟಿರುವವು

ಹೊರಗಡೆ 1000 ರೂಪಾಯಿಗಳ ಪಿಮೆ ... ಕಂತು ಕೊಡುವಿರೋ ಅದೇ ಕಂತಿನ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ... ನ್ನು ಪಡೆಯಿರಿ ನಮ್ಮ ದರವು ... ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - P. D Churi,

ಬ್ರಾಂಚ ಸೆಕ್ರೆಟರಿ, ಶಿರಾಳಕೊಪ್ಪ, ವಿಕ್ಟೋರಿಯಾ ಬಿಲ್ಡಿಂಗ, ಹುಬ್ಬಳ್ಳಿ.

Branch Secretary
Alice building
Hornby Road,
BOMBAY

S U. Narayanacharya & CO
Chaukamba, BENARES CITY,



ನಮ್ಮಲ್ಲಿ ಎಲ್ಲ ತರದ ರೇಷ್ಮೆ ಜರತಾರಿ ... ಶಲ್ಲೆ, ಜರಿ ಸೀರೆ, ಶಾಲ್ಕೆ ... ಶಾಲು, ... ರುದ್ರಾಕ್ಷಿ ಕಸ್ತೂರಿ ... ಲಿಂಗಗಳೂ ಪ್ರತಿಮಗಳು ಮೊದಲಾದವುಗಳು ... ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾಗುವದು.

ವಿಳಾಸ— ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.



ತಲೆನೋವು, ಬೆನ್ನುನೋವು ಸಂಧಿವಾತ, ಚಳಿ, ... ಮುಂತಾದ ಎಲ್ಲಾ ತರದ ನೋವುಗಳ ... ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು ... ಯಾರೂ ತಿರಸ್ಕರಿಸಲಾಗದು ಚರ್ಮ ... ದೊರೆಯುವದಿಲ್ಲ ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ... ನೋವುಗಳನ್ನು ಕಾಪಾಡಬಹುದು, ಬೆಲೆ ರೂ ೦—೧೦—೦

ಎಲ್ಲ ಔಷಧಿಯಂಗಡಿಯಲ್ಲಿಯೂ ಸಿಗುತ್ತದೆ ಅಥವಾ ಅಮೃತಾಂಜನ ಡಿಪ್ಪೊ, ಮುಂಬಯಿ ಮತ್ತು ಮದ್ರಾಸ

MONDAY, FEBRUARY 20TH, 19

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೯

ಪತ್ರದ ವರ್ಗಣಿ

ಕುಮುಟೆಯಲ್ಲಿ ಆಗಾವ್
ರೂಪಾಯಿ 2–4–0.
ಮನೆಯಾರ್ಡರಿಯಿಂದ
ರೂ. 3–0–0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3–2–0.
ಬಿಡಿ ಸಂಚಿಕೆಗೆ 0–1–0

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೨ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1–0.
ಆ ಮುಂದ್ರ ಪ್ರತಿಸಾಲಿಗೆ 0–2–0.
ಹೆಚ್ಚಿನ ಸಾಲು ಎಷ್ಟು ಬೇಕಾಗಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಹು ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರ್ಪು ಪಡಿಸಲ್ಪಡುವದು.

परपरिहितकर्ता ... लोके ... ।
... महति विरोधे वर्तमाने समाने ... कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—(ಕುಮುಟಾ— ಕಾನಡಾವೃತ್ತ, ಸೋಮವಾರ. ತಾರೀಖು ೨೦ ಮಹೆ ಫೇಬ್ರುವರಿ ಸನ್ ೧೯೩೦ನೇ ಇಸವಿ.)—

ಹೊಸ ಅಂಗಡಿ! ಹೊಸ ಮ್ಹಾಲು!!

ಕುಮುಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟಂಟ ಔಷಧಗಳು, ಕಾಜಿನ ಸಾಮಾನು, ಮುಂತಾದ ಎಲ್ಲ ತರಹದ ಮ್ಹಾಲು ಬಲು ಅಗ್ಗವಾಗಿ ದೊರೆಯುತ್ತವೆ!

ಚಿಲ್ಲರ ವ್ಯಾಪಾರಿಗಳಿಗೂ ಮುನಾಫೆ ಸಿಗುವಂತೆ ಸ್ಪೇಶಲ್ ರೋಖ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮ್ಹಾಲು ಪಡೆಯಲು ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮುಟಾ. (ಉ ಕನ್ನಡ)

ಉಚಿತ!] ನನ್ನ ಶಾಸ್ತ್ರೀಯವಾದ [ಉಚಿತ!!

ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿರುವವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ಒಂದಾಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನು ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಜಿ. ವ್ಹಿ. ವೇಲಂಗಿ ಮೋಟಾರ ಸರ್ವ್ಹೀಸ.

ಕುಮುಟಾ—ಶಿರ್ಸಿ



ಶಿರ್ಸಿ—ಕುಮುಟಾ

ಡೇಲಿ ಮೋಟಾರ ಸರ್ವ್ಹೀಸ ಪ್ರಾರಂಭವಾಗಿರುವದು.

ಇದಲ್ಲದೆ, ಈ ಸರ್ವ್ಹೀಸು ಶಿರ್ಸಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವವರೆಗೂ ನಡೆಯುತ್ತಿದೆ, ಸ್ಪೇಶಲ್ ಭಾಡಿಗೆಗೆ ಬೇಕಾದವರು ಒಂದು ದಿವಸ ಮುಂಚಿತ ತಿಳಿಸಬೇಕು

ಟಿಕೀಟಿನ ದರ:—ಸೋಯಿ! ಅತಿ ಸೋಯಿ!! ಎಲ್ಲರಿಗಿಂತಲೂ ಸೋಯಿ!!!

ಬೇಕಾದಲ್ಲಿಯ ಟಿಕೇಟುಗಳೂ, ವಿಶೇಷ ಮಾಹಿತಿಯೂ ಕುಮುಟಾ ಏಜಂಟ ಶ್ರೀನಿವಾಸ ರಾಮನಾಯ್ಕ ದುಮಗಾಂವಕರ ಇವರ ಕಡೆಗೆ ಸಿಗುವವು

ದಿ ಬೆಳಗಾಂವ ಮೋಟರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ, ಬೆಳಗಾಂವ

ಇವರ

ಬೆಳಗಾಂವ— ಕಾರವಾರ

ನಿಯಮಿತ

ಡೇಲಿ ಮೋಟರ ಸರ್ವ್ಹೀಸ್

ಚಾಲು ಇದೆ.



ಪ್ರತಿ ದಿವಸ "ಬೆಳಗಾಂವದಿಂದ" ಬೆಳಗಿನ ೮ ವ ಮುಂಬೈದಿಂದ ಬಂದ ಮೇಲ ನೋಡಿ ೧೦॥ ಘಂಟಗೆ, ಈ ರೀತಿ ಎರಡು ಮೋಟರಗಳು ಹೊರಟು "ಖಾನಾಪೂರ, ಅಳ್ನಾವರ, ಹಳಿಯಾಳ, ಯಲ್ಲಾಪೂರ, ಅಂಕೋಲಾ ಮಾರ್ಗವಾಗಿ "ಕಾರವಾರಕ್ಕೆ ಅನುಕ್ರಮವಾಗಿ ಸಂಜೆ ೫ ವ ೭ ಘಂಟೆಗೆ ತಲ್ಪುವವು. ಇದೇ ರೀತಿ ಕಾರವಾರದಿಂದ ಬೆಳಗಿನ ೭ ವ ೮ ಘಂಟೆಗೆ ಎರಡು ಮೋಟರುಗಳು ಹೊರಟು ಅದೇ ಮಾರ್ಗವಾಗಿ "ಮುಂಬೈಗೆ ಹೋಗುವ ಮೇಲಿಗೆ" ತಲ್ಪುವಂತೆ ಬೆಳಗಾಂವಿಗೆ ತಲ್ಪುವವು. ಪ್ರತಿ ಒಂದು ಸ್ಟೇಶನದಲ್ಲಿ ಪ್ರಯಾಣಿಕರಿಗೆ ಉಳಕೊಳ್ಳಲಿಕ್ಕೆ ವಗೈರೆ ಸೋಯಿ ಇರುವದು. ಹೆಚ್ಚಿನ ಮಾಹಿತಿ ಅಲ್ಲಲ್ಲಿಯ ಏಜಂಟರ ಆಫೀಸಿನಲ್ಲಿ ಯಾ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ.

☞ ಸ್ಪೇಶಲ್ ಮೋಟರುಗಳು ಯೋಗ್ಯ ದರದಿಂದ ಬಾಡಿಗೆಗ ಸಿಗುವವು.

Proprietors:- THE BELGAUM MOTOR WORKS & TRANSPORT CO., BELGAUM.

Tel-"TRANSPORT" BELGAUM [ತಂತಿ ಪತ್ತೆ:-"ಟ್ರಾನ್ಸಪೋರ್ಟ" ಬೆಳಗಾಂವ.

ಹೊಸ ಪಂಚಾಂಗ.

ಬಗ್ಗೋಣ ರಾಮಾಚಾರ್ಯ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿವೆ.

ಪ್ರತಿ ೧ ಕ್ಕೆ ರೂ. ೦—೩—೦
ಪ್ರತಿ ೨೫ ಕ್ಕೆ ರೂ. ೩—೮—೦
ಪ್ರತಿ ೫೦ ಕ್ಕೆ ರೂ ೬—೮—೦
ಪ್ರತಿ ೧೦೦ ಕ್ಕೆ ರೂ ೧೨ ೦—೦

☞ ಪಂಚಾಂಗಗಳನ್ನು ವ್ಹಿ ಪಿ ಯಿಂದ ಅಪೇಕ್ಷಿಸುವವರು ರೂ ೨ ೦-೦ ಮುಂಗಡ ಕಳಿಸಬೇಕು

ಪತ್ತೆ:— ಮೆನೇಜರ,
ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

The Brittannia Life Assurance Company Ltd
Head Office Kirti Building,
Fort, BOMBAY.

ಈ ಕಂಪನಿಯಲ್ಲಿ ನಿಮ್ಮ ಭಾರತೀಯರಿಗೆ ಬೇಕಾದ ಸವಲತು ಸುಲಭ ಕರಾರ ಹೆಚ್ಚಿನ ಭರವಸೆ, ಬಿಕ್ಕಟ್ಟಿನಿಂದ ಅತಿಶಿತ ನೋಡತಕ್ಕ ಬುದ್ಧಿ ಕೌಶಲ್ಯತೆಯುಳ್ಳ ಡಯರೆಕ್ಟರರು ಇದ್ದು, ಕ್ಷಣಮಾತ್ರದಲ್ಲಿ ವಿಮೆಯನ್ನಿಳಿಸಬಹುದು ಇದರ ಕಂತುಗಳು ಬಹಳೇ ಕಡಿಮೆಯಾಗಿರುವವು. ಆದುದರಿಂದ ಪುನಃ ಪುನಃ ಈ ಕಂಪನಿಯಲ್ಲಿಯೇ ವಿಮೆಯನ್ನಿಳಿಸಲುಬಹುದೆಂದು ಹೇಳತಕ್ಕದ್ದು ಸುಹಜವಾದ ಮಾತಾಗಿದೆ

ಈ ಸುಸಂಧಿಯನ್ನು ನೋಡಿ ಬೇಕಾದ ಮಹನೀಯರು ನಮ್ಮ ಏಜಂಟರಾಗಲು ಇದೇ ತಕ್ಕ ಸಮಯವು ಬೇಕಾದ ಅನುಭವ, ಏಜನ್ಸಿಯ ಕರಾರುಗಳು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಬ್ರಿಟಾನಿಯಾ ಲೈಫ ಇನ್ಸುರೆನ್ಸ ಕಂಪನಿ ಲಿಮಿಟೆಡ್
ಹೆಡ್ ಆಫೀಸ—ಕೀರ್ತಿ ಬಿಲ್ಡಿಂಗ ಫೋರ್ಟ,
ಮುಂಬಯಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ್,
ಕಾಳಬಾದೇವಿ ರೋಡ,
ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಕಲ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಚಿಲ್ಲರೆ ಹಾಗು ಠೋಕ ಖರೇದಿ ಮಾಡಿ ಕಳಿಸುತ್ತೇವೆ. ಹಲವಾರು ಹೆಚ್ಚಿಗೆ ಕೊಳ್ಳುವದಿಲ್ಲ. ಖರೇದಿ ಜೋಕಿಯಿಂದಾಗುತಿದ ಪೇಟೆಯಲ್ಲಿರುವ ಧಾರಣೆಯ ಆಕರಿಸಲ್ಪಡುವ ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ದೇಶಿಕೆ ಬಂದ ಕೂಡಲೆ ತತ್ಪರತೆಯಿಂದಲೂ ಪ್ರಾಮಾಣಿಕತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಟಲಾಗು ತರಿಸಿಕೊಳ್ಳಿ. ಖಾತ್ರಿಯಾಗಿ ಸಿಗು—

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವಮೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ ರಿಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ:— ಫೌಂಟನ ಪೇನಾ ೧, ಹೋಲ್ಡರು ೧ ಬಾರ ೧ ಪಚ್ಚದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೆಂಟು ೧ ಪೆನ್ ನೈಫ್ ೧, ರೋಲ್ಡ್ ಗೊಲ್ಡ್ ಭಂಗಾರದ ಉಂಗುರ ೧, ರೋಲ್ಡ ಗೋಲ್ಡ ನೆಕ್ಲೆಸ್ ಎಂಬ ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈವಸ್ತ್ರ ೧ ಈ ೧೫ ಬಹುಮಾನಗಳ ಸಹಿತ ಖಾತ್ರಿಯಾದ ಮೂರು ವರ್ಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ, ಒಳ್ಳೇ ರೂ ೪—೮—೦

ವಿಳಾಸ — **ಇಂಗ್ಲೀಷ ಎಂಪೋರಿಯಂ,**
ಪೋಸ್ಟ ಬಾಕ್ಸ ನಂ ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದವು. ಇದಕ್ಕೆ ೧೪ ಕ್ಯಾರೆಕ್ಟಿನಂಥ ನಿಬ್ಬ ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಒಳ್ಳೆ ಚನ್ನಾಗಿ ಇರುವವು. ಈ ತಿಂಗಳೊಳಗಾಗಿ, ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.
ವಿಳಾಸ—ಪೀಟರ್ ವಾಚ್ ಕಂಪನಿ ಪೋ ಬಾಕ್ಸ ನಂ. ೨೭ ಮದರಾಸು.

ಕಲ್ಪತರು ಮಿಶ್ರಣ

ಮಲೇರಿಯಾ ನಿವಾರಕ

ಎಂದರೆ,
ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಕೇಳಬಹುದು —

ಏಷ ಕಲ್ಪತರುನಾಮ ರಸಃ ಪರಮ ದುರ್ಲಭಃ । ಅಸಾಧ್ಯಂ ಶೀತಶಾಲೀಕಂ ಜೀರ್ಣಂ
ಚ ವಿಷಮ ಜ್ವರಮ್ । ಹಂತಿ ಜ್ವರಾತಿಸಾರೌ ಚ ಗ್ರಹಣೀಂ ಪಾಂಡು ಕಾಮಲಾಮ್ ॥

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರು ನಂ ೧ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ ಇಂಗಲದೊಳಗಣ ಹಳ್ಳಿಗಳು ಕಲ್ಪತರು ಮಿಶ್ರಣ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ವಾಸಿಯಾಗಿದೆ ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗಳಿಗೆ ರೂ. ೧-೬-೦

ನಮ್ಮ ಪತ್ತೆ:— **ವೈದ್ಯ ಬಿ. ಆರ್. ಹರಿದಾಸ,**
ಶ್ರೀ ಸವರ್ಣ ಫೋರ್ಮಸಿ, ಗದ್ದೆಕೇರಿ, ಮಂಗಳೂರು
ಕುಮಟಾ ಏಜಂಟ — ಕಲಬಾಗ ವಿಠೋಬ ರಾಮ ಪ್ರಭು.

ಬಿಲ್ವ ವೃಕ್ಷದ ಮಹಿಮೆ.

ಶ್ರೀ ಚಾರುಚಂದ್ರ ಘೋಷ, ಬಿ. ಎ. ಇವರು ಕಲಕತ್ತೆಯ "ಪ್ರೊಬಾಸಿ" ಪತ್ರಿಕೆಯಲ್ಲಿ ಬಿಲ್ವ ಮರದ ಮಹಿಮೆಯನ್ನು ಸೊಗಸಾಗಿ ವರ್ಣಿಸಿದ್ದಾರೆ ಅದರಿಂದ ಮಾನವನಿಗೆ ಪ್ರಾಪ್ತವಾಗುವ ಆರೋಗ್ಯ ಸಾಧನವನ್ನು ಬಹು ವಿಶದವಾಗಿ ಹೇಳಿದ್ದಾರೆ, ಪೌರಾಣಿಕ ಕಥೆಯನ್ನು ಕೆಲ ಮಟ್ಟಿಗೆ ವಿವರಿಸಿದ್ದಾರೆ. ಅವರು ಬರೆಯುವದೇನಂದರೆ - ಬಿಲ್ವ ಮರವು ಹಿಂದುಶಾಸ್ತ್ರದಲ್ಲಿ ಪವಿತ್ರವಾದ ವೃಕ್ಷವು. ಪರಮೇಶ್ವರನಿಗೆ ಈ ಮರದ ಮೇಲೆ ಪ್ರೀತಿ ಬಹಳ. ಈ ಮರದಡಿ [illegible] ಕೈಲಾಸಪ್ರಾಪ್ತಿಯಾಗುತ್ತದೆಂದೂ ಹೇಳುತ್ತಾರೆ. ಈ ವೃಕ್ಷವು ವೈಶಾಖ ಮಾಸದಲ್ಲಿ ಹುಟ್ಟಿತೆಂದು ಕಥೆಯಿದೆ. ಮನೆಯ ಈಶಾನ್ಯ ಮೂಲೆಯಲ್ಲಿ ಈ ಮರ ಬೆಳೆದರೆ, ಆ ಮನೆಗೆ ಆಪಾಯ ಸಂಭವಿಸುವದಿಲ್ಲವೆಂದು ಕಲ್ಪನೆ, ಪೂರ್ವ ದಿಕ್ಕಿಗೆ ಬೆಳೆದರೆ, ಕುಟುಂಬಕ್ಕೆ ಸಮೃದ್ಧಿಪ್ರಾಪ್ತಿಯಾಗುತ್ತದೆಂದೂ, ಪಶ್ಚಿಮ ದಿಕ್ಕಿನಲ್ಲಿ ಬೆಳೆದರೆ, ಸಂತತಿಪ್ರಾಪ್ತಿಯಾಗುತ್ತದೆಂದೂ ದಕ್ಷಿಣ ದಿಕ್ಕಿನಲ್ಲಿ ಬೆಳೆದರೆ, ದೀರ್ಘಾಯುಷ್ಯ ಪ್ರಾಪ್ತಿಯಾಗುತ್ತದೆಂದೂ ಹಿಂದು ಜನರು ಶ್ರದ್ಧೆಯಿಂದ ಭಾವಿಸುತ್ತ ಬಂದಿದ್ದಾರೆ. ಅಂಥ ಮರವನ್ನು [illegible] ಕಡಿಯಲಾಗದು. ಕಡಿದವರಿಗೆ ಶಾಸ್ತ್ರಗಳಲ್ಲಿ ವಿಧಿಸೋಣಾದಂತೆ ನರಕಕ್ಕೆ ವಿಧಿಸಲ್ಪಟ್ಟಿದೆ. ಇಷ್ಟೆಲ್ಲ ಸ್ತುತಿಯಿದ್ದರೂ ಕೂಡ [illegible]. ಈ ವೃಕ್ಷದ ಮಹಿಮೆಯೇನೆಂದು ನಾವು ವಿಚಾರಿಸಬೇಕಾಗಿದೆ. ಬಿಲ್ವ ಮರದ ಉತ್ಪತ್ತಿಯನ್ನು, [illegible] ಮರದ ದ್ರವ್ಯಗಳಿಂದ ಜನರಿಗಾಗುವ ಉಪಯೋಗ ಕಲ್ಯಾಣಕರಗಳ ಭೌತಿಕ ದೃಷ್ಟಿಯಿಂದ ವಿಚಾರಿಸುವ. ಈ ವೃಕ್ಷವು ಸಾಮಾನ್ಯವಾಗಿ ಹಿಂದುಸ್ಥಾನದಲ್ಲಿ ಎಲ್ಲ ಕಡೆಯಲ್ಲಿಯೂ ಬೆಳೆಯುತ್ತದೆ. ಹಿಮಾಲಯದ ಕೆಳಗಿನ ಕಾಡುಗಳಲ್ಲಿ ಇದು ಹೇರಳವಾಗಿ ಬೆಳೆಯುತ್ತದೆ. ಮಧ್ಯ—ದಕ್ಷಿಣ ಹಿಂದ ಸ್ಥಾನದಲ್ಲಿಯೂ, ಬ್ರಹ್ಮದೇಶದಲ್ಲಿಯೂ ವಿಪುಲವಾಗಿ ಈ ವೃಕ್ಷಗಳನ್ನು ಕಾಣಬಹುದು. ಚರಕನು ಈ ವೃಕ್ಷದಲ್ಲಿರುವ ಔಷಧಿ ಗುಣಗಳನ್ನು ಬಹಳವಾಗಿ ವರ್ಣಿಸಿದ್ದಾನೆ. ಅತಿಸಾರ, ರಕ್ತಾತಿಸಾರಗಳಲ್ಲಿ ಈ ಫಲಗಳನ್ನು ಉಪಯೋಗಿಸಿದರೆ ಬಹಳೇ ಲಾಭವಾಗುತ್ತದೆ. ಇದನ್ನು ನಿಯಮಿತವಾಗಿ ಸ್ವಲ್ಪ ಸ್ವಲ್ಪ ಉಪಯೋಗಿಸಿದರೆ, ಆಹಾರವು ಸರಿಯಾಗಿ ಜೀರ್ಣವಾಗಿ, ಹೊಟ್ಟೆಯು ಸ್ವಚ್ಛವಿರುತ್ತದೆ. ಇದರ ಸೇವನದಿಂದ ಘೇರಿದವಾಗುತ್ತದೆ, ಶಕ್ತಿಯೂ ಪ್ರಾಪ್ತವಾಗುತ್ತದೆ, ಜೀರ್ಣಕೋಶವು ಸುಸೂತ್ರವಾಗಿ ಸಾಗುತ್ತದೆ. ಬಿಲ್ವದಲ್ಲಿ ಟ್ಯಾನಿನು ಕೆಸ್ಟಿನು, ಉಗರು ಅವುಗಳೂ ಒಂದು ತರದ ಎಣ್ಣೆಯೂ ಇರುತ್ತವೆ. ಹಸಿ, ಹಣ್ಣಾದ ಹಾಗು ಒಣಗಿದ ಬಿಲ್ವ ಫಲಗಳಿಂದ ಹೊಟ್ಟೆಗೂ, ಕರುಳಿಗೂ ಅವಶ್ಯವುಳ್ಳ ಶಕ್ತಿ ದೊರಕಿ, ರಕ್ತಶುದ್ಧತೆಯಾಗಲಿ, ಮಲಶುದ್ಧಿ ಯಾಗಲಿ ಪರಿಹಾರವಾಗುತ್ತವೆ. ಬಗೆಯಿಂದ ಕರುಳುಗಳು ಬಲಿಷ್ಠವಾಗುತ್ತವೆ. ಬಿಲ್ವ ಕಾಯಿ ಅಂದರೆ ಒಣಗಿದ ಬಿಲ್ವದಿಂದ ಕರುಳುಗಳೊಳಗಿನ ವಾಯು ಹಾಗು ಕಫಗಳು ದೂರವಾಗುತ್ತವೆ. ತಾಜಾ ಹಸಿ ಹಣ್ಣುಗಳು ಬಹಳ ಉಪಕಾರಿಯಾಗಿವೆ. ಅವುಗಳು ಒಣಗಿದ ಹಸಿ ಹಣ್ಣುಗಳಿಂದ ಅತಿಸಾರದಿಂದ ರೋಗವು ವಾಸಿಯಾಗುತ್ತದೆ. ಹಣ್ಣಾದ ಫಲಗಳು ಜೀರ್ಣವಾಗುವದಿಲ್ಲ. ಆದರಿಂದ ವಾಯು ಎತ್ತ ಪ್ರಕೋಪವಾಗುತ್ತವೆ. ಕಳವು ವಿಷವಾಗುತ್ತದೆ. ಬಿಲ್ವ ವೃಕ್ಷದ ಪ್ರತ್ಯೇಕ ಅವಯವಗಳಿಂದ ಲಾಭವಿದೆ. ಎಲೆ, ಹೂಗಳು, ಬೇರುಗಳು ಎಲ್ಲವೂ ಔಷಧೋಪಯೋಗಕ್ಕೆ ಬೀಳುತ್ತವೆ. ಬಿಲ್ವ ಎಲೆಗಳನ್ನು ಕೆಡುಯ್ದು, ಹಚ್ಚಿ ತಗೆದ ರಸವನ್ನು ಜೇನುತುಪ್ಪದೊಡನೆ ಸೇವಿಸಿದರೆ, ನೆಗಡಿ ಹಾಗು ಸಣ್ಣ ಜ್ವರವು ಕೂಡಲೆ ಗುಣವಾಗುತ್ತದೆ. ಕೆಮ್ಮುಗಳಿಗೆ ಬರುವ ನೆಗಡಿ ಹಾಗು ಜ್ವರಗಳಿಗೆ ನಾನಿದನ್ನು ಉಪಯೋಗಿಸಿದ್ದೇನೆ. ಅದರಿಂದ ಬಹಳೇ ಲಾಭವಾಗಿದೆ. ಎಲೆಗಳಿಂದ ಪೌಲ್ಟೀಸು ಮಾಡಿ ಸರಿಗೆ ಮಾಡಿ ಹಾಕಿಕೊಂಡರೆ ಕಣ್ಣು ಬೇನೆಯು ಪರಿಹಾರವಾಗುತ್ತದೆ. ಬೇರುಗಳಿಂದ ಕಷಾಯ ಮಾಡಿಕೊಂಡರೆ, ಬಿಟ್ಟು ಬಿಟ್ಟು ಬರುವ ಜ್ವರವು, ಎದೆ ಹಾರುವದೂ ನಿಲ್ಲುತ್ತವೆ. ಮರದ ಚಕ್ಕೆಯ ಕೊಗಿನಿಯು ಕಷಾಯದಿಂದಲೂ ಇನ್ನೊಮ್ಮೆ ಇಷ್ಟೇ ಗುಣವು ದೊರೆಯುತ್ತದೆ. ಹಸಿ ಹಣ್ಣುಗಳ ಸಿಪ್ಪೆಯು ಒಗರು. ಅದರಿಂದ ಅನೇಕ ಬಣ್ಣವನ್ನು ತಯಾರಿಸಬಹುದು. ಬಳಲಿಕೆಯೊಡನೆ ಈ ಬಣ್ಣವನ್ನು ತಯಾರಿಸಿ, ಅರಳೆಯ ಅರಿವೆಗಳಿಗೆ ಬಣ್ಣ ಕೊಡುತ್ತಾರೆ. ಜಪಾನ ಅಥವಾ ಇತರ ದೇಶಗಳ ಜನರು ಈ ಮರದ ಬೀಜಗಳನ್ನು ಹಚ್ಚಿ ಘಾಯಕ್ಕೆ ಹಚ್ಚಿದರೆ, ವಿಷವು ಕೂಡಲೆ ಇಳಿಯುತ್ತದೆ. ಬೀಜಗಳ ಅಂಟನ್ನು ಗಟ್ಟಿಗೆ ಸೇರಿಸಿದರೆ, ಗಟ್ಟಿ ಬಹಳ ಕಾಲದವರೆಗೆ ಬಾಳುತ್ತದೆ, ಹಣ್ಣದಲ್ಲಿ ಬೇಸಿ ತಯಾರಿಸಿದ ಅಂಟಿನಿಂದ ಬಹಳ ಕಾಲದ ಸಾಮಾನುಗಳನ್ನು ಸರಿಪಡಿಸಬಹುದು. ಕಷಾಯ, ಪತ್ರ, ಹಾಗೆಯೇ ಈ ರೀತಿ ದೊಡ್ಡ ಗಳಿಂದ ಬಿಲ್ವ ವೃಕ್ಷವನ್ನು ಸೇವಿಸಬಹುದು. ಹಸಿ ಹಣ್ಣುಗಳನ್ನು ಕೊಯ್ದು ಒಣಗಿಸಿ ಅವುಗಳಿಂದ ಕಷಾಯ ಮಾಡುತ್ತಾರೆ. ಇದನ್ನು ಜವೆ ಗೋದಿಯ ಕಷಾಯದ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅದಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತದೆ. ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೬—೧೦—೦
ಅಂಚೆವೆಚ್ಚ	,,	೦—೧೬—

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಹಿಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲು ಅಥವಾ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮುಖ್ಯದ ಸ್ಪರ್ಧಿಯಿಲ್ಲ ಬಿಲ್ಲ

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

½ ಔನ್ಸಿಗೆ	ರೂ.	೩—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦-೩-೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

THE ANGLO INDIAN DRUG & CHEMICAL CO. LTD.
POST BOX, 2082 BOMBAY.

ಜೊತೆಗೆ ಯಾ ರಾಗಿರೋಟಿನಲ್ಲಿ ಹಾಕಿಕೊಳ್ಳಬಹುದು. ಬಿಲ್ವದ ಪಾನಕವನ್ನು ಮಾಡಿ ಕುಡಿಯಬಹುದು. ಸ್ವಲ್ಪ ಹುಳಿ ಹಾಗು ಸಕ್ಕರೆಯನ್ನು ಬೆರಸಿಕೊಂಡರೆ, ದಣುವು ಪರಿಹಾರವಾಗುತ್ತದೆ ಭೇದಿಯೂ ನಿಲ್ಲುತ್ತದೆ. ಅದನ್ನು ತಯಾರಿಸುವ ಒಂದು ಬಗೆಯನ್ನು ಹೇಳುತ್ತೇನೆ — ಒಂದು ರತ್ತಲು ಬಿಲ್ವ ಫಲಗಳನ್ನು ಕೊಂಡು ೧೦ ಸೇರು ನೀರಿನಲ್ಲಿ ನೆನೆಹಾಕಿರಿ, ಆ ಮೇಲೆ ಅದನ್ನು ಚೆನ್ನಾಗಿ ಕರಡಿ ಕುದಿಸಿರಿ, ಕುದಿಸಿ ೧ ಸೇರು ಆಗುವಂತೆ ಇಳಿಸಬೇಕು. ಇದು ತಣ್ಣಗಾದ ಬಳಿಕ, ಅದಕ್ಕೆ ಸೋಸಿಗೆ ಭಟ್ಟಿ ಇಳಿಸಿದ ಮದ್ಯ (spirit) ವನ್ನು ಹಾಕಿ ಬಿಸಿಡಬೇಕು. ರಕ್ತಾತಿಸಾರವಾದಾಗ, ೪।। ತೊಲೆಯಿಂದ ೧೬ ತೊಲೆಗಳ ವರೆಗೆ ಪಥ್ಯೋಪಯೋಗವಾಗುವಂತೆ ಕೊಳ್ಳಬಹುದು. ಆ ಹಸಿಗೊಜ್ಜು ಮದ್ದು ಸೇವಿಸತಕ್ಕದ್ದು. ಹಲ್ಲು ಹುಟ್ಟುವ ಜಂಟರಜಡೆಯಾಗುವ ಪ್ರಸಂಗದಲ್ಲಿ ಅರ್ಧ ಹಸಿಗೊಜ್ಜು ಕೊಳ್ಳಬಹುದು. ಹೊರಕಡೆಯಿಂದ ನರಳುವ ಚಿಕ್ಕ ಬಾಲಕರಿಗಾಗಿ ಇದರಿಂದ ಒಂದು ಔಷಧಿಯನ್ನು ತಯಾರಿಸಬಹುದು. ಕಸಿ ಹಾಕಿದ ೬ ಗ್ರೇನು ತಿರುಳನ್ನು ಒಂದು ಗ್ರೇನು ಸಕ್ಕರೆ ಕೂಡಿಯೊಡನೆ ಕೂಸುಗಳಿಗೆ ದಿನಾ ೨-೩ ಸಾರೆ ಕೊಟ್ಟರೆ ಅತಿಸಾರ ನಿಲ್ಲುತ್ತದೆ. ಬಿಲ್ವ ಫಲದ ಪಾಕವನ್ನು ದಿನಾ ಅಲ್ಪಾಹಾರದಂತೆ ಸೇವಿಸಿದರೆ, "ಡ್ಯಾಸೆಂಟೆರಿ" ಮತ್ತು "ಸ್ಪ್ರೂ-ಶ್ವೇತ ಸೊಲ್ಲು-ಎಷ್ಟವ ಸೊಲ್ಲು" ಮುಂತಾದ ವಿಷದಂತಿರುವ ರೇಚಕ ದೋಷದ ಕೊಳ್ಳಿಗಳು ತಪ್ಪುವವು. ಕರುಳುಗಳ ಚಿಕಿತ್ಸೆಗೆ ಕೆಲವು ಜನರು ಬಿಲ್ವ ತೈಲವನ್ನು ಹೇಳುತ್ತಾರೆ. ೧೨।। ಸೇರು ಒಣಗಿದ ಬಿಲ್ವ ಫಲಗಳನ್ನು ೬೪ ಸೇರು ನೀರಿನಲ್ಲಿ ಹಾಕಿ ಕುದಿಸಿ ೧೬ ಸೇರು ಮಾಡಬೇಕು, ಸೋಸಿ ಆದ ಬಳಿಕ ಅದರೊಳಗೆ ೪ ಸೇರು ಎಳ್ಳೆಣ್ಣೆ ಹಾಕಬೇಕು, ಅದರೊಳಗೆ ಕವಿರಾಜರು ೬ ತೊಲೆ ಬೇರೆ ಬೇರೆ ಔಷಧಿ ಸಾಮಾನುಗಳನ್ನು ಹಾಕುತ್ತಾರೆ. ಈ ಎಣ್ಣೆಯನ್ನು ಹಚ್ಚಿಕೊಂಡರೆ, ಕರುಳುಗಳಿಗೆ ಚಲೋ ಶಕ್ತಿ ದೊರೆಯುತ್ತದೆ. ಸುಗಂಧ ವಾಸನ ಇರುವ ಹಣ್ಣುಗಳಿಂದ ರೇಚಕವಾಗುತ್ತದೆ, ಹಾಗೆಯೇ ನರಗಳಿಗೆ ಶಕ್ತಿ ಪ್ರಾಪ್ತವಾಗುತ್ತದೆ "ಈಗೊಲ್ಫೋಲಿಯಾ" ಎಂಬ ಹೋಮಿಯೋಪಥಿಕ್ ಔಷಧವು ಇದರಿಂದಲೇ ತಯಾರಾಗುತ್ತದೆ. "ಈಗೊಲ್ಫೋಲಿಯಾ"ದಿಂದ "ಬೆಂಬೆ" ಎಂಬ ರೋಗವು ನಾಶವಾಗುತ್ತದೆ ಜಲೋದರ ರೋಗವಾಗಿ ಕೈ-ಕಾಲುಗಳಿಗೆ ಬೀಗು ಬಂದಾಗ, ಈ ಔಷಧದಿಂದ ಗುಣವಾಗುತ್ತದೆ. ಇವೆಲ್ಲ ಕಾರಣಗಳ ಮೇಲಿಂದಲೇ ಬಿಲ್ವ ಮರಕ್ಕೆ ಇಷ್ಟೆಲ್ಲ ಮಹತ್ವ ಪ್ರಾಪ್ತವಾಗಿರುತ್ತದೆ.

— ಹೆಂಡತಿಯು ವ್ಯಭಿಚಾರ ಮಾಡಿದಳೆಂದು ಸಿಟ್ಟಾಗಿ, ಅಹಮ್ಮದನಗರ ಜಿಲ್ಲೆಯ ದಗಡು ಬಾಬಾಜಿ ಎಂಬುವನೊಬ್ಬನು ಹೆಂಡತಿಯ ಮೂಗನ್ನೇ ಕ್ರೂರತನದಿಂದ ಕೊಯ್ದುಬಿಟ್ಟನು. ಇದಕ್ಕೆ ಶೇವಗಾಂವದ ಮೆಜಿಸ್ಟ್ರೇಟರು ೧ ತಿಂಗಳ ಶಿಕ್ಷೆ ಕೊಟ್ಟಿದ್ದರು, ಹೈಕೋರ್ಟಿನವರು ಇಂಥ ಪ್ರಕಾರಗಳು ಬಹು ದುಷ್ಟತನದವೆಂದು ಅಭಿಪ್ರಾಯಪಟ್ಟು, ೧ ವರುಷದ ಶಿಕ್ಷೆಯನ್ನು ಕೊಟ್ಟಿದ್ದಾರೆ.

ಬೇಕು! ಏಜಂಟರು ಬೇಕು!!

ನಮ್ಮ ಕಂಪನಿಯ ಉತ್ತಮ ಪ್ರತಿಯ ಶರ್ಟ—ಕೋಟು ಮುಂತಾದವುಗಳಿಗೆ ಯೋಗ್ಯವಾದ ಬಟ್ಟೆಗಳನ್ನು ಮಾರುವ ಖಟಪಟಿ ಏಜಂಟರು ಬೇಕು !! ಚಲೋ ಕಮೀಶನ್ ದೊರೆಯುತ್ತೆ. ಶರ್ತು ವಗೈರೆ ಬಗ್ಗೆ ಇಂಗ್ಲೀಷಿನಿಂದ ಪತ್ರವ್ಯವಹಾರ ಮಾಡಿರಿ.

ಪತ್ತೆ:- THE WEST COAST Weaving ESTABLISHMENT, Cannanore. MALABAR.

ವಿವಿಧ ಸಂಗ್ರಹ.

ದೃಢ ನಿಶ್ಚಯದ ಫಲ.

ಧಾರವಾಡ ಜಿಲ್ಲೆಯ ಮಿಶ್ರಿಕೋಟಿಯೊಳಗಿನ ಲೋಕಲ್ ಬೋರ್ಡ್ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ|| ದತ್ತಾತ್ರಯ ವೆಂಕಟೇಶ ಜೋಶಿಯವರು ದೃಢನಿಶ್ಚಯಬಲದಿಂದಲೂ, ಪ್ರಾಮಾಣಿಕತನದಿಂದಲೂ ತಮ್ಮ ಹಕ್ಕಿನ ಪ್ರತಿಫಲವನ್ನು ಪಡೆದರು. ಮೊಟ್ಟಮೊದಲು, ಇವರು ಧಾರವಾಡದೊಳಗಿನ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಶಿಕ್ಷಕರಿದ್ದರು, ೧೦೦ ರೂಪಾಯಿ ಸಂಬಳವಿತ್ತು. ಇದು ಪ್ರಾಂತಿಕ ಸರ್ವಿಸು. ಅಲ್ಲಿಂದ ಅವರು ಲೋಕಲ್ ಬೋರ್ಡಿನ ಸ್ವಾಧೀನ ಹೋದರು. ಲೋಕಲ್ ಬೋರ್ಡಿನಲ್ಲಿ ಇವರಿಗೆ ೬೦ ರೂಪಾಯಿ ಸಂಬಳವಾಯಿತು. ಇವರ ಕಾನೂನಿನಂತೆ ೮೭।। ರೂಪಾಯಿ ದೊರಕಬೇಕಾಗಿತ್ತು. ಹೆಡ್ ಮಾಸ್ತರ್ ಗ್ರೇಡಿನ ಸಂಬಳ ರೂ. ೭೫, ಭತ್ತೆ ರೂ. ೧೨।। ಕೂಡಿ ರೂ. ೮೭।।. ಇಷ್ಟನ್ನಾದರೂ ತಮಗೆ ಕೊಡಿರೆಂದು ಲೋಕಲ್ ಬೋರ್ಡಿನವರಿಗೂ, ವಿದ್ಯಾಖಾತೆಯ ಅಧಿಕಾರಿಗಳಿಗೂ ಇವರು ಬರೆಕೊಂಡರು. ಇವರು ಮಾಡಿದ ಅರ್ಜಿಗಳದೊಂದು ಹೊರೆಯಾಗಿರಬಹುದು. ಅವರೂ, ೬೦ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಸಿಗಲಿಕ್ಕಿಲ್ಲವಾಗಿ ಎಲ್ಲ ಅರ್ಜಿಗಳಿಗೆ ಒಂದೇ ಉತ್ತರ ದೊರಕಿತು! ಹೀಗೆ ಉತ್ತರ ಬಂದು ೨।। ವರುಷಗಳಾದವು. ಅದರಿಂದ ಶ್ರೀ|| ಜೋಶಿಯವರೂ ಒಂದು ನಿರ್ಧಾರ ಮಾಡಿದರು ೮೭।। ರೂಪಾಯಿ ಸಂಬಳ ಸಿಗದ ಹೊರತು, ೬೦ ರೂಪಾಯಿಗಳಂತೆ ಸಂಬಳವನ್ನು ಎಷ್ಟು ಕಾಲ ಪಡೆಯಬಾರದೆಂದು ಅವರು ನಿರ್ಧಾರ ಮಾಡಿದರು. ಅದೂರ ದೃಷ್ಟಿಯವರು ಇದನ್ನು ಕೇಳಿ ನಗುತ್ತಿದ್ದರು "ಸಂಬಳ ಪಡೆಯದಿದ್ದರಿಲ್ಲ, ಕೆಲಸ ನಾಗುತ್ತಿದ್ದ ಬಳಿಕ, ಖಾತೆಯವರೆಲ್ಲ ಕೊಡುತ್ತಾರೆ? ಸಿಗುವ ೬೦ ರೂಪಾಯಿಗಳನ್ನು ಕೊಳ್ಳದಿದ್ದರೆ, ಆ ಸಂಬಳವು ಸಹ ಸರಕಾರಕ್ಕೆ ಜಮೆಯಾಗುವದು, ಮೂರ್ಖತನದ ಹಟಾತ್ಕಾರದಿಂದ ಪ್ರಯೋಜನವೇನು?" ಇತ್ಯಾದಿ ವ್ಯವಹಾರಿಕ ಮಾತುಗಳನ್ನಾಡಿ ಕೆಲ ವ್ಯವಹಾರಿಕರು ೬೦ ರೂಪಾಯಿ ಸಂಬಳವನ್ನು ಪಡೆಯುತ್ತಿದ್ದರು. ಮೇಲೆ ತಮ್ಮ ವ್ಯವಹಾರಿಕ ಕೌಶಲ್ಯವನ್ನು ತೋರಿಸುತ್ತಿದ್ದರು! ಶ್ರೀ|| ಜೋಶಿಯವರು ಅಂಥ ವ್ಯವಹಾರಿಕರ ಗೋಜಿಗೆ ಹೋಗಲಿಲ್ಲ ೩೦ ತಿಂಗಳ ತನಕ ಸಂಬಳಕ್ಕೆ ಕೈ ಹಚ್ಚಲಿಲ್ಲ. ಮನೆಯಲ್ಲಿ ಮದುವೆ ಕಾರ್ಯಗಳನ್ನು ಮಾಡುವ ಪ್ರಸಂಗ ಬಂತು; ಆದರೂ, ಸಂಬಳಕ್ಕೆ ಕೈಹಚ್ಚಲಿಲ್ಲ; ಸಾಹುಕಾರರ ಕಡೆಯಿಂದ ಸಾಲ ಪಡೆಕೊಂಡರು; ನಿತ್ಯದ ಖರ್ಚನ್ನು ಜಾಗ್ರತರಾಗಿ ನಡಿಸಿದರು ಶಿಕ್ಷಣ ಕಾರ್ಯವನ್ನು ಮಾತ್ರ ತಪ್ಪದೆ ತತ್ಪರತೆಯಿಂದ ಸಾಗಿಸಿದರು. ಸ್ಕೂಲ ಬೋರ್ಡಿನ ಚೆಯರಮನ್‌ರು ಜೇನುತುಪ್ಪಕ್ಕಿಂತ ಸವಿ ಮಾತುಗಳಿಂದ ಶ್ರೀ|| ಜೋಶಿಯವರಿಗೆ "೬೦ ರೂಪಾಯಿ ಸಂದ ಬಗ್ಗೆ ಒಂದು ಪಾವತಿ ಮಾಡಿಕೊಟ್ಟು, ಹಣ ಪಡೆಯಿರಿ; ಕಾಗದ ಪತ್ರಗಳು ನಡೆದೇ ಇವೆ, ಅವುಗಳ ಇತ್ಯರ್ಥವಾದ ಬಳಿಕ, ನಿಮಗೆ ಇನ್ನು ಸಂಬಳ ಸಿಗತಕ್ಕದ್ದಿದ್ದರೆ, ಸಿಕ್ಕೇ ಸಿಗುವದು;" ಇತ್ಯಾದಿ ಸಮಾಧಾನ ಹೇಳಿದರು. ಶ್ರೀ|| ಜೋಶಿಯವರು ಎಷ್ಟುಕಷ್ಟ ಬಿದ್ದರೂ ಹೀಗೆ ಸಮಾಧಾನ ಪಡೆಯಲು ಒಲ್ಲೆಂದರು. "೬೦ ರೂಪಾಯಿ ಸಂಬಳಕ್ಕೆ ಈ ಜನ್ಮದಲ್ಲಿ ನಾನು ಎಂದೂ ಸಹಿ ಮಾಡೆನು; ನನ್ನ ಉತ್ತರಾಧಿಕಾರಿಗಳು ಬೇಕಾದರೆ ಮಾಡಿಕೊಳ್ಳಲಿ," ಎಂದು ನಿರ್ದಾಕ್ಷಿಣ್ಯದಿಂದಲೂ, ದೃಢ ನಿಶ್ಚಯದಿಂದಲೂ ಉತ್ತರವನ್ನಿತ್ತರು. ಕೊನೆಗೆ ಅಧಿಕಾರಿಗಳು ಬಗ್ಗಬೇಕಾಯಿತು; ಬಗ್ಗಿದರು. ೮೭।। ರೂಪಾಯಿಗಳಂತೆ ೩೦ ತಿಂಗಳ ಸಂಬಳವನ್ನು ಒಮ್ಮೆಲೇ ಶ್ರೀ|| ಜೋಶಿಯವರಿಗೆ ಕೊಟ್ಟು ಪಾವತಿ ಪಡೆಯಬೇಕೆಂದು ಗೊತ್ತಾಯಿತು. ದೃಢ ನಿಶ್ಚಯದ ಫಲವಿದು! ಯೋಗ್ಯತಾವಂತ ಮಹಾನುಭಾವರು ತಮ್ಮ ನ್ಯಾಯ್ಯ ಹಕ್ಕುಗಳಿಗಾಗಿ ದೃಢ ನಿಶ್ಚಯದಿಂದ ಹೋರಾಡಿದರೆ, ಪ್ರಪಂಚದಲ್ಲಿ ಗೆಲವು ಸಿಕ್ಕೇ ಸಿಗುತ್ತದೆ. ಕೆಲವು ಕಾಲ ನಷ್ಟವೆಂದೆಣಿಸಿದಾಗ್ಯೂ, ಆ ನಷ್ಟ ಪರಿಹಾರಕ್ಕಾಗಿ ನಾವು ಅಧೈರ್ಯಪಟ್ಟರೆ, ನಮಗೆ ಲಾಭವಾಗದು. ಪ್ರಯತ್ನಗಳನ್ನು ನಾವು ಏಕಸಮನೆ ನಡಿಸಿದರೆ, ನಮಗೆ ಲಾಭವಾಗಲಿಕ್ಕೇ ಬೇಕು. ನಮ್ಮ ಪ್ರಯತ್ನಗಳು ಸರಿಯಾಗಿ ಸಾಗಿದರೆ, ಅದಕ್ಕೆ ಫಲ ಕೊಡಲು ಪರಮಾತ್ಮನು ಬದ್ಧನಿದ್ದಾನೆ. ಪರಮಾತ್ಮನ ಹೇಳಿಕೆಯಾದರೂ ಹಾಗೆಯೇ ಇದೆ. ಸ್ವ

* * *

ಸತ್ಯಾಗ್ರಹದ ತಯಾರಿ.

ಗುಜರಾಥ ಪ್ರಾಂತದ ಬಾರ್ಡೋಲಿಯಲ್ಲಿ ಕರನಿರಾಕರಣೆಯ ಪೂರ್ವಸಿದ್ಧತೆ ನಡೆದಿದೆ. ಬಾರ್ಡೋಲಿ ತಾಲೂಕಿನಲ್ಲಿ ೩೦ ವರ್ಷಗಳೊಳಗೆ ಸಂಪತ್ತಿಯು ಬೆಳೆದಿದೆಂದು ಸೆಟ್ಲಮೆಂಟ ಆಫೀಸರರ ಅಂಬೋಣ. ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾವಬಹಾದ್ದೂರ ಭೀಮಭಾಯಿ ನಾಯಕರವರು ಬಾರ್ಡೋಲಿ ತಾಲೂಕಿನ ಗ್ರಾಮಗಳಲ್ಲೆಲ್ಲ ಸಂಚರಿಸಿ, ೩೦ ವರುಷಗಳ ಹಿಂದೆ ೩೫ ಲಕ್ಷಗಳ ಸಾಲವಿತ್ತೆಂದೂ, ಈಗ ಸಾಲವು ೧ ಕೋಟಿಗೆ ಸಮೀಪಿಸಿರುವದೆಂದೂ ಲೆಕ್ಕದಿಂದ ಸಿದ್ಧಪಡಿಸಿದ್ದಾರೆ. ಆದರೂ, ಸರಕಾರವು ಅತ್ತ ಕಡೆ ಲಕ್ಷ್ಯ ಕೊಡದೆ, ರೂಪಾಯಿಗಳಿಗೆ ೯-೧೦ ಆಣೆಯ ವರೆಗೆ ಕರವನ್ನು ಏರಿಸಿದೆ. ಈ ಕುರಿತು ಅವಶ್ಯವಾದ ವಿರೋಧ ಪ್ರಯತ್ನಗಳನ್ನು ನಡಿಸುವ ವಿಚಾರ ಮಾಡಲು, ಗುಜರಾಥ ಪ್ರಾಂತದ ಪ್ರಮುಖ ಲೋಕನಾಯಕರಾದ ಶ್ರೀ|| ವಲ್ಲಭಭಾಯಿ ಪಟೇಲರವರು ೭೯ ಗ್ರಾಮಗಳ ಸಭೆಯನ್ನು ಸೇರಿಸಿ ವಿಚಾರಿಸಿದರು. ಸಭೆಯಲ್ಲಿ ಎಲ್ಲ ಸಮಾಜದವರಿದ್ದರು. ೩೦೦ ರಿಂದ ೫೦೦೦ ತನಕ ಕರ ಕೊಡುವ ಜಮೀನದಾರರೂ, ಇತರರೂ ಹಾಜರಿದ್ದರು. ೭೦೦ ರೂಪಾಯಿ ತೀರ್ವೆ ಕೊಡುವ ಒಬ್ಬ ಜಮೀನದಾರರೂ ಹಾಜರಿದ್ದರು. ಕೆಲವರು ಏರಿದ ತೀರ್ವೆಯನ್ನು ಮಾತ್ರ ಕೊಡಬಾರದೆಂದೂ, ಹಿಂದಿನಷ್ಟು ತೀರ್ವೆಯನ್ನು ಕೊಡಬಹುದೆಂದೂ ಅಭಿಪ್ರಾಯಪಟ್ಟರು; ಹಲವರು ಸರಕಾರವು ಬಗ್ಗುವ ತನಕ ತೀರ್ವೆಯನ್ನೇ ತೆರಬಾರದೆಂದು ಹೇಳಿದರು. ಶ್ರೀ|| ವಲ್ಲಭಭಾಯಿಯವರು ಎಲ್ಲರ ದೃಢ ನಿಶ್ಚಯವನ್ನು ಪರೀಕ್ಷಿಸಿದರು. ಗ್ರಾಮದೊಳಗಿನವರೆಲ್ಲರೂ ಹಿಂಜರಿದರೆ, ನೀವೇನು ಮಾಡುವಿರೆಂದು ಒಬ್ಬರಿಗೆ ಕೇಳಲು, ನಾನೊಬ್ಬನೇ ಬಂದದ್ದನ್ನು ಅನುಭವಿಸುತ್ತೇನೆಂದು ಅವರು ಹೇಳಿದರು. ತಮ್ಮ ಗ್ರಾಮದ ನಾಲ್ವರು ಮಹಾನುಭಾವರು ಮುಂದಾದರೆ, ತಾನು ಐದನೆಯವನಾಗಿ ಅವರಿಗೆ ಹಿಂಬಾಲಿಸುತ್ತೇನೆಂದು ಮತ್ತೊಬ್ಬರು ನುಡಿದರು. ನಾಲ್ವರು ತಯಾರಿರುವರೇನೆಂದು ಶ್ರೀ|| ವಲ್ಲಭಭಾಯಿಯವರು ಕೇಳಲು, ನಾಲ್ವರು

ಹಿಮ್ಮೆಲೇ ಎದ್ದುನಿಂತು ತಮ್ಮ ದೃಢ ನಿಶ್ಚಯವನ್ನು ಹೇಳಿದರು, ಶ್ರೀ| ವಲ್ಲಭಭಾಯಿ ಪಟೇಲರವರು ಆ ಮೇಲೆ ಸಭಿಕರಿಗೆ ಪರಿಸ್ಥಿತಿಯನ್ನು ಹೇಳಿದರು. ಸರಕಾರಿ ಠರಾವು ಅನ್ಯಾಯವಿದ್ದಿದೆ. ತಾವು ನ್ಯಾಯ ಪಕ್ಷಪಾತಿಗಳು; ಆದರೆ, ನ್ಯಾಯವನ್ನು ಪಡೆಯುವ ಸಾಮರ್ಥ್ಯವು ತಮ್ಮಲ್ಲಿದೇನೆಂದು ಇನ್ನೂ ನಾವು ವಿಚಾರ ಮಾಡತಕ್ಕ ವಿಷಯ. ಸರಕಾರದ ಬಳಿ ತರತರದ ಸಾಧನಗಳಿವೆ, ಅವನ್ನು ತಾವೆಲ್ಲರೂ ಗ್ರಹಿಸಬೇಕು; ತ್ಯಾಗದ ಪರಿಣಾಮವನ್ನು ಚನ್ನಾಗಿ ಅರಿತುಕೊಳ್ಳಬೇಕು; ಆ ಮೇಲೆ ತಾವು ಇದಿರಾಗಬೇಕು. ಇನ್ನೂ ವಿಚಾರ ಮಾಡಿರಿ. ಇತ್ಯಾದಿ ಸಂಗತಿಗಳನ್ನು ಶ್ರೀ| ವಲ್ಲಭಭಾಯಿಯವರು ಸಭಿಕರಿಗೆ ತಿಳಿಸಿಕೊಟ್ಟಿದರು. ಅನಕ ವರೆಗೆ ಸರಕಾರದ ಬಳಿ ತಾವು ಬರಕೊಳ್ಳುತ್ತೇವಾಗಿಯೂ, ಸರಕಾರವು ನಿಷ್ಪಕ್ಷಪಾತದಿಂದ ತಾಲೂಕಿನ ಸ್ಥಿತಿಯನ್ನು ಪುನರಾಲೋಚಿಸಿ ದೇಶಕಾಲಸ್ಥಿತಿಗುಚಿತವಾಗಿ ಸಿದ್ಧಾಂತಗಳನ್ನು ಕೈಕೊಳ್ಳಬಹುದಾಗುತ್ತದೇನೆಂದು ತಾವು ತಿಳಕೊಳ್ಳುತ್ತೇವಾಗಿಯೂ ಶ್ರೀ| ವಲ್ಲಭಭಾಯಿಯವರು ಹೇಳಿದರು. ಇನ್ನೊಮ್ಮೆ ಗ್ರಾಮದವರ ಸಭೆಯು ೧೨ನೇ ತಾರೀಖಿಗೆ ಜರಗುವದಿತ್ತು. ಸಭೆಯ ವೃತ್ತಾಂತವು ಇನ್ನೂ ಕೈಸೇರಲಿಲ್ಲ. ಆದರೆ, ಶ್ರೀ| ವಲ್ಲಭಭಾಯಿಯವರ ಸುವಿಚಾರದ ಕಲ್ಪನೆಗಳು ಸರಕಾರಕ್ಕೆ ಗ್ರಾಹ್ಯವಾಗಲಿಕ್ಕಿಲ್ಲವೆಂಬಂತೆ ತೋರುತ್ತದೆ. ಶ್ರೀ| ವಲ್ಲಭಭಾಯಿ ಪಟೇಲರವರು ಅಹಮದಾಬಾದ ಮ್ಯುನಿಸಿಪಾಲಿಟಿಯ ಅಧ್ಯಕ್ಷಸ್ಥಾನವನ್ನು ತೊರೆದು, ಬಾರ್ಡೋಲಿಯ ಕರನಿರಾಕರಣೆಯ ಪ್ರಯತ್ನದಲ್ಲಿ ಸೇರಲು ನಿರ್ಧಾರ ಮಾಡಿರುವರಾಗಿ ಮುಂಬಯಿಯ "ಸಂದೇಶ" ಪತ್ರಿಕೆಯು ಪ್ರಕಟಿಸಿದೆ. ಇಂದ ಬಳಿಕ, ಬಾರ್ಡೋಲಿಯ ಕರನಿರಾಕರಣೆಯ ಪ್ರಯತ್ನವು ಸಾಗುವದೆಂದು ಹೇಳಲಡ್ಡಿಯಿಲ್ಲ. ಕರಹೇರಿಕೆಯ ವಿಷಯವು ಇಡೀ ಹಿಂದುಸ್ಥಾನದ್ದೇ ವಿಷಯವಾದ್ದರಿಂದ ಶ್ರೀ| ವಲ್ಲಭಭಾಯಿಯವರ ಪ್ರಯತ್ನಕ್ಕೆ ಯಶಸ್ಸು ಪ್ರಾಪ್ತಿಯಾಗಲೆಂದು ಭಾರತೀಯರೆಲ್ಲರೂ ಪ್ರಾರ್ಥಿಸುತ್ತಿದ್ದಾರೆ.

***

ವರದಕ್ಷಿಣೆಯ ದುರಾಶೆಯ ಫಲ.

ಬಂಗಾಲ ಪ್ರಾಂತದ ಬಬಬಿಜ ಗ್ರಾಮದಲ್ಲಿ ವರದಕ್ಷಿಣೆಯನ್ನು ವಸೂಲ ಮಾಡುವ ಕ್ರಮದಿಂದ ಉಂಟಾದ ಅನರ್ಥದ ಕಥೆಯೊಂದು ಪ್ರಕಟವಾಗಿದೆ. ಶರತ್‌ಪತ್ರರೆಂಬವರಿಗೆ ಒಬ್ಬ ತಂಗಿಯಿದ್ದಳು. ಅವಳಿಗೆ ಪ್ರಿಯನಾಥರೊಡನೆ ನೆಂಟಸ್ತಿಕೆಯಾಯಿತು. ವರದಕ್ಷಿಣೆಯ ಬಗ್ಗೆ ಚಿನ್ನದ ಆಭರಣಗಳೂ, ರೋಖ ಹಣವೂ ಕೊಡಬೇಕೆಂದು ಮಾತಾಗಿತ್ತು. ಶರತ್‌ಪತ್ರರವರು ಮಾತಿನಂತೆ ಆಭರಣಗಳನ್ನು ಮುಟ್ಟಿಸಿದರು; ರೋಖ ರಕಮಿನ ಬಗ್ಗೆ ಕೈಪಟ್ಟಿಯನ್ನು ಬರಕೊಟ್ಟರು; ಅಂತು ಮದುವೆಯಾಯಿತು. ಪ್ರಿಯನಾಥರೂ, ಶರತ್‌ಪತ್ರರೂ ಆನಂದದಿಂದ ಹೋಳಿಗೆಗಳನ್ನು ಹೊಡೆದರು. ರೀತಿಯಂತೆ ಶರತ್‌ಪತ್ರರು ತಮ್ಮ ತಂಗಿಯನ್ನು ಪತಿಗೃಹಕ್ಕೆ ಕಳಿಸಿಕೊಟ್ಟರು. ಪದ್ಧತಿಯಂತೆ ಮೊದಲನೇ ಬಾರಿ ಕರತಂದ ವಧುವನ್ನು ತೌರಮನೆಗೆ ಮರಳಿ ಕಳುಹಲು ಪ್ರಿಯನಾಥರು ಬದ್ಧರಿದ್ದರು; ಆದರೆ, ಅವರು ಹೆಂಡತಿಗೆ ಕಳುಹಲಿಲ್ಲ; ಎಷ್ಟುಕನ್ನೂ ಕಳುಹಲಿಲ್ಲ. ಶರತ್‌ಪತ್ರರು ಬಹಳವಾಗಿ ಕೇಳಿಕಳುಹಿದರು; ಆದರೂ, ಪ್ರಿಯನಾಥರು ಮದುಮಗಳನ್ನು ತೌರಮನೆಗೆ ಕಳುಹಲಿಲ್ಲ. ಕೊನೆಗೆ ಕಾರಣವೇನೆಂದು ವಿಚಾರಿಸಲು, ಕೈಪಟ್ಟಿಯಂತೆ ಬರತಕ್ಕದ್ದಾದ ರಕಮನ್ನು ರೋಖ ವಸೂಲ ಕೊಟ್ಟರೆ ಮಾತ್ರ ವಧುವಿಗೆ ತೌರಮನೆಗೆ ಕಳಿಸಲ್ಪಡುವದಾಗಿ ಭಾವನವರಿಗೆ ಪ್ರಿಯನಾಥರು ಹೇಳಿದರು. ಶರತ್‌ಪತ್ರರಿಗೆ ಹಣದ ಅನುಕೂಲತೆಯಾಗಲಿಲ್ಲವೋ ಏನೋ! ತಂಗಿಗೆ ಕರತರಲು ವಿಪರೀತವಾಗಿ ಆತುರಪಟ್ಟರೋ ಏನೋ! ಅಥವಾ ಭಾವನವರಾದ ಪ್ರಿಯನಾಥರು ತಂಗಿಗೆ ಚಲೋ ರೀತಿಯಿಂದ ನಡಿಸುವದಿಲ್ಲೆಂಬ ಗ್ರಹಿಕೆಯಾದ್ದರಿಂದಲೋ ಏನೋ! ತಂಗಿಗೆ ಕರತರಲು ಸ್ವತಃ ಬಬಬಿಜ ಗ್ರಾಮಕ್ಕೆ ತೆರಳಿದರು. ಅಲ್ಲಿ ಪ್ರಿಯನಾಥರಿಗೂ, ಶರತ್-ಪತ್ರರಿಗೂ ದೊಡ್ಡ ಜಗಳವಾಯಿತು. ಪ್ರಿಯನಾಥರ ಪಕ್ಷದಿಂದ ಇನ್ನು ೩ ಮಂದಿಗಳು ಶರತ್‌ಪತ್ರರವರಿಗೆ ಇದಿರಾದರಂತೆ. ಶರತ್‌ಪತ್ರರವರಿಗೆ ಪೆಟ್ಟು ಬಿತ್ತು; ಚಲೋ ಪೆಟ್ಟು ಬಿತ್ತು; ವಿಪರೀತ ಹೊಡತ ಬಿತ್ತು. ಅಷ್ಟರಿಂದಲ್ಲೇ ಅವರು ಧೆಸವ್ವನೆ ಬಿದ್ದು ಪ್ರಾಣೋತ್ಕ್ರಮಣ ಮಾಡಿದರು. ವರದಕ್ಷಿಣೆಗಾಗಿ ಭಾವನಿಗ ಸಹ ಕೊಲ್ಲಲು ಮಾನವರು ಹಿಂಜರಿಯುತ್ತಿಲ್ಲವೇ? ವರದಕ್ಷಿಣೆಯೆಂದರೆ, ಅರ್ಥವೇನು? ಕನ್ನೆಯನ್ನುಕೊಡುವಾಗ ಅದರ ಜೊತೆಗೆ ದಕ್ಷಿಣೆ ಕೊಡಬೇಕೆಂಬುದೊಂದು ನಮ್ಮ ಶಾಸ್ತ್ರವಿದೆ. ಪ್ರತಿಯೊಂದು ದಾನಕ್ಕೂ ಚಿಕ್ಕ ದಕ್ಷಿಣೆಯನ್ನು ಕೊಡುತ್ತಾರೆ. ಗೋದಾನ-ಭೂದಾನ-ಕನ್ಯಾದಾನಗಳು ಪರಮ ಶ್ರೇಷ್ಠ ಪ್ರತಿಯವು. ಇವುಗಳಲ್ಲಿ ಗೋ-ಭೂ-ಕನ್ಯೆಗಳೇ ಪ್ರಮುಖಪದಾರ್ಥವುಗಳಲ್ಲವೆ, ಅವರ ಜೊತೆಗೆ ಸಿಗುವ ದ್ರವ್ಯಕ್ಕೆ ಎಷ್ಟುಕನ್ನೂ ಪ್ರಾಧಾನ್ಯವಿಲ್ಲ. ಹೀಗಿದ್ದೂ, ದ್ರವ್ಯದ ದುರಾಶೆಗೆ ತೊಡಗಿ ಕನ್ಯಾಪಿತರರನ್ನು ದಂಡಿಸಲು ವರಪಿತರು ಸಿದ್ಧರಾಗುತ್ತಾರೆಂದು ತಿಳಿದು, ಸನಾತನ ಸಮಾಜ ಹಿತಚಿಂತಕರೆಲ್ಲರೂ ಮರುಗುತ್ತಾರೆ. ವರದಕ್ಷಿಣೆ ಪಿಶಾಚಿಯ ಮಹತ್ವವನ್ನು ನೋಡಿ!

***

ಕಲಿಯುಗದೊಳಗಿನ ಪ್ರಮೀಳೆಯ ರಾಜ್ಯ !

ಧನುರ್ಧಾರಿ ಅರ್ಜುನನು ಅಶ್ವಮೇಧಯಜ್ಞಕ್ಕಾಗಿ ದಿಗ್ವಿಜಯಕ್ಕೆ ಹೊರಟಾಗ, ಪ್ರಮೀಳೆಯ ರಾಜ್ಯಕ್ಕೆ ಹೋಗಿದ್ದನೆಂದು ಕಥೆಯಿದೆ. ಪ್ರಮೀಳೆಯ ರಾಜ್ಯವು ಸ್ತ್ರೀ ರಾಜ್ಯವು; ಸ್ತ್ರೀಗಳಿಗೆ ಅಲ್ಲಿ ಪ್ರಾಧಾನ್ಯ. ರಾಜ್ಯಾಧಿಕಾರಿಗಳೂ, ಆ ಕುಟುಂಬದ ಯಜಮಾನಿಯರೂ ಸ್ತ್ರೀಯರೇ! ಅಂಥ ಒಂದು ರಾಜ್ಯವು ಇರಾಣ ದೇಶದೊಳಗಿನ ಯೋಸಾಯ್ ಎಂಬಲ್ಲಿರುತ್ತದಾಗಿ ಕಲಕತ್ತೆಯ 'ಫೋರವರ್ಡ' ಪತ್ರಿಕೆಯಲ್ಲಿ ಪ್ರಕಟಹೊಂದಿದೆ. ಅಲ್ಲಿ ಹೆಂಡಂದಿರೂ, ತಾಯಂದಿರೂ ಸಾರ್ವಭೌಮರು. ಗಂಡಂದಿರೂ, ಮಗಂದಿರೂ ಅಂತಃಪುರದಲ್ಲಿ ನಮ್ಮಲ್ಲಿಯ ಹೆಂಗಸರಂತೆ ವಾಸಿಸುತ್ತಾರೆ. ಸಾಮಾನ್ಯ ಹೆಂಗಸರಂತೆ ಅಥವಾ ಮುಸಲ್ಮಾನ ಹೆಂಗಸರಂತೆ ಅಂತಃಪುರದಲ್ಲಿಯೇ ಕೊಂಡು ಯಾರಿಗೂ ಮೋರೆ ತೋರಿಸುವದಿಲ್ಲ. ವಾರಸಿಕ ಅಧಿಕಾರವೆಲ್ಲ ಸ್ತ್ರೀ ಸಂತತಿಗೇ ಹೊರತು, ಪುತ್ರ ಸಂತತಿಗಿಲ್ಲ. ಸ್ತ್ರೀ ಪ್ರಾಧಾನ್ಯದ ಮೂಲಕ ಎಲ್ಲವೂ ತಿರುವು-ಮುರುವು!! ಮದುವೆಯಾದರೆ, ಹೆಣ್ಣಿಗೆ ಗಂಡನ ಮನೆಯೆಂಬುವದಿಲ್ಲ. ಗಂಡಸಿಗೆ ಹೆಣ್ಣಿನ ಮನೆ, ಅಂದರೆ, ಗಂಡಸು ಹೆಣ್ಣಿನ ಮನೆಗೆ ಹೋಗಿ ಉಳಕೊಳ್ಳಬೇಕು; ಮನೆ ಕೆಲಸ ಮಾಡಿ ಹೆಣ್ಣಿನ ಮರ್ಜಿ ಕಾಯುತ್ತಿರಬೇಕು; ಅವಳಿಗೆ ವಿಧೇಯನಾಗಿ ಕಾಲ ಕಳೆಯಬೇಕು! ಗಂಡಸರಿಗೆ ಶ್ವಶುರಗೃಹನಿವಾಸವು ಸ್ವರ್ಗತುಲ್ಯವೆಂದು ಹೇಳಲ್ಪಟ್ಟಿರುವದಷ್ಟೇ ! ಆದರೆ, ಈ ವಿಷಯಕ್ಕೆ ಯೋಸಾಯ್‌ದೊಳಗಿನ ರಾಜ್ಯವು ಅಪವಾದವು. ಶ್ವಶುರಗೃಹದಲ್ಲಿ ಜಾಮಾತನು ಪಾತ್ರೆಗಳನ್ನು ತಿಕ್ಕಿ ತಿಕ್ಕಿ ಅವರ ಮನೆಯಲ್ಲಿ ದಣಿದು ಸಪ್ಪಗಾಗುತ್ತಾನೆ. ಇಂಥ ಪ್ರದೇಶದಲ್ಲಿ ಕೂರತೆಲ್ಲಿರಬೇಕು? ಅದರಿಂದ ಈ ರಾಜ್ಯದಲ್ಲಿ ಯುದ್ಧದ ಭೀತಿಯಿಲ್ಲ; ಯುದ್ಧ ಮಾಡುವ ಸಾಹಸಿಗ ಗಂಡಸರೇ ಅಡಿಗೆ ಮನೆಯಲ್ಲಿ ಬಳಲಬೇಕಾದಾಗ, ಯುದ್ಧ ಮಾಡುವವರಾರು? ಅಬಲೆಯರ ಎಷ್ಟೂ ಪ್ರಬಲರಾದಾಗ್ಯೂ, ಅಬಲೆಯರ ಪ್ರಾಬಲ್ಯವು ಪ್ರಬಲರ ಪ್ರಾಬಲ್ಯಕ್ಕೆ ಸರಿಕಟ್ಟೀತೇ ? ವ್ಯಾಪಾರ-ಉದ್ಯೋಗಗಳೆಲ್ಲ ಸ್ವಾಭಾವಿಕವಾಗಿ ಸ್ತ್ರೀಯರ ಕೈಯಲ್ಲಿವೆ. ಈ ರಾಜ್ಯವು ಈ ಯುಗದಲ್ಲಿ ಇನ್ನೂ ದಾಳುತ್ತಿರಲಿಲ್ಲ; ಪರಮಾತ್ಮನ ಅನುಗ್ರಹವು ಈ ರಾಜ್ಯಕ್ಕಿದೆ: ಈ ಪಟ್ಟಣದ ಅಡವಿಯೂ ದೊಡ್ಡ ದೊಡ್ಡ ಪರ್ವತಗಳೂ ಈ ರಾಜ್ಯದ ಸುತ್ತ ಮುತ್ತ ಇವೆ. ಇದರಿಂದ ಈ ರಾಜ್ಯದ ಮೇಲೆ ದಾಳಿ ಮಾಡುವದು ಕಠಿಣವಾಗಿದೆ. ಅದರಿಂದ ಈ ರಾಜ್ಯವು ಬಾಳಿಕೊಂಡಿದೆ.

— ಮಹಾತ್ಮರು ಸೆಪ್ಟಗಾದ ಖರೀಫ, ಅಂದರೆ, ಮಳೆಗಾಲ ತೀರಿದ ಬಳಿಕ, ಆಂಧ್ರ ಹಾಗು ಕರ್ನಾಟಕ ಪ್ರಾಂತಗಳನ್ನು ಸಂಚರಿಸುವವರಾಗಿ ಅಭಿವಚನವನ್ನಿತ್ತಿದ್ದಾರೆ.



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ತೀಕ ಕಟ್ಟಿಗೆಯ

ದೇವರ ಮಂಟಪಗಳೂ,

ರೆಂಗಸರ ಸೌಭಾಗವತಿ ಪೆಟ್ಟಿಗೆಗಳೂ, ದಿಕ್ಕನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚೀಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಕಾನಡಾ ವೃತ್ತ.

...ತಿ ಪ್ರಭವ ಸಂ| ಮಾಘ ಬ| ೧೪ ೬, ಸೋಮವಾರ.

ಸ್ಯಾಮುನ್‌ರ ಕಪಟ!

ಭರತಭೂಮಿಗೆ ಕಲ್ಯಾಣ ಮಾಡಬಂದ ಸರ್ ಜ್ಹೊನ್ ಸ್ಯಾಮುನ್‌ರವರು ಸುಳ್ಳುಗಾರರೆಂದೂ, ಭಾರತೀಯರಿಗೆ ವಂಚಿಸಲು ಹೊಂಚು ಹಾಕಿದ್ದಾರೆಂದೂ ಇನ್ನೂ ತನಕ ಅನೇಕರು ಭಾವಿಸಿದ್ದಿಲ್ಲ. ಬ್ರಿಟಿಶ ಆಡಳಿತೆಯ ದೋಷಗಳೇನಿದ್ದಾಗ್ಯೂ, ಸ್ವತಃ ಸ್ಯಾಮುನ್‌ರವರು ತೀರ ಸಭ್ಯ ಪುರುಷರೆಂದು ಅನೇಕರು ಕಲ್ಪಿಸಿದ್ದರು. ಆದರೆ, ಸರ್ ಜ್ಹೊನ್ ಸ್ಯಾಮುನ್‌ರವರು ನಡಿಸಿದ ಲೋಕವಂಚಕ ಕಾರಸ್ಥಾನದ ಮೇಲಿಂದ ಅವರಷ್ಟು ಠಕ್ಕರು ಬೇರೊಬ್ಬರಿರಲಿಕ್ಕಿಲ್ಲವಾಗಿ ಈಗ ಅನುಮಾನಿಸಬೇಕಾಗಿದೆ.

ಸರ್ ಜ್ಹೊನ್ ಸ್ಯಾಮುನ್‌ರವರ ಠಕ್ಕುತನವನ್ನು ನಿವೇದಿಸುತ್ತೇವೆ ಭರತಭೂಮಿಗೆ ಬಂದ ಬಳಿಕ, ಲೋಕಮತವನ್ನು ಅನುಕೂಲ ಮಾಡಿಕೊಳ್ಳುವ ದಿಸೆಯಿಂದ ಸರ್ ಜ್ಹೊನ್ ಸ್ಯಾಮುನ್‌ರವರು ಪ್ರಕಟಿಸಿದ ಚೌಕಶಿಕ್ರಮದ ಕೆಲವು ಅನುಕೂಲತೆಗಳನ್ನು ನಾವು ಈ ಹಿಂದೆ ಪರಾಂಬರಿಸಿರುವೆವು, ಸ್ಯಾಮುನ್‌ರವರು ಕೊಡಮಾಡಿದ ಅನುಕೂಲತೆಗಳಲ್ಲಿ ಭಾರತೀಯರ ಕೆಳತರಗತಿಯು ಸ್ಫುಟವಾಗುತ್ತದಾಗಿಯೂ ನಾವು ದಿಗ್ದರ್ಶನ ಮಾಡಿದ್ದೇವೆ ಈ ಅನುಕೂಲತೆಗಳು ಸ್ಯಾಮುನ್‌ರ ಅನುಗ್ರಹದಿಂದ ಭಾರತೀಯರಿಗೆ ಪ್ರಾಪ್ತವಾಗಿರುವವೆಂದು ಪ್ರಕಟವಾಗಿತ್ತು. ಆದರೆ, ಇದೆಲ್ಲ ಕಪಟನಾಟಕವೆಂದು ಈಗ ಗೊತ್ತಾಗುತ್ತದೆ ಇನ್ನೂ ಅನೇಕ ಅನುಕೂಲತೆಗಳನ್ನು ಭಾರತೀಯರಿಗೆ ಪೂರೈಸಲು ಭಾರತ ಮಂತ್ರಿಗಳಾದ ಬರ್ಕನ್‌ಹೆಡ್ ದೊರೆಗಳು ಸ್ಯಾಮುನ್‌ರವರಿಗೆ ಹೇಳಿದ್ದರೆಂದೂ, ಆ ಅನುಕೂಲತೆಗಳನ್ನು ಈ ಹಿಂದೆಯೇ ಪ್ರಕಟಿಸಬೇಕೆಂದು ಬರ್ಕನ್‌ಹೆಡ್ ದೊರೆಗಳು ಅಪೇಕ್ಷಿಸಿದ್ದರೆಂದೂ, ಸ್ಯಾಮುನ್‌ರವರು ಲೋಕೋಪಕಾರಕ್ಕಾಗಿ ಆ ಅನುಕೂಲತೆಗಳನ್ನು ತಾವು ಹಿಂದುಸ್ಥಾನಕ್ಕೆ ಹೋದ ಬಳಿಕ ಪ್ರಕಟಿಸುತ್ತೇವಾಗಿ ಹೇಳಿದರೆಂದೂ "ಫ್ರೀ ಪ್ರೆಸ್" ವಾರ್ತಾ ಸಂಸ್ಥೆಯ ವಿಲಾಯತಿಯೊಳಗಿನ ಚಿತ್ರಗುಪ್ತರು ಸಾಧಾರವಾಗಿ ಬರೆದಿದ್ದಾರೆ. ಶಬ್ದಯೋಜನೆಯು ಸಹ ಸ್ಯಾಮುನ್‌ರು ವಿಲಾಯತಿಯಿಂದ ಹೊರಡುವ ಮುಂಚೆಯೇ ಸಿದ್ಧವಾಗಿತ್ತಂತೆ. ಹೊಸ ಕ್ರಮವೆಂದು ವಿಲಾಯತಿಯಲ್ಲಿ ಸ್ಯಾಮುನ್‌ರ ಪ್ರಕಟಣೆಯು ಪ್ರಸಿದ್ಧವಾದೊಡನೆ, ಮೇಜರ ಗ್ರಹಮ ಪೋಲ ಎಂಬ ಕೂಲಿಕಾರ ಪಕ್ಷದ ಸಭಾಸದರು, ಅದರೊಳಗೆ ಹೊಸದೇನಿಲ್ಲವಾಗಿ ಪ್ರಕಟಿಸಿದರು. ಸ್ಯಾಮುನ್‌ರು ಇದನ್ನೆಲ್ಲ ಅಲ್ಲಗಳೆದು, ತಮ್ಮ ಸುಳ್ಳುಗಾರಿಕೆಯನ್ನು ಬಚ್ಚಿಡಲು ಪ್ರಯತ್ನಪಟ್ಟರು. ಆದರೂ, ಮೇಜರ ಗ್ರಹಮ ಪೋಲರವರು ತಮ್ಮ ಅಂಬೋಣವೇ ಸಾಧಾರವೆಂದೂ ಪುನಃ ಪ್ರಸ್ಥಾಪಿಸಿದ್ದಾರೆ. ಕೂಲಿಕಾರ ಪಕ್ಷದ ಒತ್ತಾಯದಿಂದ ಇವೇ ಮುಂತಾದ ಅನುಕೂಲತೆಗಳು ನಿರ್ಣಿತವಾಗಿದ್ದವಂತೆ. ಲಂಡನಿನೊಳಗಿನ « ಡೇಲಿ ಹೆರಲ್ಡ " ಪತ್ರಿಕೆಯಂತು ಸ್ಯಾಮುನ್‌ರವರ ಅಂಬೋಣವು ಅಸಂಬದ್ಧವಾಗಿರುವದೆಂದು ಅಭಿಪ್ರಾಯಪಟ್ಟಿದೆ. ಇಷ್ಟು ಸಂಭಾವನೆಯು ಸರ್ ಜ್ಹೊನ ಸ್ಯಾಮುನ್‌ರಿಗೆ ಸಾಲದೇನು?

ಇನ್ನೂ ಒಂದು ಸುದ್ದಿ ಬಂದಿದೆ. ಸ್ಯಾಮುನ್‌ರವರು, ಪ್ರಕಟವಾದ ಕಾರ್ಯಕ್ರಮದಂತೆ, ಈ ಬಾರಿ ಪುರಾವೆಯನ್ನು ಸಂಗ್ರಹಿಸಲಿಕ್ಕಿಲ್ಲ; ಭಾರತ ಭೂಮಿಯಲ್ಲಿ ಸಂಚರಿಸಿ — ತಮ್ಮ ಖರ್ಚಿನಿಂದಲ್ಲ — ಪುನಃ ಸ್ವದೇಶಕ್ಕೆ ಹೋಗಿ, ಮರಳಿ ಬಂದು ವಿಚಾರದ ಕ್ರಮವನ್ನು ಪ್ರಾರಂಭಿಸುವರು. ಇದು ಹಿಂದುಸ್ಥಾನದಲ್ಲಿ ಪ್ರಕಟವಾದ ಹಿಂದುಸ್ಥಾನವಿಷಯಕ ಬಹಿರಂಗ ಸುದ್ದಿ! ವಿಲಾಯತಿಯಲ್ಲಿ ಪ್ರಕಟವಾಗದಿದ್ದ ಅಂತರಂಗದ ಸುದ್ದಿ ಏನೆಂದು ಬಲ್ಲಿರಾ? ಭಾರತೀಯರಿಗೆ ಇನ್ನೂ ಹೆಚ್ಚಿನ ಅನುಕೂಲ್ಯಗಳನ್ನು ಪೂರೈಸಲು ಅಪ್ಪಣೆಯಿದೆ! ಭರತಖಂಡದೊಳಗಿನ ಬ್ರಿಟಿಶ ರಾಜ್ಯಾಧಿಕಾರಿಗಳ ಒತ್ತಾಯದಿಂದ ಅವನ್ನು ಸ್ಯಾಮುನ್‌ರು ಪ್ರಕಟಿಸಲೊಪ್ಪಲಿಲ್ಲ, ಮುಂದೆ ಅವರು ಕೊಡಲಿಕ್ಕಿದ್ದಾರೆ ಆದರೆ, ಒಂದು ಶರ್ತದ: ಭಾರತೀಯರಿಗೆ ತಿಳಿಯದಂತೆ ಗುಪ್ತವಾಗಿ ಪುರಾವೆಯನ್ನು ಸ್ಯಾಮುನ್‌ರ ಕೂಟವು ಮೊಟ್ಟಮೊದಲು ಈ ಬಾರಿಯೇ ಸಂಗ್ರಹಿಸುವದು. ಹೀಗೆ ಗುಪ್ತ ವಿಚಾರದ ಕೆಲಸ ಮುಗಿದ ಬಳಿಕ, ಬಹಿರಂಗ ವಿಚಾರದ ಸಮಯ ಭಾರತೀಯರಿಗೆ ಸಮಾನಸ್ಕಂಧರಾಗಿ ನಡಿಸಿಕೊಳ್ಳುವ ನವ ಮಾತಿ, ಭಾರತೀಯರೂ, ಬ್ರಿಟಿಶರೂ ಸ್ಯಾಮುನ್ ಕೂಟದ ಸಮಯ ಸಮಾನತೆಯಿಂದ ವರ್ತಿಸಿದರೆಂದು ಲೋಕಕ್ಕೆ ಸಾರುವರು ಸರಕಾರಿ ಅಧಿಕಾರಿಗಳು ಪ್ರಜೆಗಳಿಗೆ ವಿರೋಧವಾದ ವೃತ್ತಾಂತವನ್ನು ಕಲಿತುಹಾಕುತ್ತಿದ್ದಾರೆಂದೂ, ಅದನ್ನು ಸ್ಯಾಮುನ್‌ರ ಕೂಟವು ಈಗ ಸ್ವೀಕರಿಸಿ, ಮುಂದೆ ಸಮಾನ ದರ್ಜೆಯ ಕಪಟ ನಾಟಕದ ರಂಗಸ್ಥಳವನ್ನು ಕಟ್ಟುವದೆಂದೂ "ಫ್ರೀ ಪ್ರೆಸ್" ವಾರ್ತಾಹಾರಕ ಸಂಸ್ಥೆಯ ವಿಲಾಯತಿಯೊಳಗಿನ ಪ್ರತಿನಿಧಿಗಳು ಸಾಧಾರವಾಗಿ ಹೇಳಿದ್ದಾರೆ.

ಇದನ್ನೆಲ್ಲ ವಿಚಾರಿಸಿದರೆ, ಸರ್ ಜ್ಹೊನ್ ಸ್ಯಾಮುನ್‌ರವರ ನೀತಿಮತ್ತೆಯು ವಿಪರೀತವಾಗಿ ಭ್ರಷ್ಟವಾಗದೆಂದು ಹೇಳಬೇಕಾಗುತ್ತದೆ. ಸ್ಯಾಮುನ್‌ರವರ ಕುರಿತು ನಮ್ಮಲ್ಲಿಯ ಅನೇಕರಿಗೆ ಬಲು ಆದರವಿತ್ತು. ಸತ್ಸಂಗತಿಯಿಂದ ಮಾನವನ ಉದ್ಧಾರವಾಗುವಂತೆ, ದುಸ್ಸಹವಾಸದಿಂದ ಮಾನವನು ಪತಿತನಾಗುತ್ತಾನೆಂದೂ ಇದರ ಮೇಲಿಂದ ಸಿದ್ಧವಾಗುತ್ತದೆ. ಅಷ್ಟು ಪ್ರಕೃತ ರಾಜ್ಯಪದ್ಧತಿಯು ನಿಂದ್ಯವಿದೆ. ಅದರಿಂದಲೇ ಲಾಲಾ ಲಜಪತರಾಯರು ಮಧ್ಯವರ್ತಿ ಕಾಯಿದೆ ಕೌನ್ಸಿಲಿನ ಗುರುವಾರದ ಅಧಿವೇಶನದಲ್ಲಿ ಈಗಿನ ರಾಜ್ಯಪದ್ಧತಿಗಿಂತ ಅರಾಜಕತೆಯೇ ಶ್ರೇಯಸ್ಕರವೆಂದು ಉದ್ಗರಿಸಿದರು; ಹಿಂದುಸ್ಥಾನವನ್ನು ಸುಲಿದು ಬ್ರಿಟಿಶರು ತಮ್ಮ ಹೊಟ್ಟೆಯನ್ನು ಹೊರಕೊಳ್ಳುತ್ತಾರಾಗಿಯೂ ಧ್ವನಿಸಿದರು, ಈ ಹೊತ್ತಿಗೇ ಹಿಂದುಸ್ಥಾನದಿಂದ ಬ್ರಿಟಿಶರು ಕಾಲ್ತೆಗೆದು ನಡೆದರೂ, ಯಾರೂ ಪಶ್ಚಾತ್ತಾಪಪಡಲಿಕ್ಕಿಲ್ಲವಾಗಿಯೂ, ಮೇಲಾಗಿ ಕೇಳಿದರೆ, ಹಿಂದುಸ್ಥಾನಕೆ ಹಿತವಿರುವದೆಂದೂ ಆವೇಶದಿಂದ ಗರ್ಜಿಸಿದರು. ಹಿಂದು-ಮುಸಲ್ಮಾನಾದಿ ಸಾಮಾಜಿಕ ಐಕ್ಯಭಂಗಕ್ಕೆ ಬ್ರಿಟಿಶರೇ ಕಾರಣರೆಂದೂ ಲಜಪತರಾಯರು ಒತ್ತಿಹೇಳಿದರು; ಅಸ್ಪೃಶ್ಯರ ದೈನ್ಯವನ್ನು ವರ್ಣಿಸಿ ವ್ಯಥಿಸುವ ಈಗಿನ ರಾಜ್ಯಪದ್ಧತಿಯಿಂದ ಎಳ್ಳುಕಾಳಿನಷ್ಟು ಪ್ರಯೋಜನವಿಲ್ಲವಾಗಿಯೂ ಲಜಪತರಾಯರು ಎದೆತಟ್ಟಿ ಹೇಳಿ, ಸರಕಾರದ ರಾಜ್ಯಾಡಳಿತೆಯು ಪ್ರಾಮಾಣಿಕತನದಿಂದ ಸಾಗುವದಿಲ್ಲವಾಗಿ ಸಮಾರೋಪ ಮಾಡಿದರು. ಇಂಥ ರಾಜ್ಯದಲ್ಲಿ ಸರ್ ಜ್ಹೊನ್ ಸ್ಯಾಮುನ್‌ರವರು ಸೇರಿಕೊಂಡಾಗ, ಅವರಿಂದ ರಾಜ್ಯಪದ್ಧತಿಗೆ ಉಪಕಾರವಾಗುವದಕ್ಕಿಂತ, ಅವರಿಗೇನೇ ಹೆಚ್ಚಿನ ಅಪಕಾರವಾಗಿದೆ. ಇದನ್ನು ನೋಡಿ, ನಮಗೆ ಬಹಳ ವ್ಯಸನವಾಗಿದೆ. ಸ್ಯಾಮುನ್‌ರ ಕಪಟಕ್ಕೆ ಇನ್ನು ಭಾರತೀಯರು ಬಲಿಬೀಳರು: ಇದು ನಿಶ್ಚಿತ.

ಈ ಲೇಖವನ್ನು ಮುಗಿಸುವ ಮುಂಚೆ, ಒಂದು ಪ್ರಶಂಸೆಯನ್ನು ನಾವು ಮಾಡಲೇಬೇಕು. "ಫ್ರೀ ಪ್ರೆಸ್ ಆಫ್ ಇಂಡಿಯಾ" ಎಂಬ ವಾರ್ತಾವಾಹಕ ಸಂಸ್ಥೆಯ ಏರ್ಪಾಟಾದಂದಿನಿಂದ ಬ್ರಿಟಿಶರ ತಿರುಳು ವಿಶೇಷವಾಗಿ ಹೊರಬೀಳಹತ್ತಿದೆ. ಈ ಸಂಸ್ಥೆಯ ಪ್ರತಿನಿಧಿಗಳು ವಿಲಾಯತಿಯೊಳಗಿನ ಗುಪ್ತ ಸುದ್ದಿಗಳನ್ನು ಸಂಗ್ರಹಿಸುವದರಲ್ಲಿ ಬಲು ಕುಶಲರಿದ್ದಾರೆ ಆಗಿಂದಾಗ ಅಲ್ಲಲ್ಲಿಯ ಪ್ರಮುಖರೊಡನೆ ಆಲೋಚಿಸಿ, ಬ್ರಿಟಿಶ ಮಹಾನುಭಾವರು ಹಿಂದುಸ್ಥಾನದಲ್ಲಿ ನಡಿಸುವ ಠಕ್ಕುತನವನ್ನು ಅಲ್ಲಿಂದಲ್ಲೇ ಬೈಲಿಗೆಳೆಯುತ್ತಾರೆ; ಇಲ್ಲಿಯ ವಾಸ್ತವಸ್ಥಿತಿಯನ್ನು ಅಲ್ಲಿ ಯಥಾರ್ಥವಾಗಿ ತಿಳಿಸುತ್ತಾರೆ. ಈ ತನಕ ಸರಕಾರಪಕ್ಷಪಾತಿ "ರೊಯ್ಟರ" ಸುದ್ದಿಗಾರರ ಮೇಲೆಯೇ ನಾವು ಅವಲಂಬಿಸಿರಬೇಕಾಗುತ್ತಿತ್ತು; ಇಲ್ಲಿ 'ರೊಯ್ಟರರು' ಹಿಂದಹಿತಕಾರಕ ಸುದ್ದಿಗಳನ್ನು ತತ್ಪರತೆಯಿಂದಾಗಲಿ ಪ್ರಾಮಾಣಿಕತನದಿಂದಾಗಲಿ ಬೀರುತ್ತಿರಲಿಲ್ಲ;

ಅದರಿಂದ ನನಗೆ ಬಹು ದೊಡ್ಡ ಪ್ರತಿಬಂಧವಾಗುತ್ತಿತ್ತು. "ಫ್ರೀ ಪ್ರೆಸ್" ವಾರ್ತಾವಾಹಕರು ಈ ಅನಾನುಕೂಲತೆಯನ್ನು ಲಕ್ಷಿಸಿ, ಈ ಸಂಸ್ಥೆಯನ್ನೇರ್ಪಡಿಸಿಕೊಂಡು, ಅಲ್ಲಲ್ಲಿಯ ವಾಸ್ತವ ಸಂಗತಿಗಳನ್ನು ಪ್ರಕಟಿಸಿ, ಭಾರತೀಯರಿಗೆ ಉಪಕಾರ ಮಾಡಿದ್ದಾರೆ. ಸ್ಯಾಮನ್‌ರ ಕೂಟದ ಸಮಯ "ಫ್ರೀ ಪ್ರೆಸ್ಸಿ"ನವರು ಮಾಡಿದ ಸೇವೆಯನ್ನು ನಾವು ಆನಂದದಿಂದ ಕೊಂಡಾಡುವೆವು. "ಫ್ರೀ ಪ್ರೆಸ್ಸಿ"ನ ಜನ್ಮದಿಂದ ಬ್ರಿಟಿಶರ ಪ್ರಾಪಕ್ಕೆ ಬಾಯೊಡೆದಂತಾಗಿದೆ. ಯಾವದಕ್ಕೂ ಸೀಮೆಯಿರುವದಲ್ಲವೇ? ಮೀರಿದಪ್ಪಿಯಾವದನ್ನೂ, ಯಾರೂ ಮಾಡಲಾಗದು. 'ರೊಯ್ಟರ್' ಸುದ್ದಿಗಾರರು ಈ ತನಕ ನಡಿಸಿದ ಕಣ್ಣು-ಮುಚ್ಚಾಳಿಕೆಯ ಆಟದಿಂದ ಬೆಚ್ಚಿಬಿಟ್ಟ ನಾವು ಮೀರಿದಪ್ಪಿ ಹೋದ್ದರಿಂದ, "ಫ್ರೀ ಪ್ರೆಸ್" ಸಂಸ್ಥೆಯು ಜನ್ಮವನ್ನಿತ್ತಿತೆಂದು ಭಾವಿಕರು ಕಲ್ಪಿಸಿದರೆ, ಅಯಥಾರ್ಥವಾಗದು. "ಫ್ರೀ ಪ್ರೆಸ್" ಸಂಸ್ಥೆಯು ತನ್ನ ಮುಂದೆಯೂ ಇದೇ ಪ್ರಕಾರ ಸೇವೆ ಸಲಿಸುತ್ತಿರಲೆಂದೂ, ಚಿರಕಾಲ ಬಾಳಲೆಂದೂ ನಾವು ಪ್ರಾರ್ಥಿಸಿ ಸ್ಯಾಮನ್‌ರ ಕಪಟ ನಾಟಕದ ಮೊದಲನೇ ಪ್ರವೇಶವನ್ನು ಇಲ್ಲಿಗೆ ಮುಗಿಸುವೆವು. ಮುಂದೆ ಹೊಸ ಹೊಸ ಪ್ರವೇಶಗಳೂ, ಹೊಸ ಹೊಸ ಪಾತ್ರಗಳೂ ರಂಗಸ್ಥಳದ ಮೇಲೆ ಬರಲಿಕ್ಕಿವೆ. ಯಥಾವಕಾಶ ಅವುಗಳನ್ನು ಸಮಾಲೋಚಿಸುವೆವು.

ಸ್ಫುಟ ಸೂಚನೆಗಳು.

೧. ಮಹಾತ್ಮರಿಗೆ ಪರಮಾತ್ಮನ ಮೇಲೆ ಅಗಾಧವಾದ ಶ್ರದ್ಧೆಯಿದೆ. ಈ ಶ್ರದ್ಧೆಯು ಅನೇಕ ಬಾರಿ ಅನೇಕ ಸಂಗತಿಗಳಲ್ಲಿ ವ್ಯಕ್ತವಾಗಿದೆ. ಸದ್ಯಕ್ಕೆ ಸಂಭವಿಸಿದ ಒಂದು ಕಥೆಯನ್ನು ನಾವು ಹೇಳುವೆವು. ಮಹಾತ್ಮರಿಗೆ ಮೊದಲಿನಿಂದಲೂ ಸ್ವಲ್ಪ ದುರ್ಬಲ ಇರುವವರು. ಅವರು ನಿಶ್ಶೇಷ್ಟರಾಗಿ ಬಿದ್ದ ಸಂಗತಿಯು ಸಕಲರಿಗೂ ವಿದಿತವಾದದ್ದೇ. ಮಹಾತ್ಮರಿಗೆ ದೇಹದ ಪರಿವೆಯಿಲ್ಲದೆ ಇನ್ನು ನುಡಿಯಬಾರದಾಗಿಯೂ, ದೇಹಕ್ಕೆ ವಿಶ್ರಾಂತಿಯನ್ನು ಪಡೆಯಬೇಕಾಗಿಯೂ ಹಲವರು ಬಿನ್ನಹ ಮಾಡಿಕೊಂಡರು. ಅವರಿಗೆಲ್ಲರಿಗೆ ಆಶ್ವಾಸಿಸುವದಕ್ಕಾಗಿ ಮಹಾತ್ಮರು 'ಯಂಗ ಇಂಡಿಯಾ'ಪತ್ರಿಕೆಯಲ್ಲಿ ಒಂದು ಲೇಖ ಬರೆದಿದ್ದಾರೆ. ಮಹಾತ್ಮರು ಬರೆಯುವದೇನಂದರೆ:— "ನಿಧನ ಹೊಂದಲು ನಾನು ಗಾಬರಿಪಡುವದಿಲ್ಲ. ದೇಹರಕ್ಷಣೆಗಾಗಿ ಅವಶ್ಯವುಳ್ಳ ಹಾಗು ಸಾಧ್ಯವುಳ್ಳ ಉಪಾಯಗಳನ್ನು ನಾನು ಕೈಕೊಳ್ಳುತ್ತಿದ್ದೇನೆ. ಆದರೆ, ನನ್ನ ದೇಹವನ್ನು ರಕ್ಷಿಸಲು ನನ್ನ ಧ್ಯೇಯಗಳನ್ನು ನಾನು ಕಳಕೊಳ್ಳಲಾರೆ. ಧ್ಯೇಯಗಳಿಗೆ ಭಂಗ ಬಾರದಂತೆ ಧ್ಯೇಯರಕ್ಷಣೆ ಮಾಡಿಕೊಳ್ಳಲು ನಾನು ಯಾವಾಗಲೂ ಪ್ರಯತ್ನಪಡುತ್ತಲಿದ್ದೇನೆ. ನನ್ನ ಬಗ್ಗೆ ಒಂದು ಮಾತನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು. ದೈವಪಾಪಿಯೆಂದು ನನಗೆ ನಿಂದಿಸಿದರೂ ಪರಿವೆಯಿಲ್ಲ. ಪರಮಾತ್ಮನ ಸಂಕಲ್ಪವಿರದೆ ಒಂದು ಕೂದಲು ಸಹ ಸಿದಿದಾಡುವದಿಲ್ಲ. 'ಆತನಿಗೆ ನನ್ನ ದೇಹದ ಅವಶ್ಯವಿಲ್ಲವಿದ್ದರೆ, ಎಷ್ಟು ಜಾಗ್ರತೆಯಿಂದಿದ್ದಾಗ್ಯೂ, ಕೌಶಲ್ಯವಂತರಿದ್ದಾಗ್ಯೂ ಶ್ರೀಮಂತರಿದ್ದಾಗ್ಯೂ, ಧನ್ವಂತರಿಗಳ ಉಪಚಾರವಲ್ಲಿದ್ದಾಗ್ಯೂ ನನ್ನ ದೇಹವು ಬಾಳಿ ಉಳಿಯದು. ಇತರ ಮೇಲಿಂದ ಡಾಕ್ಟರರ ಉಪಚಾರಗಳನ್ನು ನಾನು ಧಿಕ್ಕರಿಸುತ್ತೇನೆಂದು ಯಾರೂ ತಿಳಿಯಲಾಗದು. ಯಾಕಂದರೆ, ದೈವಸಂಕಲ್ಪವು ನನಗೆಲ್ಲಿ ತಿಳಿದದೆ? ಅದು ತಿಳಿಯುವ ತನಕ ಜಡ ದೇಹವನ್ನು ಜೋಪಾನ ಮಾಡಲು ನಾನು ಬದ್ಧನಿದ್ದೇನೆ." ಮಹಾತ್ಮರ ಶ್ರದ್ಧೆಯನ್ನು ನೋಡಿದರೆ, ಹಿಮ್ಮೇಲೀ ಮನಸ್ಸು ಉಲ್ಲಸಿತವಾಗಿ ಧರ್ಮಭೂಮಿಯಾದ ಭರತ ಭೂಮಿಯಲ್ಲಿ ಧರ್ಮೋದ್ಧಾರ ಮಾಡಲು ಪರಮಾತ್ಮನು ಮಹಾತ್ಮರಿಗೆ ಯೋಜಿಸಿದ್ದಾನೇನೆಂಬದೊಂದು ಭಾವನೆಯಾಗುತ್ತದೆ. ಪ್ರಸಂಗದಲ್ಲಿದ್ದು ಅಡಿಗಡಿಗೆ ಪರಮಾತ್ಮನ ಸೂತ್ರವನ್ನೇ ಕಾಣುವ ಮಹಾತ್ಮರು ಧರ್ಮೋದ್ಧಾರ ಕಾರ್ಯಕ್ಕೆ ಅತೀವ ಯೋಗ್ಯರಲ್ಲವೇ?

---

೨. ಶಸ್ತ್ರಸನ್ಯಾಸದ ಪುರಾಣವು ಇನ್ನೂ ಲೋಕದಲ್ಲಿ ನಡೆದಿದೆ. ಬ್ರಿಟಿಶ ಹಾಗು ಅಮೇರಿಕೆಯವರು ತಮ್ಮ ತಮ್ಮ ಸೈನ್ಯಗಳನ್ನು ತಗ್ಗಿಸಿಕೊಳ್ಳುವ ಆಲೋಚನೆಯಲ್ಲಿದ್ದಾರೆ. ಸಮುದ್ರದಲ್ಲಿ ಬಲಶಾಲಿ, ದೊಡ್ಡ ದೊಡ್ಡ ಹಡಗುಪಡೆಗಳಿಗೆ ಸಹ ಬಲಸಮಾಧಿಯನ್ನೀಯುವ ಜಲಯಾನಗಳ ಸಂಖೆಯನ್ನು ನಿಯಂತ್ರಿಸುವದೊಂದು ದೊಡ್ಡ ಘಟೋತ್ಕಚನ ವ್ಯಾಪಾರ ನಡೆದಿದೆ. ಜಲಯಾನಗಳನ್ನು ನಿಯಂತ್ರಿಸಿದರೆ, ಇಟಾಲಿಫ್ರಾನ್ಸ ಮುಂತಾದ ನೌಕೆಯಿಲ್ಲದ ರಾಷ್ಟ್ರಗಳಿಗೆ ನಷ್ಟವಾಗುತ್ತದೆ. ಇಟಾಲಿ-ಫ್ರಾನ್ಸ ದೇಶಗಳ ಬಳಿ ಬ್ರಿಟಿಶ-ಅಮೇರಿಕೆ ನೌಕೆಯೊಡನೆ ಬಡಿದಾಡಲು ಹಡಗುಪಡೆಗಳಿಲ್ಲ. ಜಲಯಾನಗಳ ಅಂಕುಶದಿಂದ ಬ್ರಿಟಿಶ-ಅಮೇರಿಕೆಯ ನೌಕೆಗೆ ಸುಲಭವಾಗಿ ಪ್ರತಿಬಂಧಿಸಲು ಬರುತ್ತದೆ. ಆ ಅಂಕುಶವನ್ನು ಆ ರಾಷ್ಟ್ರಗಳ ಕಡೆಯಿಂದ ಪರಸ್ಪರವಾಗಿ ಸೆಳಕೊಳ್ಳುವ ದುರಾಲೋಚನೆಯಿಂದ ಜಲಯಾನಗಳನ್ನು ತಗ್ಗಿಸುವ ಆಲೋಚನೆ ನಡೆದಿದಾಗಿ ಬಲ್ಲವರು ಹೇಳುತ್ತಾರೆ. ಇವನ್ನು ತಗ್ಗಿಸಲಿಕ್ಕಾ ಅಮೇರಿಕೆಯವರು ತಯಾರಿಲ್ಲ. ೩೬ ಜಲಯಾನಗಳ ಬಾಬಿಗೆ ಕೋಟಿ ಪವನುಗಳನ್ನು ಖರ್ಚು ಮಾಡಿ ೩೫ ಜಲಯಾನಗಳನ್ನಾದರೂ ತಾವು ತಯಾರಿಸುವೆವಾಗಿ ಅವರು ಹಟಹಿಡಿದಿದ್ದಾರೆ. "ಇನ್ನು ತಾವು ತಯಾರಿಸುವದಿಲ್ಲ"ವಾಗಿ ಬ್ರಿಟಿಶರ ಅಂಬೋಣ. ದೊಡ್ಡ ತ್ಯಾಗವೆಂದು ಕಾಣುತ್ತದಲ್ಲವೇ? ಆದರೆ, ಇದರೊಳಗೆ ಬ್ರಿಟಿಶರ ತ್ಯಾಗವೇನೂ ಇಲ್ಲ. ಈಗಲೇ ಬ್ರಿಟಿಶರ ಜಲಯಾನಗಳ ಸಂಖೆಯು ವಿಪರೀತವಿದೆ. ಅದರಿಂದ ಇನ್ನು ಬೆಳಿಸುವದಿಲ್ಲವಾಗಿ ಹೇಳಿ, ದೊಡ್ಡ ಸನ್ಯಾಸಿಯ ವೇಷವನ್ನು ಧರಿಸಿದ್ದಾರೆ. ಹೀಗಾದ್ದರಿಂದ ಶಸ್ತ್ರಸನ್ಯಾಸದ ಜನವಾದೊಳಗಿನ ಕೂಟವು ನಿರರ್ಥಕವಾಯಿತು. ಅಮೇರಿಕೆಯವರ ತಪ್ಪೆಂದು ಬ್ರಿಟಿಶರು, ಬ್ರಿಟಿಶರು ಹಟವಾದಿಗಳೆಂದು ಅಮೇರಿಕೆಯವರು ಹೀಗೆ ಪರಸ್ಪರ ಆಕ್ಷೇಪಗಳು ಹೇಳಲಾಗುತ್ತವೆ. ಯಥಾರ್ಥವಾಗಿ ವಿಚಾರಿಸಿದರೆ, ಇಬ್ಬರೂ ಕಳ್ಳರು. ಇಬ್ಬರೂ ಶಾಂತಿ ದೇವಿಯ ನೆವ ಹೇಳಿಕೊಂಡು, ಸ್ವಾರ್ಥಸಾಧಿಸಲು ಉದ್ಯುಕ್ತರಾದವರು. ಇಂಥವರಿಂದ ಲೋಕದಲ್ಲಿ ಶಾಂತತೆಯುಂಟಾದೀತೆ?

---

೩. ಕಲಕತ್ತೆಯಲ್ಲಿ ಪದವಿದಾನ ಸಮಾರಂಭದ ದಿನ ಪ್ರಾಂತಾಧಿಪರು ವಿಶ್ವವಿದ್ಯಾಲಯಕ್ಕೆ ಚಲೋ ಹದರಿಸಿದ್ದರು. ಕಲಕತ್ತಾದ ದಿನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರಾಮುಖ್ಯವಾಗಿ ಸೇರಿದ್ದರಿಂದ ಪದಕಾಳವು ಬಹು ಸೊಗಸಾಗಿ ಜರಗಿಸಲ್ಪಟ್ಟಿತು. ಪದವಿದಾನ ಸಮಾರಂಭದ ಸಮಯಕ್ಕೆ ಸುಮಾರು ೫ ಸಾವಿರ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಸಭಾಭವನದ ಸುತ್ತುಮುತ್ತು ನೆರಿಕೊಂಡು ಸಭೆಗೆ ಹೋಗುವವರಿಗೆ ಧಿಕ್ಕಾರ ಘೋಷಗಳಿಂದ ಸತ್ಕರಿಸಿದರು. ಅದರಿಂದ ವಿಶ್ವವಿದ್ಯಾಲಯದ ಅಧಿಕಾರಿಗಳು ಬಂಗಾಲದ ಪ್ರಾಂತಾಧಿಪರಿಗೆ ತಲೆತಗ್ಗಿಸಿ, ಈ ಪ್ರಕಾರಗಳು ನಡೆದರೆ, ವಿಶ್ವವಿದ್ಯಾಲಯದ ಸರಕಾರಿ ದ್ರವ್ಯಸಹಾಯವನ್ನು ತಾವು ಹಿಮ್ಮೆಲೇ ನಿಲ್ಲಿಸಬೇಕಾದೀತಾಗಿ ಬೆದರಿಸಿದರು. ಇದರ ಮೇಲಿಂದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದವರು ಸ್ವತಂತ್ರ ವಿಚಾರ ಮಾಡಗೊಡದೆ, ರಾಜ್ಯಕರ್ತರಿಗೆ ಎಲ್ಲ ಸಂಗತಿಗಳಲ್ಲಿಯೂ ವಿಧೇಯರಾಗಿ ನಡಕೊಳ್ಳಲು ಸಿತ್ತಾಯ ಮಾಡಬೇಕೆಂದಾಯಿತು. ಈ ಸಿದ್ಧಾಂತವನ್ನು ಯಾರೂ ಮನ್ನಿಸಲಾರರು. ಸರಕಾರಪಕ್ಷಪಾತಿಯಾದ ಕಲಕತ್ತೆಯ 'ಸ್ಟೇಟ್ಸಮನ್' ಪತ್ರಿಕೆಯು ಅಭಿಪ್ರಾಯವನ್ನೇ ನಾವು ಎತ್ತಿಕೊಟ್ಟು, ಪ್ರಾಂತಾಧಿಪರಾದ ಸರ್ ಸ್ಟ್ಯಾನ್ಲಿ ಜೆಕ್ಸನ್‌ರವರಿಗೆ ಉತ್ತರ ಕೊಡಹೋಗುವೆವು:— "ವಿಶ್ವವಿದ್ಯಾಲಯದ ಹೆಗಲ ಮೇಲೆ ತುಬಾಕಿಯನ್ನಿಟ್ಟುಕೊಂಡು ದೊಂಬಿಯನ್ನೆಬ್ಬಿಸುವ ವ್ಯಕ್ತಿಗಳಿಗೆ ಶಾಸನ ಮಾಡುವ ಪ್ರಯತ್ನಗಳು ಸಫಲವಾಗಲಾರವು. ಯುರೋಪ ಖಂಡದಲ್ಲಿ ಈ ತತ್ವಕ್ಕೆ ಮನ್ನಣೆ ಇದ್ದಿದ್ದರೆ, ಹಲವು ಸುಪ್ರಸಿದ್ಧ ವಿಶ್ವವಿದ್ಯಾಲಯಗಳೆಲ್ಲ ನಾಮಶೇಷವಾಗುತ್ತಿದ್ದವು." ಹಿತೋ! 'ಸ್ಟೇಟ್ಸಮನ್' ಪತ್ರಿಕಾಕರ್ತರು ಒಂದು ಮಾತನ್ನು ಮರೆತಿದ್ದರು. ಯುರೋಪ ಖಂಡದೊಳಗಿನ ರಾಷ್ಟ್ರಗಳು ಸ್ವತಂತ್ರವಿವೆ; ಅದರಿಂದ ಅಲ್ಲಿ ಈ ತತ್ವವು ರೂಢವಾಗಿಲ್ಲ. ಹಿಂದುಸ್ಥಾನ ದೇಶವು ಪರತಂತ್ರವು; ಇದರಿಂದ ಇಲ್ಲಿ ಈ ತತ್ವದ ಪ್ರಚಾರವಾಗುತ್ತಿದೆ. ಸ್ವಾತಂತ್ರ್ಯ ಪ್ರಾಪ್ತಿಯಾದ ಹೊರತು ಸ್ವತಂತ್ರ ದೇಶದೊಳಗಿನ ತತ್ವಗಳನ್ನು ನೆನಪು ಮಾಡಿಕೊಟ್ಟೇನು ಫಲ? ಅದರಿಂದಲೇ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬೇಕೆಂದು ಅಖಿಲ ಲೋಕನಾಯಕರು ದೀರ್ಘ ಪ್ರಯತ್ನಪಡುತ್ತಲಿದ್ದಾರೆ. 'ಸ್ಟೇಟ್ಸಮನ್' ಪತ್ರಿಕೆಯು ಈ ಪ್ರಯತ್ನಕ್ಕೆ ಬೆಂಬಲವನ್ನಿತ್ತರೆ, ಭಾರತೀಯರ ಮೇಲೆ ದೊಡ್ಡ ಉಪಕಾರವಾಗುವದಲ್ಲವೇ?

---

೪. ನಮ್ಮ ಜಿಲ್ಲೆಯ ಭಟ್ಕಳ ಬಂದರದ ಯೋಜನೆಯು ಅಲ್ಪಾವಧಿಯಲ್ಲಿಯೇ ಕೈಗೂಡುವದಿದೆಂದು ನಾವು ತಿಳಿಯಬಹುದು. ಮದ್ರಾಸದೊಳಗಣ 'ಹಿಂದು' ಪತ್ರಿಕೆಯ ಬೆಂಗಳೂರಿನ ಚಿತ್ರಗುಪ್ತರು ಭಟ್ಕಳ ಬಂದರದ ವಿಷಯ ನಡೆದ ಕೆಲವು ಪತ್ರವ್ಯವಹಾರವನ್ನು ಬೈಲಿಗೆಳೆದಿದ್ದಾರೆ. ಮೈಸೂರು ಸರಕಾರಕ್ಕೆ ಭಟ್ಕಳ ಬಂದರವು ತೀರ ಸಮೀಪವಿದೆ. ಮೈಸೂರಿನ ಪಶ್ಚಿಮ ಮೇರೆಯಿಂದ ಭಟ್ಕಳ ಪಟ್ಟಣವು ಬರೇ ೧೪ ಮೈಲಿದೆ. ಮದ್ರಾಸ ಪೋರ್ಟಟ್ರಸ್ಟಿನವರೂ, ಮುಂಬಯಿಯ ಪೋರ್ಟಟ್ರಸ್ಟಿನವರೂ ಭಟ್ಕಳದ ಸ್ಥಿತಿಯನ್ನು ಚನ್ನಾಗಿ ಪರಾಂಬರಿಸಿ, ಬಂದರ ಕಟ್ಟಿಸುವದು ಸಾಧ್ಯವೆಂದೂ ಅಭಿಪ್ರಾಯಪಟ್ಟಿದ್ದಾರೆ. ವಿಲಾಯತಿಯೊಳಗಿನ ತಜ್ಞರು ಸಹ ಅನುಕೂಲ ಅಭಿಪ್ರಾಯ

ಕೊಟ್ಟಿದ್ದಾರಂತೆ. ಬಂದರ ಕಟ್ಟಲು ಹೆಚ್ಚಿನ ಖರ್ಚು ಬರಲಿಕ್ಕಿಲ್ಲವಾಗಿ ಈ ಕಚ್ಚರ ಮಾತ ಮುಂಬಯಿ ಸರಕಾರವು ಕಸ್ಟಮ್ ವಿಷಯ ಮೈಸೂರು ಸರಕಾರದೊಡನೆ ಕರಾರು ಮಾಡಲು ತಯಾರಿದೆ. ಮೈಸೂರು ದರಬಾರವು ಈ ವಿಷಯ ಬ್ರಿಟಿಶ ಸರಕಾರದ ಮನೋಗತವನ್ನು ಪೂರೈಸಲಿಕ್ಕೂ ತಯಾರಿದೆ ಹಾಗಾದರೆ ವಾದವೆಲ್ಲಿದೆ? ಬಂದರವಾಗಬಹುದಲ್ಲವೆಂದು ವಾಚಕರು ಉದ್ಗರಿಸಬಹುದು! ಮೈಸೂರು ಗಡಿಯ ಕೊಗಾರು ಗ್ರಾಮದಿಂದ ಭಟ್ಕಳದ ತನಕ ಉಗಿಬಂಡಿ ಹಾಕಲಿಕ್ಕೂ, ಭಟ್ಕಳದಲ್ಲಿ ಬಂದರ ಕಟ್ಟಲಿಕ್ಕೂ ಪ್ರದೇಶವು ಬೇಕಾಗಿದೆ ಅದಕ್ಕಾಗಿ ೯೯ ವರುಷಗಳ ಮುಷ್ಟತ್ತಿನ ಭಾಡಿಗೆ ಕರಾರು ಬರಕೊಡಲಿಕ್ಕೆ ಮೈಸೂರ ಸರಕಾರದ ಒಪ್ಪಿಗೆಯಿದೆ. ಈ ಪ್ರದೇಶದಲ್ಲಿ ತಮ್ಮ ಪೋಲೀಸ ಅಧಿಕಾರವಿರಬೇಕೆಂದು ಮೈಸೂರು ಸರಕಾರದ ಹೇಳಿಕೆ, ಆ ಅಧಿಕಾರವು ತಮ್ಮದೆಂದು ಬ್ರಿಟಿಶರ ಹೇಳಿಕೆ ಇದನ್ನು ನೋಡಿದರೆ, ಭಟ್ಕಳ ಬಂದರದ ವೃಕ್ಷಗಿಂತ ಬ್ರಿಟಿಶರ ಅಧಿಕಾರದ ಹಬ್ಬಾಶೆಯೇ ಈಗ ವಿಚಾರಿಸತಕ್ಕ ವಿಷಯವಾಗಿದೆ. ಬ್ರಿಟಿಶರ ಸ್ವಾರ್ಥಕ್ಕೆ ಸೀಮೆಯೊಂದಿರಬೇಕಲ್ಲವೇ? ಸರಕಾರವು ವಿಚಾರ ಮಾಡಿ, ಮೈಸೂರು ಸರಕಾರದ ಉಗಿಬಂಡಿಯ ಪ್ರದೇಶದಲ್ಲಿ ತಮ್ಮ ಪೋಲೀಸರನ್ನು ಇಡಲೇ ಬೇಕೆಂಬ ಹಟ ಹಿಡಿಯಬಾರದಾಗಿ ನಮ್ಮದೊಂದು ಸೂಚನೆ.

ಸ್ಥಾನಿಕ ವೃತ್ತಾಂತ.

ಕುಮಟಾ—ಚಳಿ ತಕ್ಕಮಟ್ಟಿಗೆ ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಜ್ವರಾದಿ ರೋಗಗಳಿವೆ ಮ್ಯುನಿಸಿಪಾಲಿಟಿಯವರು ಪ್ಲೇಗಿನ ನಿವಾರಣೆಗಾಗಿ ಊರ ಹೊರಗೆ ಸುಂಕದ ಕಟ್ಟೆಯ ಬಳಿ ಕೊಠಡಿಯನ್ನು ಕಟ್ಟಲಿಕ್ಕಿದ್ದಾರೆ ಮೋಟಾರುಗಳಿಗೆ ಊರು ಸೇರಗೊಡದೆ, ಊರ ಹೊರಗೆ ನಿಲ್ಲಿಸಿದರೆ ಕೆಲ ಮಟ್ಟಿಗೆ ಉಪಕಾರವಾಗುವಂತಿದೆ

ಗೋಕರ್ಣ— ಈ ವಾರದಲ್ಲಿ ಇಲ್ಲಿಯ ಗದಿಬಿಡಿಯನ್ನು ಹೇಳಲಾಗಲ್ಲ! ವಾರ್ಷಿಕ ಶಿವರಾತ್ರಿಯ ಗದಿಬಿಡಿಯಂತು ಇದ್ದೇ ಇದೆ. ಯಾತ್ರಿಕರು ಮೋಟಾರಾರೂಢರಾಗಿಯೂ, ಉಗಿಹಡಗದಿಂದಲೂ ಗಾಡಿಗಳಿಂದಲೂ ಕಾಲ್ನಡಿಗೆಯಿಂದಲೂ ಬರುತ್ತಿದ್ದಾರೆ ಸುಮಾರು ೧—೧೨ ಸಾವಿರ ಯಾತ್ರಿಕರು ಇಷ್ಟರಲ್ಲಿ ಇಲ್ಲಿ ಬಂದಿದ್ದಾರೆ ಪ್ಲೇಗು ಮುಂತಾದವುಗಳ ಮೂಲಕ ಈ ವರುಷ ಹೊಸ ವಿಘ್ನವಾಗಿದೆ. ಮುಂಚಿನ ಸಾಲೆಯ ಬಳಿ ಎಲ್ಲ ಮೋಟಾರುಗಳು ನಿಲ್ಲತಕ್ಕದ್ದು. ಇದರಿಂದ ಊರವರಿಗೆ ಬಹಳ ಸುಖವಾಗಿದೆ ಕಲ್ಲು-ಶಿವ-ಬೀದಿಗಳಲ್ಲಿ ದೂಳಿ ತುಂಬುವದಿಲ್ಲ. ಆದರೆ, ಒಂದು ಮಾತ್ರ ಉಪದ್ರವವಾಗಿದೆ ಪರಸ್ಥಳದ ಯಾತ್ರಿಕರಿಗೆ ಹೊರೆಗಳನ್ನು ಊರೊಳಗೆ ಒಯ್ಯಲು ಕೂಲಿಕಾರರು ಇಮ್ಮಡಿ ಮುಮ್ಮಡಿ ಕೂಲಿ ಬೇಡುತ್ತಾರೆ. ೧ ದಣೆ ಕೂಲಿ ಕೊಡುವ ಪ್ರಸಂಗದಲ್ಲಿ ೩ ಆಣೆ ಕೂಲಿ ಕೊಟ್ಟರೂ, ಮೇಲೆ ಕೂಲಿಕಾರರ ಉಪಕಾರವನ್ನೇ ಮನ್ನಿಸಬೇಕು ಇದರಿಂದ ಯಾತ್ರಿಕರಿಗೆ ಬಳ್ಳೆ ತ್ರಾಸು ಮ್ಯುನಿಸಿಪಾಲಿಟಿಯವರು ಈ ಕಡೆ ಲಕ್ಷ ಕೊಟ್ಟದ್ದು ತೋರುವದಿಲ್ಲ ಕೂಲಿಕಾರರಾದರೂ ಸ್ವಲ್ಪ ವಿಚಾರ ಮಾಡಬೇಕು. ಮೇರೆ ತಪ್ಪಿ ನಡೆದು ಯಾತ್ರಿಕರಿಗೆ ಸುಲಿದರೆ ಶ್ರೀಮಹಾಬಲೇಶ್ವರನಿಗೆ ಪ್ರೀತಿಯಾಗಲಿಕ್ಕಿಲ್ಲ

ನಾಟಕ ಕಂಪನಿಗಳನ್ನು ಇಲ್ಲಿ ತರಿಸುವ ಹಾಗು ಪ್ರಯೋಗ ನಡಿಸುವ ಪ್ರಯತ್ನಗಳು ನಡೆದಿರುತ್ತವೆ. ಮ್ಯುನಿಸಿಪಾಲಿಟಿಯವರು ಇವಕ್ಕೆ ಎಷ್ಟರಮಟ್ಟಿಗೆ ಅಂಕುಶ ಹಾಕಲಾಗದು ಗ್ರಾಮದ ಕ್ಷೇಮ ಕೆಟ್ಟೀತು ಹೊಸ ಗದಿಬಿಡಿಯೊಂದು ಈಗ ಶಿರ್ಸಾ! ವರ್ತಮಾನದಂತೆ ಚಳ ಡ್ರಿ

ಜನಿತ ಪ್ರಾಂತ ಸಾಹೇಬರಾದ ರಾ ದಿವೇಕರರವರು ಕೋಟಿತೀರ್ಥ ಹಾಗು ಸಮುದ್ರ ದಂಡೆಯ ಮೇಲೆ ಪೌರೋಹಿತ್ಯ ನಡಿಸದಂತೆ ದೈವಜ್ಞರಿಗೆ ಕ್ರಿ. ಪ್ರೊ. ಕೋಡ ೧೪೪ನೇ ಕಲಮಿನಂತೆ ವಿಧಿಸಿದ್ದರು ಪೌರೋಹಿತ್ಯ ಹಕ್ಕಿನ ಕುರಿತು ಕುಮಟೆಯ ಕೋರ್ಟಿನಲ್ಲಿ ದೈವಜ್ಞರು ಹವೀಕರ ಉಪಾಧಿವಂತರ ಮೇಲೆ ಶಾಶ್ವತವಾದ ಪ್ರತಿಬಂಧಕ ಹುಕುಮನ್ನು ಪಡಕೊಂಡು ದಾವೆ ಮಾಡಿದ್ದಾರೆ ಆ ದಾವೆಯಲ್ಲಿ ಹಂಗಾಮಿ ಪ್ರತಿಬಂಧಕ ಹುಕುಮು ಕೊಡಬೇಕಾಗಿ ೧೫ ದಿನಗಳ ಹಿಂದೆ ಒಂದು ವಿಶೇಷ ಅರ್ಜಿಯನ್ನು ದಾಖಲಪಡಿಸಿದರು ಆ ಅರ್ಜಿಯ ವಿಚಾರವು ಕುಮಟೆಯ ಕೋರ್ಟಿನಲ್ಲಿ ಸೋಮವಾರ—ಮಂಗಳವಾರಕ್ಕೆ ನಡೆದು, ಬುಧವಾರಕ್ಕೆ ಉಪಾಧಿವಂತರ ಮೇಲೆ ಪ್ರತಿಬಂಧಕ ಹುಕುಮು ಕೊಡೋಣಾಯಿತು ಆ ಹುಕುಮು ಇಲ್ಲಿ ಟಮಕಿಯಿಂದ ಸಾರಿ ಹೇಳೋಣಾಯಿತು ಈ ಪ್ರತಿಬಂಧಕ ಹುಕುಮನ್ನು ಪ್ರಾಂತ ಸಾಹೇಬರ ಕೋರ್ಟಿನಲ್ಲಿ ಹಾಜರಪಡಿಸಿ, ದೈವಜ್ಞರು ಕ್ರಿ ಪ್ರೊ ಕೋಡ ಕಲಂ ೧೪೪ ರನ್ವಯ ತಮ್ಮ ಮೇಲಾದ ಪ್ರತಿಬಂಧಕ ಹುಕುಮನ್ನು ರದ್ದುಪಡಿಸಿಕೊಂಡರು ದೈವಜ್ಞರ ಪೌರೋಹಿತ್ಯ ಹಕ್ಕಿನ ಆಚಾರವಾಗುವಾಗ, ಶಾಂತತಾಭಂಗವಾಗದಂತೆ ಸಾಕಷ್ಟು ಬಂದೋಬಸ್ತ ಪೋಲೀಸರಿಂದಲು ಪೋಲೀಸರಿಗೂ ಬರೆದು ಹೋಯಿತು ಪೋಲೀಸರು ಕಾರವಾರ-ಕುಮಟೆಗಳಿಂದ ಗೋಕರ್ಣ ಕ್ಷೇತ್ರವನ್ನು ತುಂಬುಗಟ್ಟಾಗಿ ಸೇರಿದರು ಹೆಜ್ಜೆಹೆಜ್ಜೆಗೆ ಪೋಲೀಸರೇ ಕಾಣುತ್ತಾರೆ ಈ ವರ್ಷ ಪೋಲೀಸರ ಪರಿಕ್ಷಕರು ಪೋಲೀಸ ಸಾಹೇಬರೂ ಬಂದಿದ್ದಾರೆ ಹೀಗೆ ದೈವಜ್ಞರು ಆನಂದದಲ್ಲಿರುತ್ತಿದ್ದರು ಇತ್ತ ಉಪಾಧಿವಂತರು ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಸಬ್‌ಜಜ್ಜರ ಹುಕುಮಿನ ಮೇಲೆ ಅಪೀಲನ್ನು ದಾಖಲು ಮಾಡಿದರು ಹಾಗು ಸಬಜಜ್ಜರ ಹುಕುಮನ್ನು ಕೂಡಲೆ ತಹಕೂಬು ಇಡಬೇಕಾಗಿಯೂ ಪ್ರಾರ್ಥಿಸಿಕೊಂಡರು. ಡಿ ಜಜ್ಜರು ಹಕೀಕತನ್ನು ಕೇಳಿಕೊಂಡು, ಇಂಜಂಕ್ಷನ್ ಹುಕುಮು ತಹಕೂಬು ಇಡಲಾಯಿತೆಂದು ಮೊನ್ನೆ ತಂತಿ ಮೂಲಕ ಕುಮಟೆಯ ಸಬಜಜ್ಜರಿಗೆ ತಿಳಿಸಿದರು ಕೂಡಲೆ ಕುಮಟೆಯಿಂದ ಬೇಲೀಫರು ೩.೦ ಕ್ಕೆ ಟಮಕಿಯಿಂದ ಹುಕುಮು ತಹಕೂಬು ಇದ್ದ ಸುದ್ದಿಯನ್ನು ಸಾರಿದರು ಕಾರವಾರದ ಡಿಸ್ಟ್ರಿಕ್ಟ ಜಜ್ಜರ ಹುಕುಮನ್ನು ಪ್ರಾಂತ ಸಾಹೇಬರ ಕೋರ್ಟಿನಲ್ಲಿ ಹಾಜರಪಡಿಸಿ, ಉಪಾಧಿವಂತರು ಶನಿವಾರ ರಾತ್ರಿ ೮ ಘಂಟೆಗೆ ಪುನಃ ದೈವಜ್ಞರ ಮೇಲೆ ಪ್ರತಿಬಂಧಕ ಹುಕುಮನ್ನು ಪಡೆದರು. ಈ ಹುಕುಮು ಆದಿತ್ಯವಾರದಿಂದ ಇಲ್ಲಿ ಸಾರೋಣಾಯಿತು ಹೀಗೆ ೨-೩ ದಿನಗಳಲ್ಲಿ ಟಮಕಿ ಪುರಸ್ಕಾರಗಳನ್ನು ಒಂದರ ಹಿಂದೊಂದು ಕೇಳುವ ಪರ್ವಕಾಲವು ಇಲ್ಲಿ ಪ್ರಭವ ಸಂವತ್ಸರದಲ್ಲಿ ಒದಗಿತು. ಸಬಜಜ್ಜರ ಇಂಜಂಕ್ಷನಿನ ಹುಕುಮು ಕೇಳಿ, ತಮ್ಮ ಪುರೋಹಿತರ ಕಡೆಯಿಂದ ಕ್ಷೇತ್ರವಿಧಿಗಳನ್ನು ನೆರವೇರಿಸಿಕೊಂಡು ಪಾವನರಾಗಲು ಬಂದ ದೈವಜ್ಞರಿಗೆ ಡಿಸ್ಟ್ರಿಕ್ಟ ಜಜ್ಜರ ಹುಕುಮಿನಿಂದ ನಿರಾಶೆಯಾಯಿತು. ದೈವಜ್ಞರೂ, ಉಪಾಧಿವಂತರೂ ವರ್ಷದಂತೆಯೇ ಈ ವರ್ಷದ ಶಿವರಾತ್ರಿಯನ್ನು ಸಾಗಿಸಬೇಕಾಗಿತ್ತ ಗದಿಬಿಡಿ ಮಾತ್ರ ಹೆಚ್ಚಾಯಿತು. ಇಷ್ಟೆಲ್ಲ ಗದಿಬಿಡಿಯಿಂದ ವೇತಾಳನು ಪೂರ್ವಸ್ಥಳಕ್ಕೆ ಬಂದನು. ವೇತಾಳನಿಗೆ ಪೂರ್ವಸ್ಥಳಕ್ಕೆ ತರಬೇಕಾದರೆ, ಉಪಾಧಿವಂತರಿಗೆ ಬಲು ಕಷ್ಟವಾಯಿತು.

ಹೊನ್ನಾವರ— ಶಿವರಾತ್ರಿಗೆ ಹೋಗುವ ಜನರು ಮೋಟಾರಾರೂಢರಾಗಿ ಓಡುತ್ತಿದ್ದಾರೆ. ಚಿತ್ರಾಪುರ ಕಂಪನಿಯ ಒಂದು ಮೋಟಾರು ವೆಂಕಟಾಪುರ ಸಾಯ ಜಂಗಲಿನ ಮೇಲೆ ಹತ್ತಿಸುವಾಗ, ಒಂಗಲು ದಾಟಿ ಹೊಳೆಯಲ್ಲಿ ಬಿತ್ತು. ಡ್ರೈವ್ಹರನು ಅಂತು ಬದುಕಿದ್ದಾನೆ. ಈ ಕಂಪನಿಯವರು ಹೊಸ ಮೋಟಾರು ತರಿಸಿದ್ದಾರೆ.

ಬಡಗಣಿ ಹಾಗು ವೆಂಕಟಾಪುರ ಹೊಳೆಗಳಿಗೆ ಸಂಕ ಕಟ್ಟುವ ಯೋಜನೆಯನ್ನು ಶ್ರೀ ಕರ್ಕಿಯವರು ದಿಲ್ಲಿ ಯಲ್ಲಿ ಈ ಹೊತ್ತಿನಿಂದ ಸೇರುವ ಶಾಸನ ಸಭೆಯ ಕೌನ್ಸಿಲ್ಲಿನ ಅಧಿವೇಶನದಲ್ಲಿ ಸೂಚಿಸುವವರಿದ್ದಾರೆ. ಸೂಚನೆ ಮಾಡಲು ಕೌನ್ಸಿಲಿನಲ್ಲಿ ಶ್ರೀ ಕರ್ಕಿಯವರಿಗೆ ಸಮಯ ದೊರೆಯುವದೇ ಕಠಿಣ. ಸರಕಾರಿ ಕೆಲಸವೇ ಅಷ್ಟಿದೆ.

ಇಲ್ಲಿಯ ಮೆಜಿಸ್ಟ್ರೇಟರಲ್ಲಿ ನಡೆದ ಹಳದೀಪುರ ಜಗಳದ ಖಟ್ಲೆಯಲ್ಲಿ ೨ ಜನರಿಗೆ ರೂಪಾಯಿ ೫೦ ರಂತೆ, ಹಾಗು ಬಾಕಿಯವರಿಗೆ ರೂಪಾಯಿ ೩೦ರಂತೆ ದಂಡದ ಶಿಕ್ಷೆ ವಿಧಿಸಲಾಯಿತು.

ಇಲ್ಲಿ "ಗಾಂಧೀ ಬಂದೂಕ" ಅಂದರೆ, ಒಂದು ಕಬ್ಬಿಣದ ನಳಿಗೆಯಲ್ಲಿ ಮದ್ದು ಹಾಕಿ ಸರಳಿನಿಂದ ಕುಟ್ಟಿದರೆ ಆವಾಜು ಆಗುವಂಥ ಹೊಸ ನಮೂನೆಯ ಬಂದೂಕುಗಳು ಪ್ರಚಾರದಲ್ಲಿ ಬಂದಿವೆ. ಇವನ್ನು ಬಹಳೇ ಜನರು ಕೊಂಡು ವಿಕ್ರಯಿಸಿದರು ಇದರಿಂದ ಯಾರಿಗೂ ಅಪಾಯವಾಗುವದಿಲ್ಲ, ಅಪಾಯವಾದದ್ದೂ ಇಲ್ಲ. ಇಲ್ಲಿಯ ಮಾಮಲೇದಾರರಲ್ಲಿ ಚವತಿ ಹಬ್ಬದ ಸಮಯ ಗಣಪತಿ ಒಯ್ಯುವಾಗಲೂ, ಶ್ರೀ ಚಿತ್ರಾಪುರ ಮಠದ ಗುರುಗಳು ಇಲ್ಲಿ ಚಿತ್ತೈಸಿದಾಗ ಮೆರವಣಿಗೆಯ ಸಮಯದಲ್ಲೂ ಈ "ಗಾಂಧಿ ಬಂದೂಕು"ಗಳನ್ನು ಉಪಯೋಗ ಮಾಡಿದ್ದರು ಹೀಗಿರಲು, ಪೇಟೆ ಅಂಗಡಿಕಾರರಲ್ಲಿ ಸರ್ರಿ ಬಂದೂಕಿನ ಪಂಚನಾಮೆಯಾಗಿದೆ —ತೂಗುನ್ನೆಯೇ?

ಮ್ಯುನಿಸಿಪಾಲಿಟಿಯವರು ಪ್ಲೇಗ ನಿರ್ಬಂಧಕ ಔಷಧಗಳನ್ನು ಮನೆಮನೆಗೆ ಹಂಚುತ್ತಿದ್ದಾರೆ. ಸ್ವಚ್ಛತೆ ಕಾಪಾಡುವ ಬಗ್ಗೆ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರೂ, ಮಾಮಲೇದಾರರೂ ಜನರಿಗೆ ಬೋಧಿಸುತ್ತಿದ್ದಾರೆ.

ಶಿರ್ಸಿ—ಚಳಿ ಹೆಚ್ಚಾಗುತ್ತಲಿದೆ, ಪ್ಲೇಗಿನ ಪ್ರಕೋಪವು ಹೆಚ್ಚುತ್ತಲಿದೆ ನೂರಾರು ಕುಟುಂಬಗಳು ಹೊರಬೀಡು ಮಾಡಿಕೊಂಡು ದಿನಗಳೆಯುತ್ತಿವೆ. ಪ್ಲೇಗು ನಿವಾರಣಾರ್ಥವಾಗಿ ಇನ್ನೇನೂ ಮಾಡುವದುಳಿಯಲಿಲ್ಲ. ನಗರ ಸಂಕೀರ್ತನೆಗಳಾದವು, ಜುಲ್ಪೆ ನಿಕೊಂಡಾಯಿತು, ನಿರಪರಾಧಿ ಕುರಿಗಳಿಗೆ ಬಲಿ ಕೊಟ್ಟು ಗಡಿ-ಶಾಂತಿಯನ್ನೂ ಮಾಡಿ ನೋಡಾಯಿತು! ಶ್ರೀಅಮ್ಮನವರಿಗೆ ಜಾತ್ರೆಯ ಸಮಯ ಹರಕೆಗಳನ್ನು ಹೇಳಿಕೊಂಡಾಯಿತು. ಆದರೂ, ಪ್ಲೇಗು ಎಷ್ಟಕ್ಕೂ ಹಿಮ್ಮೆಟ್ಟನು ಮತ್ತ ಮುಂದೆ ಬರುತ್ತಿದ್ದಾನೆ. ಮಾನವನ ಕಲೆಯು ಬಲು ವಿಚಿತ್ರವಿದೆ! ಒಬ್ಬರು ಒಂದು ರಾಮಬಾಣ ಔಷಧವನ್ನು ಪತ್ತೆ ಹಚ್ಚಿದ್ದಾರೆ!" ಅವರಿಗೆ ಉಲ್ಲಾಸವೇ ಉಲ್ಲಾಸ! ಅವರ ಉಪಾಯವಾದರೂ ಉಲ್ಲಾಸದ್ದೇ'! ದುರಿತದ ಬೇಡ, ಪ್ರಕೋಪದ ಬೇಡ, ವಿಲಾಸಬೇಕು ಬೀಭತ್ಸ ಲಾವಣಿಗಳನ್ನು ಹಾಡುತ್ತ ಹಂದಿಗಳಂತೆ ಬೊಬ್ಬೆ ಹೊಡೆಯುತ್ತ ಕಾಮಣ್ಣನ ಹಬ್ಬವನ್ನು ನವಸ್ಫೂರ್ತಿಯಿಂದ ಸಾಗಿಸುವ ವಿಚಾರ ಮಾಡಿ ನಿಂತು ಹೋದ ಕಾಮದಹನೋತ್ಸವವನ್ನು ಉದ್ಧರಿಸಿದರೆ, ಪ್ಲೇಗರಾಜನು ತಾನಾಗಿ ಹಿಮ್ಮೆಟ್ಟುವವನಂತೆ! ಲಜ್ಜೆಯಿಂದಲೋ ಭೀತಿಯಿಂದಲೋ! ವಾಸುದೇವನ ಧ್ಯಾನ ಮಾಡುವದ ಕ್ಕಿಂತ ಶ್ರೀರಾಮ ಹಾಗು ಯುಧಿಷ್ಠಿರ ಪ್ರಭೃತಿ ಪುಣ್ಯಾತ್ಮರ ಧ್ಯಾನ ಮಾಡುತ್ತ ೨-೩ ತಿಂಗಳು ವನವಾಸ-ವನಭೋಜನಗಳನ್ನು ನಿರ್ಮಲ ಚಿತ್ತದಿಂದಲೂ ಭಕ್ತಿಭಾವದಿಂದಲೂ ನಡಿಸಿದರೆ ಪಾಪವು ತೊಳೆದುಹೋಗಿ, ಪುಣ್ಯ ಸಂಗ್ರಹವಾಗಿ ಪ್ಲೇಗರಾಜನು ಊರವರ ಗೊಡವೆಗೆ ಬರಲಾರನು ಪರಮಾತ್ಮನ ನಿರ್ಮಲ ಭಕ್ತಿಯು ಬಯಲಾದದ್ದರಿಂದಲೇ ಪ್ಲೇಗು ಮುಂತಾದ ಪಿಡುಗುಗಳು ಹೂಡಿದ ಬಿಡಾರವನ್ನು ಎಬ್ಬಿಸುವದಿಲ್ಲ

ಮ್ಯುನಿಸಿಪಾಲಿಟಿಯವರು ಬೋರಿಂಗ ಮಶೀನ ಎಂಬ ಬಾವಿ ತೆಗೆಯುವ ಯಂತ್ರಕ್ಕೆ ೫೦೦ ರೂಪಾಯಿ ಕೊಟ್ಟಿದ್ದಾರೆ ಬೋರಿಂಗ ಮಶೀನಿನ ಫಲಶ್ರುತಿಯು ಈ ಮೊದಲೇ ಹೇಳಲ್ಪಟ್ಟಿದೆ, ಆದರೂ ಮ್ಯುನಿಸಿಪಾಲಿಟಿಯವರು ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ಕಿತ್ತ ಹಣದ ವಿನಿಯೋಗವೇನಿದು?

ಮೋಟಾರುಗಳ ಓಡಾಟದಿಂದ ಕಣ್ಣುಗಳಲ್ಲಿ ಧೂಳಿ ತುಂಬುತ್ತದೆ. ಕಣ್ಣು ತೆರೆಯುವಷ್ಟರಲ್ಲಿ ಮೋಟಾರು

ಷ್ಯಮೇಲಿಂದ ಸಾಗುತ್ತಿದ್ದ ಎಂಜಿಂಜಿ ಗಡಿಯಾಗಿದ ಉತ್ತರದ ತಾ. ೧೮ನೇಗೆ ಹನ್ನೆ ಮಕ್ಕಳ ಶಾಲೆಯು ಇದಿರಿಗೆ ಬಿಟ್ಟನು ಮೋಟಾರಿಗೆ ಬಿದ್ದು, ಅರ್ಧ ತಾಸಿನಲ್ಲಿ ಪ್ರಾಣ ಬಿಟ್ಟನು. ಕಳೆದ ೫-೬ ದಿನಗಳಲ್ಲಿ ಇನ್ನು ೩-೪ ಅಪಘಾತಗಳಾದವೆಂದು ಸುದ್ದಿಯಿದೆ ಪೋಲೀಸರು ಮೋಟಾರುಗಳ ವೇಗವನ್ನು ಯಾಕೆ ತಡಿಸುವದಿಲ್ಲ? ಮೋಟಾರ ಸ್ಟೇಶನುಗಳನ್ನು ಊರ ಹೊರಗೆ ಕಟ್ಟಿದರೆ, [illegible] ಅಧಿಕಾರಿಗಳು ವಿಚಾರಿಸತಕ್ಕ ವಿಷಯ.

ಸಿದ್ದಾಪುರ— ಊರಲ್ಲಿ ಅನೇಕರು ಬೇನೆಬಿದ್ದಿದ್ದಾರೆ. ಮನೆ ಮನೆಯಲ್ಲಿ ಹಾಸಿಗೆಗಳನ್ನು [illegible] ಕೆಲವು ದಿನ ಮಳೆ, ಕೆಲವು ದಿನ ಬಿಸಿಲು, [illegible] ಬೀಳುತ್ತಿವೆ [illegible] ಜನರ ಆರೋಗ್ಯವು [illegible]

ಕೊಂಡ್ಲಿ ಮಾರೀಜಾತ್ರೆಯು ಮಂಗಳವಾರ ರಾತ್ರಿಗೆ ಸಂಪೂರ್ಣವಾಯಿತು. ಜಾತ್ರೆಯಲ್ಲಿ [illegible] ರಾ| [illegible] ಅನುಪೇಕ್ಷಿತವಾಗಿ [illegible] ಜನರಿಗೆ ಬಹಳ ಬೇಸರವೆನಿಸಿತು

[illegible] ಶ್ರೀ [illegible] ಸಿದ್ಧೇಶ್ವರ ನಾಟಕ ಮಂಡಳಿ [illegible] ರಾ| [illegible] ಚನ್ನಬಸಪ್ಪ ಗೌಡರು [illegible] ಭಜನಾ ಮಂಡಳದ ಅಧ್ಯಕ್ಷರಾದ ರಾ| [illegible] ರಾ| ನಗರ [illegible]

[illegible] ಪ್ರದರ್ಶನ [illegible]

ಕಾರವಾರ— [illegible]

ಹಳಿಯಾಳ— [illegible]

[illegible]

ಯಲ್ಲಾಪುರ— [illegible] ಸಂಘದ ಕಾರ್ಯದರ್ಶಿಗಳಾದ ರಾ| [illegible]

[illegible] ಅಧ್ಯಕ್ಷರಂತೆ [illegible] ಎಪ್ರಿಲ್ ತಿಂಗಳಿನಿಂದ ಇಂಗ್ಲಿಷ [illegible]

ವೃತ್ತಸಾರ

— [illegible] ಗುಂಟೂರ ಮ್ಯುನಿಸಿಪಾಲಿಟಿಗೆ [illegible] ಮ್ಯುನಿಸಿಪಾಲಿಟಿ [illegible]

— [illegible]

— [illegible]

The Kanara District Co-operative Institute, Kumta.

Wanted.

Applications are invited for the post of a Propaganda Officer under the Kanara District Co-operative Institute on pay of Rs. 60/- plus travelling allowance Rs. 25/- P. M.

The Duties of the Propaganda Officer will be —

(1) To educate the members of societies in proper management of business.

(2) To deliver lectures in Kanarese and in English.

(3) To organise Agricultural Non credit and other types of societies.

(4) And especially to carry out the programme of work of the Institute in Kanara.

Graduates and Under-graduates will be given preference. Knowledge of Co-operation will be an additional qualification.

Applications with testimonials are to reach up this Office before the 15th of March 1928. Selected candidates will be called for an interview by the Managing Committee.

Dated 15-2-1928

V. S. HABBU,
Honorary Secretary,
Kanara District Co-operative Institute, KUMTA N. Kanara.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, बेलीच्या, जराच्या वगर हरएक तऱ्हेच्या साद्या अगर फॅशनेबल टोप्या तयार केल्या जातात

माल चोख— फॅशनेबल— स्वस्त— व भरपूर

हा शिवाय

आमच्या स्वतंत्र हातमागावरील नानातऱ्हेच्या डिझायनची रंगी-बेरंगी चादरें, फॅशनेबल बाथ टोवेल, चौक, लहान-मोठे पंचे, सीरपाट, चौलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:-आमच्या कोणत्याहि मालावर वाऊक व्यापाऱ्यांस भरपूर कमिशन दिले जाईल.

पत्ता:- मेसर्स गोविंद माधव शेणवि, फोवकार अँड सन्स.
पोस्ट— मुंकेरि (कारवार.)

ಮಹಾತ್ಮರ ಆತ್ಮಚರಿತ್ರ.

(೩೮) ಮಹಾಯುದ್ಧದೊಳಗಿನ ನನ್ನ ಕೆಲಸ.

ಇಂಗ್ಲಂಡಕ್ಕೆ ಮುಟ್ಟಿದ ಬಳಿಕ, ಗೋಖಲೆಯವರು ಪಾರೀಸದಲ್ಲಿಯೇ ಉಳಕೊಳ್ಳಬೇಕಾಯಿತೆಂದು ನನಗೆ ತಿಳಿದುಬಂತು. ಪಾರೀಸಕ್ಕೆ ಪ್ರಕೃತಿಸ್ವಾಸ್ಥ್ಯಕ್ಕಾಗಿ ಅವರು ಹೋಗಿದ್ದರು. ಮಹಾಯುದ್ಧದ ಮೂಲಕ ಪಾರೀಸ-ಲಂಡನ್‌ಗಳೊಳಗಿನ ವ್ಯವಹಾರವು ಕಟ್ಟಾಗಿತ್ತು. ಅಲ್ಲಿಂದ ಗೋಖಲೆಯವರು ಮರಳಿ ಬರುವ ಸಮಯವು ತೋರಲಿಲ್ಲ. ಅವರಿಗೆ ಕಂಡಹೊರತು ಸ್ವದೇಶಕ್ಕೆ ಹೋಗಲು ನನಗೆ ಮನಸ್ಸಿದ್ದಿಲ್ಲ. ಆದರೆ, ಅವರು ಬರುವ ಸಮಯವನ್ನು ನಿಶ್ಚಯಪೂರ್ವಕವಾಗಿ ಯಾರೂ ಹೇಳಲಾರರು.

ಅನಕ ವರೆಗೆ ನಾನು ಏನು ಮಾಡುವದು? ಮಹಾಯುದ್ಧದ ಕುರಿತು ನನ್ನ ಕರ್ತವ್ಯವೇನು? ಸೊರಾಬಜಿ ಅಡಜಾನಿಯಾ ಅವರು ಲಂಡನಿನಲ್ಲಿ ಕಾಯಿದೆಯ ಅಭ್ಯಾಸ ಮಾಡುತ್ತಿದ್ದರು. ದಕ್ಷಿಣ ಆಫ್ರಿಕೆಯಲ್ಲಿ ನನ್ನ ಜೊತೆಗೆ ಅವರು ಸತ್ಯಾಗ್ರಹಿಗಳಾಗಿದ್ದರು, ಸೆರೆಮನೆಯನ್ನೂ ಸೇರಿದ್ದರು. ಉತ್ತಮ ಪ್ರತಿಯ ಸತ್ಯಾಗ್ರಹಿಗಳೆಂದು ಅವರಿಗೆ ಬೆರಿಸ್ಟರಿ ಕಲಿಯುವದಕ್ಕಾಗಿ ಇಂಗ್ಲಂಡಕ್ಕೆ ಕಳಿಸಲಾಗಿತ್ತು. ದಕ್ಷಿಣ ಆಫ್ರಿಕೆಗೆ ಮರಳಿ ಬಂದ ಬಳಿಕ, ನನ್ನ ಕೆಲಸವನ್ನು ಅವರು ನಡಿಸಬೇಕೆಂಬ ಸಂಕಲ್ಪವಿತ್ತು. ಡಾ॥ ಪ್ರಾಣಜೀವನದಾಸ ಮೆಹತಾರವರು ಅವರ ಖರ್ಚು ಸಹಿಸುತ್ತಿದ್ದರು. ಅವರ ವಿದ್ಯಮಾನ ಡಾ॥ ಜೀವರಾಜ ಮೆಹತಾ ಹಾಗು ಇಂಗ್ಲಂಡದಲ್ಲಿ ಅಭ್ಯಾಸ ಮಾಡುವ ಇತರರೊಡನೆ ನಾನು ಕೂಟ ನಡಿಸಿದೆನು. ಎಲ್ಲರ ಆಲೋಚನೆಯಿಂದ ಇಂಗ್ಲಂಡ, ಸ್ಕಾಟಲಂಡ, ಐರ್ಲಂಡಗಳಲ್ಲಿರುವ ಭಾರತೀಯರದೊಂದು ಸಭೆಯನ್ನು ಸೇರಿಸಿದೆನು ಮತ್ತು ಆ ಸಭೆಯಲ್ಲಿ ನನ್ನ ವಿಚಾರಗಳನ್ನು ತಿಳಿಸಿದೆನು.

ವಿಲಾಯತಿಯಲ್ಲಿರುವ ಭಾರತೀಯರು ಮಹಾಯುದ್ಧದಲ್ಲಿ ಕೈಲಾದಷ್ಟು ನೆರವಾಗಬೇಕಾಗಿ ನನ್ನ ಭಾವನೆಯಾಯಿತು. ಸ್ವಯಂಸೇವಕರಾಗಿ ಸೇವಿಸಲು ಬ್ರಿಟಿಶ ವಿದ್ಯಾರ್ಥಿಗಳು ಮುಂದಾಗಿದ್ದರು; ಅದರಂತೆ ಭಾರತೀಯರೂ ಮುಂದಾಗಬೇಕೆಂದು ನನಗನಿಸಿತು. ಈ ವಿಚಾರಸರಣಿಗೆ ಅನೇಕ ಆಕ್ಷೇಪಗಳು ಕೇಳಬರಹತ್ತಿದವು. ಭಾರತೀಯರಿಗೂ, ಬ್ರಿಟಿಶರಿಗೂ ಆನೆ-ಗಜಾಂತರವಿದೆಂದು ಆಕ್ಷೇಪಿಸಲಾಯಿತು. ನಾವು ಗುಲಾಮರು; ಅವರು ಯಜಮಾನರು. ಯಜಮಾನರ ಸಂಕಟ ಸಮಯದಲ್ಲಿ ಯಜಮಾನರ ಜೊತೆಗೆ ಗುಲಾಮನು ಯಾಕೆ ಸಹಕಾರ್ಯ ಬೆಳಿಸಬಲ್ಲನು? ಸ್ವಾತಂತ್ರ್ಯ ಬಯಸುವ ಗುಲಾಮನು ಯಜಮಾನರ ಸಂಕಟವೇ ತನ್ನ ಸ್ವಾತಂತ್ರ್ಯ ಪ್ರಾಪ್ತಿಯ ಸಮಯವೆಂದೆಣಿಸಿ, ಆ ಕಡೆ ನೋಡಿಯುವದು ಉಚಿತವಲ್ಲವೇ? ಆ ಕಾಲಕ್ಕೆ ಈ ಆಕ್ಷೇಪವು ನನಗೆಷ್ಟು ಗ್ರಾಹ್ಯವಾಗಲಿಲ್ಲ. ಭಾರತೀಯರಿಗೂ, ಬ್ರಿಟಿಶರಿಗೂ ಇರುವ ಸ್ಥಿತ್ಯಂತರವನ್ನು ನಾನು ಬಲ್ಲೆನಾಗಿದ್ದೆ. ಆದರೆ, ನಾವು ಗುಲಾಮ ಸ್ಥಿತಿಗೆ ಬಂದಿದ್ದೇವೆಂದು ನಾನು ಆಗ ಭಾವಿಸಲಿಲ್ಲ. ವ್ಯಕ್ತಿಶಃ ಬ್ರಿಟಿಶ ಅಧಿಕಾರಿಗಳ ಅವಶ್ಯಕತೆಗಳಿಂದ ಈ ಸ್ಥಿತಿಯು ಒದಗಿದೆಂದೂ, ಬ್ರಿಟಿಶ ರಾಜ್ಯಪದ್ಧತಿಯು ಸದೋಷವಲ್ಲೆಂದೂ, ಸ್ನೇಹಭಾವದಿಂದ ಅವರನ್ನು ತಿದ್ದಬಹುದೆಂದೂ ಆ ಕಾಲಕ್ಕೆ ನನ್ನ ಕಲ್ಪನೆ ಇತ್ತು. ಬ್ರಿಟಿಶರ ಸಹಾಯದಿಂದಲೂ, ಸಹಕಾರ್ಯದಿಂದಲೂ ನಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾದರೆ, ಸಂಕಟ ಕಾಲದಲ್ಲಿ ಅವರಿಗೆ ಬಂಟರಂತೆ ನೆರವಾಗಿ, ಅವರ ಮನವೊಲಿಕೆ ಮಾಡಿಕೊಳ್ಳಬೇಕು. ರಾಜ್ಯಪದ್ಧತಿಯು ಕೆಲ ಪಟ್ಟಿಗೆ ದೋಷಾಸ್ಪದವಿದ್ದಾಗ್ಯೂ, ಆ ಕಾಲಕ್ಕೆ ಅದು ಅಸಹ್ಯವೆಂದು ನಾನೆಣಿಸಲಿಲ್ಲ. ಈಗ ಅದು ಅಸಹ್ಯವೆಂದು ಮನವರಿಕೆಯಾಗಿದೆ. ಈಗ ಈ ರಾಜ್ಯಪದ್ಧತಿಯಲ್ಲಿ ನಂಬಿಗೆ ನಷ್ಟವಾಗಿರುವದರಿಂದ, ಬ್ರಿಟಿಶ ಸರಕಾರದೊಡನೆ ಸಹಕಾರ ಬೆಳಿಸಲು ಇಂದಿಗೆ ನಾನು ಒಪ್ಪುವದಿಲ್ಲ. ಅದರಂತೆಯೇ ಆ ಕಾಲಕ್ಕೆ ಈ ರಾಜ್ಯಪದ್ಧತಿಯಮೇಲೆಯೂ, ಅಧಿಕಾರಿಗಳಲ್ಲಿಯೂ ಶ್ರದ್ಧೆ ಇಲ್ಲದವರು ಆ ಕಾಲಕ್ಕೆ ಸಹಕಾರ್ಯವನ್ನು ಬೆಳಿಸುವದಾದರೂ ಹೇಗೆ? ಇದರಿಂದ ಭಾರತೀಯ ಅಧಿಕಾರಗಳನ್ನು ಸ್ಪಷ್ಟವಾಗಿ ಪ್ರಕಟಿಸಿ, ಭರತಖಂಡದ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಈ ಸಮಯವು ತೀರ ಯೋಗ್ಯವಾದದ್ದೆಂದು ವಿರೋಧಕರು ಅಭಿಪ್ರಾಯಪಟ್ಟರು. ಇಂಗ್ಲಂಡವು ಸಂಕಟದಲ್ಲಿ ಸಿಲುಕಿಕೊಂಡಾಗ ನಾವು ಸ್ವಾರ್ಥಪರರಾಗಬಾರದೆಂದು ನನಗನಿಸಿತು. ಮಹಾಯುದ್ಧವು ಮುಗಿಯುವ ತನಕ ನಮ್ಮ ಅಧಿಕಾರಗಳನ್ನು ಕೇಳಲು ಒತ್ತಾಯ ಮಾಡುವದು ಅಸಭ್ಯವೆಂದೂ, ಅದೂರದೃಷ್ಟಿಯದೆಂದೂ ನನ್ನ ವಿಚಾರವಾಯಿತು. ಆದರಿಂದ ನನ್ನ ವಿಚಾರವನ್ನು ನಾನು ತ್ಯಜಿಸಲಿಲ್ಲ. ಅಪೇಕ್ಷೆಯಿದ್ದವರು ಸ್ವಯಂಸೇವಕರಾಗಿ ಸೇರಬೇಕೆಂದು ನಾನು ನಿಮಂತ್ರಿಸಿದೆನು. ನನ್ನ ನಿಮಂತ್ರಣೆಗೆ ತಕ್ಕ ಸಂಭಾವನೆಯೂ ದೊರೆಕಿತು. ಎಲ್ಲ ಪ್ರಾಂತದವರೂ, ಧರ್ಮದವರೂ ನನ್ನ ಸ್ವಯಂಸೇವಕ ಮಂಡಳದಲ್ಲಿ ಸೇರಿಕೊಂಡರು.

ನಾನು ಕ್ರ್ಯೂ ದೊರೆಗಳಿಗೆ ಪತ್ರ ಬರೆದೆನು. ಎಲ್ಲ ಸಂಗತಿಗಳನ್ನು ವಿವರಿಸಿ ಹೇಳಿದೆನು. ನಮ್ಮ ಅಂಗೀಕಾರವಾಗಬೇಕಾದರೆ, ಶಸ್ತ್ರದ ಕೆಲಸವನ್ನು ಮಾಡಲು ನಾವು ಒಪ್ಪಬೇಕೆಂದಿದರೆ, ಅದಕ್ಕೂ ನಾವು ಸಿದ್ಧರಿದ್ದೇವಾಗಿ ನಾನು ತಿಳಿಸಿದೆನು. ಕೆಲ ಹೊತ್ತು ವಿಚಾರ ಮಾಡಿ ಕ್ರ್ಯೂ ದೊರೆಗಳು ನಮ್ಮ ಸೂಚನೆಯನ್ನು ಅಂಗೀಕರಿಸಿದರು. ತಕ್ಕಟ್ಟಿನಲ್ಲಿ ಸಾಮ್ರಾಜ್ಯಕ್ಕೆ ನೆರವಾದ ಬಗ್ಗೆ ನಮ್ಮ ಉಪಕಾರ ಮನ್ನಿಸಿದರು. ಸುಪ್ರಸಿದ್ಧ ಡಾ॥ ಕೆಂಟ್ಲಿಯವರ ಕೈಕೆಳಗೆ ಘಾಯಪಟ್ಟವರಿಗೆ "ಪ್ರಥಮ ಚಿಕಿತ್ಸೆ" ಅಂದರೆ ಪ್ರಥಮ ಚಿಕಿತ್ಸೆ ಮಾಡುವ ಕ್ರಮವನ್ನು ಸ್ವಯಂಸೇವಕರು ಕಲಿಯಲಾರಂಭಿಸಿದರು. ಅದು ೬ ವಾರಗಳ ವರೆಗೆ ನಡೆವ ಸಣ್ಣ ಕ್ರಮಾಕ್ರಮವಾಗಿತ್ತು. ಈ ಕ್ರಮದಲ್ಲಿ "ಪ್ರಥಮ ಚಿಕಿತ್ಸೆ"ಯ ಎಲ್ಲ ಯೋಜನೆಗಳೂ ಕಲಿಸಲ್ಪಡುತ್ತಿದ್ದವು. ನಾವು ಸುಮಾರು ೮೦ ಮಂದಿಗಳಿದ್ದೆವು. ೬ ವಾರಗಳಾದ ಬಳಿಕ ನಮ್ಮ ಪರೀಕ್ಷೆ ಕೊಳ್ಳಲಾಯಿತು, ಒಬ್ಬನ ಹೊರತು ಉಳಿದವರೆಲ್ಲರೂ ತೇರ್ಗಡೆ ಹೊಂದಿದರು. ತೇರ್ಗಡೆ ಹೊಂದಿದವರಿಗೆ ಸರಕಾರವು ಈಗ ಸೈನಿಕ ಕವಾಯತನ್ನು, ಇತರ ಶಿಕ್ಷಣವನ್ನೂ ಪೂರೈಸಿತು. ಕರ್ನಲ್ ಬೇಕರರವರು ನಮಗೆ ಈ ಶಿಕ್ಷಣವನ್ನು ಕೊಡುತ್ತಿದ್ದರು.

ಈ ದಿನಗಳಲ್ಲಿ ಲಂಡನ್ ಪಟ್ಟಣವನ್ನು ನೋಡತಕ್ಕಂಥದ್ದಿತ್ತು, ಯಾರೂ ಗಾಬರಿಪಡುತ್ತಿದ್ದಿಲ್ಲ. ಎಲ್ಲರೂ ಶಕ್ತಿಮೀರಿ ನೆರವಾಗಲು ತೊಡಗಿದ್ದರು, ಶಕ್ತ ಹರೆಯದವರು ಸೈನಿಕರಾಗಿ ಶಿಕ್ಷಣ ಹೊಂದುತ್ತಿದ್ದರು. ಆದರೆ ಮುದುಕರೂ, ಊನಾಂಗದವರೂ, ಹೆಂಗಸರೂ ಏನು ಮಾಡತಕ್ಕದ್ದೇನು? ಅವರಿಗೆ ದುಡಿಯಬೇಕೆಂದಿದ್ದರೆ, ಬಹಳ ಕೆಲಸವಿತ್ತು. ಆದರಿಂದ ಅವರೂ ಕೆಲಸ ಮಾಡಲುದ್ಯುಕ್ತರಾದರು. ಘಾಯಪಟ್ಟವರಿಗೆ ಅವಶ್ಯವುಳ್ಳ ಅರಿವೆ-ಅಂಚಡಿಗಳನ್ನು ಅವರು ತಯಾರಿಸಹತ್ತಿದರು. ಲಿಸಿಯಮ್ ಎಂಬುದೊಂದು ಸ್ತ್ರೀಕೂಟವಿತ್ತು. ಈ ಕೂಟವು ಸೈನಿಕರಿಗೆ ತಗಲುವ ಉಡಿಗೆ-ತೊಡಿಗೆಗಳನ್ನು ತಯಾರಿಸುವ ಕಾರ್ಯವನ್ನು ಕೈಕೊಂಡಿತು. ಸೌ॥ ಸರೋಜಿನಿದೇವಿಯವರು ಈ ಕೂಟದ ಸಭಾಸದರಿದ್ದರು. ಅವರು ಈ ಕೆಲಸವನ್ನು ಮನಃಪೂರ್ವಕವಾಗಿ ನಡಿಸಿದರು. ಅವರಿಗೆ ನಾನು ಕಂಡದ್ದು ಇದೇ ಮೊದಲು. ಅರಿವೆಗಳನ್ನು ಬಂದು ಮಾದರಿಯಂತೆ ಅವಳು ಕೊಯ್ದಿದ್ದಳು. ಅವುಗಳದೊಂದು ರಾಶಿಯಾಯಿತು. ಆ ರಾಶಿಯನ್ನು ಅವಳು ನನ್ನ ಕಡೆಗೆ ಕೊಟ್ಟು, ಹೊಲಿಸಿ ತನಗೆ ತಲುಪಿಸಲು ಹೇಳಿದಳು. ಅವಳ ಹೇಳಿಕೆಯನ್ನು ನಾನು ಮನ್ನಿಸಿದೆನು. ಮಿತ್ರರುಗಳ ಸಹಾಯದಿಂದ 'ಪ್ರಥಮ ಚಿಕಿತ್ಸೆ'ಯ ಶಿಕ್ಷಣ ಹೊಂದುವಾಗ, ಒದಗಿದಷ್ಟು ಒಟ್ಟೆಗಳನ್ನು ತಯಾರಿಸಿ ಕೊಟ್ಟೆನು.

ಕೆಲವು ವಿಷಯಗಳು.

— ಬೆಳಗಾವಿಯ ಸುಳಧಾಳದಲ್ಲಿ ಗಂಬುಕವ್ವಾ ಸಿದ್ದಪ್ಪಾ ಎಂಬೊಬ್ಬ ಮುದಿ ಹೆಂಗಸಿದ್ದಾಳೆ. ಅವಳ ಪ್ರಾಯವು ೬೫-೭೦ ವರ್ಷ. ಅವಳಿಗೆ ಬೆಳೆದ ಮಗಂದಿರು, ಒಬ್ಬ ಹುಡುಗಿ ಇದ್ದಾರೆ. ಇವಳು ಕುರುಡಿ; ಹುಟ್ಟುಕುರುಡಿಯಲ್ಲ. ಕುರುಡಿಯಾಗಿ ೩೦ ವರ್ಷಗಳಾದವು. ಹಳ್ಳಕೆ ತಯಾರಿಸುವ ಕಾರಖಾನೆಯಲ್ಲಿ ಇವಳು ಕೆಲಸ ಮಾಡುತ್ತಿದ್ದಳು. ಥಟ್ಟನೆ ಹಳ್ಳಕ್ಕೆ ಕುದಿಯುತ್ತಿರುವಾಗ ಕಣ್ಣಲ್ಲಿ ಹಾರಿ ಇವಳು ಕುರುಡಿಯಾದಳು. ಆದರಿಂದ ಆಕೆಳು ಮನೆಗೆ ಬಂದಳು; ಅವಳಿಗೆ ನೂಲಬರುತ್ತಿತ್ತು; ಕಣ್ಣಿಗೆ ಕಾಣುತ್ತಕೊಂಡು ಕಾಲಹರಣ ಮಾಡುವದಕ್ಕಿಂತ, ಕೂತಲ್ಲಿ ನೂಲಲಾರಂಭಿಸಿದಳು. ಕೂತಲ್ಲಿ ವರ್ಷದ ೩೦ ರೂಪಾಯಿಗಳನ್ನು ಅವಳು ಸಂಪಾದಿಸುತ್ತಾಳೆ. ಮದ್ರಾಸದ ರಾಷ್ಟ್ರೀಯ ಸಭೆಯ ಸಮಯ ಜರುಗಿದ ಖಾದಿ ಪ್ರದರ್ಶನದಲ್ಲಿ ಅವಳು ನೂಲುವ ಪ್ರಯೋಗಗಳನ್ನು ಮಾಡಿ ತೋರಿಸುತ್ತಿದ್ದಳು. ನೂಲುವಾಗ ನೂಲು ಹರಿದರೆ ಇವಳು ತನ್ನಷ್ಟಕ್ಕೆ ನೂಲನ್ನು ಜೋಡಿಸಿಕೊಳ್ಳುತ್ತಾಳೆ. ಪ್ರದರ್ಶನದಲ್ಲೊಬ್ಬರು ಇವಳ ಕಾರ್ಯಕ್ಷಮತೆಯನ್ನು ಪರೀಕ್ಷಿಸುವದಕ್ಕೋಸ್ಕರ ರಾಟಿಗಿರುವ ಸುರಿಯನ್ನು ಜೋರಿಯಿಂದ ಕೊಯ್ದುಬಿಟ್ಟರು. ಏನೂ ಮಾತಾಡದೆ ಬಸವ್ವನವರು ಸುರಿಯನ್ನು ಸರಿಪಡಿಸಿಕೊಂಡರು. ಯಾತದಕ್ಕೂ ಅನ್ಯರ ಸಹಾಯ ಅವಳಿಗೆ ಬೇಡ; ಅಷ್ಟು ಅವಳ ಸ್ಪರ್ಶಜ್ಞಾನವು ತೀಕ್ಷ್ಣವಿದೆ.

— ವಿಜಾಪುರ ಜಿಲ್ಹೆಯ ತುಳಸಿಗಿರಿ ಗ್ರಾಮದಲ್ಲಿ ಒಂದು ದೇವಾಲಯವಿದೆ. ಈ ದೇವಾಲಯದಲ್ಲಿ ದೇವದಾಸಿಗಳ ರೂಢಿಯಿದೆ. ಅಂದರೆ, ಎಳೆ ಹುಡುಗಿಯರನ್ನು ದೇವರಿಗೆ ಅರ್ಪಿಸುವ ಶಾಸ್ತ್ರ ಮಾಡಿ, ಅವರಿಗೆ ವೇಶ್ಯಾವೃತ್ತಿಗೆ ಅರ್ಪಿಸುತ್ತಾರೆ. ಶ್ರೀ॥ ದೇಶಪಾಂಡೆ ಗಂಗಾಧರರಾಯರ ಪ್ರಯತ್ನದಿಂದ ಅಲ್ಲಿಯ ೩ ಮಂದಿ ವೇಶ್ಯೆಯರು ಅಸಹಯೋಗ ಪ್ರಾರಂಭವಾದಂದಿನಿಂದ ನೂತು ಹೊಟ್ಟೆ ಹೊರಕೊಳ್ಳುತ್ತಾಳೆ. ಅವರೊಳಲ್ಲೊಬ್ಬಳಾದ ಕಮಲೆಯು ಮದ್ರಾಸದಲ್ಲಿ ಸೇರಿದ ಖಾದಿ ಪ್ರದರ್ಶನದಲ್ಲಿ ನೂಲುವ ಪ್ರತ್ಯಕ್ಷ ಪ್ರಯೋಗವನ್ನು ಮಾಡಿತೋರಿಸಿ, ವೇಶ್ಯಾವೃತ್ತಿಗಿಂತ ನೂತು ಸಂಸಾರ ನಡಿಸುವದೇ ಶ್ರೇಯಸ್ಕರವೆಂಬದು ಸಿದ್ಧಪಡಿಸುತ್ತಿದ್ದಳು.

— ಅಖಿಲ ಭಾರತೀಯ ನೂಲುಗಾರರ ಸಂಘವು ಖಾದಿಯ ಪ್ರಚಾರಕ್ಕಾಗಿ ಈತನಕ ರೂ. ೧೮೦೩೩೪೯ ಗಳನ್ನು ವ್ಯಯ ಮಾಡಿದೆ. ಕರ್ನಾಟಕದಲ್ಲಿ ರೂ. ೬೨೧೧೦ ಗಳು ವಿನಿಯೋಗಿಸಲ್ಪಟ್ಟವೆ.

— ಭರತಖಂಡದಲ್ಲಿ ೨೩೧೬ ಪಟ್ಟಣಗಳು, ೬೮೫೬೬೫ ಗ್ರಾಮಗಳಿವೆ. ನಗರಗಳಲ್ಲಿರುವ ಜನಸಂಖ್ಯೆಯು ೩೨೪೭೫೨೭೬, ಗ್ರಾಮಗಳೊಳಗಿನ ಜನಸಂಖ್ಯೆಯು ೨೨೬೧೫೧೬೭೫, ಅಂದರೆ, ನಾಗರಿಕರು ಶೇಕಡಾ ೧೦ ರಂತೆಯೂ, ಹಳ್ಳಿಗರು ಶೇಕಡಾ ೯೦ ರಂತೆಯೂ ಇರುತ್ತಾರೆ. ಗ್ರಾಮಗಳ ಉದ್ಧಾರವೇ ಹಿಂದುಸ್ಥಾನದ ಉದ್ಧಾರವು. ಗ್ರಾಮಗಳ ಸಂಪತ್ತು ಅಲ್ಪಾಂಶದಿಂದ ಬೆಳೆಯೂ, ಬಟ್ಟೆಯ ಮೇಲೆ ಕೋಟ್ಯಾವಧಿ ಉತ್ಪನ್ನವಾಗುತ್ತದೆ. ಹಿಂದುಸ್ಥಾನದಲ್ಲಿ ಉದ್ಯೋಗ ಕೊಡುವ ವ್ಯವಹಾರಗಳ ವಿಚಾರ ಮಾಡಿರಿ.— ಹತ್ತಿಯ ಗಿರಣಿಗಳಿಂದ ೩ ಲಕ್ಷ ಜನರು ಹೊಟ್ಟೆ ಹೊರೆಕೊಳ್ಳುತ್ತಾರೆ; ೨॥ ಲಕ್ಷ ಜನರು ನಾರಿನ ಗಿರಣಿಗಳಲ್ಲಿ ದುಡಿಯುತ್ತಾರೆ; ೧। ಲಕ್ಷ ಜನರು ಉಗಿಬಂಡಿಯ ಕಾರಖಾನೆಗಳಿಂದ ದಿನಗಳೆಯುತ್ತಾರೆ; ಕಲ್ಲಿದ್ದಲ ಕಲ್ಯಾಗಳಿಂದ ೧೪ ಲಕ್ಷ ಜನರು ಸಂಪಾದನೆ ಮಾಡುತ್ತಾರೆ; ಕೈಮಗ್ಗಗಳ ವಿಪರ್ಯಾಸದಿಂದ ೨೦ ಲಕ್ಷ ಜನರು ಸಂಸಾರ ಮಾಡುತ್ತಾರೆ; ಉಳಿದ ೨೨॥ ಕೋಟಿ ಜನರು ಬೇಸಾಯ ಮಾಡಿಯೇ ತಮ್ಮ ಹೊಟ್ಟೆ ಹೊರೆಕೊಳ್ಳಬೇಕು, ಅಂದ ಬಳಿಕ, ಬೇಸಾಯಗಾರರಿಗೆ ಚಿಕ್ಕ ಕೆಲಸವನ್ನಾದರೂ ಕೊಟ್ಟರೆ, ದೇಶಕ್ಕೆ ಒದಗುವ ಸಂಪದಭ್ಯುದಯವು ವ್ಯಕ್ತವಾಗುತ್ತದೆ.

— ಅಮೇರಿಕೆಯಲ್ಲಿ ಕೂಲಿಯ ಮಾನವು ತಲೆಗೆ ವರ್ಷಾಸನ ೧೦೮೦ ರೂಪಾಯಿ; ಆಸ್ಟ್ರೇಲಿಯಾದಲ್ಲಿ ರೂ. ೨೧೦; ಬ್ರಿಟಿಶ ದೇಶದಲ್ಲಿ ರೂ. ೩೫; ಕೆನಡಾದೇಶದಲ್ಲಿ ರೂ. ೬೦೦; ಹಿಂದುಸ್ಥಾನದಲ್ಲಿ ರೂ. ೩೬॥ ಅಂದರೆ, ದಿನಾ ೦-೧-೭ ಪೈಯನ್ನು ಭಾರತೀಯರು ಸಂಪಾದಿಸುತ್ತಾರೆಂದಾಯಿತು. ನಾತು ದಿನಾ ೧ ಆಣೆಯನ್ನು ನಾವು ಈಗ ಸಂಪಾದಿಸುವ ಯೋಜನೆಯಿಂದ ಭಾರತೀಯರಿಗೆ ಏಷ್ಟವಿದೆಯೇ ? ನಿರುದ್ಯೋಗಿಯಾಗಿ ಮನೆಯಲ್ಲಿಯೇ ಕೂತುಕೊಳ್ಳಬೇಕಾದಾಗ, ವಿಶೇಷ ಆಯಾಸವಿಲ್ಲದ ಈ ಉದ್ಯೋಗವನ್ನು ನಾವು ಮಾಡಬಹುದಲ್ಲವೇ ?

— ಅಖಿಲ ಭಾರತೀಯ ಪ್ರದರ್ಶನದಲ್ಲಿ ಎರಡು ತರದ ಸೀರೆಗಳನ್ನಿಟ್ಟಿದ್ದರು:— ಸೌರಾಷ್ಟ್ರದ ಆಶ್ರಮದಲ್ಲಿ ಬೆಳೆದ ಹತ್ತಿಯಿಂದಲೂ, ಅಲ್ಲಿಯೇ ನೂತ ನೂಲಿನಿಂದಲೂ ತಯಾರಾದಂಥವು. ೨ ವರುಷಗಳ ತನಕ ಉಪಯೋಗಿಸಲ್ಪಟ್ಟಂಥವು ಇನ್ನೂ ೧' ವರುಷ ಬಾಳಿಕೆಗೆ ಬರುವಂಥವು ಖಾದಿಯ ಸೀರೆಗಳು ಬಾಳಿಕೆಗೆ ಬರುವದಿಲ್ಲೆಂಬ ಆಕ್ಷೇಪವನ್ನು ಪರಿಹರಿಸುವದಕ್ಕಾಗಿ ಇವುಗಳ ಪ್ರದರ್ಶನವಾಗಿತ್ತು.

— ಮಹಾತ್ಮರ ವರ್ಧಂತಿಯ ದಿವಸ ಶ್ರೀ॥ ದೇವಧರ, ಜೋಟುಭಾಯಿ, ರಾಮಲಾಲ, ಕೇಶವ ಗಾಂಧಿಯವರು ಸಾಧಾರಣ ೨೪ ತಾಸು ನೂತರು; ೧೩-೧೪ ನಂಬರದ ನೂಲು ತೆಗೆದರು. ಸರಾಸರಿ ಪ್ರಮಾಣ ನೋಡಿದರೆ, ೨ ಕುಟುಂಬಗಳಿಗೆ ಸಾಲುವಷ್ಟು ನೂಲು ಒಬ್ಬೊಬ್ಬರಿಂದ ಒಂದು ದಿನದಲ್ಲಿ ತಯಾರಿಸಲ್ಪಟ್ಟಿತೆಂದು ಪ್ರಕಟವಾಗಿದೆ.

— ಹಿಂದುಸ್ಥಾನದಲ್ಲಿ ೧೯೨೦ನೇ ಇಸ್ವಿಯಲ್ಲಿ ಖಾದಿಯ ಹೆಸರಿಲ್ಲಾಗಿತ್ತು; ೨೪ನೇ ಇಸ್ವಿಯಲ್ಲಿ ೯೪೯೩೬೪ ರೂಪಾಯಿಗಳ ಖಾದಿ ತಯಾರಾಯಿತು: ೨೫ನೇ ವರುಷ ೧೯೦೩೦೩೪ ರೂಪಾಯಿಗಳ ಖಾದಿ ತಯಾರಾಯಿತು; ೧೯೨೬ನೇ ಇಸ್ವಿಯಲ್ಲಿ ೨೩೭೬೬೭೦ ರೂಪಾಯಿಗಳ ಖಾದಿ ಉಂಟಾಯಿತು. ತಮಿಳನಾಡಿನಲ್ಲಿ ಹೆಚ್ಚಿನ ಖಾದಿ ತಯಾರಾಗುತ್ತ ಬಂದಿದೆ ತಮಿಳನಾಡಿನಲ್ಲಿ ೨೬ನೇ ಇಸ್ವಿಯಲ್ಲಿ ರೂ ೮೪೫೩೧೯ ಗಳ ಖಾದಿ ತಯಾರಾಗಿದೆ. ೧೯೨೪ನೇ ಇಸ್ವಿಯಿಂದ ೧೯೨೭ನೇ ಇಸ್ವಿಯ ತನಕ ತಮಿಳನಾಡಿನಲ್ಲಿ ೧೯೭೯೧೫೪ ರೂಪಾಯಿಗಳ ಖಾದಿ ತಯಾರಾಯಿತು. ಖಾದಿಯ ಗಿರಾಕಿಯು ಹೆಚ್ಚುತ್ತಲಿದೆ. ಈ ಅವಧಿಯಲ್ಲಿ ೨೧೯೨೬೭೯ ರೂಪಾಯಿಗಳ ಖಾದಿ ಮಾರಾಟವಾಯಿತು, ಅಂದರೆ ೨-೨॥ ಲಕ್ಷ ರೂಪಾಯಿಗಳ ಖಾದಿಯನ್ನು ಪರಪ್ರಾಂತಗಳಿಂದ ಆಮದು ಮಾಡಬೇಕಾಯಿತು.

— ಫೆಬ್ರುವರಿ ೩ ನೇ ತಾರೀಖಿಗೆ ಹರತಾಳಿನ ಸಮಯ ಮದ್ರಾಸದಲ್ಲಿ ದೊಂಬಿಯಾದ ಸಂಪೂರ್ಣ ಜವಾಬದಾರಿಯು ಬಹಿಷ್ಕಾರ ವಿರೋಧಕರ ಮೇಲಿರುತ್ತದಾಗಿ ಪರಿಷತ್ತಾಯಿದ ಕೌನ್ಸಿಲಿನ ಸಭಾಸದರಾದ ಶ್ರೀ॥ ಎಮ್. ಕೇ. ಆಚಾರ್ಯರವರು ಪ್ರಕಟಿಸಿದ್ದಾರೆ; ಬಹಿಷ್ಕಾರ ವಿರೋಧಕರು ಮದ್ರಾಸದೊಳಗಿನ ಪುಂಡರುಗಳಿಗೆ ಉತ್ತೇಜಿಸಿ, ಖಾದಿಯನ್ನು ಧರಿಸುವವರಿಗೆ ಕಿಕ್ಕಿರಿಕ್ಕಲ್ಲಿ ಒಡೆದರೆಂದೂ ಶ್ರೀ॥ ಆಚಾರ್ಯರವರು ಪ್ರಕಟಿಸಿದ್ದಾರೆ. ಅವರ ಮಗಂದಿರಾದ ಶ್ರೀ॥ ವರದಾಚಾರ್ಯ, ಬಿ ಎ., ಬಿ ಎಲ್., ರವರು ಬರೆದ ಪತ್ರದ ಮೇಲಿಂದಲೂ ಈ ಹಕೀಕತು ಸ್ಪಷ್ಟವಾಗುತ್ತದಾಗಿಯೂ ಬರೆದಿದ್ದಾರೆ.

— ರಶಿಯಾ ದೇಶದಲ್ಲಿ ಸೋವಿಯೆಟ್ ಊರ್ಫ್ ಸಂಪೂರ್ಣ ಸಮಾಜಸತ್ತಾತ್ಮಕ ರಾಜ್ಯವ್ಯವಸ್ಥೆ ಸ್ಥಾಪನೆಯಾಗಿ ೫ ವರ್ಷಗಳಾದವು; ಈ ೫ ವರ್ಷಗಳಲ್ಲಿ ಬೇಸಾಯಗಾರರ ಅಭಿವೃದ್ಧಿಯು ವಿಶೇಷವಾಗಿದೆ. ಬೇಸಾಯಗಾರರು ಈ ಅವಧಿಯಲ್ಲಿ ೮॥ ಲಕ್ಷ ದನಗಳನ್ನು ಕೊಂಡರು; ೧೫ ಲಕ್ಷ ನೇಗಿಲುಗಳನ್ನು ಕೊಂಡರು. ೪॥ ಲಕ್ಷ ಹಲಿಕೆಗಳನ್ನೂ ೬೨ ಸಾವಿರ ಬಿಕ್ಕುವ ಯಂತ್ರಗಳನ್ನೂ, ೧॥ ಲಕ್ಷ ಸಾಲಿಗೆಗಳನ್ನೂ ಕೊಂಡರು; ಬೇಸಾಯಕ್ಕವಶ್ಯವುಳ್ಳ ಇತರೇ ಸಾಮಗ್ರಿಗಳನ್ನು ಕೊಂಡು ಕೊಂಡರಂತೆ; ಹೀಗೆ ಬೇಸಾಯಗಾರರು ಅಭಿವೃದ್ಧಿ ಹೊಂದಿದ್ದರಿಂದಲೂ ೪೦ ಲಕ್ಷ ಎಕ್ರೆ ಭೂಮಿಯು ಸಾಗುವಳಿ ಆಗುವ ಹಾಗಿದೆ; ರಶಿಯಾ ದೇಶದೊಳಗಿನ ರಾಜ್ಯಪದ್ಧತಿಯಿಂದ ಭೂತಲಕ್ಕೆ ನಷ್ಟವಿರುವದೆಂದು ಬ್ರಿಟಿಶರು ಹಂಗುರ ಸಾರಿ, ಆ ಪದ್ಧತಿಯನ್ನೊಂದು ಸಂಪೂರ್ಣವಾಗಿ ನಷ್ಟಪಡಿಸಲು ಪ್ರಯತ್ನ ಮಾಡುವದು ಸ್ವಾರ್ಥದಿಂದು ಇದು ತಿಳಿಯುವ ಹಾಗಿದೆ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಶಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ವ್ಯವಸ್ಥಾ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದುಂಟಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಅಭಿವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಸಿವು. ರೋಗಿ ಶಾಂತನಾದರೆ ಏರ್ಪಡಿಸತಕ್ಕವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗವಾಗುವದು. ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮುಂತಾದ ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೫ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩-೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೮-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ಪಿಪ್ಪಾಳೆ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟೆ...]

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ-ಶಿಥಿಲತ್ವ, ನಪುಂಸಕತ, ಸ್ವಪ್ನಾವಸೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎಬಿನೋಣ (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಸಿಂದೂರನತೀ ತಕ್ಕೊಂಡು ಅನುಭವಿಸಿರಿ. (ಇದ) ವನಸ್ಪತಿಗಳು ಮತ್ತು ಭಸ್ಮ "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ವತಿ, ರಾತ್ರಿಯು ಭೋಜನವಾದ ನಂತರ ೨ ತೊಲಿಯ ಒಂದು ವತಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫॥ ರೂ. ೩ ಡಬ್ಬಿಗೆ ೧೫॥ ರೂ. ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- एक रत्तलास किंमत १॥ रुपये

रामबाण औषध

- सर्दि घालविणारें
- भूक वाढविणारें
- शौच्यास साफ करणारें
- झोप आणणारें
- शक्ति देणारें
- तेजस्वीपणा आणणारें

पिण्यास रुचकर

कॅटलॉग मागवा,

झंडुफार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणी कंपनी, तीर्थहळ्ळी

सिर्सि एजंट एस एल धाकप्पा आणि ब्रदर

ಹಿಂದ ಸ್ಥಾನದಲ್ಲೆಲ್ಲ ಅತ್ಯಂತ ಜನಪ್ರಿಯ

'ನೆಶನಲ್ ಇನ್‌ಶೂರನ್ಸ ಕಂಪನಿ, (ಲಿಮಿಟೆಡ್)

ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 8 40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋವ್‌ಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿನಂತೆಯೂ ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿನಂತೆಯೂ ಬಹುಮಾನ ಕೊಟ್ಟಿರುವವು

ಹೊರಗಡೆ 1000 ರೂಪಾಯಿಗಳ ಪಿವೆ ಎಷ್ಟು ಕಂತು ಕೊಡವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1... ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ... ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು

ಕರ್ನಾಟಕಕ್ಕೆ ಏಜಂಟರು ಬಿ ಸಿ ಸಿರಾಳಕೊಪ್ಪ, ಲೋಖಂಡಿ ಬಿಲ್ಡಿಂಗ, ಹುಬ್ಬಳ್ಳಿ

P D Churi,
Branch Secretary
Alice Building,
Hornby Road,
BOMBAY

S U. Narayanacharya & CO
Chaukamba, BENARES CITY,



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ ಜರಿಕಣ ಜರಿ ಸೀರೆ, ಕಾಶ್ಮೀರ್ ಶಾಲು, ಶಿವಪೂಜೆ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಪ್ರತಿ ಕಮಲ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗು ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು

ವಿಳಾಸ--ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ ಚೌಕಂಬಾ ಕಾಶೀಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಸ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಠರದ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಪೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಕಳಿಸೆ ಪ್ರಕಟ ಕಳಿಸಲಾದೀತು

ಒಂದು ಬುಡ್ಡಿಕ್ಕೆ ಕ್ರಯ ರೂ ೦-೪-೦. ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ, ರೂ ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

೧೩ ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪೋರ್ಕ್ ಮದರಾಸ

ಕಿರ್ಲೋಸ್ಕರ ಕನಾಲ ಗಾಣ.

ಶೇಕಡಾ ೬೮ ರಿಂದ ೭೦ ರ ವರೆಗೆ ರಸ ಹೊರಡುವದು

ಗಂಟೆಯೊಂದಕ್ಕೆ ೧೧೦೦ ಪೌಂಡ ಕಬ್ಬನ್ನು ಹಿಂಡುವದು.

ಬೆಲೆ ೨೯೦ ರೂ. ಕೊಡ್ಲೆ ಡಿಲಿವ್ಹರಿ

ಶಿರಸಿಯಲ್ಲಿ ಎಸ ಎಲ್ ದಾಕಪ್ಪಾ ಮತ್ತು ಬ್ರದರ್ಸ, ಇವರಲ್ಲಿ ಸಿಗುವದು

ರಚನೆ— ಈ ಗಾಣದಲ್ಲಿಯ ಎರಕ ಹೊಯ್ದ ಭಾಗಗಳು ಅರ್ಧ ಉಕ್ಕಿನಿಂದ ಕೂಡಿದ ಧಾತುವಿನಿಂದ ತಯಾರಾಗಿರುತ್ತವೆ ಕಣೆಗಳ ಎತ್ತರ ೧೧ ಇಂಚು, ಅಕ್ಸಲ್ ಬಾಕ್ಸನವು ಒತ್ತು, ಅಕ್ಸಲ್, ರೋಲರ ಇವು ಬೇರೆ ಬೇರೆ ಇರುತ್ತವೆ ಬೇಅರಿಂಗ ರಿನ್ಯೂಬಲ್ ದವು ಇರುತ್ತವೆ ಎಂಣೆಯು ಸತತವಾಗಿ ನಿಲ್ಲುವದಕ್ಕೆ ಏರ್ಪಾಡು ಮಾಡಿರುತ್ತೇವೆ ಬಸವಳಿಯಲ್ಲಿ ಸುಧಾರಣೆ ಮಾಡಿರುತ್ತದೆ

ವೈಶಿಷ್ಟ್ಯ— ಕಣೆಗಳು ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಅಡಕಿನಲ್ಲಿ ಸಿಕ್ಕು ಕಡೆಗೆ ಬರುವದರಲ್ಲಿ ಹಿಂಡಿ ಹಿಪ್ಪಿಯಾಗಿ ಬರುವದು ಮಿಕ್ಕ ಗಾಣಗಳಂತೆ ಇಬ್ಬರು ಬೇಕಾಗದೆ ಒಬ್ಬನಿಂದಲೇ ಸಾಗುವದು ನಾಲ್ಕು ಎತ್ತುಗಳು ಬೇಕು

ಅಭಿಪ್ರಾಯ— "ಕನಾಲ ಗಾಣದಿಂದ ಸಿಪ್ಪೆಯಲ್ಲಿ ವ್ಯರ್ಥ ಹೋಗುವ ರಸದಿಂದ ದಿನಾಲು ೩॥ ಮಣ ಬೆಲ್ಲ, ಅಂದರೆ ೧೦ ರೂ. ಲಾಭವಾಯಿತು ೨೪ ದಿವಸ ಗಾಣಸಾಡಿತು ನನಗೆ ಒಟ್ಟು ೨೪೦ ರೂ ಲಾಭವಾಯಿತೆಂದು ತಿಳಿಸಲು ಆನಂದವಾಗುತ್ತದೆ ತಮ್ಮ ರಾಜನಗೌಡಾ ಪಾಟೀಲ, ಸವಲಗಿ ಜಿ ಬೆಳಗಾಂವ "

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ

ತಲೆನೋವು, ಬೆನ್ನುನೋವು ಸಂಧಿವಾತ, ಛಳಿ, ಕೆಮ್ಮು, ಸುಟ್ಟಗಾಯ ಮುಂತಾದ ಎಲ್ಲ ತರದ ನೋವಿಗೆ ಇದರಿಂದ ಗುಣವಾಗುವದು ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು ನೋವು ಚಿಕ್ಕದೆಂದು ಯಾರೂ ತಿರಸ್ಕರಿಸಲಾಗದು ಚಿಕ್ಕ ನೋವಿನಿಂದಲೇ ಜೀವಕ್ಕೆ ಸುಖ ದೊರೆಯುವದಿಲ್ಲ, ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಇಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು ಬೆಲೆ ರೂ ೦—೧೦—೦

ಎಲ್ಲ ಕಡೆಯಲ್ಲಿಯೂ ಸಿಗುತ್ತವೆ

ಅಮೃತಾಂಜನ ಡಿಪೋ,
ಮುಂಬಯಿ ಮತ್ತು ಮದ್ರಾಸ

MONDAY, FEBRUARY 27TH, 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೦

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮುನಿಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಸ್ಮಾಲ
ಪ್ಯಾಯಿಕ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ 1-0
೮ ಸಂಖ್ಯ ಪ್ರತಿಸಾಲಿಗೆ 0-2-0
ಹೆಡಿಂಗದ ಸಾಲು ಎಷ್ಟು
ದೊಡ್ಡದಿರುವದೋ ಆ ಮಾಪ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರದ್ವಾರ ಯಾ ಸಮಕ್ಷ ತಿಳಿ
ಸಲ್ಪಡುವದು

-(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೭ ಮಾಹೆ ಫೆಬ್ರುವರಿ ಸನ್ ೧೯೨೮ನೇ ಇಸವಿ.)-

ಹೊಸ ಅಂಗಡಿ! ಹೊಸ ಮಾಲು!!

ಕುಮಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟಂಟ ಔಷಧಗಳು, ಕಾಜಿನ ಸಾಮಾನು, ಮುಂತಾದ ಎಲ್ಲ ಥರದ ಮಾಲು ಬಲು ಅಗ್ಗವಾಗಿ ದೊರೆಯುತ್ತವೆ!

ಚಿಲ್ಲರೆ ವ್ಯಾಪಾರಿಗಳಿಗೂ ಮುನಾಫೆ ಸಿಗುವಂತೆ ಸ್ಪೆಶಲ್ ರೋಖ ದರಗಳು ಇದಲ್ಲದೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮಾಲು ಪಡೆಯಲು ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಅಯರ್ನ ಮರ್ಚಂಟ,
ಕುಮಟಾ. (ಉ ಕನ್ನಡ)

ಬೆಲೆ] ನವ್ಯ ಶಾಸ್ತ್ರೀಯವಾದ [೧ಚಿ೦!

ಶಾರೀರಕ ಶಿಕ್ಷಣ.



ಈ ಪುಸ್ತಕದಲ್ಲಿ ನನ್ನ ವಪು ನನ್ನ ಇಷ್ಟದ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿರುವವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ೨ ಆಣೆಯ ಸ್ಟಾಂಪು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ಕಳಿಸುತ್ತೇನೆ ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಚನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಜಿ. ಪ್ಹಿ. ವೇಲಿಂಗಿ ಮೋಟಾರ ಸರ್ವ್ಹೀಸ.

ಕುಮಟಾ—ಶಿರ್ಶಿ



ಶಿರ್ಶಿ—ಕುಮಟಾ

ಡೇಲಿ ಮೋಟಾರ ಸರ್ವ್ಹೀಸ ಪ್ರಾರಂಭವಾಗಿರುವದು

ಇದೇ ಲೈನಿನ ಶಿರ್ಶಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವ ವರೆಗೆ ನಡಿಯುತ್ತದೆ ಸ್ಪೆಶಲ್ ಬಾಡಿಗೆಗೆ ಬೇಕಾದವರು ಒಂದು ದಿವಸ ಮುಂಚಿತ ತಿಳಿಸಬೇಕು

ಟಿಕೀಟಿನ ದರ—ಸೋಯಿ ಅತಿ ಸೋಯಿ!! ಎಲ್ಲರಿಗಿಂತಲೂ ಸೋವಿ!!!

ಬೆಂಗಳೂರಿನ ಟಿಕೀಟುಗಳೂ, ವಿಶೇಷ ಮಾಹಿತಿಯೂ ಕುಮಟಾ ಏಜಂಟ ಜಾನಪ್ಪಾ ರಾಮ ನಾಯಕ ಮುದಗಾಂವಕರ ಇವರ ಕಡೆ ಸಿಕ್ಕುವವು

ದಿ ಬೆಳಗಾಂವ ಮೋಟರ ವರ್ಕ್ಸ ಮತ್ತು ಟ್ರಾನ್ಸಪೋರ್ಟ ಕಂಪನಿ, ಬೆಳಗಾಂವ

ಇವರ

ಬೆಳಗಾಂವ— ಕಾರವಾರ

ನಿಯಮಿತ ಡೇಲಿ ಮೋಟರ ಸರ್ವ್ಹಿಸ್ ಚಾಲು ಇದೆ.

ಪ್ರತಿ ದಿವಸ "ಬೆಳಗಾಂವದಿಂದ" ಬೆಳಗಿನ ೮ ವ ಮುಂಬೈದಿಂದ ಬಂದ ಮೇಲ ಗಾಡಿ ೧೦॥ ಘಂಟೆಗೆ, ಈ ರೀತಿ ಎರಡು ಮೋಟರಗಳು ಹೊರಟು "ಖಾನಾಪೂರ, ಅಳ್ನಾವರ, ಹಳಿಯಾಳ, ಯಲ್ಲಾಪೂರ, ಅಂಕೋಲಾ ಮಾರ್ಗವಾಗಿ "ಕಾರವಾರಕ್ಕೆ ಅನುಕ್ರಮವಾಗಿ ಸಂಜೆ ೫ ವ ೭ ಘಂಟೆಗೆ ತಲ್ಪುವವು ಇದೇ ರೀತಿ ಕಾರವಾರದಿಂದ ಬೆಳಗಿನ ೭ ವ ೮ ಘಂಟೆಗೆ ಎರಡು ಮೋಟರುಗಳು ಹೊರಟು ಅದೇ ಮಾರ್ಗವಾಗಿ "ಮುಂಬೈಗೆ ಹೋಗುವ ಮೇಲಿಗೆ" ತಲ್ಪುವಂತೆ ಬೆಳಗಾಂವಿಗೆ ತಲ್ಪುವವು ಪ್ರತಿ ಒಂದು ಸ್ಟೇಶನದಲ್ಲಿ ಪ್ರಯಾಣಿಕರಿಗೆ ಉಳಕೊಳ್ಳಲಿಕ್ಕೆ ವಗೈರೆ ಸೋಯಿ ಇರುವದು ಹೆಚ್ಚಿನ ಮಾಹಿತಿ ಅಲ್ಲಲ್ಲಿಯ ಏಜಂಟರ ಆಫೀಸಿನಲ್ಲಿ ಯಾ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಿರಿ

☞ ಸ್ಪೆಶಲ್ ಮೋಟರುಗಳು ಯೋಗ್ಯ ದರದಿಂದ ಬಾಡಿಗೆಗೆ ಸಿಗುವವು.

Proprietors - THE BELGAUM MOTOR WORKS & TRANSPORT CO., BELGAUM.

Tel - "TRANSPORT" BELGAUM | ತಂತಿ ಪತ್ತೆ ಟ್ರಾನ್ಸಪೋರ್ಟ ಬೆಳಗಾಂವ.

ಹೊಸ ಪಂಚಾಂಗ.

ಬಗ್ಲೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿವೆ.

ಪ್ರತಿ ೧ ಕ್ಕೆ ರೂ ೦—೩—೦

ಪ್ರತಿ ೨೫ ಕ್ಕೆ ರೂ ೩ ೮—೦

ಪ್ರತಿ ೫೦ ಕ್ಕೆ ರೂ ೬—೮—೦

ಪ್ರತಿ ೧೦೦ ಕ್ಕೆ ರೂ ೧೨—೦—೦

☞ ಪಂಚಾಂಗಗಳನ್ನು ವ್ಹಿ ಪಿ ಯಿಂದ ಅಪೇಕ್ಷಿಸುವವರು ರೂ ೨-೦-೦ ಮುಂಗಡ ಕಳಿಸಬೇಕು

ಪತ್ತೆ - ಮೆನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಫ್ಯಾನ್ಸಿ ಲೀವರ್ ವಾಚ್!!

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಸುತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ! ರಿಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧವಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ— ಫೌಂಟನ ಪೇನಾ ೧, ಕೆರಾಸಿನ್ ಬಾಟಿ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸೇಪ್ಟಿ ರೇಜರ ೧, ಪೇನಾ ಕತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ ಗೋಲ್ಡ ನೆಕ್ಲೆಸ್ ಎಂಬ ರತ್ನದ ಹಾರ ೧, ಸಂತರ ವಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈವಸ್ತ್ರ ೧, ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ ಬರೇ ರೂ ೪-೮-೦

ವಿಳಾಸ.— **ಇಂಗ್ಲೀಷ ಎಂಪೋರಿಯಂ,**

ಪೋಸ್ಟ ಬಾಕ್ಸ ನಂ. ೧೦೫, ಮದರಾಸು.

ಟೇಬಲ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಕ್ಟ ಬಂಗಾರದ ನಿಬ್ಬು ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಒಳ್ಳೆ ಚನ್ನಾಗಿ ಇರುವವು ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.

ವಿಳಾಸ—ಸಿಟಿ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಬೇಕು! ಏಜಂಟರು ಬೇಕು!!

ನಮ್ಮ ಕಂಪನಿಯ ಉತ್ತಮ ಪ್ರತಿಯ ಶರ್ಟು—ಕೋಟು ಮುಂತಾದವುಗಳಿಗೆ ಯೋಗ್ಯವಾದ ಬಟ್ಟೆಗಳನ್ನು ಮಾರುವ ಚಟಪಟ ಏಜಂಟರು ಬೇಕು!! ಚಲೋ ಕಮೀಶನ್ ದೊರೆಯುತ್ತೆ. ಶರ್ತು ವಗೈರೆ ಬಗ್ಗೆ ಇಂಗ್ಲೀಷಿನಿಂದ ಪತ್ರವ್ಯವಹಾರ ಮಾಡಿರಿ.

ಪತ್ತೆ THE WEST COAST Weaving ESTABLISHMENT, Cannanore MALABAR

ಕಲ್ಪತರು ಮಿಶ್ರಣ

ಮಲೇರಿಯಾ ನಾಶಕ

ಎಂದರೆ, ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಕೇಳಬಹುದು:—

ವಿಷ ಕಲ್ಪತರುನಾಮಾ ರಸಃ ಪರಮ ದುರ್ಲಭಃ | ಅಸಾಧ್ಯಂ ಚಿರಕಾಲೋತ್ಥಂ ಜೀರ್ಣಂ

ಚ ವಿಷಮ ಜ್ವರಮ್ | ಹಂತಿ ಜ್ವರಾತಿಸಾರೌ ಚ ಗ್ರಹಣೀಂ ಪಾಂಡು ಕಾಮಲಾಮ್ ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೧-೬-೦.

ನಮ್ಮ ಪತ್ತೆ: **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸಮರ್ಥ ಫಾರ್ಮಸಿ, ಗದ್ದೆಕೇರಿ, ಮಂಗಳೂರು

ಕ ಜಿ. ಏಜಂಟ — ಕಲಬಾಗ ಮಾಧವ ರಾವ ಕ್ಯಾನಭಾಗ.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗವ ಸರ್ವ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಚಿಲ್ಲರೆ ಹಾಗು ಠೋಕ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಡ್ಬೇಕಾದದಿಲ್ಲ. ಖರೇದಿ ಬೇಕಾದ ಯಾವದೇ ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುವದೆ ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗ್ ತರಿಸಿಕೊಳ್ಳಿ ಉಚಿತವಾಗಿ ಸಿಗುವದು.

ಮುಂಬಯಿ ಕಾಯಿದೆ ಕೌನ್ಸಿಲು.

(ಪ್ರಶ್ನೋತ್ತರಗಳಿಂದ ಸಂಗ್ರಹಿಸಿದ ಮಾಹಿತಿ)

ಉತ್ತರ ಕನ್ನಡ ಜಿಲ್ಲೆಯಲ್ಲಿ ಚಹದ ತೋಟ

ಉತ್ತರ ಕನ್ನಡ ಜಿಲ್ಲೆಯೊಳಗಿನ ಘಟ್ಟದ ಮೇಲಿನ ತಾಲೂಕುಗಳಲ್ಲಿ ಚಹದ ತೋಟಗಳನ್ನು ಏರ್ಪಡಿಸಲು ಬೆಟ್ಟವನ್ನು ಬೇಡಿದ್ದು ನಿಜವಿರುತ್ತದೆ. ಗೇರಸೊಪ್ಪೆಯ ಘಟ್ಟಗಳ ನೆರೆಹೊರೆಯಲ್ಲಿಯೂ, ಶಿರ್ಸಿ-ಸಿದ್ದಾಪುರ ತಾಲೂಕುಗಳಲ್ಲಿಯೂ ನಿಷ್ಟ ಯೋಜಕವಾದ ಬೆಟ್ಟವನ್ನು ಕೊಡಬೇಕಾಗಿ ಮಿ| ವಿ. ಎಂ. ರೋಸ್ ಎಂಬೊಬ್ಬರು ತಾ. ೧೧-೭-೨೭ ನೇಗೆ ಸರಕಾರಕ್ಕೆ ಅರ್ಜಿ ಮಾಡಿದ್ದರು. ರೋಸ್‌ರವರು ಪ್ರದೇಶವನ್ನು ಕಣ್ಣಾರೆ ಕಂಡು, ಚಹದ ತೋಟಕ್ಕೆ ಈ ಪ್ರದೇಶವು ಅಯೋಗ್ಯವೆಂದು ಜೀಫ ಕನ್ಸರ್ವೇಟರರಿಗೆ ತಿಳಿಸಿದ್ದಾರೆ

***

ಬಡಗಣಿ--ವೆಂಕಟಾಪುರ ಸಂಕಗಳು

ಉತ್ತರ ಕನ್ನಡ ಜಿಲ್ಲೆಯ ಕಾಯಿದೆ ಕೌನ್ಸಿಲಿನ ಪ್ರತಿನಿಧಿಗಳು ಬಡಗಣಿ-ವೆಂಕಟಾಪುರ ಹೊಳೆಗಳಿಗೆ ಸಂಕ ಕಟ್ಟಲು ಹಲವು ಬಾರಿ ಶೀವರ್ಮಾನವನ್ನು ಸೂಚಿಸಲಿಕ್ಕಿದ್ದರು ಆ ಕುರಿತು ಇಂಜಿನಿಯರ ಖಾತೆಯವರ ಕಡೆಯಿಂದ ಈ ಸಂಕಗಳ ವಿಷಯ ಶಕ್ಯಾಶಕ್ಯತೆಯೂ ವಿಚಾರಿಸಲ್ಪಟ್ಟಿತು ಬಡಗಣಿಯಲ್ಲಿ ಎತ್ತರವಾದ ಸಂಕವನ್ನು ಕಟ್ಟುವ ಅವಶ್ಯಕತೆಯಿಲ್ಲ ಆಗಿ ನ ... ರಿಯ ವ್ಯವಸ್ಥೆಯು ಸಾಕಾಗಿದೆ. ವೆಂಕಟಾಪುರದಲ್ಲಿ ಸಂಕ ಕಟ್ಟಿದರೆ, ವಿಪರೀತ ಖರ್ಚು ಬರುತ್ತದೆ ಈ ಕಾರಣಗಳ ಮೂಲಕ ಎರಡೂ ಕಡೆಗಳಲ್ಲಿ ಸಂಕ ಕಟ್ಟುವ ಆಲೋಚನೆಯು ತ್ಯಜಿಸಲ್ಪಟ್ಟಿದೆ.

***

ಕೊಲೆಪಾತಕಗಳ ಲೆಖ್ಖ.

ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೨೪-೨೫-೨೬ ಈ ಮೂರು ವರುಷಗಳಲ್ಲಿ ೯-೮-೧೦ ಹೀಗೆ ಕೊಲೆಗಳಾದವು. ೧೯೨೭ ನೇ ಇಸ್ವಿಯಲ್ಲಿ ಅಗಸ್ಟ ಅಖೈರದವರೆಗೆ ೯ ಕೊಲೆಗಳಾದವು ಅವುಗಳಲ್ಲಿ ಹಿಂದಿನವು ಬಿಟ್ಟು, ಉಳಿದವುಗಳ ಪತ್ತೆಯಾಯಿತು. ಅದರಿಂದ ಈ ಕುರಿತು ಜನರೊಳಗೆ ಉಂಟಾದ ಆತಂಕವು ಕಲ್ಪನೆಯದೆ. ೧೯೨೪ ನೇ ಇಸ್ವಿಯ ಮುಂಚಿನ ೩ ವರುಷಗಳಲ್ಲಿ ೫-೫-೬ ಹೀಗೆ ಕೊಲೆಗಳಾಗಿದ್ದವು. ಈ ಜಿಲ್ಲೆಯಲ್ಲಿ ದ್ರವ್ಯದ ಆಶೆಯಿಂದ ಕೊಲೆಗಳಾಗುವದು ಅಪರೂಪವು ಕ್ಷುದ್ರ ಸಂಗತಿಗಳ ಮೂಲಕ ಜನರು ಪ್ರಕ್ಷುಬ್ಧರಾಗಿ ಸಾಮಾನ್ಯವಾಗಿ ಈ ಜಿಲ್ಲೆಯಲ್ಲಿ ಕೊಲೆಗಳಾಗುತ್ತವೆ. ಅದರಿಂದ ಇತ್ತ ೩ ವರುಷಗಳಲ್ಲಿ ಕೊಲೆಗಳ ಸಂಖ್ಯೆಯು ಹೆಚ್ಚಾಯಿತು. ಇದು ಒಂದು ಅಪವಾದಾತ್ಮಕ ಸಂಗತಿಯು ಹಾಗು ಅದು ಕ್ಷಣಿಕವಿರುತ್ತದೆ ಅದರಿಂದ ಇದನ್ನು ಪ್ರತಿಬಂಧಿಸಲು ಸರಕಾರಕ್ಕೆ ಕಾರಣವಿಲ್ಲ ದೈವಜ್ಞ ಜಾತಿಯ ಶ್ರೀ ಜ್ಞಾನಾನಂದ ಸ್ವಾಮಿ ಎಂಬ ಸನ್ಯಾಸಿಯ ಶವವು ೧೯೨೭ ನೇ ಇಸ್ವಿಯ ಫೆಬ್ರುವರಿ ತಿಂಗಳಿನಲ್ಲಿ ಶರಾವತಿ ಹೊಳೆಯಲ್ಲಿ ತೇಲುತ್ತಿತ್ತು. ಆದು ಕೊಲೆಯ ೧. ಸನ್ಯಾಸಿಯು ಪ್ರಾಯವು ೬೫ ವರುಷ, ಮೈಕಟ್ಟು ಪ್ರಬಲವಿತ್ತು. ಕೊಲೆಪಾತಕಿಗಳೆಂದು ತಿಳಿದವರ ಮೇಲೆ ಖಟ್ಲೆಯಾಯಿತು ಆದರೆ, ಸೆಶನ್ಸ ಕೋರ್ಟಿನಲ್ಲಿ ಅವರು ಬಿಡುಗಡೆ ಹೊಂದಿದರು. ಆರೋಪಿ ಕಡೆ ವಕೀಲರ ಬಾಕುಯರದಿಂದಲೂ ಇವರು ಬಿಡುಗಡೆ ಹೊಂದಿರಬೇಕು. ಅದರಿಂದ ಕೊಲೆಪಾತಕಿಗಳನ್ನು ಪುನಃ ಪತ್ತೆ ಹಚ್ಚುವ ಕಾರಣ ಉಳಿಯಲಿಲ್ಲ. ಈ ಖಟ್ಲೆಗೆ ರೂಪಾಯಿ ೧೨೩೫-೧೪-೫ ಖರ್ಚು ತಗಲಿತು

***

ಅಡಿಕೆ ತೋಟಗಳಿಗೆ ತಾಳಿ ಎಲೆ.

೧೯೨೭ ನೇ ಇಸ್ವಿಯ ಜೂನ ತಿಂಗಳಿನಲ್ಲಿ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಕನ್ಸರ್ವೇಟರರು ಹುಕ್ಕುಮುತ್ತಿರುವ ತಾಳಿ ಬೆಟ್ಟದೊಳಗಿಂದ ತಾಳಿ ಎಲೆಗಳನ್ನು ತಮ್ಮ ಉಪಯೋಗಕ್ಕಾಗಿ ಉಚಿತವಾಗಿ ಒಯ್ಯಲು ಬಿಟ್ಟರು. ಈ ತಾಳಿ ಎಲೆಗಳು ಅಡಿಕೆ ಕೊನೆಗಳಿಗೆ ಪೊಟ್ಟೆ ಕಟ್ಟಲು ಬಹಳ ಉಪಯೋಗವಾಗುತ್ತವೆ. ಜಂಗಲ ದೂರುಗಳ ವಿಷಯ ಚೌಕಶಿ ಮಾಡಲು ಸರಕಾರವು ನೇಮಿಸಿದ ಮಂಡಳದ ಲೋಕಪಕ್ಷದ ಸಭಾಸದರು ಈ ಶಿಫಾರಸನ್ನು ಮಾಡಿದ್ದರು. ಇದನ್ನು ಸರಕಾರವು ಮನ್ನಿಸಲಿಲ್ಲ. ಕನ್ಸರ್ವೇಟರರು ಮಾಡಿದ ಹುಕುಮು ಹಂಗಾಮಿಯಾಗಿರುತ್ತದೆ.

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ, ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು ಹಿಮ್ಮೆ ಸಿಕ್ಕಿದ ಕೂದಲಿ ತಲೆಯ ಹೊಟ್ಟು ಹೋಗುತ್ತದೆ, ... ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ... ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ... ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

———:0:———

ತ್ರಿ ಔನ್ಸಿಗೆ	ರೂ.	೨—೦—೦
೧ ಔನ್ಸಿಗೆ	,,	೧—೪—೦
೧ ಡ್ರ್ಯಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ತೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲು ಬಹಳ ಮಟ್ಟವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.ದಿಲ್ಲ

THE ANGLO INDIAN DRUG & CHEMICAL CO.- LTD.

POST BOX, 2082 BOMBAY.

ಸರಕಾರಿ ಠರಾವು ಪ್ರಕಟವಾಗುವದಕ್ಕಿಂತ ಮುಂಚೆಯೇ ಕನ್ಸರ್ವೇಟರರು ಈ ಹುಕುಮು ಮಾಡಿದ್ದರು. ಜನರ ಅಸಂತೋಷವನ್ನು ನಿಲ್ಲಿಸುವದಕ್ಕಾಗಿ ಈ ಹುಕುಮು ಹೊರಡಿಸಲಾಗಿದ್ದಿಲ್ಲ.

***

ಹೊನ್ನಾವರದ ಡಾಕ್ಟರರು

ಹೊನ್ನಾವರದ ಡಾಕ್ಟರರ ವರ್ತನದ ಕುರಿತು ತಾ. ೧೪-೨-೧೯೨೭ನೇ ದರ 'ಕಾನಡಾವೃತ್ತ'ದಲ್ಲಿ ಪ್ರಕಟವಾದ ಹಕೀಕತು ಸರಕಾರದ ಲಕ್ಷಕ್ಕೆ ಬಂದಿದೆ. ಸುಬ್ರಾಯ ನಾಯ್ಕ ಎಂಬವನಿಗೆ ಹೊನ್ನಾವರ ಆಸ್ಪತ್ರೆಗೆ ಔಷಧೋಪಚಾರ ಪಡೆಯುವದಕ್ಕಾಗಿ ಕರೆಯುವರು ಕಳಿಸಿದ್ದು ನಿಜವಿರುತ್ತದೆ. ಆತನಿಗೆ ಡಾಕ್ಟರರು ಜೈದು (?), ಹೊರತಳ್ಳಿದ್ದು ಸುಳ್ಳು. ಆತನಿಗೆ ಆಸ್ಪತ್ರೆಯಲ್ಲಿ ಪ್ರವೇಶಿಸಿಕೊಳ್ಳಲಾಯಿತು. ೧ ದಿನ ಆತನು ಉಳಿದನು. ಮಾರನೇ ದಿನ ಬೆಳಿಗ್ಗೆ ಡಾಕ್ಟರರು ಇಲ್ಲದಾಗ, ಆತನು ಆತ್ಮಸಂತೋಷದಿಂದ ಆಸ್ಪತ್ರೆಯನ್ನು ಬಿಟ್ಟು ನಡೆದನು. ರೋಗಿಯು ಧರ್ಮಶಾಲೆಗೆ ಹೋಗಬಯಸಿದನು. ಸಿಪಾಯಿಗಳು ಆತನಿಗೆ ಅಲ್ಲಿ ಒಯ್ದರು. ಆಸ್ಪತ್ರೆಯಲ್ಲಿರಲು ಸುಬ್ರಾಯ ನಾಯ್ಕರು ಎಷ್ಟು ಒಪ್ಪಲಿಲ್ಲ. ಡಾಕ್ಟರರು ಬಹು ಪ್ರಯತ್ನಪಟ್ಟು ಅವರಿಗೆ ಒಂದು ದಿನ ವರೆಗೆ ಇಟ್ಟುಕೊಂಡರು. ಹೊನ್ನಾವರದೊಳಗಿನ ೮ ಜನರು ಸಹಿ ಮಾಡಿ, ಆಸ್ಪತ್ರೆಯ ಸಿಪಾಯಿಗಳು ಅವರಿಗೆ ಧರ್ಮಶಾಲೆಗೆ ತಂದು ಮುಟ್ಟಿಸಿದರಾಗಿ ಹೇಳಿ, ಆತನ ಬಗ್ಗೆ ತಕ್ಕ ಜಾಗ್ರತೆ ಕೊಳ್ಳಲು ಬೇಡಿಕೊಂಡಿದ್ದರು. ಡಾಕ್ಟರರ ವಿಷಯ ಅವರು ಆ ಅರ್ಜಿಯಲ್ಲಿ ಒದಗಿಸಿದ್ದಿಲ್ಲ. ಪೋಲೀಸರು ಧರ್ಮಶಾಲೆಗೆ ಬರುವ ತನಕ ಆತನು ಸತ್ತು ಬಿದ್ದಿದ್ದನು. ಬಸ್ರೂರ ಬಂಧುಗಳು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟ ಇಮಾರತು ರೋಗಿಗಳಿಗೆ ಇಟ್ಟುಕೊಂಡು ಉಪಚಾರ ನಡಿಸಲು ಯೋಗ್ಯವಲ್ಲ. ಆದರಿಂದ ಹಳೇ ಆಸ್ಪತ್ರೆಯಲ್ಲಿಯೇ ರೋಗಿಗಳನ್ನಿಡುತ್ತಾರೆ. ಮಾಮಲೇದಾರರು ಮಾಡಿದ ಚೌಕಶಿಯಲ್ಲಿ ಡಾಕ್ಟರರ ತಪ್ಪೇನಿಲ್ಲವೆಂದು ತೋರಿತು.

***

ತೆಂಗಿನ ತೋಟ.

ಹೊನ್ನಾವರ ತಾಲೂಕಿನ ಹೆನ್ನೂರ ಗ್ರಾಮದಲ್ಲಿ ತೆಂಗಿನ ತೋಟವೊಂದು ಮಾಡಲ್ಪಟ್ಟಿದೆ. ನಾರಾಯಣ ವೆಂಕಟ್ರಮಣ ಹೆಗಡೆ ಮುಂತಾದವರ ಹೊಲಮನೆಯ ನೆರೆಯಲ್ಲಿ ಈ ತೋಟವಿದೆ. ತೋಟದ ಕ್ಷೇತ್ರವು ೧೩.೦ ಎಕ್ರೆ. ಇದು ೧೯೨೬ ನೇ ಇಸ್ವಿಯಲ್ಲಿ ಏರ್ಪಡಿಸಲಾಯಿತು. ಹೊಲಕ್ಕೂ, ಈ ತೋಟಕ್ಕೂ ೬೦ ರಿಂದ ೨೦೦ ಗಜಗಳ ತನಕ ಅಂತರವಿದೆ. ಜನವಸ್ತಿಯಿಂದ ತೋಟವು ಸುಮಾರು ೧೦೦ ಗಜ ದೂರದಲ್ಲಿದೆ. ತಾ. ೧೯-೭-೧೯೨೭ನೇಗೆ ಹೊರಡಿಸಿದ ಮುಲ್ಕಿ ಠರಾವು ನಂಬರು ೬೩೪೪ ೨೪ನೇದರಂತೆ ೧॥ ಫರ್ಲಾಂಗು ಅಂತರವಿರಬೇಕೆಂದು ನೇಮವಿದೆ. ಆದರೆ, ಆ ನೇಮವು ಆ ಠರಾವಿನ ತಾರೀಖಿನ ಮುಂಚೆ ಏರ್ಪಾಟಾದ ತೋಟಗಳಿಗೆ ಲಾಗು ಇಲ್ಲ.

***

ಮಣಕಿಯ ಸೆರೆ ಅಂಗಡಿ

ಕುಮಟಾ ತಾಲೂಕಿನ ಅಬಕಾರಿ ಶಿಫಾರಸು ಮಂಡಳವು ಕುಮಟೆಯಿಂದ ೨ ಮೈಲು ದೂರದ ಮಣಕಿಯಲ್ಲಿರುವ ಸಾರಾಯಿ ಅಂಗಡಿಯನ್ನು ಮುಚ್ಚಬೇಕಾಗಿ ೧೯೨೬ನೇ ಇಸ್ವಿಯ ಸಪ್ಟಂಬರ ತಿಂಗಳಿನಲ್ಲಿ ಶಿಫಾರಸು ಮಾಡಿದ್ದರು. ೧೯೨೭ನೇ ಇಸ್ವಿಯ ಸಪ್ಟಂಬರ ತಿಂಗಳಿನಲ್ಲಿ ಇದೇ ಶಿಫಾರಸನ್ನು ಆ ಮಂಡಳದವರು ಪುನಃ ಮಾಡಿದರು. ಈಗ ತಾ. ೧-೪-೨೮ನೇ ಯಿಂದ ಈ ಅಂಗಡಿಯು ಮುಚ್ಚಲ್ಪಡುವದು. ಈ ವಿಷಯ ಊರಲ್ಲಿ ಅಸಂತೋಷವಿದ್ದದ್ದು ಸರಕಾರಕ್ಕೆ ಗೊತ್ತಿದೆ. ಭಟಕಳ-ಮುಂಡಗೋಡ ಪೇಟೆಗಳ ಹೊರತು, ಬಾಕಿ ತಾಲೂಕು ಪೇಟೆಗಳಲ್ಲೆಲ್ಲ ಪ್ರತ್ಯೇಕ ಅಬಕಾರಿ ಮಂಡಳಗಳಿವೆ. ಭಟಕಳ-ಮುಂಡಗೋಡಗಳಲ್ಲಿ ಪ್ರತ್ಯೇಕ ತಾಲೂಕ ಲೋಕಲ್ ಬೋರ್ಡುಗಳಿಲ್ಲದ ಮೂಲಕ ಅಲ್ಲಿ ಅಬಕಾರಿ ಮಂಡಳಗಳ ರಚನೆಯಾಗಲಿಲ್ಲ. ೧೯೨೦ನೇ ಇಸ್ವಿಯಲ್ಲಿ ಇವುಗಳ ಘಟನೆಯಾಯಿತು. ಈ ೭ ವರ್ಷಗಳಲ್ಲಿ ಈ ಮಂಡಳಗಳು ಶಿಫಾರಸು ಮಾಡಿದ್ದರೊಳಗೆ ಹೊನ್ನಾವರದೊಳಗಿನ ೩ ಅಡ್ಡರಗಳು ಪ್ರಯೋಗಾರ್ಥವಾಗಿ ತಾ. ೧-೮-೨೭ ನೇಗೆ ಮುಚ್ಚಲ್ಪಟ್ಟವು, ಮುಂಡಗೋಡ ಪೇಟೆ ತಾಲೂಕ ಗ್ರಾಮದಲ್ಲಿಯ ಶೇಂದಿ ಅಂಗಡಿಯು ತಾ. ೧-೪-೨೮ ನೇಯಿಂದ ಮುಚ್ಚಲ್ಪಡುವದು.

***

ಗೋಚರಾವು

೧೯೨೦ನೇ ಇಸ್ವಿಯ ಸಪ್ಟಂಬರ ತಿಂಗಳಿನಲ್ಲಿ ಹೊರಡಿಸಿದ ಸರಕಾರಿ ಮುದ್ರಣ ಲೇಖದಲ್ಲಿ ಕೊಟ್ಟ ಅಭಿವಚನದಂತೆ, ಹಳಿಯಾಳ, ಸಾಂಬ್ರಾಣಿ, ಕುಳಗಿ, ಕಿರವತ್ತಿ, ಮುಂಡಗೋಡ, ಕಾತೂರ, ಭರ್ತನಹಳ್ಳಿ ಈ ರೇಂಜುಗಳೊಳಗಿಂದ ಕಳೆದ ೩ ವರ್ಷಗಳಲ್ಲಿ ೧೦॥ ಸಾವಿರ ಎಕ್ರೆ ಪ್ರದೇಶವು ಗೋಚರಾವಿನ ಬಗ್ಗೆ ಜಂಗಲು ಕಡಿಸಲ್ಪಟ್ಟಿತ್ತು. ಅಂಕೋಲಾ-ಹೊನ್ನಾವರ-ಇಡಗುಂಜಿ-ಭಟಕಳ ಈ ರೇಂಜುಗಳಲ್ಲಿ ಈ ಮೂರು ವರುಷಗಳಲ್ಲಿ ೬೫೦ ಎಕ್ರೆ ಜಂಗಲು ಕುಂಬ್ರಿ ಪದ್ಧತಿಯ ಮೇಲೆ ಕಡಿದುಕೊಳ್ಳಲು ಅಪ್ಪಣೆ ಕೊಡಲ್ಪಟ್ಟಿತು. ಅವುಗಳಲ್ಲಿ ೧೪೨ ಎಕ್ರೆ ಕ್ಷೇತ್ರ ಮಾತ್ರ ಕಡಿಯಲ್ಪಟ್ಟಿತು. ಧುಂಡಿವಾಳ—ಸಾಲಕೋಡ-ಕ್ಯಾತಿಗೆ ಈ ಮೂರು ಗ್ರಾಮದವರು ಏನೂ ಕಡಿಯಲಿಲ್ಲ. ಭೇಳಿ, ಕುದ್ರಿಗೆ, ಮಾವಳ್ಳಿ ಗ್ರಾಮಗಳಲ್ಲಿ ಇನ್ನೂ ಸುಮಾರು ೧೦೦ ಎಕ್ರೆ ಬೆಟ್ಟ ಕಡಿಯುವದಿದೆ. ಇದರ ಹೊರತು, ಹೊಲಗಳ ಸುತ್ತ ಮುತ್ತ ಸ್ಟ್ರಿಪ್ಪುಗಳು ಕಡಿಯಲ್ಪಟ್ಟಿವೆ.

***

ಕರ್ನಾಟಕ ಏಕೀಕರಣ ಸಭೆ.

ಧಾರವಾಡದಲ್ಲಿ ಕರ್ನಾಟಕ ಏಕೀಕರಣ ಸಭೆ ಯೆಂಬದೊಂದು ಸಂಸ್ಥೆಯಿರುವದಾಗಿ ಸರಕಾರದ ತಿಳುವಳಿಕೆಗೆ ಬಂದಿದೆ. ಈ ಸಭೆಯವರು ಮರಾಠಿ ಭಾಷೆಯನ್ನಾಡುವ ಕುಲಾಬಾ-ರತ್ನಾಗಿರಿ ಜಿಲ್ಲೆಗಳನ್ನು ದಕ್ಷಿಣ ಭಾಗದೊಳಗಿಂದ ಮಧ್ಯ ಭಾಗಕ್ಕೆ ಸೇರಿಸಬೇಕಾಗಿಯೂ, ಅದರ ಬದಲಿಗೆ ಸೊಲ್ಲಾಪುರ-ಸಾತಾರಾ ಜಿಲ್ಲೆಗಳಲ್ಲಿಯ ಕನ್ನಡ ಭಾಷೆಯನ್ನಾಡುವ ಪ್ರದೇಶಗಳನ್ನು ದಕ್ಷಿಣ ಭಾಗಕ್ಕೆ ಸೇರಿಸಬೇಕಾಗಿಯೂ ಬಿನ್ನೈಸಿಕೊಂಡಿದ್ದರು. ಹೀಗೆ ಸ್ಥಳ ಸೇರಾಟವಾದ ಬಳಿಕ, ಈ ಭಾಗಕ್ಕೆ ಕರ್ನಾಟಕ ಭಾಗವೆಂದು ನಾಮಕರಣವಾಗಬೇಕಾಗಿಯೂ ಅವರು ಸೂಚಿಸಿದ್ದರು. ಆ ಬಿನ್ನಹದಂತೆ ಸರಕಾರವು ಏನೊಂದೂ ಉಪಾಯಯೋಜನೆ ಮಾಡಲಿಲ್ಲ; ಉಪಾಯಯೋಜನೆ ಮಾಡುವ ವಿಚಾರವೂ ಇಲ್ಲ. ಸೊಲ್ಲಾಪುರ ತಾಲೂಕಿನ ೮೦ ಗ್ರಾಮಗಳಲ್ಲಿ ಕನ್ನಡ ಭಾಷೆಯನ್ನು ಆಡುವವರಿದ್ದಾರೆ. ಜನಸಂಖ್ಯೆಯು ೬೭೨೯೭. ಸೊಲ್ಲಾಪುರ ಶಹರದಲ್ಲಿ ೩ರಲ್ಲಿ ೧ ಪಾಲು ಜನರು ಕನ್ನಡ ಭಾಷೆಯನ್ನಾಡುತ್ತಾರೆ. ಸಾತಾರಾ ಜಿಲ್ಹೆಯೊಳಗಿನ ಖಟಾವ ತಾಲೂಕಿನ ೩೭ ಗ್ರಾಮಗಳಲ್ಲಿಯೂ, ಸಾತಾರಾ ತಾಲೂಕಿನ ೭ ಗ್ರಾಮಗಳಲ್ಲಿಯೂ, ಶಿರಾಳಾ ಪೇಟೆಯ ೧ ಗ್ರಾಮದಲ್ಲಿಯೂ, ತಾಸಗಾಂವ ತಾಲೂಕಿನ ೨ ಚದ್ರ ಮೈಲು ಪ್ರದೇಶದಲ್ಲಿಯೂ ಕನ್ನಡ ಭಾಷೆಯನ್ನಾಡುವವರ ಸಂಖ್ಯೆಯು ೧೯೪೪೪ ಇರುತ್ತದೆ. ವಾಯಿ ತಾಲೂಕಿನಲ್ಲಿ ಸುಮಾರು ೧೦೦ ಮಂದಿ ಕನ್ನಡಿಗರು ಹರಡಿಕೊಂಡಿದ್ದಾರೆ.

***

ಮೋಟಾರ ಅಪಘಾತಗಳು.

ಕನ್ನಡ ಜಿಲ್ಹೆಯಲ್ಲಿ ೧೯೨೪-೨೫-೨೬ ಈ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ೫-೬-೧೯ ಅಪಘಾತಗಳಾದವು. ಅವುಗಳಲ್ಲಿ ಮೋಟಾರನ್ನು ಅಜಾಗ್ರತೆಯಿಂದಲೂ, ಭರದಿಂದಲೂ ಬಿಟ್ಟು, ೧೯೨೫ನೇ ಇಸ್ವಿಯಲ್ಲಿ ೨ ಅಪಘಾತಗಳು ಸಂಭವಿಸಿದವು. ೧೯೨೬ನೇ ಇಸ್ವಿಯಲ್ಲಿ ೧೨ ಅಪಘಾತಗಳು ಸಂಭವಿಸಿದವು. ಅವುಗಳಲ್ಲಿ ಒಬ್ಬನು ಕೂಡಲೇ ಮೃತಪಟ್ಟನು. ೧೯೨೫-೨೬ನೇ ಇಸ್ವಿಗಳಲ್ಲಿ ಅಂತು ೧೪ ಖಟ್ಲೆಗಳಾದವು. ೧೨ ಖಟ್ಲೆಗಳಲ್ಲಿ ಶಿಕ್ಷೆಯಾಯಿತು; ಇಬ್ಬರು ಬಿಡುಗಡೆ ಹೊಂದಿದರು.

***

ಕಾಡಾನೆಗಳ ಬೇಟೆ.

ಕಾಡಾನೆಗಳ ಬೇಟೆಯಾಡಲು ಶಿರ್ಶಿಯಲ್ಲಿ ಸರಕಾರವು ೧೯೨೫ನೇ ಇಸ್ವಿಯಲ್ಲಿ ಒಬ್ಬ ಬೇಟೆಗಾರನನ್ನು ನೇಮಿಸಿದೆ. ಅವನಿಗೆ ಕಾಯಂ ಪಗ್ಗಾರು ೧೦ ರೂಪಾಯಿ; ಬೇಟೆಯಾಡಲು ಹೋದ ದಿನ ೬ ಆಣೆಯಂತೆ ದಿನ ಗೂಲಿ ಸಿಗುತ್ತದೆ; ಬೇಟೆ ಸಿಕ್ಕಿದರೆ, ರೀತಿಯಂತೆ ಇನಾಮು ಕೊಡಲ್ಪಡುತ್ತದೆ. ಈ ತನಕ ಆತನು ಒಂದೂ ಆನೆಯನ್ನೂ ಕೊಲ್ಲಲಿಲ್ಲ. ೧೯೨೭ನೇ ಇಸ್ವಿಯ ಅಗಸ್ಟ-ಸಪ್ಟಂಬರ ತಿಂಗಳಿನಲ್ಲಿ ಆತನು ಒಂದು ಕಾಡಾನೆಯನ್ನು ಬೆನ್ನಟ್ಟಿಸಿಕೊಂಡು ಹೋದನು. ಆದರೆ, ಆತನಿಗೆ ಕೊಟ್ಟ ಕಾಡತೂಸುಗಳು ಸಿಪ್ಪ ಹೊಡಕವಿದ್ದದರಿಂದ ಆನೆಯು ಪಾರಾಯಿತು. ಇನ್ನು ಮುಂದೆ ಚಲೋ ಕಾಡತೂಸುಗಳನ್ನು ಪೂರೈಸುವ ಏರ್ಪಾಟು ಮಾಡಲಾಗಿದೆ.

***

ತಗಾವಿ ಸಾಲಗಳು.

೧೯೨೪ನೇ ಇಸ್ವಿಯಲ್ಲಿ ಕರಾವಳಿ ಹೊಳೆಗೆ ನೆರೆ ಕಟ್ಟಿ ನಷ್ಟ ಹೊಂದಿದವರಿಗೆ ಅಂತು ರೂ. ೩೮೦೪೪ ಗಳ ತಗಾವಿ ಸಾಲ ಕೊಡಲಾಯಿತು. ಅವುಗಳಲ್ಲಿ ೧೪೭೮೫ ರೂಪಾಯಿಗಳು ನಿಬ್ಬದ್ದಿಯಿಂದ ಇರುತ್ತವೆ. ನೆರೆಯಿಂದ ಅರೂಪವಾದ ಹೊಲಗಳಿಗೆ ರೂಪಿಕ ಮಾಡಲು ರೂ. ೧೧೨೬೦, ನೆರೆಯಿಂದ ನಷ್ಟಹೊಂದಿದ ಅಥವಾ ಜೀರ್ಣವಾದ ಹಳೇ ಮನೆಗಳನ್ನು ಉದ್ಧರಿಸಲು ರೂ. ೩೪೨೫, ದನ ಹಾಗು ಎತ್ತುಗಳನ್ನು ಕೊಂಡುಕೊಳ್ಳಲು ರೂ. ೩೩೨೫, ಗ್ರಾಮದವರು ಹಾಕಿಕೊಂಡ ಕಟ್ಟು ಒಡೆದು ಹೋಗಿ ಉಂಟಾದ ನಷ್ಟವನ್ನು ತುಂಬಿಕೊಳ್ಳುವದಕ್ಕಾಗಿ ರೂ. ೧೦೦೦, ಹೀಗೆ ಅಂತು ರೂ. ೩೮೦೪೪

***

ಹುಚ್ಚು ನರಿಗಳ ಕಾಟ.

ಹೊನ್ನಾವರ ತಾಲೂಕಿನಲ್ಲಿ ೧೯೩೭ನೇ ಇಸ್ವಿಯಲ್ಲಿ ೧೩ ಮಂದಿಗಳಿಗೆ ಹುಚ್ಚು ನರಿ ಕಚ್ಚಿತು. ಒಬ್ಬನು ತೀರಿಕೊಂಡನು. ಹೀಗೆ ಕಚ್ಚಿದಾಗ ಗ್ರಾಮಾಧಿಕಾರಿಗಳು ತಾಲೂಕಿನ ಮಾಮಲೇದಾರರಿಗೆ ತಿಳಿಸಬೇಕಾಗಿದೆ. ಮಾಮಲೇದಾರರು ಅವರನ್ನು ಕಾರವಾರದ ಸಿವ್ಹಿಲ್ ಆಸ್ಪತ್ರೆಗೆ ಕಳಿಸುತ್ತಾರೆ; ತೀರ ಬಡವರಿಗೆ ಸರಕಾರಿ ಖರ್ಚಿನಿಂದ ಕಳಿಸುವ ಅನುಕೂಲತೆಯೂ ಉಂಟು. ಕಳೆದ ವರ್ಷದಲ್ಲಿ ಮೂವರಿಗೆ ಕಾರವಾರ ಆಸ್ಪತ್ರೆಯಲ್ಲಿ ಉಪಚಾರವಾಯಿತು. ಎಲ್ಲರೂ ಗುಣ ಹೊಂದಿದರು. ಇವರಲ್ಲಿಬ್ಬರಿಗೆ ಸರಕಾರವು ಖರ್ಚ ಕೊಟ್ಟು ಉಪಚಾರ ಮಾಡಿಸಿತು. ಅವರ ಬಗ್ಗೆ ಸರಕಾರಕ್ಕೆ ೧೪ ರೂಪಾಯಿ ಖರ್ಚು ತಗಲಿತು. ಕಚ್ಚಿಕೊಂಡವರಲ್ಲಿ ೧೧ ಮಂದಿಗಳು ಬಡವರಿದ್ದರು, ಇಬ್ಬರು ಮಾತ್ರ ಸರಕಾರಿ ಖರ್ಚಿನಿಂದ ಕಾರವಾರ ಆಸ್ಪತ್ರೆಯಲ್ಲಿ ಉಳಕೊಳ್ಳಲು ಒಪ್ಪಿಕೊಂಡರು; ೯ ಮಂದಿಗಳು ಮಾತ್ರ ಎಷ್ಟು ಕಷ್ಟ ಒಪ್ಪಲಿಲ್ಲ. ಮಾಮಲೇದಾರರು ಸ್ವತಃ ಗ್ರಾಮಕ್ಕೆ ಹೋಗಿ ಬೋಧಿಸಿದರೂ ಒಪ್ಪಲಿಲ್ಲ.

***

ಯುರೋಪಿಯನ್‌ರ ವೈರಾಗ್ಯ.

೧೯೧೯ನೇ ಇಸ್ವಿಯಲ್ಲಿ ಮೊಂಟೆಗ್ಯೂ ಸ್ವರಾಜ್ಯ ಘಟನೆಯಾದಂದಿನಿಂದ ಸರಕಾರಿ ಕೆಲಸದಿಂದ ನಿವೃತ್ತರಾದ ಯುರೋಪಿಯನ್ ಅಧಿಕಾರಿಗಳ ಸಂಖ್ಯೆಯಾಗಲಿ, ನಿವೃತ್ತಿಯಾಗುವ ಕಾರಣವಾಗಲಿ ಹೇಳಲು ಸರಕಾರವು ಒಪ್ಪಲಿಲ್ಲ.

***

ಆಯುರ್ವೇದಕ್ಕೆ ಸರಕಾರಿ ಆಶ್ರಯ.

ಸರಕಾರದಿಂದ ದ್ರವ್ಯಸಹಾಯ ಸಿಗುವ ಒಂದು ಆಯುರ್ವೇದ ಔಷಧಾಲಯವಿದೆ. ಅದು ಸಾತಾರಾ ಜಿಲ್ಹೆಯ ವಾಡೂಜ ಗ್ರಾಮದಲ್ಲಿದೆ. ಲೋಕಲ್ ಬೋರ್ಡಿನದು. ಇದಕ್ಕೆ ಕಳೆದ ೩ ವರ್ಷಗಳಲ್ಲಿ ರೂ ೫೧೧ ರಂತೆ ದ್ರವ್ಯಸಹಾಯ ಮಾಡಲಾಯಿತು. ಹಣದ ಅಡಚಣಿಯ ಮೂಲಕ ಆಯುರ್ವೇದ ಕಾಲೇಜನ್ನು ಸ್ಥಾಪಿಸಲು ಸರಕಾರಕ್ಕೆ ಪ್ರತಿಬಂಧವಾಗಿದೆ. ಮುದ್ರಣದೊಳಗೆ ನಡೆದ ಆಯುರ್ವೇದ ಶಿಕ್ಷಣವನ್ನೂ ಈ ಸರಕಾರವು ಪರ್ಯಾಲೋಚಿಸುತ್ತದೆ. ಮುಂಬಯಿ ಸರಕಾರದ ವೈದ್ಯ ಖಾತೆಯ ಅಧಿಪತಿಗಳಾದ ಸರ್ಜನ್ ಜನರಲ್‌ರಾದ ಮೇಜರ ಜನರಲ್ ಹೂಟನ್‌ರವರು ೧೯೩೨—೩೩ ನೇ ಇಸ್ವಿಯ ತ್ರೈವಾರ್ಷಿಕ ರಿಪೋರ್ಟಿನಲ್ಲಿ ಆಯುರ್ವೇದಾದಿ ದೇಶಿ ಔಷಧ ಪದ್ಧತಿಗಳು ಪರೋಕ್ಷ ಸಿದ್ಧಾಂತಗಳ ಮೇಲೆ ಅವಲಂಬಿಸಿರುವವಾಗಿಯೂ, ಶಾಸ್ತ್ರ ತತ್ವಗಳ ಮೇಲೆ ಅವಲಂಬಿಸಿಲ್ಲವಾಗಿಯೂ ಬರೆದ ಅಭಿಪ್ರಾಯವು ನಿಜವಿರುತ್ತದೆ. ಸರಕಾರವು ಈ ಅಭಿಪ್ರಾಯವನ್ನು ವಿರೋಧಿಸಲಿಲ್ಲ. ಹಾಗಂದರೆ, ಪಾಶ್ಚಾತ್ಯ ವೈದ್ಯ ಪದ್ಧತಿಯಾದ ಎಲೋಪಥಿ ವೈದ್ಯ ಪದ್ಧತಿಯೊಡನೆ ಆಯುರ್ವೇದಾದಿ ಇತರ ದೇಶಿ ಪದ್ಧತಿಯನ್ನು ಸರಕಾರವು ತುಲನೆ ಮಾಡಿ ವಿಚಾರ ಮಾಡಲಿಲ್ಲ. ಅಹಮದಾಬಾದದ ನಾಗರಿಕರು ಬಾಹಿರ ಸಭೆ ಸೇರಿ ನಿಷೇಧ ವ್ಯಕ್ತ ಮಾಡಿದ್ದಾರೆ. ಹಣದ ಅನುಕೂಲತೆಯಾದ ಬಳಿಕ, ಆಯುರ್ವೇದಾದಿ ದೇಶಿ ವೈದ್ಯಪದ್ಧತಿಗಳನ್ನು ಉದ್ಧರಿಸಲು ಸರಕಾರದ ಕಲ್ಪನೆ ಇದೆ.

ಈ ವನಸ್ಪತಿಗಳ ಗುಣಗಳು ಪರೇಲ ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸಲ್ಪಡುತ್ತವೆ. ಆಸ್ಪತ್ರೆಗಳಲ್ಲಿ ಈ ವನಸ್ಪತಿಗಳ ಪ್ರಯೋಗ ಮಾಡುವ ವಿಚಾರ ನಡೆದಿದೆ. ಈ ದ್ರವ್ಯಗಳನ್ನು ಈ ದೇಶದಲ್ಲಿಯೇ ತಯಾರಿಸುವ ಆಲೋಚನೆಯೂ ನಡೆದಿದೆ. ಈಗ ಔಷಧಗಳು ಇಲ್ಲಿಯೇ ತಯಾರಾಗಹತ್ತಿದರೆ, ಪರದೇಶಗಳಿಂದ ಇಂಥ ದ್ರವ್ಯಗಳನ್ನು ತರಿಸುವದು ತಪ್ಪಲಿಕ್ಕಿಲ್ಲ. ಆಯುರ್ವೇದ ಪದ್ಧತಿಯನ್ನು ಕಲಿಯಲಿಚ್ಛಿಸುವವರಿಗೆ ಶಿಷ್ಯವೃತ್ತಿಗಳನ್ನು ಕೊಡುವ ಸಂಕಲ್ಪವಿದೆ. ಸಂಯುಕ್ತ ಪ್ರಾಂತದ ಸರಕಾರದೊಡನೆ ಈ ಕುರಿತು ಪತ್ರವ್ಯವಹಾರವೂ ನಡೆದಿದೆ. ಶಿಷ್ಯವೃತ್ತಿ ಕೊಟ್ಟು ವಿದ್ಯಾರ್ಥಿಗಳನ್ನು ಅಲ್ಲಿ ಕಳುಹಿದಲ್ಲಿ ಅವರಿಗೆ ವಿದ್ಯಾರ್ಜನೆಯು ವ್ಯವಸ್ಥೆಯಾಗುವದೇನೆಂಬ ಬಗ್ಗೆ ವಿಚಾರಿಸಲಾಗಿದೆ.

***

ಮೇಜರ ಫೊಗ್ಸನ್‌ರವರ ಜಲಶೋಧ

ಮುಂಬಯಿ ಸರಕಾರವು ನೇಮಿಸಿದ ಜಲಶೋಧಕರಾದ ಮೇಜರ ಫೊಗ್ಸನ್‌ರವರ ಹೇಳಿಕೆಯಂತೆ, ವಿಜಾಪುರ ತಾಲೂಕಿನ ಕಡೋಲ ಗ್ರಾಮದಲ್ಲಿ ದಾದತ್ತಾತ್ರೇಯ ದೇಶಪಾಂಡೇಯವರು ಒಂದು ಬಾವಿ ಕಡಿಸಿದ್ದರು. ಅದಕ್ಕೆ ರೂಪಾಯಿ ೩೩೫—೧೪—೦ ಖರ್ಚು ಬಂತು; ನೀರು ಮಾತ್ರ ಸಿಗಲಿಲ್ಲ. ಸರಕಾರವು ೮೦೦ ರೂಪಾಯಿಗಳನ್ನು ನಷ್ಟಭರಪಾಯಿಯ ಬಗ್ಗೆ ಕೊಟ್ಟಿತು. ನೀರು ಸಿಗದಿದ್ದರೆ, ಖರ್ಚಾದ ಸಂಪೂರ್ಣ ಹಣ ತೆರುವ ಹೊಣೆಯನ್ನು ಸರಕಾರವು ಹೊತ್ತುಕೊಂಡಿದ್ದಿಲ್ಲ

***

ಇಂಜಿನಿಯರ ಖಾತೆಯ ಕಾರಭಾರ.

ಉತ್ತರ ಕನ್ನಡ ಜಿಲ್ಹೆಯಲ್ಲಿ ಇಂಜನಿಯರ ಖಾತೆಯ ಉಪಶಾಖೆಗಳಿವೆ— ಕಾರವಾರ, ಕುಮಟಾ, ಶಿರ್ಸಿ, ಯಲ್ಲಾಪುರ ಹಾಗೂ ಹಳಿಯಾಳ. ಈ ೫ ಶಾಖೆಗಳಲ್ಲಿ ಸಿಬ್ಬಂದಿಯ ಬಗ್ಗೆ ಅನುಕ್ರಮವಾಗಿ ೯೫೭೦-೭೫೦೦-೮೫೭೦-೬೯೦೦-೯೬೦೦, ಹೀಗೆ ೪೨ ಸಾವಿರ ರೂಪಾಯಿ ಖರ್ಚು ಬರುತ್ತದೆ. ಈ ಉಪಶಾಖೆಗಳಲ್ಲಿ ಹೊಸ ಮಾರ್ಗ ಮುಂತಾದ ಕಾಮಗಾರಿಗಳನ್ನು ಮಾಡಲಿಕ್ಕೂ, ಹಳೇ ಕಾಮಗಾರಿಗಳನ್ನು ಉದ್ಧರಿಸಲಿಕ್ಕೂ ಅನುಕ್ರಮವಾಗಿ ಪ್ರತಿ ವರ್ಷಕ್ಕೆ ಸರಾಸರಿ ರೂ ೭೯೪೦೦-೭೪೫೦೦-೪೯೬೦೦-೫೬೦೦೦-೫೬೦೦೦, ಹೀಗೆ ರೂ ೩೧೫೫೦೦ ಖರ್ಚಾಗುತ್ತದೆ. ಈ ಶಾಖೆಗಳ ಕೈಕೆಳಗೆ ಇರುವ ಮಾರ್ಗದ ಉದ್ದಳತೆಯು ೧೧೧—೧೨೭—೧೩೫—೧೨೭ ೧೮೦ ಮೈಲು ಇರುತ್ತದೆ. ಈ ಶಾಖೆಗಳನ್ನು ತಗ್ಗಿಸಿ, ಸಿಬ್ಬಂದಿಯನ್ನು ಕಡಿಮೆ ಮಾಡಲು ಸರಕಾರಿ ರಿಟ್ರೆಂಚಮೆಂಟ ಆಫೀಸರರು ವಿಚಾರ ಮಾಡಿದ್ದರು ಆದರೆ, ಅದರೇನೂ ಸೂಚನೆ ಮಾಡಲಿಲ್ಲ.

***

ಕನ್ನಡ ಟ್ರೇಂಡ ಶಿಕ್ಷಕರ ಸಂಖೆ.

ದಕ್ಷಿಣ ಭಾಗದ ಧಾರವಾಡ ಜಿಲ್ಹೆಯಲ್ಲಿ [illegible] ಶಾಲೆಗಳಿವೆ; ಅಲ್ಲಿ ೧೭೦೯ ಟ್ರೇಂಡ ಶಿಕ್ಷಕರು. ಉತ್ತರ ಕನ್ನಡ ಜಿಲ್ಹೆಯ ೩೭೮ ಶಾಲೆಗಳಲ್ಲಿ ೪೯೯ ಟ್ರೇಂಡ ಶಿಕ್ಷಕರಿದ್ದಾರೆ ಬೆಳಗಾವಿ—ವಿಜಾಪುರ ಜಿಲ್ಹೆಗಳಲ್ಲಿ ಅನುಕ್ರಮವಾಗಿ ೭೪೦—೬೭೫ ಶಾಲೆಗಳಿದ್ದು, ಅವುಗಳಲ್ಲಿ ೮೩೪—೮೦೯ ಟ್ರೇಂಡ ಶಿಕ್ಷಕರಿದ್ದಾರೆ

***

ಸುರತ ಜಿಲ್ಹಾ ಬೋರ್ಡೂ, ಸರಕಾರವೂ.

ಸುರತ ಜಿಲ್ಹಾ ಬೋರ್ಡಿಗೂ, ಸರಕಾರಕ್ಕೂ ಪ್ರಾಥಮಿಕ ಶಾಲೆಗಳ ವಿಷಯ ವಿವಾದ ನಡೆದಿದೆ. ತಾ. ೨—೩—೧೯೩೭ ನೇಗೆ ಜಿಲ್ಹಾ ಬೋರ್ಡಿನವರು ಒಂದು ಠರಾವು ಮಾಡಿ, ಆ ಠರಾವಿನಂತೆ ಸರಕಾರವು ನಡೆಕೊಳ್ಳಲೊಪ್ಪಿದರೆ ಮಾತ್ರ ಪ್ರಾಥಮಿಕ ಶಿಕ್ಷಣವನ್ನು ತಾವು ನಿರ್ವಹಿಸಿಕೊಳ್ಳುತ್ತೇವಾಗಿ ತಿಳಿಸಿದರು. ಆ ಶರತ್ತುಗಳು ಯಾವವೆಂದರೆ:— (೧) ಎಲ್ಲ ಶಾಲೆಗಳ ಕಾರಭಾರಕ್ಕೆ ತಗಲುವ ಎಲ್ಲ ಖರ್ಚನ್ನು ಸರಕಾರವು ವಹಿಸಲು ತಯಾರಿರಬೇಕು; (೨) ಬೋರ್ಡಿನ ಬಳಿ ವಿದ್ಯಾನಿಧಿಯಿಲ್ಲ; ಅದರಿಂದ ಸರಕಾರವು ಈ ಬಗ್ಗೆ ಬೋರ್ಡಿಗೆ ಕೆಲವು ರಕಮನ್ನು ಬಿಕಗಂಟಿನಿಂದ ಕೊಡಬೇಕು; (೩) ಶಾಲೆಗಳಿಗೆ ಅವಶ್ಯವಿದ್ದಷ್ಟು ಮಂದಿ ಶಿಕ್ಷಕರನ್ನು ಸರಕಾರವು ಪೂರೈಸಬೇಕು; (೪) ಮುಚ್ಚಿದ ಹಳೇ ಶಾಲೆಗಳನ್ನು ಸರಕಾರವು ಪುನಃ ತೆರೆಯಬೇಕು; ಈಗಿನ ಯಾವದೇ ಶಾಲೆಯನ್ನು ಮುಚ್ಚಲಾಗದು. (೫) ಹೊಸ ಶಿಕ್ಷಕರಿಗಾಗಿಯೂ, ಹಳೇ ಶಾಲೆಗಳನ್ನು ಉದ್ಧರಿಸುವದಕ್ಕಾಗಿಯೂ ಅವಶ್ಯವಿರ್ಪ ದ್ರವ್ಯವನ್ನು ಸರಕಾರವು ಸಹಾಯ ರೂಪದಿಂದ ತೆರಬೇಕು. ಬೋರ್ಡಿನ ಈ ಬಿನ್ನಹಗಳಿಗೆ ಸರಕಾರವು ಉತ್ತರ ಕೊಟ್ಟಿದ್ದೇನಂದರೆ:- (೧) ಶಾಲೆಗಳನ್ನು ವಹಿಸಿಕೊಳ್ಳುವಾಗ ಸರಕಾರವು ಎಲ್ಲ ಖರ್ಚನ್ನು ತೆರಲು ಸಿದ್ಧವಿದೆ; ಆದರೆ, ಈ ಖರ್ಚಿನಲ್ಲಿ ಭತ್ತೆ ಸೇರಬಾರದು; ಸಾದಿಲವಾರ ಸೇರಬಾರದು. ಬೋರ್ಡಿನವರು ಈ ಹಿಂದೆ ತೆರುವ ವರ್ಗಣಿಯೂ ಸೇರಲಾಗದು, ಇವುಗಳ ಪಗಾರಪಟ್ಟಿನಿಂದ ಉಳಿಯುವ ಖರ್ಚನ್ನು ತೆರಲು ಸಿದ್ಧವಿದೆ. ಉಳಿದ ಜಿಲ್ಹಾ ಬೋರ್ಡಿಗೂ ಇದರಂತೆಯೇ ಹಣ ಕೊಡಲ್ಪಡುತ್ತದೆ. ಅವುಗಳಿಗಿಂತ ಹೆಚ್ಚಿನ ಅನುಕೂಲತೆಗಳನ್ನು ಸುರತ ಬೋರ್ಡಿಗೆ ಪೂರೈಸಲು ಸರಕಾರವು ಸಿದ್ಧವಿಲ್ಲ. (೨) ಜಿಲ್ಹಾ ಬೋರ್ಡು ಲೋಕಲ್ ಫಂಡನ್ನು ಏರಿಸಿ, ಅವಶ್ಯವಿದ್ದ ನಿಧಿಯನ್ನು ಎತ್ತುವಳಿ ಮಾಡಿಕೊಳ್ಳಬಹುದು. (೩) ಯಾವದೇ ಶಾಲೆಯಲ್ಲಿ ಶಿಕ್ಷಕರ ಸಂಖ್ಯೆಯು ಕಡಿಮೆಯಿಲ್ಲ. ವಿದ್ಯಾಖಾತೆಯ ಇಟ್ಟ ಪ್ರಮಾಣದಂತೆ ಎಲ್ಲ ಕಡೆಯಲ್ಲಿಯೂ ಶಿಕ್ಷಕರಿದ್ದಾರೆ. ೪೦ ವಿದ್ಯಾರ್ಥಿಗಳಿಗೆ ಸರಾಸರಿ ಒಬ್ಬ ಶಿಕ್ಷಕನಿದ್ದಾನೆ. (೪) ಅಸಹಯೋಗದ ಮೂಲಕ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳು ಬರಲಿಲ್ಲ. ಅದರಿಂದ ಆ ಶಾಲೆಗಳನ್ನು ಮುಚ್ಚಿ ಆ ಹಣದಿಂದ ಇತರ ಗ್ರಾಮಗಳಲ್ಲಿ ಶಾಲೆಗಳು ತೆರೆಯಲಾದವು. ಈ ಶಾಲೆಗಳನ್ನು ಉದ್ಧರಿಸಬೇಕಾದರೆ, ಬೋರ್ಡು ಮೂರರಲ್ಲೊಂದು ಖರ್ಚನ್ನು ತೆರಲೊಪ್ಪಬೇಕು. (೫) ಸುರತ ಜಿಲ್ಹಾ ಬೋರ್ಡಿಗೆ ಹೆಚ್ಚಿನ ಅನುಕೂಲತೆಗಳನ್ನು ಪೂರೈಸಲು ಸರಕಾರಕ್ಕೆ ಒಪ್ಪಿಗೆಯಿಲ್ಲ. ಈ ವಾದದ ಮೂಲಕ ಜಿಲ್ಹೆಯೊಳಗಿನ ಪ್ರಾಥಮಿಕ ಶಾಲೆಗಳು ವಿದ್ಯಾಖಾತೆಯ ಸ್ವಾಧೀನವಿವೆಲ್ಲಿ.

***

ಗುಜರಾಥ ಕಾಲೇಜಿನ ಪ್ರಿನ್ಸಿಪಾಲರು.

ಗುಜರಾಥ ಕಾಲೇಜಿನಲ್ಲಿ ಮುಖ್ಯಾಧ್ಯಾಪಕರು ಕಾಲೇಜಿನ ಮಂದಿರದಲ್ಲಿ ಹಾಕಲು [illegible] ರೂಪಾಯಿ ಖರ್ಚು ಮಾಡಿ, ಒಂದು ರತ್ನಗಂಬಳಿಯನ್ನು ತರಿಸಿದರು. ಆ ಬಗ್ಗೆ ಸರಕಾರಿ ಜಮಾ ಖರ್ಚು ಪತ್ರಿಕೆಯಲ್ಲಿ ಹಣ ಮುಂಜೂರಾಗಿದ್ದಿಲ್ಲ. 'ಹೋಮು'

[ಮುಂದೆ ೧೧ ನೇ ಪಾನಿನಮೇಲೆ ಮುಂದರಿಸಿದೆ.]

ಕಾನಡಾ ವೃತ್ತ.

ವಿ ತಿ ಪ್ರಭವ ಸಂ। ಫಾಲ್ಗುಣ ಶು ೬ ವಿ., ಸೋಮವಾರ

ದಿಗ್ವಿಜಯವಾಯಿತು!

ಸ್ಯಾಮನ್ ಕಮೀಶನಿಗೆ ಬಹಿಷ್ಕರಿಸಬೇಕೋ, ಬರಮಾಡಿಕೊಳ್ಳಬೇಕೋ' ಎಂಬ ಮಹತ್ವವಾದ ಪ್ರಶ್ನೆಯು ಕೇಂದ್ರೀಯ ವರಿಷ್ಠ ಕಾಯಿದೆ ಕೌನ್ಸಿಲಿನ ಕಳೆದ ತಾ ೧೬ನೇ ಗುರುವಾರಕ್ಕೆ ಸೇರಿದ ಅಧಿವೇಶನದಲ್ಲಿ ನಡೆದು, ಕೊನೆಗೆ ಲೋಕಪಕ್ಷದ ದಿಗ್ವಿಜಯ ಹೊಂದಿತೆಂದು ಪ್ರಕಟಿಸಲು ನಮಗೆ ಅತ್ಯಂತ ಸಂತೋಷವಾಗುತ್ತದೆ. ಅಂತಃಕರಣಪೂರ್ವಕವಾಗಿ ಪ್ರಯತ್ನಪಟ್ಟವರ, ಪರಮಾತ್ಮನು ಯಶಸ್ಸನ್ನು ಅನುಗ್ರಹಿಸಲೇ ಬೇಕು. ಸಮಸ್ತ ಪಕ್ಷದ ಲೋಕನಾಯಕರು ಸ್ಯಾಮನ್ ಕೂಟದ ಅನ್ಯಾಯವನ್ನು ಪರಿಹರಿಸಿಕೊಳ್ಳುವದಕ್ಕಾಗಿ ಒಮ್ಮೆಲೇ ಮತಭೇದಗಳನ್ನು ಮರೆತು, ಪ್ರಯತ್ನಪೂರ್ವಕ ಸರಕಾರಕ್ಕೆ ಎದುರಾಳಿಗಳಾಗಿ ನಿಂತ ನೋಟವು ಅತ್ಯಂತ ರಮಣೀಯವಿದೆ. ಅಲ್ಲದೆ ಅನುಕರಣೀಯವಿದೆ; ಪ್ರೋತ್ಸಾಹಕವಿದೆ, ಈ ಕಾದಾಟವನ್ನು ಸರಕಾರವೂ, ಲೋಕಪಕ್ಷವೂ ಬಹು ನಿಕರದಿಂದ ನಡಿಸಿ ಲೋಕಪಕ್ಷವು ಕೊನೆಗೆ ವಿಜಯಶ್ರೀವಿಭೂಷಿತವಾದ್ದರಿಂದ ಈ ವಿಜಯವು ಸ್ವದೇಶೋದ್ಧಾರದ ಇತಿಹಾಸದಲ್ಲಿ ಚಿರಸ್ಮರಣೀಯವಾಗದಿರದು.

ಮೊಟ್ಟಮೊದಲು, ಸರಕಾರದ ಪ್ರಯತ್ನಗಳನ್ನೇ ಪರಾಂಬರಿಸುವ. ಭರತ ಖಂಡದಲ್ಲಿ ಸ್ಯಾಮನ್ ಕೂಟಕ್ಕೆ ಬಹಿಷ್ಕಾರವೆಂಬುದು ಬರಬಿಟ್ಟಿ; ಇದು ಇಲ್ಲಿಯ ಪರಿಸ್ಥಿತಿ ಬಲ್ಲವರಂತು ಬಲ್ಲರು, ಸರಕಾರಕ್ಕಂತು ಗೊತ್ತಿದ್ದದ್ದೇ. ಆದರೂ, ಸ್ವಾಗತ ಪಕ್ಷವನ್ನು ಕಾಪಾಡುವದಕ್ಕಾಗಿ ಸರಕಾರದ ಕಡೆಯಿಂದ ಯುಕ್ತಿ-ಪ್ರಯುಕ್ತಿಗಳು ನಡೆದವು. ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ। ವಿಠ್ಠಲಭಾಯಿ ಪಟೇಲರವರಿಗೆ ಸರ್ವಾಧಿಪತಿಗಳು ಪತ್ರ ಬರಕೊಂಡು, ಕಾಯಿದೆ ಕೌನ್ಸಿಲಿನ ಸಭಾಮಂದಿರವನ್ನು ಸ್ಯಾಮನ್ ಕೂಟಕ್ಕೆ ಕೋರಿಸಲು ಬಿನ್ನೈಸಿಕೊಂಡರು. ಶ್ರೀ। ವಿಠ್ಠಲಭಾಯಿಯವರು ಈ ಪತ್ರವನ್ನು ಮನ್ನಿಸಲಿಲ್ಲ. ಪಂಡಿತ ಮೋತಿಲಾಲಾದಿ ಸಭಾಸದರಿಗೆ ಅಭಿಪ್ರಾಯವನ್ನು ಕೇಳಿದರು. ವಿಖ್ಯಾತ ಲೋಕನಾಯಕರಾದ ದೇಶಭಕ್ತ ಲಾಲಾ ಲಜಪತರಾಯರು ಸ್ಯಾಮನ್ ಕೂಟವನ್ನು ಸಮಸ್ತ ಪ್ರಕಾರಗಳಿಂದಲೂ ಬಹಿಷ್ಕರಿಸಬೇಕೆಂಬ ತೀರ್ಮಾನವನ್ನು ಸರಕಾರವು ಸ್ವಪಕ್ಷಪಾತಿಗಳ ಬೆಂಬಲದಿಂದ ದಬ್ಬಿಹಾಕಲು ತೊಡಗಿತು. ಸರಕಾರಿ ಸಭಾಸದರನ್ನು ಆದಷ್ಟು ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಹಾಜರಿರುವದಕ್ಕಾಗಿ ಮುದ್ದಾಂ ದೂತರನ್ನು ಕಳುಹಿತು. ಎಂಥ ಕೆಲಸವಿದ್ದರೂ, ಅದನ್ನೆಲ್ಲ ಒಮ್ಮೆಲೇ ತೊರೆದು, ಕೂಡಲೆ ಹೊರಟು ಬರಬೇಕಾಗಿಯೂ ಸಂದೇಶಗಳು ಕಳುಹೋದವು. ಡಾ। ಕಿಕಾಭಾಯಿ ಪ್ರೇಮಚಂದರವರು ಮುಂಬಯಿಯಿಂದ ಎಲ್ಲವನ್ನೂ ಬಿಟ್ಟು, ಸರಕಾರಕ್ಕೆ ನೆರವಾಗಲು ಓಡಿ, ಓಡಿ ಶುಕ್ರವಾರ ಸಾಯಂಕಾಲ ತಲ್ಪಿದರು. ಸರಕಾರದಿಂದ ನೇಮಿಸಲ್ಪಟ್ಟ ಸಭಾಸದರೊಬ್ಬರು ಬಹಿಷ್ಕಾರಕ್ಕೆ ಅನುಕೂಲವಾಗಿ ಮತ ಕೊಡುವ ಅಭಿವಚನ ಕೊಟ್ಟಿದ್ದರು. ಅವರಿಗೆ ಶುಕ್ರವಾರಕ್ಕೆ ಎಲ್ಲಿಯೇ ಅಡಗಿಸಿಡಲಾಯಿತು. ಲೋಕಪಕ್ಷದವರು ಪ್ರಯತ್ನದಿಂದ ಅವರ ಪತ್ತೆ ಹಚ್ಚಿದರು. ಲೋಕಪಕ್ಷದವರಲ್ಲೊಬ್ಬರಿಗೆ ಮನೆಯವರೊಬ್ಬರು ಅಸ್ವಸ್ಥ ಬಿದ್ದವರಾಗಿ ತಂತಿ ಬಂತು. ಚೌಕಶಿ ಮಾಡಿದರೆ, ಎಲ್ಲವೂ ಸುಳ್ಳು!! ಅದರಿಂದ ಆ ಸಭಾಸದರು ಕಾಯಿದೆ ಕೌನ್ಸಿಲಿನಲ್ಲಿ ಉಳಕೊಂಡರು.

ಹೀಗೆಲ್ಲ ಸರಕಾರದ ಕಡೆಯಿಂದ ಯುಕ್ತಿ-ಪ್ರಯುಕ್ತಿಗಳು ನಡೆದಾಗ, ಲೋಕಪಕ್ಷದವರೂ ಸುಮ್ಮಗಿದ್ದಿಲ್ಲ, ಸ್ವಪಕ್ಷಬಲವನ್ನು ಬಲಪಡಿಸಿಕೊಳ್ಳುವದಕ್ಕಾಗಿ ಲಾಲಾ ಲಜಪತರಾಯರಾದಿ ಲೋಕನಾಯಕರು ಶಕ್ತಿಮೀರಿ ದುಡಿಯುತ್ತಿದ್ದರು. ಅಲ್ಲಲ್ಲಿ ಆಗಿಂದಾಗ ಆಲೋಚನೆಗಳನ್ನು ನಡಿಸಿ, ಸ್ಯಾಮನ್ ಕೂಟದ ಅಧಿಕಾರಕಕ್ಷೆಯನ್ನು, ಘಟನೆಯನ್ನು, ಮುಂದಿನ ಫಲವನ್ನೂ ಸೂಕ್ಷ್ಮವಾಗಿ ಪರ್ಯಾಲೋಚಿಸಿ, ಸಭಾಸದರಿಗೆ ಈ ಕೂಟವನ್ನು ಬಹಿಷ್ಕರಿಸಲು ಮನವರಿಕೆಮಾಡುತ್ತಿದ್ದರು. ಸ್ಯಾಮನ್ ಪ್ರಭೃತಿ ಪ್ರಮುಖರು ಬರೆಸಿದ ಪತ್ರದಲ್ಲಿ [illegible] ದಂತೆ ಗುಂಜುಗ್ರತೆಯೂ [illegible] ತ್ತು, ಬಹಿಷ್ಕಾರದ ನಿರ್ಧಾರದಲ್ಲಿ ಲೋಕಪಕ್ಷವು ಸೋತರೆ, ಉಂಟಾಗುವ ಅನರ್ಥಪರಂಪರೆಯೂ, ರಾಷ್ಟ್ರಮಾನಹಾನಿಯೂ ತಿಳಿಸಿ ಹೇಳಲ್ಪಡುತ್ತಿತ್ತು. ಲಜಪತರಾಯರ ಸಂದೇಶವನ್ನೂ, ರಾಷ್ಟ್ರದ ಹಿತವನ್ನೂ ಲಕ್ಷಿಸಿ, ಕರಾಚಿಯಿಂದ ಶ್ರೀ ಹರಿಚಂದರಾಯ ವಿಶನದಾಸರವರು ದಿಲ್ಲಿಗೆ ಹೋದರು. ಅವರ ಪ್ರಕೃತಿಯು ನೆಟ್ಟಗಿದ್ದಿಲ್ಲ. ಡಾಕ್ಟರರು ಹೋಗಬಾರದಾಗಿ ಸಾರಿ ಹೇಳಿದ್ದರು; ಆದರೂ, ದಿಲ್ಲಿಗೆ ನಡೆದರು. ಮತ ಎಣಿಕೆ ಪಾಗುವ ತನಕ ತಮ್ಮಲ್ಲಿ ಪ್ರಾಣವಿದ್ದರೆ, ತಮಗೆ ಹೊತ್ತುಕೊಂಡು ಹೋಗಿ, ಬಹಿಷ್ಕಾರ ಪಕ್ಷದ ಬದಿಗೆ ತಮ್ಮನ್ನು ಒಯ್ದು ತಮ್ಮ ಮತವನ್ನು ನೋಂದು ಮಾಡಬೇಕಾಗಿಯೂ ಅವರು ಹೇಳಿದ್ದರು. ಆದರೆ, ಗುರುವಾರಕ್ಕೆ ಚರ್ಚೆ ಮುಗಿಯಲಿಲ್ಲ. ಶ್ರೀ। ಹರಿಚಂದರಾಯರು ಪ್ರಯಾಣದ ದಣುವು ಸಹಿಸಲಾರದೆ ತೀರಿಕೊಂಡರು. ಶನಿವಾರಕ್ಕೆ ಮುಂಬಯಿಯಿಂದ ಶ್ರೀ। ಜಿಲ್ಲಾರವರು ದಿಲ್ಲಿಗೆ ಓಡಿದರು. ಇವರ ಪ್ರಕೃತಿಯೂ ನೆಟ್ಟಗಿದ್ದಿಲ್ಲ. ೭ ತಾಸುಗಳ ತನಕ ವೇಗದಿಂದ ಮೋಟಾರು ಓಡಿಸಿ, ಸಕಾಲದಲ್ಲಿ ಬಹಿಷ್ಕಾರ ಪ್ರವರ್ತಕರಿಗೆ ನೆರವಾಗಲು ಕೌನ್ಸಿಲು ಸಭಾಮಂದಿರದಲ್ಲಿ ಕಾಲಿಟ್ಟರು. ದಣುವಾರಿಸಿಕೊಳ್ಳಲು ಸಹ ಅವರು ಹೋಗಲಿಲ್ಲ. ಹೀಗೆ ಲೋಕಪಕ್ಷವೂ ಸರಕಾರಕ್ಕೆ ನಿಕರದಿಂದ ಇದಿರಾಯಿತು.

ಲಾಲಾ ಲಜಪತರಾಯರು, ಶ್ರೀನಿವಾಸ ಶ್ರೀನಿವಾಸಅಯ್ಯಂಗಾರ, ಪಂಡಿತ ಮದನಮೋಹನ ಮಾಲವೀಯ, ಶ್ರೀ। ಮುಕುಂದರಾಮ ಜಯಕರ, ಬೆರಿಸ್ಟರ ಮಹಮ್ಮದ ಅಲ್ಲಿ ಜಿನ್ನಾ, ಪಂಡಿತ ಮೋತಿಲಾಲ ನೆಹರೂ ಪ್ರಭೃತಿ ಲೋಕನಾಯಕರು ಬಹಿಷ್ಕಾರವನ್ನು ಸಪ್ರಮಾಣವಾಗಿ ಪ್ರತಿಪಾದಿಸಿದರು. ಡಾ। ಎಚ್. ಎಸ್. ಗೌರ, ಸರ್ ಝುಲ್ಫಿಕಾರ [illegible] ಖಾನ, ಸರ್ ಬೇಸಿಲ ಬ್ಲೆಕೆಟ್ ಮುಂತಾದವರು ಸ್ಯಾಮನ್ ಕೂಟವನ್ನು ಬರಮಾಡಿಕೊಳ್ಳಬೇಕೆಂದು ವಾದಿಸಿದರು. ವಾದವು ಗುರುವಾರ-ಶನಿವಾರಕ್ಕೆ ನಡೆಯಿತು. ಸರಿಯಾಗಿ ಶನಿವಾರ ೫॥ ಘಂಟೆಗೆ ವಾದ ಮುಗಿಯಿತು ಮತ ಎಣಿಕೆಯಾಯಿತು; ಲಾಲಾ ಲಜಪತರಾಯರ ಬದಿಗೆ ೬೮ ಮತಗಳು ಸಿಕ್ಕಿದವು; ಸ್ವಾಗತಪರ ಠರಾವಿಗೆ ೬೨ ಮತಗಳು ದೊರಕಿದವು. ಹೀಗೆ ೬ ಮತಗಳು ಹೆಚ್ಚಿಗೆ ದೊರೆತು, ಲೋಕಪಕ್ಷವು ವಿಜಯ ಹೊಂದಿತು. ಪ್ರೇಕ್ಷಕರೆಲ್ಲರೂ ಆನಂದಾತಿಶಯದಿಂದ ಚಪ್ಪಾಳೆಗಳ ಘೋಷ ಮಾಡಿ, ಬಹಿಷ್ಕಾರದ ತೀರ್ಮಾನವನ್ನು ಸ್ವಾಗತೀಕರಿಸಿದರು. ಹೀಗೆಲ್ಲ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಲೋಕಪಕ್ಷವು ಬಹಿಷ್ಕಾರದ ನಿರ್ಧಾರವನ್ನು ದೃಢೀಕರಿಸಿದೆ. ಕಾಯಿದೆ ಕೌನ್ಸಿಲಿನಲ್ಲಿ ಈಗಿನಷ್ಟು ಜನರು ಹಿಂದೆಂದೂ ಹಾಜರಿದ್ದಿಲ್ಲವಂತೆ. ಗಳಿಗೆ ಮರದಿಗಳಲ್ಲಿ ೧೩೩ ಮಂದಿಗಳು ಹಾಜರಿದ್ದರು; ಇಬ್ಬರು ತಟಸ್ಥ ನಿಂತರು. ಲಜಪತರಾಯರಿಗೆ ಮತಕೊಟ್ಟವರಲ್ಲಿ ೬೪ ಮಂದಿಗಳು ಲೋಕನಿಯುಕ್ತರಿದ್ದಾರೆ, ಸರಕಾರಕ್ಕೆ ಅನುಕೂಲರಾದವರಲ್ಲಿ ೩೩ ಮಂದಿಗಳು ಮಾತ್ರ ಲೋಕನಿಯುಕ್ತರು; ಇಷ್ಟಾದರೂ, ಸ್ಯಾಮನ್‌ರವರು ಇದು ಲೋಕಮತವೆಂದು ತಿಳಿಯಲು ತಯಾರಿಲ್ಲ. ಈ ಮತವು ಶಾಶ್ವತವಾಗಿ ಬಾಳದೆಂದೂ [illegible] ಅಭಿಪ್ರಾಯಪಟ್ಟು, ತಮ್ಮ ಕೆಲಸವನ್ನು ಕೈಕೊಂಡ ಹಾಗೆಯೇ ಮುಂದರಿಸಲು ನಿರ್ಧರಿಸಿದ್ದಾರೆ. ಭರತಭೂಮಿಗೆ ಸದ್ಬುದ್ಧಿಯಾಗಿ, ತಮ್ಮೊಡನೆ ಸಾಹಚರ್ಯವಾಗುವ ಆಶೆಯಿರುವದಾಗಿಯೂ, [illegible] ತನಕ [illegible] ಪ್ರಾಮಾಣಿಕತನದಿಂದಲೂ, ಸ್ನೇಹಭಾವದಿಂದಲೂ ಹೃದಯಸಿಕ್ತದಿಂದಲೂ ದುಡಿಯುವೆವಾಗಿಯೂ ಸ್ಯಾಮನ್‌ರವರು ಹೇಳಿ, ಜನದ ಸಮಾಧಾನ ಮಾಡಿಕೊಳ್ಳುತ್ತಿದ್ದಾರೆ. ಸ್ಯಾಮನ್‌ರವರ [illegible]

ದ ಸಮಾಧಾನದಲ್ಲಿ ಎಡರು ಹಾಕಲು ಸಾಧ್ಯವಾಗಲಿಲ್ಲ; ಲೋಕನಾಯಕರ್ಯಾರೂ ತಯಾರಿಲ್ಲ. ಅವರ ಜೀವದ ಸಮಾಧಾನವನ್ನು, ಜೀವಾಳವನ್ನು ಗ್ರಹಿಸಿಕೊಂಡು, ಅವರು ಹೊಂದಬಹುದು. ಅದಕ್ಕೆ ಯಾರದೇನು ಕೃತ್ಯವಾಯಿತು! ಸೈಮನ್‌ರವರು ಸ್ವಾತಂತ್ರ್ಯವನ್ನು ತತ್ಪರತೆಯಿಂದಲೂ, ದೃಢ ನಿಶ್ಚಯದಿಂದಲೂ ನಡೆಸುವಂತೆ, ಭಾರತೀಯರಾದರೂ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಶನಿವಾರಕ್ಕೆ ಕೈಕೊಂಡ ತೀರ್ಮಾನವನ್ನು ದೃಢ ನಿಶ್ಚಯದಿಂದ ಪಾಲಿಸಲು ಪ್ರಯತ್ನಪೂರ್ವಕವಾಗಿ ದುಡಿಯತಕ್ಕದ್ದು. ದಿಗ್ವಿಜಯವಾದರೂ, ಅದನ್ನು ಪಾಲಿಸದಿದ್ದರೆ ಸಂಪೂರ್ಣವಾಗಿ ನಮಗೆ ಅದು ಫಲಿಸದು; ಸೈಮನ್‌ರವರ ಕತ್ತರಿ ಸಾಧು; ಕತ್ತರಿಯು ಬೇಕಾದರೆ, ದಿಗ್ವಿಜಯದ ನಿರ್ಧಾರವನ್ನು ಐಕ್ಯಮತ್ಯದಿಂದ ಸಮಸ್ತರೂ ಪಾಲಿಸತಕ್ಕದ್ದು. ಸಮಸ್ತ ಲೋಕನಾಯಕರಿಗೂ ಹೀಗೆಯೇ ಸದ್ಬುದ್ಧಿಯು ಪ್ರಾಪ್ತವಾಗಿ, ಲೋಕಮತದ ದಿಗ್ವಿಜಯಗಳನ್ನು ಈಗಿಂದೀಗ ಪ್ರಕಟಿಸುವ ಸುಯೋಗಗಳು ನಮಗೆ ಲಭಿಸಲೆಂದು ನಾವು ಪ್ರಾರ್ಥಿಸಿ, ನಮ್ಮ ಇಂದಿನ ಸೇವೆಯನ್ನು ಇಷ್ಟಕ್ಕೆ ಮುಗಿಸುವೆವು.

ಸ್ಫುಟ ಸೂಚನೆಗಳು.

೧. ನಮ್ಮ ಪ್ರಾಂತಿಕ ಜಮಾ-ಖರ್ಚ ಪತ್ರಕವು ಕಳೆದ ಸೋಮವಾರ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಸಾದರವಾಯಿತು. ಕೌನ್ಸಿಲು ಸಭಾಸದರು ಅದನ್ನು ತಮ್ಮ ತಮ್ಮ ಪ್ರವೃತ್ತಿಯಂತೆ ಪರಾಂಬರಿಸುತ್ತಿದ್ದಾರೆ. ಅಷ್ಟು ವಿಸ್ತಾರದಿಂದಲೂ, ಸೂಕ್ಷ್ಮ ವಿಚಾರದಿಂದಲೂ ಚರ್ಚೆ ಮಾಡುವದು ನಮಗೆ ಸಾಧ್ಯವಿಲ್ಲ; ಸದ್ಯಕ್ಕೆ ಅವಶ್ಯವೂ ಇಲ್ಲ. ಸ್ಥೂಲ ಮಾನದಿಂದ ನಾಲ್ಕು ಮಾತುಗಳನ್ನು ವಾಚಕರಿಗೆ ಹೇಳುವರೆ, ಜಮಾ-ಖರ್ಚಿನ ರೂಪವು ಹೊಳೆಯುತ್ತಿದೆ. ಈಗಿನ ಖರ್ಚನ್ನು ನಡೆಸಬೇಕಾದರೆ, ಪ್ರಾಂತಿಕ ಜಮಾ-ಖರ್ಚಿನಲ್ಲಿ ೩೪ ಲಕ್ಷ ರೂಪಾಯಿಗಳ ತುಟ್ಟಿ ಬರುತ್ತದೆ. ೧೫ ಕೋಟಿ ೬೦ ಲಕ್ಷ ರೂಪಾಯಿಗಳು ಖರ್ಚಿಗೆ ಬೇಕು; ೧೫ ಕೋಟಿ ೨೬ ಲಕ್ಷ ಉತ್ಪನ್ನವಿದೆ. ಕೋರ್ಟ ಫೀ ಮುಂತಾದ ಹಿರಿಸಿದ ಕರಗಳನ್ನು ಮುಂದರಿಸಿದ್ದರೂ, ೩೪ ಲಕ್ಷ ರೂಪಾಯಿಗಳು ಇನ್ನು ಬೇಕು ಅಂದ ಬಳಿಕ, ಪ್ರಾಂತಿಕ ಆದಾಯವು ಯಾವ ಪ್ರಕಾರ ಹಿಗ್ಗಿಸಬೇಕೆಂದು ಇನ್ನು ಹೇಳುವದು ಬೇಡ. ೫೬ ಲಕ್ಷ ರೂಪಾಯಿಗಳನ್ನು ಹಿಂದುಸ್ತಾನ ಸರಕಾರಕ್ಕೆ ಸಮರ್ಪಣ ಕಪ್ಪವೆಂದು ಕೊಡಬೇಕು. ಆ ಕಪ್ಪವೇನೋ ಈ ವರುಷ ಸೂಟ ಸಿಗುವದು. ಅದರಿಂದ ಈ ವರುಷದ ಜಮಾ-ಖರ್ಚು ಬಾಯಿಗೂಡುವಂತಿದೆ. ಕಪ್ಪವು ಸೂಟ ಸಿಕ್ಕಿದರೆ, ಆ ರಕಮನ್ನು ಶಿಕ್ಷಣ, ಆರೋಗ್ಯ ಮುಂತಾದ ಲೋಕೋಪಕಾರಿ ಕಾರ್ಯಗಳಲ್ಲಿ ವಿನಿಯೋಗಿಸಲ್ಪಡುವದಾಗಿ ಸರಕಾರದಿಂದ ಅಭಿವಚನವಿತ್ತು. ಆ ಅಭಿವಚನವು ಈಗ ಎಲ್ಲಿಯೂ ಇಲ್ಲ! ಕಪ್ಪ ಸೂಟ ಸಿಗುವ ಮುಂಚೆಯೇ ಖರ್ಚು ಬೆಳೆದು ಹೋಗಿದೆ! ಶಿಕ್ಷಣ-ಆರೋಗ್ಯಾದಿಗಳಿಗೆಲ್ಲವೆಂಬುದನ್ನು ಮಾತ್ರ ನೆನಪಿನಲ್ಲಿಟ್ಟರಾಯಿತು. ೧೯೨೬-೧೯೨೭ನೇ ಇಸ್ವಿಯಲ್ಲಿ ೪॥ ಕೋಟಿ ಶಿಲ್ಕು ಇತ್ತು. ಅದು ಈ ವರ್ಷದ ಅಖೈರಿಗೆ ಅಂದರೆ ೨೯ನೇ ಇಸ್ವಿಯ ಕೊನೆಗೆ ೭ ಲಕ್ಷಕ್ಕೆ ಬರುವದು. ಪ್ರಾಂತಿಕ ಆಡಳಿತೆಯಲ್ಲಿ ಹೀಗೆ ದುಂದುಗಾರಿಕೆ ನಡೆದಿದೆ. ಲೋಕೋಪಕಾರಿ ಖಾತೆಗಳಿಗೆ ಕೊರತೆ ಮಾಡಿಸಿ, ಉಳಿದ ಖಾತೆಗಳಲ್ಲಿ ಖರ್ಚು ಮಾಡಲು ಯಾವ ಅಡಚಣೆಯಾಗುವದಿಲ್ಲ. ಶಿಲ್ಕು ಇಲ್ಲ; ಉತ್ಪನ್ನಕ್ಕಿಂತ ಖರ್ಚು ಹೆಚ್ಚು; ದಿವಾಳಿ ತೆಗೆಯುವದೊಂದು ಬಾಕಿ ಇದೆ. ಇದೇ ಹೊಸ ವರ್ಷದ ಜಮಾ-ಖರ್ಚಿನ ಸ್ವರೂಪವು! ಸರ್ ಚುನಿಲಾಲ ಮೆಹ್ತಾರವರು ಕೋಶಪ್ರಧಾನರು. ಇವರು ವ್ಯಾಪಾರಿ ಪರಂಪರೆಯವರು. ಆದರೂ, ಈ ದುಂದುಗಾರಿಕೆಗೆ ತಡೆಹಾಕಲು ಸಾಧ್ಯವಿಲ್ಲದಾದ ಬಳಿಕ, ಆಡಳಿತೆಯ ಪದ್ಧತಿಯೇ ದೋಷಪೂರ್ಣವಿದೆಂದು ಇನ್ನು ಹೇಳುವದೇನಿದೆ? ಈ ಪದ್ಧತಿಯು ಮೂಲವನ್ನು ತಿದ್ದಿದ ಹೊರತು, ಆಡಳಿತೆಯು ಜಮಾ-ಖರ್ಚು ಎಂದಿಗೂ ಸುಧಾರಿಸದು. ಪ್ರಜೆಗಳ ಸುಖಸಾಧನಗಳೂ ಸಿಗಲಾರವು.

---

೨. ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ| ಹರಿಶ್ಚಂದ್ರರಾಯರು ತೀರಿಕೊಂಡ ಸಂಗತಿಯು ಹೃದಯದ್ರಾವಕವಿದೆ; ದೇಶಾಭಿಮಾನಪ್ರೇರಕವಿದೆ. ಶ್ರೀ| ಹರಿಶ್ಚಂದ್ರರಾಯರವರು ಕರಾಚಿಯಲ್ಲಿ ಪ್ರಕೃತಿ ಕೆಟ್ಟು ಹಾಸಿಗೆಯ ಮೇಲೆ ಬಿದ್ದುಕೊಂಡಿರುವಾಗ, ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಬಹಿಷ್ಕಾರ ತೀರ್ಮಾನದ ಭವಿತವ್ಯತೆಯು ಕಠಿಣವಾಗಿದೆಂದು ಸುದ್ದಿ ಹತ್ತಿತು; ಕೂಡಲೆ ಹೊರಡಲು ಸಿದ್ಧರಾದರು. ಉಪಚಾರ ನಡಿಸುವ ಡಾಕ್ಟರರಿಗೆ ಕೇಳಲು ಅವರೆಷ್ಟು ಕಷ್ಟು ದಿಲ್ಲಿಗೆ ಹೋಗಲಪ್ಪಣೆಕೊಡಲಿಲ್ಲ. ಈ ನಶ್ವರ ದೇಹಕ್ಕಿಂತ ಬಹಿಷ್ಕಾರ ತೀರ್ಮಾನದ ಯಶಸ್ಸೇ ರಾಷ್ಟ್ರಕ್ಕೆ ಹೆಚ್ಚಿನದೆಂದು ಶ್ರೀ| ಹರಿಶ್ಚಂದ್ರರಾಯರು ಸಾಧಾರ ಎಣಿಸಿ, ದೇಹದ ಪರಿವೆಯನ್ನು ಬಿಟ್ಟು ನೆಟ್ಟಗೆ ದಿಲ್ಲಿಗೆ ಕೂಚು ಮಾಡಿ, ಅಲ್ಲಿ ಗುರುವಾರಕ್ಕೆ ತೀರಿಕೊಂಡರು. ದೇಶಹಿತಕ್ಕಾಗಿ, ದೇಶದ ಮಾನರಕ್ಷಣೆಗಾಗಿ ಅಂತಃಕರಣಪೂರ್ವಕ ಪ್ರಯತ್ನಪಡುವ ಶ್ರೀ| ಹರಿಶ್ಚಂದ್ರರಾಯರಿಗೆ ನಾವು ಆದರಪೂರ್ವಕವಾಗಿ ವಂದನೆಗಳನ್ನರ್ಪಿಸುವೆವು. ಶ್ರೀ| ಹರಿಶ್ಚಂದ್ರರಾಯರ ನಿಧನದಿಂದ ನಿಷ್ಕಾಮ ದೇಶಸೇವಕರೊಬ್ಬರು ಕಾಲವಾಗಿದ್ದಾರೆ. ಶ್ರೀ| ಹರಿಶ್ಚಂದ್ರರಾಯರು ಮುಂಬಯಿಯ ಸಿಂಹರೆಂದು ಖ್ಯಾತಿಗೊಂಡ ಸರ್ ಫಿರೋಜಶಹಾ ಮೇಹ್ತಾ ಪ್ರಭೃತಿಗಳ ಜೊತೆಗಾರರಾಗಿ ತರುಣತನದಿಂದ ದೇಶಸೇವೆ ನಡಿಸಿದ್ದಾರೆ. ಇವರು ದೊಡ್ಡ ಜಮೀನದಾರರಿದ್ದರು. ಕೆಲವು ಕಾಲ ವಕೀಲಿಯನ್ನು ನಡಿಸಿದ್ದರು. ಕರಾಚಿಯ ಮ್ಯುನಿಸಿಪಾಲಿಟಿಯಲ್ಲಿಯೂ, ಮುಂಬಯಿಯ ಕಾಯಿದೆ ಕೌನ್ಸಿಲಿನಲ್ಲಿಯೂ, ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೂ ಇವರು ಲೋಕಪಕ್ಷದ ಕಡೆಯಿಂದ ಕಾದಾಡಿದ್ದಾರೆ. ೧೯೧೩ನೇ ಇಸ್ವಿಯಲ್ಲಿ ರಾಷ್ಟ್ರೀಯ ಸಭೆಯು ಕರಾಚಿಯಲ್ಲಿ ಸೇರಿದಾಗ, ಶ್ರೀ| ಹರಿಶ್ಚಂದ್ರರಾಯರು ಸ್ವಾಗತ ಸಮಿತಿಯ ಯಜಮಾನರಿದ್ದರು. ಸಿಂಧ ಪ್ರಾಂತದಲ್ಲಿ ಸೇರಿದ ಸಿಂಧ ಪ್ರಾಂತಿಕ ಪರಿಷತ್ತಿನ ಅನೇಕ ಅಧಿವೇಶನಗಳಲ್ಲಿ ಅಧ್ಯಕ್ಷರಾಗಿ ಕಾಲಕಾಲಕ್ಕೆ ಅವಶ್ಯವಾದ ದೇಶಸೇವಾಕಾರ್ಯವನ್ನು ಇವರು ಪ್ರಜೆಗಳಿಗೆ ಬೋಧಿಸಿದ್ದಾರೆ. ಸಿಂಧ ಪ್ರಾಂತದಲ್ಲಿ ಹಿಂದು-ಮುಸಲ್ಮಾನರಿಗೆ ಇವರು ಆದರಪಾತ್ರರಾಗಿದ್ದರು. ಇಂಥ ನಿಷ್ಕಾಮ ಬಹುಮಾನ್ಯ ದೇಶಸೇವಕರು ದೇಶಸೇವೆಗಾಗಿ ಪ್ರಾಣಾರ್ಪಣ ಮಾಡಿದ್ದು ಸ್ವದೇಶಾಭಿಮಾನ ವಿಚಾರದಿಂದ ಧನ್ಯತಾಭಾವ ಕಲ್ಪಿಸಿದರೂ, ಪ್ರಜೆಗಳಿಗೆಲ್ಲ ಬಹಳ ದುಃಖವಾಗಿದೆ. ವಿಧಿಘಟನೆಗೆ ಯಾರದೇನು ಉಪಾಯವಿದೆ? ಶ್ರೀ| ಹರಿಶ್ಚಂದ್ರರಾಯರು ಬಹಿಷ್ಕಾರಕ್ಕಾಗಿ ದೇಹವನ್ನೇ ಅರ್ಪಿಸಿ, ಪ್ರಜೆಗಳಿಗೆಲ್ಲ ಬಹಿಷ್ಕಾರ ನಿರ್ಧಾರವನ್ನು ಪಾಲಿಸಲು ಬೋಧಿಸಿದ್ದಾರೆ. ಅದನ್ನು ನಾವು ಮಾಡಿ, ಹರಿಶ್ಚಂದ್ರರಾಯರ ಆತ್ಮಕ್ಕೆ ಚಿರಶಾಂತಿಯನ್ನೀಯುವ.

---

೩. ಶ್ರೀ| ಹರಿಶ್ಚಂದ್ರರಾಯರ ದೇಶಭಕ್ತಿಯ ಜೊತೆಗೆ ನಾಗಪುರದ ಡಾ| ಹರಿಸಿಂಗ ಗೌರರವರ ದೇಶದ್ರೋಹವನ್ನು ವಿವರಿಸುವ ಪ್ರಸಂಗವು ಬಂದಿದೆ. ಡಾ| ಹರಿಸಿಂಗ ಗೌರರವರು ಲೋಕನಿಯುಕ್ತರಿದ್ದು, ಬಹಿಷ್ಕಾರ ನಿರ್ಧಾರಕ್ಕೆ ಅನುಕೂಲ ಮತ ಕೊಡುವೆವಾಗಿ ಲಾಲಾ ಲಜಪತರಾಯರಿಗೆ ತಿಳಿಸಿದ್ದರು; ಮತ ಕೊಡಲು ತಿಳಿಸಿದ್ದರು. ಸೈಮನ್ ಕಮಿಟಿಯೊಳಗಿನ ಸಭಾಸದರ ನಾಮನಿರ್ದೇಶವಾದೊಡನೆ ಲಜಪತರಾಯರು ಕೇಳಿದ ಅಭಿಪ್ರಾಯಕ್ಕೆ ಇವರು ಬಹಿಷ್ಕಾರದ ಅಭಿಪ್ರಾಯವನ್ನೇ ಕೊಟ್ಟಿದ್ದರು. ಅಪವಾದವನ್ನೊಂದು ಆಗಲೇ ತಿಳಿಸಿದ್ದರು. ಎಲ್ಲ ಪಕ್ಷದವರು ಬಹಿಷ್ಕರಿಸಿದರೆ, ಮಾತ್ರ, ತಾವು ಬಹಿಷ್ಕಾರವನ್ನು ಪುರಸ್ಕರಿಸುವೆವಾಗಿಯೂ ಅವರು ಹೇಳಿದ್ದರು. ಎಲ್ಲ ಪಕ್ಷದವರು ಬಹಿಷ್ಕರಿಸಿದರೂ, ಡಾ| ಹರಿಸಿಂಗರವರು ತಮ್ಮ ಮತ ಅನುಕೂಲವಾಗಿ ಕೊಡದೆ, ಪ್ರತಿಕೂಲವಾಗಿ ಕೊಟ್ಟರು. ಪಂಡಿತ ಮದನಮೋಹನ ಮಾಲವೀಯರವರೂ, ಡಾ| ಮುಂಜೇಯವರೂ ಕೊನೆತನಕ ಅವರ ಮೇಲೆ ಆಸೆಯನ್ನಿಟ್ಟಿದ್ದರು. ಶೇಠ ಗೋವಿಂದದಾಸರೂ, ಪಂಡಿತ ದ್ವಾರಕಾಪ್ರಸಾದ ಮಿಶ್ರರವರೂ ಶುಕ್ರವಾರ ರಾತ್ರಿ ಅವರ ಬಳಿಗೆ ಹೋಗಿ ಅವರಿಗೆ ಬಹಳವಾಗಿ ಹೇಳಿದರೂ, ನಿಶ್ಚಿತ ಅಭಿಪ್ರಾಯ ಹೇಳಲಿಲ್ಲ. ಮತ ಎಣಿಕೆಯಾಗುವ ತನಕ ಇವರ ಮೇಲೆ ಆಸೆ. ಅನುಕೂಲ ಮತ ಕೊಡದಿದ್ದರೂ, ಪ್ರತಿಕೂಲ ಮತವಾದರೂ ಕೊಡಲಿಕ್ಕಿಲ್ಲ; ತಟಸ್ಥರಿರುವರು; ಎಂಬದೊಂದು ಆಸೆ ಇತ್ತು; ಅದೂ ಸಹ ನಿರರ್ಥಕವಾಯಿತು! ಡಾ| ಹರಿಸಿಂಗರವರು ಬಹಿಷ್ಕಾರ ವಿರೋಧಕರಾಗಿ ಸೇರಿದರು. ಡಾಕ್ಟರರು ವಿದ್ವಾಂಸರಿದ್ದಾರೆ. ಆದರೆ, ಇವರ ವಿದ್ವತ್ತೆಯದೇನು ಫಲ? ಇದನ್ನು ಕೇಳಿದರೆ, ಮನಸ್ಸು ಬೇಸರ ಹೊಂದಿ ವಚನಭಂಗ ಮಾಡುವ ಡಾ| ಹರಿಸಿಂಗರವರ ವಿಷಯ ತಿರಸ್ಕಾರವುಂಟಾಗುತ್ತದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಮಾನ್ಯ; ಆರೋಗ್ಯ ಹಿಂದಾಗುತ್ತಿದೆ.

ಶ್ರೀ ಗೋಕರ್ಣ ಶಿವರಾತ್ರಿಯ ಉತ್ಸವವು ತೀರಿತು. ಈ ವರುಷ ಜನಸಂದಣಿ ಇಲ್ಲ. ಪ್ರತಿವರ್ಷ ೩೦—೪೦ ಸಾವಿರ ಯಾತ್ರಸ್ಥರು ಬರುತ್ತಿದ್ದರು; ಈ ವರುಷ ೧೦—೧೨ ಸಾವಿರದಲ್ಲೇ ತೀರಿತು. ಆ ಕಾರಣದಿಂದ ಮ್ಯುನಿಸಿಪಾಲಿಟಿಯ ಕರದಲ್ಲಿ ಉತ್ಪನ್ನವೂ ಕುಗ್ಗಿತು.

ಇಲ್ಲಿಯ ಮ್ಯುನಿಸಿಪಾಲಿಟಿಯ ವಾರ್ಷಿಕ ಜಮಾ-ಖರ್ಚಿನ ಪತ್ರಿಕೆಯನ್ನು ಮಂಜೂರ ಮಾಡಲು ಕಳೆದ ಸೋಮವಾರಕ್ಕೆ ಸಭೆ ಸೇರಿತು. ಪ್ರೆಸಿಡೆಂಟರು ಗೋಕರ್ಣಕ್ಕೆ ಹೋದ್ದರಿಂದ ಸಭೆಗೆ ಹೋಗಿದ್ದಿಲ್ಲ. ಡಾ|| ಗಂಗಾಧರ

ಗೂ ಪಮ್ಮ್ಯ ಕಾನಭಾಗರೂ ಹೋಗಲಿಲ್ಲ; ಅಲ್ಲಿದ್ದೂ ಹೋಗಲಿಲ್ಲ. ಸಭೆಯಲ್ಲಿ ಇನ್ನು ೬ ಗ್ಯಾಸ ದೀಪಗಳನ್ನು ಹಚ್ಚಿಸಬೇಕೆಂದು ತೀರ್ಮಾನವಾಯಿತು. ಇನ್ನೂ ೮ ನ್ನು ಹೆಚ್ಚಿಸಿ, ಒಟ್ಟು ೨೫ ಗ್ಯಾಸ ದೀಪಗಳನ್ನು ಹಚ್ಚಬೇಕಾಗಿಯೂ, ಭೊಟ್ಕೆಯ ಬಳಿ ಗುಂಡದ ಕಡೆ ಹೋಗುವವರಿಗಾಗಿ ಒಂದು ದೀಪ ಹಚ್ಚಬೇಕಾಗಿ ಬಂದ ಸೂಚನೆಗಳು ತಿರಸ್ಕೃತಗೆಯಲ್ಪಟ್ಟವು. ಮಾರ್ಗದ ಮೇಲೆ ನೀರು ಹಾಕಲು ಮಂಜೂರಾಗಲಿಲ್ಲ; ಆ ಕುರಿತು ಮಾಡಿದ ಸೂಚನೆಯು ಬಿದ್ದು ಹೋಯಿತು. ಗುಂಡದ ಬಳಿ ಮೋರಿಯನ್ನೂ, ಹೊನ್ನಾವರದ ಬದಿಗಿರುವ ೨ ಮೋರಿಗಳನ್ನೂ ದುರುಸ್ತಿ ಮಾಡಬೇಕಾಗಿಯೂ, ಆ ಕುರಿತು ಇನ್ನು ೫೦೦ ರೂಪಾಯಿಗಳನ್ನು ಹೆಚ್ಚಿಗೆ ಮಂಜೂರ ಮಾಡಬೇಕಾಗಿಯೂ ಹರಿವಟ್ಟೆಯ ರಾ|| ಗೋವಿಂದ ಪೈರು ತಂದ ಸೂಚನೆಯು ಬಹುಮತದಿಂದ ತಿರಸ್ಕರಿಸಲಾಯಿತು. ಹೊನ್ನಾವರದ ವಾದೀನ ಸಭಾಸದರಾದ ರಾ|| ರಾಮಾ ಹನುಮಂತ ಕಾನಭಾಗರೂ ಅನುಕೂಲ ಮತ ಕೊಡಲಿಲ್ಲ. ಗಿಬ್ಬ ಹ್ಯಾಸ್ಕೂಲಿಗೆ ಗ್ರಾಂಟು ಕೊಡಬೇಕಾಗಿ ೫೦೦ ರೂಪಾಯಿಗಳು ಜಮಾ-ಖರ್ಚಿನ ಪತ್ರಿಕೆಯಲ್ಲಿ ಸೇರಿಸಲಾಗಿದ್ದವು. ಅವನ್ನು ರದ್ದು ಮಾಡಬೇಕಾಗಿ ರಾ| ನರಸಿಂಹ ಕಾನಭಾಗರು ಸೂಚಿಸಿದರು. ಈ ಸೂಚನೆಗೆ ರಾ| ಶ್ರೀಪಾದರಾವ ಕಲ್ಯಾಣಪುರಕರ, ಗೋವಿಂದ ಪೈ, ಗಣಪಯ್ಯಾ ಕೃಷ್ಣ ಗೌಡ್ಯಾ, ಅಬಿದಿನ ಸಾಹೇಬ, ಹೀಗೆ ೫ ಮತಗಳು ಬಿದ್ದವು. ರಾ|| ಭಾಗ್ವತರು ತಟಸ್ಥ ನಿಂತರು. ಗಿಬ್ಬ ಹ್ಯಾಸ್ಕೂಲಿನ ಶಿಕ್ಷಕರಾದ ರಾ|| ಗಾವಸ್ಕರ, ಕೇಶವ ಪೈ, ಶೀಪಗಿರಿ ಕಾಮತ, ರಾಮ ಕಾನಭಾಗ, ಮ್ಹಾಳಸ್ಕರ, ವಿ|| ಬಸ್ರೂರಕರ, ಹೀಗೆ ೬ ಮಂದಿಗಳು ಅನುಕೂಲ ಮತ ಕೊಟ್ಟರು. ಅಧ್ಯಕ್ಷರಾದ ರಾ|| ಅಣ್ಣಪ್ಪೈರು ತಮ್ಮ ಮತವನ್ನು ಕೊಟ್ಟು, ಒಟ್ಟು ೭ ಮತ ಮಾಡಿದರು. [ಮತ್ತು ಬಹುಮತದಿಂದ ಈ ಸೂಚನೆಯನ್ನು ತಿರಸ್ಕರಿಸಿದರು.]

ಪ್ರಾಂಥಸ್ಥರೊಬ್ಬರು ತಿಳಿಸುವದೇನಂದರೆ. — ನಾವು ಕೆಲವರು ವಿಕ್ಟರ ಮೋಟಾರ ಸರ್ವ್ಹಿಸಿನಿಂದ ಸಾಣಿಕಟ್ಟೆಯಿಂದ ಮಂಗಳವಾರಕ್ಕೆ ಕುಮಟೆಗೆ ಬಂದೆ. ಲೊಂಚಿಗೆ ಹಿಂಬದಿಗೊಂದು ಬೋಟ ಕಟ್ಟಿದ್ದರು. ಎರಡೂ ತುಂಬುವ ತನಕ ಸರ್ವ್ಹಿಸಿನವರು ನಿರೀಕ್ಷಣೆ ಮಾಡಿ, ೫ ಘಂಟೆಗೆ ೫ ಮಿನಿಟಿರುವಾಗ ಲೊಂಚನ್ನು ಬಿಟ್ಟರು. ಲೊಂಚು ಬಿಡುವ ಟೈಮು. ೫|| ಘಂಟೆಯಂತೆ. ಇದನ್ನು ನಂಬಿಕೊಂಡು ಹೊನ್ನಾವರಕ್ಕೆ ಹೋಗುವ ಕೆಲ ಹೆಂಗಸರು ಕುಮಟೆಯಲ್ಲಿ ಮೋಟಾರ ಇಳಿಯುವದೆಂದು ದಡದಿಂದ ಲೊಂಚನ್ನು ಹತ್ತಿದರು. ಲೊಂಚು ಹಳಕಾರಕ್ಕೆ ೭|| ಘಂಟೆಗೆ ಬಂದು ತಲ್ಪಿತು. ಅಮಾವಾಸ್ಯೆಯ ಕಗ್ಗತ್ತಲೆ. ಹೆಂಗಸರು ಹುಡುಗರ ಕಷ್ಟ ಹೇಳಲುಸಲ್ಲ. ಲೊಂಚಿನ ಯಜಮಾನರನ್ನು ವಿಚಾರಿಸಿದರೆ, "*We wait for passengers,*" ಅಂದರೆ, ಜನರನ್ನು ನಾವು ಹಾರೈಸುತ್ತಿರುತ್ತೇವೆಂದು ಹೇಳುತ್ತಾರೆ. ಬೋಟು ನಡಿಸುವ ಹರಿಕಾಂತ್ರರಿಗೂ, ಲೊಂಚಿನ ಸರ್ವ್ಹಿಸಿನವರಿಗೂ ಭೇದವೇನಿಲ್ಲ. ದರದಲ್ಲಿ ಮಾತ್ರ ಭೇದ! ಇತ್ಯಾದಿ.

ಉಪ್ಪಿನಪಟ್ಟಣದವರೊಬ್ಬರು ತಿಳಿಸುವದೇನಂದರೆ: — ಸಾಣಿಕಟ್ಟೆಯ ಉಪ್ಪಿನ ಸಾವುಕಾರರ ಕಾರಭಾರದ ಕಥೆ ಹೇಳುತ್ತೇನೆ. ಉಪ್ಪಿನ ಮಾಲೀಕರಲ್ಲಿ ಇತ್ತಂಡಗಳಾಗಿವೆ. ರಾ|| ಮಂಗೇಶ ಮಹಾದೇವ ನಾಡಕರ್ಣಿಯವರು ಕಳೆದ ವರ್ಷದಿಂದ ಪ್ರತ್ಯೇಕವಾಗಿ ಉಪ್ಪು ಬೆಳಸಿ ಮಾರುತ್ತಾರೆ. ಇವರ ಉಪ್ಪು ತಾ ೭-೨-೧೯೩೦ಕ್ಕೆ ಇಲ್ಲಿ ಬಂತು. ೧೦-೩೦ ಗಾರ್ಸೆ ಅರಬಹಾದು ತೂಕರ್ರ ರಾ| ಶಿವರಾಮ ವೆಂಕ ಶಾನ್ಭಾಗ್ ಎಂಬವರು ಈ ಉಪ್ಪು ಮಾರಲು ತಂದಿದ್ದರು. ಆ ಕಾಲಕ್ಕೆ ಸಾಣಿಕಟ್ಟೆಯವರು ಇಷ್ಟ ದರದಿಂದಲೇ ಇವರು ಮಾರುತ್ತಿದ್ದರು. ಆಗಿನ ದರವೇನಂದರೆ: — ಚೀಲ ೧ಕ್ಕೆ ರೂ. ೪-೭-೦; ೬ ರಿಂದ ೬೦ರ ವರೆಗೆ ಕೊಂಡರೆ, ರೂ. ೪-೬-೬; ೬೧ಕ್ಕೆ ಮಿಕ್ಕಿ ಕೊಂಡರೆ, ರೂ ೪-೬-೦ ನೇ ತಾರೀಖಿಗೆ ಸೊಸ್ಯಾಟಿಯ ಡಿಪೋಕೀಪರರು ದರ ಇಳಿಸಿದರು: — ಚೀಲ ೧ಕ್ಕೆ ರೂ. ೪-೧-೦; ೬ ರಿಂದ ೬೦ರ ವರೆಗೆ ರೂ. ೪-೦-೬; ೬೧ ರಿಂದ ೩೨೦೦ ವರೆಗೆ ರೂ ೪-೦-೦; ೧೨೦೦ಕ್ಕೆ ಮಿಕ್ಕಿ ಕೊಳ್ಳುವವರಿಗೆ ರೂ ೩-೧೫-೦ ಮುಂಚಿನ ದಿನ, ಅಂದರೆ ಆನೇ ತಾರೀಖಿಗೆ ಉಪ್ಪಿನ ಲೈಸನ್ಸದಾರರು ಈ ಡೀಪೋದೊಳಗಿಂದ ಮುಂಚಿನ ದರದಂತೆ ಉಪ್ಪು ಕೊಂಡಿದ್ದರು. ಮಾರನೇ ದಿನವೇ ದರ ಕಡಿಮೆಯಾದ್ದರಿಂದ, ಕೊಟ್ಟು ಇದ್ದ ಉಪ್ಪು ಸೊಸ್ಯಾಟಿಯ ಡಿಪೋ ಕೆಲ್ಸಿನಲ್ಲಿ ಎಣಿಸಿ, ದರದ ಅಂತರವನ್ನು ತಮಗೆ ಹಿಡಿದು ಕೊಡಬೇಕಾಗಿ ಲೈಸನ್ಸದಾರರು ಡಿಪೋಕೀಪರರ ಬಳಿ ಹೇಳಿದರು. ಅವರು [ಒಪ್ಪಲಿಲ್ಲ. ಲೈಸನ್ಸದಾರರು ಪಂಚನಾಮೆ ಮಾಡಿಸಿಟ್ಟಿರುತ್ತಾರೆ. ತಾ. ೧೧ನೇಗೆ ಸಾಣಿಕಟ್ಟೆಯಿಂದ ರಾ| ಬಿಕ್ಕುರಾಯರು ಈ ಡಿಪೋಕ್ಕೆ ಬಂದು ಮುಟ್ಟಿದರು. ಉಪ್ಪಿನ ಕೆಲ್ಸಿನ ಕುರಿತು ಲೈಸನ್ಸದಾರರು ತಕರಾರು ಹೇಳಿದರು. ನಾಳೆ ವಿಚಾರ ಮಾಡುತ್ತೇವಾಗಿ ಹೇಳಿದರು. ಮಾರನೆಯ ದಿನ ದರ ಇಳಿದದ್ದರಿಂದ ಉಂಟಾದ ಅಂತರದ ರಿಫಂಡು ಕೊಡಲಾರದಾಗಿ ತೋರಿಡಿಯಿಂದ ಹೇಳಿದರು. ಹಾಗೆಯೇ ೧೨೦೦ಕ್ಕೆ ಮಿಕ್ಕಿ ಕೊಳ್ಳುವವರಿಗೆ ರೂ ೩-೧೫ ಇರುತ್ತಿದ್ದ ದರವನ್ನು ರದ್ದು ಮಾಡಿ ಹೋದರು. ಸೊಸ್ಯಾಟಿಯವರು ಇಲ್ಲಿ ದಿನಾ ೧-೨ ದೋಣಿ ಉಪ್ಪು ತರಿಸುವ ವ್ಯವಸ್ಥೆ ಮಾಡಿದ್ದಾರೆ. ಆದರಿಂದ ಜನರಿಗೆ ಉಪ್ಪಿನ ತೊಂದರೆಯಾಗುವದಿಲ್ಲ ಇತ್ಯಾದಿ.

[ಒಬ್ಬರು ಕೊಟ್ಟ ಸಂಕೇತ ಮೇಲೆ ಪ್ರಕಟವಾಗಿದೆ. ಈ ಕುರಿತು ಸಾಣಿಕಟ್ಟೆಯ ಸೊಸ್ಯಾಟಿಯ ಹಕೀಕತವನ್ನು ಪ್ರಕಟಿಸಿ, ಈ ವಾದದಿಂದ ಉಂಟಾದ ಪ್ರಶ್ನೆಯನ್ನು ಸಾರ್ವಜನಿಕ ಹಿತಕ್ಕಾಗಿ ನಾವು ಚರ್ಚಿಸುವವರಿದ್ದೇವೆ. ಕಾರಣ, ಸೊಸ್ಯಾಟಿಯ ಚಾಲಕರು ಸತ್ಯ ಸ್ಥಿತಿಯನ್ನು ತಿಳಿಸಬೇಕಾಗಿ ವಿನಂತಿಯಿದೆ. ಮುಂದಿನ ವಾರದ ತನಕ ಸೊಸ್ಯಾಟಿಯವರು ತಮ್ಮ ಕಡೆ ಹಕೀಕತನ್ನು ತಿಳಿಸದಿದ್ದರೆ ಒಬ್ಬರು ಕೊಟ್ಟ ಮಾಹಿತಿಯು ಪ್ರಮಾಣವೆಂದೆಣಿಸಿ, ಮುಂದಿನ ಚರ್ಚೆ ನಡಿಸಲಾಗುವದು. ಸಂಪಾದಕ]

ಹೊನ್ನಾವರ— ರಾ| ವಾಸುದೇವ ಬಾಬುರಾವ ಕಾಮತ ಇವರು ತಿಳಿಸುವದೇನಂದರೆ — ಹೊನ್ನಾವರ ಸದರಿನಲ್ಲಿ "ಗಾಂಧಿ ಕೋಪಿ"ಯ ವಿಷಯ ಬಂದು ಸುದ್ದಿ ಪ್ರಕಟವಾಗಿದೆ. "ಗಾಂಧಿ ಕೋಪಿ"ಯನ್ನು ಮಾಡುವಾದಾಗ, ಬಂದ ಕಾರಣದಿಂದ ಚವತಿ ಹಬ್ಬದಲ್ಲಿ ಉಪಯೋಗಿಸಿದರೆಂದು ಬರೆದಿದೆ. ಈ ಕೋಪಿಯು ಇಲ್ಲಿ ಬಂದದ್ದು ದೀಪಾವಳಿ ಹಬ್ಬದ ಸಮಯ. ಆದರಿಂದ ಚವತಿ ಹಬ್ಬದಲ್ಲಿ ಉಪಯೋಗಿಸುವದು ಸಾಧ್ಯವಿದ್ದಿಲ್ಲ. ಚವತಿ ಹಬ್ಬದಲ್ಲಿ ಮಾಡಲಾದ ದಾರದ ಮನೆಯಲ್ಲಿ ಖದೀ ಕೋಪಿಯ "ಮಾಯೆಬಾರು" ಆಗಿತ್ತು. ಹಬ್ಬದ ಮೇಲಿಂದ "ಗಾಂಧಿ ಬಂದೂಕು"ವು ಗ್ರಾಹಕರಿಗೆ ಪ್ರಕಟವಾದದ್ದರ ಬೇಕು.

ಜುಗಾರ ಬಿಟ್ಟಿನಲ್ಲಿ ಹುಟ್ಟಿದ ದಂಡದ ರಕಮಿನಲ್ಲಿ ೪ನೇ ೧ ಪಾಲು ಹಣವು ಪೋಲೀಸರಿಗೆ ಸಿಗುವದು. ಜುಗಾರ ಅಡ್ಡೆಯಲ್ಲಿ ಸಿಕ್ಕಿದ ಅರ್ಧ ರಕಮು ಪೋಲೀಸರಿಗೆ ಸಿಗುವದು. ಹೀಗೆ ಪೋಲೀಸರಿಗೆ ರೂ. ೭೭ ಸಿಕ್ಕಿದೆ.

ಅಂಕೋಲಾ— ಚಳಿ ಕಡಿಮೆ. ಊರಲ್ಲಿ ಜ್ವರಾದಿ ಬೇನೆಗಳು ಕಾಣ್ಣುವದಿಲ್ಲ. ಕಾರವಾರದಿಂದ ಪ್ಲೇಗ ಪೀಡಿತರಾಗಿ ಇಲ್ಲಿಯ ರಹಿವಾಸಿಗಳಿಬ್ಬರು ಇತ್ತ ಬಂದರು. ಒಬ್ಬಳು ಶುಕ್ರವಾರ ರಾತ್ರಿ ತೀರಿಕೊಂಡಳು. ಜನರಿಗೆ ಸಣ್ಣ ಗಾಬರಿಯಾಗಿದೆ. ರಾ| ನಾಗಪ್ಪಾ ವಿಠೋಬ ಶೆಟ್ಟಿ ಕಾಂತ್ರಿ ಇವರ ಅಂಗಡಿಯಲ್ಲಿ ಬಂದು ಇಲಿ ಸತ್ತುಬಿತ್ತು. ಅದಕ್ಕೆ ತಾಗಿದ ಇನ್ನೊಂದು ಅಂಗಡಿಯಲ್ಲಿಯೂ ಇನ್ನೊಂದು ಇಲ್ಲಿಯು ಸತ್ತು ಬಿತ್ತು. ಎರಡೂ ಇಲಿಗಳು ಕಾರವಾರಕ್ಕೆ ಕಳಿಸಲಾಗಿದೆ. ಕಾರವಾರದಲ್ಲಿ ಮಾಮೂಲ ಪ್ರಮಾಣದಾಗಿ ಹೇಳಿದ ಬೆಲ್ಲವು ಇಲ್ಲಿ ವಿಕ್ರಿಗೆ ಬಂದಿರುವದಾಗಿಯೂ ಬಂದು ಸುದ್ದಿ ಇದೆ. ಪೋಲೀಸರು ತಪಾಸ ಮಾಡತಕ್ಕ ವಿಷಯ. ಪಶ್ಚಿಮಕರು ದುರಾಶೆಗೆ ಬಲಿಬಿದ್ದು ಗ್ರಾಹಕರ ಟಕ್ಕೆ ಕಾರಣರಾಗಬಾರದು. ಕಾರವಾರ-ಬೆಳಗಾಂವ ಕಡೆಯಿಂದ ಮೋಟಾರುಗಳು ಇನ್ನೂ ಓಡಾಡುತ್ತಿವೆ. ಅದರಿಂದ ಪ್ಲೇಗು ಇಲ್ಲಿ ಹಬ್ಬಬಹುದು. ಅದರಿಂದ ಪೋಲೀಸರು ಮೋಟಾರದೊಳಗಿನ ಜನರನ್ನೂ, ಸಾಮಾನುಗಳನ್ನೂ ತಪಾಸ ಮಾಡಿ ಊರೊಳಗೆ ಬಿಡಬೇಕು. ಊರಲ್ಲಿ ಮೈಲಿ ಉಪದ್ರವವೂ ಇದೆ.

ಕುಮಟೆಯಿಂದ ಮೋಟಾರು ಇತ್ತ ಕಡೆಗೆ ಬರುವಾಗ ಶಿರೂರ ಮಾರ್ಗದ ಮೇಲೆ ಬೆಳಸೆಯ ಒಬ್ಬ ಹುಡುಗನಿಗೆ ಮೋಟಾರು ತಾಗಿ, ಘಾಯವಾಯಿತು. ಇಲ್ಲಿಯ ಆಸ್ಪತ್ರಿಯಲ್ಲಿ ಚಿಕಿತ್ಸೆಯಾಗುತ್ತಿದೆ. ಮೋಟಾರಿನವರು ಇಷ್ಟು ಗಾಬರಿ ಯಾಕೆ ಮಾಡುತ್ತಾರೆ?

ಸರಕಾರದಿಂದ [ಬೇಸಾಯ ಪ್ರದರ್ಶನಗಳು ಪ್ರಾಂತದ ಹೊಳಲ್ಪಡುತ್ತಿವೆ. ಪ್ರದರ್ಶನಗಳ ಖರ್ಚು ಜನರಿಂದ ಎತ್ತುವಳಿ ಮಾಡಲ್ಪಡುತ್ತದೆ. ಪ್ರದರ್ಶನಕ್ಕೆ ಖರ್ಚು ಮಾಡುವದಕ್ಕಿಂತ ತಾಲೂಕುಗಳಲ್ಲಿ ಬಂಜರು ಬಿದ್ದ ಭೂಮಿಗಳನ್ನು ಸಾಗುವಳಿ ಮಾಡಲು ಈ ಖರ್ಚು ಮಾಡುವದು ಲೇಸು.

ಕೊರೆಂಟಿನ್ ಕಟ್ಟುವ ಕೆಲಸ ನಡೆದಿದೆ. ಬೇಗನೆ ಈ ಕೆಲಸ ಮುಗಿದು ಕೊರೆಂಟಿನ್ ಕುರುಮುಖರೆ ಒಳಿತು.

ಕಾರವಾರಕ್ಕೆ ಸಮುದ್ರ ದಂಡೆಯ ಮೇಲಿಂದ ಹೋಗುವ ರಸ್ತೆಯ ಮೇಲೆ ಕೇಣಿ ಎಂಬಲ್ಲಿ ಬಂದು ಸಂಕವಿದೆ. ಆ ಸಂಕವು ಬಹು ಇಕ್ಕಟ್ಟಿನದು. ಆ ಸಂಕದ ಜೀರ್ಣೋದ್ಧಾರ ಕೆಲಸವು ಲೋಕಲ್ ಬೋರ್ಡಿನ ಕಡೆಯಿಂದ ನಡೆದಿದೆ. ಅದನ್ನು ಸ್ವಲ್ಪ ವಿಸ್ತರಿಸಿ, ಬಂಡಿ ಹೋಗುವಷ್ಟು ಅಗಲವಾಗಿಯೂ, ಭದ್ರವಾಗಿಯೂ ಕಟ್ಟಿಸಿದ್ದರೆ, ಬೇಸಾಯಗಾರರಿಗೆ ಅನುಕೂಲವಾಗುತ್ತಿತ್ತು. ಸಂಕದ ದಡೆಗಿರುವ ೭-೮ ಸಾವಿರ ರೂಪಾಯಿ ಕೀರ್ದಾಯ ಭೂಮಿಗೆ ಗೊಬ್ಬರ ಪೂರೈಸಲು ಅನುಕೂಲವಾಗುತ್ತದೆ.

ಗೈರಹಾಜರಿಯಿಂದ ನಾಲಾಯಕ ಆದ ಇಲ್ಲಿಯ ಲೋಕಲ್ ಬೋರ್ಡ ಮೆಂಬರ ರಾ| ರಾಮರಾವ ನೀಲಕಂಠ ನಾಡಕರ್ಣಿ ಇವರ ಸ್ಥಳದಲ್ಲಿ ಬೈ-ಇಲೆಕ್ಷನ್ ಮಾಡುವ ಕುರಿತು ನೋಟೀಸುಗಳು ಹೊರಟಿವೆ. ತಾ, ೧೦-೪-೩೦ಗೆ ಚುನಾವಣೆ ನಡೆಯುವದು.

ಇಲ್ಲಿಯ ವಯೋವೃದ್ಧ ಜಮೀನದಾರರಾದ ರಾ| ಶೀಪಗಿರಿರಾವ ನಾಡಕರ್ಣಿಯವರು ತೀರಿಕೊಂಡರು, ಇವರು ಶ್ರೀ ಶಾಂತಾದುರ್ಗಾ ಹಾಗು ವೆಂಕಟ್ರಮಣ ದೇವಸ್ಥಾನಗಳ ಮೊಕ್ತೇಸರರಿದ್ದರು.

ರಾ| ಕಟ್ಟೆಯವರು "ರೇಡಿಯೋ" ಯಂತ್ರ ತಂದಿದ್ದಾರೆ, ಆವಾಜದ ತಯಾರಿ ನಡೆದಿದೆ, ವಿಲಾಸಿಗಳಿಗೆ ಬಂದು ದೊಡ್ಡ ಅನುಕೂಲತೆಯಾದೀತು,

ವೃತ್ತಸಾರ.

— ಗುಂಟೂರಿನಲ್ಲಿ ಸೈಮನ್ ಕಮಿಟಿ ಮುಟ್ಟಿದಾಗ ಎಲ್ಲಿ ಕಡೆಯಲ್ಲಿಯೂ ಕಪ್ಪು [ಪತಾಕೆಗಳು ಕಾಣುತ್ತಿದ್ದವು; "ಸೈಮನ್ ಸಾಹೇಬರೇ, ಹಿಂದಿರುಗಿರಿ," ಎಂಬ ಶಬ್ದಗಳು ಎಲ್ಲೆಲ್ಲಿ ಕಾಣುತ್ತಿದ್ದವು.

— ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಬಂದು ಲೇಖ ಬರೆದು, ತಾವು ಮಾರ್ಚ ೧೭ ನೇ ತಾರೀಖಿಗೆ ಸಂಯಾಬಹುದೆಂಬ ಬಂದು ಭವಿಷ್ಯವನ್ನು ಚರ್ಚಿಸಿದ್ದಾರೆ. ಭವಿಷ್ಯವು ಸುಳ್ಳಾಗಲಿ.

— ವಿಜಾಪುರ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಮುಂದಾಗಿ ಸಭಾಸದರ ಆಲೋಚನೆ ಪಡೆಯದೆ, ಸೈಮನ್ ಕಮಿಟಿಕ್ಕೆ ಮ್ಯುನಿಸಿಪಾಲಿಟಿಯ ಹೆಸರಿನಿಂದ ಸ್ವಾಗತವನ್ನಿತ್ತರಂತೆ! ಅದರಿಂದ ಸಭಾಸದರು ಸಂತಪ್ತರಾಗಿದ್ದಾರೆ.

— ಸೈಮನ್ ಕಮಿಟಿವು ಬೇರೆಯಾದಾ ಪಟ್ಟಣಕ್ಕೆ ಗುರುವಾರ ಮಧ್ಯಾನ್ಹ ಮುಟ್ಟಿತು. ಕೂಡಲೆ, ಅಲ್ಲಿಯ ಮ್ಯುನಿಸಿಪಾಲಿಟಿಯ ಪ ದೆಯು ಒಂದಾಗಿ, ಮ್ಯುನಿಸಿಪಾಲಿಟಿಯವರು ಕೈಕೊಂಡ ಅವಿಶ್ವಾಸದರ್ಶಕ ಠರಾವನ್ನು ಸೈಮನ್ ಸಾಹೇಬರಿಗೆ ಒಪ್ಪಿಸಿದನು.

— ನಾಭಾದ ಮಹಾರಾಜರು ರಾಜದ್ರೋಹ ಚಳವಳಿಯಲ್ಲಿ ಸೇರಿರುತ್ತಾರೆಂಬ ಸಂಶಯದ ಮೇಲೆ ಅವರ ಮಹಾರಾಜಾಧಿಕಾರವನ್ನು ಹಿಂದುಸ್ಥಾನ ಸರಕಾರವು ರದ್ದು ಪಡಿಸಿ

ಅವರಿಗೆ ಭಕ್ಕಸೆ ಸರೆಹಿಡಿದು. ಐ.ದ್ಯಾಸ ಪ್ರಾಂತದ ಪ್ರೀ ಪ್ಯಾಕೆಸಲ್ ಗ್ರಾಮದಲ್ಲಿ ಸರೆ ಇಟ್ಟಿದ್ದಾರೆ ಮಹಾರಾಜರು ಮಿ| ಜೋನ್ಸಿಮನ್‌ರವರಿಗೆ ತಂತಿ ಬಿಟ್ಟು, ತಾವು ಸ್ವಕ್ಷೇತ್ರದಿರುವಗಾಗಿ ತಿಳಿಸಿದ್ದಾರೆ ದೀಕ್ಷಿತರ ಮನಸ್ಸೇ ಹೀಗೆ!! ಇದರೆ, ಕಾಯಿದೆಯಂತೆ ವಿಚಾರ ಮಾಡದೆ, ಮಹಾರಾಜರಂಥವರಿಗೆ ಒಳೇ ಸಂಶಯವಿರುತ್ತದೆಂಬ ವಿಧಾನ ಮಾಡಿ, ಭಕ್ಕಸೆ ಸರೆಹಿಡಿಯುವದು ಬ್ರಿಟಿಶ ರಾಜ್ಯಕ್ಕೆ ಭೂಷಣವೇನು?

— ಬಂದರಿನ ಹುಕೋಬಜಾರಿಯವರು, ವಿ ಸ್ಕರಳ ಗಂಡ ಕೆಂಪದಾಗುವದು ನಿಶ್ಚಿತ!! ವ್ಯಯಕ್ತವು ನಾಶ ಕ್ಷೇತ್ರದಲ್ಲಾಗುವಂತೆ! ಕರವೀರ ಮಠದ ಶ್ರೀ ಮಹಾಭಾಗ್ಯ ಶಂಕರಕೋಟಿ ಸ್ವಾಮಿಗಳ ಸನ್ನಿಧಿಯಲ್ಲಿ ಪ್ರಾಯಶ್ಚಿತ್ತ ನಡೆಯುವದು. ಹುಕೋಬಜಾರಿಯವರು ಈಗ ಬೆಂಗಳೂರಿನಲ್ಲಿದ್ದಾರೆ, ಹಿಡೋದೆಯಲ್ಲಿ ಮಾಡುವದು ಸಮಾರಂಭವು ನಡೆಯುವದು! ಮಾಡುವರಾಗಿ ಮಿಲ್ಲಾಳ ಜೂತೆಗೆ ಕೆಲ ಕಾಲ ವಿಚಾರಗಳನ್ನು ಸಂಭಾವಿಸಿ, ಆ ಬಳಿಕ ಲೋಕಕಾರ್ಯದಲ್ಲಿ ಸೇರುವರು ಮಾಡುವದಾಗ ಬ ಮಾ ಇತೆ ಸೇರ್ಬದಿಲ್ಲ.

— ಬಾಸೋರ್ಕೆರದಲ್ಲಿ ಆಯಿದೆ ಥಂಡದ ಪ್ರಮಾರ್ಕದವರು ಭಾರದಿಂದ ನಡೆದಿದೆ ಜಿಲ್ಹಾ ಬೋರ್ಡ ಈ ಕಾ. ವರ್ಷಕ್ಕೆ ೫೦೦ ರೂಪಾಯಿಗಳನ್ನು ಕೊಡಬೇಕಾಗಿ ಸಭಾಸದರೆಲ್ಲರು ಸೂಚನೆ ತರಲಾರದಿದ್ದಾರೆ.

— ಮ್ಯಾಕಮನ್ ಕೋರ್ಟ 'ಬಿಸಿಫ್ಯಾಶಿಯಡು ಬಹಿಷ್ಕಾರ ನಿರ್ಣಯದ ಕಾರಣದ ಬಹಿರಂಗ ಭಾಷಣಗಳನ್ನು ಸಹ ವಿಲಾಯತಿಯೊಳಗಿನ ವರ್ತಮಾನಪತ್ರಗಳು ಪ್ರಕಟಿಸಲೊಪ್ಪುವದಿಲ್ಲ ದೇಶದ ಅಭಿಮಾನ ನೋಡಿರಿ!!

— ಇನ್ಸಕೋರ್ ಸಿಕೀಲ ಏಡಿ ಕ್ಷೇ ಮಹಾಸಭೆಯವರಿಗೆ 'ಎಸ್ಟ್ಯಾಕೇಟು' ಪರೀಕ್ಷೆಗೆ ಕೂಡ್ರಲು ಒರ ವರ್ಷದ ನಿ ನ ಇಬರಿಯ ಹ್ಯಾಕೆಟರ್, ಹ್ಯಾಕೆಟರ್ ವಕೀಲರಾದ ರಾ| ಪ್ಪ. ಬಿ 'ಕಾರ್ಯಕಾರಿಣಿಗೆ ತಿಳಿಸಿದೆ.

— ಬಮಾಕಿ ಎಣ್ಣೆ ಕಂಪನಿಗಳೊಳಗಿನ ಮೋಚಾಟವು ಅಂತ್ಯವಾಯಿತೆಂದು ನ್ಯೂಯೋರ್ಕ ಪಟ್ಟಣದ "ಜೆರ್ನಲ್ ಟ್ರಿಬ್ಯೂನ್ಸ್ ಪತ್ರಿಕೆಯು" ಪ್ರಕಟಿಸಿದೆ, ಸ್ಟಂಡರ್ಡ ಗೆಡಿಯಲ್ ಕಂಪನಿಯವರು ಪ್ರತಿಸ್ಪರ್ಧಿ ಕಂಪನಿಗಳಿಗೆ ಒದಗಿದ ನಷ್ಟವನ್ನು ಭರ್ತಿಮಾಡಿ ಕೊಡ ಹ ವ್ಯದ ಸೇರಿದ್ದಾರಂತೆ.

— ಕಲಕತ್ತದ ಬಿಸ ಮಹ್ಯಾಕದ ಪ್ರಸಿಡೆನ್ಸಿ ಕಾಲೇಜಿನ ೨೦೦ ವಿದ್ಯಾರ್ಥಿಗಳು ಹಾಜರಾಗಿಲ್ಲ. ಅದರಿಂದ ಒಜೊಬ್ಬಿಗೆ ೫-೫ ರೂಪಾಯಿಗಳಂತೆ ದಂಡ ವಿಧಿಸೋಣಾಗಿದೆ ೧೦ ಮಂದಿ ವಿದ್ಯಾರ್ಥಿಗಳ ವೃತ್ತಿಯು ರದ್ದು ಮಾಡೋಣಾಗಿದೆ.

- ವಿಜಾಪುರ ಜಿಲ್ಹೆಯ ಪತ್ತಿನ ಬೋರ್ಡಿನಲ್ಲಿ ವೀರಶೈವರ ಜಾತಿ ಸಾಕ್ಷ್ಯವು ವಿಚಾರವಾಗಿದೆಂದು "ಕರ್ನಾಟಕ ವೈಭವ" ಹಾಗು "ನವಕರ್ನಾಟಕ" ಪತ್ರಿಕೆಗಳಲ್ಲಿ ನಡೆದ ವಾದ-ವಿವಾದಗಳ ಮೂಲಿಂದ ತಿಳಿಯುತ್ತದೆ. ಸಾ ಲ ಬೋರ್ಡಿನ ಚೆಯರಮನರ ಒಳ ವೀರಶೈವ ಜಾತಿಯ ಒಬ್ಬ ಪಟ್ಟೇದಾರನಿದ್ದನು ಪ್ರಿಯನಿಗೆ ಒಂದು ಕಾಲವು ಜನ ವರಸ್ತರ ತ್ವದೆ. ಈ ಹಿಂದೆ ಈ ಮಹಾಶಯರು ಎಂದೂ ಶಿಕ್ಷಕ ಕೆಲಸ ಮಾಡಿದ್ದಿಲ್ಲವಂತೆ. ವೀರಶೈವ ಜಾತಿ ಕೆಲವರು ಗ್ರಾಮದ ವೀರಶೈವ ಶಿಕ್ಷಕರು ೩-೪ ತಿಂಗಳ ಹಸ ಶಿಕ್ಷಕರ ಸಂಬಳವನ್ನು ಅವರವರಿಗೆ ಮುಟ್ಟಿಸದೆ, ಒಳಕೆ ನಾಡಿಕೊಂಡ ಬಗ್ಗೆ ಎಚ್ಚರಿಕೆ ಕೊಟ್ಟು, ಈ ಪ್ರಕರಣ ವು ಒಟ್ಟಿ ಹೋಗಾಗಿದೆಯಂತೆ ಜಾತಿಭೇದವೂ, ಪಕ್ಷಪಾತವೂ ಹೀಗೆ ನಡೆದರೆ, ಸಾರ್ವಜನಿಕ ಕಾರ್ಯವು ಸುಸೂತ್ರವಾಗಿ ಸಾಗುವದೆಂತು?

— ವಿಜಾಪುರದಲ್ಲಿ ಬೆಳೆಯಿಲ್ಲೆಂದು ಬೇಸಾಯಗಾರರು ಗೋಳು. ಸರಕಾರ ಆಣೆವಾರಿ ಮಾತ್ರ ಬಹು ಚೋಕ್ಕವಾಗಿ ನಡೆದಿದೆ ಮನಗೋಳಿಯಲ್ಲಿ ಮಂಡರು ೮ ಆಣೆ ಎಂತ ಆಣೆವಾರಿ ಮಾಡಿದ್ದಾರೆ; ಸರಕಾರ ಆಣೆವಾರಿ ೧೩ ಆಣೆ ಎಂದ, ೩ ಆಣೆ ಸಹ ಬೆಳೆಯಿಲ್ಲವೆಂತು ಜನರ ಗೋಳು!!

— ಮಧ್ಯಪ್ರಾಂತ ಕಾಯಿದೆ ಕೌನ್ಸಿಲಿನ ಸ್ವರಾಜ್ಯ ಪಕ್ಷದ ಸಭಾಸದರು, ಸೋಮವಾರಕ್ಕೆ ನಾಮದಾರ ಗವ್ಹರ್ನರರು ಭಾಷಣ ಮಾಡುವಾಗ ಸಭಾಮಂದಿರದೊಳಗಿಂದ ಎದ್ದು ನಡೆದರು. ಜಮಾ-ಖರ್ಚಿನ ಪತ್ರಿಕೆಯು ಕಾಲಕ್ಕೆ ಚರ್ಚೆ ಮಾತ್ರ ಮಾಡಬೇಕಾಗಿಯೂ, ಹೊಸ ತೆರಿಗೆಗಳನ್ನು ಆಕರಿಸಲು ವಿರೋಧಿಸಬೇಕಾಗಿಯೂ ಸ್ವರಾಜ್ಯ ಪಕ್ಷದವರ ತೀರ್ಮಾನಗಳಾಗಿವೆ.

— ಅಮ್ಮಿನಭಾವಿಯ ರಾಮಸಾಹೇಬ ದೇಸಾಯಿಯವರ ಮೇಲೆ ಫೌಜದಾರಿಯ ವಿ| ಸುಮಂತರಾವರು ಮಾನನಷ್ಟದ ಫಿರ್ಯಾದನ್ನು ಮಾಡಿದ್ದಾರೆ, ರಾವಸಾಹೇಬ ದೇಸಾಯಿಯವರು ಮೆಜಿಸ್ಟ್ರೇಟರ ಬಳಿ ಕಳವಿನ ಸುಳ್ಳು ಆರೋಪ ಮಾಡಿ ಮಾನನಷ್ಟ ಮಾಡಿದರೆಂತು ಸುಮಂತರ ಆರೋಪ, ಹುಬ್ಬಳ್ಳಿಯ ಮೆಜಿಸ್ಟ್ರೇಟರಾದ ಮಿ| ಕೋಣ್ಣೂರರವರು ರಾವಸಾಹೇಬರ ಮೇಲೆ ವ್ಯಾರಂಟ ಹೊರಡಿಸಿದ್ದಾರೆ.

೧೯೨೩ನೇ ಇಸ್ವಿಯಲ್ಲಿ ೪ ವರುಷಕ್ಕಾಗಿ "ಬೆಂಗಾಲ್ ಸ್ಟ್ಯಾಂಪಿನ ದರವು ಮಿಸೋಣಾಯಿತು." ೪ ವರ್ಷಗಳು ಸಾಗಿದ ಮೇಲೆ ಪುನಃ ಒಂದೊಂದು ವರುಷಕ್ಕೆಂದು ಎರಡು ವರ್ಷ ಅದೇ ಕಾನೂನು ಮುಂದರಿಸಲಾಯಿತು. ಈ ವರುಷ ಈ ಕಾನೂನು ಕಾಯಂ ಮಾಡಬೇಕೆಂದು ಸರಕಾರದ ಸೂಚನೆ ಇತ್ತು. ಧೂರ್ತತನದಿಂದಲೇ ಈ ಸೂಚನೆಯಾಗಿತ್ತು. ಕಾಯಂ ಎಂದು ಹೇಳಿದರೆ, ೧ ವರ್ಷಕ್ಕಾದರೂ ಮಂಜೂರಾಗುವದು; ಮೇಲೆ ಲಾಲಾಸು ಪಕ್ಷದ ಸಭಾಸದರಿಗೆ ಲೋಕೋಪಕಾರ ಮಾಡಿದ ಪುಣ್ಯವೂ ಸಿಗುವದು; ಎಂಬ ಆಲೋಚನೆಯಿತ್ತೆಂಬಂತೆ ತೋರುತ್ತದೆ. ಅದರಂತೆ ಕೆಲ ಸಭಾಸದರು ಸರಕಾರದ ಬಂದರಗಾರಿಕೆಯನ್ನು ನಿಷೇಧಿಸಿ ೧ ವರ್ಷದ ಪ್ರೋರ್ಕವಾದರೆ, ತಾವು ಈ ಕಾನೂನನ್ನು ಸುಪುರ್ದಿಸುತ್ತೇವಾಗಿ ಹೇಳಿದರು. ಸರಕಾರ 'ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ॥' ಎಂಬ ವಿಚಾರ ಮಾಡಿ ೧ ವರುಷವಾದರೆ, ೧ ವರುಷಕ್ಕೆ ಈ ಕಾನೂನಿನ ಆಯುಷ್ಯವನ್ನು ಶುಕ್ರವಾರಕ್ಕೆ 'ಹೆಚ್ಚಿಸಿಕೊಂಡಿತು. ಈ ವರುಷದ ಕೆಲಸವಾಯಿತು! ಮುಂದಕ್ಕೆ ಪುನಃ ೧ ವರುಷದ ಆಯುಷ್ಯ ಕೊಂಡದಾಯಿತು!! ಸಭಾಸದರೆಂತು ಬಹು ಯೋಗ್ಯ ಪಕ್ಷ್ಯ ಗ್ಯಜಸ್ಥರಿದ್ದಾರೆ. ತೆರುವ ಪ್ರಸಂಗವು ಪರಸ್ಪರ ಪ್ರಜೆಗಳ ಮೇಲೆ ಬೀಳುವಾಗ ವೇಲೆ ಸಭ್ಯತೆಯು ದೂಷ್ಮ ಕಿರಾಬು ಸರಕಾರದಿಂದ ಸಿಗುವಾಗ, ಅವರಾದರೂ ಹಿಂದು-ಮುಂದು ಯಾಕೆ ನೋಡಬೇಕು?



ಏಜಂಟರು ಬೇಕು! ಏಜಂಟರು ಬೇಕು!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

कारवारांत मुंबई!!!

अर्थात

आमचा टोप्यांचा जंगी कारखाना!

आमच्या कारखान्यांत मलमल, बनात, फर, वेलीच्या, जरीच्या वगैरे हरएक तऱ्हेच्या साधा अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनचीं रंगीं-बेरंगीं चादरें, फॅशनेबल बाथ टॉवेल, चौक, लहान--मोठे पंचे, सीड्याट, चौलपाट, शर्टिंग--कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीपः—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शणवि, फोवकार अँड सन्स.

पोस्ट— हंकोरे (कारवार.

ಮಹಾತ್ಮರ ಆತ್ಮಚರಿತ್ರೆ.

(೩೯) ಪಾರಮಾರ್ಥಿಕ ಸಂಕಟ.

ಭಾರತೀಯರ ಜೊತೆಗೆ ಸಂಗ್ರಾಮದಲ್ಲಿ ಸೇವೆ ಮಾಡಲು ನಾನು ಮುಂದಾದ ಸುದ್ದಿಯು ದಕ್ಷಿಣ ಆಫ್ರಿಕೆಗೆ ಮುಟ್ಟಿದೊಡನೆ ನನಗೆ ಎರಡು ತಂತಿಗಳು ಬಂದು ತಲ್ಪಿದವು. ತಂತಿ ಕಳಿಸಿದವರಲ್ಲೊಬ್ಬರು ಮಿ| ಪೋಲಕರವರು. ನಾನು ಅಹಿಂಸೆಯ ಪ್ರವರ್ತಕನಾಗಿ ಈ ಕೃತ್ಯವನ್ನು ಕೈಕೊಳ್ಳುವ ಬಗೆ ಹೇಗೆಂದು ಅವರ ಪ್ರಶ್ನೆ.

ಈ ಆಕ್ಷೇಪವು ಕೆಲಮಟ್ಟಿಗೆ ನನಗೆ ಮುಂಚೆಯೇ ಹೊಳೆದಿತ್ತು. ನನ್ನ "ಹಿಂದ ಸ್ವರಾಜ್ಯ" ಪುಸ್ತಕದಲ್ಲಿ ಈ ವಿಷಯವನ್ನು ನಾನು ಚರ್ಚಿಸಿದ್ದೆನು. ದಕ್ಷಿಣ ಆಫ್ರಿಕೆಯಲ್ಲಿ ಗೆಳೆಯರ ಬಳಿ ದಿನಾಲು ಈ ಪ್ರಶ್ನೆಯನ್ನು ನಾನು ಚರ್ಚಿಸುತ್ತಿದ್ದೆನು. ಯುದ್ಧವು ಅನೀತಿಯುದೆಂದು ಎಲ್ಲರೂ ಒಪ್ಪುತ್ತಿದ್ದರು. ಸ್ವತಃ ನನ್ನ ಮೇಲೆ ಹಾರಿಬಂದ ಶತ್ರು ಪಕ್ಷಿಯ ಮೇಲೆ ಕೈ ಮಾಡಲು ನಾನು ತಯಾರಿಲ್ಲದಾಗ ರಣಸಂಗ್ರಾಮದಲ್ಲಿ ಪ್ರವೇಶಿಸಲು ನನಗೆ ಯಾವ ಕಾರಣವಿಲ್ಲ ಮತ್ತೂ ಒಂದು ಮಾತಿದೆ. ರಣಸಂಗ್ರಾಮದಲ್ಲಿ ಸೇರಿದ ವಿದ್ಯಾರ್ಥಿಗಳ ನ್ಯಾಯಾನ್ಯಾಯದ ವಿಷಯವೇ ನನಗೆ ತಿಳಿದಿದ್ದಿಲ್ಲ. ಬೋರ ಯುದ್ಧದಲ್ಲಿ ಈ ರೀತಿ ನಾನು ಸೇವೆ ಮಾಡಿದ್ದು, ಅದನ್ನು ಗೆಳೆಯರು ಅರಿತಿದ್ದರು. ಅದರ ತರುವಾಯ ನನ್ನ ಅಭಿಪ್ರಾಯಗಳು ಬದಲಾಗಿರಬಹುದು. ಅವರ ಗ್ರಹಿಕೆಯಾಗಿತ್ತು.

ಈ ಸಮಯದ ಬೋರ ಯುದ್ಧದೊಳಗಿನಂತೆ ನನ್ನ ಮನಸ್ಸಿಗೆ ಹಿತವಾಗಿ, ನಾನು ಈ ಯುದ್ಧದಲ್ಲಿ ಸೇರಿಕೊಂಡಿದ್ದೆ. ಅಹಿಂಸಾವಾದಿಗಳು ರಣಸಂಗ್ರಾಮದಲ್ಲಿ ಸೇರತಕ್ಕದ್ದು ತಕ್ಕ ಸಂಗತಿಯಲ್ಲೆಂದು ನನಗೆ ಸ್ಪಷ್ಟವಾಗಿ ತಿಳಿದಿತ್ತು. ಆದರೆ, ಆ ಕಾಲಕ್ಕೆ ನಾನು ಮಾಡಬೇಕಾದ ಕರ್ತವ್ಯವು ನನಗೆ ತಿಳಿದಿರಲಿಲ್ಲ. ಸತ್ಯಸಂಧನು ಕೆಲವು ಬಾರಿ ಕತ್ತಲೆಯಲ್ಲಿಯೇ ಚಲಿಸಬೇಕಾಗುತ್ತದೆ.

ಅಹಿಂಸೆಯು ಬಹು ವ್ಯಾಪಕ ತತ್ವವು. ನಾವೆಲ್ಲರೂ ನಿರಾಧಾರಿ ಪಾಮರರು. ನಮ್ಮ ಸುತ್ತು ಮುತ್ತು ಹಿಂಸೆಯು ರಣಯಜ್ಞವು ಉರಿಯುತ್ತಿದೆ. 'ಜೀವೋ ಜೀವಸ್ಯ ಜೀವನಂ' ಎಂಬ ವಾಕ್ಯದ ಅರ್ಥವನ್ನು ಆಳವಾಗಿ ನಾನು ವಿಚಾರಿಸಬೇಕು. ತಿಳಿದು ಯಾ ತಿಳಿಯದೆ, ಹಿಂಸೆಯನ್ನು ಆಚರಿಸದ ಹೊರತು, ಮಾನವನು ಒಂದು ಕ್ಷಣವನ್ನೂ ಬಾಳಲಾರನು. ತಿನ್ನುವದು, ಕುಡಿಯುವದು, ತಿರುಗಾಡುವದು ಇವೆಲ್ಲ ಜೀವನದ ವ್ಯಾಪಾರಗಳಾಗಿ ಕೆಲಮಟ್ಟಿಗೆ ಹಿಂಸೆಯನ್ನು ಅವಶ್ಯವಾಗಿ ಆಚರಿಸಬೇಕಾಗಿದೆ. ಸೂಕ್ಷ್ಮ ಕ್ರಿಮಿಗಳನ್ನಾದರೂ ನಷ್ಟಪಡಿಸಲೇಬೇಕಾಗುತ್ತದೆ. ಅದರಿಂದ ಮಾನವನು ದಯಾಭಾವದಿಂದ ಪ್ರೇರಿತನಾಗಿ ಜೀವನದ ವ್ಯಾಪಾರಗಳನ್ನು ನಡಿಸಿದರೆ, ಅತ್ಯಂತ ಸೂಕ್ಷ್ಮ ಕ್ರಿಮಿಗಳ ನಾಶವನ್ನಾದರೂ ಆತನು ಮಿಥ್ಯಾ ಬಯಸದಿದ್ದರೆ, ಅದನ್ನು ಬದುಕಿಸಲು ಪ್ರಯತ್ನ ಮಾಡುತ್ತಿದ್ದರೆ, ಹಿಂಸೆಯ ಜಾಡ್ಯವಾದ ದಬ್ಬಿಯೊಳಗಿಂದ ಪಾರಾಗಲು ಹಗಲಿರುಳು ಪ್ರಯತ್ನಪಡುತ್ತಿದ್ದರೆ, ಅಹಿಂಸಾವಾದಿಯು ತತ್ವಭ್ರಷ್ಟನಾಗಲಾರನು. ಹೀಗೆ ಆತನು ಸಂಯಮಿಯಾಗಿಯೂ, ದಯಾರ್ದ್ರನಾಗಿಯೂ, ಕ್ರಮೇಣ ಅಭಿವೃದ್ಧಿಗೈಯುವನು. ಆದರೆ, ತೋರಿಕೆಯ ಹಿಂಸೆಯಿಂದ ಆತನೆಂದೂ ಮುಕ್ತನಾಗಲಾರನು.

ಮತ್ತೊಂದು ವಿಚಾರವಿದೆ. ಅಹಿಂಸೆಯೆಂದರೆ, ಸಮಸ್ತ ಜೀವಜಂತುಗಳು ಐಕ್ಯಭಾವದಿಂದಿರಬೇಕು. ಒಬ್ಬನು ಪತಿತನಾದರೆ ಅವರ ದೋಷವು ಸಮಸ್ತರಿಗೂ ಬಾಧಿಸುತ್ತದೆ. ಹೀಗೆ ವಿಚಾರ ಮಾಡಿದರೆ, ಮಾನವನು ಹಿಂಸೆಯಿಂದ ಎಂದೆಂದಿಗೂ ಮುಕ್ತನಾಗುವದಿಲ್ಲ. ಸಮಾಜದಲ್ಲಿ ಆತನು ಉಳಕೊಳ್ಳುವ ತನಕ ಹಿಂಸೆಯಲ್ಲಿ ಆತನು ಪಾಲುಗಾರನಿರಲೇಬೇಕು. ಯಾಕೆಂದರೆ ಸಮಾಜದ ಜೀವನ ಸಾಗಬೇಕಾದರೆ, ಹಿಂಸೆಯನ್ನು ಆಚರಿಸಲೇಬೇಕು. ಎರಡು ರಾಷ್ಟ್ರಗಳು ಬಡಿದಾಡುತ್ತಿರುವ ಸಮಯದಲ್ಲಿ ಯುದ್ಧವನ್ನು ನಿಲ್ಲಿಸುವದೇ ಅಹಿಂಸಾವಾದಿಯ ಕರ್ತವ್ಯವು. ಆ ಕರ್ತವ್ಯವನ್ನು ನಡಿಸಲಾಗದಿದ್ದರೆ, ಯುದ್ಧ ಪ್ರವೃತ್ತಿಗೆ ಇದಿರಾಗಲಾಗದಿದ್ದರೆ, ಯುದ್ಧಕ್ಕೆ ಇದಿರಾಗಲು ಅಧಿಕಾರವಿಲ್ಲದಿದ್ದರೆ ಆತನು ಯುದ್ಧದಲ್ಲಿ ಸೇರಿಕೊಳ್ಳಬಹುದು. ಹಾಗು ಯುದ್ಧ ಪ್ರವೃತ್ತಿಯಿಂದ ತನ್ನನ್ನೂ, ರಾಷ್ಟ್ರವನ್ನೂ, ಜಗತ್ತನ್ನೂ ವಿಮೋಚಿಸಲು ಮನಃಪೂರ್ವಕವಾಗಿ ಪ್ರಯತ್ನಪಡಬಹುದು.

ಬ್ರಿಟಿಶ ಸಾಮ್ರಾಜ್ಯದ ಸಹಾಯದಿಂದ ನನ್ನ ದರ್ಜೆಯನ್ನೂ, ದೇಶದ ದರ್ಜೆಯನ್ನೂ ಸುಧಾರಿಸಬಹುದೆಂದು ನನ್ನ ಆಸೆಯು. ವಿಲಾಯತಿಯಲ್ಲಿದ್ದಾಗ ಬ್ರಿಟಿಶ ನೌಕೆಯ ಸಂರಕ್ಷಣೆಯನ್ನು ನಾನು ಪಡಕೊಳ್ಳುತ್ತಿದ್ದೆ. ಹೀಗೆ ಸಶಸ್ತ್ರ ಬಲದ ಆಶ್ರಯದಲ್ಲಿ ನಾನಿದ್ದದರಿಂದ ಬ್ರಿಟಿಶರು ಈ ನೌಕೆಯಿಂದ ಆಚರಿಸಬಹುದಾದ ಅತ್ಯಾಚಾರಗಳಲ್ಲಿ ನಾನು ಪ್ರತ್ಯಕ್ಷ ಸೇರಿದಂತಾಯಿತು. ಸಾಮ್ರಾಜ್ಯದೊಡನೆ ನನ್ನ ಸಂಬಂಧವನ್ನು ಈ ಹಿಂದಿನಂತೆ ಇನ್ನು ಮುಂದೆಯೂ ಇಟ್ಟು ಅದರ ಧ್ವಜದಡಿಯಲ್ಲಿಯೇ ಬಾಳಬೇಕೆಂದು ನಾನು ಬಯಸುತ್ತಿದ್ದರೆ ಮೂರರಲ್ಲೊಂದು ಮಾರ್ಗವನ್ನು ನಾನು ಕೈಕೊಳ್ಳಬೇಕಾಗಿತ್ತು — (೧) ಯುದ್ಧಕ್ಕೆ ನಾನು ವಿರೋಧಿಸುತ್ತೇನೆಂದು ಬಹಿರಂಗವಾಗಿ ಘೋಷಿಸಿ, ಸತ್ಯಾಗ್ರಹ ತತ್ವಗಳಂತೆ ಸ್ವಾಧಾರಣವನ್ನು ತಿದ್ದುವವರೆಗೆ ಸಾಮ್ರಾಜ್ಯವನ್ನು ಬಹಿಷ್ಕರಿಸಬೇಕಾದದ್ದು. (೨) ಅಲ್ಲಿ ಬಿಡಲು ಯೋಗ್ಯವಾದ ಶಾಸನಗಳನ್ನು ಸವಿನಯ ಚಿತ್ತದಿಂದ ಉಲ್ಲಂಘಿಸಿ ಸೆರೆಮನೆಯನ್ನು ಸೇರಬಹುದು. ಅಥವಾ (೩) ಸಾಮ್ರಾಜ್ಯ ಪಕ್ಷಪಾತಿಯಾಗಿ ಯುದ್ಧದಲ್ಲಿ ಸೇರಿ, ಆ ಬಲದಿಂದ ಯುದ್ಧದ ಹಿಂಸೆಗೆ ವಿರೋಧಿಸುವ ಅವಶ್ಯವಾದ ಸಾಮರ್ಥ್ಯವನ್ನೂ, ಯೋಗ್ಯತೆಯನ್ನೂ ಸಂಗ್ರಹಿಸಬಹುದು. (ಯುದ್ಧವನ್ನು ವಿರೋಧಿಸುವ) ಸಾಮರ್ಥ್ಯವಾಗಲಿ ಪಾತ್ರತೆಯಾಗಲಿ ನನ್ನಲ್ಲಿರಲಿಲ್ಲ. ಅದರಿಂದ ಯುದ್ಧದಲ್ಲಿ ಸೇರುವದೊಂದೇ ಉಪಾಯವು ನನ್ನ ಪಾಲಿಗೆ ಉಳಿಯಿತೆಂದು ನಾನು ಭಾವಿಸಿದೆನು.

ಶಸ್ತ್ರಧರ ಯುದ್ಧ ಮಾಡುವ ಸೈನಿಕರಿಗೂ, ಅವರ ಬಲಕ್ಕಾಗಿ ಸೇವೆಗಳನ್ನು ಮಾಡುವ ಸೈನಿಕೇತರರಿಗೂ ಅಹಿಂಸಾವಾದಿಗಳ ದೃಷ್ಟಿಯಿಂದಲೇ ಏನೂ ಅಂತರವಿಲ್ಲ. ದರೋಡೆಗಾರರ ತಂಡಿನಲ್ಲಿ ಸೇವೆ ಮಾಡಲೊಪ್ಪುವವರು ಕೂಲಿಗಾಗಿ ಬರೆಯುತ್ತಾರೆ. ಅವರು ದರೋಡೆ ನಡಿಸುತ್ತಿದ್ದಾಗ ಅವಶ್ಯವಿದ್ದ ಸಾಮಾನುಗಳನ್ನು ಒಯ್ಯುವವರೂ, ಕಾವಲು ಮಾಡುವವರೂ, ಗಾಯಪಟ್ಟಾಗ, ಶುಶ್ರೂಷೆ ಮಾಡುವವರೂ ದರೋಡೆಗಾರರಷ್ಟೇ ಪಾಪಿಷ್ಟರು. ಹಾಗೆಯೇ ಯುದ್ಧದಲ್ಲಿ ಗಾಯಪಟ್ಟವರ ಉಪಚಾರ ಮಾಡುವವರನ್ನು ಯುದ್ಧದ ಪಾಪದೊಳಗಿಂದ ಬಿಡುಗಡೆ ಮಾಡಲು ಬಾರದು.

ಈ ಪ್ರಕಾರ ನನ್ನ ಪಕ್ಷವನ್ನೆಲ್ಲವನ್ನೂ ನಾನು ವಿಚಾರ ಮಾಡಿದ್ದೆನು. ಆ ಕಾಲಕ್ಕೆ ಪೋಲಕರ ತಂತಿಯಿಂದ ಶಂಕೆ ಹುಟ್ಟಿದ್ದಿಲ್ಲ. ತಂತಿ ತಲ್ಪಿದೊಡನೆ ಈ ವಿಚಾರಗಳನ್ನು ಅನೇಕ ಗೆಳೆಯರ ಬಳಿ ನಾನು ಚರ್ಚಿಸಿದೆನು. ಮತ್ತು ಯುದ್ಧದಲ್ಲಿ ಸೇವೆ ಮಾಡುವದು ನನ್ನ ಕರ್ತವ್ಯವೆಂದು ನಿರ್ಧರಿಸಿದೆನು. ಈ ಧೋರಣದಲ್ಲಿ ಈಗಲೂ ನನಗೇನೂ ದೋಷ ಕಾಣುವದಿಲ್ಲ, ನನ್ನ ಕೃತ್ಯದ ಕುರಿತು ನನಗೆ ಪಶ್ಚಾತ್ತಾಪವೂ ಆಗುವದಿಲ್ಲ. ಯಾಕೆಂದರೆ, ಆ ಕಾಲಕ್ಕೆ ಬ್ರಿಟಿಶ ಸಂಬಂಧಕ್ಕೆ ಅನುಕೂಲವಾದ ಅಭಿಪ್ರಾಯಗಳನ್ನೇ ನಾನು ತಳೆದಿದ್ದೆನು.

ನಾನು ಕೈಕೊಂಡ ಧೋರಣವು ಯೋಗ್ಯವಾಗಿತ್ತೆಂದು ಆಗಲೂ ನನ್ನ ಗೆಳೆಯರ ಮೇಲೆಲ್ಲ ಬಿಂಬಿಸಲು ನನ್ನಿಂದಾಗಲಿಲ್ಲ. ಈ ವಿಷಯವು ಬಹು ಸಂಕೀರ್ಣವಿದೆ, ಮತಭೇದಕ್ಕೆ ಆಸ್ಪದವಿದೆ. ಅಹಿಂಸೆಯನ್ನು ಸಮಸ್ತ ವ್ಯಾಪಾರಗಳಲ್ಲಿಯೂ ಅಂತಃಕರಣಪೂರ್ವಕ ಆಚರಿಸಲು ಬಯಸುವ ಅಹಿಂಸಾವಾದಿಗಾಗಿ ನನ್ನ ತರ್ಕವನ್ನು ಅವಶ್ಯರ ಮಟ್ಟಿಗೆ ಸ್ಪಷ್ಟವಾಗಿ ವಿವರಿಸಿದ್ದೇನೆ. ಸತ್ಯಸಂಧರು ಪ್ರಥಾತವನ್ನು ಪಾಲಿಸುವದಕ್ಕಾಗಿ ಯಾವದೇ ಕೃತ್ಯವನ್ನು ಕೈಕೊಳ್ಳಲಾಗದು. ಸತ್ಯಸಂಧನು ಯಾವಾಗಲೂ ತಪ್ಪು ತಿದ್ದಿಕೊಳ್ಳಲು ತಯಾರಿರಬೇಕು. ತಪ್ಪು ತಿಳಿದೊಡನೆ, ಆತನು ನಷ್ಟವನ್ನು ಲೆಕ್ಕಿಸದೆ ಅದನ್ನು ಒಮ್ಮೆಲೇ ಒಪ್ಪಿಕೊಂಡು, ಕೂಡಲೆ ಆ ಬಗ್ಗೆ ಪ್ರಾಯಶ್ಚಿತ್ತವನ್ನು ಕೈಕೊಳ್ಳಬೇಕು.

ಜಾಹೀರ ನೋಟೀಸು.

'ಕಾನಡಾವೃತ್ತ'ದ ಇದೇ ಫೇಬ್ರುವರಿ ತಾ. ೬ನೇ ಸೋಮವಾರ ದಿವಸ ಹೊರಟ ಸಂಚಿಕೆಯಲ್ಲಿ ನಾಡವರ ಜಾತಿ ಸಂಬಂಧದ ವಿಚಾರಗಳ ಕುರಿತು ಹಿರೇಗುತ್ತಿ ರಾ| ನಾಗಪ್ಪಾ ಬೀರಣ ನ್ಯಾಕ ಕರೆಮನೆ ಇವರು ಜಾಹೀರ ಮಾಡಿದ ಸಂಗತಿಗಳು ಅಯೋಗ್ಯ ಮತ್ತು ಕೇವಲ ಸುಳ್ಳು ಸಾಧನೆಯ ಸಂಗತಿಗಳಾಗಿರುತ್ತವೆ. ನಾಡವರ ಜಾತಿಯ ಧರ್ಮ ಸಂಬಂಧದ ವಿಚಾರದ ಸಂಸ್ಥೆಯು ಮೂಲಘಟನೆ ಮತ್ತು ಕ್ರಮ ಅನಾದಿಯಿಂದ ಪರಂಪರಾಗತವಾಗಿ ನಡೆದು ಬಂದದ್ದು, ಅಂದರೆ ಮೂರು ಸೀಮೆಯ ಮಹಾಸಭೆ ಹಿಂದಲ್ಲಿನ ಬೆರೆದಲ್ಲ. ಮಿರ್ಜಾನ-ಅಂಕೋಲಾ-ಚಂದಾವರ ಸೀಮೆ ಗಾಂವಕಾರರು, ಊರ ಗಾಂವಕಾರರು ಹಾಗು ಜಾತಿ ಹತ್ತು ಸಮಸ್ತರು ಈ ಮಹಾ ಸಭೆಗೆ ಸಂಭಾಷದಿದ್ದ, ನಾಡವರ ಸಮಾಜದ ಧರ್ಮಕ್ಕೆ ಸಂಬಂಧಿಸಿದ ಯಾವದೇ ವಿಷಯಗಳ ಕುರಿತು ಅತ್ಯರ್ಥಪತಿಸಲಿಕ್ಕೂ ಮತ್ತು ವಿಚಾರಿಸಲಿಕ್ಕೂ ಇಂಥಾ ಮಹಾಸಭೆಗೆ ಮಾತ್ರ ಪೂರ್ಣ ಅಧಿಕಾರವಿರುತ್ತದೆ. ಹೊರತಾಗಿ ಬೇರೆ ಯಾವದೊಂದು ಸಮಾಜದ ಪ್ರತ್ಯೇಕ ವ್ಯಕ್ತಿಗಾಗಲಿ, ಸಮೂಹಕ್ಕಾಗಲಿ ಏನೊಂದು ಹಕ್ಕು—ಸಂಬಂಧ ಬರಲಾರದೆಂಬುದು ನಾಡವರ ಸಮಾಜದೊಳಗಿನ ಆಬಾಲವೃದ್ಧರೆಲ್ಲರಿಗೂ ಗೊತ್ತಿದ್ದೇ ಇರುತ್ತದೆ. ಮತ್ತು ಸೀಮೆ ಗಾಂವಕಾರರೇ ಮೊದಲಾಗಿ ಊರಗಾಂವಕಾರ ಮುಂತಾದ ಜಾತಿ ಅಧಿಕಾರಿಗಳಿಗೆ ಅವರವರ ಕರ್ತವ್ಯದ ಅಧಿಕಾರಗಳು ಪರಂಪರಾಗತವಾಗಿ ನಡೆದು ಬಂದದ್ದು ಇರುವಾಗ್ಯೂ, ಮತ್ತು ಸೌಮ್ಯನಾಮ ಸಂವತ್ಸರದ ಕಾರ್ತಿಕ ಬಹುಳ ೧೧ ಬುಧವಾರ ಮೂರು ಸೀಮೆ ಗಾಂವಕಾರರ ಗಳ ನಾಡವರ ಸಮಾಜದ ಪ್ರತಿಯೊಂದು ಕುಟುಂಬದ ಯಜಮಾನರು ವ ವ್ಯಕ್ತಿಗಳು ಕೂಡಿ ಜಾತಿ ಧರ್ಮ ಸಂಬಂಧದ ಒಕ್ಕಟ್ಟಿನ ನಿರ್ಣಯದ ಕುರಿತು ಒಮ್ಮನಸ್ಸಿನಿಂದ ಘೋರ ಪ್ರತಿಜ್ಞೆಗಳನ್ನು ಮಾಡಿ ತಮ್ಮೊಳಗೆ ಸ್ವಾಧೀನಪಡಿಸಿಕೊಂಡ ಠರಾವು ಊರ್ಜಿತ ಇರುವಾಗ್ಯೂ, ಇನ್ನು ಸದರಿ ರಾ| ನಾಗಪ್ಪ ನ್ಯಾಕರು ಈ ಠರಾವಿಗೆ ತಮ್ಮ ಶುದ್ಧ ರಾಜಿಯಿಂದ ಸಹಿ ಮಾಡಿ ಒಪ್ಪಿಗೆ ಕೊಟ್ಟಿರುವಾಗ್ಯೂ, ಈಗ ಮಾತ್ರ ಜಾತಿ ನ್ಯಾಯಕ್ಕೆ ಕೇವಲ ವಿರುದ್ಧವಾಗಿ ವೃತ್ತಪತ್ರದಲ್ಲಿ ಪ್ರಕಟಿಸುವಂತೆ ತಿಳಿಸಿದ್ದು ಅವರ ಸ್ವತಃಪ್ರೇ. ಯಾ ಇನ್ನಾರ ಪ್ರೇರಣೆಯೋ ಏನೆಂಬುದು ಮಾತ್ರ ತಿಳಿಯುವ ಹಾಗಾಗಿದೆ. ಹ್ಯಾಗೂ ಇರಲಿ ನಾಡವರ ಸಮಾಜದ ಧರ್ಮ ಸಂಬಂಧ ಸದ್ರಿ ಮಿ| ನಾಗಪ್ಪ ನ್ಯಾಕರು ಪ್ರಕಟಿಸಿ ತಿಳಿಸಿದ್ದು ಆಧಾರ ಶೂನ್ಯವೂ, ಗ್ರಾಹ್ಯವಾಗದ್ದೂ ಇದ್ದಿಂತಹ ಖಂಡಿತವಾಗಿ ಸಾರಬೇಕಾಗಿದೆ.

ತಾರೀಖು ೨೫ ೨—೧೯೨೮ನೇ ಇಸ್ವಿ.

ಗಾಂವಕಾರ ಬೊಮ್ಮಯ್ಯ ಉದ್ದಂಡ ನ್ಯಾಕ

ಹಿರೇಗುತ್ತಿ.

ಮಿರ್ಜಾನ ಮುಂತಾದ ಸೀಮೆಗಳ ಗಾಂವಕಾರ.

ಮುಂಬಯಿ ಕಾಯಿದೆ ಕೌನ್ಸಿಲು.

(೫ ನೇ ಪಾನಿನಿಂದ ಮುಂದರಿಸಿದ್ದು)

...ಬದಲಾಯಿಸುವ ಸ್ಥಿತಿಯಿತ್ತು. ಆದರೊಳಗಿಂದ ಪ್ರಿನ್ಸಿಪಾಲರು ಹಣ ಖರ್ಚು ಮಾಡಿದರು. ಈ ಕಾಲೇಜಿನಲ್ಲಿ ಇಟ್ಟ ಅಮೇರಿಕೆಯ ಗೃಹಸ್ಥರ ೫-೬ ಉಪನ್ಯಾಸಗಳಾದವು. ಈ ಉಪನ್ಯಾಸಗಳನ್ನು ಕೇಳಲು ವಿದ್ಯಾರ್ಥಿಗಳು ಹೋಗಿದ್ದಿಲ್ಲವೆಂಬ ಮಾತು ಸುಳ್ಳು. ಒಬ್ಬ ಉಪನ್ಯಾಸಕರ್ತರಿಗೆ ರೂ. ೫೫೦, ಮತ್ತೊಬ್ಬರಿಗೆ ..., ಹೀಗೆ ೩೦೦ ರೂಪಾಯಿಗಳು ಖರ್ಚಾದವು. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಫೀ ಇಟ್ಟಿದ್ದರು, ಅದು ಅವರು ಕೊಡಲಿಲ್ಲ. ಹಿಂದುಸ್ಥಾನ ಸರಕಾರದ ಠರಾವುಗಳಂತೆ, ಹೀಗಿನ ಫೀ ರಕಮುಗಳನ್ನು ಕಾಲೇಜಿನ ಸಾಮಾನ್ಯ ಉಪಯೋಗಕ್ಕೆ ಉಪಯೋಗಿಸಲು ಪ್ರಿನ್ಸಿಪಾಲರಿಗೆ ಅಧಿಕಾರವಿದೆ; ಈ ನಿಧಿಯೊಳಗಿಂದ ಅಮೇರಿಕೆಯವರಿಗೆ ರೂ. ೩೦೦ ಕೊಡಲ್ಪಟ್ಟುದವು. ವಿದ್ಯಾರ್ಥಿಗಳು ದೂರು ಮಾಡಿಕೊಳ್ಳಬೇಕಾಗಿಯೂ, ಹಾಗೆ ಮಾಡದ್ದರೆ, ವಿದ್ಯಾರ್ಥಿಗಳಿಗೆ ದಂಡ ವಿಧಿಸಲ್ಪಡುತ್ತದಾಗಿ ಪ್ರಸಿದ್ಧ ಸುದ್ದಿಯು ಸುಳ್ಳು ಇರುತ್ತದೆ

* *

ಅಸ್ಪೃಶ್ಯರ ಮೇಲಿನ ಸರಕಾರದ ಪ್ರೀತಿ!

ಕರಾಚಿ ಮ್ಯುನಿಸಿಪಾಲಿಟಿಯ ಸ್ಕೂಲ ಬೋರ್ಡಿನ ಶಾಲೆಗಳಲ್ಲಿ ಅಸ್ಪೃಶ್ಯ ವಿದ್ಯಾರ್ಥಿಗಳನೇಕರು ವಿದ್ಯಾರ್ಜನ ಮಾಡುತ್ತಿದ್ದಾರೆ. ಅವರು ಹರಕು ಓಲ್ಲಿಗಳನ್ನು ಹಚ್ಚಿಕೊಂಡು ಶಾಲೆಗೆ ಬರಲು ಬಹು ನಾಚುತ್ತಾರೆ, ಆದರಿಂದ ಈ ಸ್ಕೂಲ ಬೋರ್ಡಿನವರು ಕೆಲವು ಹಣವನ್ನು ಮಂಜೂರ ಮಾಡಿ ಅವರಿಗೆ ಉಡಿಗೆ-ತೊಡಿಗೆಗಳನ್ನು ಪೂರೈಸಿ ಅನುಕೂಲತೆ ಮಾಡಿಕೊಡತಕ್ಕ ದೆಸೆಯಿಂದ ಸರಕಾರಿ ವಿದ್ಯಾಖಾತೆಗೆ ಬರೆದುಕೊಂಡರು. ವಿದ್ಯಾಧಿಕಾರಿಗಳು ಅಲ್ಲಿಗಳವಿದ್ದಾರೆ ದಿಲ್ಲಿಯಲ್ಲಿ ಅಸ್ಪೃಶ್ಯರ ಸಮ್ಮೇಲನವು ಕಳೆದ ವರ್ಷ ಜರಗುವದಿತ್ತು. ಅದಕ್ಕೆ ಶ್ರೀ| ವಿನಾಯಕ ದಾಮೋದರ ಸಾವರಕರರವನ್ನು ಅಧ್ಯಕ್ಷರಾಗಿ ಆರಿಸಿತ್ತು. ಶ್ರೀ| ಸಾವರಕರರವರಿಗೆ ಸರಕಾರವು ರತ್ನಗಿರಿಗೆ ಪ್ರತಿಬಂಧಿಸಲ್ಪಟ್ಟಿದೆ. ಅದರಿಂದ ಆ ಪ್ರತಿಬಂಧವನ್ನು ಈ ಸಮ್ಮೇಲನದ ಸಲುವಾಗಿ ಸಡಿಲು ಮಾಡಬೇಕಾಗಿ ಅಸ್ಪೃಶ್ಯರ ಕಡೆಯಿಂದ ಮಾಡಿಕೊಂಡ ವಿನ್ನಹವು ಸಾರ್ವಜನಿಕ ಹಿತದ ದೃಷ್ಟಿಯಿಂದ ತಿರಸ್ಕರಿಸಲ್ಪಟ್ಟಿತು. ಅಸ್ಪೃಶ್ಯರ ಬಗ್ಗೆ ಪ್ರತ್ಯೇಕ ಶಿಷ್ಯವೃತ್ತಿಗಳು ಕೊಡಲಾಗುವದಿಲ್ಲ. ಹಿಂದುಳಿದ ವರ್ಗಗಳಲ್ಲಿಯೇ ಅಸ್ಪೃಶ್ಯರನ್ನು ಸೇರಿಸಿ ಶಿಷ್ಯವೃತ್ತಿಗಳು ಕೊಡಲಾಗುತ್ತವೆ. ಸಾರ್ವಜನಿಕ ಬಾವಿ, ಕೆರೆ, ಧರ್ಮಶಾಲೆ, ಔಷಧಾಲಯ, ಶಾಲೆ, ನ್ಯಾಯಾಸನಾದಿ ಸ್ಥಳಗಳಲ್ಲಿ ಅಸ್ಪೃಶ್ಯರಿಗೂ ಪ್ರವೇಶವಿರುವದಾಗಿ ತೋರಿಸುವ ಪಾಟಿಗಳು ಹಚ್ಚಲ್ಪಡಲಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಂದ ಪ್ರತಿಬಂಧವಾದರೆ, ಸರಕಾರವು ಈ ಕುರಿತು ಏನೂ ಉಪಾಯವನ್ನು ಕೈಕೊಳ್ಳುವದು. ಖಾಸಗಿ ಜನರಿಂದ ಪ್ರತಿಬಂಧವಾಗುವ ಪ್ರಸಂಗದಲ್ಲಿ ಅವಶ್ಯವಿದ್ದವರು ನ್ಯಾಯಾಸನಗಳಿಗೆ ಹೋಗಿ ಇತ್ಯರ್ಥಿಸಿಕೊಳ್ಳಬೇಕು

— ಬ್ರಿಟಿಶ ರಾಜ್ಯಕಾರಭಾರದಿಂದಲೇ ಹಿಂದುಸ್ಥಾನದಲ್ಲಿ ದಾರಿದ್ರ್ಯವೂ ಅಜ್ಞಾನವೂ ಹಬ್ಬಿಕೊಂಡಿರುವದಾಗಿ ಸರಕಾರಿ ದಾಖಲೆಗಳಿಂದಲೇ ಸಿದ್ಧಪಡಿಸಬಹುದೆಂದು ಡಾ| ಬೆಸ್ಸೆಂಟ ಅಮ್ಮನವರು ನುಡಿದಿದ್ದಾರೆ.

— ಮುಂಬಯಿ ಸರಕಾರದ ಮದ್ಯಪಾನ ನಿಷೇಧ ಧೋರಣದಿಂದ ೧೯೩೬-೩೭ ನೇ ಇಸ್ವಿಯಲ್ಲಿಯೇ ಕಂದಿ ಕರಾಬಿನ ಗಿರಾಕಿಯು ಕಡಿಮೆಯಾಯಿತು. ಪರದೇಶ ಮದ್ಯದ ವಿಕ್ರೀಯ ಬೆಳೆಯಿತು, ಯಾಕಂದರೆ, ದೇಶ ಕಂದಿ-

---

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೇರಸಪ್ಪಾ
ಜೋಗಿಗೆ
ರೆಗ್ಯೂಲರ್
ಸರ್ವೀಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು-

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೇರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಿಥಿಲತೆ ಹೋಗಿ ಪಾಷಾಣವೇ ಸರ್ವೇಸಕ್ಷಕ್ತವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅಪರೋಕ್ಷಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು./ ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ೩ಜನ ಬಾಟಲಿಗಳ ಕಿಮ್ಮತು ೧೨—೦—೦ ಮತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೬-೫ ತಜನಿಗೆ ೧೩-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೆ ದ ವ್ಯ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತಿಳುವಾಗ ಪದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ-ಶಿಥಿಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಏವೆನೋಣ (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ತುಂಬು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ಪನಸ್ಪತಿಗಳು ಮತು ಭಸ್ಮಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿದ್ದತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ಪಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲಿ ಪಾಕದ ಒಂದು ಡಬ್ಬಿಗೆ ೫| ರೂ ೩ ಡಬ್ಬಿಗೆ ೧೫| ರೂ. ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕೊಂಡರೆ ನಿಮ್ಮ ಮನಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- एक रत्तलीस; किंमत १॥ रुपये.

रामबाण औषध

सर्दि चालविणारें
भूक वाढविणारें
शौच्यास साफ करणारें
झोंपे आणणारें
शक्ति देणारें
तेजस्वीपणा आणणारें

पिण्यास रुचिकर

कॅटलाग मागवा,

झंडुफार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणी कंपनी, तीर्थहळ्ळी

सिर्सि एजंट- एस. एल. धाकप्पा आणि ब्रदर्स

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಕೃತಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಸೀನಿಕೆ, ಒಂಟತಲೆನೋವು, ತಲೆಸುಳ್ಳಿಯು ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸಿಸೆ ಧಕ್ಕೆ ಕಳಿಸಲಾಗಿ...

ಒಂದು ಡಬ್ಬಕ್ಕೆ ಕ್ರಯವು ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ಸ್ವಂತ ವಿಳಾಸವನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ದಿ ಗುರು ಬಸವ ಅಂಡ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದ್ರಾಸ

ಕಿರ್ಲೋಸ್ಕರ ಕಮಾಲ ಗಾಣ.



ಶೇಕಡಾ ೬೮ ರಿಂದ ೭೦ ರ ವರೆಗೆ
ರಸ ಹೊರಡುವದು

ಗಂಟೆಯೊಂದಕ್ಕೆ ೧೧೦೦ ಪೌಂಡ
ಕಬ್ಬನ್ನು ಹಿಂಡುವದು.

ಕಿಮತೆ ೪೯೦ ರೂ. ಕೊಡ್ಲೆ ಡಿಲಿವ್ಹರಿ

ಶಿರಸಿಯಲ್ಲಿ ಎಸ್. ಎಲ್. ಧಾಕಪ್ಪಾ ಮತ್ತು ಬ್ರದರ್ಸ, ಇವರಲ್ಲಿ ಸಿಗುವದು.

ರಚನೆ— ಈ ಗಾಣದಲ್ಲಿಯ ಎರಕ ಹೊಯ್ದ ಭಾಗಗಳು ಅರ್ಧ ಉಕ್ಕಿನಿಂದ ಕೂಡಿದ ಧಾತುವಿನಿಂದ ತಯಾರಾಗಿರುತ್ತವೆ. ಕಣೆಗಳ ಎತ್ತರ ೧೧ ಇಂಚು, ಅಕ್ಸಲ್ ಪ್ಲೇಟನ್ನು ಚಕ್ರ, ಅಕ್ಸಲ್, ರೋಲರ ಇವು ಬೇರೆ ಬೇರೆ ಇರುತ್ತವೆ. ಬೇಅರಿಂಗ ಗನ್‌ಮೆಟಲ್‌ದವು ಇರುತ್ತವೆ. ಎಣ್ಣೆಯು ಸತತವಾಗಿ ನಿಲ್ಲುವದಕ್ಕೆ ವಿಶೇಷ ವ್ಯವಸ್ಥೆ ಮಾಡಿರುತ್ತೇವೆ. ಬಸತಿಯಲ್ಲಿ ಸುಧಾರಣೆ ಮಾಡಿರುತ್ತವೆ.

ವೈಶಿಷ್ಟ್ಯ— ಕಣೆಗಳು ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಅಡಕಿನಲ್ಲಿ ಸಿಕ್ಕು ಕಡಗೆ ಬಗುರುವದಕ್ಕೆ ಹಿಂಡಿ ಹಿಪ್ಪಿಯಾಗಿ ಬರುವದು. ಮಿಕ್ಕ ಗಾಣಗಳಂತೆ ಇಬ್ಬರು ಬೇಕಾಗದೆ ಒಬ್ಬನಿಂದಲೇ ಸಾಗುವದು. ನಾಲ್ಕು ಎತ್ತುಗಳು ಬೇಕು.

ಅಭಿಪ್ರಾಯ— "ಕಮಾಲ ಗಾಣದಿಂದ ಸಿಪ್ಪೆಯಲ್ಲಿ ವ್ಯರ್ಥ ಹೋಗುವ ರಸದಿಂದ ದಿನಾಲು ೩॥ ಮಣ ಬೆಲ್ಲ, ಅಂದರೆ ೧೦ ರೂ. ಲಾಭವಾಯಿತು. ೨೪ ದಿವಸ ಗಾಣವಾಡಿತು ನನಗೆ ಒಟ್ಟು ೨೪೦ ರೂ. ಉಳಿತಾಯವಾಯಿತೆಂದು ತಿಳಿಸಲು ಆನಂದವಾಗುತ್ತದೆ. ತಮ್ಮ ರಾಜನಗೌಡಾ ಪಾಟೀಲ, ಸದಲಗಿ ಜಿ ಬೆಳಗಾಂವ."

ಕಿರ್ಲೋಸ್ಕರ ಬಂಧು ಲಿಮಿಟೆಡ್; } ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರ

ಹಿಂದುಸ್ಥಾನದಲ್ಲಿಯ ಅತ್ಯಂತ ಅಗ್ರಗಣ್ಯ
'ನೇಶನಲ್ ಇನ್‌ಶೂರನ್ಸ ಕಂಪನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ.

ಕಳೆದ ವರುಷ ಲೆಕ್ಕಾಚಾರದ ಮೇಲೆ 5,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಗಳಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಗಳಂತೆಯೂ ಬೋನಸ್ಸನ್ನು ಕೊಟ್ಟಿರುವೆವು.

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ. ನಮ್ಮ ದರಪತ್ರ ಹಿಂದು ಸುಲಭ.

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P. D. Churi,**
ಬಿ. ಸಿ. ಸಿರಾಳಕೊಪ್ಪ, *Branch Secretary,*
ಲೋಖಂಡೆ ಬಿಲ್ಡಿಂಗ, Alice Building
ಹುಬ್ಬಳ್ಳಿ. *Hornby Road,*
BOMBAY.

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲ ತರದ ರೇಶ್ಮೆ ಕಿನಖಾಬಿನ ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಪೀತಾಂಬರ, ರುದ್ರಾಕ್ಷಿ, ಕಸ್ತೂರಿ, ಸಂಗಮರವರಿ ಶಿವಲಿಂಗ ಮೊದಲಾದ ಸಾಮಾನುಗಳು ಸಿಗುತ್ತವೆ. ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ - ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, ಚಳಿ, ಕೆಮ್ಮು, ಸುಟ್ಟಗಾಯ ಮುಂತಾದ ಎಲ್ಲಾ ತರದ ನೋವಿನ ಇದರಿಂದ ಗುಣ ಸಿಗುತದೆ. ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು ' ಸೋತು ಜೀಕ್ಯವೆಂದು ಯಾರೂ ತಿರಸ್ಕರಿಸಲಾಗದು. ಚಿಕ್ಕ ನೋವಿನಿಂದಲೇ ಜೀವಕ್ಕೆ ಸುಖ ದೊರೆಯುವದಿಲ್ಲ. ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಇಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ ೦—೧೦—೦.

ಎಲ್ಲ ಕಡೆಯಲ್ಲಿಯೂ ಸಿಗುತ್ತದೆ ಅಥವಾ

ಅಮೃತಾಂಜನ ಡಿಪೋ,
ಮುಂಬಯಿ ಮತ್ತು ಮದ್ರಾಸ

Printed and Published by Krishnarao Keshav Shenvi ... of Kanara Press K...

REG. NO. B. 1270

MONDAY, MARCH 5TH 1923.

ವರ್ಷ ೧೨

ಸಂಚಿಕೆ ೨೧

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು

ರೂಪಾಯಿ 2-4-0.

ಮನೆಯಾರ್ಡರಿಯಿಂದ

ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

नरपालहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-

೮ ನಂತ್ರ ಪ್ರತಿಸಾಲಿಗೆ 0-2-0.

ಹೆಚ್ಚಿಂಗಡ ಸಾಲು ಎಷ್ಟು ಹೊತ್ತುವಿರುವದೋ, ೮ ಸಾಲ ಬಿಂದ ಅಷ್ಟು ಸಾಲುಗಳೆಂದು ಹಿಡಿಯಲ್ಪಡುವವು.

ಬೇರೆ ಜಾಹಿರಾತುಗಳ ಬಗ್ಗೆ ಪತ್ರವ್ಯಾರ ಯಾ ಸಮಕ್ಷ ತಿಳಿಸಲ್ಪಡುವದು.

-✻(ಕುಮಟಾ— ಕಾನಡಾವೃತ್ತ. ಸೋಮವಾರ. ತಾರೀಖು ೫ ಮಾಹೆ ಮಾರ್ಚ ಸನ್ ೧೯೨೩ನೇ ಇಸವಿ.)✻-

ಹೊಸ ಅಂಗಡಿ! ಹೊಸ ಮಾಲು!!

ಕುಮಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟೆಂಟ ಔಷಧಗಳು, ಕಾಚಿನ ಸಾಮಾನು, ಮುಂತಾದ ಎಲ್ಲ ತರವಾರ ಮಾಲು ಬಲು ಅಗ್ಗವಾಗಿ ದೊರೆಯುತ್ತವೆ!

ಚಿರಕೋಳ ವ್ಯಾಪಾರಿಗಳಿಗೂ- ಮುನಾಫೆ ಸಿಗುವಂತೆ ಸ್ಪೇಶಲ್ ಹೋಲ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮಾಲು ಪಡೆಯಲು ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,

ಆಯರ್ನ ಮರ್ಚಂಟ,

ಕುಮಟಾ. (ಉ ಕನ್ನಡ)

ಜಿ. ವ್ಹಿ. ವೇಲಂಗಿ ಮೋಟಾರ ಸರ್ವ್ಹೀಸ.



ಕುಮಟಾ— ಶಿರ್ಸಿ ಶಿರ್ಸಿ—ಕುಮಟಾ

ಡೇಲಿ ಮೋಟಾರ ಸರ್ವ್ಹೀಸ ಪ್ರಾರಂಭವಾಗಿರುವದು

ಇದಲ್ಲದೆ, ಈ ಸರ್ವ್ಹೀಸು ಶಿರ್ಸಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವ ವರೆಗೂ ನಡೆಯುತ್ತದೆ. ಸ್ಪೇಶಲ್ ಭಾಡಿಗೆ ಬೇಕಾದವರು ... ದಿವಸ ಮುಂಚಿತ ತಿಳಿಸಬೇಕು.

ಟಿಕೀಟಿನ ದರ:— ಸೋಯಿ! ಅತಿ ಸೋಯಿ!! ಎಲ್ಲರಿಗಿಂತಲೂ ಸೋಯಿ!!!

ಜಿ. ... ವಿಶೇಷ ಮಾಹಿತಿಗಾಗಿ ಕುಮಟಾ ಏಜಂಟ ಜಾನಪ್ಪಾ ರಾಮು ನಾಯ್ಕ ಮುದಗಾಂವಕರ ಇವರ ... ವನ್ನು

कारवारांत मुंबई!!!

अर्थात

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साधा अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टॉवेल, चौक, लहान-मोठे पचे, लीडपाट, चीलपाट, शर्टिंग कोटिंग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:-आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:- मेसर्स गोविंद माधव शेणवि, फोवकार अँड सन्स.

पोस्ट— बांडिशिटा? (कारवार.

ಬಿಚಿತ] ನನ್ನ ಶಾಸ್ತ್ರೀಯ ವಾದ [ಉಚಿತ!!

ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ದೇಹ, ನನ್ನ ಸ್ನಾಯು ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಅಂಬಿಮುಖಾದವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಕಲು ೨ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇವತ್ತೇ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ.

ಹೊಸ ಪಂಚಾಂಗ.

ಬಗ್ರೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ

ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ

ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿವೆ.

ಪ್ರತಿ ೧ ಕ್ಕೆ ರೂ. ೦—೩—೦.

ಪ್ರತಿ ೨೫ ಕ್ಕೆ ರೂ. ೩—೮—೦.

ಪ್ರತಿ ೫೦ ಕ್ಕೆ ರೂ. ೬—೮—೦.

ಪ್ರತಿ ೧೦೦ ಕ್ಕೆ ರೂ ೧೨—೦—೦

☞ ಪಂಚಾಂಗಗಳನ್ನು ವ್ಹಿ. ಪಿ. ಯಿಂದ ಅಪೇಕ್ಷಿಸುವವರು ರೂ. ೨-೦-೦ ಮುಂಗಡ ಕಳಿಸಬೇಕು.

ಪತ್ತೆ:- ಮನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಫ್ಯಾನ್ಸಿ ಲೀವರ್ ವಾಚ್!

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ.)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವ್ಮೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋವ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ ಪೇನಾ ೧, ಸೇಫ್ಟಿರೇಜರ ಬ್ಲೇಡ ೧, ಪಚ್ಚದ ಗುಂಡಿಗಳು ೪, ವಾಲೆಟ ಚಪ್ಪಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೆಂಟಿನ ಸೀಸೆ ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ ಗೋಲ್ಡ ನೆಕ್ಲೇಸ್ ಎಂಬ ಕಂಠದ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈವಸ್ತ್ರ ೧, ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ, ಬರೇ ರೂ.೪-೮-೦

ವಿಳಾಸ:— **ಇಂಗ್ಲೀಷ ಎಂಪ್ರೋರಿಯಂ,**

ಪೋಸ್ಟ ಬಾಕ್ಸ್ ನಂ. ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನಂಥ ನಿಬ್ಬು ಇರುತ್ತದೆ ಇದರಲ್ಲಿ ಬರೆಯುವವರಿಂದ ಅಕ್ಷರಗಳು ಒಳ್ಳೆ ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟ್ಯಾಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟ್ಯಾಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.

ವಿಳಾಸ —ಶೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಗೋಪಾಳ ಸಖಾರಾಮ

ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸರ್ವ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಬೆಲೆ ಹಾಗು ರೋಖ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ; ಖರೇದಿ ಜೋಖಿಮಿಯಿಂದಾಗುತದ. ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುತದೆ. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ದೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಟಲಾಗು ತರಿಸಿಕೊಳ್ಳಿ. ಬಾಜೀತವಾಗ

ಕಲ್ಪತರು ಮಿಶ್ರಣ

ಮಲೇರಿಯಾನಾಶಕ

ಎಂದರೆ,

ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಹೇಳಬಹುದು.-

ವಿಷ ಕಲ್ಪತರುರ್ನಾಮ ರಸಃ ಪರಮ ದುರ್ಲಭಃ। ಅಸಾಧ್ಯಂ ಚಿರಕಾಲೋತ್ಥಂ ಜೀರ್ಣಂ

ಚ ವಿಷಮ ಜ್ವರಂ। ಹಂತಿ ಜ್ವರಾತಿಸಾರಂ ಚ ಗ್ರಹಣೀಂ ಪಾಂಡು ಕಾಮಲಾಮ್॥

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಶ್ರೇಯದಾಯಕವೆಂದು ಸಿದ್ಧವಾಗಿರುತ್ತದೆ. ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು. ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೧-೬-೦

ನಮ್ಮ ಪತ್ತೆ:— **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸನರ್ಥ ಫಾರ್ಮಸಿ, ಗಡ್ಡೆಕೇರಿ, ಮಂಗಳೂರು

ಕುಮಟಾ ಏಜಂಟ:— ಕಲಬಾಗ ಮಾಧವ ರಾಮ ಕ್ಯಾನಭಾಗ.

ಹೋಳಿಯ ಹಬ್ಬವೂ, ಅಸಭ್ಯತನದ ಪ್ರದರ್ಶನವೂ!

(ಲೇಖಕ— ವಿಠ್ಠಲ ಅನಂತ ಹೊದ್ದೆ, ಶಿರ್ಶಿ.)

ನಮ್ಮ ಹಿಂದು ಧರ್ಮದಂತೆ ವರ್ಷದ ಕಡೆಯ ತಿಂಗಳಾದ ಫಾಲ್ಗುಣ ಮಾಸದೊಳಗಿನ ಒಂದೇ ಒಂದು ಹಬ್ಬವೆಂದರೆ, ಹೋಳಿಯ ಹಬ್ಬವಷ್ಟೇ. ಈ ಹಬ್ಬವು ಕನ್ಯಾಕುಮಾರಿಯು ಬಳಿಗೆ ಇಡೀ ಭಾರತ ಖಂಡದಲ್ಲೆಲ್ಲ ಬಹಳೇ ಹುರುಪಿನಿಂದ ಆಚರಿಸಲ್ಪಡುವದಲ್ಲದೆ, ಬೇರೆ ಬೇರೆ ಕಡೆಯಲ್ಲಿ ಈ ಉತ್ಸವಕ್ಕೆ ಬೇರೆ ಬೇರೆ ಹೆಸರಿದ್ದು, ಅದರ ಉತ್ಪತ್ತಿಯ ವಿಷಯವಾಗಿಯೂ, ಭಿನ್ನ ಭಿನ್ನ ಜನರ ಅಭಿಪ್ರಾಯಗಳು ಭಿನ್ನ ಭಿನ್ನವಾಗಿರುವವು. ಉತ್ತರದಲ್ಲಿ ಇದಕ್ಕೆ ದೋಲೋತ್ಸವವೆಂತಲೂ, ಪೂರ್ವದಲ್ಲಿ ಹೋಗಾ ಅಥವಾ ಹೋಳಿ ಎಂತಲೂ ಮತ್ತು ದಕ್ಷಿಣದಲ್ಲಿ ಕಾಮದಹನವೆಂತಲೂ, ಅನ್ನುವದುಂಟು.

ದುಷ್ಟನಾದ ಕಂಸನಿಂದ ಕಳಿಸಲ್ಪಟ್ಟ ಪೂತನಾ ಎಂಬ ರಾಕ್ಷಸಿಯು ಬಾಲಕನಾದ ಶ್ರೀ ಕೃಷ್ಣನನ್ನು ಕೊಲ್ಲುವದಕ್ಕಾಗಿ ಅವನಿಗೆ ವಿಷಭರಿತವಾದ ಸ್ತನಪಾನವನ್ನು ಮಾಡಿಸುತ್ತಿರಲು, ಅವನು ವಿಷದೊಂದಿಗೆ ಅವಳ ಪ್ರಾಣವನ್ನು ಸಹ ಹೀರಿಕೊಂಡು, ಅವಳನ್ನು ಯಮ ಸದನಕ್ಕಟ್ಟಿದ ಕಥೆಯು ಭಾಗವತ ಅಥವಾ ವಿಷ್ಣುಪುರಾಣದಲ್ಲಿ ಹೇಳಿರುವದು. ಮತ್ತು ಇದರ ಸ್ಮರಣಾರ್ಥವಾಗಿ ಉತ್ತರದ ಜನರು ತಮ್ಮ ದೋಲೋತ್ಸವದಲ್ಲಿ ಪೂತನೆಯ ಪ್ರತಿಮೆಯನ್ನು ಮಾಡಿಸುತ್ತಿರುವರು

ಢೌಂಢಾ ಎಂಬ ರಾಕ್ಷಸಿಯು ಅಜ್ಞ ಬಾಲಕರನ್ನು ಪೀಡಿಸುತ್ತಿರಲು, ದೊಡ್ಡ ಬೆಂಕಿಯನ್ನು ಹಾಕಿ, ಬಾಲಕರನ್ನು ಬಡಿಸುತ್ತ ಅವಳನ್ನು ಅಂಜಿಸಿ ಓಡಿಸಿದರೆಂಬ ಕಥೆಯು ಭವಿಷ್ಯ ಪುರಾಣದಲ್ಲಿ ಕಂಡುಬರುವದು ಮತ್ತು ಇದರ ಸ್ಮರಣಕ್ಕಾಗಿ ಮಧ್ಯದ ಜನರು ಹೋಗಾ ಅಥವಾ ಹೋಳಿ ಎಂಬ ಉತ್ಸವವನ್ನು ಜರುಗಿಸುವರು.

ಯೋಗಿಶ್ರೇಷ್ಠನಾದ ಪರಮೇಶ್ವರನು ಘೋರವಾದ ತಪವನ್ನು ಆಚರಿಸುತ್ತಿರಲು, ದೇವತೆಗಳು ಆತನ ಮನಸ್ಸು ಪಾರ್ವತಿಯ ಕಡೆಗೆ ಎಳೆಯುವಂತೆ ಮಾಡುವದಕ್ಕಾಗಿ ಕಳಿಸಿದ ಕಾಮನನ್ನು, ಆತನು ತನ್ನ ತೃತೀಯ ನೇತ್ರದ ಪ್ರಭಾವದಿಂದ ಸುಟ್ಟು ಭಸ್ಮ ಮಾಡಿದ್ದರಿಂದ, ಇದರ ಸ್ಮರಣಾರ್ಥವಾಗಿ ದಕ್ಷಿಣದಲ್ಲಿ ಕಾಮದಹನವೆಂಬ ವಿಧಿಯು ನಡೆಯುತ್ತಿರುವದು.

ಒಟ್ಟಿನಲ್ಲಿ ಪೌರಾಣಿಕ ಮತವು ಹೇಗಿದ್ದರೂ, ಸಾಮಾನ್ಯವಾಗಿ ಈ ಉತ್ಸವಕ್ಕೆ "ವಸಂತೋತ್ಸವ" ಎಂದು ಹೇಳಲಿಕ್ಕೇನೂ ಅಡ್ಡಿಯಿಲ್ಲ. ಯಾಕಂದರೆ ಮನುಷ್ಯನ ಶರೀರಕ್ಕೆ ಅಪ್ರಿಯವಾದಂಥ ಮಳೆಗಾಲದ ಮಳೆಯೂ, ಚಳಿಗಾಲದ ಚಳಿಯೂ ಹೋಗಿ ಪ್ರಾಣಿಮಾತ್ರಕ್ಕೂ, ಗಿಡಗಂಟಿಗಳಿಗೂ, ಅರ್ಥಾತ್ ಪ್ರಪಂಚಕ್ಕೇ ಸುಖಕರವಾದ ವಸಂತ ಕಾಲವೂ, ನೂತನ ಸಂವತ್ಸರವೂ ಸಮೀಪಿಸಿದ್ದರಿಂದ ಆದ ಆನಂದವನ್ನು ವ್ಯಕ್ತಪಡಿಸುವದಕ್ಕಾಗಿ ಹಾಡು, ಗಾಯನ, ವಾದನ, ವೇಷ, ಹೋಳಿ ಮೊದಲ ಬಗೆಗಳ ಸಹಿತ ಉತ್ಸವವನ್ನು ನೆರವೇರಿಸುವದು ಅಸಭ್ಯತನವೆನಿಸಲಾರದು. ಮತ್ತು ಇಂಥ ಉತ್ಸವಗಳು ಮುಸಲ್ಮಾನರ ಮೋಹರಮ್ಮದಲ್ಲಿಯೂ ಕ್ರಿಸ್ತಿ ಧರ್ಮದವರ ನಾತಾಳದಲ್ಲಿಯೂ ಅವರವರ ನೂತನ ವರ್ಷದ ಆಗಮನದ ಆನಂದಾರ್ಥವಾಗಿ ಆಚರಿಸಲ್ಪಡುವದು ಕಂಡುಬರುತ್ತದೆ. ಈ ತರದ ಹೋಳಿಗೆ ಇಂಗ್ಲೀಷದಲ್ಲಿ *Bonfire* ಅನ್ನುವರು ಇರಲಿ.

ಇನ್ನು ಈ ಹೋಳಿಯ ಹಬ್ಬದೊಳಗೆ ವಿಶೇಷವೆಂದರೆ, ಕಾಮುಕತ್ವ, ಕಳ್ಳತನ, ಪುಂಡತನ, ಭಂಡತನ, ಮತ್ತು ಹುಚ್ಚತನ. ಪರರ ವಸ್ತುಗಳನ್ನು ಅಪಹರಿಸಿ ಅಥವಾ ಬೈಸಿಕೊಳ್ಳುವದೇ ಅವರಿಗೆ ಭೂಷಣವು! ಎಷ್ಟೋ ಹುಡುಗರು, ನಮ್ಮ ಗತಿ, ನಿಮ್ಮ ಗತಿ, ಹುಲ್ಲ ಸರಿಗಿ ಮೊದಲಾದ ಕ್ಷುಲ್ಲಕ ಸಂಗತಿಗಳನ್ನು ಮುಂದೊಡ್ಡಿ ಬಡಿ ಬಡಿ ಬಡಕೊಂಡು ದೊಡ್ಡ ಗುಲ್ಲು ಎಬ್ಬಿಸುವದೇ ಅವರಿಗೆ ಗಂಡಸುತನವೆನಿಸುವದು! ಪವಿತ್ರವೂ; ಮಾನವೂ ಆದ ದೇವನಾಮೋಚ್ಚಾರ ಮಾಡುವ ತಮ್ಮ ನಾಲಿಗೆಯನ್ನು ಅಪವಿತ್ರವೂ, ಅಸಭ್ಯವೂ ಆದ ಶಬ್ದಗಳಿಂದ ದೂಷಿತವನ್ನಾಗಿ ಮಾಡಿ ಅಬಲೆಯರನ್ನು (ಮಾರ್ಗದೆಡೆಯಲೇ ಅರಿಯಲ್ಲರೇಕೆ) ಪೀಡಿಸುವದೇ ಅವರಿಗೆ ಸೌಖ್ಯವು! ತಿರುಗಿ ಅದರ 'ಫಗ' ಎಂಬ ಇವರ ಕೋರೆಯು ಮೇಲೆ ಉಗುಳಿದರೆ ಅವರಿಗೆ ಹೊಟ್ಟೆಯಲ್ಲಿ ಹಿಡಿಸಲಾರದಷ್ಟು ಆನಂದವಾಗಿ, ಸ್ವರ್ಗವು ಒಂದೇ ಗೇಣು ಉಳಿದಂತಾಗುವದು! ಕಾಮನ ಅವಲಿ ಬರಗೇರಿ ನಾರಾಯಣರ ವಿಚಾರಶಕ್ತಿಶೂನ್ಯರಾದ ಈ ಭಂಡರ ಭಂಡತನದ ಬೀಭತ್ಸವೂ, ಕರ್ಣಕಠೋರವೂ ಆದ ಶಬ್ದಗಳನ್ನು ಕೇಳಿ, ಸಹಿಸಲಾರದೆ ನಿಮ್ಮ ಪಾತ್ರಭಾಗಿನಿಯರು ಹೋಳಿಯ ಹಬ್ಬದ ಮಟ್ಟಿಗೆ ದೇವರು ತಮ್ಮನ್ನು ಕಿವುಡರನ್ನಾಗಿ ಮಾಡಿದರೆ ಬಹಳ ಉಪಕಾರವಾದೀತೆಂಬ ಇಚ್ಛಿಸಿದರೆ ಆಶ್ಚರ್ಯವೇನು? ಹುಡುಗರನ್ನು ಸಹ ನಾಚಿಸುವಂಥ ಮತ್ತು ಇಡೀ ಸ್ತ್ರೀ ಜನಾಂಗಕ್ಕೆ ಬೇಸರಪಡಿಸುವಂಥ ಕಾಮುಕತ್ವ ಈ ತರದ

(ಪಾ ೦ನ ೧೧ ನೇ ಪಾನಿನಮೇಲೆ ಮುಂದುವರಿದ)

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತಾರೆ, ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆ ಲಕ್ಷ ಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಜಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕ. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯು ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರೆತ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೨ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—:o:—

೪ ಔನ್ಸಿಗೆ	ರೂ.	೪—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಯಾವ ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಅಥವಾ ಮದ್ಯವು ಸೇರಿರುತ್ತದೆ, ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು, ಒಟ್ಟೋ-ದಿಲ್ ಬಹಾರದಿಂದ ತಾಜಾ ಹೂವಿನ ಸುಗಂಧವನ್ನು ಅನುಭವಿಸಬಹುದು, ಇದಕ್ಕೆ ಮದ್ಯದ ಸ್ಪರ್ಶವಿಲ್ಲ.ದಿಲ್ಲ

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಮುಂಬಯಿ ಕಾಯಿದೆ ಕೌನ್ಸಿಲು.

(ಪ್ರಶ್ನೋತ್ತರಗಳಿಂದ ಸಂಗ್ರಹಿಸಿದ ಮಾಹಿತಿ)

ಶಿಪಾಯಿ ಪೇದೆಗಳ ಪೆನ್ಶನು

ಸರಕಾರಿ ಖಾತೆಯಲ್ಲಿ ಸೇವೆ ಸಲಿಸಿದ ಶಿಪಾಯಿ ಹಾಗು ಪೇದೆಗಳಿಗೆ ಕೊಡತಕ್ಕ ಪೆನ್ಶನ್ ನಿವೃತ್ತರ ನಿಯಮಗಳನ್ನು ಕೊಡಿಸಿ ಸುಧಾರಣೆಯ ಅಪೇಕ್ಷೆಯಿದೆ. ಆ ಬಗ್ಗೆ ಸರ್ಕಾರದ ವಿಚಾರವು ಈ ವರ್ಷದ ಬಜೆಟಿನ ಶಿಫಾರಸಿನಲ್ಲಿ ಸರಿ ಸಲಾಗಿದೆ.

***

ತಾಳಿ ಮರ

ಜಂಗಲ ದರಗಳ ವಿಷಯ ಸರಕಾರವು ನೇಮಿಸಿದ ಕಮಿಟಿಯು ತಾಳಿ ಮರಗಳ ಪಟ್ಟಿಯನ್ನು ತಗಿಸಿದ ಹಾಗೆ ಮಾಡಿದ ಶಿಫಾರಸಿನ ಮೇಲೆ ಸರಕಾರವು ಚೀಫ ಕನ್ಸರವ್ಹೇಟರ ಅಭಿಪ್ರಾಯ ಕೇಳಿ ಸಿರುತ್ತದೆ. ಜಂಗಲ ಕಮಿಟಿಯ ಸಲಹೆಗಳು ಚೀಫ ಕನ್ಸರವ್ಹೇಟರರಿಗೂ ಅವ ಸರಕಾರಕ್ಕೆ ಈ ಶಿಫಾರಸ ಆದದ್ದಾಗಿ ಸರಕಾರದ ತೀರ್ಮಾನ ಆಗಬೇಕಿದ್ದು ತಾಳಿ ಮರಗಳ ಮೇಲಿನ ಕರವು ... ನ್ಯಾರ | ಕರ್ಕಿಯವರು ಸಂಪೂರ್ಣವಾಗಿ ರದ್ದ ಮಾಡಬೇಕಾಗಿಯೂ, ಅಥವಾ ೧ ರೂಪಾಯಿ ಫೀ ಇರಬಹುದಾಗಿಯೂ ಜಂಗಲ ಕಮಿಟಿಯು ... ಹೇಳುವ ಸಂಗತಿಯು ಸರಕಾರದ ತಿಳುವಳಿಕೆಗೆ ... ಲ್ಲ ರಾ| ಕರ್ಕಿಯವರು ಈ ವಿಷಯ ಚೀಫ ಕನ್ಸರವ್ಹೇಟರರಿಗೆ ಬರೆದಿದ್ದರು. ಕನ್ಸರವ್ಹೇಟರರು ವರದಿಯ ನಕಲನ್ನು ಸರಕಾರದವರು ಬರೆದಿಲ್ಲವಾಗಿ ಉತ್ತರದಲ್ಲಿ ಹೇಳಿದ್ದಾರೆ.

[ತಾಳಿ ಮರದ ವಿಷಯ ಜಂಗಲ ಕಮಿಟಿಯ ರಿಪೋರ್ಟಿನಲ್ಲಿ ಕಡ ಬರದ ಹಕೀಕತ್ತು ೨ನೇ (ಅ) ಭಾಗದಲ್ಲಿ ಜಂಗಲ ದೂರುಗಳ ಯಾದಿ ಕೊಟ್ಟಿದೆ. ಅವರೊಳಗೆ ಬರೆಯಲಾದೇನ ಅಂದರೆ ತಾಳಿ ಹಿಟ್ಟು ಬತ್ತ ಜನರಿಗೆ ಅನ್ನಾಧಾರವು. ಈಗಿರುವ ೪ ರೂಪಾಯಿ ಪರವಾನಿಗೆ ಫೀಯು ವಿಪರೀತವಾಯಿತು. ತಾಳಿ ಮರಗಳನ್ನು ಉಚಿತವಾಗಿ ಕೊಡಬೇಕು ಹೆಚ್ಚೆಂದರೆ, ೧ ರೂಪಾಯಿ ಫೀ ಕೇಳಿಸಿ ಅವನ್ನು ಕೊಡತಕ್ಕದ್ದು ' ೩ನೇ (ಬ) ಭಾಗದಲ್ಲಿ ಚೀಫ ಕನ್ಸರ್ವ್ಹೇಟರ ಅಭಿಪ್ರಾಯ ಕೊಡಲಾಗಿದೆ. ಅದರೊಳಗೆ ಈ ಕುರಿತು ಬರೆದದ್ದು ನಂತರೆ—"ಒಂದು ತಾಳಿ ಮರದಿಂದ ೧೨ ಹೇರೆ ಯಾ ಅದಕ್ಕೂ ಮಿಕ್ಕಿ ಹಿಟ್ಟು ಸಿಗುತ್ತದೆ. [ಇದಕ್ಕೆ ೪ ರೂಪಾಯಿ ಫೀ ತೀರ ಕಡಿಮೆ ಇದನ್ನು ಒಯ್ಯಲು ಜನರು ೪೦ ಮೈಲು ಹಾಗೂ ಅದಕ್ಕೂ ದೂರ ನಡಕೊಂಡು ಬರುತ್ತಾರೆ. ಇದರ ಮೇಲಿಂದ ಈ ಫೀ ವಿಪರೀತವಲ್ಲೆಂದು ಸ್ಪಷ್ಟವಾಗುತ್ತದೆ. ತಾಳಿ ಮರದ ಪ್ರದೇಶದಲ್ಲಿ ಉಳಕೊಳ್ಳುವ ಮರಾಠಿ ಒಕ್ಕಲಿಗನಿಗೆ ಮನೆ ಬಿಂದಕ್ಕೆ ಪ್ರತಿ ವರ್ಷ ಒಂದೊಂದು ಮರವನ್ನು ಉಚಿತವಾಗಿ ಕೊಡುತ್ತಾರೆ" ೫ನೇ (ಕ) ಭಾಗದಲ್ಲಿ ಲೋಕಪಕ್ಷದ ಸಭಾಸದರು ಈ ಕುರಿತು ಬರೆದುದೇನಂದರೆ—"ಈ ಮರಗಳು ಹೊನ್ನಾವರ ತಾಲೂಕಿನ ಕೆಲವು ಗ್ರಾಮಗಳಲ್ಲಿ ಮಾತ್ರ ಬೆಳೆಯುತ್ತವೆ. ಹೊನ್ನಾವರ ತಾಲೂಕಿನ ಈ ಪ್ರದೇಶದಲ್ಲಿ ವರ್ಕಿಂಗ ಪ್ಲೇನ ಪದ್ಧತಿಯು ಪ್ರಾರಂಭವಾಗಿದೆ. ಅನಿಷ್ಟ ದರಗಳಿಯ ಬಡ ಜನರ ಈ ಮರಗಳ ಹಿಟ್ಟು ತಿಂದು ಜೀವಿಸುತ್ತಾರೆ. ನಿರುಪಾಯವಾಗಿ ಇದನ್ನು ತಿನ್ನುತ್ತಾರೆ. ನಾಯಿಗಳ ಸಹ ಇದನ್ನು ಆಹಾರವೆಂದು ಗ್ರಹಿಸುವದಿಲ್ಲ. ಇಷ್ಟಿಷ್ಟು ಈ ಮರಗಳಿಗೆ ಗಿರಾಕಿ ಬಹಳ. ಇದರ ಮೇಲಿಂದ ಬಡಜನವು ಮಿಗಿಲಾಗುತ್ತದೆಂದು ಸ್ಪಷ್ಟವಾಗುತ್ತದೆ. ಕುಂಟಿ ಮರಾಠಿಯರಿಗೆ ಸರಕಾರಿ ದರಾವಿನಲ್ಲಿ ನಮೂದಿಸಿದ ಪ್ರಮಾಣದ ಮೇಲೆ ಈ ಮರಗಳು ಪುಕ್ಕಟೆಯಾಗಿ ಸಿಗುತ್ತವೆ. ಇತರರಲ್ಲಿ ಬಹಳೇ ಅಸಂತೋಷವಾಗಿ ಈಗಿನ ದರವು ಅವರ ಶಕ್ತಿಗೆ ಮಿಕ್ಕಿದೆಂದು ಅವರ ದೂರು. ರಾ| ಕರ್ಕಿಯವರು ಕಾಯಿದೆ ... ಈ ಕುರಿತು ದರಾವಿನ ಸೂಚನೆ ... ಪರವಾನಿಗೆ ಫೀಯು ೧ ರೂಪಾಯಿಗೆ ಇಳಿಸಬೇಕಾಗಿ ಅವರ ಸೂಚನೆ ಇತ್ತು. ಆದರೆ, ... ಬಹಳ ಕಠಿಣವಲ್ಲ. ಆದರೂ, ಈ ಫೀಯನ್ನು ೨ ರೂಪಾಯಿ ಮಾಡಬೇಕಾಗಿ ನಮ್ಮ ಸೂಚನೆ ಇದೆ. ವರ್ಕಿಂಗ ಪ್ಲೇನ ಪದ್ಧತಿಯಿಂದ ಸರಕಾರಕ್ಕೆ ನಷ್ಟವಿಲ್ಲ. ಬಡಜನರ ಮೂಲಕ ತಾಳಿ ಹಿಟ್ಟು ತಿನ್ನುವವರಿಗೂ ಆವಶ್ಯಕವಾದ ಪ್ರತಿಬಂಧಗಳಾಗುತ್ತವೆ. ಈ ಮರಗಳಿಗೆ ಹೂವು ಬರುವದು ಒಂದೇ ಸಲ. ಹಾಗೆಯೇ ಅವು ಸತ್ತು ಹೋಗುತ್ತವೆ. ತಾಳಿ ಮರಗಳ ಬೆಳವಣಿಗೆಯ ಪ್ರಾಯವು ನಿಶ್ಚಿತವಾಗಿ ಯಾರಿಗೂ ಏನೂ ತಿಳಿಯುವುದಿಲ್ಲ. ಇದರಿಂದ ವರ್ಕಿಂಗ ಪ್ಲೇನಿನ ಪ್ರಕಾರ ನಿಶ್ಚಿತ ಬೆಟ್ಟಗಳಲ್ಲಿ ಇರುವ ಮರಗಳ ನಿರ್ಧಾರವಾಗಿ ಕಟ್ಟಲಾಗುತ್ತದೆ. ಇದರಿಂದ ಸರಕಾರಕ್ಕೆ ಉತ್ಪನ್ನವಿಲ್ಲ. ಜನರಿಗೆ ಬೇಕಾದ ಮರಗಳ ಕಡಿತದಲ್ಲಿ ವರ್ಕಿಂಗ ಪ್ಲೇನ ಪದ್ಧತಿಯನ್ನು ರಾಜ್ಯ ಪ್ರಜಾ ದೃಷ್ಟಿಯಿಂದ ನಿರ್ಮೂಲಿಸುವದು ಅವಶ್ಯವಿದೆ. ಆದರಿಂದ ತಾಳಿ ಮರದ ಪ್ರದೇಶದಲ್ಲಿ ವರ್ಕಿಂಗ ಪ್ಲೇನ ಪದ್ಧತಿಯ ನಿಲ್ಲಿಸುವದು ಮಾಡಬೇಕಾಗಿ ನಮ್ಮ ಬೇಡಿಕೆ ಇದೆ]

***

ಜಂಗಲ ಗ್ರಾಮ ಪಂಚಾಯತುಗಳು

ಕುಮಟಾ ತಾಲೂಕಿನ ಮಿರ್ಜಾನ–ಕಲ್ಲಬ್ಬೆ–ಹೊಸಾಡ ಗ್ರಾಮದವರು ಮತ್ತೂ ಗ್ರಾಮಗಳಿಗೊಂದು ಜಂಗಲ ಪಂಚಾಯತನ್ನು ಸ್ಥಾಪಿಸಬೇಕ್ಕೆಂದು ಸಿಸರು ತಾಲೂಕಿನ ಮಾಮಲೇದಾರರ, ಈ ಅಪೇಕ್ಷೆಗೆ ಬೆಂಬಲ ಕೊಟ್ಟರು. ಸ್ಥಾನಿಕ ಅಧಿಕಾರಿಗಳು ಈಗಲೇ ಈ ಸಂಸ್ಥೆಗಳನ್ನೇರ್ಪಡಿಸುವದು ಅನಿಷ್ಟವೆಂಬ ಅಭಿಪ್ರಾಯಪಟ್ಟರು. ಕುಮಟಾ ತಾಲೂಕಿನಲ್ಲಿ ೬ ಕಡೆ ಪಂಚಾಯತುಗಳಿವೆ. ಅವಿವನ್ನು ಪ್ರಯೋಗಸ್ಥಿತಿಯಲ್ಲಿವೆ. ಅದರಿಂದ ಇವುಗಳ ನಡಾವಳಿ ನೋಡಿದನಕ ಇನ್ನು ಪಂಚಾಯತುಗಳನ್ನೇರ್ಪಡಿಸುವದು ಇಷ್ಟವಲ್ಲ. ಕೋಸ ಡಿವ್ಹಿಜನಿನ ಡಿವ್ಹಿಜನಲ್ ಫಾರೆಸ್ಟ ಆಫೀಸರರ ಈ ವಿಷಯ ಏನೂ ಅಭಿಪ್ರಾಯ ಕೊಡಲಿಲ್ಲ. ಪರಿಸ್ಥಿತಿಯು ಅನುಕೂಲವಿದ್ದರೆ, ಪಂಚಾಯತನ್ನು ಸ್ಥಾಪಿಸಲು ಮುಖಂಡರು ಗ್ರಾಮದವರಿಗೆ ಉತ್ತೇಜನ ಕೊಡಲಾದೀತು. ಉತ್ತರ ಕನ್ನಡ ಜಿಲ್ಹೆಯೊಳಗೆ ಸ್ಥಾಪಿಸಿದ ಪಂಚಾಯತುಗಳ ವರದಿ ಬಂದಿದೆ. ಹಳಿಯಾಳ ತಾಲೂಕಿನಲ್ಲಿ ಈ ಪಂಚಾಯತಗಳು ಸ್ಥಾಪನೆಯಾಗಲಿಲ್ಲ. ಕುಮಟಾ ಅಂಕೋಲಾ ತಾಲೂಕುಗಳಲ್ಲಿ ಸ್ಥಾಪನೆ ಹೊಂದಿದವುಗಳ ಕುರಿತು ಹೆಚ್ಚಿನ ಅನುಭವ ಪಡೆದ ಹೊರತು, ಅಭಿಪ್ರಾಯ ಕೊಡಬಹುದು. ಸರಕಾರಕ್ಕೆ ಇನ್ನು ಪಂಚಾಯತುಗಳನ್ನು ಸ್ಥಾಪಿಸುವದು ಅನಿಷ್ಟ ತೋರುತ್ತದೆ. ಯಾಕಂದರೆ, ಇವುಗಳ ಸ್ಥಾಪನೆಯಾದ್ದಲ್ಲಿ ಇವು ಯಶಸ್ವಿಯಾಗಿರುವವಾಗಿ ಇನ್ನೂ ಸರಕಾರದ ಮನವರಿಕೆಯಾಗಲಿಲ್ಲ.

***

ಹೊನ್ನಾವರದ ೧ನೇ ವರ್ಗದ ಮೆಜಿಸ್ಟ್ರೇಟರು

ಹೊನ್ನಾವರದ ಮಾಮಲೇದಾರರಾದ ಮಿ| ಕೌಂಡಿಣ್ಯರವರ ಬಳಿ, ಅವರು ಮಾಮಲೇದಾರರಾದಂದಿನಿಂದ ಪೋಲೀಸರು ೧೬ ಖಟ್ಲೆಗಳನ್ನು ಮಾಡಿಕೊಟ್ಟರ. ೧೯೨೭ನೇ ಇಸ್ವಿಯ ಮೇ ತನಕ ಅವರು ಮಾಡಿಕೊಟ್ಟ ಖಟ್ಲೆಗಳ ಲೆಖ್ಖವಿದ. ಖಟ್ಲೆಗಳಲ್ಲಿ ೨ನೇ ವರ್ಗದ ಮೆಜಿಸ್ಟ್ರೇಟರಿರುವಾಗಲೇ ವಿಚಾರಿಸಲಾದವು. ಇವುಗಳೊಂಗೆ ೧೫ ಖಟ್ಲೆಗಳಲ್ಲಿ ಪೋಲೀಸರಿಗೆ ಅನುಕೂಲ ತೀರ್ಮಾನಿತು. ೨ನೇ ವರ್ಗದ ಅಧಿಕಾರವನ್ನು ೧ ವರ್ಷ ನಡೆಸುವಷ್ಟರಲ್ಲಿ ೧ನೇ ವರ್ಗದ ಮೆಜಿಸ್ಟ್ರೇಟ ಅಧಿಕಾರ ಕೊಡಲಾಯಿತು. ೧ನೇ ವರ್ಗದ ಅಧಿಕಾರ ಪಡೆಯಲು ಅವರು ಪಾತ್ರರೆಂದು ಅವರಿಗೆ ಅಧಿಕಾರ ಕೊಡಲಾಯಿತು. ರಾ| ಕೌಂಡಿಣ್ಯರವರಿಗೆ ೧ನೇ ವರ್ಗದ ಅಧಿಕಾರ ಕೊಡಬೇಕಾಗಿ ಪೋಲೀಸ ಸುಪರಿಂಟೆಂಡೆಂಟರು ಮೊಟ್ಟಮೊದಲು ಸೂಚಿಸಿದ್ದರೋ ಹೇಗೆ? ಇಲ್ಲದಿದ್ದರೆ, ಯಾರ ಶಿಫಾರಸಿನ ಮೇಲೆ ಅವರಿಗೆ ೧ನೇ ವರ್ಗದ ಅಧಿಕಾರ ಕೊಡಲಾಯಿತು? ಎಂಬ ಪ್ರಶ್ನೆಗೆ ಉತ್ತರಿಸಿದ್ದೇನೆಂದರೆ 'ಡಿಸ್ಟ್ರಿಕ್ಟ ಮೆಜಿಸ್ಟ್ರೇಟರೂ, ಕಮೀಶನರರೂ ಶಿಫಾರಸು ಮಾಡಿದಂತೆ, ಈ ಅಧಿಕಾರ ದಾನವಾಗಿತ್ತು. ಪೋಲೀಸ ಸುಪರಿಂಟೆಂಡೆಂಟರು ಪೋಲೀಸರಿಗೂ, ಜನರಿಗೂ ಹೊನ್ನಾವರದಲ್ಲಿ ೧ನೇ ವರ್ಗದ ಮೆಜಿಸ್ಟ್ರೇಟರಿಲ್ಲದ್ದರಿಂದ ಉಂಟಾಗುವ ತೊಂದರೆಗಳನ್ನು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಲಕ್ಷಕ್ಕೆ ತಂದರು. ಹೊನ್ನಾವರದಲ್ಲಿ ೧ನೇ ವರ್ಗದ ಮೆಜಿಸ್ಟ್ರೇಟ ಒಬ್ಬರೇ ಕೆಲಸ ಮಾಡುವ ರೂಢಿಯಿದೆ.

***

ಕಾರವಾರದಲ್ಲಿ ಕಾಡಾನೆಗಳು.

ಕಾರವಾರದಲ್ಲಿ ಕಾಡಾನೆಗಳ ಹಾವಳಿಯ ಸಂಬಂಧ ನಿಜವಿರುತ್ತದೆ. ಈ ಮರಾಠಿ ಆನೆಗಳು ರಾಗಿ ಬೆಳೆ ಕಟ್ಟಿ ಸಸ್ಯ ನಾಶಪಡಿಸುವದು. ಈ ಆನೆಗಳ ಕಾಟ ಪರಿಹರಿಸುವದಕ್ಕಾಗಿ ಬೇಟೆಗಾರರನ್ನು ನೇಮಿಸಿದೆ. ಈಗ ೨ ಆನೆಗಳು ಆ ಗ್ರಾಮಗಳನ್ನು ತೊರೆದಿವೆ. ಎಲ್ಲಿರುತ್ತವೆಂದು ಈಗ ಹೇಳಬರದು.

***

ಸುಪೆಯ ಡಾಕ್ಟರರ ಮೇಲೆ ಹುಲಿ ಹಾರಿಕೊಂಡದ್ದು

ಅಕ್ಟೋಬರ ತಿಂಗಳಲ್ಲಿ ಸುಪೆ ತಾಲೂಕಿನ ಮೆಡಿಕಲ ಆಫೀಸರ ಮೇಲೆ ತಾ ೨೭–೨೮ನೇಗೆ ಹುಲಿ ಹಾರಿ ಹೋದದ್ದು ನಿಜವಿರುತ್ತದೆ. ಹೆಚ್ಚಿನ ದೊಡ್ಡ ಘಾಯವಾಗಲಿಲ್ಲ. ೧೫ ದಿವಸಗಳ ತನಕ ಅವರಿಗೆ ಕೆಲಸ ಮಾಡಲಾಗಲಿಲ್ಲ. ಸುಪೆಯ ನೆರೆಹೊರೆಯಲ್ಲಿ ದನಗಳನ್ನು ಹಿಡಿದು ಹುಲಿಗಳ ಉಪದ್ರವ ಪಟ್ಟಿಗೆ ಕಳುವ ಪ್ರದೇಶಕ್ಕೆ ಉಂಟಾಗುವ ಉಪದ್ರವಗಳನ್ನು ಪರಿಹರಿಸುವ ಪ್ರಯತ್ನ ನಡೆದಿದೆ. ೨೨–೨೩ನೇ ಇಸ್ವಿಯಲ್ಲಿ ಜಂಗಲ ಖಾತೆಯವರು ಮರಗಳನ್ನು ಕಡಿಯಬಾರದೆಂದು ನಿಶ್ಚಯಿಸಿದರು. ಊರವರು ಕಾಲಕಾಲಕ್ಕೆ ಅಲ್ಲಿ ಬೆಳೆಯುವ ಕಿರುಕುಳ ಗಿಡಗಳನ್ನು ಕಡಿಯಬೇಕಾಗಿಯೂ ಹೇಳಲಾಗಿತ್ತು. ಅವಶ್ಯವಿದ್ದರೆ ಸಂಗ್ರಹಿಸಿ ಕಾಡಲಿಕ್ಕೂ ಅಪ್ಪಣೆ ಕೊಡಲ್ಪಟ್ಟಿತ್ತು.

ಆದರೆ ಇವರು ಬಹಳ ಆಗ್ರಹ ಮಾಡಿದರು ಆದರಿಂದ ಅಲ್ಲಿ ಗಿತಗಂಟೆಗಳೂ, ಮತ್ತು ಕಂಟಿಗಳೂ, ನಾಟಕ ಗಿತಗಳೂ ಜಾಸ್ತಿಗಿ ಬೆಳೆದಿವೆ ಅದರಿಂದ ಕಾಡು ಪ್ರಾಣಿಗಳಿಗೆ ಉಳಕೊಳ್ಳಲು ಬಹಳ ಆಶ್ರಯ ದೊರೆತಿದೆ ಕಂಡು ಕಡಿದ ಪ್ರದೇಶದಲ್ಲಿ ಸಹ ಇಷ್ಟು ಜಾಲಿನ ಆಶ್ರಯ ದೊರಕ ತ್ತಿದ್ದಿಲ್ಲ ಕಂತನ್ನು ಪುನಃ ಕಡಿಯುವ ವಿಚಾರ ನಡೆದದೆ

***

ಗುಜರಾಥ ಕಾಲೇಜಿನ ಪ್ರಿನ್ಸಿಪಾಲರ ಚೇಷ್ಟೆಗಳು

ಗುಜರಾಥ ಕಾಲೇಜಿನ ಇಬ್ಬ ಶಿಪಾಯಿಗಳಿಗೆ ಪ್ರಿನ್ಸಿಪಾಲರು ಬಿಳೇ ಧೋತರ, ಪಗಡಿ, ಅಂಗಿ ಮುಂತಾದವುಗಳನ್ನು ಕೊಟ್ಟರೆ ಖಚಾ 'ಡೋಮಸ್ಟಿಕ್ ಎ ಟಿ (ಧರ್ಮಾರ್ಥ) ನಿಧಿಯೊಳಗಿಂದ ಪೂರೈಸಲಾಯಿತು ಈ ಇಬ್ಬ ಶಿಪಾಯಿಗಳು ಪ್ರಿನ್ಸಿಪಾಲರ ಖೈಸಾತಿಯ ಪರು ಈ ಪ್ರಿನ್ಸಿಪಾಲರು ತಮ್ಮ ಬಂಗಲೆಯ ಹಿಂದು ಭಾಗವನ್ನು ಬಿಟ್ಟು, ವರ್ಗದಲ್ಲಿ ಕಲಿಯವ ಧರ್ಮಪುರದ ಯ ಪರಾಜರಿಗೆ ಬಾಡಿಗೆಗೆ ಕೊಟ್ಟಿದ್ದಾರೆ ಆ ಬಗ್ಗೆ ತಿಂಗಳಿಗೆ ೪೦ ರೂಪಾಯಿಗಳ ತೆ ಬಾಡಿಗೆ ಪಡೆಯುತ್ತಾರೆ. (ಬಂಗಲೆಯು ಸರಕಾರಿ ಸೊತ್ತಾದರೂ) ಈ ವ್ಯವಸ್ಥೆಯು ಖಂಡಿಯ ಇದೆ ಆದರಿಂದ ಈ ಕರಿತು ಸರಕಾರಕ್ಕೇನು ಸಂಬಂಧವಿಲ್ಲ ಈ ವ್ಯವಸ್ಥೆಯು ವಿದ್ಯಾಧಿಕಾರಿಗಳಿಗೆ ತಿಳಿಸಲಾಗಿತ್ತು ಅವರು ತಮ್ಮ ಒಪ್ಪಿಗೆ ಅನುಕೂಲವಾಗಿ ಅಭಿಪ್ರಾಯ ಕೊಟ್ಟರು (ಹೀಗೆ ಖುಲಾಸೆ ಕಿವ ಬಳಿಕ, ಸ್ವ ಶಪರಿಗೆ ಬಹಳ ಅಸಮಾಧಾನವಾಗಿ, ಸಭಾಸದರನೇಕರು ಪ್ರಶ್ನೆಗಳನ್ನು ಕೇಳಹತ್ತಿದರು ಪ್ರಿನ್ಸಿಪಾಲರು ಸರಕಾರಿ ಸೊತ್ತನ್ನು ಬಾಡಿಗೆಗೆ ಕೊಟ್ಟು ಲಾಭ ಹೊಂದುವ ಬಗೆ ಹೇಗೆ? ಸ್ವಂತ ಉಪಯೋಗಕ್ಕಾಗಿ ಕೊಟ್ಟ ಸರಕಾರಿ ಸೊತ್ತಿನಿಂದ ಲಾಭ ಹೊಂದುವ ಬಗೆ ಹೇಗೆ? ಧರ್ಮಪುರದ ಯುವರಾಜರೊಬ್ಬರಿಗೇ ಈ ಅನುಕೂಲತೆ ಏಕೆ ಇತ್ಯಾದಿ ಕೇಳಿದರು ವಿಪಾಣದು ಮಂಡಿನ ಉತ್ತರಗಳನ್ನೇ ಕೊಟ್ಟರು ಅಧ್ಯಕ್ಷರು ಚರ್ಚೆಯನ್ನು ನಿಲ್ಲಿಸಿಬಿಟ್ಟರು) ೧೯೨೬-೨೭ನೇ ಇಸ್ವಿಯ ಪೂರ್ವಾರ್ಧದಲ್ಲಿ ಸ್ತ್ರೀ ವಿದ್ಯಾರ್ಥಿಗಳ ಅಲೋಚನೆಯಿಂದ ಅವರಿಗೆ ನಿಬಂಧ ಬರೆಯಲು ನೆರವಾಗ ಪದಕಕ್ಕಾಗಿಯೂ, ಮಾಸಿಕ ಹಾಗು ಗ್ರಂಥಗಳ ವಿಷಯ ಅದರ ಹಿತ ರಕ್ಷಣವಾಡುವದಕ್ಕಾಗಿಯೂ ವಾರಕ್ಕೆ ಒಮ್ಮೆ ಯಾ ಎರಡು ಬಾರಿ ಸ್ತ್ರೀ ವಿದ್ಯಾರ್ಥಿಗಳಿಗೆ ಭೆಟ್ಟಿ ಕೊಡುವದಕ್ಕಾಗಿಯೂ ಪ್ರಯೋಗಾರ್ಥವಾಗಿ ಪ್ರಿನ್ಸಿಪಾಲರು ಒಬ್ಬ ಆಂಗ್ಲ ಸ್ತ್ರೀಯನ್ನು ನೇಮಿಸಿದ್ದರು ಗುಜರಾಥ ಕಾಲೇಜಿನಲ್ಲಿ ಸ್ತ್ರೀ ಶಿಕ್ಷಕರಿಲ್ಲ ಆದರಿಂದ ಪ್ರಿನ್ಸಿಪಾಲರಿಗೆ ಇವರಿಗೆ ನೇಮಿಸಿ ನೋಡುವ ಇಚ್ಛೆ ಪನಿಸಿತು ಗುಜರಾಥ ಕಾಲೇಜಿನ ಬಳಿಯಿದ್ದ ಅಯರಿಶ್ ಪ್ರೆಸ್ ಬೈಟೇರಿಯನ್ ಮಿಶನಿನ ಒಬ್ಬ ಹೆಂಗಸಿಗೆ ಈ ಕೆಲಸ ಕೊಡಲಾಗಿತ್ತು ಅವಳಿಗೆ 'ಪೆಟ್ಟಿ ಫಂಡ್' ಎಂಬ ಧರ್ಮಾರ್ಥ, ನಿಧಿಯಿಂದ ೫೦ ರೂಪಾಯಿ ಕೊಡಲಾಗಿತ್ತು ದಿವ್ವ ಸ್ತ್ರೀ ವಿದ್ಯಾರ್ಥಿಗಳಿಗೆ ಶಿಷ್ಟಾಚಾರ ಕಲಿಸಲು ಅವಳಿಗೆ ನೇಮಿಸಿದ್ದೆ ಇದು ನಿಜವಲ್ಲ ಸಮಾಚಾರ ಪತ್ರಿಕೆಗಳು ಗುಜರಾಥ ಕಾಲೇಜಿಗೆ ಒಂದಾಗಿ ೨೦ನೇ ಡಿಸೆಂಬರ ೯ನೇ ತಾರೀಖಿನ ಕಾಲೇಜಿನಲ್ಲಿ ನಾರಿತೋಷಕ ಹಂಚುವ ಸಮಾರಂಭವಾಗುವದಿತ್ತು ಇವರು ಬರಲಿಲ್ಲವಾದ್ದರಿಂದ ಆ ಸಮಾರಂಭವು ಅಷ್ಟಕ್ಕೇ ತಡೆಯಿತು

ಯುಗಾದಿಯ ಪವಿತ್ರ ಹಬ್ಬ ಇದೇ ಬಂತು!

ನಿಜವಾದ ಗ್ಯಾರಂಟಿಯುಳ್ಳ ಮೂಲ "ವೆಸ್ಟ ಎಂಡ್" ಘಡಿಯಾರಗಳನ್ನು ಕೊಳ್ಳಿರಿ.

ಯಾಕೆ?

ನಿಮ್ಮ ಆಪ್ತೇಷ್ಟರಿಗೆ ನಿಮ್ಮ ಸ್ಮರಣೆಯು ಪ್ರೀತಿಪೂರ್ವಕವಾಗಿ ಆಗಬೇಕೆಂದಿದ್ದರೆ, ಅವರಿಗೆ 'ವೆಸ್ಟ ಎಂಡ್' ಘಡಿಯಾರಗಳನ್ನು ಕೊಡಿರಿ

ನಿಮಗೆ ಸ್ವಂತ ಉಪಯೋಗಕ್ಕಾಗಿ ಸರಿಯಾಗಿ ಟೈಮು ತೋರಿಸುವ ಉತ್ತಮ ಪ್ರತಿಯ ಹಾಗು ಬಾಳಿಕೆಯ ಘಡಿಯಾರ ಬೇಕಾದರೂ, 'ವೆಸ್ಟ ಎಂಡ್' ಘಡಿಯಾರಗಳನ್ನೇ ಕೊಳ್ಳಿರಿ

ಸಾವಿರಾರು ಕಡೆಗಳಲ್ಲಿ ಜಾಹೀರಾತು ಕೊಟ್ಟ ಕನಿಷ್ಟ ಪ್ರತಿಯ ಘಡಿಯಾರುಗಳನ್ನು ಕೊಂಡು, ಸುಮ್ಮನೆ ಮೋಸಹೋಗಬೇಡಿ, ಆ ಘಡಿಯಾರಗಳೆಲ್ಲ ಅಗ್ಗದ ಸಾಮಾನುಗಳು, ನಿಮ್ಮ ಹಣವು ನಿರರ್ಥಕವಾಗುವದು!

ವೆಸ್ಟ ಎಂಡ- "ಕೀಪ-ಟೈಮ"

ಕೇಲೆಸ್, ಲಿವ್ಹರ

ನಿಕಲ್ ಸಿಲ್ವರ	ರೂ	೩೨
ರೋಲ್ಡ-ಗೋಲ್ಡ	,,	೪೨
೯ ಕ್ಯಾರೆಟ ಭಂಗಾರದ್ದು	,,	೫೦
೧೮ ಕ್ಯಾರೆಟ ಬಂಗಾರದ್ದು	,,	೭೦

ಸರಿಯಾಗಿ, ತಪ್ಪದೆ ವೇಳೆ ತೋರಿಸುವ ಘಡ್ಯಾಳಗಳು ಬೇಕೆ! ಕ್ಯಾಟಲಾಗು ಉಚಿತ!

ಮುಂಬಯಿ, **ವೆಸ್ಟ ಎಂಡ ವಾಚ್ ಕಂಪನಿ,** ಕಲಕತ್ತಾ.

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ

ನಮ್ಮಲ್ಲಿ ಮೋಟಾರಿನಲ್ಲಿ ಹಾಕುವ, ಉತ್ತಮ ರೀತಿಯಿಂದ ತಯಾರಿಸಿದ ತೆಂಗಿನ ನಾರಿನ ಚಾಪೆಗಳು ಸಿಗುತ್ತವೆ.

ದರ ಪ್ರತಿ ಅಡಿಗೆ ೦-೩-೬

ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಜಲೋಹಟ್ಟಿಗೆಯಿಂದ ತಯಾರಿಸಿದ ಬಗೆ ಬಗೆಯ ಪೆಟ್ಟಿಗೆಗಳು ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ

ಪೆಟ್ಟಿಗೆ ೧ರ ಬೆಲೆ ರೂ ೩ ಸೈಜ ೩" x ೧" x ೧"

ಬೇಕಾದವರು ಅರತೆಯ ಸಮೇತ ರೂ ೨-೦-೦ ಮುಂಗಡವಾಗಿ ಕಳಿಸಬೇಕು

ಪತೆ — ಎಸ್. ಎಮ್ ಪಂಡಿತ

ನೋಟಾರ ಟಿಕೇಟ ಆಫೀಸ, ದುರ್ಗಾಕೇರಿ. ಹೊನ್ನಾವರ (ಉ ಕ)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ ತೀಸೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಕನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ —

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಕಾನಡಾ ವೃತ್ತ.

ವಿಭವ ಸಂ॥ ಫಾಲ್ಗುಣ ಶು॥ ೧೪ ೬, ಸೋಮವಾರ

ಕುಟಿಲ ಕಾರಸ್ಥಾನಗಳು.

ನಮ್ಮ ಬ್ರಿಟಿಶರ ಕುಟಿಲ ಕಾರಸ್ಥಾನಗಳಿಗ ಈಗ ಉಕ್ಕೇರಿ ಬಂದಿದೆ. ಸತ್ಯವನ್ನು ಅಡಗಿಸಿಡಲು ಒಂದು ಸುಳ್ಳನ್ನಾಡಿದರೆ, ಆ ಸುಳ್ಳನ್ನು ಸತ್ಯವನ್ನಾಗಿ ರೂಪಾಂತರಿಸಲು ಹತ್ತು ಸುಳ್ಳು ಹೇಳಬೇಕಾಗುತ್ತದೆ, ಸುಳ್ಳು ವ್ಯಾಪಾರಗಳಿಗೂ ಎಡೆಗೊಡಬೇಕಾಗುತ್ತದೆ. ಇಷ್ಟಾಗಿಯೂ, ಸುಳ್ಳು ಸತ್ಯವಾಗುವದಿಲ್ಲ, ಸತ್ಯವು ಮರೆಯಾಗುವದಿಲ್ಲ. ದಬ್ಬಿ ದಬ್ಬಿದರೂ, ಸತ್ಯವು ಉಬ್ಬಿ ಉಬ್ಬಿ ಉಬ್ಬಿ ಬೈಲಿಗೆ ಬಂದೇಬರುತ್ತದೆ. ಬೈಲಿಗೆ ಬರುವಾಗ ಮಾತ್ರ ಸತ್ಯವನ್ನು ದಬ್ಬುವವನ ರಕ್ಕಸತನವು ಕೂಡಲೇ ಲೋಕಕ್ಕೆ ಸಾರಿ ಲೋಕದಲ್ಲೆಲ್ಲ ಅಪಹಾಸ್ಯವನ್ನುಂಟುಮಾಡುತ್ತದೆ. ಅದರಿಂದಲೇ ಅಮೇರಿಕೆಯ ವಿಖ್ಯಾತ ಅಧ್ಯಕ್ಷರಾಗಿದ್ದ ಲಿಂಕನ್ ಸಾಹೇಬರವರು (You can deceive some People for some time, all people for some but not all people for all times) "ನೀವು ಕೆಲವರಿಗೆ ಕೆಲ ಕಾಲ ರಕ್ಕಿಸಬಹುದು, ಎಲ್ಲರಿಗೂ ಕೆಲವು ಕಾಲದವರೆಗೆ ಠಕ್ಕಿಸಬಹುದು, ಆದರೆ, ಎಲ್ಲರಿಗೂ ಶಾಶ್ವತವಾಗಿ ರಕ್ಕಿಸಲಾರಿರಿ," ಎಂದು ಲೋಕವಂಚಕರಿಗೂ, ಲೋಕಕಂಟಕರಿಗೂ ಎಚ್ಚರಿಕೆ ಕೊಟ್ಟಿದ್ದಾರೆ. ಆದರೂ, ನಮ್ಮ ಬ್ರಿಟಿಶರು ಬುದ್ಧಿಗಲಿಯರು. ತಮ್ಮ ಬಳಿ ಅಧಿಕಾರವಿರುವದೆಂದು ಕುಟಿಲ ಕಾರಸ್ಥಾನಗಳನ್ನು ಅಂತರಂಗದಿ ಕೈಕೊಳ್ಳುತ್ತಿದ್ದಾರೆ. ಆದರೆ, ಈ ಕಾರಸ್ಥಾನಗಳೆಲ್ಲ ಬಯಲಾಗುತ್ತಿವೆ, ಬಹು ಬೇಗನೆ ಬಯಲಾಗುತ್ತಿವೆ. ಸದ್ಯದ ಒಂದು ಉದಾಹರಣೆಯನ್ನು ಹೇಳುತ್ತೇವೆ.

ಸ್ಯಾಯಮನ್ ಕೂಟಕ್ಕೆ ಭರತ ಭೂಮಿಯಲ್ಲಿ ಸುಸ್ವಾಗತವಾಯಿತೆಂಬ ವೇಷ ಬರೆಯಲು ಬ್ರಿಟಿಶರು ನಾನಾಪರಿಯಿಂದ ಹೆಣಗಾಡುತ್ತಿದ್ದಾರೆ. ಈ ತನಕ ವಾರ್ತಾವಾಹಕರು ಬ್ರಿಟಿಶ ಪಕ್ಷಪಾತಿಗಳಿದ್ದದರಿಂದ ಈ ವೇಷಕ್ಕೆ ಯಾವಾಗಲೂ ಪುಟವೇ ದೊರಕುತ್ತಿತ್ತು. ಹಿಂದುಸ್ಥಾನದೊಳಗಿನ ಪರಿಸ್ಥಿತಿಯು ಅದಷ್ಟರ ಮಟ್ಟಿಗೆ ಬ್ರಿಟಿಶರಿಗೆ ಅನುಕೂಲವಾಗಿಯೇ ತೋರಲ್ಪಡುತ್ತಿತ್ತು. ಅತ್ತ "ಫ್ರೀ ಪ್ರೆಸ್" ಎಂಬ ಹೊಸ ವಾರ್ತಾವಾಹಕ ಸಂಸ್ಥೆಯು ನಿರ್ಮಾಣವಾದಂದಿನಿಂದ ಬ್ರಿಟಿಶ ಪಕ್ಷಪಾತಿ ಸಂಸ್ಥೆಗಳ ಬೆಂಡು ಹೊರಬೀಳಹತ್ತಿ, ಬ್ರಿಟಿಶರ ರಾಜ್ಯಾಡಳಿತೆಯ ಚೇಷ್ಟೆಗಳೂ ಬಯಲಾಗುತ್ತಿವೆ. ಆದರಿಂದ ಬ್ರಿಟಿಶ ರಾಜ್ಯಾಧಿಕಾರಿಗಳು "ಫ್ರೀ ಪ್ರೆಸ್" ವಾರ್ತಾವಾಹಕ ಸಂಸ್ಥೆಯ ಮೇಲೆ ಕಾಕದೃಷ್ಟಿಯನ್ನಿಟ್ಟಿದ್ದಾರೆ. ವಾಸ್ತವ ವೃತ್ತಾಂತವನ್ನು ತಿಳಿಸುವ ಸುದ್ದಿಗಳನ್ನು ಅಲ್ಲಿಂದಲೇ ಬಚ್ಚಿಟ್ಟುಕೊಂಡು, ಸುದ್ದಿಯ ಸ್ವಾರಸ್ಯ ಕಳೆದುಹೋದ ಬಳಿಕ, ಇತ್ತ ಹೊರಡೂಡಲ್ಪಡುತ್ತಿವೆ. ಈ ಕೀರ್ತಿ ವಿಲಾಯತಿಯೊಳಗಿನ ಪಾರ್ಲಿಮೆಂಟಿನಲ್ಲಿ ಮಿ॥ ಲೆನ್ಸಬೆರಿಯವರು ಪ್ರಶ್ನೆ ಕೇಳಲು, ವರಿಷ್ಠ ಕಾಯಿದೆ ಕೌನ್ಸಿಲಿಗೆ ಹವಾಲೆ ಹಾಕಿ, ಭಾರತ ಮಂತ್ರಿಗಳಾದ ವಿಂಟರಟನ್ ದೊರೆಗಳು ಪಾರಾಗಿಬಿಟ್ಟರು. ಹವಾಮಾನದ ಮೂಲಕ "ಫ್ರೀ ಪ್ರೆಸ್ಸ"ನವರು ಕಳುಹಿದ ಸುದ್ದಿಗಳು ಸಕಾಲದಲ್ಲಿ ಮುಟ್ಟದಿರಲಿಕ್ಕಿಲ್ಲವಾಗಿಯೂ, ತಂತಿ ಕಾಯಿದೆಯು ಐದನೇ ಕಲಮಿನ ಪರಿಸ್ಥಿತಿಯುಂಟಾಗಿ, ಈ ಸುದ್ದಿಗಳಿಗೆ ಸರಕಾರದಿಂದ ತಡೆ ಬಿದ್ದಿರಬಹುದಾಗಿಯೂ ವಿಂಟರಟನ್ ದೊರೆಗಳು ಗುಂಡು ಹೊಡೆದ, ಲೆನ್ಸಬೆರಿಯವರಿಗೆ ಸುಮ್ಮಗಾಗಿಸಿ ಬಿಟ್ಟರು.

"ಫ್ರೀ ಪ್ರೆಸ್ಸ"ನ ಕಾರಬಾರಿ ಪ್ರಮುಖರು ಈ ವಿಷಯ ತಮ್ಮ ಸಂಸ್ಥೆಗೊದಗಿದ ಕಷ್ಟಗಳನ್ನು ಸಂಕ್ಷಿಪ್ತವಾಗಿ ಪ್ರಕಟಿಸಿದ್ದಾರೆ. ಸಾಮಾನ್ಯವಾಗಿ "ರೇಡಿಯೋ" ಯಂತ್ರದಿಂದ ಸುದ್ದಿ ಕಳುಹಿದರೆ ೪ ೬ ತಾಸುಗಳಲ್ಲಿ ಮುಂಬಯಿ-ಲಂಡನ್‌ಗಳ ಸುದ್ದಿ ತಿಳಿಯುತ್ತದೆ. ಜನವರಿ ೨೨ ನೇ ತಾರೀಖಿಗೆ 'ವಿಹಾರಿ'ಯು (ಫ್ರೀ ಪ್ರೆಸ್ ಸಂಸ್ಥೆಯ ತಂತಿ ಪತ್ರವು 'ವಿಹಾರಿ' ಎಂದಿದೆ.) ಲಂಡನಿನಿಂದ ಮುಂಬಯಿಗೆ ಅಫಘಾಣಿಸ್ಥಾನದ ಅಮೀರರಾದ ಅಮಾನುಲ್ಲಾಖಾನರವರ ಅಭಿಪ್ರಾಯವನ್ನೊಂದು ತಿಳಿಸಿದ್ದನು. ಲಂಡನಿನೊಳಗಿನ 'ಡೇಲಿ ಮೇಲ' ಪತ್ರಿಕೆಯು ಇಟಾಲಿ ದೇಶದ ನೇಪಲ್ಸದೊಳಗಿನ ಪ್ರತಿನಿಧಿಗಳ ಬಳಿ ಅಮೀರರು ಆಡಿದ ವಚನಗಳವು ಆ ಕಾಲಕ್ಕೆ ಅವು 'ಡೇಲಿ ಮೇಲ' ಪತ್ರಿಕೆಯಲ್ಲಿ ಪ್ರಕಟವಾಗಿದ್ದವು.

'ವಿಹಾರಿ'ಯು ಸರ್ ಪರ್ಸಿವಲ್ ಫಿಲಿಪ್ಸರವರೊಡನೆ ನಡೆದ ಮಾತುಕಥೆಯನ್ನು ಸರಕಾರದ ಕಾರಸ್ಥಾನವನ್ನೂ ಈ ಪ್ರಕಾರ ಬರೆಯುತ್ತಾನೆ —

"ಬ್ರಿಟಿಶ ರಾಷ್ಟ್ರಕ್ಕೆ ಸ್ನೇಹಭಾವದ ಸಂದೇಶವನ್ನು ನನ್ನ ಮೂಲಕ ತಾವು ಕಳುಹಬಹುದೇನೆಂದು ನಾನವರಿಗೆ (ಅಮೀರರಿಗೆ) ಕೇಳಿದನು. ಅವರು ಅನುಮಾನಿಸಿದರು. ತಾವು ಬ್ರಿಟಿಶ ರಾಷ್ಟ್ರದ ಗೆಳೆಯರೆಂದು ಮರೊನಾನು ಹೇಳಬಹುದೇನ? ಎಂದು ನಾನು ಪ್ರಶ್ನಿಸಿದೆನು, ಅಮೀರರು ಪ್ರಧಾನರ ಕಡೆಗೆ ನೋಡಿದರು; ಹಾಗೆಯೇ ನನ್ನ ಕಡೆ ನೋಡಿದರು. ಮತ್ತು ಮಾತಾಡಿದ್ದೇನಂದರೆ:— ಲಂಡನಿಗೆ ಹೋಗಿ ನಿಮ್ಮ ಪರರ ಪ್ರೀಯ ಮಂತ್ರಿಗಳೊಡನೆ ಮಾತಾಡಿದಕೆಂತು ಏನಾಗುತ್ತದೆ ನೋಡುವ. ಈ ತಂತಿಯು ೨೬ ನೇ ತಾರೀಖಿನ ಮಧ್ಯಾಹ್ನಕ್ಕೆ ಮುಂಬಯಿಯ 'ವಿಹಾರಿ'ಯ ಕಡೆಗೆ ಬಂತು. ಮುಂಬಯಿಗೆ ಈ ತಂತಿಯು ೨೬ ನೇ ತಾರೀಖಿನ ಅವಧಾನಕ್ಕೇ ಬಂದು ಮುಟ್ಟಿತು. ವಿಚಾರಿಸಿದರೆ, ಪ್ರಾಂತಿಕ ಸರಕಾರದ ಕಡೆ ಈ ತಂತಿಯು ತಪಾಸಿಗೆ ಹೋಗಿತ್ತಾಗಿ ತಿಳಿದುಬಂತು. ಮೇಲೆ ಕೊಟ್ಟ ಸುದ್ದಿಯು ಆ ತಂತಿಯಲ್ಲಿರಲಿಲ್ಲ. ಅದರಿಂದ ಈ ಸುದ್ದಿ ಕಳಿಸಿದ ಹಾಗೆ ತೋರಲಿಲ್ಲ. ಲಂಡನಿನಿಂದ ಟಪಾಲು ೩೦ ದಿನ ಬಳಿಕ, ಈ ಸುದ್ದಿಯಿದ್ದ ಪತ್ರವಾಯಿತು. ಇದಲ್ಲದೆ, ಸ್ಯಾಯಮನ್ ಕೂಟದ ಬಹಿಷ್ಕಾರದ ಸಮಯ ಕಳಿಸಿದ ತಂತಿಗಳು ಕಾಲಕಾಲಕ್ಕೆ ವಿರಾಯತಿಗೆ ಮುಟ್ಟದ. ನಿರರ್ಥಕವಾದವು. ಕಾಲವಿಕ್ಕಿ ಸುದ್ದಿ ಕಳುಹಿದರೆ, ವರ್ತಮಾನಪತ್ರಿಕೆಗಳು ಅವನ್ನು ಪ್ರಕಟಿಸುವದಿಲ್ಲ. ಹಳೇ ಸುದ್ದಿಗಳನ್ನು ಪ್ರಕಟಿಸುವರ್ಯಾರು? ದಿಲ್ಲಿ ಮುಂಬಯಿ, ಮದ್ರಾಸ, ಕಲಕತ್ತೆಗಳಲ್ಲಿ ಕಳಿಸಿದ ಸುದ್ದಿಗಳು ಸಹ ಹೀಗೆಯೇ ನಿರರ್ಥಕವಾದವಾಗಿ 'ವಿಹಾರಿ'ಯ ಚಾಲಕರು ದೂರುತ್ತಾರೆ. ಹೀಗೆ ಮಾಡಿದರೆ, ಈ ಉದ್ಯೋಗವನ್ನು ಇನ್ನು ಮುಂದೆ ನಡಿಸುವದು ಕಷ್ಟವೆಂದೂ, 'ವಿಹಾರಿ'ಯು ಬರೆಯುತ್ತಾನೆ. ಹೀಗೆ ಬಂದೆರಡು ದಿನಗಳಲ್ಲಿ ಇಂಥ ಸುಮಾರು ಕಷ್ಟಗಳುಳ್ಳ ಮಹತ್ವದ ಸುದ್ದಿಗಳು ತಾಣಗಳಲ್ಲಿ ಕೈಸೇರದೆ, 'ವಿಹಾರಿ'ಯು ವ್ಯಗಳ್ಳನೆಂದು ... ಪಮಾದಕ್ಕೆ ಗುರಿಯಾದನು. ಈ ಕುರಿತು ತಂತಿಖಾತೆಯ ಕಡೆ ಚೌಕಶಿ ನಡೆದರೆ, ತಂತಿ ಕಾನೂನಿನ ಐದನೇ ಕಲಮಿನಿಂದ ಕೂಡ ಪ್ರಶ್ನೆಯು ತಡೆಯುವಷ್ಟು ಅದಕ್ಕೆ ಲವು ಬವಗಿ ಬರಲಿಲ್ಲವಾಗಿದೆ, 'ವಿಹಾರಿ'ಯು ಪ್ರತಿಪಾದಿಸಿದ್ದಾನೆ. ಇದಿಂತಿರಲಿ.

ಬ್ರಿಟಿಶರು ಈ ಪ್ರಕಾರ ವಂಚನೆ ಮಾಡುವ ಕಾರಣವೇನು? ಇಂಥ ರಕ್ಕಸ ವ್ಯಾಪಾರಗಳಿಂದ ಸ್ಯಾಯಮನ್ ಕೂಟವು ಇಷ್ಟವೆಂದು ಜಗತ್ತಿಗೆ ಸಾರಬಹುದೇನು? ಆತ್ಮವಂಚನೆಯನ್ನು ಕೆಲವು ಕಾಲದ ವರೆಗೆ ನಡಿಸಿದಾಗ್ಯೂ, ಲೋಕವಂಚನೆ ಸಾಧ್ಯವಾಗುವದೇ? ಸುದ್ದಿಗಳು ಸಕಾಲ ತಿಳಿದಲ್ಲಿ, ಪರಿಸ್ಥಿತಿಯು ಶೀಘ್ರವೇ ಗೋಚರವಾದ್ದಲ್ಲಿ ಬ್ರಿಟಿಶ ಮುತ್ಸದ್ದಿಗಳಾಗಲಿ, ಸಾಮ್ರಾಜ್ಯ ಹಿತಚಿಂತಕರಾಗಲಿ ಮುಂದಿನ ಅನರ್ಥಪರಂಪರೆಯನ್ನು ಮುಂದಾಗಿ ಆಲೋಚಿಸಿ, ಅವುಗಳ ನಿವಾರಣೋಪಾಯಗಳನ್ನು ಕಲ್ಪಿಸುವರು. 'ವಿಹಾರಿ'ಯು ನುಡಿದಂತೆ, ಅಯಥಾರ್ಥ ವೃತ್ತಾಂತದಿಂದ ಬ್ರಿಟಿಶರು ದಿಕ್ಕುತಪ್ಪಿ ಹೋಗಿ ಭಾರತದೆಂದು ವಾಸ್ತವವಾದ ಸಮಾಚಾರವನ್ನು ಮುಂದಾಗಿಯೇ ತಿಳಿಸುವದು ಇತ್ತೀಚಿನವರಿಗೂ ಇಷ್ಟವಿಲ್ಲವೇ? ಬ್ರಿಟಿಶರು ಮುಚ್ಚುಕಿಯ ಕೋಳಿಯನ್ನು ಒಚ್ಚಿಟ್ಟು, ಸಹಸ್ರಾರ ಸೂರ್ಯನಾರಾಯಣನನ್ನು ಮರೆಮಾಡ... ಮುಂದಾಗ ಪ್ರವೃತ್ತರಾಗುವಷ್ಟು ಮೂರ್ಖರು. ಬ್ರಿಟಿಶರು ವ್ಯವಹಾರಚತುರರಂತೆ, ಮುತ್ಸದ್ದಿಗಳಂತೆ, ಕಾರ್ಯದಕ್ಷರಂತೆ. ಹೀಗಿದ್ದು, ಅಂತರಂತ ಇಂಥ ಕುಟಿಲ ಕಾರಸ್ಥಾನಗಳಿಗೆ ಹೋಗುವದೇಕೆ? ಇದರಿಂದ ಯಾರಿಗೂ ಹಿತವಿಲ್ಲ, ಇವರ ಮೇಲೆ ನಂಬಿಗೆಯನ್ನೂ ಯಾರ ಇರುವದಿಲ್ಲ. ಅಫಘಾಣಿಸ್ಥಾನದ ಅಮೀರರಾದ ಅಮಾನುಲ್ಲಾಖಾನರವರು ಬ್ರಿಟಿಶರೊಡನೆ ಸ್ನೇಹಭಾವವಿರುವದಾಗಿ ಹೇಳಲು ಸಹ ಬೇಳೇ ಅನುಮಾನ ಮಾಡಿದರು. ನಿಶ್ಚಿತ ಉತ್ತರ

ನ್ನು ಕೊಡಲೊಪ್ಪಲಿಲ್ಲ. ಲಂಡನಿಗೆ ಹೋಗಿ ಪರರಾಷ್ಟ್ರೀಯ ಪ್ರಧಾನರ ಬಳಿ ಸ್ವತಃ ಮಾತನಾಡಿ ಅವರ ಮನೋಗತವನ್ನು ತಿಳಕೊಳ್ಳುವ ನಕ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಅಂದ ಬಳಿಕ, ಬ್ರಿಟಿಶರ ಮೇಲೆ ನಂಬಿಗೆಯನ್ನು ಈಗಲೇ ಯಾರೂ ಇಡುವದಿಲ್ಲವೆಂದು ಹೇಳಬಹುದು. ಆದರೂ, ಕುಟಿಲ ಕಾರಸ್ಥಾನಗಳನ್ನು ಕೈಕೊಂಡು ಲೋಕದಲ್ಲಿ ನಗಗೇಡಾಗುವದೇಕೆ? 'ವಿಹಾರಿ'ಯಂಥ ಸತ್ಯಪ್ರಿಯರಂತರಿಗೆ ನಿಷ್ಠುರಪಡಿಸುವದೇಕೆ? ಬ್ರಿಟಿಶರು ಇನ್ನೂ ಆಳವಾಗಿ ವಿಚಾರಿಸಲಿ; ಮೇಲ್ಯಂಡ ಲಿಂಕನ್ ಸಾಹೇಬರ ವಚನವನ್ನು ಚನ್ನಾಗಿ ಆಲಿಸಲಿ. ಅಂದರೆ, ಅವರಿಗೂ ಹಿತವಿದೆ ನಮಗೂ ಹಿತವಿದೆ. ಲೋಕಕ್ಕೆ ಕ್ಷೇಮವಾಗುವದು. ಇಲ್ಲದಿದ್ದರೆ, ಮಾಡಿದ್ದುಣ್ಣೋ ಮಹಾರಾಯಾ!!

ಸ್ಫುಟ ಸೂಚನೆಗಳು.

೧. ಸ್ಯಾಯಮನ್ ಕಮಿಟಿಗೆ 'ಸ್ವಾಗತವಾಗುತ್ತದೆಂದು' ತೋರಿಸುವ ಪ್ರಕಾರದೊಳಗಿನ ಒಳಗುಟ್ಟು ಇತ್ತಿತ್ತ ಹೆಚ್ಚೆಚ್ಚಿಗೆ ಹೊರಬೀಳುತ್ತಿದೆ. ಮದ್ರಾಸದಲ್ಲಿ ಆ ಮಹಾರಾಯರು ಹೋದಾಗ ಭೀಕರವಾದ ಹರತಾಳವು ಆಚರಿಸಲ್ಪಟ್ಟಿತು. ಕೆಲವೆಡೆಗಳಲ್ಲಿ ಈ ಮಹಾರಾಯರ ಆಗಮನದ ಸದ್ದಿಯಾದೊಡನೆ ಜನರು ಪೇಟೆಯನ್ನು ಮುಚ್ಚಿ ಓಡಿದರು. ಮದ್ರಾಸ ಕೌನ್ಸಿಲಿನೊಳಗಿನ ಪ್ರಧಾನರಿಬ್ಬರು ಬಹಿಷ್ಕಾರವನ್ನು ಪಾಲಿಸುವವರಿದ್ದಾರಂತೆ. ಪ್ರಧಾನ ಪ್ರಮುಖರಾದ ರಾ|| ಸುಬ್ಬರಾಯನ್‌ರವರು ಸ್ಯಾಯಮನ್‌ರ ಕಮಿಟಿಗೆ ಸ್ವಾಗತ ಮಾಡಬೇಕೆಂಬ ಅಭಿಪ್ರಾಯವುಳ್ಳವರಾದ್ದರಿಂದ ಅವರ ಮೇಲೆ ಅವಿಶ್ವಾಸದರ್ಶಕ ಠರಾವನ್ನು ಕಳೆದ ಶುಕ್ರವಾರದ ಕಾಯಿದೆ ಕೌನ್ಸಿಲಿನಲ್ಲಿ ಚರ್ಚಿಸಲ್ಪಡುವದಿತ್ತು. ಸ್ವಾಗತದ ಸಂತಿಗಳೂ ಕಳಿಸಲ್ಪಡುತ್ತವೆ. ನಮ್ಮ ಕರ್ನಾಟಕದೊಳಗಿನ ವಿಜಾಪುರದ ಮ್ಯು|| ಅಧ್ಯಕ್ಷರಿಂದಲೂ ಹಿಂದು ಸಂತಿ ಹೋಯಿತು; ಬಾಗಲಕೋಟೆಯ ಮ್ಯುನಿಸಿಪಾಲಿಟಿಯವರಿಂದಲೂ ಹೋಗುವದಿತ್ತು. ಎರಡೂ ಸಂತಿಗಳು ಬರೇ ಅಧ್ಯಕ್ಷರ ಬಳಿಗೆ ಸಹಕಾರರಾಗಿ ಸಹಿ ಬಗ್ಗೆ ಬಂದಿತ್ತಾಗಿ 'ಕರ್ಮವೀರ' ಪತ್ರಿಕೆಯ ಚಿತ್ರಗುಪ್ತರು ಪ್ರಕಟಿಸುತ್ತಾರೆ. ಬಾಗಲಕೋಟೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಜಾನಾವಳಿಯ ಅಡಿಗೆಯನ್ನು ಉಣ್ಣಲೊಪ್ಪಲಿಲ್ಲ. ಮ್ಯುನಿಸಿಪಾಲಿಟಿಯನ್ನು ಕೇಳಿದನಕ ತಾವು ಸಹಿ ಮಾಡಲಾರೆವೆಂದರಂತೆ. ವಿಜಾಪುರದವರು ಎದೆಗಟ್ಟಿ ಮಾಡಿ, ಸಹಿ ಮಾಡಿ ಸಂತಿ ಕಳಿಸಿಬಿಟ್ಟರಂತೆ! ಮತ್ತೊಂದು ಸಂತಿಯ ಚಮತ್ಕಾರವನ್ನು 'ಫಾರವರ್ಡ' ಪತ್ರಿಕೆಯು ಹೊರಹಾಕಿದೆ! ಕ್ಷೀರಶಿಪಾವಲ್ ಎಂಬ ಬಂಗಾಲದ ಕಡಂಬಗಾಡಿ ಗ್ರಾಮದವರೊಬ್ಬರು ಸ್ಯಾಯಮನ್‌ರವರಿಗೆ ಸ್ವಾಗತ ಮಾಡಿದರಂತೆ. ಚೌಕಶಿ ಮಾಡಿದರೆ, ಈ ಹೆಸರಿನ ಪ್ರಾರಂಭಿಕರು ಯಾರೂ ಇರಲಿಲ್ಲ. ಮತ್ತೆ ಶೋಧ ನಡಿಸಲಾಯಿತು, ಆಗ ಸತ್ಯವು ಹೊರಬಿತ್ತು! ಈ ಹೆಸರಿನ ಮನುಷ್ಯರಿದ್ದರಂತೆ; ಅವರು ತೀರಿ ೧೫ ವರುಷಗಳಾದವಂತೆ! ಸ್ಯಾಯಮನ್ ಕಮಿಟಿಯ ಲೋಕೋಪಕಾರವನ್ನು ನೆನಿಸಿ, ಮೃತಾತ್ಮರೂ ಕೂಡ ಸಂತಿ ಕಳಿಸಲುದ್ಯುಕ್ತರಾಗಿದ್ದಾರೆ! ಹಿಂಗೋಲ ಎಂಬ ಗ್ರಾಮದಲ್ಲೊಬ್ಬರು ಸ್ಯಾಯಮನ್‌ರವರಿಗೆ ಕಾಣಹೋಗಿದ್ದರು. ಅವರಬಳಿ ರಾಷ್ಟ್ರದ ಕಷ್ಟವನ್ನು ಸ್ಯಾಯಮನ್‌ರು ಕೇಳಿದರು. 'ನಾನೇನು ಹೇಳಲಿ? ಸಾಮಾನ್ಯನು ನಾನು. ನನ್ನಿಂದ ರಾಷ್ಟ್ರದ ಕಷ್ಟಗಳು ಹೇಳಬರುವದಿಲ್ಲ, ಲೋಕನಾಯಕರೆಲ್ಲರೂ ಬಹಿಷ್ಕಾರವನ್ನಾಚರಿಸಿದ್ದಾರೆ.'' ಎಂದು ಬಹಿಷ್ಕಾರದ ಪರಿಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆಯೇ ವಿವರಿಸಿದರು. ಸ್ಯಾಯಮನ್‌ರಿಗೆ ಮರ್ಯಾದೆಯಿದ್ದರೆ, ಇನ್ನು ಈ ಲೋಕೋಪಕಾರದ ಗೊಡವೆಗೆ ಹೋಗದೆ ಅವರು ಮರಳಬೇಕು; ಇದೇ ಉತ್ತಮ ಪಕ್ಷವು.

---

೨. ಆದರೂ, ಸರಕಾರವು ಕುತಂತ್ರಗಳನ್ನು ಬಿಡಲೊಲ್ಲದು. ಇದಕ್ಕೆಲ್ಲ ನೆಪ್ಪು ಹಾಕಿದರೆ, ಅವರು ನೆಪ್ಪು ಹಾಕುತ್ತಿದ್ದರೆ, ನಾವು ಇಷ್ಟು ನಿಕರದಿಂದ ಬಡಿದಾಡುವ ಪ್ರಸಂಗ ಬರುತ್ತಿರಲಿಲ್ಲ. ಸ್ಯಾಯಮನ್‌ರ ಸಂಚಾರ ಖರ್ಚಿಗಾಗಿ ೩೦ ಸಾವಿರ ರೂಪಾಯಿಗಳು ನಮ್ಮ ಮುಂಬಯಿ ಪ್ರಾಂತಿಕ ಖರ್ಚಿನ ಸದರಿನಲ್ಲಿ ಸೇರಿಸಲ್ಪಟ್ಟಿವೆ. ಇವು ಮಂಜೂರಾಗುವವು. ಮದ್ರಾಸ, ಮಧ್ಯಪ್ರಾಂತ, ಬಂಗಾಲ, ಪಂಜಾಬ ಮುಂತಾದ ಕಾಯಿದೆ ಕೌನ್ಸಿಲುಗಳಲ್ಲಿಯೂ ಹೀಗೆಯೇ ರಕಮುಗಳು ಸೇರಿಸಲ್ಪಡುವವು. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೂ ಕೆಲವು ರಕಮು ಮಂಜೂರ ಮಾಡಿಕೊಳ್ಳುವ ವಿಚಾರ ನಡೆದಿದೆ. ಲೋಕಪಕ್ಷದ ಸಭಾಸದರು ಗೈರಹಾಜರಿದ್ದಾಗ, ಈ ರಕಮನ್ನು ಮಂಜೂರ ಮಾಡಿಕೊಳ್ಳುವ ವಿಚಾರವಿರುವದಾಗಿ ತಿಳಿಯುತ್ತದೆ. ಹೀಗೆ ಹಣ ಮಂಜೂರಾದ ಬಳಿಕ, ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಬಹಿಷ್ಕಾರದ ಠರಾವನ್ನು ಸ್ವಾಗತ ಠರಾವಿನಲ್ಲಿ ರೂಪಾಂತರಿಸಿಕೊಳ್ಳುವ ಪ್ರಯತ್ನಗಳು ಹಿಂದುಸ್ಥಾನ ಸರಕಾರದ ಕಡೆಯಿಂದ ನಡಿಯುವದಾಗಿಯೂ ಸುದ್ದಿ ಹಬ್ಬಿದೆ. ಇವೆಲ್ಲ ಅಸ್ತ್ರಧಾರಿಗಳು. ರಾಜಮಾರ್ಗದಿಂದ ಪರಾಭವ ಹೊಂದಿದ ಬಳಿಕ, ಸರಕಾರವು ಅಸ್ತ್ರಧಾರಿಗಳನ್ನು ಕೈಕೊಂಡಿದೆ. ಅಸ್ತ್ರಧಾರಿಗಳಲ್ಲಿಯೂ ರಾಷ್ಟ್ರೀಯರು ಇವರಾಗಿ, ಅವರನ್ನು ಹಿಡಿಸಬೇಕಾಗಿ ದೇಶಾಭಿಮಾನಿಗಳ ಅರಿಕೆಯಿದೆ. ಸಮಯವು ಬಹು ಇಕ್ಕಟ್ಟಿನದ್ದಾದ್ದರಿಂದ ಸಮಸ್ತರೂ 'ಜಾಗರೂಕರಾಗಿ ನಡೆಯತಕ್ಕದ್ದು. ಸರಕಾರವು ಅಧಿಕಾರ ಬಲದಿಂದ ಬೇಕಾದ್ದನ್ನು ಮಾಡಲಿ, ಅದರ ಗೊಡವೆ ನಮಗೆ ಏನೂ ಇಲ್ಲ. ನಾವು ಮಾತ್ರ ಸ್ವಾಗತಕ್ಕೆ ಯಾವದೇ ಪ್ರಕಾರದಿಂದ ಅನುಮತಿ ಕೊಡಲಾಗದು.

---

೩. ಹಿಂದುಸ್ಥಾನದ ಜಮಾ-ಖರ್ಚಿನ ಪತ್ರಿಕೆಯು ಕಳೆದ ಗುರುವಾರ ತಾ. ೧ನೇಗೆ ಪ್ರಕಟವಾಗಿದೆ. ಇನ್ನೂ ಹೊಸ ಕರಗಳು ಹೇರಲ್ಪಡಲಿಕ್ಕಿಲ್ಲವಾಗಿ ಈ ವರುಷದ ಮಟ್ಟಿಗೆ ನಿಶ್ಚಿತವಾಗಿ ಹೇಳಬಹುದು. ೧೯೧೪ರ ಯುದ್ಧಕಾಲದಲ್ಲಿ ಹೇರಿದ ಹಳೇ ಕರಗಳಾವವೂ ರದ್ದಾಗುವದಿಲ್ಲ. ಯುದ್ಧಕಾಲದಲ್ಲಿ ಹೆಚ್ಚಿಗೆಯಾಗಿ ಹೇರಿದ ೪|| ಕೋಟಿ ಕಂಬಾಯವನ್ನು, ನಾವು ಯುದ್ಧ ಮುಗಿದರೂ ತೆರುತ್ತಿರಲೇಬೇಕು. ಖರ್ಚ ಯುದ್ಧಕಾಲಕ್ಕಿಂತ ಈಗ ಹೆಚ್ಚಿದೆ. ೧೯೧೭-೧೮ ನೇ ಇಸವಿಯಲ್ಲಿ, ಅಂದರೆ, ಯುದ್ಧಕಾಲದಲ್ಲಿ ೧ ಅಬ್ಜ, ೬ ಕೋಟಿ ರೂಪಾಯಿಗಳು ಖರ್ಚಿಗೆ ಬೇಕಾಗಿದ್ದವು. ಈ ವರುಷ ೧ ಅಬ್ಜ, ೬೯ ಕೋಟಿ ೩೦ ಲಕ್ಷ ರೂಪಾಯಿಗಳು ಖರ್ಚಿಗೆ ಬೇಕು. ಸೈನ್ಯ ಖಾತೆಗೆ ಕಳೆದ ವರ್ಷಕ್ಕಿಂತ ಈ ವರುಷ ೧೪ ಲಕ್ಷ ರೂಪಾಯಿಗಳು ಹೆಚ್ಚಿಗೆ ಖರ್ಚಾಗುವವು. ಅಂತು ಈ ಖಾತೆಗೆ ೫೫ ಕೋಟಿ ೧೦ ಲಕ್ಷ ರೂಪಾಯಿಗಳು ಖರ್ಚಾಗುವವು. ೫೦ ಕೋಟಿಗೆ ಮಿಕ್ಕಿ ಖರ್ಚ ಮಾಡಬಾರದೆಂದು ಇಂಚಕೇಪ ಕಮಿಟಿ ಎಂಬ ಮಿತವ್ಯಯ ಮಂಡಳವು ಸರಕಾರಕ್ಕೆ ಗೆರೆ ಹಾಕಿ ಕೊಟ್ಟಿತ್ತು. ಮೂರು ಗೆರೆ ಹಾಕಿ ಕೊಟ್ಟಿತ್ತು; ಆದರೂ, ೫೫ ಕೋಟಿ ರೂಪಾಯಿಗಳಂತೆ ಖರ್ಚಾಗುತ್ತಲಿದೆ. ಸಾಮಾನ್ಯ ರಾಜ್ಯಕಾರಭಾರದ ಖರ್ಚೂ ಈ ವರುಷ ೪೧ ಲಕ್ಷದಿಂದ ಮಿಕ್ಕಿದೆ. ವಜಿರಿಸ್ಥಾನ, ಅಫಗಾನ, ಬಲೂಚಿಸ್ತಾನ ಮುಂತಾದ ಸಂದಿಗೊಂದಿಗಳಲ್ಲಿ ದೊಡ್ಡ ದೊಡ್ಡ ಕಾಲುವೆಗಳನ್ನು ಕಡಿದು, ಹಿಂದುಸ್ಥಾನ ದೇಶದ ಸಂಪದಭ್ಯುದಯ ಮಾಡುವ ವಿಚಾರ ನಡೆದಿದೆ. ಅಲ್ಲಿ ಯಾರಿದ್ದಾರೋ ಏನೋ! ನೋಡುವವರ್ಯಾರಿದ್ದಾರೆ? ಕೇಳುವವರ್ಯಾರಿದ್ದಾರೆ? ಬಡಾಲ ಕಾಪಲಿನ ಪರವು ಉಗ್ಗದು ಆ ಮಾತು ಕೇಳಬೇಡಿ. ದಿಲ್ಲಿಯ ಕಾಡುಕ, ಅಧಿಕಾರಿಯ ಲಹರಿಗೆ ಒಮ್ಮೆ ಹೋದವು ಹೋಗೇ ಹೋದವು! ಉಪ್ಪಿನ ಮೇಲಿನ ಕರವು ಎಂದಿನಂತೆ ನಡೆಯುವದು. ಇದೇ ಹಿಂದುಸ್ಥಾನ ಸರಕಾರದ ಜಮಾ-ಖರ್ಚಿನ ರೂಪ. ಗೋಡೆ ಕೆತ್ತಿದಷ್ಟು ಮಣ್ಣೇ ಮಣ್ಣು!!

ಬಾರ್ಡೋಲಿ ತಾಲೂಕಿನಲ್ಲಿ ಅನ್ಯಾಯದಿಂದ ಏರಿಸಿದ ತೀರ್ವೆಯನ್ನು ನಿರಾಕರಿಸುವ ಕರನಿರಾಕರಣೆಯ ಪ್ರಯತ್ನವು ಸುಸಂಘಟಿತವಾಗಿ ಸಾಗಿದೆ. ಗ್ರಾಮಾಧಿಕಾರಿಗಳಾದ ಮುಖಿಯರೂ, ತಲಾಟಿಗಳೂ ಕರಗಳನ್ನು ಸಂಗ್ರಹಿಸಲು ಮಾಡುವ ಪ್ರಯತ್ನಗಳೆಲ್ಲ ನಿರರ್ಥಕವಾಗುತ್ತಿವೆ. ಗ್ರಾಮಗಳು ಸ್ವಂತ ಸ್ವಯಂಸೇವಕ ತಂಡನ್ನು ಸ್ಥಾಪಿಸಿಕೊಂಡು, ಗ್ರಾಮದಲ್ಲಿ ಕಾಲಕಾಲಕ್ಕೆ ಎದ್ದೇಳುವ ನಿರಾಧಾರ ಸುದ್ದಿಗಳನ್ನು ಸಪ್ರಮಾಣವಾಗಿ ಖಂಡಿಸಿ, ಊರವರಿಗೆ ಎದೆಗಟ್ಟಿ ಮಾಡಲು ಪ್ರೇರೇಪಿಸುತ್ತಿದ್ದಾರೆ. ಬಡೋದದ ಡಾ|| ಚಂದೂಲಾಲರವರೂ, ದರ್ಬಾರಸಾಹೇಬ ಗೋಪಾಲದಾಸರವರೂ, ಶ್ರೀ|| ಮೋಹನದಾಸ ಪಂಡ್ಯರವರೂ, ರವಿಶಂಕರ ವ್ಯಾಸರವರೂ ತಾಲೂಕಿನಲ್ಲಿ ಅಡ್ಡಾಡಿ, ದೇಸಾಯಗಾರರಿಗೆ ಕರ ನಿರಾಕರಣೆಯ ನಿರ್ಮಲ ಆಚಾರ-ವಿಚಾರಗಳನ್ನು ತಿಳಿಸಿಕೊಳ್ಳುತ್ತಲಿದ್ದಾರೆ. ಗುಜರಾತ ಪ್ರಾಂತದ ಇತರ ಜಿಲ್ಲೆಗಳಿಂದಲೂ, ಕಾಠೇವಾಡದಿಂದಲೂ ಸ್ವಯಂಸೇವಕರು ಬರುತ್ತಲಿದ್ದಾರೆ. ಅಂತು ಸಾಧಾರಣ ೧೩೦೦೦ ದೇಸಾಯಗಾರರು ಈ ಪ್ರಯತ್ನದಲ್ಲಿ ಪ್ರವೇಶಗೊಂಡಿದ್ದಾರೆ. ಚಿಕ್ಕಪುಟ್ಟ ದೇಸಾಯಗಾರರು; ಸಾಲದಲ್ಲಿ ಮುಳುಗಿ ಏಳುತ್ತಲಿದ್ದಾರೆ. ತೀರ್ವೆಯ ಮಾನವು ರೂ. ೨-೩ ರಂತೆ ಇದ್ದದ್ದು ೪-೫ ರೂಪಾಯಿಗಳಿಗೆ ಮುಟ್ಟಿದೆ. ಬಾರ್ಡೋಲಿ ತಾಲೂಕಿನ ಮೇಲೋತ್ತರೆಯ ಬಡಿಯ ಭೂಮಿಯು ತೀರ ಗುಡ್ಡಗಾಡು. ಇಲ್ಲಿಂದ ೧—೧|| ಮೈಲಿನೊಳಗೆ ಬಡೋದೆಯ ಸರಕಾರದ ರಾಜ್ಯ ಬರುತ್ತು. ಈ ರಾಜ್ಯದಲ್ಲಿ ಈ ಭೂಮಿಗೆ ಎಕರೆಗೆ ರೂಪಾಯಿ ೧ ರಿಂದ ೨ ರ ತನಕ ತೀರ್ವೆಯ ಮಾನವಿದೆ. ಹೀಗೆ ಸರಕಾರದಿಂದ ಉಂಟಾಗುವ ಅನ್ಯಾಯವನ್ನು ಪರಿಮಾರ್ಜನ ಗೈಯಲು ಬಾರ್ಡೋಲಿಯ ಬಡ ದೇಸಾಯಗಾರರು ಕಟಿಬದ್ಧರಾಗಿದ್ದಾರೆ. ಅವರಿಗೆ ನಾಲ್ಕೂ ಬದಿಯಿಂದ ಎಲ್ಲರೂ ನೆರವಾಗುತ್ತಲಿದ್ದಾರೆ. ಕಾಠೇವಾಡದ ಸತ್ಯಾ

ಗ್ರಹದಲದವರು ಎರಡ ತಂಡು ಸ್ವಯಂಸೇವಕರನ್ನು ಕಳುಹಿದರು. ನೆರೆಯ ಜಲಾಲಪೂರ ತಾಲೂಕಿನವರು ಅವಶ್ಯವುಳ್ಳ ಮನುಷ್ಯಬಲವನ್ನೂ, ದ್ರವ್ಯಬಲವನ್ನೂ ಪೂರೈಸುವ ನಿರ್ಧಾರ ಮಾಡಿದ್ದಾರೆ, ಕೀರ್ವೆ ಕೊಡದೆ ಜಪ್ತಾದ ಆಸ್ತಿಯನ್ನು ಕೊಂಡುಕೊಳ್ಳಬಾರದಾಗಿಯೂ ನಿರ್ಧರಿಸಿದ್ದಾರೆ. ಪ ಹಾಕ್ಯರ:ಲೀವಾಹವದಿಂದಲೂ, ಶ್ರೀ| ವಲ್ಲಭಭಾಯಿ ಪಟೇಲರ ಸೂತ್ರಚಾಲಕತ್ವದಿಂದಲೂ, ನೆರೆಹೊರೆಯವರ ಬೆಂಬಲದಿಂದಲೂ ಬಾರ್ಡೋಲಿಯ ದೇಸಾಯಿಗಾರರಿಗೆ ಕರನಿರಾಕರಣೆಯ ವಿಶ್ವಪ್ರಯತ್ನಕ್ಕೆ ಅವಶ್ಯವುಳ್ಳ ಧೈರ್ಯವೂ, ಸ್ಥೈರ್ಯವೂ, ಶ್ರದ್ಧೆಯೂ, ಆತ್ಮಬಲವೂ ಪ್ರಾಪ್ತವಾಗಿ, ಅವರ ಕಾರ್ಯವು ಯಶಸ್ವಿಯಾಗಲೆಂದೂ ನಿರಂಕುಶ ರಾಜ್ಯಕಾರಭಾರಕ್ಕೆ ಕೀಲು ಹಾಕುವ ಮಂತ್ರ-ತಂತ್ರಗಳ ಗುರೂಪದೇಶ ಕೊಡಲು ಅವತರಿಸಲಾಗಲೆಂದೂ ನಾವು ದೀನವತ್ಸಲನ ಕಡೆಗೆ ದೈನ್ಯಗೊಂಡು ಬೇಡಿಕೊಳ್ಳುವೆವು. ದೀನವತ್ಸಲನ ಅನುಗ್ರಹವನ್ನೇ ನಾವು ಈಗ ಸಂಗ್ರಹಿಸಿಕೊಳ್ಳಬೇಕು. ಯಾಕಂದರೆ, ಬಾರ್ಡೋಲಿಯಲ್ಲಿ ಬ್ರಿಟಿಶ ಸಾಮ್ರಾಜ್ಯದ ಅಧಿಭೌತಿಕ ಬಲವೂ, ಕುಯುಕ್ತಿಗಳೂ ಮೇರೆವಪ್ಪಿ ನಡಿಯುವವು. ಈಗಾಗಲೇ ಜಿಲ್ಹೆಯೊಳಗಿನ ರಾಣಿಪರಾಜ ಜಾತಿಯ ಒಕ್ಕಲಿಗನಿಗೆ ತಲಾಟಿಗಳು ಕರವನ್ನು ವಸೂಲ ಪಡೆಯುವದಕ್ಕಾಗಿ ಚಲೋ ಹೊಡತ ಕೊಟ್ಟ ಸುದ್ದಿ ಬಂದಿದೆ ಇಂಥ ಹೊಡತಗಳಿಗಾಗಲೀ, ಬೆದರಿಕೆಗಳಿಗಾಗಲೀ, ಸವಿ-ಸವಿ ಮಾತುಗಳಿಗಾಗಲೀ, ವಚನಗಳಿಗಾಗಲೀ ಒಲಿಯೇಳುವ ಸ್ವಲ್ಪ ಮನೋದೌರ್ಬಲ್ಯವೇನಾದರೂ ಇದ್ದರೆ, ಅದನ್ನು ಸಹ ಹೋಗಲಾಡಿಸಿ, ಜಗಚ್ಚಾಲಕನು ಬಾರ್ಡೋಲಿಯವರ ಕಡೆಯಿಂದ ಕರನಿರಾಕರಣೆಯ ಅಮೋಘ ಮಂತ್ರವನ್ನು ಭಾರತೀಯರಿಗೆ ಉಪದೇಶಿಸಬೇಕು, ಅಂದರೆ ಮಾತ್ರ ಬಡ ಭಾರತೀಯರ ಉಳಿಗಾಲವಿದೆ.

---

೫. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ನಡೆದ ಅಧಿವೇಶನದಲ್ಲಿ ತಾಳಿಮರಗಳ ಪರಮಿಟಿನ ವಿಷಯ ನಡೆದ ಪ್ರಶ್ನೋತ್ತರಗಳ ವೃತ್ತಾಂತವನ್ನು ನಾವು ವಿವರಿಸಿರುವೆವು. ಅದರ ಜೊತೆಗೆ ಈ 'ರಿಹು ಜಂಗಲ ಕಮಿಟಿಯ ರಿಪೋರ್ಟಿನಲ್ಲಿ ಸಂಗ್ರಹಿಸಿದ ಮಾಹಿತಿಯನ್ನೂ ವಿವರಿಸಿರುವೆವು. ಜಂಗಲ ಕಮಿಟಿಯ ಚರ್ಚೆಯಲ್ಲಿ ಲೋಕಪಕ್ಷದ ಸಭಾಸದರೂ, ಪ್ರಜೆಗಳೂ ಈ ಮರಗಳನ್ನು ಉಚಿತವಾಗಿ ಕಡಿಯಗೊಡಬೇಕಾಗಿಯೂ, ಹೆಚ್ಚೆಂದರೆ, ಮರ ೧ಕ್ಕೆ ೧ ರೂಪಾಯಿ ಹಾಸಲನ್ನು ಕೊಳ್ಳಬಹುದಾಗಿಯೂ ಸೂಚಿಸಿದ್ದರು. ಅನು ೩ (ಅ) ಭಾಗದೊಳಗಿನ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ ಮುಂದೆ ಲೋಕಪಕ್ಷದವರು ೨ ರೂಪಾಯಿ ಮಾಡಬೇಕಾಗಿ ಶಿಫಾರಸು ಮಾಡಿದರು. ಚರ್ಚೆಯ ಕಾಲಕ್ಕೆ ಜಂಗಲ ಕಮಿಟಿಯ ಅಧ್ಯಕ್ಷರಾದ ಚೀಫ ಕನ್ಸರವ್ಹೇಟರರೊಡನೆ ಆದ ಸಂಧಾನದಂತೆ ಈ ಶಿಫಾರಸು ಮಾಡೋಣಾಯಿತಾಗಿ ಶ್ರೀ| ಕರ್ಕೀಯವರ ಹೇಳಿಕೆ ನಾವದನ್ನು ಹಿಸ್ತುವೆವು. ಸರಕಾರಿ ಉತ್ತರವು ನಕಾರಾತ್ಮಕವಿದ್ದರೂ ನಾವು ಶ್ರೀ| ಕರ್ಕೀಯವರನ್ನೇ ನಂಬುತ್ತೇವೆ; ಚೀಫ ಕನ್ಸರವ್ಹೇಟರರನ್ನು ನಂಬುವದಿಲ್ಲ ಚೀಫ ಕನ್ಸರವ್ಹೇಟರರಿಗೆ ಸರಕಾರದ ಬೆಂಬಲ ದೊರಕಲಿಲ್ಲವೆಂಬಂತೆ ತೋರುತ್ತದೆ. ಆದರಿಂದ ಅವರು ನಾಲ್ಕು ರೂಪಾಯಿ ಮೂಲ ಪದವನ್ನೇ ಹಾಡುತ್ತಲಿದ್ದಾರೆ. ಅವರೆ ನಾವೊಂದು ಮಾತನ್ನು ಶ್ರೀ| ಕರ್ಕೀಯವರಿಗೆ ಕೇಳಬಯಸುವೆವು ಇತ್ತಟ್ಟಿನಲ್ಲಿಯೂ ಸಂಧಾನವಾಗಿದ್ದರೂ, ಗಳ ಹಾಸಲು ನಿರ್ದಿಷ್ಟವಾಗದಿದ್ದಿರುವಾಗ ಆ ಸಂಧಾನದ ಉಲ್ಲೇಖವನ್ನು ತಮ್ಮ ಶಿಫಾರಸಿನಲ್ಲಿ ಅವರು ಯಾಕೆ ಮಾಡಲಿಲ್ಲ? ವಿಶೇಷವಾಗಿ ಅಧ್ಯಕ್ಷರ ರಿಪೋರ್ಟು ನೋಡಿದ ಬಳಿಕ, ಶ್ರೀ| ಕರ್ಕೀ ಪ್ರಭೃತಿ ಸಭಾಸದರು ತಮ್ಮ ರಿಪೋರ್ಟು ಬರೆದಿದ್ದರು ತಮ್ಮ ರಿಪೋರ್ಟಿನಲ್ಲಿ ಸಂಧಾನವನ್ನು ಅಲಕ್ಷಿಸಿ, ಅಧ್ಯಕ್ಷರು ಶಿಫಾರಸು ಮಾಡಿದಾಗ ಸಂಧಾನವನ್ನು ಪ್ರಾಮುಖ್ಯವಾಗಿ ನಮೂದಿಸಿ, ಅಧ್ಯಕ್ಷರ ವಚನಭಂಗವನ್ನು ಬೈಲಿಗೆಳೆಯಬು ಶ್ರೀ| ಕರ್ಕೀಯವರು ಬಟ್ಟರಿದ್ದರು ಇಷ್ಟು ಅಲಕ್ಷ ಮಾಡಿದ್ದರಿಂದ ಈಗ ತೊಂದರೆಯುಂಟಾಗುತ್ತದೆ. ಸಂಧಾನದಿಂದ ಪ್ರಜೆಗಳಿಗೆ ಮಾತ್ರ ನಷ್ಟವಾಯಿತು. ತಾಳಿ ಮರಗಳನ್ನು ಉಚಿತವಾಗಿ ಕೊಡತಕ್ಕ ಅಥವಾ ೧ ರೂಪಾಯಿ ಹಾಸಲು ಆಕರಿಸಕೇಳುವ ಹಕ್ಕು ಶ್ರೀ| ಕರ್ಕೀ ಪ್ರಭೃತಿಯವರಿಗೆ ಪ್ರತಿಪಾದಿಸಬರುವದಿಲ್ಲ. ಆಳರಸರೊಡನೆ ಸಂಧಾನ ಮಾಡಹೋಗುವವರ ಅವಸ್ಥೆಯು ಹೀಗಾಗುತ್ತದೆ. ಇದನ್ನು ಎಲ್ಲರೂ ಲಕ್ಷದಲ್ಲಿಡತಕ್ಕ ವಿಷಯ.

---

೬. ಇದೇ ವಿಷಯದ ಇನ್ನೊಂದು ಮಾತನ್ನು ಇಲ್ಲಿಯೇ ನಮೂದಿಸಿ, ಚೀಫ ಕನ್ಸರವ್ಹೇಟರರ ನಿಷ್ಠುರತನವನ್ನು ಬೈಲಿಗೆಳೆಯ ಬಿಡುವೆವು. ತಾಳಿ ಹಿಟ್ಟನ್ನು ನಾಯಿ ಸಹ ತಿನ್ನು ಬಾಳ್ತೆ ಮಾಡುವದಿಲ್ಲ; ಅಷ್ಟು ಕನಿಷ್ಠ ಪ್ರತಿಯ ಆಹಾರವದು ಶ್ರೀ| ಕರ್ಕೀಯವರು ನಮೂದಿಸಿದಂತೆ, ಅನಿವಾರ್ಯವೆಂದು ಉದರನಿರ್ವಾಹಕ್ಕಾಗಿ ಬಡಬಗ್ಗರು ಇದನ್ನು ತಿನ್ನುತ್ತಾರೆ, ಹೊಟ್ಟೆಯ ಗುಂಡಿಯನ್ನು ಹ್ಯಾಗಾದರೂ ತುಂಬುತ್ತಾರೆ; ಅದನ್ನು ತುಂಬುವ ಹೊರತು ಗತಿ ಇದೆಯೇ! ಚೀಫ ಕನ್ಸರವ್ಹೇಟರರು ಇದನ್ನು ಬಲು ಸೊಗಸಾಗಿ ಬಣ್ಣಿಸಿದ್ದಾರೆ. ೪೨-೪೦ ಮೈಲು ದೂರದಿಂದ ಜನರು ಬಂದು ೪ ರೂಪಾಯಿ ಹಾಸಲು ಕೊಟ್ಟು ಜನರು ತಾಳಿ ಮರಗಳನ್ನು ಒಯ್ಯುತ್ತಿರುವದರ ಮೇಲಿಂದ ತಾಳಿ ಮರದ ಆಹಾರ ಗುಣವು ವಿಶೇಷವೆಂದೂ, ಅದರಿಂದ ದೇಸಾಯಿಗಾರರಿಗೆ ಇನ್ನೂ ಲಾಭವಾಗುತ್ತದೆಂದೂ ಅವರು ಉಲ್ಲೇಖಿಸಿ ನಾಲ್ಕು ರೂಪಾಯಿಯ ದರವೇ ದೊಡ್ಡ ಔದಾರ್ಯವೆಂದು ಸೂಚಿಸುತ್ತಾರೆ. ಇದು ನಿಷ್ಠುರತನದ ಪರಮಾವಧಿಯು! ಚೀಫ ಕನ್ಸರವ್ಹೇಟರರು ಈ ತಿರುಳಿನಿಂದ ಮಾಡುವ ಹಿಟ್ಟನ್ನು ಒಂದು ದಿನ ತಿಂದು, ಅದರ ಆಹಾರ ಗುಣವನ್ನು ಪರಿಶೋಧಿಸಿ ಅದಕ್ಕೆ ದರ ಕಟ್ಟಬೇಕಾಗಿ ನಾವು ಬಿನ್ನೈಸುವೆವು. ಬಡಬಗ್ಗರ ಬಡತನವನ್ನು ಹೀಯಾಳಿಸಲಾಗದು. ಶ್ರೀ| ಕರ್ಕೀ ಪ್ರಭೃತಿ ಸಭಾಸದರು ನುಡಿದಂತೆ, ದಾರಿದ್ರ್ಯವು ಮೇರೆವಪ್ಪಿ ಹಬ್ಬುತ್ತಿದೆ. ಉಪಜೀವಿಕೆಯ ಸಾಧನಗಳು ನಮ್ಮಲ್ಲಿ ಕಟ್ಟಾಗುತ್ತಿವೆ ಹೊಟ್ಟೆಯೋನು ಹೊರ ಪರಿಸ್ಥಿತಿಯನ್ನು ಲಕ್ಷಿಸುವದಿಲ್ಲ ಹಗಲಿರುಳು ತನ್ನನ್ನು ತುಂಬಲು ಪರಿಪರಿಯಿಂದ ಒತ್ತಾಯ ಮಾಡುತ್ತಿದೆ. ಆ ಕಾಲಕ್ಕೆ ಆಹಾರಗುಣಗಳಿದ್ದ, ಪೋಷಕ ದ್ರವ್ಯಗಳಿದ್ದ ಸಾಮಗ್ರಿಗಳನ್ನು ಸಂಪಾದಿಸಲಾಗದಾಗ, ಆಹಾರಗುಣಗಳಿಲ್ಲದ ತಾಳಿ ಹಿಟ್ಟನ್ನು ತುಂಬುತ್ತಾರೆ. ಹೊಟ್ಟೆಯ ಬಲಾತ್ಕಾರವನ್ನೂ, ಪರಿಪರಿಯ ಬನ್ನಣೆಯನ್ನೂ, ಕಷ್ಟಕರವಾದ ಗೋಳನ್ನೂ, ಸೈರಿಸಲಾರದೆ, ಆ ಹಿಟ್ಟು ಹೊಟ್ಟೆಯಲ್ಲಿ ತುಂಬಿಲ್ಪಡುತ್ತದೆ. ನಾಯಿಯು ಕಡೆ ನೋಡದ ಹಿಟ್ಟಿಗಾಗಿ ೪೦-೪ ಮೈಲು ದೂರದಿಂದ ಮನೆ ಬಿಟ್ಟು ಹೋಗುವ ಜನರು ಸಮೃದ್ಧರೇ! ಆಹಾರ ಗುಣಗಳನ್ನು ನೋಡಿ ಅವರು ಹಣ ಕೊಡುತ್ತಾರೆಯೇ! ಆಹಾರಕ್ಕುಪಯೋಗವಾದ ಸಾಮಾನುಗಳನ್ನು ಕೊಂಡುಕೊಳ್ಳಲಾರದೆ, ಆ ಮಾನದಿಂದ ಆಹಾರಗುಣವಿಲ್ಲದ ಹಿಟ್ಟಿನ ಪರಿಮಾಣವು ಹೆಚ್ಚಿನದ್ದೆಂದೂ, ಹೆಚ್ಚು ದಿನ ಈ ಹಿಟ್ಟನ್ನು ತುಂಬಿ ಹೊಟ್ಟೆಗೆ ಸಮಾಧಾನ ಮಾಡಬರುತ್ತದೆಂದೂ ಗ್ರಹಿಸಿ, ೪೨-೪೦ ಮೈಲ ದೂರದಿಂದ ಬಂದು ನಾಲ್ಕು ರೂಪಾಯಿಗಳನ್ನಾದರೆ ನಾಲ್ಕು ರೂಪಾಯಿಗಳನ್ನು ತೆತ್ತು, ತಾಳಿ ತಿರುಳನ್ನೊಯ್ಯುತ್ತಾರೆ. ಇಂಥವರು ಸಮೃದ್ಧರೆಂದು ಪರಿಹಾಸ್ಯ ಮಾಡುವದು ಚೀಫ ಕನ್ಸರವ್ಹೇಟರರಿಗೆ ತರವಲ್ಲ. ಇಷ್ಟೇ ನಮ್ಮ ಅರಿಕೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಇಕ್ಕವಾಟ್ಟಿಗೆ ಚಳಿ ಬೀಳಹತ್ತಿದೆ. ಜ್ವರಾದಿ ರೋಗಗಳಿವೆ. ಒಕ್ಕಲಿಗರು ಸುಗ್ಗಿ ಕಟ್ಟುವರು. ಆದರೆ, ಹುರುಳಿ ಕಡಿಮೆ. ಬೆಳೆ ಬರದೆ, ದೊಡ್ಡ ಕಷ್ಟವಾಗಿದೆ. ಗುರುವಾರಕ್ಕೆ ಇಲ್ಲಿ ಒಂದು ಹೃದಯದ್ರಾವಕ ಸಂಗತಿಯು ಸಂಭವಿಸಿತು. ಕೇಣಿಯಿಂದ ಬಗ್ಗೋಣ ಒಂದು ಮುಕ್ರಿ ಜಾತಿಯ ಹೆಂಗಸು ಘಟ್ಟದ ಮೇಲಿಂದ ಮೋಟಾರು ಹತ್ತಿ ಇತ್ತಕಡೆ ಬರುತ್ತಿದ್ದಳು. ಬಸುರು ಹೆಂಗಸು; ತಿಂಗಳು ತುಂಬಿರಲಿಲ್ಲ. ದೇವಗಿಯ ಬಳಿ ಮುಟ್ಟ ತಪ್ಪರಲ್ಲಿ, ಅವಳಿಗೆ ಬಹಳ ದಣುವಾಯಿತು; ಕೂಡಲೆ ಕ್ಕಲಾಗಲಿಲ್ಲ. ಮೈ ಕಾದು ಒಂತಂತೆ. ದೇವಗಿಯಲ್ಲಿ ಉಳಿಯಬಯಸಿದಳಂತೆ. ಆಗ ಊರವರು ಒಪ್ಪಲಿಲ್ಲ, ಪ್ಲೇಗಿನ ಭಯದ ಮೂಲಕ ಒಪ್ಪಲಿಲ್ಲ ನಿರುಪಾಯವಾಗಿ ಮೋಟಾರು ಹತ್ತಿ ದೇವಗಿಯಿಂದ ಕುಂಕದ ಕಟ್ಟೆಯ ತನಕ ಬಂದಳು. ಹಾದಿಯ ಮೇಲೆಲ್ಲ ಬೊಬ್ಬೆಯಿಡುತ್ತಿದ್ದಳು. ಕುಂಕದ ಕಟ್ಟೆಯನ್ನು ದಾಟಿ ಊರ ಸೇರಲು ಪ್ರತಿಬಂಧವಾಯಿತು. ಡಾಕ್ಟರರು ಮಾಮಲೇದಾರರಿಗೂ, ಫೌಜದಾರರಿಗೂ ಈ ಸುದ್ದಿ ತಿಳಿಸಿದರಂತೆ. ಡಾಕ್ಟರರು ಮಂದಿ ನೋಡಲು ಹೆಂಗಸು ನಿಶ್ಚೇಷ್ಟಳಾಗಿ ಬಿದ್ದಿದ್ದಳು. ಅವಳಿಗೆ ಉಪಚಾರ ನಡೆಸುವದಕ್ಕಾಗಿ ದೀರ ಒಯ್ದು ನೋಡಲು ಅವಳು ಮೃತಪಟ್ಟಿದ್ದಳು; ಬಸಿರಲ್ಲಿ ಒಂದು ಕೂಸು ಸತ್ತು ಬಿದ್ದಿತ್ತು ಶುಕ್ರವಾರ ಮುಂಜಾವಿಗೆ ಡಾಕ್ಟರರು ಫೌಜದಾರರೂ ಹೋಗಿ, ಪ್ಲೇಗ ಪ್ರಕರಣವೆಂದು ಅಭಿಪ್ರಾಯಪಟ್ಟು, ಮುಂದಿನ ವಿಧಿಗಳನ್ನು ನೆರವೇರಿಸಿದರು ಬಸುರು ಹೆಂಗಸಿಗೆ ಮೋಟಾರು ಪ್ರಮಾಣದಿಂದ ಉಂಟಾದ ಆಯಾಸದಿಂದಲೇ ಅವಳು ಮೃತಿಯನ್ನೈದಿರಬೇಕಾಗಿ ಸಾಮಾನ್ಯರ ಚಿಕಿತ್ಸೆ.

ಗಿಬ್ಸ ಹೈಸ್ಕೂಲಿನ ವಿದ್ಯಾರ್ಥಿಗಳೊಬ್ಬರು ಅಲ್ಲಿಯ ಶಿಕ್ಷಕರ ನಡತೆಯನ್ನು ನಮೂದಿಸಿ, ವಿಸ್ತಾರವಾದ ಒಂದು ಲೇಖವನ್ನು ಬರೆದಿದ್ದಾರೆ. ಕೆಲವು ವಿಧಾನಗಳ ಅಪೇಕ್ಷಣೀಯವ ಅವುಗಳ ಕುರಿತು ಶಾಲೆಯ ಶಿಕ್ಷಕರ ಬಳಿ ನಾವು ವಿಚಾರಿಸುವವರಿದ್ದೇವೆ. ಸದ್ಯಕ್ಕೆ ಕೆಲವು ವಿಧಾನಗಳನ್ನು ಇಲ್ಲಿ ನಮೂದಿಸುತ್ತೇವೆ— ಇಲ್ಲಿ ೬ ನೇ ಇಯತ್ತೆಗೆ ಫೀ ರೂ ೫—೧೨—೦. ಕಾರವಾರ-ಅಂಕೋಲೆ ಹೊನ್ನಾವರಗಳಲ್ಲಿ ರೂ. ೫-೪-೦ ರಿಂದ ರೂ. ೫-೮-೦ ರ ವರೆಗೆ ಫೀ ಇದೆ. ಗೆದರಿಂಗ ಫೀ ಎಂದು, ಒಂದು ಎತ್ತುವರು ಅದು ಗೆದರಿಂಗದ ಸಮಯ ಎತ್ತುವದಿಲ್ಲ ವರ್ಷಾರಂಭದಲ್ಲಿಯೇ ಎತ್ತುವರು. ಈ ವರುಷ ಗೆದರಿಂಗ ಇಲ್ಲ. ಅದರಿಂದ ಆ ಫೀಯನ್ನು ಮರತ ಬೇಡಿದರೆ « *What if I won't..?* (ನಾನು ಕೊಡದಿದ್ದರೆ ನೀವೇನು ಮಾಡುವಿರಿ ?) ಎಂದು ಸರ್ವಾಧಿಕಾರಿಗಳಾದ ಹೆ|| ಮಾಸ್ತರರು ಪ್ರಶ್ನಿಸುತ್ತಾರೆ. ಇದರ ಅರ್ಥವೇನೆಂದು ನಮಗೆ ತಿಳಿಯಲಿಲ್ಲ. ಶಾಲೆಯ ವಿದ್ಯಾರ್ಥಿಗಳು ಪ್ರಿಲಿಮಿನರಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಇಲ್ಲಿ ೨ ರೂಪಾಯಿ ತರಬೇಕು; ಕಾರವಾರದಲ್ಲಿ ಸ-

ಪ್ಪಾರ ರಾಜೆ. ಅಲ್ಲಿ ಈ ಫೀ ಇಲ್ಲ ನಮ್ಮ ಗಿನ್ನ ಹ್ಯಾಸೂಲಿನಲ್ಲಿ ಲೋಕೋಪಕಾರ ನಡೆದಲ್ಲವೇ? ಪ್ರಶ್ನಪತ್ರಿಕೆಗಳನ್ನು ಛಾಪಿಸುವದಿಲ್ಲ; ಸ್ಕೂಲಿನ ಸ್ಟಾಪ್ಪರಿಂದ ಬರೆದು ಕೊಡುತ್ತಾರೆ. ಇದನ್ನು ಬಿಡಬೇಕಾದರೆ, ಕೃಷ್ಣದೇವರು ಬಂದರೆ ಅನುಕೂಲ. ಸುಬರಮ್ಮಯ್ಯರಿಗೆ ಕೇಳಿ, ಕೇಳಿ ಬಹು ಕಾಲಹರಣವಾಯಿತು. ಸ್ಕೂಲಿನ ಸ್ಟಾಪಿನ ಮಾಡುವದರಿಂದ ಖರ್ಚು ಕಡಿಮೆ ಬರುತ್ತದೆ. ನಮ್ಮಿಂದ ಮನುಷ್ಯನ ಎಷ್ಟುವಳಿ ಮಾಡುವ ೨ ಬಾಬು ಗಳಲ್ಲಿಗಿಂತ ಈ ಖರ್ಚು ಹೋಗಲಾಗಿ ಉಳಿದ ಹಣದಿಂದ ಹೊಸ ಟ್ಯಾಬ್ಲೆಟ್ಟು, ಸ್ಕೂಲ ಸ್ಟಾಪಿನ ಮಾಂತಾದ ಸರಂಜಾಮನ್ನು ತರಿಸುವ ಯೋಚನೆ ಇರುವದಂತೆ. ನಮ್ಮ ಹೈಸ್ಕೂಲಿನವರ ಹೊಸ ಉಳತಾಯ ಮಾಡುವ ಮನೋಸಯು ಅದ್ಭುತವಾದ ಮ್ಯುನಿಸಿಪಾಲಿಟಿಯಲ್ಲಿ ಇವರು ಸೇರುವದಕ್ಕಿಂತ ಹಿಂದುಸ್ಥಾನ ಸರಕಾರದಲ್ಲಿ ಸೇರುವದುಚಿತ. ಈ ವರ್ಷ ಪ್ರವೇಶ ಪರೀಕ್ಷೆಯಲ್ಲಿ ೧೩ ಮಂದಿಗಳು ಪಾಸಾದರು. ೫ ಮಂದಿಗಳು ಕೋಲ್ಹಾಪುರ ಯುನಿವರ್ಸಿಟಿ ಪರೀಕ್ಷೆಗೆ ಹೋಗಿ ನಪಾಸಾಗಿ ಬಂದವರೊಳಗಿನವರು. ಪೂರ್ವದ ೩-೩ ವರ್ಷ ಇಲ್ಲೆ ೩ನೆ, ಇಯತ್ತೆ ಕಲಿತು, ಕೊನೆಗೆ ಈ ವರ್ಷ ಪಾಸಾದವರು; ಕಳೆದ ವರ್ಷ ನಮ್ಮ ಹೈಸ್ಕೂಲಿನಲ್ಲಿಯೇ ೬ನೇ ಇಯತ್ತೆ ಪಾಸಾಗಿ ೩೨ ಮಂದಿಗಳು ೩ನೇ ಇಯತ್ತೆಗೆ ಬಂದಿದ್ದರು. ಅವರಲ್ಲಿ ೬ ಮಂದಿಗಳು ಮಾತ್ರ ಪಾಸಾಗಿದ್ದಾರೆ. ೩ನೇ ಇಯತ್ತೆಯಲ್ಲಿ ಈ ಹುಡುಗರು ಒಮ್ಮೆಲೇ ದಡ್ಡರಾದ ಬಗೆ ಹೇಗೆ? ೧೩ ಕಾಮತ ಮಾಸ್ತರರ ಸ್ವೀಕಾರ ಮಾಡುವರೆ ಸಾ? ನಮ್ಮ ಅಭ್ಯಾಸಮಾಡಿದ ಅಧ್ಯಕ್ಷನ್ನೇ! ಇಂಗ್ಲೀಷ ಟೆಕ್ಸ್ಟ ಪುಸ್ತಕಗಳನ್ನು ಬೇಕಾಗಿ ಹೀಗೂ ಮುಗಿಸಿದ್ದಾಯಿತು. ಯಾಕೆಂದರೆ ನವಂಬರ-ಡಿಸೆಂಬರ ತಿಂಗಳಲ್ಲಿ ಇಂಗ್ಲೀಷ ಮಾಸ್ತರನೇ ಇಲ್ಲ. ಹೋದ ವರುಷ ಪ್ರಿಲಿಮಿನರಿ ಪರೀಕ್ಷೆ ಎಲ್ಲ ೩ನೇ ತರಗತಿಯಲ್ಲಿ ಪಾಸಾದ ೧೩ ಕಾಮತ ಮಾಸ್ತರರ ಹುಡುಗನು ಇಂಗ್ಲೀಷ ಕಲಿಸಿದನು. ಇಷ್ಟು ನಾವು ಭೂಗೋಳ, ಇತಿಹಾಸ... ಭೂಗೋಳ ಅಂದರೆ, ಭೂಗೋಳವೇ, ನಾವೇ ಓದಿ ನಾವೇ ಕಲಿಯಬೇಕು! ಫೀ ಮಾತ್ರ ಪೂರ್ತಿ ತೆರುವದು!! ಇತಿಹಾಸವು ಇನ್ನು ಸಾಧಾರಣ ಅರ್ಧಕ್ಕೆ ಮುಟ್ಟಿದೆ ಆಗುವದರಲ್ಲೇ ಇವೆ!!! ಯುನಿವರ್ಸಿಟಿ ಪರೀಕ್ಷೆಯಾದ ಬಳಿಕ, ಮುಗಿಯುತ್ತದೋ ಏನೋ! ಕೇಡ್ಡು ಪ್ರಿಲಿಮಿನರಿಯಾದ ಬಳಿಕ ನಮಗೆ ಕಲಿಸುವದು ಇಷ್ಟೇ!! ಅದರೆ, ಮುಂದಿನ ಫೀ ಮಾತ್ರ ಎಪ್ರಿಲ್ ತಿಂಗಳ ತನಕ ಕೊಡಬೇಕು; ಅಂದರೆ ಮಾತ್ರ ಯುನಿವರ್ಸಿಟಿ ಪರೀಕ್ಷೆಗೆ ಹೋಗಲು ಫಾರ್ಮು ಸಿಗುತ್ತದೆ. ಹೋದ ವರುಷ ಎಪ್ರಿಲ್ ತಿಂಗಳ ೩ನೇ ಇಯತ್ತೆಯ ಫೀಯನ್ನು ನಾವು ತೆತ್ತಿದ್ದೇವೆ. ಇಲ್ಲಿ ಕಲಿತ ಅನೇಕ ಹುಡುಗರು ಧಾರವಾಡಕ್ಕೆ ಹೋಗಿ ಪ್ರಿಲಿಮಿನರಿ ಪರೀಕ್ಷೆಗೆ ಕೂತುಕೊಂಡರು. ಫ್ಲೀಗಿನ ಗಡಿಬಿಡಿಯಾದರೂ ಅವರು ಹೋದರು. ಹೀಗೆ ಇಲ್ಲಿಂದ ಅವರು ಧಾರವಾಡಕ್ಕೆ ಹೋಗುವ ಕಾರಣವೇನಿರಬಹುದು? ಶಿಕ್ಷಣ ಈ ಪ್ರಕಾರದ ವ್ಯಕ್ತಿಪತ್ರಿಕೆಗಳ ಅವಸ್ಥೆ ಆ ಪ್ರಕಾರದ್ದು!! ಧಾರವಾಡ ಕೊಡಬೇಕಾದರೆ ಮಾತ್ರ "ಶಿಕ್ಷಕರ ಜಾಗ್ರತೆ ಬಹಳ!!" ಮಾಸ್ತರ ಬರೆಯಬೇಕಾದರೆ ಬರೆಯೊಬ್ಬರಿಗೆ ಸಾಕಾಗುತ್ತದೆ. ಅನೇಕರು ಕಣ್ಣೀರು ಸುರಿಸಿದರು; ಅನೇಕರಿಗೆ ಕಣ್ಣೀರು ಸುರಿಸಿದರೂ, ಫಾರ್ಮು ಸಿಗಲಿಲ್ಲ ನಾರ ಪರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಿದವರಿಗೆ ಪ್ರಿಲಿಮಿನರಿ ಪರೀಕ್ಷೆಯಲ್ಲಿ ಸ್ವಲ್ಪ ಹೆಚ್ಚು-ಕಡಿಮೆಯಾದರೂ ಫಾರ್ಮು ಕೊಡುವದೆಂದು ೧೩ ಕಾಮತ ಮಾಸ್ತರರು ಹಿಂದೆ ನೋಟಿಸಗಳನ್ನು ಹಚ್ಚಿದ್ದರು. ಆ ಆಧಾರ ತೋರಿಸಿ ಕೆಲವರು ಫಾರ್ಮು ಬೇಡಿದ್ದರೂ; ಅವರಿಗೂ ಫಾರ್ಮು ಸಿಗಲಿಲ್ಲ ಇತ್ಯಾದಿ.

ಗೋಕರ್ಣದ ಬೆಲೆಯ ಮೇಲೆ ಒಂದು ಶವ ತೇಲಿ ಬಂದಿರುವದಾಗಿ ತಿಳಿಯುತ್ತದೆ. ಪೋಲೀಸರು ಛಾಯಾಚಿತ್ರಗಳನ್ನು ತೆಗೆದುಕೊಂಡಿದ್ದಾರಂತೆ. ಪೋಲೀಸ ತನಿಖೆ ನಡೆಯುತ್ತಿದೆ.

ಅಂಕೋಲಾ—ಹವಾಮಾನವು ತಕ್ಕಮಟ್ಟಿಗೆ ಚಳಿಯಿಂದ ಬೆಳಗ್ಗಿನಿಂದ ಜನರು ಬೇಸತ್ತರು. ಕಾರಣ ಮಾರಕ್ಕೆ ಇಳಿಸಿದ ಇಲಿಗಳು ಪ್ಲೇಗಿನಿಂದ ಸತ್ತು ಬಿದ್ದಿಲ್ಲ ಎಂತ. ಇನ್ನು ಇಲಿಗಳೇನು ಸಾಯಲಿಲ್ಲ.

ಕಳೆದ ಮಂಗಳವಾರಕ್ಕೆ ಇಲ್ಲಿಯ ಇಂಗ್ಲೀಷ ಶಾಲೆಯಲ್ಲಿ ಜಿಲ್ಲಾ ಬೋರ್ಡಿನ ಸಭೆಯಾಯಿತು. ಪ್ರಾರಂಭಕ್ಕೇ ಕೆಲ ಸಭಾಸದರಿಗೂ, ಅಧ್ಯಕ್ಷರಿಗೂ ಚಟಪಟಿಯಾಯಿತು. ಹಿಂದಿನ ಕಮಿಟಿಯಲ್ಲಿ ಎಡ್ಮಿನಿಸ್ಟ್ರೇಟಿವ ಆಫೀಸರರಾದ ಮಿ| ಶೇರುಂದರ ರಜೆಯ ಕಾಲದಲ್ಲಿ ಸೀನಿಯರ ಸುಬರಮ್ಮಯ್ಯರಿಗೆ ಬದಲಿಯನ್ನು ನಡೆಸಗೊಡಬೇಕಾಗಿ ತೀರ್ಮಾನವಾಗಿತ್ತು. ಡೈರೆಕ್ಟರರು ಅಕ್ಷೇಪಿಸಿದರು. ಸುಬರಮ್ಮಯ್ಯರವರೂ ಎಡ್ಮಿನಿಸ್ಟ್ರೇಟಿವ ಆಫೀಸರರ ಅಧಿಕಾರವನ್ನು ನಡಿಸಲು ಅರ್ಹರಲ್ಲೆಂದು ಅವರ ಅಂಬೋಣ. ಅದರಿಂದ ಅಧ್ಯಕ್ಷರು ಸರ್ಕ್ಯೂಲೇಶನ್ನಿಗೆ ಬಂದು ಠರಾವನ್ನು ಸೂಚಿಸಿದರು. ನವಲಗುಂದದ ರಿಗೇ ಎಡ್ಮಿನಿಸ್ಟ್ರೇಟಿವ ಆಫೀಸರನ್ನಾಗಿ ನೇಮಿಸಬೇಕಾಗಿ ಸರ್ಕ್ಯೂಲೇಶನ ಬಹುಮತದಿಂದ ತೀರ್ಮಾನವಾಯಿತು. ಈ ತೀರ್ಮಾನವನ್ನು ಓದಿ ಹೇಳುವಾಗ, ಕಮಿಟಿಯ ಠರಾವನ್ನು ಸರ್ಕ್ಯೂಲೇಶನಿಂದ ತಿದ್ದುಪಡಿ ಮಾಡುವದು ಲೋಕಲ ಬೋರ್ಡ ಕಾಯಿದೆಯ ೩೩(೩) (ಬಿ) ಕಲಮಿನ್ವಯ ಕಾಯಿದೇಶೀರ ಅಲ್ಲವೆಂದು ೧೩ ದತ್ತಾ ಸುಬ್ಬ ನಾಯ್ಕರವರು ಆಕ್ಷೇಪಿಸಿದರು. ಈ ಅಕ್ಷೇಪವನ್ನು ಸಭಾಸದರ್ಯಾರೂ ಪ್ರತ್ಯಕ್ಷ ಕೊಳ್ಳಲಿಲ್ಲ ವಾಗಿ ಅಧ್ಯಕ್ಷರು ಉದ್ಧರಿಸಿ, ಈಗ ಅದನ್ನು ಕೊಳ್ಳುವದು ಅಪ್ರಸಕ್ತವೆಂದರು. ಕೆಲ ಸಭಾಸದರು ಸಭೆಯನ್ನು ಕೇಳಿ, ಈ ವ್ಯಕ್ತಿಯ ಚರ್ಚೆ ಮಾಡಬೇಕೆಂದು ಸೂಚಿಸಿದ್ದನೋ ಏನು, ಅದರೆ, ಅವರು ಕಾಯಿದೆಯ ಆಕ್ಷೇಪಕೊಳ್ಳಲಿಲ್ಲವಾಗಿ ಅಧ್ಯಕ್ಷರ ಪೇಠಿಕೆ. ಕಾಯಿದೆಯ ಆಕ್ಷೇಪವನ್ನು ಯಾವಾಗಲೂ ಕೊಳ್ಳಬಹುದೆಂದು ಕೆಲವರು ವಾದಿಸಿದರು. ಇದರೂ ಅಧ್ಯಕ್ಷರೂ ಒಪ್ಪಲಿಲ್ಲ. ೬ ಮಂದಿಗಳು ತಮ್ಮ ಆಕ್ಷೇಪವನ್ನು ನಮೂದಿಸಿದರು "*I overrule it on principle*" ಅದಕ್ಕಾಗಿ ಈ ಆ ಆಕ್ಷೇಪವನ್ನು ತಾವು ಒದ್ದು ಮಾಡುತ್ತೇನೆಂದು ಅಧ್ಯಕ್ಷರು ನಮೂದಿಸಿದರು. ಅಕ್ಷರ ಉಲ್ಲೇಖ ಮಾಡಲಿಲ್ಲ. ಆ ಮೇಲೆ ಸ್ಕೂಲ ಬೋರ್ಡಿನ ವಿಷಯ ಬಂತು. ಮಿಜ್ಞಾನದಲ್ಲಿ ಟಪಾಲ ಕೆಲಸವನ್ನು ಪೆನ್ಶನು ಪಡೆದ ಮುದುಕ ಶಿಕ್ಷಕರೊಬ್ಬರು ನಿರ್ವಹಿಸುತ್ತಾರೆ, ಅವರಿಗೆ ತೆಗೆದು ಈಗಿನ ಶಿಕ್ಷಕರಿಗೆ ಕೊಡಬೇಕಾಗಿ ಸ್ಕೂಲ ಬೋರ್ಡಿನ ಅಭಿಪ್ರಾಯವಾಗಿ, ಟಪಾಲ ಖಾತೆಗೆ ಹಾಗೆಯೇ ಒರೆದು ಹೋಯಿತು. ಪನ್ನರ ಮಾಸ್ತರರು ೩-೪ ವರ್ಷಗಳಿಂದ ಚಲೋ ಕೆಲಸ ಮಾಡುತ್ತಾರೆ. ಅವರಿಗೆ ತಪ್ಪಿಸಿ ಹೊಸ ಮಾಸ್ತರರಿಗೆ ಕೊಡಲು. ತಾವು ತಯಾರಿಲ್ಲವಾಗಿ ಟಪಾಲ ಖಾತೆಯಿಂದ ತಿಳಿಸಲಾಯಿತು. ಕಾರವಾರ ಸ್ಕೂಲ ಬೋರ್ಡಿನಲ್ಲಿ ಸಂಬಳ ನೋಟೀಸು ಟಪಾಲ ಖಾತೆಯ ಮೇಲೆ ಜಾರಿಯಾಯಿತು. ತಮ್ಮ ಬೋರ್ಡಿನ ಶಿಕ್ಷಕರ ಕಡೆಯಿಂದ ಟಪಾಲ ಕೆಲಸವನ್ನು ಮಾಡಗೊಡಲಿಕ್ಕಿಲ್ಲವಾಗಿಯೂ, ಟಪಾಲ ಖಾತೆಯವರು ತಮ್ಮ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕಾಗಿಯೂ ಸ್ಕೂಲ ಬೋರ್ಡಿನಿಂದ ನೋಟೀಸ ಹೋಯಿತು. ಟಪಾಲ ಖಾತೆಯವರು ನಾಲ್ಕು ಬುದ್ಧಿ ಮಾತುಗಳನ್ನು ಜಿಲ್ಲಾ ಬೋರ್ಡಿಗೆ ಬರೆದರು. ಟಪಾಲ ಕೆಲಸವು ಲೋಕೋಪಕಾರವು; ಹಳ್ಳಿಹಳ್ಳಿಗಳಲ್ಲಿ ಉತ್ಪನ್ನದ ಮಾನದಿಂದ ಟಪಾಲ ಕಚೇರಿ ನಡೆಸಲು ಅನುಕೂಲವಾಗುವದಿಲ್ಲ, ಕೆಲವೆಡೆಗಳಲ್ಲಿ ರೆವಿನ್ಯೂ ಜಂಗಲ ಗಾರ್ಡರೂ ಈ ಕೆಲಸವನ್ನು ಮಾಡುತ್ತಾರೆ, ಶಿಕ್ಷಕರು ಈ ಕೆಲಸವನ್ನು ಫುರಸತ್ತಿನ ಸಮಯದಲ್ಲಿ ಮಾಡುವದರಿಂದ ಯಾರನ್ನು ಫುರಸತ್ತಿನ ಸಮಯವಿಲ್ಲ ಇತ್ಯಾದಿ ಬರೆದಿದ್ದರು. ಜಿಲ್ಲಾ ಬೋರ್ಡಿನವರು ಈ ಪತ್ರದ ವಿಚಾರ ಮಾಡಿದರು. ಶಿಕ್ಷಕರ ಕೆಲಸಕ್ಕೆ ಟಪಾಲ ಕೆಲಸದಿಂದ ಅಡ್ಡಿಯಾಗದಿರುವಾಗ, ಸ್ಕೂಲ ಬೋರ್ಡಿನವರು ಈ ವಿಷಯವನ್ನು ಲೋಕಾಭಿಪ್ರಾಯದ ದೃಷ್ಟಿಯಿಂದ ಪುನಃ ಚರ್ಚಿಸಬೇಕಾಗಿ

ಸೂಚಿಸಿ, ಈ ವಿಷಯವನ್ನು ನಿಕಾಲೆಯಲ್ಲಿ ಕಂಡರು. ಆ ಮೇಲೆ ಅಂಕೋಲೆಯಲ್ಲಿ ಗ್ರಾಮ ಪಂಚಾಯತವನ್ನು ಸ್ಥಾಪಿಸಿ, ಸುಮಾರು ೩-೨|| ಸಾವಿರ ರೂ. ಎಷ್ಟುವಳಿ ಮಾಡಿ, ೧||-೩ ಸಾವಿರ ರೂ. ಖರ್ಚು ಮಾಡಿ, ಹೋಡಿಗೆ ೫೦೦ ರೂ. ಗಳನ್ನು ಉಳಿಸುವ ಚೀಫ ಆಫೀಸರರ ಸ್ವರಾಜ್ಯ ಯೋಜನೆಯ ಚರ್ಚೆ ನಡೆಯಿತು. ಅಂಕೋಲೆಯಲ್ಲಿ ಗ್ರಾಮಪಂಚಾಯತು-ಮ್ಯುನಿಸಿಪಾಲಿಟಿಗಳಂಥ ಸಂಸ್ಥೆಗಳನ್ನೇರ್ಪಡಿಸುವದು ಸಾಧ್ಯವಿಲ್ಲವಾಗಿಯೂ ಮಾಡಿಸೋದಾಯಿತು. ಮ್ಯುನಿಸಿಪಾಲಿಟಿಯ ಹದ್ದಿನೊಳಗಿನ ಸಭಾಸದರು ಮ್ಯುನಿಸಿಪಾಲಿಟಿಯ ರಚನೆಯಿಂದ ಒದಗುವ ವ್ಯಥೆಯನ್ನು ಹೇಳಿ, ಆ ಪುರಾಣವನ್ನು ಚೀಫ ಆಫೀಸರರಿಗೆ ತಿಳಿಸಗೊಡಲಿಲ್ಲ. ಅಂಕೋಲೆಯ ರಚನೆಯನ್ನು ಪ್ರತ್ಯಕ್ಷ ನೋಡುವದಕ್ಕಾಗಿ ಕೆಲ ಸಭಾಸದರಿಗೆ ಮೋಟಾರಿನಲ್ಲಿ ಕಳ್ಳಿರಿಸಿ ಬೀದಿ ಮೇರುವದಕ್ಕೆ ಮಾಡುವ ಯೋಜನೆಯಿತ್ತು. ಕೊನೆಗೆ ೫೦೦ ರೂ. ಉಳಿಸುವದಕ್ಕಾಗಿ ೩-೨|| ಸಾವಿರ ರೂ. ಗಳನ್ನು ತೆತ್ತು ಆದು ಬೇಡವಾಗಿಯೂ, ೫೦೦-೬೦೦ ರೂ. ಪಾಯಿಗಳನ್ನು ಜಾಸ್ತಿ ಎಷ್ಟುವಳಿ ಮಾಡಿ, ಊರೊಳಗಿನ ಸ್ವಚ್ಛತೆಯ ಕೆಲಸವನ್ನಷ್ಟು ಸೆನಿಟರಿ ಬೋರ್ಡನ್ನು ರಚಿಸಿಕೊಂಡು ತಾವೇ ಮಾಡಿಕೊಳ್ಳಬೇಕಾಗಿಯೂ, ಅದನ್ನು ಖರ್ಚು ಬೋರ್ಡಿಗೆ ಉಳತಾಯವಾಗುವದಾಗಿಯೂ ಅಂಕೋಲೆಯ ಸಭಾಸದರು ಮುಖ್ಯಸ್ಥಿಕೆಗೆ ಒಪ್ಪಿದರು. ಹೀಗೆ ಈ ವಿಷಯವು ಈ ಪ್ರಕಾರ ಕೊನೆಗಂಡಿತು. ಇನ್ನು ವಿಶೇಷ ವಿಷಯಗಳೇನು ನಡೆಯಲಿಲ್ಲ.

ಕಾರವಾರ—ಪ್ಲೇಗಿನ ಆಟ್ಟಾಟ ಇಳಿಯಲೊಲ್ಲದು. ೧೩ ವಾಸುದೇವ ರಾಮಚಂದ್ರ ಶಿರವಟೇಯವರು ಸೋಮವಾರಕ್ಕೆ ತೀರಿಕೊಂಡರು. ಅವರು ಗುಣಹೊಂದುತ್ತಲಿದ್ದರು. ಕೆಲವು ಗುಟಿಕೆಗಳನ್ನು ಅವರಿಗೆ ಕೊಟ್ಟಿದ್ದರು. ಅದರಿಂದ ಅವರು ತಕ್ಕಮಟ್ಟಿಗೆ ಸುಧಾರಿಸಿದ್ದರು. ಮಧ್ಯದಲ್ಲಿ ಅಪಥ್ಯವಾಯಿತು. ಪ್ಲೇಗಿನ ರಭಸವು ಅಪಥ್ಯದಿಂದ ವಿಗಿಲಾಗಿ, ಅವರು ತೀರಿಕೊಂಡರು. ಕಳೆದ ವಾರವಷ್ಟೇ ಅವರ ಮಗನೊಬ್ಬನು ವಿಷಮ ಜ್ವರದಿಂದ ತೀರಿಕೊಂಡಿದ್ದನು. ಅವರ ಮಗಳೊಬ್ಬಳು ಹುಡುಗಿಯರ ಶಾಲೆಯ ಮುಖ್ಯಾಧ್ಯಾಪಿಕೆಯಿದ್ದಾಳೆ. ೧೩ ಶಿರವಟೇಯವರ ಹೆಂಡತಿಯ ಸಂಗಾತವು ಕಠಿಣವಾಯಿತು. ವಿಧಿ ಘಟನೆ! ಅದೇ ದಿವಸ ಒಬ್ಬ ಕೆಲಸಗಾರ ಹೆಂಗಸು, ಖಾರ್ವಿಯೂ ಪ್ಲೇಗಿನಿಂದಲೇ ಮರಣ ಹೊಂದಿದರು. ಈ ಸುದ್ದಿ ಕೇಳಿ ಜನರು ಗಾಬರಿಯಾಗಿದಾರೆ. ಶುಕ್ರವಾರಕ್ಕೆ ಮಿ| ಬಿಹಾದ್ದೂರಖಾನರ ಮೋಟರ ಏಜಂಟರು ಪ್ಲೇಗಿಗೆ ತುತ್ತಾದರು. ಸಿವ್ಹಿಲ್ ಸರ್ಜನರ ಉಪಚಾರದಿಂದ ಅವರು ಗುಣಹೊಂದುವರೆಂದು ಅಂದಾಜಿತ್ತು. ಕನಿವಾರಕ್ಕೆ ಖಾರ್ವಿ ಜಾತಿಯ ಹುಡುಗಿಯೊಬ್ಬಳು ಬೈತಕೋಲದಲ್ಲಿ ತೀರಿದಳು. ಸೋಮವಾರವು ತಮ್ಮಲ್ಲಿಯೂ, ಜೈಲಿಗೊಪ್ಪಿದ ಪೋಲೀಸ ಠಾಣ್ಯದಲ್ಲಿಯೂ ಇಲಿಗಳು ಬೀಳಲಾರಂಭಿಸಿವೆ ಕೋಡಿಬಾಗದಲ್ಲಿ ೧೩ ವಿಠ್ಠಲ ಕಟ್ಟುಮಾಹಾಜನರು ತೀರಿಕೊಂಡರು ಹನರ ಗಾಬರಿ!

ಶ್ರೀ ಮುಂಡೀಶ್ವರ ದೇವಾಲಯದ ಬಳಿ ಪ್ಲೇಗಾದ ಸವೇರಾಯರ ೧೩ ದಿವಾಕರರವರ ಹುಡುಗಿಯು ಪ್ಲೇಗಿನಿಂದ ಗುಣಹೊಂದಿದಳು; ಉಡುಪ ಭಟ್ಟರಿಗೊಬ್ಬರಿಗೆ ಪ್ಲೇಗಾಗಿತ್ತು; ಅವರೂ ಗುಣ ಹೊಂದಿದ್ದಾರೆ. ಕೆಲವು ಗುಟಿಕೆಗಳಿಂದ ಪ್ಲೇಗು ಹಿಂದಾಗುತ್ತದೆಂದು ಈಗ ಅನುಭವಕ್ಕೆ ಬಂದಿದೆ, ಗಜ್ಜರದ ಮದ್ದಿನಿಂದಲೂ ಪ್ರಯೋಜನವಾಗುತ್ತಿದೆ. ಅದರಿಂದ ಈ ಗುಟಿಕೆಗಳನ್ನು ಆ ಔಷಧವನ್ನು ಧರ್ಮಾರ್ಥವಾಗಿ ಹಂಚುವಂತೆ ಏರ್ಪಾಡು ಮಾಡತಕ್ಕದ್ದು. ಗುಟಿ ಮಾಗಳ ಹೊಲವನ್ನು ಹೊರಡಿಸುವ ಕಟ್ಟಳೆಯನ್ನು ಮ್ಯುನಿಸಿಪಾಲಿಟಿಗೆ ತುರ್ತ ಒಪ್ಪಿಸಲಾಗಿದೆ. ಹಿಂಗಾದಿ ವಿರ್ಮಾಲಟನಿಂದ ಪ್ರಯೋಜನವಿಲ್ಲ. "*Prevention is better than cure.*" ರೋಗ ಪರಿಹಾರ ಉಪಾಯಗಳಿಗಿಂತ ರೋಗನಿವಾರಣ ಉಪಾಯಗಳನ್ನೇ ಕೈಕೊಳ್ಳುವದು ಶ್ರೇಯಸ್ಕರವು. ಇದೇ ಹೊರೆಯನ್ನು ಮ್ಯುನಿಸಿಪಾಲಿಟಿಗೆ ಕಾಯಂ ಒಪ್ಪಿಸಿ ಬಿಡಬೇಕು; ಅಥವಾ ಬಿಡಾರು ಕಟ್ಟುವಷ್ಟು ಸ್ಥಳಗಳನ್ನು ಮಾಡಿ, ಜನರಿಗೆ ಮಾಡಬೇಕು ರೋಗಿಯವರಿಗೆ ಅಲ್ಲಿ ಉಳಕೊಳ್ಳುವಂತೆ ಮನವೊಲಿಸಬೇಕು.

ಮಹಾತ್ಮರ ಆತ್ಮಚರಿತ್ರ.

(೪೦) ಸತ್ಯಾಗ್ರಹದ ವಾಮನ ಮೂರ್ತಿ.

ಕರ್ತವ್ಯವೆಂದು ಯುದ್ಧದಲ್ಲಿ ನಾನು ಸೇರಿದ್ದೇನೋ ನಿಜ. ಆದರೆ, ವಿಧಿಘಟನೆಯೇ ಬೇರೆ ಇತ್ತು. ಯುದ್ಧದಲ್ಲಿ ಪ್ರತ್ಯಕ್ಷವಾಗಿ ನನಗೆ ಸೇರಲಾಗಲಿಲ್ಲ ಇಷ್ಟಕ್ಕೇ ತೀರಿತೇ? ಆ ಇಕ್ಕಟ್ಟಿನಲ್ಲಿ ಸಣ್ಣ ಸತ್ಯಾಗ್ರಹವನ್ನು ನಾನು ಪ್ರತ್ಯಕ್ಷವಾಗಿ ಕೈಕೊಳ್ಳಬೇಕಾಯಿತು.

ನಮ್ಮ ಹೆಸರುಗಳು ಮನ್ನಿಸಲ್ಪಟ್ಟು ದಾಖಲಾದ ಬಳಿಕ, ನಮಗೆ ಅವಶ್ಯವುಳ್ಳ ಶಿಕ್ಷಣ ಕೊಡಲು ಅಧಿಕಾರಿಯೊಬ್ಬರು ನೇಮಿಸಲ್ಪಟ್ಟರೆಂದು ನಾನು ಈ ಮೊದಲೇ ಹೇಳಿದ್ದೇನಷ್ಟೇ. ಈ ಆಫೀಸರರು ನಮ್ಮ ತಂಡಿಗೆ ಶಿಕ್ಷಣ ಕೊಡುವ ಕೆಲಸಕ್ಕೆ ಮಾತ್ರ ನಮ್ಮ ಮುಖ್ಯಾಧಿಕಾರಿಯೆಂದು ನಾವೆಲ್ಲರೂ ತಿಳಿದಿದ್ದೆವು. ಅಂತಃಕಾರಭಾರದ ವಿಷಯ ನಾನೇ ನಮ್ಮ ತಂಡಿನ ಸರ್ವಾಧಿಕಾರಿಯೆಂದೂ ಎಲ್ಲರೂ ತಿಳಿದಿದ್ದರು. ಅಂದರೆ ಆಫೀಸರರು ನನ್ನ ತಂಡಿನೊಡನೆ ವ್ಯವಹಾರ ನಡಿಸಬೇಕಾದರೆ, ಅದನ್ನು ನನ್ನ ಮುಖಾಂತರವೇ ನಡಿಸತಕ್ಕದ್ದು, ಎಂದು ನಮ್ಮೆಲ್ಲರ ಗ್ರಹಿಕೆ ಆದರೆ, ಆಫೀಸರರು ಈ ಗ್ರಹಿಕೆಯನ್ನು ಕಲ್ಲೊಂದಲ್ಲೇ ನಮಗೆ ಹೋಲಾಡಿಸುತ್ತಿದ್ದರು.

ಶ್ರೀ ಸೊರಾಬಜಿ ಅಡಜಾನಿಯಾದವರು ದೂರದೃಷ್ಟಿಯವರು. ಅವರು ನನಗೆ ಮುಂಜಾಗ್ರತೆ ಕೊಟ್ಟಿದ್ದೇನಂದರೆ— ‹‹ಇವರ ವಿಷಯ ಎಚ್ಚರಿಕೆ; ನಮ್ಮ ಮೇಲೆ ದರ್ಬಾರ ಕಾರವನ್ನು ನಡಿಸಲು ಇವರು ಉದ್ಯುಕ್ತರಾಗಿದ್ದಂತೆ ತೋರುತ್ತದೆ. ನಾನು ಅವರ ಆಜ್ಞೆಗಳನ್ನು ಲಕ್ಷಿಸದೆ(?) ನಮ್ಮ ಉಪದೇಶಕರೆಂದು ಎಣಿಸಲಿಕ್ಕೆ ನಾವು ತಯಾರಿದ್ದೇವೆ. ನಮಗೆ ಶಿಕ್ಷಣ ಕೊಡಲು ಕೆಲ ಹುಡುಗರನ್ನು ಇವರು ನೇಮಿಸಿದ್ದಾರೆ ಅವರು ಸಹ ನಮ್ಮ ಒಡೆಯರಂತೆ ವರ್ತಿಸುತ್ತಾರೆ"

ಈ ಹುಡುಗರು ಒಕ್ಸ್‌ಫರ್ಡ ವಿಶ್ವವಿದ್ಯಾಲಯದೊಳಗಿನ ವಿದ್ಯಾರ್ಥಿಗಳು ಇವರು ನಮಗೆ ಶಿಕ್ಷಣ ಕೊಡಲು ಬಂದಿದ್ದರು. ನಮ್ಮ ತಂಡಿನೊಳಗಿನ ಒಳತಂಡುಗಳಿಗೆ ಇವರು ಶಿಕ್ಷಣ ಕೊಡುತ್ತಿದ್ದರು. ಆಫೀಸರರ ನಿರಂಕುಶ ವರ್ತನವನ್ನು ನಾನೂ ಲಕ್ಷ್ಯಾರೆ ಕಾಣುತ್ತಿದ್ದೆ. ಆದರೂ ಸೊರಾಬಜಿಯವರಿಗೆ ನಿಶ್ಚಿಂತರಾಗಿರಲು ನಾನು ಹೇಳಿದೆನು. ಅವರಿಗೆ ಸಮಾಧಾನಪಡಿಸಲಿಕ್ಕೆ ಪ್ರಯತ್ನಪಟ್ಟೆನು. ಆದರೆ, ಅವರಿಗೆ ಸಮಾಧಾನಪಡಿಸುವದು ಸುಲಭವಾಗಿದ್ದಿಲ್ಲ ಅವರು ನಗುಮೋರೆಯಿಂದ ನುಡಿದದ್ದೇನಂದರೆ.—‹‹ನೀವು ಅನಾವಶ್ಯಕವಾಗಿ ನಂಬುವವರಿದ್ದೀರಿ; ಮೋಸದ ಮಾತುಗಳಿಂದ ನಿಮಗೆ ಈ ಜನರು ವಂಚಿಸುವರು. ಕೊನೆಗೆ ಇದರ ಗುಟ್ಟು ನಿಮ್ಮ ಅನುಭವಕ್ಕೆ ಪ್ರತ್ಯಕ್ಷ ಬಂದಬಳಿಕ, ನೀವು ನಮಗೆ ಸತ್ಯಾಗ್ರಹವನ್ನು ಕೈಕೊಳ್ಳಲು ಹೇಳಿ, ನಮಗೆಲ್ಲರಿಗೆ ನಿಮ್ಮ ಜೊತೆಗೆ ಕಷ್ಟಕ್ಕೆ ಗುರಿ ಮಾಡುವಿರಿ"

ನಾನು ನುಡಿದದ್ದೇನಂದರೆ:—‹‹ನನ್ನ ಜೊತೆಗಾರರಾಗಿ ನೀವು ಸೇರಿದ್ದರಿಂದ ನೀವು ಕಷ್ಟವನ್ನೇ ಅನುಭವಿಸಬೇಕಲ್ಲದೆ, ಸುಖವನ್ನು ಹೇಗೆ ಅನುಭವಿಸುವಿರಿ? ಸತ್ಯಾಗ್ರಹಿಯು ಆಗಿಂದಾಗ ವಂಚಿಸಿಕೊಳ್ಳಲು ತಯಾರಾದವನು. ಆಫೀಸರರು ನಮಗೆ ಠಕ್ಕಿಸಲಿ. ಠಕ್ಕನು ಕೊನೆಗೆ ಠಕ್ಕಿಸಲ್ಪಡುತ್ತಾನೆಂದು ನಾನು ನಿಮಗೆ ಬಾರಿ ಬಾರಿಗೂ ಹೇಳುತ್ತಿರುತ್ತೇನಲ್ಲವೇ?

ಸೊರಾಬಜಿಯವರು ಕೊಕ್ಕನೆ ನಕ್ಕರು.—‹‹ಶಾಭಾಸ್! ಠಕ್ಕರ ಜಾಲದಲ್ಲಿ ಪುನಃ ಪುನಃ ಬೀಳಿರಿ; ಒಂದು ದಿನ ಸತ್ಯಾಗ್ರಹ ಮಾಡುತ್ತಿರುವಾಗಲೇ ನೀವು ಪ್ರಾಣಾರ್ಪಣ ಮಾಡುವಿರಿ. ಮತ್ತು ನಮ್ಮಂಥ ಬಡವರನ್ನು ನಿಮ್ಮ ಜೊತೆಗೆ ಬಲಿಮಾಡಿಕೊಳ್ಳುವಿರಿ, ಎಂದು ಸೊರಾಬಜಿಯವರು ನುಡಿದರು.

ಈ ಸಮಯ ಕ್ರಿಸ್ತವಾಸಿ ಕುಮಾರಿ ಎಮಿಲಿ ಹೊಬ್‌ಹೌಸರವರು ಅಸಹಯೋಗದ ಬಗ್ಗೆ ನನಗೆ ಬರೆದ ವಚನಗಳ ನೆನಪಾಗುತ್ತದೆ. ಅವೇನಂದರೆ:— ಸತ್ಯಕ್ಕಾಗಿ ನಿಮಗೆ ಗಲ್ಲಿಗೇರುವ ಪ್ರಸಂಗವು ಸದ್ಯಕ್ಕೆ ಬಂದರೆ, ನನಗೆ ಆಶ್ಚರ್ಯವಾಗದು ಪರಮಾತ್ಮನು ನಿಮಗೆ ಯೋಗ್ಯ ಮಾರ್ಗವನ್ನು ತೋರಿಸಿ, ನಿಮಗೆ ಕಾಪಾಡಲಿ."

ಆಫೀಸರರ ನೇಮಣೂಕಿಯಾದ ಅಲ್ಪಾವಧಿಯಲ್ಲಿಯೇ ನನಗೂ, ಸೊರಾಬಜಿಯವರಿಗೂ ಮೇಲ್ಕಂಡಂತೆ ಮಾತು ನಡೆಯಿತು ಕೆಲ ದಿನಗಳಲ್ಲಿಯೇ ನಮ್ಮ ಸಂಬಂಧಗಳು ಮುರಿಯಲಾರಂಭಿಸಿದವು. ೧೪ ದಿನಗಳ ಉಪವಾಸ ತೀರಿ ಬಹು ಕಾಲವಾಗಿದ್ದಿಲ್ಲ; ಹೊಟ್ಟೆಯ ಚೈತನ್ಯವೂ ಬಂದಿದ್ದಿಲ್ಲ. ಆಗಲೇ ನಾನು ಕವಾಯಿತು ಮಾಡಬೇಕಾಗಿತ್ತು. ಆಗಾಗ್ಗೆ ೨-೩ ಮೈಲು ನಾನು ನಡಕೊಳ್ಳುತ್ತ ಹೋಗಬೇಕಾಗಿತ್ತು. ಇದರಿಂದ ನನಗೆ ಎದೆನೋವು ಉಂಟಾಯಿತು. ನಾನು ಹಾಸಿಗೆ ಹಿಡಿದೆ. ಈ ಪ್ರಕಾರ ಹೊರಗೆ ಕೆಂಪ ಮಾಡಲು ನನಗೆ ಕಳಿಸಿದರು. ನಾನು ಮನೆಗೆ ಮರಳಿದೆ. ಕೆಂಪಿನಲ್ಲಿಯೇ ಸತ್ಯಾಗ್ರಹದ ಪ್ರಸಂಗವು ಬಂದೊದಗಿತ.

ಆಫೀಸರರು ತಮ್ಮ ಅಧಿಕಾರವನ್ನು ಕೆಲ ಮಟ್ಟಿಗೆ ನಿರಂಕುಶವಾಗಿ ನಡಿಸ ಹತ್ತಿದರು. ಸಮಸ್ತ ವಿಷಯಗಳಲ್ಲಿಯೂ— ಸೈನ್ಯಶಿಕ್ಷಣದಲ್ಲಿಯೂ, ಇತರ ಪ್ರಕಾರಗಳಲ್ಲಿಯೂ ತಾವೇ ನಮ್ಮೆಲ್ಲರ ಮೇಲಧಿಕಾರಿಯೆಂದು ಅವರು ಸ್ಪಷ್ಟವಾಗಿ ಹೇಳಹತ್ತಿದರು. ಸೊರಾಬಜಿಯವರು ನನ್ನ ಬಳಿ ಓಡಿ ಬಂದರು. ಇಂಥ ನಿರಂಕುಶ ಕಾರಭಾರಕ್ಕೆ ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಅವರು ನುಡಿದದ್ದೇನಂದರೆ:— ‹‹ನಾವು ಪಾಲಿಸಬೇಕಾದ ಆಜ್ಞೆಗಳೆಲ್ಲ ನಿಮ್ಮ ಮುಖಾಂತರವೇ ಬರತಕ್ಕದ್ದು. ನಾವಿನ್ನೂ ಶಿಕ್ಷಣ ಪಡೆಯುವ ಕೆಂಪಿನಲ್ಲಿದ್ದೇವೆ. ತಲೆಬುಡವಿಲ್ಲದ ಅಸಂಬದ್ಧ ಹುಕುಮುಗಳು ಕೊಡಲ್ಪಡುತ್ತವೆ ನಮಗೆ ಉಪದೇಶ ನೀಡಲು ನೇಮಿಸಿದ ವಿದ್ಯಾರ್ಥಿಗಳಿಗೂ, ಮತ್ತು ನಮ್ಮಲ್ಲಿ ಭೇದಭಾವವು ಮಾಡಲಾಗುತ್ತದೆ. ಆಫೀಸರರ ಕೂಡ ಈ ಬಗ್ಗೆ ನಾವು ಜಗಳಾಡಿ ತೀರ್ಮಾನ ಮಾಡಿಕೊಳ್ಳಬೇಕು ಇಲ್ಲವಾದರೆ, ನಾವು ಕೈಕೊಂಡ ಕಾರ್ಯವನ್ನು ನಡೆಸಲಾರದ ವು. ನಮ್ಮ ತಂಡಿನ ಸೇರಿದ ಹಿಂದೀ ವಿದ್ಯಾರ್ಥಿಗಳೂ, ಇತರರೂ ಇಂಥ ಅಸಂಬದ್ಧ ಹುಕುಮುಗಳನ್ನು ಪಾಲಿಸಲೊಲ್ಲರು. ಸ್ವಾಭಿಮಾನಕ್ಕಾಗಿ ನಾವು ಈ ತಂಡಿನ ಕಲ್ಪನೆಯನ್ನು ಕೈಕೊಂಡೆವು ಇಂಥ ಕಲ್ಪನೆಯಿಂದಲೇ ಸ್ವಾಭಿಮಾನವನ್ನು ನಾವು ಕಳಕೊಳ್ಳುವ ಪ್ರಸಂಗ ಬಂದಿದರೆ ಮತಿ ಹೀನವಾದೀತು"

ಆಫೀಸರರ ಬಳಿ ನಾನು ನನ್ನ ತಂಡಿಗೆ ಬಂದ ದೂರುಗಳನ್ನು ಅವರ ಕಡೆಗೆ ಕಳಿಸಿದೆ. ಅವರು ಈ ದೂರುಗಳನ್ನೆಲ್ಲ ಬರಕೊಡಲು ನನಗೆ ಹೇಳಿದರು. ಜೊತೆಗೇ ತಮ್ಮೊಂದು ಅಧಿಕಾರವನ್ನು ಅವರು ಹೇಳಿದರು. ಅದೇನ ಪರ:— ‹‹ದೂರು ಮಾಡುವವರಿಗೆ ನೀವು ತಿಳಿಸಿ ಹೇಳಬೇಕು, ನನ್ನ ಕಡೆ ದೂರು ಕಳಿಸಬೇಕಾದರೆ, ಈಗ ನೇಮಿಸಿದ ಆಯಾ ಒಳತಂಡಿನ ನಾಯಕರ ಮುಖಾಂತರ ತಿಳಿಸಬೇಕು ಈ ನಾಯಕರು ತಮ್ಮ ಇನ್‌ಸ್ಟ್ರಕ್ಟರ ಮುಖಾಂತರ ನನಗೆ ತಿಳಿಸುವರು."

ಇದಕ್ಕೆ ನಾನು ಉತ್ತರ ಬರೆದದ್ದೇನಂದರೆ: ‹‹ನನಗೇನು ಅಧಿಕಾರ ಬೇಕಾಗಿಲ್ಲ ಸೈನ್ಯದ ದೃಷ್ಟಿಯಿಂದ ವಿಚಾರಿಸಿದರೆ, ನಾನೊಬ್ಬ ಸಿಪಾಯಿಯಾಗಿದ್ದೇನೆ. ಆದರೆ, ಸ್ವಯಂಸೇವಕ ತಂಡಿನ ಸಭಾಪತಿಯಾಗಿದ್ದದರಿಂದ ನಾನೇ ಅವರೆಲ್ಲರ ಪ್ರತಿನಿಧಿಯೆಂದು ನೀವು ಗ್ರಹಿಸುವದಾಗಿ ನನ್ನ ತಿಳುವಳಿಕೆ ಇತ್ತು" ದೂರುಗಳನ್ನೂ, ನನ್ನ ಲಕ್ಷ್ಯಕ್ಕೆ ಬಂದ ಇತರ ಅನಾನುಕೂಲತೆಗಳನ್ನೂ ನಾನು ವಿವರಿಸಿದೆನು ತಂಡಿನೊಳಗಿನ ಸ್ವಯಂಸೇವಕರಿಗೆ ವಿಚಾರಿಸದೆ, ಒಳತಂಡಿನ ನಾಯಕರನ್ನು ನೇಮಿಸಿದ್ದರಿಂದ ಬಹು ಅಸಂತೋಷವಾಗಿರುವದಾಗಿ ಹೇಳಿ, ಅವರಿಗೆ ಹಿಂಗರೆದುಕೊಳ್ಳಬೇಕಾಗಿಯೂ, ತಂಡಿನವರಿಗೇ ತಂಡಿನ ನಾಯಕರನ್ನು ನೇಮಿಸಿಕೊಳ್ಳಲು ತಿಳಿಸಬೇಕಾಗಿಯೂ ನಾನು ಬರೆದೆನು. ಆರಿಸಿ ತೆಗೆದ ನಾಯಕರಿಂದ ಮನ್ನಿಸುವದು ಅಥವಾ ಮನ್ನಿಸದಿರುವದು ಆಫೀಸರರ ಮರ್ಜಿಯ ಮಾತಿದೆ.

ಇದರಿಂದ ಆಫೀಸರರಿಗೆ ಸಮಾಧಾನವೆನಿಸಲಿಲ್ಲ. ನನ್ನ ಹೇಳಿಕೆಯು ಸೈನ್ಯ ಶಿಸ್ತಿಗೆ ವಿರೋಧವಾದದ್ದೆಂದರು. ಒಳತಂಡುಗಳ ನಾಯಕರನ್ನು ಸ್ವಯಂಸೇವಕರು ಆರಿಸುವದು ಅಪ್ರಶಸ್ತವೆಂದರು. ಈ ಹಿಂದೆ ಮಾಡಿದ ನೇಮಣೂಕಿಗಳನ್ನು ರದ್ದು ಮಾಡಿದರೆ, ಎಲ್ಲ ಶಿಸ್ತು ನಷ್ಟವಾಗುವದಾಗಿಯೂ ಅವರು ಬರೆದರು.

ಆದರಿಂದ ನಾವೊಂದು ಸಭೆಸೇರಿಸಿದೆವು. ಸೈನ್ಯದೊಳಗಿಂದ ನಾವು ನಿವೃತ್ತರಾಗಲು ನಿರ್ಣಯಿಸಿದೆವು. ಸತ್ಯಾಗ್ರಹದಿಂದ ಉಂಟಾಗುವ ಕಷ್ಟಗಳನ್ನು ನಾನು ಸ್ವಯಂಸೇವಕರಿಗೆ ತಿಳಿಸಿಹೇಳಿದೆನು. ಆದರೂ, ಪ್ರಚಂಡ ಬಹುಮತದಿಂದ ಈ ನಿರ್ಣಯವಾಯಿತು. ಒಳಕೂಟದ ನಾಯಕರನ್ನು ಹಿಂಗರೆದುಕೊಂಡು, ಸ್ವಯಂಸೇವಕರ ಕಡೆಯಿಂದ ಆವರನ್ನು ಆರಿಸಿಕೊಳ್ಳ ಹೇಳದವರ ಸ್ವಯಂಸೇವಕರು ಇನ್ನು ಮುಂದೆ ಕವಾಯತಿಗೆ ಹಾಗು ಕೆಂಪಿಗೆ ಬರಲಾರರೆಂದು ನಿರ್ಧರಿಸಲಾಯಿತು. ಇದಾದ ಬಳಿಕ, ಆಫೀಸರರಿಗೆ ನಾನು ಪತ್ರ ಬರೆದೆ. ನನ್ನ ಸೂಚನೆಗಳನ್ನು ಧಿಕ್ಕರಿಸಿದ್ದರಿಂದ ನನಗೆ ತೀರ ಬೇಸರವೆನಿಸಿತೆಂದು ಬರೆದೆನು. ಅಧಿಕಾರವನ್ನು ನಡಿಸಲು ನಾನು ಆತುರಪಡುವವನಲ್ಲವಾಗಿಯೂ, ಸೇವೆಯನ್ನೇ ನಡಿಸಲು ನಾನು ಆತುರಪಡುತ್ತೇನಾಗಿಯೂ ಅವರಿಗೆ ನಾನು ಹೇಳಿದೆನು. ಈ ಸಮಯ ಈ ಹಿಂದೆ ಸಂಭವಿಸಿದ ಒಂದು ಕಥೆಯನ್ನು ನಾನು ಆ ಪತ್ರದಲ್ಲಿ ಬರೆದೆನು. ದಕ್ಷಿಣ ಆಫ್ರಿಕೆಯಲ್ಲಿ ಬೋರ ಯುದ್ಧ ನಡೆದಾಗ, ಹಿಂದೀ ಒಕ್ರೂಪ ಸೈನ್ಯದಲ್ಲಿ ನಾನಿದ್ದ. ಆ ಕಾಲಕ್ಕೆ ಸೈನ್ಯಮುಖ್ಯರಿಂದ ನನಗೆ ಯಾವ ಅಧಿಕಾರವೂ ಇರಲಿಲ್ಲ. ಆದರೂ, ಕರ್ನಲ್‌ಗೆಲ್ವೇಯವರಿಗೂ, ನಮ್ಮ ತಂಡಿಗೂ ಕಲಹ ಒಂದೂ ಉಂಟಾಗಲಿಲ್ಲ, ಕರ್ನಲ್ ಗೆಲ್ವೇಯವರು ನನ್ನ ತಂಡಿನ ಅಪೇಕ್ಷೆಗಳನ್ನು ನನ್ನ ಕಡೆಯಿಂದ ಪಡಕೊಂಡು, ಮುಂದಿನ ಕಾರ್ಯ ಮಾಡುತ್ತಿದ್ದರಾಗಿಯೂ ನಾನು ಬರೆದಿದ್ದೆ. ಪತ್ರದ ಜೊತೆಗೆ ನಾವು ಕೈಕೊಂಡ ನಿರ್ಧಾರದ ಒಂದು ಪ್ರತಿಯನ್ನೂ ಕಳಿಸಿದೆನು.

ಆಫೀಸರರ ಮೇಲೆ ಇದರಿಂದ ಪರಿಣಾಮವಾಗಲಿಲ್ಲ. ನಮ್ಮ ಸಭೆಯೂ, ನಾವು ಕೈಕೊಂಡ ತೀರ್ಮಾನವೂ ಶಿಸ್ತನ್ನು ಭಂಗಿಸುವ ದೊಡ್ಡ ಪ್ರಮಾದವೆಂದು ಅವರು ಗ್ರಹಿಕೆಯಾಯಿತು.

ಹಾಗೆಯೇ ನಾನು ಭಾರತ ಮಂತ್ರಿಗಳಿಗೆ ಒಂದು ಪತ್ರ ಬರೆದೆನು; ವೃತ್ತಾಂತವನ್ನು ವಿವರಿಸಿದೆನು. ನಿರ್ಧಾರದ ಪ್ರತಿಯನ್ನೂ ಕಳುಹಿದೆನು. ಭಾರತ ಮಂತ್ರಿಗಳಿಂದ ಉತ್ತರ ಬಂತು. ದಕ್ಷಿಣ ಆಫ್ರಿಕೆಯ ಸ್ಥಿತಿಯೇ ಬೇರೆ ಎಂದು ಅವರು ಹೇಳಿದರು. ಹಾಗು 'ನಿಯಮಗಳಂತೆ ಆಫೀಸರರು ಒಳಕೂಟದ ನಾಯಕರನ್ನು ನೇಮಿಸಿರುವದಾಗಿಯೂ, ಇನ್ನು ಮುಂದೆ, ಹೊಸ ನೇಮಣೂಕಿಯಾಗುವ ಪ್ರಸಂಗದಲ್ಲಿ ಆಫೀಸರರು ನನ್ನ ಶಿಫಾರಸುಗಳನ್ನು ಅಲೋಚಿಸುವರಾಗಿಯೂ ನನಗೆ ತಿಳಿಸಿಹೇಳಲಾಗಿತ್ತು. ಈ ವಿಷಯ ಬಹಳ ಪತ್ರವ್ಯವಹಾರ ನಡೆಯಿತು ಆದರೆ, ಮತ್ತು ಈ ನೀರಸ ಕಥೆಯನ್ನು ವಿಸ್ತಾರ ಮಾಡಲಿಚ್ಛಿಸುವದಿಲ್ಲ. ಹಿಂದುಸ್ಥಾನದಲ್ಲಿ ನಿತ್ಯವೂ ಬರುವ ಅನುಭವಗಳ ಒಂದು ಮಾದರಿಯೂ ನಮಗಾಗ ಬಂತು. ಆಫೀಸರರು ಹೆದರಿಸಿದರು; ಕುತಂತ್ರಗಳನ್ನು ನಡಿಸಿದರು; ಮತ್ತು ನಮ್ಮ ತಂಡಿನಲ್ಲಿ ಇತ್ತಂಡಗಳನ್ನು ನಿರ್ಮಿಸಿದರು. ನಮ್ಮ ತೀರ್ಮಾನಕ್ಕೆ ಮತ ಕೊಟ್ಟವರಲ್ಲಿ ಕೆಲವರು ಆಫೀಸರರ ಬೆದರಿಕೆಗೂ, ಮನವೊಲಿಕೆಗೂ ಒಲಿಬಿದ್ದು ವಚನಭಂಗ ಮಾಡಿದರು.

ಇದೇ ಸಮಯ ಅನೇಕ ಗಾಯಪಟ್ಟ ಸೈನಿಕರು ನೆಟ್ಲೀ ಆಸ್ಪತ್ರೆಯಲ್ಲಿ ಅನಪೇಕ್ಷಿತವಾಗಿ ಬಂದು ತಲ್ಪಿದರು. ನಮ್ಮ ತಂಡಿಗೆ ಅಲ್ಲಿ ಹೋಗಲು ಆಜ್ಞೆಯಾಯಿತು. ಆಫೀಸರರ ಮಾತಿನಲ್ಲಿ ನಿಲುಕಿದವರು ನೆಟ್ಲಿಗೆ ಹೋದರು. ಉಳಿದವರು ಹೋಗಲೊಪ್ಪಲಿಲ್ಲ ನಾನು ಹಾಸಿಗೆ ಹಿಡಿದಿದ್ದೆ

ಎಂದರೂ, ಸ್ವಯಂಸೇವಕರೊಡನೆ ವ್ಯವಹಾರವು ನಡೆದಿತ್ತು. ಡಾಕ್ಟರರವರು ಆ ಕಾಲಕ್ಕೆ ಅಂಥ ಸಿಕ್ಕ್ರಟರಿಗೆ ಇದ್ದರು. ಅವರು ನನಗೆ ಆಗಿಂದಾಗ ಕರೆದು ಮನ್ನಿಸಿದರು. ಒಳಿಬದರಿಗೆ ಸೇವೆ ಮಾಡಲು ನಾನು ಮನಸ್ಸೊಲಿಸಬೇಕಾಗಿಯೂ ಅವರು ಹೇಳಿದರು. ಉಳಿದವರು ಪ್ರತ್ಯೇಕ ತಂಡ ನ್ನು ನಿರ್ಮಿಸಬಹುದಾಗಿಯೂ ಅವರು ಸೂಚಿಸಿದರು. ನೆಟ್ಲೀ ಆಸ್ಪತ್ರೆಯಲ್ಲಿ ಇರುವ ಅಧಿಕಾರರಿಗೆ ಮಾತ್ರ ಅವರು ಜವಾಬದಾರ ಇರಬೇಕಾಗಿಯೂ ಅವರು ಹೇಳಿದರು. ಈ ಯೋಜನೆಯಿಂದ ಸ್ವಾಭಿಮಾನ ಕಳೆದುಕೊಳ್ಳುವ ಪ್ರಸಂಗವಿಲ್ಲವಾಗಿಯೂ, ಸರಕಾರಕ್ಕೆ ಸಂತೋಷವಾಗುವದಾಗಿಯೂ ಅವರು ಹೇಳಿದರು. ಆಸ್ಪತ್ರೆಯಲ್ಲಿ ಬಂದ ಅನೇಕ ಘಾಯಪಟ್ಟವರಿಗೆ ಉಪಕಾರವಾಗುವದಾಗಿಯೂ ಅವರು ತಿಳಿಸಿಹೇಳಿದರು. ಈ ಸೂಚನೆಯು ನನಗೂ ನನ್ನ ಜೊತೆಗಾರರಿಗೂ ಮಾನ್ಯವಾಯಿತು. ನನ್ನ ಜೊತೆಗಾರರು ನೆಟ್ಲೀ ಆಸ್ಪತ್ರೆಗೆ ನಡೆದರು; ನಾನು ಮಾತ್ರ ಹಾಸಿಗೆ ಹಿಡಿದು ಮಲಗಿಕೊಂಡು, ಕೈಲಾದಷ್ಟು ಸೇವೆ ಮಾಡುತ್ತಿದ್ದೆ.

ಹೋಳಿಯ ಹಬ್ಬವೂ, ಅಸಭ್ಯತನದ ಪ್ರದರ್ಶನವೂ!

[ಹಿಂದಿನ ವಾರದಿಂದ ಮುಂದರಿಸಿದ್ದು.]

ನಿಂದ್ಯವಾದ ಆಚರಣೆಯೇ ಸಭ್ಯ ವಾದರೆ, ಇನ್ನು ಅಸಭ್ಯತನವು ಯಾವದು?

ಕಾಮದಹನವೆಂದರೆ, ಇಂದ್ರಿಯ ನಿಗ್ರಹವಲ್ಲವೇ? ಕಾಮವಿಕಾರವೇ ಕಾಮನ ಅಂತ್ಯವಾಗಿ ಪರಿಣಮಿಸಿಕಲ್ಲವೇ? ಮತ್ತು ಇದರ ಸ್ಮರಣಾರ್ಥವಾಗಿ ಮಾಡುವ ಹಬ್ಬದಲ್ಲಿ ಇಂಥ ವಿಕಾರಗಳೇಕೆ? ಅಸಹ್ಯವಾದ ಅವಾಚ್ಯ ಶಬ್ದ ಪ್ರಹಾರಗಳಿಂದ ಅಂಗನೆಯರನ್ನು ಲಜ್ಜೆಯಿಂದ ತಲೆ ಕೆಳಗೆ ಹಾಕುವಂತೆ ಮಾಡುವದು ಎಂಥ ಪೌರುಷವೆನಿಸಲಾರದು. ಪೌರುಷವನ್ನು ತೋರಿಸುವ ಹುರುಪಿದ್ದರೆ ಅದನ್ನು ದುಷ್ಟರನ್ನು ನಿಗ್ರಹಿಸಿ ದೀನರನ್ನು ರಕ್ಷಿಸುವದರಲ್ಲಿಯೂ, ಸಭ್ಯತ್ಯಾಗಿಯೂ, ಸತ್ಪಕ್ಷಕ್ಕಾಗಿಯೂ, ರಾಷ್ಟ್ರೋದ್ಧಾರಕ್ಕಾಗಿಯೂ ತೋರಿಸಿರಿ. ಹೀಗೆ ಮಾಡದೆ ನಿರ್ಲಜ್ಜತನದಿಂದ ವರ್ತಿಸಿದರೆ, ದೇಶಕ್ಕೆ ಶಕ್ಯ ಪ್ರಯತ್ನವು ಅಲ್ಲಿಂದಲ್ಲೇ ನಿಲ್ಲುವದು. ಯಾಕಂದರೆ, ಕಾಮದಹನ ಕಾಲಕ್ಕೆ ಕಾಮಭ್ರಷ್ಟರು ವಿವೇಕಭ್ರಷ್ಟರಾಗಿ ಹುಚ್ಚರಂತೆ! ಉಬ್ಬರಿಸ್ಕೊಬ್ಬರು ಗೃಹಜನರಿಂದ (ತನಬರಿಗೆ) ಬಿಡಿಯುತ್ತ ಲಬೋ, ಲಬೋ ಹೊಡೆಯುತ್ತ ತಿರುಗುವರಲ್ಲದೇ? ನೀತಿಯನ್ನು ಬಿಟ್ಟು ಅನೀತಿಯಿಂದ ವರ್ತಿಸಿದ್ದಕ್ಕೆ ಕಿಸಬರಿಗೆಯ ಪ್ರಹಾರಗಳೇ ಅವರಿಗೆ ಶಿಕ್ಷೆಯು. ಮತ್ತು ಲಬೋ ಲಬೋ ಹೊಡೆಯುವವರೆಂತ, ಈ ತರದ ನಿಂದ್ಯವಾದ ವರ್ತನದಿಂದ ಅವರು ಸಮಾಜದಲ್ಲಿ ಅದಕ್ಕೆ ಸತ್ತ ಲೆಕ್ಕವೇ ಎಂತ ಸೂಚಿಸಿದಂತೆ ಆಗುವದಿಲ್ಲವೇ?

ಒಟ್ಟಿನಲ್ಲಿ ಹೇಳುವದೇನಂದರೆ, ಕಾಮನ ಹಬ್ಬವೆಂಬುದು ಜನರ ನೀತಿಮತ್ತೆಯನ್ನು ಪರೀಕ್ಷಿಸುವ ಒರಗಲ್ಲಾಗಿದ್ದು, ಇದರಿಂದ ಜಾವು ಕಟ್ಟಿರುವದಲ್ಲದೆ, ಭಾವೀ ಜನಾಂಗದ ಆಧಾರಸ್ತಂಭಗಳಾಗಿದ್ದ ತಮ್ಮ ಬಾಲಕರನ್ನೂ ಜಾವು ಕಳಿಸಿ, ಪರರಾಷ್ಟ್ರಗಳ ಅಪಹಾಸ್ಯಕ್ಕೆ ಗುರಿಯಾಗಿದ್ದೇವೆಂತ ಈ ಕಾಮಭಸ್ಮರ ತಲೆಯಲ್ಲಿ ಯಾವಾಗ ಬರುತ್ತದೋ, ಅದೇ ಸುದಿನವು. ಮತು ಇಂಥ ಸುದಿನವು ಬೇಗನೇ ಬರಲೆಂದು ಶ್ರೀ ಶಂಕರನನ್ನು ಪ್ರಾರ್ಥಿಸಿ, ಈ ಲೇಖವನ್ನು ಮುಗಿಸುತ್ತೇನೆ.

— ಮುಂಬಯಿಯ ವಿಶ್ವವಿದ್ಯಾಲಯದ ಪರವಾಗಿ ಚೌಕ ಮಂಡಳವೊಂದು ಬೆಳಗಾವಿಗೆ ಬಂದು, ಲಿಂಗರಾಜ ಕಾಲೇಜಿನ ಕಟ್ಟಡ ನೋಡಿಕೊಂಡು ಹೋಯಿತು. ಕಾಲೇಜಿಗೆ ಮನ್ನಣೆ ಕೊಡುವ ಸಂಬಂಧ ಮಾಡುವ ಚೌಕಶಿಯು ಮುಗಿದುಹೋಗಿದೆ. ಬೇಗನೆ ಮನ್ನಣೆ ದೊರೆತು ದಾ ಬಾವಟೇ ಮುದಂಗೆ ಹೊಸ ಪದ್ಧತಿಯಿಂದ ಶಿಕ್ಷಣ ಕೊಡಲು ಅನುಕೂಲತೆಯಾಗಲೆಂದು ಕರ್ನಾಟಕದ ಬಯಕೆ.

— ಬ್ರಿಟಿಶ ಸರಕುಗಳ ಬಹಿಷ್ಕಾರದ ಕುರಿತು ಕಳೆದ ತಿಂಗಳ ಹಾರೀಖಿಗೆ ಕಲಕತ್ತೆಯಲ್ಲಿ ನಾಲ್ಕು ಪ್ರಚಂಡ ಸಭೆಗಳಾಗಿ ಪ್ರತಿಜ್ಞೆಗಳು ಕೊಳ್ಳಲಾದವು. ಬಹಿಷ್ಕಾರವನ್ನು ಪ್ರಾಂತದಲ್ಲೆಲ್ಲ ಪಸರಿಸಲು ಶ್ರೀ ಸುಭಾಷಚಂದ್ರ ಬೋಸರವರು ೧೧ ಜನರ ಸ್ವಯಂಸೇವಕರನ್ನು ಕಳುಹಿ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ
ಜೋಗಿಗೆ
ರೆಗ್ಯುಲರ್
ಸರ್ವೀಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ. (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀದಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ದುರ್ಬಲವಾದರೆ ವರ್ಧಿಸಲಶಕ್ಯವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ನಂತರ ಹೋಗುವ ವೀರ್ಯವು ಬಂದಾಗುವದು.— ಪರಿಶ್ರಮ ಹಾಗೂ ಕಾವಿನಿಂದ ಶೋಷಿತವಾದ ಶರೀರವು ನಿರೋಗಿಯಾಗುವದು. ಮೂರೇ ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಜೀರ್ಣವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ನೋಡಲಿಕ್ಕೆ ದಿವಸವೇ ಬರುವದು. ಕೌಟ ಸಾಧ ರಾಗುವದು ವ್ಯಾಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦—೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ೧೨ ಜನ ಬಾಟಲಿಗಳ ಕಿಮ್ಮತು ೧೨—೦—೦ ಮತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ತಳಸಿಗೆ ೧೩-೮-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತಿಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಪತಿಗೋಣ, ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪ್ರಮೇಹ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ ಧಾತು ಶುದ್ಧನಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತು ಭಕ್ಷಿಸು "ವೈಸರಾಯ ಕ್ವಾರ್ಟರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ನಡೆಯುವಷ್ಟು ೮೪ ತೊಲಿಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ ೧೨ ಡಬಿಗೆ ೫೦ ರೂ. ವ್ಹಿ. ಪಿ. ಖರ್ಚ ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- एक रत्तलास किमत १॥ रुपये

रामबाण औषध

भूक वाढविणारें

शक्ति देणारें

तेजस्वीपणा आणणारें

स्थानिक एजंट

झंडु फार्मास्युटिकल वर्क्स लिमिटेड

मुंबई नं. १४

मेसर्स पंडित आणी कंपनी

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯುವರ

ಸುಗಂಧಿ ನೃಶದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದ ಲಟ್ಪ್ಪಿ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪೀನಸಿ, ಒಂಟಿತಲೆನೋವು, ತಲೆಯ ಬ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಪಕ ಶಕ್ತಿಯನ್ನೂ ಹೆಚ್ಚು ಮಾಡತಕ್ಕದ್ದು. ಬೇರೆ ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಸಭ ... ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ ಮಾದರಿ ...

... ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯವಿಟ್ಟು ... ಹೆಸರೂ, ಅಡ್ರೆಸೂ, ಸರಿಯಾಗಿ ತಿಳಿಯುವಂತೆ ಬರೆಯಿರಿ.

... ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಕಮಾಲ ಗಾಣ.



ನೂರಕಡಾ ೬೫ ರಿಂದ ೭೦ ರ ವರೆಗೆ ರಸ ತೋರಡುವದು

ಗಂಟೆಯೊಂದಕ್ಕೆ ೧೧೦೦ ಪೌಂಡ ಕಬ್ಬನ್ನು ಹಿಂಡುವದು

ಬೆಲೆ ೨೯೦ ರೂ. ಕೂಡ್ಲೆ ಡಿಲಿವ್ಹರಿ

... ಮತ್ತು ಬ್ರದರ್ಸ, ಇವರಲ್ಲಿ ಸಿಗುವದು

... ಈ ಗಾಣದಲ್ಲಿಯ ಎರಕ ಹೊಯ್ದ ಭಾಗಗಳು ಅರ್ಧ ಉಕ್ಕಿನಿಂದ ... ತಯಾರಾಗಿರುತ್ತವೆ ... ಎತ್ತರ ೧೧ ಇಂಚು. ಅಕ್ಸಲ್ ... ಕ್ಸಲ್, ರೋಲರ ಇವು ... ಇರುತ್ತವೆ ಬೇಅರಿಂಗ ... ಇರುತ್ತವೆ ... ನಿಲ್ಲುವದಕ್ಕೆ ... ಕಡಿಮೆಯಾಗುತ್ತದೆ

... - ಕಣೆಗಳು ... ಕಬ್ಬು ಅಡಕಿಸಲ್ಲಿ ... ಬರುವದು ಮಿಕ್ಕ ಗಾಣಗಳಂತೆ ... ಸಾಗುವದು. ನಾಲ್ಕು ಎತ್ತುಗಳು ಬೇಕು.

ಅಭಿಪ್ರಾಯ- "ಕಮಾಲ ಗಾಣದಿಂದ ... ವರ್ಧ ಹೋಗುವ ರಸ ... ಬೆಲ್ಲ, ಅಂದರೆ ೧೦ ರೂ. ಲಾಭವಾಯಿತು ... ದಿವಸ ... ೨೪೦ ರೂ. ಲಾಭವಾಯಿತೆಂದು ... ಆನಂದವಾಗುತ್ತದೆ ... ಪಾಟೀಲ, ಸದಬಿಗಿ ... "

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರ



ಅಮೃತಾಂಜನದ

ಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ

... ತಲೆನೋವು, ಬೆನ್ನುನೋವು, ಸಂಧಿವಾತ ... ಸುಟ್ಟಗಾಯ ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣವಾಗುತದೆ. ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದು ... ತಿರಸ್ಕರಿಸಲಾಗದು ... ನೋವಿನಿಂದ ... ಅಮೃತಾಂಜನದ ಬಂದು ಸಣ್ಣ ಬಾಟ್ಲಿಯಿಂದ ... ನೋವುಗಳನ್ನು ಕೂಡಲೇ ಪರಿಹರಿಸಬಹುದು ಬೆಲೆ ರೂ ೦-೧೦-೦

ಎಲ್ಲ ಕಡೆಯಲ್ಲಿಯೂ ಸಿಗುತ್ತದೆ ಅಥವಾ **ಅಮೃತಾಂಜನ ಡಿಪ್ಪೋ,**

ಮುಂಬಯಿ ಮತ್ತು ಮದ್ರಾಸ

... ಇನ್ಸೂರನ್ಸ ಕಂಪನಿ

ಜೀವ ವಿಮೆಯ ಮಂಡಲಿ.

...

ಹೊರಗಿನ 100 ...

ಕರ್ನಾಟಕಕ್ಕೆ ಏಜಂಟರು P D Churi,

ಬಿ ಸಿ ಸಿದ್ದಾಳಕೊಪ್ಪ, ... Secretary

ಲೋಖಂಡೆ ಬಿಲ್ಡಿಂಗ, A ... Building

ಹುಬ್ಬಳ್ಳಿ ... Road,

BOMBAY

S U Narayanacharya & CO

Chaukamba, BENARES CITY,



... ಎಲ್ಲಾ ತರದ ... ಕಾಶಿ ... ಕಸೂತಿ ... ಇತ್ಯಾದಿ.

ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಮತ್ತು ಕಂಪನಿ ಚೌಕಾಂಬಾ, ಕಾಶಿಕ್ಷೇತ್ರ

Printed and Published by Krishnarao Keshav Shenvi (Editor) at his Star of Kanara PressKum

REG. NO. B. 1270

MONDAY, MARCH 19TH 1923.

ವರ್ಷ ೧೨

ಕಾನಡಾವೃತ್ತ.

ಸಂಚಿಕೆ ೨೫

THE KANARA NEWS.

ಪತ್ರದ ವರ್ಗಣಿ.

ಮುಂಚೆಯಲ್ಲಿ ಅಗಾವು
ರೂಪಾಯಿ 2-4-0.
ವರ್ಷಾಖೇರಿಯಿಂದ
ರೂ. 3-0-0.
ವಿ. ಪಿ. ಯಿಂದ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ, ಮರಾಠಿ
ಟೈಪಿನ (೧೨ ಪಾಯಿಂಟ್) ಒಂದು ಸಾಲಿಗೆ ಮೊದಲನೆ ಸಲ ರೂ. 0-4-0
ಆ ನಂತರ ಪ್ರತಿಸಲಕ್ಕೆ 0-2-0.
ಜಾಹೀರಾತು ಹೆಚ್ಚು ಕಾಲ ಇರುವವರೊಡನೆ ಮಾತನಾಡಿ ಕಡಿಮೆ ದರ ಮಾಡಲಾಗುವದು.
ಬೇರೆ ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಬೇಕು.

सर्वात्मिहितकर्ता ... ...
... ...

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೯ ಮಾಹೆ ಮಾರ್ಚ ಸನ್ ೧೯೨೩ನೇ ಇಸವಿ.)

ಹೊಸ ಅಂಗಡಿ! ಹೊಸ ಮಾಲು!!

ಕುಮಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟೆಂಟ ಔಷಧಗಳು, ಕಾಚಿನ ಸಾಮಾನು, ಮುಂತಾದ ಎಲ್ಲ ತರವಾರ ಮಾಲು ಬಲು ಅಗ್ಗವಾಗಿ ದೊರೆಯುತ್ತವೆ!

ಚಿಲ್ಲರೆ ವ್ಯಾಪಾರಿಗಳಿಗೂ ಮುನಾಫೆ ಸಿಗುವಂತೆ ಸ್ಪೇಶಲ್ ಹೋಲ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮಾಲು ಪಡೆಯಲು ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ವಾತೊಂಡೆ,
ಆಯರ್ನ ಮರ್ಚೆಂಟ,
ಕುಮಟಾ. (ಉ ಕನ್ನಡ)

ಜಿ. ವ್ಹಿ. ವೇಲಿಂಗ್ಕರ ಮೋಟಾರ ಸರ್ವ್ಹೀಸ.

ಕುಮಟಾ—ಶಿರ್ಶಿ

ಶಿರ್ಶಿ—ಕುಮಟಾ

ಡೇಲಿ ಮೋಟಾರ ಸರ್ವ್ಹೀಸ ಪ್ರಾರಂಭವಾಗಿರುವದು

ಇದಲ್ಲದೆ ಈ ಸರ್ವ್ಹೀಸು ಶಿರ್ಶಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವ ವರೆಗೂ ನಡಿಯುತ್ತದೆ. ಸ್ಪೇಶಲ್ ಬಾಡಿಗೆಗೆ ಬೇಕಾದವರು ಒಂದು ದಿವಸ ಮುಂಚಿತ ತಿಳಿಸಬೇಕು

ಟಿಕೀಟಿನ ದರ:—ಸೋಯಿ! ಅತಿ ಸೋಯಿ!! ಎಲ್ಲರಿಗಿಂತಲೂ ಸೋಯಿ!!!

ಬೇಕಾದಲ್ಲಿಯ ಟಿಕೀಟುಗಳೂ, ವಿಶೇಷ ಮಾಹಿತಿಯೂ ಕುಮಟಾ ಬಜಾರ ನಾಗಪ್ಪಾ ರಾಮನಾಯ್ಕ ದುದಗಾಂವಕರ ಇವರ ಕಡೆಗೆ ಸಿಗುವವು.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वतं हातमागांवरील नानातऱ्हेच्या डिझायनच्या रंगी-बेरंगी चादरें, फॅशनेबल बाथ टॉवेल, चौक, लहान-मोठे पंचे, सीतपाट, चौकपाट, शर्टिंग कोटींग वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:-आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:- मेसर्स गोविंद माधव शेणवि, फोवकार अँड सन्स.
पोस्ट— मुंकेरि (कारवार.

ಸಚಿತ್ರ] ನಮ್ಮ ಶಾಸ್ತ್ರೀಯ ವಾದ [ಉಚಿತ!!

ಶಾರೀರಕ ಶಿಕ್ಷಣ.



ಈ ಪುಸ್ತಕದಲ್ಲಿ ನನ್ನ ದುಷ್ಟ ನನ್ನ ಶರೀರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂಥ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ... ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ... ಈ ಪುಸ್ತಕವನ್ನು ... ಉಚಿತವಾಗಿ ಕಳಿಸುತ್ತೇನೆ. ... ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ ಬೆಂಗಳೂರ ಸಿಟಿ

ಹೊಸ ಪಂಚಾಂಗ.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರವರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿವೆ.

ಪ್ರತಿ ೧ ಕ್ಕೆ ರೂ. ೦—೩—೦.

ಪ್ರತಿ ೨೫ ಕ್ಕೆ ರೂ. ೩-೮—೦.

ಪ್ರತಿ ೫೦ ಕ್ಕೆ ರೂ. ೬-೮—೦.

ಪ್ರತಿ ೧೦೦ ಕ್ಕೆ ರೂ ೧೨—೦—೦.

☞ ಪಂಚಾಂಗಗಳನ್ನು ವ್ಹಿ. ಪಿ. ಯಿಂದ ಅಪೇಕ್ಷಿಸುವವರು ರೂ. ೨-೦-೦ ಮುಂಗಡ ಕಳಿಸಬೇಕು.

ಪತ್ತೆ:- ಮೆನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಕಲ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿಯೂ, ವಿಶ್ವಾಸದಿಂದಲೂ ನಾವು ಚಿಲ್ಲರೆ ಹಾಗು ಠೋಕ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ತೊಳ್ಳುವದಿಲ್ಲ; ಖರೇದಿ ಚೌಕಶಿಯಿಂದಾಗುತದ, ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುತದೆ. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗ ವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಟಲಾಗು ತರಿಸಿಕೊಳ್ಳಿ. ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ.)

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂಬಾಗದ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕಲ್ಲು ಕೆತ್ತಲ್ಪಟ್ಟು ಗಿಲ್ಟ ಮೂವ್ಮೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧವಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟೆನ ಪೇನಾ ೧, ಹೇರಾಯಿಲ್ ಬಾಟ್ಲಿ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಳಿ ೧, ಸುವಾಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ ಗೋಲ್ಡ ಭಂಗಾರದ ಉಂಗುರ ೧, ರೋಲ್ಡ ಗೋಲ್ಡ ನೆಕ್‌ಲೆಸ್ ಎಂಬ ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ, ಬರೇ ರೂ.೪-೮-೦

ವಿಳಾಸ:— **ಇಂಗ್ಲೀಷ ಎಂಪ್ರೋರಿಯಂ,**

ಪೋಸ್ಟ ಬಾಕ್ಸ ನಂ. ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟೆನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ ಸಂಘ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.

ವಿಳಾಸ:—ಪೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಕಲ್ಪತರು ಮಿಶ್ರಣ

ಮಲೇರಿಯಾ ಜ್ವರನಾಶಕ

ಎಂದರೆ,

ಚಳಿ ಜ್ವರದ ಮೇಲಿ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಹೇಳಬಹುದು:-

ಏಷ ಕಲ್ಪತರುರ್ನಾಮ ರಸಃ ಪರಮ ದುರ್ಲಭಃ | ಅಸಾಧ್ಯಂ ಚಿರಕಾಲೀನಂ ಜೀರ್ಣಂ
ಚ ವಿಷಮ ಜ್ವರಮ್ | ಹಂತಿ ಜ್ವರಾತಿಸಾರೌ ಚ ಗ್ರಹಣೀಂ ಪಾಂಡು ಕಾಮಲಾಮ್॥

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ. ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು. ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ.

೬ ಔನ್ಸಿನ ಬಾಟ್ಲಿಗೆ ರೂ. ೧-೬-೦.

ನಮ್ಮ ಪತ್ತೆ:-- **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸಮರ್ಥ ಫಾರ್ಮಸಿ, ಗದ್ದೆಕೇರಿ, ಮಂಗಳೂರು

ಕುಮಟಾ ಏಜಂಟ:—ಕಲಬಾಗ ಮಾಧವ ರಾಮ ಶ್ಯಾನಭಾಗ.

"Prevention is better than cure."

An individual can afford to be wise after the event; but a body corportate ought to see things beforehand and try to be wiser before the event. It is over 2 years since Karwar and Belgaum were linked togehter by a regular Motor Service. But when Plague began to rage at Belgaum some time back Karwar Municipality was bound to adopt precautionary measures to prevent infection being carried into the town. The evil could have been easily anticipated. A strict check at the entrance before a vehicle was allowed to enter the town, fumigation, segregation of suspected or infected cases — these and similar other measures could have been — advantageously adopted. Nothing of the sort however was done. Persons or things carrying infection got easy entry in the town without let or hindrance The result was inevitable. Infection seems to have taken firm root here, cases of attacks and fatalities are yet on the increase, no doubt the Municipality has now taken active steps for the disinfection.

Ankola is indifferent Perhaps she will awake after the evil is done — Let her learn things better by the mistakes done by her neighbour. There is much chance of the infection being introduced into Ankola by the continuous and brisker Motor Service from Belgaum and Karwar. Already 2 plague patients could get a smooth entry into the town though they were segregated after some time. There are signs of rat-fall in the town though people are wont to be little the incident They are yet indifferent as to the urgent action which the circumstances would undoubtedly suggest. This is just the time where prompt measures should have been vigourously employed for the avoidance of the infection in the manner suggested above.

There is no Municipality or Local Committee for the management of the affairs of the town proper. But the Local Board and the Revenue and Police officials could easily co-operate in the matter. It is for the collector to consider the matter seriously Let the officers concerned awake to the sense of their reponsibility in good time to prevent infection with which Ankola is undoubtedly threatened. It is for the people too to cooperate with the officials in the measures they would enforce and thus save themselves from the calamity which has so imperceptibly befallen Karwar. Unless they are up in time, they will have to repent at leisure.

Karwar, 5-3-1928. — **A Citizen.**

— ಸ್ವಾಮಿ ... ಅಭಿಪ್ರಾಯ ... ಹೊಣೆ ... ಸಂಪಾದಕರು.

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ... ಕೂದಲುಗಳ ... ಮನೋಹರವಾಗಿದೆ ... ಕೂದಲುಗಳನ್ನು ... ಕೂದಲನ್ನು ...

ಕಾಮಿನಿಯಾ ಆಯಿಲ್. (ರಜಿಸ್ಟರ)

ದಿನಾ ಮುಂಜಾನೆ ... ಎಣ್ಣೆಯನ್ನು ಚನ್ನಾಗಿ ... ಕೂದಲುಗಳಿಗೆ ... ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಔಷಧಿ ಅಂಗಡಿಕಾರರಲ್ಲಿ ಈ ಎಣ್ಣೆಯು ದೊರೆಯುತ್ತದೆ.

ಅಥವಾ

ನಮಗೆ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೪ ಔನ್ಸಿಗೆ	ರೂ.	೨—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಗೆ(?) ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ... ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಹ್ಯಾಗೆ ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ.)

ದೇಶದಲ್ಲಿ ಅನೇಕ ... ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ... ಹೂವಿನ ಸಹಜ ಪರಿಮಳ ... ಒಟ್ಟೋ-ದಿಲ್ ಬಹಾರದಿಂದ ... ಹೂವಿನ ಸುಗಂಧವನ್ನು ಅನುಭವಿಸಬಹುದು. ...

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಮುಂಬಯಿ ಕಾಯಿದೆ ಕೌನ್ಸಿಲು.

(ಪ್ರಶ್ನೋತ್ತರಗಳಿಂದ ಸಂಗ್ರಹಿಸಿದ ಮಾಹಿತಿ.)

ಯಲ್ಲಮ್ಮನ ಯಾತ್ರೆ

ಯಲ್ಲಮ್ಮನ ಯಾತ್ರೆಗೆ ಹೋಗುವ ಯಾತ್ರಿಕರ ಕಡೆಯಿಂದ ತಲೆಕರಿಗೆ ವಸೂಲಾಗುತ್ತದೆ. ವರ್ಷಕ್ಕೆ ಸನ ೧೯೨೬-೨೭ ರೂಪಾಯಿ ಸರಾಸರಿ ಉತ್ಪನ್ನ ಸಿಗುತ್ತದೆ. ಸೌದತ್ತಿ ಮ್ಯುನಿಸಿಪಾಲಿಟಿಗೆ ಯಾತ್ರಿಕರ ತೆರಿಗೆಯ ಉತ್ಪನ್ನದ ಲೆಕ್ಕವನ್ನು ಪ್ರತ್ಯೇಕವಾಗಿಡಬೇಕಾಗಿ ಮುಂಬಯಿ ಸರಕಾರವು ೧೯೨೫ನೇ ಇಸ್ವಿಯಲ್ಲಿ ಒಂದು ಸಾಮಾನ್ಯ ಹುಕುಮನ್ನು ಹೊರಡಿಸಿ ವಿಧಿಸಿತು. ಎಲ್ಲ ಮ್ಯುನಿಸಿಪಾಲಿಟಿಗಳಿಗೆ ವಿಧಿಸಿದಂತೆ ವಿಧಿಸಿತ್ತು. ಸೌದತ್ತಿ ಮ್ಯುನಿಸಿಪಾಲಿಟಿಯವರು ಪ್ರತ್ಯೇಕ ಲೆಕ್ಕವನ್ನಿಡಲಿಲ್ಲ. ಮುಂದಿನ ವರುಷದಿಂದ ಲೆಕ್ಕವನ್ನಿಡಬೇಕೆಂಬ ನಿರ್ಧಾರವಾಗಿದೆ. ಸೌದತ್ತಿ ಮ್ಯುನಿಸಿಪಾಲಿಟಿಗೆ ಇತರ ಉತ್ಪನ್ನವಿಲ್ಲದ್ದರಿಂದ ಮ್ಯುನಿಸಿಪಾಲಿಟಿಯ ಸಾಮಾನ್ಯ ಖರ್ಚಿಗೂ, ಯಾತ್ರಿಕರ ಕಡೆಯಿಂದ ಎತ್ತುವಳಿ ಮಾಡಿದ ಹಣದೊಳಗಿಂದ ಅರ್ಧ ಹಣವನ್ನು ವಿನಿಯೋಗಿಸಬಹುದಾಗಿ ಸರಕಾರದಿಂದ ಅಪ್ಪಣೆ ದೊರೆತಿದೆ. ಯಲ್ಲಮ್ಮನ ಗುಡ್ಡದ ಮೇಲೆ ಯಾತ್ರಿಕರ ಅನುಕೂಲತೆಗಾಗಿ ಅವಶ್ಯವಾದ ಆರೋಗ್ಯಪಾಲನದ ಏರ್ಪಾಟು ಮಾಡಲು ಎಲ್. ಸಿ. ಪಿ. ಎಸ್. ಪಾಸಾದವರಿಗೆ ಮ್ಯುನಿಸಿಪಾಲಿಟಿಯ ಚೀಫ ಸನಿಟರಿ ಇನ್ಸಪೆಕ್ಟರರಾಗಿ ನೇಮಿಸಿದ್ದಾರೆ.

***

ಪ್ರಾಥಮಿಕ ಶಿಕ್ಷಕರ ಸಂಬಳ.

ಪ್ರಾಥಮಿಕ ಶಿಕ್ಷಕರಿಗೆ ಸಾತೇ-ದರಾಜದೆ ಅಥವಾ ಬೇರೆ ಪ್ರಮಾಣದಂತೆ ಸಂಬಳ ಕೊಡಬೇಕೋ ಹ್ಯಾಗೆ? ಎಂಬ ಆಲೋಚನೆ ನಡೆದದೆ. ಭತ್ತೆ ಪದ್ಧತಿಯಿಂದ ಶಿಕ್ಷಕರಲ್ಲಿ ಅಸಮಾಧಾನವಾಗಿದೆಂದು ಸರಕಾರದ ತಿಳುವಳಿಕೆಗೆ ಬಂದಿದೆ. ಸರ್ವೇ ಕಮೀಟಿಯವರು ಮಾಡಿದಂತೆ ಭತ್ತೆ ಕೊಡುವ ಕೆಲಸವು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳದು. ಪ್ರಾಥಮಿಕ ಶಿಕ್ಷಣ ಕಾನೂನಿನಂತೆ ಅವರಿಗೆ ಈ ಅಧಿಕಾರವಿದೆ. [illegible] ಜಿಲ್ಲೆಯೊಳಗಿನ ಶಿಕ್ಷಕರಿಗೆ ಹೆಚ್ಚಿನ ಭತ್ತೆ ಅವಶ್ಯವಿದೆಂದು ಸರಕಾರಕ್ಕೆ ಗೊತ್ತಿರುವದು. ಆದರೆ, ಹಿಲ್ಟನ ಬೋರ್ಡಿನವರು ಮಾಡಿದ ಶಿಫಾರಸುಗಳು ಇನ್ನೂ ತನಕ ಸರಕಾರದ ಕೈಸೇರಲಿಲ್ಲ. ಶಿಕ್ಷಕರಲ್ಲಿ ಉಂಟಾದ ಅಸಮಾಧಾನವು ಭತ್ತೆ ಪದ್ಧತಿಯಿಂದಲೋ, ಸ್ಕೂಲ ಬೋರ್ಡುಗಳ ಆಡಳಿತೆಯಿಂದಲೋ ಎಂದೂ ಸರಕಾರಕ್ಕೆ ತಿಳಿಯುವದಿಲ್ಲ. ಹೆಡ್ ಮಾಸ್ತರರಿಗೆ ಕೊಡುವ ಭತ್ತೆಯು ಹಾಜರಿ ಭತ್ತೆಯಲ್ಲ. ಜವಾಬದಾರಿಯ ಬಗ್ಗೆ ಆ ಭತ್ತೆ ಕೊಡೋಣಾಗುತ್ತದೆ. ದೊಡ್ಡ ದೊಡ್ಡ ಶಾಲೆಗಳಲ್ಲಿ ಮೊದಲನೇ ಅಸಿಸ್ಟಂಟರಿಗೂ ಭತ್ತೆ ಕೊಡಲಾಗುತ್ತದೆ. ಇವರ ಮೇಲೆ ಜವಾಬದಾರಿ ಹೆಚ್ಚಿರುತ್ತದೆಂದು ಭತ್ತೆ ಕೊಡಲ್ಪಡುತ್ತದೆ. ಭತ್ತೆಯ ಲೆಕ್ಕ ಮಾತ್ರ ಹಾಜರಿಯ ಮೇಲಿಂದ ಮಾಡುತ್ತಾರೆ. ಹೀಗೆ ಮಾಡುವದು ಸ್ವಲ್ಪ ಸುಲಭವಿದ್ದದರಿಂದ ಮಾಡುತ್ತಾರೆ. ಹೀಗೆ ಲೆಕ್ಕ ಮಾಡಿದ ಒಳಿಕ, ಅದರೊಳಗೆ ಕೆಲವು ತಿದ್ದುಪಾಟುಗಳು ಮಾಡಲ್ಪಡುತ್ತವೆ. ೨ನೇ ಹಾಗು ೩ನೇ ವರ್ಷದ ಟ್ರೇಂಡ ಶಿಕ್ಷಕರು ಅನುಕ್ರಮವಾಗಿ ೫ ಮತ್ತು ೧೦ ವರುಷ ಸರ್ವೀಸು ಮಾಡಿದ್ದರೆ ಅವರಿಗೆ ಈ ಭತ್ತೆ ಪಡೆಯುವ ಪ್ರತಿಬಂಧವಿದೆ. ಕಾರಣವೇನಂದರೆ, ಈ ಶಿಕ್ಷಕರು ದೊಡ್ಡ ಶಾಲೆಗಳಲ್ಲಿ ಅಸಿಸ್ಟಂಟರ ಕೆಲಸ ಮಾಡಲು ಬೇಕಾಗುತ್ತಾರೆ. ಹೀಗೆ ಸ್ಥಿತಿ ಇರುವ ಮೂಲಕ ಈ ನಿಯಮಗಳಿಂದ ಅನ್ಯಾಯವಾಗುವದಿಲ್ಲ. ಆದರೆ, ಈ ನಿಯಮಗಳನ್ನು ತಿದ್ದುವ ವಿಚಾರ ನಡೆದದೆ.

***

ಅಂಧೇರಿಯಲ್ಲಿ ಆಕಾಶಯಾನಗಳ ಸ್ಟೇಶನು.

ಅಂಧೇರಿಯ ಬಳಿ ೩೦೦ ಗಜ ಅಗಲ, ೯೦೦ ಗಜ ಉದ್ದ ಸ್ಥಳವನ್ನು ಸರಕಾರವು ಪಡೆದು, ಅಲ್ಲಿ ಮಣ್ಣು ತುಂಬಿ ಆಕಾಶಯಾನವನ್ನು ಘಟಿಸುವ ಆಲೋಚನೆ ಇತ್ತು. ೧೯೨೭ನೇ ಇಸ್ವಿಯ ಮಾರ್ಚ ತಿಂಗಳ ತನಕ ಅದರ ಬಗ್ಗೆ ಈ ಕಾರ್ಯಕ್ಕೆ ೧೬೦೮೯೦೦ ರೂಪಾಯಿ ಖರ್ಚಾಯಿತು. ಇಷ್ಟು ಖರ್ಚ ಮಾಡಿ ಮುಂಬಯಿ ಸರಕಾರವು ಹಿಂದುಸ್ಥಾನ ಸರಕಾರದ ಅಪ್ಪಣೆ ಪಡೆಯಲಿಲ್ಲ. ಆಕಾಶಯಾನದ ಸ್ಥಳದ ಆಲೋಚನೆಯ ನಕ್ಷೆ ಪಡೆಯಲಿಲ್ಲ. ಮುಂಬಯಿ ಸರಕಾರವು [illegible] ಜವಾಬದಾರಿಯಿಂದ ಈ ಕೆಲಸವನ್ನು [illegible] ಸ್ವಾಧೀನಕ್ಕೆ ಈ ಸ್ಥಳ [illegible] ಉಪಯೋಗವಾಗದೆ ಖರ್ಚನ್ನು ಮುಂಬಯಿ ಸರಕಾರವೇ ವಹಿಸುವದು. ಜುಹುದಲ್ಲಿ ಸ್ಟೇಶನನ್ನು ರಚಿಸಲು ಹಿಂದುಸ್ಥಾನ ಸರಕಾರವು ಆಲೋಚಿಸುತ್ತಿದೆ.

***

ಬಡ ಕೊಂಕಣ ಮರಾಠರೆಂದರ್ಯಾರು?

ವರ್ಷಕ್ಕೆ ರೂಪಾಯಿ ೨೫ಕ್ಕೆ ಕಡಿಮೆ ಉತ್ಪನ್ನವಿದ್ದ ಕೊಂಕಣ ಮರಾಠ ಕುಟುಂಬಗಳು ಬಡವರೆಂದು ಮುಂಬಯಿ ಸರಕಾರವು ನಿರ್ಣಯ ಮಾಡಿದೆ. ರೂಪಾಯಿ ೫೦ಕ್ಕೆ ಮಿಕ್ಕಿ ಕಿರ್ದಿಯಿಲ್ಲದವರೂ ಬಡವರೇ.

***

ಯುರೋಪಿಯನ್ ಪೋಲೀಸ ಇನ್ಸಪೆಕ್ಟರರಿಗೆ ಭರಪಾಯಿ ಭತ್ತೆ

ಮುಂಬಯಿ ಇಲಾಖೆಯಲ್ಲಿ ಯುರೋಪಿಯನ್ ಪೋಲೀಸ ಇನ್ಸಪೆಕ್ಟರರಿಗೆ ಮಾಸಿಕ ಭರಪಾಯಿ ಭತ್ತೆ ಕೊಡಲ್ಪಡುತ್ತದೆ. ಈ ಬಗ್ಗೆ ವರ್ಷಕ್ಕೆ ೧೦೩೨೦ ಖರ್ಚಾಗುತ್ತದೆ. ಯುರೋಪಿಯನ್ ಅಲ್ಲದ ಸರಕಾರಿ ಇನ್ಸಪೆಕ್ಟರರಿಗೆ ಈ ಭತ್ತೆ ಸಿಗುವದಿಲ್ಲ. ಮಾಮಲೇದಾರರ ತರಗತಿಯ ಇತರ ಅಧಿಕಾರಿಗಳಿಗೂ ಈ ಭತ್ತೆ ಸಿಗುವದಿಲ್ಲ. ಯಾಕಂದರೆ, ಈಗಿನ ಪಗಾರದ ಪ್ರಮಾಣವು ಅವರಿಗೆ ಸಾಕೆಂದೂ ಸರಕಾರದ ಅಭಿಪ್ರಾಯವಾಗಿದೆ. ಈ ಭರಪಾಯಿ ಭತ್ತೆ ಕೊಡುವ ಕಾರಣಗಳ್ಯಾವವೆಂದರೆ —(೧) ಯುರೋಪಿಯನ್ ಅಧಿಕಾರಿಗೆ ಹಿಂದೀ ಅಧಿಕಾರಿಗಿಂತ ಸಂಸಾರದ ಖರ್ಚು ಹೆಚ್ಚು ತಗಲುತ್ತದೆ, (೨) ಸಾಮಾನ್ಯವಾಗಿ ಈ ಅಧಿಕಾರರು ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ, ದೊಡ್ಡ ಕಂಟೋನಮೆಂಟುಗಳಲ್ಲಿಯೂ ಉಗಿ ಬಂಡಿಯ ಸ್ಟೇಶನುಗಳಲ್ಲಿಯೂ ಇರುತ್ತಾರೆ; ಅಲ್ಲಿ ಖರ್ಚು ಹೆಚ್ಚಿಗೆ ತಗಲುತ್ತದೆ. (೩) ಯುರೋಪಿಯನ್ ಇನ್ಸಪೆಕ್ಟರರಿಗೆ ಅಸಿಸ್ಟಂಟ ಸುಪರಿಂಟೆಂಡೆಂಟ ಜಾಗ ದೊರಕುವದು ದುರ್ಲಭ. ಧರಿ ಹುದ್ದೆಯಲ್ಲಿ ಉಳಕೊಳ್ಳಲು ಅವರು ಒಪ್ಪದಿದ್ದರೆ, ಅವರಿಗೆ ಡೆಪ್ಯುಟಿ ಸುಪರಿಂಟೆಂಡೆಂಟ ಜಾಗವು ಸಿಗುವದಿಲ್ಲ. ಇಲ್ಲೇ ಇಲಾಖೆಯಲ್ಲಿ ಡೆಪ್ಯುಟಿ ಸುಪರಿಂಟೆಂಡೆಂಟರ ಜಾಗಗಳಿದ್ದಷ್ಟು ನಾಲ್ಕೇ. ಈ ಮೂರು ಕಾರಣಗಳ ಮೂಲಕ ಭರಪಾಯಿ ಭತ್ತೆ ಕೊಡೋಣಾಗುತ್ತದೆ. ಭರಪಾಯಿ ಭತ್ತೆಯ ಹೊರತು ಈ ಅಧಿಕಾರಿಗೆ ವರ್ಷಕ್ಕೆ ಉಡಿಗೆ-ತೊಡಿಗೆಗಳ ಭತ್ತೆಯೆಂದು ೪೫ ರೂಪಾಯಿ ಕೊಡೋಣಾಗುತ್ತದೆ. ರೂಪಾಯಿ ೨೫ ರಿಂದ ೪೦ ರ ತನಕ ಪ್ರತಿ ತಿಂಗಳಿಗೆ ವಾಹನ ಭತ್ತೆಯು ಕೊಡೋಣಾಗುತ್ತದೆ. ಉಳಕೊಳ್ಳಲು ಬಂಗಲೆಗಳ ವ್ಯವಸ್ಥೆಯಾಗದಿದ್ದಾಗ ಸಂಬಳದ ಶೇಕಡಾ ೧೦ ರಂತೆ ಮನೆ ಬಾಡಿಗೆಯು ಕೊಡಲ್ಪಡುತ್ತದೆ.

***

ಹೆಣ್ಣು ಹುಡುಗಿಯರಿಗೆ ಪರೀಕ್ಷೆ ಫೀ

ಮುಲ್ಕಿ ಪರೀಕ್ಷೆಗೆ ಕೂಡ್ರುವ ಹುಡುಗಿಯರ ಕಡೆಯಿಂದ ೧೯೨೮ನೇ ಇಸ್ವಿಯಿಂದ ರೂಪಾಯಿ ೩-೦ ರಂತೆ ಪ್ರವೇಶ ಫೀಯನ್ನು ಎತ್ತುವಳಿ ಮಾಡಬೇಕೆಂದು ಸರಕಾರದ ನಿರ್ಧಾರವಾಗಿದೆ. ಈ ಪರೀಕ್ಷೆಗೆ ಕೂಡ್ರುವ ಹುಡುಗಿಯರ ಸಂಖ್ಯೆಯು ಹೆಚ್ಚಾದ್ದರಿಂದ ಹೀಗೆ ಈ ನಿರ್ಧಾರವಾಗಿದೆ. ಇದರಿಂದ ೧೫೦೦ ರೂಪಾಯಿ ಉತ್ಪನ್ನವಾಗಬಹುದು. ೧೯೨೭ನೇ ಇಸ್ವಿಯಲ್ಲಿ ೧೨೬೬ ಹುಡುಗಿಯರು ಪರೀಕ್ಷೆಗೆ ಕೂಡಿದ್ದರು. ಈ ಪರೀಕ್ಷೆಗೆ ಸಾಮಾನ್ಯವಾಗಿ ಬಡ ವಿದ್ಯಾರ್ಥಿನಿಯರು ಮಾತ್ರ ಕೂಡುತ್ತಾರೆಂಬ ವಿಧಾನವು ಸರಕಾರಕ್ಕೆ ಮಾನ್ಯವಿಲ್ಲ. ಫೀಯನ್ನು ಎತ್ತುವಳಿ ಮಾಡುವದರಿಂದ ಅವರಿಗೆ ಕಷ್ಟವಾಗುತ್ತದೆಂಬದೂ ಸರಕಾರಕ್ಕೆ ಮಾನ್ಯವಿಲ್ಲ.

***

ಮದ್ಯಪಾನ ನಿಷೇಧ

ಪರೀಕ್ಷಾರ್ಥವಾಗಿ ಸಾತಾರಾ ಜಿಲ್ಲೆಯಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ಪ್ರತಿಬಂಧಿಸುವ ಪ್ರಯತ್ನ ನಡೆಸಬೇಕೆಂದು ಸರಕಾರದ ಅಭಿಪ್ರಾಯವಾಯಿತು. ಈ ಜಿಲ್ಲೆಯಲ್ಲಿ ಅಬಕಾರಿ ಉತ್ಪನ್ನವು ಕಡಿಮೆ, ಕುಡಿಯುವ ಮಾನವೂ ಕಡಿಮೆ, ಅದರಿಂದ ಈ ಜಿಲ್ಲೆಯಲ್ಲಿ ಮೊಟ್ಟಮೊದಲು ಮದ್ಯಪಾನ ನಿಷೇಧ ಪ್ರಯತ್ನ ನಡೆಸಬೇಕಾಗಿ ನಿಶ್ಚಯವಾಯಿತು. ಈಗ ಹಾಗೆ ಮಾಡುವದು ಅಸಾಧ್ಯವೆಂದು ಸರಕಾರದ ಅಭಿಪ್ರಾಯವಾಗಿದೆ.

***

ಎಡ್‌ಮಿನ್‌ಸ್ಟ್ರೇಟಿವ್ಹ ಆಫೀಸರರ ಪಾತ್ರತೆಯ ವಿಚಾರ.

ಸಾತಾರಾ ಜಿಲ್ಲೆಯವರು ಸ್ಕೂಲ ಬೋರ್ಡಿಗೆ ಎಡ್‌ಮಿನ್‌ಸ್ಟ್ರೇಟಿವ್ಹ ಆಫೀಸರರನ್ನು ನೇಮಿಸುವ ವಿಚಾರದಲ್ಲಿ ಮಾಡಿದ ನೇಮಣೂಕನ್ನು ಸರಕಾರವು ಮನ್ನಿಸಿರುತ್ತದೆ. ಆ ನಿಯಮದಂತೆ ವಿಶ್ವವಿದ್ಯಾಲಯದ ಪದವಿ ಇದ್ದು, ಸೆಕೆಂಡರಿ ಟೀಚರ ಸರ್ಟಿಫಿಕೇಟು ಅಥವಾ ಸೆಕೆಂಡರಿ ಟ್ರೇನಿಂಗ ಕಾಲೇಜಿನ ಡಿಪ್ಲೋಮಾ ಅಥವಾ ಬಿ. ಟಿ. ಪದವಿ ಅಥವಾ ಈ ತರಗತಿಯ ಯಾವದೇ ಡಿಪ್ಲೋಮಾ ಇಲ್ಲವೆ ಸರಕಾರ ಮನ್ನಣೆ ಇದ್ದ ಹೈಸ್ಕೂಲಿನಲ್ಲಿ ೧೦ ವರ್ಷಗಳ ತನಕ ಶಿಕ್ಷಣ ಕೊಟ್ಟ ಅನುಭವ ಅಥವಾ ವಿದ್ಯಾಖಾತೆಯಲ್ಲಿ ಡೆಪ್ಯುಟಿ ಇಲ್ಲವೆ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನ್ಸಪೆಕ್ಟರರಾಗಿ ೫ ವರ್ಷಗಳ ಕೆಲಸಮಾಡಿದವರಿಗೆ ಮಾತ್ರ ಎಡ್‌ಮಿನ್‌ಸ್ಟ್ರೇಟಿವ್ಹ ಅಧಿಕಾರರಾಗಿ ನೇಮಿಸಬರುತ್ತದೆ. ಸಾತಾ

...ಜಿಲ್ಲೆಯ ಸ್ಕೂಲ ಬೋರ್ಡಿನವರೂ, ಜಿಲ್ಹಾ ಬೋರ್ಡಿನವರೂ ವಿ| ಯಾವಲೇ ಎಂಬವರನ್ನು ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾಗಿ ನೇಮಣೂಕ ಮಾಡಿದರು. ಈ ನೇಮಣೂಕಿಯು ಸರಕಾರಕ್ಕೆ ಮಾನ್ಯವಾಗಲಿಲ್ಲ. (ಮೇಲ್ಕಂಡ ಕಾನೂನಿನಂತೆ ನೇಮಣೂಕಿಯಾಗಿದ್ದರೂ.) ಮಿ| ಯವಲೇಯವರ ಸ್ಕೂಲ ಬೋರ್ಡಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾಗಲು ತೀರ ಅನುಭವವಿಲ್ಲದವರೆಂದು ಸರಕಾರದ ಅಭಿಪ್ರಾಯವಾಯಿತು. ನಿಯಮಗಳಲ್ಲಿ ಹೀಗೆ ನಿರಾಕರಿಸುವ ಅಧಿಕಾರವು ಸರಕಾರಕ್ಕಿಲ್ಲವಾಗಿ ಹೇಳುವದು ಬಿಟವಲ್ಲ. ಕಾನೂನುಗಳಲ್ಲಿ ನಮೂದಿಸಿದ ಪಾತ್ರತೆಗಳಿದ್ದ ಹೊರತು, ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾಗಿ ನೇಮಿಸಲು ಬರುವದಿಲ್ಲ. ಇಷ್ಟೇ ಕಾನೂನುಗಳಲ್ಲದೆ, ಪಾತ್ರತೆಯುಳ್ಳವರಿಗೆಲ್ಲ ಸರಕಾರವು ಮಾನ್ಯತೆ ಕೊಡತಕ್ಕ ಸಿದ್ಧಾಂತವು ಆ ನಿಯಮಗಳಿಂದ ತೋರುತ್ತದಿಲ್ಲ. ಅನುಭವವಿಲ್ಲದ್ದರಿಂದ ಅಥವಾ ಬೇರೆ ಯಾವ ಕಾರಣದಿಂದ ಸರಕಾರಕ್ಕೆ ಯಾರಾದರೂ ನೇಮಿಸಲು ಅಪ್ರಶಸ್ತರೆಂದು ತೋರಿದರೆ, ಅವರಿಗೆ ಮಾನ್ಯ ಮಾಡದಿರಲು ಸರಕಾರಕ್ಕೆ ಅಧಿಕಾರವಿದೆ.

* * *

ಜಂಗಲ ಖಾತೆಯ ವಿಷಯು.

ವನಗಳು ಕಾಡಿಟ್ಟ ಬೆಟ್ಟದಲ್ಲಿ ಸೇರದಂತೆ ಬೆಲೆಯನ್ನು ರಕ್ಷಿಸಲು ಸರಕಾರದ ಪಳಿ ಜಂಗಲ ಕಮೀಟಿಯ ಎಸ್ಥಾಪನಾಸ ದಿನರು ಬಂದಿತು. ಆ ಬಗ್ಗೆ ಬಾಗಲುಗಳಿಂದ ಉಚಿತವಾಗಿ ಪತ್ರಗಳನ್ನು ಕಡೆಕೊಂಡು ಬೆಟ್ಟಗಳಿಗೆ ಹೋಗುವ ದಾರಿಗಳ ಮೇಲೆ ಬೇಲಿ ಕಟ್ಟಲು ಗ್ರಾಮಸ್ಥರಿಗೆ ಉತ್ತೇಜನ ಕೊಡಬೇಕೆಂದೂ, ಆ ಅತಿ ಪ್ರದೇಶದೊಳಗೆ ಬೆಳೆಯುವ ಗಿಡಗಂಟೆಗಳನ್ನು ಸವರಿಸಲಿಕ್ಕೆ ಸಹ ಗ್ರಾಮಸ್ಥರಿಗೆ ಅಪ್ಪಣೆ ಕೊಡಬೇಕಾಗಿಯೂ ಸರಕಾರದ ತೀರ್ಮಾನವಾಗಿದೆ. ಹತ್ತಿಗಳಲ್ಲಿ ಜಂಗಲ ಅಡಚಣೆಯ ವಿಷಯ ಕಾಲಕಾಲಕ್ಕೆ ಆಲೋಚನೆ ಹೇಳಲು ಕಮಿಟಿಗಳನ್ನು ರಚಿಸುವ ಕಾಗಿ ಮಾಡಿದ ಶಿಫಾರಸು ಇನ್ನೂ ಆಲೋಚನೆಯಲ್ಲಿದೆ. ಡಿಪ್ಟಿ ಜನರಲ್ ಕಮೀಶನರರ ಕಡೆಯಿಂದ ರಿಪೋರ್ಟು ಬರದ್ದು, ಆ ಮೇಲೆ ಚೀಫ ಕನ್ಸರ್ವೇಟರರು ರಿಪೋರ್ಟು ಮಾಡುವರು. ಬಹಳ ತಡವಾಯಿತೆಂದು ನಾಶಿಕದ ರಾವಸಾಹೇಬ ವಂಡೇಕರರವರು ಉದ್ಗರಿಸಲು, "ಹೌದು, ತಡವಾಗಲಿಲ್ಲ"ವಾಗಿ ಸರಕಾರದಿಂದ ಉತ್ತರದೊರಕಿದೆ. ಬೆಳ್ಳಿಕ್ಕೆ ಸಗಲುವ ಉರುವಲ ಕಟ್ಟಿಗೆಯನ್ನು ಉಚಿತವಾಗಿ ಹುಟ್ಟುಗೊಡಬೇಕೆಂಬ ಹುಕುಮುಗಳು ಹೊರಟಿವೆ. ಕಾಳಿ ಮರಗಳ ಫೀಯನ್ನು ಕಡಿಮೆ ಮಾಡಬಾರದಾಗಿ ಚೀಫ ಕನ್ಸರ್ವೇಟರರು ಶಿಫಾರಸು ಮಾಡಿದ್ದಾರೆ. ಮುಂಬಯಿ ಇಲಾಖೆಯಲ್ಲಿ ಉರುವಲ ಕಟ್ಟಿಗೆ ಹಾಗು ಒಣ ಹುಲ್ಲಿನ ಮಾರಾಟದಿಂದ ಅನುಕ್ರಮವಾಗಿ ಸರಕಾರಕ್ಕೆ ರೂ. ೮೫೧೬೧೮ ಹಾಗು ರೂ ೨೪೪೯೧೨ ರೂಪಾಯಿಗಳ ಉತ್ಪನ್ನವಾಯಿತು. ಇವೆರಡು ಕೆಲಸಗಳ ಬಗ್ಗೆ ಪ್ರತ್ಯೇಕ ಗಾರ್ಡರು ನೇಮಿಸಲ್ಪಡಲಿಲ್ಲ. ಇಲಾಖೆಯಲ್ಲಿ ೩೯೦೭ ಮಂದಿ ಗಾರ್ಡರಿದ್ದಾರೆ ಅವರ ಮಾಸಿಕ ಸಂಬಳವು ೫೫೯೧೧ ರೂಪಾಯಿ ಇರುತ್ತದೆ.

— ಸ್ವಾಮಿನ್ ಆಟದ ಬಹಿಷ್ಕಾರದ ವಿಷಯ ಮುದ್ರಾಸ ಪ್ರಾಂತದ ಗವರ್ನರರಿಗೂ, ವಿಧಾನದ ಸ್ಥಿತಿ ರಂಗನಾಥ ಮುದಲಿಯಾರ ಹಾಗು ಆರೋಗ್ಯಸ್ವಾಮಿ ಮುದಲಿಯಾರರವರಿಗೂ ಮತಭೇದವಾಗಿ, ಈರ್ವರೂ ತಮ್ಮ ದಿವಾನ ಅಧಿಕಾರವನ್ನು ತ್ಯಜಿಸಿದ್ದಾರೆ

ವಿಶೇಷ ವಿಷಯಗಳು.

— ಮೈಸೂರ ದರಬಾರವು ತಮ್ಮ ಹೇಳಿಕೆಯನ್ನು ಬಟ್ಲರ್ ಕಮಿಶನಿಗೆ ಸಾದರಪಡಿಸಲು ಸಿದ್ಧವಾಗುತ್ತಿದೆ. ಛಟಕಳ ಬಂದರವನ್ನು ತಮಗೆ ಒಪ್ಪಿಸಬೇಕಾಗಿ ಮೈಸೂರ ದರಬಾರವು ವಾದಿಸುವದು. ಸಂಸ್ಥಾನದ ಪ್ರಜೆಗಳ ಕಡೆಯಿಂದ ಎತ್ತುವರಿ ಮಾಡಿದ ಕಸ್ಟಮ್ ತೆರಿಗೆಯ ಕೆಲ ಅಂಶವನ್ನು ತಮಗೆ ಮರಳಿ ಕೊಡಬೇಕಾಗಿಯೂ ಮೈಸೂರ ದರಬಾರದ ಹೇಳಿಕೆಯದೆ. ಈ ಕಮೀಶನಿನ ವಿಚಾರದಿಂದ ಮೈಸೂರ ಸಂಸ್ಥಾನದೊಡನೆ ಆದ ಒಪ್ಪಂದದಲ್ಲಿ ತಿದ್ದುಪಡಿಯಾಗುವ ಲಕ್ಷಣಗಳಿಲ್ಲವಂತೆ! 'ವಿಶ್ವಕರ್ನಾಟಕ' ಪತ್ರಿಕಾಕಾರರು ಬಟ್ಲರ ಕಮೀಶನಿನ ಬಹಿಷ್ಕಾರವನ್ನು ಪುರಸ್ಕರಿಸುತ್ತಾರೆ.

— ಸಿಂಧ ಪ್ರಾಂತದಲ್ಲಿ ಕಾಲುವೆಗಳನ್ನು ಕಟ್ಟಿ ಸಿಂಧು ನದಿಯ ಮಾತ್ರದೊಳಗಿಂದ ಭೂಮಿ ಪಡೆಯುವ ಸಕ್ಕರ ಬೆರೇಜ ಎಂಬ ದೊಡ್ಡದೊಂದು ಧಟೋಕ್ಯದ ಯೋಜನೆ ನಡೆದದೆ. ಇದಕ್ಕೆ ೧೪ ಕೋಟಿ ರೂಪಾಯಿ ತಗಲುವದೆಂದು ಕೊಟ್ಟಮೊದಲು ಅಂದಾಜಾಯಿತು, ಆ ಮೇಲೆ ೧೮ ಕೋಟಿ ರೂಪಾಯಿ ತಗಲುವದೆಂದು ತಿದ್ದುಪಡಿಯಾಯಿತು, ಈಗ ೨೦ ಕೋಟಿ ರೂಪಾಯಿಗಳೊಳಗೆ ಈ ಕೆಲಸ ಮುಗಿಯುವದೆಂದು ಹೊಸ ಅಂದಾಜಾಗಿದೆ. ಅರ್ಧ ಕೆಲಸ ಮುಗಿಯಲಿಲ್ಲ. ಹೀಗೆಯೇ ಅಂದಾಜಿನ ತಿದ್ದುಪಡಿಯು ಗುತ್ತ ಹೋದರೆ ೫೦ ಕೋಟಿ ರೂಪಾಯಿಗಳಿಗೆ ಮುಟ್ಟುವದೆಂದು ಜನರೂಹಿಸುತ್ತಾರೆ. ... ಕಾಲಕಾಲಕ್ಕೆ ಪ್ರಕಟವಾಗ ... ದರೆ ಯೋಜನೆ ನಿಂತ ಹೋದರೆ? ವಿಶೇಷ ಖರ್ಚವಾಗ ... ಕ ಖರ್ಚು ತಗಲುತ್ತದೆಂದು ಇಂಜನಿಯರಿಕ್ಕೆ ಮಾಗಿರಲಿಲ್ಲ ಬರ್ಚನ ... ೬೪ ಲಕ್ಷ ರೂಪಾಯಿ ಖರ್ಚ ... ಬಿದ್ದ ಮಣ್ಣು ತುಂಬುವ ಯಂತ್ರಗಳಿಂದ ೪ ವರ್ಷಗಳಲ್ಲಿ ೧೧೹ ಲಕ್ಷದ ಕೆಲಸವಾಗಿದೆ. ಯಂತ್ರ ಸಹಾಯವಿಲ್ಲದೆ ಜನರು ಮಾಡಿದ ಕೆಲಸವು ೫೧ ಲಕ್ಷದ್ದು. ಸಾಹೇಬರಿಗೆ ಬಂಗ್ಲೆ ಕಟ್ಟಲು ೬೦ ಲಕ್ಷ ರೂಪಾಯಿ, ಸರಂಜಾಮಿನ ಖರ್ಚು ೧ ಕೋಟಿ ೬೮ ಲಕ್ಷ, ಸಾಮಾನ್ಯ ಯಂತ್ರಸಾಮಗ್ರಿಗೆ ೧ ಕೋಟಿ ೭೦ ಲಕ್ಷ ರೂಪಾಯಿ ಖರ್ಚಾದವು ಅಂತು ೫ ಕೋಟಿ ರೂಪಾಯಿಗಳ ಕೆಲಸ ಮಾಡಿತು. ಲಂಚದ ಪ್ರಕಾರಗಳಿಗೆ ಬೇಕಷ್ಟು ಅಂಬಿಕಾಶವಂತೆ. ಬೆರೇಜ ಖಾತೆಯಿಂದ ಕಂಟ್ರಾಕ್ಟ ಪಡೆದವರು ಕಂಟ್ರಾಕ್ಟ ಕೆಲಸವನ್ನು ಪೇರಿಯುವರಿಗೆ ಮೂರನೇ ಒಂದು ಪಾಲಾಗಿ ಕಂಟ್ರಾಕ್ಟಿಗೆ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ. ಆ ಕಂಟ್ರಾಕ್ಟದಾರರು ಖಾತೆಯವರಿಗೆ ದೃಷ್ಟಿಗೆ ಬೀಳುವದಿಲ್ಲ. ಕಲ್ಲುಗಳನ್ನು ಸಾಮಾನ್ಯ ಆಯ ಧಗಳಿಂದ ಕೆತ್ತಬಹುದು, ಆದರೆ ಅದಕ್ಕಾಗಿ ದೊಡ್ಡ ದೊಡ್ಡ ಯಂತ್ರಗಳನ್ನು ತರಿಸಿದ್ದಾರೆ.

— ನಾಸಿಕದಲ್ಲಿ ಕರನ್ಸಿ ನೋಟು – ಸರಕಾರಿ ಪ್ರಾಮಿಸರಿ ನೋಟು – ವಾರ ಪೋಸ್ಟ-ಸ್ಟಾಂಪು ಕಾಗದ ಮುಂತಾದವುಗಳನ್ನು ಛಾಪಿಸಲು ಮುದ್ರಣಾಲಯವೊಂದು ಸ್ಥಾಪಿಸಲ್ಪಟ್ಟಿರುತ್ತದೆ. ಇಷ್ಟು ದಿನ ಇಂಗ್ಲಂಡದಲ್ಲಿ ಇವು ಛಾಪಾಗುತ್ತಿದ್ದವು. ಭಾರತೀಯರ ಪ್ರಯತ್ನದಿಂದ ನಾಸಿಕದಲ್ಲಿ ಈ ಕಾರಖಾನೆ ತೆಗೆಯಲ್ಪಟ್ಟಿತು. ಆದರೆ, ೨೦೦ ರೂಪಾಯಿಗೆ ಮಿಕ್ಕಿ ಸಂಬಳ ಪಡೆಯುವವರಲ್ಲಿ ಯುರೋಪಿಯನ್ನರೇ! ಕಡಿಮೆ ಪಗಾರದಾರರು ಭಾರತೀಯರು, ಹೆಚ್ಚಿನ ಪಗಾರದಾರರು ಯುರೋಪಿಯನ್ನರು! ಹೀಗೆ ಆದಿಯಾಯಿತಲ್ಲವೇ! ಇಂಗ್ಲಂಡದಲ್ಲಿಯೇ ಛಾಪಿಸುವದು ಅಷ್ಟಲ್ಲವೇ!

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ ಮೋಟಾರಿನವ್ವ ಹಾಕು ವಂಥ, ಉತ್ಕೃಷ್ಟ ರೀತಿಯಿಂದ ತಯಾರಿಸಿದ ಕ್ಕಸಯೋಗ್ಯ ಕತ್ತದ ಚಾಪೆಗಳು ಸಿಗುತ್ತವೆ



ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಬಲಿಷ್ಟ ಕಟ್ಟಿಗೆಯಿಂದ ತಯಾರಿಸಿದ ಬೇಗ ಸವೆಯದಂಥ ಪೆಟ್ಟಿಗೆಗಳು ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ

ಇದರ ಪ್ರಾಚೀಣ ೦-೪-೬

ಪೆಟ್ಟಿಗೆ ೧ರ ಬೆಲೆ ರೂ ೩ ಮಾಪ ೨" × ೧" × ೧".

ದೇಶಾ ವರು ಅರಿತೆಯು ಸವೇತ ರೂ ೩ ೦-೦ ಮುಂಗಡವಾಗಿ ಕಳಿಸಬೇಕು.

ಪತ್ತೆ – ಎಸ್. ಎಮ್ ಪಂಡಿತ,

ಮೋಟಾರ ಟಿಕೇಟ ಆಫೀಸ, ದುರ್ಗಾಕೇರಿ. ಹೊನ್ನಾವರ. (ಉ ಕ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶಿ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ಥೋಸಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಕಾನಡಾ ವೃತ್ತ.

ವಿಭವ ಪ್ರಭವ ಸಂ|| ಫಾ|| ಬ|| ೬ ಷ್ಟಿ ಸೋಮವಾರ

ರಣದೇವಿಯ ಆವಾಹನ.

ಪುನಃ ಯುದ್ಧ ಏಳುವ ಲಕ್ಷಣಗಳಾಗಹತ್ತಿವೆ ಕುರುಕ್ಷೇತ್ರವು ಯ ರೋಪ ಖಂಡದಲ್ಲಿ ಈ ಸಾರಿ ಉಂಟಾಗದೆ, ನಮ್ಮ ಏಶಿಯಾ ಖಂಡದಲ್ಲಿಯೇ ಜನಿಸುವದೆಂದು ಸಾಮಾನ್ಯವಾಗಿ ಹೇಳಬಹುದು ಸ ಸಂಗತ ಸುದ್ದಿಗಳು ಪ್ರಕಟವಾಗುವದಿಲ್ಲ ಕಾಲಕಾಲಕ್ಕೆ ಪ್ರಕಟವಾಗುವ ಕೆಲಕೆಲವು ಸಂಗತಿಗಳ ಮೇಲಿಂದಲೂ ಪರದೇಶಗಳಿಂದ ಬರುವ ಕೆಲವು ವರ್ತಮಾನ ಪತ್ರಗಳ ಮೇಲಿಂದಲೂ ಅರಬಸ್ಥಾನದಲ್ಲಿ ಬ್ರಿಟಿಶರಿಗೂ ಸುಲ್ತಾನ ಇಬ್ನಸೂದನಿಗೂ ಯುದ್ಧವಾಗುವ ಲಕ್ಷಣಗಳು ಸ್ಪಷ್ಟವಾಗಿವೆ.

ಕಲಹಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸಬಹುದು. ೪ ವರುಷಗಳ ಹಿಂದೆ ಇರಾಕ ದೊಳಗಿನ ಬ್ರಿಟಿಶ ಸರಕಾರಕ್ಕೂ ನೆಡ್ಜ್ ಯು ಪ್ರಾಂತದ ಸುಲ್ತಾನ ಇಬ್ನಸೂದನಿಗೂ ಒಪ್ಪಂದವಾಯಿತು ಆ ಒಪ್ಪಂದದಂತೆ ಇತಿಷ್ಟವ ಹೇರಿಯ ಪ್ರದೇಶಗಳಲ್ಲಿರುವ ಕೆರೆ-ಬಾವಿಗಳನ್ನು ಸೈನ್ಯದ ಬಗ್ಗೆ ಉಪಯೋಗಿಸಬಾರದಾಗಿ ತಹನಾಮೆಯಾಯಿತು ಈ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಕೂಡದಾಗಿಯೂ, ಸೈನಿಕರನ್ನು ಇಡಕೂಡದಾಗಿಯೂ ಕರಾರಾಯಿತು ಆ ಮೇಲೆ ಇಬ್ನಸೂದನ ಪ್ರಜೆಗಳಿಂದ ವಹಾಬಿಯರು ಈ ಪ್ರದೇಶದಲ್ಲಿ ಮನೆಮಾರು ಕಟ್ಟಿಕೊಂಡು ತಾವು ಉಳಕೊಳ್ಳತಕ್ಕವಾಗಿ ಸುಲ್ತಾನರಿಗೆ ಅರಿಕೆ ಮಾಡಿಕೊಂಡರು ಒಪ್ಪಂದದಂತೆ ಈ ಪ್ರದೇಶದಲ್ಲಿ ಪ್ರಜೆಗಳ್ಯಾರಿಗೂ ಉಳಕೊಳ್ಳಬರುವದಿಲ್ಲವಾಗಿ ಸುಲ್ತಾನರು ಹೇಳಿ, ಅವರ ಪ್ರಾರ್ಥನೆಗಳನ್ನೆಲ್ಲ ಧಿಕ್ಕರಿಸಿದರು ಇರಾಕ ಸರಕಾರವು ಅಷ್ಟು ನಿಬಂಧನೆಯನ್ನು ಪಾಲಿಸಲಿಲ್ಲ ಮೇರೆಗುಂಟದ ಪ್ರದೇಶದಲ್ಲಿಯೇ, ಅಂದರೆ ಬುಸಯಾ ಎಂಬಲ್ಲಿ ಸೈನಿಕರ ಚೌಕಿಯನ್ನೊಂದನ್ನು ಕಟ್ಟಿಸಲು ತಯಾರಿಸಿದರು. ಸುಲ್ತಾನ ಇಬ್ನಸೂದರವರು ಕೂಡಲೆ ನಿಷೇಧ ಪ್ರದರ್ಶನ ಮಾಡಿದರು ನಿಷೇಧವನ್ನು ಅಲ್ಲಗಳೆದು ಮುಂದರಿದರೆ, ಮುಂದೆ ಅನರ್ಥ ಒದಗುವದೆಂದೂ ಮುಂಜಾಗ್ರತೆ ಹೇಳಲಾಯಿತು ಆದರೂ, ಕೇಳುವವರಾರು ? ರಾಣ್ಯ ಕಟ್ಟುವ ಕೆಲಸವು ಎಂದಿನಂತೆ ನಡೆಯಲಾರಂಭಿಸಿತು. ಈ ಪಟ್ಟಣವು ಒಪ್ಪಂದದ ಶರ್ತುಗಳಗೊಪ್ಪಿನ ಪ್ರದೇಶದಲ್ಲಿ ಸೇರುವದಿಲ್ಲವೆಂದು ಒಪ್ಪಂದದ ಅರ್ಥ ಹೇಳಲಾರಂಭವಾಯಿತು ಆಗಲೇ ಫಸೂಲ ಉದ್ ದುವಾಲಿಶ್ ಇವರ ನಾಯಕತ್ವದಲ್ಲಿ ವಹಾಬಿಯರು ಸಾಗಿ ಹೋಗಿ, ರಾಣ್ಯವನ್ನು ಕಿತ್ತೊಗೆದುಬಿಟ್ಟರು ವಹಾಬಿಯರಿಗೂ, ಇರಾಕ ಸರಕಾರದವರಿಗೂ ಕಾದಾಟವಾಯಿತು ಇರಾಕದ ಕೆಲ ಸೈನಿಕರು ಮಡಿದರು ಕೂಡಲೆ ಬ್ರಿಟಿಶ ಆಕಾಶಯಾನಗಳು ಸಾಗಿಹೋಗಿ ಗ್ರಾಮಗಳಲ್ಲಿ ಬಾಂಬುಗಳನ್ನು ಒಗೆದು ಬಹಳ ನಷ್ಟ ಮಾಡಿದರು ಅನೇಕರು ಮಡಿದರು, ಅನೇಕರ ಮನೆಮಾರುಗಳು ಸುಟ್ಟು ನಷ್ಟವಾಯಿತು ಇಬ್ನಸೂದರು ರೇಗಿಗದ್ದಿದ್ದಾರೆ ಇರಾಕದೊಳಗಿನ ಆಕಾಶಯಾನದ ಮೂಲ ಠಾಣವನ್ನೇ ಕಿತ್ತೊಗೆಯಲುದ್ಯುಕ್ತರಾಗಿ ಸೈನ್ಯವನ್ನು ಸಟಿಸುತ್ತಿದ್ದಾರೆ ೩ ಲಕ್ಷ ಸೈನಿಕರನ್ನು ಬಿಟ್ಟು ಮಾಡುತ್ತಲಿದ್ದಾರೆಂದೂ, ಬ್ರಿಟಿಶರು ಅವರಿಗೆ ಇದಿರಾಗಲು ಮದ್ದು-ಗುಂಡುಗಳನ್ನೂ ಆಕಾಶಯಾನಗಳನ್ನೂ ತಯಾರಿಸುತ್ತಿದ್ದಾರೆಂದೂ ಪ್ರಕಟವಾಗಿದೆ ಮುಂದಿನ ವರ್ಷದ ಬ್ರಿಟಿಶ ಸಾಮ್ರಾಜ್ಯದ ಜಮಾ ಖರ್ಚು ಪತ್ರಿಕೆಯಲ್ಲಿ ೩೦ ಲಕ್ಷ ಪವಂಡು ಖರ್ಚು ಮಾಡಿ ಇರಾಕದಲ್ಲಿ ವೈಮಾನಿಕ ಸೈನ್ಯವನ್ನು ವಿವರ್ಧಿಸುವ ಯೋಜನೆಯಾಗಿದೆ

ಬ್ರಿಟಿಶರು ಎಮೆರಲ್ಡ್' ಎಂಬ ಜಲಯಾನವನ್ನೂ ಅದರ ಜೊತೆಗೆ ೩ ಹಡಗಗಳನ್ನೂ ಇರಾಕಕ್ಕೆ ಕಳಿಸಲು ತಯಾರಾಗಿದ್ದಾರೆ. ಅತ್ತ ಕಡೆಯಿಂದ ವಹಾಬಿಯರೂ ಬ್ರಿಟಿಶರಿಗೆ ಇದಿರಾಗಲು ಸಿದ್ಧತೆ ಮಾಡುತ್ತಿದ್ದಾರೆ ಇರಾಣ ದೇಶವು ಸುಲ್ತಾನ ಇಬ್ನಸೂದನಿಗೆ ಅನುಕೂಲವಾಗಿ ಸೇರುವದೆಂದು 'ವಿಹಾರಿ'ಯು ಊಹಿಸುತ್ತಾನೆ ಇರಾಣದಲ್ಲಿ ಬ್ರಿಟಿಶರಿಗೆ ಸೇರಿಕೊಳ್ಳುವ ಕಾರ್ಯದವರು ಬಹಳರೆ, ರಶಿಯಾ ದೇಶದವರಿಗೆ ವೈಮಾನಿಕ ರಾಣ್ಯವನ್ನು ಹೂಡಲು ಅಪ್ಪಣೆ ಕೊಟ್ಟಿದ್ದಾರೆ. ಅಫಗಾನಿಸ್ಥಾನದ ರಶಿಯಾದವರು ವೈಮಾನಿಕ ವ್ಯಾಪಾರಗಳನ್ನು ಸಾಗಿಸುವರು ಮದ್ದು ? ದಿನ ತಯಾರಿಯೂ ನಡೆದಿದೆ. ಸುಲ್ತಾನ ಇಬ್ನಸೂದರವರಿಗೆ ಮಹಮ್ಮದೀಯರೆಲ್ಲರೂ ಅನುಕೂಲರಾಗುವರು ಪ್ರಕೃತ ಪರಿಸ್ಥಿತಿಯೇ ಹೀಗಿದೆ ಇಜಿಪ್ತ ದೇಶದಲ್ಲಿಯು ಮುಸಲ್ಮಾನರು ಬ್ರಿಟಿಶರಿಗೆ ಅನುಕೂಲರಿಲ್ಲ. ಸಧ್ಯಕ್ಕೇ ಅಲ್ಲಿಯ ರಾಜ್ಯಘಟನೆಯು ಕುರಿತು ತೀವ್ರ ಮತಭೇದಗಳಾಗಿವೆ ಬ್ರಿಟಿಶ ಸಾಮ್ರಾಜ್ಯದ ಮಾಂಡಲೀಕರಾಗಿ ಇಜಿಪ್ತ ದೇಶದ ಆಡಳಿತೆಯನ್ನು ನಡಿಸಲು ಅಲ್ಲಿಯ ಲೋಕನಾಯಕರು ಎಷ್ಟು ಮಾತ್ರಕ್ಕೂ ಒಪ್ಪುವದಿಲ್ಲ, ಬ್ರಿಟಿಶರು ತಮ್ಮ ಹಿಡಿತವನ್ನು ಕೈಬಿಡಲಿಕ್ಕೂ ಒಪ್ಪುವದಿಲ್ಲ ಅಲ್ಲಿಯ ಸ್ಥಿತಿ ಹಾಗೆ ನಮ್ಮ ಹಿಂದುಸ್ಥಾನದೊಳಗಣ ಸ್ಥಿತಿಯೂ ಅಷ್ಟು ಭದ್ರವಿಲ್ಲ. ಸೈಮನ್ ಕಮಿಟಿಯ ಅನುಗ್ರಹದಿಂದ ಪ್ರಜೆಗಳೆಲ್ಲರೂ ಅಸಂತುಷ್ಟರಾಗಿದ್ದಾರೆ ದಿನಾ ನಿಷೇಧವಾಗುತ್ತಿದೆ ಮುಸಲ್ಮಾನರಂತು ಇಬ್ನಸೂದರಿಗೆ ಅನುಕೂಲರಾಗುವವರೇ. ನೀತಿ-ನ್ಯಾಯವಾದರೂ ಅವರ ಪಕ್ಷಕ್ಕೇ ಇರುತ್ತದೆ ಇದರಿಂದ ಹೆಜ್ಜಾಝು ಪ್ರದೇಶದಲ್ಲಿ ಇಸ್ಲಾಮು ಧರ್ಮದವರೆಲ್ಲರೂ ಒಕ್ಕಟ್ಟಾಗಿ, "ಅಲ್ಲಾಹೋ ಅಕಬರ" ಎಂದು ಧರ್ಮಭಾವನೆಯಿಂದ ಪ್ರೇರಿತರಾಗಿ, "ಜಿಹಾದ" ಯಾನೆ ಧರ್ಮಯುದ್ಧವನ್ನು ಬ್ರಿಟಿಶರೊಡನೆ ಹೂಡುವರೆಂದು ಲಂಡನಿನೊಳಗಿನ "ಸ್ಟಾರ"ಪತ್ರಿಕೆಯು ಪ್ರಕಟಿಸಿದೆ. ಇತ್ತಟ್ಟಿನಲ್ಲಿ ಯೂರೋಪದ ಯುದ್ಧವಾದರೆ, ಅರಬಸ್ಥಾನ, ಇರಾಣ ತುರ್ಕಸ್ಥಾನ ಪ್ರದೇಶವು ಒಮ್ಮೆಲೇ ರಣಕ್ಷೇತ್ರವಾಗಿ, ಇನ್ನು ಯಾವ ಯಾವ ರಾಷ್ಟ್ರಗಳು ಅದರೊಳಗೆ ಬಲಿಬೀಳುವವೆಂದು ಹೇಳಬರದು

ವಹಾಬಿಯರಿಗೆ ಬ್ರಿಟಿಶರು ನೋಯಿಸಿದ್ದು ಅಸಭ್ಯವಿದೆ. ನಮಗಿದಿರಾಗುವವರಾರು? ಎಂಬ ಸೊಕ್ಕಿನಿಂದ ಒಪ್ಪಂದವನ್ನು ಧಿಕ್ಕರಿಸಿ, ಬುಸಯಾ ಗ್ರಾಮದಲ್ಲಿ ಸೈನ್ಯ ರಾಣ್ಯವನ್ನು ಕಟ್ಟಿಸಿ, ಅತಿಕ್ರಮಪ್ರವೇಶ ಮಾಡಿದ್ದು ಬಹು ಅನ್ಯಾಯವಿದ್ದಿದೆ. ಇಷ್ಟಾಗಿ, ಈ ವಿಷಯದ ಸಕಲ ಸದ್ದಿಗಳು ಹೊರಬೀಳುವದಿಲ್ಲ, ಸರಕಾರವು ಇನ್ನೂ ಅಡಗಿಸಿಕೊಂಡಿದೆ ಸದ್ಯಸ್ಥಿತಿಯು ಇನ್ನೂ ಗೋಚರವಾಗದು ಯುದ್ಧವಾದ್ದಲ್ಲಿ ನಮ್ಮ ಹಿಂದುಸ್ಥಾನಕ್ಕೂ ಗಂಡಾಂತರವಿದೆ, ಜಾಗರೂಕರಬೇಕಾದೀತು. ಈಗಾಗಲೇ ನಮ್ಮಲ್ಲಿಯ ಆಕಾಶಸೈನ್ಯಕ್ಕೆ ಇದಿರಾದ ಕಡೆ ಹಾರಿಹೋಗಲು ಆಜ್ಞೆಗಳು ಹೊರಟವೆಂದು ಸುದ್ದಿ ಬಿದ್ದಿದೆ ಇದು ಸಟೆಯೋ, ದಿಟವೋ ? ಸರಕಾರವೇನು ಬಾಯಿಬಿಡದು ಹೀಗೆ ಬ್ರಿಟಿಶರ ಸಣ್ಣ ಸ್ವಾರ್ಥದಿಂದ ಏಶಿಯಾ ಖಂಡದಲ್ಲಿ ಅನರ್ಥ ಒದಗುವ ಪ್ರಸಂಗ ಬಂದಿದೆ ಒಪ್ಪಂದದ ಆದೇಶದ ಶಬ್ದಾರ್ಥವನ್ನರಿಯದೆ, ಇತ್ತಟ್ಟಿನಲ್ಲಿಯೂ ವಾದವೆದ್ದಿದ್ದರೆ, (ಹಾಗೆ ಎದ್ದಿರುವದಾಗಿ ಬ್ರಿಟಿಶರ ಪ್ರತಿಪಾದನೆಯು ಮೇಲಿಂದ ತೋರುತ್ತದೆ.) ಆ ಅರ್ಥವನ್ನು ಪಂಚರ ಕಡೆಯಿಂದ ಇಲ್ಲವೆ ರಾಷ್ಟ್ರಸಂಘದ ಕಡೆಯಿಂದ ನಿರ್ಣಯಿಸಿಕೊಳ್ಳಬಹುದು ಅರ್ಥಕ್ಕಾಗಿ ಬಡಿದಾಡಿಕೊಳ್ಳಬಾರದು ಒಪ್ಪಂದವೇ ಅನ್ಯಾಯವಿದ್ದಿದ್ದರೆ, ಅದನ್ನು ಮುರಿಯುವದಕ್ಕಾಗಿಯೇ ಹೊಸ ಯುದ್ಧ ಹೂಡುವದಾದರೆ, ಹಾಗೆ ಸ್ಪಷ್ಟವಾಗಿ ಬ್ರಿಟಿಶರು ಹೇಳಿ ಮುಂದರಿಯಬಹುದು ಒಪ್ಪಂದದಂತೆ ಬುಸಯಾ ಗ್ರಾಮದಲ್ಲಿ ಸೈನ್ಯ ಚೌಕಿಯನ್ನು ಕಟ್ಟಬರದಿದ್ದರೆ, ಆ ಹಕ್ಕಿನ ಸ್ಥಾಪನೆಗಾಗಿ ವೃಥಾ ಪ್ರಜೆಗಳಿಗೆ ನಷ್ಟಕ್ಕೆ ಗುರಿ ಮಾಡಲಾಗದು ಇದನ್ನೆಲ್ಲ ಅರಿತು ತಮ್ಮಲ್ಲಿ ಸೈನ್ಯಬಲವಿದೆಂದೂ, ಸುಲ್ತಾನ ಇಬ್ನಸೂದರವರನ್ನು ಬಾಹುಬಲದಿಂದ ಹಣ್ಣಗೆ ತಂದು ತಾವು ಒಪ್ಪಂದಕ್ಕೆ ಒಪ್ಪದ ಪ್ರದೇಶವನ್ನು ಹಸ್ತಗತ ಮಾಡುವೆವೆಂದು ಬ್ರಿಟಿಶ ಸಾಮ್ರಾಜ್ಯದ ಅಹಂಕಾರವಿದ್ದರೆ, ಅದಕ್ಕೆ ವಹಾಬಿಯರು ಸಿದ್ಧರೇ ಇದ್ದಾರೆ.

ಅವರಿಗೆ ಕ್ರೌರ್ಯ ಬೆದರಿಕೆಯಿಂದ ಪಾರಾಗಲು ಸಾಧ್ಯವಿಲ್ಲ. ಎದುರಾಳಿಗಳಾಗಿ ನಿಂತು ಬ್ರಿಟಿಶರ ಸ್ವಾರ್ಥಪರಾಯಣತೆಯನ್ನು ಅವರು ಜಗತ್ತಿಗೆ ತಿಳಿಯಲು ತೋರಿಸಿಕೊಟ್ಟಿದ್ದಾರೆ. ಬ್ರಿಟಿಶರ ಪ್ರಣೀತ ಹಾರ್ದಿಕ ರಹಸ್ಯಾಂಗಗಳೆಲ್ಲ ಸಂಪೂರ್ಣವಾಗಿ ವ್ಯಕ್ತವಾಗುವ ಚಿನ್ಹಗಳು ಕಾಣುತ್ತಿವೆ. ಬ್ರಿಟಿಶರು ಯೋಗ್ಯ ಬೋಧ ಪಡೆಯಬೇಕು. ಅದಾರು ಏನೇ ಅಂತ ನಡೆಯಲಿ, ಬೆಲ್ಜಿಯಮ್ ಪ್ರದೇಶದ ಮೇಲೆ ಸಾಗಿ ಹೋದ ಬಗ್ಗೆ ಜರ್ಮನ್ ಕೈಸರನಿಗೆ ಕೊಟ್ಟ ಶಿಕ್ಷೆಯ ಹಾಗೆ, ಜಗದುಪಕಾರ ಮಾಡಿದೆವೆಂದು ಡಂಗುರ ಸಾರುವ ಬ್ರಿಟಿಶ ಸಾಮ್ರಾಜ್ಯಾಧಿಕಾರಿಗಳು ಸ್ವಲ್ಪ ಎಚ್ಚರಿಕೆಯಿಂದಲೇ ಮುಂದೆ ಕಾಲಿಡತಕ್ಕದ್ದು. ಸ್ವಾರ್ಥದ ಕುತಂತ್ರಗಳು ಇನ್ನು ಅಡಗಲಾರವು. ಈಗಾಗಲೇ ಹೊರಬಿದ್ದಿವೆ ಇನ್ನು ಉಂಟಾದರೆ, ಭೂಷಣವಿದೆ, ಇಲ್ಲದಿದ್ದರೆ ಲೋಕದಲ್ಲಿ ನಗೆಗೇಡಾಗುವರು. ಶಾಂತತೆಯ ವಚನಗಳೆಲ್ಲ ಬಾಯ್ಬಡಿಕೆಯೆಂದು ಲೋಕದಲ್ಲಿ ಅಪಕೀರ್ತಿಯಾಗಿ, ಬ್ರಿಟಿಶರ ಪ್ರತಿಷ್ಠೆಯು ಬಹುಮಟ್ಟಿಗೆ ಕುಗ್ಗಿತು. ಯುದ್ಧದ ಪ್ರಸಂಗಗಳು ಇಷ್ಟಕ್ಕೇ ತಡೆಯುವ ಸದ್ಬುದ್ಧಿಯು ಬ್ರಿಟಿಶರಿಗಾಗಲಿ.

ಸ್ಫುಟ ಸೂಚನೆಗಳು.

೧ ಮುಂಬಯಿ ಕಾಯಿದೆ ಕೌನ್ಸಿಲಿನ ಸದಸ್ಯರಲ್ಲಿ ಪ್ರಶ್ನೋತ್ತರಗಳಿಂದ ಸಂಗ್ರಹಿಸಿದ ಮಾಹಿತಿಯು ದೊರೆತಿರುತ್ತದೆ. ಇದು ಶೋಚನೀಯವಿದೆ. ಅಂಧೇರಿಯಲ್ಲಿ ಮುಂಬಯಿ ಸರಕಾರವು ಹಿಂದ ಸರಕಾರದ ಅಪ್ಪಣೆ ಪಡೆಯದೆ, ತನ್ನ ಆಲೋಚನೆ ಸಹ ಮಾಡದೆ ೧೬ ಲಕ್ಷ ರೂಪಾಯಿಗಳನ್ನು ಹಾಕಿಬಿಟ್ಟು ಆಕಾಶವಾಣಿಗಳ ಸ್ಟೇಶನನ್ನು ರಚಿಸಿದ ಕೆಲಸವು ಮುಂಬಯಿ ಸರಕಾರದ್ದು; ಹಿಂದ ಸ್ಥಾನ ಸರಕಾರದ್ದು, ಮತ್ತು ವಿಶೇಷವಾಗಿ ಕೇಳಿದರೆ, ಬ್ರಿಟಿಶ ಸಾಮ್ರಾಜ್ಯ ಸರಕಾರದ್ದು. ಹೀಗಿರುವಾಗ, ಮುಂಬಯಿ ಸರಕಾರವು ಅಧಿಕಪ್ರಸಂಗತನ ಮಾಡಿ ಆಕಾಶವಾಣಿಯ ಸ್ಟೇಶನನ್ನು ಲಕ್ಷಾವಧಿ ರೂಪಾಯಿ ಖರ್ಚು ಮಾಡಿ ರಚಿಸಿದ್ದೇಕೆ? ಈ ಹೊರೆಯನ್ನು ಮುಂಬಯಿ ಸರಕಾರದ ಮೇಲೆ ಇಟ್ಟವರ್ಯಾರು? ಹಿಂದ ಸ್ಥಾನ ಸರಕಾರವು ಈ ಯೋಜನೆಯನ್ನು ಒಪ್ಪಿದ ಬಳಿಕ ನಷ್ಟವನ್ನು ಸಹಿಸುವವರ್ಯಾರೆಂದು ಕೇಳಿದರೆ, ಮುಂಬಯಿ ಸರಕಾರವೇ ಸಹಿಸುವದೆಂದು ಉತ್ತರ ದೊರಕುತ್ತದೆ. ಮುಂಬಯಿ ಸರಕಾರದ ಹಣವನ್ನು ವಿಲಾಯತಿಯಿಂದ ಗಂಟು ಕಟ್ಟಿ ತಂದಿರುತ್ತದೇನು? ಪ್ರಜೆಗಳಿಂದ ಎತ್ತುವಳಿ ಮಾಡಿದ ಹಣವನ್ನು ಕಾಯಿದೆಯಂತೆ ಖರ್ಚ ಮಾಡಲು ಸರಕಾರವು ಬದ್ಧವಿದೆ. ನಿಯಮಗಳನ್ನೆಲ್ಲ ಅಲಕ್ಷಿಸಿ, ಬೆವರಿಳಿಸಿದ ಪ್ರಜೆಗಳ ಹಣವನ್ನು ವಿನಿಯೋಗಿಸುವ ವಂಚನೆಯು, ವಿಶ್ವಾಸಘಾತವು. ಮುಂಬಯಿ ಸರಕಾರವು ಹಣವನ್ನು ಸಹಿಸಿದ್ದಾಗಿ ಹೇಳಿದ್ದರೂ ಸಾಲದು, ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ ಈ ಹಣವನ್ನು ತುಂಬಿಕೊಂಡರೆ ಮಾತ್ರ ಈ ಅವಿವೇಕಿ ಪ್ರಕಾರಗಳು ನಡೆಯುವದು ಲೋಕ...

ಈ ಪ್ರಕಾರದ ಕಾರ್ಯಗಳಿಗೆ ಸರಕಾರದ ಹತ್ತರ ಹಣ ಸಿಗುವದುಂಟು. ಹಣದ ಅಡಚಣೆಯೇ ಅಡಚಣೆ. ಹಣದ ಅಡಚಣೆಯು ಮೂಲಕ ಹೆಣ್ಣು ಹುಡುಗಿಯರ ಕಡೆಯಿಂದ ೫-೬ ಸಾವಿರ ರೂಪಾಯಿ ಪರೀಕ್ಷೆಯ ಫೀ ಎತ್ತುವಳಿ ಮಾಡಲ್ಪಡುತ್ತದೆ. ಕರಾಚಿ ಮುನಿಸಿಪಾಲಿಟಿಯ ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಉಡಿಗೆ-ತೊಡಿಗೆಗಳು ಕೊಡದಾಗುವದಿಲ್ಲ. ಆದರೆ, ಅಂಧೇರಿಯಲ್ಲಿ ಲಕ್ಷಾವಧಿ ರೂಪಾಯಿ ಖರ್ಚ ಮುಂದಾಗಿ ಮಾಡಿ, ನಷ್ಟ ದೊಡ್ಡದು ಸಹ, ಸಹಿಸುವಷ್ಟು ಸಾಮರ್ಥ್ಯವು ಮುಂಬಯಿ ಸರಕಾರದಲ್ಲಿದೆ. ಇದಕ್ಕೇನೆನ್ನುವದು?

೨ ಮದ್ಯಪಾನವನ್ನು ಸಮೂಲ ನಷ್ಟಪಡಿಸುವದಕ್ಕಾಗಿ ಪ್ರಜೆಗಳು ನಡಿಸುತ್ತಿರುವ ಪ್ರಯತ್ನಗಳನ್ನು ಸಂಶೋಧಿಸಲು ಮದ್ಯಪಾನ ನಿಷೇಧ ಮಂಡಳವು ನೇಮಿಸಲಾಯಿತು. ಅವರು ವಿಚಾರ ಮಾಡಿ ಶಿಫಾರಸುಗಳನ್ನು ಮಾಡಿದರು. ಇದೇ ಇಲಾಖೆಯಲ್ಲಿ ಒಮ್ಮೆಲೇ ಮದ್ಯಪಾನವನ್ನು ನಿರ್ಮೂಲಿಸಿದರೆ, ಮುಗಿಯಲಿಕ್ಕಿಲ್ಲವೆಂದು ಉಪಾಯವಾಗಿ ಪರೀಕ್ಷೆ ಸಂಶೋಧನಾರ್ಥವಾಗಿ ಹಿಂದೆ ೩ ಜಿಲ್ಲೆಗಳಲ್ಲಿ ಮದ್ಯಪಾನವನ್ನು ನಿರ್ಮೂಲಿಸುವ ಪ್ರಯತ್ನ ನಡಿಸಬೇಕಾಗಿ ಶಿಫಾರಸು ಮಾಡಿದರು. ದಿವಾಣರು ಮದ್ಯಪಾನ ನಿಷೇಧದ ಮಸೂದೆಯನ್ನೇ ಬರಕೊಂಡು ಕಾಯಿದೆ ಕೌನ್ಸಿಲಿನಲ್ಲಿ ಪೇಶ ಮಾಡಿದರು. ಸತಾರಾ ಜಿಲ್ಲೆಯಲ್ಲಿ ಅಬಕಾರಿ ಉತ್ಪನ್ನವು, ಕರ ಮತ್ತು ಸೇವನೆಯ ಪರಿಮಾಣವೂ ಕಡಿಮೆ ಇದ್ದುದರಿಂದ ಅಲ್ಲಿಯೇ ಪ್ರಯೋಗ ಮಾಡಬೇಕಾಗಿಯೂ ನಿಶ್ಚಯವಾಯಿತು. ದಿವಾಣರ ಆಯುಷ್ಯ ತೀರುತ್ತಬಂದರೂ ಮದ್ಯಪಾನ ನಿಷೇಧ ಪ್ರಯೋಗದ ಹಸ್ತ-ಸುಳಿವು ಸತಾರೆಯ ಜಿಲ್ಲೆ. ಇದರಿಂದ ಈ ಅಧಿವೇಶನದಲ್ಲಿ ಪ್ರಶ್ನೆ ಕೇಳಲು, ಆ ಜಿಲ್ಲೆಯಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ನಿಲ್ಲಿಸುವದು ಅಸಾಧ್ಯ ಮಾತೆಂದು (impracticable) ಸರಕಾರದಿಂದ ಉತ್ತರ ದೊರಕಿದೆ. ಶೋಧಕ ಮಂಡಳದ ಅಭಿಪ್ರಾಯದಂತೆ ಇಡೀ ಇಲಾಖೆಯಲ್ಲಿ ಮದ್ಯಪಾನವನ್ನು ಒಮ್ಮೆಲೇ ಪ್ರತಿಬಂಧಿಸಲಾಗುವದಿಲ್ಲ. ಒಂದೇ ಜಿಲ್ಲೆಯಲ್ಲಿ ಪರೀಕ್ಷಾರ್ಥವಾಗಿ ಪ್ರತಿಬಂಧಿಸಲು ಅಸಾಧ್ಯವೆಂದು ಸರಕಾರದ ಮತ. ಕೊನೆಯಲ್ಲಿಯೇ ಸರಕಾರವು ಈ ಅಭಿಪ್ರಾಯವನ್ನು ಪಡೆಯಲು ಸಮರ್ಥವಿದ್ದರೆ, ಶೋಧಕ ಮಂಡಳದ ಸರಬರಾಜೇಕೆ? ಯಾರಿಗೆ ಮೆಚ್ಚಿಸುವದಕ್ಕಾಗಿ ಆ ಮಂಡಳವು ನೇಮಿಸಲಾಯಿತು? ಶೋಧಕ ಮಂಡಳವು ವಿಚಾರದಿಂದ ಮಾಡಿದ ಶಿಫಾರಸು ಹೇಗೆ ಅವ್ಯವಹಾರ್ಯವಾಯಿತು? ಅವ್ಯವಹಾರ್ಯವಿದ್ದ ಶಿಫಾರಸನ್ನು ಅವರು ಹೇಗೆ ಮಾಡಿದರು? ಈ ನಸ ಜೊತೆಯೊಳಗಿನ ಕಥಾಭಾಗಗಳೇ ತಿಳಿಯುವದಿಲ್ಲ. ಆ ಮದ್ಯಪಾನ ನಿಷೇಧದ ಬಾಯ್ಬಡಿಕೆಯಿಂದ ಶೋಧಕ ಮಂಡಳದ ಖರ್ಚ ಮಾತ್ರ ಪ್ರಜೆಗಳ ಮೈಮೇಲೆ ಬಿತ್ತು. ಕೆಲವು ಲೋಕೋಪಕಾರಿಗಳ ಅಮೂಲ್ಯವೇಳೆಯು ನಿರರ್ಥಕವಾಗಿ ವ್ಯಯವಾಯಿತು. ಇದು ಪ್ರಜೆಗಳಿಗುಂಟಾದ ಲಾಭ. ಸರಕಾರದಿಂದ ಸಿಗುವ ಸಂಭಾವನೆಯ ಮಾದರಿಯು!

೩ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸರಕಾರವು ಒಪ್ಪಿಸಿದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಎಜ್ಯುಕೇಶನಲ್ ಇನ್ಸ್ಪೆಕ್ಟರ ಅಧಿಕಾರದ ನೇಮಣೂಕಿಯ ಪ್ರಕರಣದ ಮೇಲಿಂದ ಹೊರಬಿದ್ದಿದೆ. ಪ್ರಾಥಮಿಕ ಶಿಕ್ಷಣ ಕಾನೂನಿನಲ್ಲಿಯೂ ಸ್ಥಾನಿಕ ಸ್ವರಾಜ್ಯದ ಕಾನೂನಿನಲ್ಲಿಯೂ ಸರಕಾರಕ್ಕೆ ಅಧಿಕಾರವ್ಯಾಪ್ತಿ ಕಾರಣಗಳಿವೆ. ಅವುಗಳನ್ನು ನಾವು ಇಲ್ಲಿ ವಿಚಾರಿಸುವದಿಲ್ಲ. ನಿಯಮಗಳಲ್ಲಿಯೂ, ಕಾನೂನುಗಳಲ್ಲಿಯೂ ಪ್ರತ್ಯೇಕವಾಗಿರದ ಅಧಿಕಾರಗಳು ಇನ್ನೂ ಇರುತ್ತವಾಗಿ ಈ ಪ್ರಕರಣದ ಮೇಲಿಂದ ವ್ಯಕ್ತವಾಗುತ್ತವೆ. ಎಜ್ಯುಕೇಶನಲ್ ಇನ್ಸ್ಪೆಕ್ಟರ ಆಫೀಸರರಿಗೆ ನೇಮಿಸುವ ಕುರಿತು ಸಾತಾರೆಯವರು ಮಾಡಿದ ನಿಯಮಗಳನ್ನು ಸರಕಾರವು ಒಪ್ಪಿಸಿದ ಬಳಿಕ, ಆ ನಿಯಮಗಳಂತೆ ನೇಮ ಮಾಡಿಸಲಾಗಿ ಆ ನೇಮಣೂಕಿಯು ಸ್ಕೂಲ ಬೋರ್ಡಿನಿಂದಲೂ, ಜಿಲ್ಲಾ ಬೋರ್ಡಿನಿಂದಲೂ ಮನ್ನಿಸಲ್ಪಟ್ಟ ಬಳಿಕ, ಸರಕಾರವು ಆ ಇಸಮಿಗೆ ಶೀರ ಅನುಭವವಿಲ್ಲವೆಂದು ಅದಾ ಹೊಡೆದು ಹಿಲ್ಲೆನ್ನುವದು ಎಷ್ಟು ಮಾತ್ಸರ್ಯವು. ಹೀಗೆ ಹಿಲ್ಲೆನ್ನಲಿಕ್ಕೆ ನಿಯಮಗಳಲ್ಲಿ ಪ್ರತಿಬಂಧವಿಲ್ಲೆಂದು ಹೇಳುವದರಿಂದ ಬರೇ ಮೋಸಗಾರಿಕೆಯು. ಸಾತಾರೆಯ ಜಿಲ್ಲಾ ಬೋರ್ಡಿಗೂ ಸ್ಕೂಲ ಬೋರ್ಡಿಗೂ ತಮ್ಮ ಕೆಲಸದ ಅರಿವಿಲ್ಲೇನು? ಸ್ಥಾನಿಕ ಸ್ವರಾಜ್ಯದ ವಿಷಯ ಸರಕಾರದ ಕಲ್ಪನೆಯು ಈ ಪ್ರಕರಣದಲ್ಲಿ ವ್ಯಕ್ತವಾಗುತ್ತದೆ. ಸ್ಥಾನಿಕ ಸ್ವರಾಜ್ಯದ ಬಿಂಟ ಮೆರೆಯುವವರು ಇದನ್ನಾದರೂ ವಿಚಾರಿಸಲಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಮುಂಜಾವಿಗೆ ಚಳಿಯ ಚಳಿ ಬೀಳುತ್ತಿದೆ. ಒಂದೆರಡು ದಿನ ಮುಗಿಲು ಹೊಗೆಯಿಂದ ಆಚ್ಛಾದಿತವಾಗಿತ್ತು, ಕೆಟ್ಟ ಗಾಳಿ ಬೀಸುತ್ತಿತ್ತು.

ಮುನಿಸಿಪಾಲಿಟಿಯವರು ಇಲ್ಲಿಯ ಮಾರ್ಕೆಟ್ಟಿನ ಬಳಿ ಪ್ಲೇಗಿನ ಮೂಲಕ ತಮ್ಮ ಮಹಾಜನ ಕೆಲಸದ ಮೇಲೆ ದಾಕ್ತರರನ್ನು ನೇಮಿಸಿದ್ದಾರೆ. ತಮ್ಮ ಸನದಿಯ ಅವಧಿಯು ಮಧ್ಯಾಹ್ನ ೧೧ ಘಂಟೆಯಿಂದ ೧ ಘಂಟೆ ತನಕ, ಅದರಾನ್ನ ೪॥ ಯಿಂದ ಸಾಯಂಕಾಲದ ತನಕ ಪ್ಲೇಗ ಹತ್ತಿರ ಇರುತ್ತದೆ. ಬೆಳಿಗ್ಗೆ ೧೧ ಘಂಟೆಯ ಒಳಗೆ ಒಂದವರು ದಾಕ್ತರರಿಗೆ ಹುಡುಕುತ್ತಿರಬೇಕು. ೧ ಘಂಟೆಗೆ ಮಿಕ್ಕಿ ಬಂದವರು ೪॥ ಘಂಟೆಯ ತನಕ ದಾಕ್ತರರ ಧ್ಯಾನ ಮಾಡುತ್ತಿರಬೇಕು. ಕಾರವಾರದಿಂದ ಕಳೆದ ಮಂಗಳವಾರಕ್ಕೆ ಸಂಜೆ ೬.೩ ಘಂಟೆಗೆ ಊಟವಾಗದೆ ಬಂದ ಸಾಂಘಿಕರಿಗೆ ಪೋಲೀಸರೂ ಮುನಿಸಿಪಾಲಿಟಿಯ ಆರೋಗ್ಯ ಇಲಾಖೆಯವರೂ ಮಾಡಿದ ಹಾಗೆ ಪಟ್ಟಣದಲ್ಲಿ ಒಳಪ್ರವೇಶಿಸದಂತೆ ಡಾ॥ ಗಾಂವಕ್ಕರರ ಸಹಿಯಿಂದ ಕಾಟ್ಟದ ಪಾಟಿಯನ್ನು ತೋರಿಸಿದರಂತೆ! ಹೀಗೆ ಜಾಹೀರನಾಮೆಗಳನ್ನು ಹೊರಡಿಸಿ, ಜನರಿಗೆ ಪ್ರತಿಬಂಧಿಸುವ ಅಧಿಕಾರವು ಮುನಿಸಿಪಾಲಿಟಿಗಿರುವದೇನು? ಜನರಿಂದ ಪ್ಲೇಗಿನ ಪ್ರಸಾರವಾಗುವದಿಲ್ಲೆಂದು ಈಗಿನ ಕಾಲದಲ್ಲಿ ಸೆನಿಟರಿ ಖಾತೆಯ ಅಧಿಕಾರಿಗಳು ಉಪನ್ಯಾಸ ಕೊಟ್ಟಿದ್ದಾರೆ. ಹೀಗಿದ್ದು, ಇವರಿಗೆ ವೃಥಾ ಪ್ರತಿಬಂಧಿಸುವದೇಕೆ? ಸಾಮಾನ್ಯ ಜನರ ಪಜೀತಿಯು ನಿಜವಿತ. ಅದನ್ನು ಮುನಿಸಿಪಾಲಿಟಿಯವರು ಪ್ರತಿಬಂಧಿಸಲಿ, ಒಯ್ಯಲಿ ಬಿಟ್ಟರಾಗಿ ಕಾರವಾರದ ಪ್ರವಾಸಿಕರು ಹೇಳಿದರು. ಡಾ॥ ಗಾಂವಕ್ಕರರು ತಮ್ಮ ಅಧಿಕಾರವೆಷ್ಟೆಂದು ವಿಚಾರಿಸಲಿ. ಜಾಹೀರನಾಮೆಯಿಂದರೆ, ಗಿಬ್ಬ ಹೈಸ್ಕೂಲಿನಲ್ಲಿ ಹುಡುಗರ ಬಗ್ಗೆ ಹೊರಡಿಸುವ ನೋಟೀಸುಗಳಲ್ಲ.

ಗೋಕರ್ಣದಲ್ಲಿ ದೀಕ್ಷಿತ ಕಂಚಿಕೃಷ್ಣರ ಡಾ॥ ವೆಂಕಟ್ರಾವ ವೈಕುಂಠ ಕಾಮತರವರು 'ಭದ್ರಕಾಳಿ ಇಂಗ್ಲಿಷ ಸ್ಕೂಲ' ಎಂಬ ಇಂಗ್ಲಿಷ ಶಾಲೆಯನ್ನು ೮ ವರ್ಷಗಳಿಂದ ಸ್ಥಾಪಿಸಿದರು. ಶಾಲೆಯು ಸದ್ಯಕ್ಕೆ ಭದ್ರಕಾಳಿ ದೇವಸ್ಥಾನದ ಒಳಗಿನ ಚಂದ್ರಶಾಲೆಯ ಮೇಲೆ ನಡೆದದೆ. ಡಾ॥ ವೆಂಕಟ್ರಾಯರು ಅನುಪಾಯದ ಡಾ॥ ದತ್ತಾತ್ರಯ ವೈಕುಂಠ ಕಾಮತ ಇವರು ರಕ್ಷಕರಾಗಿದ್ದಾರೆ. ಶಾಲೆಯ ಉದ್ಘಾಟನ ಸಮಾರಂಭದ ಕಾಲಕ್ಕೆ ಡಾ॥ ರಂಗರಾವ...

ಭಟ್ಟ, ಗೋಟಿ, ಡಾ|| ಹೊಸಂಗಡಿ, ವೈದ್ಯ ಗಜಾನನ ವೇದೇಶ್ವರ, ರಾ|| ವೆಂಕಟಪ್ಪಯ ವಿಶ್ವೇಶ್ವರ ಸಾಧ್ಯಾಣಿ ಮುಂತಾದವರು ಹಾಜರಾಗಿದ್ದರು. ಗೋಕರ್ಣ ಕ್ಷೇತ್ರದಲ್ಲಿ ೫೦೦೦ಕ್ಕೆ ಮಿಕ್ಕಿ ಲೋಕಸಂಖ್ಯೆಯಿದ್ದು ಈ ತನಕ ಇಲ್ಲಿ ಒಂದು ಇಂಗ್ಲಿಷ ಶಾಲೆ ಇರುವದು ಅತಿ ಅವಶ್ಯವಿತ್ತು. ಈ ಕೊರತೆಯನ್ನು ರಾ|| ವೆಂಕಟಪ್ಪಯ್ಯರು ಪರಿಹರಿಸಿದ ಬಗ್ಗೆ ಕ್ಷೇತ್ರಸ್ಥರು ತುಂಬ ಉಪಕಾರಿಯಾಗಿದ್ದಾರೆ. ಇಲ್ಲಿ ನಾಲ್ಕು ಇಯತ್ತೆಗಳ ತನಕ ಅಭ್ಯಾಸ ಕಲಿಸಲ್ಪಡುವದು

ಚಿಮಣಿ ಎಣ್ಣೆಯ ವ್ಯಾಪಾರವು ಬಲು ಕಠಿಣವಾಗಿದೆ. ಸ್ಟಾಂಡರ್ಡ ಆಯಿಲ್ ಕಂಪನಿಯವರು ತಮ್ಮ ದರಗಳನ್ನು ಇಳಿಸಿದ್ದಾರೆ. ಪ್ರತಿಸ್ಪರ್ಧಿ ಕಂಪನಿಯವರು ಹಿಂದಿನ ದರಗಳನ್ನೇ ಭದ್ರವಾಗಿ ಹಿಡಕೊಂಡು ಕೂತುಕೊಂಡಿದ್ದಾರೆ. ದರವೇರುವದೆಂದು ಎಲ್ಲರ ಅಂದಾಜು. ಚಿಮಣಿ ತಪ್ಪಿ ಸಿಗುವದು ದುಸ್ತರವಾಗಿದೆ

ಹೊನ್ನಾವರ— ಚಳಿ ಹಿಂದಾಯಿತು. ಊರಲ್ಲಿ ಒಟ್ಟು ಜೊರಕಡ, ಜ್ವರ ಮುಂತಾದವು ಇರುತ್ತವೆ ಸಗಿ ಮಂಟಪದಲ್ಲಿ ನಾಟಕಗಳಾದವು. ಶ್ರೀ ವೆಂಕಟೇಶ ಪ್ರಸಾದ ನಾಟಕ ಮಂಡಳಿಯವರು ಈ ನಾಟಕಗಳನ್ನಾಡಿದರು

ಇಲ್ಲಿಯ ಮಿಶನ್ ಶಾಲೆಯ ಸ್ಥಿತಿಯೂ ಚೆನ್ನಾಗಿಲ್ಲ ಪ್ರಿಲಿಮಿನರಿ ಪರೀಕ್ಷೆಯ ಪರಿಣಾಮವು ೩ನೇ ತಾರೀಖಿಗೆ ಪ್ರಕಟವಾಯಿತು. ೧೬ ಹುಡುಗರು ಸರಿಯಾಗಿ ತೇರ್ಗಡೆ ಹೊಂದಿದರು. ಮೂವರಿಗೆ ಗ್ರೇಸ ಮಾರ್ಕುಗಳೂ, ಸ್ಕೂಲ್ ರೆಕಮೆಂಡೇಶನ್ ಹೊಳೂ ಸಿಕ್ಕಿದವು ಉಳಿದ ೯ ಜನರಿಗೆ ಇಲ್ಲಿ ವನವಾಸ. ಪ್ರಶ್ನಪತ್ರಿಕೆಗಳು ಸ್ಕೂಲಿನಲ್ಲಿ ಟಾಯಿಪಿಸಲ್ಪಟ್ಟವು. ಲಿಪಿಯನ್ನು ಓದಲಾಗಲಿಲ್ಲ ಹೀಗೆ ೧೯ ಮಂದಿಗಳಿಗೆ ಮೋಸ ಮಾಡಿದ ಬಳಿಕ, ಮಾರನೇ ದಿನ ಇನ್ನೊಬ್ಬ ಹುಡುಗನ ಪಾಸಾಗಿ ಹೋಯಿತು. ಹೋದ ವರ್ಷ ಎಕ್ಸ್ಟೆನ್ಶನ್ ಟೀಚರವರಲ್ಲಿ ಮೂವರಿಗೆ ಫಾರ್ಮ ಸಿಗಲಿಲ್ಲ ಅಭ್ಯಾಸಕ್ರಮ ಮುಗಿಸಿದ ಕಥೆ ರೆಡ್ಯುಯಿವ್ ಇಂಗ್ಲಿಷ ಟೆಕ್ಸ್ಟ ಬೂಕುಗಳನ್ನು ಒಂದು ವಾರ ಹುಡುಗರಿಂದಲೇ ಓದಿ ಮುಗಿಸಬೇಕಾದರೆ, ಹುಡುಗರೂ ಸಿಟ್ಟುಗೊಂಡು ಟೀಚರ ಮಾಸ್ತರರೂ ಸಿಟ್ಟು ಸಾರು ಬಿಟ್ಟರು. ರಾ|| ಚಂದಾವರಕರ ಮಾಸ್ತರರು ಬೆಳಗಿನ ೭|| ಯಿಂದ ೧೧ ಘಂಟೆ ವರೆಗೂ, ಅಪರಾಹ್ನ ೧ ರಿಂದ ೫ ಘಂಟೆ ವರೆಗೂ ಬೇರೆ ಮಾಸ್ತರರ ವಿಷಯಗಳನ್ನು ನಮಗೆ ಹೇಳಿಕೊಟ್ಟದ್ದರಿಂದ ಅಭ್ಯಾಸಕ್ರಮವು ಮುಗಿದಂತಾಗಿದೆ. ಫೀ ಮಾತ್ರ ಪೂರ್ತಿ ತಿಂಗಳ ಕಟ್ಟಬೇಕು; ಪ್ರಿಲಿಮಿನರಿ ಪರೀಕ್ಷೆಗೆ ಕೂತುಕೊಳ್ಳುವಾಗಲೇ ಕೊಡಬೇಕು. ಫೆಬ್ರುವರಿ ೧೬ ನೇ ತಾರೀಖಿಗೆ ಪ್ರಿಲಿಮಿನರಿ ಪೂರಾಗಿತ್ತು. ಆದರಿಂದ ಫೆಬ್ರುವರಿ ತಿಂಗಳಲ್ಲಿಯೇ ಮಾರ್ಚ ತಿಂಗಳ ಪೂರ್ತಿ ಫೀ ಕೊಡಬೇಕಾಯಿತು. ಶನಿವಾರಕ್ಕೆ ಸಿಂರ ಪರೀಕ್ಷೆ ಸಲುವಾಗಿ ೧|| ತಾಸು ಬಿಡುತ್ತಾರೆ. ಆ ಕಾಲಕ್ಕೆ ಹುಡುಗರು ಮನೆಗೆ ಹೋಗುತ್ತಾರೆ, ಆಡುತ್ತಾರೆ, ಹಾರ್‍ಯಾಡುತ್ತಾರೆ

ಕುಮಟೆಯಲ್ಲಿ ಹೆಸರುಗೊಂಡ ದಾಂಗಳಲ್ಲಿ ಪಕ್ಕದ ವ್ಯಾಪಾರಿಗಳಾದ ಮೆಸರ್ಸ ಟಿ ಮೊಹಿದ್ದೀನ ಸಾಹೇಬ ಎಂಡ ಸನ್ಸ್ ಇವರು ಕಳೆದ ೩ ನೇ ತಾರೀಖಿನಿಂದ ಇಲ್ಲಿ ನೂತನವಾಗಿ ಒಂದು ಅಂಗಡಿಯನ್ನು ಸ್ಥಾಪಿಸಿದ್ದಾರೆ.

ಕುಂಭಾರವಾಡೆ— ಇಲ್ಲಿ ಒಂದು ಕನ್ನಡ ಶಾಲೆ ಇದೆ. ಈ ಶಾಲೆಯಲ್ಲಿ ಮಾಸ್ತರರು ಹಕ್ಕಿಗಳಂತೆ ಹಾರ್‍ಯಾಡುತ್ತಿದ್ದಾರೆ. ೧ ವರ್ಷದಲ್ಲಿ ೩ ಮಾಸ್ತರರಾದರು. ಇಬ್ಬರು ಬಂದು ಹೋದರು, ಮೂರನೇಯವರು ಬಂದರು. ಅವರು ರಜೆಯ ಮೇಲಿದ್ದಾರೆ. ಆದರಿಂದ ಉಮೇದ್ವಾರರೊಬ್ಬರು ಶಾಲೆಯಲ್ಲಿ ಬದಲಿ ನೋಡುತ್ತಿದ್ದಾರೆ. ಒಬ್ಬರಿಗೂ ಶಾಲೆಯ ಆಶೆ ಇಲ್ಲ. ಒಂದು ವರ್ಷ ತನಕ ಆದರೂ ಒಬ್ಬ ಮಾಸ್ತರರನ್ನು ಇಡುವಂತೆ ಸ್ಕೂಲ ಬೋರ್ಡಿನವರು ಏರ್ಪಾಟು ಮಾಡತಕ್ಕದ್ದು.

ಅಂಕೋಲಾ— ಚಳಿ ಕಡಿಮೆ, ಊರಲ್ಲಿ ರೋಗ ಬಾಧೆ ಇದ್ದೇ ಇದೆ. ಮೊನ್ನೆ ಮಂಗಳವಾರಕ್ಕೆ ಇಡೀ ವಾತಾವರಣವೆಲ್ಲ ಒಂದು ಪ್ರಕಾರದ ಹಬ್ಬಿದಂಥ ಹೊಗೆಯಿಂದ ತುಂಬಿ ಹೋಗಿತ್ತು. ಮೋಡಗಳು ಕವಿದು ಬರುತ್ತಿವೆ

ಕಾರವಾರದಲ್ಲಿ ಪ್ಲೇಗಾದ ಬಹಾದ್ದೂರಖಾನರ ಮೋಟಾರ ಡ್ರೈವ್ಹರನಿಗೆ ಸಾಮಾನ ಸಹಿತ ಇಲ್ಲಿಯ ಧರ್ಮಶಾಲೆಯಲ್ಲಿ ತಂದುಹಾಕಿದ್ದರು. ಮಾಮಲೇದಾರರು ಕೂಡಲೆ ಧರ್ಮಶಾಲೆಗೆ ಹೋಗಿ ಡಾಕ್ಟರರ ಕಡೆಯಿಂದ ತಪಾಸು ನಡಿಸಿ ಡ್ರಾಯವ್ಹರನಿಗೆ ಪರತ ಕಳಿಸಿದರು ಪ್ಲೇಗಾದವನಿಗೆ ಕಾರವಾರದಿಂದ ಇಲ್ಲಿ ತಂದು ಮಧ್ಯವಸ್ತಿಯಲ್ಲಿ ಇಡುವ ಗಾಬರಿ ಏತಕ್ಕೆ?

ಈಗ ಬೇಕಾದರೆ ನಮ್ಮ ಅಂಕೋಲೆಯಲ್ಲಿ ಉಗಿಗೂ ಉಳಿಯಲಿಲ್ಲ ಗಾರ್ಡರು ರೇಂಜರರ ಖುರ್ಚಿಯ ಮೇಲೆ ಬಿದ್ದು ವರ್ಷಿ ಹೊಂದಲಾರಂಭಿಸಿದರು ಪೂರ್ವೋತ್ತರ ಪ್ರವೇಶಗಳು ಬಲು ರಮ್ಯವಿವೆ ಕಳೆದ ಸೋಮವಾರ ತಾ ೫ನೇ ಸಾಯಂಕಾಲಕ್ಕೆ ರಾಮನಗುಳಿ ರೇಂಜರರಾದ ಮಿ|| ಡಿಸೋಜಾ ಇವರ ಮನೆಯಲ್ಲಿ ನಾಗಪ್ಪ ಬಿನ್ನ ಮಂಗಳಪ್ಪ ಎಂಬ ನಾಮಧಾರಿ ಜಾತಿಯ ಫಾರೆಸ್ಟ ಗಾರ್ಡನ ಬೊಟ್ಟೆ ಯೇ ಬೊಟ್ಟೆ! ರೇಂಜರರು ಹೊಡೆದರೆಂದು ಬೊಟ್ಟೆಯೇ ಬೊಟ್ಟೆ' ರೇಂಜರರು ಹೊಡೆದರೆಂದು ಬೊಟ್ಟೆ!!! ಪೇಂಡಿ ಬಜಾರಿನಲ್ಲಿ ಡಿಸೋಜಾರವರ ಬಂಗಲೆ, ಜನರು ಕೂಡಿದ ನೂರಾರ ಜನರು ಕೂಡಿದರು. ನೋಡಿದರೆ, ನಾಗಪ್ಪನ ಅಂಗಳದಲ್ಲಿ ನಿಶ್ಚೇಷ್ಟನಾಗಿ ಬಿದ್ದಿದ್ದನು. ಎದೆಯ ಮೇಲೆ ಕೆಲವು ಘಾಯಗಳಾಗಿದ್ದವು ನಾಗಪ್ಪನು ಸತ್ತನೆಂದು ಜನರು ಹೇಳುತ್ತಿದ್ದರು, ಡಾಕ್ಟರರಿಗೆ ಕರೆದೊಯ್ದರು, ಗಾರ್ಡನ ತಪಾಸಾಯಿತು ಡಾಕ್ಟರರು ರೇಂಜರರ ಮನೆ ಒಳಕ್ಕೆ ಹೋಗಿ ಕೂತುಕೊಂಡರು. ನಾಗಪ್ಪನ ಪಕ್ಷೀಯರು ಇಲ್ಲಿಯ ಸಂಗತಿ ಪೋಲೀಸರಿಗೂ, ಮಾಮಲೇದಾರರಿಗೂ ತಿಳಿಸಿದರು ಮಾಮಲೇದಾರರೂ ಬಂದರು, ಪೋಲೀಸರೂ ಬಂದರು ಪಂಚನಾಮೆ ಸಹ ಆಯಿತು. ಪಂಚನಾಮೆ ಕಾಲಕ್ಕೆ ನಾಗಪ್ಪನು ಸ್ವಲ್ಪ ಬುದ್ಧಿಯ ಮೇಲೆ ಬಂದನು ಡಾಕ್ಟರರು ಆತನಿಗೆ ಎದ್ದು ನಿಲ್ಲ ಹೇಳಿದರು, ಎದ್ದು ನಿಲ್ಲಲಾಗಲಿಲ್ಲ ರಟ್ಟೆ ಹಿಡಿದು ಎದ್ದು ನಿಲ್ಲಿಸಲಾಯಿತು. ಕಣ್ಣಿಗೆ ಕತ್ತಲೆ ಬಂತು. ಪುನಃ ಬುದ್ಧಿಯ ಮೇಲೆ ಬಂದನು ಮಾಮಲೇದಾರರಿಗೆ ಹೊಡೆದ ಚಿನ್ಹಗಳನ್ನು ತೋರಿಸಿದನು. ರೇಂಜರರು ತನಗೆ ಹೊಡೆದರೆಂತ ಹೇಳಿದನು ಇಷ್ಟೆಲ್ಲ ವಿಧಿಯಾದ ಬಳಿಕ, ಆತನಿಗೆ ಆಸ್ಪತ್ರೆಗೆ ಒಯ್ಯಲಾಯಿತು ಸಿವ್ಹಿಲ್ ಸರ್ಜನರಿಗೂ, ಪೋಲೀಸ ಸಾಹೇಬರಿಗೂ ತಂತಿಗಳು ಹೋದವು ಸಿವ್ಹಿಲ್ ಸರ್ಜನರು ೧೦-೧೧ ಘಂಟೆ ರಾತ್ರೆ ಒಂದು ನೋಡಿ ಹೊರಟು ಹೋದರು ಮಾರನೇ ದಿನ ಗಾರ್ಡನ ಮೂರ್ಛೆ ಆರಾಮವು ತೋರಿತ್ತು ಆದೇಶ —ಗಾರ್ಡನು ಖುರ್ಚಿಯ ಮೇಲೆ ಬಿದ್ದು ಮೂರ್ಛೆ ಹೊಂದಿದನು

ಸಾಣಿಕಟ್ಟೆಯ ಉಪ್ಪಿನ ಧಾರಣೆ ಉಪ್ಪಿನಪಟ್ಟಣದಲ್ಲಿ ಇಳಿದ ಸುದ್ದಿ ಇದೆ ನಮ್ಮಲ್ಲಿ ಮಾತ್ರ ಇಳಿಯಲಿಲ್ಲ. ಕಾರಣವೇನು?

ಕಾರವಾರ— ಎಂಗ್ಲೋ-ಇಂಡಿಯನ್ ಜಾತಿಯ ಹರ್ಬರ್ಟ ಹಾಗು ಚಾರ್ಲ್ಸ ಹೋಕಿನ್ ಎಂಬ ಇಬ್ಬರು ಅಕ್ರಮ ಪ್ರವೇಶ ಮಾಡಿ ಬಲಾತ್ಕಾರದಿಂದ ಸ್ಥಳದ ಕಬಜೆ ಪಡೆಯಲುದ್ಯುಕ್ತರಾದ ಬಗ್ಗೆ ಅವರ ಮೇಲೆ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಖಟ್ಲೆಯಾಗಿತ್ತು. ತಾವು ಯುರೋಪಿಯನ್‌ರಿದ್ದೇವೆ; ಅವರಿಂದ ಸೆಶನ್ಸ ಕೋರ್ಟಿನಲ್ಲಿ ಪ್ರಕರಣದ ಇತ್ಯರ್ಥವಾಗಬೇಕೆಂದು ಹೇಳಿದಂತೆ, ಸೆಶನ್ಸ ಕೋರ್ಟಿನಲ್ಲಿ ಇತ್ಯರ್ಥ ನಡೆದು ೧೫-೧೫ ರೂಪಾಯಿಗಳಂತೆ ದಂಡ ವಿಧಿಸಲಾಗಿದೆ. ಸರ್ವೇಯರ ಅಳತೆಯ ಮೇಲಿಂದ ಬಲಾತ್ಕಾರ ಮಾಡುವವರು ಎಚ್ಚರಪಡಬೇಕು.

ಸ್ಕೂಲ ಬೋರ್ಡಿನ ಚೇರಮನ್‌ರಿಗೆ ವರ್ಷಕ್ಕೆ ೫೦೦ ರೂಪಾಯಿಗಳಿಗೆ ಮಿಕ್ಕಿ ಭತ್ತೆ ಕೊಡಲಾಗದೆಂದು ಸರಕಾರಿ ಠರಾವಾಗಿದೆ. ಮೆ|| ಬೋರ್ಡ ೧೨೦೦ ರೂಪಾಯಿಗಳನ್ನು ಮಂಜೂರ ಮಾಡಿತ್ತು; ಈಗ ದರೂ, ಇಷ್ಟು ಭತ್ತೆಯ ಕೆಲಸವಿಲ್ಲವಾಗಿ ಬೋರ್ಡಿಗೆ ತಿಳಿದರಾಯಿತು

ಜಿಲ್ಹಾ ಬೋರ್ಡಿಗೆ ಖರ್ಚಿನ ಸ್ವರಾಜ್ಯವೊಂದು ಕೊಡಲ್ಪಟ್ಟಿದೆ. ಪ್ಲೇಗು ಮುಂತಾದ ಪಿಡುಗು ಸಂಭವಿಸಿದಾಗ ಆ ಕಾಲಕ್ಕೆ ತಾಲೂಕ ಲೋಕಲ್ ಬೋರ್ಡಿನ ಅಧ್ಯಕ್ಷರ ಹಾಗು ಡಾಕ್ಟರರ ಆಲೋಚನೆ ಪಡೆದು ತಾಲೂಕಿನ ಮಾಮಲೇದಾರರು ಜಿಲ್ಹಾ ಬೋರ್ಡಿಗೆ ಉಪಾಯಗಳನ್ನು ಸೂಚಿಸಬೇಕು; ಅವನ್ನು ಜಿಲ್ಹಾ ಬೋರ್ಡು ಕೂಡಲೆ ಕೈಕೊಳ್ಳಬೇಕು; ಇಲ್ಲದಿದ್ದರೆ, ಜಿಲ್ಹೆಯೊಳಗಿನ ಪ್ರಜೆಗಳ ಕ್ಷೇಮಪಾಲನಕ್ಕಾಗಿ ನೇಮಿಸಿದ ಜಿಲ್ಹಾಧಿಕಾರಿಗಳು ಅವನ್ನು ನೆರವೇರಿಸಿಕೊಂಡು, ಅದರಿಂದೊದಗಿದ ಖರ್ಚಿನ ರಕಮನ್ನು ಜಿಲ್ಹಾ ಬೋರ್ಡಿನಿಂದ ವಸೂಲ ಮಾಡಿಬಿಡುವರು. ಜಿಲ್ಹಾ ಬೋರ್ಡು ಪ್ರತಿ ವರುಷ ಪಿಡುಗಿನ ಪ್ರೀತ್ಯರ್ಥ ಕೆಲವು ರಕಮನ್ನು ಪ್ರತ್ಯೇಕ ಇಡಬೇಕಾಗಿಯೂ ವಿಧಿಸಲಾಗಿದೆ. ಇನ್ನು ಮುಂದೆ ಯಾವದೊಂದು ಪಿಡುಗು ಬಂದಾಗ ಸರಕಾರಕ್ಕೆ ಪ್ರಜೆಗಳು ದೂರಲಾಗದು, ತಿಳಿಯಿತೇನು?

ಇಲ್ಲಿಯ ಪ್ಲೇಗಿನ ಗಡಿಬಿಡಿಯು ಇನ್ನೂ ವಿಶೇಷವಾಯಿತು, ಕಾರವಾರ ಶಹರದಲ್ಲಿ ಇಲಿ ಬೀಳುವ ಹಂಗಾಮು ತೀರಿತು; ಜನರ ಮೇಲೆ ಉಗ್ರ ಪ್ಲೇಗಿನ ಅನುಗ್ರಹವಾಗುತ್ತಿದೆ ಕನ್ನಡ ಶಾಲೆ ಜಾತಿಯ ೪-೫ ಮಂದಿಗಳು ಸತ್ತರು; ಕಾಜುಬಾಗದೊಳಗಿನ ಕೊಂಕಣ ಖಾರ್ವಿಗಳಲ್ಲಿ ಒಬ್ಬಿಬ್ಬರು ಸತ್ತರು; ಮುರಲೀಧರ ವ ತಂ ಬಳಿ ರಾ|| ಸುಬ್ಬನಾಯ್ಕರ ಮನೆಯಲ್ಲಿ ಒಬ್ಬ ಹೆಂಗಸು ತೀರಿಕೊಂಡಳು. ಬೇಣಗೆ ಘಟ್ಟದ ಬದಿಗೆ ಕೆಲ ಮುಸಲ್ಮಾನರಲ್ಲಿಯೂ ಪ್ಲೇಗು ಹತ್ತಿದ ಸುದ್ದಿ ಇದೆ. ಜವಳಿ ವ್ಯಾಪಾರಿಗಳಾದ ರಾ|| ಗಜಾನನರಾವ ಕಿಣೀಕರವರೂ ಪ್ಲೇಗಿನಿಂದ ತೀರಿಕೊಂಡರು, ಬೇಣಗಿ, ದೈವಕೋಲ, ಬಾಡ ಕಾಜುಬಾಗ ಕಡೆ ಇಲಿಗಳು ಮರಣ ಪಡಲಾರಂಭಿಸಿವೆ ಜನರು ಗಾಬರಿಗೆಟ್ಟಿದ್ದಾರೆ ಬೇಣಗಿ ಘಟ್ಟದ ಕೆಳಗೆ ಸಹ ಬಿಡಾರುಗಳು ಕಟ್ಟಲ್ಪಡುತ್ತಿವೆ ಇಲ್ಲಿಯ ತಾಲೂಕ ಕಚೇರಿಯು ಸಹ ನ್ಯೂ ಬಂದರೆಯ ಪ್ರಾಂತ ಆಫೀಸಿನ ಕಡೆ ಸ್ಥಳಾಂತರವಾಗಿದೆ. ಕಾರವಾರದ ಮುಂದಿನ ಸ್ಥಿತಿ ಬಹು ಭಯಂಕರವಿದೆ.

ಶಿರ್ಶಿ— ಈ ವರುಷ ಇಲ್ಲಿ ಕಾಮಣ್ಣನ ದೊಡ್ಡ ಸಮಾರಂಭ ಕೇರಿ—ಕೇರಿಯಲ್ಲಿ ಹಲಿಗೆಗಳನ್ನು ಬಾರಿಸುವದು, ವೇಷ ಹಾಕಿಕೊಂಡು ಕುಣಿದಾಡುವದು, ಸ್ಪೃಶ್ಯರ ಈ ಆಟ ನೋಡಿ ಅಸ್ಪೃಶ್ಯರಿಗೂ ಆವೇಶ ಬಂತು; ಅವರೂ ವೇಷ ಹಾಕಿಕೊಂಡು ಹಲಿಗೆಗಳ ಘೋಷದೊಡನೆ ಮೆರೆಯಲಾರಂಭಿಸಿದರು ಮಾರಿಗುಡಿ ಪೇಟೆಯಲ್ಲಿದ್ದ ಕಾಮಣ್ಣನೆದುರಿಗೆ ತಮ್ಮ ಚೇಷ್ಟೆಗಳನ್ನು ತೋರಿಸಲವರುದ್ಯುಕ್ತರಾದರು; ಸ್ಪೃಶ್ಯರಿಗೆ ಇದು ಸೇರಲಿಲ್ಲ; ಅವರು ವಿರೋಧಿಸಿದರು ಈ ಸುದ್ದಿ ತಿಳಿದೊಡನೆ ಮೆಜಿಸ್ಟ್ರೇಟರು ಕ್ರಿ. ಪ್ರೊ. ಕೋ. ೧೪೪ನೇ ಕಲಮಿನನ್ವಯ ಪ್ರತಿಬಂಧಕ ಹುಕುಮನ್ನು ಹೊರಡಿಸಿದರು. ಶಾಂತತೆಯನ್ನು ಪಾಲಿಸಲು ಫೌಜದಾರರು ಪೋಲೀಸರೊಡನೆ ಸಜ್ಜಾಗಿ ನಿಂತರು ಅಸ್ಪೃಶ್ಯರು ಇದಕ್ಕೆ ಹೆದರಲಿಲ್ಲ. ಸತ್ಯಾಗ್ರಹ ಮಾಡಲುದ್ಯುಕ್ತರಾದರು. ರಾತ್ರೆ ೧೨ ಘಂಟೆಗೆ ವೇಷ ಬರಕೊಂಡು ಹಲಿಗೆಗಳನ್ನು ಬಾರಿಸುತ್ತ ಮಾರಿಗುಡಿ ಪೇಟೆಯನ್ನು ಸೇರಲಾರಂಭಿಸಿದರು; ಪೋಲೀಸರ ಗಾಬರಿಯಾಯಿತು; ಮೆಜಿಸ್ಟ್ರೇಟರಿಗೆ ಕರೆ ಹೋಯಿತು. ಅವರಾತ್ರೆ

ಮ್ಯಜಿಸ್ಟ್ರೇಟರು ಬಂದರು. ಸಾರ್ವಜನಿಕ ಸ್ಥಳದಲ್ಲಿ ಯಾರಮಂತೆ ತಮಗೆ ಪ್ರತಿಬಂಧ ಮಾಡಲು ಕಾಯಿದೆ ಯಿಲ್ಲವಾಗಿ ಅಸ್ಪೃಶ್ಯರ ಅಂಧ್ರೋತ್ರ; ಅಸ್ಪೃಶ್ಯರು ಸೇರಿದರೆ ಕಾಮಣ್ಣ ದೇವರು ನೈಶಸಾಗುತ್ತಾನೆಂದು ಸ್ಪೃಶ್ಯರ ಅಂದೋಲನ. ಹೀಗೆ ಇಸ್ಸರ ಹಬ ನಡೆಯುತ್ತ. ಕಾಮಣ್ಣನ ಭಕ್ತರಲ್ಲಿ ವಿವೇಕವಿಲ್ಲದೆ? ಮ್ಯಜಿಸ್ಟ್ರೇಟರು ಬಂದರು; ಊರೊಳಗಿನ ಅಧಿಕಾರಿಗಳೆಲ್ಲರು ಬಂದರು. ವಿಚಾರ ಮಾಡಿದರು; ಆ ತನಕ ಅಸ್ಪೃಶ್ಯರು ಈ ಪೇಟೆಯಲ್ಲಿ ಬಂದದ್ದಿಲ್ಲವಾಗಿ ಸ್ಪೃಶ್ಯರು ವಾದಿಸಿದರು. ಮ್ಯಜಿಸ್ಟ್ರೇಟರು ತಮ್ಮ ಹುಕುಮನ್ನು ಅಲ್ಲಿಂದ ಶ್ರೀ ರಘುನಾಥ ಅಸ್ಪೃಶ್ಯರ ಮೆರವಣಿಗೆಯನ್ನು ಮುಂದರಿಸಿದರು; ಸ್ಪೃಶ್ಯರು ಕೋಪಾವಿಷ್ಟರಾದರು; ನಾಚಿಕೆಗೇಡಾದರು; ನಿರಾಶರಾದರು. ನಿರಾಶೆಯು ಭರದಲ್ಲಿ ಕಾಮಣ್ಣನ ಅಯುಷ್ಯವನ್ನು ಕಡಿಮೆ ಮಾಡಲು ಉದ್ಯುಕ್ತರಾದರು. ಮಧ್ಯರಾತ್ರಿಗೆ ಕಾಮಣ್ಣನು ಬಂದು ಬೂದಿಯಾದನು. ದಹನಕಾಲಕ್ಕೆ ಮಾರುಗಳು ಸಹ ಯಾರಿಗೂ ಪುರಸತ್ತು ಸಿಗಲಿಲ್ಲ. ಸ್ಪೃಶ್ಯಾಸ್ಪೃಶ್ಯರಲ್ಲಿ ದ್ವೇಷಭಾವನೆಗಳನ್ನು ಹುಟ್ಟಿಸಿ ಕಾಮಣ್ಣನು ಸುಟ್ಟು ಬೂದಿಯಾದನು. ಕಾಮಣ್ಣನ ಪ್ರತಿಷ್ಠೆಯಿಂದ ಪ್ಲೇಗು ಹೋಗಲಿ, ಬಿಡಲಿ; ಊರೊಳಗೆ ಸ್ಪೃಶ್ಯಾಸ್ಪೃಶ್ಯರೊಳಗೆ ಭಯಂಕರ ರೋಗದ ಬೀಜ ಬಿತ್ತಿದ ಹಾಗಾಯಿತು.

ಈ ಸಾರೆಯ ಮ್ಯುನಿಸಿಪಲ್ ಚುನಾವಣೆಯಲ್ಲಿ ಒಂದು ಯೋಗಾಯೋಗವು ಕೂಡಿಬಂದಿದೆ. ಒಂದು ಪಾರ್ಟಿನಿಂದ ವಕೀಲರು ಆರಿಸಿ ಬಂದಿದ್ದಾರೆ. ಇನ್ನೊಂದು ಪಾರ್ಟಿನಿಂದ ಅದೇ ವಕೀಲರ ಕಾರಕೂನರು ಹುಂಬರಾಗಿದ್ದಾರೆ.

ರೇಡಿಯೋ ಯಂತ್ರದಿಂದ ವರ್ತಮಾನಗಳು ತಿಳಿಯುವ ಬಗೆ ಛಪಿಸಿರುವರಂತೆ! ಆ ದಿನ ಮುಂಜಿತವಾಗಿ ಹಲವು ಸುದ್ದಿಗಳು ತಿಳಿಯುತ್ತವೆ ಇದೊಂದು ಸಮಾಚಾರ. ದೊಡ್ಡದೊಂದು ಪ್ರಯೋಜನವಂತೆ!

ಬೋರಿಂಗ ಮಶಿನದಿಂದ ಬಾವಿ ಅಗಿಯುವ ಕೆಲಸವು ಮುಗಿಯುತ್ತ ಬಂತು. ಪೂರ್ಣಾಹುತಿ ಮಾಡಲಿಕ್ಕೆ ಉಳಿಯುವಿಲ್ಲ. ಯಾಕಂದರೆ ಬಾವಿಗೆ ಹಚ್ಚುವ ಸರಗಳು ಇನ್ನೂ ಬಂದು ಮುಟ್ಟಲಿಲ್ಲ. ನಳ ಬರುವ ತನಕ ಬೋರಿಂಗ ಮಶಿನದ ಅಧಿಕಾರಿಗಳು ದಿನ ಎಣಿಸಿ ಪಗಾರು ಎಣಿಸಿಕೊಂಡರಾಯಿತು. ಸಾಹಿತ್ಯ ಸರಂಜಾಮು ಮಾಡದೆ ಒಮ್ಮೆಲೇ ಬಾವಿ ಕಡಿಯುವ ಕೆಲಸವೇಕೆ ಮಾಡಿದರು? ಮ್ಯುನಿಸಿಪಾಲಿಟಿಗೆ ಇಷ್ಟು ಸಾಮಾನ್ಯ ವಿಚಾರವಿಲ್ಲೇನು?

ನಮ್ಮೂರಲ್ಲಿ ಗ್ಯಾಸ ದೀಪಗಳ ಬೆಳಕು ಆ-ಹ್ನಗಂಟೆಯೊಳಗೆ ಮನೆ ಸೇರದಿದ್ದರೆ ಕಗ್ಗತ್ತಲೆಯಲ್ಲಿ ಅಡ್ಡಾಡಬೇಕು ಪುಣ್ಯವಿದ್ದರೆ, ಪೂರ್ಣ ಗ್ಯಾಸ ಹರಿಯದಿರುವ ಸಂಗಗಳಿಂದ ಆಗ್ಗೊಂದು ಕ್ಷಣ ಹೊತ್ತು ಬೆಳಕು ಬರಬಹುದು.

ಶ್ರೀ ಮಾರಿಕಾಂಬಾ ಹೈಸ್ಕೂಲಿನಿಂದ ೧೩ರಿಂದ ವಿಗಳಿಗೆ ಪರೀಕ್ಷೆಗೆ ಕಳಿಸಲಾಗಿದೆ. ಅವರಲ್ಲಿ ೪ ಮಂದಿಗಳು ಈ ಶಾಲೆಗೆ ಹಿಂದಿನವರಲ್ಲಿ ಇಲ್ಲಿ ಕಲಿತ ಕೆಲ ಹುಡುಗರು ಹುಬ್ಬಳ್ಳಿ ಹೈಸ್ಕೂಲಿಗೆ ಹೋಗಿ ಅಲ್ಲಿಂದ ಪರೀಕ್ಷೆಗೆ ಕೂಡ್ರಲು ಅಪ್ಪಣೆ ಪಡೆಯ ಹೋಗಿದ್ದಾರೆ ಕಾರಣ?

ಇಲ್ಲಿಯ ಹೈಸ್ಕೂಲಿನ ಕನ್ನಡ ಶಿಕ್ಷಕರಾದ ಶ್ರೀ|| ಮಲ್ಲಾಪ್ಪಾ ಪೈರವರಿಗೆ ಗುಜರಾಥದ ರಾಷ್ಟ್ರೀಯ ವಿದ್ಯಾಪೀಠದಲ್ಲಿ ವೈಮನಸ್ಯಗಿಕ ಶಿಕ್ಷಣ ಕೊಡುವದಕ್ಕಾಗಿ ವಿದ್ಯಾಪೀಠದ ಚಾಲಕರಾದ ಶ್ರೀ|| ದತ್ತಾತ್ರೇಯ ಕಾಲೇಲಕರ ಯಾನೆ ಕಾಕಾ ಕಾಲೇಲಕರ ಇವರ ಕಡೆಯಿಂದ ನಿಮಂತ್ರಣ ಬಂದಿರುತ್ತದೆ ಶ್ರೀ|| ಪೈರವರಿಗೆ ಊಟ-ಉಡಿಕೊಳ್ಳುವ ವ್ಯವಸ್ಥೆ ಮಾತ್ರ, ಪಗಾರ ಸಂಬಳ ಸಿಗುವದು [ನಮ್ಮ ಕನ್ನಡ ಜಿಲ್ಲೆಗೆ ಭೂಷಣವು

ಬನವಾಸಿಯ ಶ್ರೀ ಮಧುಕೇಶ್ವರ ದೇವಸ್ಥಾನದ ಮೊಕ್ತೇಸರರು ಹುಬ್ಬಳ್ಳಿಯ ಶೆಟ್ಟಿ ಶಿವಲಿಂಗಪ್ಪನವರಾದ ರಾ|| ಮಹೇಂದ್ರರವರ ಮೇಲೆ ಮಾಡಿದ ಸಂಸ್ಥೆ ಕ್ಷೇತ್ರದ ದಾವೆಯ. ಜಮೀನ ಮಕಾಲಿಯ ಬಗ್ಗೆ ಮಾಡಿದ ದಾವೆಯ ತೀರ್ಪು ಮೊನ್ನೆ ಶನಿವಾರಕ್ಕೆ ಆಗುವದಿತ್ತು. ಆದರೆ ಆ ದಿನ ಆಗಲಿಲ್ಲ. ಈ ಹೊತ್ತು ಸೋಮವಾರಕ್ಕೆ ಹೇಳಲ್ಪಡುವದಂತೆ!

ವೃತ್ತಸಾರ.

— ಮುಂಬಯಿಯ ಪ್ರಾಂತಿಕ ಕಾಯದೆ ಕೌನ್ಸಿಲಿನಲ್ಲಿ ಕಳೆದ ತಾರೀಖು ೩ನೇಗೆ ನಮ್ಮ ಜಿಲ್ಲೆಯ ಮೆಂಬರರಾದ ಶ್ರೀ|| ಮಂಜನಾಥಭಟ್ಟ ಕಕ್ಕಿಲ್ಲಾಯರವರು ಬಜೆಟ್ಟಿನ ಪತ್ರಿಕೆಯ ಮೇಲೆ ಭಾಷಣ ಮಾಡುವಾಗ ನಮ್ಮ ಜಿಲ್ಲೆಯಲ್ಲಿ ಹುಲಿ, ಹಂದಿ, ಕಾಡಾನೆ ಮುಂತಾದ ಕ್ರೂರ ಪಶುಗಳಿಂದ ಬದಗುವ ನಷ್ಟವನ್ನು ಒತ್ತಿ ಹೇಳಿದರು. ಈ ಪ್ರಾಣಿಗಳಿಗೆ ಜನವಸ್ತಿಯ ಸಮೀಪ ಸಂರಕ್ಷಣೆ ದೊರಕೊಟ್ಟಿದೆ, ಬೇಟೆಯಾಡಲು ಅನುಕೂಲವಾಗಬೇಕೆಂದು ಕ್ರೂರ ಪಶುಗಳ ನಿವಾಸಸ್ಥಾನವು ಗ್ರಾಮಗಳ ಸಮೀಪ ಬಂದಿರುತ್ತದೆ; ಬ್ರಿಟಿಶ ಸರಕಾರಕ್ಕೆ ಕ್ರೂರ ಪಶುಗಳ ಮೇಲೆ ಪ್ರೀತಿ ಇತ್ಯಾದಿಗಳನ್ನು ಹೇಳಿದ ಮೇಲೆ ಕಾಯದೆ ಕೌನ್ಸಿಲಿನಲ್ಲಿ ನಗೆಯೋ ನಗೆಯಾಯಿತು. ಕ್ರೂರ ಪಶುಗಳನ್ನು ಕೊಲ್ಲುವವರಿಗೆ ಇನಾಮು ಕೊಡುವದಕ್ಕಾಗಿ ಬಜೆಟ್ಟಿನಲ್ಲಿ ೧೦೦೦ ರೂಪಾಯಿ ನಮೂದಾಗಿದೆ ಇಷ್ಟು ಒಂದಕ್ಕಾಗಿ ಇಷ್ಟು ರಕಮು! ಸಾಲದೇನು? ಶ್ರೀ|| ಕಕ್ಕಿಲ್ಲಾಯರು ಈ ರಕಮನ್ನು ಹೆಚ್ಚಿಸಿ ನಮ್ಮಲ್ಲಿಯ ಸ್ಥಿತಿಯನ್ನು ಒತ್ತಿ ಹೇಳಿದರು

— ಸೀರಿಯಾ ದೇಶದ ಅಧಿಪತಿಗಳಾದ ಫ್ರೆಂಚರು ಅಲ್ಲಿಯ ಪ್ರಜೆಗಳಿಗೆ ನಿಶ್ಶಸ್ತ್ರ ಮಾಡಲಾರಂಭಿಸಿದ್ದಾರೆ. ೪೦ ಸಾವಿರ ಶಸ್ತ್ರಾಸ್ತ್ರಗಳು ಫ್ರೆಂಚರ ಸ್ವಾಧೀನವಾಗಿವೆ ಫ್ರೆಂಚರು ಮುಂದಾಗಿ ಯುರೋಪ ಖಂಡದೊಳಗಣ ರಾಷ್ಟ್ರಗಳ ಕೂಟವನ್ನು ಮುಸಲ್ಮಾನರಿಗೆ ಇದಿರಾಗಲು ತಯಾರಿಸುವ ಪ್ರಯತ್ನದಲ್ಲಿದ್ದಾರೆ ಅಫಘಾನಿಸ್ಥಾನದ ಅಮೀರರು ಮಹಾಬಿಯರ ಪರವಾಗಿ ಕಾದಾಡುವರೆಂದು ಹೇಳುತ್ತಾರೆ. ಏಶಿಯಾ ಖಂಡದವರು ಒಂದು ಕಡೆ, ಯುರೋಪ ಖಂಡದವರು ಇನ್ನೊಂದು ಕಡೆ ಹೀಗೆ ಈ ಹೊಸ ಯುದ್ಧವಾಗುತ್ತದೇನೋ ಎಂಬದೊಂದು ಭೀತಿ ಯುದ್ಧವಾದರೆ, ಒಂದು ಕಡೆಯಿಂದ ಚರೋದ್ಯ, ಏಶಿಯಾ ಖಂಡದವರ ವಿಷಯವಿದ್ದ ಯುರೋಪಿಯನ್ನರ ತಿರಸ್ಕಾರ ಬುದ್ಧಿಯಾದರೂ ನಷ್ಟವಾಗುವದು.

— ದಕ್ಷಿಣ ಅಮೇರಿಕೆಯಲ್ಲಿ ಇರುವ ಒಂದು ಜನಾಂಗದ ವಸ್ತ್ರ ಹತ್ತಿರ ಈ ಜನಾಂಗದವರು ಉಟ್ಟುಕೊಳ್ಳುವದಿಲ್ಲ; ಸದಾ ತ್ತರೂ ದಿಗಂಬರರಾಗಿರುತ್ತಾರೆ. ಅರಿವೆಗಳ ಉಪಯೋಗವೇ ಗೊತ್ತಿಲ್ಲ ಇವರಿಗೆ ದೊಡ್ಡ ದೊಡ್ಡ ಗಡ್ಡಗಳಿವೆ

— ಜುನಾಗಡ ಮಹಾರಾಜರು ವಿಲಾಯತಿಗೆ ಹೋಗುವಾಗ ಡಾ|| ಮೊರೆರವರಿಗೆ ಜೊತೆಗೆ ಕರಕೊಂಡು ಹೋಗಿದ್ದರು ಡಾಕ್ಟರರು ತಮ್ಮ ಪೀ ೫೦ ಸಾವಿರ ರೂಪಾಯಿಗಳ ಬಗ್ಗೆ ಸಿಂಹಲ ದ್ವೀಪದಲ್ಲಿ ದಾವೆ ದಾಖಲ ಮಾಡಿದರು. ದಾವೆಯು ರಾಜಿಯಿಂದ ರೂಪಾಯಿ ೩೦ ಸಾವಿರಕ್ಕೆ ಇತ್ಯರ್ಥವಾಗಿದೆ

— ಬಾರಡೋಲಿಯ ಸತ್ಯಾಗ್ರಹದ ತಯಾರಿ ನಡೆದದೆ. ಶ್ರೀ|| ವಲ್ಲಭಭಾಯಿ ಪಟೇಲರವರು ಸಂಘಟನೆ ಮಾಡುತ್ತಿದ್ದಾರೆ

— ರಂಗೂನಿನಲ್ಲಿ ಅಕ್ಕಿಯ ಗಿರಣಿಗೆ ಬೆಂಕಿ ತಗಲಿ ಲಕ್ಷಾವಧಿ ರೂಪಾಯಿಗಳ ನಷ್ಟವಾಯಿತು

— ಇಜಿಪ್ತ ದೇಶದ ಬ್ರಿಟಿಶರ ಕೃತಕದಿಂದ ಧೋರಣವು ಇಜಿಪ್ತ ದೇಶಕ್ಕೆ ಅಪಮಾನಾಸ್ಪದವೆಂಬದು ಅಲ್ಲಿ ಅಭಿಮತವಾಗಿದೆ, ಇಜಿಪ್ತ ದೇಶದ ರಾಜಧಾನಿಯಾದ ಕೈರೋ ಪಟ್ಟಣದಲ್ಲಿ ವಿದ್ಯಾರ್ಥಿಗಳ ಹೊಂಬಡಿಯಾಯಿತು, ಪೋಲೀಸರು ದೊಂಬಿಯನ್ನು ಮುರಿದರು,

— ೧೩ ನೇ ಮುಂಬಯಿ ಸಾಹಿತ್ಯ ಸಮ್ಮೇಲನವು ಗ್ವಾಲ್ಹೇರದೊಳಗೆ ಎಪ್ರಿಲ್ ತಿಂಗಳ ೭-೮-೯ನೇ ತಾರೀಖಿಗೆ ಬರಸ್ತ ಕಾಯದೆ ಕೌನ್ಸಿಲಿನ ಮೆಂಬರರಾದ ಮಾಧವರಾವ ಅಣೇರವರ ಅಧ್ಯಕ್ಷತೆಯಲ್ಲಿ ಜರಗಾಗುವದು,

— ಮಹಾಬಿಗಳು ಟ್ರಾನ್ಸಜೊರ್ಡೇನಿಯಾ ಪ್ರಾಂತದಲ್ಲಿ ಕೆಲವು ಗ್ರಾಮಗಳನ್ನು ಸ್ವಾಧೀನ ಮಾಡಿಕೊಂಡರೆಂತ ಸುದ್ದಿ ತಿಳಿಯುತ್ತದೆ, ಇರಾಕದ ಸುತ್ತುಮುತ್ತ ಇರುವ ಮುಸಲ್ಮಾನರು ಮಹಾಬಿಯರಿಗೆ ಸೇರುತ್ತಲಿದ್ದಾರೆ,

— ಈ ವರುಷ ಪರ್ಯಾಯ ಮಹೋತ್ಸವವು ವಿಶೇಷ ಸಾಂಗವಾಗಿ ಸಾಗಲಿಲ್ಲ. ಅಷ್ಟಮಠಾಧಿಪತಿಗಳ ಮನಸ್ಸುಗಳು ಕಲುಷಿತವಾಗಿದೆ. ಪುತ್ತಿಗೆ ಮಠದ ಉತ್ಸವದಲ್ಲಿ ಸಮಸ್ತ ಮಠಾಧಿಪರು ಪಂಕ್ತಿ ಭೋಜನ ಮಾಡಿದರು; ಎಲ್ಲರಿಗೂ ಆನಂದವಾಯಿತು, ಇನ್ನು ಇವರ ಕಲಹಗಳು ನಾಮಶೇಷವಾದವೆಂದು ಜನರು ಅನಂದಪಡುತ್ತಲಿದ್ದರು. ಆದರೆ, ಆ ಅಂದಾಜು ತಪ್ಪಾಗಿದೆ. ಹೊಸ ಕಲಹಗಳಿಗೆ ಪ್ರಾರಂಭವಾಗಿದೆ, ಪರ್ಯಾಯ ಸ್ವಾಮಿಗಳಾದ ಶ್ರೀ ಪುತ್ತಿಗೆ ಮಠಾಧೀಶರಿಗೆ ಶ್ರೀ ಫಲಿಮಾರು ಮಠಾಧಿಪತಿಗಳು ಸಹಾಯಕರಾಗಿದ್ದಾರೆ ಉಳಿದ ಸ್ವಾಮಿಗಳು ಅದರ ಆಧಾರಭೂತ ಸನ್ಯಾಸಿಗಳಿದ್ದು, ಅವರ ಸೇವೆಯಿಂದ ಶ್ರೀಕೃಷ್ಣನು ಸಂತುಷ್ಟನಾಗಿ, ಅಷ್ಟಮಠಾಧಿಪರಿಗೆ ಸದ್ಬುದ್ಧಿಯನ್ನೀಯಲಿ.

— ಕಲಕತ್ತೆಯ ಹೈಕೋರ್ಟಿನಲ್ಲಿ ವಿಲಕ್ಷಣವಾದ ಪ್ರಕರಣವೊಂದು ಎದ್ದಿದೆ. ನ್ಯಾಯಮೂರ್ತಿ ಸಿ.ಕಲಂಕರರವರ ಕೋರ್ಟಿನಲ್ಲಿ ಸೆಂಟ್ರಲ್ ಬೆಂಕಿನ ರಾ|| ರಾಮೇಶ್ವರ ಬಿರೋದವಾಲಾರವರ ಮೇಲೆ ಒಂದು ಖಟ್ಲೆ ನಡೆದದೆ, ಈ ಖಟ್ಲೆಯಲ್ಲಿ ಆರೋಪಿಗೆ ಜಾಮೀನಿನ ಮೇಲೆ ಬಿಡಬೇಕೆಂದು ಕಾಯುವೆಯಿದೆ, ಆ ಕಾಯಿದೆಯನ್ನು ಉಲ್ಲಂಘಿಸಿ ನ್ಯಾಯಮೂರ್ತಿ ಬಕಲಂಕರರು ಜೈಲಿಗೆ ಕಳುಹಿದರು. ಅನ್ಯಾಯದಿಂದ ಪ್ರತಿಬಂಧವಾಯಿತೆಂದು ಶ್ರೀ, ಫ್ರಾ, ಕೋ ೧೯೧ ನೇ ಕಲಮಿನನ್ವಯ ರಾ|| ರಾಮೇಶ್ವರರವರಿಗೆ ಬಿಡುಗಡೆ ಮಾಡಬೇಕಾಗಿ [ನ್ಯಾಯಮೂರ್ತಿ ಜೋನಸ್ ಹಾಗು ಲೊರ್ಟ ವಿಲಿಯಮ್ಸರವರ ಕೋರ್ಟಿನಲ್ಲಿ ಅರ್ಜಿ ದಾಖಲಾಗಿದೆ, "ಇದು ಅಪೀಲಲ್ಲ, ರಿವ್ಹಿಜನ ಯಾನೆ ಮೇಲ್ತನಿಖೆ ಅರ್ಜಿಯೂ ಅಲ್ಲ" ವಾಗಿ ನ್ಯಾಯಮೂರ್ತಿಗಳು ಉದ್ಗರಿಸಿದರು, ರಾ|| ರಾಮೇಶ್ವರರ ವಕೀಲರಾದ ಟಾಗೋರರವರು ನ್ಯಾಯಮೂರ್ತಿ ಬಕಲಂಕರರವರ ಅನ್ಯಾಯವನ್ನು ಹೇಳಿದರು, [ಕಾಯಿದೆಯಂತೆ ನಡೆಯದಿದ್ದರೆ, ನ್ಯಾಯಮೂರ್ತಿಗಳ ಹುಕುಮಿನಿಂದ ಪ್ರಯೋಜನವಿಲ್ಲ ಜನಸಾಮಾನ್ಯರು ಅನ್ಯಾಯದಿಂದ ಪ್ರತಿಬಂಧದ ಹಂದರದಲ್ಲಿಯೇ ಸೇರುತ್ತಾರೆ ವಕೀಲರು ವಾದಿಸಿ, ಕ್ರಿ. ಫ್ರಾ, ಕೋ, ಕಲಂ ೪೯೧ ರನ್ವಯ ನ್ಯಾಯಮೂರ್ತಿಗಳು ವಿಚಾರ ನಡಿಸಬೇಕಾಗಿ ಮುಗಿಸಿಕೊಂಡರು, ವಿಚಾರ ನಡೆಯುತಲಿದೆ,

— ಬಂಗಾಲದಲ್ಲಿ ಕಾಯದೆ ಕೌನ್ಸಿಲಿನ ಸಭಾಸದರಾದ ಬಾಹಿರಿಯವರು 'ಬಂಗಾಲ ಲಕ್ಷ್ಮೀಕೊಟನ್ ಮಿಲ್ಸ' ಎಂಬ ಹತ್ತಿಯ ಗಿರಣಿಯನ್ನು ಹೊರಡಿಸಿ ನೇರದಾರರಿಗೆ ವಂಚಿಸಿದರೆಂದು ಅವರ ಮೇಲೂ ಅವರಿಗೆ ಜೊತೆಗಾರರಾದ ಬಂಗಾಲ ಸೆಂಟ್ರಲ್ ಬೆಂಕಿನ ಮಾಯಿರೆಕ್ಟರರಾದ ಬನರ್ಜಿಯವರ ಮೇಲೂ, ಇನ್ನೊಬ್ಬರ ಮೇಲೂ ಖಟ್ಲೆ ನಡೆಯಿತು. ಬಾಹಿರಿಯವರಿಗೆ ನ್ಯಾಯಮೂರ್ತಿಗಳು ೮ ವರುಷಗಳ ಸಕ್ತ ಮಜೂರಿಯ ಕಾರಾಗೃಹವಾಸವನ್ನು ವಿಧಿಸಿದರು. ಬನರ್ಜಿಯವರಿಗೆ ೬ ವರ್ಷಗಳ ಸಜೆಯಾಗಿದೆ.

— ತಾಣೆ ಜಿಲ್ಲೆಯ ಕಡಾಲಿ ಪ್ರಾಂತದ ಅಸಿಸ್ಟಂಟ ಕಲೆಕ್ಟರರಾದ ಮಿ|| ಅವಿ ಮುದ್ದೀನರವರು ನಮಾಜಿಯುತ್ತಿ ದ್ದಾಗ ಅವರ ೧೩೦೦೦ ರೂಪಾಯಿಗಳ ಚಿನ್ನಗಳು ಕಳುವಾದವು.

ಮಹಾತ್ಮರ ಆತ್ಮಚರಿತ್ರ.

(೪೧) ಗೋಖಲೇಯವರ ಔದಾರ್ಯ.

ಇಂಗ್ಲೆಂಡದಲ್ಲಿ ನನಗೆ ಪಕ್ಕೆನೋವು ಬಡಿದಿದ್ದ ಉಲ್ಲೇಖವನ್ನು ನಾನು ಈ ಹಿಂದೆಯೇ ಮಾಡಿದ್ದೇನೆ. ಆ ಸಮಯದಲ್ಲಿ ಗೋಖಲೇಯವರು ಲಂಡನಿಗೆ ಬಂದು ತಲ್ಪಿದರು. ನಾನೂ ಕಾಲೆನಬಾಕ್‌ರವರೂ ಅವರ ಬಳಿ ನಿತ್ಯವೂ ಹೋಗುತ್ತಿದ್ದೆವು. ಯುದ್ಧದ ವಿಷಯವನ್ನೇ ನಾವು ಪ್ರಮುಖ್ಯವಾಗಿ ಮಾತಾಡುತ್ತಿದ್ದೆವು. ಕಾಲೆನಬಾಕ್‌ರವರಿಗೆ ಜರ್ಮನಿಯ ಭೂಗೋಲವು ನಾಲಿಗೆಯ ತುದಿಯ ಮೇಲಿತ್ತು. ಯುರೋಪ ಖಂಡದಲ್ಲಿ ಅವರು ಬಹಳ ಅಡ್ಡಾಡಿದವರು. ಆದರಿಂದ ಯುದ್ಧ ವರ್ಣನೆಯಲ್ಲಿ ಬರುವ ಅನೇಕ ಸ್ಥಳಗಳನ್ನು ನಕಾಶೆಯ ಮೇಲೆ ಅವರು ಗೋಖಲೇಯವರಿಗೆ ತೋರಿಸುತ್ತಿದ್ದರು. ನನಗೆ ಪಕ್ಕೆನೋವು ಆರಂಭವಾದಂದಿನಿಂದ ಅದೂ ಒಂದು ಚರ್ಚೆಯ ವಿಷಯವಾಯಿತು. ಆಗಲೂ ನನ್ನ ಆಹಾರದ ಪ್ರಯೋಗಗಳು ನಡೆದಿದ್ದವು. ಆ ಕಾಲಕ್ಕೆ ನೆಲಗಡ್ಲೆ, ಹಸಿ ಹಾಗು ಕಳ್ತಿದ ಬಾಳೆ, ... ಹಣ್ಣು, ಔಡಲ ಎಣ್ಣೆ, ಟಪ್ಪರ ಬದನೆ ... ಮುಂತಾದವುಗಳನ್ನು ನಾನು ಸೇವಿಸುತ್ತಿದ್ದೆ. ... ದ್ವಿದಲ ಧಾನ್ಯ ಮುಂತಾದವುಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದೆ.

ಡಾ। ಜೀವರಾಜ ಮೇಹತಾರವರು ನನಗೆ ಔಷಧೋಪಚಾರ ಮಾಡುತ್ತಿದ್ದರು. ಧಾನ್ಯಗಳನ್ನೂ ಹಾಲನ್ನೂ ಸೇವಿಸಬೇಕೆಂದು ಡಾಕ್ಟರರು ನನಗೆ ಬಹು ಒತ್ತಾಯ ಮಾಡಿದರು. ನಾನೂ ಎಷ್ಟಕ್ಕೂ ಒಪ್ಪಲಿಲ್ಲ. ಈ ಸುದ್ದಿಯು ಗೋಖಲೇಯವರ ಕಿವಿಗೆ ಮುಟ್ಟಿತು. ಫಲಾಹಾರದ ಪ್ರತಿಪಾದನೆಯ ತರ್ಕಗಳು ಅವರಿಗೆ ಗ್ರಾಹ್ಯವಾಗಲಿಲ್ಲ. ನನ್ನ ಆರೋಗ್ಯಪಾಲನಕ್ಕಾಗಿ ಡಾಕ್ಟರರು ಹೇಳಿದ ಆಹಾರವನ್ನು ಗ್ರಹಿಸಬೇಕೆಂದು ಅವರು ಬಯಸಿದರು.

ಗೋಖಲೇಯವರು ಆಗ್ರಹ ಮಾಡತೊಡಗಲು, ಅವರ ಮಾತನ್ನು ನಿರಾಕರಿಸುವದು ನನಗೆ ಸುಲಭವಾಗಲಿಲ್ಲ. ನಿರಾಕರಣೆಯನ್ನು ಅಂಗೀಕರಿಸಲು ಅವರ ಸಿದ್ಧರಿದ್ದಿಲ್ಲ. ಈ ವಿಷಯ ವಿಚಾರ ಮಾಡಲು ೨೪ ತಾಸುಗಳ ಅವಧಿ ಕೊಡಲು ನಾನು ಬೇಡಿಕೊಂಡೆನು. ನಾನೂ, ಕಾಲೆನಬಾಕ್‌ರವರೂ ಸಾಯಂಕಾಲಕ್ಕೆ ಮನೆಗೆ ಮರಳಿದೆವು. ನನ್ನ ಕರ್ತವ್ಯವೇನೆಂದು ನಾವೀರ್ವರೂ ಚರ್ಚಿಸಿದೆವು. ನನ್ನ ಪ್ರಯೋಗದಲ್ಲಿ ಅವರು ನನ್ನ ಜೊತೆಗಾರರಿದ್ದರು. ಫಲಾಹಾರ ಪ್ರಯೋಗವನ್ನು ಮುಂದರಿಸಬೇಕೆಂದು ಕಾಲೆನಬಾಕ್‌ರ ಬಯಕೆ, ಆದರೆ, ನನ್ನ ಆರೋಗ್ಯಕ್ಕೆ ಅವಶ್ಯವಿದ್ದರೆ ಅದನ್ನು ತ್ಯಜಿಸಲು ಅವರ ಸಂತೋಷವಿತ್ತು. ಅದರಿಂದ ಮನೋದೇವತೆಯನ್ನು ಸ್ಮರಿಸಿ, ನನ್ನ ಈ ಕರ್ತವ್ಯವನ್ನು ನನ್ನಷ್ಟಕ್ಕೇ ವಿಚಾರಿಸಿ ನಾನು ನಿರ್ಧರಿಸಬೇಕಾಗಿತ್ತು.

ವಿಚಾರ ಮಾಡುತ್ತ ಮಾಡುತ್ತ ಅಹೀರಾತ್ರಿಯನ್ನೇ ನಾನು ಕಳೆದೆನು. ಈ ಪ್ರಯೋಗವನ್ನು ತ್ಯಜಿಸುವದೆಂದರೆ, ಆ ಕಡೆಯ ನನ್ನ ಕಲ್ಪನೆಗಳನ್ನೆಲ್ಲ ತ್ಯಜಿಸುವದಾಗಿತ್ತು. ಅಲ್ಲದೆ, ಈ ವಿಚಾರಗಳಲ್ಲಿ ನನಗೇನೂ ದೋಷ ಕಾಣಲಿಲ್ಲ. ಗೋಖಲೇಯವರು ಪಿತೃತುಲ್ಯ ಪ್ರೇಮದಿಂದ ಮಾಡುವ ಆಗ್ರಹಕ್ಕೆ ಎಷ್ಟರಮಟ್ಟಿಗೆ ನಾನು ನಿರ್ಧಾರವನ್ನು ಶಿಥಿಲಗೊಳಿಸಬಹುದೆಂಬುದೂ, ಆರೋಗ್ಯಹಿತದಿಂದ ನಿಶ್ಚಯಿಸಲ್ಪಟ್ಟ ಪ್ರಯೋಗಗಳಿಗಾಗಿ ನನ್ನ ಪ್ರಯೋಗವನ್ನು ಎಷ್ಟರಮಟ್ಟಿಗೆ ಬಿಡಬಹುದೆಂಬುದೂ ಒಂದು ಪ್ರಶ್ನೆ. ಕೊನೆಗೆ ನಾನೊಂದು ನಿರ್ಣಯ ಮಾಡಿದೆನು. ಪ್ರಮುಖ್ಯವಾಗಿ ಧರ್ಮಭಾವನೆಗಾಗಿ ಕೈಕೊಂಡ ನಿಗ್ರಹವನ್ನು ಬಿಡಲಾಗದೆಂದೂ ಇತರ ವಿಷಯ ಕೈಕೊಂಡ ಮನೋನಿರ್ಧಾರವನ್ನು ಡಾಕ್ಟರರ ಹೇಳಿಕೆಯಂತೆ ತಿದ್ದಿ ಮಾಡಬೇಕೆಂದೂ ನನ್ನ ಮನೋನಿಶ್ಚಯವಾಯಿತು. ಹಾಲನ್ನು ನಾನು ತ್ಯಜಿಸಿದ ಕಾರಣವು ಪ್ರಮುಖ್ಯವಾಗಿ ಧರ್ಮಭಾವನೆಯದೇ ಆಗಿತ್ತು. ಕಲಕತ್ತೆಯಲ್ಲಿ ಗೋವುಗಳು ಎಮ್ಮೆಗಳ ಹಾಲನ್ನು ನಿಶ್ಶೇಷವಾಗಿ ಹಿಂಡಲು ಕೈಕೊಳ್ಳುವ ದುಷ್ಟಕ್ರಮಗಳನ್ನು ಕಾಣುತ್ತಿದ್ದ ಮಾಂಸವು ಮಾನವನ ಆಹಾರವಲ್ಲವೆಂದು ನನ್ನ ನಂಬಿಗೆ. ಹಾಗೆಯೇ ಯಾವದೇ ಪ್ರಾಣಿಯ ಹಾಲು ಮಾನವನ ಆಹಾರವಾಗಲಿಕ್ಕಿಲ್ಲೆಂದೂ ನನ್ನ ಭಾವನೆ. ಅದರಿಂದ ನಾನು ಮುಂಜಾವಿಗೆ ಎದ್ದು ಹಾಲನ್ನು ತ್ಯಜಿಸಲು ಮನೋನಿರ್ಧಾರ ಮಾಡಿದೆನು. ಈ ನಿರ್ಣಯದಿಂದ ನನಗೆ ಸಮಾಧಾನವೆನಿಸಿತು. ಗೋಖಲೇಯವರ ಬಳಿ ಹೋಗಲು ನನಗೆ ಭಯವೆನಿಸಿತು. ಆದರೆ, ಅವರು ನನ್ನ ನಿರ್ಣಯವನ್ನು ಮನ್ನಿಸುವರೆಂದು ನನಗೊಂದು ನಂಬಿಗೆ ಇತ್ತು.

ಸಾಯಂಕಾಲಕ್ಕೆ ನಾನೂ, ಕಾಲೆನಬಾಕ್‌ರೂ ನೆಶನಲ್ ಲಿಬರಲ್ ಕ್ಲಬ್ಬಿನಲ್ಲಿ ಗೋಖಲೇಯವರಿಗೆ ಭೆಟ್ಟಿಯಾದೆವು. ಮೊಟ್ಟಮೊದಲು ಅವರು ನನಗೆ ಕೇಳಿದ ಮೊದಲನೇ ಪ್ರಶ್ನೆ ಏನಂದರೆ — “ಒಳ್ಳೇದು ಡಾಕ್ಟರರ ಹೇಳಿಕೆಯಂತೆ ನಡಕೊಳ್ಳಲು ನೀವು ನಿರ್ಧರಿಸಿದಿರೇನ?”

ವಿನಯದಿಂದಲೂ, ಸ್ಥೈರ್ಯದಿಂದಲೂ ನಾನು ಉತ್ತರ ಕೊಟ್ಟದ್ದೇನಂದರೆ — ‘ಎಲ್ಲ ವಿಷಯಗಳಲ್ಲಿ ನಿಮ್ಮಂತೆ ನಡಕೊಳ್ಳಲು ನಾನೊಪ್ಪುತ್ತೇನೆ. ಆದರೆ, ಒಂದು ಮಾತ್ರ ಅಪವಾದವಿದೆ. ಆ ವಿಷಯ ತಾವು ನನಗೆ ಆಗ್ರಹ ಮಾಡಬಾರದಾಗಿ ನನ್ನ ಪ್ರಾರ್ಥನೆ ಇದೆ. ಹಾಲನ್ನು ನಾ ಸೇವಿಸಲಾರೆ. ಹಾಲಿನ ಜೀನಸುಗಳನ್ನಾಗಲಿ ಮಾಂಸವನ್ನಾಗಲಿ ನಾನು ಸೇವಿಸಲಾರೆ. ಇವನ್ನು ಸೇವಿಸದೆ ನನಗೆ ಮರಣಪ್ರಾಪ್ತಿಯಾಗುವದಾದರೂ ಅದಕ್ಕೆ ಸಿದ್ಧನಾಗಬೇಕೆಂದು ನನ್ನ ಭಾವನೆಯಾಯಿತು.’

ಗೋಖಲೇಯವರು ಪ್ರಶ್ನಿಸಿದ್ದೇನಂದರೆ — “ಇದೇ ನಿಮ್ಮ ಕೊನೆಯ ನಿರ್ಣಯವೇನ?”

ನಾನು ಉತ್ತರ ಕೊಟ್ಟದ್ದೇನಂದರೆ — ‘ಬೇರೆ ನಿರ್ಣಯ ಬರಲು ನನಗೆ ಆಸ್ಪದವಿಲ್ಲ. ನನ್ನ ನಿರ್ಣಯದಿಂದ ತಮಗೆ ವ್ಯಸನವೆನಿಸುವದೆಂದು ನಾನರಿತಿದ್ದೇನೆ. ನನಗೆ ಕ್ಷಮೆ ಇರಬೇಕು.”

ಗೋಖಲೇಯವರಿಗೆ ಕೆಲಮಟ್ಟಿಗೆ ದುಃಖವಾಯಿತು. ಆದರೆ, ಹಾಗೆಯೇ ನನ್ನ ಮೇಲಿನ ಪ್ರೇಮವಾದರೂ ಹೆಚ್ಚಿತು. ಅವರು ನುಡಿದದ್ದೇನಂದರೆ — “ನಿಮ್ಮ ನಿಶ್ಚಯವು ನನಗೆ ಮಾನ್ಯವಿಲ್ಲ. ಅದರೊಳಗೆ ಧರ್ಮಕಲ್ಪನೆಯೇನು ನನಗೆ ಕಾಣುವದಿಲ್ಲ. ಆದರೆ, ನಿಮಗೆ ಇನ್ನು ಮುಂದೆ ನಾನು ಆಗ್ರಹ ಮಾಡಲಾರೆ.” ಹೀಗೆ ಹೇಳಿ, ಅವರು ಡಾ। ಜೀವರಾಜ ಮೇಹತಾರವರಿಗೆ ನುಡಿದದ್ದೇನಂದರೆ — “ಇವರಿಗೆ ಇನ್ನು ಉಪದ್ರವ ಕೊಡಬೇಡಿ, ಅವರ ಕ್ರಮಗಳನ್ನು ಲಕ್ಷಿಸಿ, ನಿಮಗೆ ಯೋಗ್ಯ ಕಂಡ ಉಪಚಾರಗಳನ್ನು ಕೈಕೊಳ್ಳಿರಿ.”

ಡಾಕ್ಟರರಿಗೆ ಇದು ಸೇರಲಿಲ್ಲ. ಆದರೆ, ಅವರು ಮಾಡುವದೇನು? ಹೆಸರುಕಾಳಿನ ರಸಾಯನದಲ್ಲಿ ಹಿಂಗನ್ನು ಬೆರಸಿಕೊಳ್ಳಲು ನನಗವರು ಹೇಳಿದರು. ನಾನೊಪ್ಪಿದೆ. ೧-೨ ದಿನ ಅದನ್ನು ಸೇವಿಸಿದೆ. ಆದರೆ, ಅದರಿಂದ ಕೂರೆಯು ಹೆಚ್ಚೆನಿಸಿತು. ನನಗೆ ಅದರಿಂದ ಅಪಾಯವಾದದ್ದರಿಂದ ಫಲಾಹಾರವನ್ನೇ ನಾನು ಕೈಕೊಂಡೆನು. ಡಾಕ್ಟರರು ಬಾಹ್ಯೋಪಚಾರಗಳನ್ನು ನಡಿಸುತ್ತಿದ್ದರು. ಅದರಿಂದ ನೋವು ಕೆಲಮಟ್ಟಿಗೆ ಸಮಾಧಾನವಾಯಿತು. ಆದರೆ ನನ್ನ ಪ್ರತಿಬಂಧಗಳಿಂದ ಅವರಿಗೆ ಬಹಳ ಅತೃಪ್ತಿಯಾಯಿತು. ಲಂಡನಿನಲ್ಲಿ ಅಕ್ಟೋಬರ ತಿಂಗಳೊಳಗೆ ಮಂಜು ಬೀಳುತ್ತದೆ. ಅದನ್ನು ಸಹಿಸಲಾರದೆ, ಅವರು ಸ್ವದೇಶಕ್ಕೆ ಮರಳಿದರು.

— ಹೊಸ ವರುಷದಲ್ಲಿಯೂ ಪ್ರಜೆಗಳಿಗೆ ಕೆಲ ಕರಗಳನ್ನು ಕಡಿತ ಬಿಡದಿದ್ದ ಬಗ್ಗೆ ಸರಕಾರದ ವಿಶ್ರಂಭಸ್ಥಾನವಾದ ಪ್ರಯಾಗದ ಪಾಯೋನಿಯರ್ ಪತ್ರಿಕೆಯೂ ಹಿಂದುಸ್ಥಾನ ಸರಕಾರಕ್ಕೆ ದೂರದ ಸರಕಾರಕ್ಕೆ ವಿಷಾದ್ಯವು ವಿ ... ಗೊತ್ತೇ ಇಲ್ಲವಾಗಿಯೂ ಪಾಯೋನಿಯರ್ ಪತ್ರಿಕೆಯ ಅಂಬೋಣ. ಈಗಾದರೂ ರಾಜ್ಯನಿರ್ವಾಹಕರು ಎಚ್ಚರವಡಬಹುದಲ್ಲವೇ!

ಯುಗಾದಿಯ ಪವಿತ್ರ ಹಬ್ಬ ಇದೇ ಬಂತು!

ನಿಜವಾದ ಗ್ಯಾರಂಟಿಯುಳ್ಳ
ಮೂಲ “ವೆಸ್ಟ ಎಂಡ್” ಘಡಿಯಾರಗಳನ್ನು
ಕೊಳ್ಳಿರಿ
ಯಾಕೆ?
ನಿಮ್ಮ ಕಸ್ಟಮರರಿಗೆ ನಿಮ್ಮ ರಣೆಯ ಪ್ರೀತಿಪೂರ್ವಕವಾಗಿ ಆಗಬೇಕೆಂದಿದ್ದರೆ ಅವರಿಗೆ ‘ವೆಸ್ಟ ಎಂಡ್’ ಘಡಿಯಾರಗಳನ್ನು ಕೊಡಿರಿ
ನಿಮಗೆ ಸ್ವಂತ ಉಪಯೋಗಕ್ಕಾಗಿ ಸರಿಯಾಗಿ ಟಿಕ್ಕುವ ತೋರಿಸುವ ಉತ್ತಮ ಪ್ರತಿಯ ಹಾಗು ಬಾಳಿಕೆಯ ಘಡಿಯಾರ ಬೇಕಾದರೂ, ‘ವೆಸ್ಟ ಎಂಡ್’ ಘಡಿಯಾರಗಳನ್ನೇ ಕೊಳ್ಳಿರಿ
ಸಾವಿರಾರು ಕಡೆಗಳಲ್ಲಿ ಜಾಹೀರಾತು ಕೊಟ್ಟ ಕನಿಷ್ಟ ಪ್ರತಿಯ ಘಡಿಯಾರ ಗಳನ್ನು ಕೊಂಡು, ಸುಮ್ಮನೆ ಮೋಸಹೋಗಬೇಡಿ, ಆ ಘಡಿಯಾರಗಳಲ್ಲಿ ಅಟಕ ಸಾಮಾನುಗಳು, ನಿಮ್ಮ ಹಣವು ನಿರರ್ಥಕವಾಗುವದು!

ವೆಸ್ಟ ಎಂಡ್- “ಕೀಪ ಸೇಕ”
ರಿಸ್ಟ್, ಲಿವ್ಹರ



ನಿಕಲ್ ಸಿಲ್ವರ	.. ರೂ.	೨೨
ರೋಲ್ಡ-ಗೋಲ್ಡ	.. ,,	೪೨
೯ ಕ್ಯಾರೆಟ ಭಂಗಾರದ್ದು	,,	೫೦
೧೨ ಕ್ಯಾರೆಟ ಭಂಗಾರದ್ದು	,,	೭೦

ಸರಿಯಾಗಿ, ತಪ್ಪದೆ ವೇಳೆ ತೋರಿಸುವ ಘಡಿ. ಕ್ಯಾಟಲಾಗು ಉಚಿತ!

ಮುಂಬಯಿ, ವೆಸ್ಟ ಎಂಡ ವಾಚ್ ಕಂಪನಿ, ಕಲಕತ್ತಾ

ವೃತ್ತಸಾರ.

— ಗಾಂಜಿಯ ಒಳ ಪ್ರಸ್ಥ ಸರಿಸುತ್ತ ಬಿ... ಇವರು ಒಟ್ಟರ ಹಿಂಬಾಲಿಸುತ್ತ ... ನದಿಗೆ ... ಸಜ್ಜನರ ... ಅಷ್ಟರಲ್ಲಿ ... ಕಾಲ ಜಾರಿ ಅವಳು ನದಿಯಲ್ಲಿ ಬಿದ್ದಳು. ಅವಳ ... ವರಸ್ತ್ರೀಯು ಅವಳಿಗೆ ಹಿಡಿಯಹೋದಳು, ಅವಳೂ ... ನದಿಯಲ್ಲಿ ಬಿದ್ದಳು. ಅನಸೂಯಾ ನದಿಯ ಮೇಲೆ ನಿಂತಿದ್ದ ... ಅವರನ್ನು ಬದುಕಿಸಿಕೊಳ್ಳಲು ಅವಳು ಹೋದಳು, ಅವಳನ್ನೂ ಬ್ರಹ್ಮಪುತ್ರೆಯು ನುಂಗಿಕೊಂಡಿತು. ಅಯ್ಯೋ ... ಪ್ರವಿಷ್ಟರ ಹಣೆಗೆ ನೋಡಿದರೆ, ಆಯುಷ್ಯವಿದ್ದವರು ... ನಷ್ಟರಾಗಬೇಕಾಗುತ್ತದಲ್ಲವೇ!

— ಕರ್ಣಾಟಕ ಪತ್ರಿಕೆಯನ್ನು ಹೊರಡಿಸುವ ಶ್ರೀ ... ರಾಮಚಂದ್ರರಾಯರ ಮುದ್ರಣಾಲಯವನು ... ಸರಕಾರವು ಮುದ್ರಣ ಕಾನೂನಿನನ್ವಯ ಒಪ್ಪಿ ... ಇನ್ನೊಂದು ಮುದ್ರಣಾಲಯವನ್ನು ಅವ... ಸ್ಥಾಪಿಸಿದರು ಅದು ಜಪ್ತ ಮಾಡಲಾಗಿದೆ! ಮೈಸೂರ ಸರಕಾರವು ಇಷ್ಟು ನಿರಂಕುಶನಾಗಲು ಛೂ... ...

— ಮೋಟಾರು ಮೈಸೂರಿನಿಂದ ಸರಸಿಪುರಕ್ಕೆ ಹೋಗು... ...ದ ಅಪಘಾತ ಒಳ ಬೆಂಕಿ ಹತ್ತಿತು ... ಒಮ್ಮೆಲೇ ಹೊರಕ್ಕೆ ಹಾರಿಕೊಂಡರು ... ಮೋಟಾರು ಕೆರೆಯನ್ನು ... ಹಾರಿದೊಡನೆ, ಮೋಟಾರು ಅರ್ಧ ದಾರಿಗೆ ... ಆಳು ಅಡಿ ದುಮು ಕಿತು ... ಬೆಂಕಿ ತಗಲಿ ... ಸುಟ್ಟು ಬೂದಿ, ಸಾಲ್ವರು ... ಸುಟ್ಟು ತಿರುಕೊಂಡರು ಉಳಿದವರಿಗೆ ಘಾಯಗಳು ... ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಲಿದ್ದಾರೆ ... ತೀರಿಕೊಂಡ ...

ಉಪ್ಪಿನ ತೆರಿಗೆಯನ್ನಾದರೂ ರದ್ದುಪಡಿಸಲು ಲೋಕ... ಸಭಾಸದರು ಶಾಸನ ಕಾಯಿದೆ ಕೌನ್ಸಿಲಿನಲ್ಲಿ ... ಸಬೇಕಾಗಿ ಮುಂಬಯಿಯ ... ಪತ್ರಿಕೆ ... ಆಗ್ರಹ ಮಾಡಿರುತ್ತದೆ ಸರಕಾರವು ನೇಮಿಸಿದ ... ಏನ್‌ಕ್ವಾಯರಿ ಎಂಬ ಕರ ಶೋಧನೆಯ ಮಂಡಳ... ಈ ತೆರಿಗೆಯನ್ನು ರದ್ದುಪಡಿಸಲು ... ಮಾಡಿತ್ತು ... ರೂಪಾಯಿಯಿಂದ ... ಆಗಬೇಕಾಗಿ ಆ ಮಂಡಳದ ಶಿಫಾರಸು

— ಬಂಗಾಲದ ಸತ್ಯೇಂದ್ರಪ್ರಸನ್ನ ಸಿಂಹ ದೊರೆಗಳ ... ಪ್ರವಾಸಕ್ಕೆ ಹೋದಾಗ ಹೃದಯಕ್ರಿಯೆ ನಿಂತು ತೀ... ಇವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ... ನೌಕರಿಗಳ ಅರಗತಿಯಲ್ಲಿ ಸೇರಿ ಬಿಹಾರ ಪ್ರಾಂತದ ... ಹುದ್ದೆಯ ತನಕ ಏರಿಹೋದ ಭಾರತೀಯರು!

— ಚೀನ ದೇಶದ ಪೀತ ನದಿಯು ಉಕ್ಕೇರಿ ಬಂದು. ೨೦ ... ಜನರು ನಿರಾಧಾರರಾಗಿದ್ದಾರೆ

— ಕಲಕತ್ತೆಯ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಅಧ್ಯಾಪಕರಾದ ರಾ। ನಿರಂಜನಚಕ್ರವರ್ತಿಯವರು ಕುಮಾರಿ ... ಎಂಬ ಆಯರ್ಲಂಡದ ಯುರೋಪಿಯನ್ ... ಮದುವೆಯಾಗಿದ್ದಾರೆ ಕುಮಾರಿ ... ಅವರಿಗೆ ಹಿಂದು ಧರ್ಮದಲ್ಲಿ ಸೇರಿಸೋಣಾಯಿತು ... ದಲ್ಲಿ ಅಧ್ಯಾಪಕರಿಗೆ ತಕ್ಕ ಹೆಣ್ಣುಗಳಿಲ್ಲವೇ?

— ... ಮಹಾರಾಜರ ಪ್ರಥಮಪುತ್ರನಾದ ಕು... ವಿಲ್ಲರಳವಳು ನಾಸಿಕದಲ್ಲಿ ಗುರುವಾರಕ್ಕೆ ಕರವೀರ ... ಶ್ರೀ ಶಂಕರಾಚಾರ್ಯರ ಸನ್ನಿಧಿಯಲ್ಲಿ ಪ್ರಾಯಶ್ಚಿತ್ತವನ್ನು ಪಡಕೊಂಡು ಇಂದೂರಿಗೆ ತೆರಳಿದಳು. ... ಹೋಳಕರರು ಇನ್ನೂ ಅಸ್ವಸ್ಥರಿದ್ದಾರೆ ಕಲಕತ್ತೆಯಲ್ಲಿ ... ಔಷಧೋಪಚಾರ ಪಡೆಯುತ್ತಿದ್ದಾರೆ. ಮದುವೆಯು ... ನಾರಿನ ಬಳಿ. ಹುರುಮಾ ಎಂಬ ಗ್ರಾಮದಲ್ಲಿ ನಡೆಯುವದು

ಮುಂಬಯಿಯ ಸೆಂಟ್ರಲ್ ಬ್ಯಾಂಕಿನ ಮುನೇಜರು ... ದ ಬೇರಿನ ಅಧಿಕಾರಿಗಳು ಸುಳ್ಳು ಲೆಕ್ಕದ ಪತ್ರಿಕೆಗಳನ್ನು ತಯಾರಿಸಿದರೆಂದು ಅವರ ಮೇಲೆ ಕಂಪನಿಯ ಕಾಯಿದೆಯಂತೆ ಖಟ್ಲೆ ನಡೆದು ಅವರಿಗೆ ... ದಂಡ ಹಾಗು ೧ ದಿನದ ಸಾದಾ ಕಾರಾಗೃಹವಾಸ ಪ್ರಾಪ್ತವಾಯಿತು. ಆರೋಪಿಗಳೆಲ್ಲರೂ ಸಾವಿರಾರು ರೂ...

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು-

(೧) ಹುಬ್ಬಳ್ಳಿ- ಯಲ್ಲಾಪುರ - ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ಪಕ್ಕಾ ವಿಚಾರದ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. **M. Manjappa.** PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುವದು ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮೂಲದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ... ತರುಣರಂತೆ ಪದಾರ್ಥ ವರ್ಧನವಾಗುವದು ನಿಜವಾಗಿ ಒಂದೇ ಸಲಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ... ನಪುಂಸಕತ್ವವು ಇಲ್ಲದಂತಾಗುವದು ... ವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ ಸ್ತಂಭನವಾಗುವದು.— ಪರಮಾ ಹಾಗೂ ... ದೂಷಿತವಾದ ಶರೀರವು ನಿರೋಗವಾಗುವದು ಮೂರೇ ದಿವಸದಲ್ಲಿ ಗುಣ ಬರುವದು ... ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ... ಗುಣ ಪರೀಕ್ಷೆ ಮಾಡಬೇಕು ಅದರಿಂದ ಕ್ಷಯರೋಗ ಉದರರೋಗ ... ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುವದು, ಇದರ ಅನುಭವವು ಮೊದಲನೇ ದಿವಸವೇ ಬರುವದು ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ... ಹೊಸ ಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವದು ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ ... ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧ ೪ ೦ ೩ ಬಾಟ್ಲಿಗೆ ೩-೮-೦ ... ೧೨-೦-೦

ಮ್ಯಾನೇಜರ--- ದ್ರಾಕ್ಷಾರ್ಕಮಧು ಆಫೀಸ, ಶ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ನಿಪ್ಪಾಣಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ಸ್ವರ್ಣ ರಜ] ವಜ್ರಾಂಗ ಸುಂದರಪಾಕ.

ವೀರ್ಯವು ತೆಳುವಾಗ ವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತೆ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕ್ಷೋಭದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ... ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ... ಆಗುವದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕ ಆಗುತ್ತದೆ ... ರತಿಸುಖ ಬಯಸುವಂಥವರು ಹಿಂದಾಪತೀ ತಕ್ಕೊಂಡು ಅನುಭವಿಸಿರಿ (೫೨) ವನಸ್ಪತಿಗಳು ... ಭಕ್ಷಿಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಪ್ರಕಾಶ್ಯಮಾಡಿರುತ್ತದೆ ಓದಿಕೊಳ್ಳಿರಿ

ಮುಂಜಾನೆ ೨ ತೊಲಿ ಅಥವಾ ೧ ವಡಿ, ರಾತ್ರಿಯ ಭೋಜನಾಂತರ ನಂತರ ೨ ತೊಲಿಯ ಒಂದು ವಡಿ ... ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ... ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ೭೦ ೧೨ ಡಬ್ಬಿಗೆ ೫೧ ರೂ. ವ್ಹಿ ಪಿ ಖರ್ಚು ಬೇರೆ, ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಸನ್ನಿಪಾತ ಪೂರ್ಣ ಗುಣಬರುವದು.

झंडूचे

द्राक्षासव-

एक रत्तलास
किमत १॥ रुपये,

रामबाण औषध

सर्दि घालविणारें
मूक घालविणारें
शौच्यास साफ करणारें
झोप आणणारें,
शक्ति देणारें
तेजस्वीपणा आणणारें

पिण्यास रुचिकर

कॅटलाग मागवा,

झंडु फार्मास्युटिकल वर्क्स लिमिटेड

मुंबई नं. १४

ऐजन्ट— मेसर्स पंडित आणी कंपनी,
तीर्थहळ्ळी

सिर्सि एजंट एस एल धाकप्पा आणि ब्रदर्स

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯಾವರ

ಸುಗಂಧಿ ನಸ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿ

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸ. ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಗ್ರತ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮಾರು ಬೆಲ್ಲನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

ಬಾಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦, ವ್ಹಿ ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ –ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಕಿರ್ಲೋಸ್ಕರ ಕನ್ನೂಲ ಗಾಣ.



ಶೇಕಡಾ ೭೫ ರಿಂದ ೭೦ ರ ವರೆಗೆ
ರಸ ಹೊರಡುವದು

ಗಂಟೆಯೊಂದಕ್ಕೆ ೧೧೦೦ ಪೌಂಡ
ಕಬ್ಬನ್ನು ಹಿಂಡುವದು

ಬೆಲೆ ೨೯೦ ರೂ. ಕೂಪ್ಲೆ ಡಿಲಿವ್ಹರಿ

ಶಿರಸಿಯಲ್ಲಿ ಎಸ್. ಎಲ್ ಧಾಕಪ್ಪಾ ಮತ್ತು ಬ್ರದರ್ಸ್, ಇವರಲ್ಲಿ ಸಿಗುವದು.

ರಚನೆ— ಈ ಗಾಣದಲ್ಲಿಯ ಎಲಕ ಹೊಂಡ್ಡು ಭಾಗಗಳು ಅರ್ಧ ಉಕ್ಕಿನಿಂದ ಕೂಡಿದ ಧಾತುವಿನಿಂದ ತಯಾರಾಗಿರುತ್ತವೆ. ಕಣಿಗಳ ಎತ್ತರ ೧೧ ಇಂಚು, ಆಕ್ಸಲ್ ಗಳು ಕೈನವು ಚಕ್ರ, ಸ್ಪಲ್, ರೋಲರ ಇವು ಬೇರೆ ಬೇರೆ ಇರುತ್ತವೆ ಬೇಅರಿಂಗ ಗಳು ಮೆಟಲ್ ದವು ಇರುತ್ತವ. ಎಂತೆಯು ಸತತವಾಗಿ ನಿಲ್ಲುವದಕ್ಕೆ ಏರ್ಪಾಡು ಮಾಡಿರುತ್ತೇವೆ ಬಸವಳಿಯಲ್ಲಿ ಸುಧಾರಣೆ ಮಾಡಿರುತ್ತದೆ

ವೈಶಿಷ್ಟ್ಯ— ಕಣೆಗಳು ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಅಡಕಿನಲ್ಲಿ ಸಿಕ್ಕು ಕಡೆಗೆ ಬರುವದರಲ್ಲಿ ಹಿಂದಿ ಹಿಪಿಯಾಗಿ ಬರುವದು ಮಿಕ್ಕ ಗಾಣಗಳಂತೆ ಇಬ್ಬರು ಬೇಕಾಗದೆ ಒಬ್ಬನಿಂದಲೇ ಸಾಗುವದು. ನಾಲ್ಕು ಎತ್ತುಗಳು ಬೇಕು

ಅಭಿಪ್ರಾಯ— "ಕನ್ನೂಲ ಗಾಣದಿಂದ ಸಿಪ್ಪಿಯಲ್ಲಿ ವ್ಯರ್ಥ ಹೋಗುವ ರಸ ದಿನಕ್ಕೆ ನಾಲ್ಕು ೩॥ ಮಣ ಬೆಲ್ಲ, ಅಂದರೆ ೧೦ ರೂ. ಲಾಭವಾಯಿತು ೨೪ ದಿವಸ ಗಾಣವಾಡಿತು ನನಗೆ ಒಟ್ಟು ೨೪೦ ರೂ. ಲಾಭವಾಯಿತೆಂದು ತಿಳಿಸಲು ಆನಂದ ವಾಗುತ್ತದೆ ತಮ್ಮ ರಾಜನಗೌಡಾ ಪಾಟೀಲ, ಸದಲಗಿ ಜಿ ಬೆಳಗಾಂವ"

ಕಿರ್ಲೋಸ್ಕರ ಬಂಧು ಲಿಮಿಟೆಡ್;

ಕಿರ್ಲೋಸ್ಕರವಾಡಿ
ಜಿ. ಸಾತಾರಾ.

ಹಿಂದುಸ್ಥಾನದಲ್ಲೆಲ್ಲಾ ಅತ್ಯಂತ ಅಗ್ರವಾದ
'ನವಸಲ್ ಇನ್‌ಶೂರನ್ಸ್ ಕಂಪನಿ (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ಪ್ರತಿ ವರ್ಷ ಒಂದು ಕೋಟಿಯಷ್ಟು ಲೈಫ್ ಇದೆ ಕಳೆದ ವರ್ಷ ಬೋನಸ್ ದರದ ಮೇಲೆ ೧ 10,114 ರೂಪಾಯಿಗಳ ಲಾಭವು ದೊರೆತಿದೆ.

ಎಂಡೊವ್ಮೆಂಟ ಪತ್ರಗಳ ಮೇಲೆ ವರುಷಕ್ಕೆ ! ಆಯುಷ್ಯ ಪರ್ಯಂತರ, ಫೂರ್ತಿ ಜೀವ ವಿಮೆ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿ ಸಂಖ್ಯೆಯ ಬೋನಸ್ ಕೊಟ್ಟಿರುವದು

ಹೊರಗಡೆ 1000 ರೂಪಾಯಿಗಳ ವಿಮೆ ಎಷ್ಟು ಕಂತು ಕೊಡಬೇಕೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಬಹುದು ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕರಡುಪತ್ರಗಳೂ ವಿಚಾರಿಸಬೇಕು

ಕನಾ೯ಟಕಕ್ಕೆ ಏಜಂಟರು – **P D Churi,**
ಬಿ ಪಿ ಸಿರಾಳಕೊಪ್ಪ, *Branch Secretary,*
ಕೊಪ್ಪಿಕರ ಬಿಲ್ಡಿಂಗ, Alice Building
ಹುಬ್ಬಳ್ಳಿ *Hornby Road,*
BOMBAY

S U. Narayanacharya & CO
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರಿಕ್ಷ್ಮ ಹಿತ್ತಾಳೆ, ಬಂಗಾರ, ಬೆಳ್ಳಿ, ಗಂಧದ ಕಟ್ಟಿಗೆ, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸಾಲಿಗ್ರಾಮ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು

ವಿಳಾಸ – ಶಿರೋಮಣಿ ನಾರಾಯಣಾಚಾರ್ಯ

ನ. ಶಾ. ಶಂಕರ ಬಿ. ಕಾಶಿಕ್ಷೇತ್ರ



ಅಮೃತಾಂಜನದ

ಬಾಹ್ಯಲೇಪನದಿಂದ
ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, ಚಳಿ, ಕೆಮ್ಮು, ಹುಟ್ಟುಗಾಯ ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣ ಸಿಗುತದೆ. ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದು ' ನೋವು ಚಿಕ್ಕದೆಂದು ಯಾರೂ ತಿರಸ್ಕರಿಸಲಾಗದು. ಚಿಕ್ಕ ನೋವಿನಿಂದಲೇ ದೊಡ್ಡ ಅನಾಹುತಗಳಾಗುತ್ತವೆ ಅದರಿಲ್ಲ ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಇಂಥ ನೋವುಗಳನ್ನು ಕ್ಷಣದಲ್ಲಿ ಪರಿಹರಿಸಬಹುದು. ಬೆಲೆ ರೂ ೦—೧೦—೦

ಎಲ್ಲ ಕಡೆಯ ಔಷಧ ವ್ಯಾಪಾರಿಗಳಲ್ಲಿ ದೊರೆಯುವದು

ಅಮೃತಾಂಜನ ಡಿಪೋ,
ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, MARCH 19TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೩

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು:

ರೂಪಾಯಿ 2-4-0.

ಮನೆಯಾರ್ದರಿಯಿಂದ.

ರೂ. 3-0-0.

ವಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ

ಪೈಕಿನ (೧೫ ಎಮ್ ಉದ್ದ)

೮ ಸಾಲುಗಳವರೆಗೆ ರೂ. 1-0-

೮ ಸಂತ್ರ ಪ್ರತಿಸಾಲಿಗೆ 0-2-0.

ಪಿಕಿಂಗದ ಸಾಲು ಎಷ್ಟು

ಹೊಕ್ಕಿರುವದೋ ೮ ಮಾನ

ದಿಂದ ಅಷ್ಟು ಸಾಲುಗಳು ಹಿಡಿ

ಯಲ್ಪಡುವವು.

ಬಾಕಿ ಜಾಹೀರಾತುಗಳ ಬಗ್ಗೆ

ಪತ್ರದ್ವಾರಯು ಕರಾರು ಮಾಡಿ

ಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೯ ಮಾಹೆ ಮಾರ್ಚ ಸನ್ ೧೯೨೩ನೇ ಇಸವಿ.)

ಹೊಸ ಅಂಗಡಿ! ಹೊಸ ಮ್ಹಾಲು!!

ಕುಮಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ತರಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟಂಟ ಔಷಧಗಳು, ಕಾಜಿನ ಸಾಮಾನು, ಮುಂತಾದ ಎಲ್ಲ ಥರವಾರ ಮ್ಹಾಲು ಬಹು ಅಗ್ಗವಾಗಿ ದೊರೆಯುತ್ತವೆ!

ಚಿರಕೋಳ ವ್ಯಾಪಾರಿಗಳಿಗೂ ಮುನಾಫೆ ಸಿಗುವಂತೆ ಸ್ಪೇಶಲ್ ಹೋಲ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮ್ಹಾಲು ಪಡೆಯಲು ಶೀಘ್ರವಾಗಿ ಆತುರಗೊಳ್ಳುವಿರಿ!!!

—

ಪತ್ತುರಾವ ಕೇಶವ ಗ್ವಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನ್ನಡ)

[ಉಚಿತ] ನನ್ನ ಶಾಸ್ತ್ರೀಯವಾದ [ಉಚಿತ]

ಶಾರೀರಕ ಶಿಕ್ಷಣ.



ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯದ ಲಾಭವನ್ನು ತೆಗೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನು ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ.

ಜಿ. ವಿ. ಸೇಲಂಗಿ ಮೋಟಾರ ಸರ್ವೀಸ.

ಕುಮಟಾ—ಶಿರ್ಶಿ



ಶಿರ್ಶಿ—ಕುಮಟಾ

ಡೇಲಿ ಮೋಟಾರ ಸರ್ವೀಸ ಪ್ರಾರಂಭವಾಗಿರುವದು

ಅಲ್ಲದೆ, ಈ ಸರ್ವೀಸು ಶಿರ್ಶಿಯಿಂದ ಹುಬ್ಬಳ್ಳಿ, ಹುಬ್ಬಳ್ಳಿಯಿಂದ ಬೆಳಗಾಂವ ವರೆಗೂ ಸಹ ಇದೆ, ಸ್ಪೇಶಲ್ ಭಾಡಿಗೆಗೆ ಬೇಕಾದವರು ಒಂದು ದಿವಸ ಮುಂಚಿತ ತಿಳಿಸಬೇಕು.

ಟಿಕೀಟಿನ ದರ:— ಸೋಯಿ! ಅತಿ ಸೋಯಿ!! ಎಲ್ಲರಿಗಿಂತಲೂ ಸೋಯಿ!!!

ಬೇಕಾದಲ್ಲಿಯ ಟಿಕೀಟುಗಳೂ, ವಿಶೇಷ ಮಾಹಿತಿಯೂ ಕುಮಟಾ ಏಜಂಟ ಜಾನಪ್ಪಾ ರಾಮನಾಯ್ಕ ಮಾದಗಾಂವಕರ ಇವರ ಕಡೆಗೆ ಸಿಗುವವು.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात

माल चोख— फॅशनेबल— स्वस्त— व भरपूर

[illegible]शिवाय [illegible]

आमच्या स्वंत हातमागांवरील नानातऱ्हेच्या डिझायनचीं रंगी-बेरंगी चादरें, फॅशनेबल बाथ टॉवेल, [illegible]-मोठे पंचे, सीडपाट, चीन्टपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून [illegible]

टीप:—आमच्या कोणत्याहि मालावर घाऊक [illegible] भरपूर कमिशन दिलें जाईल.

पत्ता:— मेसर्स गोविंद मा[illegible]राणवि, फ्रेवकार ॲंड सन्स.

पोस्ट— मुंकेरि (कारवार.)

ಹೊಸ ಪಂಚಾಂಗ.

ಬಗ್ಗೋಣರಾಮಾ ತಿಮ್ಮಣ್ಣಾ ಪಂಡಿತರವರಿಂದ

ಗುಣಿಸಿ ಪರಿಶೋಧಿಸಲ್ಪಟ್ಟ

ವಿಭವ ಸಂ॥ ದ

ಪಂಚಾಂಗವು.

ಮಾರಾಟಕ್ಕೆ ಸಿದ್ಧವಾಗಿದೆ.

ಪ್ರತಿ ೧ ಕ್ಕೆ ರೂ ೦—೩—೦.

ಪ್ರತಿ ೨೫ ಕ್ಕೆ ರೂ. ೩—೮—೦

ಪ್ರತಿ ೫೦ ಕ್ಕೆ ರೂ. ೬—೮—೦

ಪ್ರತಿ ೧೦೦ ಕ್ಕೆರೂ ೧೨—೦—೦

☞ ಪಂಚಾಂಗಗಳನ್ನು ವ್ಹಿ. ಪಿ ಯಿಂದ ಅಪೇಕ್ಷಿಸುವವರು ರೂ. ೨-೦-೦ ಮುಂಗಡ ಕಳಿಸಬೇಕು.

ಪತ್ತೆ:- ಮೆನೇಜರ,

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ.

ಗೋಪಾಳ ಸಖಾರಾಮ

ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ. ವ್ಯಾಪಾರ ಸಾಮಾನುಗಳನ್ನು ಅಗ್ಗವಾಗಿ ಯ... ... ರ ಗು ರೆಯಿಕ ಖರೀದಿ ಮಾಡಿ ಕಳಿಸುತ್ತೇವೆ. ಪಗಾರಿ ಹೆಚ್ಚಿಗೆ ಕೊಳ್ಳುವದಿಲ್ಲ, ಖರೀದಿ ಚೌಕಶಿಯಿಂದಾ ಗುವದು, ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪ ಡುವದು. ಗಿರಾಕಿಗಳಿಗೆ [illegible]ಕೂಲವಾಗುವಂತೆ ಯೂ, ಲಾಭವಾಗ ವಂತೆಯೂ [illegible]ರಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಾಗದ ಬರೆದು ತರಿಸಿಕೊಳ್ಳಿ. ಉಚಿತವಾಗಿ ಕಳಿಸು

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟ ರಿಜಿಸ್ಟರಾಗಿದೆ.)

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು, ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವ್ಮೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋರ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧವಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ ಪೇನಾ ೧, ಹೇರಾಯಿಲ್ ಬಾಟ್ಲಿ ೧ ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಬಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್ಲೇಸ್ ಎಂಬ ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ, ಬರೇ ರೂ.೪-೮-೦

ವಿಳಾಸ — **ಇಂಗ್ಲೀಷ ಎಂಪೋರಿಯಂ,**

ಪೋಸ್ಟ ಬಾಕ್ಸ ನಂ ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯಿತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನಂಥ ನಿಬ್ಬು ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.

ವಿಳಾಸ — ಸೀಟಿಜನ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೬ ಮದರಾಸು.

ಕಲ್ಪತರು ಮಿಶ್ರಣ

ಮಲೇರಿಯಾ ಸ್ಪೆಸಿಫಿಕ್

ಎಂದರೆ,

ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ತಿಳಿಯಬಹುದು:-

ವಿಷ ಕಲ್ಪತರುನಾಮ ರಸಃ ಪರಮ ದುರ್ಲಭಃ । ಅಸಾಧ್ಯಂ ಚಿರಕಾಲೋತ್ಥಂ ಜೀರ್ಣಂ

ಚ ವಿಷಮ ಜ್ವರಮ್ । ಹಂತಿ ಜ್ವರಾತಿಸಾರಂ ಚ ಗ್ರಹಣೀಂ ಪಾಂಡು ಕಾಮಲಾಮ್ ॥

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಶ್ರೇಯದಾಯಕವೆಂದು ಸಿದ್ಧವಾಗಿರುತ್ತದೆ. ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗೆ ರೂ. ೧-೬-೦.

ನಮ್ಮ ಪತ್ತೆ:- **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸವರ್ಣ ಫಾರ್ಮಸಿ, ಗಡ್ಡಕೇರಿ, ಮಂಗಳೂರು

ಕುಮಟಾ ಏಜಂಟ. — ಕೊಂಬಾಗ ಮಾಧವ ರಾಮ ಶ್ಯಾನಭಾಗ.

ಮುಂಬಯಿ ಕಾಯಿದೆ ಕೌನ್ಸಿಲು.

(ಪ್ರಶ್ನೋತ್ತರಗಳಿಂದ ಸಂಗ್ರಹಿಸಿದ ಮಾಹಿತಿ.)

ಬೇಸಾಯಗಾರರು.

ಮುಂಬಯಿ ಇಲಾಖೆಯ ಶೇಕಡಾ ೬೪ರಷ್ಟು ಜನರ ಬೇಸಾಯದಿಂದ ಜೀವಿಸುತ್ತಾರೆಂದು ೧೯೩೧ನೇ ಇಸ್ವಿಯ ಜಾನೇಸುಮಾರಿಯಿಂದ ತಿಳಿದುಬರುತ್ತದೆ. ಗ್ರಾಮಗಳಲ್ಲಿಯ ಪ್ರಚಲಿತ ಬೇಸಾಯ ಸಾಹಿತ್ಯಗಳನ್ನು ಪೂರೈಸಲಿಕ್ಕೂ, ಉಪಯೋಗಿಸಲಿಕ್ಕೂ ಕಲಿಸುವರೆ ಸರಕಾರವು ನೇಮಿಸಿದ ಬೇಸಾಯದ ಕರಂಜಾವು ಸಾಕೇನೆಂದು ಕೇಳಿದ ಪ್ರಶ್ನೆಗೆ ಉತ್ತರ ದೊರೆತದ್ದೇನಂದರೆ:— ಬೇಸಾಯದ ಪ್ರಚಾರ ಕಾರ್ಯದಲ್ಲಿ ಮುಲ್ಕಿ ಹಾಗು ಸಹಕಾರಿ ಖಾತೆಗಳು ಬೆಂಬಲ ಕೊಡುತ್ತವೆ. ಸಹಕಾರಿ ಸಂಘಗಳೂ, ತಾಲೂಕಾ ಡೆವ್ಹಲಪ್‌ಮೆಂಟ ಸಂಘಗಳೂ, ಬೇಸಾಯದ ಸಂಘಗಳೂ, ಜಿಲ್ಹಾ ಲೋಕಲ್ ಬೋರ್ಡುಗಳೂ ಸಹ ನೆರವಾಗುತ್ತಿವೆ. ಆದರಿಂದ ಈಗಿರುವ ಬೇಸಾಯ ಖಾತೆಯ ಸಿಬಂದಿಯು ಕೈಕೊಂಡ ಕಾರ್ಯಕ್ಕೆ ಕಡಿಮೆಯೆಂದು ಸರಕಾರಕ್ಕೆ ತೋರುವದಿಲ್ಲ. ಹಣದ ಅನುಕೂಲತೆಯಿದ್ದರೆ, ಸರಕಾರವು ಸಂತೋಷದಿಂದ ಈ ಸಿಬಂದಿಯನ್ನು ಹೆಚ್ಚಿಸುವದು. ಬೇಸಾಯ-ಔದ್ಯೋಗಿಕ ಶಾಲೆಗಳನ್ನು ಹೊರಡಿಸಲಿಕ್ಕೂ, ಹೀನ ಶಾಲೆಗಳನ್ನು ಹಿಗಿದು ಬರಗಾಲದ ಪರಿಹಾರ ಮಾಡಲಿಕ್ಕೂ ಸರಕಾರವು ಉಪಾಯ ಮಾಡುವದೇನೆಂದು ಕೇಳಿದ ಪ್ರಶ್ನೆಗೆ ಸರಕಾರವು ಉತ್ತರ ಕೊಟ್ಟದ್ದೇನಂದರೆ.- ಹಣದ ಅನುಕೂಲತೆ ನೋಡಿ, ಹೊಸ ಶಾಲೆಗಳನ್ನು ಸ್ಥಾಪಿಸುವ ವಿಚಾರವಾಗುವದು. ಔದ್ಯೋಗಿಕ ಶಾಲೆಗಳ ವಿಷಯವನ್ನು ವಿದ್ಯಾಖಾತೆಯ ದಿವಾಣರ ಬಳಿ ಕೇಳಬೇಕು. ಕಾಲುವೆಯ ವಿಷಯವನ್ನು ಆ ಖಾತೆಯ ಅಧಿಕಾರಿಗಳ ಬಳಿ ಕೇಳಬೇಕು. ಬೇಸಾಯಗಾರರ ಸ್ಥಿತಿ-ಗತಿಯನ್ನು ಸಹಕಾರಿ ಸಂಘಗಳಲ್ಲಿ ದೊರಕುವ ಸಾಲದ ಪ್ರಮಾಣದ ಮೇಲಿಂದ ಕೇಳಲಿಕ್ಕೆ ಬರದು. ಉತ್ತರ ಕನ್ನಡ ಜಿಲ್ಹೆಯ ಪಶ್ಚಿಮ-ದಕ್ಷಿಣ ಭಾಗಗಳಲ್ಲಿಯೂ, ದಂಡೆಗುಂಟದ ಪ್ರದೇಶಗಳಲ್ಲಿಯೂ ಬೆಳೆಯನ್ನು ನಾಶ ಮಾಡುವ ಕಾಡು ಹಂದಿಗಳಿಗೆ ಪೆಟ್ಟು ಸೇರಿಕೊಳ್ಳಲು ಅಪ್ಪಣೆ ಇದೆ. ಇತರ ಜಿಲ್ಹೆಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಇದೆ. ಕಲೆಕ್ಟರರೂ, ಕನ್ಸರ್ವೇಟರರೂ ಆಲೋಚಿಸಿ ಕಾಡು ಹಂದಿಗಳ ಕಾಟವು ವಿಶೇಷವೆಂದು ಅಭಿಪ್ರಾಯಪಟ್ಟರೆ, ಫಾರೆಸ್ಟರರಿಗೆ ಯಾ ಗಾರ್ಡರಿಗೆ ಒಂದು ದಿನ ಮುಂಚಿತವಾಗಿ ತಿಳಿಸಿ, ಕಾದಿಟ್ಟ ಪಟ್ಟಗಳಲ್ಲಿ ಕಾಡು ಹಂದಿಗಳ ನಾಶ ಮಾಡಬಹುದು. ಸರಕಾರವು ಆಫೀಸರರಿಗೆ ನೇಮಿಸಿಕೊಂಡು ಬೇಸಾಯಗಾರರ ಹುಟ್ಟುವಳಿಯ ಲೆಖ್ಖವನ್ನು ಸಂಗ್ರಹಿಸುವ ತಯಾರಿಯಲ್ಲಿಲ್ಲ. ಉತ್ತರ ಕನ್ನಡ ಜಿಲ್ಹೆಯಲ್ಲಿ ಬೆಳೆರಕ್ಷಣೆಯ ಕರಿತು ಬಂಗಲು ಕಮಿಟಿಯವರು ಶಿಫಾರಸು ಮಾಡಿದಂತೆ, ಕಲೆಕ್ಟರರ ಕಡೆಯಿಂದ ರಿಪೋರ್ಟ ಬಂದಿದೆ. ಆ ಕುರಿತು ಸರಕಾರದಿಂದ ಇನ್ನು ಹೊಸ ಹುಕುಮು ಆಗುವ ಕಾರಣವಿಲ್ಲ. ಯಾಕಂದರೆ, ಈ ಹಿಂದೆ ಸರಕಾರವು ಬೆಳೆರಕ್ಷಣೆಯ ಕಮೀಟಿಯ ವಿಷಯ ಕೈಕೊಂಡ ಹುಕುಮುಗಳು ಸಾಕೆಂಬುದು ಕಲೆಕ್ಟರರ ಅಭಿಪ್ರಾಯವಾಗಿದೆ.

***

ಗ್ರಾಮ ಪಂಚಾಯತು.

ಗ್ರಾಮ ಪಂಚಾಯತುಗಳ ವಿಷಯ ಸರಕಾರವು ನೇಮಿಸಿದ ಕಮೀಟಿಯ ರಿಪೋರ್ಟ ತಾರೀಕು ೨೬-೧೦-೧೯೩೬ ನೇಗೆ ಸರಕಾರದ ಕೈಸೇರಿತು. ಆ ರಿಪೋರ್ಟ ಇನ್ನೂ ಪ್ರಕಟಿಸಲ್ಪಡಲಿಲ್ಲ, ಮುಂದಳದ ಶಿಫಾರಸುಗಳನ್ನು ಸರಕಾರವು ಆಲೋಚಿಸುತ್ತಿದೆ.

***

ಅಂಕೋಲೆಯ ಹೊನ್ನೆಬೈಲ ಬೇಣ.

ಅಂಕೋಲೆ ತಾಲೂಕಿನ ಮುಂಬಗುಣ ಫಿರ್ಕೆಯ ಹೊನ್ನೆಬೈಲ ಗ್ರಾಮದೊಳಗಿನ ಸಾರ್ವಜನಿಕ ಬೇಣದ ವಿಷಯ "ಕಾನಡಾ ವೃತ್ತ" ದ ತಾ. ೧೫ ೮-೩೭ ನೇ ಸಂಚಿಕೆಯಲ್ಲಿ ಪ್ರಕಟವಾದ ಸುದ್ದಿಯು ಸರಕಾರದ ತಿಳುವಳಿಕೆಗೆ ಬಂದಿದೆ. ೧೯೧೮ನೇ ಇಸ್ವಿಯಿಂದ ೧೯೩೩ನೇ ಇಸ್ವಿಯ ವರೆಗೆ ಈ ಬೇಣವು ಲಾಗಣಿಗೆ ಕೊಡಲ್ಪಟ್ಟಿತ್ತು; ೧೯೩೩ ನೇ ಇಸ್ವಿಯಲ್ಲಿ ಲಾಗಣೀ

(೧೧ ನೇ ಪುಟದಮೇಲೆ ಮುಂದರಿಸಿದೆ)

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ವಿನಾ ಆ ಕರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ ಕ್ಕೆ, ರೂ.		೧— ೦—೦
ಅಂಚೆವೆಚ್ಚ	,,	೦—೩—೦
೩ ಬಾಟಲಿಗಳಿಗೆ	,,	೬—೧೦—೦
ಅಂಚೆವೆಚ್ಚ	,,	೦— ೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—:0:—

೧/೨ ಔನ್ಸಿಗೆ	ರೂ.	೨—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೩—೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲು ಜಾಸ್ತಿ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲವಿಲ್ಲ

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಬನವಾಸಿಯ ಶ್ರೀ ಮಧುಕೇಶ್ವರ ದೇವಸ್ಥಾನದ ಗರ್ಭಗುಡಿ ಪ್ರವೇಶದ ತೀರ್ಪು.

(ನಮ್ಮ ಪ್ರತಿನಿಧಿಗಳಿಂದ)

ನಮ್ಮ ಜಿಲ್ಲೆಯಲ್ಲೇ ಏಕೆ — ಇಡೀ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಮುಖ್ಯವಾಗಿ ಹವ್ಯಕ ಸಮಾಜದಲ್ಲಿಯೂ, ಲಿಂಗಾಯತರಲ್ಲಿಯೂ ಹೆಚ್ಚಿನ ಗದಿಬಿಡಿ ಹುಟ್ಟುಮಾಡಿದ ಶ್ರೀ ಕ್ಷೇತ್ರ ಬನವಾಸಿಯ ಶ್ರೀ ಮಧುಕೇಶ್ವರ ದೇವಸ್ಥಾನದ ಗರ್ಭಗುಡಿಯ ಸಂಪ್ರೋಕ್ಷಣ ಖಟ್ಲೆಯ ದಾವೆಯು ೪ ವರ್ಷ, ೩ ತಿಂಗಳು, ೧೩ ದಿನಗಳವರೆಗೆ ನಡೆದು, ಕೊನೆಗೆ ಸಂಪ್ರೋಕ್ಷಣ ಖರ್ಚನ್ನು ಪ್ರತಿವಾದಿಯು ತೆರಬೇಕಾಗಿ ತೀರ್ಪಾಗಿದೆ. ಈ ನಿರ್ಣಯವು ಮುಂದೆ ವರಿಷ್ಠ ನ್ಯಾಯಾಸನಗಳಲ್ಲಿ ವಿಚಾರವಾಗುವದು ಸ್ಪಷ್ಟವಿರುವದರಿಂದ ಈ ಕಟ್ಲೆಯ ನಡೆದ ಸಂಗತಿಗಳು ವಿವರವಾಗಿ ಹೇಳಲ್ಪಡುತ್ತವೆ

ಬನವಾಸಿಯ ಶ್ರೀ ಮಧುಕೇಶ್ವರ ದೇವಾಲಯವು ಪುರಾತನವಾದುದು. ಸರಕಾರದಿಂದ ವರ್ಷಾಸನ ೪೦೦೦ಕ್ಕೂ ಮಿಕ್ಕಿ ಸಲ್ಲುತ್ತಿರುವದು. ಇದು ಜಿಲ್ಲಾ ಟೆಂಪಲ್ ಕಮಿಟಿಯ ಅಧಿಕಾರಕ್ಕೊಳಪಟ್ಟಿದೆ. ಈ ದೇವಾಲಯಕ್ಕೆ ವಹಿವಾಟದಾರರಾದ ಮೊಕ್ತೇಸರರಿದ್ದಾರೆ. ರಾ॥ ಗಣಪತಿ ಮಹಾದೇವ ದೀಕ್ಷಿತ, (೨) ಗಣಪತಿ ಲಕ್ಷ್ಮೀನಾರಾಯಣ ಭಟ್ಟ, (೩) ಗುರುನಾಥ ಕೇಶವ ಅಭ್ಯಂಕರ, (೪) ಗಣೇಶ ಲಿಂಗ ಭಟ್ಟ, (೫) ಶಿವಪ್ಪ ಬಸಪ್ಪ ಗೌಡ. ಮೊದಲಿನ ನಾಲ್ವರು ವಾದಿಯರಾಗಿ, ಶ್ರೀ ದೇವರ ಪರವಾಗಿ ಈ ದಾವೆ ಹೂಡಿದ್ದರು ಕೊನೆಯ ಐದನೆಯವರು ಪ್ರತಿಕೂಲ ಪಕ್ಷ ಪ್ರತಿವಾದಿಯಲ್ಲಿ ಸೇರಿಸಲ್ಪಟ್ಟಿದ್ದರು. ಹುಬ್ಬಳ್ಳಿಯ ಪ್ರಸಿದ್ಧ ಕಂಟ್ರ್ಯಾಕ್ಟರರಾದ ರಾ॥ ಎಸ್. ಕೆ. ವಡೆಯರರವರೇ ಪ್ರತಿವಾದಿಯವರು.

ರಾ॥ ವಡೆಯರರವರು ತಾ. ೩೧-೧೨-೧೯೩೧ನೇಯ ಬನವಾಸಿಯ ಶ್ರೀ ಮಧುಕೇಶ್ವರ ದೇವಸ್ಥಾನಕ್ಕೆ ತಮ್ಮ ಮನೆಯವರೊಂದಿಗೆ ಹೋಗಿದ್ದರು. ದೊಡ್ಡ ಗಂಟೆಯ ವರೆಗೆ ಹೋದರು. ಅಲ್ಲಿಯೇ ಮಹಾದ್ವಾರವಿದೆ. ಅಲ್ಲಿಂದ ಒಳಸೇರಲು ರಾ॥ ವಡೆಯರರು ಉದ್ಯುಕ್ತರಾದರು. ರಾ॥ ಗುರುನಾಥ ಅಭ್ಯಂಕರರವರು ರಾ॥ ವಡೆಯರರಿಗೆ ಅವರ ಜಾತಿಯನ್ನು ಕೇಳಿದರು ಲಿಂಗಾಯತರೆಂದ ತಿಳಿದಲು ಗರ್ಭಗುಡಿಯ ಪ್ರವೇಶ ಮಾಡಬಾರದಾಗಿ ತಿಳಿಸಿದರು. ಅರ್ಚಕರು ಬ್ರಾಹ್ಮಣರ ಹೊರತು, ಇತರರಿಗೆ ಗರ್ಭಗುಡಿಯ ಪ್ರವೇಶವಿಲ್ಲವಾಗಿಯೂ ರಾ॥ ಗುರುನಾಥ ಅಭ್ಯಂಕರರು ಹೇಳಿದರು. ಹಚ್ಚಿದ ಬೋರ್ಡನ್ನು ತೋರಿಸಿದರು ಶ್ರೀ ದೇವರ ರತ್ನಾದಿ ಆಭರಣಗಳನ್ನು ರಾ॥ ವಡೆಯರರ ಮನೆಯವರು ಧರಿಸಿದ್ದರು. ಅದಕ್ಕಾಗಿ ರಾ॥ ಗುರುನಾಥರವರ ಸೂಚನೆ ಹೋಗಲು. ರಾ॥ ವಡೆಯರರು ಒಳಹೊಕ್ಕು ದೇವರ ದರ್ಶನ ಪಡೆದು ಹೊರಬಂದು, ಬೇರೆ ಎರಡು ದೇವಸ್ಥಾನಗಳಲ್ಲಿಯೂ ಇದೇ ಕ್ರಮವನ್ನನುಸರಿಸಿದರು. ಅರ್ಚಕರೂ, ಪರಿಚಾರಕರೂ ಪ್ರತಿಬಂಧ ಮಾಡಿದರೂ, ಅವರು ಕೇಳಲಿಲ್ಲ. ಹಾ! ಹಾ! ಎಷ್ಟುಬೇಗನೆ ಈ ಸುದ್ದಿಯು ಊರ ತುಂಬ ಹಬ್ಬಿತು ಬ್ರಾಹ್ಮಣರು ಸಭೆ ಸೇರಿದರು. ಶಾಸ್ತ್ರವಿಚಾರ ಮಾಡಿದರು ರಾ॥ ವಡೆಯರರ ಪ್ರವೇಶದಿಂದ ಶ್ರೀದೇವರ ಗರ್ಭಾಗಾರವು ಅಪವಿತ್ರವಾಗಿದೆಂದೂ ಅದನ್ನು ಸಂಪ್ರೋಕ್ಷಣ ಮಾಡಿ ಪವಿತ್ರಗೊಳಿಸಬೇಕೆಂದೂ ನಿರ್ಣಯ ಮಾಡಿದರು ಸಂಪ್ರೋಕ್ಷಣ ವಿಧಿಗೆ ರೂ. ೩೨೪ ತಗಲಿದವು. ಅದನ್ನೂ, ಅದರ ಬಡ್ಡಿಯನ್ನೂ ಕೂಡಿಸಿ ರಾ॥ ವಡೆಯರರ ಕಡೆಯಿಂದ ರೂ. ೩೪೦-೮-೦ ಯನ್ನು ಕೊಡಿಸಬೇಕಾಗಿ ರಾ॥ ಬಿ. ಎಸ್. ಕೆಂಭಾವಿಯವರ ಕೋರ್ಟಿನಲ್ಲಿ ತಾ. ೨೦-೧೨-೧೯೩೪ನೇಯ ದಾವೆ ಹೂಡಲಾಯಿತು.

ರಾ॥ ವಡೆಯರರು ತಮ್ಮ ಉದಾಹರಣೆಯನ್ನು ದಾಖಲು ಮಾಡಿದರು. ಶ್ರೀ ಮಧುಕೇಶ್ವರನ ಪೂಜೆ ಮಾಡುವ ರೂಢಿಯು ಲಿಂಗಾಯತರಲ್ಲುಂಟು. ಲಿಂಗಾಯತರೆಂದರೆ ವೀರಶೈವ ಲಿಂಗಿ ಬ್ರಾಹ್ಮಣರು; ಷಡ್ವಿಧ ಬ್ರಾಹ್ಮಣರಲ್ಲಿಯೂ ಅವರ ಗಣನೆಯಾಗುತ್ತದೆ ಹೀಗಿದ್ದರೂ, ನಾನಾಗಿ ಗರ್ಭಗುಡಿಯನ್ನು ಪ್ರವೇಶಿಸಲಿಲ್ಲ. ರಾ॥ ಅಭ್ಯಂಕರರು ನನ್ನನ್ನು ಒಳಗೆ ಕರಕೊಂಡು ಹೋದರು. ಒಳ ಸೇರಬಾರದಾಗಿ ನನಗೆ ಯಾರೂ ಹೇಳಲಿಲ್ಲ ಆ ಕಾಲಕ್ಕೆ ಬೋರ್ಡು ಸಹ ಇದ್ದಿಲ್ಲ, ಈಗ ಅದನ್ನು ಕೋರ್ಟದಾಗಿ ಹಚ್ಚಿದ್ದಿರಬೇಕು ಮೊಕ್ತೇಸರರ ಸಭೆ ಸೇರಿಸಿದ್ದಿರಬೇಕು. ಸಂಪ್ರೋಕ್ಷಣ ವಿಧಿ ನೆರವೇರಿದ್ದು ಸುಳ್ಳು. ಮೊಕ್ತೇಸರರು ಅಸಹಕಾರ ಪಕ್ಷದವರು; ಲಿಂಗಾಯತರು ಸಹಕಾರ ಪಕ್ಷದವರು; ಆದರಿಂದ ಅವರಿಗೆ ನಮ್ಮ ಸಮಾಜದ ಮೇಲೆ ದ್ವೇಷ. ಇತ್ತೀಚೆ ಲಿಂಗಾಯತರಿಗೆ ಮಹಾದ್ವಾರ ದಾಟಗೊಡುವದಿಲ್ಲ. ದಾವಾ ಹಣವನ್ನು ನಾನು ಕೊಡತಕ್ಕದ್ದಲ್ಲ. ಜಿಲ್ಲೆಯ ಟೆಂಪಲ್ ಕಮಿಟಿಯು ನೇಮಣೂಕಿಯು ಕಾಯಿದೇಶೀರ ಅಲ್ಲ; ಆದರಿಂದ ಆ ಕಮಿಟಿಯಿಂದ ನೇಮಿಸಲ್ಪಟ್ಟ ಈ ಮೊಕ್ತೇಸರರಿಗೆ ದಾವಾ ತರುವ ಅಧಿಕಾರವಿಲ್ಲ

ಮೊಕ್ತೇಸರರಾದ ರಾ॥ ಗಣೇಶ ಭಟ್ಟರೂ, ರಾ॥ ಶಿವಪ್ಪ ಗೌಡರೂ ರಾ॥ ವಡೆಯರರ ಹೇಳಿಕೆಗೆ ಬೆಂಬಲ ಕೊಡುವಂಥ ಉದಾಹರಣೆಗಳನ್ನು ಸಾದರಪಡಿಸಿ, ಈ ವ್ಯವಹಾರದಲ್ಲಿ ಸುಮ್ಮಗುಳಿದರು

ಈ ಪ್ರಕರಣದಲ್ಲಿ ಉಪಪ್ರಕರಣವೊಂದು ನಡೆಯಿತು. ರಾ॥ ವಡೆಯರರು ಡಿಸ್ಟ್ರಿಕ್ಟ ಕೋರ್ಟನಲ್ಲಿ ಒಂದು ಅರ್ಜಿಯನ್ನು ೧೯೩೬ನೇ ಇಸ್ವಿಯಲ್ಲಿ ದಾಖಲು ಮಾಡಿ, ಈ ದಾವೆಯ ವಿಚಾರವನ್ನು ಸಬ್ ಕೋರ್ಟಿನ ಕಕ್ಷೆಯೊಳಗಿಂದ ಸೆಳಕೊಳ್ಳಬೇಕಾಗಿ ಟ್ರಾನ್ಸಫರ ಅರ್ಜಿ ಮಾಡಿದರು. ರಾ॥ ಬಿ ಎಸ್ ಕೆಂಭಾವಿಯವರು ಬ್ರಾಹ್ಮಣರಿದ್ದದರಿಂದ ತಮಗೆ ನ್ಯಾಯಯಶ್ಯ ಸಿಗಲಿಕ್ಕಿಲ್ಲವಾಗಿ ರಾ॥ ವಡೆಯರರ ಸಾಧನ ಈ ಸಾಧನೆಯು ಡಿಸ್ಟ್ರಿಕ್ಟ ಕೋರ್ಟನಲ್ಲಿ ರದ್ದಾಯಿತು, ಹೈಕೋರ್ಟಿನಲ್ಲಿ ಅಪೀಲಾಯಿತು ಕೂಡಲೆ ತೀರ್ಪನ್ನೇ ಸ್ಥಿರಪಡಿಸಿ, ನ್ಯಾಯಮೂರ್ತಿಗಳು ರಾ॥ ವಡೆಯರರ ಸೂಚನೆಯನ್ನು ತಿರಸ್ಕರಿಸಿಬಿಟ್ಟರು. ರಾ॥ ಕೆಂಭಾವಿಯವರಿಗೆ ವರ್ಗವಾಯಿತು, ರಾ॥ ನಾಡಗೀರರವರು ಬಂದರು. ಅವರ ಕಾಲದಲ್ಲಿ ಪ್ರಾಸ್ತಾವಿಕ ಪ್ರಶ್ನೆಯು ನಿರ್ಣಯವಾಯಿತು. ಜಿಲ್ಲೆಯ ಟೆಂಪಲ್ ಕಮಿಟಿಯು ಕಾಯಿದೆಯಂತೆ ಘಟಿಸಲ್ಪಟ್ಟದ್ದೆಂದೂ, ಮೊಕ್ತೇಸರರಿಗೆ ದಾವಾ ತರುವ ಅಧಿಕಾರವಿರುವದೆಂದೂ ಅವರು ನಿರ್ಣಯಿಸಿ, ಮುಂದಿನ ವಿಚಾರಕ್ಕೆ ಅಪ್ಪಣೆ ಮಾಡಿದರು ಅವರಿಗೂ ವರ್ಗವಾಯಿತು; ರಾ॥ ಸಿ. ಎಚ್. ಗಂಜಾಳ ಎಂಬ ಜೈನ ಜಾತಿಯವರು ಸಬಜಡ್ಜರಾಗಿ ಬಂದರು ಕಳೆದ ಸೋಮವಾರ ತಾ. ೧೪ನೇ ಮಧ್ಯಾಹ್ನ ೧೨ ಘಂಟೆಯ ಸಮಯ ಅವರೇ ತೀರ್ಪು ಕೊಟ್ಟರು ಈ ಪ್ರಕರಣದಲ್ಲಿ ವಾದಿಯ ಕಡೆಯಿಂದ ಹೊನ್ನಾವರ ಅಂಬಾಸಮುದ್ರ, ತಿರುನೆಲ್ವೇಲಿಗಳ ಕೋರ್ಟುಗಳಲ್ಲಿ ಸಾಕ್ಷಿಗಳಾದವು, ಪ್ರತಿವಾದಿಯ ಕಡೆಯಿಂದ ಹಾವೇರಿ, ವಿಜಾಪುರ, ಬೆಳಗಾವಿ, ಕೊಪ್ಪಳ, ಸಾಗರ ಕೋರ್ಟುಗಳಲ್ಲಿ ಸಾಕ್ಷಿಗಳಾದವು. ಇದಕ್ಕೆ ಸುಮಾರು ೧ ವರ್ಷ ತಗಲಿತು ಆಗಮ ಶಾಸ್ತ್ರ ಗ್ರಂಥಗಳೂ, ಷಡ್ವಿಧ ಬ್ರಾಹ್ಮಣರ ಆಚಾರ-ವಿಚಾರ ಗ್ರಂಥಗಳೂ, ಲಿಂಗಾಯತ ಮತಸ್ಥಾಪನೆಯ ಗ್ರಂಥಗಳೂ ವಿದ್ವಜ್ಜನರ ಹಜಾಸಿನಿಂದ ಆಗಿನ ಸಾಕ್ಷಿಗಾರರ ವಿಚಾರ ಕಾಲಕ್ಕೆ ಬ್ರಾಹ್ಮಣರ ಲಕ್ಷಣಗಳು ಬಹು ಸೂಕ್ಷ್ಮವಾಗಿ ಚರ್ಚಿಸಲ್ಪಟ್ಟವು ವಾದಿಯ ಕಡೆಯಿಂದ ಒಂದು ೧೨೧ ಸಾಕ್ಷಿಗಳಾದವು; ಪ್ರತಿವಾದಿಯರ ಕಡೆಯಿಂದ ೧೩೪ ಸಾಕ್ಷಿಗಳಾದವು ೧೦೦೦ಕ್ಕೆ ಮಿಕ್ಕಿ ದಾಖಲೆಗಳು ಈ ಪ್ರಕರಣದಲ್ಲಿ ದಾಖಲಾಗಿವೆ

ರಾ॥ ಗಂಜಾಳರವರು ಈ ಪ್ರಕರಣದ ವಿಚಾರಕ್ಕೆ ಸೋಮವಾರ ತಾ. ೧೩-೬-೩೭ನೇಯ ಪ್ರಾರಂಭಿಸಿದರು; ಉಭಯ ಪಕ್ಷಕಾರರ ವಕೀಲರ ತರ್ಕಗಳನ್ನು ಕೇಳಿಕೊಂಡು ತಾ. ೧೪ನೇ ಸೋಮವಾರಕ್ಕೆ ತೀರ್ಪು ಕೊಟ್ಟರು. ಈ ತೀರ್ಪು ಟೈಪು ಮಾಡಿದ ೧೩೯ ಪುಟಗಳಿದ್ದು ಅದು, ಎಲ್ಲ ವಾದ ಪ್ರಶ್ನೆಗಳು ಸಂಕ್ಷಿಪ್ತವಾಗಿಯೂ, ಸಮರ್ಪಕವಾಗಿಯೂ ಚರ್ಚಿಸಲ್ಪಟ್ಟಿವೆ, ಮುಖ್ಯ ತಾತ್ಪರ್ಯವನ್ನಷ್ಟು ಸಕ್ಷೇಪವಾಗಿ ವಿವರಿಸುವೆನು;

ತೀರ್ಪಿನ ವಿವರವನ್ನು ಹೇಳುವ ಮುಂಚೆ ಉಭಯ ಪಕ್ಷಗಾರರ ಕಡೆ ವಕೀಲರ ನಾಮನಿರ್ದೇಶವನ್ನೂ, ಮುಖ್ಯ ಮುಖ್ಯ ಸಾಕ್ಷಿಗಾರರ ಹೆಸರನ್ನೂ ನಮೂದಿಸುವೆನು ಶ್ರೀ ದೇವರ ಕಡೆಯಿಂದ ಜಿಲ್ಲೆಯ ನಾಲ್ವರು ವಕೀಲರು ಈ ಪ್ರಕರಣವನ್ನು ನಡಿಸಿದರು ರಾ॥ ಭೀಮರಾವ ರಿತ್ತಿ, ವಾಸುದೇವರಾವ ಕೊಲ್ಲಾಳ, ಪದ್ಮನಾಭರಾವ ಬಾಳಿಗಾ, ಹನುಮಂತರಾವ ರಿತ್ತಿ; ರಾ॥ ವಡೆಯರರ ಕಡೆಯಿಂದ ೧೦ ಮಂದಿ ವಕೀಲರು ಕೆಲಸ ನಡಿಸಿದರು. ಜಿಲ್ಲೆಯ ರಾ॥ ಸಾ॥ ಎಸ್. ಎಸ್. ಪಾಟೀಲ, ಧಾರವಾಡದ ರಾ॥ ಹುಲಿಕೋಟಿ, ಸಿ ಕೇ. ವಡೆಯರ್, ಹಾವೇರಿ, ಆರ್. ಎಸ್. ಹಳಕಟ್ಟಿ, ಬಾಗಿಲುಕೋಟ ವ್ಹಿ. ವ್ಹಿ. ಅಂಗಡಿ, ಸಿ. ವ್ಹಿ. ಹೊಟ್ಟಿ, ಎಸ್. ಬಿ. ಬೆಟಗೇರಿ, ಕಾರವಾರದ ರಾ॥ ಎಲ್. ಎಸ್. ಕುಟನೋ. ವಾದಿ ಕಡೆಯಿಂದ ಆದ ಸಾಕ್ಷಿಗಾರರಲ್ಲಿ; ರಾ॥ ವ್ಹಿ. ಎಸ್. ನಿಲಕುಂದ ವಕೀಲ ಶಿರ್ಸಿ, ಗಂಗಾಧರಪಂತ ಪಟವರ್ಧನ, ರಾ॥ ವೆಂಕಟರಾವ ನಿಲೇಕಣಿ, ರಾ॥ ಸುಂದರೇಶ ಶಾಸ್ತ್ರಿ ವಕೀಲ ಹೊಸಪೇಟೆ, ರಾ॥ ಹೇರಂಬ ಚಿದಂಬರ ಪಾಠಕ, ರಾಮದೀಕ್ಷಿತ, ರಾಮನಾಥ ದೀಕ್ಷಿತ, ಗುಂಡು ದೀಕ್ಷಿತ, ಇವರ ನಾಮನಿರ್ದೇಶ ಮಾಡಬಹುದು. ಪ್ರತಿವಾದಿ ಕಡೆಯ ಸಾಕ್ಷಿಗಾರರಲ್ಲಿ ಪೋಲೀಸ ಸುಪರಿಂಟೆಂಡೆಂಟರಾದ ವಿ॥ ಹೊಲಂಡ, ಪ್ರೊ॥ ಆ॥ ಅನ್ ಸ್ವಕ್ಕರರಾದ ಸಯ್ಯದ ಇದ್ರಿಸ ರಾ॥ ವಡೆಯರರ ತಮ್ಮಂದಿರರಾದ ರಾ॥ ವಿರೂಪಾಕ್ಷ ವಡೆಯರ್, ರಾ॥ ಬ॥ ಅರಾಗಳ ರುದ್ರಗೌಡ, ರಾ॥ ಮಗೋರ್ಚರವರ ಉಲ್ಲೇಖ ಮಾಡಬಹುದು. ಸಬಜಡ್ಜರು ವಾದಿ-ಪ್ರತಿವಾದಿಗಳ ಸಾಧನೆಗಳನ್ನು ಪ್ರಸ್ಥಾಪಿಸಿ ಕತ್ತರ್ಥಪಡಿಸುವದೇನಂದರೆ:- ಲಿಂಗಾಯತರೆಂದರೆ, ಬ್ರಾಹ್ಮಣರಲ್ಲ; ಅವರು ಶೂದ್ರರು ಈ ಬಗ್ಗೆ ಅನೇಕ ಗ್ರಂಥಾಧಾರಗಳಿವೆ. ಮೇಲಾಗಿ ಮುಂಬಯಿ ಹೈಕೋರ್ಟಿನ ತೀರ್ಮಾನಗಳೂ ಉಂಟು. ಪೂಜೆಯ ವಿಷಯ ೧ ನೇ ಪ್ರತಿವಾದಿಯ ಕಡೆಯಿಂದ ದಾಖಲಾದ ದಾಖಲೆಗಳಿಗೂ ತೋರಿದ ಪುರಾವೆಗೂ ಪರಸ್ಪರ ಸಂಬಂಧವಿಲ್ಲ. ಆತನ ಕಡೆಯಿಂದ ಹಾಜರಾದ ಗ್ರಂಥಗಳಲ್ಲಿಯೇ ಆತನಿಗೆ ಪ್ರತಿಕೂಲವಾದ ಪುರಾವೆಯನ್ನು ಬೇಕಷ್ಟು ಕಾಣಬಹುದು ಈ ಸ್ಥಿತಿಯ ಮೂಲಕ ತೀರ್ಪು ಬರೆಯಲು ವಿಲಂಬವಾಯಿತು. ೧೯೩೧ನೇ ಇಸ್ವಿಯ ಫೇಬ್ರುವರಿ ತಾ. ೨೩-೨೪ನೇಯ ಸಿರ್ಸಿ, ಸಿದ್ದಾಪುರ, ಹಾಗು ಸೊರಬ ತಾಲೂಕುಗಳೊಳಗಿನ ಲಿಂಗಾಯತ ಪ್ರಮುಖರು ಸಭೆಸೇರಿ, ರಾ॥ ಸಾ॥ ಪಾಟೀಲರನ್ನು ಬನವಾಸಿಗೆ ಕಳುಹಿಸಿದರು; ತಮ್ಮ ಪ್ರತಿನಿಧಿಗಳಾಗಿ ನಾಲ್ವರು ಕಳುಹಿದರು. ಅವರು ತಾರೀಖು ೨೫-೨-೩೧ನೇಯ ಅಲ್ಲಿಯ ಬ್ರಾಹ್ಮಣ ಮುಖಂಡರಿಗೂ, ಮೊಕ್ತೇಸರರಿಗೂ, ಭಕ್ತಿಯಾಗಿ ಸ್ವಸಮಾಜಕ್ಕೆ ಶ್ರೀ ಮಧುಕೇಶ್ವರ ದೇವಾಲಯದಲ್ಲಿ ಪೂಜೆ ಮಾಡಲು ಬಿಡದಿರುವದು ಸ್ವಸಮಾಜದ ಮೇಲೆ ಒಂದು ದೊಡ್ಡ ಕಲಂಕವೊದಗಿದೆ ಶಾಂತಿಯಿಂದ ತಮಗೆ ಅಪ್ಪಣೆ ಸಿಗದಿದ್ದರೆ, ಸಾಮ, ದಾನ, ದಂಡ, ಭೇದಾದಿ ಉಪಾಯಗಳಿಂದ ಆ ಹಕ್ಕನ್ನು ದೊರಕಿಸಲು ತಮ್ಮ ಸಮಾಜವು ಮನೋನಿಶ್ಚಯ ಮಾಡಿರುವದಾಗಿಯೂ, ಸಾರಿ ಹೇಳಿದರು ಬ್ರಾಹ್ಮಣರು ಒಪ್ಪಲಿಲ್ಲ. ಆದರಿಂದ ರಥೋತ್ಸವ ಸಮಾರಂಭಕ್ಕೆ ಬ್ರಾಹ್ಮಣೇತರರನೇಕರು ವಾಡಿಕೆಯಂತೆ ಹೋಗದೆ ಬಹಿಷ್ಕಾರ ಹಾಕಿದರು ಈ ಸಂಗತಿಗಳು ಅನುಮಾನವಿದ್ದಲ್ಲಿ ರಾ॥ ಸಾ॥ ಪಾಟೀಲರು ಸಾಕ್ಷಿಗಾರರಾಗಿ ಹೀಗೆ ಹೇಳಬಹುದಿತ್ತು ಅದಲ್ಲದೆ ಲಿಂಗಾಯತರು ಪೂಜೆ ಮಾಡಲು ರೂಢಿ ಇದ್ದರೆ, ಬ್ರಾಹ್ಮಣರಿಂದ ಆತಂಕವಾಗಿದ್ದರೆ, ಆ ಕಾಲಕ್ಕೆ ಮೇಲಧಿಕಾರಿಗಳ ಕಡೆ ಒಂದಾದರೂ ತಕ್ರಾರು ಅರ್ಜಿ ಹೋಗುತ್ತಿತ್ತು. ಪ್ರಕರಣ ಉಂಟಾದ ಮೇಲೆ ಸಹ ಲಿಂಗಾಯತರು ಮಹಾದ್ವಾರದ ವರೆಗೆ ಮಾತ್ರ ಹೋಗುತ್ತಲಿದ್ದರು ತಾರೀಖು ೨೬-೩-೩೧ನೇಯ ಬನವಾಸಿಯ ೧೪ ಮಂದಿ ಲಿಂಗಾಯತರು ಮೊಕ್ತೇಸರರಿಗೆ ಬರೆದುಕೊಂಡ ಅರ್ಜಿಯೊಂದು ಹಾಜರಾಗಿದೆ. ಅದಕ್ಕೆ ಸಹಿ ಮಾಡಿದ ಒಬ್ಬೊಬ್ಬರು ತಮ್ಮ ಸಹಿಯನ್ನೂ, ಇತರರ ಸಹಿಯನ್ನೂ ಗುರ್ತಿಸಿದ್ದಾರೆ. ಅದರೊಳಗೆ ಬರೆದ ಹಕೀಕತಿನ ವಿಷಯ ಅನುಮಾನ ಮಾಡಿದ್ದಾರೆ. ಸದರ ಅರ್ಜಿಯು ಕೃತ್ರಿಮವೆಂಬ ಅವರ ಹೇಳಿಕೆ. ನಾವು ಶಿವಭಕ್ತರಿದ್ದು ಶಿವರಾತ್ರಿ ದಿವಸಾದರೂ ಪೂಜೆ ಮಾಡಲು ಅಪ್ಪಣೆ ಕೊಡಬೇಕಾಗಿ ಈ ಅರ್ಜಿಯಲ್ಲಿ ಬರೆದಿದೆ ಈ ಅರ್ಜಿಯು ಕೃತ್ರಿಮವೆಂದೂ ನಾನೊಪ್ಪುವದಿಲ್ಲ.

ಪೂಜೆ ಮಾಡುವ ರೂಢಿಯುದ್ದರೆ, ತಿರುಗಿ ಅಂಥ ಅರ್ಜಿ ಮಾಡುವ ಕಾರಣವೇನಿತ್ತು? ಈ ಪ್ರಕರಣಕ್ಕೆ ಅಸಹಕಾರದ ಸಂಬಂಧವಿಲ್ಲ. ಕಾರಣವೇನೆಂದರೆ:- ಬನವಾಸಿಯಲ್ಲಿ ಕಾಂಗ್ರೆಸ ಕಮಿಟಿಯು ಸ್ಥಾಪನೆಯಾಗಲಿಲ್ಲ. ಅಸಹಕಾರದ ಚಳವಳಿಯ ಬಗ್ಗೆ ಪೋಲೀಸರಿಂದ ಇಂದಿ ಸಹ ಆದದ್ದಿಲ್ಲ. ೧ನೇ ಪ್ರತಿವಾದಿಯು ಹೇಳಿಕೆಯಂತೆ ತಾ. ೩-೪-೧೯೨೧ನೇಗೆ ಸೇರಿಸಿದ ಸಭೆಯು ಮೊದಲನೇ ಅಹಿಂಸಾಚರಿತೆಯ ಸಭೆಯೆಂದು ನಂಬಲು ಆಧಾರವಿಲ್ಲ. ಈ ದೇವಾಲಯಕ್ಕೆ ೪ ಸಾವಿರ ರೂಪಾಯಿಗಳ ಉತ್ಪನ್ನ ಸರಕಾರದಿಂದ ಕಸ್ತೇಕು ಸಿಗುತ್ತದೆ. ಇದು ದೊಡ್ಡ ದೇವಸ್ಥಾನ. ಇದಕ್ಕೆ ಬಂಧ ತಟ್ಟುವಂತೆ ವರ್ತಿಸಲು ಈ ದೇವಸ್ಥಾನದಲ್ಲಿ ಅಸಹಕಾರದ ಸಭೆ ಸೇರಿಸುವ ಸಂಭವವಿಲ್ಲ. ಈ ಸಭೆಯಲ್ಲಿ ಸಂಪೂರ್ಣ ಬಹಿಷ್ಕಾರದ ಠರಾವು ಪಾಸಾಗಿರುತ್ತದೆ. ೧ನೇ ಪ್ರತಿವಾದಿಯೂ, ಅವನ ಕಡೆ ಸಾವಿರಾರು ಸಾಕ್ಷಿಗಾರರೂ, ಸ್ವಪಕ್ಷದ ಉಚ್ಚ ತರಗತಿಯನ್ನು ಪ್ರಸ್ಥಾಪಿಸುವದಕ್ಕಾಗಿ ತಮ್ಮಲ್ಲಿ ರೂಢವಾಗಿರುವ ವಿಧವಾ ವಿವಾಹವನ್ನು ಮುಚ್ಚಿಟ್ಟಿದ್ದಾರೆ. ಅಗಸರೂ ಕಂಬಾರರೂ, ಕೆಲಸಗಾರರೂ ಸ್ವಪಕ್ಷದಲ್ಲಿ ಇಲ್ಲವಾಗಿಯೂ, ಸೋದರಿಕೆ ಯಾವ ಘಟನೆಗಳು ಸ್ವಪಕ್ಷದಲ್ಲಿ ಇಲ್ಲವಾಗಿಯೂ ಅವರು ಹೇಳಿದ್ದಾರೆ. ಈ ಸಂಗತಿಗಳೆಲ್ಲ ಸಾಮಾನ್ಯರಿಗೂ ಗೊತ್ತಿದ್ದ ವಿಷಯಗಳಾಗಿವೆ. ಅಂಥವುಗಳನ್ನು ಅವರು ಒಪ್ಪಿದ್ದರಿಲ್ಲ. ಆದರಿಂದ ಅವರ ಸಾಕ್ಷಿಯನ್ನು ನಂಬಬಾರದು. ಇನ್ನೊಂದು ವಿಷಯ. ಶ್ರೀ ಮಧುಕೇಶ್ವರ ದೇವಾಲಯದ ಗರ್ಭಗುಡಿಯನ್ನು ಲಿಂಗಾಯತ ಸಾಕ್ಷಿಗಾರರು ವರ್ಣಿಸಿದ ವರ್ಣನೆಯು ವಿಲಕ್ಷಣವಿದೆ. ನಾನು ಸ್ವತಃ ಅಲ್ಲಿಗೆ ಹೋಗಿ ನೋಡಿದೆನು; ಈ ಸಾಕ್ಷಿಗಾರರ ಹೇಳಿಕೆಯು ವಾಸ್ತವವಲ್ಲ. ಮುಖದ್ವಾರವನ್ನು ದಾಟಿದ ಕೂಡಲೆ, ಮಧ್ಯದ ದೊಡ್ಡದೊಂದು ಮೂರ್ತಿಯು ಸಹಜವಾಗಿ ದೃಷ್ಟಿಗೆ ಬೀಳುತ್ತದೆ. ಆ ಮೂರ್ತಿಯ ಸುದ್ದಿಯನ್ನು ಒಬ್ಬರೂ ಹೇಳುವದಿಲ್ಲ. ಶ್ರೀ ಮಧುಕೇಶ್ವರನು ಲಿಂಗಾಕಾರದಲ್ಲಿದ್ದಾನೆ; ಸಾಕ್ಷಿಗಾರರಲ್ಲನೇಕರು ಮುಸುಕಿನಾಕೃತಿಯಲ್ಲಿ ಶ್ರೀ ದೇವರಿದ್ದಾನೆಂದು ಹೇಳಿದ್ದಾರೆ. ಕೆಲವರು ದೇವರಿಗೆ ಶಿವಲಿಂಗವಿದ್ದಾನೆಂದೂ, ಕಣ್ಣು ಕಿವಿ ಮೂಗು ಸಹ ಇರುತ್ತವಾಗಿಯೂ ಹೇಳಿದ್ದಾರೆ. ಈ ವಿಧಾನಗಳ ಮೇಲಿಂದ ಅವರು ಗರ್ಭಗುಡಿಯಲ್ಲಿ ಹೋದದ್ದು ತೀರ ಸುಳ್ಳೆಂದು ಹೇಳಲಡ್ಡಿಯಿಲ್ಲ. ಲಿಂಗಾಯತರಿಗೆ ಪೂಜೆಯ ಹಕ್ಕಿದ್ದರೆ, ಸರ್ರಿ ದೇವರ ಅರ್ಜಿಯಲ್ಲಿ ಆ ಸಮಾಜದ ಅರ್ಚಕರೂ ಇರಬೇಕಾಗಿತ್ತು. ತಪ್ಪಯೇನೆಂದರೆ: ತಾನು ಬ್ರಾಹ್ಮಣೇತರನಾಗಲಿ, ಲಿಂಗಾಯತ ಸಮಾಜಕ್ಕೆ ಗರ್ಭಗುಡಿಯ ಪ್ರವೇಶ ದೊರೆತ. ಈ ಹಕ್ಕಿರುವದೆಂದಾಗಲಿ ೧ನೇ ಪ್ರತಿವಾದಿಯಿಂದ ಸಿದ್ಧವಾಗಲಿಲ್ಲ. ೧ನೇ ಪ್ರತಿವಾದಿಯು ದೊಡ್ಡ ಕುಸ್ತಿಯಾಡಿದ್ದಾನೆ. ಈ ಪ್ರಕರಣದ ವಿಚಾರದ ಕಾಲಕ್ಕೆ ಕೋರ್ಟಿನ ಅವನ ವರ್ತನದ ಮೇಲಿಂದ ಅವನ ಹೇಳಿಕೆಯ ವಿಶ್ವಾಸಕ್ಕೆ ಪಾತ್ರವಿಲ್ಲವೆಂದು ನಿರ್ಧರಿಸಲು ನನಗೆ ತೀರ ವ್ಯಸನವಾಗುತ್ತದೆ. ಆದ್ದರಿಂದ ನಾನು ಹೇಳುವ ಮಾತು ಏನೆಂದರೆ:- ವಾದಿಗೆ ೧ನೇ ಪ್ರತಿವಾದಿಯಿಂದ ಸಂಪೂರ್ಣ ಖರ್ಚಿನ ಬಗ್ಗೆ ರೂ ೩೩೦—೪—೦ ಸಿಗಬೇಕು; ಕೋರ್ಟ ಖರ್ಚ ಸಹ ಸಿಗಬೇಕು. ಪಹಿಲೆಗಾಗುವ ದರೆಗೆ ಶೇಕಡಾ ೬ ರಂತೆ ಬಡ್ಡಿ ಸಹ ಸಿಗಬೇಕು. ಪ್ರತಿವಾದಿಯು ತನ್ನ ಖರ್ಚ ತಾನೇ ಸಹಿಸತಕ್ಕದ್ದು.

— ಅಬಿಸೀನಿಯದೊಳಗಿನ ಪ್ರಕರಣದಲ್ಲಿ ಸಂಧಾನದಿಂದ ಇತ್ಯರ್ಥವಾಗುವ ಲಕ್ಷಣಗಳಾಗಿವೆ. ಬಿಸಿಯಾದ ಕದನವು ಕಟ್ಟಿ ಕಡಿಗುವದಿಲ್ಲ. ಈ ಹಿಂದೆ ಅಬ್ಸೀನಿಯದವರ ದಾನ ಪಾಲಿಸಿ ಅವರ ಕಡೆಯಿಂದ ಸಂಧಾನ ಮಾಡಿಕೊಂಡು ಬಂದ ಮಿ| ಸ್ಟೀವನ್‌ಸನರು ಅಬ್ಬಸೀನಿಯರಿಗೆ ಕಾಲು ಹೋಗುವದಾಗಿದ್ದರೆ. ಬ್ರಿಟಿಶ ಸರಕಾರವು ಅವರಿಗೆ ಮಿಲ್ಲ ಕೊಡಲಿಕ್ಕೆ ೧ ಲಕ್ಷ ಪವನುಗಳನ್ನು ಕಟ್ಟಿ ಸಾವಿರದವರಿಗೆ ಬ್ರಿಟಿಶರು ಕೊಡಲಿಕ್ಕಿರುವರೆಂಗಿಯತು ಬಂದ ಸುದ್ದಿ.

ವೃತ್ತಸಾರ.

— ಗೋವೆಯೊಳಗಿನ ದೊಳಗಿನಂತೆ ನವಾತಿ ಬೇರೆಯೊಳಗಿನ ೩೫೦೦ ಕ್ರೈಸ್ತ ಗಾವಡಿ ಜಾತಿಯವರಿಗೆ ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳಲಾಯಿತು. ಸಾತಾರೆಯ ಶ್ರೀಮನ್ನಾರಾಯಣ ವಿದ್ಯಾಲಂಕಾರ ಶ್ರೀಮದ್ ಗಾಯತ್ರಿಕರಂತರ ಸ್ವಾಮಿಗಳ ಶ್ರೀ ದಸಂಗವರಾಜತೀರ್ಥರಿಂದ ಈ ಶುದ್ಧಿ ಕಾರ್ಯವು ನೆರವೇರಿತು. ಈ ಕ್ರಿಸ್ತೀ ಜನರು ಮೂಲ ಹಿಂದುಗಳಿದ್ದು, ಪೋರ್ತುಗೀಸರ ಕಾಲದಲ್ಲಿ ಕ್ರೈಸ್ತ ಮತ್ತಾಂತರ ಹೊಂದಿದವರು. ಇವರ ನಡಾವಳಿಗಳೆಲ್ಲ ಈಗಲೂ ಹಿಂದುಗಳಂತೆಯೇ ನಡೆಯುತ್ತವೆ. ಜನನ, ವಿವಾಹ, ಮರಣ ಸಂಸ್ಕಾರಗಳು ಮಾತ್ರ ಕ್ರೈಸ್ತ ಪಾದ್ರಿಗಳಿಂದ ನಡೆಯುತ್ತಿದ್ದವು. ಶುದ್ಧಿಕರಣ ವಿಧಿ, ಪ್ರಾಯಶ್ಚಿತ್ತಗಳನ್ನು, ಮಂತ್ರೋಪದೇಶ, ಪುಣ್ಯಾಹವಾಚನ, ಮಂತ್ರೋದಕ ಸ್ನಾನ, ಗೋಪೂಜನ, ಋಷಿಪೂಜನ, ಸಭಾಪೂಜನ ಮುಂತಾದ ವಿಧಿಗಳು ನಡೆದವು. ಸಮಸ್ತ ಆವರು ಹಿಂದುಗಳಲ್ಲಿ ಸೇರಿಸಲ್ಪಟ್ಟರು. ಕರವೀರ ಪೀಠಾಧಿಪರಾದ ಶ್ರೀ ಶಂಕರಾಚಾರ್ಯರು ಅನುಕೂಲ ಸಂದೇಶವನ್ನು ಕಳಿಸಿದ್ದರು. ಇವರು ಕ್ರಿಸ್ತಮತದಲ್ಲಿ ಸೇರಿದಾಗ್ಯೂ ಅಭಕ್ಷ್ಯ ಭಕ್ಷಣ ಮಾಡಿಲ್ಲ, ಆಚೀಯ ಪಾನ ಮಾಡಿಲ್ಲ; ತೀರ ನಿಷ್ಠಾವಂತ ಹಿಂದುಗಳಾಗಿದ್ದರು. ಪೂನೆಯಲ್ಲಿ ಈ ಶುದ್ಧಿ ಕಾರ್ಯ ಕ್ರೈಸ್ತ ಮಿಷನರಿ ಸೊಸಾಯಿಟಿಯವರ ನೇತೃತ್ವದಲ್ಲಿ ಸಭೆಯಾಗಿ ಕ್ರೈಸ್ತರ ಕಡೆಯಿಂದ ಅವರಿಗೆ ಆಗಬಹುದಾದ ಅನಾನುಕೂಲತೆಗಳನ್ನು ಪರಿಹರಿಸುವದಕ್ಕಾಗಿ ನಿಧಿ ಸಂಗ್ರಹ ಮಾಡಬೇಕೆಂದು ಗೊತ್ತಾಗಿದೆ. ಅಧ್ಯಕ್ಷರು ೧೧೧ ರೂಪಾಯಿಗಳನ್ನು ಕೊಟ್ಟರು. ಇವರೆಲ್ಲರಿಗೆ ಯೋಗ್ಯ ಸ್ಥಳದ ವ್ಯವಸ್ಥೆ ಮಾಡುವದಕ್ಕಾಗಿ ಎರಡು ಲಕ್ಷ ರೂಪಾಯಿ ಬೇಕಾಗುವದಾಗಿ ಶ್ರೀ ಚಿತ್ಪಾವನ ಶಾಸ್ತ್ರಿಗಳು ಹೇಳಿದರು. ಸನಾತನ ಧರ್ಮಾಭಿಮಾನಿಗಳು ಮುಂದುವರಿದು ಈ ಸಂಘಟನಾ ಕಾರ್ಯಕ್ಕೆ ನೆರವಾಗಬೇಕು.

— ಸ್ಥಳದ ಶಾಲೆಗೆ ಸಂಬಂಧ ಖರ್ಚು ಕೊಡುವದಾಗಿ ಬಂದ ಕಾಯದೆ ಕೌನ್ಸಿಲು ತೀರ್ಮಾನಿಸಿದೆ. ಒಂದಿದ್ದರೆ; ಆದರೆ ಮಾರಕ ಕಳಿಸಲಿಕ್ಕಾದರೂ ಹಣ ಬೇಕೆಂದು ಸರಕಾರ ಪಕ್ಷದ ಸಭಿಕರು ಮಾಡಿಸಿದರು. ಬ್ರಿಟಿಶ ಸರಕಾರವು ಸಮ್ಮತಿಸಿದೆ; ಆದರೆ ಕಡಿಮೆಯೆಂದು ಲೋಕಪಕ್ಷದವರು ವಾದಿಸಿ ಈ ಖರ್ಚನ್ನು ಅಲ್ಲಗಳೆದು ಬಿಟ್ಟರು.

— ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಉಪ್ಪಿನ ತೆರಿಗೆ, ಅನಕಮ್ ಟೆಕ್ಸ, ಟಪಾಲ ಹಾಸಲುಗಳನ್ನು ಹೇರುವ ಸರ್ಕಾರದ ಕರ ಹೇರಿಕೆಯ ಕಾನೂನು ಚರ್ಚೆಗೆ ಬಂತು. ಆ ಸಮಯದ ಲೆಡ್ಸ್ತರ ತನ್ನಾ ಪ್ರಭೃತಿ ಕೆಲವು ಪ್ರಮುಖರು ಹಾಜರಿದ್ದಿಲ್ಲ. ಕೆಲ ಮುಸಲ್ಮಾನ ಸಭಾಸದರು ಪ್ರತಿಕೂಲ ಮತ ಕೊಟ್ಟರು. ಆದರಿಂದ ಉಪ್ಪಿನ ತೆರಿಗೆಯನ್ನು ೧ ರೂಪಾಯಿಗೆ ಇದ ೮ ಆಣೆಗೆ ಇಳಿಸಬೇಕೆಂಬ ಸೂಚನೆಗಳು ಬಹುಮತದಿಂದ ರದ್ದಾದವು; ಬಿಲ್ಲಿಯ ಟಪಾಲ ಕಾರ್ಡ, ಅರ್ಧಾಣೆಯ ಟಪಾಲ ಪಾಕೀಟುಗಳನ್ನು ಪ್ರಾರಂಭಿಸಬೇಕೆಂಬ ಸೂಚನೆಗಳೂ ರದ್ದಾದವು. ವರಿಷ್ಠ ಕಾಯಿದೆ ಕೌನ್ಸಿಲು ರದ್ದುಪಡಿಸಿದ ಸೃಷ್ಟಿ—ಇಂಡಿಯಾ ಆಫೀಸು ಮುಂತಾದ ಖಾತೆಗಳ ಖರ್ಚನ್ನು ಸೆಕ್ರೆಟರಿಗಳು ಸರ್ವಾಧಿಕಾರಬಲದಿಂದ ಉದ್ಧರಿಸಿದ್ದಾರೆ.

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ ಮೋಟಾರಿನಲ್ಲಿ ಹಾಕುವಂಥ, ಉತ್ತಮ ರೀತಿಯಿಂದ ತಯಾರಿಸಿದ ತೆಂಗಿನ ನಾರಿನ ಚಾಪೆಗಳು ಸಿಗುತ್ತವೆ.

ದರ ಫೂಟಿಗೆ ೦—೩—೬

ಮೋಟಾರಿನ ಹತ್ಯಾರುಗಳನ್ನಿಡುವ ಬಗ್ಗೆ ಸಾಗವಾನಿ ಕಟ್ಟಿಗೆಯಿಂದ ತಯಾರಿಸಿದ ಬೇಗ ಸಮರ್ಪಕವಾದ ಪೆಟ್ಟಿಗೆಗಳು ಹಾಗೂ ಮೋಟಾರ ಬಾಡಿ ಬಗ್ಗೆ ಸೈಡಲಿಂಗ್ಸ ಯೋಗ್ಯ ದರದಿಂದ ತಯಾರಾಗಿ ಸಿಗುತ್ತವೆ. ಪೆಟ್ಟಿಗೆ ೧ಕ ಬೆಲೆ ರೂ. ೩. ಸೈಜು ೩'×೧'×೧'.

ಬೇಕಾದವರು ಅರ್ಧದಷ್ಟು ರೂ ೨—೦—೦ ಮುಂಗಡವಾಗಿ ಕಳಿಸಬೇಕು.

ವಿಳಾಸ:— ಎಸ್. ಎಮ್. ಪಂಡಿತ,

ಮೋಟಾರ ಟಿಕೀಟ ಆಫೀಸ, ದುರ್ಗಾಕೇರಿ. ಹೊನ್ನಾವರ. (೫ ಕ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ತೇಗಿ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಷನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತು ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಕಾನಡಾ ವೃತ್ತ.

ವಿಶ್ವ ಪ್ರಭವ ಸಂ। ಫಾ। ೯ ಬು। ೬ ಷ್ಟ್ರಿ, ಸೋಮವಾರ

ಗೋವೆಯ ಗಡಿಬಿಡಿ.

ಗೋಮಾಂತಕದಲ್ಲಿ ಈಗ ದೊಡ್ಡದೊಂದು ಪ್ರಯತ್ನವೆದ್ದಿದೆ. ಈ ಪ್ರಯತ್ನವು ಈಗ ಅಖಿಲ ಹಿಂದುಸ್ಥಾನದಲ್ಲಿ ಚರ್ಚಿಸಲ್ಪಡುತ್ತಿದ್ದದರಿಂದ ಅದರ ಸ್ವರೂಪವನ್ನಷ್ಟು 'ವೃತ್ತ'ದ ವಾಚಕರಿಗೆ ಅರುಹಬೇಕಾಗಿದೆ

ಗೋಮಾಂತಕದಲ್ಲಿ ಪ್ರಮುಖ್ಯವಾಗಿ ಹಿಂದುಗಳ ವಸ್ತಿ ಇತ್ತು. ಪೋರ್ತುಗೀಜರ ದಾಳಿನಲ್ಲಿ ಬಲಾತ್ಕಾರದಿಂದಲೂ, ಮೋಹಗಳಿಂದಲೂ, ಮನಪ್ರೀತಿಯಿಂದಲೂ ಅನೇಕರು ಕ್ರೈಸ್ತ ಧರ್ಮದಲ್ಲಿ ಸೇರಿಹೋದರು. ಆದರೆ ಧರ್ಮಾಂತರ ಹೊಂದಿದವರು ತಮ್ಮ ಹಿಂದಿನ ಧರ್ಮದ ಆಚಾರ-ವಿಚಾರಗಳನ್ನು ತ್ಯಜಿಸಲಿಲ್ಲ. ಕ್ರೈಸ್ತ ಧರ್ಮದಲ್ಲಿ ಜಾತಿಭೇದವಿಲ್ಲದಿದ್ದಾಗ್ಯೂ, ಈ ಧರ್ಮಾಂತರವಾದೊಡನೆ ಅಲ್ಲಿಯೂ ಜಾತಿಭೇದಗಳುಂಟಾದವು. ಬ್ರಾಹ್ಮಣ ಕ್ರಿಶ್ಚನರು, ಶೂದ್ರ ಕ್ರಿಶ್ಚನರು ಹೀಗೆ ಭೇದಗಳುಂಟಾದವು. ಬ್ರಾಹ್ಮಣರಿದ್ದವರು ಬ್ರಾಹ್ಮಣರ ನಡೆ-ನುಡಿಗಳನ್ನು ಅಪ್ರತಿಹತವಾಗಿ ಈಗಲೂ ಪಾಲಿಸುತ್ತ ಬಂದಿದ್ದಾರೆ. ಬ್ರಾಹ್ಮಣ ಪೂರ್ವಜರು ನಡಕೊಳ್ಳುವಂತೆ ಹಿಂದು ದೇವಾಲಯಗಳಿಗೆ ಶುಭ ಶೋಭನಾದಿ ಕಾರ್ಯಗಳಲ್ಲಿ ಹೋಗಿ ಕಾಣಿಕೆಗಳನ್ನರ್ಪಿಸುತ್ತಾರೆ. ಹಿಂದು ಧರ್ಮಕ್ಕೆ ನಿಷಿದ್ಧವಾದ ತಿಂಡಿಗಳನ್ನು ತಿನ್ನುವದಿಲ್ಲ, ಪಾನಗಳನ್ನು ಕುಡಿಯುವದಿಲ್ಲ. ನಿರುಪಾಯದಿಂದ ಜನನ-ವಿವಾಹ ಹಾಗು ಮರಣ ಸಮಯ ಕ್ರೈಸ್ತ ಧರ್ಮದ ವಿಧಿಗಳನ್ನು ಪಾಲಿಸುತ್ತಾರೆ. ಹಿಂದು ಧರ್ಮದ ಪರಂಪರೆಯು ಅವರಿಗೆ ಯಾವಾಗಲೂ ಕಷ್ಟ ಕೊಡುತ್ತಲಿತ್ತು. "ಮರಳಿ ಹಿಂದು ಧರ್ಮದಲ್ಲಿ ಸೇರಿರಿ, ನಮ್ಮ ಧರ್ಮವು ಹಿಂದು. ಅದೇ ನಮಗೆ ತಾರಕೋಪಾಯವು," ಎಂದು ಅವರ ಮನೋದೇವತೆಯು ಅವರಿಗೆ ಆಗಿಂದಾಗ ಹೇಳುತ್ತಿದ್ದಾಗ್ಯೂ, ಉಪಾಯ ಕಾಣದೆ ಅವರು ಸುಮ್ಮನೆ ಉಳಿಯಬೇಕಾಗಿತ್ತು.

ನಾಸಿಕದ ಬ್ರಹ್ಮಚರ್ಯಾಶ್ರಮದ ಶ್ರೀ ವಿನಾಯಕ ಮಹಾರಾಜ ಮಸೂರಕರರವರು ಸಂಚಾರದಲ್ಲಿದ್ದಾಗ ಗೋಮಾಂತಕದಲ್ಲಿ ಧರ್ಮಾಂತರ ಹೊಂದಿದ ಸನಾತನಿಗಳ ಸ್ಥಿತಿಯನ್ನು ಪರಾಂಬರಿಸಿದರು. ಶಾಸ್ತ್ರಾಧಾರದಂತೆ ಅವರಿಗೆ ಪ್ರಾಯಶ್ಚಿತ್ತವನ್ನು ಕೊಟ್ಟು ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳಲಿಕ್ಕೂ ತಯಾರಾದರು. ಕಳೆದ ತಾರೀಖು ೨೬ನೇಗೆ ರಾಯಬಂದರದ ಬಳಿ ಚಿಂಬಲ ಗ್ರಾಮದಲ್ಲಿ ಗಾವಡಿ ಜಾತಿಯ ಜನರಿಗೆ ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳುವ ವಿಧಿಯು ಆಶ್ರಮದ ಶಿಷ್ಯರಾದ ಶ್ರೀ। ಅನಂತಮೂರ್ತಿಯವರ ನೇತೃತ್ವದಲ್ಲಿ ನೆರವೇರಿತು. ಶಿಖಾಧಾರಣ ವಿಧಿ, ತೈಲಾಭ್ಯಂಗ, ಮೃತ್ತಿಕಾಲೇಪನ, ಹೋಮಾಗ್ನಿ, ಮಂತ್ರೋದಕಸ್ನಾನ ಮುಂತಾದ ವಿಧಿಗಳು ನಡೆದವು. ಸ್ತ್ರೀಯರಿಗೆ ಮಂಗಲದಾಯಕವಾದ ಕುಂಕುಮತಿಲಕವು ೩೦೦-೪೦೦ ವರ್ಷಗಳ ಮೇಲೆ ಪುನಃ ಹಚ್ಚೋಣಾಯಿತು. ಆ ಕಾಲಕ್ಕೆ ನೆರೆದ ಸಭಿಕರಲ್ಲುಂಟಾದ ಉತ್ಸಾಹಾತಿಶಯವನ್ನು ಕಲ್ಪಿಸಿಯೇ ತೀರಬೇಕು. ಗೋಪೂಜನ, ಋಷಿಪೂಜನ, ಸಭಾಪೂಜನ ಮುಂತಾದ ಸಂಸ್ಕಾರಗಳು ವಿಧಿ ಸಾಂಗವಾದವು. ಹಿಂದು ಧರ್ಮಕ್ಕೆ ಉಚಿತವಾದ ನಾಮಕರಣ ವಿಧಿಯೂ ನೆರವೇರಿ ಫ್ಲಿತೋರಿನರು ವಿಠ್ಠಲರಾದರು, ಜೂಜೆ ದಿಯೋಗರವರು ಸಖಾರಾಮ ದಿವಾಕರರಾದರು; ಕಾಯತಾನ ಪೆರೇರರವರು ಕೇಶವ ಕಾಂಬಳಿಕರರಾದರು, ಜಾಕಿ ಆಂತ್ರಾದರವರು ಜಗನ್ನಾಥ ಹಡಕೋಣಕರರಾದರು; ಹೀಗೆ ಅಲ್ಲಿ ಅವಸ್ಥಾಂತರ ಉಂಟಾಗಿದೆ.

ಕ್ರೈಸ್ತರು ದಿಗಿಲು ಬಿದ್ದಿದ್ದಾರೆ. ಸ್ವಧರ್ಮದೊಳಗಿಂದ ಹೊರಹೋಗುವವರ ಮೇಲೆ ಸರಕಾರವು ತಕ್ಕ ಉಪಾಯಗಳನ್ನು ಕೈಕೊಳ್ಳಬೇಕಾಗಿಯೂ, ಧರ್ಮಾಂತರ ಮಾಡುವ ಶ್ರೀ। ಅನಂತಮೂರ್ತಿಗಳಾದಿ ಪ್ರಸಾರಕರನ್ನು ಹೊರತಳ್ಳಲು ತಕ್ಕ ಯೋಜನೆ ಮಾಡಬೇಕಾಗಿಯೂ ಪೋರ್ತುಗೀಜ ಸರಕಾರದ ಬಳಿ ಆಗ್ರಹವಾಗುತ್ತಿದೆ. ಜನರು ಹಿಂದು ಧರ್ಮದಲ್ಲಿ ಮರಳಿ ಸೇರದಂತೆ ಹೂಳಿಗಳೂ ಎದ್ದೇಳುತ್ತಿವೆ. "ಹಿಂದೂ ಧರ್ಮದಲ್ಲಿ ಸೇರಿದರೆ, ಅವರ ಆಸ್ತಿಗಳು ಸರಕಾರಕ್ಕೆ ಜಪ್ತಾಗುವವಾಗಿ" ಕ್ರೈಸ್ತ ಮತ ಪಕ್ಷಪಾತಿ ಪತ್ರಿಕೆಗಳು ಪ್ರಕಟಿಸಲಾರಂಭಿಸಿವೆ. ಆದರೆ, ಈ ಹೂಳಿಗಳೆಲ್ಲ ನಿರರ್ಥಕವಿವೆ. ಹಿಂದು ಪಕ್ಷಪಾತಿಗಳಾದ "ಹಿಂದ," "ಭಾರತ" ಪತ್ರಿಕೆಗಳು ಕಾಲಕಾಲಕ್ಕೆ ಸಾಧಾರ ಸುದ್ದಿಗಳನ್ನು ಪ್ರಕಟಿಸಿ, ಹಿಂದುಗಳಿಗೆ ಹುರಿದುಂಬಿಸುತ್ತಿವೆ. ಇದರಿಂದ ಹಿಂದು ಧರ್ಮದಲ್ಲಿ ಸೇರುತ್ತಿದ್ದವರ ಸಂಖ್ಯೆಯು ದಿನೇ ದಿನೇ ಹಿಗ್ಗುತ್ತಿದೆ. ೮-೧೦ ದಿನಗಳಲ್ಲಿ ೬ ೩॥ ಸಾವಿರಕ್ಕೆ ಮಿಕ್ಕ ಜನರು ಹಿಂದುಗಳಾಗಿದ್ದಾರೆ. ಇನ್ನೂ ಹಿಂದುಗಳಾಗುವ ತಯಾರಿ ನಡೆದಿದೆ. ಕ್ರೈಸ್ತ ಪಾದ್ರಿಗಳು ಈ ತನಕ ನಡಿಸಿದ ಪೀಡಕ್ಕೆ ಬಾಯೊಡೆಯಲಾರಂಭಿಸಿದ.

ಪೋರ್ತುಗೀಜ ಸರಕಾರವು ರಿಪಬ್ಲಿಕನ್ ಯಾನೆ ಲೋಕಸತ್ತಾತ್ಮಕ ರಾಜ್ಯವು. ಈ ರಾಜ್ಯದಲ್ಲಿ ಧರ್ಮದ ಹಿಡಿತವಿಲ್ಲ. ಧರ್ಮಸ್ವಾತಂತ್ರ್ಯವಿದೆ. ಬೇಕಾದವರು ಬೇಕಾದ ಧರ್ಮವನ್ನು ಅಂಗೀಕರಿಸಲು ಯಾರಿಗೂ ಪ್ರತ್ಯವಾಯವಿಲ್ಲ. ಧರ್ಮಪ್ರಚಾರಕರೂ, ಧರ್ಮಸ್ವೀಕಾರಕರೂ ಗೋಮಾಂತಕದಲ್ಲಿ ಎಲ್ಲರೂ ಸ್ವತಂತ್ರರೇ. ಆದರಿಂದ ಗೋವೆಯ ಗವ್ಹರ್ನರರು ಪಾದ್ರಿಗಳ ಉಪದೇಶವನ್ನು ಮನ್ನಿಸದೆ, ಧರ್ಮಾಂತರ ಕಾರ್ಯದಲ್ಲಿ ಕೈಹಾಕಲೊಪ್ಪಿದ್ದಿಲ್ಲವಾಗಿ ಮೊದಲೊಂದು ಸುದ್ದಿ ಬಂದಿತ್ತು. ಈಗ ಪ್ರಕಟವಾದ ಸುದ್ದಿಯ ಮೇಲಿಂದ ಅಲ್ಲಿಯ ಗವ್ಹರ್ನರರು ಪಾದ್ರಿಗಳ ಜಾಲದಲ್ಲಿ ಸಿಲುಕಿಕೊಂಡಿರುವರೆಂದು ಹೇಳಬೇಕಾಗಿದೆ. ಶ್ರೀ। ಅನಂತಮೂರ್ತಿಗಳಿಗೂ ಅವರ ಜೊತೆಗಾರರಾದ ಗಣಪತಿ ಬುವಾರವರಿಗೂ ಕಳೆದ ಸೋಮವಾರಕ್ಕೇ ಸೆರೆಹಿಡಿಯೋಣಾಗಿರುವದಂತೆ. ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಿಗೆ ಈ ಸುದ್ದಿ ತಿಳಿದೊಡನೆ ಅವರು ಗೋವೆಯ ಸರ್ವಾಧಿಪತಿಗಳಿಗೆ ಒಂದು ಪತ್ರ ಬರೆದರು. "ಶ್ರೀ। ಅನಂತಮೂರ್ತಿ—ಗಣಪತಿ ಬುವಾರವರಿಗೆ ಸೆರೆಹಿಡಿದಿರುವದಾಗಿ ನಮಗೆ ತಿಳಿದು ಬಂದಿದೆ. ಕಾರಣವಿನ್ನೂ ತಿಳಿಯದು. ನಮಗೆ ಕಾರಣ ತಿಳಿಸಿರಿ. ಆರೋಪಿಗಳ ಅಪರಾಧವನ್ನು ನ್ಯಾಯದಂತೆ ವಿಚಾರಿಸಿ, ಮುಂದಿನ ಕ್ರಮವನ್ನು ಕೈಕೊಳ್ಳಬೇಕು." ಹೀಗೆ ೩೫ ಮಂದಿ ಸಭಾಸದರು ಗೋಮಾಂತಕದ ಸರ್ವಾಧಿಕಾರಿಗಳಿಗೆ ಬಿನ್ನೈಸಿಕೊಂಡಿದ್ದಾರೆ. ಪೋರ್ತುಗೀಜ ಸರಕಾರದ ಧರ್ಮಸ್ವಾತಂತ್ರ್ಯದ ತತ್ವಪರೀಕ್ಷೆಯನ್ನು ಶ್ರೀ। ಅನಂತಮೂರ್ತಿಯವರೂ, ಗಣಪತಿ ಬುವಾರವರೂ ಮಾಡಲಿಕ್ಕಿದ್ದಾರೆ. ಸರ್ವಾಧಿಪತಿಗಳು ದೀರ್ಘ ವಿಚಾರ ಮಾಡಬೇಕು, ಪಾಪವನ್ನು ಇನ್ನು ಬಚ್ಚಿಡಲು ಶಕ್ತಿ ಪಾಪಾತ್ಮ್ಯವನ್ನು ಮಾಡಲಾಗದು. ಸ್ವಚ್ಛೆಯಿಂದ ಹಿಂದು ಧರ್ಮವನ್ನು ಸೇರಲಿಚ್ಛಿಸುವವರಿಗೆ ಸಂಕೋಚವಿಲ್ಲದೆ ಸೇರಬಿಡಬೇಕು. ಬ್ರಹ್ಮಚರ್ಯಾಶ್ರಮದ ಕಾರ್ಯದಲ್ಲಿ ಪ್ರತಿಬಂಧವನ್ನೊಡ್ಡಿ ಲೋಕಾಪವಾದಕ್ಕೆ ಗುರಿಯಾಗಬಾರದು. ಹಿಂದು ಧರ್ಮಪ್ರಸಾರ ಕಾರ್ಯಕ್ಕೆ ತಡೆಯಾಗಲು ಇನ್ನು ಪ್ರಯತ್ನಿಸಿದರೆ ಅದಕ್ಕಿಂದೂ ಯಶಸ್ಸು ಬರದು. ಅಷ್ಟು ಜಾಗೃತಿಯೂ, ಮನೋನಿಶ್ಚಯವೂ ಹಿಂದು ಧರ್ಮಪ್ರಸಾರಕರಲ್ಲಿ ಉಂಟಾಗಿದೆ. ಇದನ್ನರಿತುಕೊಂಡು, ವೃಥಾ ಗಡಿಬಿಡಿಯನ್ನು ಉಂಟು ಮಾಡಬಾರದಾಗಿ ನಮ್ಮದೊಂದು ಸೂಚನೆ ಇದೆ.

— ಅಮೇರಿಕೆಯಲ್ಲಿ ವಿಮಾನವು ಹಾರ್‍ಯಾಡುತ್ತಿರುವಾಗ ನಭೋಮಂಡಲದಲ್ಲಿ ರಣ ಹದ್ದಿಗೆ ತಾಗಿ ವಿಮಾನವು ಕಾಂಪರು ಕಳೆಬಿತ್ತು, ರಣಹದ್ದು ಸತ್ತು ಬಿತ್ತು; ವೈಮಾನಿಕರೂ ಮಡಿದರು.

— ಶಿರಹಟ್ಟಿ ನಾಟಕ ಮಂಡಳಿಯವರು ಉಡುಪಿಯಲ್ಲಿ ಒಂದು ನಾಟಕ ಪ್ರಯೋಗ ಮಾಡಿ ಬಂದ ಉತ್ಪನ್ನವನ್ನು ಬಾಗಲಕೋಟೆಯ ಹಿಂದುಸ್ಥಾನ ಸೇವಾದಳದ ಗರಡಿ ಮನೆಗೆ ಅರ್ಪಿಸಿದರು.

ಸ್ಫುಟ ಸೂಚನೆಗಳು.

೧ ವರಿಷ್ಠ 'ಕಾಯಿದೆ' ಕೌನ್ಸಿಲಿನಲ್ಲಿ ಲೋಕ ಪಕ್ಷವು ಸರಕಾರದ ನಿರಂಕುಶ ಕಾರಭಾರವನ್ನು ಪೈಲಿಗೆಳೆದು ಸರಕಾರಕ್ಕೆ ಪುನಃ ಪುನಃ ಸೋಲು ಸುತ್ತಿರುವದೆಂದು ತಿಳಿಸಲು ಸಂತೋಷವಾಗುತ್ತದೆ. ಹಿಂದುಸ್ಥಾನದೊಳಗಿನ ಸೈನ್ಯದಲ್ಲಿ ಭಾರತೀಯರನ್ನು ಹೆಚ್ಚಿಗೆ ಸೇರಿಸಿಕೊಳ್ಳಬೇಕೆಂಬ ಯೋಜನೆಯನ್ನು ವರಿಷ್ಠ ಕಾಯಿದೆ ಕೌನ್ಸಿಲಿನಿಂದ ನೇಮಿಸಲ್ಪಟ್ಟ ಸ್ಕೀನ ಕಮೀಟಿಯವರು ಮಾಡಿದ್ದರು. ಆ ಶಿಫಾರಸನ್ನು ಹಿಂದುಸ್ಥಾನ ಸರಕಾರವು ತಿರಸ್ಕರಿಸಿತು. ಅದರಿಂದ ಸ್ಕೀನ ಕಮೀಟಿಯ ಸಭಾಸದರೊಳಗೊಬ್ಬರಾದ ಬೆನಿಸ್ಟರ ಜಿನ್ನಾಸಾಹೇಬರು ಹಿಂದುಸ್ಥಾನ ಸರಕಾರದ ಮೇಲೆ ನಿಂದಾವ್ಯಂಜಕ ಠರಾವನ್ನು ಸೂಚಿಸಿ ಮುಂದೂಡ ಮಾಡಿಸಿಕೊಂಡಿದ್ದಾರೆ. ಆ ಕಾಲಕ್ಕೆ ಬೆರಿಸ್ಟರ ಜಿನ್ನಾಸಾಹೇಬರು ನಿರ್ಭೀಡೆಯಿಂದ ಮಾತಾಡಿದರು. ಸರಕಾರದ ಮೇಲಿನ ತಮ್ಮ ನಂಬಿಗೆಯು ನಷ್ಟವಾಗಿರುವದಾಗಿಯೂ ಸ್ಪಷ್ಟವಾಗಿ ಹೇಳಿದರು. ಲಷ್ಕರದ ಶಾಯುದಲ್ಲಿ ಹಿಂದುಸ್ಥಾನದ ಮೇಲೆ ಬ್ರಿಟಿಶ ದೇಶದ ಅಧಿಕಾರವನ್ನು ಅಳ್ವಳಿಸುವ ಭಾರತೀಯರು ಬಯಸುತ್ತಾರೆಂಬದ. ಲೋಕಪಕ್ಷದ ಮನೋಭಿಲಾಷೆಯನ್ನು ಸೂಚಿಸಿ, ಸೇನಾಪತಿಗಳಾದ ಸರ್ ವಿಲಿಯಮ್ ಬರ್ಡವುಡ್‌ರವರು ಚರ್ಚೆಯ ಕಾಲಕ್ಕೆ ಕಾಯಿದೆ ಕೌನ್ಸಿಲಿನ ಮಂದಿರದಲ್ಲಿ ಹಾಜರಿದ್ದಿಲ್ಲ. ಇದು ಅಧ್ಯಕ್ಷರಾದ ಶ್ರೀ॥ ವಿಠ್ಠಲಭಾಯಿ ಪಟೇಲರವರು ಅಪ್ರಶಸ್ತವಾಯಿತೆಂದು ಅಭಿಪ್ರಾಯಪಟ್ಟರು. ಈ ಅಭಿಪ್ರಾಯದಿಂದ ಅನೇಕ ಸರಕಾರದ ಕಡೆಯ ಸಭಿಕರು ಉದ್ವಿಗ್ನರಾಗಿ ಎದ್ದುನಡೆದರು. ಜೊತೆಗೆ ಬೆರಿಸ್ಟರ ಜಿನ್ನಾರವರ ನಿಂದಾವ್ಯಂಜಕ ಠರಾವು ಪ್ರಚಂಡ ಬಹುಮತದಿಂದ ಮುಂದೂಡಲಾಯಿತು. ಸೈನ್ಯ ಖಾತೆಯ ಈಗಿನ ಧೋರಣವನ್ನು ಚರ್ಚಿಸಿ, ದಿವಾಣ ಚಮನಲಾಲರವರು ಆ ಖಾತೆಗೆ ಬರೇ ೧ ರೂಪಾಯಿ ಮಾತ್ರ ಕೊಡಬೇಕಾಗಿ ತಂದ ಠರಾವು ಮುದೂಡಲಾಯಿತು. ಭಾರತ ಮಂತ್ರಿಗಳ ನಿರಂಕುಶ ಕಾರಭಾರವನ್ನು ಚರ್ಚಿಸಿ, ಅದಕ್ಕಾಗಿ ಖರ್ಚಾಗುವ ೧೩ ಲಕ್ಷ ೬೮ ಸಾವಿರ ರೂಪಾಯಿಗಳನ್ನು ಕಡಿಮೆ ಮಾಡಬೇಕಾಗಿ ಡಾ॥ ಅಯ್ಯಂಗಾರರವರು ತಂದ ಸೂಚನೆಯು ಮಂಜೂರಾಯಿತು. ಇಂಡಿಯಾ ಅಫೀಸನ್ನು ನಿರ್ಮೂಲಗೊಳಿಸುವುದಲ್ಲದೆ, ಹಿಂದೀ ಪ್ರಜೆಗಳ ಮೇಲೆ ಕಂಪನಿ ಸರಕಾರಕ್ಕಿಂತ ನಿರಂಕುಶ ಕಾರಭಾರವು ನಡೆಯುತ್ತದಾಗಿಯೂ ಲೋಕಪಕ್ಷದ ಆಂದೋಲನವಾಯಿತು. ಹೀಗಿಲ್ಲಿ ಹಿಂದುಸ್ಥಾನ ಸರಕಾರಕ್ಕೆ ಲೋಕಪ್ರತಿನಿಧಿಗಳು ಐಕ್ಯಮತ್ಯದಿಂದ ಛಿದಿರಾಗುತ್ತಿದ್ದಾರೆ. ಇದು ನಿಜವಾಗಿ ಆನಂದದಾಯಕ ಸಂಗತಿಯು.

೨. ಬಾರ್ಡೋಲಿಯ ಸತ್ಯಾಗ್ರಹವು ಸುಸಂಘಟಿತವಾಗಿ ಸಾಗಿದೆ. ಸ್ವಯಂಸೇವಕರು ಗ್ರಾಮಾಂತರಗಳಿಗೆ ಹೋಗಿ ತಕ್ಕ ಉಪದೇಶ ಕೊಟ್ಟು ಅವರ ಮನ ಒಲಿಸುತ್ತಿರುವರು. ಶ್ರೀ॥ ಅಬ್ಬಾಸಾಹೇಬ, ಮೋಹನಲಾಲ ಪಂಡ್ಯಾ, ಕಲ್ಯಾಣಜಿ, ಮಿಸೆಸ್ ಸೌ॥ ಮಿಠುಬೇನರವರು ಸಭೆ ಸೇರಿಸಿ ಪ್ರಜೆಗಳಿಗೆ ಹುರಿದುಂಬಿಸುತ್ತಿದ್ದಾರೆ. ಬ್ರಾಹ್ಮಣರೂ, ರಜಪೂತರೂ, ಪಾಟಿದಾರರೂ ರೇಲಿಯ ರಾಣೀಪ್ರಜೆಗಳೂ, ಕುಂಬಾರರ ಸಮೇತ ಈ ಪ್ರಯತ್ನದಲ್ಲಿ ಸೇರಿದ್ದಾರೆ. ವಾಂಕಾನೇರದ ಹುಮ್ಮದೀಯರೂ ಕಂದಾಯ ಕೊಡದಿರುವ ಪ್ರಯತ್ನದಲ್ಲಿ ಸೇರಿದ್ದರು. ಕೀರ್ತಿ ಪಡೆಯಲೆಂದು ಸರಕಾರದಿಂದ ಪುರಿ, ಸಿಕಂದ್, ಸುಪ್ಪೆ, ವಗಾರ ಈ ಮೊದಲಾದ ಗ್ರಾಮಗಳಲ್ಲಿ ನೋಟೀಸುಗಳೂ ಕೊಡಿಸಲಾಗಿವೆ. ೧೦ ದಿವಸಗಳ ಅವಧಿ ಕೊಡಲ್ಪಟ್ಟಿದೆ. ಆ ಮೇಲೆ ಜಮೀನು ಜಪ್ತ ಮಾಡುವ ಕ್ರಮವನ್ನು ಕೈಕೊಂಡಿದೆ. ಜನರು ಇದಕ್ಕೆ ನಿಶ್ಚಯ ಮನಸ್ಸಿನಿಂದ ಎದುರಾಗುತ್ತಿದ್ದಾರೆ. ಸಿಕಂದ್ ಗ್ರಾಮಕ್ಕೆ ಜಪ್ತಿ ಮಾಡಲು ಹೋದ ಗ್ರಾಮಾಧಿಕಾರಿಗಳು ಹೋದರು, ಅಲ್ಲಿಯವರೆಲ್ಲರೂ ಮನೆಗೆ ಬೀಗ ಹಾಕಿ ಊರು ಬಿಟ್ಟು ಹೋಗಿದ್ದರು. ಒಬ್ಬರ ಮನೆಯಲ್ಲಿಯೂ ಯಾರೂ ಇಲ್ಲದ್ದರಿಂದ ಜಪ್ತಿ ನಡೆಸಲು ಅಸಾಧ್ಯವಾಗಿ ಗ್ರಾಮಾಧಿಕಾರಿಗಳು ಎಂದ ದಾರಿಗೆ ಸುಂಕವಿಲ್ಲೆಂಬಂತೆ ಮರಳಿ ಬರಬೇಕಾಯಿತು. ಸ್ಥಿರಾಸ್ತಿಯನ್ನು ಜಪ್ತ ಮಾಡಲಿಕ್ಕೆ ಸರಕಾರವು ಇನ್ನೂ ನಿಶ್ಚಯ ಮಾಡಿಲ್ಲ. ಪಟೇಲರೂ ತಲಾಟಿಗಳೂ, ಇತರ ಕೆಲವು ಸರಕಾರಿ ಅಧಿಕಾರಿಗಳೂ ಈ ಕರನಿರಾಕರಣೆಯ ಪ್ರಯತ್ನದಲ್ಲಿ ಸಾರ್ವಜನಿಕ ಜೀವನ ಮಾಡಲು ಗಾರದು. ಈ ಪ್ರಕಾರ ಸರಕಾರದ ದಬ್ಬಾಳಿಕೆಯ ಕರ ಹೇರಿಕೆ ಇದರಾಗಿ ಅದನ್ನು ಪರಿಹರಿಸಿಕೊಳ್ಳಲು ಬೋರಸ ಕಟ್ಟಿದ್ದಾರೆ ಬಡ ಪ್ರಜೆಗಳೆಲ್ಲರೂ ಅದರಿಂದ ಮುಕ್ತರಾಗಲು ಪ್ರಾಪ್ತಿಯಾಗಲೆಂದು ಹರಸುತ್ತಾರೆ.

೩. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಶ್ರೀ॥ ಮುಂಡಸಾಥ ಭಟ್ಟ ಕರ್ಕಿಯವರು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಸರಕಾರದ ಜಂಗಲ ಧೋರಣದಿಂದ ಒದಗಿದ ಅವಸ್ಥೆಯನ್ನು ಸರಕಾರದ ಬಾಯಿಯಿಂದಲೇ ಹೊರಡಿಸಿದರು. ಆ ಸಂಗತಿಯನ್ನು ನಾವು ಮುಂಬಯಿ ಕಾಯಿದೆ ಕೌನ್ಸಿಲು ಸುದ್ದಿಯಲ್ಲಿ ನಿವೇದಿಸಿರುವೆವು. ೩೮ ವರ್ಷಗಳಲ್ಲಿ ೫೨ ಗ್ರಾಮಗಳು ಪಟ್ಟಕಾಡಿನಿಂದಲೂ, ಚಳಿಜ್ವರದಿಂದಲೂ, ಕಾಡು ಪಶುಗಳ ಪೀಡೆಯಿಂದಲೂ ನಿರ್ಜನವಾದವು ಇದನ್ನು ಕೇಳಿ ಎದೆಯೊಡೆಯುತ್ತಿದೆ. ಶ್ರೀ॥ ಕರ್ಕಿಯವರು ಈ ಗ್ರಾಮಗಳ ಕ್ಷೇತ್ರಫಲವನ್ನೂ ಲೋಕಸಂಖ್ಯೆಯನ್ನೂ ಅವರು ಪರ್ಯಾರ್ಜಿಸಿದ ಕರದ ಆದಾಯದ ಲೆಖ್ಖವನ್ನೂ ಸರಕಾರದ ಬಾಯಿಯಿಂದ ಹೊರಡಿಸಿದ್ದರೆ, ಜಂಗಲ ಖಾತೆಯಿಂದುಂಟಾದ ಹಾನಿಯ ನಿರ್ದೇಶವಾಗುತ್ತಿತ್ತು. ಜಂಗಲ ಖಾತೆಯ ಧೋರಣೆಯಿಂದ ಈ ಗ್ರಾಮಗಳು ನಿರ್ಜನವಾದದ್ದಲ್ಲದೆ, ವಾಸ್ತವ್ಯವಿದ್ದ ಗ್ರಾಮಗಳಲ್ಲಿಯೂ ತರತರದ ಕಷ್ಟಗಳೊದಗಿ ಜನರಿಗೆ ಸಂಸಾರ ಮಾಡಲು ಬಲು ಕಠಿಣವಾಗುತ್ತದೆ. ಪಟ್ಟಕಾಡಿನ ಬಳಿ ಉಳಕೊಳ್ಳುವದೆಂದರೆ, ಭಯಂಕರವಾದ ಯಾತನೆಯು, ಸ್ವಗ್ರಾಮದ ಪ್ರೀತಿಯು ಮೂಲಕವಾಗಿಯೂ, ಇತರ ಉದ್ಯೋಗಗಳನ್ನು ಕೈಕೊಳ್ಳಲು ಅನಾನುಕೂಲವಿರುವದರಿಂದಲೂ, ಜನರು ಈ ಯಾತನೆಗಳನ್ನು ಅನುಭವಿಸುತ್ತ ಆಯುಷ್ಯ ಕಳೆಯುತ್ತಾರೆ. ಸರಕಾರಕ್ಕೆ ಇದರಿಂದ ಲಾಭ ಸಿಗುವದೆಷ್ಟು ದುಬಿಷ್ಟರು? ಕಳೆದ ೧೯೨೬-೨೭ ಇಸ್ವಿಯಲ್ಲಿ ಸರಕಾರಕ್ಕೆ ಜಂಗಲ ಖಾತೆಯಿಂದ ೬೩-೬೪ ಲಕ್ಷ ಪ್ರಾಪ್ತಿಯಾಯಿತು. ೭೬ ಲಕ್ಷ ಆದಾಯ; ೪೩ ಲಕ್ಷ ಖರ್ಚು, ೩೪ ಲಕ್ಷ ಉತ್ಪನ್ನಕ್ಕಾಗಿ ೪೩ ಲಕ್ಷ ಖರ್ಚು ಮಾಡುವದು ಅರ್ಥಶಾಸ್ತ್ರಕ್ಕೆ ಸಮ್ಮತವಿಲ್ಲ. ಈ ೩೪ ಲಕ್ಷ ರೂಪಾಯಿಗಳನ್ನು ಸರಕಾರವು ಬೇರಿಂದ ಸಂಗ್ರಹಿಸಲಾರದೆ? ೫೩ ಗ್ರಾಮಗಳನ್ನು ಕೊಂದು ೩೪ ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವದು ರಾಜಧರ್ಮವೇನು? ಸರಕಾರವು ಇನ್ನಾದರೂ ವಿಚಾರ ಮಾಡಿದರೆ ಜನರಿಗೆ ಕ್ಷೇಮವಾಗುವದು, ಸರಕಾರಕ್ಕೂ ಲಾಭವಾಗುವದು.

ಸ್ಥಾನಿಕ ವೃತ್ತಾಂತ.

ಕುಮಟಾ— ೩-೪ ದಿವಸಗಳಿಂದ ಮೋಡ ಮುಸುಕುತ್ತಿದೆ ವಿಶೇಷ ಸೆಕೆ.

ನಿನ್ನೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಉಡುಪಿಯ ಶ್ರೀ॥ ಶ್ರೀಪಾದ ದಾಸ ಆಚಾರ್ಯ ಹಂಡೇ ಇವರು "ಕಲ್ಯಾಣ ಕಾಮಧೇನು ಉಪಾಖ್ಯಾನ" ಎಂಬ ಕಥೆಯ ಕನ್ನಡ ಕೀರ್ತನೆ ಮಾಡಿದರು. ಶ್ರೀ॥ ಹಂಡೇಯವರ ಕೀರ್ತನಕ್ಕೆಲಿಯೂ ಚಿತ್ತವೇಧಕವಿದೆ.

ನಿನ್ನೆ ಸುಮಾರು ೫ ತಾಸು ರಾತ್ರಿ ಇಲ್ಲಿಯ ಪಳ್ಳಿಯ ಬಳಿ ಹುಲಿಯ ಗರ್ಜನೆ ಕೇಳಿ, ಅನೇಕರು ಹೆದರಿದರು. ದೊಡ್ಡ ಹೊಡೆದು ಹುಲಿಗೆ ಓಡಿಸಿದರಂತೆ! ಊರಲ್ಲಿ ಸಂಚರಿಸುವಷ್ಟು ವ್ಯಾಘ್ರರಾಜನು ಎದೆ ಗಟ್ಟಿ ಮಾಡಿದನೇನ?

ಕಾರವಾರ— ಈ ವಾರದಲ್ಲಿ ಪ್ಲೇಗಿನ ಅಬ್ಬರ ವು ವಿಶೇಷ ತೋರುವದಿಲ್ಲ. ಇಬ್ಬರು ಸತ್ತರು. ಹೊಸ ಪ್ಲೇಗ ಪ್ರಕರಣಗಳೇನು ಕಾಣುತ್ತಿಲ್ಲ.

ರಾ॥ ನಿಜಾಮಸಕರರವರ ಮೋಟಾರ ಲಾರಿಗೆ ಗುರುವಾರ ಸಾಯಂಕಾಲ ೭ ಘಂಟೆಗೆ ಥಕ್ಕನೆ ಬೆಂಕಿ ಹತ್ತಿತು. ಆ ಕಾಲಕ್ಕೆ ಆ ಗಾಡಿಯು ಶಿಂಧೇರವರ ಅಂಗಡಿ ಬಳಿಯಿತ್ತು. ಬೆಂಕಿಯು ಶಿಂಧೇರವರ ಅಂಗಡಿಗೆ ತಾಗಿ ವಿಶ್ವಜನಕರು ಸಹಿತ ಅಂಗಡಿಯನ್ನೂ ಲಾರಿಯ ಉರಿಯಿಂದ ಬಂಧಿಸಿತು. ಫೌಜದಾರರೂ, ರಾ॥ ನ ಸಾಹೇಬ ಶೇಖನ ಪೋಲೀಸ ಶಿಪಾಯಿಯೂ ಕೂಡಲೆ ಬಂದರು. ಮೋಟಾರ ಬಂಡಿಯನ್ನು ಹಿಂದು ಬದಿಗೆ ಹಿಡಿಸಿಟ್ಟರು. ನೆರೆದ ಜನರು ಅಂಗಡಿಯ ಬೆಂಕಿಯನ್ನು ನಂದಿಸಿದರು. ಅಂತು ಅನಾಹುತವಾಗಲಿಲ್ಲವೆನ್ನದೇನು. ಇಲ್ಲದಿದ್ದರೆ ಬಳಿಯಲ್ಲಿದ್ದ ಪೆಟ್ರೋಲ ಎಣ್ಣೆಯ ಉಗ್ರಾಣಕ್ಕೆ ಅಗ್ನಿನಾರಾಯಣನು ಕೈನೀಡಿದ್ದರೆ, ಇಡೀ ಪೇಟೆಯು ಸುಟ್ಟು ಬೂದಿಯಾಗುತ್ತಿತ್ತು. ದೇವರೇ ತಪ್ಪಿಸಿದನು. ಮುನಿಸಿಪಾಲಿಟಿಯ ಬಳಿ ಒಂದು ನೀರಿನ ನಳ ಸಹ ಇಲ್ಲ. ಅಕಸ್ಮಾತದ ವಿಚಾರದಿಂದ ಮ್ಯುನಿಸಿಪಾಲಿಟಿಯವರು ಒಂದು ನೀರಿನ ನಳವನ್ನಿಡುವದು ಸುರಕ್ಷಿತ.

ಸಿರಸಿ— ದಿನಾ ಮಂಜು ಬೀಳುತ್ತಿದೆ ಹಗಲಿಗೆ ಸೆಕೆ ಬಹಳ. ಜ್ವರಾದಿ ರೋಗಗಳ ಬೀಡು ಇದ್ದೇ ಇದೆ.

ಊರಲ್ಲಿ ತಾಮ್ರಬೆಳ್ಳಿಯ ನಾಣ್ಯವಿಲ್ಲದೆ ಭಯಂಕರ ಬರಗಾಲ ಬಿದ್ದಿದೆ. ವರ್ತಕರಿಗೂ, ಗಿರಾಕಿಗಳಿಗೂ ಹುಚ್ಚು ಹಿಡಿದಿದೆ. ಎಲ್ಲಿ ನೋಡಿದರಲ್ಲಿ ನೋಟುಗಳೇ ನೋಟುಗಳು!! ಪಟಾವು ತಿನ್ನುವ ವ್ಯಾಪಾರಿಗಳ ಸುಗ್ಗಿಯೋ ಸುಗ್ಗಿ !!!

೧ ತಿಂಗಳ ಮುಂಚೆ ಒದಗಿದ ಮೋಟಾರ ಅಪಘಾತದ ಖಟ್ಲೆಯು ಸದ್ಯಕ್ಕೇ ನಡೆಯಲಿಕ್ಕಿದೆ (ಮೋಟಾರ ಡ್ರಾಯ್ವರಿಗೆ ಬಲ್ಲವರು ಮುಚ್ಚಳಿಕೆಯಾಗಿ ಬರುವರಂತೆ.

ಪೇಟೆಯಲ್ಲಿ ಮಾರ್ಗದ ಮೋರಿಗಳ ಸ್ಥಿತಿಗಳು ನಿಂತು, ಅದ್ಭುತವಲು ತೋರುವದೆ; ಪೋಲೀಸರು ತಕ್ಕ ಉಪಾಯ ಮಾಡಬೇಕು.

ಮಹಾತ್ಮರ ಆತ್ಮಚರಿತ್ರ.

(೪೨) ಪಾರ್ಶ್ವಶೂಲೆಯ ಚಿಕಿತ್ಸೆ.

ಪಾರ್ಶ್ವಶೂಲೆಯ ನಿವಾರಣೆಯಾಗಲೊಲ್ಲದು ಆದರಿಂದ ನನಗೆ ಚಿಂತೆಯಾಯಿತು ಆದರೆ, ಹೊಟ್ಟೆಯೊಳಗೆ ಔಷಧ ಕೊಳ್ಳುವದರಿಂದ ಈ ರೋಗದ ಪರಿಹಾರವಾಗಲಿಕ್ಕಿಲ್ಲೆಂದು ನನ್ನ ಅಭಿಪ್ರಾಯವಾಯಿತು ಆಹಾರದಲ್ಲಿ ತಕ್ಕ ತಿದ್ದುಪಾಟುಗಳನ್ನು ಮಾಡಿ ಬಾಹ್ಯೋಪಚಾರಗಳನ್ನು ಕೈಕೊಂಡರೆ, ರೋಗದ ಪರಿಹಾರವಾಗಬಹುದೆಂದು ನನಗನಿಸಿತು.

ಜನಸಿದ್ಧ ... ಹೆಸರು ಪಡೆದ ಡಾ॥ ಎಲಿನಸನ ... ಅವರ ಆಹಾರದಲ್ಲಿ ತಿದ್ದು ಪಾಟುಗಳನ್ನು ... ರೋಗಿಗಳ ಉಪ ... "ಮಹಾತ್ಮ ... ನನಗೆ ಅವರ ಪರಿಚಯ ... ಅವರು ಅಮೂಲಾಗ್ರ ನನ್ನ ಚಿಕಿತ್ಸೆ ಮಾಡಿದರು. ... ಕೊಳ್ಳಬಾರದೆಂದ ನಾನು ಮಾಡಿದ ಪ್ರತಿಜ್ಞೆಯನ್ನು ವಿವರಪೂರ್ವಕವಾಗಿ ಹೇಳಿದೆನು ... ಅವರ ... ನುಡಿದದ್ದೇನಂದರೆ — " ನೀವು ಹಾಲನ್ನು ಕೊಳ್ಳುವ ಅವಶ್ಯಕತೆಯಿಲ್ಲ ಕೆಲ ದಿನಗಳ ವರೆಗೆ ಸ್ನಿಗ್ಧ ಪದಾರ್ಥಗಳನ್ನು ನೀವು ಕೊಳ್ಳಬಾರದು " ಸಾಧಾರಣ ... ಹಿಟ್ಟಿನ ರೊಟ್ಟಿಯನ್ನೂ ಗಜ್ಜರಿ ಗಡ್ಡೆ ... ಉಳ್ಳಗಡ್ಡೆ ... ಕಂದ ಮೂಲಗಳನ್ನೂ ... ಹಣ್ಣು ಮೊಂತಾದ ಹಣ್ಣು-ಹಂಪಲಗಳನ್ನೂ ... ಅವರ ಹೇಳಿದರು ಕಂದ ಮೂಲಗಳನ್ನು ... ದಾಗಿದ್ದು, ಅಗಿದು ತಿನ್ನಲಾಗದಿದ್ದರೆ, ಅವನ್ನು ... ಅರೆದು ತಿನ್ನಬಹುದೆಂದೂ ಅವರು ಸೂಚಿಸಿದರು ... ದಿನಗಳ ವರೆಗೆ ಹೀಗೆ ಉಳಿದೆನು. ಆದರೆ, ಹಸಿ ಕಂದ ಮೂಲಗಳು ನನಗೆ ಸರಿಹೋಗಲಿಲ್ಲ ಈ ಪ್ರಯೋಗವನ್ನು ... ನೋಡುವಷ್ಟು ... ನನ್ನ ... ಹಸಿ ಕಂದ ಮೂಲಗಳನ್ನು ತಿನ್ನಲು ನಾನು ಹೆದರುತ್ತಿದ್ದೆ

ಡಾ॥ ಎಲಿನಸನ್‌ರವರ ಸಾಸಿವೆ ... ಕೈಕಾಲುಗಳನ್ನು ... ದಿನ ತಿಕ್ಕಿಸಬೇಕೆಂದೂ ಉಗುರು ಬೆಚ್ಚಗಿನ ನೀರಿನಿಂದ ... ಸೂರ್ಯ ... ಕಡೆಯಲ್ಲಿ ... ಕೊಳ್ಳಬೇಕೆಂದೂ ... ದೊಡ್ಡ ... ಪ್ರದೇಶದಲ್ಲಿ ... ಹೇಳಿದರು. ಈ ಸೂಚನೆಗಳಲ್ಲ ನನಗೆ ಸೇರಿದವು ... ಫ್ರೆಂಚ ಪದ್ಧತಿಯ ಕಿಡಕಿಗಳಿದ್ದವು, ಅವನ್ನು ತೆರೆದಿಟ್ಟರೆ, ಮಳೆ ... ಒಳಸೇರುತ್ತಿತ್ತು, ಒಳ ಕಿಡಿಕಿಯನ್ನು ತೆರೆಯಬರುತ್ತಿದ್ದಿಲ್ಲ, ಆದರಿಂದ ಕನ್ನಡಿಗಳನ್ನು ಒಡೆದು ವಾಯು ಸಂಚಾರಕ್ಕೆ ಎಡೆ ಮಾಡಿಕೊಟ್ಟೆನು. ... ಒಳಸೇರದಂತೆ ಭಾಗವನ್ನು ಕೆಲವು ಕಾಲ ತೆರೆದಿಟ್ಟೆನು ಇವೆಲ್ಲ ಉಪಾಯಗಳಿಂದ ನನ್ನ ಆರೋಗ್ಯವು ಕೆಲಮಟ್ಟಿಗೆ ಸುಧಾರಿಸಿತು. ಆದರೆ, ಅದರಿಂದ ವ್ಯಾಧಿಯು ಸಂಪೂರ್ಣವಾಗಿ ಪರಿಹಾರ ಹೊಂದಲಿಲ್ಲ.

ಸಿಸೀಲಿಯಾ ರೋಬರ್ಟ್ಸ ಎಂಬೊಬ್ಬ ಸಭ್ಯ ಸ್ತ್ರೀಯು ನನ್ನ ಬಳಿ ಆಗಿಂದಾಗ ಬರುತ್ತಿದ್ದಳು. ನಾವಿಬ್ಬರೂ ಗೆಳೆಯರಾದೆವು ಹಾಲನ್ನು ಕೊಳ್ಳಲು ನನಗವಳು ಪರಿಪರಿಯಿಂದ ಮನವೊಲಿಸುತ್ತಿದ್ದಳು ಆದರೆ, ನಾನು ವ್ರತಭ್ರಷ್ಟನಾಗಲು ಒಪ್ಪಲಿಲ್ಲ ಆದರಿಂದ ಹಾಲಿನ ಬದಲಿಗೆ ಹಾಲಿನ ಗುಣಗಳುಳ್ಳ ಜಿನಸನ್ನು ಅವಳು ಹುಡುಕತೊಡಗಿದಳು ಯಾರೋ ಒಬ್ಬರು " ಮೊಲ್ಟೆಡ್ ಮಿಲ್ಕ " ಎಂಬ ಜಾತಿಗೋಧಿಯ ಹಾಲಿನ ಹಿಟ್ಟು ಔಷಧವಾಗಿ ದ್ದೂ, ಅದರೊಳಗೆ ಹಾಲಿನ ಸ್ಪರ್ಶವಿರುವದಿಲ್ಲವಾಗಿಯೂ, ಹಾಲಿನ ಗುಣಗಳುಳ್ಳ ಅದೊಂದು ರಸಾಯನವೆಂದೂ ಅವಳಿಗೆ ಹೇಳಿದರು ಸಿಸೀಲಿಯಾರವರು ನನ್ನ ಧಾರ್ಮಿಕ ಭಾವನೆಗಳನ್ನು ಮನ್ನಿಸುವರೆಂದು ನನಗೆ ಗೊತ್ತಿತ್ತು,

ಆದರಿಂದ ನಾನವರಿಗೆ ನಂಬಿದೆ ... ಹಿಟ್ಟನ್ನು ನೀರಿನಲ್ಲಿ ಕರಗಿಸಿದೆನು ರುಚಿ ನೋಡಲಾಗಿ, ಹಾಲಿನ ರುಚಿ ಹತ್ತಿತು. ನಾನು ಬಾಟ್ಲಿಯ ಮೇಲಿರುವ ಚೀಟಿಯ ಬರಹಗಳನ್ನು ನೋಡಲು, ಅದರ ಮೇಲೆ " ಹಾಲಿನಿಂದ ತಯಾರಿಸಿದ್ದೆಂದು" ಬರೆದಿತ್ತು ಕಾರಣ, ನಾನು ಅದನ್ನು ತ್ಯಜಿಸಿದೆನು

ಸಿಸೀಲಿಯಾರವರಿಗೆ ಈ ಸುದ್ದಿ ತಿಳಿಸಿದೆನು, ಈ ಬಗ್ಗೆ ಅವರು ಚಿಂತಿಸಬೇಕಾಗಿಲ್ಲವೆಂದು ತಿಳಿಸಿದೆನು. ಕೂಡಲೆ ಅವರು ನನ್ನ ಬಳಿ ಓಡುತ್ತ ಬಂದರು ಅವರು ತಮಗೆ ಬಹಳ ವ್ಯಸನವಾಗಿದೆಂದರು. ತಮ್ಮ ಗೆಳೆಯನು ಬಾಟ್ಲಿಯ ಮೇಲಿನ ಚೀಟಿಯನ್ನು ಓದಿದ್ದಿಲ್ಲವಾಗಿಯೂ ಅವರು ಹೇಳಿದರು, ಚಿಂತೆ ಮಾಡಬಾರದೆಂದು ನಾನು ಬಿನ್ನೈಸಿಕೊಂಡೆನು, ಅವರು ಬಹಳ ಪ್ರಯಾಸದಿಂದ ಸಂಪಾದಿಸಿದ ಜಿನಸು ನನಗೆ ಉಪಯೋಗವಾಗದ ಬಗ್ಗೆ ವ್ಯಸನವನ್ನು ಪ್ರದರ್ಶಿಸಿದೆನು. ತಪ್ಪು ತಿಳುವಳಿಕೆಯಿಂದ ಹಾಲನ್ನು ಸೇವಿಸಿದ ಬಗ್ಗೆ ನನಗೆ ಪಶ್ಚಾತ್ತಾಪವಾಗಲಿಲ್ಲೆಂದೂ, ನನಗೆ ವ್ಯಸನವಾಗಲಿಲ್ಲೆಂದೂ ಅವರಿಗೆ ಆಶ್ವಾಸಿಸಿದೆನು

ಸಿಸೀಲಿಯಾರವರ ಸಂಗತಿಯಲ್ಲಿ ಸಂಭವಿಸಿದ ಇತರ ಅಲ್ಹಾದದಾಯಕವಾದ ಜ್ಞಾಪಕ ಸಂಗತಿಗಳನ್ನು ನಾನು ಬಿಟ್ಟುಕೊಡಬೇಕಾಗುತ್ತದೆ ಇಂಥ ಪ್ರಸಂಗಗಳಲ್ಲಿ ನನಗೆ ಸಾಕಷ್ಟು ಗೆಳೆಯರಿದ್ದಾರೆ ದುಃಖ ಪ್ರಸಂಗಗಳಲ್ಲಿ ಸುಖ ಕೊಡುವದಕ್ಕಾಗಿ ದಯಾಳು ಪರಮಾತ್ಮನು ಈ ಪ್ರಕಾರ ಯೋಜಿಸುತ್ತಾನೆಂದು ಭಾವಿಕರು ತಿಳಿಯುತ್ತಾರೆ

ಡಾ॥ ಎಲಿನಸನ್‌ರವರು ನನಗೆ ಪುನಃ ತಪಾಸ ಮಾಡಿದರು ಈ ಬಾರಿ ಪ್ರತಿಬಂಧಗಳನ್ನು ಶಿಥಿಲ ಮಾಡಿದರು. ನೆಲಗಡ್ಲೆಯ ಎಣ್ಣೆ ಯಾ ಬಿಡಲ ಎಣ್ಣೆಯನ್ನು ಕೊಳ್ಳಬಹುದಾಗಿದೆ. ... ಕಂದಮೂಲಗಳನ್ನು ಅವಶ್ಯವಿದ್ದರೆ ಅನ್ನದೊಡನೆ ... ಕೊಳ್ಳಬಹುದಾಗಿಯೂ ಅವರು ಹೇಳಿದರು ಈ ... ಬದಲಾವಣೆಯಿಂದ ನನಗನುಕೂಲವಾಯಿತು. ಆದರೆ ಇವುಗಳಿಂದ ನನಗೆ ಸಂಪೂರ್ಣ ಗುಣವಾಗಲಿಲ್ಲ. ಬಹು

ಜಾಗ್ರತೆಯಿಂದ ನನ್ನ ಶುಶ್ರೂಷೆಯು ಇನ್ನೂ ನಡೆಯಬೇಕಾಗಿತ್ತು, ಬಹುತರವಾಗಿ ನಾನು ಹಾಸಿಗೆ ಹಿಡಿದಿರಬೇಕಾಗಿತ್ತು.

ಕಾಲಕಾಲಕ್ಕೆ ಡಾ॥ ಮೆಹತಾರವರು ನನ್ನ ಪರೀಕ್ಷೆ ಮಾಡುತ್ತಿದ್ದರು ತಮ್ಮ ಹೇಳಿಕೆಯಂತೆ ನಡೆಕೊಂಡರೆ ಈ ವ್ಯಾಧಿಯನ್ನು ಪರಿಹರಿಸುತ್ತೇವೆಂದು ಅವರು ಬಾರಿ ಬಾರಿಗೂ ಹೇಳುತ್ತಿದ್ದರು

ಈ ಪ್ರಕಾರ ನಡೆದಾಗ, ರೋಬರ್ಟ್ಸರವರು ನನಗೆ ಒಂದು ದಿನ ನೋಡಬಂದರು ಮನೆಗೆ ಹೋಗಲು ನನಗೆ ಆಗ್ರಹ ಮಾಡಿದರು ಅವರು ನುಡಿದದ್ದೇನಂದರೆ.—" ಈ ಸ್ಥಿತಿಯಲ್ಲಿ ನೀವು ನೆಟ್ಲೀ ದವಾಖಾನೆಗೆ ಹೋಗಲಾರಿರಿ. ಮುಂದೆ ಇದಕ್ಕೂ ಹೆಚ್ಚಿನ ಚಳಿ; ನೀವು ಹಿಂದುಸ್ಥಾನಕ್ಕೆ ಹೋಗಲೇಬೇಕು ಅಲ್ಲಿಯೇ ಈ ವ್ಯಾಧಿಯು ಸಂಪೂರ್ಣವಾಗಿ ಗುಣಹೊಂದುವದು ವ್ಯಾಧಿ ಪರಿಹಾರವಾಗುವವರೆಗೆ, ಯುದ್ಧವು ನಡೆಕೊಂಡಿದ್ದರೆ, ಅಲ್ಲಿಂದ ಯುದ್ಧದಲ್ಲಿ ನೆರವಾಗಲು ಬೇಕಾದಷ್ಟು ಪ್ರಸಂಗಗಳಿದ್ದಾವೆ. ಹಾಗಲೇ ನೀವು ಯುದ್ಧದಲ್ಲಿ ಮಾಡಿದ ಸೇವೆಯು ವಿಶೇಷವಾಯಿತೆಂದು ನನ್ನ ಮತವು "

ನಾನು ಅವರ ಹೇಳಿಕೆಯನ್ನು ಮನ್ನಿಸಿ ಹಿಂದುಸ್ಥಾನಕ್ಕೆ ಮರಳಲು ಸಮುಸ್ತ ತಯಾರಿ ಮಾಡಿದೆನು

— ಸ್ಯಾಯಮನ್ ಕಮಿಟಿಕ್ಕೆ ಬಹಿಷ್ಕಾರ ಬಿದ್ದ ಸುದ್ದಿಯು ಸುಳ್ಳಾಗಲಿಲ್ಲವೆಂದು ಸ್ಯಾಯಮನ್ ಕಮಿಟಿಯು ಪ್ರಕಟಿಸಿದ ಹೇಳಿಕೆಯಲ್ಲಿ ಅವರಿಗೆ ಸ್ವಾಗತವೇ ಆಯಿತಂತೆ! ಅವರ ಸ್ವಾಗತದ ಸುದ್ದಿಯನ್ನು ಅವರೇ ಹೇಳುವ ಪ್ರಸಂಗ ಬಂತು ಆತ್ಮವಂಚನೆ ಮಾಡಿಕೊಳ್ಳಲಿ. ಲೋಕ ವಂಚನೆಯಾಗದಿದ್ದರಾಯಿತು.

— ಮಹಾತ್ಮರ ಆರೋಗ್ಯವು ಪುನಃ ಚಿಂತಾಜನಕವಾಗಿರುವದಾಗಿ ಸುದ್ದಿ ದಿಲ್ಲಿಯಿಂದ ಬಂದ ಕಾರಣ ಹಕೀಮ ಅಜಮಲಖಾನರೂ, ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ॥ ಅನ್ಸಾರಿಯವರೂ ಅಹಮದಾಬಾದಿಗೆ ಹೋರಟಿದ್ದಾರೆ

ಯುಗಾದಿಯ ಪವಿತ್ರ ಹಬ್ಬ ಇದೇ ಬಂತು!

ನಿಜವಾದ ಗ್ಯಾರಂಟಿಯುಳ್ಳ
ಮೂಲ " ವೆಸ್ಟ ಎಂಡ್ " ಘಡಿಯಾರಗಳನ್ನು
ಕೊಳ್ಳಿರಿ.
ಯಾಕೆ ?
ನಿಮ್ಮ ಆಪ್ತೇಷ್ಟರಿಗೆ ನಿಮ್ಮ ಸ್ಮರಣೆಯು ಪ್ರೀತಿಪೂರ್ವಕವಾಗಿ ಆಗಬೇಕೆಂದಿದ್ದರೆ, ಅವರಿಗೆ ' ವೆಸ್ಟ ಎಂಡ್ ' ಘಡಿಯಾರಗಳನ್ನು ಕೊಡಿರಿ,
ನಿಮಗೆ ಸ್ವಂತ ಉಪಯೋಗಕ್ಕಾಗಿ ಸರಿಯಾಗಿ ಟೈಮು ತೋರಿಸುವ ಉತ್ತಮ ಪ್ರತಿಯ ಹಾಗು ಬಾಳಿಕೆಯ ಘಡಿಯಾರ ಬೇಕಾದರೂ, ' ವೆಸ್ಟ ಎಂಡ್ ' ಘಡಿಯಾರಗಳನ್ನೇ ಕೊಳ್ಳಿರಿ.
ಸಾವಿರಾರು ಕಡೆಗಳಲ್ಲಿ ಜಾಹೀರಾತು ಕೊಟ್ಟ ಕನಿಷ್ಟ ಪ್ರತಿಯ ಘಡಿಯಾರುಗಳನ್ನು ಕೊಂಡು, ಸುಮ್ಮನೆ ಮೋಸಹೋಗದಿರಿ: ಆ ಘಡಿಯಾರಗಳಲ್ಲಿ ಆಟದ ಸಾಮಾನುಗಳು, ನಿಮ್ಮ ಹಣವು ನಿರರ್ಥಕವಾಗುವದು !

ವೆಸ್ಟ ಎಂಡ್- " ಕೀಪ-ಸೇಕ "
ಕೇಲಿಸ್, ಲಿವ್ಹರ

ನಿಕಲ್ ಸಿಲ್ವರ	.. ರೂ.	೩೨
ರೊಲ್ಡ-ಗೋಲ್ಡ	... ,,	೪೨
೯ ಕ್ಯಾರೆಟ ಭಂಗಾರದ್ದು	,,	೫೦
೧೮ ಕ್ಯಾರೆಟ ಭಂಗಾರದ್ದು	,,	೭೦



ಸರಿಯಾಗಿ, ತಪ್ಪದೆ ವೇಳೆ ತೋರಿಸುವಂಥವು. ಕ್ಯಾಟಲಾಗು ಉಚಿತ !

ಮುಂಬಯಿ, ವೆಸ್ಟ ಎಂಡ್ ವಾಚ್ ಕಂಪನಿ, ಕಲಕತ್ತಾ.

ಮುಂಬಯಿ ಕಾಯಿದೆ ಕೌನ್ಸಿಲು.

(ಮೂರನೇ ಪಾನಿನಿಂದ ಮುಂದರಿಸಿದ್ದು)

ವಾರನಿಗೆ ಮಂಜೂರಾತಿ ಮಾಡಲಾಯಿತು. ಈ ಜೇಣ ವು ಜನರಿಗೆ ದನಗಳನ್ನು ಮೇಯಿಸಬಿಟ್ಟ ಜಾಗವು. ಜಾಹೀರನಾಮೆ ಹೊರಡಿಸದೆ ಪರಸ್ಪರರಿಗೆ ಇತ್ತ ಕೊಡ ಲಾಗಿದೆ. ಗ್ರಾಮದಲ್ಲಿ ಮೇಯುವ ಪ್ರದೇಶವು ಸಾಕ ಷ್ಟಿದ್ದವರಿಂದ ಈ ಅಕ್ರಮದ ಬಗ್ಗೆ ಸರಕಾರವು ಮುಂ ದಿನ ಇಲಾಜು ಕೈಕೊಳ್ಳಯಸುವದಿಲ್ಲ

***

ಉತ್ತರ ಕನ್ನಡ ಜಿಲ್ಹೆಯಲ್ಲಿ ನಿರ್ಜನ ಗ್ರಾಮಗಳು.

ಉತ್ತರ ಕನ್ನಡ ಜಿಲ್ಹೆಯಲ್ಲಿ ೧೮೯೧ನೇ ಇಸ್ವಿಯಿಂ ದ ಈ ತನಕ ೫೦ ಗ್ರಾಮಗಳು ನಿರ್ಜನವಾದವು ೩೧ ಗ್ರಾಮಗಳೊಳಗಿನ ಸಾಗ್ವಳ್ಳಿಯು ನಿ ಮಹೋ ದಿತು. ಕಾರಣವೇನಂದರೆ:- ಮತ್ತಮುಕ್ಕಲಿನ ದಟ್ಟ ಡಿಟ್ಟ, ಕಾಡು ಪ್ರಾಣಿಗಳ ಹಾವಳಿ, ಚಳಿ ಜ್ವರದ ಬಾಧೆ

***

ಕರ್ನಾಟಕದ ಏಕೀಕರಣ.

ಕರ್ನಾಟಕದ ಏಕೀಕರಣದ ಕುರಿತು ಬೆಳಗಾವಿ, ವಿಜಾಪುರ, ಧಾರವಾಡ ಹಾಗು ಉತ್ತರ ಕನ್ನಡ ಜಿಲ್ಹೆಗಳೊಳಗಿನ ಜಿಲ್ಲಾ ಬೋರ್ಡುಗಳೂ ಬಾಸಾವು ರ-ಕರಜಗಿ ತಾಲೂಕ ಬೋರ್ಡುಗಳೂ, ವಿಜಾಪುರ ಹಾವೇರಿ, ಕುಮುಟಾ, ಹಳಿಯಾಳಗಳೊಳಗಿನ ಮ್ಯುನಿ ಸಿಪಾಲಿಟಿಗಳೂ, ಕರಜಗಿಯ ತರುಣ ಸೇವಾ ಸಂಘ ವೂ ಕರ್ನಾಟಕದ ಏಕೀಕರಣಕ್ಕನುಕೂಲವಾದ ನಿರ್ಣಯ ಮಾಡಿವೆ. ಏಕೀಕರಣಕ್ಕೆ ಪ್ರತಿಕೂಲವಾ ದ ನಿರ್ಣಯಗಳನ್ನು ಯಾವ ಸ್ಥಾನಿಕ-ಸಂಸ್ಥೆಯೂ ಮಾ ಡಿ ಕೊಡಲಿಲ್ಲ.

***

ಸರಕಾರದ ಉದ್ಯೋಗಾಭಿವೃದ್ಧಿಯ ಅವಲಂಬಿಕೆ.

ಮುಂಬಯಿ ಸರಕಾರವು ಔದ್ಯೋಗಿಕ ಖಾತೆಗೆ ೩೦೦೦ ರೂಪಾಯಿಗಳನ್ನು ಮುಂಜೂರು ಮಾಡಿ ಇವರೊಳಗಿಂದ ೪೪೦೦೦ ರೂ. ಔದ್ಯೋಗಿ ಕಖಾತೆಯ ಪರಿವಾರಕ್ಕೆ ಹೋದವು. ೨೦೦೦ ರೂ ಪಾಯಿಗಳಿಂದ ಶೋಧಕಾರ್ಯ ಹಾಗು ಪ್ರಯೋಗ ಗಳನ್ನು ಮಾಡಬೇಕು. ೬೦೦೦ ರೂಪಾಯಿಗಳಿಂದ ಸರ್ವೇ ಕೆಲಸ ಮಾಡಬೇಕು. ಔದ್ಯೋಗಿಕ ಪ್ರಯತ್ನ ಗಳ ಚೌಕಶಿ ಮಾಡಿ ಉಪಾಯಗಳನ್ನು ಸೂಚಿಸ ಲು ನೇಮಿಸಿದ ಮಂಡಳವು ೧೬ ಲಕ್ಷ ರೂಪಾಯಿ ಗಳನ್ನು ಈ ಬಗ್ಗೆ ಖರ್ಚು ಮಾಡಬೇಕಾಗಿ ಶಿಫಾರಸು ಮಾಡಿದ್ದರು. ಸರ ಚುನಿಲಾಲ ಮೇಥಾರವರು ಪ್ರ ಯತ್ನದ ಕೊರತೆ ಇಲ್ಲವಾಗಿ ಹೇಳಿ ಲೋಕರಪಕ್ಷದ ಸಭಿಕರಿಗೆ ಸುಮ್ಮಗುಳಿಸಿದರು.

ಗವ್ಹರ್ನರರ ವಿಲಾಸದ ಖರ್ಚು.

ಮುಂಬಯಿ ಇಲಾಖೆಯ ಜಮಾ-ಖರ್ಚಿನ ಚರ್ಚೆ ನಡೆದಾಗ, ಕಾಯಿದೆ ಕೌನ್ಸಿಲಿನ ಸಭಾಸದರಾದ ವಿ ಠಲದಾಸರವರು ಸರಕಾರದ ದುಂದುಗಾರಿಕೆಯ ನಾಜರಿಯನ್ನೊಂದು ಹೇಳಿದರು ಗವ್ಹರ್ನರರು ಸಂಸ್ಥಾನಿಕರಂತೆ ವಿಲಾಸ ನಡಿಸುತ್ತಾರೆಂದು ಉಸ್ಗರಿಸಿ, ಅವರ ಖರ್ಚಿನ ರಕಮುಗಳನ್ನು ವಿವರಿಸಿದರು. ಗವ್ಹರ್ನರರು ಉಳಕೊಳ್ಳುವ ಮಂದಿರದಲ್ಲಿ ಕಂಪಿಳಿ ಗಳನ್ನು ಹಾಸಲು ೪೦ ಸಾವಿರ ರೂಪಾಯಿ, ಉಪವ ನಕ್ಕಾಗಿ ರೂ. ೩೧ ಸಾವಿರ, ಮೋಟಾರ ಬಂಡಿಗಳಿ ಗಾಗಿ ರೂ. ೩೭ ಸಾವಿರ, ಅಂಗರಕ್ಷಕರಿಗಾಗಿ ರೂ ೪೪ ಸಾವಿರ ...

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ - ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮುಟಾ- ಹೊನ್ನಾವರ ಭಟ್ಕಳ- (೩) ಕುಮುಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮವಿಕಾರ ಶಕ್ತಿ ತರುಣರಂತೆ ಪವರ್ಧಮಾನವಾಗುವದು. ನಿಜವಾಗಿ ಒಂದೇ ಸಪಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಳೆಯ ಹೋಗಿ ದುಃಖವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ವೀರ್ಯ ವು ಬಂದಾಗುವದು.— ಪರಮಾ ಹಾಗು ಕಾವಿನಿಂದ ದೂಷಿತವಾದ ಶರೀರವು ನಿರೋಗವಾಗುವದು. ದುರ್ಬಲ ರಿವಸದಲ್ಲಿಗುಣಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇತರರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮೊದಲಾದ ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟವಾದಿವರೂ ಅನ್ನ ಪಚನವಾಗಿ ಹಸಿವೆ ಜಾಸ್ತಿಗಿ ಆಗುತದೆ, ಇದರ ಪರಿ ಭವವು ಮೊದಲನೇ ದಿವಸವೇ ಬರುವದು. ಕೌಷ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಉಷ್ಣ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೧ ದಿನಸ ನಡಿಯುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ ೩—೦—೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲು ಖರ್ಚು ಹೆಚ್ಚು ಬೀಳುವದಿಲ್ಲ. ಬಿಡಿ ಬಾಟಲಿಗಳ ಕಿಮ್ಮತು ೧॥—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ವಿ.ಪಿ.ಯಿಂದ ೧ ಬಾಟ್ಲಿಗೆ ೧-೮-೦ ೩ ಬಾಟ್ಲಿಗೆ ೩-೮-೦ ಹಣದಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ಶ್ರೀ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಪೆ.

ವೀರ್ಯವು ತೆಳುವಾಗುವದರಿಂದುಂಟಾದ ರೋಗವಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥು ನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋ ಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿ ಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ, ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚು ತ್ತದೆ ವೀರ್ಯಸ್ತಂಭನೆಯಾಗ್ಯೆಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಇದು) ವನಸ್ಪತಿಗಳು ವ ಹು ಪ್ರಸಿದ್ಧ "ಮೈಸೂರ ಸ್ಟಾರ್" ಪತ್ರಿಕೆಯಲ್ಲಿ ಬಹು ಶ್ಲಾಘ್ಯ ಮಾಡಿರುತ್ತದೆ. ಓದಿಕೊಳ್ಳಿರಿ.

ಪ್ರಾತಃಕಾಲ ೨ ತೊಲಿ ಮ ೧ ಪಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿ ಯನ್ನು ತಕ್ಕೊಂಡು, ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎನ್ನೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ಅಲ ತೊಲೆ ಯ ಒಂದು ಡಬ್ಬಿಗೆ ೫॥ ರೂ. ೩ ಡಬ್ಬಿಗೆ ೧೫। ರೂ. ೬ ಡಬ್ಬಿಗೆ ೨೭ ರೂ. ೧೨ ಡಬ್ಬಿಗೆ ೫೦ ರೂ.

ವಿ. ಪಿ. ಖರ್ಚ ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಶ್ಚಯ ಮನಸಿನಂತೆ ಪೂರ್ಣ ಗುಣಬರುವದು.

झंडूचे

द्राक्षासव- एक रतलास किंमत १ रुपये.

रामबाण औषध

सर्दि घालविणारें!
भूक वाढविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

पिण्यास रुचिकर

तयार करणार,

झंडु फार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणि कंपनी,
तीर्थहळ्ळी

[illegible] एस् एन् शारप्पा आणि सदर

[illegible] ನ್ಯಾಷನಲ್ ಇನ್ಶೂರನ್ಸ ಕಂಪೆನಿ [illegible]

ಜೀವ ವಿಮೆಯ ಮಂಡಲಿ.

[illegible] ಒಂದು ಕೋಟಿಯಷ್ಟು [illegible] ಕಂಡ ವರಷದಲ್ಲಿ [illegible] 40,144 [illegible]

[illegible] ಪತ್ರಗಳ [illegible] 1 [illegible] ಪೂರ್ತಿ ಜೀವ ವಿಮೆಯ [illegible] ಒಳಗಾಗಿ [illegible]

ಜೋಗದ [illegible] 0 ರೂಪಾಯಿ [illegible] ಕಂತು [illegible] ಸುಮಾರು 1200 ರೂಪಾಯಿ [illegible]

[illegible] ಕಡೆಯ ಶ್ಲೋಯೂ [illegible] ದೇಕು!

[illegible] ಪಡೆಯಿರಿ - **P D Churi,**
ಬಿ ಸಿ ಸಿರಾಕೊಪ್ಪ, *Branch Secretar*
ಲೋಯಿಂಡಿ ಬಿಲ್ಡಿಂಗ, Alice Building
ಹುಬ್ಬಳ್ಳಿ *Hornby Road,*
BOMBAY

B U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರ್ಕಿ, ಜರಿ ಸೀರೆ, ಶಾಲ್ಮಿರ್ ಶಾಲು, ಜರಿವಾರ ರುದ್ರಾಕ್ಷಿ, ಕಸ್ತೂರಿ, ಶಿಂಗರಫ ಸಾಲಿಗ್ರಾಮ ಮೊದಲಾದ ಪದಾರ್ಥಗಳು ಸಿಗುತ್ತವೆ ಕ್ಯಾಟಲಾಗು ಕೇಳಿದವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಮವೇರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಡಿಮೆ ಪಡಿಯ ಲಕ್ಷ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬಿಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು [illegible] ಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ [illegible] ಕಳಿಸಲಾಗುವದು

ಬುಡ್ಡಿ [illegible] ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ ಪಿ. ೦-೮-೦ ದಯ ಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

[illegible] ಜಗದೀಶ ಸುಬಸನ ಅಂಡ ಕಂಪನಿ ಲಿಮಿಟೆಡ್ ಪೋ. ಬಾ. ೫೧೧೦, ಜಾರ್ಜಟೌನ, ಮದರಾಸ

ಕಿರ್ಲೋಸ್ಕರ ಕಮಾಲ ಗಾಣ.



ಶೇಕಡಾ ೭೪ ರಿಂದ ೭೦ ರ ವರೆಗೆ ರಸ ಹೊರಡುವದು

ಗಂಟೆಯೊಂದಕ್ಕೆ ೧೧೦೦ ಪೌಂಡ ಕಬ್ಬನ್ನು ಹಿಂಡುವದು.

ಬೆಲೆ ೨೯೦ ರೂ. ಕೊಡ್ಲೆ ಡಿಲಿವ್ಹರಿ

[illegible]ಯಲ್ಲಿ ಎಸ್. ಎಲ್ ಧಾರಪ್ಪಾ ಮತ್ತು ಬ್ರದರ್ಸ್, ಇವರಲ್ಲಿ ಸಿಗುವದು

ರಚನೆ— ಈ ಗಾಣದಲ್ಲಿಯ ಎರಕ ಹೊಯ್ದ ಭಾಗಗಳು ಅರ್ಧ ಉಕ್ಕಿನಿಂದ ಕೂಡಿದ [illegible] ತಯಾರಾಗಿರುತ್ತವೆ ಕಡೆಗಳ ಎತ್ತರ ೧೧ ಇಂಚು, ಆಕ್ಸಲ್ [illegible] ಚಕ್ರ, ಡಿಕ್ಸರ್, ರೋಲರ ಇವು ಬೇರೆ ಬೇರೆ ಇರುತ್ತವೆ. ಬೇರಿಂಗ [illegible]ಗಳು ಇರುತ್ತವೆ ಎಂಜಿನು ಸತತವಾಗಿ ನಿಲ್ಲುವದಕ್ಕೆ ಏರ್ಪಾಡು ಮಾಡಿರುತ್ತೇವ ಬಸವಣಿಯಲ್ಲಿ ಸುಧಾರಣೆ ಮಾಡಿರುತ್ತೇವೆ.

ವೈಶಿಷ್ಟ್ಯ— ಕಡೆಗಳು ತ್ರಿಕೋಣಾಕೃತಿಯಲ್ಲಿರುವದರಿಂದ ಕಬ್ಬು ಅಡಕಿನಲ್ಲಿ [illegible] ಬರುವದರಲ್ಲಿ ಹಿಂದಿ ಹಿಸಿಯಾಗಿ ಬರುವದು ಮಿಕ್ಕ ಗಾಣಗಳಂತೆ [illegible] ಬೇಕಾಗದೆ ಒಬ್ಬನಿಂದಲೇ ಸಾಗುವದು. ನಾಲ್ಕು ಎತ್ತುಗಳು ಬೇಕು.

ಅಭಿಪ್ರಾಯ— "ಕಮಾಲ ಗಾಣದಿಂದ ಸಿಪ್ಪಿಯಲ್ಲಿ ವ್ಯರ್ಥ ಹೋಗುವ ರಸದಿಂದ ದಿನಾಲು ೩ ಮಣ ಬೆಲ್ಲ, ಅಂದರೆ ೧೦ ರೂ. ಲಾಭವಾಯಿತು ೩೪ ದಿವಸ ಗಾಣವಾಡಿಸಿ ನನಗೆ ಒಟ್ಟು ೨೪೦ ರೂ ಲಾಭವಾಯಿತೆಂದು ತಿಳಿಸಲು ಆನಂದವಾಗುತ್ತದೆ ತಮ್ಮ ರಾಜನಗೌಡಾ ಪಾಟೀಲ, ನವಲಗಿ ಜಿ ಬೆಳಗಾಂವ"

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಲಾ ಸಾ. ಸಾ.

ಅಮೃತಾಂಜನದ



ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, ಚಳಿ, ಕೆಮ್ಮು, ಸುಟ್ಟಗಾಯ ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣ ಸಿಗುತದೆ ವೈದ್ಯರಿಂದ ರೋಗಿಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು 'ನೋವು ಬೆಕ್ಕರೆಂದು ಯಾರೂ ತಿರಸ್ಕರಿಸಲಾಗದು ಚಿಕ್ಕ ನೋವಿನಿಂದಲೇ ಜೀವಕ್ಕೆ ಸುಖ ದೊರೆಯುವದಿಲ್ಲ ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಅಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ದಬಿ ೦—೧೦—೦

ಎಲ್ಲ ಅಂಗಡಿಯಲ್ಲಿಯೂ ಸಿಗುತ್ತದೆ ಅಥವಾ **ಅಮೃತಾಂಜನ ಡಿಪೋ,**
ಮುಂಬಯಿ ಮತ್ತು ಮದ್ರಾಸ

ರಿಜಿ. ನಂ. B. 1370

MONDAY, MARCH 20TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ [illegible]

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು

ರೂಪಾಯಿ 2-4-0.

ಮನೆಯಾರ್ಡರಿಯಿಂದ

ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೫ ಎಮ್ ಅಗಲ)

ಆ ಸಾಲುಗಳವರೆಗೆ ರೂ. 1-0-

ಆ ಮೇಲೆ ಪ್ರತಿಸಾಲಿಗೆ 0-2-0.

ಹೆಚ್ಚಿಂಗೆದ ಸಾಲು ಎಷ್ಟು ಹೆಚ್ಚಿರುವವೋ ಆ ಮಾಪದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.

ಹೆಚ್ಚಿನ ಜಾಹೀರಾತುಗಳ ಬಗ್ಗೆ ಪತ್ರವ್ಯಾರ ಮಾ ಕರಾರು ಮಾಡಲ್ಪಡುವವು.

—— ✻ ——

सत्पतिहितकर्ता हेष्यता याति लोके अनवद्यहितकर्ता त्यज्यते पार्थिवैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೨೭ ಮಾಹೆ ಮಾರ್ಚ ಸನ್ ೧೯೨೮ನೇ ಇಸವಿ)—

ಹೊಸ ಅಂಗಡಿ! ಹೊಸ ಮ್ಹಾಲು!!

ಕುಮಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟೆಂಟ ಔಷಧಗಳು, ಕಾಜಿನ ಸಾಮಾನು, ಮುಂತಾದ ಎಲ್ಲ ತರವಾರ ಮ್ಹಾಲು ಬಲು ಅಗ್ಗವಾಗಿ ದೊರೆಯುತ್ತವೆ!

ಚಿಲ್ಲರೆ ವ್ಯಾಪಾರಿಗಳಿಗೂ ಮುಟಾಫೆ ಸಿಗುವಂತೆ ಸ್ಪೇಶಲ್ ಹೋಲ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮ್ಹಾಲು ಪಡೆಯಲು ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ವಾತೊಂಡೆ,

ಆಯರ್ನ ಮರ್ಚಂಟ,

ಕುಮಟಾ. (ಉ. ಕನ್ನಡ)

ಏಜಂಟರು ಬೇಕು! ಏಜಂಟರು ಬೇಕು!!



ನಮ್ಮಲ್ಲಿ

ಅತಿ ಮನೋಹರವಾದ

ಶೀಶ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಲಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಕಾಂತಿ ಭುವನ,

ಕಾರವಾರ.

कारवारांत मुंबई!!!

अर्थात

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्या जातात.

माल चोख— फॅशनेबल— स्वस्त— व भरपूर

हा शिवाय

आमच्या स्वंत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टोवेल, चौक, लहान-मोठे पंचे, सीडपाट, चीलपाट, शर्टिंग- कोटींग -वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:—आमच्या कोणत्याहि मालावर घाऊक व्यापाऱ्यांस भरपूर कमिशन दिले जाईल.

पत्ता:— मेसर्स गोविंद माधव शेणवि, फोवकार अँड सन्स.

पोस्ट— मुदगेरि (कारवार.

೦ಂಗಳೂರ ತಂಬಾಕಿನ ಖಾಸಾ ನಶ್ಯ! ಸುಲಭ ಕ್ರಯ!!

೧೦ ವರ್ಷಗಳಿಂದ ಜನರಲ್ಲಿ ಪ್ರಸಿದ್ಧಿ ಹೊಂದಿದ

ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ

ಮೋಸ ಹೋಗಬೇಡಿರಿ!!

ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

೧ ನೇ ನಶ್ಯದ ಪುಡಿ ೬ಳ ತೊಲಿ ಶೇರು ೧ರ ರೂ. ೧।

೨ ನೇ ೧-೨-೦

೩ ನೇ ೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ— ನಮ್ಮ ನಶ್ಯವು ಉತ್ಕೃಷ್ಟವೆಂಬುದರ ಬಗ್ಗೆ ಅನೇಕ ಮಹಾನುಭಾವರ ಸರ್ಟಿಫಿಕೇಟು- ಗಳು ದೊರಕಿವೆ.

ವಿಳಾಸ:- ಪುಂಡಲೀಕ ನಾಗಪ್ಪ,

FOR

HAND AND POWER

-- LOOMS --

SHUTTLES,

Roughest and even
Finest COUNTS Steel
& Brass REEDS

COTTEN HEALDS
WIRE HEALDS
BOBBINS
OIL PAINTS
AND
EMERY PAPERS

Cat ... .

except ... reduced rates

From –

P. P. TRIVEDI & CO,
BRUCE Street, Fort, BOMBAY

೧೨೩] ನನ್ನ ಶಾಸ್ತ್ರೀಯವಾದ [

ಶಾರೀರಕ ಶಿಕ್ಷಣ

ಈ ಪುಸ್ತಕದಲ್ಲಿ ನನ ಪತ ನನ್ನ ಇಷ್ಟದ ಅಂಗಸಾಧನ ತೋರಿಸುವ ಸೊಗಸಾದ ಚಿತ್ರ ರುವವಲ್ಲದೆ, ಅಂತಹ ಆರೋಗ್ಯ ವ್ಯಾಯಾಮ ಹೇಗೆ ಒಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿದೆ ನನ್ನ ಶರೀರ ಮತ್ತು ಆ ಮ ಯುಗಳ ಆದರಲ್ಲಿರ ವನ ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹ ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಓದಲು ಹಾಸಲು ... ಸ್ಟಾಂಪ ವನ್ನು ಕಳುಹಿಸಿಕೊಟ್ಟು ವಾಚಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ ಈ ಸವ ಯುವ ನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀನಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ ವಿ ಕೃಷ್ಣರಾವ್,

ಬಸವನಗುಡಿ ಬೆಂಗಳೂರ ಸಿಟಿ

ಗೋಪಾಳ ಸಖಾರಾಮ

ಮತ್ತು ಕಂಪನಿ.

ಕಮಿಶನ್ ಏಜಂಟ್ಸ್,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಕಲ ಪ್ರಕಾರದ, ಉತ್ತಮ ಸ್ಥಿತಿಯ ಸಾಮಾನುಗಳನ್ನು ಅಗ್ಗವಾಗಿ ರೊಕ್ಕ ಖರೇದಿ ಮಾಡಿ ಕಳಿಸುತ್ತೇವೆ ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ, ಖರೇದಿ ಬೇಕಾಯಿದಾ ಗುಣದ, ಪೇಟೆಯಲ್ಲಿರುವ ಧಾರಣೆಗೆ ಅಕರಿಸಲ್ಪ ಡುವದೆ ಗಿರಾಕಿಗಳಿಗೆ ಅನುಕೂಲವಾಗುವಂತೆ ಯೂ, ಲಾಭವಾಗುವಂತೆಯೂ, ಪೇಟೆ ಬದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ ಹೆಚ್ಚಿನ ಮಾಹಿತಿ ಬಗ್ಗೆ ಕಟಲಾಗು ತರಿಸಿಕೊಳ್ಳಿ ಉಚಿತವಾಗಿ ಸಿಗ ವದು.

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ಸ್ಟ್ರ ಸ್ಟೀಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸ್ವಿಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕತ್ತಲ್ಪಟ್ಟು ಗಿಲ್ಟ ಮೂವ್ಮೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಯೂ ಗ್ಲಾಸ ಡೂವ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಇದನ್ನು ತರಿಸಿ ನೋಡಿರಿ ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ.- ಫೌಂಟನ ಪೇನಾ ೧, ಹೇರಾಯಿಲ್ ಬಾಟ್ಲಿ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಳಿ ೧, ಮಾವ ಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್ಲೇಸ ಎಂಬ ಸತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ, ಒರೇ ರೂ ೪. ೮-೦

ವಿಳಾಸ — ಇಂಗ್ಲೀಷ ಎಂಪೋರಿಯಂ,

ಪೋಸ್ಟ ಬಾಕ್ಸ್ ನಂ. ೧೦೫, ಮದರಾಸು.

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು ಇದಕ್ಕೆ ೧೪ ಕ್ಯಾರೆಕ್ಟಿನಂಥ ನಿಬ್ಬು ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹಳ ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.

ವಿಳಾಸ —ಸೀಟಿರ್ ವಾಚ್ ಕಂಪನಿ ಪೋ. ಬಾಕ್ಸ ನಂ, ೨೬ ಮದರಾಸು.

ಕಲ್ಪತರು ಮಿಶ್ರಣ

ಮಲೇರಿಯಾ ಸ್ಪೆಸಿಫಿಕ

ಎಂದರೆ,

ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಮಹಿಮೆಯನ್ನು ಆಯುರ್ವೇದ ವಚನದಿಂದಲೇ ಕೇಳಬಹುದು:-

ವಿತ ಕಲ್ಪತರುನಾಮ ರಸಃ ಪರಮ ದಲ್ಲಭಃ | ಅಸಾಧ್ಯಂ ಚಿರಕಾಲೋತ್ಥಂ ಜೀರ್ಣಂ
ಚ ವಿಷಮ ಜ್ವರಮ್ | ಹಂತಿ ಜ್ವರಾತಿಸಾರ್ ಚ ಗ್ರಹಣೀಂ ಪಾಂಡು ಕಾಮಲಾಮ್ ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ವಾದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಯೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು ಇಂಗ್ಲಿಷ ಔಷಧೋಪಚಾರದಿಂದ ಹಿಪ್ಪೆಟ್ಟಿದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗೆ ರೂ. ೧-೬-೦

ನಮ್ಮ ಪತ್ತೆ.— ವೈದ್ಯ ಬಿ. ಆರ್. ಹರಿದಾಸ,

ಶ್ರೀ ಸಮರ್ಥ ಫಾರ್ಮಸಿ, ಗದ್ದೆಕೇರಿ, ಮಂಗಳೂರು

ಮುಖ್ಯ ಏಜಂಟ — ಕಲಬಾಗ ಮಾಧವ ರಾವ ಶ್ಯಾನಭಾಗ.

ಹಿಂದೂಗಳ ತಪೋಬಲ

[illegible]

ಅಮೇರಿಕೆಯಲ್ಲಿ "ಕರೆಂಟ್ ಹಿಸ್ಟರಿ" ಎಂಬ ಹೆಸರಿನ ಪತ್ರಿಕೆಯಿದೆ. ಆ ಪತ್ರಿಕೆಯಲ್ಲಿ ಒಬ್ಬ ಬ್ರಾಹ್ಮಣನ ಅದ್ಭುತ ಚಮತ್ಕಾರವನ್ನು ವರ್ಣಿಸಿದ್ದಾರೆ. ನಮ್ಮ ವಾಚಕರಿಗೆ ಅದು ಬಹು ಬೋಧಪ್ರದವಿದೆ. ಆದ್ದರಿಂದ ಅದರ ಅನುವಾದವನ್ನು ನಾವು ಇದರಡಿ ಕೊಟ್ಟಿರುವೆವು.

ಗಂಗಾತೀರದ ಒಂದು ಮಠದಲ್ಲಿ ಬ್ರಾಹ್ಮಣನೊಬ್ಬನು ಪ್ರಾತಃ[illegible] ಸ್ಮರಣೆ ಮಾಡುತ್ತಿದ್ದನು. ಅದೇ ಮಠದಲ್ಲಿ ಇಂಗ್ಲಿಷ್ ಗೃಹಸ್ಥನೊಬ್ಬನು ಹಲವು ಹಿಂದೂ ವಿದ್ಯಾರ್ಥಿಗಳಿಗೆ [illegible] ಹಿಂದೂ ಧರ್ಮದ [illegible] ಇಂಗ್ಲೆಂಡಿಗೆ [illegible] ಹೋದವನು. [illegible] ಬ್ರಾಹ್ಮಣ [illegible] ಎಲ್ಲವನ್ನು ತಿಳಿಸುತ್ತಿದ್ದನು. ವಿದ್ಯಾರ್ಥಿಯು [illegible] ಬಟ್ಟೆಗಳು [illegible] ಬ್ರಾಹ್ಮಣನು ಈತನಿಗೆ ಸಾಕ್ಷಿಗೆ ಕರೆದನು. ಬ್ರಾಹ್ಮಣನಿಗೆ ಇಂಗ್ಲಿಷಿನ ಗಂಧಗಾಳಿ ಇದ್ದಿಲ್ಲ. ಅಲ್ಲಿ [illegible] ಸಾಕ್ಷಿಗಾರನು ಹೇಳಿದನು. ಅನಂತರ ಒಂದು ವಾಕ್ಯವನ್ನು ಆತನು ಹೇಳಿದನು [illegible] ಇಂಗ್ಲಿಷ ಬರುವದಿಲ್ಲ. ಆದರೆ, ಇಬ್ಬರೊಳಗೆ ನಡೆದ ಮಾತನ್ನು ಆಮೂಲಾಗ್ರ ನಾನು ಕೇಳಿದ್ದೇನೆ! [illegible] ಗಳಿಗೆ, [illegible] ಲಕ್ಷ್ಯವನ್ನು ಕೇಳಿ ಆಶ್ಚರ್ಯವೆನಿಸಿತು. ಬ್ರಾಹ್ಮಣನು ಎಲ್ಲ [illegible] ಗಳನ್ನು ನಡೆದ ಹಾಗೆ ಹೇಳಿದನು. ವಿದ್ಯಾರ್ಥಿಯ [illegible] ಬ್ರಾಹ್ಮಣನ ಸಾಕ್ಷಿಗೆ ಮೆಚ್ಚಿದರು. ಯಥಾರ್ಥ [illegible] ಎಲ್ಲವನ್ನು ಆತನು ಹೇಳಿದ್ದು ನೋಡಿ ಒಪ್ಪಿದರು. ಈ ಬ್ರಾಹ್ಮಣನಿಗೆ ಸಾಕ್ಷಿಗಾರನಾಗಿ [illegible] ಅಗಿನ ಸುದ್ದಿಗಾರರು ಪ್ರಸಿದ್ಧಿಸಿ, [illegible] ಚಮತ್ಕಾರವನ್ನು ಬಣ್ಣಿಸಿದ್ದಾರೆ.

ಆದರೆ, ಇಷ್ಟೊಂದು ಹಿಂದುವನ್ನು ನಾನು ನೋಡಿದ್ದೇನೆ. ಆತನು ಬ್ರಾಹ್ಮಣನಲ್ಲ. [illegible] ಶಕ್ತಿಯನ್ನು ನೋಡಿ ನಾನು ಗೊಂದಲದಲ್ಲಿ ಬಿದ್ದೆನು. [illegible] ಎಂದು [illegible] ಬಟ್ಟೆಗಳನ್ನು [illegible] "ಡೇಲಿ ಮೇಲ್" ಪತ್ರಿಕೆಗೆ [illegible] ಮುಂತಾದವುಗಳ ದ್ವಾರಾ [illegible] ಮಾತನಾಡಲು, [illegible] ಬಟ್ಟೆ [illegible] ಮುಂತಾದ [illegible] ಒಟ್ಟು [illegible] ಮೇಲೆ ೪೦ ಸ್ಥಾನಗಳ [illegible] ಎಂದು ಬಿನ್ನ ಭಿನ್ನ ಅಂಕಿಗಳನ್ನು [illegible] ಗುಣಾಕಾರವನ್ನು [illegible] ಗುಣಗಳಿಂದ [illegible] ಉತ್ತರವನ್ನು ಬರೆದನು. [illegible] ಇಂಗ್ಲೆಂಡದಲ್ಲಿ ಸಂಭವಿಸಿದ್ದು "ಡೇಲಿ ಮೇಲ್" ಪತ್ರಿಕೆಯಲ್ಲಿಯೂ ಪ್ರಕಟವಾಗಿದೆ.

ಅಮೇರಿಕೆಗೆ ಬೋಸರು ಒಂದು [illegible] ನಾನು ಅವರಿಗೆ [illegible] ಕೋಲ ಬಿಯಾ ವಿಶ್ವವಿದ್ಯಾಲಯದ ಗಣಿತ ಶಾಸ್ತ್ರದ ಪ್ರೊಫೆಸರರು [illegible] ಬೋಸರವರ [illegible] ಹೇಳಿದನು. [illegible] ನಂಬಲಿಲ್ಲ. ಪರೀಕ್ಷಾರ್ಥವಾಗಿ ೬-೭ ಸ್ಥಾನಗಳ ೨ ಅಂಕಿಗಳನ್ನು ಹೇಳಿ, ಬೋಸರವರಿಗೆ ಗುಣಾಕಾರ ಮಾಡಲು ಹೇಳಿದರು. [illegible] ಗುಣಾಕಾರ ಮಾಡುತ್ತಿದ್ದರು. [illegible] ಸ್ಥಾನಗಳ ಗುಣಾಕಾರವಾಗುವದರಲ್ಲಿ ಬೋಸರು ಉತ್ತರ ಹೇಳಿ ಬಿಟ್ಟರು. ಅದನ್ನು ಕೇಳಿ ಪ್ರೊಫೆಸರರು ಆಶ್ಚರ್ಯಪಟ್ಟರು. "ಪ್ರತಿಯೊಂದು ಸ್ಥಾನದ ಪಂಕ್ತಿಯೊಳಗಿನ ಅಂಕಿಗಳನ್ನು [illegible]" ಎಂದು ಪ್ರೊಫೆಸರರು ಕೇಳಿದರು. "ಆಗಬಹುದು" ಎಂದು ಹೇಳಿದ ಮೇಲೆ, ಮೊದಲನೇ ಪಂಕ್ತಿಯನ್ನು ಹೇಳಿದರು. "ಸರಿ" ಎಂದು ಸಂತೋಷದಿಂದ [illegible] ಎರಡನೇ ಪಂಕ್ತಿಯನ್ನು ಹೇಳಿದರು. "ಅದು ತಪ್ಪು" ಎಂದು ಪ್ರೊಫೆಸರರು [illegible] ಸ್ಥಾನಗಳ [illegible] ಹೇಳಿದ, ಎರಡನೇ ಪಂಕ್ತಿಯ ಗುಣಾಕಾರವು [illegible] ಪ್ರೊಫೆಸರರಿಗೆ ಪಂಕ್ತಿಯೊಳಗಿನ ಬಿನ್ನ ಬಿನ್ನ ಅಂಕಿಗಳನ್ನು ಹೇಳಹತ್ತಿದರು. [illegible] ಗುಣಾಕಾರ ಮಾಡಿದ್ದರಿಂದ ಪ್ರೊಫೆಸರರ ಅಂಕಿಯು ತಪ್ಪಿದೆಂದು ಬೋಸರು ತೋರಿಸಿಕೊಟ್ಟರು. ಪ್ರೊಫೆಸರರು ತಪ್ಪು ಒಪ್ಪಿಕೊಂಡು, ಬೋಸರಿಗೆ ಸಭೆಯಲ್ಲಿ ತಮ್ಮ ಪ್ರಯೋಗಗಳನ್ನು ಪ್ರದರ್ಶಿಸಲು ಹೇಳಿದರು. [illegible] ಪ್ರಯೋಗಗಳು ನಡೆದವು. ಎಲ್ಲ ಪ್ರಯೋಗಗಳಲ್ಲಿಯೂ [illegible] ಇಷ್ಟೊಂದು [illegible] ಅಧ್ಯಕ್ಷರಾದ ಗಣಿತ ಶಾಸ್ತ್ರದ ಅಧ್ಯಾಪಕರು [illegible] ಸ್ವೀಕರಿಸಿ [illegible] ಅನೇಕರು ಮನೆಯಲ್ಲಿ [illegible]

(ಎರಡನೇ ಪಾನಿನ ಮೇಲೆ ಮುಂದರಿಸಿದೆ)

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ಅವು ವಿಶೇಷ ರೀತಿ ರಕ್ಷಿಸಿಕೊಳ್ಳಬೇಕು. ಕೂದಲುಗಳನ್ನು ಅಲಕ್ಷ್ಯ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ತಿಕ್ಕಿದ ಕೂದಲಿ ತಲೆಯ ಹೊಟ್ಟು ಹೋಗುತ್ತದೆ. ರೋಮರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. [illegible] ಕೂದಲುಗಳಿಗೆ ಪುಷ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಸ್ಟೋರ್ಸ್ ಅಂಗಡಿಕಾರರಲ್ಲಿ ಈ ಎಣ್ಣೆಯು ದೊರೆಯುತ್ತದೆ.

ಅಥವಾ

ನಮಗೆ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

———o:———

½ ಔಂಸಿಗೆ	ರೂ.	೨—೮—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೩—೦

ಒಟ್ಟೋ-ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ!

ಹೂದೋಟವನ್ನು ಒಂದೇ ಬಾಟ್ಲಿಯಲ್ಲಿ

ಒಂದೇ ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಹಿಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಭುತವು!

ಒಟ್ಟೋ-ದಿಲ್ ಬಹಾರ!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ವಿವಿಧ ಸಂಗ್ರಹ.

ಗೋವೆಯೊಳಗಿನ ಗಡಿಬಿಡಿ

ಗೋವೆಯೊಳಗೆ ಪತಿತೋದ್ಧಾರ ಯಾನೆ ಶುದ್ಧೀಕರಣ ಪ್ರಯತ್ನಗಳ ಕುರಿತು ನಡೆದ ಗಡಿಬಿಡಿಯ ವೃತ್ತಾಂತವು ಮುಡಗಾಂವದೊಳಗಿನ "ಹಿಂದು" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಗೋವೆಯಲ್ಲಿ ಶುದ್ಧಿ ಕಾರ್ಯಕ್ಕೆ ಕ್ರೈಸ್ತರು ಪರಿಪರಿಯ ಅಡ್ಡಗಟ್ಟುತ್ತಾರೆ. ಕೇರಿ ಗ್ರಾಮದಲ್ಲಿ ಗಾವಡಿ ಜಾತಿಯ ೩೦೦ ಮಂದಿಗಳು ಶುದ್ಧಿ ಹೊಂದಲು ತಯಾರಾಗಿ ಬಂದಿದ್ದರು. ಆದರೆ ಅವರಿಗೆ ಕ್ರೈಸ್ತರ ಕಡೆಯಿಂದ ಹೆದರಿಸಲ್ಪಟ್ಟದ್ದರಿಂದ ಅವರು ಶುದ್ಧಿಯ ಸಂಕಲ್ಪವನ್ನು ತ್ಯಜಿಸಬೇಕಾಯಿತು. ರವಿವಾರ ತಾರೀಖು ೧೧ನೇ ಬ್ರಹ್ಮಚಾರಿ ಆಗ್ರವ ದ ಗಣಪತಿಬುವಾ ಅವರಿಗೆ ಕಾರಿಯಿಂದ ಮಡ್ಗಾಂವದೊಳಕ್ಕೆ ಹೋಗುವಾಗ ಪ್ರತಿಬಂಧಿಸಿ ಪಣಜಿಗೆ ಒಯ್ದರು. ಮಾರನೇ ದಿನ [illegible] ಜಂಪ್ರಸಾದ [illegible] ರಕರವರಿಗೆ ಸರೆಹಿಡಿಯಲಾಯಿತು. ಸೋಮವಾರಕ್ಕೆ ಹೊಸ ಹಿಂದುಗಳ [illegible] ಗ್ರಾಮದಲ್ಲಿ ಸತ್ಯನಾರಾಯಣ ವ್ರತವನ್ನು ನೆರವೇರಿಸಿದರು. ಬ್ರಹ್ಮಚಾರಿ ಆನಂದ ಮೂರ್ತಿಗಳಿಗೂ ಶಾಸ್ತ್ರಿ ಬುವಾ ಅವರಿಗೂ ಸರೆಹಿಡಿದು ಪಣಜಿಗೆ ಒಯ್ದರು. ಮಂಗಳವಾರಕ್ಕೆ ಶುದ್ಧೀಕೃತರು ಅರಮನೆಗೆ ಹೋಗಿ ಆ ಸನ್ಯಾಸಿ ಪ್ರಭೃತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ ಗವರ್ನರರ ಬಳಿ ಬಿನ್ನೈಸಿಕೊಂಡರು. ಆತ್ಮಸಂತೋಷದಿಂದ ತಾವು ಹಿಂದುಗಳಾಗಿರುವೆವಾಗಿಯೂ ಅವರು ಹೇಳಿದರು. "ನೀವು ಬೇಕಾದ ಧರ್ಮವನ್ನು ಸ್ವೀಕರಿಸಿರಿ, ಅದಕ್ಕೆ ಕಾಯಿದೆಯ ಪ್ರತಿಬಂಧವಿಲ್ಲ. ಎಲ್ಲ ಧರ್ಮದವರನ್ನು ನಾನು ಸಮದೃಷ್ಟಿಯಿಂದ ನಡಿಸಿಕೊಳ್ಳುತ್ತೇನೆ. ಆನಂದ ಮೂರ್ತಿಗಳಾದಿ ಜನರಿಗೆ ಸರೆಹಿಡಿದ ಕಾರಣವನ್ನು ವಿಚಾರಿಸಿ ಇತ್ಯರ್ಥ ಪಡಿಸುತ್ತೇನೆ," ಎಂದು ನುಡಿದರು. ರಾತ್ರಿ ೧೧ ಘಂಟೆಗೆ ಶ್ರೀ॥ ದಾದಾ ಮುಕುಂದ ಕರರವರಿಗೆ ಬಿಡುಗಡೆ ಮಾಡಲಾಯಿತು. ಗವರ್ನರರಿಗೆ ಬ್ರಹ್ಮಚರ್ಯಾಶ್ರಮದ ವ್ಯವಸ್ಥಾಪಕರಿಂದಲೂ, ನಾಸಿಕದಿಂದ ಶ್ರೀ ಶಂಕರಾಚಾರ್ಯರಿಂದಲೂ, ಶ್ರೀ ಸಿದ್ಧೇಶ್ವರ ಶಾಸ್ತ್ರಿ ಚಿತ್ರಾವರವರಿಂದಲೂ ಮುಂಬಯಿ ಕಾಯಿದೆ ಕೌನ್ಸಿಲಿನ ಹಾಗು ಮುಂಬಯಿ ಮ್ಯುನಿಸಿಪಾಲಿಟಿಯ ಸಭಾಸದರಿಂದಲೂ ತಂತಿಗಳು ಹೋದವು. ಎಲ್ಲರೂ ಪ್ರತಿಬಂಧದ ಕಾರಣವನ್ನು ಕೂಡಲೆ ಪ್ರಕಟಿಸಲು ಬೇಡಿಕೊಂಡಿದ್ದರು. ಶನಿವಾರ ತಾ॥ ೧೬ನೇಗೆ ಅವರಿಗೆ ಬಿಡುಗಡೆ ಮಾಡಿ ಪೋರ್ತುಗೀಜ ಸರಹದ್ದಿನ ಹೊರಗೆ ಒಯ್ದು, ಬ್ರಿಟಿಶ ಸರಹದ್ದಿನಲ್ಲಿ ಬಿಡಲಾಯಿತು. ಕಾಯಿದೆ ಕೌನ್ಸಿಲಿನ ಸಭಾಸದರ ತಂತಿಗೆ ಗವರ್ನರರು ಉತ್ತರ ಕೊಟ್ಟಿದ್ದೇನಂದರೆ — "ಆನಂದಮೂರ್ತಿ ಗಣಪತಿ ಬುವಾ ಹಾಗು ಶಾಸ್ತ್ರಿ ಬುವಾ ಅವರಿಗೆ ಪ್ರತಿಬಂಧದಲ್ಲಿ ಹಾಕಿದ್ದಿಲ್ಲ, ಹಿಂದು ಧರ್ಮವನ್ನು ಅಂಗೀಕರಿಸಲು ಒಪ್ಪಿದವರಿಗೆ ಬೆದರಿಕೆ ಹಾಕುವ ಅಪರಾಧ ಮಾಡುವವರ ಸಹವಾಸದಲ್ಲಿ ಅವರು ಸೇರಿರುತ್ತಾರೆಂದು ಸಂಶಯ ಬಂದದ್ದರಿಂದ ಪೋಲೀಸರು ಅವರಿಗೆ ತಮ್ಮ ಸ್ವಾಧೀನ ಮಾಡಿಕೊಂಡಿದ್ದರು. ಬೆದರಿಕೆ ಹಾಕುವದು ಕಾಯಿದೆಯಂತೆ ಅಪರಾಧವು, ಧರ್ಮಸ್ವಾತಂತ್ರ್ಯದ ವೇಷ ತಾಳಿ ಈ ಪ್ರಕಾರಗಳು ಸಂಭವಿಸಿದವೆಂದು ಕೈ ಸೇರಿದ ಪುರಾವೆಯ ಮೇಲಿಂದ ತಿಳಿಯುತ್ತದೆ" ಇತ್ಯಾದಿ ಬರೆದು, ಕಾಯಿದೆ ಕೌನ್ಸಿಲಿನ ಸಭಾಸದರು ತಮ್ಮ ಕೌನ್ಸಿಲಿನ ಅಧ್ಯಕ್ಷರ ಮುಖಾಂತರ ಈ ತಂತಿಯನ್ನು ಕಳಿಸಬೇಕಾಗಿತ್ತೆಂದು ಸೂಚಿಸಿದ್ದಾರೆ. ಶುದ್ಧಿ ಕಾರ್ಯದ ಸಂಬಂಧ ಪಣಜಿಯೊಳಗಿನ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಪ್ರಚಂಡ ಸಭೆ ಸೇರಿತು. ಶ್ರೀ॥ ರಾಮಚಂದ್ರ ಪುಂಡಲೀಕ ಶಂಕರೀಯವರು ಅಧ್ಯಕ್ಷರಾಗಿದ್ದರು. ಸಭೆಗೆ ಗೋಮಾಂತಕದೊಳಗಿನ ಸಮಸ್ತ ಹಿಂದು ಸಮಾಜದವರು ಸೇರಿದ್ದರು. ಶ್ರೋತೃಸಮುದಾಯವು ೧೫೦೦ಕ್ಕೆ ಮಿಕ್ಕಿತ್ತು. ಶುದ್ಧಿ ತತ್ವಕ್ಕೆ ಸಮ್ಮತಿ, ಧರ್ಮಪ್ರಸಾರ ಕಾರ್ಯಕ್ಕೆ ಬೆಂಬಲ, ಪೋರ್ತುಗೀಜ ಸರಕಾರದ ಮೇಲೆ ರಾಜನಿಷ್ಠೆ ಮುಂತಾದ ಠರಾವುಗಳಾದವು. ಸರಕಾರಿ ಅಧಿಕಾರಿಗಳಿಗೆ ಶುದ್ಧಿ ಕಾರ್ಯಕ್ಕೆ ಸಂಬಂಧಪಟ್ಟ ವಾಸ್ತವಿಕ ಹಕೀಕತನ್ನು ಕಾಲಕಾಲಕ್ಕೆ ತಿಳಿಸುವದಕ್ಕಾಗಿ ಗೋಮಾಂತಕದೊಳಗಿನ ಪ್ರಮುಖರ ಮಂಡಲವೊಂದು ನೇಮಿಸಲಾಯಿತು. ಗವರ್ನರರ ಬಳಿ ಸಭೆಯ ಮನೋಗತವನ್ನು ತಿಳಿಸುವದಕ್ಕಾಗಿ ಶ್ರೀ॥ ಪುಂಡಲೀಕ ಅವಚಿತ ಕೆಣಿ, ರಾಮಚಂದ್ರ ಪುಂಡಲೀಕ ಶಂಕರೀ ಮುಂತಾದವರ ಶಿಷ್ಟಮಂಡಳ ನೇಮಿಸಲಾಯಿತು. ಧರ್ಮಾಂತರವಾಗಲು ಬಲಾತ್ಕಾರವಾದ ಪುರಾವೆ ಸಗ್ರಹಕ್ರಮ ನಡೆದಿದೆ. ಅದರೊಳಗಿನ ಏನು ಹೊರಬೀಳುತ್ತವೆ, ನೋಡಬೇಕು.

***

ಬಾರ್ಡೋಲಿಯ ನಿರ್ಧಾರ

ಬಾರ್ಡೋಲಿ ತಾಲೂಕಿನಲ್ಲಿ ಕರನಿರಾಕರಣೆಯ ಪ್ರಯತ್ನವು ಸುಸಂಘಟಿತವಾಗಿ ಸಾಗಿದೆ. ವಲೋಡ ಗ್ರಾಮದೊಳಗಿನ ಸಾಹುಕಾರರೆಲ್ಲರು ಜಪ್ತಿಯ ನೋಟೀಸು ಕೊಂಡು ತಮ್ಮ ತಿವೆಯನ್ನು ಕೊಟ್ಟರು. ಕೂಡಲೆ ೨೦ ಗ್ರಾಮದ ಒಕ್ಕಲಿಗರ ಕರಜಾಸ್ಸಾಗ್ರಾಮದಲ್ಲಿ ಕಳೆದ ೧೫-೧೬ನೇ ತಾರೀಖಿಗೆ ಸಭೆ ಸೇರಿದರು. ದ್ರೋಹ ಮಾಡಿದ ಜನರಿಗೆ ಶಾಸನ ಮಾಡಲು ಸಿದ್ಧರಾಗಿ ಸಭೆ ಸೇರಿದ್ದರು. ಇವನ್ನು ಕೇಳಿ ಇವ್ವರು ಕ್ಷಮೆ ಬೇಡಿದರು. ಮುಂದಿನ ಕರ ತಮ್ಮ ಸರಕಾರಕ್ಕೆ ಕೊಡಲಿಕ್ಕಿಲ್ಲವಾಗಿಯೂ ವಚನ ಕೊಟ್ಟರು. ಇವ್ವರೂ ಸತ್ಯಾಗ್ರಹ ನಿಧಿಗೆ ೧೪೫೧ ರೂಪಾಯಿಗಳನ್ನು ಕೊಟ್ಟರು. ಅದರಿಂದ ಸಭೆಯಲ್ಲಿ ಸಮಾಧಾನವಾಗಿ, ಸಂಘಟನೆ ಮಾಡುವ ತೀರ್ಮಾನವಾಯಿತು. ಈ ತನಕ ಪ್ರತಿಜ್ಞೆ ಮಾಡದ ಒಕ್ಕಲಿಗರ ಕಡೆಯಿಂದ ಪ್ರತಿಜ್ಞೆಯನ್ನು ಕೊಳ್ಳಬೇಕಾಗಿಯೂ, ಬಾರ್ಡೋಲಿಯಲ್ಲಿ ತಾರೀಖು ೧೨-೨-೨೮ರಲ್ಲಿ ಕೈಕೊಂಡ ಸತ್ಯಾಗ್ರಹದ ಪ್ರತಿಜ್ಞೆಯನ್ನು ನಿರ್ಧಾರದಿಂದ ಪಾಲಿಸಬೇಕಾಗಿಯೂ ಸತ್ಯಾಗ್ರಹವನ್ನು ಸೇರದವರಲ್ಲಿ ಬೇಕಣಕ್ಕೆ ಹೋಗಬಾರದಾಗಿಯೂ, ಅವರಿಗೆ ಬೇಕಣಕ್ಕೆ ಕರೆಯಬಾರದಾಗಿಯೂ ತೀರ್ಮಾನಗಳಾದವು. ಕರ ವಸೂಲಿಗೆ ಬರುವ ಸಮಯದಲ್ಲಿ ಜಪ್ತಿಯ ಕ್ರಮಕ್ಕೆ ಅನುಕೂಲವಾಗುವದಕ್ಕಾಗಿ ಪಂಚರ್ಯಾರೂ ಸಿಗುವದಿಲ್ಲ, ಜಪ್ತ ಮಾಡಿದ ಸರಕುಗಳನ್ನು ಒಯ್ಯಲು ಕೂಲಿಗಾರರು ಸಿಗುವದಿಲ್ಲ, ಗ್ರಾಮಗಳಲ್ಲಿ ಹೊರಬದಿಗೆ ನಗಾರೆಗಳನ್ನಿಟ್ಟಿದ್ದಾರೆ. ಪಟೇಲ-ತಲಾಟಿಗಳ ದರ್ಶನವಾದೊಡನೆ ಸ್ವಯಂಸೇವಕರು ನಗಾರೆಗಳನ್ನು ಬಾರಿಸಿ, ಊರವರಿಗೆ ಮುಂಜಾಗ್ರತೆ ಕೊಡುತ್ತಾರೆ. ಕೂಡಲೆ ಜನರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಬೀಗ ಹಾಕಿ ಹೊರಬಿದ್ದು ಹೋಗುತ್ತಾರೆ. ಗ್ರಾಮವು ನಿರ್ಜನವಾಗುತ್ತದೆ. ಊರಲ್ಲಿ ತಿಂಡಿ-ತಿನಸು ಸಿಗುವದು ಕಠಿಣವಾಗುತ್ತದೆ. ಜನರು ತಮ್ಮ ತಮ್ಮ ಹೊಲಮನೆಗಳಲ್ಲಿ ಹೊಲಗೆಲಸಗಳನ್ನು ಮಾಡುತ್ತ ಸಮಯಕ್ಷೇಪ ಮಾಡುತ್ತಾರೆ. ಹೀಗಾಗಿ, ಜಪ್ತಿ ಮಾಡಲು ಸರಕಾರಕ್ಕೆ ಉಪಾಯವಾಗುವದಿಲ್ಲ. ಚೌಥಾಯಿ ದಂಡದ ನೋಟೀಸುಗಳು ಹೊರಡಿಸಲ್ಪಟ್ಟಿವೆ. ಅವುಗಳಿಗೆ ಈಗ ಬೆದರುವವರಿಲ್ಲ. ತೀರ್ವೆ ಕೊಡುವ ಮನಸ್ಸಿದ್ದರೆ, ಚೌಥಾಯಿಗೆ ಬೆದರುವದಿಲ್ಲವೇ? ಅಧಿಕಾರಿಗಳು ಬೇಸರಪಟ್ಟಿದ್ದಾರೆ. ಹೋದ ಹೋದಲ್ಲಿ ಜನರೇ ಸಿಗುವದಿಲ್ಲ. ಇದರಿಂದ ತಾವು ಮಾಡುವದೇನೆಂದು ಅವರು ಮೇಲಧಿಕಾರಿಗಳಿಗೆ ಬರಕೊಂಡಿದ್ದಾರೆ. ಕರ ವಸೂಲಿಯ ಕೆಲಸವು ಮಿತಿ ಮೀರಿ ಬೆಳೆಯಿತು. ಈಗಿನ ಪರಿಪಾಠದಿಂದ ಅದು ಸಾಗಿಹೋಗದು. ಅದರಿಂದ ಈ ಕೆಲಸದ ಬಗ್ಗೆ ಸರಕಾರವು ಇನ್ನಿಷ್ಟು ಮಾಮಲೇದಾರರನ್ನು ನೇಮಿಸಲಿಕ್ಕಿದೆ. ಸದ್ಯಕ್ಕೆ ಈ ಅಧಿಕಾರಿಗಳು ನೇಮಣೂಕಿಯಾಗುವದರೊಳಗೆ ಗುಜರಾಥದೊಳಗಿನ ದೇಶಸೇವಕರಾದ ಅಬ್ಬಾಸ ತಯ್ಯಬಜೀಯವರೂ, ಶ್ರೀ॥ ಮೋಹನಲಾಲ ಪಂಡ್ಯಾರವರೂ, ಭೋಲಾಭಾಯಿ ದೇಸಾಯಿ, ದರಬಾರಸಾಹೇಬ ಗೋಪಾಲದಾಸ ದೇಸಾಯಿಯವರೂ ಗ್ರಾಮ ಗ್ರಾಮಗಳಲ್ಲಿ ಅಡ್ಡಾಡಿ ಸಂಘಟನೆಯ ಕಾರ್ಯವನ್ನು ನಡಿಸುತ್ತಿದ್ದಾರೆ. ಕಡೋದ ಗ್ರಾಮವು ಮಾತ್ರ 'ಸತ್ಯಾಗ್ರಹ' ಪ್ರಾಕಾರದಲ್ಲಿ ಸೇರಿಲ್ಲ. ಅಲ್ಲಿಯ ಗ್ರಾಮದವರು ಸತ್ಯಾಗ್ರಹ ಪ್ರತಿಜ್ಞೆಯನ್ನು ಕೊಳ್ಳಲಿಲ್ಲ, ತಾವು ತಿರ್ವೆಯನ್ನು ಕೊಡಲಿಕ್ಕಿಲ್ಲವಾಗಿ ಬಾಯಿಮಾತು ಕೊಟ್ಟರು. ಅಲ್ಲಿಯ ಬನಿಯಾ ಹಾಗು ದೇಸಾಯಿ ಮನೆತನದವರು ತಮ್ಮ ತಮ್ಮ ಕಂದಾಯವನ್ನು ಕೆಟ್ಟು ಬಿಟ್ಟ ಸುದ್ದಿಯಿದೆ. ನೆರೆಹೊರೆಯ ಗ್ರಾಮದವರು ಪರಿಪರಿಯಿಂದ ಹೇಳಿಕೊಂಡಾಗ್ಯೂ, ರಾ॥ ಭೋಲುಭಾಯಿ ದೇಸಾಯಿ ಹಾಗು ದಿನಕರರಾವ ದೇಸಾಯಿ ಎಂಬ ಈರ್ವರ ದೇಸಾಯಿ ಬಂಧುಗಳ ಪ್ರೇರಣೆಯಿಂದ ನೂರಾರು ರೂಪಾಯಿ ತೀರ್ವೆ ಹಣವು ವಸೂಲಾಯಿತು. ಇದನ್ನು ಕೇಳಿದೊಡನೆ ನೆರೆಹೊರೆಯ ಗ್ರಾಮದವರು ರೇಗಿಗೆದ್ದು, ಆಕೋಲಿಯ ಗ್ರಾಮದಲ್ಲಿ ಸಭೆಸೇರಿದರು. ಮತ್ತು ಕಡೋದ ಗ್ರಾಮದಲ್ಲಿ ಸರಕಾರಕ್ಕೆ ತೀರ್ವೆ ಕೊಟ್ಟವರ ಭೂಮಿಯನ್ನು ಸಾಗ್ವಳಿ ಮಾಡದಾಗಿಯೂ, ಅದನ್ನು ಕ್ರಯಕ್ಕಾಗಲಿ, ದಾನಕ್ಕಾಗಲಿ ಪಡೆಯಬಾರದಾಗಿಯೂ ನಿರ್ಧಾರ ಮಾಡಿದ್ದಾರೆ. ಲೇವಾ ಪಟೇದಾರ ಜಾತಿಯವರು ಸತ್ಯಾಗ್ರಹ ನಿಧಿಗೆ ೫೦೦ ರೂಪಾಯಿಗಳನ್ನಿತ್ತಿದ್ದಾರೆ. ಹೀಗೆಲ್ಲ ಸರಕಾರದ ಕಡೆಯಿಂದಲೂ, ಪ್ರಜೆಗಳ ಕಡೆಯಿಂದಲೂ ಪ್ರಯತ್ನಗಳು ನಡೆದಿವೆ.

***

ತುಕೋಜಿರಾಯರ ಮದುವೆಯ ಸಮಾರಂಭ

ಹಿಂದೆ ಗೊತ್ತುಪಡಿಸಿದಂತೆ ಮದಚ್ಯುತ ತುಕೋಜಿರಾಯರ ಮದುವೆಯು ಇಂದೂರ ಸಂಸ್ಥಾನದ ಬರ್ವಾದೊಳಗಿನ ಹಯಾತಖಾನದಲ್ಲಿ ನೆರವೇರಿತು. ಮದುವೆಯು ಮುಂಚೆ ದತ್ತವಿಧಾನ ನಡೆಯಿತು. ಧನಗರ ಜಾತಿಯಲ್ಲಿ ಶರ್ಮಿಷ್ಠೆಗೆ ಸೇರಿಸಿಕೊಳ್ಳಲಾಯಿತು, ಮತ್ತು ಧರ್ಮಾಂತರ ಹೊಂದಿದ ಬಳಿಕ, ಶರ್ಮಿಷ್ಠೆಗೆ ಕರ್ನಲ್ ಲಾಬಾರೆ ಎಂಬ ಹೋಳಕರ ಮನೆತನದವರು ದತ್ತಕಕ್ಕೆ ತೆಗೆದುಕೊಂಡರು, ಮತ್ತು

ಮದುಮಗಳ ತರ್ಫೆನಿಂದ ಯಜಮಾನಿಕೆ ನಡಿಸಿದರು. ಇವರು ಈ ಮದುವೆಯೇ ತುಕೋಜಿರಾಯರ ಮಹಾರಾಜರು! ಮಹಾರಾಜರ ೨ನೇ ರಾಣಿಯರಾದ ಇಂದಿರಾಬಾಯಿಯವರಿಗೆ ದತ್ತಕ ಪಡಕೊಂಡ ಪುಣ್ಯಾತ್ಮರೂ ಇವರೇ! ಇವರ ದತ್ತಕ ಕೊಳ್ಳುವದು, ಮಹಾರಾಜರು ಮದುವೆ ಮಾಡಿಕೊಳ್ಳುವದು, ಈ ಪ್ರಕಾರ ನಡೆದಿದೆಂದು ಜನರು ಹೇಳುತ್ತಾರೆ. ಮದುವೆಯ ಪದ್ಧತಿಯಾದಂದಿನಿಂದ ಬರುವಾಗ್ಯೇಯವರ ಹಿಂದಿನ ದತ್ತಕ ಮಗಳಾದ ಇಂದಿರಾಬಾಯಿಯವರು ಕಣ್ಣೀರು ಸುರಿಸುತ್ತಿದ್ದಾರೆ, ಇತ್ತ ದತ್ತಕ ತಂದೆಯವರಾದ ಬರುವಾಗ್ಯೇಯವರು ಇನ್ನೊಬ್ಬ ದತ್ತಕ ಹುಡುಗಿಯು ಮದುವೆ ಚಪ್ಪರದಲ್ಲಿ ಯಜಮಾನರಾಗಿ ಮೆರೆಯುತ್ತಿದ್ದಾರೆ. ದತ್ತ ವಿಧಾನವಾದ ಬಳಿಕ, ಮದುಮಗಳದಿರ ಚಪ್ಪರದಲ್ಲಿಯೂ, ಮದುಮಗಳ ಚಪ್ಪರದಲ್ಲಿಯೂ ಪುರಾತನ ರೂಢಿಯಂತೆಯೂ, ಶಾಸ್ತ್ರದಂತೆಯೂ ಅಭ್ಯಂಗ ಸ್ನಾನಾದಿ ವಿಧಿಗಳು ನಡೆದವು. ಈ ರೂಢಿಗಳಿಗೂ, ಶಾಸ್ತ್ರ ವಿಧಿಗಳಿಗೂ ಶರ್ಮಿಷ್ಠೆಯಾಗಲಿ, ತುಕೋಜಿರಾಯರಾಗಲಿ ಬೆಲೆ ಕೊಡಲಿಲ್ಲ. ಪ್ರಜೆಗಳ ಸಮಾಧಾನಕ್ಕಾಗಿ ಶರ್ಮಿಷ್ಠೆಯಲ್ಲಿ ನಿಷ್ಠೆಯನ್ನುಂಟು ಮಾಡುವದಕ್ಕಾಗಿ ಈ ವಿಧಿಗಳು ಕೈಕೊಳ್ಳಲ್ಪಟ್ಟವು. ಗೋಧೂಳಿ ಮುಹೂರ್ತಕ್ಕೆ ಸರಿಯಾಗಿ ತುಕೋಜಿರಾಯರು ಮದುಮಗನಂತೆ ಶೃಂಗರಿಸಿಕೊಂಡು ಅಶ್ವಾರೂಢರಾಗಿ, ಛತ್ರ ಧಾರಿಯಾಗಿ ಮದುಮಗಳ ಚಪ್ಪರಕ್ಕೆ ಬಂದರು. ಆ ಕಾಲಕ್ಕೆ ದಿಬ್ಬಣದಲ್ಲಿ ೧೫ ಸಾವಿರಕ್ಕು ಮಿಕ್ಕಿ ಜನರಿದ್ದರಂತೆ! ಶರ್ಮಿಷ್ಠೆಯು ಹಿಂದು ಸ್ತ್ರೀಯ ಉಡಿಗೆ-ತೊಡಿಗೆಗಳನ್ನು ಧರಿಸಿದ್ದಳು. ಮುತ್ತಿನ ಬಳೆಗಳನ್ನೂ, ವಜ್ರದ ಉಂಗುರಗಳನ್ನೂ, ರವಕೆಯನ್ನೂ ತೊಟ್ಟಿದ್ದಳು. ಪುರಾತನ ಜಾತಿಯ ಸ್ತ್ರೀಯಂತೆ ಶೋಭಿಸುತ್ತಿದ್ದಳು; ಈ ವಿವಾಹವು ಸ್ವಾವಲಂಬನವಾಗಿ ಪಾಣಿಗ್ರಹಣ ವಿಧಿಯಾಯಿತು; ಸಪ್ತಪದಿಯೂ ಆಯಿತು. ಅಗ್ನಿಸಾಕ್ಷಿಯಾಗಿ ದಂಪತಿಗಳು ಪ್ರತಿಜ್ಞೆಗಳನ್ನು ಕೊಂಡರು. ತುಕೋಜಿರಾಯರು ಹೀಗೆ ಹಿಂದೆ ಎರಡಾವರ್ತಿ ಪ್ರತಿಜ್ಞೆಗಳನ್ನು ಕೊಂಡಿದ್ದರು. ಇಬ್ಬರೂ ಗಂಡ-ಹೆಂಡಂದಿರಾದ ಬಳಿಕ, ಜನರು ಕಾಣಿಕೆಗಳನ್ನರ್ಪಿಸಿದರು. ತುಕೋಜಿರಾಯರು ರಸಿಕರೆಂಬ ದಿಗಂತ ಕೀರ್ತಿ ಮುದವೆಂಬ ಸುದ್ದಿ ಕೇಳಿ ನೂರಾರು ನರ್ತಕಿಯರು ತಂಡಾಗಟ್ಟಿ ಸೇರಿದ್ದರು. ದೊಡ್ಡ ದೊಡ್ಡ ಉಡುಗೊರೆ ಸಿಕ್ಕೀತೆಂದು ಬಹಳ ಬೆಲೆ ಬಾಳುವ ಅವರ ಸೊಗಸಿನ ಉಡುಪುಗಳನ್ನು ಧರಿಸಿ ಬಂದಿದ್ದರು. ಶರ್ಮಿಷ್ಠೆಯ ಸಹವಾಸದಿಂದ ತುಕೋಜಿರಾಯರ ಮೇಲೆ ಅವರ ಅಂತರ ಉಂಟಾಗಿತ್ತು; ಯಾರದೂ ಸೇವೆ ನಡೆಯಲಿಲ್ಲ. ಅದರಿಂದ ಅವರು ನಿರಾಶರಾಗಿ ಮನೆಗೆ ಹೋಗಬೇಕಾಯಿತು. ಇಂಧೂರ ದರಬಾರದ ಅಧಿಕಾರಿಗಳು ಹೊರಟು ಹೋಗದಂತೆ ಸಂತೋಷದಿಂದ ಹುಕುಂ ಹೊರಟಿತ್ತು. ಹಾರದೇ ದಿನವೇ ತಂದ್ದಿಯ ಆಯಾಸದಿಂದಲೂ, ಪ್ರಯಾಣದ ದಣುವಿನಿಂದಲೂ, ಮದುವೆಯ ಸಡಗರದಿಂದಲೂ ಶರ್ಮಿಷ್ಠೆಗೆ ಅನಾರೋಗ್ಯವು ಪ್ರಾಪ್ತವಾದ್ದರಿಂದ ಮಹಾರಾಜರ ಔತಣ ಸಮಾರಂಭವು ನೆರವೇರಲಿಲ್ಲ. ಮಹಾರಾಜರ ಮಗಂದಿರಾದ ಯಶವಂತರಾಯರು ಈಗಿನ ಪಟ್ಟಾಭಿಷಿಕ್ತ ಅರಸರು ಈಗ ಇಂಗ್ಲೆಂಡದಲ್ಲಿದ್ದಾರೆ. ಮದುವೆಗೆ ಸಂಸ್ಥಾನದ ಅಧಿಕಾರಿಗಳ್ಯಾರೂ ಹೋಗದಂತೆ ಇಂಗ್ಲೆಂಡದಿಂದ ಅಪ್ಪಣೆ ವಿಧಿಸಿದ್ದರಂತೆ. ಆ ಮದುವೆಯು ಅಮೇರಿಕೆಯವರಿಗೂ ಮಾನ್ಯವಿಲ್ಲ. ಅಮೇರಿಕೆಯ ಆರ್ಯ ಧರ್ಮಿಗಳು ಬಹು ಪ್ರಯತ್ನ ಮಾಡಿದರು. ಶುದ್ಧಿಯಾಗದಂತೆಯೂ, ಮದುವೆಯಾಗದಂತೆಯೂ ಅವರ ಪ್ರಯತ್ನ ನಡೆಯಿತು. ಶುದ್ಧಿ ಸಮಾರಂಭಕ್ಕೆ ಅನುಗ್ರಹಿಸಲು ನಾಶಿಕ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾ| ಪಾಟಣಕರರವರು ಅನ್ನುಷ್ಠ ಕಲೆಕ್ಟರರಾದ ಮಿ| ಜೊನ್ನರವರಿಗೆ ನಿಮಂತ್ರಿಸಿಕೊಂಡಿದ್ದರು. ಜೊನ್ನರವರು ಕೋಪಾವಿಷ್ಟರಾದರು — "ನೀವು ನಮ್ಮ ಹುಡುಗಿಯರನ್ನು ಅಪಹರಿಸುತ್ತೀರೆಂ"ದು ಕಲೆಕ್ಟರರು ರಾ| ಪಾಟಣಕರರ ಮೇಲೆ ಹಾರಿ ಬಿದ್ದರು. ಸಾಕ ಜಿಲ್ಲೆಯ ಎಗ್ಜಿಕ್ಯುಟಿವ್ ಇಂಜನಿಯರರೂ ಹಾಗೂ ಓಯಾನರವರೂ ಅವರಿಗೂ ರಾ| ಪಾಟಣಕರರು ನಿಮಂತ್ರಿಸಿಕೊಂಡಿದ್ದರು. ಪಾಶ್ಚಿಮಾತ್ಯರು ಹೆಚ್ಚಾಗಿ ಹಿಂದು ಧರ್ಮವನ್ನು ಸ್ವೀಕರಿಸದೇ ಇದ್ದಾಗಿಯೂ, ಅವರಿಂದ ಆದಿಭೌತಿಕ ದೃಷ್ಟಿಯು ಕುಗ್ಗಿ ಕುಟುಂಬವಾಗದೆಂದೂ ಉದ್ಗರಿಸಿ, ಇಂಜನಿಯರರು ಶುದ್ಧಿ ಸಮಾರಂಭಕ್ಕೆ ಚಿತ್ತೈಸಿದ್ದರು. ಶುದ್ಧಿಯು ಗ್ರಾಹ್ಯವಾಗಬಲ್ಲದ, ಮದುವೆಯನ್ನು ಗ್ರಾಹ್ಯವೆನಿಸಿಕೊಳ್ಳುವ ಬಗೆ ಹೇಗೆ? ಮಾಡುವಗೋಸ್ಕರ ಎಂದರೆ ಶರ್ಮಿಷ್ಠೆಯಾಗದಿದ್ದರೂ, ಶುದ್ಧಿಯ ಪರ್ಯಾವಸಾನವು ಮದುವೆಯಲ್ಲಾದ್ದರಿಂದ ಆದಿಭೌತಿಕ ಸುಖೋಪಭೋಗ ಲಾಲಸೆಯಿಂದ ಈ ಪ್ರಕರಣವು ಹುಟ್ಟಿದ್ದೆಂದು ವಿಚಾರಿಗಳು ಹೇಳಾಡುತ್ತಾರೆ.

* *
*

ಒಂದು ಸಣ್ಣ ಪ್ರಕರಣ.

ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕಳೆದ ತಾ| ೧೦ ನೇಗೆ ಸ್ಕೀನ ಕಮೀಟಿಯ ರಿಪೋರ್ಟಿನ ಮೇಲೆ ಸರಕಾರವು ಕೈಕೊಂಡ ನಿರ್ಧಾರಗಳನ್ನು ನಿರ್ಣಯಿಸುವ ಚರ್ಚೆಯಾಯಿತು. ಸ್ಕೀನ ಕಮೀಟಿ ಎಂದರೆ, ಸೈನ್ಯ ಖಾತೆಯಲ್ಲಿ ಭಾರತೀಯರನ್ನು ಹೆಚ್ಚೆಚ್ಚಾಗಿ ಸೇರಿಸಿಕೊಳ್ಳುವ ಉಪಾಯಗಳನ್ನು ಸೂಚಿಸಲು ನೇಮಿಸಿದ ಮಂಡಳವು. ದೆಹಲಿಯ ಜಿನ್ನಾರವರು ಈ ಸಭೆಯ ಸಭಾಸದರಿದ್ದರು. ಅವರು ಆ ದಿನವೇ ಚರ್ಚೆಯಾಗಬೇಕೆಂದರು. ಸರಕಾರದಿಂದ ವಿರೋಧವಾಯಿತು. ಅಧ್ಯಕ್ಷರಾದ ಶ್ರೀ| ವಿಠ್ಠಲಭಾಯಿ ಪಟೇಲರವರು ಚರ್ಚಿಸಲು ಅಪ್ಪಣೆ ಕೊಟ್ಟರು. ಚರ್ಚೆಯ ಕಾಲಕ್ಕೆ ಸೈನ್ಯಾಧಿಪತಿಗಳು ಕೌನ್ಸಿಲಿನಲ್ಲಿ ಇರಲಿಲ್ಲ. ಇದು ಅಪ್ರಶಸ್ತವಾಯಿತೆಂದು ಅಧ್ಯಕ್ಷರು ಉದ್ಗರಿಸಿದರು. ಹಾಗೆಯೇ ಸರ್ ಬೇಸಿಲ್ ಬ್ಲೆಕೆಟಾದಿ ಸಭಾಸದರು ಇದೊಂದು ಅಪಮಾನವೆಂದು ಗ್ರಹಿಸಿ, ಸಭಾಸ್ಥಾನದೊಳಗಿಂದ ಎದ್ದು ನಡೆದರು. ಅಧ್ಯಕ್ಷರಾದ ಶ್ರೀ| ವಿಠ್ಠಲಭಾಯಿ ಪಟೇಲರವರಿಗೆ ಪಂಡಿತ ಮೋತೀಲಾಲ ನೆಹರೂರವರೂ, ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರವರೂ ಶನಿವಾರ ತಾ| ೧೭ನೇಗೆ ಮೇಜವಾನಿಯನ್ನಿತ್ತರು. ಆ ಸಮಯ ಸರಕಾರಿ ಸಭಾಸದರಿಗೆ ನಿಮಂತ್ರಣ ಹೋಗಿತ್ತು. ಹಿಂದಿನ ಒಂದು ನಡೆದ ಘಟನೆ ಮರೆಯದೇ ಅಲ್ಲದೆ ಸರ್ ಬೇಸಿಲ್ ಬ್ಲೆಕೆಟರು ಸರಕಾರಿ ಸಭಾಸದರಿಗೂ, ಸರಕಾರನಿಯುಕ್ತ ಸಭಾಸದರಿಗೂ ಮೇಜವಾನಿಗೆ ಹೋಗದಂತೆ ಅಪ್ಪಣೆಕೊಟ್ಟಿದ್ದರಾಗಿ ವಾರ್ತಾವಾಹಕನಾದ 'ವಿಹಾರಿ'ಯು ಪ್ರಕಟಿಸಿದ್ದಕ್ಕೆ ಸ್ಕೀನ ಕಮೀಟಿಯ ಚರ್ಚೆಯ ದಿನ ಸೇನಾಪತಿಗಳ ಅಭಾವದ ವಿಷಯ ಅಧ್ಯಕ್ಷರಾದ ಪಟೇಲರವರ ಉದ್ಗಾರದ ಕಾರಣ ಹಿಸ್ಟರಿ ರಾಯಸಗಳು ಹೊರಡಿಸಿದ್ದೆಂದೂ 'ವಿಹಾರಿ'ಯ ಅಂತರಂಗದ ಸುದ್ದಿ. ಶ್ರೀ| ವಿಠ್ಠಲಭಾಯಿಯವರು ಇದಕ್ಕೆಲ್ಲ ಸೊಪ್ಪು ಹಾಕುವವರಲ್ಲ. ಪಂಡಿತ ಮೋತೀಲಾಲರಾಗಲಿ, ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರಾಗಲಿ ಇತ್ತ ಲಕ್ಷಗೊಡಲಿಲ್ಲ. ಹರುಷದಿಂದ ಮೇಜವಾನಿಯ ಸಮಾರಂಭವನ್ನು ನೆರವೇರಿಸಿಬಿಟ್ಟರು. ಶ್ರೀ| ವಿಠ್ಠಲಭಾಯಿಯವರ ಹರುಷ ರಸೋತ್ಸವ ವಿರತವಾದ್ದಿತ್ತು. ವರಿಷ್ಠ ಕಾಯಿದೆ ಕೌನ್ಸಿಲಿಗೆ ಹಿಸ್ಟರಿ ಮಾಹನಾಲಯದಲ್ಲಿ ಸ್ವಾಧೀನತೆ ರೀತಿಗಳ ದೊರೆಗಳ ಭಾಷೆಗಳನ್ನು ಬಿಡುವ ಸಮಾರಂಭವು ಈಗ ಸರ್ವಾಧಿಪತಿಗಳಾಗಿರುವ ಇರ್ವಿನ್ ದೊರೆಗಳ ಕಡೆಯಿಂದ ನೆರವೇರುವದಿತ್ತು. ಅದಕ್ಕೆ ಅಪ್ಪಣೆ ಪಡೆಕೊಂಡ ಹೊರತು ಕಾಯಿದೆ ಕೌನ್ಸಿಲಿಗೊಳಪಟ್ಟ ಮಂದಿರಗಳಲ್ಲಿ ಸರ್ವಾಧಿಪತಿಗಳು ಪ್ರವೇಶಿಸಲಾಗದೆಂದು ಶ್ರೀ| ವಿಠ್ಠಲಭಾಯಿಯವರು ಪಟ್ಟುಹಿಡಿದು ಕೊಟ್ಟಿದ್ದರು. ಮುಂದೆ ಕಾಯಿದೆ ಕೌನ್ಸಿಲ್ ಹಾಗು ಕೌನ್ಸಿಲ ಆಫ್ ಸ್ಟೇಟ ಹೀಗೆ ಎರಡು ನ್ಯಾಯ ಸಭಾಯುಕ ಸಭೆಗಳ ಅಧ್ಯಕ್ಷರ ಅನುಮತಿ ಪಡಕೊಂಡು, ಕಾಯಿದೆ ಕೌನ್ಸಿಲಿನಲ್ಲಿ ಅನ್ಯರು ಬರಬಹುದಾಗಿ ಸಮಾಧಾನವಾಗಿ ಈ ಪ್ರಕರಣವು ತೀರಿಸಲಾಯಿತು. ಅಧರಂತೆಯೇ 'ಬಹಿಷ್ಕಾರ' ಪ್ರಕರಣವನ್ನು ಇನ್ನು ವಿಶೇಷವಾಗಿ ಬೆಳೆಸಿದರೆ, ಮುಂದೆ ಭೈಲಿಗೆ ಬೀಳುವ ಸಂಭವವಿದ್ದು ಸುವಿಚಾರ ತೋರುತ್ತದೆ. ಸೈನ್ಯಾಧಿಪತಿಗಳು, ಅಧ್ಯಕ್ಷರಾದ ಶ್ರೀ| ವಿಠ್ಠಲಭಾಯಿಯವರ ಬಳಿ ಗೈರಹಾಜರಾಗುವ ಕಾರಣಗಳನ್ನು ಹೇಳಿದರಂತೆ. ಅವು ಅಧ್ಯಕ್ಷರಿಗೆ ಯೋಗ್ಯವೆಂದು ತೋರಿದವಂತೆ. ಅದರಿಂದ ಇತ್ತಟ್ಟಿನವರ ತಪ್ಪು ಗ್ರಹಿಕೆಯು ದೂರವಾಗಿ, ಆ ಪ್ರಕಾರ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೂ ಜಾಹೀರಾಗಿದೆ. ಶ್ರೀ| ಪಟೇಲರವರು ರಾಷ್ಟ್ರದ ಹಿತವನ್ನೂ, ಭಾರತೀಯರ ಗೌರವವನ್ನೂ, ಸ್ವಾಭಿಮಾನವನ್ನೂ ಪ್ರಕಟಿಸಿದ ಬಗ್ಗೆ ರಾಷ್ಟ್ರವು ಮರೆಯಲಾಗದಷ್ಟು ಕೃತಜ್ಞವಾಗಿದೆ.

* *

ಇರಾಣಿಯರ ಮೇಲಿನ ಸಂಕಟ.

ಇರಾಣದ ಬಳಿ ಇರಾಕ ಪ್ರದೇಶವಿದೆ. ಈ ಪ್ರದೇಶದ ಮೇಲೆ ನಮ್ಮ ಬ್ರಿಟಿಶರ ಅಧಿಕಾರವಿದೆ. ಅಲ್ಲಿ ಅನೇಕ ಇರಾಣ ಪ್ರಜೆಗಳು ವಾಸಿಸುತ್ತಾರೆ. ಇವರು ಇರಾಣ ದೇಶದ ಪ್ರಜೆಗಳು. ಅವರಿಗೆ ಇರಾಕ ದೇಶದಲ್ಲಿ ನಾಗರಿಕರಾಗಬೇಕಾಗಿಯೂ, ಹಾಗೆ ಅವರು ನಾಗರಿಕರಾಗಬೇಕೊಪ್ಪದಿದ್ದರೆ, ಸ್ವಖಂಡಕ್ಕೆ ತಿರುಗಿ ಹೋಗಬೇಕಾಗಿಯೂ ಇರಾಕ ಸರಕಾರದ ಅಪ್ಪಣೆಯಾಗಿದೆ. ಇರಾಣಿಯರಿಗೆ ಇರಾಕ ಸರಕಾರದ ರಾಜ್ಯದೊಳಗಿನ ಪ್ರಜಾ ಹಕ್ಕು ಬೇಡ, ಆದರೆ ಸ್ಥಿರ ಸೊತ್ತನ್ನು ಇರಾಕ ಸರಕಾರವು ಕೊಂಡುಕೊಳ್ಳುವಾಗ ಆ ಸರಕಾರದ ಬಳಿ ಹೇಳಲು, ಇರಾಣದ ಸರಕಾರದವರಿಗೆ ಇರಾಣಿಯರು ವಿಜ್ಞಾಪಿಸಿಕೊಂಡಿದ್ದಾರೆ. ಬ್ರಿಟಿಶ ಸರಕಾರಕ್ಕೂ, ಇರಾಣ ಸರಕಾರಕ್ಕೂ ಮನಸ್ಸು ನೆಟ್ಟಗಿಲ್ಲ. ಬ್ರಿಟಿಶರು ಇರಾಣಿಯರಿಂದ ೫೦ ಲಕ್ಷ ಹಣವನ್ನು ಬೇಡುತ್ತಾರೆ. ಈ ರಕಮನ್ನು ಬ್ರಿಟಿಶರಿಗೆ ಇರಾಣಿಯರಿಂದ ಸಲ್ಲತಕ್ಕದ್ದಂತೆ. ಯಾವ ಲೆಕ್ಕವೆಂದು ಕೇಳುತ್ತೀರಾ? "ಶೀಘ್ರ" ಎಂಬ ವರ್ತಮಾನ ಪತ್ರಿಕೆಯು ಪ್ರಕಟಿಸುವದೇನೆಂದರೆ—"ಮಹಾಯುದ್ಧದ ಕಾಲದಲ್ಲಿ ಅಧಿಕಾರಿಗಳಿಗೆ ಲಂಚ ಕೊಡಲಿಕ್ಕೂ, ತುರ್ಕರ ಹಾಗು

(೧೧ ನೇ ಪಾನಿನ ಮೇಲೆ ಮುಂದುವರಿದಿದೆ)

ಕಾನಡಾ ವೃತ್ತ.

ಮಿತಿ ವಿಭವ ಸಂ। ಚೈತ್ರ ಶು। ೫ ಮಿ, ಸೋಮ ವಾರ

ದುಡ್ಡಿನ ದುರಾಶೆ.

ಅಳರಸರೇ ಆಗಲಿ, ಅರಸಾಳುಗಳೇ ಆಗಲಿ, ಯಾರೇ ಆಗಲಿ, ದ್ರವ್ಯಲಾಲಸೆಗೆ ಸ್ವಾಧೀನವಾದರೆ ಬಹಳೇ ಅನರ್ಥಗಳು ಸಂಭವಿಸುತ್ತವೆ. ಸಾಮಾನ್ಯ ನೀತಿಯೂ ಮರ್ಯಾದೆಯೂ ಲಜ್ಜೆಯೂ ಒಮ್ಮೆಲೇ ಆತನನ್ನು ತೊಲಗಿಬಿಡುತ್ತವೆ. ನಮ್ಮ ಮುಂಬಯಿ ಸರಕಾರದ ಸ್ಥಿತಿಯಾದರೂ ಹಾಗೆಯೇ ಆಗಿದೆ. ದುಂದಿನಿಂದ ಪ್ರಜೆಗಳ ಹಣವನ್ನು ಬೇಕಷ್ಟು ಅಪವ್ಯಯ ಮಾಡುವದು, ಮೇಲೆ ಹಣವಿಲ್ಲೆಂದು ಅಕ್ರಮದಿಂದ (ತೀರ ಸಭ್ಯತನದ ಶಬ್ದವಿದು) ಕರಗಳನ್ನೆತ್ತುವದು ಮಾಡುವದು. ಬಾರ್ಡೋಲಿಯಲ್ಲಿ ತೀರ್ವೆಯನ್ನೇರಿಸಿದ ಕುರಿತು ಮುಂಬಯಿಯ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರು ದೂರಿಕೊಳ್ಳಲು, ಮುಲ್ಕಿ ಖಾತೆಯ ಸರಕಾರಿ ಸಭಾಸದರು ಆಡಿದ ವಚನಗಳನ್ನು ಕೇಳಿರಿ — “ ೨೫ ತಾಲೂಕುಗಳಲ್ಲಿ ತೀರ್ವೆಯನ್ನು ತಿದ್ದುಪಡಿ ಮಾಡಿ ಸರಕಾರಕ್ಕೆ ೧೮॥ ಲಕ್ಷ ಲಾಭವಾಗಿದೆ. ಇಲಾಖೆಯಲ್ಲಿ ಈಗುಂಟಾದ ಹಣದ ಅಡಚಣೆಯಲ್ಲಿ ಇಷ್ಟು ದೊಡ್ಡ ರಕಮನ್ನು ತ್ಯಾಗ ಮಾಡಬೇಕೆಂದು ಹೇಳಿದರೆ, ನನಗೆ ಆಶ್ಚರ್ಯವಾಗುವದು.” ಆಶ್ಚರ್ಯದ ಸಂಗತಿಯಾವುದೆಂಬುದು ಈ ಸಭಾಸದರಿಗೆ ತಿಳಿಯುವದಿಲ್ಲ. ಹಣದ ಅಡಚಣೆಯಿರುವದೆಂದು ರಾಜಶಾಸನಕ್ಕಾಗಲಿ, ನ್ಯಾಯ ನೀತಿಗಾಗಲಿ ವಿಸಂಗತವಾಗಿರುವ ಕೃತ್ಯವನ್ನು ಆಚರಿಸಬೇಕೆಂದು ಎಂದೆಂದಿಗೂ ಹೇಳಲಾಗದು. ಹಣವಿನ ಅಡಚಣೆಯಿದ್ದರೆ, ಹಣದ ಉತ್ಪತ್ತಿಗೆ ನೀತಿಯ ಉಪಾಯಗಳನ್ನೇ ಕೈಕೊಳ್ಳತಕ್ಕದ್ದು. ನ್ಯಾಯ-ನೀತಿಗಳಿಂದ ದ್ರವ್ಯಾನುಕೂಲತೆಯಾಗದಿದ್ದಲ್ಲಿ ಖರ್ಚನ್ನು ತಗ್ಗಿಸಿ, ಹಣವಿನ ಅಡಚಣೆಯೊಳಗಿಂದ ಮುಕ್ತರಾಗಬೇಕು. ಈ ತತ್ವವನ್ನು ನಮ್ಮ ಸರಕಾರವು ಅರಿಯದ ಮಾತಲ್ಲ. ಅದರಿಂದ ಈ ಕುರಿತು ವಿಸ್ತಾರ ಮಾಡದೆ ದುಡ್ಡಿನ ದುರಾಶೆಯಿಂದ ಸರಕಾರವು ನಡಿಸಿದ ಅನ್ಯಾಯದ ಪರಂಪರೆಯನ್ನು ವಿವರಿಸಲಿಚ್ಛಿಸುವೆವು.

ತೀರ್ವೆಯನ್ನು ತಿದ್ದುಪಡಿ ಮಾಡುವ ಕುರಿತು ಮೊಂಟೆಗ್ಯೂ ಸ್ವರಾಜ್ಯದ ಕಾನೂನಿನ ಸಮಾಲೋಚಕರಾದ ಪಾರ್ಲಿಮೆಂಟ ಮಂಡಳವು ನುಡಿಯುವದೇನಂದರೆ — “ ಹೊಸ ಕರಗಳನ್ನು ಹೇರುವ ಅಧಿಕಾರವನ್ನು ಕ್ರಮವಾಗಿ ಕಾಯಿದೆ ಕೌನ್ಸಿಲುಗಳಿಗೆ ಒಪ್ಪಿಸಬೇಕು. ತೀರ್ವೆಯ ಕಾರಣಗಳನ್ನು ಸ್ಪಷ್ಟವಾಗಿ ಕಾನೂನಿನಲ್ಲಿ ಗ್ರಥಿಸಬೇಕು. ತೀರ್ವೆಯ ಕಾರಣ ತೀರ್ವೆಯ ಅವಧಿ, ತೀರ್ವೆಯ ಏರಿಕೆಯ ದರ, ಪಂಚಮಾವಧಿಯ ರಕಮು ಮುಂತಾದವುಗಳನ್ನು ಸ್ಪಷ್ಟವಾಗಿ ನಿರ್ದೇಶಿಸಬೇಕು. ತಾ ೧೫—೩—೧೯೨೪ ನೇಗೆ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ತೀರ್ವೆ ಏರಿಕೆಯ ಕುರಿತು ಸರಕಾರದಿಂದ ವಿರೋಧವಾದಾಗ್ಯೂ ಬಹುಮತದಿಂದ ತೀರ್ಮಾನವಾಯಿತು. ಲೋಕಪಕ್ಷದ ಬಹುಮತವಿದ್ದ ಮಂಡಳವನ್ನೊಂದು ನೇಮಿಸಿ, ತೀರ್ವೆ ತಿದ್ದುಪಡಿಯ ವಿಷಯವನ್ನು ಸಮಾಲೋಚಿಸಿ ಕೈಕೊಳ್ಳಬೇಕಾದ ಕಾನೂನಿನ ಸ್ವರೂಪವನ್ನು ತಯಾರಿಸಬೇಕಾಗಿಯೂ, ಕಾನೂನಾಗುವ ತನಕ ತೀರ್ವೆಯನ್ನು ತಿದ್ದುಪಡಿ ಮಾಡಬಾರದಾಗಿಯೂ, ಹೊಸ ತೀರ್ವೆಯನ್ನೆತ್ತುವಳಿ ಮಾಡಬಾರದಾಗಿಯೂ ತೀರ್ಮಾನ ಮಾಡಿದರು. ಆದರೆ, ಸರಕಾರವೇನು ಕಡೆಹಾಕಲಿಲ್ಲ. ವಿಚಾರದ ಮಂಡಳವೇನೋ ವಿಚಾರ ಮಾಡುತ್ತಲಿದೆ, ಅವಿಚಾರದ ಕ್ರಮವು ಇತ್ತ ನಡೆಯುತ್ತಲಿದೆ. ಲೋಕಪಕ್ಷದ ಸಭಾಸದರಿಗೆ ವಿಚಾರದ ಮಂಡಳವೊಂದು ಶಿಕ್ಕಿತು, ಸರಕಾರಕ್ಕೆ ಹೊಸ ತೀರ್ವೆಯೂ ಸಿಗಹತ್ತಿತ್ತು.

ಇದನ್ನು ನೋಡಿ, ಲೋಕಪಕ್ಷದ ಸಭಾಸದರು ಕಳೆದ ವರುಷ ೧೯೨೭ ನೇ ಇಸವಿಯಲ್ಲಿ ಮತ್ತೊಂದು ತೀರ್ಮಾನವನ್ನು ಕೈಕೊಂಡರು. ಈ ಬಾರಿಯೂ ಸರಕಾರವು ವಿರೋಧಿಸಿತು; ಐಕ್ಯಮತ್ಯದಿಂದ ವಿರೋಧಿಸಿತು, ಆದರೂ ತೀರ್ಮಾನವು ಬಹುಮತದಿಂದ ಮನ್ನಿಸಲ್ಪಟ್ಟಿತು. “ ಕಾನೂನನ್ನು ಕೂಡಲೆ ನಿರ್ಮಿಸಿರಿ, ಕಾನೂನಿಗೆ ಅನುಸಾರವಾಗಿ ಹೊಸ ತೀರ್ವೆಯಾಗಿದ್ದರೆ, ಅದನ್ನು ಕಾನೂನಾಗುವ ಮುಂಚಿನಿಂದ ಎತ್ತುವಳಿ ಮಾಡಲು ಅವಶ್ಯವುಳ್ಳ ಅಧಿಕಾರವನ್ನು ಪಡಕೊಳ್ಳಿರಿ, ಆದರೆ, ಕಾನೂನಿನ ನಿರ್ಮಾಣವಾಗುವ ತನಕ ಏರಿಕೆಯ ತೀರ್ವೆಗೆ ತಡೆ ಹಾಕಿರಿ ” ಇಷ್ಟು ವಿವೇಕದ ಉಪದೇಶ ಮಾಡಿದಾಗ್ಯೂ, ಸರಕಾರವು ತಡೆಯಲಿಲ್ಲ, ಸಾರಿ ದೂರಿ ಹೇಳಿದಾಗ್ಯೂ ಸರಕಾರವು ಅವಕ್ಕೆ ಕಿವಿಗೊಡದೆ ತನ್ನ ನಿರಂಕುಶ ಅಧಿಕಾರವನ್ನೇ ಮುಂದರಿಸಿತು. ಈ ಹಟಾತ್ಕಾರಕ್ಕಿದಿರಾಗಿ ಸರಕಾರದ ಬಲಾತ್ಕಾರದ ಸೀಮೆಯನ್ನು ಪರೀಕ್ಷಿಸಲು ಬಾರ್ಡೋಲಿಯವರು ಟೊಂಕ ಕಟ್ಟಿದ್ದಾರೆ. ೨೫ ತಾಲೂಕುಗಳಲ್ಲಿ ಹೀಗೆ ತಿದ್ದುಪಡಿಯಾಗಿದೆ; ತಿದ್ದುಪಡಿಯಾಗಿದೆಂದರೆ, ತೀರ್ವೆ ಏರಿದೆ. ತೀರ್ವೆ ಏರಿಕೆಯೇ ತಿದ್ದುಪಡಿಯ ಗುಟ್ಟು.

ತೀರ್ವೆ ತಿದ್ದುಪಡಿಯ ಪ್ರಕಾರಗಳನ್ನು ಮುಂಬಯಿಯ ಕಾಯಿದೆ-ಕೌನ್ಸಿಲಿನಲ್ಲಿ ಗುಜರಾಥದ ಶ್ರೀ। ಶಿವದಾಸಾನಿಯವರು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. “ತೀರ್ವೆ ತಿದ್ದುಪಡಿಯು ಗುಪ್ತವಾಗಿ ಸಾಗುತ್ತಿದೆ. ಸೆಟ್ಲಮೆಂಟ ಆಫೀಸರರ ರಿಪೋರ್ಟುಗಳು ಜನರಿಗೆ ಸಿಗುವದು ಬಲು ಕಠಿಣ. ತಾಲೂಕ ಕಚೇರಿಯಲ್ಲೇನೋ ಒಂದು ಪ್ರತಿಯನ್ನಿಡುತ್ತಾರೆ. ಬೇಸಾಯಗಾರರು ಕಚೇರಿಗೆ ಬಂದು ರಿಪೋರ್ಟನ್ನು ನೋಡಿಕೊಂಡು, ತಮ್ಮ ಆಕ್ಷೇಪಗಳನ್ನು ಸಾದರಪಡಿಸಬೇಕು. ಬಹುಮಟ್ಟಿಗೆ ರಿಪೋರ್ಟುಗಳು ಇಂಗ್ಲಿಷಿನಲ್ಲಿರುತ್ತವೆ. ೨೦ ಮೈಲಿನ ತನಕ ದೂರದೂರ ಗ್ರಾಮುಗಳಿಂದ ಜನರು ಬಂದು ನೋಡತಕ್ಕದ್ದು. ಇದೇನು ಸಾಧ್ಯ ಮಾತಲ್ಲ. ಒಂದೆಡೆ ಒಂದು ಕಥೆಯು ಸಂಭವಿಸಿತು. ಮಾಮಲೇದಾರರು ರಿಪೋರ್ಟಿನ ನಕಲು ಪಡಕೊಳ್ಳಲು ಅಪ್ಪಣೆ ಕೊಡಲಿಲ್ಲ. ” ಇದು ತೀರ್ವೆ ತಿದ್ದುಪಡಿಯ ಬಹಿರಂಗ ಕಾರಭಾರದ ಸ್ವರೂಪವು. ಕಾಯಿದೆಯು ಶಾಸ್ತ್ರದಂತೆ ಪ್ರಕಟಣೆಯಾಯಿತು. ಮನಸ್ಸಿನಂತೆ ಗೌಪ್ಯವು ಉಳಿಯಿತು. ರಾಮನಿಗೂ ಸ್ವಸ್ತಿ, ರಾವಣನಿಗೂ ಸ್ವಸ್ತಿ!

ಈ ಪ್ರಕಾರಗಳು ನಡೆಯುತ್ತವೆ. ಪಾರ್ಲಿಮೆಂಟಿನಿಂದ ಕಾಯಿದೆ ಕೌನ್ಸಿಲಿನ ತನಕ ಅಭಿಪ್ರಾಯಗಳೂ, ತೀರ್ಮಾನಗಳೂ ಆಗುತ್ತಿದ್ದಾಗ್ಯೂ, ಪ್ರಾಂತಿಕ ಸರಕಾರವು ಅವನ್ನೆಲ್ಲ ಕೃತಿಯಿಂದಲೇ ಧಿಕ್ಕರಿಸಿ ಅಂಗೀಕೃತ ಕಾರ್ಯವನ್ನು ಅಪ್ರತಿಹತವಾಗಿ ನಡಿಸುತ್ತಿದೆ. ಇದೀ ಪ್ರಾಂತದಲ್ಲಿ ಈ ಪ್ರಕಾರ ತೀರ್ವೆ ತಿದ್ದುಪಡಿಯಾದ ಬಳಿಕ, ಹೊಸ ತೀರ್ವೆಯು ಎತ್ತುವಳಿಯಾಗಹತ್ತಿದ ಬಳಿಕ, ಬೇಸಾಯಗಾರರು ಸ್ವಸಂತೋಷದಿಂದ ಕರಗಳನ್ನು ತೆರುತ್ತಾರೆಂದು ಮುಲ್ಕಿನಾಧಿ ಮಾಡಿ, ಕಾನೂನು ಅವಶ್ಯವಿಲ್ಲೆಂದು ಕರಾ ಹೊಡೆದು, ಕಾನೂನಿನ ನಿರ್ಮಾಣಕ್ಕಾಗಿ ಈ ತನಕ ನಡೆದ ವಿಚಾರ ಮಂಡಳದ ವಿಚಾರಗಳಿಗೂ, ಅವರು ಮಾಡಿದ ಶಿಫಾರಸುಗಳಿಗೂ, ಪ್ರಜಾಪ್ರಯತ್ನಗಳಿಗೂ ಒಮ್ಮೆಲೇ ಕಾಡ ಬುಟ್ಟಿಯನ್ನು ತೋರಿಸಿದಂತಾಯಿತು. ಗುದ್ದಿ ಹಣ್ಣು ಮಾಡಿದರೆ, ಹಣ್ಣಿಗೆ ರುಚಿಯಿದೆಯೋ? ಹಣ್ಣಿನ ರೂಪ ಬಂದಾಗ್ಯೂ, ಹಣ್ಣಿನ ಸ್ವಾರಸ್ಯವೆಂದಾದರೂ ಬಂದೀತೇ! ಅದರಂತೆಯೇ ನಮ್ಮ ಸರಕಾರದ ಅಂತರಂಗವು ನಿರಂಕುಶ ಕಾರಭಾರದ್ದು, ನಿರಂಕುಶ ಕಾರಭಾರಕ್ಕಾಗಿಯೇ ಲೋಕಶಾಹಿಯ ವೇಷವನ್ನು ಅವರು ಧರಿಸಿಕೊಂಡಿದ್ದಾರೆ. ವೇಷಕ್ಕೆ ತಕ್ಕ ತತ್ವಗಳ ನಿರೂಪಣೆಯಾಗುತ್ತಿದೆ; ಹೊರತು ಮನಃಪೂರ್ವಕವಾಗಿ ಲೋಕಶಾಹಿಯ ರಾಜ್ಯದಲ್ಲಿ ಜನರಿಲ್ಲ. ದುಡ್ಡಿನ ದುರಾಶೆಯಿಂದ ಸರಕಾರವು ಕಂಗೆಟ್ಟಿದೆ. ಹಸಿದವನಿಗೆ ಎಂಜಲಾದರೇನು, ಮುಸುರೆಯಾದರೇನು, ಮುಡಿಯಾದರೇನು, ಲಿಮ್ಮಿಗೆಯಾದರೇನು? ಹೊಟ್ಟೆ ತುಂಬಿದರಾಯಿತು, ಉಂಡ ಗಂಜಿ ನೋಡಿದ್ದರಾಯಿತ,

ಎಂಬಂತೆ ನಮ್ಮ ಸರಕಾರವು ಪ್ರವ್ಯಾಖ್ಯಾನದ ನೆವ ತಾಳಿ, ಬಡ ಪ್ರಜೆಗಳ ಮೇಲೆ ಕರ ಹೇರುತ್ತಲಿದೆ. ಬಾರ್ದೋಲಿಯಲ್ಲಿ ನಡೆದ ಪ್ರಕಾರದಿಂದ ಇನ್ನೂ ಕೆಲವು ಅಕ್ರಮಗಳು ಹೊರಬಿದ್ದಿವೆ. ಅವನ್ನು ಈ ಮುಂದೆ ಯಥಾವಕಾಶ ಪರಾಂಬರಿಸುವೆವು

ಸ್ಫುಟ ಸೂಚನೆಗಳು.

೧. ನಮ್ಮ ಭರತ ಭೂಮಿಯಲ್ಲಿ ಈಗ ಅಪ್ರಸಿದ್ಧರಿಗೆ ಸುಪ್ರಸಿದ್ಧರಾಗುವ ಅಪೂರ್ವ ಯೋಗಾಯೋಗವೊಂದು ಕೂಡಿಬಂದಿದೆ. ಸೈಮನ್ ಕೂಟದ ಆಗಮನವಾದಂದಿನಿಂದ ನಮ್ಮ ಭರತ ಭೂಮಿಯಲ್ಲಿ ಅಪ್ರಸಿದ್ಧ ವ್ಯಕ್ತಿಗಳು ಸುಪ್ರಸಿದ್ಧರಾಗುವ ಹೆಬ್ಬಯಕೆಯನ್ನು ಹಿಡಿದು ಒಮ್ಮೆಲೇ ಲೋಕೋಪಕಾರದ ವೇಷ ತರಕೊಂಡು ಸೈಮನ್ ಕೂಟಕ್ಕೆ ತಂತಿಯೋ, ಅರ್ಜಿಯೋ ಕಳಿಸುತ್ತಿದ್ದಾರೆ. ಊರಿಗೆ ಬಂದ ಮಾರಿ ಕೇರಿಗೆ ಬಿಡದು; ಅದರಂತೆ ನಮ್ಮ ಕರ್ನಾಟಕ ಪ್ರಾಂತದಲ್ಲೂ ಸುಪ್ರಸಿದ್ಧಿಯ ಗಾಳಿ ಬೀಸಿದೆ. 'ಬ್ರಿಟಿಶ ಕರ್ನಾಟಕ ಸಂಘ'ವೆಂಬದೊಂದು ಪ್ರಚಂಡ ನಾಮಕರಣ ಮಾಡಿಕೊಂಡು, ವಿಜಾಪುರದಲ್ಲಿ ಬ್ರಿಟಿಶ ಕರ್ನಾಟಕ ಸಂಘವು ಜನ್ಮವೆತ್ತಿದೆ. ಸಂಘದ ಯಜಮಾನರ ಗುರ್ತು ಹಿಂದೇನೂ ಇರುವದಿಲ್ಲ, ಮುಂದೆ ಇದ್ದೀತೆಂದು ಹೇಳಬರದು. ಈ ಸಂಘದ ಲೋಕೋಪಕಾರದ ಬಣ್ಣ ಕೇಳಿ, ಬ್ರಿಟಿಶ ರಾಜ್ಯದೊಳಗಿನ ಕನ್ನಡ ನುಡಿಯ ನಾಡನ್ನು ಒಕ್ಕಟ್ಟಿಗೆ 'ಸೇರಿಸಲು ಸಂಘವು ಅವತೀರ್ಣವಾಗಿದೆ, 'ಅಹೋ! ಇದೆಂಥ ನೂತನ!' ಎಂದು ಕನ್ನಡಿಗರು ಆಶ್ಚರ್ಯ ಉದ್ಗರಿಸಿ ಬಿಡುವರು. ಕರ್ನಾಟಕ ಏಕೀಕರಣ ಸಂಸ್ಥೆಯಿದೆ; ಆ ಸಂಸ್ಥೆಯಲ್ಲಿ ಪ್ರಮುಖ ಕರ್ನಾಟಕಸ್ಥರಿದ್ದಾರೆ; ಹೀಗಿದ್ದಾಗ ಈ ಸಂಸ್ಥೆಯಿಂದ ಪ್ರಯೋಜನವೇನ? ಪ್ರಯೋಜನವಿದೆ ಕರ್ನಾಟಕ ಏಕೀಕರಣ ಪ್ರಶ್ನೆಗಾಗಿ ಸೈಮನ್ ಕೂಟದ ಬಳಿ ಯಾಚನೆ ಮಾಡಲು ಏಕೀಕರಣಕಾರರು ಸಿದ್ಧರಿಲ್ಲ. ರಾಜನಿಷ್ಠೆಯನ್ನು ಮೀರಲು ಅವರು ಎಷ್ಟಕ್ಕೂ ತಯಾರಿಲ್ಲ. ಒಂದೇ ನುಡಿಯ ನಾಡನ್ನು ಪ್ರತ್ಯೇಕ ಪ್ರಾಂತವಾಗಿ ರಚಿಸುವ ಅಧಿಕಾರವು ಪ್ರಕೃತ ಕಾನೂನಿನನ್ವಯ ಪ್ರಾಂತಿಕ ಹಾಗು ಹಿಂದುಸ್ಥಾನ ಸರಕಾರಗಳಿಗೆ ಕೊಡಲ್ಪಟ್ಟಿದೆ. ನ್ಯಾಯವನ್ನು ಕೂಟಕ್ಕೆ ಇದನ್ನು ಕೇಳಿಕೊಳ್ಳುವದು ನಿರರ್ಥಕವು. ಆದರೂ ಬ್ರಿಟಿಶ ಕರ್ನಾಟಕ ಸಂಘವು ಆವಾಹನ ಹೊಂದಿದೆ. ಕಾರಣವನ್ನು ಸರ್ ಫೇರೋಜ ಸೇಟನಾ ಇವರ ಬಟ್ಟಲಲ್ಲಿಯೇ ಹೇಳಿಬಿಡುವೆವು, ಅಂದರೆ ಬ್ರಿಟಿಶ ಕರ್ನಾಟಕ ಸಂಘದ ನಿಜಸೇವೆ ಕನ್ನಡಿಗರಿಗೆ ಕನ್ನಡಿಯಂತೆ ಕಾಣುವದು. ಸರ್ ಸೇಟನಾರು ನುಡಿಯುವದೇನಂದರೆ:—"ಈ ಕಮೀಶನಿನ ಬಳಿ ಎರಡು ಪ್ರಕಾರದ ಜನರು ಸಾಕ್ಷಿ ಕೊಡುವರು. ಅಧಿಕಾರಿಗಳು ಮೊದಲನೇ ತರಗತಿಯವರು; ಸರಕಾರದ ಅನುಗ್ರಹಬಲದಿಂದ ಐಹಿಕ ಸುಖೋಪಭೋಗಗಳನ್ನು ಪಡೆಯಲುತ್ಸುಕರಾದವರು ಎರಡನೇ ತರಗತಿಯವರು." ಬ್ರಿಟಿಶ ಕರ್ನಾಟಕ ಸಂಘದವರು ಸರಕಾರಿ ಅಧಿಕಾರಿಗಳಲ್ಲ ಅಂದ ಮೇಲೆ ಇವರು ಎರಡನೇ ತರಗತಿಯವರೆಂದಾಯಿತು. ಬ್ರಿಟಿಶ ಕರ್ನಾಟಕಿಗಳ ನಿಜರೂಪವು ಇನ್ನು ತಿಳಿಯಿತಲ್ಲವೇ?

---

೨. ನಮ್ಮ ವಿಜಾಪುರದ ಕಲೆಕ್ಟರರಾದ ರಾ। ವೆಂಕಣ್ಣಾ ಹೊಸಬು ನ್ಯಾಕರವರ ಚೇಷ್ಟೆಗಳು ಕರ್ನಾಟಕದೊಳಗಿನ ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗುತ್ತಿವೆ. ವಿಜಾಪುರದಲ್ಲಿ ಬರಗಾಲ ಬೀಳುವದು ಇತ್ತೀಚೆ ನಿತ್ಯನಿಯಮವಾಗಿದೆ. ಈ ವರುಷವೂ ಕೆಲವು ಹಳ್ಳಿಗಳಲ್ಲಿ ಬರಗಾಲ ಬಿದ್ದಿದೆ. ಬರಗಾಲದಲ್ಲಿ ಬಡವರಿಗೆ ನೆರವಾಗುವದಕ್ಕಾಗಿ ನಿಧಿಯು ಏರ್ಪಾಡಾಗಿದೆ. ರಾ। ನಾಯ್ಕರವರು ಸಂಜೆಯಿಂದ ಬೆಳಗಿನ ವರೆಗೆ-ಕೋಳಿಗಳನ್ನು ತಂದು ಸಾಕಿ ಸಲಹಿ ಜೋಪಾನ ಮಾಡುವ ಉದ್ಯೋಗ ಮಾಡಿದರೆ, ಬರಗಾಲದ ಸಮಯ ಅನ್ನಸಂಗ್ರಹ ಮಾಡಿದಂತೆ ಆಗುವದೆಂದು ಉಪದೇಶ ಮಾಡುತ್ತಿದ್ದಾರೆ. ಅರ್ಧ ಲಕ್ಷ ರೂಪಾಯಿಗಳನ್ನು ಖರ್ಚ ಮಾಡಿ ಒಂದು ದೊಡ್ಡ ಕಟ್ಟಡವನ್ನು ಕಟ್ಟಿಸಿ ಅದರೊಳಗೆ ಬೀಜ ಮುಂತಾದ ಬೇಸಾಯ ಉಪಕರಣಗಳನ್ನು ಸಂಗ್ರಹಿಸಿ, ಬರಗಾಲ ನಿವಾರಣ ಮಾಡಬೇಕಾಗಿಯೂ ನಮ್ಮ ರಾವ್ ಸಾಹೇಬ ವೆಂಕಣ್ಣ ನ್ಯಾಕರ ಪ್ರಚಂಡ ಯೋಜನೆಯಿದೆ. ರಾ। ವೆಂಕಣ್ಣ ನ್ಯಾಕರು ದೊಡ್ಡ ಜಿಲ್ಹಾಧಿಕಾರಿಗಳಿದ್ದುದರಿಂದ ಈ ಎರಡೂ ಯೋಜನೆಗಳಿಗೆ ನಾವು ಒಮ್ಮೆ ಕಣ್ಮುಚ್ಚಿ ಒಪ್ಪಿಗೆಯನ್ನು ಕೊಡುವೆವು ಆದರೆ ಒಂದು ಮಾತಿನ ಕುರಿತು ನಮ್ಮ ನಿಷೇಧವನ್ನು ಸೂಚಿಸಲೇಬೇಕು. ರಾ। ನಾಯ್ಕರು ತಮ್ಮ ಯೋಜನೆಯನ್ನು ಪುರಸ್ಕರಿಸುವ ಉತ್ಸಾಹಭರದಲ್ಲಿ ಖಾದಿ ಚಳುವಳಿ ನಿಂದಿಸಿಬಿಟ್ಟರು. ಕೈರಾಟಿಯ ಮೇಲೆ ನೂಲು ತೆಗೆಯುವವರು ನಿದ್ದೆಗೆ ನಿಮಂತ್ರಿಸುವರೆಂದೂ, ಅದರಿಂದ ದೇಶೋದ್ಧಾರವಾಗದೆಂದೂ, ತಮ್ಮ ರವಿವೊಳಗಣ ಶ್ರೋತರಿಗೆ ಹೇಳಿದರು. ರಾ। ನಾಯ್ಕರು ಖಾದಿಯ ಮಹತಿಯನ್ನು ಅರಿತವರಲ್ಲೆಂದು ನಾವು ಹೇಳಲಾರೆವು. ಖಾದಿಯ ಪ್ರಸಾರವೂ, ಅದರಿಂದುಂಟಾದ ಲಾಭವೂ ಕಾಲಕಾಲಕ್ಕೆ ಪ್ರಕಟವಾಗುತ್ತಿವೆ. ಅದನ್ನು ರಾ। ನಾಯ್ಕರು ತಿಳಿಯಲಾರದೆ ನಗೆಗೀಡಾಗುವದು ತರವಲ್ಲ. ಉಪಯೋಗವಿಲ್ಲದೆ ಸೂರ್ಯನಾರಾಯಣನ ಮೇಲೆ ಉಗುಳಿದರೆ, ಆ ಉಗುಳು ಉಗುಳುವವನ ಮೋರೆಯ ಮೇಲೆಯೇ ಬೀಳುತ್ತದಲ್ಲದೆ, ಸೂರ್ಯನಾರಾಯಣನಿಗೆ ಅದರಿಂದ ಬಾಧೆ ತಟ್ಟುವದೇನು? ರಾ। ವೆಂಕಣ್ಣ ನ್ಯಾಕರು ವಿವೇಕಶೀಲರಾಗಿ ನಡೆಕೊಂಡು, ನಮ್ಮ ಉತ್ತರ ಕನ್ನಡ ಜಿಲ್ಹೆಯ ಭೂಷಣವಾಗಬೇಕೆಂದು ನಮ್ಮದೊಂದು ಪ್ರೇಮಪೂರ್ವಕ ಸೂಚನೆ ಇದೆ.

---

೩. ನಾಲಿಗೆಗೆ ಎಲುಬು ಇಲ್ಲವೆಂಬ ಈಗ ಮೇಕಾವರೆ ಸಿದ್ಧವಾಯಿತು. ನಮ್ಮ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ರಾ। ದೇಹಲವಿಯವರು ಶನಿವಾರ ತಾ. ೧೭ನೇಗೆ ಕಾಯಿದೆ ಕೌನ್ಸಿಲಿನಲ್ಲಿ ವಿಶ್ವವಿದ್ಯಾಲಯದ ಕಾನೂನಿನ ಚರ್ಚೆ ನಡೆದಾಗ ಕಾನೂನಿನ ನಿಯಮವೊಂದು ಅಕ್ರಮವೆಂದು ಠರಾಯಿಸಿದರು. ಹಿಂದೆರಡು ಶಬ್ದಭೇದದಿಂದ ತಂದ ಅದೇ ನಿಯಮವನ್ನು ಸೋಮವಾರ ತಾ. ೧೯ನೇಗೆ ಕ್ರಮಬದ್ಧವು ಹೇಳಿಬಿಟ್ಟರು. ಹೀಗೆ ಆಗಲು ಹೊಡೆಯುವ ಕಾರಣವು ಸ್ಪಷ್ಟವಿದೆ ಆ ನಿಯಮದಿಂದ ಪ್ರಾಂತಾಧಿಪರಿಗೆ ವಿಶ್ವವಿದ್ಯಾಲಯದ ಯಾವದೇ ಠರಾವನ್ನು ರದ್ದುಮಾಡುವ ಅಧಿಕಾರವು ಕೊಡೋಣಾಗಿತ್ತು. ಮೂಲ ಕಾಯಿದೆಯಲ್ಲಿ ಈ ನಿಯಮವಿದ್ದಿಲ್ಲ. ಆದರಿಂದ ಈ ಸೂಚನೆಯನ್ನು ಈಗ ತರಬಾರದೆಂದು ಶ್ರೀ। ಸ್ವಾಮಿ ನಾರಾಯಣರು ಆಕ್ಷೇಪಿಸಿದರು. ಅಧ್ಯಕ್ಷರಿಗೆ ಆ ಆಕ್ಷೇಪವು ಗ್ರಾಹ್ಯವಾಯಿತು, ಕೂಡಲೆ ಸರಕಾರದ ಕಡೆಯ ಸಭಾಸದರು ಎದ್ದು ನಿಂತು, ಪುನರಾಲೋಚಿಸಲು ಅಧ್ಯಕ್ಷರ ಬಳಿ ಕೇಳಿಕೊಂಡರು ಅಧ್ಯಕ್ಷರು ಕಲೆದೂಗಿಸಲಿಲ್ಲ. ಕೂಡಲೆ ಇದೇ ಕಾನೂನಿನ ವಿಚಾರವನ್ನೇ ಸೋಮವಾರ ನಡೆಸಬೇಕಾಗಿ ಸರಕಾರಿ ಸಭಾಸದರು ಹೇಳಿಕೊಂಡು, ಕಾನೂನಿನ ವಿಚಾರವನ್ನು ಸೋಮವಾರಕ್ಕೆ ಮುಂದರಿಸಿಕೊಂಡರು. ಗವರ್ನರರ ನಿರಂಕುಶ ಕಾರಭಾರದ ಅಧಿಕಾರವನ್ನು ಕಳಕೊಳ್ಳಲು ಮುಂಬಯಿ ಸರಕಾರವು ಎಷ್ಟಕ್ಕೂ ತಯಾರಿದ್ದಿಲ್ಲ. ಕಾನೂನಿನ ಪ್ರಾಣವೇ ಅದು. ಅಂದಿನ ಶನಿವಾರಕ್ಕೇ ಗುಪ್ತ ಆಲೋಚನೆಗಳು ನಡೆದವು. ಅಧ್ಯಕ್ಷರಿಗೆ ತಮ್ಮ ಬಾಯಿಯಿಂದಲೇ ತಮ್ಮ ಠರಾವನ್ನು ಹಿಂತಕ್ಕೆ ಕೊಳ್ಳಲು ಯುಕ್ತಿ-ಪ್ರಯುಕ್ತಿಗಳು ನಡೆದವು. ಅಧ್ಯಕ್ಷರು ಬಳಲಿದ್ದರೆಂದು ಶನಿವಾರಕ್ಕೇ ಸುದ್ದಿ ಹರಡಿತು. ಸೋಮವಾರದ ಅಧಿವೇಶನದಲ್ಲಿ ಅಧ್ಯಕ್ಷರು ಪ್ರತ್ಯಕ್ಷ ಆಗು ಹೊಡೆದುಬಿಟ್ಟರು. "ಪವರ್ ಎನಿ ಪ್ರೊಸೀಡಿಂಗ್ಸ" ಎಂಬುದರ ಬದಲು "ಕೆನ್ಸಲ ಎನಿ ಡಿಸೀಜನ್" ಎಂಬ ಶಬ್ದಭೇದದಿಂದ ಅದೇ ಸೂಚನೆಯು ಮಾಡಲ್ಪಡಲಾಗಿತ್ತು. ಎರಡೂ ಶಬ್ದ ಸಮುಚ್ಚಯಗಳ ಅರ್ಥವು ಒಂದೇ ವಿಶ್ವವಿದ್ಯಾಲಯದವರು ಕೈಕೊಂಡ ನಿರ್ಧಾರಗಳನ್ನು ರದ್ದುಮಾಡಲು ಪ್ರಾಂತಾಧಿಪರಿಗೆ ಸರ್ವಾಧಿಕಾರ ಕೊಡೋಣಾಗಿತ್ತು. ಲೋಕಪಕ್ಷದ ಕಡೆಯಿಂದ ಆಕ್ಷೇಪ ಬಂತು. ಅಧ್ಯಕ್ಷರು ಈ ಸೂಚನೆಯು ಕ್ರಮಬದ್ಧವೆಂದು ಠರಾಯಿಸಿದರು. ಹಳೇ ಸೂಚನೆಯು ಹೊಸರೂಪವನ್ನು ಧರಿಸಿ ಸೂಚಿಸಲ್ಪಡುತ್ತಿದ್ದರೆ, ಕಾಯಿದೆಯಂತೆ ೭ ದಿವಸಗಳ ನೋಟೀಸು ಪಡೆಯಲು ನಾವು ಹಕ್ಕುದಾರರಿದ್ದೇವೆಂದೂ, ಅಷ್ಟು ಕಾಲಾವಧಿ ಕಳೆದನಕ ಈ ಸೂಚನೆಯನ್ನು ಚರ್ಚೆ ಮಾಡಬಾರದಾಗಿಯೂ ಶ್ರೀ। ನರಿಮಾನರವರು ಪ್ರತಿಪಾದಿಸಿದರು. ಕೇಳುವವರ್ಯಾರಿದ್ದಾರೆ? ಅಧ್ಯಕ್ಷರು ಕಿವಿಗೊಡುವವರಲ್ಲ. ಈ ಸೂಚನೆಯು ವಿಶ್ವವಿದ್ಯಾಲಯ ಕಾನೂನಿನ ಲೋಕಶಾಹಿಯ ಪ್ರಸ್ತಾವಕ್ಕೆ ವಿಸಂಗತವಾಗಿರುವದರಿಂದಲೂ, ಇಂಥ ಸೂಚನೆಯನ್ನು ತರಲು ಕಾಯಿದೆ ಕೌನ್ಸಿಲಿನ ೧೦ ನೇ ಕ್ರಮ ನಿಯಮಕ್ಕೆ ವಿರೋಧಕವಾದದ್ದರಿಂದಲೂ ಶ್ರೀ। ನರಿಮಾನರವರು ಇನ್ನೊಂದು ಪ್ರಕಾರದಿಂದ ವಾದಿಸಿದರು. ಆದರೂ, ಅಧ್ಯಕ್ಷರು ನಡುವಕ್ಕು ಆ ಸಿದ್ಧಾಂತವನ್ನೂ ಧಿಕ್ಕರಿಸಿದರು. ಇವನ್ನೆಲ್ಲ ನೋಡಿ ಶ್ರೀ। ಸ್ವಾಮಿ ನಾರಾಯಣರಿಗೆ ಬೇಸರಬಂತು. ಕಾನೂನಿನ ಪಠಾವನ್ನು ಜುಲೈ ತಿಂಗಳ ಅಧಿವೇಶನದಲ್ಲಿ ಚರ್ಚಿಸಬೇಕೆಂದು ಸೂಚಿಸಿದರು ಈ ಠರಾವೂ ಬಹುಮತದಿಂದ ಧಿಕ್ಕರಿಸಲ್ಪಟ್ಟಿತು. ಇಂಥ ಮರ್ಯಾದೆಗೇಡಿ ಸಭೆಯಲ್ಲಿ ಕೂತುಕೊಳ್ಳುವದು ಉಚಿತವಲ್ಲೆಂದು ಸ್ವರಾಜ್ಯ ಪಕ್ಷದ ಸಭಾಸದರು ಎದ್ದು ನಡೆದು ಬಿಟ್ಟರು. ಅಧ್ಯಕ್ಷರ ಠರಾವನ್ನು ದಿವಾಣೆ ಕೋರ್ಟಿನಲ್ಲಿ ವಿಚಾರಿಸಲು, ಶ್ರೀ। ನರಿಮಾನರವರು ಸಂಕಲ್ಪಿಸಿದ್ದಾರೆ. ದಿವಾಣೆ ಕೋರ್ಟಿನ ನ್ಯಾಯವೇನೂ ಇರಲಿ! ಅಧ್ಯಕ್ಷರಿಗೆ ಠರಾವಿಲ್ಲವೆಂದು ಸ್ಪಷ್ಟವಾಯಿತು, ಸ್ವಾಭಿಮಾನವಿಲ್ಲೆಂದೂ ಸಿದ್ಧವಾಯಿತು. ಇಂಥ ಮರ್ಯಾದೆಗೇಡಿ ಸಭೆಯಲ್ಲಿ ಮರ್ಯಾದವಂತರು ಕೂತುಕೊಳ್ಳಲಾರರು. ಇಂಥ ಪ್ರಕಾರದಿಂದ ನಿರಂಕುಶ ಅಧಿಕಾರವನ್ನು ಪಡಕೊಳ್ಳುವದು ಹಗಲುಗಳ್ಳತನವಲ್ಲವೇ?

[illegible]

೪. ಇಲ್ಲಿಯ ಶೇಟ ಹಂಸರಾಜ ಲದ್ಧಾರವರ ೩ ನೇ ಮಗದಿರರಾದ ಲಕ್ಷ್ಮೀದಾಸ ಶೇಟ ಊರ್ಫ ಮಮ್ಮುಶೇಟರವರು ಸಂಧಿವಾತ ರೋಗದಿಂದ ಎಳೆ ಪ್ರಾಯದಲ್ಲಿ ನಿನ್ನೆ ರಾತ್ರಿ ಕಾಲಾಧೀನರಾದರೆ ದು ತಿಳಿಸಲು ವ್ಯಸನವಾಗುತ್ತದೆ ಶೇಟ ಹಂಸರಾಜರು ಇಲ್ಲಿಯ ಹೆಡ್‌ಬಂದರದ ಮೇಲೆ ಪ್ರಯಾಣಿಕರಿಗಾಗಿ ಧರ್ಮಶಾಲೆಯನ್ನು ಕಟ್ಟಿಸಿದ್ದಾರೆ, ಮೂಕ ದನಗಳಿಗೆ ಉಪಚಾರ ಮಾಡುವದಕ್ಕಾಗಿ ದನಗಳ ಆಸ್ಪತ್ರೆಯನ್ನೂ ಕಟ್ಟಿಸಿದ್ದಾರೆ. ಇಂಥ ಧರ್ಮಾತ್ಮರ ಪರಂಪರೆಯನ್ನು ಮಮ್ಮುಶೇಟರು ಮುಂದೆ ನಡಿಸುವ ಲಕ್ಷಣಗಳನ್ನು ತೋರಿಸುತ್ತಿರುವಾಗಲೇ ಕಾಲವಶರಾದದ್ದು ಶೋಚನೀಯವು. ಇವರಿಂದ ಹಂಸರಾಜ ಶೇಟಜಿಯವರ ಮೇಲೆ ಮುದಿ ಪ್ರಾಯದಲ್ಲಿ ಮುಗಿಲು ಕುಸಿದುಬಿದ್ದಂತಾಗಿದೆ. ಆದರೆ, ವಿಧಿಘಟನೆಗೆ ತಡೆ ಹಾಕಲು ಯಾರಿಗೂ ಸಾಧ್ಯವಿಲ್ಲೆಂದು ಗ್ರಹಿಸಿ, ದುಃಖವನ್ನು ಸಮಾಧಾನ ಬಡಿಸಿಕೊಳ್ಳಬೇಕು. ಮಮ್ಮುಶೇಟರಿಗೆ ಸದ್ಗತಿ ದೊರೆಯಲೆಂದು ನಾವು ಪ್ರಾರ್ಥಿಸುವೆವು.

ಪಂಚಾಂಗ ದುರುಸ್ತಿ.

ಓಸ್ಗೂರ್ಣ ರಾಮಾ ತಿಮ್ಮಣ್ಣ ಪಂಡಿತರ ಪಂಚಾಂಗಕ್ಕೆ ಜೋಡಿಸಿದ ಪುರವಣಿಯಲ್ಲಿ "ಶ್ರಾವಣ ಶುಕ್ಲಪಕ್ಷಃ। ಶ್ರಾವಣ ಕೃಷ್ಣ ಪಕ್ಷಃ॥ ಅಧಿಕ ಭಾದ್ರಪದ ಶುಕ್ಲ ಪಕ್ಷಃ। ಅಧಿಕ ಭಾದ್ರಪದ ಕೃಷ್ಣಪಕ್ಷಃ॥" ಎಂಬಲ್ಲಿ ಅನುಕ್ರಮವಾಗಿ "ಅಧಿಕ ಶ್ರಾವಣ ಶುಕ್ಲಪಕ್ಷಃ। ಅಧಿಕ ಶ್ರಾವಣ ಕೃಷ್ಣ ಪಕ್ಷ॥ ನಿಜ ಶ್ರಾವಣ ಶುಕ್ಲ ಪಕ್ಷಃ। ನಿಜ ಶ್ರಾವಣ ಕೃಷ್ಣ ಪಕ್ಷಃ॥" ಎಂದು ಓದಬೇಕು "ನಿಜ ಭಾದ್ರಪದ" ವೆಂದಿದ್ದಲ್ಲಿ "ಭಾದ್ರಪದ"ವೆಂದು ಓದಬೇಕು.

ರಾಮಾ ತಿಮ್ಮಣ್ಣ ಪಂಡಿತ.

ವಿಮರ್ಶೆ.

ಸತ್ಯಶೋಧನೆ— ಕನ್ನಡಿಗರಿಬ್ಬರು ಮಹಾತ್ಮರ ಆತ್ಮಕಥೆಯ ಕನ್ನಡ ಅನುವಾದವನ್ನು ಮಾಡಿದ್ದಾರೆ. ಬೆಂಗಳೂರಿನ "ವಿಶ್ವಕರ್ಣಾಟಕ" ಪುಸ್ತಕ ಪ್ರಕಟನಾಲಯದವರು ಪುಸ್ತಕ ರೂಪದಲ್ಲಿ ಮೊದಲನೇ ಭಾಗವನ್ನು ಪ್ರಕಟಿಸಿದ್ದಾರೆ ಮೈಸೂರ ಕಡೆಯ ಕನ್ನಡಿಗರಿಂದ ಚರಿತ್ರದ ಪರಿವರ್ತನೆಯಾದದ್ದರಿಂದ ಶೈಲಿಯು ಹೃದಯಂಗಮವಾಗಿದೆ ಮಹಾತ್ಮರ ಲೇಖದೊಳಗಿನ ಸ್ವರಸ್ಯವನ್ನೂ, ಅರ್ಥಗಾಂಭೀರ್ಯವನ್ನೂ ಕನ್ನಡದಲ್ಲಿ ಕನ್ನಡಿಗರಿಬ್ಬರು ಯಥಾರ್ಥವಾಗಿ ಹೇಳಿದ್ದಾರೆ ಭಾಗದ ಕೊನೆಗೆ ಟಿಪ್ಪಣಿಗಳನ್ನು ಜೋಡಿಸಿ, ಪ್ರಕಾಶಕರು ಮಹಾತ್ಮರಿಂದ ಉಲ್ಲೇಖಿಸಲ್ಪಟ್ಟ ವ್ಯಕ್ತಿಗಳ ಹಾಗು ಸ್ಥಳಗಳ ನಾಮನಿರ್ದೇಶ ಮಾಡಿದ್ದಾರೆ, ಕನ್ನಡಿಗರು ಅವಶ್ಯವಾಗಿ ಪ್ರೋತ್ಸಾಹ ಸಕತಕ್ಕದ್ದು. ಬೆಲೆ ರೂ. ೦—೧೨—೦. ಕನ್ನಡಿಗರ ಆಶ್ರಯದಾತರು ದೊರೆತರೆ, ಕಲವುಟ್ಟಿಗೆ ಬೆಲೆಯನ್ನು ತಗ್ಗಿಸಲು ಪ್ರಕಾಶಕರು ವಿಚಾರ ಮಾಡಬೇಕು

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬಹಳ; ಜ್ವರಾದಿ ರೋಗಗಳ ದೀಡಿದೆ. ಉಡುಪಿಯ ಶ್ರೀ ಸೋದೆ ಮಠದ ಶ್ರೀ ವಿಶ್ವೇಂದ್ರತೀರ್ಥ ಸ್ವಾಮಿಗಳವರು ಮೊನ್ನೆ ಇಲ್ಲಿ ಚಿತ್ತೈಸಿದ್ದಾರೆ ಮೈವಷ್ಣ ಶಿಷ್ಯರು ಶ್ರೀಗಳಿಗೆ ಸಂಭ್ರಮದಿಂದ ಕರೆತಂದರು ಶ್ರೀಗಳು ಇಲ್ಲಿಯ ಶ್ರೀ ಕುಂಭೇಶ್ವರ ದೇವಸ್ಥಾನದಲ್ಲಿ ಉಳಕೊಂಡಿದ್ದಾರೆ.

ಅಬಕಾರಿ ಹಾಗು ಜಂಗಲ ಖಾತೆಗಳ ದಿವಾಣರಾದ ರಾ| ಜಿ ಬಿ ಪ್ರಧಾನರವರು ನಿಶ್ಚಯದಂತೆ ಇದೇ ಬರುವ ಎಪ್ರಿಲ್ ೫ನೇ ತಾರೀಖಿನ ತನಕ ನಮ್ಮ ದಕ್ಷಿಣ ಭಾಗದಲ್ಲಿ ಸಂಚರಿಸುವವರಿದ್ದಾರೆ. ನಮ್ಮ ಘಟ್ಟದ ಮೇಲಿನವರೂ, ಶಿರಸಿಯವರೂ ರಾಜಮಾನ್ಯರು ಅವರ ಗ್ರಹಿಸುವರು, ಇವರಿಗೆ ಜಿಲ್ಲೆಯೊಳಗಿನ ದಟ್ಟವಾದ ಕಾಡುಗಳಲ್ಲಿ ಹುದುಗಿದ ಅಲ್ಲಿಯ ಹಳ್ಳಿಗಳನ್ನೂ, ಜನರ ಸ್ಥಿತಿಯನ್ನೂ ತೋರಿಸಬೇಕು. ಶಿರಸಿ-ಕುಮಟೆ ಪಟ್ಟಣಗಳಲ್ಲಿ ಮೆರಿಸಿ ಪ್ರಯೋಜನವಿಲ್ಲ

ಚಿತ್ರಾಪುರದ ಶ್ರೀ ಆನಂದಾಶ್ರಮ ಸ್ವಾಮಿಗಳು ನಿನ್ನೆ ಗೋಕರ್ಣದಿಂದ ಹೊಂಟು ಶಿರಾಲಿಗೆ ತೆರಳಿದರು. ಶ್ರೀಗಳಿಗೆ ಹಾದಿಯಲ್ಲಿ ಶಿಷ್ಯರು ಭೆಟ್ಟಿಯಾಗಿ ಆಶೀರ್ವಾದವನ್ನು ಪಡೆಕೊಂಡರು.

ದೀವಗೆ ಎಣ್ಣೆಯ ದರವು ಇನ್ನೂ ಏರಿತು. ಸ್ಟ್ಯಾಂಡರ್ಡ ಆಯಿಲ್ ಕಂಪನಿಯವರು ಡಬ್ಬಿಗೆ ೯| ಆಣೆಯ ರತಿ ಏರಿಸಿದ್ದಾರೆ. ಪ್ರತಿಸ್ಪರ್ಧಿ ಕಂಪನಿಯವರು ಇನ್ನೂ ಏರಿಸಲಿಲ್ಲ

ಅಂಕೋಲಾ— ಹವಾಮಾನವು ತಕ್ಕಮಟ್ಟಿಗೆ ಚಲೋದಿದೆ ಹಗಲಿಗೆ ಶಕೆ ಬಹಳ; ಮಧ್ಯರಾತ್ರಿ ದಾಟಿದ ಬಳಿಕ ವಿಶೇಷ ಚಳಿ. ಇದೇ ಕಳೆದ ೨೧ ನೇ ತಾರೀಖಿಗೆ ಮಠದಲ್ಲಿ 'ದಾಮಾಜಿಪಂತ' ನಾಟಕ ಪ್ರಯೋಗವು ಆಯಿತ. ಈ ಪ್ರಯೋಗವನ್ನು ಹೊಸಬರೇ ವ್ಯಾಪಾರರು ಮಾಡಿದ್ದರು, ಪ್ರಯೋಗವು ಚಲೋದಾಯಿತು. ಬಹಳ ಜನರು ಕೂಡಿದ್ದರು. ಶನಿವಾರಕ್ಕೆ ಇಲ್ಲಿಯ ರಾ| ರಾಮಕೃಷ್ಣ ನೀಲಕಂಠ ದೇಸಾಯಿ ಇವರ ಮನೆಯಲ್ಲಿ ಇಲಿ ಬಿದ್ದ ಸುದ್ದಿ ಹಬ್ಬಿದೆ. ಜನರ ಕಸರಿ ಕೂಗಿದ್ದಾರೆ

ಶಿರಸಿ— ಪ್ಲೇಗಿನ ಪ್ರತಾಪವು ಅಡಗಿತು, ಹೊರಬೀಡ ಮಾಡಿದ್ದ ಜನರು ಊರು ಸೇರುತ್ತಿದ್ದಾರೆ. ಇಲ್ಲಿ ಮ್ಯುನಿಸಿಪಾಲಿಟಿಯಲ್ಲಿ ಮಿ| ಚಾಳ್ತಿದಾರ ಎಂಬವರು ಸರಕಾರದಿಂದ ನೇಮಿಸಲ್ಪಟ್ಟಿದ್ದಾರೆ, ಸ್ಯಾಮ್ಸನ್ ಕಮಿಶನರು ಹೊರಟು ಊರಲ್ಲೆಲ್ಲ ಹರತಾಳವಾದಾಗ ಇವರು ತಮ್ಮ ಜವಳಿ ಅಂಗಡಿಯನ್ನು ತೆರೆದಿಟ್ಟುಕೊಂಡಿದ್ದರು, ಅದರಿಂದಲೇ ಮ್ಯುನಿಸಿಪಾಲಿಟಿಯಲ್ಲಿ ಅವರು ಸಭಾಸದರಾದರೆಂದು ಜನರ ತರ್ಕ

ಮೋಟಾರ ಅಪಘಾತ ಪ್ರಕರಣವು ಮಿ| ಮಸ್ಕಿಸರವರ ಕೋರ್ಟಿನಲ್ಲಿ ಬುಧವಾರ, ಶುಕ್ರವಾರ ನಡೆದು ವಿಚಾರ ಅಸ್ಥಿರ ಆಯಿತು, ತೀರ್ಪು ಮಹಲೋ ಹೇಳಲ್ಪಡುವದು. ಹುಡುಗನ ಸಂಬಂಧಿಕರಿಗೆ ಹೆಗಡೆಯಿಂದ ಮುದ್ದಾಂ ಕರೆದೊಯ್ದಿದ್ದರು ಎಂಬೆಂಬಾಕೆಯಂತೆ ಭಕ್ತಿ ಕೊಡೋಣಾಯಿತು. ಹೆಗಡೆಯಿಂದ ಬರ-ಹೋಗುವ ಮೋಟಾರ ಖರ್ಚು ಕೈಯಿಂದ ಬಿತ್ತು ಮ್ಯುನಿಸಿಪಾಲಿಟಿ-ಹೈಸ್ಕೂಲಿನ ಶಿಕ್ಷಕರಿಗೂ ದಿನಕ್ಕೆ ಎಂಟಾಣೆಯಂತೆ ಭತ್ತೆ. ಈ ಶಿಕ್ಷಕರಿಗೆ ೪೦ ರೂಪಾಯಿ ಸಂಬಳ ಸಿಗುತ್ತದೆ, ಮಿ| ಮಸ್ಕಿಸರವರು ಈ ಕುರಿತು ವಿಚಾರ ಮಾಡತಕ್ಕದ್ದು.

ವೃತ್ತಸಾರ.

— ಅಮೇರಿಕಾ ಖಂಡದ ಮೆಕ್ಸಿಕೋ ಪಟ್ಟಣದಲ್ಲಿ ಭೂಕಂಪವಾಗಿ ಸುತ್ತುಮುತ್ತ ಅಗ್ನಿಸ್ಫೋಟವಾಗಿ ಬಹಳ ಅನರ್ಥ.

— ಜಾಲಬಾ ಫೋಸುಲಾ, ಬಸ್ತಮ್ ಫೋಂಗಾರಾ, ಅಧಿಕಾರೀ ಮ ಎಂಬ ಮೂವರ ಸಾಹಸಿಗರು ಸ್ಕಾಟಲಾಂಡಿನ ಮೇಲಿಂದ ಭೂಪ್ರದಕ್ಷಿಣೆ ಮಾಡಿಕೊಂಡು ಕಳೆದ ರವಿವಾರ ಮುಂಬಯಿಗೆ ಬಂದರು. ಆ ಕಾಲಕ್ಕೆ ಮುಂಬಯಿಯಲ್ಲಿ ಅವರಿಗೆ ಪ್ರಚಂಡವಾದ ಸ್ವಾಗತವಾಯಿತು.

— ಮುಂಬಯಿಯ ಬ್ರಾಹ್ಮಣೇತರರು ನಾಸಿಕದಲ್ಲಿ ಪ್ರಾಂತಿಕ ಸಭೆಯನ್ನು ನೆರಿಸಿ, ಸ್ಯಾಮನ್ ಕಮಿಟಿಯನ್ನು ಬಹಿಷ್ಕರಿಸಬೇಕೆಂಬ ತೀರ್ಮಾನ ಮಾಡಿಕೊಂಡಿದ್ದಾರೆ. ಈ ತೀರ್ಮಾನವಾಗದಂತೆ ಅನೇಕ ಅಬ್ರಾಹ್ಮಣರು ಪ್ರಯತ್ನ ಮಾಡಿದ್ದಾಗ್ಯೂ ಅವರ ಕಾರ್ಯ ಕೃತಿಗಳು ಫಲಿಸಲಿಲ್ಲ.

— ಮಹಾತ್ಮರಿಗೆ ಯುರೋಪ ಖಂಡದಿಂದ ನಿಮಂತ್ರಣವಾಗಿದೆ. ಮಹಾತ್ಮರು ಅದನ್ನು ಇನ್ನೂ ಅಂಗೀಕರಿಸಲಿಲ್ಲ; ವಿಚಾರ ಮಾಡುತ್ತಿದ್ದಾರೆ. ಯುರೋಪ ಖಂಡದ ಹವೆಯಿಂದ ಮಹಾತ್ಮರ ಆರೋಗ್ಯಕ್ಕೆ ನೆಟ್ಟಗಾಗುವದೆಂದು ಕೆಲ ವೈದ್ಯಶಾಸ್ತ್ರಜ್ಞರ ಅಭಿಪ್ರಾಯ. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ| ಅನಸಾರಿಯವರೂ ಮಹಾತ್ಮರ ಜೊತೆಗೆ ಹೋಗುವವರಿದ್ದಾರಂತೆ!

— ಮೈಸೂರಿನ ಆಸ್ಥಾನ ಗಾಯನವಿಶಾರದರಾದ ಬಿಡಾರ ಕೃಷ್ಣಪ್ಪನವರು ಮೈಸೂರಿನಲ್ಲಿ ಸ್ಥಾಪಿಸಲಿಚ್ಛಿಸಿದ್ದ ತಮ್ಮ ಗಾಯನಶಾಲೆಗೆ ದ್ರವ್ಯಸಂಗ್ರಹ ಮಾಡಲು ಮುಂಬಯಿಗೆ ಹೋಗಿದ್ದರು. ಬಿಡಾರ ಕೃಷ್ಣಪ್ಪನವರು ಕರ್ನಾಟಕದವರು. ಅರ್ಪಿಸಿದ ೫೦೧ ರೂಪಾಯಿಗಳ ದ್ರವ್ಯನಿಧಿಯನ್ನು ಅಂಗೀಕರಿಸುವಾಗ ಕರ್ನಾಟಕಸ್ಥರಿಗೆ ಚಲೋ ಗಾಯನ ಮಾಡಿ ಮನೋರಂಜನ ಮಾಡಿದರು.

— ಪಂಡಿತ ಮೋತಿಲಾಲ ನೆಹರು ಪ್ರಭೃತಿ ಲೋಕನಾಯಕರು ಹಿಂದುಸ್ಥಾನದಲ್ಲಿ ಪ್ರಜೆಗಳಿಗೆ ಸ್ವರಾಜ್ಯ ದೊರೆಕಿಸಲು ಉದ್ಧಾರ ಸಂಸ್ಥೆಯನ್ನೊಂದು ಸ್ಥಾಪಿಸಿದ್ದಾರೆ. ದೇಶದೊಳಗೆ ವಿವಿಧ ಉದ್ಧಾರ ಪ್ರಯತ್ನಗಳನ್ನು ನಡಿಸುವ ಸಂಸ್ಥೆಗಳಲ್ಲಿ ಐಕ್ಯಮತ್ಯವನ್ನುಂಟು ಮಾಡಿ ದೇಶೋದ್ಧಾರ ಮಾಡಲು ಈ ಸಭೆಯು ನಿರ್ಮಾಣವಾಗಿದೆ. ಜನರಿಗೆ ಶಿಕ್ಷಣ ಕೊಟ್ಟು, ಸ್ವಾವಲಂಬನವನ್ನು ಕಲಿಸುವ ಕಾರ್ಯವನ್ನು ಈ ಸಂಸ್ಥೆಯವರು ನಡಿಸುವರು. ಪರದೇಶದೊಳಗಿಂದ ಸರಕುಗಳು ಸ್ವದೇಶದಲ್ಲಿ ಬಂದು ಹಾವಳಿ ಹಾಕದಂತೆ ಈ ಸಂಸ್ಥೆಯವರು ಉಪಾಯಯೋಜನೆ ಮಾಡುವರು

ಹೊರದೇಶಗಳ ಸರಕಾರ ಪಕ್ಷಪಾತಿಯಾದ ಸರ್ಕಾರಹದ್ದಿನ ಕಥೆಗಳಲ್ಲಿ ಪತಿಯಾಳಾ ಸಂಸ್ಥಾನದಲ್ಲಿ ಇರುವ ವಿ|| ಹಸನ್ ಇಮಾಮರವರಿಗೆ ತಮ್ಮ ಕಡೆಯ ಕಿತ್ತೂರಿನಲ್ಲಿ ಮ. ಸಲ್ಮಾನ ಪಂಗಡದ ಕರ್ಮನಿಂದ ಆಗಲು ಕಳಿಸಹೇಳಿದ್ದರು ಜಾತಿ ಪಂಗಡಗಳನ್ನು ನಿರ್ಮಿಸಿಕೊಂಡು ಆಡುವದರಿಂದ ಜಾತಿಮತ್ಸರ ಬೆಳೆಯುತ್ತದೆಂದು ಪತಿಯಾಳದ ಮಹಾರಾಜರು ಅಭಿಪ್ರಾಯ ಕೊಟ್ಟು ಕಥೆಯವರ ಬಿನ್ನಹವನ್ನು ಅಲ್ಲಗಳೆದಿದ್ದಾರೆ.

— ಮದ್ರಾಸ ಪ್ರಾಂತದ ಎಲ್ಲೂರ ಮುನಿಸಿಪಾಲಿಟಿಯಲ್ಲಿ ಪಕ್ಷಭೇದಗಳಾಗಿವೆ. ಜಮಾ ಖರ್ಚಿನ ಪತ್ರಿಕೆಯು ಕೆತ್ತಿಗೆ ಹಾಕಲ್ಪಟ್ಟಿತು. ಆದರಿಂದ ಮುನಿಸಿಪಾಲಿಟಿಯನ್ನು ಯಾಕೆ ರದ್ದು ಮಾಡಬಾರದೆಂಬುದರ ಕುರಿತು ಒಂದು ತಿಂಗಳ ಮುದತ ಕೊಟ್ಟು ಸರಕಾರದಿಂದ ನೋಟೀಸು ಹಾಕಿತ್ತು. ಚೆಅರಮನರು ೨೫ ದಿನಗಳ ವರೆಗೆ ನೋಟೀಸಿನ ಸುದ್ದಿ ಕೊಡಲಿಲ್ಲ ಆ ಮೇಲೆ ಸಭೆಯಲ್ಲಿ ನೋಟೀಸಿಗೆ ಉತ್ತರ ಕೊಡುವ ಬಗ್ಗೆ ಮಂಡಳ ನೇಮಿಸಬೇಕಾಗಿ ಸೂಚನೆ ಬಂತು. ಅದನ್ನು ಚೆಅರಮನರು ಅಕ್ರಮವೆಂದು ತಿರಸ್ಕರಿಸಿಬಿಟ್ಟರು. ಸ್ಥಾನಿಕ ಸ್ವರಾಜ್ಯದೊಳಗಿನ ಲೋಕೋಪಕಾರಿಗಳ ಚೇಷ್ಟೆಯಿದು

— ತುತಿಕೋರಿನದಲ್ಲಿ ೧೪ ದಿನಗಳ ವರೆಗೆ ಮುತ್ತು ತೆಗೆಯಲಾಯಿತು. ೩೦ ಸಾವಿರ ರೂಪಾಯಿಗಳ ಮುತ್ತು ದೊರಕಿದವಂತೆ.

— ವಿಭವ ಸಂವತ್ಸರದ ಪ್ರತಿಪದೆಯ ಸಮಾರಂಭದಲ್ಲಿ ಬಿಜಾಪುರದ ವೇದಶಾಸ್ತ್ರಸಂಪನ್ನ ಪಂಡಿತ ಶಾಸ್ತ್ರಿಗಳವರು ೭೦೦ ಮಂದಿ ಅಸ್ಪೃಶ್ಯರಿಗೆ ಯಜ್ಞೋಪವೀತ ಹಾಕಿ ಗಾಯತ್ರಿ ಮಂತ್ರೋಪದೇಶ ಕೊಟ್ಟರು. ಬ್ರಾಹ್ಮಣರಿಗೂ, ಅಸ್ಪೃಶ್ಯರಿಗೂ, ಯಜ್ಞೋಪವೀತ ಧಾರಣದಿಂದ ಸಮಾನ ದರ್ಜೆ ದೊರೆಯಲು ಈ ಸಮಾರಂಭವು ಕೈಕೊಳ್ಳಲಾಯಿತು.

— ಮದ್ರಾಸ ಶಾಸನ ಕೌನ್ಸಿಲಿನಲ್ಲಿ ಪೋಲೀಸರಿಗೆ ಖಾದಿಯ ಉಡಿಗೆ-ತೊಡಿಗೆಗಳನ್ನು ಕೊಡಬೇಕಾಗಿ ತೀರ್ಮಾನ ವಾಗಿದೆ. ಸರಕಾರವು ವಿರೋಧಿಸಿದರೂ ತೀರ್ಮಾನವು ಮಂಜೂರಾಯಿತು.

— ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಸರ್ ಎಂಬರಸನ ಮಾರ್ಟಿನ, ಮಡಗಾಂವಕರ, ಬ್ಲೆಕ್ವೆಲ್, ಕ್ರಂಪರವರು ರಜೆ ಕೊಳ್ಳುತ್ತಾರೆ ಅವರ ಬದಲಿಗೆ ಮಿ| ಗೋಪಾಳ ಮಾಡಿಯಾ, ರಾ| ಗಣೇಶಕರ, ಪಾಟ್ಟ ಹೀಗೆ ಮೂವರು ನೇಮಣೂಕಿಗಳಾಗಿವೆ.

— ವರಿಷ್ಠ ಶಾಸನ ಕೌನ್ಸಿಲಿನಲ್ಲಿಯೂ, ಕೌನ್ಸಿಲ್ ಒಫ್ ಸ್ಟೇಟ್ಸ್ ಯಾನೆ ಹಿರಿಯ ಸಭೆಯಲ್ಲಿಯೂ ಪ್ರೋಸನ ಕರ ಹೇರಿಕೆಯ ಠರಾವು ಬಹುಮತದಿಂದ ಮಂಜೂರಾಯಿತು. ಪಂಡಿತ ಮೋತಿಲಾಲ ನೆಹರು ಪ್ರಭೃತಿ ಲೋಕನಾಯಕರು ವಿರೋಧಿಸಿದರು. ನಮ್ಮ ಕರ್ನಾಟಕದ ಶ್ರೀ| ದತ್ತಾತ್ರೇಯ ಬೆಳವಿಯವರು ಸರಕಾರಕ್ಕನುಕೂಲರಾದರು, ಇದೆಂಥ ವ್ಯಾಪಾರ ?

— ಮುಂಬಯಿಯಲ್ಲಿ ಅಖಿಲ ಭಾರತೀಯ ಆಗಮವಾದಿ ಸನಾತನ ಮಹಾಸಭೆಯ ಅಧಿವೇಶನವು ಶುಕ್ರವಾರ-ಶನಿವಾರಕ್ಕೆ ಸೇರಿತು. ವಾದನಾಡಿಗಳಲ್ಲಿ ಇತ್ತಂಡಗಳವೆ ಸನಾತನಿಗಳು; ಮಹಾಸಭಾದವರು. ಮಹಾಸಭೆಯವರು ಸುಧಾರಕರು; ಸನಾತನಿಗಳು ಪುರಾತನವಾದಿಗಳು, ವಿಧವಾ ವಿವಾಹ ಪ್ರಶ್ನೆಯ ಮೇಲೆ ದೊಡ್ಡದೊಂದು ವಾದವೆದ್ದು ಗುರುವಾರಕ್ಕೆ ಅಧ್ಯಕ್ಷರಾದ ಶ್ರೀ| ಜಮುನಾದಾಸ ಪೊದ್ದಾರವರ ಸ್ವಾಗತ ಸಮಾರಂಭದಲ್ಲಿ ಅತ್ತಿಟ್ಟನ್ನಲ್ಲಿಯೂ ಬಹಿರಂಗವಾಗಿ ಕುರ್ಚಿಗಳೂ ಚದರಿಸಲಾಯಿತು ಅಧ್ಯಕ್ಷರನ್ನು ಅಪಹರಿಸಿ ಒಯ್ಯಲು ಸನಾತನಿಗಳು ಒಳಸಂಚು ಮಾಡಿದರಂತೆ. ಶ್ರೀ| ಜಮುನಾದಾಸರವರು ಮರುದಿನದ ಸಭೆಗೆ ಅಧ್ಯಕ್ಷರಾಗಲೊಪ್ಪಲಿಲ್ಲ. ಇನ್ನೊಬ್ಬರನ್ನು ಆರಿಸಿ ಅಧಿವೇಶನವು ಶುಕ್ರವಾರಕ್ಕೆ ಪ್ರಾರಂಭವಾಯಿತು. ಸಂಧಾನ ಪ್ರಯತ್ನಗಳು ಬಹಳ ನಡೆದವು ವಿಧವಾ ವಿವಾಹವನ್ನು ಸುಧಾರಕರು ಪುರಸ್ಕರಿಸುವದಿಲ್ಲವಾಗಿ ಖರಾರಿಯಿಂದ ಹೇಳಿದಾಗ್ಯೂ, ಸನಾತನಿಗಳು ತಮ್ಮ ದುರಾಗ್ರಹವನ್ನು ಬಿಡಲಿಲ್ಲ. ಮಹಾಸಭೆಗೆ ಒಪ್ಪಿದ ಕೆಲವರು ಕಲಕತ್ತೆಯಲ್ಲಿ ವಿಧವಾ ವಿವಾಹಕ್ಕನುಕೂಲವಾದ ಅಭಿಪ್ರಾಯ ಕೊಟ್ಟಿದ್ದರಂತೆ. ಬಹಳ ಮಾತ್ಸರ್ಯದಿಂದ ಸನಾತನಿಗಳು ಸಭೆಯೊಳಗಿಂದ ಎದ್ದು ನಡೆದರು. ಮಹಾಮಾಡಿ ಸಮಾಜದಲ್ಲಿ ದೊಡ್ಡ ಗಡಿಬಿಡಿ.

— ಡಾ| ಮರೀ ಎಂಬ ವಿಖ್ಯಾತ ಬ್ರಿಟಿಶ ಡಾಕ್ಟರರು ಮುಗಾರಿಯಲ್ಲಿ ಹಿಂದು ಧರ್ಮದಲ್ಲಿ ಸೇರಿದರು. ಆರ್ಯ ಸಮಾಜ ಮಂದಿರದಲ್ಲಿ ಹಿಂದೂ ಧರ್ಮದ ಮೇಲಾದ ಲೇಖನಗಳಿಂದ ಅವರ ಪ್ರವೃತ್ತಿಯು ಬದಲಾಯಿತಂತೆ ಅವರು ಮದ್ಯಮಾಂಸಾಹಾರಿಗಳು ಬೀಡಿಸೇದುವದಿಲ್ಲ; ಹಿಂಸೆ ಮಾಡುವದಿಲ್ಲ; ಅಹಿಂಸೆಯಲ್ಲಿ ನಿಷ್ಠೆ ಇದ್ದವರು.

— ಇದೇ ಹಿಂದುಸ್ಥಾನದಲ್ಲಿ ೧೯೨೬-೨೭ ನೇ ವರ್ಷದ ೯೯ ಲಕ್ಷ ೩೧ ಸಾವಿರ ದನಗಳು ಗೋಮಾಂಸಕ್ಕಾಗಿ ಕೊಲ್ಲಲ್ಪಟ್ಟವು. ಹೀಗೆ ದನಗಳ ಸಂಹಾರವಾಗುವಾಗ ಇಷ್ಟು ದನಗಳು ಇನ್ನೂ ಉಳಿದಿರುವದೇ ದೊಡ್ಡ ಆಶ್ಚರ್ಯ !

— ಧಾರವಾಡದೊಳಗಿನ ನ್ಯಾಯಖಾತೆಯ ಗಿರಣಿಯೊಂದು ಸುಟ್ಟುಹೋಗಿ ೧೨ ಸಾವಿರ ರೂಪಾಯಿಗಳ ನಷ್ಟ ಸಂಭವಿಸಿದೆ. ವಿಮೆ ಮಾಡಿದ್ದಿಲ್ಲ. ನೈಷ್ಟ ಖರ್ಚೆಲ್ಲ ನಷ್ಟದ್ದೇ ಆದದೇನೋ!

— ಮುಂಬಯಿ ಶಾಸನ ಕೌನ್ಸಿಲಿನ ಅಧ್ಯಕ್ಷರಾದ ನಾ| ದೇಹಲವಿಯವರು ಶನಿವಾರಕ್ಕೆ ಕೊಟ್ಟ ಅಭಿಪ್ರಾಯವನ್ನು ಸೋಮವಾರಕ್ಕೆ ತಿರುಗಿಸಿದಾಗ ಬೇಸತ್ತು ಬಂದ ಸಭಾಸದರಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯ ಶ್ರೀ| ಮಂಜುನಾಥ ಭಟ್ಟ ಕರ್ಕಿಯವರೊಬ್ಬರು ಇವರಿಗೆ ನಾವು ಅಭಿನಂದಿಸುತ್ತೇವೆ

— ಮೈಸೂರ ಮಹಾರಾಜರ ಖಾಸಗಿ ಕಾರ್ಯದರ್ಶಿಗಳಾದ ಸರ್ ಚಾರ್ಲ್ಸ ಟೊಡಹಂಟರರವರು ಭಟಕಳ ಬಂದರವನ್ನು ಪಡೆಕೊಳ್ಳುವದಕ್ಕಾಗಿ ಇಂಗ್ಲಂಡ ದೇಶಕ್ಕೆ ಹೋಗುವವರಿದ್ದಾರೆ

—ಸಾಮ್ರಾಜ್ಯ ಸಂಘಕ್ಕೆ ದಿವಾನ ಚಮನಲಾಲ, ಪಂಡಿತ ನೇಹರು, ಶ್ರೀ| ಗೋಸ್ವಾಮಿ, ಸರ್ ಡಾರ್ಸಿ ಲಿಂಡ್ಸೇ ಹೀಗೆ ನಾಲ್ವರಿಗೆ ಪ್ರತಿನಿಧಿಯಾಗಿ ಕಳಿಸಲು ಇಲ್ಲಿಯ ಸಾಮ್ರಾಜ್ಯ ಸಂಘವು ಒಪ್ಪಿದೆ. ಅಮೇರಿಕೆಯ ಕೆನಡಾ ದೇಶಕ್ಕೆ ಹೋಗಬೇಕು. ಖರ್ಚನ್ನು ಕೆನಡಾ ದೇಶದ ಸರಕಾರವು ಕೊಡುವದು

— ಚೀನ ದೇಶದ ಯಾಂಗಟ್ಸಿ ನದಿಯಲ್ಲಿ ಚೀನ ದೇಶದ ಹಡಗವು ಇನ್ನೊಂದು ಹಡಗಕ್ಕೆ ತಗಲಿ ಒಮ್ಮೆಲೇ ಒಡೆದು ಮುಳುಗಿ ಹೋಯಿತು. ಆ ಹಡಗದ ಮೇಲೆ ೫೫೦ ಮಂದಿ ಪ್ರವಾಸಿಕರಿದ್ದರು ೪೦೦ ಮಂದಿಗಳು ಜಲಸಮಾಧಿ ಹೊಂದಿದರು ಪಾಪ!

— ಕಳೆದ ತಾರೀಖು ೧೫ನೇಗೆ ಅಮೇರಿಕೆಯ ಟ್ರಿಬ್ಯೂಲ್ ದೇಶದ ಸ್ಯಾಜಸ್ ಗ್ರಾಮದಲ್ಲಿ ಧರ್ಮಕಟ್ಟೆಯ ಬುರುಜು ಕುಸಿದು ಬಿದ್ದು ೨೫೦ ಜನರು ಕಾಲವಶರಾದರು ಮನೆ ಮಾರುಗಳೆಲ್ಲ ಹಾಳಾಗಿ ಹೋಗಿವೆ ೨೦ ಸಾವಿರ ಸೈನಿಕರು ರಾತ್ರಿಯಾಗಿ ಬಿದ್ದ ಕಲ್ಲು ಮಣ್ಣನ್ನು ತೆಗೆಯುತ್ತಿದ್ದಾರೆ

—'ಎಸೋಸಿಯೇಟೆಡ್ ಪ್ರೆಸ್' ಹಾಗು 'ರಾಯ್ಟರ್' ಸುದ್ದಿಗಾರರಿಗೆ ಸರಕಾರ ಅಧಿಕಾರಿಗಳಿಗೆ ಸುದ್ದಿ ಪೂರೈಸಿದ ಶಿಗ್ಗಿಂದು ಹಿಂದುಸ್ಥಾನ ಸರಕಾರವು ರೂ ೩೫,೫೦೦. ಮುಂಬಯಿ ಸರಕಾರವು ರೂ ೨೦೦೦, ಸಂಯುಕ್ತ ಪ್ರಾಂತವು ರೂ. ೧೮೦೦, ಬಂಗಾಲ ರೂ ೧೦೦೦, ಪಂಜಾಬ ರೂ. ೧೫೦, ಬ್ರಹ್ಮದೇಶವು ರೂ ೧೨೦ ಹೀಗೆ ದ್ರವ್ಯ ಕೊಡುತ್ತಿವೆ. ನಿಷ್ಪಕ್ಷಪಾತದಿಂದ ಈ ಸಂಸ್ಥೆಗಳು ಸುದ್ದಿ ಕೊಡುವದಿಲ್ಲೆಂದು ಸರಕಾರ ಪಕ್ಷಪಾತಿಯಾದ ಅಲಹಾಬಾದದ 'ಪಾಯೋನಿಯರ' ಪತ್ರಿಕೆಯೇ ನಿಷೇಧ ಮಾಡುತ್ತಲಿದೆ. ಇತರ ಸಾರ್ವಜನಿಕ ಸಂಸ್ಥೆಗಳಿಗೆ ಈ ಸಂಸ್ಥೆಗಳೊಡನೆ ಪೈಪೋಟಿ ನಡೆಸಲಿಕ್ಕೆ ಸರಕಾರ ಸಹಾಯದ ಮೂಲಕ ಪ್ರತ್ಯವಾಯವಾಗುತ್ತದೆಂದು ಈ ಪತ್ರಿಕೆಯು ಹೇಳಿತು

— ಬಂಗಾಲದ ಮಾಲಡ ವಿಜಾಪುರ ಜಿಲ್ಲೆಯೊಳಗಿನ ೨೫ ಗ್ರಾಮಗಳೊಳಗಿಂದ ೫೦೦೦ ಜನರು ದೇಶಾಂತರ ಹೋಗಿದ್ದಾರೆ ಮನೆಮಾರುಗಳು ಪಾಳುಬಿದ್ದಿವೆ ಆ ಪ್ರಾಂತಗಳಲ್ಲಿ ೬ ವರ್ಷ ಬೆಳೆ ಬಾರಲಿಲ್ಲ. ೨ ವರ್ಷ ಸಹ ಬೆಳೆಯಿಲ್ಲವೆಂದು ಜನರ ದೂರು

— ರಘುನಾಥನ ಈ ದಿನ ನಮ್ಮ ಯಾತ್ರಿಕರಿಗೆ ಮುಖ್ಯ ಸ್ಥಳದಲ್ಲಿ ಬಹಳ ಭಿಕ್ಷೆ ಕೊಡಲಾಯಿತು ಭಿಕ್ಷೆ ಬೇಡುವ ಗದ್ದಲದಲ್ಲಿ ೯ ಮಂದಿ ಮುದುಕರು ಸತ್ತರು ಪಾಪ!

— ಬಳವಂತ ಸಂಗೀತ ನಾಟಕ ಮಂಡಳಿಯವರು ಪೂರ್ವ ಆಫ್ರಿಕೆಗೆ ತಮ್ಮ ಕಂಪನಿಯನ್ನು ಒಯ್ದು ನಾಟಕ ಪ್ರಯೋಗಗಳನ್ನು ಮಾಡುವವರಿದ್ದಾರೆ, ಆಫ್ರಿಕೆಗೆ ಹೋದ ಮರಾಠಿ ನಾಟಕ ಕಂಪನಿಯು ಇದೇ ಮೊದಲನೇದು.

... ಕಲ್ಲಿಕೋಟೆಯಲ್ಲಿ ತಿಯಾ ಜಾತಿಯ ಪಡೆಗಳನ್ನು ಮಾಪ್ಲರು ಕೊಂದು ಶವವನ್ನು ಹೂಳಿದರು. ಈ ಅಪರಾಧದಲ್ಲಿ ಪ್ಯಾನ ಮಾಡಿದ ಸೆಶನ್ಸ ಜಜ್ಜರ ಮಗನ ಅಂಗವಿರುವದಂತೆ! ಯಾವ್ಯಾವ ಮೇಲೆ ಯಾವ್ಯಾವ ಪ್ರಸಂಗ ಒದಗುವದೆಂದು ಹೇಳಬರುವದೇನು?

— ನಿಜಾಮ ಸಾಹೇಬರ ಖರ್ಚು ಕೇಳಿರಿ. ಸಂಸ್ಥಾನದೊಳಗಿನ ಉಂಬಳಿಯಿಂದ ನಿಜಾಮ ಸಾಹೇಬರು ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅವಲ್ಲದೆ ನಿಜಾಮರಿಗೆ ಸ್ವಂತ ಆಸ್ತಿಯಿಂದ ೮೪ ಲಕ್ಷ ರೂಪಾಯಿಗಳ ಪ್ರಾಪ್ತಿ ಇದೆ. ಅಂದರೆ ನಿಜಾಮರಿಗೆ ಸಾಲಿಯಾನ ೧ ಕೋಟಿ ೩೪ ಲಕ್ಷ ರೂಪಾಯಿ ಖರ್ಚು ತಗಲುತ್ತದೆಂದು ಆಯಿತು. ಅದ್ಭುತ.

— ಮಹಾಡದ ಅಸ್ಪೃಶ್ಯರು ಮಹಾಡದೊಳಗಿನ ಚಾವದಾರ ಕೆರೆಯನ್ನು ಸ್ಪರ್ಶ ಮಾಡಬಾರದೆಂದು ಮಾಡಿದ ದಾವೆಯು ಪೂರ್ಣ ವಿಚಾರದ ತನಕ ಆ ಕೆರೆಯನ್ನು ಸ್ಪರ್ಶಮಾಡಬಾರದೆಂದು ಠಾಣೆಯ ಡಿಸ್ಟ್ರಿಕ್ಟ ಜಜ್ಜರು ನಿರ್ಧರಿಸಿದ್ದಾರೆ. ಸಬಜಜ್ಜರು ಹಂಗಾಮಿ ತಾಕೀತನ್ನು ಅಲ್ಲಗಳೆದಿದ್ದರು.

ಕಾಶಿಯ
ಅಪೂರ್ವ ಸಾಮಾನುಗಳು!

ನಾವು ಕಾಶಿಯ ಪಟ್ಟೆ ಮಡಿ, ಶೀರೆ, ಖಣ, ರೇಶ್ಮೆ ಶಲ್ಲೆ, ಬಚ್ಚನಾಗ, ಕಾಶ್ಮೀರದ ಶಾಲು, ಸಕಲಾತಿ, ಧಾಬಳಿ, ರುದ್ರಾಕ್ಷ ಸರ, ಕಂಠಿ, ಗೌರೀಶಂಕರ, ಪಂಚಾಯತನ, ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ ಕೇಶರಿ, ಪಚ್ಚಕರ್ಪೂರ, ಶಿಲಾಜಿತ, ಜಾಪಂಟ, ಕಂಬಿ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ.—
ವಿಶ್ವನಾಥ ಎಂಡ್ ಬ್ರದರ್ಸ,
ದುರ್ಗಾಘಾಟ,
ಬನಾರಸ್ ಸಿಟಿ.

ಮೋಟಾರ ಉಪಯೋಗದ ಬಗ್ಗೆ
ಮ್ಯಾಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ ಮೋಟಾರಿನಲ್ಲಿ ಹಾಕುವಂಥ, ಉತ್ತಮ ರೀತಿಯಿಂದ ತಯಾರಿಸಿದ ಕೈನೆಯ್ಗೆಯ ಕತ್ತದ ಚಾಪೆಗಳು ಸಿಗುತ್ತವೆ.



ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಸಾಗವಾನಿ ಕಟ್ಟಿಗೆಯಿಂದ ತಯಾರಿಸಿದ ಬೇಗಿ ಸಮರ್ಪಕವಾದ ಪೆಟ್ಟಿಗೆಗಳು ಹಾಗು ಮೋಟಾರ ಬಾಡಿ ಬಗ್ಗೆ ಸೈಟಲಿಂಗ್ಸ ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ. ಪೆಟ್ಟಿಗೆಗೆ ೧೮ ಬೆಲೆ ರೂ. ೩ ಸೈಜು ೩'×೧'×೧'.

ದರ ಫೂಟಿಗೆ ೦-೨-೬

ಬೇಕಾದವರು ಆರತೆಯ ಸಮೇತ ರೂ. ೨-೦-೦ ಮುಂಗಡವಾಗಿ ಕಳಿಸಬೇಕು.
ವಿಳಾಸ:-- ಎಸ್. ಎಮ್. ಪಂಡಿತ,
ಮೋಟಾರ ಟಿಕೇಟ ಆಫೀಸ, ದುರ್ಗಾಕೇರಿ. ಹೊನ್ನಾವರ. (ಉ.ಕ.)

ಮಹಾತ್ಮರ ಆತ್ಮಚರಿತ್ರ.

(೪೩) ಸ್ವದೇಶಕ್ಕೆ ತೆರಳಿದೆನು

ಕಾಲಿನಬ್ಯಾಕ್‌ರವರ ನನ್ನ ಜೊತೆಗೆ ಇಂಗ್ಲೆಂಡಕ್ಕೆ ಬಂದಿದ್ದರು, ಹಿಂದುಸ್ಥಾನಕ್ಕೆ ಬರಲುದ್ಯುಕ್ತರಾಗಿ ಅವರು ಬಂದಿದ್ದರು. ನಾವಿಬ್ಬರೂ ಒಂದೇ ಕಡೆ ಉಳಕೊಳ್ಳುತ್ತಿದ್ದೆವು, ಒಂದೇ ಉಗಿಹಡಗವನ್ನೇರಿ ಹೋಗಬೇಕೆಂದು ಇಚ್ಛಿಸಿದೆವು. ಜರ್ಮನರ ಮೇಲೆ ಕಠೋರ ಕಾವಲಿತ್ತು. ಆದರಿಂದ ಕಾಲಿನಬ್ಯಾಕ್‌ರವರಿಗೆ ಪಾಸಪೋರ್ಟ ದೊರೆತು ಹಿಂದುಸ್ಥಾನಕ್ಕೆ ಹೋಗಲು ಅಪ್ಪಣೆ ಸಿಗುವದೆಂದು ನನಗೆನಿಸಲಿಲ್ಲ. ಪಾಸಪೋರ್ಟನ್ನು ಸಂಪಾದಿಸಲು ನಾನು ಪರಮಾವಧಿಯ ಪ್ರಯತ್ನ ಮಾಡಿದೆನು. ರಾಬರ್ಟರವರಿಗೆ ಪಾಸಪೋರ್ಟ ಕೊಡುವ ಮನಸ್ಸಿತ್ತು. ಆದರಿಂದ ಅವರು ಸರ್ಕಾರಿ ಪತ್ರಿಗಳಿಗೆ ತಂತಿ ಮಾಡಿದರು. ಕೂಡಲೆ ಹಾರ್ಡಿಂಜ ದೊರೆಗಳು ಉತ್ತರ ಕೊಟ್ಟದ್ದೇನಂದರೆ — "ಇಂಥ ಜವಾಬದಾರಿಯನ್ನು ಕೊಳ್ಳಲು ಹಿಂದುಸ್ಥಾನ ಸರಕಾರವು ತಯಾರಿಲ್ಲ." ನನಗೆಲ್ಲರಿಗೂ ಈ ಉತ್ತರದ ಮರ್ಮ ತಿಳಿಯಿತು. ಕಾಲಿನಬ್ಯಾಕ್‌ರವರನ್ನು ಬಿಟ್ಟು ಬರುವದು ನನಗೆ ಜೀವದ ಸುತ್ತು ಬಂತು. ಅವರ ವಿರಹ ಅನೇಕ ದುಃಖ ವ್ಯಸನವಾಯಿತು. ನನ್ನ ಜೊತೆಗೆ ಅವರು ಹಿಂದುಸ್ಥಾನಕ್ಕೆ ಬಂದಿದ್ದರೆ ಒಳ್ಳೆಲವನಾಗಿಂದ [illegible] ನೀರ್ಯೋಗದಿಂದಲೂ ಅವರು ಅಲ್ಲಿ ಸ[illegible] ಬಾಳ ಮಾಡಿ ಬಾಳುತ್ತಿದ್ದರು. ಈಗ ಅವರು ದಕ್ಷಿಣ ಆಫ್ರಿಕೆಯಲ್ಲಿದ್ದಾರೆ. ಹಿಂದಿನ ಉದ್ಯೋಗವನ್ನೇ ನಡಿಸುತ್ತಿದ್ದು ವಿಲಕ್ಷಣವಾಗಿ ದೊಡ್ಡ ವ್ಯಾಪಾರ ನಡಿಸುತ್ತಿದ್ದಾರೆ. ಇನ್ನೇನು ಅವರಿಗೆ ಶೀಘ್ರದಲ್ಲಿ ಇಲ್ಲಿ ಬರಬೇಕೆಂದು ನಾವು ಬಯಸುವೆವು. ಪಿ. ಎಂಡ್ ಓ. ಕಂಪನಿಯ ಹಡಗಗಳ ಮೇಲೆ ಈ ತರ[illegible] ಸ್ಥಳವಿರಲಿಲ್ಲ. ಆದರಿಂದ ಎರಡನೇ ತರಗತಿಯ ಟಿಕೇಟುಗಳನ್ನು ಕೊಂಡೆವು. ದಕ್ಷಿಣ ಆಫ್ರಿಕೆಯಿಂದ ಒಟ್ಟಾಗಿ ತಂದ ಹಣ್ಣುಹಂಪಲಗಳು ನಮ್ಮ ಬಳಿಯಲ್ಲಿದ್ದವು. ಹಡಗದ ಮೇಲೆ ಅಂಥವು ಸಿಗುತ್ತಿರಲಿಲ್ಲ. ಆದರಿಂದ ಅವನ್ನ ನಮ್ಮೊಡನೆ ತೆಗೆದುಕೊಂಡೆವು.

ಡಾ|| ಜೀವರಾಜ ಮೇಹತಾರವರ ಪಿಟ್ಟ ಪ್ಲಾಸ್ಟರದಿಂದ ನನ್ನ ಎದೆಯ ಎಲಬುಗಳಿಗೆ ಕಟ್ಟಿದರು. ಕೆಂಪು ಸಮುದ್ರಕ್ಕೆ ತಲ್ಪುವ ತನಕ ಅದನ್ನು ತೆಗೆಯಬಾರದೆಂದೂ ಅವರು ಹೇಳಿದ್ದರು. ನನಗೆ ಬಹಳ ತೊಂದರೆಯಾಗುತ್ತಿತ್ತು. ಎರಡು ದಿನಗಳ ತನಕ ನಾನು ತಾಳಿಕೊಂಡೆ. ಕೊನೆಗೆ ನನ್ನಿಂದ ಸೈರಿಸಲಾಗಲಿಲ್ಲ. ಆದರಿಂದ ಆ ಪ್ಲಾಸ್ಟರನ್ನು ತೆಗೆದೆ. ಅದನ್ನು ತೆಗೆಯಬೇಕಾದರೆ ಬಹಳ ಕಷ್ಟವಾಯಿತು. ಮತ್ತು ಅದನ್ನು ಚನ್ನಾಗಿ ತೊಳಕೊಂಡು ಸ್ನಾನ ಮಾಡಿದೆನು.

ಪ್ರಧಾನವಾಗಿ ನಾನು ಹಣ್ಣುಹಂಪಲಗಳನ್ನು ತಿಂದು ಉಳಕೊಳ್ಳುತ್ತಿದ್ದೆ. ದಿನಾ ನನ್ನ ಪ್ರಕೃತಿಯ ಸುಧಾರಿಸುತ್ತಿತ್ತು. ಸ[illegible] ಕಾಲುವೆಯೊಳಗೆ ನಮ್ಮ ಹಡಗವು ಬರುವಷ್ಟರಲ್ಲಿ ನನ್ನ ಪ್ರಕೃತಿಯು ಬಹಳ ಸುಧಾರಿಸಿತು. ಅಶಕ್ತನಿದ್ದೆನು, ಆದರೆ ವ್ಯಾಧಿಯು ದೂರವಾಗಿತ್ತು. ಕ್ರಮವಾಗಿ ವ್ಯಾಯಾಮವನ್ನು ಹೆಚ್ಚಿಸುತ್ತ ಹೋದೆನು. ಸಮಶೀತೋಷ್ಣ ಪ್ರದೇಶದೊಳಗಿನ ನಿರ್ಮಲ ಹವೆಯಿಂದ ನನ್ನ ಪ್ರಕೃತಿಯು ಸುಧಾರಿಸಿತೆಂದು ನನ್ನ ಅಭಿಪ್ರಾಯ.

ಹಡಗದ ಮೇಲಿನ ಇಂಗ್ಲಿಷ ಹಾಗು ಭಾರತೀಯ ಪ್ರಯಾಣಿಕರೊಳಗಿನ ಅಲಿಪ್ತ ನಡಾವಳಿಯನ್ನು ನಾನು ಬಲ್ಲೆನು. ದಕ್ಷಿಣ ಆಫ್ರಿಕೆಯಿಂದ ಬರುವಾಗ ಇಂಥ ನಡಾವಳಿಯನ್ನು ನಾನು ನೋಡಿರಲಿಲ್ಲ. ಇದು ಹಿಂದಿನ ಅನುಭವದಿಂದಲೋ, ಅಥವಾ ಬೇರೆ ಯಾವ ಕಾರಣದಿಂದಲೋ ನನಗರಿಯದ ವಿಷಯ. ಕೆಲವು ಇಂಗ್ಲಿಷರೊಡನೆ ನಾನು ಮಾತಾಡಿದ್ದೇನೋ ನಿಜ. ಆದರೆ, ಅದೆಲ್ಲ ಔಪಚಾರಿಕ ಭಾಷೆ. ದಕ್ಷಿಣ ಆಫ್ರಿಕೆಯ ಹಡಗಗಳ ಮೇಲೆ ಒದಗಿಬಂದಂತೆ ಸ್ನೇಹಭಾವದ ಸಂಭಾಷಣೆಗಳನ್ನು ಈ ದ್ರಯಾಣಗಳಲ್ಲಿ ನಾ ಕಾಣಲಿಲ್ಲ. ನನ್ನ ಮಟ್ಟಿಗೆ ಇದರ ಒಂದು ಕಾರಣ ತೋರುತ್ತದೆ. ಇಂಗ್ಲರಿಗೆ ತಾವು ರಾಜ್ಯಾಧಿಕಾರಿಗಳೆಂಬುವೊಂದು ಗ್ರಹಿಕೆಯಿದೆ. ಈ ಗ್ರಹಿಕೆಯು ಅಪೇಕ್ಷೆಯಿಂದಿರಲಿ ಅಥವಾ ನಿರಪೇಕ್ಷೆಯಿಂದಿರಲಿ ನನಗೆ ಒಮ್ಮೆ ಸ್ವದೇಶಕ್ಕೆ ಮುಟ್ಟಿದರೆ ಸಾಕಾಯಿತು. ಈ ನಡಾವಳಿಯನ್ನು ನನ್ನಿಂದ ಸೈರಿಸಲಾಗಲಿಲ್ಲ.

ಏಡನ್ನಿಗೆ ತಲ್ಪಿದೊಡನೆ ನನಗೆ ಮನೆಯ ಬಳಿಯಿದ್ದಂತೆ ಎನಿಸಿತ. ಏಡನ್‌ದವರಿಗೆ ನಾನು ಚಲೋ ಬಲ್ಲವನಿದ್ದೆ. ದರ್ಬಾನದಲ್ಲಿ ಕೇಕೋಬಾದ ಕಾವಸಜಿ ದಿನಶಾರವರಿಗೆ ಭೆಟ್ಟಿಯಾಗಿದೆ. ಅವರ ಕುಟುಂಬದ ಪರಿಚಯವೂ ನನಗೆ ಚಲೋ ಇತ್ತು. ಕೆಲವೆ ದಿನಗಳಲ್ಲಿಯೇ ನಾವು ಮುಂಬಯಿಗೆ ಮುಟ್ಟಿದೆವು. ನನಗೆ ಬಹಳ ಆನಂದವಾಯಿತು. ೧೦ ವರುಷಗಳ ಮೇಲೆ ನಾನು ಸ್ವದೇಶದಲ್ಲಿ ಕಾಲಿಟ್ಟದ್ದು.

ಮುಂಬಯಿಯಲ್ಲಿ ಗೋಖಲೆಯವರ ಪ್ರೇರಣೆಯಿಂದ ಒಂದು ಸ್ವಾಗತ ಸಮಾರಂಭವು ಜರುಗಿಬಂತು. ಗೋಖಲೆಯವರ ಪ್ರಕೃತಿ ನೆಟ್ಟಗಿದ್ದಿಲ್ಲ. ಆದರೂ, ಅವರು [illegible] ಗೆ ಬಂದರು. [illegible] ಅವರೊಡನೆ [illegible] ಸ್ವತಂತ್ರನಾಗಿ [illegible] ಸಕ್ಕೆ [illegible] ಆದರೆ, ದೈವ ಸಂಕ[illegible]

ಹಿಂದೂಗಳ ತಪೋಬಲ

(ಹಿಂದಿನ ಸಂಚಿಕೆಯಿಂದ ಮುಂದುವರಿಸಿದ್ದು)

[illegible] ಕೆಲವು ಪ್ರಶ್ನೆ ಕೇಳುವದು, ಅವುಗಳಿಗೂ ಜೋಶಿಯರ ಕೇಳಿದ ಉತ್ತರವೇ ಸರಿಯಾಗುವದು, ಹೀಗೆ ನಡೆಯಿತು.

[illegible] ಜೋಶಿಯವರ ಸತ್ಯಪರೀಕ್ಷೆ ಮಾಡಬೇಕೆಂದು [illegible] ಕ್ಯಾಲ್ಕ್ಯುಲೇಟರನೊಳಗಿನ ಗಣಿತಶಾಸ್ತ್ರಜ್ಞರ ಒಂದು ಮಂಡಳವನ್ನು ನೇಮಿಸಿ, ೬೦ ಸ್ತಂಭಗಳ ಈ ಕೆಳಗಿನ ಸಂಖ್ಯೆಯ ವರ್ಗವನ್ನು ತೆಗೆಯಬೇಕೆಂದರು. ಆ ವರ್ಗವನ್ನು ಸೋಮೇಶಬಾಬುಗಳಿಗೆ ಕೇಳಿದರು. ಸೋಮೇಶಬಾಬುಗಳು ಆಗಾದರೂ ನೋಡಲು ಬರೆದು ಅವರು ಗ್ರಹಿಸಿದ್ದರು. ವರ್ಗ ಮಾಡಬೇಕಾದಾಗ ಅಂಕಿಯು ಈ ಪ್ರಕಾರ ಕರಿಹಲಗೆಯ ಮೇಲೆ ಬರೆಯಲ್ಪಟ್ಟಿತು,

[illegible]

ಈ ಅಂಕಿಗೆ ಈ ಅಂಕಿಯಿಂದಲೇ ಗುಣಾಕಾರ ಮಾಡಿ ವರ್ಗವನ್ನು ಹೇಳಬೇಕಾಗಿತ್ತು. ಜೋಶಿಯರು ಅಂಕಿಗಳನ್ನು ನೋಡಿದರು, ಕಣ್ಣುಮುಚ್ಚಿದರು, ಕಣ್ಣು ತೆರೆದು ಸಭಿಕರಿಗೆ ಹೇಳಿದ್ದೇನಂದರೆ "ನಾನು ಕಣ್ಣುಮುಚ್ಚಿ ಗುಣಾಕಾರ ಮಾಡುತ್ತೇನೆ, ನೀವು ಬೇಕಾದಷ್ಟು ಗದ್ದಲ ಮಾಡಿರಿ, ಗಾಯನ ಮಾಡಿರಿ, ಬೇಕಾದ ವಾದ್ಯವನ್ನು ಬಾರಿಸಿರಿ." ಎಂದು ಹೇಳಿ ೮೦ ಮಿನಿಟುಗಳಲ್ಲಿ ಉತ್ತರವನ್ನು ಜೋಶಿಯರು ಕರಿಹಲಗೆಯ ಮೇಲೆ ಬರೆದರು. ಅದೇನಂದರೆ —

[illegible]

ಪ್ರಮುಖರ ಕಮಿಟಿಯು ಅಧ್ಯಕ್ಷರು ಇದನ್ನು ತಮ್ಮ ಗುಣಾಕಾರದೊಡನೆ ತುಲನೆ ಮಾಡಿ ೧೧೧ ಸ್ಥಾನಗಳು ಸರಿಯಿರುತ್ತವಾಗಿಯೂ, ೧೯ ಸ್ಥಾನಗಳು ತಪ್ಪಿರುತ್ತವಾಗಿಯೂ ನುಡಿದರು. ಜೋಶಿಯರ ಪ್ರೌಢಿಯು ಕಂಡಿತು. ೬೦ ದು ತಪ್ಪು ಸಹ ಮಾಡಿದಿಲ್ಲ, ಪುನಃ ಕಣ್ಣುಮುಚ್ಚಿ ತಮ್ಮ ಗುಣಾಕಾರವನ್ನು ನೋಡಿಕೊಂಡರು. ನಿಶ್ಚಯಪೂರ್ವಕವಾಗಿ ನುಡಿದದ್ದೇನಂದರೆ — "ನನ್ನ ಉತ್ತರವು ತೀರ ಸರಿಯಿದೆ, ಕಮಿಟಿಯವರ ಗುಣಾಕಾರವೇ ತಪ್ಪಿದ್ದಿರಬೇಕು. ಚೇರಮನ್‌ರು ತಮ್ಮ ಗುಣಾಕಾರವನ್ನು ಕರೀ ಹಲಿಗೆಯ ಮೇಲೆ ಬರೆದರೆ ಉಪಕಾರವಾಗುವದು." ಸೋಮೇಶಬಾಬುಗಳು ಕಮಿಟಿಯವರ ಗುಣಾಕಾರದಲ್ಲಿಂದಾದ ತಪ್ಪುಗಳನ್ನು ತೋರಿಸಿಕೊಟ್ಟ ಮೇಲೆ, ಎಲ್ಲರೂ ಚಕಿತರಾದರು.

"ಕಲಕತ್ತ ಟೈಮ್ಸ" ಪತ್ರಿಕೆಯ ಸುದ್ದಿಗಾರರು ಬೋಸರವರ ಏಕಾಗ್ರಚಿತ್ತದ ಅಂತರಂಗವನ್ನು ತಿಳಿಯಲುದ್ಯುಕ್ತರಾಗಿ, ಇಂಥ ಸಾಮರ್ಥ್ಯವನ್ನು ನೀವು ಹೇಗೆ ಸಂಪಾದಿಸಿದಿರಿ?" ಎಂದು ಕೇಳಲು, "ನಿಧಿಧ್ಯಾಸದಿಂದ ನಾನು ಈ ಪ್ರಯೋಗಗಳನ್ನು ಮಾಡಬಲ್ಲನು, ನನಗೆ ಹೆಚ್ಚಿಗೆ ತಿಂಡಿ ಬೇಡ, ಪಾನೀಯವೂ ಬೇಡ, ನಿದ್ರೆಯೂ ವಿಶೇಷ ಬೇಡ, ದಿನಾ ನಾಲ್ಕು ಗ್ಲಾಸು ಹಾಲು ಕುಡಿದರೆ ನನ್ನ ಕೆಲಸವಾಯಿತು, ಕೆಲ ಕೆಲವು ಬಾರಿ ಕೆಲವು ಒಣ ದ್ರಾಕ್ಷೆ ಹಣ್ಣುಗಳನ್ನಾಗಲಿ, ಹಸಿ ದ್ರಾಕ್ಷೆ ಹಣ್ಣುಗಳನ್ನಾಗಲಿ ತಿಂದು ನಾನು ಉಳಕೊಳ್ಳುತ್ತೇನೆ. ಈಗ ನಾನು ಅಟ್ಲಾಂಟಿಕ ಮಹಾಸಾಗರವನ್ನು ದಾಟಿ ಅಮೇರಿಕೆಗೆ ಬಂದೆನಲ್ಲವೇ? ಹಡಗದ ಮೇಲೆ ಒಂದೇ ಒಂದು ಸೇಬು ಹಣ್ಣನ್ನು ದಿನಾ ನಾನು ತಿಂದಿದ್ದೇನೆ. ಜಲಪಾನ ಮಾಡುವದಿಲ್ಲ, ಸರಿಯಾಗಿ ಕೊಳ್ಳುವದಿಲ್ಲ, ಆ ಹಾಸಿಗೆ ಮಿಕ್ಕಿ ನಾನು ಮಲಗುವದಿಲ್ಲ. ಮಲಗುವ ವೇಳೆಯು ರಾತ್ರಿ ೧೧ ಘಂಟೆಯಿಂದ ೩ ಘಂಟೆಯ ತನಕ ೩ ಘಂಟೆಯವರೆಗೆ ನನ್ನ ನಿದ್ರೆ ಮುಗಿಯಿತು." ಎಂದು ಸೋಮೇಶಬಾಬುಗಳು ಸುದ್ದಿಗಾರರಿಗೆ ಹೇಳಿದರು. "ರಾತ್ರಿ ೩ ಘಂಟೆಗೆ ಎದ್ದು ನೀವು ಏನು ಮಾಡುತ್ತೀರಿ?" ಅದಕ್ಕೆ ಸೋಮೇಶಬಾಬುಗಳು ನುಡಿದದ್ದೇನಂದರೆ — "ನನ್ನ ಜೀವನಾಧಾರವೇನೆಂದು ಬಲ್ಲಿರಾ? ನಾನು ನಿರ್ಮಲಚಿತ್ತದಿಂದಿದ್ದೇನೆ, ಕ್ಷೇಮದಿಂದಿದ್ದೇನೆ. ಪರಮಾತ್ಮನ ಸನ್ನಿಧಿಯಲ್ಲೇ ವಾಸ ಮಾಡುತ್ತಿದ್ದೇನೆ. ಕಾರಣ ಹೇಳುತ್ತೇನೆ, ಏಕಾಗ್ರಚಿತ್ತದ ಬಲದಿಂದಲೇ ನಾನು ದೇಹಧಾರಣ ಮಾಡಿಕೊಂಡಿದ್ದೇನೆ. ರಾತ್ರಿ ೩ ಘಂಟೆಯಿಂದ ೬ ಘಂಟೆಯ ತನಕ ನಾನು ಸ್ತಬ್ಧನಾಗಿ ಕುಳಿತುಕೊಳ್ಳುತ್ತೇನೆ. ಗುರುಗಳು ಹೇಳಿಕೊಟ್ಟಂತೆ ಪ್ರಾಣಾಯಾಮವನ್ನು, ಧ್ಯಾನವನ್ನು ಮಾಡುತ್ತೇನೆ. ಏಕಾಗ್ರಚಿತ್ತ ಶಕ್ತಿಯದ್ದ ಹೊರತು, ಯಾರೂ ಯಾವದೇ ಕಾರ್ಯದಲ್ಲಿ ಯಶಸ್ಸನ್ನು ಸಂಪಾದಿಸಲಾರರು. ಏಕಾಗ್ರಶಕ್ತಿಯಿಂದ ಮನಸ್ಸು ನಿಮ್ಮ ಅಧೀನವಾಗುತ್ತದೆ; ಮತ್ತು ಕಾರ್ಯಗಳನ್ನು ನಿರ್ವಹಿಸಲಿಕ್ಕೆ ಬೇಕಷ್ಟು ಶಕ್ತಿಯು ಪ್ರಾಪ್ತವಾಗುತ್ತದೆ."

"ನಿಮ್ಮ ಸುತ್ತುಮುತ್ತ ಈ ಪ್ರಕಾರ ಗದ್ದಲ ನಡೆದಾಗ ಇಂಥ ದೊಡ್ಡ ಗುಣಾಕಾರವನ್ನು ನೀವು ಹೇಗೆ ಮಾಡಬಲ್ಲಿರಿ?" ಎಂದು ಸುದ್ದಿಗಾರರು ಕೇಳಿದರು.

"ಗದ್ದಲವೇ! ನನ್ನ ಕೆಲಸದಲ್ಲಿ ನಾನು ತನ್ಮಯನಿರುವಾಗ, ಸುತ್ತುಮುತ್ತಲಿನ ಶಬ್ದವು ನನಗೇನೂ ಕೇಳಬರುವದಿಲ್ಲ, ಅಂದ ಬಳಿಕ, ಆದರಿಂದ ನನಗೆ ತೊಂದರೆ ಏನಾದೀತು? ನನ್ನ ಮನಸ್ಸು ಭದ್ರವಾದ ಕೋಟೆಯಲ್ಲಿದ್ದಂತೆ ಇರುತ್ತದೆ" ಎಂದು ಸೋಮೇಶಬಾಬುಗಳು ಹೇಳಿದರು.

"ಧ್ಯಾನದಿಂದ ತಾವು ಈ ಬಲವನ್ನು ಸಂಗ್ರಹಿಸಿದಿರೋ, ಅಥವಾ ನಿಮ್ಮ ಜನ್ಮಜಾತವಸ್ತುವು ಹೀಗಿರುತ್ತದೆ?" ಎಂದು ಸುದ್ದಿಗಾರರು ಕೇಳಿದರು.

"ಬಾಲ್ಯದಿಂದಲೇ ನನಗೆ ಸ್ಮರಣಶಕ್ತಿಯು ವಿಶೇಷವಿದೆ. ೮ ವರ್ಷ ಪ್ರಾಯದವನಿದ್ದಾಗ ಸಾಲೆಯಲ್ಲಿಯೇ ಗುಣಾಕಾರದ ಲೆಖ್ಖಗಳನ್ನು ಮಾಡಬಲ್ಲನೆಂದು ನನಗೆ ತಿಳಿಯಿತು. ಬಾಯಿ ಲೆಖ್ಖ ಮಾಡುವವರಲ್ಲಿ ನನ್ನ ವರ್ಗದಲ್ಲಿ ಅಗ್ರಸ್ಥಾನ ಪಡೆದೆನು. ನನಗೆ ೩೦ ವರ್ಷಗಳಾದಾಗ, ೧೧ ಸ್ಥಾನಗಳ ಅಂಕಿಗಳ ಗುಣಾಕಾರಗಳನ್ನು ಬಾಯಿಯಿಂದ ಮಾಡಲಾರಂಭಿಸಿದೆನು. ನನಗೆ ಮುದುವೆಯಾಯಿತು. ಆ ಮೇಲೆ ೩೦ ಸ್ಥಾನಗಳ ಅಂಕಿಗಳನ್ನು ಗುಣಾಕಾರ ಮಾಡುವ ಶಕ್ತಿ ಬಂತು. ಈಗ ೬೦-೬೦ ಸ್ಥಾನಗಳ ಅಂಕಿಗಳ ಗುಣಾಕಾರವನ್ನು ಸಹಜವಾಗಿ ಮಾಡಬಲ್ಲೆನು." ಹೀಗೆ ಸೋಮೇಶಬಾಬುಗಳು ಹೇಳಿದರು.

ಮಾತನ್ನು ಒಂದು ಚಮತ್ಕಾರವಿದೆ ಹೇಳು-ಐಜ-ಬು-ತಿ-ಗ ಇಾಕಾರ-ಛಾಗಾಕಾರಗಳನ್ನು ಸೋಮೇಶ ಬಾಬುಗಳು ಬಾಯಿಲೆಕ್ಕದಿಂದಲೇ ಮಾಡುವದಲ್ಲದೆ, ೧ ವರುಷದಲ್ಲಿ ಮಾಡಿದ ಬಾಯಿಲೆಕ್ಕಗಳಲ್ಲ ಅವರ ಜ್ಞಾಪಕದಲ್ಲಿರುತ್ತವೆ ಇಷ್ಟು ಸಂಖ್ಯೆಗಳನ್ನು ನೀವು ಹ್ಯಾಗೆ ಜ್ಞಾಪಕದಲ್ಲಿಟ್ಟುಕೊಳ್ಳುತ್ತೀರೆಂದು ಸುದ್ದಿಗಾರರು ಪ್ರಶ್ನೆ ಕೇಳಲು, ಸೋಮೇಶ ಬಾಬುಗಳು ನುಡಿದದ್ದೇನೆಂದರೆ.— ಬಿನ್ನ ಬಿನ್ನ ಜನರ ಮುಖಗಳನ್ನು ನೀವು ಜ್ಞಾಪಕದಲ್ಲಿಡುವಂತೆ ನಾನು ಈ ಲೆಕ್ಕಗಳನ್ನಾದರೂ ಮನಸ್ಸಿನಲ್ಲಿಟ್ಟುಕೊಳ್ಳುತ್ತೇನೆ. ಆ ಅಂಕಿಯ ಮೇಲೆ ನಾನು ಧ್ಯಾನಸ್ಥನಾಗಿರುವದರಿಂದ ಅಂಕೆಗಳು ನನಗೆ ಕಣ್ಣುಚ್ಚಿದ ಕೂಡಲೆ ಕಾಣುತ್ತವೆ ಒಮ್ಮೊಮ್ಮೆ ಕಣ್ಣುಚ್ಚಿದೊಡನೆ ೪ ಸಾವಿರ ಅಂಕಿಗಳು ನನಗೆ ಕಾಣುತ್ತವೆ.

[ಟೀಪು — ಈ ಹಕೀಕತು ಮುಂಬಯಿಯ "ಕ್ರಾನಿಕಲ್" ಪತ್ರಿಕೆಯ ತಾ ೪-೨-೨೧ನೇ ಸಂಚಿಕೆಯಲ್ಲಿ ಪ್ರಕಟವಾಗಿದೆ.]

ವಿವಿಧ ಸಂಗ್ರಹ.

(೫ ನೇ ಪಾನಿನಿಂದ ಮುಂದರಿಸಿದ್ದು)

ಗವರ್ನರ ಕಾಂಸಿಲಿಯು ಹಿಂದುಸ್ಥಾನದಲ್ಲಿ ಹಬ್ಬುತ್ತಿರುವದರಿಂದಲೂ ಈ ಹಣವು ಕೊಡಲ್ಪಡಲಿಲ್ಲ. ಇರಾಣ ಸರಕಾರದ ಒಪ್ಪಿಗೆಯಿಂದ ಈ ಕೃತ್ಯ ನಡೆಯಲಿಲ್ಲ ಇತ್ಯಾದಿ. ಈ ಹಣವನ್ನು ಇರಾಣ ಸರಕಾರವು ತೆರಕೊಡುವದಿಲ್ಲೆಂದು ಬ್ರಿಟಿಶರು ತಿಳಿದು ಇರಾಣ ಸರಕಾರಕ್ಕೆ ಒತ್ತಾಯ ಮಾಡುತ್ತಿದ್ದಾರೆ ಇರಾಣಿಯರು ಇರಾಣದಲ್ಲಿ ಬ್ರಿಟಿಶರ ಪಾರುಪತ್ಯವಿರಬಾರದೆಂದು ಮುಂಚಿನಿಂದಲೇ ವಿರೋಧಿಸುವ ಸಂಘದವರು. ಅದರಿಂದ ಬ್ರಿಟೀಶರಿಗೂ, ಇರಾಣಿಯರಿಗೂ ಅಸ್ಟ್ರೇಲಿಯಾ ಹಿಂದು ಕಿಡಿ ಹಾರುವದೆಂದು ಎಲ್ಲರೂ ಹೇಳುತ್ತಾರೆ.

ಅದ್ಭುತ

— ಗುಜರಾಥ ಪ್ರಾಂತದ ಪಾಟಣ ಗ್ರಾಮದಲ್ಲಿ ಜೇ. ಕೇ. ಶಹಾ ಎಂಬ ೩|| ವರ್ಷ ವಯಸ್ಸಿನ ಬಾಲನಿದ್ದಾನೆ. ಅತನು ೧೩೩ ರತ್ತಲು ತೂಕದ ಕಬ್ಬಿಣ ಸರಪಣಿಯನ್ನು ತುಂಡರಿಸಿದನು. ಸೂಟಕ್ಕೆ ಸರಪಳಿಯನ್ನು ಸುತ್ತಿ ಸರಪಳಿಯ ಇನ್ನೊಂದು ತುದಿಯನ್ನು ಒಂದು ಕೋಲಿಗೆ ಕಟ್ಟಿದರೆ, ಕಾಲುಗಳಿಂದ ನೂಕಿ ಸರಪಳಿಯನ್ನು ತಹನು ತುಂಡರಿಸುತ್ತಾನೆ. ಮುಂಬಯಿ "ಕ್ರಾನಿಕಲ್" ಪತ್ರಿಕೆಯಲ್ಲಿ ಈ ಬಾಲಕನ ಚಿತ್ರವು ಕೊಡಲ್ಪಟ್ಟಿದೆ

— ಎಂಟ್ಲರ್ದಿಂದೊಳಗಿಂದ ಮ್ಯು-ಬಿಯ ಸಾಪ್ತಕಾರರಾದ ರಾ| ಕರ್ನವರು ಮ ವಿಶ್ರಾಮ ಹಿಮಾಚಿಯವರು ಹಿಂದು ಮೋಟಾರನ್ನು ಭದ್ರವಾಗಿ ಕಟ್ಟಿಕೊಂಡಿದ್ದರು ಆ ಮೋಟಾರು ೫೫ ದಿನಗಳ ಮೇಲೆ ಮುಂಬಯಿಗೆ ಬಂದು ತಲ್ಪಿತು ಆ ಕಾಲಕ್ಕೆ ಮೋಟಾರನ್ನು ಬಿಚ್ಚಲು, ಹಿಂದು ಸಣ್ಣ ಬೆಕ್ಕಿನ ಮರಿ ಹೊರಬಿತ್ತು. ೫೫ ದಿನಗಳಲ್ಲಿ ಒಂದು ತಟಕು ಸಹ ನೀರು ಕೊಳ್ಳದೆ ವಾಯು ಭಕ್ಷಣದಿಂದಲೇ ಜೀವಿಸಿದ ಬಗೆ ಹೇಗೆ? ಪ್ರಾಣಿಶಾಸ್ತ್ರಿಗಳು ವಿಚಾರ ಮಾಡತಕ್ಕ ವಿಷಯ

— ಮೈಸೂರ ಸಂಸ್ಥಾನದೊಳಗಣ ಶಿಕಾರಿಪುರ ತಾಲೂಕಿನ ಒಂದು ಗ್ರಾಮದಲ್ಲಿ ಥಕ್ಕನೆ ಅಗ್ನಿಸಂಚಾರವಾಗಿ ೪೦೦ ಮನೆಗಳು ಒಮ್ಮೆಲೇ ಸುಟ್ಟು ಬೂದಿ ೩೦೦೦ ಮಂದಿಗಳು ನಿರಾಶ್ರಿತರಾಗಿದ್ದಾರೆ. ೩೦ ಮಂದಿಗಳು ಸುಟ್ಟುಕೊಂಡು ಮಡಿದರು. ಮೈಸೂರು ಸರಕಾರವು ದುಃಖನಿವಾರಣ ಉಪಾಯಗಳನ್ನು ಕೈಕೊಂಡಿದೆ. ತೀರ್ವ ತಹಕೀಕಾತ ನಡೆಯುತ್ತಿರುವ ತಗಾವಿ ಕೊಡಲಾಗುತ್ತದೆ. ದನಗಳೂ ನಷ್ಟ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗ.

ಗೇರಸೊಪ್ಪಾ
ಜೋಗಿಗೆ
ರೆಗ್ಯೂಲರ್
ಸರ್ವೀಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಶಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಶಿ- ಸಿದ್ದಾಪುರ- ಗೇರಸೊಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. **M. Manjappa.**
PROPRIFTOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಲಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಸಿಯ. ಹೋಗಿ ಮಾಡಿದರೇ ಮರ್ಧನಶಕ್ತಿವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಬರವಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚೆನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿನಸವೇ ಬರುವದು. ಶೌಚ ಸಾಪ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ ಆಜನ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲ ಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧ ४ ೦ ೩ ಬಾಟ್ಲಿಗೆ ३-೮ ಡ್ಜ ಜನವಿಗೆ ೧೩-೦ ೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗ ಪದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎಡೆಸೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪ್ರಮೇಹ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ. ಧಾತು ಶುದ್ಧವಾಗಿ ಘಟ್ಟ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ (೫೨) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ ನೋಡಿಕೊಳ್ಳಿರಿ

ಮುಂಜಾನೆ ೨ ತೊಲಿಯು ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಷ್ಟೋ ಅಥವಾ ಅಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀಬಚ್ಚೆ ವಿಲ್ಲ ೨೧ ದಿವಸ ಸಾಗುವಷ್ಟು ಅಳ ತೊಲೆಯ ಒಂದು ಡಬ್ಬಿಗೆ ೫| ರೂ ೩ ಡಬ್ಬಿಗೆ ೧೪| ರೂ ೬ ಡಬ್ಬಿಗೆ ೨೭ ರೂ, ೧೨ ಡಬ್ಬಿಗೆ ೫೦ ರೂ. ವ್ಹಿ ಪಿ ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು

झंडूचें

द्राक्षासव-

एक रतलास
किंमत १॥ रुपये

रामबाण औषध

सर्दि घालविणारें
भूक वाढविणारें
शौच्यास साफ करणारें
झोंप आणणार
शक्ति देणारें
तेजस्वीपणा आणणारें

पिण्यास रुचिकर

वैद्य सल्ला मागवा

झंडु फार्मास्युटिकल वर्क्स लिमिटेड

मुंबई नं. १४

ऐजट— मेसर्स पंडित आणी कंपनी,
तीर्थहळ्ळी

शिर्सि एजंट- एस. एन धारेप्पा आणि ब्रदर

ಹಿಂದುಸ್ಥಾನದಲ್ಲಿ ಅತ್ಯಂತ ಅಗ್ರವಾದ
'ನೆಶನಲ್ ಇನ್‌ಶೂರನ್ಸ ಕಂಪೆನಿ, (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 5 40,044 ರೂಪಾಯಿಗಳ ಲಾಭವು ದೊರೆತಿದೆ

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 0 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ ಬೋನಸ ಕೊಟ್ಟಿರುವೆವು

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ತೆರಬೇಕೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,**

ಬಿ ಸಿ. ಶಿರಾಳಕೊಪ್ಪ, *Branch Secretary*
ಕೋಠಾರಿ ಬಿಲ್ಡಿಂಗ, Alico Building
ಹುಬ್ಬಳ್ಳಿ. *Hornby Road,*
BOMBAY

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿಕಣ ಜರಿ ಸೀರೆ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಟೀ ಯವರ

ಸುಗಂಧಿ ನ್ಯಶದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರು ಜಿಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ. ಬಾ ೫೧೦, ಪಾರ್ಕಟೌನ, ಮದರಾಸ

ಇದು " ಕರಾಮತ " ಗಾಣ—
ನೀವು ಹಾರೈಸುತ್ತಿದ್ದ ಕಬ್ಬಿಣ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ.



ಈ ಗಾಣದಿಂದ ಶೇಕಡಾ ೭೫ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು, ಬಾಳಿಕೆಯದು ವಿಶೇಷ ಯಂತ್ರಸಾಮಗ್ರಿಯೂ ಇಲ್ಲ ಸಾಮಾನ್ಯ ರೈತರು ಇದನ್ನು ಸರಿಪಡಿಸಬಲ್ಲರು. ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ಬೇಅರಿಂಗು ಗನ್‌ಮೆಟಲ್‌ದವು ಅವನ್ನು ಎಲ್ಲವೂ ಒಂಟೆ ರದಿನಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ಆಕ್ಸಲುಗಳು ಉಕ್ಕಿನವು ಎಷ್ಟೋ ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು

ಈ ಉತ್ತರ ಕನ್ನಡ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ
೧೦-೧೨ ಕರಾಮತಗಾಣಗಳು ದುಡಿಯುತ್ತಿವೆ ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ.
ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು ಬೆನ್ನುನೋವು, ಸಂಧಿವಾತ, ಚಳಿ, ಕೆಮ್ಮು, ಸುಟ್ಟಗಾಯ ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣ ಸಿಗುತದೆ ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು ' ನೋವು ಚಿಕ್ಕದೆಂದು ಯಾರೂ ತಿರಸ್ಕರಿಸಲಾಗದು ಚಿಕ್ಕ ನೋವಿನಿಂದಲೇ ದೇಹಕ್ಕೆ ಸುಖ ದೊರೆಯುವದಿಲ್ಲ, ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಇಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ ೦—೧೦—೦

ಎಲ್ಲ ಕಡೆಯಲ್ಲಿಯೂ ಸಿಗುತ್ತದೆ. ಅಥವಾ **ಅಮೃತಾಂಜನ ಡಿಪೋ,**
ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, MARCH 2ND 1933.

ವರ್ಷ ೧೨

ಕಾನಡಾವೃತ್ತ.

ಸಂಚಿಕೆ ೨೫

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಟ.ಸೇಯಾರ್ದಾರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೫ ಎಮ್ ಉದ್ದ) ೫ ಸಾಲುಗಳವರೆಗೆ ರೂ. 1-0.
ಆ ನಂತ್ರ ಪ್ರತಿಸಾಲಿಗೆ 0-2-0.
ಜಾಹಿರಾತಿನ ಸಾಲು ಎಷ್ಟು ಹೊತ್ತಿರುವವೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
(ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨ ಮಾರ್ಚ ಎಪ್ರಿಲ ಸನ್ ೧೯೩೩ನೇ ಇಸವಿ)

ಹೊಸ ಅಂಗಡಿ! ಹೊಸ ಮ್ಹಾಲು!!

ಕುಮಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟೆಂಟ ಔಷಧಗಳು, ಕಾಜಿನ ಸಾಮಾನು, ಮುಂತಾದ ಎಲ್ಲ ತರವಾರ ಮ್ಹಾಲು ಬಲು ಅಗ್ಗವಾಗಿ ದೊರೆಯುತ್ತವೆ!

ಕಿರಕೋಳ ವ್ಯಾಪಾರಿಗಳಿಗೂ ಮುನಾಫೆ ಸಿಗುವಂತೆ ಸ್ಪೇಶಲ್ ಹೋಲ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮ್ಹಾಲು ಪಡೆಯಲು ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ಯಾತ್ತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನ್ನಡ)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಸೀಸಿ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तन्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातन्हेच्या डिझायनचीं रंगी-बेरंगी चादरें, फॅशनेबल बाथ टोवेल, चौक, लहान--मोठे पंचे, सोलपाट, चीलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:--आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:- मेसर्स गोविंद माधव शेणवि, फोवकार अँड सन्स.
पेठ— कोडीबाग / कारवार.

ಜಂಗಳೂರ ತಂಬಾಕಿನ ತಾಜಾ ನಶ್ಯ! ಸುಲಭ ಕ್ರಯ!!

೬೦ ವರ್ಷಗಳಿಂದ ಕರ್ನಾಟಕದಲ್ಲಿ ಪ್ರಸಿದ್ಧಿ ಹೊಂದಿದ ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ ಮೋಸ ಹೋಗಬೇಡಿರಿ!!

ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ ೧ ನೇ ನಶ್ಯದ ಪುಡಿ ೨೪ ತೊಲೆ ಶೇರು ೧ರ ರೂ. ೧।
ನಂ ೨ ನೇ ೧-೨-೦
ನಂ. ೩ ನೇ ೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ— ನಮ್ಮ ನಶ್ಯವು ಉತ್ಕೃಷ್ಟವೆಂಬವರ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟು ಗಳು ದೊರಕಿವೆ.

ವಿಳಾಸ— **ಪುಂಡಲೀಕ ನಾಗ ಶೆ.**

FOR

HAND AND POWER

-- LOOMS --

SHUTTLES

Roughest and even Finest COUNTS Steel & Brass REEDS

COTTEN HEALDS
WIRE HEALDS
BOBBINS
OIL PAINTS
AND
EMERY PAPERS

Ca ... ta

exce ... cic ... rec ... e... s

For

P. P. TRIVEDI & CO.,

BRUCE Street, Fort BOMBAY

ನನ್ನ ಶಾಸ್ತ್ರೀಯ ವಾದ

ಶಾರೀರಕ ಶಿಕ್ಷಣ

ಈ ಪುಸ್ತಕವನ್ನ ನ ... ನನ್ನ ಕಷ್ಟದ ಅಂಗಸಾಧನವನ್ನು ತೋರಿಸುವ ಸೋಗಸ ... ರ ಮಪಲ್ಲದೆ ಅಂತಹ ... ದ್ದ ಕವ ಸೇ ... ಬಂಗ ... ನೆಯೂ ಕೊಡಲ್ಪ ... ನ ... ಶ್ರೆ ಕರುಯು ... ದುಗಳ. ಆದರೆ ... ಈ ಪುಸ್ತಕವನ್ನು ಓದಿ ಪ್ರತಿಯೊಬ್ಬರು ... ಹಾಗೆ ಓಲವಡಿಸಿಕೊಳ್ಳಬೇಕು ... ನ್ನು ತಿಳಿಯ ... ದಾಕಲ ... ವನ್ನು ಕಳ ... ಮಾತ್ರಕ್ಕೆ ... ಸ್ತಕವನ್ನು ನಿಮಗೆ ಉಚಿತವಾಗಿ ಕಳಿಸಿಸುತ್ತೇವೆ ... ನ್ನು ಕಳದುಕೊಳ್ಳದೆ ಕಾಲ ... ದೇಶಿ ... ಯಲ್ಲಿ ... ಬರೆಯಿರಿ

ಪ್ರೊಫೆಸರ್ ಎಂ ವಿ ಕೃಷ್ಣರಾವ್,

... ಬೆಂಗಳೂರ ಸಿಟಿ

ಗೋಪಾಳ ಸಖಾರಾಮ

ಮತ್ತು ಕಂಪನಿ.

ಕೆಂಬಕರ್ ರೋಡ್,

ಕಾಳಬಾದೇವಿ ರೋಡ,

ಮುಂಬಯಿ. ನಂ ...

ಮುಂಬಯಿಯಲ್ಲಿ ಸಿಗುವ ... ಉತ್ತಮ ವೃತಿಯ ... ರೋಕ ಖರೀದಿ ಮಾಡಿ ... ಹೆಚ್ಚಿಗೆ ಕೊಳ್ಳುವದಲ್ಲ ... ಗುಕದ ... ಟೆಯಲ್ಲಿರುವ ಧಂದೆ ... ಡುಕಿದೆ ಗಿರಾಕಿಗಳಿಗೆ ಅನ ... ಯ ..., ಆಭೂಷಣಗ ಮಂತೆ ..., ... ಕೂಡಲೆ ತತ್ಪರತೆಯಿಂದಲೂ ... ಕಳಿಸುವ ವ್ಯವಸ್ಥೆ ಮಾಡು ... ಬಗ್ಗೆ ಕಟಲಾಗು ತರಿಸಿಕೊಳ್ಳಿ ... ಬಿಗು

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ನೋಡಲಿಕ್ಕೆ ಗಂಭೀರವಾಗಿಯೂ ... ಅಡಕವಾಗಿಯೂ ಇರುವಂತೆ, ಚಿಕ್ಕ ಸ್ಟೈಲನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು ... ಧೂಳು ಸೇರದಂತೆ ಹಿಂಭಾಗದಲ್ಲಿ ... ಗ್ಲಾಸ ಡೂಮ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ... ಮೂವೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿ... ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ... ನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ... ಸಿರುವ ೧೫ ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ — ಫೌಂಟನ ಪೇನಾ ೧, ... ೧ ವಜ್ರದ ಗುಂಡಿಗಳು ೪ ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ... ಪೇನಾ ಕತ್ತರಿ ೧ ರೋಲ್ ಗೊಲ್ಡ್ ಭಂಗಾರದ ಉಂಗುರ ೧ ರೋಲ್ ಗೋಲ್ಡ್ ... ೧, ಪಂತದ ಬಾಚಣಿಗೆ ೧, ಕೈ ಗುಂಡಿಗಳ ಸಟ್ ೧, ಕೈ ವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ... ಯಾದ ... ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ ಬರೇ ರೂ ೪-೮-೦

ವಿಳಾಸ — **ಇಂಗ್ಲೀಷ ಎಂಪ್ರೋರಿಯಂ,**

ಪೋಸ್ಟ ಬಾಕ್ಸ ನಂ ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿ ... ತಯಾರಾದದ್ದು ಇದಕ್ಕೆ ೧೪ ಕ್ಯಾರೆಟ್ಟಿನಂಥ ನಿಬ ... ಇದರ ಬರೆಯುವದರಿಂದ ಅಕ್ಷರಗಳು ... ಸ್ಪಷ್ಟವಾಗಿ ಇರುವವು ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ್ ಪೇನಾ ೧ ಕ್ಕೆ ರೂ. ೨-೮-೦

ವಿಳಾಸ — ಪೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ ೨೭ ಮದರಾಸು

ಕಲ್ಪತರು ಮಿಶ್ರಣ

ಮಲೇರಿಯಾ ಸ್ಪೆಸಿಫಿಕ್

ಎಂದರೆ,

ಚಳಿ ಜ್ವರದ ನೋಲಿ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರ ಶುದ್ಧವಾಗಿ ತಯಾರಿಸಲ್ಪಟ್ಟಿದೆ ಇದರ ಗುಣವನ್ನು ಆಯುರ್ವೇದ ವಚನದಿಂದಲೇ ತಿಳಿಯಬಹುದು -

ವಿಷಜ್ವರ ... ನಾಶಕ ... | ಅನಾಘ್ಯಾ ... ||

... ವಿಷಮ ಜ್ವರಾನ್ | ಹಂತಿ ಜ್ವರಾತಿಸಾರ ... ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮದ್ದಾಗಿರುತ್ತದೆ ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರು ... ಕ್ಷೇಮ ದಾಯಕವೆಂದು ಸಿದ್ಧವಾಗಿರುತ್ತದೆ ಜಂಗಲದೊಳಗಿನ ಹಳ್ಳಿಗರು ಕಲ್ಪತರು ಮಿಶ್ರಣದ ಒಂದು ... ನ್ನು ಜೊತೆಗಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು ಇಂಗ್ಲಿಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರಗಳೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

... ಔನ್ಸಿನ ಬಾಟ್ಲಿಗಕ್ಕೆ ರೂ ೧ ೬-೦

ತಮ್ಮ ಪತ್ರ **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸವರ್ಥ ಫಾರ್ಮಸಿ, ಗದ್ದೆಕೇರಿ, ಮಂಗಳೂರು

ಕಾರವಾರ ಏಜಂಟ — ಕಲಬಾಗ ಮಾಧವ ರಾವ ಕ್ಯಾಸಭಾಗ

ನಮ್ಮ ನೇಕಾರರು ಹೆಬ್ಬೆಟ್ಟು ಕಳಕೊಂಡ ಬ್ರಿಟಿಶರ ಪೀಡನೆಯ ಇತಿಹಾಸ.

ಕಳೆದ ೧೫ ನೇ ತಾರೀಖಿಗೆ ಮುಂಬಯಿ ಕಾಯಿದೆ ಕೌನ್ಸಿಲದಲ್ಲಿ ಸಿಂಧ ಪ್ರಾಂತದ ಸಭಾಸದರಿಂದ ಮಿ| ನೂರ ಮಹಮ್ಮದ ಬಾಲೆಶ್‌ರವರು ಬಜೆಟ್ಟಿನ ಚರ್ಚೆ ನಡೆದಾಗ ಒಂದು ಮರ್ಮಭೇದಕವಾದ ಮಾತನ್ನಾಡಿದರು. ನಮ್ಮಲ್ಲಿಯ ನೇಯಿಗೆಯನ್ನು ನಿರ್ಮೂಲಿಸುವದಕ್ಕಾಗಿ ನಮ್ಮ ಕಡೆ ನೇಕಾರರ ಹೆಬ್ಬೆಟ್ಟನ್ನು ಬ್ರಿಟಿಶರು ಕೊಯ್ದು ಬಿಟ್ಟರೆಂದು ಉದ್ಗರಿಸಿದರು. ಗೃಹ ಮಂತ್ರಿಗಳಾದ ಮಿ| ಹೋಟ್ಸನ್‌ರವರು ಸಿಡಿಸಿಡಿ ಸಿಡುಕಿದರು, ಮೇಜಿನ ಮೇಲೆ ದೊಡ್ಡದಕ್ಕೆ ಗದ್ದಲ ಮಾಡಿದರು, ಈ ಆರೋಪವನ್ನು ಸಂಪೂರ್ಣವಾಗಿ ಸುಳ್ಳೆಂದು ಆವೇಶದಿಂದ ನುಡಿದರು. ಆದರೂ, ಮಿ| ಬಾಲೆಶ್‌ರವರು ಹಿಂಜರಿಯಲಿಲ್ಲ. ಅವರು ಸಹ ಆವೇಶದಿಂದ ನುಡಿದದ್ದೇನಂದರೆ,— "ನಾನು ಹೇಳಿದ ಮಾತು ಇತಿಹಾಸದಿಂದ ಸಿದ್ಧವಿದೆ. ಮೇಜಿನ ಮೇಲೆ ಹೊಡೆದು ಪ್ರಯೋಜನವೇನು? ವಾಸ್ತವಿಕ ಉತ್ತರವನ್ನು ಅಲ್ಲಗಳೆಯಲು ಬರುವದೇ?" ಎಂದು ಉದ್ಗರಿಸಿದರು. ಈ ಪ್ರಕಾರ ನಡೆದಾಗ ವರ್ತಮಾನಪತ್ರಗಳಲ್ಲಿ ಬ್ರಿಟಿಶರು ನಮ್ಮಲ್ಲಿಯ ನೇಯಿಗೆಯನ್ನು ನಿರ್ಮೂಲಿಸಿದ ಕುರಿತು ಐತಿಹಾಸಿಕ ಆಧಾರಗಳು ಪ್ರಕಟಿಸಲ್ಪಟ್ಟಿವೆ. ಪರದೇಶಿ ಅರಿವೆಯ ಬಹಿಷ್ಕಾರದ ವಿಷಯವು ಅಖಿಲ ಭರತ ಖಂಡದಲ್ಲಿ ದೊಡ್ಡದೊಂದು ವಿಷಯವಾಗಿದೆ. ಬಂಗಾಲದಲ್ಲಿ ಶ್ರೀ| ಸುಭಾಷಚಂದ್ರ ಬೋಸರವರ ಅಧಿಪತ್ಯದಲ್ಲಿ ಅರಿವೆಯ ಬಹಿಷ್ಕಾರದ ಪ್ರಚಾರ ಪ್ರತ್ಯಕ್ಷ ನಡೆದಿದೆ. ಸದ್ಯಕ್ಕೆ ಮಹಾತ್ಮರು ಅಹಮದಾಬಾದದೊಳಗಿನ ಗಿರಣಿ ಸಾವುಕಾರರೊಡನೆ ಆಲೋಚನೆ ನಡೆಸಿದರಾಗಿ ಸುದ್ದಿ ಹಬ್ಬಿದೆ. ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಈ ವಿಷಯದ ಆಕ್ಷೇಪಗಳನ್ನು ಪರಿಹರಿಸಿ, ಬಹಿಷ್ಕಾರವನ್ನು ಸಂಘಟಿಸಲು ಪ್ರಯತ್ನಪಡುತ್ತಿದ್ದಾರೆ. ಈ ಸಮಯ ನಮ್ಮ ನೇಕಾರರ ಪುರಾತನ ವೈಭವವನ್ನು ನಾವು ಸ್ಮರಿಸಿದರೆ, ನಮಗೆ ಬಹು ಲಾಭವಾಗುವದು. ಬ್ರಿಟಿಶರಿಂದ ನಡೆದ ಅನ್ಯಾಯದ ಪರಂಪರೆ ತಿಳಿದು ಮನಶ್ಚಿಕ್ಷಣವು ಇನ್ನೂ ದೃಢವಾಗಬಲ್ಲದು. ನೆಯ್ಗೆಯೇ ಭರತ ಖಂಡದ ಜೀವನಾಧಾರವೆಂದೂ, ಆ ಉದ್ಯೋಗವನ್ನು ಹಿಂದಿನ ಸ್ಥಾನದಲ್ಲಿ ನೆಲೆಸಬೇಕೆಂದೂ ಧಾರ್ಮಿಕ ವಿಚಾರದಿಂದ ಇಲ್ಲಿ ಕಾರಭಾರ ನಡೆಸುತ್ತಿದ್ದವರೆಂಬ ಈ ಆಧಾರಗಳಿಂದ ಗ್ರಹಿಸಬಹುದು. ಆಧಾರಗಳನ್ನು ಕ್ರಮಶಃ ಕೇಳುವೆವು. ಬಂಗಾಲದ ರೋಮೇಶಚಂದ್ರ ದತ್ತರವರು ಬ್ರಿಟಿಶ ಹಿಂದುಸ್ಥಾನದ ಆರ್ಥಿಕ ಇತಿಹಾಸವನ್ನು ಬರೆದಿದ್ದಾರೆ. ಅದರೊಳಗೆ ಹಿಂದುಸ್ಥಾನದೊಳಗಿನ ನೆಯ್ಗೆಯ ಉದ್ಯೋಗವು ಹ್ಯಾಗೆ ಹ್ಯಾಗೆ ಕೊಲ್ಲಲ್ಪಟ್ಟಿತೆಂಬುದು ಅಂದಿನ ವರ್ತಕರ ಆಧಾರದಿಂದಲೂ ಹೇಳಲ್ಪಟ್ಟಿದೆ. ದತ್ತರವರು ಮೊಂಗೊಮೆರಿ, ಮಾರ್ಟೀನ್, ಲೆಕ್ಕಿ, ಸರ್ ಟಿ ಮನ್ರೋ, ವಿಲಿಯಮ್ ಬೋಲ್ಟ್ಸ್, ಬೆಂಟಿಂಗ, ಹೊರೇಸ ಹೇಮನ್ ವಿಲ್ಸನ್ ಪ್ರಭೃತಿಗಳ ವಿಧಾನಗಳನ್ನು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ಮೊಂಗೊಮೆರಿ-ಮಾರ್ಟಿನ್‌ರವರು ಬರೆಯುವದೇನಂದರೆ -

"ನಮ್ಮಲ್ಲಿ ತಯಾರಾಗುವ ಸರಕುಗಳನ್ನು ಹಿಂದಿಯರಿಗೆ ಕೊಂಡುಕೊಳ್ಳಲು ನಾವು ಒತ್ತಾಯಪಡಿಸಿದೆವು. ನಮ್ಮಲ್ಲಿಯ ಉಣ್ಣೆಯ ಅರಿವೆ-ಅಂಚಡಿಗಳು ಆವ ದಾ ತೆರಿಗೆಯಿಲ್ಲದೆ ಇಲ್ಲಿ ವಿಕ್ರಯಿಸಲ್ಪಡುತ್ತಿದ್ದವು. ನಮ್ಮಲ್ಲಿ ತಯಾರಾಗುವಂಥ ಸರಕುಗಳ ಮೇಲೆ ಶೇಕಡಾ ೧೦-೫-೨೦-೫೦-೧೦೦-೫೦೦ ೧೦೦೦ ವರೆಗೆ ಆವ ದಾ ತೆರಿಗೆಯನ್ನು ಹಾಕಿ ಸರಕುಗಳಿಗೆ ಪ್ರತಿಬಂಧಿಸಿದೆವು. ಸುರತ, ಢಾಕಾ, ಮುರ್ಶಿದಾಬಾದ ಮುಂತಾದ ಪಟ್ಟಣಗಳೊಳಗಿನ ದೇಶಿ ಉದ್ಯೋಗಗಳನ್ನು ನಾಶಮಾಡಿದ ವೃತ್ತಾಂತವು ಶೋಚನೀಯವಿದೆ. ನಾವು ನೀತಿಯಿಂದ ಈ ಪಟ್ಟಣಗಳನ್ನು ಹಾಳುಗೆಡಹಿದೆವೆಂದು ಅಭಿಪ್ರಾಯ ಪಡುವದಿಲ್ಲ. ಪ್ರಬಲರ ಬಲಾತ್ಕಾರದಿಂದಲೇ ಅವು ಹಾಳುಬಿದ್ದವು.

ಲೆಕ್ಕಿಯವರು ಬರೆಯುವದೇನಂದರೆ —"೧೮ ನೇ ಶತಮಾನದ ಕೊನೆಗೆ ಅರಳೆಯ ಅರಿವೆ-ಅಂಚಡಿಗಳೂ, ಮಲಮಲುಗಳೂ ಹಿಂದುಸ್ಥಾನದಿಂದ ವಿಲಾಯತಿಗೆ ಬಹಳೇ ರಫ್ತು ಆಗುತ್ತಿದ್ದವು. ಇವು ಸುಬಗವು ಬಹು ಅಗ್ಗವಾಗಿ ಸಿಗುತ್ತಿದ್ದವು. ಇವುಗಳ ಆಮದಿನಿಂದ ಇಂಗ್ಲಂಡದೊಳಗಿನ ಉಣ್ಣೆ ರೇಶಿಮೆಗಳ ನೇಕಾರರು ದಿಗಿಲುಬಿದ್ದರು. ಆವರಿಂದ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅದರ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅದಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ತಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೨—೦
ಅಂಚೆವೆಚ್ಚ	,,	೦—೧೩—

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

—o:—

೨ ಔನ್ಸಿಗೆ	ರೂ	೨—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

೧೭೦೦-೧೭೨೧ನೇ ಇಸ್ವಿಗಳಲ್ಲಿ ಪರದೇಶದಿಂದ ಬರು ದಾಗುವ ಅರಿವೆಗಳನ್ನು ಧರಿಸಲಾಗದೆಂದು ಕಾನೂನ ನು ಮಾಡಲಾಯಿತು. ಈ ಕಾನೂನಿನಂತೆ ಹಿಂ ದುಸ್ಥಾನದಿಂದ ಆಮದಾಗುವ ಅರಿವೆಗಳನ್ನು ಧರಿ ಸುವುದು ಶಾಸನಬಾಹಿರವಾಯಿತು. ಫ್ರಾನ್ಸ [illegible] ಹಿಂದು ಕೈವಸ್ತ್ರವನ್ನು ತೆಗೆದುಕೊಂಡು [illegible] ಮ ೧೭೭೬ನೇ ಇಸ್ವಿಯಲ್ಲಿ ಗಿಲ್ಡ ಹಾಲಿನಲ್ಲಿ [illegible] ದ್ದರು. ಅದಕ್ಕಾಗಿ ಅವಳಿಗೆ ೨೦೦ ಪವನು ದಂಡ ವಿಧಿಸಲಾಯಿತು."

ಸರ್ಜಂಟ ಬ್ರೊಡೀಯವರು ಕಂಪನಿ ಸರಕಾರದ ಗುಮಾಸ್ತರ ಅವ್ಯವಸ್ಥೆಗಳನ್ನು [illegible] ಗೆ ಬರೆದ ಪತ್ರದಲ್ಲಿ ನಿವೇದಿಸಿದ್ದಾರೆ. [illegible] ಯುವದೇನಂದರೆ — "[illegible] ನಾನಾ ಪ್ರಕಾರಗಳಿಂದ, [illegible] ಗುಮಾಸ್ತರು [illegible] ಹುತ್ತಾರೆ. ತಾವು ಕಾಯ ಸರಕುಗಳನ್ನು [illegible] ವರಿಗೆ ಗುಮಾಸ್ತರ ಪ್ರೇತ್ಯಕ್ಷ ಕಾರ [illegible] ಪರೆವುನೆಯಲ್ಲಿ ಹಾಕುತ್ತಾರೆ. ತಮ್ಮಿಂದ [illegible] ಳನ್ನು ಬೇರೆಯವರು ಮಾರದಂತೆ ಪ್ರತಿಬಂ ಧಿಸುತ್ತಾರೆ. [illegible] ಹೀಗೆಯೇ ಜನರ ತಮ್ಮಲ್ಲಿಯ [illegible] ನ್ನು ಗುಮಾಸ್ತರು ಹೇಳಿದ ದರದ [illegible] ಕೆಲವು ಬಾರಿ ಕೊಡುವ [illegible] ಹಣ ಕೊಡುವದೇ [illegible] ಆ ವ್ಯಾಪಾರದಲ್ಲಿ [illegible] ನಮ್ಮ ಮೇಲೆ [illegible] ವ ಬರುತ್ತದೆ. ಈ ವ್ಯಾಪಾರಗಳನ್ನು [illegible] ಲು ಬಾಯಿಬಿಡದು [illegible] ಭಾಗ್ಯಶಾಲಿ ಪ್ರದೇಶವು ನಿರ್ಜನವಾಯಿತು. [illegible] ಜನರು ದೇಶಾಂತರ ಮಾಡುತ್ತಿದ್ದಾರೆ. [illegible] ರದ ಸರಕು ಹುಟ್ಟುವ ಪ್ರದೇಶವು ಈಗ ದಾರಿದ್ರ್ಯಾ ಸ್ಥೆಗೆ ಮುಟ್ಟಿದೆ. ಮೊದಲು ಸಾರ್ವಜನಿಕ ಕಚೇರಿ ಯಲ್ಲಿ ನ್ಯಾಯ ನಿರ್ಣಯ ಮಾಗ [illegible] ಈಗ ಗು ಮಾಸ್ತರೇ ನ್ಯಾಯಾಧೀಶರಾಗಿ, [illegible] ಮನೆಯೇ ದೊಡ್ಡ ಕಚೇರಿ. ಜಮೀನದಾರರ ಮೇಲೆ ಇವರ ಅಲ್ಲದ ಸಲ್ಲದ ಆರೋಪ ಹೊರಿಸಿ, [illegible] ವಿಧಿಸು ತ್ತಾರೆ. ಬೇರೆಗಳ ಕಡೆಯಿಂದ [illegible] ಪ್ರಹಾರ ಮಾಡಿಸಿದರೆಂದು [illegible] ವಿಧಿಸುತ್ತಾರೆ. ನಿಜವಾಗಿ ನೋಡಿದರೆ, [illegible] ರೇ ಅಪಹಾರ ಕೃತ್ಯ ಮಾಡುತ್ತಾರೆ"

ವಿಲಿಯಮ್ ಬೋಲ್ಟ್ಸ್‌ರವರು [illegible] ರೆ:— ಕಂಪನಿ ಸರಕಾರದಿಂದ [illegible] ಪಂಗಾಗುತ್ತದೆಂದು ಈಗ [illegible] ದು ಇದರಿಂದ ನೇಕಾರರಿಗೂ, [illegible] ವರಿಗೂ ಬಹಳೇ ಕಷ್ಟವಾಗಿರುವದು [illegible] ನೇಕಾರನು ಕೊಡಬೇಕಾದ ಸರಕುಗಳ [illegible] ನನ್ನೂ, ದರವನ್ನೂ ಪ್ರತಿಶರು ತಮ್ಮ [illegible] ಅಲೋಚನೆಯಿಂದ ನಿಶ್ಚಯಿಸಿ [illegible] ಮೇಲೆ ಗುಮಾಸ್ತರಿಗೆ ಪೀಕ್ಕ ಸಿಗುತ್ತದೆ. ಗುಮಾಸ್ತರ ಪಟ್ಟಿಅಕ್ಕೆ ಬಂದು ದಲಾಲರಿಗೆಲ್ಲ [illegible] ತ್ತಾರೆ! ನೇಕಾರರಿಗೂ [illegible] ಮತ್ತು ಕಂಪನಿ ಸರಕಾರಕ್ಕೆ ಇಂತಿಷ್ಟು ದರದಿಂದ ಇಂತಿಷ್ಟು ಸರಕುಗಳನ್ನು ಇಂತಿಷ್ಟು [illegible] ಒಪ್ಪಿಸಿ ಕೊಡುತ್ತೇವೆಂದು ಕರಾರು ಬರೆಕೊಳ್ಳು ತ್ತಾರೆ. ಕೆಲವು ಹಣವನ್ನು ಸಂಚಕಾರವೆಂದು [illegible] ಡುತ್ತಾರೆ. ನೇಕಾರರಿಗೆ ದಿಕ್ಕಿಲ್ಲ. ಗುಮಾಸ್ತರು ಹೇಳಿದಂತೆ ನೇಕಾರರು ಸಹಿ ಮಾಡಿ ಕೊಡಬೇಕು. ಒಪ್ಪದಿದ್ದರೆ ಬೆತ್ತಪ್ರಹಾರ ಮಾಡುತ್ತಾರೆ. ನೇಕಾ ರರು ತಮ್ಮ ಸರಕುಗಳನ್ನು ಬೇರೆ ಯಾರಿಗೂ ಕೊಡಲಾಗದು. ಗುಮಾಸ್ತರಿಗೇ ಕೊಡಬೇಕು. ಒಬ್ಬ ಗುಮಾಸ್ತನು ಹೋದರೆ, ಇನ್ನೊಬ್ಬನು ಬರುತ್ತಾನೆ. ಗುಮಾಸ್ತರ ಹಕ್ಕುಗಳನ್ನೂ ಪೀಡ ನೆಗಳನ್ನೂ ಕಲ್ಪಿಸಲಿಕ್ಕೂ ಸಾಧ್ಯವಿಲ್ಲ. ನೇಕಾರರಿ ಗೆ ಪೇಟೆಯ ದರಕ್ಕೆ ಶೇಕಡಾ ೪೦ಕ್ಕೆ ಮಿಕ್ಕಿ ಕಡಿಮೆ ದರದಿಂದ ತಮ್ಮ ಸರಕುಗಳನ್ನು ಮಾರ ಲು ಒಪ್ಪಬೇಕಾಗುತ್ತದೆ. ನೇಕಾರರು ಈ ಕರಾ [illegible] ತರು, ಅವರಿಮಿತವಾದ ಹಣವು ಅವ ರಿಂದ ವಸೂಲವಾಯಿತು. ಮಲಬಲಕರರು (ಕಂ ಪನಿ ಸರಕಾರದ ಏಜಂಟರು) ನೇಕಾರರ ಇತರ [illegible] ಜಪ್ತಮಾಡಿ ಮಾರುತ್ತಾರೆ. [illegible] ಜನರ ಮೇಲೂ ಹೀಗೆಯೇ ಅನ್ಯಾಯ [illegible] ನಾಗೋದರಂದರೆ, ರೇಶಿಮೆ ಸುತ್ತುವ ಜನರು [illegible] ಕಂಪನಿಯವರ ಅನ್ಯಾಯವನ್ನು ಸಹಿಸಲಾರದೆ ಸುತ್ತುವ ಕೆಲಸಕ್ಕೆ ಅವಶ್ಯವಾದ [illegible] ಹೆಬ್ಬೆಟ್ಟುಗಳನ್ನು ಕೊಯ್ದುಕೊಂಡು [illegible] ಸುತ್ತುವ ಕೆಲಸವು ಗುಮಾಸ್ತರು ತಮ [illegible] ಕೊಯ್ದುಕೊಂಡರು.

೧೬-೩-೧೭೬೯ನೇಗೆ ಕಂಪನಿ ಸರಕಾರವು ಹಿಂ ದುಸ್ಥಾನದೊಳಗಿನ ತಮ್ಮ ನೌಕರರಿಗೆ ಬರೆದದ್ದೆ. [illegible] — ರೇಶಿಮೆ ಸುತ್ತುವ ಜನರಿಗೆ ಕಂಪನಿಯ [illegible] ಕೆಲಸ ಮಾಡಲು ಒತ್ತಾಯ ಮಾಡ [illegible] ಮನೆಯಲ್ಲಿ ಕೆಲಸ ಮಾಡಲು ಪ್ರತಿಬಂಧಿ [illegible] ೧೭೮೩ನೇ ಇಸ್ವಿಯಲ್ಲಿ ಹಿಂದುಸ್ಥಾನ ದೊಳಗಿನ ನ್ಯಾಯದಾನದ ಕಾರಭಾರವನ್ನು [illegible] ಒಂದು ಕಮಿಟಿಯು ನೇಮಕವಾ ಯಿತು. ಅದರು ಮೇಲ್ಕಂಡ ೧೬-೩-೧೭೬೯ನೇ ದರ ಪತ್ರದ ಬಗ್ಗೆ ಅಭಿಪ್ರಾಯ ಪಟ್ಟದ್ದೇನಂದರೆ: "ಈ ಪತ್ರದಲ್ಲಿ ಕಂಪನಿ ಸರಕಾರದ ಧೋರಣ ವು ವ್ಯಕ್ತವಾಗಿದೆ, ಬಲಾತ್ಕಾರವು ಸ್ಪಷ್ಟವಾಗಿ ಕಾಣುತ್ತದೆ. ಬಂಗಾಲದೊಳಗಿನ ಕೈಗಾರಿಕೆಗಳು ಇದರಿಂದ ನಷ್ಟವಾಗುವವು ಈ ಧೋರಣದಿಂದ [illegible] ಪ್ರದೇಶದ ಅವಸ್ಥೆಯೇ ರೂಪಾಂತರ [illegible] ಗ್ರೇಟ ಬ್ರಿಟನದೊಳಗಿನ ಕೈಗಾರಿ [illegible] ಅವಶ್ಯವಿದ್ದ ಕಚ್ಚಾ ಮಾಲನ್ನು [illegible] ಅನುಕೂಲವಾಗುವದು. ಬೆಂಕಿಂಗರವ [illegible] ಈ ಕಮಿಟಿಯು ಮುಂದೆ ಸಾಕ್ಷಿ ಕೊಟ್ಟರು. ಅವರು ಬ್ರಿಟಿಶರು. ಹಿಂದೀ ಸರಕುಗಳ ಮೇಲೆ [illegible] ಪ್ರತಿಬಂಧಕ ತೆರಿಗೆಗಳನ್ನು [illegible] ಸಿದ್ದಾರೆ. ಹಿಂದುಸ್ಥಾನದಿಂದ ಆಮದಾಗುವ ಅರಳೆ ವಸ್ತ್ರದ ಮೇಲೆ ಶೇಕಡಾ ೫ ಪವನು ೬ ಶಿಲಿಂಗ ೮ ಪೆನ್ನ ಕರವಿದೆ. ಈ ಕರವನ್ನು ಅಮದಾದ ಕೂ [illegible] ತೆರಬೇಕು. ಇಂಗ್ಲಂಡ ದೇಶದಲ್ಲಿಯೇ ಈ ಸರ ಕು [illegible] ಶೇಕಡಾ ೬೮ ಪವನು ೬ ಶಿಲಿಂಗ ೮ ಪೆನ್ನಿನಂತೆ ಮತ್ತೆ ಕರ ತೆರಬೇಕು [illegible] ಅಮದು ಮಾಡಿದರೆ, ಶೇಕಡಾ ೧೦ ರಷ್ಟು ಕರವನ್ನು ಕೊಡಲು ಕೊಟ್ಟು ಅವನ್ನು ದೇಶದಲ್ಲೇ [illegible] ಮಾಡುವದಾದರೆ ೫೭ ಪವನು ೬ ಶಿಲಿಂಗ ೮ ಪೆನ್ನ ತೆರಬೇಕು, ಮಲಮಲುಗಳನ್ನು ಪಾರ್ಲಿಮೆಂಟಿನಲ್ಲಿ ಈಗಾದ ಹೊಸ ಕಾನೂನಿನಂತೆ ಹಿಂದುಸ್ಥಾನದೊಳಗಿನ ಅರಳೆ ವಸ್ತ್ರಗಳನ್ನು ಬ್ರಿಟಿ ಶರು ಉಪಯೋಗಿಸಬೇಕಾದರೆ ಶೇಕಡಾ ೭೮ ಪವ ನು ೬ ಶಿಲಿಂಗ ೮ ಪೆನ್ನಿನಂತೆ ಕರ ತೆರಬೇಕು. ಮ ಲಮಲಗಳನ್ನು ಉಪಯೋಗಿಸುವದಾದರೆ ೩೧ ಪವ ನು ೬ ಶಿಲಿಂಗ ೮ ಪೆನ್ನ ತೆರಬೇಕು.

ಹೊರೇಸ್ ಹೇಮನ್ ವಿಲ್ಸನ್‌ರವರು ಬ್ರಿಟಿಶರ ಧೋರಣದಿಂದುಂಟಾದ ಪರಿಣಾಮವನ್ನು ತಾತ್ಪರ್ಯ ದಿಂದ ಹೇಳಿದ್ದಾರೆ. ೧೮೧೩ ನೇ ಇಸ್ವಿಯ ತನಕ ಹಿಂ ದುಸ್ಥಾನದೊಳಗಿನ ಅರಳೆಯ ಹಾಗು ರೇಶಿಮೆಯ ಸರಕುಗಳನ್ನು ಬ್ರಿಟಿಶ ದೇಶದಲ್ಲಿ ಮಾರಿಕೊಂಡು ಲಾಭ ಪಡೆಯುವದಿತ್ತು. ಇಂಥ ಸರಕುಗಳು ಇಂ ಗ್ಲಂಡ ದೇಶದಲ್ಲಿ ತಯಾರಾಗುತ್ತಿದ್ದವು. ಆದರೆ ಹಿಂದುಸ್ಥಾನದೊಳಗಿನ ಸರಕುಗಳು ಬ್ರಿಟಿಶ ಸರಕು ಗಳ ಅರ್ಧ ಬೆಲೆಗೆ ಸಿಗುತ್ತಿದ್ದವು. ಅದರಿಂದ ಶೇಕಡಾ ೭೦-೮೦ ರಂತೆ ತೆರಿಗೆಗಳು ಹೇರಲ್ಪಟ್ಟವು. ಪ್ರತಿ ಬಂಧಕ ತೆರಿಗೆಗಳಿಲ್ಲದಿದ್ದರೆ ಪೇಸ್ಲಿ-ಮೆಂಚೆಸ್ಟರಗಳೊಳ ಗಿನ ಗಿರಣಿಗಳು ಹುಟ್ಟಿದಾಗಲೇ ಸಾಯುತ್ತಿದ್ದವು. ಹಿಂದೀ ನೇಕಾರರಿಗೆ ಬಲಿಕೊಟ್ಟು ಈ ಗಿರಣಿಗ ಳು ನಿರ್ಮಿಸಲ್ಪಟ್ಟಿವೆ. ಹಿಂದುಸ್ಥಾನ ದೇಶವು ಸ್ವತಂ ತ್ರವಿದ್ದರೆ ಬ್ರಿಟಿಶ ಸಂಕುಗಳ ಮೇಲೆ ಪ್ರತಿಬಂಧ ಕ ತೆರಿಗೆಗಳನ್ನು ಹೇರಿ, ಆತ್ಮಸಂರಕ್ಷಣ ಮಾಡಿ ಕೊಳ್ಳುತ್ತಿತ್ತು. ಬಾರಾಮಹಾಲದಲ್ಲಿ ಕಂಪನಿಯ ನೌಕರರು ಮುಖ್ಯ ಮುಖ್ಯ ನೇಕಾರರಿಗೆ ತಂದು ಅವರ ಕಡೆಯಿಂದ ಅವರು ತಯಾರಿಸುವ ಸರ ಕುಗಳನ್ನು ತಮಗೇ ಕೊಡಬೇಕೆಂದು ಕರಾರು ಬರೆಕೊಳ್ಳುತ್ತಿದ್ದರು. ಪೇಟೆಯನ್ನು ಅವರ ಮನೆಗೆ ಕಳುಹಿದರೆ ವಿನಾ ೧ ಆಣೆಯಂತೆ ದಂಡ ತೆರಬೇ ಕಾಗುತ್ತಿತ್ತು. ಅವಿಗೆ ಪಾತ್ರಗಳನ್ನು ಜಪ್ತು ಮಾಡಿ ದಂಡವನ್ನು ವಸೂಲ ಮಾಡುತ್ತಿದ್ದರು. ಹೀಗೆಯೇ ಸಮಸ್ತ ನೇಕಾರರೂ ಕಂಪನಿ ನೇಕಾರರ ಅಧೀನ ರಿದ್ದರು.

ವಿವಿಧ ಸಂಗ್ರಹ.

ಇದು ಆಂಗ್ಲಾಯಿ.

ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ವಾರ್ಷಿಕ ಕರ ಹೇರಿಕೆಯ ಕಾನೂನವನ್ನು ವಿರೋಧಿಸುವಾಗ ಶ್ರೀಯು ಜಮುನಾದಾಸ ಮೆಹತಾರವರು ನಮ್ಮ ಸರಕಾರದ ಅಂತಃಕಾರಭಾರವನ್ನು ವರ್ಣಿಸಿದರು:- ಈಗ ಲೂ ಬಂಗಾಲದೊಳಗಿನ ೭೦ ಮಂದಿ ದೇಶಸೇವಕ ವೀ ರರು ಪ್ರತಿಬಂಧದಲ್ಲಿ ನರಳುತ್ತಿದ್ದಾರೆ; ಅವರಿಗೆ ಕೂಡ ಹಾಕಿ ಇಟ್ಟಿದ್ದಾರೆ; ಹೆಂಡರು-ಮಕ್ಕಳ ಮೋರೆ ನೋಡುವದು ದುರಾಪಾಸ್ತವು; ಇವರ ಅರೋ ಪದ ವಿಚಾರವಿಲ್ಲ. ಮುದಿ-ಮಕ್ಕಳ ಸಂಸಾರದ ವ್ಯ ಥೆಯು ಸರಕಾರಕ್ಕಿಲ್ಲ. ಮೂವ ದೇಶ ಸೇವಕರಂ ತು ಬಲು ಕಷ್ಟದಲ್ಲಿದ್ದಾರೆ. ಬಿಪಿನಬಿಹಾರಿ ಗಂಗೂ ಲಿಯವರಿಗೆ ಈಗ ೪ ವರ್ಷಗಳಿಂದ ಬಂದಿವಾಸವು ಪ್ರಾಪ್ತವಾಗಿದೆ. ವಂಶರೋಗದ ಮೂಲಕ ಇವರ ೩೨ ಹಲ್ಲುಗಳೂ ಕಿತ್ತೊಗೆಯಲ್ಪಟ್ಟವು; ಆದರೂ, ಪ್ರಕೃತಿಯು ಚೆನ್ನಾಗಿಲ್ಲ. ಅರವಿಂದ ಘೋಷರ ಸ ಹಕಾರಿಗಳಾದ ಪ್ರೊ| ಜ್ಯೋತಿಷಚಂದ್ರ ಘೋಷರವ ರು ಸಾಧಿವಾತದಿಂದ ನರಳುತ್ತಿದ್ದಾರೆ. ಅನೇಕಾ ವರ್ಷ ಆಹಾರವನ್ನು ಬಲಾತ್ಕಾರದಿಂದ ಜೈಲ ಅಧಿ

ಕಾರಿಗಳು ತಿಳಿಸುತ್ತಾರೆ. ಇವರ ಕೆಳವು ಕಲರಕ್ತದಾಗಿದೆ; ಇವರ ಎತ್ತರದ ಮಾನದಿಂದ ಇವರ ತೂಕವು ೧೫೦ ರತ್ತಲಾಗಬೇಕು. ಎತ್ತರವು ೫ ಫೂಟು ೮ ಇಂಚು ಇರುತ್ತದೆ. ಜಾನಜಾನ ಪಠಾಣರವರ ಅವಸ್ಥೆಯಂತು ಹೇಳತೀರದು. ಇವರು ಆಸಾಮದೊಳಗಿನ ನಾಗಾ ಪ್ರದೇಶದೊಳಗೆ ಉಳಿಯುವವರು; ದೈತ್ಯರವರು ಅಧಿಕಾರಿಗಳಿಂದ ದೊಡ್ಡ ದೊಡ್ಡ ಸರ್ಟಿಫಿಕೇಟುಗಳನ್ನು ಪಡೆದವರು. ಇವರ ಮೇಲೆ ಒಂದು ಕೊಲೆ ಮಾಡಿದ ಆರೋಪ ಬಂತು; ವಿಚಾರವಾಯಿತು; ಜಾನಜಾನರವರು ನಿರ್ದೋಷಿ ಎಂದು ಬಿಡುಗಡೆ ಹೊಂದಿದರು. ಆ ಮೇಲೆ, ನಾಗಾದ ಡೆಪ್ಯುಟಿ ಕಮಿಶನರರು ತಾ. ೨೬-೩-೩೪ ನೇಗೆ ಹುಕುಮನ್ನು ಹೊರಡಿಸಿ, ಆ ನಾಗಾ ಪ್ರದೇಶದೊಳಗಿಂದ ಅವರು ಹೊರಹೋಗಬೇಕೆಂದು ವಿಧಿಸಿದರು. ಕೊಲೆಯ ಪ್ರಕರಣದಲ್ಲಿ ಅವರಿಗೆ ಸಂಬಂಧವಿತ್ತೆಂದೂ, ಕಾಂಗೋಣದೊಳಗಿನ ಕಲ್ಲಿದ್ದಲಿಯ ಗಣಿಗಳ ಪಠಾಣ ಮುಕಾದ್ದಮರಿಗೂ, ಜಾನಜಾನ ಪಠಾಣರವರಿಗೂ ಉಂಟಾದ ಕಲಹದಲ್ಲಿ ಇವರಿಗೆ ಸಂಬಂಧವಿರುವದಾಗಿಯೂ ಡೆಪ್ಯುಟಿ ಕಮಿಶನರರು ನಮೂದಿಸಿ, ಅವರಿಗೆ ಹೊರಹೋಗಲು ವಿಧಿಸಿದರು. ಹೊರಹೋಗಬೇಕಾದರೆ, ೫೦ ಸಾವಿರ ರೂಪಾಯಿಗಳನ್ನು ಸರಕಾರದ ಬಳಿ ಠೇವಾಗಿ ಇಡಬೇಕಾಗಿಯೂ ಹುಕುಮು ಮಾಡಿದರು. ಜಾನಜಾನರವರಿಗೆ ಈ ಹಣ ಠೇವಾಗಿ ಇಡಲಾಗಲಿಲ್ಲ. ನಾಗಾ ಪ್ರಾಂತದಲ್ಲಿ ಇವರಿಗೆ ಹೇರಳ ಸಾಲ ಸಲ್ಲುವದಿದೆ; ಅದು ಈಗ ಮುಳುಗಿಹೋಯಿತು. ಹೊರಹಾಕುವ ಹುಕುಮು ಕಾಯಿದೆಯಂತೆ ಮಾಡಲ್ಪಟ್ಟಿದೆ. ೧೮೭೩ ನೇ ಇಸ್ವಿಯಲ್ಲಿ ಮಾಡಿದ "ಬೆನ್‌ಕಿಲ್ಸ ಎಕ್ಟ" ಎಂಬ ಆಕ್ಟಿನನ್ವಯ ಈ ಹುಕುಮು ಮಾಡಲ್ಪಟ್ಟಿದೆ. ಈ ಕಾನೂನನ್ನು ಉಲ್ಲೇಖಿಸಿ, ಶ್ರೀ ಬಿ. ಸಾದಾಸಮೇಧಾರವರು ಉದ್ಗರಿಸುವದೇನಂದರೆ:- "ಅಧಿಕಾರಿಗಳು ಹೇಳಿದ್ದೇ ಕಾಯಿದೆ; ಅಧಿಕಾರಿಗಳಿಗೆ ತಪ್ಪೆಂದು ತೋರುವ ಸಂಗತಿಗಳೆಲ್ಲ ತಪ್ಪಾಗಿ ಪರಿಣಮಿಸುತ್ತವೆ. ಒಂದು ರವಿವಾರದ ದಿನ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರೊಬ್ಬರು ಶುಕ್ರವಾರವೆಂದು ಅಭಿಪ್ರಾಯಪಟ್ಟರೆ, ಆ ಜಿಲ್ಹೆಯಲ್ಲಿ ಅಂದು ಶುಕ್ರವಾರವೇ. ಅದನ್ನು ಖಂಡಿಸಲು ಜನರಿಗೆ ಸಾಧ್ಯವಿಲ್ಲ; ಆಕ್ಷೇಪಿಸಲಿಕ್ಕೂ ಮಾರ್ಗವಿಲ್ಲ. ಅವರ ಮಾತೇ ಕಾಯಿದೆ. ಒಬ್ಬರು ಅಪರಾಧಿಗಳೆಂದು ಡಿ. ಮೆಜಿಸ್ಟ್ರೇಟರ ಅಭಿಪ್ರಾಯವಾದರೆ, ಅವರು ಅಪರಾಧಿಗಳೇ; ಅಪರಾಧ ಮಾಡುವ ಅವಶ್ಯಕತೆಯಿಲ್ಲ. ಈ ಪ್ರಕಾರಗಳಿಗೆ ಮೋಗಲಾಯಿಯೆಂದು ಸಂಬೋಧಿಸಲು ಮನಸ್ಸೊಪ್ಪದು. ಯಾಕೆಂದರೆ, ಮೋಗಲಾಯಿಯಲ್ಲಿ ಕಾಯಿದೆಯಂತೆ ಅನ್ಯಾಯವಾಗುವದಿಲ್ಲಾಗಿತ್ತು."

***

ಕೈಗಾರಿಕೆಗಳಿಗೆ ಸರಕಾರಿ ಸಂಭಾವನೆ.

ಮುಂಬಯಿ ಇಲಾಖೆಯಲ್ಲಿ ಕೈಗಾರಿಕೆಗಳಿಗೆ ಸರಕಾರದಿಂದ ಸಿಕ್ಕಿದ ಸಂಭಾವನೆಯ ಕಥೆಯನ್ನು ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ|| ನರಿಮಾನರವರು ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ವಿವರಿಸಿದರು. ಔದ್ಯೋಗಿಕ ಖಾತೆಯ ಅಧಿಪತಿಗಳು ಮ. ಎರೋಪಿಯನ್‌ರಿದ್ದರು. ಈ ಅಧಿಕಾರವನ್ನು ಭಾರತೀಯರಿಗೆ ಕೊಡಬೇಕೆಂದು ಹೇಳಿದ ಕೂಡಲೆ ಸರಕಾರವು ಭಾರತೀಯರಿಗೆ ನೇಮಿಸಿತು; ಆದರೆ, ಖಾತೆಗೆ ಕೊಡುವ ರಕಮನ್ನು ಕಡಿಗಿಸಿ ಬಿಟ್ಟಿತು. ಹಣವಿಲ್ಲದೆ ಭಾರತೀಯ ಅಧಿಕಾರಿಯು ಕೈಗಾರಿಕೆಗಳನ್ನು ಹ್ಯಾಗೆ ಪ್ರೋತ್ಸಾಹನ ಮಾಡುತ್ತಾನೆಂದು ನೋಡಲಿಕ್ಕೋ? ಅಥವಾ ಕೈಗಾರಿಕೆಗೆ ಆಶ್ರಯ ಕೊಡಲು ಅವನಿಗೆ ದ್ರವ್ಯಾನುಕೂಲತೆಯಾಗಬಾರದೆಂದೋ? "ಡಾ|| ಮೆಕೆಂಜಿಯು ಪ್ರೊಫೆಸರರವರು ನೆಲಗಡ್ಲೆಯ ಕಾಳುಗಳಿಂದ ಇಲ್ಲಿ ಒಂದು ಉದ್ಯೋಗವನ್ನು ಪ್ರಾರಂಭಿಸಬಹುದೆಂದು ಅಭಿಪ್ರಾಯಪಟ್ಟಿದ್ದರು. ನೆಲಗಡ್ಲೆಗೆ ಪರದೇಶದಲ್ಲಿ ಹೆಚ್ಚಿನ ಬೇಡಿಕೆಯಿದ್ದದರಿಂದ ಆ ಕುರಿತು ಕಾರಖಾನೆಯನ್ನು ಸ್ಥಾಪಿಸಲು ಸರಕಾರವು ಒಪ್ಪಲಿಲ್ಲ. ರಾಷ್ಟ್ರೀಯ ಸರಕಾರವು ಈ ಪ್ರಕಾರ ಆಚರಿಸುತ್ತಿತ್ತೇನು?" ಎಂದು ಶ್ರೀ|| ನರಿಮಾನರು ಪ್ರಶ್ನಿಸಿ ಮುಂದಾಗಿದ್ದಾರೆ. ರತ್ನಾಗಿರಿ ಮತ್ತು ಉತ್ತರ ಕನ್ನಡ ಜಿಲ್ಹೆಗಳಲ್ಲಿ ಗೇರಬೀಜಗಳು ವಿಪುಲವಾಗಿ ಸಿಗುತ್ತವೆ. ಅವುಗಳಿಂದ ಎಣ್ಣೆ ತೆಗೆಯುವ ಕಾರಖಾನೆಗಳನ್ನು ಹೊರಡಿಸಬಹುದು; ಆದರೆ, ಆ ಕುರಿತು ಏನೂ ಪ್ರಯತ್ನಗಳು ನಡೆದಿಲ್ಲ. ಸಕ್ಕರೆ ಕಾರಖಾನೆಯ ಉದ್ಯೋಗವಾದರೂ ಹೀಗೆಯೇ. ಸಕ್ಕರೆ ಮಾಡುವಾಗ ಹುಟ್ಟುವ ಬೇರೆ ಪದಾರ್ಥಗಳಿಂದ ಬೇರೆ ಬೇರೆ ಜಿನಸುಗಳನ್ನು ಮಾಡಲು ಅಬಕಾರಿ ಖಾತೆಯು ಪ್ರತಿಬಂಧ ಬರುತ್ತದೆ. ಅದನ್ನು ಪರಿಹರಿಸಲು ಸರಕಾರವು ಒಪ್ಪುವದಿಲ್ಲ. ಬೆಂಕಿಪೆಟ್ಟಿಗೆಯ ಕಾರಖಾನೆಗಳ ಅವಸ್ಥೆಯೂ ಇದೇ. ಬ್ರಿಟಿಶರ ಬಂಡವಲಿನಿಂದ ಸ್ವೀಡಿಶ್ ಕಂಪನಿಯು ಸ್ಥಾಪಿತವಾಗಿದೆ. ಸರಕಾರವು ಈ ಆಪ್ತತ್ವದ ಮೂಲಕ ಅವರಿಗೆ ಸಮುಕ್ತ ಅನುಕೂಲ್ಯಗಳನ್ನು ಪೂರೈಸುತ್ತದೆ. ಜಂಗಲ ಖಾತೆಯಿಂದ ಅವಶ್ಯವಿದ್ದ ಕಟ್ಟಿಗೆಯು ಗಾಡಿ ೧ಕ್ಕೆ ರೂಪಾಯಿ ೧ರಂತೆ ಕೊಂಡು ಕೊಡಲಾಯಿತು. ಈ ಕಟ್ಟಿಗೆಯು ಬೇರೆ ಕಾರಖಾನೆಯವರಿಗೆ ಸರಕಾರವು ಕೊಡಲೊಪ್ಪಲಿಲ್ಲ. ಈ ಕುರಿತು ಜನರು ದೂರಲು ಸರಕಾರವು ಗಾಡಿ ೧ಕ್ಕೆ ರೂಪಾಯಿ ೨ರಂತೆ ಆ ಕಟ್ಟಿಗೆಯನ್ನೂ ಮಾರತೊಡಗಿತು. ಡೆವ್ಹಲಪ್‌ಮೆಂಟ ಖಾತೆಯವರು ಅಂಬರನಾಥ ಎಂಬಲ್ಲಿ ಗಿಂಡಿ ಕಟ್ಟಲಿಕ್ಕೆ ಸ್ಥಳ ಕೊಟ್ಟರು. ಕೈಗಾರಿಕೆಗಳ ಸಂಭಾವನೆಯು ಇಷ್ಟು ಸಾಲದೇನು? ಶ್ರೀ|| ನರಿಮಾನರವರು ಗೋವೆಯಲ್ಲಿ ಬ್ರಿಟಿಶ ರಾಜ್ಯವಿಲ್ಲದಿದ್ದಕ್ಕೆ ಅಲ್ಲಿಯವರ ಭಾಗ್ಯವೆಂದರು. ಯಾಕೆಂದರೆ, ಅಲ್ಲಿ ಬೆಳೆಯುವ ಗೇರಬೀಜಗಳಿಂದ ಅಲ್ಲಿಯ ಸರಕಾರವು ಎಣ್ಣೆ ತೆಗೆಯುವ ಕಾರಖಾನೆಗಳನ್ನು ಪ್ರಾರಂಭಿಸಿದೆ.

***

ಈಗಿನ ಪ್ರಾತರ್ವಿಧಿಯ ಅನರ್ಥ.

ಕಾಲಮಾನದಂತೆ ಜನರು ಆಚಾರಿಸಬೇಕಾದ ವಿಧಿಗಳು ಬದಲುತ್ತವೆ. ಪುರಾತನ ಕಾಲದ ಜನರು ಪ್ರಾತಃಕಾಲದಲ್ಲಿ ಎದ್ದು ಸಂಧ್ಯಾದಿಗಳನ್ನು ಆಚರಿಸಿ, ಸೂರ್ಯನಾರಾಯಣನಿಗೆ ಅರ್ಘ್ಯಪ್ರಧಾನ ಮಾಡುತ್ತಿದ್ದರು. ಈಗ ಎದ್ದ ಕೂಡಲೆ ಚಹಾಪಾನವಾಗುತ್ತದೆ; ಅನೇಕ ಮನೆಗಳಲ್ಲಿ ಉರುವಲ ಕಟ್ಟಿಗೆಯಿಂದ ಬೆಂಕಿ ಮಾಡಹೋದರೆ ವಿಳಂಬವಾಗುತ್ತದೆ; ಅದರಿಂದ ಸ್ಟೋವ್ಹುಗಳು ಆವಾಹನ ಹೊಂದಿವೆ. ಇವುಗಳಿಂದ ಮುಂಬಯಿಯಲ್ಲಿ ಅನೇಕ ಅನರ್ಥಗಳು ಒದಗಿದವು. ವಿಲಾಪಟ್ಟಣದಲ್ಲಿ ಕಳೆದ ಸೋಮವಾರಕ್ಕೆ ಒದಗಿದ ಅನರ್ಥವು ಭಯಂಕರವಿದೆ: ಒಬ್ಬ ಬ್ರಾಹ್ಮಣನಿಗೆ ಒಬ್ಬ ಹೆಂಡತಿ, ೪ ಮಂದಿ ಚಿಕ್ಕ ಚಿಕ್ಕ ಮಕ್ಕಳು ಇದ್ದರು. ಬೆಳಿಗ್ಗೆ ಸ್ಪಿರಿಟನ್ನು ಹಾಕಿ ಸ್ಟೋವ್ಹಿಗೆ ಬೆಂಕಿ ಹಚ್ಚುವಾಗ ಅವಳ ಸೀರೆಗೆ ಬೆಂಕಿ ಹತ್ತಿತು. ಬ್ರಾಹ್ಮಣನು ಅದನ್ನು ನಂದಿಸಲು ಹೋದನು. ಗಾಬರಿಯಲ್ಲಿ ಕಾಲುಚಾರಿ ಬಿದ್ದುಬಿಟ್ಟನು. ಸ್ಪಿರಿಟಿನ ಬಾಟ್ಲಿಯು ಬಿದ್ದು ಸ್ಪಿರಿಟು ನೆಲದ ಮೇಲೆ ಹಬ್ಬಿತು. ಅದಕ್ಕೆ ಬೆಂಕಿ ಹತ್ತಿ ಬ್ರಾಹ್ಮಣನ ಉಡಿಗೆ-ತೊಡಿಗೆಗಳಿಗೂ ಬೆಂಕಿಹತ್ತಿತು. ಹೆಂಡತಿಯು ಅದೇ ದಿವಸವೇ ಸೌಭಾಗ್ಯವತಿಯಾಗಿ ತೀರಿಕೊಂಡಳು. ಮಾರನೇ ದಿನ ಗಂಡನು ತೀರಿಕೊಂಡನು. ಬಾಲಕರು ಅನಾಥರಾಗಿದ್ದಾರೆ. ಪಾಪ !!

***

ಭಾಗ್ಯಶಾಲಿ ತಂದೆ !

ಬವೇರಿಂಗಾ ಪ್ರಾಂತದೊಳಗಿನ ಲಿಂಡ್ಸಹರ್ಟ್ ಗ್ರಾಮದಲ್ಲಿ ಒಬ್ಬ ದೇಸಾಯಿಗಾರರು ಜಾನಾಮಲಿಯನ್ನಿಟ್ಟಿದ್ದಾರೆ. ಅವರ ಹೆಂಡತಿಯು ಪ್ರಸೂತಳಾಗಿ ಒಂದು ಕೂಸು ಹುಟ್ಟಿತು. ಇದು ೩೩ ನೇ ಕೂಸು. ಹಿಂದಿನ ೩೨ ಮಕ್ಕಳು ಜೀವಂತರಿದ್ದು ಒಳ್ಳೇ ಆರೋಗ್ಯವಂತರಿದ್ದಾರೆ. ಈ ತಂದೆಯು ಭಾಗ್ಯಶಾಲಿಯಲ್ಲವೇ ?

***

ಬಾರ್ದೋಲಿಯ ಸಮಾಚಾರ.

ಬಾರ್ದೋಲಿ ತಾಲೂಕಿನಲ್ಲಿ ಮುಂಬಯಿ ಸರಕಾರವು ಸತ್ಯಾಗ್ರಹಿಗಳಿಗೆ ಹೆದರಿಸಲುದ್ಯುಕ್ತವಾಗಿದೆ. ಚೌಥಾಯಿ ದಂಡದ ನೋಟೀಸುಗಳ ಹಂಗಾಮು ತೀರಿತು. ಈಗ ಭೂಮಿಯನ್ನು ಸರಕಾರಜಪ್ತ ಮಾಡುವ ಕ್ರಮಗಳು ನಡೆಯಲಾರಂಭಿಸಿವೆ. ವೇಲೋಡ, ಬಾಜಿಪುರ ಗ್ರಾಮಗಳೊಳಗಿನ ಬನಿಯಾ ಜನರ ಮೇಲೆ ಸೀಮೆಯನ್ನು ಎಪ್ರಿಲ ತಾ. ೧೨ ರೊಳಗೆ ವಸೂಲ ಕೊಡದಿದ್ದರೆ, ಭೂಮಿಯು ಸರಕಾರ ಜಪ್ತ ಆಗುವದೆಂದು ಕಳೆದ ೨೬ನೇ ತಾರೀಖಿಗೆ ಶೇಟ ವೀರಚಂದ ಚೇನಾಜಿ, ಶೇಟ ದಯಾಭಾಯಿ ರಾಮಚಂದ ಪ್ರಭೃತಿ ದೊಡ್ಡ ದೊಡ್ಡ ಜಮೀನದಾರರ ಮೇಲೆ ನೋಟೀಸುಗಳು ಹೊರಟಿವೆ. ಶೇಟ ವೀರಚಂದರರು ವೇಲೋಡದ ಮಹಾಲಕರಿಗಳಿಗೆ ಪತ್ರ ಬರೆದು, ಈ ನೋಟೀಸುಗಳಿಂದ ತಾವು ಹಿಮ್ಮೆಟ್ಟಲಿಕ್ಕಿಲ್ಲವಾಗಿ ತಿಳಿಸಿದ್ದಾರೆ. ಮಹಾಲಕರಿಗಳ ಅಧಿಕಾರವು ಸತ್ಯಕ್ಕೇ ಅಂತ್ಯವಾಗಿ ಅವರು ಜನ್ಮನು ಪಡೆಯುವವರಿದ್ದಾರೆ. ಇಂಥ ಸಮಯದಲ್ಲಿ ಪ್ರಜಾದ್ರೋಹದ ಆಚರಣೆಗಳನ್ನು ಕೈಕೊಳ್ಳಬಾರದಾಗಿಯೂ, ಅವಶ್ಯವಿದ್ದರೆ, ಫರ್ಲೋ ರಜೆಯನ್ನು ಕೊಳ್ಳಬಹುದಾಗಿಯೂ ಶೇಟ ವೀರಚಂದರವರು ಸ್ನೇಹಭಾವದಿಂದ ತಿಳಿಸಿದ್ದಾರೆ. ಪಟೆದಾರರು ಬಾಜಿಪುರದಲ್ಲಿ ಸಭೆ ಸೇರಿ ಶೇಟ ವೀರಚಂದರವರಿಗೆ ಅಭಿನಂದಿಸಿದರು. ಮಿಠಾಯಿಯನ್ನು ಹಂಚಿದರು. ಇನ್ನೊಂದು ಸಭೆಯು ವೇಲೋಡದಲ್ಲಿ ಆಗಿ ಅಲ್ಲಿಯೂ ಅಭಿನಂದನಪರ ಸಭೆಯಾಯಿತು. ಶ್ರೀಮತಿ ಮಿಠಾಬಾಯಿ ಪೆಟಿಟರವರು ಭೂಮಿಯು ಸರಕಾರ ಜಪ್ತ ಆಗಿ ಹೋದರೆ, ಮಹಾತ್ಮರ ಕೈರಾಟೆಯನ್ನು ಆಶ್ರಯಿಸಿ ಕಾಲ ಕಳೆಯಬಹುದಾಗಿಯೂ ಉದ್ಗರಿಸಿ ತಮ್ಮ ಮನೆಯವರಿಗೆ ಹುರಿದುಂಬಿಸಿದರು. ಒಬ್ಬರೂ ಈ ನೋಟೀಸುಗಳಿಗೆ ಹೆದರಲಿಲ್ಲ. ಶೇಟಜೀಯವರು ಶ್ರೀ|| ವಲ್ಲಭಭಾಯಿ ಪಟೇಲರವರಿಗೆ ಪತ್ರ ಬರೆದು ತಾವು ಹಿಮ್ಮೆಟ್ಟಲಿಕ್ಕಿಲ್ಲವಾಗಿ ಅಭಿವಚನವನ್ನಿತ್ತಿದ್ದಾರೆ. ತಮ್ಮ ಮೇಲೆ ಈ ನೋಟೀಸುಗಳನ್ನು ಮೊಟ್ಟಮೊದಲು ಹೊರಡಿಸಿದ್ದು ತಮಗೊಂದು ಭೂಷಣ

(ಮುಂದೆ ೧೧ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾ ವೃತ್ತ.

ಮಿತಿ ವಿಭವ ಸಂ॥ ಚೈತ್ರ ಶು॥ ೧೨ ॥ ಸೋಮವಾರ

ದುಡ್ಡಿನ ದುರಾಶೆ.

(ಲೇಖಾಂಕ ೨)

ನಮ್ಮ ಮುಂಬಯಿ ಸರಕಾರದ ತೀರ್ವೆ ತಿದ್ದುಪಡಿ ಪದ್ಧತಿಯ ಸತ್ವಪರೀಕ್ಷೆಯನ್ನು ಬಾರ್ದೋಲಿಯವರು ನೋಡುತ್ತಾರೆ. ಹಿಂದಿನ ಲೇಖದಲ್ಲಿ ಕೆಲವು ಸಾಮಾನ್ಯ ಮೂಲ ತತ್ವಗಳನ್ನು ನಾವು ವಿವರಿಸಿದ್ದೇವೆ. ಇಂದಿಗೆ ಬಾರ್ದೋಲಿಯೊಳಗಿನ ತೀರ್ವೆ ತಿದ್ದುಪಡಿಯ ಕ್ರಮವನ್ನು ವಿವರಿಸುವೆವು. ಬಾರ್ದೋಲಿಯ ಕ್ರಮವೇ ಸರಕಾರದ ತೀರ್ವೆ ತಿದ್ದುಪಡಿಯ ಕ್ರಮವಾದ್ದರಿಂದ ಅದನ್ನು ನಾವೆಲ್ಲರೂ ಪರಿಶೀಲಿಸತಕ್ಕದ್ದು.

ತೀರ್ವೆಯನ್ನೇರಿಸಲು ಸೆಟ್ಲಮೆಂಟ ಕಮೀಶನರರು ಪ್ರಮುಖ್ಯವಾಗಿ ಬಾರ್ದೋಲಿಯಲ್ಲಿ ಜಮೀನದಾರರಿಗೆ ಕೊಡುವ ಗೇಣಿಯ ಮೊಬಲಗನ್ನು ಬೆಂಬಲಕ್ಕಿಟ್ಟುಕೊಂಡಿದ್ದಾರೆ. ಇದನ್ನು ಎಂದಿಗೂ ನಂಬಲಾಗದೆಂದೂ ಇವುಗಳಿಂದ ತೀರ್ವೆಯನ್ನು ಏರಿಸಿದರೆ ಮುಂದೆ ಅನರ್ಥವಾಗುವದೆಂದೂ ದೊಡ್ಡ ದೊಡ್ಡ ಅಧಿಕಾರಿಗಳು ಈ ಹಿಂದೆಯೇ ಹೇಳಿದ್ದಾರೆ. ತೀರ್ವೆಯ ವಿಷಯ ಮುಂಬಯಿ ಸರಕಾರವು ಸನ್ನಕ್ಕೆ ಒಂದು ಮಂಡಳವನ್ನು ನೇಮಿಸಿತು. ಆ ಮಂಡಳಕ್ಕೆ ಅಧ್ಯಕ್ಷರಾದ ಕಲೆಕ್ಟರಾದ ಮಿ॥ ಗೆರೆಟ್‌ರವರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದೇನಂದರೆ—"ನಾವು ಜಾಗ್ರತೆಯಿಂದ ಕೆಲಸ ಮಾಡಬೇಕು. ಯಾಕಂದರೆ ಗೇಣಿಯ ಕರಾರುಗಳು ಇತ್ತಟ್ಟಿನಲ್ಲಿಯೂ ಸ್ವತಂತ್ರವಾಗಿ ಒದಗುವದು ದುರ್ಲಭ. ಕೆಲವು ಬಾರಿ ಒಕ್ಕಲಿಗರೊಳಗೆ ಮೇಲಾಟವಿರುತ್ತದೆ. ಕೆಲವು ಬಾರಿ ಒಡೆಯರೊಳಗೆ ಮೇಲಾಟ ಬೀಳುತ್ತದೆ. ಹೀಗೆ ಗೇಣಿಯು ಹೆಚ್ಚು ಕಡಿಮೆಯಾಗುತ್ತದೆ. ಗೇಣಿಯ ಕರಾರುಗಳ ಮೇಲೆ ನಾವು ಒಂದು ಆಧಾರ ಹಿಡಿಯಬೇಕಾದರೆ, ಈ ಕರಾರು ಮಾಹಿತಿಯು ಬಹು ಅಂಕೆಗಳಿಂದ ಸಂಗ್ರಹಿಸಬೇಕು. ಅಲ್ಪಾಂಕದಿಂದ ಯಾವುದೇ ಧೋರಣೆಯನ್ನು ಸಂಗ್ರಹಿಸುವದಕ್ಕಿಂತ ಧೋರಣೆಯನ್ನು ಸಂಗ್ರಹಿಸದಿರುವದೇ ಸುರಕ್ಷಿತ. ಕಲವು ಧೋರಣೆಯಿಂದ ಅಸಂಬದ್ಧವಾದ ಪರಿಣಾಮಗಳುಂಟಾಗುತ್ತವೆ" ಭಡೋಚದ ಕಲೆಕ್ಟರಾಗಿದ್ದ ಮಿ॥ ಮರ್ದೇಕರರವರೂ ಇದೇ ಮಂಡಳಕ್ಕೆ ತಿಳಿಸಿದ್ದೇನಂದರೆ—"ಜೇರಾಯತ ವಗೈರೆಗಳು ತೀರ ಕಡಿಮೆ. ಅದರಿಂದ ಗೇಣಿಗೆ ಕೊಟ್ಟ ಭೂಮಿಯ ಪ್ರಮಾಣವು ವಿಶೇಷವಿಲ್ಲ. ಗೇಣಿಯ ಮೇಲಿಂದಲೇ ತೀರ್ವೆಯನ್ನು ಏರಿಸಹೋದರೆ ತೀರ್ವೆಯು ನಿತ್ಯವೂ ಏರುತ್ತಿರಬೇಕಾಗುವದು. ಇದರಿಂದ ಗ್ರಾಮಗಳಲ್ಲಿ ಅಸಂತೋಷವು ಹಬ್ಬಿ ಮುಂದೆ ಅನರ್ಥ ಒದಗುವದು."

ಈ ಪ್ರಕಾರ ತೀರ್ವೆ ತಿದ್ದುಪಡಿಗೆ ಗೇಣಿಯ ಕರಾರುಗಳನ್ನು ಆಶ್ರಯಿಸಿಕೊಳ್ಳುವದು ಅಪಾಯಕರವೆಂದು ಗೆರೆಟ್—ಮರ್ದೇಕರರಂಥವರು ಹೇಳಿಕೊಂಡರಾಗ್ಯೂ, ಸೆಟ್ಲಮೆಂಟ ಕಮೀಶನರರು ಅವನ್ನೇ ಆಶ್ರಯಿಸಿದ್ದಾರೆ. ಮೇಲಾಗಿ ಗೇಣಿಗೆ ಕೊಟ್ಟ ಸ್ಥಳದ ಮಾನವು ಮೂರರಲ್ಲಿ ಒಂದು ಪಾಲಿರ ವದಾಗಿ ಅಭಿಪ್ರಾಯ ಕೊಟ್ಟಿದ್ದಾರೆ. ಸೆಟ್ಲಮೆಂಟ ಆಫೀಸರರಾದ ಮಿ॥ ಜಯಕರರ ಪ್ರತ್ಯಕ್ಷ ಚೌಕಶಿಯಿಂದ ಮಾಡಿದ, ಮೇಲಧಿಕಾರಿಗಳಾದ ಸೆಟ್ಲಮೆಂಟ ಕಮೀಶನರರ ಸಿದ್ಧಾಂತಕ್ಕೆ ಮೂಲಾಧಾರವಾದ ರಿಪೋರ್ಟಿನೊಳಗಿನ ಯಾದಿಗಳ ಮೇಲಿಂದಲೇ ಶೇಕಡಾ ೫೦ ರಷ್ಟು ಭೂಮಿಯು ಗೇಣಿಗೆ ಹಚ್ಚಿದ್ದೆಂದು ಸ್ಪಷ್ಟವಾಗುತ್ತದೆ. ಯಾಕಂದರೆ ಗೇಣಿಗೆ ಹಚ್ಚಿದ ಸ್ಥಳದ ಲೆಕ್ಕ ಮಾಡುವಾಗ ಸೆಟ್ಲಮೆಂಟ ಆಫೀಸರರು ಗೇಣಿಯ ಅವಧಿಯನ್ನೂ, ಗೇಣಿಯ ಕ್ಷೇತ್ರವನ್ನೂ ಲೆಕ್ಕದ ಕಾರ್ಯದ ಬಗ್ಗೆ ಗುಣಾಕಾರ ಮಾಡಿದ್ದಾರೆ. ಸಾಧಾರಣವಾಗಿ ೬೦೦೦ ಎಕ್ರೆ ಕ್ಷೇತ್ರವು ಗೇಣಿಗೆ ಕೊಟ್ಟದ್ದು, ಉಳಿದ ೧೨೦೦೦೦ ಎಕ್ರೆ ಕ್ಷೇತ್ರವು ಸ್ವಂತ ಸಾಗುವಳಿಯದು ಇರುತ್ತದೆ. ಅದರೂ, ಸೆಟ್ಲಮೆಂಟ ಕಮೀಶನರ ಗೇಣಿಯ ಒಡೆಯರಿಗೆ ಸಲ್ಲುವ ದೊಡ್ಡದೊಂದು ವೇಷ ಮಾಡಿ ತೀರ್ವೆಯನ್ನೇರಿಸಲು ಸೂಚಿಸಿದ್ದಾರೆ. ಒಡೆಯರ ಮೇಲೆಯೇ ತಮ್ಮ ಕಟಾಕ್ಷವಿದೆಂದು ಸೆಟ್ಲಮೆಂಟ ಕಮೀಶನರರು ತೋರಿಸಿ, ಒಡೆಯ ಒಕ್ಕಲಿಗರಿಗಲ್ಲದಿಗೆ ಸುಳಿಯಲುದ್ಯುಕ್ತರಾಗಿದ್ದಾರೆ. ಇದೊಂದು ಮಾಯೆವೇಕ.

ಇನ್ನೆರಡು ಮೂರು ಕಾರಣಗಳನ್ನು ಅವರು ವಿವರಿಸಿದ್ದಾರೆ. ತಾಪಿ ಉಗಿಬಂಡಿಗೆ ಸರಕಾರವು ಬಹಳ ಹಣ ಖರ್ಚ ಮಾಡಿದೆ. ಉಗಿಬಂಡಿಯಿಂದ ಪ್ರಜೆಗಳಿಗೆ ಹಿತವಾಗಿದೆ. ಅದರಿಂದ ಆ ಬಗ್ಗೆಯಾದರೂ ತೀರ್ವೆಯನ್ನು ಏರಿಸಬೇಕು. ಈ ವಿಷಯವು ೧೮೯೬ನೇ ಇಸ್ವಿಯಲ್ಲಿಯೇ ನಿಶ್ಚಿತವಾಗಿರುತ್ತದೆ. ಆ ವರುಷ ಮಿ॥ ಫರ್ನಾಂಡಿಸರವರು ಬಾರ್ದೋಲಿ ತಾಲೂಕಿನಲ್ಲಿ ತೀರ್ವೆಯನ್ನೇರಿಸುವಾಗ ಉಗಿಬಂಡಿ ಮುಂದೆ ಒದಗಿಸಲಾಗುವದೆಂಬ ವಿಚಾರದಿಂದಲೇ ತೀರ್ವೆಯನ್ನು ಹೇರಿದ್ದರು. ಆ ತೀರ್ವೆಯು ಇನ್ನೂ ನಡೆದದೆ. ಉಗಿಬಂಡಿಯು ಆ ಕಾಲಕ್ಕೆ ಮಾಡಿದ ಅನುಮಾನದಂತೆ ಒದಗಿಸಲಾಗದೆ ಉಗಿಬಂಡಿಯಾಗಿದ್ದರೆ ತೀರ್ವೆಯನ್ನು ತಗ್ಗಿಸಬೇಕಾಗಿತ್ತು. ಹೊರತು ತೀರ್ವೆ ಏರಿಸಲು ಇದೇನು ಹೊಸ ಕಾರಣವಾಗದು.

ಸೆಟ್ಲಮೆಂಟ ಕಮೀಶನರರು ಕೊಟ್ಟ ಇನ್ನೊಂದು ಕಾರಣವಂತೂ ಬಹು ಭಯಂಕರವಾದದ್ದು. ಬಾರ್ದೋಲಿ ತಾಲೂಕಿನಲ್ಲಿ ಸೆರೆ ಕುಡಿಯುದೆ ಜನರಿಗೆ ೩॥ ಲಕ್ಷ ರೂಪಾಯಿ ಲಾಭವಾಯಿತಂತೆ! ಅಷ್ಟು ರಕಮು ಅಬಕಾರಿ ಖಾತೆಯಲ್ಲಿ ನಷ್ಟವಾಯಿತು. ಅದನ್ನು ತೀರ್ವೆ ಖಾತೆಯಲ್ಲಿ ಬಾರ್ದೋಲಿಯವರು ಜಮೆ ಮಾಡಿ ಕೊಡಬೇಕು.

ಸೆಟ್ಲಮೆಂಟ ಕಮೀಶನರರಿಗೆ ಈಗ ಬೇಕಾದರೆ ಹುಚ್ಚರ ಆಸ್ಪತ್ರೆಯಲ್ಲಿ ಸ್ಥಳ ಮಾಡಿಕೊಡಬಹುದು. ಇಲ್ಲದಿದ್ದರೆ ಪ್ರಜೆಗಳಿಗೆ ಕ್ಷೇಮವಿಲ್ಲ. ಮದ್ಯಪಾನದಿಂದ ಉಳಿತಾಯ ಹೊಂದಿದ ಹಣವನ್ನು ತೀರ್ವೆಯೆಂದು ಗ್ರಾಮದವರು ಸರಕಾರಕ್ಕೆ ಕೊಡಿಸಿಕೊಡಬೇಕೆಂದು, ತೀರ್ವೆ ಏರಿಕೆಯು ಯಾವದೇ ಕಾನೂನಿನಲ್ಲಿ ಹೇಳಲ್ಪಟ್ಟಿಲ್ಲ. ಯಾವದೇ ಕಾನೂನು ಬಾರ್ದೋಲಿಗೆ ಲಾಗು ಆಗದ್ದರಿಂದ ಇಂಥ ಹುಡುಗಾಟಕೆಯನ್ನು ಸೆಟ್ಲಮೆಂಟ ಕಮೀಶನರರು ಕೈಕೊಂಡರೆಂದು ತಿಳಿಯಬಹುದೇನು? ಇನ್ನೊಂದು ಕಾರಣವನ್ನು ಕೇಳಿದರೆ, ಸೆಟ್ಲಮೆಂಟ ಕಮೀಶನರ ಬುದ್ಧಿಯು ಸರಿಯಿಲ್ಲವೆಂದು ಯಾರೂ ಹೇಳುವರು. ಬಾರ್ದೋಲಿಯಲ್ಲಿ ತೀರ್ವೆ ವಸೂಲಿಗೆ ಯಾವದೇ ಪ್ರಕಾರದಿಂದ ಒತ್ತಾಯವನ್ನು ಮಾಡುವ ಪ್ರಸಂಗವು ಈ ೩೦ ವರುಷಗಳಲ್ಲಿ ಬರಲಿಲ್ಲವಾಗಿ ಸೆಟ್ಲಮೆಂಟ ಕಮೀಶನರು ನಮೂದಿಸಿ, ತೀರ್ವೆಯ ಮಾನವು ತೀರ ಕಡಿಮೆ ಇರುವದೆಂದು ಧ್ವನಿಸುತ್ತಾರೆ. ಹೊತ್ತುಹೊತ್ತಿಗೆ ತೀರ್ವೆಯನ್ನು ಸರಿಯಾಗಿ ಕೊಡುವದರಿಂದ ಮುಂದೆ ತೀರ್ವೆ ಏರಿಸಲು ಕಾರಣವಾಗುತ್ತದೆಂದು ಪ್ರಜೆಗಳಿಗೆ ಮುಂದಾಗಿ ತಿಳಿಸುವದರಿಂದ ಲಾಭವಿದೆ. ರೈತರು ಇನ್ನು ಮುಂದೆ ತೀರ್ವೆಯನ್ನು ಕಾಲಕಾಲಕ್ಕೆ ತೆರದೆ ಕೂತುಕೊಳ್ಳಲಿಕ್ಕಾದರೂ ಅನುವಾಗುವದು. ಇಂಥ ಕಾರಣಗಳನ್ನು ಮುಂದೊಡ್ಡಿ ಬಾರ್ದೋಲಿಯಲ್ಲಿ ತೀರ್ವೆ ಏರಿಸಲಾಗಿದೆ.

ಇನ್ನೂ ಒಂದು ದೃಷ್ಟಾಂತವನ್ನು ನಮೂದಿಸಿ ಮುಂಬಯಿ ಸರಕಾರದ ದುಡ್ಡಿನ ದುರಾಶೆಯ ಪುರಾಣವನ್ನು ಮುಗಿಸುವೆವು. ಸೆಟ್ಲಮೆಂಟ ಆಫೀಸರರು ಜಯಕರ ಎಂಬವರು. ಅವರು ಪ್ರಾಂತ ಆಫೀಸರರು. ಅವರು ತಮ್ಮ ರಿಪೋರ್ಟನ್ನು ಬಹು ಜಾಗ್ರತೆಯಿಂದ ಮಾಡಿರುತ್ತಾರಾಗಿ ಮುಂಬಯಿ ಸರಕಾರದಿಂದ ಶ್ರೀ॥ ವಲ್ಲಭಭಾಯಿ ಪಟೇಲರಿಗೆ ಬರೆದ ಪತ್ರದಲ್ಲಿ ನಮೂದಿಸಲಾಗಿತ್ತು. ೧೦ ತಿಂಗಳ ತನಕ ಗ್ರಾಮಾಂತರಗಳಲ್ಲಿ ಅವರು ಸಂಚರಿಸಿ, ರೈತರೊಡನೆ ಆಲೋಚಿಸಿ ತಮ್ಮ ರಿಪೋರ್ಟನ್ನು ತಯಾರಿಸಿದ್ದರಾಗಿ ಸರಕಾರವು ಶ್ರೀ॥ ವಲ್ಲಭಭಾಯಿ

ಪಟೇಲರಿಗೆ ಬರೆದಿತ್ತು. ಈ ರಿಪೋರ್ಟಿನಲ್ಲಿ ತೀರ್ವೆ ಏರಿಕೆಗೆ ಸಾಕಷ್ಟು ಆಧಾರವಿಲ್ಲೆಂದು ಸೆಟ್ಲಮೆಂಟ ಕಮೀಶನರರು ತಮ್ಮ ರಿಪೋರ್ಟಿನಲ್ಲಿ ಬರೆದಿದ್ದಾರೆ. ಇಷ್ಟಕ್ಕೇ ತಡೆದರೆ, ಅಡ್ಡಿಯಿದ್ದಿಲ್ಲ. ರಾ| ಜಯಕರರವರ ರಿಪೋರ್ಟಿನೊಳಗಿನ ೫೭ನೇ ಯಿಂದ ೬೦ನೇ ವರೆಗಿನ ಕಲಮುಗಳೊಳಗಿನ ವಿಧಾನಗಳು ತೀರ್ವೆ ಏರಿಕೆಗೆ ಪ್ರತಿಕೂಲವಾದವುಗಳೆಂದು ಸೆಟ್ಲಮೆಂಟ ಕಮೀಶನರರು ಉದ್ಗರಿಸುತ್ತಾರೆ. ರಾ| ಜಯಕರರವರು ಬಾರ್ಡೋಲಿಯೊಳಗಿನ ಅಂತು ಉತ್ಪನ್ನದ ಲೆಕ್ಕ ಮಾಡಿ ತೀರ್ವೆಯನ್ನು ಶೇಕಡಾ ೨೫ರಷ್ಟು ಏರಿಸಬಹುದೆಂದು ಶಿಫಾರಸು ಮಾಡಿದ್ದರು. ಅಂತು ಖರ್ಚಿನ ಲೆಕ್ಕ ಕೊಟ್ಟಿದ್ದಿಲ್ಲ. ಅದನ್ನು ವಿಚಾರಿಸಿದರೆ, ಅಂತು ಖರ್ಚಿನ ಲೆಕ್ಕವು ಏರಿಕೆಗೆ ಮಿಕ್ಕಿ ಹೋಗಿದೆಂದು ಸಿದ್ಧವಾದರೆ, ರಾ| ಜಯಕರರವರ ಶಿಫಾರಸು ಬಿಡ ಬೇಕಾಗಿ ನೆಲಕ್ಕುರುಳುವದೆಂದು ಸೆಟ್ಲಮೆಂಟ ಕಮೀಶನರರು ಅಭಿಪ್ರಾಯಪಡುತ್ತಾರೆ. ವಾಸ್ತವಿಕ ಸಂಗತಿಯು ಸಹ ಹೀಗೆಯೇ ಇರುವದರಿಂದ ಖರ್ಚಿನ ಲೆಕ್ಕದ ಗೋಜಿಗೇ ಸೆಟ್ಲಮೆಂಟ ಕಮೀಶನರರು ಹೋಗಲಿಲ್ಲ; ಮೇಲೊಂದು ಶಿಫಾರಸನ್ನು ರಾ| ಜಯಕರರಿಗೆ ಸೆಟ್ಲಮೆಂಟ ಕಮೀಶನರರು ಕೊಟ್ಟಿದ್ದಾರೆ. ರಾ| ಜಯಕರರು ಅಂಜುಬರುಕರು; ಶೇಕಡಾ ೨೫ರಷ್ಟು ಏರಿಕೆಯನ್ನು ಅವರು ಸೂಚಿಸಿದರು; ನಿಷ್ಕಾರಣವಾಗಿ ಸೂಚಿಸಿದರು. ಇಷ್ಟೇ ಏರಿಕೆಯು ಯೋಗ್ಯವೆಂದು ಸೂಚಿಸಿದರು. ಸರಕಾರವು ತೀರ್ವೆಯನ್ನು ಶೇಕಡಾ ೨೫ರಷ್ಟು ಏರಿಸಬೇಕೆಂದು ಸೂಚಿಸಿದ್ದರೆ, ರಾ| ಜಯಕರರು ಶೇಕಡಾ ೩೫ ರಷ್ಟು ಏರಿಸಬಹುದೆಂದು ಸೂಚಿಸುತ್ತಿದ್ದರಾಗಿ ಸೆಟ್ಲಮೆಂಟ ಕಮೀಶನರರು ಅಭಿಪ್ರಾಯಪಟ್ಟಿದ್ದಾರೆ. ಶ್ರೀ| ವಲ್ಲಭಭಾಯಿ ಪಟೇಲರವರಿಗೆ ಮುಂಬಯಿ ಸರಕಾರದಿಂದ ಬರೆದ ಪತ್ರದಲ್ಲಿ 'ಒಳ್ಳೆ ದೊಡ್ಡ ಶಿಫಾರಸು ಪಡೆದ ರಾ| ಜಯಕರರ ಅಂತರಂಗ ಸಮಾಚಾರವಿದು! ಇಷ್ಟಾಗಿ ರಾ| ಜಯಕರರ ರಿಪೋರ್ಟು ಸೆಟ್ಲಮೆಂಟ ಕಮೀಶನರರ ಹೇಳಿಕೆಯಂತೆ ತಿದ್ದುಪಡಿಯಾಗಿ ಸಾದರವಾದದ್ದಿರುತ್ತದೆ. ಬಾರ್ಡೋಲಿ ತಾಲೂಕಿನಲ್ಲಿ ತೀರ್ವೆಯನ್ನೇರಿಸಿ ಸರಕಾರವು ಅನ್ಯಾಯವನ್ನಾಚರಿಸುತ್ತದೆಂದು ಇನ್ನು ಹೇಳಬೇಕೇನು?

Wanted:- Candidates for Telegraph and Station Master's Classes. Full particulars and Railway Fare Certificate on 2 annas Stamp Apply to.— Imperial Telegraph College, Delhi.

ಸ್ಫುಟ ಸೂಚನೆಗಳು.

೧. ಶಾಂತಿ ದೇವಿಯ ಪ್ರಸ್ಥಾಪನೆಗಾಗಿ ರಾಷ್ಟ್ರಸಂಘವು ಪ್ರಯತ್ನ ನಡೆಸುತ್ತಿದೆಂದು ಲೋಕದಲ್ಲಿ ಡಂಗುರ ಸಾರಲ್ಪಡುತ್ತಿದೆ. ರಶಿಯಾ ದೇಶದ ಮೂಲಕ ಜಗತ್ತಿಗೆ ದೊಡ್ಡದೊಂದು ಗಂಡಾಂತರವುಂಟಾಗಿರುತ್ತದಾಗಿಯೂ ಲೋಕಾಪವಾದವಿದೆ. ಇತ್ತೀಚೆಗೆ ಜಿನೀವಾ ಪಟ್ಟಣದಲ್ಲಿ ಶಾಂತಿ ದೇವಿಯ ಪ್ರಸ್ಥಾಪನೆಯ ವಿಚಾರ ನಡೆದಾಗ ರಶಿಯಾ ದೇಶದ ಸೋವಿಯೆಟ್ ಸರಕಾರವು ಬ್ರಿಟಿಶಾದಿ ಶಾಂತಿ ಪ್ರಸ್ಥಾಪಕರ ಸತ್ವಪರೀಕ್ಷೆ ಮಾಡಿಬಿಟ್ಟಿತು. ಶಾಂತಿ ದೇವಿಯನ್ನು ನೆಲಿಸಬೇಕಾದರೆ, ಸೈನ್ಯವನ್ನು ಕ್ರಮವಾಗಿ ತಗ್ಗಿಸಬೇಕಾಗಿಯೂ ಹಾಗು ತಗ್ಗಿಸುವ ಕ್ರಮವನ್ನು ಆಲೋಚಿಸಬೇಕಾಗಿಯೂ ಹೇಳಿ, ತಮ್ಮ ಅಭಿಪ್ರಾಯದಂತೆ ಲೋಕದೊಳಗಿನ ರಾಷ್ಟ್ರಗಳು ಅನುಸರಿಸಬೇಕಾದ ಕ್ರಮವನ್ನು ವಿವರಿಸಿದರು. ಸೋವಿಯೆಟ್ ಸರಕಾರದ ಸೂಚನೆಗಳಂತೆ ಸೈನ್ಯಬಲವನ್ನು ತಗ್ಗಿಸಲು ಬ್ರಿಟಿಶಾದಿ ರಾಷ್ಟ್ರಗಳು ತಯಾರಿಲ್ಲ. ಈ ಸೂಚನೆಗಳನ್ನು ಅವಗಾಹನ ಮಾಡಲಿಕ್ಕೂ ತಯಾರಿಯಿಲ್ಲ. ಇಷ್ಟು ಸೋವಿಯೆಟ್ ಸರಕಾರದ ಸೂಚನೆಗಳು ವಿದೋಷಿತವಿದ್ದವು. ಫ್ರಾನ್ಸ ದೇಶದ ಲಿಟಿನವಫ್‌ರವರು ಕೆಲವು ಸೂಚನೆಗಳನ್ನು ಮಾಡಿದ್ದರು. ಈ ಸೂಚನೆಗಳಾದರೂ ಸೈನ್ಯಬಲವನ್ನು ತಗ್ಗಿಸುವಂಥವೇ. ಆದರೆ, ಸೋವಿಯೆಟ್ ಸರಕಾರದಷ್ಟು ಕ್ರಾಂತಿಕಾರಕವಾದವುಗಳಲ್ಲ. ಸೋವಿಯೆಟ್ ಸರಕಾರದ ಸೂಚನೆಗಳಿಗೆ ರಾಷ್ಟ್ರಸಂಘವು ದೊಡ್ಡದೊಂದು ಶಿಫಾರಸು ಕೊಟ್ಟಿದೆ. "ಮಾನವ ಜಾತಿಯ ಧ್ಯೇಯಗಳಿಗನುಸಾರವಾಗಿ ಈ ಸೂಚನೆಗಳಿದ್ದಾಗ್ಯೂ, ಪ್ರಕೃತ ಪರಿಸ್ಥಿತಿಯಲ್ಲಿ ಅವನ್ನು ಪಾಲಿಸಲು ಸಾಧ್ಯವಿಲ್ಲವಂತೆ" ಬ್ರಿಟಿಶ ಪ್ರತಿನಿಧಿಗಳಾದ ಕ.ಶೆನ್‌ಡೆನ್ ದೊರೆಗಳು ರಶಿಯಾ ಹಾಗು ಫ್ರಾನ್ಸ ದೇಶಗಳ ಸೂಚನೆಗಳನ್ನು ಅವಗಾಹನ ಮಾಡಿ ಮುಂದೆ ಕಟ್ಟಬಹುದಾದ ಹಡಗುಪಡೆಗಳ ಆಕಾರವನ್ನೂ, ತುಬಾಕಿ ಪಳಿಗೆಗಳ ಪರಿಭವನ್ನೂ ತಗ್ಗಿಸಿದರು, ಸೋವಿಯೆಟ್ ಸರಕಾರವು ಚೀನ ದೇಶದೊಳಗಿನ ರಾಷ್ಟ್ರೀಯರಿಗೆ ಹೇರಳ ಹಣ ಕೊಟ್ಟ ಒಗ್ಗೆ ತಮ್ಮ ಕಡೆ ಆಧಾರಗಳಿರುವವಾಗಿಯೂ ಜಂಬ ಬಡಿದರು, ಹೊರತು ಆಧಾರಗಳನ್ನೇನು ತೋರಿಸಲಿಲ್ಲ. ಅವರಿಂದ ಶಸ್ತ್ರಸನ್ಯಾಸದ ವಿಚಾರವು ಸಧ್ಯಕ್ಕೆ ಮುಂದೂಡಲ್ಪಟ್ಟಿದೆ. ಬ್ರಿಟಿಶರಿಗೆ ಇನ್ನೂ ಹಡಗುಪಡೆಗಳನ್ನು ಕಟ್ಟಿಸುವ ವಿಚಾರವಿರುವದೆಂದು ಮೇಲ್ಕಂಡ ಸೂಚನೆಗಳಿಂದ ಸ್ಫುಟವಾಗುತ್ತದೆ. ಆದ ಬಳಿಕ ಶಸ್ತ್ರಸನ್ಯಾಸದ ಆಟವನ್ನು ಜಿನೀವಾದಲ್ಲಿ ಯಾಕೆ ಕುಣಿಯಹೋಗಬೇಕು?

೨. ಲೋಕೋಪಕಾರದ ವೇಷ ತಾಳಿ ಸ್ವಾರ್ಥ ಸಾಧಿಸಲು ಬ್ರಿಟಿಶರಷ್ಟು ನಿಪುಣರು ಮತ್ತ್ಯಾರಿದ್ದಾರೆ? ಚಿಮಣಿ ಎಣ್ಣೆಯ ಪೇಟೆಯಲ್ಲಿ ಮೇಲಾಟ ನಡೆದಿದೆಂಬ ಮಾತು ಈಗ ಸರ್ವಶ್ರುತವಾದದ್ದೇ. ಬ್ರಿಟಿಶ ಸಾವುಕಾರರ ಬರ್ಮಾ ಆಯಿಲ್ ಕಂಪನಿ ಮುಂತಾದ ಚಿಮಣಿ ಎಣ್ಣೆಯ ಕಂಪನಿಗಳು, ಅಮೇರಿಕೆಯ ಸ್ಟಾಂಡರ್ಡ ಆಯಿಲ್ ಕಂಪನಿಯೊಡನೆ ಮೇಲಾಟ ನಡೆಸಹೋಗಿರುತ್ತವೆ. ಸ್ಟಾಂಡರ್ಡ ಆಯಿಲ್ ಕಂಪನಿಯವರು ಹಿಮ್ಮೆಟ್ಟುವದಿಲ್ಲ. ಇವರು ಸ್ಟಾಂಡರ್ಡ ಆಯಿಲ್ ಕಂಪನಿಯೊಡನೆ ಧರ್ಮಯುದ್ಧದಿಂದ ಕಾದಾಡಿ ಸೋಲಿಸಲು ಈಗ ಉಪಾಯಗಾಣದೆ ನಮ್ಮ ಹಿಂದುಸ್ಥಾನ ಸರಕಾರಕ್ಕೆ ಮೊರೆಯಿಟ್ಟಿದ್ದಾರೆ. ಮೇಲಾಟದಿಂದ ಭಾರತೀಯ ಪ್ರಜೆಗಳಿಗೆ ನಷ್ಟವಾಗುತ್ತದಂತೆ! ಹ್ಯಾಗೆಂದು ಎಷ್ಟು ವಿಚಾರಿಸಿದರೂ, ನಮಗೇನು ತಿಳಿಯುವದಿಲ್ಲ; ಯಾರಿಗೂ ತಿಳಿಯುವಂತಿಲ್ಲ !! ಈ ಕಂಪನಿಗಳು ಭಾರತೀಯ ಪ್ರಜೆಗಳವಲ್ಲ. ಮೇಲಾಟವಾದರೆ, ಚಿಮಣಿ ಎಣ್ಣೆಯು ಅಗ್ಗವಾಗಿ ಬಡಬಗ್ಗರಿಗೆ ಲಾಭವೇ ಇದೆ. ಆದರೂ, 'ನಮ್ಮ ಹಿಂದುಸ್ಥಾನ ಸರಕಾರಕ್ಕೆ ದಯೆ ಬಂತು. ಪ್ರಜಾವತ್ಸಲ ಸರಕಾರವಲ್ಲವೇ ! ಪ್ರಜೆಗಳಿಗೆ ನಷ್ಟವಿದೆಂದು ಬರ್ಮಾ ಆಯಿಲ್ ಕಂಪನಿಯವರು ಹೇಳಿದೊಡನೆ ಹಿಂದುಸ್ಥಾನ ಸರಕಾರದ ಕರುಳು ಕರಗಿ ನೀರಾಯಿತು, ಒಮ್ಮೆಲೇ ಜಾಯಿಂಟ ಮಂಡಳವನ್ನು ನೇಮಿಸಿ ಅಮೇರಿಕೆಯ ಸ್ಟಾಂಡರ್ಡ ಆಯಿಲ್ ಕಂಪನಿಯನ್ನು ಸೋಲಿಸುವದಕ್ಕಾಗಿ ಕೊಡಬೇಕಾದ ಉಪಾಯಗಳನ್ನು ಸೂಚಿಸಹೇಳಿದೆ. ಹಿಂದು ಮುತ್ಸದ್ದಿಯು ಮಾತ್ರ ಮಂಡಳಕ್ಕೆ ಕೊಡಲಾಗಿದೆ. ಚಿಮಣಿ ಎಣ್ಣೆಯ ಹುಟ್ಟುವಳಿ ಖರ್ಚು ಎಷ್ಟು ಬರುತ್ತದೆಂದು ಮಂಡಳವು ವಿಚಾರಿಸಬಾರದು. ಅಸಲಿನ ಪ್ರಕರಣವು ಪ್ರಜೆಗಳಿಗೆ ತಿಳಿದು ಸರಕಾರಿ ಸಂರಕ್ಷಣೆಯು ಸುಲಿಗೆಗಾರರಿಗೆ ಅನುಕೂಲವಾಗ ಪದೆಂದು ಲೋಕದಲ್ಲಿ ಡಂಗುರವಾಗಬಾರದೆಂದು ಈ ಮುಂಜಾಗ್ರತೆ ಕೊಳ್ಳಲಾಗಿದೆ. ಅರಿವೆ ಮುಂತಾದ ಹಿಂದುಸ್ಥಾನದ ಜೀವನಾಧಾರವಾದ ಉದ್ಯೋಗಗಳಿಗೆ ಕಾಪಾಡಲು ನಮ್ಮ ಹಿಂದುಸ್ಥಾನ ಸರಕಾರವು ತಯಾರಿಲ್ಲ. ಅಂಥವರು ಚಿಮಣಿ ಎಣ್ಣೆಯ ಸಂರಕ್ಷಣೆಗೆ ಓಡಿ ಹೋಗುವ ಬಗೆ ಹೇಗೆ? ಬಡ ಭಾರತೀಯರ ದೈನ್ಯವು ಈ ವಿಷಯದಲ್ಲೇ ಯಾಕೆ ಉಲ್ಲೇಖಿಸಲ್ಪಡುತ್ತದೆ? ಕಾರಣವು ಸ್ಪಷ್ಟವಿದೆ. ಬರ್ಮಾ ಆಯಿಲ್ ಕಂಪನಿಯಲ್ಲಿ ಬ್ರಿಟಿಶ ಸಾವುಕಾರರ ಹಣವಿದೆ. ಮೇಲಾಟದಲ್ಲಿ ಸಾವುಕಾರರಿಗೆ ಮನಬಂದಂತೆ ಪ್ರಚಂಡ ಲಾಭ ಪಡೆಯಲು ಅನುಕೂಲವಿಲ್ಲ. ಅದರಿಂದ ಬಡ ಭಾರತೀಯರ ನೆನಪು ಅವರಿಗೆ ಒಮ್ಮೆಲೇ ಆಗಿಯದೆ ಬಡ ಭಾರತೀಯರಿಗಾಗಿಯೇ ಅವರು ಸಂರಕ್ಷಣ ಬೇಡುತ್ತಾರೆ. ಚಿಮಣಿ ಎಣ್ಣೆಯ ಅಸಲಿನ ಅಂದಾಜು ತಿಳಿದರೆ, ದರವು ವಿಪರೀತವಾಯಿತೆಂದು ಪ್ರಜೆಗಳು ದೂರಿ (Save us from our friends) "ಗೆಳೆಯರಿಂದ ನಮ್ಮನ್ನು ಸಂರಕ್ಷಿಸಿರಿ" ಎಂದು" ಅವರು ಹೇಳಬಾರದೆಂದು ಆ ಗೋಜಿಗೆ ಹೋಗದಂತೆ ಹಿಂದುಸ್ಥಾನ ಸರಕಾರವು ಜಾಯಿಂಟ ಮಂಡಳಕ್ಕೆ ಆಜ್ಞಾಪಿಸಿದೆ. ಸ್ವಾರ್ಥಲೋಲುಪ ಬ್ರಿಟಿಶರು ಲೋಕೋಪಕಾರಕ್ಕಾಗಿ ನಡಿಸುವ ಸ್ವಾರ್ಥಪರಾಯಣ ವ್ಯಾಪಾರಗಳಿವು

೩. ಬಂಗಾಲದಲ್ಲಿ ಇಪ್ಪಾಳಿಕೆಯ ಕಾನೂನಿನನ್ವಯ ಶ್ರೀ| ಜೀವನಲಾಲ ಚಟರ್ಜಿಯವರ ಮೇಲೆ ಅಲ್ಲಿಯ ಸರಕಾರವು ನಡಿಸಿದ ಅತ್ಯಾಚಾರದ ಕಥೆಯನ್ನು ಕೇಳಿದರೆ, ಮನಸ್ಸಿಗೆ ಬಹು ಬೇಸರವಾಗಿ ನಮ್ಮ ಹಿಂದುಸ್ಥಾನದ ವಿಪರೀತ ಗ್ರಹಗತಿಯು ಯಾವಾಗ ತೀರುವದೆಂದು ತಿಳಿಯುವದಿಲ್ಲ. ಶ್ರೀ| ಜೀವನಲಾಲರವರು ಬಂಗವಾಸಿ ಕಾಲೇಜಿನಲ್ಲಿ ಮುರುಳು ವಿದ್ಯಾರ್ಥಿಗಳಿದ್ದರು ಇವರಿಗೆಯುದ್ಧ ಕಾಲದಲ್ಲಿ ವಿಖ್ಯಾತವಾದ ರಾಷ್ಟ್ರರಕ್ಷಕ ಕಾನೂನಿನನ್ವಯ ೧೯೧೬ ನೇ ಇಸ್ವಿಯಲ್ಲಿ ಪ್ರತಿಬಂಧಿಸಲಾಯಿತು. ಬಂಗಾಲ–ಬಿಹಾರ

ಪ್ರಾಂತಗಳೊಳಗಿನ ಕಾರಾಗೃಹಗಳಲ್ಲಿ ಶ್ರೀ| ಜೀವನಲಾಲರವರಿಗೆ ವರ್ಗಾಯಿಸಿ ಕೊನೆಗೆ ಸಾರ್ವಭೌಮರ ಅನುಗ್ರಹದಿಂದ ಹೊರಡಿಸೋಣಾದ ಸಾರ್ವಜನಿಕ ದಯಾ ಜಾಹೀರನಾಮೆಯಂತೆ ಇವರಿಗೆ ಬಿಡುಗಡೆ ಮಾಡೋಣಾಯಿತು. ಶ್ರೀ| ಜೀವನಲಾಲರವರು ಬಿಡುಗಡೆಯಾದಂದಿನಿಂದ ದೇಶಸೇವೆಯನ್ನು ಮಾಡಲಾರಂಭಿಸಿದರು. ಶ್ರೀ| ಜೀವನಲಾಲರವರ ಮೇಲೆ ಪೋಲೀಸರ ಕಾಕದೃಷ್ಟಿ ಬಿತ್ತು. ರಶಿಯಾ ದೇಶದ ಬೋಲ್ಶೆವಿಕರೊಡನೆ ಸಂಬಂಧ ಮಾಡಿದ ಆರೋಪ. ಬಾಕಿ ಪುರಾವೆ ಇಲ್ಲದ್ದರಿಂದ ಅವರ ಮೇಲೆ ಫೌಜದಾರಿ ಮೊಕದ್ದಮೆಯಾಗಲಿಲ್ಲ. ಆದರಿಂದ ದಬ್ಬಾಳಿಕೆಯ ಕಾನೂನಿನನ್ವಯ ಅವರಿಗೆ ಪ್ರತಿಬಂಧಿಸಲಾಯಿತು. ಅಲಿಪೂರ, ಮಿದ್ನಾಪುರ, ಮಂಡಲೆ ಜೈಲುಗಳಲ್ಲಿ ಸರಕಾರವು ಅವರಿಗೆ ತಿರುಗಾಡಿಸಿತು. ಮಂಡಲೆಯಲ್ಲಿ ಕ್ಷಯ ವ್ಯಾಧಿಯು ಶ್ರೀ| ಜೀವನಲಾಲರವರನ್ನು ವ್ಯಾಪಿಸಿತು. ಆದರಿಂದ ಬಂಗಾಲ ಸರಕಾರವು ಅವರಿಗೆ ಕಾರಾಗೃಹದೊಳಗಿಂದ ಬಿಡುಗಡೆ ಮಾಡಿ ಬಂಗಾಲದಲ್ಲಿ ಅವರು ಪ್ರವೇಶಿಸಬಾರದೆಂದು ಫರ್ಮಾಯಿಸಿತು; ಅಲ್ಮೋರಾದಲ್ಲಿ ಉಳಕೊಳ್ಳಬೇಕಾಗಿಯೂ ವಿಧಿಸೋಣಾಗಿದೆ. ಅಲ್ಮೋರಾದಲ್ಲಿ ಎಷ್ಟು ಕಾಲ ತಾವು ಉಳಕೊಳ್ಳಬೇಕಾದೀತೆಂದು ಕೇಳಿದರೆ, ಅದಕ್ಕೆ ಉತ್ತರವೇ ಇಲ್ಲ. ಇದರಿಂದ ಅವರ ದೆಸೆಯನ್ನು ಹೇಳಲಾಗಲ್ಲ. ಹಿಂದು ಮಾತನ್ನು ನಮೂದಿಸಿದರೆ ಬಂಗಾಲ ಸರಕಾರದ ದುಷ್ಕೃತ್ಯವು ಜನರಿಗೆ ಗ್ರಹಿತವಾಗುವಂತಿದೆ. ಬೋಲ್ಶೆವಿಕರೊಡನೆ ಸಂಬಂಧ ಮಾಡಿದ ಆರೋಪವು ಸಿದ್ಧವಾದ ಅಪರಾಧಿಗಳು ಶಿಕ್ಷೆಯನ್ನನುಭವಿಸಿ, ಈಗ ಸ್ವತಂತ್ರರಾಗಿ ತಮ್ಮ ಪ್ರಪಂಚವನ್ನು ನಡೆಸುತ್ತಿದ್ದಾರೆ. ಆದರೆ, ಅಪರಾಧ ಸಿದ್ಧವಾಗದ ಶ್ರೀ| ಜೀವನಲಾಲರ ಬೆನ್ನಿಗೆ ಹತ್ತಿದ ಶುಕ್ಲಕಾಷ್ಟವು ಮಾತ್ರ ಅವರ ಬೆನ್ನು ಬಿಡದು. ಇದು ಈಗಿನ ರಾಜ್ಯಪದ್ಧತಿಯೊಳಗಿನ ನ್ಯಾಯವು. ಹಿಂದುಸ್ಥಾನವು ಸ್ವತಂತ್ರವಾಗುವ ತನಕ ಇನ್ನೆಷ್ಟು ದೇಶಸೇವಕರು ಕಷ್ಟಗಳನ್ನನುಭವಿಸಬೇಕೋ? ತಿಳಿಯದು!

ಆ ಮೈಸೂರಿನ ಶ್ರೀ| ತಗಡೂರ ರಾಮಚಂದ್ರರಾಯರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು. ಮೈಸೂರ ಸಂಸ್ಥಾನದವರು ವರ್ತಮಾನಪತ್ರಿಕೆಗಳ ಮೇಲೆ ಹೊರಿಸಿದ ನಿರ್ಬಂಧಗಳನ್ನು ಸತ್ಯಾಗ್ರಹ ಬಲದಿಂದ ಸರಿಪಡಿಸಲು ಸಾಹಸ ಮಾಡಿ ಕೊನೆಗೆ ಇವರು ವಿಜಯಶ್ರೀವಿಭೂಷಿತರಾಗಿದ್ದಾರೆ. ಮೈಸೂರಿನಲ್ಲಿ ವರ್ತಮಾನಪತ್ರಿಕೆಗಳನ್ನು ಹೊರಡಿಸಬೇಕಾದರೆ ಮುಂದಾಗಿ ಸರಕಾರದ ಅಪ್ಪಣೆ ಪಡೆಕೊಳ್ಳಬೇಕು. ಅಪ್ಪಣೆ ಪಡೆಯದಿದ್ದರೆ ಮುದ್ರಣಾಲಯವನ್ನು ಜಪ್ತು ಮಾಡುವ ಅಧಿಕಾರವು ಮುದ್ರಣ ಕಾನೂನಿನ ಮೂಲಕ ಸರಕಾರವು ಸೆಳಕೊಂಡಿದೆ. ವಿಚಾರ ಮಾಡದೆ ಸಂಸ್ಥಾನದೊಳಗಿಂದ ಹದ್ದುಬಸ್ತು ಮಾಡಲಿಕ್ಕೂ ಮೈಸೂರ ಸರಕಾರಕ್ಕೆ ಈ ಕಾನೂನಿನನ್ವಯ ಅಧಿಕಾರವಿದೆ. ಕಣಿಯರ ಕಲ್ಯಾಣಕ್ಕಾಗಿ ಶ್ರೀ| ತಗಡೂರು ರಾಮಚಂದ್ರರಾಯರು "ಕಣಿಯರ ಪತ್ರಿಕೆ" ಯನ್ನು ಹೊರಡಿಸಲಾರಂಭಿಸಿದರು. ಕಣಿಯರೆಂದರೆ, ಬಹ ಹೀನ ಜಾತಿಯವರೆಂದು ತಿಳಿಯಲ್ಪಡುತ್ತಾರೆ, ಇವರು ಬಡವರು, ಇವರ ಅವಸ್ಥೆಯನ್ನು ಕೇಳುವರ್‍ಯಾರಿಲ್ಲ. ಆದರಿಂದ ತಗಡೂರು ರಾಮಚಂದ್ರರಾಯರು ಈ ಪತ್ರಿಕೆಯನ್ನು ಹೊರಡಿಸಲು ಸರಕಾರದ ಬಳಿ ಅಪ್ಪಣೆ ಬೇಡಿದರು. ಅದು ಅವರಿಗೆ ಸಿಗಲಿಲ್ಲ. ಈ ಕಾನೂನು ಅನ್ಯಾಯದ್ದಿರುವದಾಗಿ ಅಭಿಪ್ರಾಯಪಟ್ಟು ಅಪ್ಪಣೆ ಪಡೆಯದೆ ಕಣಿಯರ ಪತ್ರಿಕೆಯನ್ನು ಅವರು ಹೊರಡಿಸಲಾರಂಭಿಸಿದರು. ಎರಡಾವರ್ತಿ ಅವರ ಮುದ್ರಣಾಲಯವು ಜಪ್ತು ಮಾಡಲ್ಪಟ್ಟಿತು. ೩ ನೇ ಮುದ್ರಣಾಲಯವನ್ನು ಅವರು ಸ್ಥಾಪಿಸಿದರು. ಅದು ಸಹ ಜಪ್ತಾಯಿತು. ಈ ಪೀಡನೆಯಿಂದ ಮೈಸೂರು ಸಂಸ್ಥಾನದಲ್ಲಿ ಈ ಕಾನೂನನ್ನು ರದ್ದುಪಡಿಸುವ ಪಕ್ಷಕ್ಕೆ ಹುರುಪು ಬಂತು. ಕಳೆದ ಗುರುವಾರಕ್ಕೆ ಮುದ್ರಣ ಕಾನೂನನ್ನು ರದ್ದುಪಡಿಸಬೇಕಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಲೋಕಪಕ್ಷದ ಸಭಾಸದರು ಐಕ್ಯಮತ್ಯದಿಂದ ಠರಾವನ್ನು ತಂದು ಪಾಸ್ಸಿಸಿಕೊಂಡರು. ಲೋಕಮತದ ಪ್ರಾಬಲ್ಯವನ್ನು ನೋಡಿ, ಮೈಸೂರು ಸರಕಾರವು ಆ ಠರಾವಿನಂತೆ ಮುದ್ರಣ ಕಾನೂನನ್ನು ರದ್ದು ಮಾಡುತ್ತೇವಾಗಿ ಸಭೆಯಲ್ಲಿಯೇ ಅಭಿವಚನ ಕೊಡೋಣಾಯಿತು. ಇದನ್ನು ತಿಳಿಸಲು ನಮಗೆ ಸಂತೋಷವಾಗುತ್ತದೆ. ಮೈಸೂರು ಸರಕಾರವು ಲೋಕಮತಾನುವರ್ತಿಯೆಂಬ ಬಿರುದು ಪಡೆಯಲು ಸರ್ವಥಾ ಅರ್ಹವಿದೆ. ಅನ್ಯಾಯದಿಂದ ಶ್ರೀ| ತಗಡೂರು ರಾಮಚಂದ್ರರಾಯರಿಗೆ ಮಾಡಿದ ನಷ್ಟವನ್ನು ಮೈಸೂರು ಸರಕಾರವು ತುಂಬಿಕೊಟ್ಟರೆ, ಲೋಕದಲ್ಲಿ ಮೈಸೂರಿನ ಕೀರ್ತಿಯು ವಿಶೇಷವಾಗಿ ಬೆಳಗುವದು. ಈ ಪ್ರಕಾರ ಮುದ್ರಣ ಪ್ರತಿಬಂಧಕ ಕಾನೂನನ್ನು ಧ್ಯೇಯವಾದಿಯಾಗಿಯೂ, ಅಹಿಂಸಾವಾದಿಯಾಗಿಯೂ ರದ್ದುಪಡಿಸಿಕೊಳ್ಳಲು ಕಾರಣರಾದ ಶ್ರೀ| ತಗಡೂರು ರಾಮಚಂದ್ರರಾಯರಿಗೆ ಇನ್ನೊಮ್ಮೆ ಕೊಂಡಾಡುವೆವು. "ಸಾಹಸೇ ಶ್ರೀಃ ಪ್ರತಿವಸತಿ" ಎಂಬ ಸಿದ್ಧಾಂತವನ್ನು ಶ್ರೀ| ತಗಡೂರು ರಾಮಚಂದ್ರರಾಯರು ಪ್ರತ್ಯಕ್ಷ ಸಿದ್ಧಗೊಳಿಸಿ ಸಾಹಸಿಕ ದೇಶಸೇವೆಗೆ ಮಾರ್ಗದರ್ಶಕರಾಗಿರುವರಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಸೆಕೆ ಬಹಳ; ಮೋಡ ಕವಿಕವಿದು ಬರುತ್ತದೆ. ಗುಡುಗು ಕೇಳಬರುತ್ತದೆ, ಮಿಂಚುತ್ತಲೂ ಇದೆ. ಮಳೆ ಹನಿಸಿದಂತೆ ಆಗುತ್ತದೆ; ಆದರೆ, ನೀರೇ ಕಾಣುವದಿಲ್ಲ. ಇದರಿಂದ ಹವಾಮಾನವು ನೆಟ್ಟಗಿಲ್ಲ. ಜ್ವರಾದಿ ರೋಗಗಳು ಮನೆ ಮಾಡಿಕೊಂಡಿವೆ.

ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ರಘುಕುಲತಿಲಕನಾದ ಶ್ರೀರಾಮಚಂದ್ರ ದೇವರ ಜನ್ಮೋತ್ಸವವು ವಿಶೇಷ ಉತ್ಸಾಹದಿಂದ ನೆರವೇರಿತು. ಶ್ರೀ ಕುಂಭೇಶ್ವರ ದೇವಾಲಯದಲ್ಲಿ ಉಡುಪಿಯ ಶ್ರೀ ಸ್ವಾಮಿ ಮಠದ ಶ್ರೀ ವಿಶ್ವೇಂದ್ರತೀರ್ಥ ಶ್ರೀಪಾದಂಗಳವರು ಶ್ರೀ ಸುಗ್ರೀವಾಚಾರ್ಯರ ಶ್ರೀ ರಾಮ ಜನ್ಮೋತ್ಸವವನ್ನು ಯಥಾವಿಧಿ ಸಾಂಗಗೊಳಿಸಿದರು.

ಅಬಕಾರಿ ಹಾಗು ಜಂಗಲ ಖಾತೆಗಳ ದಿವಾನರಾದ ರಾ| ಗೋವಿಂದರಾವ ಪ್ರಧಾನರವರು ಕಾರ್ಯಕ್ರಮದಂತೆ ಮೊನ್ನೆ ಇಲ್ಲಿ ಬಂದಿದ್ದಾರೆ. ಜಂಗಲು ಗಾರ್ಡರೂ, ಅಬಕಾರಿ ಪೇದೆಗಳೂ, ಸರಕಾರಿ ಅಧಿಕಾರಿಗಳೂ, ಬರುತ್ತಿದ್ದಾರೆ. ಈ ದಿವಾನರ ಬಳಿ ಸಹಕಾರಿ ಖಾತೆಯೂ ಇದೆ. ಆದರಿಂದ ಸಹಕಾರಿಗಳೂ ಬರುತ್ತಿದ್ದಾರೆ. ಅಂತು ಬಂತು ಸಣ್ಣ ಗಡಿಬಿಡಿ ಜನರಿಗೇನು ಫಾಯ್ದೆಯೋ ದೇವರೇ ಬಲ್ಲ.

ವರ್ಷಾಸನದಂತೆ ಇಲ್ಲಿಯು ೧ನೇ ವರ್ಗದ ಮ್ಯಾಜಿಸ್ಟ್ರೇಟರು ಸುಗ್ಗಿಯ ಸಂದರ್ಭದಲ್ಲಿ ಗೋಕರ್ಣದ ಅರಸುಗೌಡನ ಮೇಲೂ, ಆತನ ತಂದಿನವರ ಮೇಲೂ ಪ್ರತಿಬಂಧಕ ಹುಕುಮು ಕೊಟ್ಟಿದ್ದಾರೆ. ಶ್ರೀ ಮಹಾಬಲೇಶ್ವರ ದೇವಸ್ಥಾನದ ಚಾಲಕರು ಈ ಒಕ್ಕಲ ಜಾತಿಯೊಳಗಿನ ಸಣ್ಣ ತಂಟೆಯನ್ನು ನಿರ್ಮಲಚಿತ್ತದಿಂದ ಪರಿಹರಿಸಬಾರದೇ?

ಹೊನ್ನಾವರ— ಶ್ರೀ ರಾಮ ನವಮಿಯ ರಥೋತ್ಸವವು ವರ್ಷಾಸನದಂತೆ ಉತ್ಸಾಹದಿಂದ ಯಥಾಸಾಂಗ ನೆರವೇರಿತು. ಸಂಧ್ಯಾಕಾಲಕ್ಕೆ ಗುಡುಗುಡಿಸಿತು; ಮಿಂಚಿತು ಮೇಘರಾಜನು ಬಂದೇಬಿಟ್ಟನು. ಒಂದು ತಾಸಿನ ತನಕ ನಿರ್ದಯನಾಗಿ ವರುಣಾಸ್ತ್ರವನ್ನು ಬಿಟ್ಟನು. ಮೆರವಣಿಗೆಗಾರರು ತಂಗಿದರು, ಒಳಗಾದರು ಸೋತರು. ಕ್ರೈಸ್ತರು ತಂದ ೭ ...ಪಿ ಹಣ್ಣುಗಳೆಲ್ಲ ಸುಂದರವಾಗಿ ಜಲಕ್ರೀಡೆಯನ್ನು ಮಾಡಹತ್ತಿದವು, ಶ್ರೀ ದೇವಾಲಯದಲ್ಲಿ ಭಜಕರು ಭೋಜನ ಮಾಡಲುದ್ಯುಕ್ತರಾಗಿದ್ದರು; ವರುಣಾಸ್ತ್ರ ಪ್ರಯೋಗವಾದೊಡನೆ ಸಪಂಕ್ತಿರೂ ಎದ್ದುಹೋದರು. ಜಾತ್ರೆಯವರಿಗಂತೂ ಈ ಪ್ರಕಾರ ನಷ್ಟ. ಅನಪೇಕ್ಷಿತವಾಗಿ ಮಳೆ ಬಿದ್ದದರಿಂದ ಜನರಿಗೂ ಕಷ್ಟನಷ್ಟ. ಮುಂದಿನ ಬೆಳೆಗೂ ಬಾಧೆಯಿದೆ.

ಗಾಂಧಿ ಬಂದೂಕು ಜಪ್ತಾದದ್ದಂತೂ ಗೊತ್ತೇ ಇದೆ. ಮುಂದಿನ ಕ್ರಮದ ಪತ್ತೆಯೇ ಇಲ್ಲ. ಕಾಯಿದೆಯಂತೆ ಬಂದೂಕವನ್ನು ಇಟ್ಟುಕೊಳ್ಳಬಹುದೋ? ಇಟ್ಟುಕೊಳ್ಳಬಾರದೋ? ಎಂದು ಜನರಿಗೆ ತಿಳಿಯದಾಗಿದೆ. ಗಾಂಧಿ ಬಂದೂಕಿನಿಂದ ರೈತರಿಗೆ ಬಹಳ ಅನುಕೂಲವಾಗುತ್ತಿತ್ತು. ತುಬಾಕಿ ಲೈಸೆನ್ಸು ಇತ್ತಕಡೆ ಸಿಗುವದು ಬಲು ಕಠಿಣವಾಗಿದೆ. ಪೋಲೀಸರು ಅನುಗ್ರಹಿಸಿದರೆ ಮಾತ್ರ ತುಬಾಕಿ ಸಿಗುತ್ತದೆ. ಅದಕ್ಕೆ ಕಾಡು ಸಮೀಪವಿರಬೇಕಂತೆ! ತೀರ್ವೆ ಹೆಚ್ಚಿಗೆ ಇರಬೇಕಂತೆ! ಕಾಡು ಎಷ್ಟು ಸಮೀಪವಿರಬೇಕು? ಹೆಚ್ಚಿಗೆ ತೀರ್ವೆಯೆಂದರೆ ಎಷ್ಟು? ಎಂಬ ವ್ಯಾಖ್ಯೆಗಳೇನೂ ಇಲ್ಲ. ಇದರಿಂದ ತುಬಾಕಿ ಲಾಯಸನ್ಸು ಸಿಗುವ ರೈತರು ಮಂಗ-ಹಂದಿಗಳ ಕಾಟವನ್ನು ಗಾಂಧಿ ಬಂದೂಕಿನಿಂದ ಪರಿಹರಿಸಿಕೊಳ್ಳುತ್ತಿದ್ದರು. ಇದಕ್ಕೆ ಖರ್ಚು ಸಹ ಕಡಿಮೆ. ಪೇಟೆಯಲ್ಲಿ ಸಿಗುವ ಒಂದು ದರುಡಿಯ ಹಿಟ್ಟನ್ನು ನಳಿಗೆಯಲ್ಲಿ ಹಾಕಿದರೆ, ದೊಡ್ಡ ಸಪ್ಪಳವಾಗಿ ಮಂಗ ಹಂದಿಗಳು ಹೆದರಿ ಓಡಿ ಹೋಗುತ್ತವೆ. ಜಪ್ತಿ ಪ್ರಕರಣವಾದಂದಿನಿಂದ ಈ ಹಿಟ್ಟು ಸಿಗದಂತಾಗಿದೆ. ಕಲೆಕ್ಟರರು ಈ ಪ್ರಕರಣದ ಇತ್ಯರ್ಥವನ್ನೇನಾದರೂ ಮಾಡಬಾರದೇ? ಹುಟ್ಟಿದ ಬೆಳೆಯು ಜನಾವರಗಳ ಪಾಲಾದರೆ, ರೈತರು ತಿನ್ನುವದೇನು? ಸರಕಾರಕ್ಕೆ ತೀರ್ವೆ ಕೊಡುವ ಬಗೆ ಹೇಗೆ? ಇತ್ಯಾದಿ ಬೇಸಾಯಗಾರರೊಬ್ಬರು ತಿಳಿಸುತ್ತಾರೆ.

ಅಂಕೋಲಾ— ಸದ್ಯ ಸಕ್ಕರೆಯಟ್ಟಿಗೆ ಬಳ್ಳೇದು; ವಿಪರೀತ ಸೆಕೆ, ಮೋಡಗಳಾಗುತ್ತಿವೆ; ಮಳೆ ಹನಿ ಬೀಳುತ್ತಿದೆ. ಪ್ಲೇಗಿನಿಂದ ಇಲಿ ಬೀಳುತ್ತದೆಂದು ಕೆಲವೆಡೆಯಲ್ಲಿ ಸುದ್ದಿ. ಕೆಲವು ಮಂದಿಗಳು ಘಟ್ಟ ಹಿಡಕೊಂಡಿದ್ದಾರೆ; ಪೂಜಗೇರಿ ಸಂಕದ ಬಗ್ಗೆ ಲೋಕಲ್ಬೋರ್ಡಿನವರು ವಿಚಾರ ಮಾಡುವದಿಲ್ಲ. ಈ ಸಂಕದ ನಿಮಿತ್ತ ರೈತರಿಗೆ ಒದಗುವ ಗೋಳನ್ನು ಹೇಳ ತೀರದು.

ಬಾವಿಕೇರಿಯ ಬೀರಗೇರಿಯಲ್ಲಿ ಹಾಲಕ್ಕಿ ಒಕ್ಕಲಿದ್ದಾರೆ. ಅವರಲ್ಲಿ ಇತ್ತಂಡಗಳು. ಇತ್ತಂಡಗಳು ಯಾವ ಜಾತಿಯಲ್ಲಿಲ್ಲ? ಒಂದು ಪಕ್ಷದವರು ಪಟ್ಟಣಕ್ಕೆ ಹೋಗಿ ಕಟ್ಟಿಗೆ ಹೊರೆ ತಂದರು. ೧ನೇ ಪಕ್ಷದ ೩ ಮಂದಿಗಳೂ ಈ ಜೊತೆಗೆ ಕಟ್ಟಿಗೆ ಹೊರೆ ತಂದಿದ್ದರು. ಜಂಗಲ ನಾಕೆಯ ಹತ್ತಿರ ಪಂಚನಾಮೆ ಮಾಡಲಾಯಿತು. ಕಟ್ಟಿಗೆ ಹೊರೆ ತಂದಕ್ಕೆ ೫ ರೂಪಾಯಿಗಳಂತೆ ದಂಡ ಹೊರಿಸೋಣಾಯಿತು. ೧ನೇ ಪಕ್ಷದ ಇವರೂ ೫—೫ ರೂಪಾಯಿಗಳಂತೆ ದಂಡ ತೆತ್ತು ಬಂದರು. ೧ನೇ ಪಕ್ಷದವರು ತೆತ್ತಿಲ್ಲ. ಒಕ್ಕಲುಗಳಿಗೂ, ವಿ| ಕಗ್ಗೆಸಿಗರಿಗೂ ಮಾಡುವ ಕಥೆ ನಡೆದು ಕಟ್ಟಿಗೆ ಹೊರೆ ಬಂದಕ್ಕೆ ೧ ರೂಪಾಯಿಯಂತೆ ದಂಡ ವಿಧಿಸೋಣಾಯಿತು. ಒಕ್ಕಲುಗಳಿಗೆ ದೊಡ್ಡ ಫಾಯ್ದೆಯಾ

ಹಾಗೆ ಆನಂದವಾಗಿ ಎಲ್ಲರೂ ೩ ರೂಪಾಯಿಗಳಂತೆ ಹಣ ತೆತ್ತರು. ಕೊಲ್ಲುವಲ್ಲಿ ಹೀಗಂತೆ ಬಿಟ್ಟುಬಿಡುವದು ಉಪಕಾರವಲ್ಲವೇ?

ನವಾಪುರದಲ್ಲಿ ಡಿಪೋ ಇಲ್ಲ. ಉರುವಲ ಕಟ್ಟಿಗೆ ತರುವವರಿಗೆ ಈ ಪ್ರಕಾರ ಪೀಡನೆ. ಹಲ್ಯಾಳದ ಮಾಮಲೇದಾರ ಭಟ್ಟರೇನೋ ಡಿಪೋ ಮಾಡ ಹೋಗಿದ್ದರಂತೆ! ೩-೪-೫-೬ ಬೊಲ್ಲಕಗಳನ್ನು ತಮಗೆ ಕೊಟ್ಟರೆ ತಾವು ಅಂಕೋಲೆಯ ಡಿಪೋ ಮಾಡುತ್ತೇನಾಗಿ ಅವರು ಮಿ| ಶಗ್ನರ್‌ಯವರಿಗೆ ಕಚ್ಚೇರಿಯಲ್ಲಿ ಭಟ್ಟಯಾಗಿ ಹೇಳಿದರಂತೆ! ಸಾಹೇಬರು ಒಪ್ಪಿದರು. ಕನ್ಸರ್ವೇಟರರಿಗೆ ಅರ್ಜಿ ಕಳಿಸಲಾಯಿತು. ೩-೪ ಬೊಲ್ಲಕಗಳನ್ನು ಮಾತ್ರ ಮಂಜೂರು ಮಾಡಿ ಕರಾರಿನ ಬಗ್ಗೆ ತಾಲೂಕು ಕಚೇರಿಗೆ ಕಳಿಸಲಾಯಿತು. ರಾ| ಮಾಮಲೇದಾರ ಭಟ್ಟರು ಒಪ್ಪಲಿಲ್ಲ. ಆದರಿಂದ ಈ ಊರಲ್ಲಿ ಕಟ್ಟಿಗೆಯ ತ್ರಾಸ; ಅಕ್ಕಿಗಿಂತ ಕಟ್ಟಿಗೆಯು ಕಷ್ಟವೇ ಬರುತ್ತಾಗಿದೆ. ಅಂಥ ಪ್ರಸಂಗದಲ್ಲಿ ಸಾಯುವದಾದರೂ ಕಷ್ಟವೇ. ಸತ್ತವರಿಗೆ ಉರುವಲ ಕಟ್ಟಿಗೆ ಇಲ್ಲದೆ ಭೂಖದ ವಿಧಿಸಬೇಕಾಗುತ್ತದೆ ಹೊಲೆಯರ-ಕ್ರೈಸ್ತರಂತೆ ಹೂಳುವ ಪ್ರಸಂಗ ಒದಗುತ್ತದೆ. ಇಷ್ಟಾಗಿ ೫೦-೬೦ ಕೆಟ್ಟಿಗೆಯ ಹೊತ್ತಿಗೆ ಸರಿಯಾಗಿ ಉರುವಲ ಸಿಗದ ಬಹು ಬಹು ತೊಂದರೆ. ದಹನ ಸಂಸ್ಕಾರಕ್ಕೆ ಉರುಲು ಒಪ್ಪುವದಿಲ್ಲ.

ಕಾರವಾರ— ಪರಮಾತ್ಮನ ಅನುಗ್ರಹದಿಂದಲೇ ಈ ವಾರದಲ್ಲಿ ಪ್ಲೇಗಿನಿಂದ ಯಾರೂ ಸತ್ತ ಸುದ್ದಿ ಇಲ್ಲ; ಯಾರಿಗೂ ಪ್ಲೇಗ ಅಪಸಾಪ್ಪಿಯೂ ಇಲ್ಲ. ಪೇಟೆಯಲ್ಲಿ ಜನರು ಪುನಃ ವಾಸಮಾಡಲು ಪ್ರಾರಂಭಿಸಿದ್ದಾರೆ. ಮಾಯುಸಂಬಾರಕ್ಕೆ ಎಡೆಕೊಟ್ಟು ಅಂಗಡಿಗಳಲ್ಲಿ ಬಿಡಾರ ಹೂಡುವದೂ ಕ್ಷೇಮಕರವಿದೆ. ಕಾಜುಬಾಗ-ನಂದನಗದ್ದೆ-ಬಾಡ ಗಳಲ್ಲಿ ಇಲಿಗಳು ಸಾಯುತ್ತಿವೆ. ನಂದನಗದ್ದೆಯ ಒಬ್ಬ ಬ್ರಾಹ್ಮಣನ ಮನೆಯಲ್ಲಿ ತಾಯಿಯೂ, ಮಗಳೂ ಪ್ಲೇಗಿನಿಂದಲೇ ತೀರಿಕೊಂಡರು. ಸಾದ್ರಿಬಾಗದಲ್ಲಿ ಒಬ್ಬರಿಗೆ ಪ್ಲೇಗು ಆಗಿದೆ. ಅದರಿಂದ ಜನರು ಇನ್ನೂ ಚಿಂತಾತುರರಾಗಿದ್ದಾರೆ. ಪ್ಲೇಗಿನ ಪರಿಹಾರಕ್ಕಾಗಿ ಮಹಾತ್ಮರು ತಮ್ಮ 'ಆರೋಗ್ಯ ಕೈಪಿಡಿಯಲ್ಲಿ' ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಅವನ್ನು ಎಲ್ಲರೂ ಅನುಸರಿಸಿ ಲಾಭ ಪಡೆಯಬಹುದು. (೧) ಪ್ಲೇಗಿನ ಚಿಹ್ನಗಳಾದ ಕೂಡಲೇ ಒದ್ದೆ ಅರಿವೆಯನ್ನು ಮೈಮೇಲೆ ಹಾಕಿಕೊಂಡು ಅದರ ಮೇಲೆ ದಪ್ಪವಾದ ಕಂಬಳಿಯನ್ನು ಹೊದ್ದುಕೊಂಡು ಮಲಗಬೇಕು. ಇದರಿಂದ ಬೆವರು ಬಂದು ಹಗುರೆನಿಸುತ್ತದೆ. (೨) ಗಂಟಿಗೆ ಕೆಸರಿನ ಪೋಟೀಸನ್ನು ಹಚ್ಚಬೇಕು. (೩) ರೋಗಿಗೆ ಆಹಾರ ಕೊಡಬಾರದು. (೪) ತೃಷೆಯಾದರೆ ತಣ್ಣೀರಿನಲ್ಲಿ ಲಿಂಬೆ ರಸ ಹಾಕಿ ಕೊಡಬೇಕು. (೫) ಸ್ವಚ್ಛವಾದ ಗಾಳಿ ಇರುವ ಕೋಣೆಯಲ್ಲಿ ಅವನನ್ನು ಮಲಗಿಸಬೇಕು. (೬) ರೋಗಿಯ ಒಳಗೆ ಒಬ್ಬರೇ ಉಪಚಾರ ನಡಿಸಲು ಇರಬೇಕು. ಈ ಉಪಾಯಗಳಿಂದಲೇ ಪ್ಲೇಗನ್ನು ಪರಿಹರಿಸಿಕೊಳ್ಳಬಹುದೆಂದು ಮಹಾತ್ಮರ ಅಭಿಪ್ರಾಯ. ರೋಗ ಪರಿಹಾರಕ್ಕಿಂತ ರೋಗನಿವಾರಣವೇ ಮೇಲು. ಅದರಿಂದ ಇಂಥ ಪಿಡುಗು ಉಂಟಾದಾಗ ಜನರು ಬೈಲು ಪ್ರದೇಶದಲ್ಲಿ ಸ್ವಚ್ಛವಾದ ಹವೆಯನ್ನು ಉಪಯೋಗಿಸುತ್ತಿರಬೇಕು. ಸಾಮಾನ್ಯವಾದ ಹಾಗು ಆರೋಗ್ಯಕರವಾದ ಆಹಾರವನ್ನು ಮಿತಿಯಿಂದ ಸೇವಿಸಬೇಕು. ಸಲೋ ವ್ಯಾಯಾಮ ಕೊಳ್ಳಬೇಕು. ಮನೆಯನ್ನು ಸ್ವಚ್ಛವಾಗಿಡಬೇಕು. ದುರಭ್ಯಾಸಗಳನ್ನು ತ್ಯಜಿಸಬೇಕು.

ಗಿರಾಕಿಗಳ ಸಂಘದ ಕಾರ್ಯದರ್ಶಿಗಳಾದ ರಾ| ಗಾಡಗೆಂಡೆಯವರಿಗೆ ಸೆಶನ್ಸ ಜಜ್ಜರವರು ನಿರ್ದೋಷಿಗಳೆಂದು ಬಿಡುಗಡೆ ಮಾಡಿದ್ದಾರೆ. ಕಾರಭಾರಿ ಮಂಡಳವು ಅವ್ಯವಸ್ಥಿತವಾಗಿ ಕಾರಭಾರ ನಡಿಸಿತೆಂದು ಟೀಕೆಯಲ್ಲಿ ನಮೂದಾಗಿಯದೆ.

ಇಲ್ಲಿಯ ಡಿಸ್ಟ್ರಿಕ್ಟ ಜಡ್ಜರಾದ ಮಿ| ಕೇ ಬಿ ಸೇನರವರು ಮುಂಬಯಿ ಹಾಯಕೋರ್ಟಿನಲ್ಲಿ ರಜಿಸ್ಟ್ರಾರಾಗಿ ನೇಮಿಸಿಕೊಂಡದ್ದರಿಂದ ಅವರು ಇಲ್ಲಿಂದ ಮೊನ್ನೆ ಹೋದರು ವಕೀಲರು ಮೊನ್ನೆ ೪|| ಘಂಟೆಗೆ ಅವರಿಗೆ ಮೇಜವಾನಿ ಕೊಟ್ಟು ಸತ್ಕರಿಸಿದರು. ೩ ತಿಂಗಳಲ್ಲಿ ಮಿ| ಸೇನರವರು ತಮ್ಮ ಸದ್ವರ್ತನದಿಂದಲೂ, ವಿನಯದಿಂದಲೂ ವಕೀಲರಿಗೆ ಪ್ರಿಯರಾಗಿದ್ದರು. ಅವರ ತೀರ್ಪು ಅವರ ಯೋಗ್ಯತೆಯನ್ನು ತೋರಿಸುತ್ತಿದ್ದವು; ಗ್ರಹಣ ಶಕ್ತಿಯು ಹಿರಿದಿತ್ತು.

ಗೋಕರ್ಣಾಂತಕದೊಳಗಿನ ಶುದ್ಧಿ ಕಾರ್ಯಕ್ಕಾಗಿ ಇಲ್ಲಿ ಒಂದು ಶುದ್ಧಿ ನಿಧಿ ನಿರ್ಮಾಣವಾಗಿದೆ.

ಶಿರಶಿ— ಇಲ್ಲಿ ನಿಕ್ಕವೂ ಮೋಡ ಮುಸುಕುತ್ತಿದೆ; ಗುಡುಗುಡಾಟ, ಮಿಂಚುಗಳೊಂದಿಗೆ ಮಳೆ ಬಿತ್ತು. ಆಷ್ಟೇನು ವಿಶೇಷವಲ್ಲ

ಗ್ರಾಮಗಳಲ್ಲಿ ಹೊಲಗಳಿಗೆ ಕಬ್ಬಿಣ ಸರಿಗೆಯ ಬೇಲಿ ಹಾಕಲು ಉತ್ತೇಜನ ಕೊಡಲಾಗುತ್ತದೆ. ಸರಿಗೆ ಮಾಡುವ ಪರದೇಶಿ ಕಾರಖಾನದಾರರಿಗೂ ಲಾಭ; ಹಂಗಲ ಮಾರಿಗೂ ಲಾಭ ರೈತರಿಗೆ ಮಾತ್ರ ಕಷ್ಟ,

ಈ ವರುಷದ ಮೆಟ್ರಿಕ್ಯುಲೇಶನಿನ ಪರೀಕ್ಷೆಯು ಬಲು ಕಠಿಣ. ಮೆಟ್ರಿಕ್ಯುಲೇಶನಿನ ಪ್ರಿಲಿಮಿನರಿ ಪರೀಕ್ಷೆಗಿಂತ ಕಠಿಣವಾಯಿತು ೪—೬ ಸಾರೆ ೪—೬ ಊರುಗಳಲ್ಲಿ ಹೋಗಿ ತಯಾರು ಮಾಡಿ ಮಾಡಿ ಪರೀಕ್ಷೆ ಕೊಟ್ಟರೂ ತೇರ್ಗಡೆ ಹೊಂದಿದ ಸರ್ಟಿಫಿಕೇಟ ಸಿಗುವದು ಬಲು ದುಸ್ತರವೆಂದು ಹಲವು ಮೋಟಾರಿನವರ ಹೇಳಿಕೆ,

ಒಬ್ಬನು ರಸ ಕರ್ಪೂರವನ್ನು ತಿಂದನು; ಆದರೆ, ಸಾಯಲಿಲ್ಲ ಆಯಾಬಕ್ಕಲಿದ್ದರೆ ರಸಕರ್ಪೂರದಿಂದ ಆಗುವದೇನಿದೆ!

ಗಾಡಿಕಾರರು ಕಂದೀಲುಗಳನ್ನು ಹಚ್ಚದೆ ಗಾಡಿ ಹೊಡೆಯುತ್ತಾರೆ ಪೋಲೀಸರು ಕಣ್ಮುಚ್ಚಿ ತಿರುಗಾಡಬಹುದು.

ಊರಲ್ಲಿ ನಾಣ್ಯಗಳು ಸಿಗುವದಿಲ್ಲ; ಬರೇ ನೋಟುಗಳೇ! ಕಚೇರಿಯಲ್ಲಿ ನೌಕರರಿಗೆ ಸಂಬಳ ಸಿಗುವದೂ ನೋಟುಗಳಲ್ಲಿಯೇ; ನಾಣ್ಯಗಳೆಲ್ಲ ಎಲ್ಲಿ ಹೋದವು? ಸಂಕ್ರಾಂತಿ ಪುರುಷನು ಬೆಳ್ಳಿಯ ಪಾತ್ರದಲ್ಲಿ ಪಾಯಸ ತಿಂದದ್ದರಿಂದಲೇ ಬೆಳ್ಳಿಯ ನಾಣ್ಯಕ್ಕೆ ಬರಗಾಲ ಬಂದಿರುವದೆಂದು ಭಾವಿಕರ ಭಾವನೆ; ನೋಟುಗಳನ್ನು ಮುರಿಸಹೋದರೆ ವರ್ತಕರಿಗೆ ಬಟ್ಟಾವಿನ ದಕ್ಷಿಣೆ ತೆರಬೇಕು;

ವೃತ್ತಸಾರ.

— ದಕ್ಷಿಣ ಆಫ್ರಿಕೆಯ ಕೇಪ ಟೌನಿನಲ್ಲಿ ಜೋತಿಃಶಾಸ್ತ್ರಜ್ಞರ ದೊಡ್ಡ ಗಡಿಬಿಡಿ! ದಕ್ಷಿಣ ದಿಕ್ಕಿನ ಕ್ರಾಂತಿಚಕ್ರದೊಳಗಿನ ನೋವಾ ಪಿಕ್ಟೋರಿಸ ಎಂಬ ನಕ್ಷತ್ರವು ಬಹಳ ಉಗ್ರವಾಗಿ ಬೆಳಗುತ್ತಿದೆ; ೩ ವರುಷಗಳಿಂದ ಈ ಪ್ರಭೆಯು ಹೆಚ್ಚುತ್ತಲಿದೆ, ಒಂದು ಕಪ್ಪು ನಕ್ಷತ್ರಕ್ಕೂ ಈ ನಕ್ಷತ್ರಕ್ಕೂ ತಿಕ್ಕಾಟವಾದದ್ದರಿಂದ ಈ ಪ್ರಭೆಯುಂಟಾಯಿತೆಂದು ಸರ್ ಫ್ರೆಂಕ ಡಾಯಸನ್ ಎಂಬ ಜ್ಯೋತಿಷಶಾಸ್ತ್ರಜ್ಞರ ಅಭಿಪ್ರಾಯ,

— ಜಬಲಪುರದಲ್ಲಿ ಭಯಂಕರವಾದ ಕ್ಷಾಮ ಬಿದ್ದಿದೆ; ಬೆಳೆಯಿಲ್ಲದೆ ಜನರಿಗೆ ಬಹಳ ಕಷ್ಟ;

— ಮದ್ರಾಸದಲ್ಲಿ ಅಂಬಿಗರಿಗೂ, ಪೋಲೀಸರಿಗೂ ಸಣ್ಣ ಜಗಳವಾಯಿತು, ಅಂಬಿಗರು ಮದ್ಯ ಕುಡಿದು ಅಮಲದಾರರಾಗಿ ರಾಜಮಾರ್ಗದಮೇಲೆ ಗೋಕಾಲಿ ಹೊಡೆಯುತ್ತಿದ್ದರು; ಪೋಲೀಸರು ಬೆದರಿಸಲು ಪೋಲೀಸರ ಮೈಮೇಲೆ ಹಾರಿ ಬಂದರು; ಕೆಲವರಿಗೆ ಗಾಯಗಳಾಗಿವೆ.

— ವಿಲಾಯತಿಯೊಳಗಣ ತೇಮ್ಸ ನದಿಯಲ್ಲಿ ದೋಣಿಗಳ ಶರ್ಯತ್ತು ನಡೆದಿತ್ತು ಜನರು ದಂಡೆಗುಂಟ ಕಂತುಗಟ್ಟಿ ನಿಂತಿದ್ದರು ಆಟಗಾರರು ನದಿಯಲ್ಲಿ ದೋಣಿಗಳಲ್ಲಿ ವಿಹರಿಸುತ್ತಿದ್ದರು ಥಟ್ಟನೆ ನದಿಯು ಉಕ್ಕೇರಿ ಬಂದು ಜನರು ದಿಕ್ಕು ಪಾಲಾದರು ೩೦೦ ಜನರಿಗೆ ಬದುಕಿಸಿಕೊಳ್ಳಬೇಕಾದರೆ ಸಾಕು ಬೇಕಾಯಿತು

—ಎಳೆ ಪ್ರಾಯದ ಮೃತ್ಯುಂಜಯ ಶೀಲ ಎಂಬ ಬಂಗಾಲಿಯು ನಿರುದ್ಯೋಗಿಯಾಗಿದ್ದನು; ಹೆಂಡರು-ಮಕ್ಕಳ ಸಂಸಾರ ಕಳೆಯಲಾರದೆ ವಿಷ ತಿಂದು ಪ್ರಾಣ ಕೊಟ್ಟನು; ಭಾರತ ಮಾತೆಯ ದುರ್ದೈವ!

— ಲಾಹೋರಿನಲ್ಲಿ ದೇಶಭಕ್ತ ಲಾಲಾ ಲಜಪತರಾಯರ ಸ್ಮರಣಾರ್ಥವಾಗಿ ಒಂದು ಸಭಾಮಂದಿರದ ನಿರ್ಮಾಣವಾಗಿದೆ ಈ ಸಭಾಮಂದಿರದಲ್ಲಿ ರಾಜಕಾರಣದ ವಿಷಯ ಸ್ವತಂತ್ರ ಅಭಿಪ್ರಾಯಗಳನ್ನು ಪ್ರತಿಪಾದಿಸಬಹುದು ಮಹನಾಲಯವೆಂದು ಹೆಸರಿಸಲ್ಪಟ್ಟಿದೆ ಪಂಡಿತ ಮದನ ಮೋಹನ ಮಾಲವೀಯರವರು ಶಂಕು ಸ್ಥಾಪನೆಯ ಸಮಾರಂಭವನ್ನು ಆನಂದದಿಂದ ನೆರವೇರಿಸಿದರು

— ಭೂಪ್ರದಕ್ಷಿಣೆ ಮಾಡಿ ಸ್ವದೇಶಕ್ಕೆ ಮರಳಿ ಬಂದ ಸ್ಕೌಟ್ ಸ್ವಾರರಾದ ರಾ| ಜಾಲ ಬಾಪಸೇಠಾ, ಹಕೀಮ ಹಾಗು ಭೋನಾಗರವರಿಗೆ ಮುಂಬಯಿ ಪುರಸ್ಥರು ಸಭೆ ಸೇರಿ ಸುವರ್ಣ ಪದಕಗಳನ್ನೂ ೫|| ಸಾವಿರ ರೂಪಾಯಿಗಳ ಥೈಲಿಯನ್ನೂ ಅರ್ಪಿಸಿ ಸತ್ಕರಿಸಿದರು

— ಬರದ್ವಾನ ಗ್ರಾಮದಲ್ಲಿ ಖೋಟಿ ನೋಟು ಹಾಗು ನಾಣ್ಯಗಳನ್ನು ಮಾಡುವ ದೊಡ್ಡದೊಂದು ಗುಪ್ತ ಕೂಟವನ್ನು ಬಂಗಾಲ ಪೋಲೀಸರು ಪತ್ತೆ ಮಾಡಿದ್ದಾರೆ; ಶೋಧದಲ್ಲಿ ಸಾಧನಗಳೂ, ಚಕ್ರಗಳೂ ದೊರೆತವು; ಸುಮಾರು ೧ ಲಕ್ಷಕ್ಕೆ ಮಿಕ್ಕಿ ನೋಟುಗಳು ಈ ಕೂಟದಲ್ಲಿ ತಯಾರಾಗಿ ಕಲಕತ್ತ-ಡಾಕಾ ಮುಂತಾದ ಗ್ರಾಮಗಳಲ್ಲಿ ಚಲಾವಣೆಯಾದವು; ಕೆಲವರಿಗೆ ಸೆರೆಹಿಡಿಯಲಾಗಿದೆ;

— ಅಮೇರಿಕೆಯಲ್ಲಿ ಒಬ್ಬ ಪ್ರಚಂಡ ಬಾಲಕನಿದ್ದಾನೆ; ಈತನ ಪ್ರಾಯವು ಬರೇ ೧೪ ವರ್ಷ; ತೂಕ ೩೩೦ ರತ್ತಲು; ಎತ್ತರವೋ ೬ ಅಡಿ ೪ ಅಂಗುಲ,

— ಈ ಬಾರಿ ನಮ್ಮ ಭರತ ಭೂಮಿಯಲ್ಲಿ ೩ ಕೋಟಿ ೩೦ ಲಕ್ಷ ಖಂಡಿ ಗೋದಿ ಬೆಳೆದಿದೆ, ಹಿಂದಿನ ವರುಷಗಳಿಗಿಂತ ಈ ಬೆಳೆ ತೀರ ಕಡಿಮೆ:

— ಹೊಸ ಹೊಸ ಶೋಧಗಳಿಂದ ನಾವೆಲ್ಲಿ ಮುಟ್ಟುತ್ತೇವೋ ಏನೋ? ಮೋಟಾರುಗಳಿಗೆ ಪೆಟ್ರೋಲ ಬೇಡವಂತೆ! ವಿದ್ಯುಚ್ಛಕ್ತಿಯೂ ಬೇಡವಂತೆ! ಹವೆಯಲ್ಲಿರುವ ವಿದ್ಯುತ್ತನ್ನು ಸೇರಿಕೊಂಡು ಮೋಟಾರನ್ನು ನಡಿಸುವ ಹೊಸ ಶೋಧವನ್ನು ಅಮೇರಿಕದ ಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ;

— "ಮಹಾವೀರ" ಎಂಬ ಹಿಂದೀ ವಾರಪತ್ರಿಕೆಯಲ್ಲಿ ಸಂಪಾದಕರಾದ ಪಂಡಿತ ಜಗತನಾರಾಯಣ ಲಾಲರವರು ಸರ್ವಾಧಿಪತಿ ಇರ್ವಿನ್ ದೊರೆಗಳ ಭಾಷಣವನ್ನು ಟೀಕಿಸಿ ಬರೆದ ಲೇಖದಿಂದ ರಾಜದ್ರೋಹವಾಯಿತೆಂದು ಖಟ್ಲೆಯಾಗಿ ಪಂಡಿತ ಜಗತ್ನಾರಾಯಣಲಾಲರವರಿಗೆ ೧ ವರ್ಷ ಸಖ್ತ ಕೈದು ಹಾಗು ೧ ಸಾವಿರ ರೂಪಾಯಿ ದಂಡ ವಿಧಿಸಲಾಗಿದೆ. ಜಗತ ಬಾಬುಗಳು ಶಿಕ್ಷೆಯನ್ನು ಸಮಾಧಾನ ಚಿತ್ತದಿಂದ ಕೇಳಿಕೊಂಡು ಮ್ಯಾಜಿಸ್ಟ್ರೇಟರು ಸಭ್ಯತನದಿಂದ ನಡಿಸಿಕೊಂಡ ಬಗ್ಗೆ ಅವರ ಉಪಕಾರ ಮನ್ನಿಸಿದರು ಪಂಡಿತಜೀಯವರು ಸಂಯುಕ್ತ ಪ್ರಾಂತದ ಕಾಯಿದೆ ಕೌನ್ಸಿಲಿನ ಸಭಾಸದರೂ ಹಿಂದೂ ಮಹಾಸಭೆಯ ಮುಖ್ಯ ಕಾರ್ಯದರ್ಶಿಗಳಿದ್ದರು

— ಮುಂಬಯಿಯಲ್ಲಿ ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸುವದಕ್ಕಾಗಿ ಶ್ರೀ ರಾಮನವಮಿಯ ಮುಹೂರ್ತದಲ್ಲಿ ಬಹಿಷ್ಕಾರ ಪ್ರಚಾರ ಸಂಸ್ಥೆಯು ಸ್ಥಾಪಿತವಾಗಿದೆ, ಶುಕ್ರವಾರಕ್ಕೆ ಇಲ್ಲಿಯ ಯುವಕರು ಸಭೆ ಸೇರಿ ಸ್ವದೇಶಿಯ ಪುರಸ್ಕಾರ, ಬ್ರಿಟಿಶ ಸರಕುಗಳ ಬಹಿಷ್ಕಾರವನ್ನು ನಿರ್ಧರಿಸಿದ್ದಾರೆ;

— ಅಖಿಲ ಭಾರತೀಯ ಅಗರವಾಲ ಮಹಾಸಭೆಯು ಸುಧಾರಕ ಪಕ್ಷವು ವಿಧವಾ ವಿವಾಹದ ನಿರ್ಧಾರವನ್ನು ಕೈಕೊಳ್ಳಲಿಲ್ಲ; ಸನಾತನಿಗಳ ಮುನಿಸಿಕೆಗಾಗಿ ಈ ನಿರ್ಧಾರವು ಕೈಕೊಳ್ಳಲಾಗಲಿಲ್ಲ; ಆದರೆ ವ್ಯಕ್ತಿಶಃ ವಿಧವಾ ವಿವಾಹವನ್ನು ಪುರಸ್ಕರಿಸಲು ಸಭಾಸದರಿಗೆ ಸ್ವಾತಂತ್ರ್ಯ ಕೊಡಲ್ಪಟ್ಟಿದೆ;

—ಶ್ರೀಮಾನ್ ಶ್ರೀನಿವಾಸಅಯ್ಯಂಗಾರರು ಈ ಸನೇಹಾಗ ವಿಲಾಯತಿಗೆ ಹೋಗುವವರಿದ್ದಾರೆ; ಆರೋಗ್ಯದ ದೆಸೆಯಿಂದ ಹೋಗುವವರಿದ್ದಾರೆ ನಮ್ಮ ಲೋಕನಾಯಕರಿಗೆ ಆರೋಗ್ಯ ಕೊಡುವಂಥ ಸ್ಥಳಗಳು ಭರತ ಭೂಮಿಯಲ್ಲಿಲ್ಲೇನು?

ಮಹಾತ್ಮರ ಆತ್ಮಚರಿತ್ರೆ.

(೪೪) ವಕೀಲಿಯ ಸಂಗತಿಗಳು

ಹಿಂದುಸ್ಥಾನದೊಳಗಿನ ನನ್ನ ಜೀವನ ವೃತ್ತಾಂತವನ್ನು ನಿವೇದಿಸುವ ಮುಂಚೆ ದಕ್ಷಿಣ ಆಫ್ರಿಕೆಯ [illegible] ಕೆಲವು ಅನುಭವದ ಸಂಗತಿಗಳನ್ನು ನಾನು ಇಲ್ಲಿ [illegible] ವಿಸಬೇಕಾಗಿದೆ ಈ ಸಂಗತಿಗಳನ್ನು [illegible] ಒಂದು ಅಧ್ಯಾಯ ಹೇಳಲಿಕ್ಕೆ.

ಕೆಲ ವಕೀಲ [illegible]ಗಳೆಯರು ನನ್ನ ವಕೀಲಿಯ [illegible] ಸಂಗತಿಗಳನ್ನು [illegible] ನನಗೆ ಸೂಚಿಸಿದ್ದಾರೆ ಈ ಸಂಗತಿಗಳನ್ನೆಲ್ಲ ನಾನು ವಿವರಿಸಹೋದರೆ, ಅದೊಂದೇ [illegible] ದವೇ ಆಗುವದು ವ[illegible] ನಾನು [illegible] ನ ಆದರೆ ಸತ್ಯಾಚರಣೆಯ ಸಂಬಂಧವುಳ್ಳ [illegible] ನಮೂದಿಸುವದು ಅಪ್ರಸ್ತುತವಾಗಲಾರದು

ನನ್ನ [illegible] ಹೀಗೆ ನೆನಪು [illegible] — ನನ್ನ ಉದ್ಯೋಗದಲ್ಲಿ ನಾನು ಅಸತ್ಯದ ಆಶ್ರಯಿಸಲಿಲ್ಲ [illegible] ಸಾರ್ವಜನಿಕ ಹಿತಕ್ಕಾಗಿಯೇ ನನ್ನ [illegible] ಉದ್ಯೋಗವು ನಡೆಯಿತು [illegible] ನನಗೆ [illegible] ನಾನು [illegible] ಈ [illegible] ನಾನು [illegible] ಹೇಳಿದ [illegible] ನನಗೆ [illegible] ಇದ್ದೇ [illegible] ಆದರೆ [illegible] ಕೆಲ ಪ್ರಸಂಗಗಳನ್ನು [illegible] ಅವರ [illegible]

ವಿದ್ಯಾರ್ಥಿ ದಶೆಯಲ್ಲಿದ್ದಾಗ ವಕೀಲಿಯ [illegible] ಉದ್ಯೋಗವೆಂದು [illegible] ನನ್ನಲ್ಲಿ ಅವಸ್ಥಾಂತರ [illegible] ವನ್ನಾಗಲೀ, ದ್ರವ್ಯವನ್ನಾಗಲೀ ಸಂಪಾದಿಸಲು [illegible] ಹಾತೊರೆಯಲಿಲ್ಲ

ದಕ್ಷಿಣ ಆಫ್ರಿಕೆಯ [illegible] ನನ್ನ [illegible] ಪರೀಕ್ಷೆ [illegible] ನನ್ನ ಪ್ರತಿಸ್ಪರ್ಧಿಗಳ [illegible] ಗಾರರಿಗೆ ತಯಾರಿಸಿ ತಂದಿದ್ದರಿಂದ ನನಗೆ [illegible] ತಿಳಿದಿತ್ತು. ನನ್ನ ಪಕ್ಷಗಾರರಿಗೂ, [illegible]ರಿಗೂ, [illegible] ಮಾಡಲು ನಾನು ಪ್ರೇರೇಪಿಸಿದರೆ, ಮೊಕದ್ದಮೆಗಳಲ್ಲಿ [illegible] ಗೆಲುವು [illegible]. ಆದರೆ, ಎಂದೂ ಆ [illegible] ನಾನು ಒಳಗಾಗಲಿಲ್ಲ. ಒಂದು ಮೊಕದ್ದಮೆಯ [illegible] ನನಗೆ ಗೆದ್ದ ಬಳಿಕ ನನ್ನ ಪಕ್ಷಗಾರನು ನನಗೆ [illegible] ಸಂಶಯ ಬಂತ [illegible] ನನ್ನ [illegible] ಪಕ್ಷಗಾರನ [illegible] ವಮಾತ್ರ [illegible] ನನ್ನ ಅಂತಃಕರಣ [illegible] ಅಪೇಕ್ಷೆ ಮೊಕದ್ದಮೆಯ [illegible] ನನ್ನ ವೇತನವನ್ನು [illegible] ಪಕ್ಷಗಾರರು [illegible] ನನ್ನ ವೇತನಕ್ಕಿಂತ [illegible] ನನ್ನ [illegible]

ಸುಳ್ಳು ಮೊಕದ್ದಮೆ [illegible] ಸಾಕ್ಷಿಗಾರರಿಗೆ ಕಲಿಸಿ [illegible] ನನ್ನಿಂದ ಅಪೇಕ್ಷಿ [illegible] ಹೊಸ ಪಕ್ಷಗಾರರಿಗೆ ಮುಂಜಾಗ್ರತೆ [illegible] ಇದರಿಂದ [illegible] ಪ್ರಕರಣಗಳು ನನ್ನ [illegible] ನನ್ನ [illegible] ಆ ಪ್ರಕಾರದ್ದಾಯಿತು ನನ್ನ ಪಕ್ಷಗಾರರಾದರೂ ಸತ್ಯ ಪ್ರಕರಣಗಳನ್ನು ನನಗೊಪ್ಪಿಸಿ, [illegible]ಗಳನ್ನು ಬೇರೆ ಕಡೆ ಒಯ್ಯುತ್ತಿದ್ದರು

ಒಂದು ಪ್ರಕರಣದಲ್ಲಿ ಮಾತ್ರ ಬಹಳ ಪರೀಕ್ಷೆಯಾಯಿತು ಈ ಮೊಕದ್ದಮೆಯು ಪಕ್ಷಗಾರರು ನನ್ನ ದೊಡ್ಡ ಪಕ್ಷಗಾರರು. ಅದರೊಳಗ ಲೆಕ್ಕಾಚಾರದ ವಿಷಯವೇ ಅದಲ್ಲ [illegible] ವಿಷಯ ಮೊಕದ್ದಮೆಯು ಬಹಳ ದಿನಗಳ ವರೆಗೆ ನಡೆಯಿತು ಅನೇಕ ನ್ಯಾಯಮೂರ್ತಿಗಳು ಈ ಮೊಕದ್ದಮೆಯನ್ನು ಅಂಶತಃ ವಿಚಾರಿಸಿದರು ಕೊನೆಗೆ ಲೆಕ್ಕಾಚಾರದ ಪ್ರಕ್ರಿಯು ಕೋರ್ಟಿನಿಂದ ಪಂಚರಿಗೆ ಒಪ್ಪಿಸಲಾಯಿತು ಲೆಕ್ಕಾಚಾರದ ವಿಷಯದಲ್ಲಿ ತಜ್ಞರೆನಿಸಿಕೊಳ್ಳುವವರಿಗೆ ಪಂಚರಾಗಿ ನೇಮಿಸಿತ್ತು. ಪಂಚರ ನಿರ್ಣಯವು ಸಂಪೂರ್ಣವಾಗಿ ನನ್ನ ಪಕ್ಷಗಾರರಿಗೇ ಅನುಕೂಲವಾಯಿತು ಪಂಚರು ತಪ್ಪಿ ಒಂದು ತಪ್ಪನ್ನು ಮಾಡಿದ್ದ[illegible] ತಪ್ಪು [illegible] ಆದರೆ ಭಯಂಕರ [illegible] ಒಂದಿಷ್ಟು ಬರಿಯುವ ರಕಮು ಜಮೆ. [illegible] ವಿರುದ್ಧ ಪಕ್ಷಗಾರರು ಈ ನಿರ್ಣಯವನ್ನು ವಿರೋಧಿಸಿದರ [illegible] ಆವರ ಕಾರಣಗಳೇ [illegible] ನನ್ನ ಪಕ್ಷಗಾರರ ಪಕ್ಷದಿಂದ ಇಬ್ಬ ಬೆರಿಸ್ಟರರಿದ್ದ[illegible] ನಾನು [illegible]ನಾಗಿದ್ದೆ, ಹಿರಿ ಬೆರಿಸ್ಟರರಿಗೆ ಈ ತಪ್ಪು ಗೊತ್ತಾಯಿತು [illegible] ಪಕ್ಷಗಾರರು ಈ ತಪ್ಪನ್ನೊಪ್ಪಿಕೊಳ್ಳಲು [illegible]ಲ್ಲವಾಗಿ ಆವರ ಅಭಿಪ್ರಾಯ ಪಕ್ಷಗಾರರ [illegible] ಹಿತವಾಗದ ಯಾವದೇ ಸಂಗತಿಯನ್ನು ವಕೀಲರು ಒಪ್ಪಬಾರದಾಗಿ ಅವರು ಸ್ಪಷ್ಟವಾಗಿ ಹೇಳಿದರು. ತಪ್ಪು ಒಪ್ಪಲು [illegible]ರಿದ್ದೇವೆಂದು ನಾನಂದೆ.

ಹಿರಿ ಬೆರಿಸ್ಟರರು [illegible] — ಹೀಗಾದರೆ ಪಂಚರು ಮಾಡಿದ ಇಡೀ ನಿರ್ಣಯವು ರದ್ದಾಗುವ [illegible] ಹೀಗೆ ಪಕ್ಷಗಾರರ ಮೊಕದ್ದಮೆಯನ್ನು ಗಂಡಾಂತರ[illegible] ಲಕ್ಷಣಗಳಿಗೆ ಬುದ್ಧಿ ಇದ್ದ [illegible] ನಾನು ಇಂಥ [illegible] ಮೊಕದ್ದಮೆಯು ಪುನ[illegible] ಹೋದರ, ನನ್ನ ಪಕ್ಷಗಾರರಿಗೆ ಎಷ್ಟು [illegible] ಮುಂದಿನ ಪರಿಣಾಮವೇನಾಗುವದೋ? ಯಾರು ಹೇಳಬೇಕು

[illegible] ಈ ಸಂಭಾಷಣೆ ನಡೆಯಿತು ನಾನು [illegible] ನನ್ನ ಪಕ್ಷಗಾರರಿಗೂ [illegible] ಅಪಾಯವನ್ನು ಅನುಭವಿಸಲೇಬೇಕೆಂ[illegible] ನನ್ನ ಅಭಿಪ್ರಾಯ ಪಂಚರು ಮಾಡಿದ ತಪ್ಪು [illegible] ನಾವು ತಪ್ಪು ಒಪ್ಪದ್ದರಿಂದ ನ್ಯಾಯಾಧೀಶರು ಅದನ್ನು ಪುರಸ್ಕರಿಸ [illegible] ಪಕ್ಷಗಾರರಿಗೆ ಇದರಿಂದ ವ್ಯಸನವಾದರೂ ಅದರಿಂದ [illegible]

[illegible], ಇದನ್ನು ನಾವು ಒಪ್ಪಿಕೊಳ್ಳುವ ಕಾರಣವೇ [illegible]" ಎಂದು ಹಿರಿ ಬೆರಿಸ್ಟರರು ನುಡಿದರು

"ನ್ಯಾಯಾಧೀಶರು ಈ ತಪ್ಪನ್ನು ಕಂಡು ಹಿಡಿಯಲಿ[illegible], ನಮ್ಮ ಪ್ರತಿಸ್ಪರ್ಧಿಗಳಿಗೆ ಈ ತಪ್ಪು [illegible] ನಿಶ್ಚಯವಾಗಿ ಹೇಳಬಂದೀತು?" ಎಂದು ನಾನಂದೆ

"ಇರಲಿ, ನೀವೇ ಈ ಮೊಕದ್ದಮೆಯನ್ನು ನಡಿಸುತ್ತೀರಾ? ನಿಮ್ಮಂತೆ ಈ ಮೊಕದ್ದಮೆಯನ್ನು ನಡಿಸಲು ನಾನು ತಯಾರಿಲ್ಲ" ಎಂದು ಹಿರಿ ಬೆರಿಸ್ಟರರು ದೃಢ ಮನಸ್ಸಿನಿಂದ ನುಡಿದರು.

ನಾನು ವಿನಯಪೂರ್ವಕವಾಗಿ ನುಡಿದದ್ದೇನಂದರೆ.— "ನೀವು ನಡಿಸುವದಿಲ್ಲವಾದರೆ, ನಾನು ನಡಿಸಲು ಸಿದ್ಧನಿದ್ದೇನೆ. ಪಕ್ಷಗಾರರು ಮಾತ್ರ ಹಾಗೆ ಅಪೇಕ್ಷಿಸಬೇಕು. ತಪ್ಪನ್ನು ಒಪ್ಪಿಕೊಳ್ಳದಿದ್ದರೆ, ಈ ಮೊಕದ್ದಮೆಯಲ್ಲಿ ಇನ್ನು ಮುಂದೆ ಕೆಲಸ ಮಾಡಲು ನಾನು ಒಪ್ಪುವದಿಲ್ಲ.

ಹೀಗೆ ಹೇಳಿ ನಾನು ನನ್ನ ಪಕ್ಷಗಾರರ ಮೋರೆ ನೋಡಿದೆನು ಪಕ್ಷಗಾರರು ಗೊಂದಲದಲ್ಲಿ ಬಿದ್ದರು ಬಹುದಿಂದ ನಾನು ಈ ಮೊಕದ್ದಮೆಯನ್ನು ನಡಿಸಿದ್ದೆ. ಪಕ್ಷಗಾರರಿಗೆ ನನ್ನ ಮೇಲೆ ಸಂಪೂರ್ಣ ನಂಬಿಗೆ ಇತ್ತು ನನ್ನ ಗುಣದೋಷಗಳೆಲ್ಲ ಅವರಿಗೆ ಗೊತ್ತಿದ್ದವು ಅವರು ನನಗೆ ಹೇಳಿದ್ದೇನಂದರೆ:—"ಹಾಗಾದರೆ ನೀವೇ ಈ ಪ್ರಕರಣವನ್ನು ನಡಿಸಿರಿ, ತಪ್ಪನ್ನು ಒಪ್ಪಿಕೊಳ್ಳಿರಿ; ನಾವು ಸೋಲಬೇಕೆಂದು ವಿಧಿಘಟನೆ ಇದ್ದಲ್ಲಿ, ಹಾಗೇ ಆಗುವದು. ಪರಮಾತ್ಮನು ನ್ಯಾಯ ಪಕ್ಷವನ್ನು ಕಾಪಾಡಲಿ!"

ನನಗೆ ಸಂತೋಷವಾಯಿತು ಹೀಗೆ ಆತನು ಹೇಳುವನೆಂದು ನಾನು ತಿಳಿದಿದ್ದೆ ಹಿರಿ ಬೆರಿಸ್ಟರರು ಪುನಃ ನನಗೆ ಮುಂಜಾಗ್ರತೆ ಹೇಳಿದರು ನನ್ನ ಹಟನಿಗ್ರಹಕ್ಕಾಗಿ ಪಶ್ಚಾತ್ತಾಪ ಮಾಡಿದರು ಆದರೂ, ಸತ್ಯಕ್ಕಾಗಿ ನನಗೆ ಅಭಿನಂದಿಸಿದರು.

ಕೋರ್ಟಿನಲ್ಲಿ ನಡೆದ ಹಕೀಕತನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸುವೆನು.

ಕಾಶಿಯ
ಅಪೂರ್ವ ಸಾಮಾನುಗಳು!

ನಾವು ಕಾಶಿಯ ಪಟ್ಟೆ ಮಡಿ, ಶೀರೆ, ಖಣ, ರೇಶ್ಮೆ ಶಲ್ಲೆ, ಬಚ್ಚಾನೆ, ಕಾಶ್ಮೀರದ ಶಾಲು, ಸಕಲಾತಿ, ಧಾಬಳಿ, ರುದ್ರಾಕ್ಷ ಸರ, ಕಂಠಿ, ಗೌರೀಶಂಕರ, ಪಂಚಾಮುಖನ, ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಂಟಿ, ತಂಬು, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನ ಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ನಮ್ಮ ಪತ್ತೆ: -

ವಿಶ್ವನಾಥ ಎಂಡ್ ಬ್ರದರ್ಸ,

ದುರ್ಗಾಘಾಟ,

ಬನಾರಸ್ ಸಿಟಿ.

ಮೋಟಾರ ಉಪಯೋಗದ ಬಗ್ಗೆ
ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!



ನಮ್ಮಲ್ಲಿ ಮೋಟಾರಿಗೆ [illegible] ವ [illegible] ಯಿಂದ ತಯಾರಿಸಿದ [illegible] ಬಣ್ಣಗಳ ಸಿಗುತ್ತವೆ.

ದರ ಪ್ರಾಬಂಕ್ಕೆ ೦-೩-೭

ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಜಲೀಟಿ ಕಟ್ಟಿಗೆಯಿಂದ ತಯಾರಿಸಿದ ಬಿಗಿ ಸವೇ [illegible] ಪೆಟ್ಟಿಗೆಗಳು ಹಾಗೆ ಮೋಟಾರ ಬೋಡಿ ಬಗ್ಗೆ ಸ್ಪೆಶಲಿಂಗ್ಸ ಯೋಗ್ಯ ದರದಿಂದ ನಮ್ಮ ಕಾರ್ಖಾನೆಯಲ್ಲಿ ಸಿಗುತ್ತವೆ. ಪೆಟ್ಟಿಗೆ ೧೪ ಬೆಲೆ ರೂ. ೩ ಸ್ಯಾಂಪ ೩'×೧'×೧'

ಬೇಕಾದವರು ಅರ್ಧ ರಕಮು ರೂ. ೨-೦-೦ ಮುಂಗಡವಾಗಿ ಕಳಿಸಬೇಕು,

ವಿಳಾಸ -- ಎಸ್. ಎಮ್ ಪಂಡಿತ,

ಮೋಟಾರ ಟಿಕೀಟ ಆಫೀಸ, ದುರ್ಗಾಕೇರಿ. ಹೊನ್ನಾವರ. (ಉ ಕ)

ವಿವಿಧ ಸಂಗ್ರಹ.

(೫ ನೇ ಪುಟದ ಮೇಲಿಂದ ಮುಂದರಿದದ್ದು)

ಣವೆಂದೂ ಬರೆದಿದ್ದಾರೆ. ಶ್ರೀ ಮಹಾತ್ಮರು “ಯಂಗ ಇಂಡಿಯಾ” ಪತ್ರಿಕೆಯಲ್ಲಿ ಒಂದು ಲೇಖ ಬರೆದು ಈ ನೋಟೀಸುಗಳಿಗೆ ತಮ್ಮ ಕಾರಣರಾದವರಾಗಿ ಅಪ್ಪಣೆ ಮಾಡಿದಾರೆ. ಎಲ್ಲರೂ ಬನಿಯಾ ಜಾತಿಯವರು, ಇವರು ಸಾಮಾನ್ಯವಾಗಿ ದುರ್ಬಲಮನಸ್ಕರೂ, ಅಂಜುಬುರುಕರೂ ಇರುವದರಿಂದ ಅವರ ಮೇಲೆ ಈ ನೋಟೀಸುಗಳು ಹೊರಡಿಸಲ್ಪಟ್ಟಿವೆಂದು ಮಹಾತ್ಮರು ಅಭಿಪ್ರಾಯಪಟ್ಟಿದ್ದಾರೆ. ಎದ್ದರೆ ಕಟ್ಟಿ ಎಂಬಂತೆ ಹೆದರಿಸಿ, ಹೊರಡಿಸಿದ ನೋಟೀಸುಗಳಿವು! ಅವುಗಳನ್ನು ಅಲಕ್ಷಿಸಿ ಸತ್ಯಾಗ್ರಹಿಗಳು ಕೈಕೊಂಡ ಕಾರ್ಯವನ್ನು ಮುಂದರಿಸತಕ್ಕದ್ದು.

ವೃತ್ತಸಾರ.

— ಲಾಲಾ ಲಜಪತರಾಯರು ಅಸ್ಪೃಶ್ಯ ನಿವಾರಣೆಗಾಗಿ ದಕ್ಷಿಣ ದೇಶಕ್ಕೆ ಹೊರಟಿದ್ದಾರೆ ಪುಣೆಯಲ್ಲಿ ಲಾಲಾಜಿಯವರು ಸಂಚರಿಸಿ, ಅಸ್ಪೃಶ್ಯತೆಯ ಕಲಂಕವನ್ನು ಪರಿಹರಿಸುವರು

— ಮುಂಬಯಿ ಕುದುರೆ ಶರ್ಯತ್ತಿನ ಜಾಕೀಕರಲ್ಲೊಬ್ಬರಾದ ಮಿ| ಇಂಗ್ಲೀಯವರು ತಮ್ಮ ಕುದುರೆ ಸವಾರಿನಾಡ ಸಾರ್ಜಂಟರ ಮೇಲೆ ೫೦೦೦೦ ರೂಪಾಯಿ ನುಕಸಾನ ಕಟ್ಟಿ ಕೊಡಿ, ಮುಂಬಯಿ ಹಾಯಕೋರ್ಟಿನಲ್ಲಿ ದಾವೆ ಮಾಡಿದ್ದರು. ಸಾರ್ಜಂಟರು ಬರೆದ ಪತ್ರಗಳೊಳಗಿನ ಕೆಲವು ವಿಧಾನಗಳು ಮಾನನಷ್ಟಕರವಾದವುಗಳೆಂದು ಇಂಗ್ಲೀಯವರ ಸಾಧನೆಯಿತ್ತು ಮೂಲ ಕೋರ್ಟಿನಲ್ಲಿ ೧ ರೂಪಾಯಿ ಮಾನನಷ್ಟ ಕೊಡಿಸಲಾಗಿತ್ತು, ಅಪೀಲಿನಲ್ಲಿ ಇದೇ ದಾವೆಯು ಧಿಃಕರಿಸಲಾಗಿದೆ

— ಸ್ವಾಮಿ ಶ್ರದ್ಧಾನಂದರ ಮಗಂದಿರಾದ ಪ್ರೊ| ಇಂದ್ರರವರ “ಅರ್ಜುನ” ಪತ್ರಿಕೆಯಲ್ಲಿ ಪ್ರಕಟವಾದ ೮ ಖವು ಸಮಾಚಾರಗಳಲ್ಲಿ ವೈರಜನಕವಿರುತ್ತವೆಂದು ಇಂದ್ರರವರಿಗೆ ೩|| ವರ್ಷಗಳ ಶಿಕ್ಷೆ ಹಾಗೂ ೧೫೦೦ ರೂಪಾಯಿಗಳ ದಂಡವಾಗಿತ್ತು ಸೆಶನ್ ಜಡ್ಜರು ಈ ಶಿಕ್ಷೆಯನ್ನು ತಗ್ಗಿಸಿದರು. ೬ ತಿಂಗಳ ಸಕ್ರಮ ಕಾರಾಗೃಹವಾಸ ಹಾಗು ೧೦೦ ರೂ ದಂಡ ಮಾಡಿದರು. ಹೈಕೋರ್ಟಿಗೆ ಮಾಡಿದ ಅಪಿಲು ಧಿಃಕರಿಸಲ್ಪಟ್ಟಿದೆ.

— ಕಲಕತ್ತೆಯಲ್ಲಿ ಸುಭಾಷಚಂದ್ರ ಬೋಸರು ಸ್ವದೇಶಿ ಮೇಳವೆಂಬ ಸ್ವದೇಶಿ ಪ್ರದರ್ಶನವನ್ನು ಗುರುವಾರಕ್ಕೆ ತೆರೆದರು ಶಾಶ್ವತವಾದ ಸ್ವದೇಶಿ ವಸ್ತುಸಂಗ್ರಹಾಲಯವೊಂದನ್ನು ಸ್ಥಾಪಿಸಬೇಕಾಗಿ ಶ್ರೀ| ಸುಭಾಷ ಬೋಸರವರು ಪ್ರತಿಪಾದಿಸಿದರು

— ಸ್ಮಾಯುನ್ ಬಹಿಷ್ಕಾರದ ಚರ್ಚೆ ನಡೆದಾಗ ಮಧ್ಯಪ್ರಾಂತ ಸರಕಾರವು ತನ್ನಿಂದ ನೇಮಿಸಲ್ಪಟ್ಟ ಸಭಾಸದರಿಗೆ ಸರಕಾರಕ್ಕೆ ಅನುಕೂಲ ಮತ ಕೊಡಲು ಸರಕಾರದಿಂದ ಒತ್ತಾಯವಾಯಿತಾಗಿ ಸಭಾಸದರು ದೂರುತ್ತಾರೆ. ಸ್ವಾಗತ ವೇಷವನ್ನು ಸರಕಾರವು ಹೇಗೆ ಬಳೆಯುತ್ತದೆ ನೋಡಿ!

— ಕಲಕತ್ತೆಯ ಲಿಲು ಕಾರಖಾನೆಯಲ್ಲಿ ಸಂಬಳಗಿವೆ ೧೫೦೦೦ ಕೂಲಿಕಾರರು ಸಂಪು ಮಾಡಿದ್ದಾರೆ, ಸಂಪುಗಾರರ ಮೇಲೆ ಪೋಲೀಸರು ಗುಂಡು ಹಾಕಿದರು, ೬ ಮಂದಿಗಳು ಸತ್ತರು, ೧೨ ಮಂದಿಗಳಿಗೆ ಘಾಯವಾಗಿದೆ, ಸಂಪುಗಾರರು ಕೆಲಸ ಮಾಡುತ್ತಿದ್ದ ಕೂಲಿಕಾರರಿಗೆ ಹೊಡಿಬೇಕೆಂದು ಪ್ರಯತ್ನಿಸಿ ಮಾಡಿದ್ದರಿಂದ ಗುಂಡು ಹಾರಿಸಲಾಯಿತಂತೆ!

— ಪರದೇಶಿ ಸರಕುಗಳ ಬದಲಿಗೆ ಸ್ವದೇಶಿ ಸರಕುಗಳನ್ನು ಉಪಯೋಗ ಮಾಡಬಯಸುವವರು ಪುಣೆಯ ಸ್ವದೇಶಿ ಪ್ರದರ್ಶನದ ಚಾಲಕರಿಗೆ ಬರೆಕೊಳ್ಳಬೇಕು ಪರದೇಶಿ ಸರಕುಗಳಿಗೆ ಪ್ರತಿಯಾಗಿ ಸ್ವದೇಶಿ ಸರಕು ಸಿಗುವ ಪತ್ರವನ್ನು ಅಲ್ಲಿಂದ ಪೂರೈಸಿಕೊಳ್ಳಬಹುದು

. ಬೆಳಗಾವಿಯ ಸರ್ಕಲ ಇನಸ್ಪೆಕ್ಟರ ಆಫೀಸಿನವರು ಒಂದು ಸರ್ಕ್ಯೂಲರನ್ನು ಹೊರಡಿಸಿ, ಶಿಕ್ಷಕರು ಕನ್ನಡದಿಂದ ಸಹಿ ಮಾಡಬೇಕೆಂದು ಹುಕುಮು ಮಾಡಿದ್ದಾರೆ ಮಾಡಿ ಸಹಿಯನ್ನು ಎಷ್ಟಕ್ಕಾ 'ಮಾಡಬಾರದಂತೆ! ಇಂಗ್ಲಿಷದಿಂದಾದ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತ ಪ್ರಯಾಣಿಕರಿಗೆ ಇಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ಮಿಶ್ರಣದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಸಿಯು ಹೋಗಿ ಶಕ್ತಮಾದ ನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಿಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗವಾಗುವದು. ಮೂರೆ ದಿವಸದಲ್ಲಿಗುಣಬರುವದು ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಚ ಸಾಫ ಆಗುವದು, ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಕೊಡು ಬೀಳುವದಿಲ್ಲ. ೬ಜನ ಬಾಟಲಿಗಳ ಕಿಮ್ಮತು ೧೨—೦—೦ ಮತು ೧ ಬಾಟಲ ಪುಕ್ಕಟ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪ ೧ ೩ ಬಾಟ್ಲಿಗೆ ೩-೮ ೬ ಜನಿಗೆ ೧೩-೧-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ಸಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ಸ್ವತಃ ರಜಿ] ವಜ್ರಾಂಗ ಸುಂದರಪಾಕ.

ವೀರ್ಯವು ಕಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ 'ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪಡಿಶೆ, ಗರ್ಮಿ, ಶೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ 'ಕಾಮುವಾಸನೆಯು' ಮತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಅತಿ) ವನಸ್ಪತಿಗಳು ಮತು ಭಸ್ಮ ಇದ್ದು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿದ್ದನ್ನು ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳಯ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫| ರೂ ೩ ಡಬ್ಬಿಗೆ ೧೪| ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವಿ. ಪಿ. ಖರ್ಚ ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- एकें रतलास किंमत १॥ रुपये,

रामबाण औषध

सर्दि वाजविणारें
भूक वाढविणारें
शौच्यास साफ करणारें
झोपें आणणारें
शक्ति देणारें
तेजस्वीपणा आणणारें

विप्पंस ---

कॅटलाग मागवा,

झंडु फार्मास्युटिकल वर्क्स लिमिटेड
मुंबई नं. १४

ऐजंट— मेसर्स पंडित आणी कंपनी,
तीर्थहळ्ळी

सिर्सि एजंट- एस. एल. धाकप्पा आणि सन्स

ಹಿಂದುಸ್ಥಾನದಲ್ಲಿಯ ಪ್ರಖ್ಯಾತ ಇನ್ಶೂರನ್ಸ
'ನೇಶನಲ್ ಇನ್ಶೂರನ್ಸ ಕಂಪೆನಿ, (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ಈ ಮಂಡಲವು ಒಂದು ಕೋಟಿಯನ್ನು ಅತಿಕ್ರಮಿಸಿದ ಕಳೆದ ವರುಷ ಲೆಕ್ಕಾಚಾರದ ವೇಳೆ 5 40,04 ರೂಪಾಯಿಗಳ ಅಭಿವೃದ್ಧಿ ದರ್ಶಿಸಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 1l ರೂಪಾಯಿಗಳಂತೆಯೂ, ಪೂರ್ತಿ ಜೀವವಿಮೆ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿಗಳಂತೆಯೂ ಬೋನಸ ಕೊಟ್ಟಿರುವದು

ಹೋದವರ 1000 ರೂಪಾಯಿಗಳ ... ಎಷ್ಟು ... ನಮ್ಮಲ್ಲಿ ಸುಮಾರು 1200 ರೂಪಾಯಿಗಳ ... ನ್ನು ಪಡೆಯಿರಿ ನಮ್ಮ ದರವು ಅಷ್ಟೆ ... ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,** *Branch Secretar*
ಬಿ. ಸಿ. ಶಿರಾಳಕೊಪ್ಪ, ಲೋಬಂಡಿ ಬಿಲ್ಡಿಂಗ, ಹುಬ್ಬಳ್ಳಿ. Alice Building *Hornby Road, BOMBAY*

S. U. Narayanacharya & CO.
Chaukamba, BENARES CITY,

ನಮ್ಮಲ್ಲಿ ... ಕಾಶಿ ... ಕಣ ... ರ ದ್ರಾಕ್ಷಿ ಕಸ್ತೂರಿ ... ಶಿಗತ್ತವೆ ...

ಕೇಳುವವರಿಗೆ ಧರ್ಮವಾಗಿ ಕಳಿಸಲಾಗುತ್ತದೆ.

ವಿಳಾಸ - ಶಿರೋಮಣಿ ನಾರಾಯಣ ಶಾಸ್ತ್ರಾಚಾರ್ಯ

ಮತ್ತು ಕಂಪನಿ, ಚೌಕಂಬಾ ಕಾಶಿಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಕೃತಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ... ಪುಕ್ಕಟೆ ಕಳಿಸಲಾಗುವದು

ಪುಡಿ ಒಂದಕ್ಕೆ ಕ್ರಯ ರೂ ೦-೧೦, ವ್ಹಿ. ಪಿ ೪ ಅಣೆ ಡಜನ್ ೧ ಕ್ಕೆ ರೂ. ೭-೮-೦, ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ

ದಿ ... ಗುರುಬಸವ ಅಂಡ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪಾರ್ಕಟೌನ, ಮದರಾಸು

ಇದು "ಕರಾಮತ" ಗಾಣ—
ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ.



ಈ ಗಾಣದಿಂದ ಶೇಕಡಾ ೭೫ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಹಸುವುಳ್ಳದ್ದು ಜಾಳಿಕೆಯದು ವಿಶೇಷ ಯಂತ್ರಸಾಮುಗ್ರಿಯೂ ಇಲ್ಲ. ಸಾಮಾನ್ಯ ರೈತರು ಇದನ್ನು ಗರಿಪಡಿಸಬಲ್ಲರು ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ಬೇರಿಂಗು ಗನ್‌ಮೆಟಲ್‌ದವು. ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ಅಕ್ಷಲುಗಳು ಉಕ್ಕಿನವು ಎಷ್ಟೂ ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ
೧೦-೧೨ ಕರಾಮತಗಾಣಗಳು ದುಡಿಯುತ್ತಿವೆ ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ.
ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ



ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, ಚಳಿ, ಕೆಮ್ಮು, ಸುಟ್ಟಗಾಯ ಮುಂತಾದ ಎಲ್ಲಾ ತರದ ನೋವಿಗೆ ಅದರಂಥ ಗುಣ ಕೊಡದ ... ರೋಗಗಳಿಗೆಲ್ಲ ಶೀಘ್ರದಿಂದ ಸಿದ್ಧವಾದ ಮದ್ದು ' ನೋವು ಚಿಕ್ಕದೆಂದು ... ತಿರಸ್ಕರಿಸಬಾರದು. ಚಿಕ್ಕ ನೋವಿನಿಂದಲೇ ದೇಹಕ್ಕೆ ಸುಖ ದೊರೆಯುವದಿಲ್ಲ. ಅಮೃತಾಂಜನದ ಒಂದು ಸಣ್ಣ ಬುಟ್ಟಿಯಿಂದ ಇಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ ೦—೧೦—೦

ಎಲ್ಲ ಔಷಧಿ ಅಂಗಡಿಗಳಲ್ಲಿಯೂ ಸಿಗುತ್ತದೆ ಅಥವಾ **ಅಮೃತಾಂಜನ ಡಿಪೋ,**
ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, APRIL 9TH 1928.

ವರ್ಷ ೧೨

ಕಾನಡಾವೃತ್ತ.

ಸಂಚಿಕೆ ೨೬

THE KANARA NEWS.

ಒಕ್ಕದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ವ ನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

सर्वार्तहितकर्ता प्रेम्णा यादि लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ।

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಸ್ಮಾಲ
ಪ್ಯಾಯಿಕ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ. 1-0-
ಆ ಸಂತರ ಪ್ರತಿಸಾಲಿಗೆ 0-2-0.
ಜಾಹಿರಿಗೆಯ ಸಾಲು ಎಷ್ಟು
ಕೊಟ್ಟಿರುವದೋ ಆ ದರಾ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು.
ಬಹಳ ಜಾಹಿರಾತುಗಳ ಬಗ್ಗೆ
ಕರಾರ್ಪತ್ರ ಮಾಡಿ ಕಡಿಮೆ ಕಟ್ಟ
ಲ್ಪಡುವದು.

ಹೊಸ ಅಂಗಡಿ! ಹೊಸ ಮ್ಹಾಲು!!

ಕುಮಟೆ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು, ಕಬ್ಬಿಣದ ಸಾಮಾನು, ತರತರದ ಸಾಬೂನು, ಪೇಟೆಂಟ ಔಷಧಗಳು, ಕ್ರಾಜಿನ ಸಾಮಾನು, ಮುಂತಾದ ಎಲ್ಲ ಥರವಾರ ಮ್ಹಾಲು ಬಲು ಅಗ್ಗವಾಗಿ ದೊರೆಯುತ್ತವೆ!

ಕಿರಕೋಳ ವ್ಯಾಪಾರಿಗಳಿಗೂ ಮುನಾಫೆ ಸಿಗುವಂತೆ ಸ್ಪೇಶಲ್ ಹೋಲಸೇಲ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ, ನಮ್ಮಲ್ಲೇ ಮ್ಹಾಲು-ಪಡೆಯಲು ತೀವ್ರವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ವಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನ್ನಡ)

ಬೆಂಗಳೂರ ತಂಬಾಕಿನ ತಾಜಾ ನಸ್ಯ! ಸುಲಭ ಕ್ರಯ!!
೪೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿ ಹೊಂದಿದ
ಉತ್ಕೃಷ್ಟ ಬೆಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಹೆಸರಿನ ಆಡಂಬರಕ್ಕೆ ಮೋಸ ಹೋಗಬೇಡಿರಿ!!

ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ ೧ ನೇ ನಶ್ಯದ ಪುಡಿ ೪೮ ತೊಲೆ ಶೇರು ೧ರ ರೂ. ೧|
ನಂ ೨ ನೇ ೧-೨-೦
ನಂ. ೩ ನೇ ೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ— ನಮ್ಮ ನಶ್ಯದ ಉತ್ಕೃಷ್ಟತೆಯ ಬಗ್ಗೆ ಅನೇಕ ಮಹಾನುಭಾವರ ಸರ್ಟಿಫಿಕೇಟು ಗಳು ದೊರಕಿವೆ

ವಿಳಾಸ,— ಪುಂಡಲೀಕ ನಾಗಪ್ಪ,



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಬೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ತಿಜೋರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೋರ್ಥ್ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

कारवारांत मुंबई!!!

अर्थात

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वतः हातमागांवरील नानातऱ्हेच्या डिझायनच्या रंगी-बेरंगी चादरें, फॅशनेबल बाथ टोवेल, चौक, लहान-मोठे पंचे, सीडपाट, चीलपाट, शर्टिंग- कोटिंग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.
पोस्ट— मुंकेरि (कारवार.

FOR
HAND AND POWER
-- LOOMS --
SHUTTLES,
Roughest and even Finest COUNTS Steel & Brass REEDS.

COTTEN HEALDS
WIRE HEALDS
BOBBINS
OIL PAINTS,
AND
EMERY PAPERS
Can be had at
exceptionally reduced rates
From
P. P. TRIVEDI & CO.,
BRUCE Street, Fort, BOMBAY

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಡೇ--ಗೆ ಅಡಕವಾಗಿಯೂ ಇದೆ ಮಂತೆ, ಚಿಕ್ಕ ಸ್ಪ್ರಿಂಗ್... ಯಾರಿಸಿ ಹಿಂಬಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋರ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸ ವಂತೆ ಲೀವರ್ ಮೂವೆಂಟ್ಸಗಳಿಂದ ಈ ಗ... ರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ -- ಫೌಂಟಿನ ಪೆನ್ನಾ ೧, ಕೇರಾಸಿನ್ ಬಾಟ್ಲಿ ೧, ಪನ್ನದ ಗಂಡಿಗಳು ೪ ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೋಪು ೧, ಪೆನ್ನಾಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ ಗೋಲ್ ನೆಕ್‌ಲೇಸ್ ಎಂಬ ಕತ್ತಿನ ಹಾರ ೧, ರಂಜನ ಬಾಚಣಿಗೆ ೧, ಕೈ ಗುಂಡಿಗಳ ಸಟ ೧, ಕೈವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ, ಬರೇ ರೂ ೪-೮-೦

ವಿಳಾಸ -- ಇಂಗ್ಲೀಷ ಎಂಪೋರಿಯಂ,
ಪೋಸ್ಟ ಬಾಕ್ಸ ನಂ ೧೨೫, ಮದರಾಸು.

ಟೇಬಲ್ ಟೈಂಪೀಸ ಇನಾಂ



ಈ ಪತ್ರಿಕೆಯ ಕಂಪ್ಲೀಟ್ ಫೌಂಟನ್ ಪೆನವು ವಿಲಾಯತಿಯಲ್ಲಿ ತಯಾರಾದದ್ದು ಇದಕ್ಕೆ ೧೪ ಕ್ಯಾರೆಟ್ಟಿನ ... ನಿಬ್ ... ಒರೆಯ ಮೇಲೆ ... ಅಕ್ಷರಗಳು ಬಹು ಚನ್ನಾಗಿ ಇರುವವು ಈ ತಿಂಗಳೊಳಗಾಗಿ ಈ ಪೆನವನ್ನು ತರಿಸಿ ಕೊಳ್ಳುವವರಿಗೆ ಒಂದು ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೆನಾ ೧ ಕ್ಕೆ ರೂ ೩-೮-೦.
ವಿಳಾಸ -- ಸೀಟಿಝನ್ ವಾಚ್ ಕಂಪನಿ ಪೋ ಬಾಕ್ಸ ನಂ ೨೭ ಮದರಾಸು

ಲ.ಚಿತ] ನನ್ನ ಶಾಸ್ತ್ರೀಯ ನಾದ [...

ಶರೀರಕ ಕ್ಷಣ



ಈ ಪುಸ್ತಕವನ್ನು ನನ್ನ ... ನನ್ನ ... ತೋರಿಸುವ ... ಹಾವಳಿಯ ... ತ್ವರಿತ ... ಬಂದಿತೆಂಬ ... ನಮ್ಮ ... ಯಾಗಳು ... ಪುಸ್ತಕವನ್ನು ... ಬೇಕೆಂಬ ... ತಿಳಿದ ... ನಿಮಗೆ ... ಕಳೆದುಕೊಳ್ಳದೆ, ... ವಿವೇಚನೆಯಲ್ಲಿ ...

ಪ್ರೊಫೆಸರ್ ಎಂ ವಿ ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ.

ಗೋಪಾಳ ಸಖಾರಾಮ

ಮತ್ತು ಕಂಪನಿ.

ಕಮಿಶನ್ ಏಜಂಟ್ಸ

ಕಾಳಬಾದೇವಿ ರೋಡ,

ಮುಂಬಯಿ. ನಂ ೩.

ಮುಂಬಯಿಯಲ್ಲಿ ... ಉತ್ತಮ ... ರೀತಿ ... ಕಳಿಸಿ ... ಹೆಚ್ಚಿಗೆ ಕೊಳ್ಳುವವರು, ... ಗುಳದ ... ದಾಣದೆ ... ಯೂ, ಲಾಭವಾಗ ... ಕೊಡತಿ ... ಕಳಿಸುವ ... ಬಗ್ಗೆ ಕಟಲಿಗು ಬರಿಸಿಕೊಳ್ಳಿ. ...

ಕಲ್ಪತರು ಮಿಶ್ರಣ

ಮಲೇರಿಯಾ ಸ್ಪೆಸಿಫಿಕ್

ಎಂದರೆ,
ಚಳಿ ಜ್ವರದ ಮೇಲೆ
ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಗುಣಗಳನ್ನು ಆಯುರ್ವೇದ ವಚನದಿಂದಲೇ ಕೇಳಬಹುದು --

ವಿಷ ಕಲ್ಪತರುನಾಮ ರಸಃ ... | ... ||

ಎಂಬಂತೆ ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ಮಾದ್ದಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವಿನಂತೆ ಕ್ಷೇಮದಾಯಕವೆಂದು ಸಿದ್ಧವಾಗಿರುತ್ತದೆ. ಜಂಗಲದೊಳಗಣ ಹಳ್ಳಿಗರು ಕಲ್ಪತರು ಮಿಶ್ರಣದ ಬಾಟ್ಲಿಗಳೊಂದನ್ನು ಜೊತೆಯಲ್ಲಿಟ್ಟುಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟಲಾರದು. ಇಂಗ್ಲೀಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ಪರಿಹಾರವಾಗುತ್ತದೆ. ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗೆ ರೂ. ೧-೬-೦

ನಮ್ಮ ಪತ್ತೆ:-- **ವೈದ್ಯ ಪಿ. ಆರ್. ಹರಿದಾಸ.**

ಶ್ರೀನಿವಾಸ ಫಾರ್ಮಸಿ, ಗರ್ಡ್ ಕೇರಿ, ಮಂಗಳೂರು

ಕುಂದಾಪುರ ಏಜಂಟ -- ಕಾಬಾಗ ಮಾಧವ ರಾವ ಹ್ಯಾಸಭಾಗ.

ವಿವಿಧ ಸಂಗ್ರಹ.

ಕ್ರೈಸ್ತರ ಧರ್ಮಪ್ರಸಾರ.

ಗೋಮಾಂತಕದಲ್ಲಿ ಶುದ್ಧೀಕರಣದ ಯಾನೆ ಪತಿತೋದ್ಧಾರದ ಪ್ರಯತ್ನಗಳು ನಡೆದಿವೆ ಪ್ರಮುಖರ ಭಾಷಣಗಳೂ ಆಗುತ್ತಿವೆ. ಪಣಶಿಯೊಳಗಿನ ಶ್ರೀ ಮಹಾಲಕ್ಷ್ಮಿ ದೇವಾಲಯದಲ್ಲಿ ಒಂದು ಸಭೆ ಸೇರಿತು. ಆ ಸಮಯ ಶ್ರೀ|| ವೈದ್ಯ ಪುಂಡಲೀಕ ವಾಮನ ವಿರ್ಣೇಕರರವರು ತಮ್ಮ ಭಾಷಣದಲ್ಲಿ ಆಯಾ ಕಾಲದಲ್ಲಿ ಒದಗಿದ ಆರ್ಯ ಲೋಕಸಂಖ್ಯೆಯ ಕ್ಷಯವನ್ನೂ ಕ್ರೈಸ್ತ ಧರ್ಮದ ಪ್ರಸಾರವನ್ನೂ ಕ್ರೈಸ್ತರ ಪ್ರಯತ್ನಗಳನ್ನೂ ಬಲು ವಿಶದವಾಗಿ ಬಣ್ಣಿಸಿದರು. ಇಡೀ ಭೂಮಂಡಲದ ಮೇಲೆ ಜಗತ್ತಿನಲ್ಲಿ ೧೬೪೬೪೦೧೦೦೦ ಲೋಕಸಂಖ್ಯೆಯಿದೆ ಅದರೊಳಗೆ ಕ್ರೈಸ್ತರು ೫೬೪೫೧೦೦೦೦, ಬೌದ್ಧರು ೪೬೩೮೭೦೦೦೦, ಮುಸಲ್ಮಾನರು ೨೨೧೮೨೫೦೦೦, ಹಿಂದುಗಳು ೨೧೬೭೩೪೦೦೦, ಕಾಡು ಜನರು ೧೫೮೩೭೦೦೦೦, ಯಹೂದಿಯರು ೧೨೨೦೫೦೦೦, ಇತರರು ೧೫೨೮೦೦೦೦ ಅಂದರೆ, ೬೦ ಕೋಟಿ ಹಿಂದುಗಳಲ್ಲಿ ಈಗ ೨೧-೨೨ ಕೋಟಿ ಹಿಂದುಗಳು ಉಳಿದಂತಾಗಿವೆ ಅಸ್ಪೃಶ್ಯರು ಹಿಂದು ಧರ್ಮವನ್ನು ತ್ಯಜಿಸಿ ಹೋದರೆ, ಹಿಂದು ಲೋಕ ಸಂಖ್ಯೆಯು ಇನ್ನೂ ಕಡಮೆಯಾಗುವದು. ಮೇಲ್ಕಂಡ ಜನ ಸಂಖ್ಯೆಯು ಪ್ರತ್ಯಕ್ಷ ಸ್ಥಿತಿಯನ್ನು ತಿಳಿಸುತ್ತದೆ. ಹಿಂದೆ ಅಂದರೆ, ೧೮೮೧ನೇ ಇಸ್ವಿಯಲ್ಲಿ ಹಿಂದುಸ್ಥಾನದಲ್ಲಿ ೧೦೦ಕ್ಕೆ ೭೪ ಮಂದಿ ಹಿಂದುಗಳಿದ್ದರು. ೧೮೯೧-೧೯೦೧ ೧೯೧೧-೧೯೨೧ನೇ ಖಾನೇಸುಮಾರಿಗಳಲ್ಲಿ ಅನುಕ್ರಮವಾಗಿ ೧೦೦ಕ್ಕೆ ೭೨-೭೧-೬೯-೬೮ ಹೀಗೆ ಹಿಂದುಗಳ ಬಲವು ಕಗ್ಗಿತು. ಇನ್ನು ೪೦ ಖಾನೇಸುಮಾರಿಗಳಾದರೆ, ಹಿಂದುಗಳು ಜಾಗೃತರಾಗದಿದ್ದರೆ ಅವರು ನಾಮಶೇಷರಾಗುವರು. ೧೦ ವರುಷಗಳಲ್ಲಿ ೮|| ಲಕ್ಷ ಹಿಂದುಗಳು ತಗ್ಗಿದರು. ೯ ಲಕ್ಷ ಕ್ರೈಸ್ತರು ಮಿಗಿಲಾದರು. ಅಂದರೆ, ದಿನಾ ೨೪೪ ಮಂದಿ ಹಿಂದುಗಳು ಕ್ರೈಸ್ತರಾಗುತ್ತಾರೆ. ೧೯೨೫ನೇ ಇಸ್ವಿಯಲ್ಲಿ ಮದ್ರಾಸದ ಪಾದ್ರಿಗಳೊಬ್ಬರು ಪ್ರಕಟಿಸಿದ ವೃತ್ತಾಂತದ ಮೇಲಿಂದ ದಿನಾ ೩೦೦ ಜನರು ಕ್ರಿಸ್ತಿ ಧರ್ಮದಲ್ಲಿ ಸೇರುತ್ತಿದ್ದಾರೆಂದು ತಿಳಿಯುತ್ತದೆ. ಹಿಂದುಗಳಿಗೆ ಮಂಕುಗೆಡಿಸುವದಕ್ಕಾಗಿ ಹಿಂದುಸ್ಥಾನದಲ್ಲಿ ೧೩೭ ಪಾದ್ರಿ ಸಂಸ್ಥೆಗಳಿದ್ದಾವೆ. ಈ ಸಂಸ್ಥೆಗಳಲ್ಲಿ ೧೮೭೭೬ ಮಂದಿ ಪಾದ್ರಿ ಯಾನೆ ಧರ್ಮೋಪದೇಶಕರಿದ್ದಾರೆ, ೫೦೦ ಮಂದಿ ಡಾಕ್ಟರರಿದ್ದಾರೆ ಇವರೆಲ್ಲರೂ ಕ್ರೈಸ್ತ ಧರ್ಮಪ್ರಚಾರ ಮಾಡುವವರೇ ಇವಲ್ಲದೆ ೪೨ ಅನಾಥಾಲಯಗಳಿದ್ದಾವೆ ೪೩ ಮುದ್ರಣಾಲಯಗಳಿವೆ. ಅವು ೯೯ ವರ್ತಮಾನ ಪತ್ರಿಕೆಗಳನ್ನು ಪ್ರಕಟಿಸುತ್ತವೆ. ೫೧ ಕಾಲೇಜುಗಳು, ೬೧೦ ಶಾಲೆಗಳು, ೬೧ ಟ್ರೇನಿಂಗ ಶಾಲೆಗಳು ಇರುತ್ತವೆ ಇವುಗಳಲ್ಲೆಲ್ಲ ೪೬೦೦೦ ವಿದ್ಯಾರ್ಥಿಗಳು ಕಲಿಯುತ್ತಾರೆ. "ಮುಕ್ತಿಫೌಜ" ಎಂಬದೊಂದು ಪ್ರತ್ಯೇಕ ಸಂಸ್ಥೆ ಇದೆ. ಈ ಸಂಸ್ಥೆಯಲ್ಲಿ ೩೦೮ ಯುರೋಪಿಯನ್ ಅಧಿಕಾರಿಗಳು, ೨೮೬೭ ಹಿಂದುಸ್ಥಾನಿ ಪ್ರಚಾರಕರು, ೫೦೭ ಪ್ರಾಥಮಿಕ ಶಾಲೆಗಳು, ೨೨ ಅನಾಥಾಲಯಗಳು, ೯೦೦೦ ಸಾಮಾನ್ಯ ಪ್ರಚಾರಕರು, ೧೭ ಆಶ್ರಮಗಳು, ೧೧ ಮಾಸಿಕಗಳು ನಡೆಯುತ್ತವೆ. ಈ 'ಮುಕ್ತಿ ಫೌಜ'ಗೆ ೩೭೪೨೦ ಎಕ್ರೆ ಭೂಮಿ ಇದೆ. ಈ ಸಂಸ್ಥೆಯಿಂದ ೩೬೮೦೩ ಮಂದಿಗಳ ಸಂಸಾರ ನಡೆಯುತ್ತದೆ. ಮುಸಲ್ಮಾನರೂ ಧರ್ಮಾಂತರದ ಕಾರ್ಯವನ್ನು ನಡೆಸುತ್ತಿದ್ದಾರೆ. ಮುಲ್ಲಾ ಮುಹಿದಿಯಾಜಿ ಕಳೆದ ೧೯೨೭ನೇ ಇಸ್ವಿ ಜನವರಿ ತಿಂಗಳಿನಿಂದ ಆಗಸ್ಟ ತಿಂಗಳ ವರೆಗೆ ೩೯೩೭ ಮಂದಿಗಳು ಧರ್ಮಾಂತರ ಹೊಂದಿದರು. ೧೯೨೧ನೇ ಇಸ್ವಿಯ ಖಾನೇಸುಮಾರಿಯು ಮೇಲಿಂದ ತಿಳಿಯುವದೇನಂದರೆ:— "ಕ್ರೈಸ್ತರು ೧೦೦ಕ್ಕೆ ೨೨||ಯಂತೆ ಹೆಚ್ಚಾದರು; ಬೌದ್ಧರು ೮||ಯಂತೆ; ಮುಸಲ್ಮಾನರು ೩|| ರಂತೆ ಸಂಖ್ಯಾಬಲದಿಂದ ಮಿಗಿಲಾದರು. ಹಿಂದುಗಳು ಶೇಕಡಾ ೭ರಂತೆ ಹಿಂಜರಿದರು.

* * *

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು'

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತಾರೆ, ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ ಶ್ರೀ ಕೂದಲನ್ನು ಕೊಡಬೇಕು., ಶ್ರೇಷ್ಠವಾದ ಕೂದಲನ್ನ್ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಚೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಗಳಿಗೆ	,,	೨—೧೦—೦
ಅಂಚವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

———:೦:———

೩ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬-೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಕೆಡುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.ದಿಲ್ಲ

THE ANGLO INDIAN DRUG & CHEMICAL CO: LTD.

POST BOX, 2082 **BOMBAY.**

ಹಿಂದುಗಳ ಅತ್ಯಾಚಾರ.

ಸಿಮ್ಲಾದೊಳಗಿನ ಗುಡ್ಡಗಾಡು ಪ್ರದೇಶದಲ್ಲಿ ಬಘಾಟ ಎಂಬ ಸಂಸ್ಥಾನವಿದೆ. ಇಲ್ಲಿ ಹಿಂದು ಅರಸರಿದ್ದಾರೆ. ಅರಸರು ಸಜ್ಜನರು, ಸುಧಾರಿಸಿದವರು. ಸೋಲನ್ ಪಟ್ಟಣವು ಈ ಸಂಸ್ಥಾನದ ರಾಜಧಾನಿಯು. ಇಲ್ಲಿಯ ಹವೆಯು ಉತ್ತಮ ಪ್ರತಿಯದು, ಆರೋಗ್ಯ ಪಾಲನಕ್ಕೆ ಬಹಳೇ ಅನುಕೂಲ. ಇಲ್ಲಿಯ ಜನಸಂಖ್ಯೆಯು ಸುಮಾರು ೧೦ ಸಾವಿರ. ರಜಪೂತ, ಕಾನೇಟ ಹಾಗು ಬ್ರಾಹ್ಮಣ ಹೀಗೆ ಮೂವರು ಉಚ್ಚ ಜಾತಿಯವರು; ಕೋಳಿ-ಚಾಮಾರ ಮೊದಲಾದವರು ಕೆಳ ವೃತ್ತಿಯವರು. ಕೋಳಿಯರು ಬೇಸಾಯಗಾರರಾಗಿ ಜೀವಿಸುತ್ತಾರೆ. ಇವರ ಮೇಲೆ ಪರಿಪರಿಯ ಪ್ರತಿಬಂಧಗಳಿದ್ದಾವೆ. ರಜಪೂತಾದಿ ಉಚ್ಚ ಜಾತಿಯವರ ನೀಚ ಪ್ರತಿ ಸೇವೆ ಮಾಡಿಕೊಂಡೇ ಇವರು ಜೀವಿಸಬೇಕೆಂಬ ರೂಢಿ ಬಿದ್ದಿದೆ. ಆರ್ಯ ಸಮಾಜದವರು ಈ ಅವಮಾನಕ ನಡಾವಳಿಯನ್ನು ಸೈರಿಸಲಾರದಾದರು. ಕೋಳಿಯರಿಗೆ ಸಮಾಜದಲ್ಲಿ ಪ್ರತಿಷ್ಠೆಯನ್ನು ಸಂಗ್ರಹಿಸಿ ಕೊಡಲುದ್ಯುಕ್ತರಾಗಿ ಆರ್ಯ ಸಮಾಜದವರು ಶಾಸ್ತ್ರ ವಿಧಿಯಿಂದ ಅವರಿಗೆ ಯಜ್ಞೋಪವೀತ ಹಾಕಿದರು. ವೈಶ್ಯರಿದ್ದವರಿಂದ ಇವರಿಗೆ ಯಜ್ಞೋಪವೀತದ ಅಧಿಕಾರವಿತ್ತು. ಪ್ರಾಯಶ್ಚಿತ್ತ ವಿಧಿಯಾದ ಬಳಿಕ ಕೋಳಿಯರು ಮಾಂಸ ತಿನ್ನುವದಿಲ್ಲ; ಹೆಂಡ ಕುಡಿಯುವದಿಲ್ಲ. ಅಚ್ಛೂತರೆಂದು ಇವರಿಗೆ ಹೀಯಾಳಿಸುತ್ತಿದ್ದರು. ಹಾಗೆ ಹೇಳಿಸಿಕೊಳ್ಳಲಿಕ್ಕೂ ಇವರು ತಯಾರಾಗಲಿಲ್ಲ. ಅಚ್ಛೂತ ಶಬ್ದದ ನಿಷೇಧ ಮಾಡ ಹತ್ತಿದರು. ಇದರಿಂದ ರಜಪೂತಾದಿ ಉಚ್ಚ ವರ್ಣೀಯರಿಗೆ ಬಹು ದೊಡ್ಡ ಸಿಟ್ಟು ಬಂತು. ಯಜ್ಞೋಪವೀತವನ್ನು ಧರಿಸಲು ಕೋಳಿಯರಿಗೆ ಅಧಿಕಾರವಿರುವದಿಲ್ಲವಾಗಿ ಇವರ ಅಭಿಪ್ರಾಯವಾಯಿತು. ಉಚ್ಚ ವರ್ಣೀಯರ ಪ್ರೇರಣೆಯಿಂದ ಒಂದು ಖಟ್ಲೆಯು ನಿರ್ಮಾಣವಾಯಿತು. ಸಂಸ್ಥಾನಿಕರು ನ್ಯಾಯಾಧಿಶರಾದರು. ೩ ದಿನಗಳೊಳಗೆ ತೀರ್ಪು ಬಂತು. ಪುರಾತನ ಆಚಾರ-ವಿಚಾರದಂತೆ ಕೋಳಿಯರಿಗೆ ಯಜ್ಞೋಪವೀತ ಧಾರಣದ ಹಕ್ಕಿಲ್ಲವಾಗಿ ಸಂಸ್ಥಾನಿಕರು ತೀರ್ಪು ಕೊಟ್ಟು, ಹಕ್ಕಿಲ್ಲದೆ ಯಜ್ಞೋಪವೀತ ಧಾರಣ ಮಾಡಿದ ಬಗ್ಗೆ ೬-೬ ತಿಂಗಳ ಶಿಕ್ಷೆ, ೨೦೦-೨೦೦ ರೂಪಾಯಿ ದಂಡ ವಿಧಿಸಲ್ಪಟ್ಟಾಯಿತು. ಅಪ್ಪೀಲ ಮಾಡಲು ಇವರಿಗೆ ಇಂಬುಗೊಡಲಿಲ್ಲ. ಆರ್ಯ ಸಮಾಜದ ಪಂಡಿತರಿಗೂ ಇವರ ಸಮರ್ಥನೆ ಮಾಡಲು ಅಪ್ಪಣೆ ಸಿಗಲಿಲ್ಲ. ಜೈಲಿನಲ್ಲಿ ಹಾಕಿದ್ದಲ್ಲಿ ಅವರ ಯಜ್ಞೋಪವೀತವನ್ನು ಕಸಕೊಳ್ಳಲು ಪ್ರಯತ್ನ ನಡೆದಿದೆ. ಈ ವೃತ್ತಾಂತವನ್ನು ದಿಲ್ಲಿಯೊಳಗಿನ ಆರ್ಯ ಸಮಾಜದ ಅಧ್ಯಕ್ಷರು ಪ್ರಕಟಿಸಿದ್ದಾರೆ. ಯಜ್ಞೋಪವೀತ ಧಾರಣ ಮಾಡಿದ ೧೨ ಮಂದಿಗಳ ಮೇಲೆ ಈ ಖಟ್ಲೆ ನಡೆಯಿತು. ಅರಸರೇ ಈ ಪ್ರಕಾರ ಪ್ರಜೆಗಳಿಗೆ ಸುಲಿಯಹತ್ತಿದರೆ, ಯಾರಿಗೆ ಮೊರೆಯಿಡುವದು?

* * *

ರಾಷ್ಟ್ರೀಯ ವಾರದ ಪಾಲನ.

ಪಂಜಾಬದ ಅತ್ಯಾಚಾರದಿಂದ ರಾಷ್ಟ್ರೀಯ ವಾರವು ಭಾರತೀಯರಿಗೆ ಪುಣ್ಯಕಾರಕವಾಗಿದೆ. ಸನ್ ೧೯೧೯ನೇ ಇಸ್ವಿಯ ಎಪ್ರಿಲ್ ೬ನೇ ತಾರೀಖಿನಿಂದ ೧೩ನೇ ತಾರೀಖಿನ ವರೆಗೆ ಪಂಜಾಬದಲ್ಲಿ ಉಂಟಾದ ಅತ್ಯಾಚಾರಗಳಿಂದ ಭರತಖಂಡದಲ್ಲಿ ಸ್ವತ್ವ ಜಾಗೃತಿಯಾಯಿತು. ಈಗ ೭-೮ ವರ್ಷಗಳಿಂದ ಈ ವಾರದಲ್ಲಿ ರಾಷ್ಟ್ರ ಕಲಸ ಮಾಡುವ ರೂಢಿ ಬಿದ್ದಿದೆ. ಪ್ರಾಮುಖ್ಯವಾಗಿ ಖಾದಿಯ ಪುರಸ್ಕಾರ, ಪರದೇಶಿ ಅರಿವೆಯ ಬಹಿಷ್ಕಾರಗಳಿಂದ ಈ ವಾರವನ್ನು ಪಾಲಿಸುತ್ತಾರೆ. ಈ ಕುರಿತು ಕೆಲವು ಸಂಗತಿಗಳನ್ನು ಜನರು ಲಕ್ಷ್ಯ ಕೊಡತಕ್ಕದ್ದು. ಬ್ರಿಟಿಶ ದೇಶದಿಂದ ೧೯೧೮-೧೯ ವರ್ಷದ ಸರಕು ರಫ್ತಾಯಿತು. ಅವುಗಳಲ್ಲಿ ೧೯೧೦-೧೧ ವರ್ಷದ ಅರಿವೆ ಬ್ರಿಟಿಶ ದೇಶದಿಂದ ಹಿಂದುಸ್ಥಾನಕ್ಕೆ ೧೧೧ ಕೋಟಿಯ ಸರಕು ಬಂತು. ಇದರಲ್ಲಿ ೪೨ ಕೋಟಿಯ ಅರಿವೆಯಿತ್ತು. ಬ್ರಿಟಿಶ ದೇಶದಿಂದ ಹಿಂದುಸ್ಥಾನಕ್ಕೆ ಬಂದ ಅರಿವೆಯ ... ಕೋಟಿ ... ಲಕ್ಷ ಪೌಂಡುಗಳ ... ಇದರ ... ಆಸ್ಟ್ರೇಲಿಯಾ, ಅರ್ಜೆಂಟಿನಾ, ಬ್ರಿಟಿಶ ಪಶ್ಚಿಮ ಆಫ್ರಿಕೆ ಇವುಗಳಿಗೆ ಕೂಡಿ ಹೋದ ಅರಿವೆಯು ... ಕೋಟಿ ೫೦ ಲಕ್ಷ ಪೌಂಡು ... ಅಂದರೆ, ಇದರಲ್ಲಿ ... ಬ್ರಿಟಿಶ ಅರಿವೆಯನ್ನು ಖರೀದಿ ಮಾಡುವ ಪ್ರಮುಖರು ನಮ್ಮ ಭಾರತೀಯರೆ. ಪರದೇಶಿ ಅರಿವೆ, ಪ್ರಾಮುಖ್ಯವಾಗಿ ಬ್ರಿಟಿಶ ಅರಿವೆಯ ಅಂಗೀಕಾರದಿಂದಲೇ ಭಾರತೀಯರು ಬ್ರಿಟಿಶರಿಗೆ ಹಿಂದ ಸ್ಥಾನದಲ್ಲಿ ... ಹರಿಮಾಡಿಸುತ್ತಾರೆ. ಬ್ರಿಟಿಶರ ಸರಕುಗಳನ್ನು ಬಹಿಷ್ಕರಿಸಿ ಭಾರತೀಯರು ಸ್ವಾವಲಂಬಿಗಳಾದರೆ, ಅತ್ಯಾಚಾರಿಗಳಿಗೆ ಸ್ವಾಭಾವಿಕವಾಗಿ ತಡೆಬೀಳುವದು. ಸ್ವಾರ್ಥಸಾಧನೆಗೆ ಎಡೆಯಿರುವದಿಲ್ಲವಾಗಿ ಬ್ರಿಟಿಶರಿಗೆ ಒಮ್ಮೆ ಗ್ರಹಿಕೆಯಾದರೆ, ಇಂಥ ಅತ್ಯಾಚಾರಗಳು ತನ್ನಿಂದ ನಿಂತಾವು. ಅದಕ್ಕಾಗಿ ಭಾರತೀಯರು ಈ ವಾರದಲ್ಲಿ ಪರದೇಶಿ ಸರಕುಗಳನ್ನು, ಪ್ರಾಮುಖ್ಯವಾಗಿ ಪರದೇಶಿ ಅರಿವೆಯನ್ನು ಬಹಿಷ್ಕರಿಸುವ ಮನೋನಿರ್ಧಾರ ಮಾಡಬೇಕಾಗಿಯೂ, ಖಾದಿಯನ್ನು ಕೊಳ್ಳುವದು. ಬಹಿಷ್ಕಾರದ ಯೋಜನೆಗೆ ಶಕ್ತಿಮೀರಿ ನೆರವಾಗಬೇಕಾಗಿಯೂ ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಜೆಗಳಿಗೆ ಬಿನ್ನೈಸಿಕೊಂಡಿದ್ದಾರೆ. ಅದರಂತೆ ಪ್ರಜೆಗಳು ನಡಕೊಳ್ಳಬೇಕಾಗಿ ನಮ್ಮದೊಂದು ಪ್ರಾರ್ಥನೆ.

* * *

ಸಾಬರಮತಿಯ ಆಶ್ರಮದೊಳಗಿನ ದಿನಚರಿ.

ಶ್ರೀ ಕೃಷ್ಣದಾಸರವರು "ಡವ ಟ ಫೆಸಟ್" ಪತ್ರಿಕೆಯಲ್ಲಿ ಸಾಬರಮತಿಯ ಆಶ್ರಮದೊಳಗಿನ ದಿನಚರಿಯನ್ನು ವರ್ಣಿಸಿದ್ದಾರೆ. ಸಾಬರಮತಿಯ ಆಶ್ರಮವನ್ನು ಮಹಾತ್ಮರು ನಡೆಸುತ್ತಾರೆ. ದೇಶದಲ್ಲಿ ಸ್ವಾವಲಂಬಿ, ಸ್ವಾಧೀನಪರ, ದೇಶಾಭಿಮಾನಿ, ಸಮಾಜಹಿತಾಚಾರಿಗಳನ್ನು ನಿರ್ಮಿಸುವದಕ್ಕಾಗಿ ಮಹಾತ್ಮರು ನಡೆಸುತ್ತಿದ್ದ ಆಶ್ರಮವಿದು! ಇದರ ವರ್ಣನೆಯು ಮೇಲಿಂದ ನಮ್ಮ ಶಿಕ್ಷಣ ಸಂಸ್ಥೆಯ ಅವಶ್ಯವು ಗೋಚರವಾಗುವದು. ಪ್ರಕೃತ ಶಾಲೆಗಳಲ್ಲಿ ಕೈಕೊಳ್ಳಬೇಕಾದ ಆವಶ್ಯಕತೆಯು ದೃಗ್ಗೋಚರವಾಗುವದು. ಶ್ರೀ ಕೃಷ್ಣದಾಸರು ಬರೆಯುವದೇನಂದರೆ:- ಬ್ರಾಹ್ಮ ಮುಹೂರ್ತದಲ್ಲಿ ಆಶ್ರಮದ ಘಂಟೆಯು ಬಾರಿಸಲ್ಪಡುತ್ತದೆ. ಎಲ್ಲರೂ ಆ ಕಾಲಕ್ಕೆ ಏಳಬೇಕು. ಘಂಟೆಯನ್ನು ಕೇಳಿದೊಡನೆ ಎಲ್ಲರೂ ಎದ್ದು ಪ್ರಾರ್ಥನಾಲಯಕ್ಕೆ ಹೋಗಿ ಈಶಪ್ರಾರ್ಥನೆ ಮಾಡುತ್ತಾರೆ. ಆ ಸಮಯದಲ್ಲಿ ಸಾಮಾನ್ಯವಾಗಿ ೧೦೦ ಮಂದಿಗಳು ಒಂದೇ ಮನದಿಂದ ಪರಮಾತ್ಮನ ಪ್ರಾರ್ಥನೆಯನ್ನು ಶ್ರದ್ಧೆಯಿಂದ ಮಾಡುವಾಗ ಮನಸ್ಸು ಉಲ್ಲಸಿತವಾಗುತ್ತದೆ. ಭೂದೇವಿಯು, ಸರಸ್ವತಿ ದೇವಿಯು, ಬೃಹಸ್ಪತಿಗಳು, ಶ್ರೀ ವಿಷ್ಣು ದೇವರ ಹಾಗೆ ಶ್ರೀ ಶಿವದೇವರ ಪ್ರಾರ್ಥನೆಗಳಾಗುತ್ತವೆ. ಹೀಗೆಲ್ಲ ಪ್ರಾರ್ಥನೆಯಾದ ಬಳಿಕ ಲೋಕದಲ್ಲಿ ಕಷ್ಟಪಡುವ ಮಾನವಕೋಟಿಯನ್ನು ಉದ್ಧರಿಸಲು ವೇದೋಕ್ತ ಪ್ರಾರ್ಥನೆಯಾಗುತ್ತದೆ. ಎಲ್ಲರೂ ಪರಮಾತ್ಮನಿಗೆ ಸರ್ವಸ್ವವನ್ನು ಅರ್ಪಿಸಿ ಶರಣಾಗತರಾಗಿ ತಮ್ಮನ್ನು ಜೋಪಾನ ಮಾಡಲು ಅತನನ್ನೇ ಮೊರೆಹೊಕ್ಕುತ್ತಾರೆ. ಈ ಪ್ರಾರ್ಥನೆ ನಡಿಯುತ್ತಿರುವಾಗ ಬಳಿಯಲ್ಲಿದ್ದ ಸಾಬರಮತಿಯು ಸಾವಧಾನದಿಂದ ಜುಳುಜುಳು ನಾದ ಮಾಡಿ ಈ ಪ್ರಾರ್ಥನೆಯೊಡನೆ ತನ್ಮಯವಾಗುತ್ತದೆ. ಆಶ್ರಮದಲ್ಲೆಲ್ಲ ಆ ಕಾಲಕ್ಕೆ ಪವಿತ್ರತಮವಾದ ವಾತಾವರಣವು ಸಂಚರಿಸಿ ಎಲ್ಲರೂ ಪವಿತ್ರರಾಗುತ್ತಾರೆ. ಹೀಗೆ ವೇದೋಕ್ತ ಪ್ರಾರ್ಥನೆಯಾದ ಬಳಿಕ, ಆಶ್ರಮದೊಳಗಿನ ಸಂಗೀತಗಾರನು ಭಜನೆಯನ್ನು ಕಲಿಸುತ್ತಾನೆ. ಭಜನೆಯಿಂದ ಮಾನವಕೋಟಿಯಲ್ಲಿ ಐಕ್ಯ ಸಾಧಿಸಲು ಉಪದೇಶಿಸಲ್ಪಡುತ್ತದೆ. ನಿಸ್ಪೃಹ ಸೇವೆ ಮಾಡಿ ನಿರ್ಮಲರಾಗಲು ಬೋಧಿಸಲ್ಪಡುತ್ತದೆ. ಜಡ ದೇಹದ ದೋಷಗಳಿಂದ ಅಂತರಾತ್ಮವನ್ನು ವಿಮೋಚಿಸಲು ಹೇಳಲ್ಪಡುತ್ತದೆ. ಸತ್ವ-ರಜ-ತಮೋ ಗುಣಗಳ ಅರ್ಥಗಾಂಭೀರ್ಯವನ್ನೂ ಗ್ರಹಿಸಿ ಸಾತ್ವಿಕರಾಗಿ ಲೋಕದಲ್ಲಿ ವರ್ತಿಸಿ ಉದ್ಧಾರ ಹೊಂದದೇಕಾಗಿ ಬಿನ್ನೈಸಲ್ಪಡುತ್ತದೆ. ಆಲಸ್ಯದಿಂದ ನಿಮಿಷಾರ್ಧವನ್ನೂ ಕಳೆಯಬಾರದು. ಕಾರ್ಯ ಮಾಡುತ್ತಿರುವದೇ ಮಾನವರ ಸ್ವಾಭಾವಿಕ ಲಕ್ಷಣವು. ಕಾರ್ಯದಿಂದಲೇ ನಾವು ಪಾವನರಾಗಬೇಕು; ಕಾರ್ಯದಿಂದಲೇ ಪತಿತರಾಗಬೇಕು, ಸತ್ಕರ್ಮ-ದುಷ್ಕರ್ಮಗಳೆಂದು ಕಾರ್ಯದ ಎರಡು ಅಂಗಗಳಿವೆ. ಸತ್ಕರ್ಮವನ್ನು ತಿಳಿದು ನೀವು ದಿನಚರಿಯನ್ನು ನಡಿಸಿರೆಂದು ಸಂಗೀತಗಾರನು ಪದ್ಯದಿಂದ ತಿಳಿಸಿ ಹೇಳಿದ ಬಳಿಕ, ವಿದ್ಯಾರ್ಥಿಗಳು ಪ್ರಾತರ್ವಿಧಿ ಮೊದಲಾದ ಕಾರ್ಯಗಳನ್ನು ಸಾಗಿಸಿಕೊಂಡು ವಿದ್ಯಾರ್ಜನಕ್ಕೆ ಹೋಗುತ್ತಾರೆ. ಆಚಾರ್ಯರ ಕಡೆಯಿಂದ ಕಠಿಣ ಪಾಠಗಳ ವಿವರಗಳನ್ನು ತಿಳಿದುಕೊಳ್ಳುತ್ತಾರೆ. ಕಾರ್ಯಕ್ರಮವು ಪತ್ರಿಕೆಯಂತೆ ನಿತ್ಯ ಕೆಲಸವಾದ ಬಳಿಕ, ಸೂರ್ಯಾಸ್ತಕ್ಕೆ ಪುನಃ ಆಶ್ರಮದ ಗಂಟೆಯು ಬಾರಿಸಲ್ಪಡುತ್ತದೆ. ಹುಡುಗರೆಲ್ಲರೂ ಪುನಃ ಪ್ರಾರ್ಥನಾಲಯದಲ್ಲಿ ಸೇರಿ ಪರಮಾತ್ಮನಿಗೆ ಅಭಿವಾದನೆಗಳನ್ನರ್ಪಿಸುತ್ತಾರೆ. ಚರಾಚರ ವಸ್ತುಗಳ ಒಡೆಯನಾದ ಪರಮಾತ್ಮನಿಗೆ ಉಪನಿಷತ್ತುಗಳಲ್ಲಿ ಬ್ರಹ್ಮ, ವರುಣ, ರುದ್ರ, ಇಂದ್ರ, ಮರುತ ದೇವಾದಿಗಳಿಂದ ಸ್ತುತಿಸಲ್ಪಟ್ಟ ಜಗತ್ಪಾಲಕನಿಗೆ ಲೀನರಾಗುತ್ತಾರೆ. ವೇದೋಕ್ತ ಸ್ತುತಿಯನ್ನೂ ಮಾಡುತ್ತಾರೆ. ಇವುಗಳ ಮೇಲಿಂದ ಭೌತಿಕ ಸಂಗದೋಷದಿಂದ ಪರಾವೃತ್ತ ಮಾಡಿ ಪರಮಾರ್ಥವನ್ನು ಸಾಧಿಸ ಪಟ್ಟ ಸದ್ಬುದ್ಧಿಯನ್ನೀಯಲು ಪ್ರಾರ್ಥನೆಯಾಗುತ್ತದೆ. ಚಿತ್ತಶಾಂತಿಯನ್ನಿತ್ತು ಅಶೀರ್ವದಿಸಲು ಅನಾದ್ಯನಂತನಿಗೆ ಕೈಜೋಡಿಸಿ ವಿದ್ಯಾರ್ಥಿಗಳು ಶರಣು ಹೋಗುತ್ತಾರೆ. ಪ್ರಾಪಂಚಿಕ ಕರ್ತವ್ಯಗಳನ್ನು ನಡಿಸುತ್ತಿರುವಾಗ ಅಲಿಪ್ತವಾಗಿರಬೇಕಾಗಿಯೂ, ಚಿತ್ತಸ್ವಾತಂತ್ರ್ಯವನ್ನು ಕೈಬಿಡಬಾರದಾಗಿಯೂ, ಇಂದ್ರಿಯಸುಖೋಪಭೋಗಕ್ಕೆ ಬಲಿಬೀಳದೆ ನಿಗ್ರಹದಿಂದ ಪ್ರಪಂಚವನ್ನು ನಡಿಸಬೇಕಾಗಿಯೂ, ಹೀಗೆ ನಡಿಸಿಕೊಂಡು ಬರಲು ಪರಮಾತ್ಮನು ಅನುಗ್ರಹಿಸಬೇಕಾಗಿಯೂ ಪ್ರಾರ್ಥನೆಯಾಗುತ್ತದೆ. ಆತ್ಮಬಲವನ್ನು ಅಭಿವೃದ್ಧಿ ಮಾಡಿ ಇಂದ್ರಿಯಗಳೆಲ್ಲ, ಇಂದ್ರಿಯ ಸುಖವೆಲ್ಲ ಆತ್ಮದಲ್ಲಿಯೇ ಐಕ್ಯವಾಗಬೇಕಾಗಿಯೂ ಹೀಗೆ

ಜತ ದೇಹದ ಉದ್ಧಾರ ಮಾಡಿಕೊಳ್ಳಲು ಪತಿತಪಾವನನು ಕರುಣಿಸಬೇಕಾಗಿಯೂ ಪ್ರಾರ್ಥನೆಯಾಗ ತ್ತದೆ. ಪರಮಾರ್ಥ ವಿಚಾರವು ದೇಹಬರಿದಂತೆ ಜೀವ್ರು ಸ್ವಾಸ್ಥ್ಯ ಹೊಂದಿ ಮಾನವನಿಗೆ ರಾತ್ರಿ ಕಾಲದಲ್ಲಿ ವಿಹಿತವಾದ ವಿಶ್ರಾಂತಿಯು ದೊರಕುತ್ತದೆ. ಹೀಗೆ ವರ್ಣನೆ ಮಾಡಿ ಶ್ರೀಕೃಷ್ಣದಾಸರು ಉದ್ಗರಿಸುವದೇನಂದರೆ:—ಪ್ರಾತಃಕಾಲದ ಹಾಗು ಸಂಧ್ಯಾಕಾಲದ ಪ್ರಾರ್ಥನೆಗಳೇ ಪ್ರಾತಃಸ್ಮರಣ ಈ ಅಶ್ರಮದ ಬೀಜಗಳು. ಈ ಪ್ರಾರ್ಥನೆಗಳನ್ನು ಬಿಟ್ಟು ಉಳಿದ ಸಂಗತಿಗಳನ್ನು ಪರಾಂಬರಿಸಿದರೆ, ಆಶ್ರಮದ ಸ್ವರೂಪವು ಯಾರಿಗೂ ತಿಳಿಯುವದಿಲ್ಲ. ಪರಮಾರ್ಥ ವಿಚಾರದ ಮೂಲಾಧಾರಗಳಿವು.

***

"ಧರೆಯೊಳೆನಗೆ ಸುಸ್ಥಿರವೆಂದು ಗರ್ವದಿ
ಬೆರೆಯುದಿರೆಚ್ಚರಿಕೆ."

ಈ ಕವಿಯುಕ್ತಿಯು ಮದ್ರಾಸದೊಳಗಿನ ರಾ| ಟಿ ಆರ್. ವೆಂಕಟರಾಮ ಶಾಸ್ತ್ರಿಗಳವರ ವಿಷಯದಲ್ಲಿ ಪ್ರತ್ಯಕ್ಷ ಸಿದ್ಧವಾಗಿದೆ. ಈ ಮಹಾನುಭಾವರು ಮದ್ರಾಸದಲ್ಲಿ ಎಡ್ವೋಕೇಟ ಜನರಲ್ ಯಾನೆ ಸರಕಾರಿ ವಕೀಲರಿದ್ದರು. ಅವರಿಗೆ ಪ್ರಾಂತಿಕ ಸರಕಾರವು ತನ್ನ ಕಾರಭಾರ ಮಂಡಳದಲ್ಲಿ ಕಾಯಿದೆ ಖಾತೆಯ ಸಲ್ಲಾಗಾರ ಮೆಂಬರರಾಗಿ ನೇಮಿಸಿತು. ರಾ| ಶಾಸ್ತ್ರಿಗಳು ಅಧಿಕಾರಸೂತ್ರಗಳನ್ನು ಕೈಕೊಂಡರು. ಕೂಡಲೆ ಗವ್ಹರ್ನರರು ಅವರ ಅಧಿಕಾರಕಕ್ಷೆಯಲ್ಲಿದ್ದ ಕಾಲುವೆ ಖಾತೆಯನ್ನು ಕಸಕೊಂಡುಬಿಟ್ಟರು. ರಾ| ಶಾಸ್ತ್ರಿಗಳು ತಲೆಬಾಗಿದರು. ಕಾರಭಾರಿ ಮಂಡಳದ ಆಲೋಚನೆ ನಡೆಯಿತು. ೧೩ನೇ ತಾರೀಖಿಗೆ ಸ್ವರಾಜ್ಯ ಪಕ್ಷದ ನಿವಾದವಾಗುವದಿತ್ತು. ಅದಕ್ಕಾಗಿ ರಾ| ಶಾಸ್ತ್ರಿಗಳು ಪೋಲೀಸ ಖಾತೆಯ ಕಾಗದ ಪತ್ರಗಳನ್ನೆಲ್ಲ ಓದಿಕೊಂಡರು. ಸ್ವರಾಜ್ಯ ಪಕ್ಷದವರಿಗೆ ಸೋಲಿಸಲುದ್ಯುಕ್ತರಾಗಿ ಅವೇಶಯುಕ್ತ ಭಾಷಣವನ್ನು ತಯಾರಿಸಿದರು. ಆದರೆ, ಸುಸ್ಥಿರವೆಂದು ಗರ್ವದಿ ಈ ಧರೆಯಲ್ಲಿ ಮೆರೆಯಬರುತ್ತದೆಯೋ? ಗವ್ಹರ್ನರರಿಂದ ಶಾಸ್ತ್ರಿಗಳಿಗೊಂದು ಪತ್ರ ಬಂತು. "ನಿಮ್ಮ ಕಡೆಯಿಂದ ಪೋಲೀಸ ಖಾತೆಯು ತೆಗೆದುಕೊಳ್ಳಲ್ಪಟ್ಟಿದೆ. ಹಾಗೆ ತೆಗೆದುಕೊಳ್ಳಲು ನೀವು ಒಪ್ಪಿದ್ದಿರಿ; ಈ ಬಗ್ಗೆ ನಾನು ಉಪಕೃತನಾಗಿದ್ದೇನೆ." ಎಂಬರ್ಥದ ಪತ್ರವನ್ನು ಗವ್ಹರ್ನರರು ರಾ| ಶಾಸ್ತ್ರಿಗಳಿಗೆ ಬರೆದಿದ್ದರು. ಈ ಖಾತೆಯನ್ನು ಬಿಡಲು ಅವರೆಂದಿಗೂ ಒಪ್ಪಿಗೆ ಕೊಟ್ಟಿದ್ದಿಲ್ಲ. ಅದರಿಂದ ಅವರು ಬೇಸರಪಟ್ಟು ಅಧಿಕಾರವನ್ನೇ ಬಿಟ್ಟುಬಿಟ್ಟರು. ಪಾಪ! ಆ ಭಾಷಣವು, ಪರಿಶ್ರಮಪೂರ್ವಕವಾಗಿ ತಯಾರಿಸಿದ ಭಾಷಣವು, ದೇಶಬಾಂಧವರಾದ ಸ್ವರಾಜ್ಯ ಪಕ್ಷದವರಿಗೆ ಸೋಲಿಸುವ ಭಾಷಣವು, ಹಾಗೆಯೇ ಉಳಿದುಹೋಯಿತು! ಓದಲಿಕ್ಕೆ ಇದೇ ದೊರೆಯಲಿಲ್ಲ! ನಾರದ ಮಹಾಮುನಿಯು ರಾವಣನ ಜನನ-ಮರಣಗಳನ್ನು ಬ್ರಹ್ಮದೇವರಿಗೆ ಹೇಳಿದಂತೆ ರಾ| ವೆಂಕಟ್ರಾಮ ಶಾಸ್ತ್ರಿಗಳ ಕಾಯಿದೆ ಮೆಂಬರಿಯು ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಯಾರೂ ಗರ್ವ ಹಿಡಿಯಬಾರದು. ಈ ಧರೆಯೊಳಗೆ ಯಾವದೂ ಸುಸ್ಥಿರವಲ್ಲ. ಅದೇನೋ ನಿಜ! ಆದರೆ ಪ್ರಾಂತಾಧಿಪರು ಪೋಲೀಸ ಖಾತೆಯನ್ನು ಸೆಳಕೊಳ್ಳುವಾಗ ರಾ| ಶಾಸ್ತ್ರಿಗಳು ಒಪ್ಪಿದ್ದರಾಗಿ ಸುಳ್ಳು ವಿಧಾನವನ್ನೇಕೆ ಮಾಡಿದರು? ಪೋಲೀಸ ಖಾತೆಯ ಕಾಗದಪತ್ರಗಳನ್ನು ಅಭ್ಯಾಸ ಮಾಡಿ ಸ್ವರಾಜ್ಯ ಪಕ್ಷಕ್ಕೆ ಹೀಯಾಳಿಸಲುದ್ಯುಕ್ತರಾದ ರಾ| ಶಾಸ್ತ್ರಿಗಳು ಇದಕ್ಕೆ ಒಪ್ಪುವರೆಂದು ಪ್ರಾಂತಾಧಿಪರು ಗ್ರಹಿಸಿದರೇನು? ಅಥವಾ ರಾ| ಶಾಸ್ತ್ರಿಗಳ ಸ್ವಾಭಿಮಾನಶೂನ್ಯತೆಯನ್ನು—ಸಭ್ಯ ಭಾಷೆಯಲ್ಲಿ ಹೇಳಬೇಕಾದರೆ, ರಾಜನಿಷ್ಠೆಯನ್ನು—ಲಕ್ಷಿಸಿ, ಆ ಖಾತೆಯನ್ನು ಸೆಳಕೊಂಡರೂ ನಿಷೇಧವಾಗಲಿಕ್ಕಿಲ್ಲವಾಗಿ ಎಣಿಸಿ ಮುಂದಾಗಿಯೇ ಉಪಕಾರ ಮನ್ನಿಸಿ ಬಿಟ್ಟರಬೇಕು. ರಾ| ಶಾಸ್ತ್ರಿಗಳು ಅಧಿಕಾರಿಗಳ ಸ್ತುತಿಪಾಠಕರಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

— ಮೈಸೂರಿನೊಳಗಿನ ಶಿವಸಮುದ್ರ ಕಾರಖಾನೆಯಿಂದ ವಿದ್ಯುಚ್ಛಕ್ತಿಯನ್ನು ಮಾಗ್ರಾಸ ಪ್ರಾಂತದ ವಿಶ್ವೂರು ಕಟ್ಟಿಕೊಳ್ಳಲು ಪೂರೈಸಲಾಗುವದು. ಅದರಿಂದ ಮೈಸೂರು ಸಂಸ್ಥಾನಕ್ಕೆ ೧೬ ಲಕ್ಷ ರೂಪಾಯಿ ಪ್ರಾಪ್ತವಾಗುವದು. ಮೈಸೂರಿನೊಳಗಿನ ಕೋಲಾರದ ಕೆಲವು ಕ್ಕೆ ಲಾಭವಾಗುವದು. ಕೊಯಿಮುತ್ತೂರು-ಸೇಲಮ್ ಜಿಲ್ಲೆಗಳಿಗೂ ಈ ಕಾರಖಾನೆಯಿಂದಲೇ ವಿದ್ಯುತ್ತು ಪೂರೈಸಲಾಗುವದು. ಮೈಸೂರಿಗೆ ಭಾಗ್ಯಕಾಲ!

— ವಿಜಾಪುರದಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪರಿಷತ್ತು ಕಳೆದ ವಾರದಲ್ಲಿ ಸೇರಿತು. ಸ್ಥಾನಿಕ ಸ್ವರಾಜ್ಯ ಖಾತೆಯ ದಿವಾನರಾದ ಸರ್ ಘುಲಾಮ ಹುಸೇನ ಹಿದಾಯತುಲ್ಲಾರವರು ಅಧ್ಯಕ್ಷರಿದ್ದರು. ಸ್ವಾಗತಾಧ್ಯಕ್ಷರು ಪ್ರತ್ಯಕ್ಷ ನಾನು ಸಂಯುಕ್ತ ಮತದಾರ ಮಂಡಳ ಮುಂತಾದವುಗಳ ಒಳ್ಳೇ ಸಮರ್ಥನೆ ಮಾಡಿದರು. ಸರ್ ಘುಲಾಮ ಹುಸೇನ ಹಿದಾಯತುಲ್ಲಾರವರು ಸರಕಾರಿ ಪಕ್ಷವನ್ನು ಪ್ರತಿಪಾದಿಸಿದರು ಗ್ರಾಮಪಂಚಾಯತಿ ಕಾನೂನನ್ನು ಪುನರ್ಘಟಿಸಿ ಅವನ್ನು ಲೋಕಪ್ರಿಯಗೊಳ್ಳುವಂತೆ ರಚಿಸಬೇಕಾಗಿ ಗೊತ್ತಾಯಿತು. ಅಧಿಕಾರಿ ಉತ್ಪನ್ನದ ಆನೇ ೧ ಅಂಶವನ್ನು ಲೋಕಲ್ ಬೋರ್ಡಗಳಿಗೆ ಕೊಡಬೇಕೆಂದು, ತೀರ್ಮಾನವಾಗಿದೆ. ಅಧ್ಯಕ್ಷರು ಸರಕಾರದ ಉದಾಸೀನತೆಯನ್ನು ಒಪ್ಪಿಸಿದರು. ಸರಕಾರವು ಲೋಕೋಪಕಾರ ಮಾಡಲು ತಯಾರಿರುವದಾಗಿಯೂ ಹಣವಿಲ್ಲದ್ದರಿಂದಲೇ ಲೋಕೋಪಕಾರದ ಪರಂಪರೆಗೆ ತಡೆಬಿದ್ದಿರುವದಾಗಿಯೂ ಹೇಳಿದರು. ಇದು ಹೊಸತಲ್ಲ. ಸರಕಾರದ ಸದ್ಹೇತುಗಳನ್ನು ನಾವು ಒಲ್ಲೆವು, ದ್ರವ್ಯಾಭಾವವನ್ನು ಸದಾ ಕೇಳುತ್ತಿದ್ದೇವೆ ಈ ಪುರಾಣ ಹೇಳಲಿಕ್ಕಾದರೆ, ಈ ಪರಿಷತ್ತಿನ ಸಂಭ್ರಮ ಬೇಕ

ಆತ್ಮಾನಂ ಸತತಂ ರಕ್ಷೇತ್ |

ಎರ್-ಪಿಸ್ತೂಲು ಯಾನೆ
ಗಾಳಿ ತುಬಾಕಿ!

ಕಳ್ಳರು, ದರೋಡೆಖೋರರು, ಕಾಡು ಪಶುಗಳು ಇವುಗಳಿಂದ ಆತ್ಮಸಂರಕ್ಷಣೆ ಮಾಡಿಕೊಳ್ಳಲನುಕೂಲ. ಲೈಸನ್ಸು ಬೇಡ!!

ಬೆಲೆ ರೂ. ೪-೦-೦ (೪೦ ಗುಂಡುಗಳ ಸಹಿತ)

ವ್ಹಿ ಪಿ ಯ ಖರ್ಚು ೦-೬-೦.

೧ ರೂಪಾಯಿಗೆ ೪೦ ಗುಂಡುಗಳು ಸಿಗುತ್ತವೆ.

ಸೂಚನೆ:—ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.

ಪತ್ತೆ:-The Novelty Stores, (103)
Bhuleshwar, Bombay. No. 2.

ಪ್ರಚಂಡ ಸೋಡ್ತಿ

ಮಂಗಳೂರಲ್ಲಿರುವ ಕೆನರಾ ಹ್ಯಾಸ್ಕೂಲು ಮತ್ತು ಕೆನರಾ ಬಾಲಕಿಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದು ಪ್ರಮುಖ ಗೃಹಸ್ಥರ ನೇತೃತ್ವದಲ್ಲಿ ಒಂದು ಸೋಡ್ತಿ ತೆಗೆಯಲಾಗುವದು.

ಸೋಡ್ತಿಯ ಬಂಡವಲು ೧ ಲಕ್ಷ. ಇದರೊಳಗಿಂದ ಖರ್ಚಿನ ಬಗ್ಗೆ ೧೫ ಸಾವಿರ ರೂಪಾಯಿಗಳನ್ನು ಕಡಿ ಮಾಡಿ, ಉಳಿದ ಹಣದೊಳಗಿಂದ ೪೦ ಸಾವಿರ ರೂಪಾಯಿಗಳನ್ನು ಶಾಲೆಗಳಿಗೆ ಕೊಟ್ಟು, ೪೫ ಸಾವಿರ ರೂಪಾಯಿ ಬೆಲೆಯ ೨೪೪೨ ಇನಾಮುಗಳು ಈ ಕೆಳಗಿನಂತೆ ಹಂಚಲಾಗುವವು.

(೧) ಮೊದಲನೇ ಬಹುಮಾನವು ರೂ.೧೭|| ಸಾವಿರದ್ದು;
(೨) ರೂ ೫೦೦೦ ದ್ದು;
(೩) ೧೦೦೦ ರೂಪಾಯಿಗಳ ೨ ಇನಾಮುಗಳು;
(೪) ೫೦೦ ರೂಪಾಯಿಗಳ ೩ ಇನಾಮುಗಳು;
(೫) ೨೫೦ ರೂಪಾಯಿಗಳ ೬ ಇನಾಮುಗಳು;
(೬) ೧೦೦ ರೂಪಾಯಿಗಳ ೧೦ ಇನಾಮುಗಳು;
(೭) ೫೦ ರೂಪಾಯಿಗಳ ೨೦ ಇನಾಮುಗಳು;
(೮) ೨೦ ರೂಪಾಯಿಗಳ ೧೦೦ ಇನಾಮುಗಳು;
(೯) ೧೦ ರೂಪಾಯಿಗಳ ೩೦೦ ಇನಾಮುಗಳು,
(೧೦) ೫ ರೂಪಾಯಿಗಳ ೨೦೦೦ ಇನಾಮುಗಳು;

ಟಿಕೀಟುಗಳು ತಾ. ೪—೧—೨೯ನೇ ತನಕ ಸಿಗುವವು. ಸೋಡ್ತಿಯು ತಾ. ೨೬—೧—೨೯ನೇಗೆ ತೆಗೆಯಲ್ಪಡುವದು. ಟಿಕೀಟಿನ ಬೆಲೆ ಬರೇ ೧ ರೂಪಾಯಿ. ೨೪ ಟಿಕೀಟುಗಳನ್ನು ಮಾರುವವರಿಗೆ ಪ್ರತಿಶ್ರಮದ ಬಗ್ಗೆ ೧ ಟಿಕೀಟು ಉಚಿತವಾಗಿ ಕೊಡಲ್ಪಡುವದು. ಎಲ್ಲರಿಗಿಂತಲೂ ಹೆಚ್ಚು ಟಿಕೀಟುಗಳನ್ನು ಮಾರುವವರಿಗೆ ವಿಶೇಷ ಬಹುಮಾನಗಳು ಸಿಗುವವು. ಲೋಕಾಶ್ರಯಕ್ಕೆ ಪಾತ್ರವಾದ ೨ ಸಂಸ್ಥೆಗಳಿಗೆ ನೆರವಾದ ಶ್ರೇಯಸ್ಸು ದೊರಕುವದು. ಕೆನರಾ ಹ್ಯಾಸ್ಕೂಲಿನಲ್ಲಿ ಕೈಗಾರಿಕೆಯ ಶಾಖೆಯನ್ನು ಸ್ಥಾಪಿಸಲಿಕ್ಕೂ ಅನುಕೂಲತೆ ಮಾಡಿಕೊಟ್ಟಂತಾಗುವದು.

ಅಲ್ಲಲ್ಲಿ ಎಜಂಟರು ಬೇಕು. ಎಜಂಟರಾಗಲಿಚ್ಛಿಸುವವರು ಈ ಕೆಳಗಿನ ಪತ್ತೆಯ ಮೇಲೆ ಬರಕೊಳ್ಳಬೇಕು.

ಮಂಗಳೂರ,	ಬಿ. ಮಂಜುನಾಥ ಬಾಳಿಗಾ,
ತಾ. ೧೪-೩ ೧೯೨೪	ಒನರರಿ ಸೆಕ್ರೆಟರಿ.

ಕೆನರಾ ಹ್ಯಾಸ್ಕೂಲ ರಿಲಿಫ್ ಕಮೀಟಿ,
ಬ್ರಿಟೋ ಲೇನ, ಫಲನೀರ, ಮಂಗಳೂರು.
ದಕ್ಷಿಣ ಕನ್ನಡ.

ಕಾಶಿಯ
ಅಪೂರ್ವ ಸಾಮಾನುಗಳು!

ನಾವು ಕಾಶಿಯ ಪಟ್ಟೆ ಮಡಿ, ಶೀರೆ, ಖಣ, ರೇಶ್ಮೆ ಶಲ್ಲೆ, ಬಟಾಕ್ಕನೆ, ಕಾಶ್ಮೀರದ ಶಾಲು, ಸಕಲಾತಿ, ಧಾಬಳಿ, ರುದ್ರಾಕ್ಷ ಸರ, ಕೆಂಪಿ, ಗೌರೀಶಂಕರ ಪಂಚಾಯತನ, ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಘಂಟೆ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ ಪಿ. ಯಿಂದ ಕಳಿಸಿ ಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ. –

ವಿಶ್ವನಾಥ ಎಂಡ್ ಬ್ರದರ್ಸ,
ದುರ್ಗಾಘಾಟ, ಬನಾರಸ್ ಸಿಟಿ.

ಕಾನಡಾ ವೃತ್ತ.

ಮಿತಿ ವಿಭವ ಸಂ|| ಚೈತ್ರ ಬ|| ೪ ಥಿ, ಸೋಮವಾರ

ಆಂಗ್ಲ ಶಿಕ್ಷಣದ ಮರ್ಮ.

ಬ್ರಿಟಿಶ ರಾಜ್ಯದಿಂದ ನಮ್ಮೀ ಭರತ ಭೂಮಿಗೆ ಅನೇಕ ಪರಿಯ ನಷ್ಟವೆನಿಸಿದರೂ ದೊಡ್ಡದೊಂದು ಲಾಭವಾಗಿದೆಂದು ಅನೇಕರು ಬಾವಿಕರಂತೆ ಗತಾನುಗತಿಕರಾಗಿ ನಂಬಿಕೊಳ್ಳುತ್ತ ಬಂದಿದ್ದಾರೆ. ನೂತನ ಉಪಕಾರವು ಪ್ರಮುಖ್ಯವಾಗಿ ಇಂಗ್ಲಿಷ ಶಿಕ್ಷಣವು, ಇದರಿಂದ ನಮಗೆ ಹೊಸದೊಂದು ಭೂಮಂಗಲವನ್ನೇ ನಿರ್ಮಿಸಿಕೊಟ್ಟಿರುವದಾಗಿಯೂ, ಬ್ರಿಟಿಶ ಶಿಕ್ಷಣದ ಸಂಸ್ಕಾರ ಪಡೆದ ಕೂಡಲೆ ಪತಿತ ಭಾರತೀಯನು ಒಮ್ಮೆಲೇ ಮಾನವನಾಗುತ್ತಾನೆಂದೂ ಲೋಕದಲ್ಲಿ ಕೀರ್ತಿ ಬೆಳಗಿದೆ. ಆದರಿಂದ ಈಗಿನ ಪದ್ಧತಿಯ ಮೇಲೆ ಹೊಸ ಹೊಸ ಶಿಕ್ಷಣ ಸಂಸ್ಥೆಗಳು ಲೋಕೋಪಕಾರಿಗಳಿಂದ ಹೊರಡಿಸಲ್ಪಡುತ್ತಿವೆ. ಮಹಾತ್ಮರ ಅಸಹಯೋಗ ಯುಗದಲ್ಲಿ ಈ ಶಿಕ್ಷಣದ ಸಾಧಕ ಬಾಧಕ ಚರ್ಚೆಯು ಸೂಕ್ಷ್ಮವಾಗಿ ಪರಿಶೋಧಿಸಲ್ಪಟ್ಟಿತು. ಈ ಶಿಕ್ಷಣಕ್ರಮದಿಂದ ಭಾರತೀಯನ ಸ್ವತ್ವವು ಕ್ರಮವಾಗಿ ಕಳೆಗುಂದಿತೆಂದೂ ಆತನು ದಿನೇ ದಿನೇ ಕರ್ತವ್ಯ ಭ್ರಷ್ಟನಾಗುತ್ತ ನಡೆದನೆಂದೂ, ಐಹಿಕ ಪಾರಲೌಕಿಕ ದೃಷ್ಟಿಯಿಂದ ಆತನು ದುರ್ಬಲನಾಗುತ್ತ ನಡೆದನೆಂದೂ, ಸಿದ್ಧಾಂತವಾಗಿ, ಭಾರತೀಯನ ಉದ್ಧಾರವಾಗಬೇಕಾದರೆ, ಈ ಶಿಕ್ಷಣವನ್ನು ಆತನು ಒಮ್ಮೆಲೇ ತ್ಯಜಿಸಿ, ಹೊಸ ಶಿಕ್ಷಣಕ್ರಮವನ್ನು ಘಟಿಸಬೇಕೆಂದೂ ಅಭಿಪ್ರಾಯವಾಗಿ ಹಲವು ಆಶ್ರಮಗಳು ಅಲ್ಲಲ್ಲಿ ಹೊರಡಿಸೋಣಾಗಿವೆ. ಸೈಮನ್ ಕೂಟದ ಬಹಿಷ್ಕಾರದ ಸಮಯ ದೇಶಾಭಿಮಾನಿ ವಿದ್ಯಾರ್ಥಿಗಳಿಗೆ ವಿದ್ಯಾಧಿಕಾರಿಗಳು ವಿಧಿಸಿದ ಪರಿಪರಿಯ ಶಾಸನಗಳ ಮೂಲಕ ಈಗಿನ ಶಿಕ್ಷಣ ಸಂಸ್ಥೆಗಳ ಪ್ರಯೋಜನವು ಇನ್ನಿಷ್ಟು ಬೈಲಿಗೆ ಬೀಳಹತ್ತಿತು. ಕಲಕತ್ತೆಯ ಕಾಲೇಜ ವಿದ್ಯಾರ್ಥಿಯೊಬ್ಬನು ಸೈಮನ ಕೂಟದ ಸಾರ್ವತ್ರಿಕ ಬಹಿಷ್ಕಾರದ ದಿನ ಶಾಲೆಗಳು ಬಿಟ್ಟಿದ್ದರಿಂದ ಅವನಿಗೆ ಪರೀಕ್ಷೆಗೆ ಕೂತುಕೊಳ್ಳಲು ಕೊಟ್ಟ ಸಮ್ಮತಿಯನ್ನು ಮುಖ್ಯಾಧ್ಯಾಪಕರು ತಿರುಗಿ ಪಡಕೊಂಡಿದ್ದಾರೆ. ಈ ಕಾರಣ ಆ ವಿದ್ಯಾರ್ಥಿಯು ನಷ್ಟಭರಪಾಯಿಯ ಬಗ್ಗೆ ದಿವಾಣಿ ಕೋರ್ಟಿನಲ್ಲಿ [illegible] ಮಾಡಿಕೊಳ್ಳುವವನಿದ್ದಾನೆ. ಇನ್ನೊಂದು ಸಂಸ್ಥೆಯ ಮುಖ್ಯಾಧ್ಯಾಪಕರು ಪ್ರಕೃತ ರಾಜಕಾರಣದಲ್ಲಿ ವಿದ್ಯಾರ್ಥಿಗಳು ಪ್ರವೇಶಿಸುವದು ಅನಿಷ್ಟವೆಂದು ಪ್ರತಿಪಾದಿಸಿ, ಮಹಾತ್ಮರಿಗೆ ಪತ್ರ ಬರೆದು ವಿದ್ಯಾರ್ಥಿಗಳ ನಡತೆಯನ್ನು ನಿಂದಿಸ ಬಿನ್ನೈಸಿಕೊಂಡಿದ್ದಾರೆ. ಮಹಾತ್ಮರು ಈ ಬಿನ್ನಹವನ್ನು ನಮ್ರತೆಯಿಂದ ಅಲ್ಲಗಳೆದು, ಇಲ್ಲಿಯ ವಿದ್ಯಾರ್ಥಿಗಳು ಅಖಿಲ ಭೂಮಂಡಲದೊಳಗಿನ ವಿದ್ಯಾರ್ಥಿಗಳಂತೆಯೇ ನಡಕೊಳ್ಳುತ್ತಿದ್ದಾರೆಂದೂ, ಹಾಗೆಯೇ ಅವರು ನಡಕೊಳ್ಳಬೇಕೆಂದೂ ಸಮೂದಿಸಿದ್ದಾರೆ. ಚೀನ, ಇಜಿಪ್ತ ದೇಶಗಳಲ್ಲಿ ಉಂಟಾದ ರಾಷ್ಟ್ರೋದ್ಧಾರ ಪ್ರಯತ್ನಕ್ಕೆ ಪ್ರಮುಖ್ಯವಾಗಿ ಅಲ್ಲಲ್ಲಿಯ ವಿದ್ಯಾರ್ಥಿಗಳೇ ಕಾರಣರೆಂದೂ ಇಲ್ಲಿಯ ರಾಷ್ಟ್ರೀಯ ಜಾಗೃತಿಯು ಇಂಗ್ಲಿಷ ಕಲಿತವರೊಳಗೆ ನಿಯಂತ್ರಿತವಾಗಿದ್ದರಿಂದಲೂ, ಇಂಗ್ಲಿಷ ಕಲಿತವರ ಸಂಖ್ಯೆ ಕಡಿಮೆ ಇರುವದರಿಂದಲೂ, ವಿದ್ಯಾರ್ಥಿಗಳು ದೇಶೋದ್ಧಾರ ಕಾರ್ಯದಲ್ಲಿ ಇನ್ನೂ ಆಸ್ಥೆಯಿಂದ ದುಡಿಯಲು ಕರ್ತವ್ಯಬದ್ಧರೆಂದೂ ಮಹಾತ್ಮರು ಯಂಗ ಇಂಡಿಯಾ ಪತ್ರಿಕೆಯಲ್ಲಿ ನಿಶ್ಚಯಪೂರ್ವಕ ಅಭಿಪ್ರಾಯ ಕೊಟ್ಟಿದ್ದಾರೆ.

ಹೀಗೆ ಮಹಾತ್ಮರಂಥ ಲೋಕನಾಯಕರೊಳಗೂ ನಮ್ಮಲ್ಲಿಯ ಆಧುನಿಕ ಶಿಕ್ಷಣಸಂಸ್ಥೆಯ ಚಾಲಕರಲ್ಲಿಯೂ ಮೂಲದಲ್ಲಿಯೇ ಮತಭೇದವಾಗುವ ಕಾರಣವೇನು? ಶಿಕ್ಷಣದಲ್ಲಿ ಅಷ್ಟು ದೋಷವಿದ್ದರೆ ಅದು ಮೊದಲು ಯಾಕೆ ಪುರಸ್ಕರಿಸೋಣಾಯಿತು? ಇತ್ಯಾದಿ ವಿಚಾರಗಳು ಸಾಮಾನ್ಯವಾಗಿ ತಲೆದೋರುತ್ತಿವೆ. ಪ್ರಕೃತ ಶಿಕ್ಷಣದ ಗುಣದೋಷಗಳ ಕುರಿತು ಪೂರ್ವಪಕ್ಷ ಉತ್ತರ ಪಕ್ಷಗಳ ಮೇಲೆ ಮಹಾನುಭಾವರು ಬರೆದಿದ್ದಾರೆ. ಅವುಗಳ ವಿಚಾರವನ್ನು ನಾವು ಕಾಲಕಾಲಕ್ಕೆ ಪ್ರಸಂಗಾನುಸಾರ 'ವೃತ್ತ'ದಲ್ಲಿ ಚರ್ಚಿಸಿರುವೆವು. ಇಂದಿಗೆ ಆಧುನಿಕ ಶಿಕ್ಷಣದ ಮಹೀಶ್ವರೋಪಾದಿಯಲ್ಲಿರುವ ಮೆಕಾಲೇ ದೊರೆಗಳ ಆಧಾರವನ್ನು ಹೇಳುವೆವು. ನಮ್ಮ ಭರತಖಂಡದ ಪ್ರಾಚೀನ ಶಿಕ್ಷಣವನ್ನು ಬ್ರಿಟಿಶರು ಮುಂದರಿಸಬೇಕೋ, ಅರ್ವಾಚೀನ ಶಿಕ್ಷಣವನ್ನು ಪ್ರವರ್ತಿಸಬೇಕೋ ಎಂಬದೊಂದು ದೊಡ್ಡ ವಾದವು ಗತ ಶತಮಾನದ ಪೂರ್ವಾರ್ಧದಲ್ಲಿ ನಡೆದಿತ್ತು. ಮೆಕಾಲೇ ದೊರೆಗಳು ಆಧುನಿಕ ಶಿಕ್ಷಣವನ್ನು ಬ್ರಿಟಿಶ ರಾಜ್ಯಾಧಿಕಾರಿಗಳು ಹೊರಡಿಸಬೇಕೆನ್ನುವರು; ಈಗಿನ ಶಿಕ್ಷಣಕ್ರಮದ ಮೂಲ ಘಟನೆಯು ಅವರಿಂದಲೇ ಆಗಿದೆ. ಸದ್ಯಕ್ಕೆ ಮೆಕಾಲೇ ದೊರೆಗಳ ಚರಿತ್ರದೊಳಗಿಂದ ಈ ವಿಷಯದ ಒಂದು ಉಲ್ಲೇಖವು ಪ್ರಕಟವಾಗಿದೆ. ಮಹಾತ್ಮರು ತಮ್ಮ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಆ ಉಲ್ಲೇಖ ಕೊಟ್ಟಿದ್ದಾರೆ. ಅದೇನಂದರೆ —

"ಯುರೋಪಿಯ ಸಾಹಿತ್ಯ ಹಾಗು ರಸಾಯನ ಶಾಸ್ತ್ರಗಳನ್ನು ಹಿಂದೀಯರಲ್ಲಿ ಪ್ರಚಾರಗೊಳಿಸುವದು ಬ್ರಿಟಿಶ ಸರಕಾರದ ದೊಡ್ಡ ಧ್ಯೇಯವಾಗಿರಬೇಕೆಂದು ಸರ್ವಾಧಿಕಾರಿ ವಿಲಿಯಮ್ ಬೆಂಟಿಂಕ ದೊರೆಗಳು ತಾ|| ೭—೩—೧೮೩೫ ನೇ ನಿರ್ಧರಿಸಿದರು. ಕೂಡಲೆ ಮಂಡಳದೊಳಗಿದ್ದ ಈವರ್ಗ ಪ್ರಾಚೀನ ವಿದ್ಯಾಪ್ರವರ್ತಕರು ಮಂಡಳದೊಳಗಿಂದ ಅಧಿಕಾರ ಸನ್ಯಾಸ ಪಡೆದರು. ಹೊಸಬರಿಗೆ ನೇಮಿಸೋಣಾಯಿತು. ಹೊಸಬರಲ್ಲಿ ಇಂಗ್ಲಿಷರು ಇದ್ದರು; ಹಿಂದೀಯರು ಇದ್ದರು. ಮೆಕಾಲೇಯವರಿಗೆ ಅಧ್ಯಕ್ಷರನ್ನಾಗಿ ನೇಮಿಸಲ್ಪಟ್ಟರು. ಮೆಕಾಲೇಯವರು ತಮ್ಮ ಕೆಲಸವನ್ನು ಆಸ್ಥೆಯಿಂದಲೂ, ಏಕನಿಷ್ಠೆಯಿಂದಲೂ, ಸಾಗಿಸಿದರು. ಆದರಿಂದ ಆ ಕೆಲಸವು ಅವರ ಮನಸ್ಸಿಗೆ ಅತ್ಯಂತ ಇಷ್ಟವೆಂದು ಸ್ಪಷ್ಟವಾಗುತ್ತದೆ. ಮೆಕಾಲೇಯವರು ನುಡಿಯುವದೇನಂದರೆ:— ನಮ್ಮ ಇಂಗ್ಲಿಷ ಶಾಲೆಗಳು ಭರದಿಂದ ಸಾಗಿವೆ. ವಿದ್ಯಾಕಾಂಕ್ಷಿಗಳಿಗೆಲ್ಲ ವಿದ್ಯಾನಿಲಯಗಳಲ್ಲಿ ಎಡೆ ಸಿಗುವದಿಲ್ಲ, ಅಷ್ಟು ಸಂಕಟವಾಗಿದೆ. ಹುಗ್ಲಿಯಲ್ಲಿ ೧೪೦೦ ವಿದ್ಯಾರ್ಥಿಗಳು ಇಂಗ್ಲಿಷ ಕಲಿಯುತ್ತಿದ್ದಾರೆ. ಹಿಂದುಗಳ ಮೇಲೆ ಈ ಶಿಕ್ಷಣದಿಂದ ಪ್ರಚಂಡ ಪರಿಣಾಮವುಂಟಾಗಿದೆ. ಇಂಗ್ಲಿಷ ಕಲಿತ ಒಬ್ಬ ಹಿಂದುವಿಗೆ ಸಹ ಸ್ವಧರ್ಮಶ್ರದ್ಧೆಯಿರುವದಿಲ್ಲ. ಕೆಲವರಂತು ದೋರಣವೆಂದು ಮಾತ್ರ ಹಿಂದು ಧರ್ಮದ ಆಚಾರಗಳನ್ನನುಸರಿಸುತ್ತಾರೆ, ಕೆಲವರು ಕೇವಲ ನಿರೀಶ್ವರ ಪಂಥದವರಾಗುತ್ತಾರೆ, ಕೆಲವರು ಪ್ರತ್ಯಕ್ಷ ಕ್ರೈಸ್ತ ಧರ್ಮವನ್ನಂಗೀಕರಿಸುತ್ತಾರೆ. ನಮ್ಮ ಯೋಜನೆಯಂತೆ ಶಿಕ್ಷಣಕ್ರಮವನ್ನು ಮುಂದರಿಸಿದರೆ ಈ ಹೊತ್ತಿನಿಂದ ೩೦ ವರುಷಗಳಲ್ಲಿ ಬಂಗಾಲ ಪ್ರಾಂತದೊಳಗೆ ಮರ್ಯಾದಸ್ಥ ಕುಟುಂಬದವರಲ್ಲಿ ಯಾರೂ ಮೂರ್ತಿಪೂಜಕರಾಗಿ ಉಳಿಯಲಿಕ್ಕಿಲ್ಲ. ಇಷ್ಟಾಗಿ ಧರ್ಮಾಂತರಕ್ಕಾಗಿ ಏನೊಂದೂ ನಾವು ಯತ್ನ ಮಾಡುವದು ಬೇಡ; ಧಾರ್ಮಿಕ ಸ್ವಾತಂತ್ರ್ಯದಲ್ಲಿ ನಾವು ಎಷ್ಟು ಕೈ ಹಾಕಲುಬೇಡ; ಬರೇ ಜ್ಞಾನ ಹಾಗು ಆತ್ಮನಿರೀಕ್ಷಣೆಗಳ ಸ್ವಾಭಾವಿಕ ಪರಿಣಾಮದಿಂದ ಈ ಅವಸ್ಥಾಂತರವುಂಟಾಗುವದು. ಈ ಭವಿಷ್ಯ ವಿಚಾರದಿಂದ ನನಗೆ ಅತ್ಯಂತ ಆನಂದವಾಗುತ್ತದೆ."

ಈ ಉಲ್ಲೇಖದಿಂದ ನಮ್ಮಲ್ಲಿಯ ಸುಶಿಕ್ಷಿತರೆಂದೆನಿಸಿಕೊಳ್ಳುವವರಲ್ಲಿ ಉಂಟಾದ ಧರ್ಮ ತಿರಸ್ಕಾರವೂ, ಪರಂಪರೆಯಿಂದ ನಡೆದು ಬಂದ ಕುಲಾಚಾರ ವಿಚಾರಗಳ ನಿಂದೆಯೂ, ಧರ್ಮಲೋಪವೂ ತಿಳಿಯುವಂತಿದೆ. ಹೊಸ ಶಿಕ್ಷಣದ ಗರ್ಭವೇ ಈ ಪ್ರಕಾರ ಘಟಿಸಲ್ಪಟ್ಟಿದ್ದರಿಂದ ಈಗಿನ ವಿದ್ಯಾಸಂಪನ್ನರು ಪೂರ್ವಪರಂಪರೆಯನ್ನೆಲ್ಲ ಒಮ್ಮೆಲೇ ಧಿಕ್ಕರಿಸಿ ಎಲ್ಲವನ್ನೂ ಪಾಶ್ಚಾತ್ಯರ ನಡಾವಳಿಯಂತೆ ಘಟಿಸಲುದ್ಯುಕ್ತರಾಗುತ್ತಾರೆ. ನಮ್ಮ ಉಡಿಗೆ ತೊಡಿಗೆಗಳು, ಆಹಾರ-ವಿಹಾರಗಳು ಎಲ್ಲವೂ ಪಾಶ್ಚಾತ್ಯರಂತೆಯೇ ನಾವು ರಚಿಸುತ್ತೇವೆ. ಧೋತರ ಹೋಗಿ ಚಣ್ಣ ಬಂತು, ರುಮಾಲು ಹೋಗಿ ಹ್ಯಾಟು ಬಂತು, ಪಾದರಕ್ಷೆ ಹೋಗಿ ಬೂಟು ಬಂತು. ಇಷ್ಟಾಗಿ ಬೂಟಿಗೆ ಪಾದರಕ್ಷೆಯಂತೆ ನಿಷೇಧವಿಲ್ಲ. ಪಾಶ್ಚಾತ್ಯರಿಗೆ ಯಜ್ಞೋಪವೀತವಿಲ್ಲ. ಆದರಿಂದ ನಮಗೂ ಯಜ್ಞೋಪವೀತ ಬೇಡ. ಮಡಿ ಮೈಲಿಗೆ ವಿಚಾರವು ನಷ್ಟವಾಯಿತು. ಮಂತ್ರ ತಂತ್ರಗಳು ನಿರರ್ಥಕವಾದವು. ಪರಲೋಕವೇ ಭಾರತೀಯರಿಗಿಲ್ಲವಾಯಿತು.

ಭ್ರಾಂತಿಕ ಸುಖೋಪಭೋಗವೇ ಅಧುನಿಕ ಶಿಕ್ಷಿತರ ಧ್ಯೇಯವಾಯಿತು. ಇಂಥ ವಿಚಾರಗಳೆಲ್ಲ ನಮ್ಮಲ್ಲಿಯ ಈಗಿನ ಶಿಕ್ಷಣಕ್ರಮದಿಂದ ಒದಗಿಬಂದಿರುತ್ತವೆ. ಭರತಭೂಮಿಯು ಧರ್ಮಭೂಮಿಯೆಂದು ದಿಗಂತ ಕೀರ್ತಿ ಪಡೆದಿದೆ. ಆ ಭೂಮಿಯಲ್ಲಿಯೇ ಸ್ವಸಂತೋಷದಿಂದ ಶಿಕ್ಷಣ ಪಡೆದು ಧರ್ಮಲೋಪವಾಗುವಂಥ ಪರಿಪಾಟವನ್ನು ಕಲ್ಪಿಸುವ ಬ್ರಿಟಿಶ ರಾಜ್ಯಕರ್ತರ ಮಾಯೆಯನ್ನು ಎಷ್ಟೊ ಕೊಂಡಾಡಿದರೂ ತೀರದು. ಅದನ್ನು ತಿಳಿದು ಇನ್ನೂ ಈ ಶಿಕ್ಷಣಕ್ರಮಕ್ಕಾಗಿಯೇ ಭೂಕ್ಷ್ಯಾತ್ಮರು ಲಕ್ಷಾವಧಿ ರೂಪಾಯಿಗಳನ್ನರ್ಪಿಸುವದೂ ನಮ್ಮ ಭರತಭೂಮಿಯ ದುರ್ಭಾಗ್ಯವು. ಮೆಕೊಲೇ ದೊರೆಳು ನುಡಿದಂತೆ ನಮ್ಮ ಕೈಯಿಂದಲೇ ನಾವು ದಿನೇ ದಿನೇ ಬಂಧಪಾಶದಲ್ಲಿ ಸಿಲುಕಿಕೊಳ್ಳುತ್ತಿದ್ದೇವೆ. ಮಯಾಸುರನ ಸಭೆಯಲ್ಲಿ ನರೇಂದ್ರನಾದ ದುರ್ಯೋಧನನಂತೆ ನಮ್ಮ ಅವಸ್ಥೆಯಾಗಿದೆ. ಕೆರೆಯಿದ್ದಲ್ಲಿ ನೀರು ಕಾಣದೆ ದುರ್ಯೋಧನನೇನೋ ಧುಮುಕಿ ಬಳಲಿದ್ದನಂತೆ; ಮುಂದಿರದಲ್ಲಿ ಒಳಸೇರಲು ಇದ್ದ ಬಾಗಿಲು ಕಾಣದೆ ಬೇರೆ ಕಡೆ ಹೋಗಿ ಹಣೆ ಅಪ್ಪಿಕೊಂಡಿದ್ದನಂತೆ! ನಾವಾದರೂ ಅದೇ ಸ್ಥಿತಿಗೊಳಗಾಗಿದ್ದೇವೆ. ನಮಗೆ ಈ ಶಿಕ್ಷಣ ಕ್ರಮದ ಗರ್ಭದೋಷವು ಇನ್ನೂ ಹೊಳೆಯದ. ಅದೇ ಶಿಕ್ಷಣಕ್ರಮಕ್ಕಾಗಿ, ಅದರ ಪ್ರಸಾರಕ್ಕಾಗಿ ನಾವಿನ್ನೂ ದುಡಿಯುತ್ತಿದ್ದು ಆ ಕಾರ್ಯವೇ ಶ್ರೇಯಸ್ಕರವೆಂದು ನಮ್ಮ ಭ್ರಮೆಯಾಗಿರುತ್ತದೆ. ಮೆಕೊಲೇ ದೊರೆಗಳ ಮೇಲಿನ ಉಲ್ಲೇಖದಿಂದ ಈಗಿನ ಶಿಕ್ಷಣದ ನಿಜರೂಪ ಹೊಳೆದು ಲೋಕನಾಯಕರು ಹೊಸ ಶಿಕ್ಷಣ ಸಂಸ್ಥೆಗಳನ್ನು ಪ್ರವರ್ತಿಸಿ ವಿದ್ಯಾರ್ಥಿಗಳಲ್ಲಿ ಉಂಟಾಗುತ್ತಿದ್ದ ಧರ್ಮಲೋಪವನ್ನು ಪ್ರತಿಷ್ಠಾಪಿಸಲು ಉದ್ಯುಕ್ತರಾಗಬೇಕಾಗಿಯೂ ವಿದ್ಯಾರ್ಥಿಗಳ ತಾಯಿ-ತಂದೆಗಳೂ, ಹಿತಚಿಂತಕರೂ ಸಂಕುಚಿತ ದೃಷ್ಟಿಯನ್ನು ಹಿಡಿಯದೆ ಹೊಸ ವಿದ್ಯಾಲಯಗಳಿಂದ ಲಾಭ ಪಡೆದು ಲೋಕನಾಯಕರಿಗೂ ನೆರವಾಗಬೇಕಾಗಿಯೂ ಪ್ರಾರ್ಥನೆಯಿದೆ. ಪುರಾತನ ಪರಂಪರೆಯು ಲೋಪವಾದ್ದರಿಂದ ಭಾರತೀಯರ ಸ್ಥಿತಿಯು ತೀರ ಶೋಚನೀಯವಾಗಿದೆ. ಈಗಾದರೂ ಎಚ್ಚರಪಟ್ಟು ಸ್ವತ್ವರಕ್ಷಣೆಯನ್ನು ನಾವು ಮಾಡಿಕೊಳ್ಳಬೇಕಲ್ಲವೇ ?

— ಸಿಂಧ ಪ್ರಾಂತದ ಸುಕ್ಕೂರ ಜಿಲ್ಲೆಯಲ್ಲಿ ಮೂವರು ಮಾಟ ವಿದ್ಯೆಯನ್ನು ಸಂಗ್ರಹಿಸಿಕೊಳ್ಳುವದಕ್ಕಾಗಿ ಒಬ್ಬ ಬಾಲಕನಿಗೆ ಆಹವಿಯಾಲಿಲ್ಲಿಯೊದ್ದು ಒಂದು ದೇವಿಯ ದೇವಸ್ಥಾನದಲ್ಲಿ ಬಲಿಕೊಟ್ಟರು. ಪೋಲೀಸರು ಚೌಕಶಿ ಮಾಡುತ್ತಿದ್ದಾರೆ.

— ಹಾನಗಲ್ಲ ತಾಲೂಕಿನ ವಿರಕ್ತಮಠದೊಳಗೆ ಶ್ರೀ ಚನ್ನವೀರೇಶ ಸಂಸ್ಕೃತ ಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಶ್ರೀ ಕುಮಾರಸ್ವಾಮಿಗಳು ಸ್ಥಾಪನ ಸಮಾರಂಭವನ್ನು ನೆರವೇರಿಸಿದರು.

ಸ್ಫುಟ ಸೂಚನೆಗಳು.

೧. ಗೋವಾಂತಕದೊಳಗಿನ ಶುದ್ಧಿ ಯಾನೆ ಪತಿತೋದ್ಧಾರ ಪ್ರಯತ್ನದ ಸಮಯ ಅಲ್ಲಿ ಹಿಂದೆ ನಡೆದ ಜಾತಿಭ್ರಷ್ಟತೆಯ ಇತಿಹಾಸದ ನೆನಪಾದರೆ, ಮನಸ್ಸಿಗೆ ಭಯಂಕರವಾದ ಆಘಾತವಾಗುತ್ತದೆ. ೧೬ನೇ ಶತಮಾನದ ಕಥೆಯಿದು. ಆ ಕಾಲಕ್ಕೆ ಗೋವಾಂತಕವು ವಿಜಾಪುರದ ಆದಿಲಶಾಹಿಯ ಕೈಕೆಳಗಿತ್ತು. ಆದಿಲಶಾಹರವರಿಗೂ, ಗೋವಾಂತಕದ ಹಿಂದುಗಳಿಗೂ ಏನೂ ಕೂಡಿಬರಲಿಲ್ಲ. ಹಿಂದುಗಳ ನಾಯಕನಾದ ತಿಮ್ಮಯ್ಯನೆಂಬವನು ಆ ಕಾಲಕ್ಕೆ ಪ್ರಾಂತಾಣೆಕನಾಗಿ ಬಂದಿದ್ದ ಆಲ್ಬುಕರ್ಕನ ಬಳಿ ಹೋಗಿ ಆಲೋಚನೆ ನಡೆಸಿದನು. ಆದಿಲಶಾಹಿಯ ರಾಜ್ಯವನ್ನು ಗೋವಾಂತಕದೊಳಗಿಂದ ಹೊರಹಾಕಲು ನೆರವಾದರೆ, ಆದಿಲಶಹರಿಗೆ ಕೊಡತಕ್ಕ ಕಪ್ಪವನ್ನು ಆಲ್ಬುಕರ್ಕನಿಗೆ ಕೊಡಲು ತಿಮ್ಮಯ್ಯನು ಒಪ್ಪಿಕೊಂಡನು. ಅಂದರೆ, ಆಲ್ಬುಕರ್ಕನು ಆದಿಲಶಹರ ಬದಲಿಗೆ ಗೋವಾಂತಕದ ಅಧಿರಾಜನಾದನು. ಆಲ್ಬುಕರ್ಕನ ಅಧಿರಾಜ್ಯವನ್ನು ತಿಮ್ಮಯ್ಯನು ಒಪ್ಪಿಕೊಳ್ಳದಿದ್ದರೆ, ಗೋವಾಂತಕದಲ್ಲಿ ೪೦೦ ವರ್ಷಗಳ ತನಕ ಹಿಂದುಗಳ ಪೀಡೆಯು ನಡೆಯುತ್ತಿದ್ದಿಲ್ಲ; ಈಗಿನ ಶುದ್ಧಿಯೂ ಬೇಕಾಗಿದ್ದಿಲ್ಲ. ಹಿಂದುಗಳ ದುರ್ದೈವವದ ! ಆಲ್ಬುಕರ್ಕನ ಬೆಂಬಲದಿಂದ ಗೋವಾಂತಕವು ಆದಿಲಶಾಹರವರ ರಾಜ್ಯದಿಂದ ತಪ್ಪಿ ಪೋರ್ತುಗಾಲಿಗೆ ಸೇರಿತು. ತಿಮ್ಮಯ್ಯನಿಗೂ, ಆಲ್ಬುಕರ್ಕನಿಗೂ ಆದ ಕರಾರಿನಂತೆ ಪೋರ್ತುಗೀಜರಿಗೆ ಹಿಂದು ಧರ್ಮದಲ್ಲಾಗಲೀ, ನಡಾವಳಿಗಳಲ್ಲಾಗಲಿ, ನ್ಯಾಯದಾನದಲ್ಲಾಗಲಿ ಕೈಹಾಕಲು ಅಧಿಕಾರವಿದ್ದಿಲ್ಲ. ಕೈಹಾಕಬಾರದಾಗಿ ಸ್ಪಷ್ಟವಾಗಿ ಕರಾರಿನಲ್ಲಿ ನಮೂದಿಸಿತ್ತು. ಕಪ್ಪವನ್ನು ಮಾತ್ರ ಪಡೆಯುವ ಅಧಿಕಾರವು ಪೋರ್ತುಗಾಲಿಗೆ ಕೊಡಲ್ಪಟ್ಟಿತ್ತು. ಅನಂತರ ಆಲ್ಬುಕರ್ಕನು ಜಾಹೀರನಾಮೆಯನ್ನು ಹೊರಡಿಸಿದನು. ೧೫೧೯-೧೫೫೩-೧೫೫೭ನೇ ಸಾಲುಗಳಲ್ಲಿ ಇದೇ ಅರ್ಥದ ಜಾಹೀರನಾಮೆಗಳು ಪ್ರಕಟವಾದವು. ಹಿಂದು ಧರ್ಮದಲ್ಲಿ, ನಡಾವಳಿಗಳಲ್ಲಿ ಪೋರ್ತುಗೀಜರು ಕೈಹಾಕಲಿಕ್ಕಿಲ್ಲವಾಗಿ ಆಗಿಂದಾಗ ವಚನ ಕೊಡಲಾದವು ಹಿಂದುಗಳಿಗೆ ಬಹ ಸಂತೋಷವಾಯಿತು. ಆದಿಲಶಾಹರವರ ರಾಜ್ಯ ತಪ್ಪಿಸಿ ತಾವು ಧನ್ಯರಾದೆವೆಂದು ಅವರೆಲ್ಲರಿಗೂ ಅನಿಸಿತು. ಪಾಶ್ಚಾತ್ಯರ ಅಭಿವಚನಗಳನ್ನು ನಂಬಿಕೊಂಡಿದ್ದವರಿಗೆ ಶಾಶ್ವತವಾದ ಕ್ಷೇಮವಾದದ್ದುಂಟೇ?

---

೨. ೧೫೪೦ ನೇ ಸುಮಾರಿಗೆ ಪೋರ್ತುಗೀಜರು ಇನ್ನೊಂದು ಜಾಹೀರನಾಮೆಯನ್ನು ಪ್ರಕಟಿಸಿದರು. ಅದನ್ನು ನೋಡಿದೊಡನೆ ಹಿಂದುಗಳ ಎದೆ ಹಾರಿತು.- “ಈ ತನಕ ನಾವು ನಿಮಗೆ ಅನೇಕ ಅಭಿವಚನಗಳನ್ನು ಕೊಟ್ಟಿದ್ದೇವೆ. ಈ ಅವಧಿಯಲ್ಲಿ ನೀವು ನಿಮ್ಮ ಸುಳ್ಳು ಧರ್ಮವನ್ನು ಬಿಟ್ಟುಕೊಟ್ಟು, ನಮ್ಮ ಸದ್ಧರ್ಮವನ್ನು ಅಂಗೀಕರಿಸುವಿರೆಂದು ನಮ್ಮ ಎಣಿಕೆಯಿತ್ತು. ಆದರೆ, ನೀವು ಹಾಗೆ ಮಾಡಲಿಲ್ಲ. ನಮ್ಮ ಧರ್ಮವಿಚಾರದಂತೆ ಮೂರ್ತಿಪೂಜೆಯು ನಾಸ್ತಿಕರ ಲಕ್ಷಣವು, ಇನ್ನು ಮುಂದೆ ನಮ್ಮ ರಾಜ್ಯದಲ್ಲಿ ಹಿಂದು ದೇವಾಲಯವು ಇರಲಾಗದು.” ಗೋವಾಂತಕವು ಪೋರ್ತುಗೀಜರ ‘ನಮ್ಮ’ ರಾಜ್ಯವಾಯಿತು. ತಿಸವಾಡಿ, ಮಹಾಲಿಸೊಳಗಿನ, ಅಂದರೆ, ಈಗಿನ ಪಣಜಿ ಪಟ್ಟಣದ ಸುತ್ತಮುತ್ತಲಿದ್ದ ಹಿಂದು ದೇವಾಲಯಗಳೆಲ್ಲ ಒಮ್ಮೆಲೇ ನೆಲಸಮವಾದವು. ಹಿಂದು ಪ್ರಮುಖರಿಗೆ ಸೆರೆ ಹಿಡಿದು ತರಲಾಯಿತು. ನೆಲಸಮವಾದ ಹಿಂದು ದೇವಾಲಯಗಳ ಆಸ್ತಿಯನ್ನು ಹೊಸದಾಗಿ ಸ್ಥಾಪಿಸಲ್ಪಟ್ಟ ಇಗರ್ಜಿಗಳಿಗೆ ಕೊಡಬೇಕಾಗಿ ಬಲಾತ್ಕಾರವಾಯಿತು. ಹಿಂದುಗಳು ಬಗ್ಗಿದರು ಇದರಂತೆ ಬರಕೊಟ್ಟು, ಇಷ್ಟರಿಂದಲೇ ತಮ್ಮ ಬಿಡುಗಡೆಯಾಗುವದೆಂದು ಭಾವಿಸಿದರು ಆದರೆ, ಬಲಾತ್ಕಾರವು ಇಷ್ಟಕ್ಕೇ ಮುಗಿಯುತ್ತದೆಯೇ ? ಹವಿಸ್ಸು ತಿಂದ ತಿಂದ ಹಾಗೆ ಅಗ್ನಿನಾರಾಯಣನು ಹೆಚ್ಚೆಚ್ಚು ಪ್ರಜ್ವಲಿಸುವಂತೆಯೇ ಪೋರ್ತುಗೀಜ ಸರಕಾರದ ಧರ್ಮಪ್ರಸಾರ ಮಾಡುವ ಹುರುಳಿಗೆ ಕಳೆಯೇರಿತು.

---

೩. ೧೫೪೬ ನೇ ಸಾಲಿನಲ್ಲಿ ಹೊಸ ವೇಷವು ರಂಗಸ್ಥಳದ ಮೇಲೆ ಬಂತು. ಮನೆಯಲ್ಲಿ ಸಹ ಹಿಂದುಗಳು ಮೂರ್ತಿಪೂಜೆ ಮಾಡಬಾರದಾಗಿಯೂ, ಕಥಾ-ಪುರಾಣಗಳನ್ನು ಹೇಳ-ಕೇಳಬಾರದಾಗಿಯೂ, ಈ ಕಾನೂನನ್ನು ಉಲ್ಲಂಘಿಸಿದರೆ, ಸೊತ್ತು ಜಪ್ತ ಮಾಡಲ್ಪಡುವದಾಗಿಯೂ ಪ್ರಕಟಿಸಲಾಯಿತು. ಏನು ನಮ್ಮ ಹಿಂದುಗಳ ವಿಧಿಘಟನೆ ! ಅದಕ್ಕೂ ನಮ್ಮ ಹಿಂದುಗಳು ಬಗ್ಗಿದರು. ಮೂರ್ತಿಪೂಜೆಯನ್ನು ಬಿಟ್ಟರು; ಆದರೆ, ಧರ್ಮಬುದ್ಧಿ ಬಿಡರು. ಆದರಿಂದ ಕಾಗದಗಳ ಮೇಲೆ, ಎಲೆಗಳ ಮೇಲೆ ಮೂರ್ತಿಗಳನ್ನು ಬರೆದು ಧರ್ಮಪಾಲನೆ ಮಾಡಹತ್ತಿದರು. ೧೫೫೭ ನೇ ಇಸವಿಯಲ್ಲಿ ಇನ್ನೊಂದು ಕಾನೂನಾಯಿತು. ಹಿಂದು ವಿಧವೆಯರಾಗಲಿ, ಹುಡುಗಿಯರಾಗಲಿ ಕ್ರಿಸ್ತಿ ಧರ್ಮಕ್ಕೆ ಸೇರಿದರೆ, ಅವರಿಗೆ ಗಂಡನ ಅಥವಾ ತಂದೆಯ ಆಸ್ತಿಯಲ್ಲಿ ಪಾಲು ಸಿಗಬೇಕು. ಇದರಿಂದಲೂ ಪೋರ್ತುಗೀಜರ ತೃಪ್ತಿಯಾಗಲಿಲ್ಲ. ಹಿಂದುಗಳಂತೂ ಸರಿ ಬಗ್ಗಿಸಿಕೊಂಡೇ ಇದ್ದಾರೆ. ಇನ್ನೊಂದು ಕಾನೂನಾಯಿತು. ಬ್ರಾಹ್ಮಣರೆಲ್ಲರೂ ತಮ್ಮ ಸ್ಥಿರ-ಚರಸೊತ್ತನ್ನೆಲ್ಲ ಮಾರಾಟ ಮಾಡಿ ತಿಸವಾಡಿಯೊಳಗಿಂದ ಹೊರಹೋಗಬೇಕೆಂದು ಅಪ್ಪಣೆಯಾಯಿತು. ‘ಇಲ್ಲದಿದ್ದರೆ ಬ್ರಾಹ್ಮಣರ ಸರ್ವ ಆಸ್ತಿ ಜಪ್ತ ಆಗಿ, ಅವರಿಗೆ ಸಾಯುವ ತನಕ ಸೆರೆಮನೆಯಲ್ಲಿಡಲಾಗುವದೆಂದು ವಿಧಿಸಲಾಯಿತು. ಇನ್ನೊಂದು ಜಾಹೀರನಾಮೆ ಬಂತು. ವೈದ್ಯ-ಬಡಿಗ ಕಾಗು ಹಿಕ್ಕಲು ಈ ಜಾತಿಯವರಿಗೆ ಬಿಟ್ಟು, ಉಳಿದ ಹಿಂದುಗಳಿಗೆಲ್ಲ ಕಾನೂನಿನಂತೆ ಹೊರತಳ್ಳಲಾಯಿತು. ಪುರುಷ ಸಂತತಿಯಿಲ್ಲದೆ ಹಿಂದುಗಳು ತೀರಿಕೊಂಡರೆ, ಆತನ ಆಸ್ತಿಯು ಆತನ ಹೆಂಡತಿಗೆ ಸಿಗದೆ, ಜಾತಿಗೆಟ್ಟ ಹೊರದ ಸಂಬಂಧಿಕರಿಗೆ ಸಿಗಬೇಕೆಂದು ಕಾನೂನಾಯಿತು. ೧೫೬೭ನೇ ಇಸ್ವಿಯಲ್ಲಿ ಇನ್ನೊಂದು ಕಾನೂನಿನಿಂದ ಕ್ರಿಸ್ತಿಧರ್ಮ ಪ್ರವಚನಗಳಿಗೆ ಹಿಂದುಗಳೆಲ್ಲರೂ ಹಾಜರಾಗಲೇಬೇಕೆಂದೂ, ಹಾಜರಾಗದಿದ್ದರೆ, ಹಡಗದ ಮೇಲೆ ಖಲಾಸಿಯ ಕೆಲಸ ಮಾಡಬೇಕಾಗಿಯೂ ವಿಧಿಸಲಾಯಿತು ೧೫೬೭ನೇ ಇಸ್ವಿಯಲ್ಲಿ ಇನ್ನೊಂದು ಕಾನೂನಾಯಿತು. ಹಿಂದುಗಳು ಸ್ವಧರ್ಮ ಶಾಸ್ತ್ರಗ್ರಂಥವನ್ನು ಇಟ್ಟುಕೊಳ್ಳಬಾರದಾಗಿ ಪ್ರತಿಬಂಧಿಸಲಾಯಿತು. ಸಾಸಷ್ಟಿ ಮಹಾಲಿನಲ್ಲಿಯೂ ಪೋರ್ತುಗೀಜರ ಕಾಲಿಪ್ರವೇಶವಾಯಿತು. ಡಿಯೋಗ ರೊಡ್ರಿಗ್ಸ ಎಂಬ ಪಾದ್ರಿಗಳು ಹಿಂದು ಮಂದಿರಗಳನ್ನು ಧ್ವಂಸ ಮಾಡಲಾರಂಭಿಸಿದರು. ಲೋಟಲಿಯೊಳಗಿನ ಶ್ರೀ ರಾಮನಾಥ ಮಂದಿರವನ್ನೂ, ಇತರ ೨೮೦ ದೇವಾಲಯಗಳನ್ನೂ ಈ

ಪುಣ್ಯಕೃತ್ಯವನ್ನು ನೆಲಸಮ ಮಾಡಿದನು. ರಾಯತೂರದಲ್ಲಿ ಶಾಸನ ಗೋರಿಯಿದೆ. ಹಿಂದು ದೇವಾಲಯಗಳ ವಿಧ್ವಂಸ ಮಾಡಿದ ಪುಣ್ಯಕೃತ್ಯನೆಂದು ಈ ಗೋರಿಯ ಮೇಲೆ ಬರೆಯಲಾಗಿದೆ. ದೇಶ ಭಾಷೆಗಳಿಂದ ಧರ್ಮಪ್ರಸಾರ ಕಾರ್ಯವನ್ನು ನಡಿಸಲು ತೊಂದರೆಯಾಯಿತು. ಅದರಿಂದ ಪೋರ್ತುಗೀಜ ಭಾಷೆಯ ಪ್ರಸಾರ ಪ್ರಯತ್ನ ನಡೆಯಿತು. ಎಲ್ಲರೂ ತಮ್ಮ ವ್ಯವಹಾರಗಳನ್ನೆಲ್ಲ ಪೋರ್ತುಗೀಜ ಭಾಷೆಯಲ್ಲಿಯೇ ನಡಿಸಬೇಕೆಂದು ವಿಧಿಸಲಾಯಿತು. ಇದರಿಂದಲೂ ಧರ್ಮಪ್ರಸಾರಕರಿಗೆ ತೃಪ್ತಿಯಾಗಲಿಲ್ಲ. ಇನ್ನೊಂದು ಕಾನೂನಾಯಿತು. ಪೋರ್ತುಗೀಜ ತಿಳಿಯದವರಿಗೆ ವಿವಾಹ ಮಾಡಿಕೊಳ್ಳುವ ಅಧಿಕಾರವಿಲ್ಲೆಂದು ವಿಧಿಸಲಾಯಿತು. ಕ್ರಿಸ್ತಿ ಕೆಲಸಿಗರು ಹಿಂದುಗಳಿಗೆ ಕ್ಷೌರ ಮಾಡಬಾರದಾಗಿಯೂ ಇನ್ನೊಂದು ಕಾನೂನಾಯಿತು. ಅನೇಕ ಹಿಂದುಗಳು ಹೆದರಿಬಗ್ಗಿ ಸಿದರು ಕ್ರೈಸ್ತರಾಗಿ ತಮ್ಮ ಭೌತಿಕ ಕಷ್ಟಗಳನ್ನು ಪರಿಹರಿಸಿಕೊಂಡರು. ಅನೇಕರಿಗೆ ಈ ಕಷ್ಟಗಳನ್ನು ಇನ್ನು ಸಹಿಸಲಾಗಲಿಲ್ಲ. ಅದರಿಂದ ಗೋಮಾಂತಕವನ್ನೇ ಬಿಟ್ಟು ದೇಶಾಂತರ ಮಾಡಿದರು. ಆಗ ಗೋಮಾಂತಕ ಸರಕಾರದ ಕಣ್ತೆರೆಯಿತು. ಬೇಸಾಯಕ್ಕೆ ಕೂಲಿಯಾಳಿಲ್ಲ, ವ್ಯಾಪಾರವಿಲ್ಲ, ಕರ ವಸೂಲಿಯಿಲ್ಲ. ಅದರಿಂದ ಪೋರ್ತುಗೀಜ ಸರಕಾರವು ಧರ್ಮಪ್ರಸಾರದ ಉತ್ಸಾಹವನ್ನು ಅಷ್ಟಕ್ಕೇ ತಡಿಸಿತು. ಧರ್ಮಪ್ರಸಾರದ ಉತ್ಸಾಹವು ಶಮಿಸಿದ ಸಾತಷ್ಟಿ, ಬಾರದೇಶ ಹಾಗು ಮುರಗಾಂವ ಈ ಪ್ರದೇಶದೊಳಗೆ ನಡೆಯಿತು. ಟಿಪ್ಪುಸುಲ್ತಾನನು ಅಲ್ಪಕಾಲನನ್ನು ಆಕ್ರಮಿಸಿ ಆತನಿಗೆ ಅಧಿರಾಜನಾಗಿ ವರ್ತಿಸಿದ ಚಿಕ್ಕ ಪಾಪದ ಫಲವು ಈ ಪ್ರಕಾರ ಪರಿಣಮಿಸಿತು. ಅಲ್ಪಕಾಲನ ಪಟ್ಟಣಗಳನ್ನು ನಾಚಿಕೆಯಿಂದ ಪಾಪಕ್ಕೆ ಪ್ರಾಯಶ್ಚಿತ್ತವು ಸಿಕ್ಕಿತು. ಹಿಂದುಗಳು ಆಗಿಂದಾಗ ಹೆದರಿಬಗ್ಗಿಸದೆ ಅಧಿಕಾರಿಗಳಿಗೆ ಅಧೀರರಾಗಿದ್ದರೆ, ಮುಂದಿನ ಅನರ್ಥವಾದರೂ ತಪ್ಪುತ್ತಿತ್ತು. ಬಂದಷ್ಟು ಬರಲಿ, ಎಂಬ ವೇದಾಂತವನ್ನು ಹೇಳಿಕೊಂಡು ಅಪಮಾನಾತಿಶಯಗಳನ್ನು ಸೈರಿಸುತ್ತ ಹೋದರೆ, ಪರಮಪ್ರಿಯವಾದ ಸ್ವಧರ್ಮವನ್ನೇ ತ್ಯಜಿಸುವ ಭಯಂಕರ ಪ್ರಸಂಗ ಬರುತ್ತದೆಂದು ಹಿಂದುಗಳು ಗ್ರಹಿಸಿ, ಸ್ವಘಾತಕ ವೇದಾಂತವನ್ನು ಪಾಶ್ಚಾತ್ಯರ ಸಹವಾಸ ಬೆಳೆಸುವಾಗ ಉಪಯೋಗಿಸದೆ, "ಸಾಹಸೇ ಶ್ರೀಃ ಪ್ರತಿವಸತಿ" ಎಂಬಂತೆ ಸಾಹಸಗಳನ್ನು ಕೈಕೊಳ್ಳಲು ಟೊಂಕಕಟ್ಟಬೇಕಾಗಿ ಬಿನ್ನಹವಿದೆ.

ಈ ಸಾಹಸಕ್ಕಾಗಿ ಶ್ರೀ ಕವಳೆ ಮಠಾಧೀಶರನ್ನು ನಾವು ವಂದಿಸುವೆವು. ಶುದ್ಧಿ ಕಾರ್ಯದಿಂದ ಗೋಮಾಂತಕದೊಳಗಿನ ಪಾದ್ರಿಗಳಿಗೂ, ಕ್ರೈಸ್ತ ಅಧಿಕಾರಿಗಳಿಗೂ ಸಿಟ್ಟುಬಂದಿದೆ. ಪೋಲೀಸರು ಈ ಪಾದ್ರಿಗಳ ಪ್ರೇರಣೆಯಿಂದ ಹಿಂದು ಪ್ರಮುಖರನ್ನು ಪೋಲೀಸ ಚೌಕಿಗಳ ಮೇಲೆ ಕರೆಯುತ್ತಿದ್ದಾರೆ. ಶ್ರೀ ವಿಷ್ಣು ಗಿರಿಧರ ಧೇಂಪೆಯವರಿಗೆ ಪೋಲೀಸ ಚೌಕಿಯ ಮೇಲೆ ಕರೆತಂದು ಬಿಡಲಾಯಿತು. "ಭಾರತ" ಹಾಗು "ಪ್ರಕಾಶ" ಪತ್ರಿಕೆಗಳ ಸಂಪಾದಕರಿಗೂ ಪೋಲೀಸ ಚೌಕಿಗಳ ಮೇಲೆ ಹಾಜರಾಗಬೇಕಾಗಿ ಹುಕುಮಾಯಿತು. ಅವರು ಇದನ್ನೆಲ್ಲ ಪಾಲಿಸತಕ್ಕಿದ್ದರಿಂದ ಪೋಲೀಸರಿಗೆ ಹುರುಪು ಬಂತು. ಕಡೆಗೆ ಮಠದೊಳಗೆ ಕಾಬರೊಬ್ಬರು ಹೋಗಿ ಶ್ರೀ ಮಠಾಧೀಶರಿಗೆ ಪೋಂಡೆಯ ಪೋಲೀಸ ಚೌಕಿಯ ಮೇಲೆ ಹಾಜರಾಗಬೇಕಾಗಿ ಹುಕುಮ ಮಾಡಿದರು. ಶ್ರೀಮಠಾಧೀಶರು ಕಾಬರಿಗೆ ಸಿಗಲಿಲ್ಲ. ಅದರಿಂದ ಮಠದ ಪಾರುಪತ್ಯಗಾರರಿಗೆ ಈ ಸಂಗತಿ ತಿಳಿಸಲಾಯಿತು. ಅವರು ಶ್ರೀ ಸ್ವಾಮಿಗಳು ಧರ್ಮಕೃತ್ಯದಲ್ಲಿ ತೊಡಗಿರುವದರಿಂದ ಕಾಬರಿಗೆ ಕಾಣಲಾರರೆಂದೂ, ಪೋಲೀಸ ಚೌಕಿಯ ಮೇಲೆ ಹೋಗಲಾರರೆಂದೂ ಅವರು ತಿಳಿಸಿದರು. ಪುನಃ ಆ ಕಾಬರು ಬಂದು ರೀತಿಯಂತೆ ಶ್ರೀಗಳಿಗೆ "ಇತಿಮಾಸಾಂ" ಅಂದರೆ ಸಮನ್ಸು ಹೊರಡಿಸಲಾಗುವದೆಂದೂ, ಸಮನ್ಸನ್ನು ಮನ್ನಿಸದಿದ್ದರೆ ಮುಂದೆ ಶಿಕ್ಷೆಯಾಗುವದೆಂದೂ ಆತನು ಬೆದರಿಸಿದನು. ಆದರೆ, ಶ್ರೀಗಳು ಹೆದರಲಿಲ್ಲ. ಶ್ರೀಮಠಾಧೀಶರು ಈ ತನಕ ಪೋಲೀಸ ಚೌಕಿಯ ಮೇಲೆ ಹಾಜರಾಗಿದ್ದಿಲ್ಲ. ಕೋರ್ಟಿನಲ್ಲಿ ಕೆಲಸವಿದ್ದರೆ ಈ ತನಕ ಶ್ರೀಮಠದಲ್ಲೇ ಕೋರ್ಟಿನ ಅಧಿಕಾರಿಗಳು ಬಂದು ತಮ್ಮ ಕೆಲಸ ಮಾಡಿಕೊಂಡು ಹೋಗಿದ್ದಾರೆ. ಇದರಂತೆ ನಡಕೊಳ್ಳುವಂತೆ ಶ್ರೀಗಳು ಎಲ್ಲ ಅಧಿಕಾರಿಗಳಿಗೆ ಪೂರ್ತಿಸಿದ್ದಾರೆಂಬರ್ಥದ ಅಪ್ಪಣೆಯನ್ನು ಕಳುಹಿಸಿದರು. ಶ್ರೀಗಳ ಅಪೇಕ್ಷೆಯಂತೆ ತಾವು ನಡಕೊಳ್ಳುವೆವಾಗಿ ಆ ಬಳಿಕ ಉತ್ತರ ಬಂತು. ಇದೇನೋ ಸರಿ. ಮೊಟ್ಟಮೊದಲು ಶ್ರೀಗಳಿಗೆ ಪೋಲೀಸ ಚೌಕಿಯ ಮೇಲೆ ನಿಮಂತ್ರಿಸಿದ್ದರ ಹಾಗು "ಇತಿಮಾಸಾಂ"ದ ಬೆದರಿಕೆ ಹಾಕಿದ್ದರ ಕಾರಣವೇನು? ಗೋಮಾಂತಕ ಸರಕಾರವು ಈ ಮುಂಚಿನ ಪರಂಪರೆಯನ್ನು ಇನ್ನು ಮುಂದೆ ಅಪ್ರತ್ಯಕ್ಷವಾಗಿ ನಡಿಸಲು ಪ್ರವೃತ್ತವಾದರೆ, ಅನರ್ಥ ಒದಗುವದು. ಹಿಂದುಗಳು ಈಗಲು ಹಿಂದಿನಂತೆ ಹೆದರಿಬಗ್ಗಲಿಕ್ಕಿಲ್ಲವೆಂದು ನಾವು ಗೋಮಾಂತಕ ಸರಕಾರಕ್ಕೆ ಮುಂಜಾಗ್ರತೆಯನ್ನೀಯುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಸೆಕೆ ಬೀಳುತ್ತಿದೆ. ಮೋರ್ಡೆ ಹಾಗು ತ್ರಿಪ ಸೋಮವಾರಕ್ಕೆ ಮಳೆ ಬಿದ್ದು ಉಪ್ಪಿನ ಪಟ್ಟಣದ ಧಕ್ಕೆಯ ನೆಲ ಸರಕು ಹಾಳಾಯಿತು, ನ್ಯಾಯವು ಕೊಟ್ಟಿಲ್ಲ.

ಇಲ್ಲಿನ ಶ್ರೀ ಶಾಂತೇರಿ ಕಾಮಾಕ್ಷಿ ದೇವರ ಜೀರ್ಣೋದ್ಧಾರ ಪ್ರತಿಷ್ಠಾ ಸಮಾರಂಭವು ಇದೇ ಬರುವ ವೈಶಾಖ ಶುದ್ಧ ೩ ಗುರುವಾರ ದಿನಾಂಕ ೧೯-೪-೧೯೨೮ನೇ (ತಾ. ೨೬-೪-೨೮)ಗೆ ಜರಗುವದಿದೆ. ಸಮುದ್ರ ಕೃತಿ ವರ್ಷಕಾಲದಲ್ಲಿ ಬಂದ ಶ್ರೀ ದೇವರಿಗೆ ಸಕಲರೂ ಸಹಾಯ ಮಾಡಲು ಪ್ರಾರ್ಥಿಸಿಕೊಂಡ ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಬೇಕಾಗಿ ಶ್ರೀ ದೇವಸ್ಥಾನದ ಮಹಾಜನರ ಪರವಾಗಿ ಡಾ॥ ಭಾವಾ ನರಸಿಂಹ ಬಾಳಿಗಿಯವರು ವಿಜ್ಞಾಪಿಸುತ್ತಾರೆ.

ಉಪ್ಪಿನ ಪಟ್ಟಣದಲ್ಲಿ ಉಪ್ಪಿನ ದರವನ್ನು ಉಪ್ಪಿನ ಸಂಘದವರು ಈ ವಾರದಲ್ಲಿ ೨ ಆಣೆಯಿಂದ ಏರಿಸಿದರು. ಸಾಧದಿಂದ ಕೊಂಬವರ ಉಪ್ಪು ಮಹರ್ಘದಿಂದ ಹೀಗೆ ದರ ಏರಿಸಲಾಯಿತಂತೆ!

ಇಲ್ಲಿಯ ಮ್ಯುನಿಸಿಪಾಲಿಟಿಯವರು ಇನ್ನೂ ಪ್ಲೇಗ ಇನ್ಸಪೆಕ್ಟರ ಕೆಲಸವನ್ನು ಬಿಡಲಿಲ್ಲ. ಕಾರವಾರ ಕಡೆಯಿಂದ ಬಂದ ಮೋಟಾರುಗಳನ್ನು ಪಟ್ಟಣಕ್ಕೆ ಆಸ್ಪತ್ರೆಗೆ ಒಯ್ಯುತ್ತಾರೆ. ಬಂದವರಿಂದ ಪ್ಲೇಗು ಪ್ರಸಾರ ಹೊಂದುವ ಪರಿಸ್ಥಿತಿ ಅಸಂಭವವಾಗಿರುವಾಗ, ಮ್ಯುನಿಸಿಪಾಲಿಟಿಯವರು ಈ ಬಗ್ಗೆ ಪ್ರಯಾಣಿಕರಿಗೆ ತೊಂದರೆ ಕೊಡುವದೇಕೆ? ಪ್ಲೇಗ ಡ್ಯೂಟಿಯ ಬಗ್ಗೆ ಖರ್ಚು ಮಾಡುವದೇಕೆ? ಕಾರವಾರದಲ್ಲಿ ಸಹ ಈ ಫೀಸಿಲ್ಲ ಎಂದು ಪ್ರಯಾಣಿಕರೆಲ್ಲರೂ ಪ್ರಶ್ನಿಸುತ್ತಾರೆ.

ಮೋಟಾರ ಸರ್ವೀಸಿನವರ ವ್ಯವಸ್ಥೆಯು ಕೆಲವು ಟ್ಯಾಗಗಿದೆ. ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ಮನೆಸುವ ಮೋಟಾರಿನವರಿಗೆ ವಾರ್ಷಿಕ ಲೈಸನ್ಸು ಕೊಡಬೇಕಾಗಿಯೂ, ಉಳಿದವರು ದಿನಾ ೪ ಆಣೆಯಂತೆ ಟೋಲ ಕೊಟ್ಟು ಮ್ಯುನಿಸಿಪಾಲಿಟಿ ಹದ್ದಿನಲ್ಲಿ ಬರಬೇಕಾಗಿಯೂ ನಿಯಮವಾಗಿದೆ. ವಾರ್ಷಿಕ ಲೈಸನ್ಸಿನ ದಾಸಲು ೫೦ ರೂಪಾಯಿ. ಇದರಿಂದ ಕಾರವಾರ ಹೊನ್ನಾವರ ಕಡೆಯಿಂದ ಇಲ್ಲಿ ಬರುವ ಮೋಟಾರ ಸರ್ವೀಸಿನವರಿಗೆ ಅಡಚಣೆಯಾಗುತ್ತದೆ. ಇವರು ವರ್ಷಕ್ಕೆ ೧೦-೧೧ ರೂಪಾಯಿ ಕೊಡಬೇಕಾಗುತ್ತದೆ. ಇದು ಅನ್ಯಾಯವು. ನಿಯಮದಿಂದ ಇಲ್ಲಿ ಬರುವ ಸರ್ವೀಸಿನವರಿಗೆಲ್ಲ ವಾರ್ಷಿಕ ಲೈಸನ್ಸು ಕೊಡತಕ್ಕದ್ದು. ಉಳಿತು. ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ವಾಸಮಾಡಬೇಕೆಂಬ ಪ್ರತಿಬಂಧವನ್ನು ಇಡಬಾರದು.

ಇಲ್ಲಿಯ ಮಾಮಲೇದಾರರಾದ ರುಮಸಾಹೇಬ ಕೆಲ ಕೋರ್ಟವರಿಗೆ ||ಗೆ ವರ್ಗವಾಯಿತು. ಅವರ ಜಾಗದಲ್ಲಿ ರಾ॥ ಕಾಮತರವರು ಇಲ್ಲಿ ಬರುವರು. ವರ್ಗವಾಗಿಯೂ ಹೊಸ ತಿಂಗಳಿನಲ್ಲಿ ಅಮೂಲಿನಲ್ಲಿ ಬರುವರು.

ಶ್ರೀ ಸೋದೆ ಮಠದ ಶ್ರೀ ವಿಶ್ವೇಂದ್ರತೀರ್ಥ ಸ್ವಾಮಿಗಳವರು ಈ ಹೊತ್ತು ಬೆಳಿಗ್ಗೆ ಕೊಲ್ಲೂರಕ್ಕೆ ಚಿತ್ತೈಸಿದ್ದಾರೆ.

ಶಿರಸಿ— ಆಜೆಯ ಆದಿತ್ಯವಾರ ಹಾಗು ಕಳೆದ ಸೋಮವಾರ ಮಂಗಳವಾರ ಬಹು ದೊಡ್ಡ ಮಳೆ ಸುರಿಯಿತು. ಅಂಗಡಿಗಳನ್ನು ಮುಚ್ಚಬೇಕಾಯಿತು. ಕೈಲಾಸಗಳು ಬಿದ್ದವು. ಮಳೆ-ಗಾಳಿ ಗುಡುಗು ಸಿಡಿಲು. ಆಗ ಕಲ್ಲು ಬೀಳಲು ಯಾರಿಗೂ ಧೈರ್ಯವಾಗಲಿಲ್ಲ.

ಬನವಾಸಿ ಹಾಗು ಮುಂಡಗೋಡ ರಥೋತ್ಸವಗಳು ವಾಡಿಕೆಯಂತೆ ನಿರ್ವಿಘ್ನತೆಯಿಂದ ಆದಾಗಿವೆ. ಬನವಾಸಿ ರಥೋತ್ಸವದ ಸಮಯ ಲಿಂಗಾಯತರು ಹರ್ಷದಿಂದ ನೆರವಾಗಲಿಲ್ಲ. ರಥವನ್ನು ಎಳೆಯುವುದಕ್ಕೆ ಸಹ ಹೋಗಲಿಲ್ಲವಾಗಿ ತಿಳಿಯುತ್ತದೆ.

ಇತ್ತಿತ್ತ ಅಂಗಡಿಕಾರರು ಪೆಟ್ರೋಮ್ಯಾಕ್ಸ ದೀಪಗಳನ್ನು ಹಚ್ಚುತ್ತಿದ್ದಾರೆ. ಬಂದವರಿಗೆ ಈ ದೀಪಗಳಿಂದ ಸ್ವಲ್ಪ ಹೊಸಾಗಿ ಬೇಕಿದ್ದಂತಿದೆ!

ಕಾರವಾರ— ಪ್ಲೇಗಿನ ಪ್ರಸಂಗವು ಇನ್ನೂ ಕಡಿಮೆಯಾಗಲಿಲ್ಲ. ಬಾಡಬಾಗದಲ್ಲಿ ಇಲಿಗಳು ಸಾಯುತ್ತಿವೆ. ಇದರು ಅಂಗಡಿಗಳಲ್ಲಿ ಪುನಃ ವಾಸ ಮಾಡಲಾರಂಭಿಸಿದ್ದಾರೆ. ಬೆಳ್ತುದಿನ ಇಲ್ಲಿ ಬಂದು ಹೋಗಿ ೩ ವಾರಗಳಾದವು. ಜನರು ಗಾಳಿ ಮರಗಳ ತೋಪನ್ನು ತಗೆದು ಅಲ್ಲಿ ವಸತಿ ಮಾಡಲು ಅಪ್ಪಣೆ ಕೊಡಬೇಕಾಗಿ ಬೇಡಿಕೊಂಡರು. ಮ್ಯುನಿಸಿಪಾಲಿಟಿಗೆ ಈ ತೋಪಿನೊಳಗಿಂದ ೧೦ ಎಕ್ರೆ ಸ್ಥಳವನ್ನು ಕೊಡತಕ್ಕದ್ದಾಗಿ ಹೇಳಿದರು. ಇನ್ನೂ ಉತ್ತರ ಇಲ್ಲ. ಇದೆಲ್ಲ ನಿರ್ಧಾರವಾಗುವತನಕ ಪ್ಲೇಗಿನ ಹಾವಳಿಯು ತೀರಿ ಜನರು ಕಷ್ಟವನ್ನನುಭವಿಸಿ ಸಾಯಬೇಕಾಗುವದು. ಇಂಥ ಪ್ರಸಂಗದಲ್ಲಿ ಸಹ ಸರಕಾರವು ಕಾಗದದ ಕಾನೂನುಗಳನ್ನು ತೀವ್ರವಾಗಿ ಬಿಡಿಸಬಾರದೆ? ಗಾಳಿ ಮರದ ತೋಪನ್ನು ತಗೆದು ಜನರಿಗೆ ಆ ಪ್ರದೇಶ ಕೊಟ್ಟರೆ ಸರಕಾರಕ್ಕೆ ಈಗಿನಕಿಂತ ಹೆಚ್ಚಿನ ಉತ್ಪನ್ನ ಸಿಗುವದು. ಹಾಗಿದ್ದರೂ ಹೀಗೆ ಸ್ಥಳ ಕೊಟ್ಟದ್ದೇ ಮೇಲಿಂದ ಸರಕಾರಕ್ಕೆ ಲಾಭವಿದೆ. ಈ ರುಮಣಿದ, ಇಳಿಯಲ್ಲಿ ಗಾಳಿ ಮರದ ಕಾಡಿಟ್ಟ ಜಂಗಲು ಇದ್ದದರಿಂದ ತಮ್ಮ ಮನೆ-ಬಾವಿಗಳಲ್ಲಿ ಹಾಳ ಬಿದ್ದು ಕಷ್ಟವಾಗುತ್ತದೆಂದು ಜನರು ಜಿಲ್ಲಾಧಿಪತಿಗಳಿಗೆ ಹೇಳಲು, ಜಂಗಲಿದ್ದದ್ದನ್ನು ಅರಿತು ನೀವು ಇಲ್ಲಿ ಉಳಕೊಂಡದ್ದೇಕೆ ಎಂದು ಜಿಲ್ಲಾಧಿಪರು ಅಪ್ರ ಸವಾಲು ಕೇಳಿದರಾಗಿ ತಿಳಿಯುತ್ತದೆ. ಪ್ರಜೆಗಳ ಕ್ಷೇಮಲಾಭಕ್ಕಾಗಿ ನೇಮಿಸಲ್ಪಟ್ಟ ಜಿಲ್ಲಾಧಿಪರು ಹೀಗೆನ್ನುವದು ಭೂಷಣವಲ್ಲ. ಸರಕಾರವು ವಿಚಾರ ಮಾಡಿ ಜನರ ಮಾತೃತ್ವಕ್ಕೆ ಅನುಕೂಲವಾಗಿ ಸ್ಥಳ ಕೊಡತಕ್ಕದ್ದು.

ಹೊಸದಾಗಿ ಡಿಸ್ಟ್ರಿಕ್ಟ ಜಡ್ಜರಾಗಿ ಬಂದ ರಾ| ದತ್ತಾತ್ರೆಯ ಸದಾಶಿವ ಜೋಶಿಯವರು ಎಪ್ರಿಲ್ ೧ನೇ ತಾರೀಖಿಗೆ ಅಧಿಕಾರ ಸೂತ್ರಗಳನ್ನು ಸ್ವೀಕಾರ ಮಾಡಿಕೊಂಡಿದ್ದಾರೆ. ಕಳೆದ ವಾರದಲ್ಲಿ ಜಡ್ಜರವರು ಜಡ್ಜಿನ ನ್ಯಾಯ ವಿಚಾರಣೆಯ ಕೆಲಸ ಮಾಡಲಿಲ್ಲ. ಸೆಲಗರ್ನಾರಿನ ಪ್ರಿವಿಷಯು ಕೂನ್ನಾವರದ ಆಕ್ಟಿಂಗ ಮಾಮಲೇದಾರರು ಮಾಡಿದ ಅಪೀಲುಗಳ ಚಾರವಾಯಿತು. ೧೯ ಸಬ್‌ಇನ್ಸ್‌ಪೆಕ್ಟರ್ ಮುಟುಸ್ಟ ಟರ. ೧೦೦-೧೦೦ ರೂಪಾಯಿಗಳ ದಂಡ ವಿಧಿಸಿದ್ದರು. ಸ್ಟೋಟಕ ದ್ರವ್ಯದ ಕಾನೂನಿನಲ್ಲಿ ೧೫೦ ರೂಪಾಯಿಗಳ ದಂಡ ಶಿಕ್ಷೆ ಹೇಳಲ್ಪಟ್ಟಿದ್ದು, ಮೇಲೆ ೧೦೦ ರೂಪಾಯಿ ದಂಡ ವಿಧಿಸಿದ್ದು ಅನ್ಯಾಯವೆಂದು ರಾ| ಡಿಸ್ಟ್ರಿಕ್ಟ ಜಡ್ಜರು ಅಭಿಪ್ರಾಯವಾಗಿ, ಅಪೀಲುಗಳಲ್ಲಿ, ತಿದ್ದುಪಡಿ ಮಾಡಿದರು. ಸ್ಫೋಟಕ ದ್ರವ್ಯದ ಕಾನೂನಿನ ಉದ್ದೇಶವೇನು? ಯಾವ ಕಾಲದಲ್ಲಿ ಆ ಕಾನೂನಿನ ಪ್ರಚಾರವಾಯಿತು? ಸ್ಫೋಟಕ ದ್ರವ್ಯವೆಂದರೆ, ಯಾವುದು? ಎಂಬ ಸೂಕ್ಷ್ಮ ವ್ಯಾಖ್ಯೆ ಮುಂತೆ ಸೆಲಗರ್ನಾರು ಕಾನೂನಿನ ಕಕ್ಷೆಯಲ್ಲಿ ಸೇರುತ್ತದೆಯೋ, ಅದೊಂದು ಮನೋರಂಜನದ ಸಾಧನವೆಂಬುದನ್ನು ರಾ| ಡಿಸ್ಟ್ರಿಕ್ಟ ಜಡ್ಜರು ವಿಚಾರಿಸಿದ್ದರೆ, ಶಿಕ್ಷೆಯು ಕಾಯಮ್ಮಾಗಿ ಆಗಲಿಕ್ಕೆ ಹೋಗುತ್ತಿತ್ತು. ರಾ| ಡಿ| ಜಡ್ಜರು ಸುಶೀಲ ಮತ್ತು ನ್ಯಾಯಮಾನ ಕೆಲಸಗಾರರೆಂದು ಕಾಣುತ್ತದೆ.

ಹೊಸ ಮ್ಯುನಿಸಿಪಾಲಿಟಿಗೆ ರಾ| ಕಾಟನೋರವರು ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ. ಹಳೇ ಮ್ಯುನಿಸಿಪಾಲಿಟಿಯಲ್ಲಿಯೂ ರಾ| ಕಾಟನೋರವರೇ ಪ್ರೆಸಿಡೆಂಟರಿದ್ದರು. ನಿಷ್ಪಕ್ಷಪಾತ ವರ್ತನದಿಂದ ರಾ| ಕಾಟನೋರವರು ಎಲ್ಲರಿಗೂ ಪ್ರಿಯರಾಗಿದ್ದಾರೆ.

ವಿಶೇಷ ವಿಷಯಗಳು.

ಭಟಕಳ ಬಂದರ.

ಭಟಕಳ ಬಂದರದ ವಿಷಯು ಮುಂಬಯಿ "ದಿ ಇಂಡಿಯನ್ ಡೇಲಿ ಮೇಲ" ಪತ್ರಿಕೆಯ ತಾರೀಖು ೧೯-೩-೧೯೨೮ನೇ ಸಂಚಿಕೆಯಲ್ಲಿ ರಾ| 'ಕೋಟಿಯನ'ರು ಕೆಲವು ಸಂಗತಿಗಳನ್ನು ಪ್ರಕಟಿಸಿದ್ದಾರೆ. ಭಟ್ಕಳ ಬಂದರದ ಯೋಜನೆಯನ್ನು ಮೈಸೂರ ಸರಕಾರವು ಹಣದ ಅಭಾವದ ಮೂಲಕ ನಿಲ್ಲಿಸಿತು. ಹಿಂದುಸ್ಥಾನ ಸರಕಾರವು ಈ ವಿಷಯ ವಿಚಾರ ಮಾಡಲು ಒಂದು ಕಮಿಟಿಯನ್ನು ನೇಮಿಸಿತ್ತು. ರಾ| ರಘುನಾಥರಾವ ಬರೂಂಬಿಯವರು ಈ ಮಂಡಳದ ಅಧಿಪತಿಗಳು. ಈ ಮಂಡಳವು ಈ ಯೋಜನೆಯನ್ನು ಮನ್ನಿಸಿತು. ಬೇಸಾಯ ವಿಭಾಗದ ಮುಂಬೆ ವಿಭಾಗದ ಕಲೆಕ್ಟರರಾದ ರಾ| ಲಕ್ಷ್ಮಣ್ಣಾಚಾರವರು ಭಟಕಳ ಬಂದರದಿಂದ ಕನ್ನಡ ನಾಡಿಗೆ ಹೆಚ್ಚಿನ ಹಿತ ಇರುವದೆಂದು ಅಭಿಪ್ರಾಯಪಟ್ಟರು. ಬೇಸಾಯ ಕಮಿಶನರಿಗೂ ಈ ವಿಷಯು ಮಾನ್ಯವಾಗಿದೆ. 'ಇದೇ ಬಗೆ ಬೆಂಗಳೂರಿಗೆ ಶಿವಮೊಗ್ಗೆಯಿಂದ ರಾಗಿಹೊಸಳ್ಳಿಯತನಕ ಆಗಿಬಂದಿಯ ಮಾರ್ಗರಚನೆಯಾಗಿ, ಇನ್ನು ಎರಡು ವರ್ಷಗಳಲ್ಲಿ ರಾಗಿಹೊಸಳ್ಳಿಯಿಂದ ಭಟಕಳದ ತನಕ ಈ ಆಗಿಬಂದಿಯ ಮಾರ್ಗವು ಆಗುವದು. ಭಟ್ಕಳದಿಂದ ಆನೆಕುಂಡದ-ಮುಂದೆ ಸಾಗುವ ಮರಿಕೇರಿಗಳಿಗೂ ಆಗಿಬಂದಿಯ ಮಾರ್ಗ ಜೋಡಿಸಲಾಗುವದು. ಭದ್ರಾವತಿ ಕಾರಖಾನೆಗೆ ಸಮೀಪವಾಗಿ ಭಟಕಳ ಬಂದರವಿರುವದರಿಂದ ಮೈಸೂರಿನ ಔದ್ಯೋಗಿಕರಿಗೆ ಹೆಚ್ಚಿನ ಉತ್ತೇಜನ ಸಿಗುವದಾಗಿದೆ. ಸ್ಟೀಲದ ಮುತ್ತು ಮುತ್ತು ಬೆಳಸುವ ಪ್ರದೇಶದ ಪ್ರದೇಶದಿಂದ ಭಟಕಳ ಪಟ್ಟಣದ ವಿಸ್ತಾರಕ್ಕೂ ಅನುಕೂಲವಿರುತ್ತದೆ.

* * *

ಬಾಡೋಳಿಯ ನಿರ್ಧಾರ.

ಬಾಡೋಳಿಯ ಬೇಸಾಯಗಾರರು ತಮ್ಮ ನಿರ್ಧಾರವನ್ನು ನಿಷ್ಠೆಯಿಂದ ಪಾಲಿಸುತ್ತಿದ್ದಾರೆ. ಬಡವರೂ, ದೊಡ್ಡವರೂ, ಎಲ್ಲರೂ ಕರವನ್ನು ತೆರದಾರದಾಗಿ ಮನೋನಿಶ್ಚಯ ಮಾಡಿದ್ದಾರೆ. ಸರಕಾರವು ಕೆಲ ಹಳ್ಳಿಗಳನ್ನು ಒಂದು ಗ್ರೂಪಿನಿಂದ ಇನ್ನೊಂದು ಗ್ರೂಪಿಗೆ ಇಳಿಸಿ ತೆರಿಗೆಯ ಏರಿಕೆ ಮಾಡನವನ್ನು ಕೆಲ ಡಾ ಜಲ ರಿಂದ ೨೦ಕ್ಕೆ ಇಳಿಸಿತು. ಸರಕಾರವು ಹೀಗೆ ಇಳಿಸಿದ್ದು ಬಾಡೋಳಿಯ ನಿರ್ಧಾರದ ಪರಿಣಾಮವೆಂದು ಹಿಪ್ಪುನವಿಲ್ಲವಾದರೂ ಇದು ಎಲ್ಲರಿಗೂ ಗೊತ್ತಿದ್ದ ವಿಷಯುವೇ. ಕಂದಾಯದ ಏರಿಕೆಯ ಅಂತರಂಗದ ಕಥೆಯು ಈಗ ಪ್ರಕಟವಾಗಿದೆ. ಅದರ ಮೇಲಿಂದ ಕಂದಾಯವನ್ನು ಎಷ್ಟು ಅವಿಚಾರದಿಂದ ಸರಕಾರವು ಏರಿಸುತ್ತಿದೆಯೆಂಬ ತಿಳಿಯ ಮನು. ಸೆಟ್ಲಮೆಂಟ ಆಫೀಸರರಾದ ಮಿ| ಜಯಕರರವರು ತಾ ೨೦-೩-೧೯೨೫ನೇಗೆ ತಮ್ಮ ರಿಪೋರ್ಟನ್ನು ಸಾದರ ಪಡಿಸಿದರು. ೧೫ ದಿನ ಈ ರಿಪೋರ್ಟ ಬರೆಯಲ ಬೇಕು. ಅಂದರೆ ಜೂನ ೧೫ ರೊಳಗೆ ಸೆಟ್ಲಮೆಂಟ ಆಫೀಸರರು ತಮ್ಮ ತಮ್ಮ ಪ್ರಾಂತದೊಳಗಿನ ತರಾಸನ್ನು ಮಾಡಿರಬೇಕು. ಜೂನ ೧ನೇ ತಾರೀಖಿಗೆ ಬಾಡೋಳಿಯ ಮಾಮ್ಲೇದಾರರು ಪಟೀಲ-ಕುಲಕರ್ಣಿಗಳಿಗೆ ಒಂದೆರಡು ರಿಕಾರ್ಡ ಸಾದರಪಡಿಸಬೇಕಾಗಿಯೂ, ಸೆಟ್ಲಮೆಂಟ ಆಫೀಸರರಾದ ಮಿ| ಜಯಕರರವರು ಜೂನ ೮ನೇ ತಾರೀಖಿಗೆ ಬಾಡೋಳಿಗೆ ಬೆತ್ತಲರಾಗಿಯೂ ತಿಳಿಸಿದರು. ಅಂದರೆ ೪ ರಿಂದ ೧೫ ರ ಒಳಗೆ ೧೯-೧೧ ದಿನಗಳಲ್ಲಿ ಬಾಡೋಳಿ ತಾಲೂಕಿನೊಳಗಿನ ೧೩೭ ಗ್ರಾಮಗಳ ರಿಕಾರ್ಡನ್ನು ತಪಾಸು ಮಾಡುವ ಬಗೆ ಹೇಗೆ? ಈ ಅವಧಿಯಲ್ಲಿ ೫ ರವಿವಾರಗಳಿದ್ದವು. ಇನ್ನೊಂದು ವಿಷಯ, ಸೆಟ್ಲಮೆಂಟ ಆಫೀಸರರು ರಿಪೋರ್ಟ ಮಾಡಿದ ಒಳಿಕ ಆಕ್ಟೋಬರ ೩ನೇ ತಾರೀಖಿಗೆ ಮಾಮಲೇದಾರರು ಇನ್ನೊಂದು ಹುಕುಮನ್ನು ಹೊರಡಿಸಿ ಕೆಲ ಗ್ರಾಮಗಳ ಪಟೇಲ-ಕುಲಕರ್ಣಿಗಳಿಗೆ ಹಾಜರಾಗಲು ತಿಳಿಸಿದರು. ಕ್ರಯದ ಕೋಷ್ಟಕವನ್ನು ತಪಾಸ ಮಾಡಲು ರಿಕಾರ್ಡ ತರಬೇಕಾಗಿ ಹುಕುಮು. ಅಂತಿತ್ತು. ಅಷ್ಟರಲ್ಲಿ ಸೆಟ್ಲಮೆಂಟ ಆಫೀಸರರು ಜಿಲ್ಲೆಯ ಕಲೆಕ್ಟರರಾದವರು ಅವರಿಗೆ ಕೋಷ್ಟಕಗಳನ್ನು ತಪಾಸು ಮಾಡುವ ಕೆಲಸಗಳು ಮಾಮ್ಲೇದಾರರಿಗೆ ವಹಿಸಲಾಗಿತ್ತು. ಸೆಟ್ಲಮೆಂಟ ಕಮಿಶನರರಾದ ಮಿ| ಎಂಡರಸನ್‌ರವರು ಕರಾರು ಹೊಡೆಯವದೇನಂದರೆ:—'ಮಾಮ್ಲೇದಾರರು ಕೋಷ್ಟಕಗಳನ್ನು ತಪಾಸು ಮಾಡಿದ್ದು ಗೊತ್ತಾಗುತ್ತದೆ. ಮಾಮ್ಲೇದಾರರ ಕಾರಭಾರದ, ಸರ್ಕಲ್ ಇನ್ಸಪೆಕ್ಟರರ ತಪಾಸು ಅಥವಾ ಯಾರೊಬ್ಬ ಕಾರಕೂನರ ತಪಾಸು. ಸೆಟ್ಲಮೆಂಟ ಆಫೀಸರರು ಸ್ವತಃ ತಪಾಸು ಮಾಡಿದ ಸ್ಪಷ್ಟ ಪ್ರಯೋಜನವಾಗಿಲ್ಲ."

ಗೇಣಿನ ಕೋಷ್ಟಕಗಳ ತಪಾಸು ಒಂದರಿಂದ ಜಾರಿ ತನಕ ಆಗಲೇ ಇಲ್ಲ. ಕ್ರಯ ಕೋಷ್ಟಕಗಳ ತಪಾಸು ಪ್ರಯೋಜನದಿಲ್ಲ. ಹೀಗೆ ಎಲ್ಲ ಪ್ರಕಾರದಿಂದಲೂ ನಿರಾಧಾರವಾದ ಸಾಮಗ್ರಿಯ ಮೇಲೆ ಬಾಡೋಳಿಯ ಕಂದಾಯವು ಏರಿಸಲಾಗಿದೆ. ಇದು ಅನ್ಯಾಯದ ಪರಮಾವಧಿಯಲ್ಲವೇ? ಎಲ್ಲ ಕಡೆಯಲ್ಲಿಯೂ ಇದೇ ಪ್ರಕಾರ ನಡೆಯುತ್ತದೆ. ಬಾಡೋಳಿಯವರು ಜೋಂಕಳಪಟ್ಟಿದ್ದಾರಷ್ಟೇ. ಬಾಕಿ ವೆಲ್ಲ ಅಲ್ಲಿ ಎದ್ದುನಿಂತಿವೆ.

ವೃತ್ತಸಾರ.

— ಸಂಯುಕ್ತ ಪ್ರಾಂತದಲ್ಲಿ ಪ್ಲೇಗಿನ ಅಬ್ಬರ ವಿಶೇಷ. ೪೬೩೬ ಮಂದಿಗಳು ಒಂದು ವಾರದಲ್ಲಿ ತೀರಿಕೊಂಡರು.

— ಮುಂಬಯಿಯ ಹೈಕೋರ್ಟಿನ ಎಪ್ರಿಲ ೭ನೇ ತಾರೀಖಿನಿಂದ ಬೇಸಿಗೆ ಸೂಟಿಯನ್ನು ಕೊಂಡಿದೆ. ಜೂನ ೩ನೇ ತಾರೀಖಿಗೆ ಕೋರ್ಟು ಪ್ರಾರಂಭವಾಗುವದು. ಸೂಟಿ ಕೊಡುವ ಮುಂಚೆ ಮುಖ್ಯ ನ್ಯಾಯಾಧೀಶರು ಹೈಕೋರ್ಟಿನ ಸ್ಥಿತಿಯನ್ನು ಹೇಳಿದರು — ಈ ವರುಷ ಫೌಜದಾರಿ ಮೊಕದ್ದಮೆಗಳು ಹೆಚ್ಚಾಗಿವೆಂದೂ, ಈ ತನಕ ಅಷ್ಟು ಕೆಲಸ ಬಿದ್ದಿದ್ದಿಲ್ಲವೆಂದೂ ಹೇಳಿ, ಗಳಿಗೆ ಏಳು ಮುಖ್ಯ ನ್ಯಾಯಾಧೀಶರು ಫೌಜದಾರಿ ಮೊಕದ್ದಮೆಗಳನ್ನೇ ವಿಚಾರ ಮಾಡಬೇಕಾಯಿತೆಂದೂ ಹೇಳಿದರು. ಫೌಜದಾರಿ ಅಪೀಲುಗಳ ಸಂಖ್ಯೆಯೂ ಹಿಗ್ಗಿದೆ. ದಿವಾಣಿ ಅಪೀಲುಗಳೂ ಬೆಳೆದವು. ಅವನ್ನು ಎಲ್ಲ ಅಪೀಲುಗಳನ್ನು ವಿಚಾರಿಸಬೇಕಾಗಿದೆ. ಇದೇ ಸಮಯ ಕಳೆದ ವರುಷ ಒಟ್ಟು ೩೦೦೦ ಅಪೀಲುಗಳಿದ್ದವು. ಬಾಕಿ ದಾವೆಗಳ ಸಂಖ್ಯೆಯು ಹೆಚ್ಚಿದೆ. ೧೯೨೬ನೇ ದಾವೆಗಳು ವಿಚಾರವಾಗತಕ್ಕದ್ದಿವೆ. ೨-೩ ವರುಷಗಳ ತನಕ ವಿಚಾರವಾಗದ ಬಾಕಿ ಬಿದ್ದ ಅನೇಕ ದಾವೆಗಳಿವೆ. ಹೈಕೋರ್ಟಿನ ನ್ಯಾಯಾಧೀಶರ ಸಂಖ್ಯೆಯನ್ನು ಇನ್ನೂ ಬೆಳೆಸಬೇಕು. ಈಗ ೧೦ ಮಂದಿ ಇದ್ದಾರೆ. ಇನ್ನೊಬ್ಬರನ್ನಾದರೂ ನೇಮಿಸಬೇಕು ಅಂತ ಆಗ್ರಹದಿ ವಡಿಸಿದರು.

— ಸ್ವರ್ನಾದಲ್ಲಿ ಭೂಕಂಪವಾಗಿ ಹೇರಳ ನಷ್ಟ ಆದೀತು. ಮನೆಮಾರುಗಳು ನೆಲಸಮವಾದವು. ೩ ಸಾವಿರ ೪೦ ೩ ಜೇಂಗಳು ಬೀಳಲಿಕ್ಕೆ ತಯಾರಾಗಿವೆ. ೫೦ ಮಂದಿಗಳು ಮಡಿದರು. ೩೦ ಮಂದಿಗಳಿಗೆ ಘಾಯವಾಗಿದೆ ಕುರ್ಜಾಲಿ ಹಾಗು ಕೋರಿಟಿಕ್ಸ ಪ್ರದೇಶದಲ್ಲಿ ಒಂದು ಮನೆ ಸಹ ನೆಟ್ಟಗಿಲ್ಲ.

— ಜಡೀಶರ ಲಕ್ಷ್ಮೀವಿಲಾಸ ಅರಮನೆಯ ಬಳಿಯಲ್ಲಿರುವ ವಿದ್ಯುಚ್ಛಕ್ತಿಯ ಕಾರಖಾನೆಗೆ ಬೆಂಕಿ ತಗಲಿ ೩೦ ಸಾವಿರ ರೂಪಾಯಿಗಳ ನಷ್ಟ!

— ರಾಯಚೂ ಸರಕಾರವು ತಮ್ಮ ವಿದ್ಯಾರ್ಥಿಗಳಲ್ಲ ಸೈನ್ಯಶಿಕ್ಷಣವನ್ನು ವಡೆಯಬೇಕೆಂದು ವಿಧಿಸಿದೆ. ಶಿಕ್ಷಣ ಕೊಳ್ಳದವರ ವಿದ್ಯಾರ್ಥಿಗಳಿಗೆ ಹೊರಹಾಕಲ್ಪಡುವರು.

— ಜಹಾಂಗೀರ ಕಾಪ್ರೆಜಿ ಮುರುಪುರದವರು ಮುಂಬಯಿಯ ಒಲ್ ಎಂಡ ಟ್ರಸ್ಟ ಸೊಸೈಟಿಯ ಮೇಲೆ ಒಂದು ದಾವೆಯನ್ನು ಹೂಡಿದರು. ಸೊಸೈಟಿಯು ತಮ್ಮೊಡನೆ ೧೫ ವರ್ಷಗಳ ಹಿಂದೆ ಮಾಡಿದ ಕರಾರನ್ನು ಉಲ್ಲಂಘಿಸಿ, ತಮ್ಮ ಒಂದು ಇಡದಾರನ್ನು ಕಾಮದಾರೂ ಎಂಬುವರಿಗೆ ಮಾರಿದರೆಂದು ಆಕ್ಷೇಪ ವಾದಿಯು ತರ್ಫೆನಿಂದ ಸೊಸೈಟಿಯು ಕಾರ್ಯದರ್ಶಿಗಳು ಸಾಕ್ಷಿ ಕೊಟ್ಟರು. ಸೊಸೈಟಿಯ ಪರವಾಗಿ ಮಿ| ಎಸ್ಪಿನ್‌ರವರೂ, ರಾವ ಬಹದ್ದೂರ ಅನವರೆಯವರ ಸಾಕ್ಷಿ ಕೊಟ್ಟರು. ಮಿ| ಎಸ್ಪಿನರವರು ಈಗ ಸಿಂಧದಲ್ಲಿ ಜುಡೀಶಿಯಲ್ ಕಮೀಶನರರಿದ್ದಾರೆ. ರಾ| ಬ| ಅನವರೆಯವರು ಕಾರೋನರರಿದ್ದಾರೆ. ಸೊಸೈಟಿಯ ಕಾರ್ಯದರ್ಶಿಗಳಾದರೂ ಪ್ರತಿಷ್ಠಿತ ಗೃಹಸ್ಥರೇ. ಇರಾಣಿ ಬಾಯಿಯದು ನ್ಯಾಯಮೂರ್ತಿಗಳಾದ ಕ್ರಂಪರವರು ಪ್ರಾಮಾಣಿಕ ಗೃಹಸ್ಥರ ಸಾಕ್ಷಿಯು ಜರುಗಿ ಹಿಂದೆ ನಡೆದ ಸಂಗತಿಗಳು, ನಂಬುವದು ಅಸಾಧ್ಯವೆಂದು ಅಭಿಪ್ರಾಯಪಟ್ಟು ದಾವೆಯನ್ನು ತಿರಸ್ಕರಿಸಿದರು.

— ಇಜಿಪ್ತ ಸರಕಾರಕ್ಕೂ ಬ್ರಿಟಿಶ ಸರಕಾರಕ್ಕೂ ಇನ್ನೂ ವಾದ ನಡೆದಿದೆ. ಅಂತುರಾಷ್ಟ್ರದಲ್ಲಿ ಬ್ರಿಟಿಶರು ಶ್ರೇಷ್ಠರಾಗಬೇಕೆಂದು ಇಜಿಪ್ತ ಸರಕಾರದ ಹೇಳಿಕೆ. ಪರದೇಶಸ್ಥರ ಸಂರಕ್ಷಣೆಯ ಜವಾಬದಾರಿಯನ್ನು ಇಜಿಪ್ತ ಸರಕಾರವು ಸ್ವೀಕರಿಸಲು ಸಿದ್ಧವಿದೆ.

— ಮದ್ರಾಸದಲ್ಲಿ ೧ ರೂಪಾಯಿಯ ಪಾಡಿಯನ್ನು ಕದ್ದ ಬಗ್ಗೆ ಒಬ್ಬ ನನಗೆ ೩ ವರುಷಗಳ ಶಿಕ್ಷೆ ನಿಧಿಸಲಾಗಿದೆ. ಅಪರಾಧಿಯು ಕಳ್ಳತನ ಮಾಡ್ಯ ಗಳವನಂತೆ! ೧೮ ಅಲ್ಲದೇ ಹುಟ್ಟಿನಿಂದ ಈ ಶಾಸ ಆತನಿಗೆ ೧೦ ಚುರಿ ಶಿಕ್ಷೆಯಾಯಿತು.

ಮಹಾತ್ಮರ ಆತ್ಮಚರಿತ್ರ.

(೪೫) ತಕ್ಕ್ಯ ತನವೇ ?

ನನ್ನ ಹೇಳಿಕೆಯು ಸಾಧಾರವಿತ್ತೆಂಬ ಬಗ್ಗೆ ನನ್ನ ಮನೋನಿಶ್ಚಯವಿತ್ತು. ಆದರೆ, ಆ ಪ್ರಕರಣವನ್ನು ಸಮಾಧಾನಕರವಾಗಿ ನಡಿಸಲು ನಾನು ಅರ್ಹನೇನೆಂಬದೊಂದು ಸಂದೇಹವಿತ್ತು. ವರಿಷ್ಠ ನ್ಯಾಯಾಸನದ ಸನ್ನಿಧಿಯಲ್ಲಿ ಇಂಥ ಕಠಿಣ ಮೊಕದ್ದಮೆಯನ್ನು ಮಾಡಿಸುವದು ಸುರಕ್ಷಿತವಲ್ಲೆಂದು ನನಗನಿಸಿತು. ಆದರಿಂದ ನಡುಗುತ್ತ ನ್ಯಾಯಾಸನದ ಬಳಿ ನಾನು ಹೋದೆನು.

ಲೆಕ್ಕಾಚಾರದಲ್ಲಿದ್ದ ತಪ್ಪಿನ ಉಲ್ಲೇಖ ಮಾಡೋದನೆ ನ್ಯಾಯಮೂರ್ತಿಗಳಲ್ಲೊಬ್ಬರು ಉದ್ಗರಿಸಿದ್ದೇನಂದರೆ — “ಗಾಂಧಿಯವರೇ, ಇದು ತಕ್ಕ್ಯತನವಲ್ಲವೇ ?”

ಈ ಆರೋಪ ಕೇಳಿ ನನಗೆ ಬಹಳ ಸಂತಾಪವಾಯಿತು. ತಕ್ಕ್ಯತನಕ್ಕೆ ಎಳ್ಳಷ್ಟು ಆಸ್ಪದವಿಲ್ಲದಾಗ, ತಕ್ಕ್ಯತನದ ಆರೋಪ ಮಾಡುವದು ಅಸಹ್ಯವೇ. “ಮೊದಲಿಂದ ನ್ಯಾಯಾಧೀಶರು ಈ ಪೂರ್ವಗ್ರಹದೂಷಿತರಾಗಿ ಈ ಕಠಿಣ ಪ್ರಕರಣದಲ್ಲಿ ಯಶಪ್ರಾಪ್ತಿಯಾಗ ಪದು ದುಸ್ತರವಿದೆ,” ಎಂದು ನನ್ನಷ್ಟಕ್ಕೆ ಉದ್ಗರಿಸಿದೆನು. ಆದರೂ, ಸಾವಧಾನಚಿತ್ತನಾಗಿ ನಾನು ನುಡಿದದ್ದೇನಂದರೆ — “ನನ್ನ ಹೇಳಿಕೆಯನ್ನು ಸಂಪೂರ್ಣವಾಗಿ ಕೇಳಿಕೊಳ್ಳದೆ ತಾವು ನನ್ನ ಮೇಲೆ ತಕ್ಕ್ಯತನದ ಆರೋಪ ಹೊರಿಸಿದ್ದನ್ನು ಕೇಳಿ ನಾನು ಚಕಿತನಾಗಿದ್ದೇನೆ.”

“ಆರೋಪವಲ್ಲ, ಅದೊಂದು ಬರೇ ಸೂಚನೆಯಾಗಿತ್ತು” ಎಂದು ನ್ಯಾಯಾಧೀಶರು ನುಡಿದರು.

“ಹೀಗೆ ಮಾಡಿದ ಸೂಚನೆಯು ಆರೋಪ ಪ್ರಾಯವೆಂದು ನನಗನಿಸುತ್ತದೆ. ತಾವು ನನ್ನ ಹೇಳಿಕೆಯನ್ನು ಸಂಪೂರ್ಣವಾಗಿ ಕೇಳಿಕೊಳ್ಳಬೇಕಾಗಿ ನನ್ನ ಬಿನ್ನಹ. ಅಂಥ ಆರೋಪಕ್ಕೆ ಎಡೆಯಿದ್ದರೆ, ಆ ಬಳಿಕ ನನ್ನ ಮೇಲೆ ಆಕ್ಷೇಪ ಮಾಡಬಹುದು.

“ನಿಮಗೆ ಮಧ್ಯದಲ್ಲಿ ಆತಂಕ ಮಾಡಿದ ಬಗ್ಗೆ ನನಗೆ ವ್ಯಸನವಾಗುತ್ತದೆ. ತಪ್ಪಿನ ಬಗ್ಗೆ ನಿಮ್ಮ ಹೇಳಿಕೆಯನ್ನು ನೀವು ಮುಂದರಿಸಬಹುದಾಗಿದೆ” ಎಂದು ನ್ಯಾಯಾಧೀಶರು ನುಡಿದರು.

ನನ್ನ ಸಾಧಕಗಳಿಗೆ ಅನುಕೂಲವಾಗುವಂಥ ಅನೇಕ ದಾಖಲೆಗಳಿದ್ದವು. ನ್ಯಾಯಾಧೀಶರು ಈ ಪ್ರಶ್ನೆ ಕೇಳಿ ಉಪಕಾರ ಮಾಡಿದರು. ಮೊದಲಿನಿಂದಲೇ ನ್ಯಾಯಾಸನದ ಲಕ್ಷವನ್ನು ನನ್ನ ಹೇಳಿಕೆಯ ಕಡೆ ಸೆಳಕೊಳ್ಳಲನುಕೂಲವಾಯಿತು. ನನಗೂ ಹುರುಪು ಬಂತು. ವಿವರಪೂರ್ವಕವಾಗಿ ನನ್ನ ಹೇಳಿಕೆಯನ್ನು ನಾನು ಮಂಡಿಸಿದೆನು. ನ್ಯಾಯಾಧೀಶರು ನನ್ನ ಹೇಳಿಕೆಯನ್ನು ಸಮಾಧಾನದಿಂದ ಕೇಳಿಕೊಂಡರು. ಆ ತಪ್ಪು ಸ್ವಲ್ಪ ದುರ್ಲಕ್ಷದಿಂದ ಆಗಿರುತ್ತದೆಂದು ನ್ಯಾಯಾಧೀಶರ ಮನಸ್ಸಿನ ಮೇಲೆ ನಾನು ಬಿಂಬಿಸಿದೆನು. ಆದರಿಂದ ಪರಿಶ್ರಮಪೂರ್ವಕವಾಗಿ ತಯಾರಿಸಿದ ಆಡಿಟ ನಿರ್ಣಯವನ್ನು ರದ್ದು ಮಾಡಲು ಅವರು ಒಪ್ಪಲಿಲ್ಲ.

ತಪ್ಪು ಒಪ್ಪಿಕೊಂಡಿದ್ದರಿಂದ ಅನ್ಯ ವಿಶೇಷ ಚರ್ಚೆ ಮಾಡುವ ಆವಶ್ಯಕತೆಯಿಲ್ಲೆಂದು ಪ್ರತಿಪಕ್ಷದ ವಕೀಲರಿಗನಿಸಿತು. ಆದರೆ, ನ್ಯಾಯಮೂರ್ತಿಗಳು ಅವರಿಗೆ ಅಗಿಂದಾಗ ಅಡಚಣೆ ಮಾಡಿಸುತ್ತಿದ್ದರು. ತಪ್ಪು ಹಸ್ತದೋಷವೇ ಇದೆ, ಅದನ್ನು ಸುಲಭವಾಗಿ ತಿದ್ದಬಹುದೆಂದೂ ನ್ಯಾಯಾಧೀಶರ ಖಾತರಿಯಾಗಿತ್ತು. ಪಂಚರ ನಿರ್ಣಯವನ್ನು ಆಕ್ಷೇಪಿಸಲು ಪ್ರತಿಪಕ್ಷದಿಂದ ವಕೀಲರದ್ದಿಯು ಪ್ರಯತ್ನವಾಯಿತು. ಆದರೆ ನ್ಯಾಯಾಧೀಶರು ನನಗನುಕೂಲವಾಗಿ ಅಭಿಪ್ರಾಯಪಟ್ಟಿದ್ದರು. ಮೊಂಟಕ ಸಂಶಯವೆಲ್ಲ ದೂರವಾಗಿತ್ತು.

ನ್ಯಾಯಮೂರ್ತಿಗಳು ಕೇಳಿದ್ದೇನಂದರೆ, ಗಾಂಧಿಯವರು ತಪ್ಪನ್ನು ಒಪ್ಪಿಕೊಳ್ಳದಿದ್ದರೆ ನೀವೇನು ಮಾಡುತ್ತಿದ್ದಿರಿ?”

‘ನಾವು ಇಂಥ, ವ್ಯವಹಾರಿಕ ಹಾಗು ಶ್ರೇಷ್ಠ ತರಗತಿಯ ಲೆಕ್ಕಪರಿಶೋಧಕರನ್ನು ನೇಮಿಸಿದ್ದೇವೆ. ಇವರಿಗಿಂತಲೂ ವಿಗಿಲಾದ ಗುಣಾತಿಶಯದ ಜನರನ್ನು ಸಂಗ್ರಹಿಸುವದು ಅಶಕ್ಯವು” (ಎಂದು ಪ್ರತಿಸ್ಪರ್ಧಿ ವಕೀಲರು ಉದ್ಗರಿಸಿದರು.)

ನಿಮ್ಮ ದೂಕದ ವಿಷಯದ ಮಾಹಿತಿಯು ನಿಮಗೆ ಪೂರ್ಣವಾಗಿ ಗೊತ್ತಿರುವದೆಂದು ಗೃಹೀತ ಹಿಡಿಯಲು ನ್ಯಾಯಾಸನವು ಬದ್ಧವಿದೆ. ತಜ್ಞ ಲೆಕ್ಕಪರಿಶೋಧಕನು ಸಹ ಮಾಡಬಹುದಾದ ಹಸ್ತದೋಷದ ಹೊರತು ಬೇರೆ ತಪ್ಪನ್ನು ನೀವು ತೋರಿಸಬಾರದಿದ್ದರೆ ಪಕ್ಷಗಾರರಿಗೆ ವಿಶೇಷ ವ್ಯವಹಾರದಲ್ಲಿ ಸಿಲುಕಿ ಹಾಕಿ ಇನ್ನು ಖರ್ಚಿಗೆ ಹಾಕಲು ನ್ಯಾಯಾಸನವು ಒಪ್ಪಲಾರದು. ಇಷ್ಟೆಲ್ಲ ಸಾಮಾನ್ಯ ತಪ್ಪಿಗಾಗಿ ಈ ತಪ್ಪನ್ನು ಸುಲಭವಾಗಿ ತಿದ್ದಬಹುದಿದ್ದಾಗ ನಾವು ಪುನರ್ವಿಚಾರಕ್ಕೆ ಹಾಕಲಾರೆವು ಎಂದು ನ್ಯಾಯಾಧೀಶರು ಉದ್ಗರಿಸಿದರು.

ಹೀಗೆ ಪ್ರತಿಪಕ್ಷದ ವಕೀಲರ ಆಕ್ಷೇಪವು ರದ್ದಾಯಿತು. ನ್ಯಾಯಾಸನವು ಪಂಚರ ನಿರ್ಣಯವನ್ನು ಆವೇ ತಿದ್ದಿ ಪಂಚರ ನಿರ್ಣಯವನ್ನು ನ್ಯಾಯಮೂರ್ತಿಗಳು ಕಾಯಮ ಮಾಡಿದರೋ ? ಅಥವಾ ಪಂಚರಿಗೆ ತಪ್ಪನ್ನು ತಿದ್ದಲು ಆಜ್ಞಾಪಿಸಿದರೋ ?

ನನಗೆ ಬಹಳ ಆನಂದವಾಯಿತು. ನನ್ನ ಪಕ್ಷಗಾರರಿಗೂ, ಹಿರಿಯ ಬೆರಿಸ್ಟರರಿಗೂ ನನ್ನಂತೆಯೇ ಆನಂದವಾಯಿತು. ಸತ್ಯಾಚರಣೆಯಿಂದ ವಕೀಲಿಯ ಉದ್ಯೋಗವನ್ನು ನಡಿಸುವದು ಅಸಾಧ್ಯವಲ್ಲವೆಂದು ನನ್ನ ಮನದಲ್ಲಿಯ ಇನ್ನೂ ದೃಢವಾಯಿತು.

ಆದರೆ, ವಕೀಲಿಯ ಉದ್ಯೋಗದಲ್ಲಿ ದೊಡ್ಡದೊಂದು ದೋಷವಿದೆ, ಗರ್ಭದೋಷವಿದೆ. ಆ ದೋಷವನ್ನು ಸತ್ಯಾಚರಣೆಯಿಂದಲೂ ಹೋಗಲಾಡಿಸ ಬರುವದಿಲ್ಲವೆಂದು ವಾಚಕರು ಮರೆಯಬಾರದು.

Wanted:– Candidates for Telegraph and Station Masters' Classes Full particulars and Railway Fare Certificate on 2 annas Stamp. Apply to — Imperial Telegraph College, **DELHI**

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಚಲೋ ಕಟ್ಟಿಗೆಯಿಂದ ತಯಾರಿಸಿದ ಬೇಗ ಸಮೇತವಾದ ಪೆಟ್ಟಿಗೆಗಳು ಹಾಗೆ ಮೋಟಾರ ಬಾಡಿ ಬಗ್ಗೆ ಸ್ಪ್ರಿಂಗ್ ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ. ಪೆಟ್ಟಿಗೆ ೧೨ ಬೆಲೆ ರೂ. ೩ ಸೈಜ ೩'×೧'×೧'.

ಬೇಕಾದವರು ಅರ್ಧ ಕಿಮ್ಮತ್ತು ರೂ. ೨–೦–೦ ಮುಂಗಡವಾಗಿ ಕಳಿಸಬೇಕು.

ವಿಳಾಸ - ಎಸ್. ಎಮ್. ಪಂಡಿತ,

ಮೋಟಾರ ಟಿಕೇಟ ಆಫೀಸ, ದುರ್ಗಾಕೇರಿ ಹೊನ್ನಾವರ (ಉ. ಕ.)

ಪುಕ್ಕಟೆ ! ಪುಕ್ಕಟೆ !! ಮುದ್ದು ಇಲ್ಲ ! ! !

ಈ ಅಪೂರ್ವ ಸಂಧಿಯು ಬಹುಕಾಲ ಬರದು !

ಚಿನ್ನದ ಮುಂಗೈ ಗಡಿಯಾರಗಳು!

ಜೊತೆಗೆ ಅಮೂಲ್ಯ ಇನಾಮುಗಳು!

ಬಂಗಾರದ ಲೇಪಿಸಿದ ಪಕ್ಕೆಯೊಳಗಿನ ಗಡಿಯಾರಗಳು ಮುಂಗೈ ಗಡಿಯಾರಗಳು ಅವುಗಳ ಸಂಗಡ ರೇಶಿಮೆಯ ಚರ್ಮದ ಪಟ್ಟಿ ಸಿಗುತ್ತದೆ. ಪ್ರತಿಯೊಂದರ ಬೆಲೆ ರೂ. ೫-೧೫-೦, ೪ ವರುಷದ ಗ್ಯಾರಂಟಿ

ವ್ಹಿ. ಪಿ. ಪೋಸ್ಟೇಜ ಬಗ್ಗೆ ೦-೬-೦ ಪ್ರತ್ಯೇಕ.

೩ ಗಡಿಯಾರಗಳಿಗೆ ರೂ. ೧೫-೦-೦, ೬ ಗಡಿಯಾರಗಳಿಗೆ ರೂ. ೨೮—೦—೦. ಅಂಚೆ ವೆಚ್ಚ ಇಲ್ಲ !

ಇದಲ್ಲದೆ ಗಿರಾಕಿಗಳಿಗೆ ಒಂದೊಂದು ಇನಾಮು ಕೊಡಲಾಗುವದು. ಗಡಿಯಾರಗಳನ್ನು ತರಿಸುವಾಗ ೧ ರಿಂದ ೧೦೦ ರ ವರೆಗಿನ ಯಾವದೇ ಒಂದು ಅಂಕಿಯನ್ನು ಅವರು ಬರೆದು ತಿಳಿಸಬೇಕು. ಆ ಅಂಕಿಯಿಂದ ಸೂಚಿತವಾದ ಇನಾಮು ಗಡಿಯಾರದ ಜೊತೆಗೆ ಕಳಿಸಲ್ಪಡುವದು. ಪ್ರತಿಯೊಂದು ಅಂಕಿಗೆ ಒಂದೊಂದು ಇನಾಮಿನ ನಿರ್ದೇಶವಾಗಿದೆ

ಟೀಪ — ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು.

ಪತ್ತೆ:- THE DILAWAR WATCH COY., (33)

Bhuleshwar, BOMBAY

ಕೊಳೆ ರೋಗವೂ, ಔಷಧಿಯೂ.

ಡಾ। ನಾಗೇಶ ಗಣೇಶ ಹೆಗಡೆ ದೊಡ್ಮನೆ ಇವರು ಬರೆಯುವದೇನೆಂದರೆ:—

ಭದ್ರವಾಗಿ ಅಡಿಕೆ ಮರಗಳಿಗೆ ಕೊಟ್ಟೆ ಕಟ್ಟಿದರೆ, ಕೊಳೆ ಬೀಳುವದಿಲ್ಲೆಂಬ ಕಲ್ಪನೆಯು ನಿರಾಧಾರವಾದದ್ದು. ಅನಾದಿ ಕಾಲದಿಂದ ನಾವು ಕೊಟ್ಟೆ ಕಟ್ಟುತ್ತಿದ್ದೇವೆ ತೋಟಿಗರೆಲ್ಲರೂ ಈ ಕೆಲಸವನ್ನು ಚನ್ನಾಗಿ ಮಾಡುತ್ತ ಬಂದಿದ್ದಾರೆ ಆದರೂ, ಕೊಳೆ ರೋಗದ ಪಿಡುಗೇನು ತೋಟಿಗರ ಬೆನ್ನು ಬಿಡದು ಇದರಿಂದ ಮಹಾನ ಮುಟ್ಟಾದೆಯಿಂದ ಸಂಸಾರ ಮಾಡುತ್ತಿರುವ ದೊಡ್ಡ ದೊಡ್ಡ ತೋಟಿಗರ ಮನೆತನಗಳು ನಾಮಶೇಷವಾದವು. ಕೊಟ್ಟೆ ಕಟ್ಟಿದ್ದರಿಂದ ಕೊಳೆಯು ಪರಿಹಾರವಾಗುತ್ತಿದ್ದರೆ, ಕೊಳೆಯಿಂದ ನಷ್ಟವಾಯಿತೆಂಬ ದೂರು ಕೇಳಬರುತ್ತಿದ್ದಿಲ್ಲ. ಬಹುತರವಾಗಿ ತೋಟಿಗರೆಲ್ಲರೂ ಕೊಟ್ಟೆ ಕಟ್ಟುತ್ತಾರೆ

ಇನ್ನೊಂದು ಮಾತಿದೆ ಭದ್ರವಾಗಿ ಕೊಟ್ಟೆ ಕಟ್ಟುವದಾದರೂ ಈಗ ಸುಲಭ ಮಾತಲ್ಲ. ಮುಂಚೆ ಕೊಳೆಯು ರೋಗ ಬರುವದು ಅಪರೂಪದವಿಷಯ ಶೇಕಡಾ ೩೦-೪೦ ರಾಶಿ ಕೊಳೆ ಬಂದರೆ ದೊಡ್ಡದು ಆದರೆ, ಈಗ ಎಷ್ಟು ಕಡಿಮೆಯಾದರೂ ಕೊಳೆಯೇ ಇದರಿಂದ ಕೊಟ್ಟೆ ಕಟ್ಟಲು ಹಾಳೆ ಸಿಗುವದು ಕಷ್ಟವಾಗಿದೆ ಒಂದು ಕೊನೆ ಕಟ್ಟಲು ೩ ಹಾಳೆ ಬೇಕು ಕೊನೆಗೊಂದು ಹಾಳೆ ಸಿಗುತ್ತದೆ. ಕೊನೆಗೆ ಇನ್ನೊಂದು ಹಾಳೆಯಂತೆ ಸಂಪಾದಿಸಿಕೊಂಡಿದ್ದರೆ, ಅರ್ಧ ತೋಟಕ್ಕೆ ಕೊಟ್ಟೆ ಕಟ್ಟಲು ಇಡೀ ತೋಟದೊಳಗಿನ ಹಾಳೆಗಳು ಬೇಕಾಗುತ್ತವೆ ಕೊಳೆ ಪಿಡುಗು ವಿಶೇಷ ಬಂದಾಗ ಕೊಟ್ಟೆಗಳ ಮೇಲೆ ಸತ್ತು, ಇನ್ನೊಂದು ಅದಕ್ಕೂ ಹಾಳೆ ಬೇಕು. ಅತ್ಯಂತ ಮುಂಚೆ ಕೊಟ್ಟೆ ಕಟ್ಟಿದರೆ, ಕೊಟ್ಟೆ ಕೊಳೆಯುತ್ತದೆ ಹೀಗೆ ಕೊಳೆ ತಪ್ಪುವದಿಲ್ಲ. ಅದಕ್ಕಾಗಿ ತಡಮಾಡಿದರೆ, ಮೊದಲೇ ಕೊಳೆ ಬಂದು ಅಡಿಕೆ ಉದುರುತ್ತದೆ. ಇವೆಲ್ಲ ಕಾರಣದ ಮೂಲಕ ಮೈಸೂರ ಸರಕಾರವು ಕೊಳೆ ರೋಗದ ಪ್ರತೀಕಾರಯೋಗ್ಯ ಔಷಧವನ್ನು ಪರಿಶೋಧಿಸಿ ತೆಗೆದಿದೆ. ಕೊಟ್ಟೆ ಕಟ್ಟಲಿಕ್ಕಾದರೂ ಜನಬಲ ಬೇಕು ಕೊಟ್ಟೆ ಕಟ್ಟುವ ಹಂಗಾಮು ಒಮ್ಮೆಲೇ ಬರ ಬರುವದರಿಂದ ಜನರನ್ನು ಸಂಗ್ರಹಿಸಿಕೊಳ್ಳಲು ಬಹಳ ಉಪದ್ರವವಾಗುತ್ತದೆ, ಸಕಾಲದಲ್ಲಿ ಕೊಟ್ಟೆ ಕಟ್ಟಲು ಜನರು ದೊರೆಕದಿದ್ದರೆ, ಹಿಂದೆ-ಮುಂದೆ ಕೊಟ್ಟೆ ಕಟ್ಟಿ ಪ್ರಯೋಜನವಾಗುವದಿಲ್ಲವಾಗಿ ಮೇಲೆಯೇ ಹೇಳಿದ್ದೇನೆ ಔಷಧ ಹಾಕಲಿಕ್ಕಾದರೂ ಜನಬಲ ಬೇಕು. ಅದರ್ಪ್ರಹಂಗಾಮು ಬಹಳ ದಿವಸಗಳವರೆಗೆ ಇರುತ್ತದೆ. ವೇಳೆ-ಯಿಂದ-ಬೇಕಾದ ಅಷ್ಟರೊಳಗೆ ಯಥಾವಕಾಶ ಈ ಔಷಧಿಯ ಪ್ರಯೋಗ ಮಾಡಬಹುದು. ಕೊಟ್ಟೆ ಕಟ್ಟುವದಕ್ಕಿಂತ ಈ ಔಷಧಿ ಪ್ರಯೋಗಕ್ಕೆ ಅರ್ಧ ಖರ್ಚ ಬರುತ್ತದೆ. ಮಳೆ-ಗಾಳಿ-ಚಳಿ ಮುಂತಾದವುಗಳ ಉಪದ್ರವವಿಲ್ಲದ್ದರಿಂದ ಜನಸಾಮಾನ್ಯರು ಈ ಔಷಧಿಪ್ರಯೋಗ ಮಾಡಬಹುದು

ಔಷಧ ಸಾಮುಗ್ರಿಗಳ ಬಗ್ಗೆ ನಾವು ಕೆಲಮಟ್ಟಿಗೆ ಪರಾವಲಂಬಿಗಳೇ; ಆದರೆ, ನಿರುಪಾಯವಿದೆ ಹಾಗೆ ವಿಚಾರ ಮಾಡ ಹೋದರೆ, ಕೊಟ್ಟೆ ಕಟ್ಟುವ ಕೆಲಸವಾದರೂ ಕೆಲ ಮಟ್ಟಿಗೆ ಪರಾವಲಂಬವೇ ಸೂಕ್ಷ್ಮ ವಿಚಾರ ಮಾಡಿದರೆ, ಇನ್ನೂ ಎಷ್ಟೋ ವಿಷಯಗಳಲ್ಲಿ ನಾವು ಪರಾವಲಂಬಿಗಳಾಗಿದ್ದೇವೆ ಅದರಿಂದ ಸ್ವಾವಲಂಬ ತತ್ವದ ಪಾಲನೆಗಾಗಿ ಔಷಧಪ್ರಯೋಗ ಮಾಡದೆ ಹಾನಿ ನಾಶಕ್ಕೆ ಗುರಿಯಾಗಬಾರದು ಅಷ್ಟೇ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಶಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲ್ಯವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ತಕ್ಕ ವ್ಯವಸ್ಥೆ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕೋಪದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಶರೀರದಲ್ಲಿ ತರುಣರಂತೆ ಶಕ್ತಿವರ್ಧನವಾಗುವದು. ನಿಜವಾಗಿ ಒಂದೇ ವಾರದಲ್ಲಿ ಅದರ ಅನುಭವ ಬರುವದು ಜನನೇಂದ್ರಿಯದೊಳಗಿನ ಶಿಥಿಲತೆ ಹೋಗಿ ಸಾಮರ್ಥ್ಯ ಬರುವದು ... ಹೊಟ್ಟೆಯಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ ... ದಿವಸದಲ್ಲಿಗುಣ ಬರುವದು ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ... ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ ಉದರರೋಗ ಮುಂತಾದ ರೋಗಗಳು ನಾಶವಾಗುವವು ... ದಿವಸದಲ್ಲಿ ... ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುವದು, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಶುದ್ಧ ಆಗುವದು. ... ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಮಾಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ... ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೪—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲು ಖರ್ಚು ಹತ್ತುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲು ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ... ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೀ ... ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದೀಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗ ಮದಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ, ಸ್ವಪ್ನಮೇಹ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆ ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗ್ಯಿ ಕಾಮವಾಸನೆಯು ... ಸಂತತಿ ಆಗಲಿಕ್ಕೆ ಸಹಾಯಕಾರ ಆಗುತ್ತದೆ. ... ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಊ) ವನಸ್ಪತಿಗಳು ಮತು ಭಸ್ಮಗಳ "ವೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಸಂಜಾನೆ ೩ ತೊಲಿಯ ೧ ಸಾರಿ, ರಾತ್ರಿಯ ಭೋಜನವಾದ ನಂತರ ೩ ತೊಲಿಯ ಒಂದು ಸಾರಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ಆಳ ತೊಲೆಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ.

झंडूचें

द्राक्षासव- एकै रतलाचा किंमत १॥ रुपये,

रामबाण औषध

सर्दि वाळविणारें
भूक वाढविणारें
शौच्यास साफ करणारें
झोपें आणणारें
शक्ति देणारें
तेजस्वीपणा आणणारें

पिण्यास रोचक

कॅटलाग मागवा

झंडु फार्मास्युटिकल वर्क्स लिमिटेड

मुंबई नं. १४

एजंट— मेसर्स पंडित आणी कंपनी, तीर्थहळ्ळी

सिर्सि एजंट एम एल धारप्पा आणि मंडळ

ಹಿಂದುಸ್ಥಾನದಲ್ಲಿ ಅತ್ಯಂತ ಅಗ್ರಸರ
ನ್ಯಾಶನಲ್ ಇನ್ಶೂರನ್ಸ ಕಂಪನಿ, (ಲಿಮಿಟೆಡ)

ಜೀವ ವಿಮೆಯ ಮಂಡಳಿ.

ಮೂಲಧನವು ಒಂದು ಕೋಟಿ ರೂಪಾಯಿ ...

ಕಳೆದ ವರುಷ ಕೆಲಸವಾದ ... 44 ... ರೂಪಾಯಿಗಳ ಪಾಲಿಸಿ ...

ಎಂಡೋಮೆಂಟ ಪತ್ರಗಳ ... ರೂಪಾಯಿ ..., ... ವರುಷಕ್ಕೆ ... ಬಾನಸ ಕೊಟ್ಟಿದೆ.

ಹೊರಗಡ 1000 ರೂಪಾಯಿ ... ಎಷ್ಟು ಕಂತು ... ಸನ್ಮುಖದಲ್ಲಿ ... 1... ರೂಪಾಯಿ ... ನ್ನು ಪಡೆಯಿರಿ ... ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು — **P D Churi,**
ಬಿ ಸಿ. ಶಿರಾಳಕೊಪ್ಪ, *Branch Secretary*
ಲೋಕಮಾನ್ಯ ಬಿಲ್ಡಿಂಗ, Alice Building
ಹುಬ್ಬಳ್ಳಿ. *Hornby Road,*
BOMBAY

S. U. Narayanacharya & CO.
Chaukamba. BENARES CITY,

ಸಂಸ್ಕೃತ ಪುಸ್ತಕದ ... ರು ... ಕಾಶೀ ... ಪೂಜೆ ... ರುದ್ರಾಕ್ಷಿ, ... ಮೊದಲಾದ ... ಗಳು ... ಸಿಗುತ್ತವೆ ... ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧಿ ನಸ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪೀನಸಿ, ಒಂದೇತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಮೇಲ್ಪಟ್ಟ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಪಿಸೆ ಪುಕ್ಕಟೆ ಕಳಿಸಲಾಗುವದು.

ಬುಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ರ ಗುರುಬಸವ ಅಂಡ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪೇರ್ಕಟೌನ, ಮದರಾಸ

ಇದು "ಕರಾಮತ" ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!



ಕಿರ್ಲೋಸ್ಕರ ಕರಾಮತ ಗಾಣ.

ಈ ಗಾಣದಿಂದ ಶೇಕಡಾ ೭೨ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು, ಬಾಳಿಕೆಯದು. ವಿಶೇಷ ಯಂತ್ರಸಾಮುಗ್ರಿಯೂ ... ಸಾಮಾನ್ಯ ರೈತರು ಇದನ್ನು ಸರಿಪಡಿಸಬಲ್ಲರು. ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು.

... ಗಳು ಸ್ಟ್ಯಾಂಡರ್ಡ ವು. ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದರೆ ಸ್ಥಳಾಂತರ ಮಾಡಬಹುದು.

... ಗಳು ... ಎಷ್ಟೂ ಕೆಲಸಬಿದ್ದರೂ ಈ ಗಾಣವು ಹಿಂಜರಿಯದು. ... ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು.

ಈ ಉತ್ತರ ಕನ್ನಡ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ
೧೦-೧೨ ಕರಾಮತಗಾಣಗಳು ದುಡಿಯುತ್ತವೆ. ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ.
ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; } ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, ಚಳಿ, ಕೆಮ್ಮು, ಗಾಯ ಮುಂತಾದ ಎಲ್ಲ ತರದ ನೋವಿಗೆ ಇದರಿಂದ ಗುಣ ಸಿಗುತದೆ. ಮೊಲ್ಯಂತ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದಿದು ' ನೋವು ಚಿಕ್ಕದೆಂದು ಮಾಡಿ ತಿರಸ್ಕರಿಸಲಾಗದು. ಚಿಕ್ಕ ನೋವಿನಿಂದಲೇ ಜೀವಕ್ಕೆ ಸುಖ ದೊರೆಯುವದಿಲ್ಲ. ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಅಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ. ೦-೧೦-೦.

ಎಲ್ಲ ಕಡೆಯಲ್ಲಿಯೂ ಸಿಗುತ್ತದೆ ಅಥವಾ **ಅಮೃತಾಂಜನ ಡಿಪೋ,**
ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, APRIL 18TH 1938.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೭

ಪತ್ರದ ವರ್ಗಣಿ.

ಕುಮುಟೆಯಲ್ಲಿ, ಅಗಾವು

ರೂಪಾಯಿ 2-4-0.

ಮನೆಯವಾರರಿಯಿಂದ

ರೂ. 3-0-0.

ವ್ಹಿ. ಪಿ. ಅಂಚಿವೆಚ್ಚ ಸ್ಹಿರಿ,

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

सर्वात्महितकर्ता ह्येवत्ता वाति लोकं जनपदहितकर्ता स्वस्वते पार्थिवेऽे ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನಡ, ಇಂಗ್ಲಿಷ, ಮ್ರಾಠಿ

ಟೈಪಿನ (೧೨ ಪೈಂಟ್ ಅಕ್ಷ)

ಆ ಸಾಲುಗಳವರೆಗೆ ರೂ.1-0-

ಆ ಸಂಖ್ಯ ಪ್ರತಿಸಾಲಿಗೆ 0-2-0.

ಹೆಚ್ಚಿಂಗದ ಜಾಹೀರಾತು ಎಷ್ಟು

ಸೂಕ್ತವಿರುವದೋ ಅ ಸಾನ

ದಿಂದ ಅಷ್ಟು ಸಾಲುಗಳು ಹಿಡಿ

ಯಲ್ಪಡುವವು.

ಬಾಕಿ ಜಾಹೀರಾತುಗಳ ಬಗ್ಗೆ

ಪತವ್ಯವಹಾರ ಮಾಡಿ ನಿಶ್ಚಯಿಸ

ಲ್ಪಡುವದು.

—(ಕುಮುಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೭ ಮಾಹೆ ಎಪ್ರಿಲ ಸನ್ ೧೯೩೮ನೇ ಇಸವಿ)

ಹೊಸ ಅಂಗಡಿ! ಹೊಸ ಮ್ಹಾಲು!!

ಕುಮಟ ಪೇಟೆಯಲ್ಲಿ

ಹೊಸ ಕಬ್ಬಿಣ ಅಂಗಡಿ!!

ನಮ್ಮಲ್ಲಿ

ಬೇಕಾದ ನಮೂನೆಯ ಸ್ಟೇಶನರಿ ಸಾಮಾನು,
ಕಬ್ಬಿಣದ ಸಾಮಾನು, ತರತರದ ಸಾಬೂನು,
ಪೇಟೆಂಟ ಔಷಧಗಳು, ಕಾಜಿನ ಸಾಮಾನು,
ಮುಂತಾದ ಎಲ್ಲ ಥರವಾರ ಮ್ಹಾಲು
ಬಲು ಅಗ್ಗವಾಗಿ ದೊರೆಯುತ್ತವೆ!

ಚಿಲ್ಲರೆ ವ್ಯಾಪಾರಿಗಳಿಗೂ
ಮುನಾಫೆ ಸಿಗುವಂತೆ ಸ್ಪೇಶಲ್
ಹೋಲ್ ದರಗಳು ಇಡಲ್ಪಟ್ಟಿವೆ!!

ನಮ್ಮಲ್ಲಿಯ ದರ ವಿಚಾರಿಸಿದರೆ,
ನಮ್ಮಲ್ಲೇ ಮ್ಹಾಲು ಪಡೆಯಲು
ನೀವಾಗಿ ಆತುರಗೊಳ್ಳುವಿರಿ!!!

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನ್ನಡ)

ಆತ್ಮಾನಂ ಸತತಂ ರಕ್ಷೇತ್ ।

ಏರ್-ಪಿಸ್ತೂಲು ಯಾನೆ

ಗಾಳಿ ತುಬಾಕಿ!

ಕಳ್ಳರು, ದರೋಡೆಖೋರರು, ಕಾಡು ಪಶು
ಗಳು ಇವುಗಳಿಂದ ಆತ್ಮಸಂರಕ್ಷಣೆ ಮಾಡಿಕೊ
ಳ್ಳಲನುಕೂಲ. ಲೈಸನ್ಸು ಬೇಡ!!

ಬೆಲೆ ರೂ. ೪-೮-೦ (೪೦ ಗುಂಡುಗಳ ಸಹಿತ)

ವ್ಹಿ. ಪಿ. ಯ ಖರ್ಚು ೦-೬-೦.

೧ ರೂಪಾಯಿಗೆ ೪೦ ಗುಂಡುಗಳು ಸಿಗುತ್ತವೆ

ಸೂಚನೆ:—ಪತ್ರವ್ಯವಹಾರವನ್ನು ಇಂಗ್ಲಿಷಿ
ನಲ್ಲಿಯೇ ಮಾಡಬೇಕು.

ಪತ್ತೆ:-The Novelty Stores, (103)
Bhuleshwar, Bombay No. 2

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಸ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ
ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಲಿಂಗ
ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ
ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

कारवारांत मुंबई!!!

अर्थात

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे
हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनचीं रंगीं-बेरंगी
चादरें, फॅशनेबल बाथ टोवेल, चौक, लहान--मोठे पंचे, सीटपाट, चीलपाट,
शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीपः—आमच्या कोणत्याहि मालावर घाऊक व्यापाऱ्यांस भरपूर कमिशन दिलें
जाईल.

पत्ताः— मेसर्स गोविंद माधव शेणवि, फोवकार अँड सन्स.
पोस्ट— सुंकेरि (कारवार.

FOR

HAND AND POWER

-- LOOMS --

SHUTTLES,

Roughest and even Finest COUNTS Steel & Brass REEDS

COTTEN HEALDS
WIRE HEALDS
BOBBINS
OIL PAINTS
AND

EMERY PAPERS

Can be had at exceptionally ... rates

From –

P. P. TRIVEDI & CO.,

BRUCE Street Fort BOMBAY

ಉಚಿತ] ನನ್ನ ಶಾಸ್ತ್ರೀಯ ವಾದ [...

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನ ... ನನ್ನ ... ಅಂಗಸೌಷ್ಠವವನ್ನು ತೋರಿಸುವ ... ದ ... ರುವವಲ್ಲದೆ ಅಂತಹ ... ದ್ಯಕರ್ವ ... ಬಂದಿತೆಂಬ ವರ್ಣನೆಯೂ ... ಮುತ್ತಿ ಕ್ರಮಗಳೂ ಅಡಕವಾಗಿವೆ ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸ್ವಾಭಾವಿಕ ಮಾರ್ಗವನ್ನು ತಿಳಿಯುತ್ತಾರೆ ಓದಲು ... ಬಹಳ ... ಪ್ರತಿಗಳು ... ವನ್ನು ಶಿಘ್ರ ... ನಿಮಗೆ ಉಚಿತವಾಗಿ ರವಾನಿಸುತ್ತೇನೆ ಈ ಸಮಯವನ್ನು ಕಳೆದುಕೊಳ್ಳದೆ ಕಾಲಾತೀತ ... ನನ್ನ ಈ ಯೋಜನೆಯಲ್ಲಿ ನಿರ್ಣಯವಾಗಲೀ ಈ ಪುಸ್ತಕವ ಓದಿರಿ

ಪ್ರೊಫೆಸರ್ ಎಂ ವಿ ಕೃಷ್ಣರಾವ್

ಬಸವನಗುಡಿ ಬೆಂಗಳೂರು ಸಿಟಿ

ಗೋಪಾಳ ಸಖಾರಾಮು ಮತ್ತು ಕಂಪನಿ.

ಕಮಿಶನ್ ಏಜಂಟ್ಸ್,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ... ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ... ಲೋಕಲ ಖರೀದಿ ಮಾಡಿ ... ಹೆಚ್ಚಿಗೆ ಕೊಡುವದಿಲ್ಲ. ಖರೀದಿ ... ಗುಣದ, ಬೇಡಿದ ಸ್ಥಳದ ... ಡುಕಲಿ ಗಿರಾಕಿಗಳಿಗೆ ಅನುಕೂಲ ... ಯ ... ಲಾಭವಾಗ ಮಾಡುವೆವು, ಬೇಕಾದ ... ಕೂಡಲೆ ಶಕ್ಯ ... ಕಳಿಸುವ ವ್ಯವಸ್ಥೆ ಮಾಡುತ್ತೇವೆ ಹೆಚ್ಚಿನ ... ಬಗ್ಗೆ ಕಾಗದ ಬರೆದು ಕೇಳಿಕೊಳ್ಳಿ ... ಸಿಗು ವದು

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸ್ಪೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವ್ಮೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ' ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ – ಫೌಂಟನ ಪೇನಾ ೧, ... ೧, ವಜ್ರದ ಗುಂಡಿಗಳ ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ... ಪೇನಾ ಕತ್ತರಿ, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ ಗೋಲ್ಡ ... ದ ಹಾರ ೧, ಪಂಚರ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ ೧, ಈ ೧೫ ಬಹುಮಾನ ... ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ ಬರೇ ರೂ ೪–೮–೦

ವಿಳಾಸ — **ಇಂಗ್ಲೀಷ ಎಂಪೋರಿಯಂ,**

ಪೋಸ್ಟ ಬಾಕ್ಸ ನಂ ೧೦೫, **ಮದರಾಸು.**

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದವು ಇದಕ್ಕೆ ೧೪ ಕ್ಯಾರೆಟ್ನಂಥ ನಿಬ್ಬು ಹಾಕಿದೆ ಇದರಿಂದ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ... ನವನ್ನು ತರಿಸಿ ಕೊಳ್ಳುವವರಿಗೆ ನೋಟ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ ೩-೮-೦

ವಿಳಾಸ — ಸೀಟಿರ್ ವಾಚ್ ಕಂಪನಿ ಪೋ ಬಾಕ್ಸ ನಂ ೨೭ ಮದರಾಸು

ಎಂದರೆ,

ಚಳಿ ಜ್ವರದ ಮೇಲೆ ದಿವ್ಯೌಷಧ.

ಆಯುರ್ವೇದದಲ್ಲಿ ಹೇಳಿದಂತೆ, ಈ ಮಿಶ್ರಣವು ಶಾಸ್ತ್ರಶುದ್ಧವಾಗಿ ತಯಾರಿಸಲ್ಪಟ್ಟಿದೆ. ಇದರ ಗುಣವು ... ಆಯುರ್ವೇದ ವಚನದಿಂದಲೇ ಕೇಳಬಹುದು –

... ಕಲ್ಪತರುನಾಮಾ ರಸಃ ಪರಮ ದುರ್ಲಭಃ | ಅಸಾಧ್ಯಂ ... ಕಾಲೋತ್ಥಂ ಜೀರ್ಣಂ

... ವಿಷಮ ಜ್ವರಂ | ಹಂತಿ ಜ್ವರಂ ... ಚ ಗ್ರಹಣೀಂ ಪಾಂಡು ಕಾಮಲಾಮ್ ||

... ಜೀರ್ಣ, ವಿಷಮ ಮುಂತಾದ ವಿವಿಧ ಪ್ರಕಾರಗಳ ಜ್ವರಗಳ ಮೇಲೆಯೂ ಕಲ್ಪತರು ಮಿಶ್ರಣವು ರಾಮಬಾಣ ದಂತಾಗಿರುತ್ತದೆ. ಕಲ್ಪತರು ಮಿಶ್ರಣವು ಅನುಭವದಿಂದಲೂ ಕಲ್ಪತರುವೆಂತೆ ... ಸಿದ್ಧವಾಗಿರತಕ್ಕದ್ದು. ಜಂಗಲದೊಳಗಣ ಹಳ್ಳಿಗರು ಕಲ್ಪತರು ... ಬಾಟ್ಲಿಗಳನ್ನು ಜೋಕೆಯಿಂದಿಟ್ಟು ಕೊಂಡರೆ, ಅವರಿಗೆ ಚಳಿಜ್ವರದ ಬಾಧೆಯು ತಟ್ಟದು ಇಂಗ್ಲೀಷ ಔಷಧೋಪಚಾರದಿಂದ ಹಿಮ್ಮೆಟ್ಟದ ಜ್ವರವೂ ಕೂಡ ಕಲ್ಪತರು ಮಿಶ್ರಣದಿಂದ ... ವಾಗುತ್ತದೆ ಅನೇಕ ಪ್ರಶಂಸಾಪತ್ರಗಳೂ ದೊರಕಿವೆ

೬ ಔನ್ಸಿನ ಬಾಟ್ಲಿಗೆ ರೂ. ೧-೬-೦

ನಮ್ಮ ಪತ್ತೆ – **ವೈದ್ಯ ಬಿ. ಆರ್. ಹರಿದಾಸ,**

ಶ್ರೀ ಸವರ್ಣ ಫಾರ್ಮಸಿ, ಗಟ್ಟಿಕೇರಿ ಮಂಗಳೂರು

ಹು.ಧಾ.ಟಿ. ಏಜಂಟ – ... ಮಾಧವ ರಾವ ... ನಭಾಗ

ಗೋವೆಯಲ್ಲಿ ಖರದೂಷಣರು ಶುದ್ಧಿ-ಯಜ್ಞಕುಂಡವನ್ನು ಭ್ರಷ್ಟಗೊಳಿಸಿದರು.

ಒಂದು ಕಥೆಯಿದೆ, ನ ಪಾಪಿಗಳಿಂದ ಭರತ ಬಂದು ಸಾಗರವು ಉಕ್ಕೇರಿ ಬರುತ್ತಿದ್ದಾಗ ಹುಡುಗಿ ಯೊಬ್ಬಳು ಕಸಬರಿಗೆಯಿಂದ ಭರತೆಯ ನೀರನ್ನು ಗುಡಿಸಿ ಸಾಗರಕ್ಕೆ ತಳ್ಳಹಾಕಲು ಪ್ರಯತ್ನಿಸುತ್ತಿದ್ದಳಂತೆ. ಅಂಥ ಪ್ರಕಾರಗಳು ಈಗ ಗೋವೆಪ್ರಾಂತದಲ್ಲಿ ನಡೆಯುತ್ತಿವೆ. ಶುದ್ಧಿ ಕಾರ್ಯಕ್ಕೆ ಈಗ ಉಕ್ಕೇರಿ ಬಂದಿದೆ. ಕಾರಣಾಂತರದಿಂದ ಕ್ರಿಸ್ತರಾಗಿದ್ದವರು ಈಗ ಹಿಂದುಗಳಾಗಲು ತಯಾರಾಗುತ್ತಿದ್ದಾರೆ. ಇಂಥ ಸಮಯದಲ್ಲಿ ಅಲ್ಲಿಯ ಪಾದ್ರಿಗಳೂ, ಪೋಲೀಸರೂ ಅವರಿಗೆ ಅನ್ಯಾಯ ಸಹಿತ ಬೆದರಿಕೆಗಳನ್ನೂ, ಬಲಾತ್ಕಾರವನ್ನೂ ಕೈಕೊಳ್ಳುತ್ತಲಿದ್ದಾರೆಂದು ಮುಂಬಯಿಯೊಳಗಿನ ' ಹಿಂದು ' ಪತ್ರಿಕೆಯು ಪ್ರಕಟಿಸುತ್ತದೆ.

ಕೇರಿ ಗ್ರಾಮದಲ್ಲಿ ೪೦೦ ಜನ ಗಾವಡಿಗರು ಹಿಂದುಗಳಾಗಲಿಕ್ಕಿದ್ದರು. ಪ್ರಾಯಶ್ಚಿತ್ತ ವಿಧಿಯಾಗುವ ಮುಂಚಿನ ದಿನ ಕುಟ್ಟಿ ಗ್ರಾಮದೊಳಗಿನ ಪಾದ್ರಿಗಳು ಅವರೊಳಗಿನ ಪ್ರಮುಖರಿಗೆ ಇಗರ್ಜಿಯಲ್ಲಿ ಒಯ್ದು ನೀವು ಹಿಂದುಗಳಾದರೆ, ಇಗರ್ಜಿಯ ಮಾಲಕಿಯ ಮೇಲಿನ ಅವರ ಹಕ್ಕು ನಷ್ಟವಾಗುವದೆಂದು ... ಮುಂದೆ ಅವರನ್ನು ಪೋಲೀಸ ಕಮಾಂಡರ, ಜಂಗಲ ಅಧಿಕಾರಿ ಮುಂತಾದ ಸರಕಾರಿ ಅಧಿಕಾರಿಗಳ ಕಡೆ ಗೊಯ್ದು ಹಿಂದುಗಳಾದರೆ ಕೆಲಸದಿಂದ ತೆಗೆಯಲಾಗುವದೆಂದು, ಹಿಂದುಗಳಾಗತಕ್ಕವರು ಸರಕಾರಕ್ಕೆ ಮಾನ್ಯ ಪಡಿಸಿ ಹೇಳಿದರು. ಹಿಂದುಗಳಾಗಲು ಸರಕಾರಕ್ಕೆ ಮಾನ್ಯತೆಯಿದ್ದರೆ ತಾವು ಕ್ರಿಸ್ತಿಯರಾಗಿಯೇ ಉಳಿಯುತ್ತೇವೆ ... ಗಾವಡಿ ಪ್ರಮುಖರು ಹೇಳಿದ ಮೇಲೆ ಸರಾಯಿ ಕುಡಿಯಲು ೧೦ ರೂಪಾಯಿಗಳು ಕೊಡ ಲ್ಪಟ್ಟದ್ದನ್ನು ಪೋಲೀಸ ಚೌಕಿಯ ಮೇಲೆ ಒಯ್ದು ಬಡಾಯಿ ಕೊಳ್ಳಲಾಯಿತು.

ಮಾರನೇ ದಿನ, ನಿಶ್ಚಯಿಸಿದಂತೆ, ಕೇರಿಯ ವಿಠ್ಠಲ ಮಂದಿರ ದೇವಸ್ಥಾನದಲ್ಲಿ ಶುದ್ಧಿ ಕಾರ್ಯ ಸಮಾರಂಭವು ನಡೆಯಿತು. ಅಲ್ಲಿ ಬ್ರಹ್ಮಚರ್ಯಾಶ್ರಮದ ಗಣಪತಬುವಾರವರಿಗೆ ಕರೆಸಿದರು. ಶುದ್ಧಿಯಾಗಲಿಚ್ಛಿಸುವವರಿಗೆ ... ಮುಖ್ಯ ದೇವಾಲಯದಲ್ಲಿ ಹೋಗಿ ಪೋಲೀಸ ಕಮಾಂಡರನು ನುಡಿದ ಪ್ರಕಾರ – 'ಯಾರಿಗೂ ಹಿಂದು ಆಗಲು ಬರಲಾರದು, ಶುದ್ಧಿಯಾದರೆ, ದೇವಸ್ಥಾನದಲ್ಲಿ ನಿಗ್ರೋ ಜನರಿಗೆ ಪ್ರವೇಶ ಮಾಡಿಸಿ ದೇವಸ್ಥಾನವು ಭ್ರಷ್ಟ ಮಾಡಲ್ಪಡುವದು.' ಹಿಂದು ಆದವರಿಗೆ ... ಕೆಳಿಸಲ್ಪಡುವದು ... ಇದನ್ನು ಕೇಳಿ ಎಲ್ಲರೂ ಹೆದರಿದರು. ದೇವಸ್ಥಾನದ ಅರ್ಚಕರು ದೇವಾಲಯದ ಬಾಗಿಲುಗಳನ್ನು ಮುಚ್ಚಿಕೊಂಡರು. ಅದನ್ನು ತೆರೆಯಲು ಪೋಲೀಸ ಕಮಾಂಡರರು ಆಜ್ಞಾಪಿಸಿದರು. ಕರೆಯ ಲಿಕ್ಕಿಲ್ಲವೆಂದು ಅರ್ಚಕರು ನಿಶ್ಚಯಪೂರ್ವಕ ಹೇಳಿದರು. ಆ ಮೇಲೆ ಪೋಲೀಸ ಕಮಾಂಡರರು ಸಿಟ್ಟಿಗೆದ್ದು, ಶುದ್ಧಿಯಾದರೆ, ಗೋವೆಪ್ರಾಂತದೊಳಗಿನ ಸಮಸ್ತ ದೇವಾಲಯಗಳನ್ನು ಭ್ರಷ್ಟಗೊಳಿಸುವೆವೆಂದು ಬೆದರಿಕೆ ಹಾಕಿಹೋದರು. ಪೋಂಡೆಯೊಳಗಿನ ಪೋಲೀಸರು ಗ್ರಾಮಸಂಚಾರವನ್ನಾರಂಭಿಸಿದ್ದಾರೆ. ಹಿಂದುಗಳಾಗದಂತೆ ಗಾವಡಿಗಳಿಗೆ ಎಚ್ಚರಿಕೆ ಕೊಡುತ್ತಿದ್ದಾರೆ. ಅವರು ಅಜ್ಞರು ಭೀತಿಗೊಂಡು ನಡುಗುತ್ತಿದ್ದಾರೆ. ಬೆಟ್ಟದಲ್ಲಿ ಓಡಿಹೋಗಿ ಅಡಗಿಕೊಳ್ಳುತ್ತಿದ್ದಾರೆ. ಪೋಲೀಸ ಚೌಕಿಯ ಮೇಲೆ ಅನೇಕರಿಗೆ ಚೌಕಶಿಯ ನೆವ ಮಾಡಿ ಪೋಲೀಸರು ಕರತಂದು ಉಪದ್ರವ ಕೊಡುತ್ತಲಿದ್ದಾರೆ. ಇವೆಲ್ಲ ಅಂತ್ರೂಜ ಪೇಟೆಯೊಳಗಿನ ಕೇರಿ ಮುಂತಾದ ಗ್ರಾಮಗಳಲ್ಲಿ ನಡೆಸಿದ ಅನಾಚಾರಗಳ ಸ್ವರೂಪವು. ಈ ರೀತಿಗಳು ಇತ್ತಿತ್ತ ಹೆಚ್ಚುತ್ತಿವೆ.

(ಮುಂದೆ ೧೧ನೇ ಪಾನಿನ ಮೇಲೆ ಮುಂದುವರಿದಿದೆ)

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ವಿಶೇಷ ತರದಿಂದ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ ' ಕೂದಲಿನ್ನು ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ವಿನಾ ಮುಂಚಿನ ಅರ್ಧ ಘಂಟೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಪುಷ್ಟಿ ಕೊಟ್ಟು ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ ಕ್ಕೆ	ರೂ	೧—೮—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೩—೧೦—೦
ಅಂಚೆವೆಚ್ಚ	,,	೦—೧೩—

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

೩ ಔಂಸಿಗೆ	ರೂ	೩—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!



" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.ದಿಲ್ಲ

THE ANGLO INDIAN DRUG & CHEMICAL CO. LTD.

POST BOX, 2082 **BOMBAY**

ವಿವಿಧ ಸಂಗ್ರಹ.

ವಿಧಿಘಟನೆ.

ವಿಧಿಘಟನೆಯನ್ನು ಬಲ್ಲವರಾರು? ಚಕ್ರನೇಮಿ ಕ್ರಮದಂತೆ ಮಾನವನ ದೆಶೆಯು ಕ್ರಾಂತಿಕಾರಕವಾಗಿ ಅವಸ್ಥಾಂತರ ಹೊಂದುತ್ತದೆಂದು ಹೇಳುತ್ತಾರೆ. ಆದರೂ, ಮಾನವನು ಕ್ಷಣಭಂಗುರ ಸಂಸಾರದೊಳಗಿನ ಕ್ಷಣಿಕ ಸೌಖ್ಯವನ್ನು ಶಾಶ್ವತವೆಂದು ಭಾವಿಸಿ ಮೆರೆಯುತ್ತಾನೆ. ರಶಿಯಾ ದೇಶದ ಸಮ್ರಾಜ ಝಾರ ನಿಕೋಲಸರವರ ತಾಯಂದಿರಾದ ಮೇರಿಯವರ ಕಥೆಯನ್ನು ಕೇಳಿದರೆ, ಕರಳು ಕರಗಿ ನೀರಾಗುತ್ತದೆ. ರಶಿಯಾ ದೇಶದ ೩ನೇ ಅಲೆಕ್ಝಾಂಡರರ ಪತ್ನಿಯವರು. ಅಲೇಕ್ಝಾಂಡರರು ಪಟ್ಟಾಭಿಷಿಕ್ತರಾಗ ಮುಂಚೆಯೇ ತೀರಿಕೊಂಡರು. ಆದಗೆ ಅವರ ಮಗಂದಿರಾದ ಝಾರ ನಿಕೋಲಸರವರು ಪಟ್ಟವನ್ನೇರಿದರು. ಝಾರರ ತಾಯಂದಿರಾಗಿ ಮೇರಿ ರಾಣಿಯವರ ಅನೇಕ ಅರಮನೆಗಳ ಒಡತಿಯಾದರು. ಅಮೂಲ್ಯವಾದ ಒಳ್ಳೇ ಪಥ ವಜ್ರವು ಇವಳ ಬಳಿಯಲ್ಲಿತ್ತು. ರಾಜ್ಯಕಾರಭಾರದಲ್ಲಿ ಮೇರಿ ಮಹಾರಾಣಿಯವರಿಗೆ ಬಲಿಷ್ಠ ಪ್ರತಿಷ್ಠೆ ಇತ್ತು. ಈಗ ಅವರು ಕೋಪನಹೇಗನದಲ್ಲಿ ಒಂದು ಚಿಕ್ಕ ಮನೆಯಲ್ಲಿದ್ದಾರೆ. ಕೋಪನಹೇಗನವು ಡೆನ್ಮಾರ್ಕದ ರಾಜಧಾನಿಯು. ಮೇರಿಯವರ ಮನೆಯು ಅಲ್ಲಿಯೇ. ಒಂದು ಕಿಡಿಕಿಯಲ್ಲಿ ಹೊರಬದಿಗೆ ಮೇರಿಯವರು ದಿನಾ ಒಂದು ದೀಪ ಹಚ್ಚಿ ಇಡೀ ರಾತ್ರೆ ಉರಿಸುತ್ತಿರುತ್ತಾರೆ. "ಇಡೀ ರಾತ್ರೆ ದೀಪವನ್ನು ಯಾಕೆ ಉರಿಸುತ್ತೀರಿ?" ಎಂದು ಪ್ರಶ್ನಿಸಿದರೆ, ಅವರು ನಸುನಗೆಯಿಂದ ನುಡಿಯುವದೇನೆಂದು ಬಲ್ಲಿರಾ? "ಮಗನಾದ ನಿಕೋಲಸ ಝಾರನಿಗೆ, ನಾನು ಅವನ ನಿರೀಕ್ಷಣೆ ಮಾಡುತ್ತಿರುವ ಸ್ಥಳ ತಿಳಿಯಬೇಕೆಂದು!" ಪಾಪ! ನಿಕೋಲಸ ಝಾರರು ರಶಿಯಾ ದೇಶದಲ್ಲುಂಟಾದ ರಾಜ್ಯಕ್ರಾಂತಿಯಿಂದ ಗಲ್ಲಿಗೇರಿಸಲ್ಪಟ್ಟಿದ್ದಾರೆಂದು ಇನ್ನೂ ಅವರಿಗೆ ಗೊತ್ತಿಲ್ಲ. ಮಾತೆಗೆ ದುಃಖಾವೇಗವುಂಟಾಗುವದೆಂದು ಆ ಸುದ್ದಿಯನ್ನು ಅವರಿಗೆ ಯಾರೂ ಹೇಳಲಿಲ್ಲ. ಹೀಗೆ ಬಹು ಬಡತನದಿಂದ ಆಯುಷ್ಯವನ್ನು ಅವಳು ಕಳೆಯುತ್ತಿದ್ದಾಳೆ. ಆಸ್ಟ್ರಿಯಾ ದೇಶದ ಮಹಾರಾಣಿಯವರಾದ ಝಿಟಾರವರ ಸ್ಥಿತಿಯೂ ಕರುಣಾಸ್ಪದವಾಗಿದೆ. ಆಸ್ಟ್ರಿಯಾ ದೇಶದ ದರ್ಬಾರದಲ್ಲಿ ಝಿಟಾ ಮಹಾರಾಣಿಯವರ ದರ್ಶನ ಪಡೆದು ಭಾಗ್ಯಶಾಲಿಯಾಗಲು ನಾ ಮುಂದೆ, ನಿ ಮುಂದೆ ಎಂದು ಮಹಾನುಭಾವರು ಹೆಣಗಾಡುತ್ತಿದ್ದರು. ಈಗ ಅವರು ಸ್ಪೇನ ದೇಶದ ಒಂದು ಗ್ರಾಮದಲ್ಲಿ ಮಕ್ಕಳೊಡನೆ ಬಹು ಕಷ್ಟದಿಂದ ಜೀವನ ಮಾಡುತ್ತಾರೆ. ಒಪ್ಪಂದದ ತಹನಾಮೆಯಂತೆ ಅರಸರಾದ ಕಾರ್ಲರವರಿಗೂ, ಅರಸಿಯರಾದ ಝಿಟಾರವರಿಗೂ ಪದಚ್ಯುತ ಮಾಡಲಾಯಿತು. ಆ ಕಾಲಕ್ಕೆ ಇವರಿಗೆ ೭ ಮಂದಿ ಮಕ್ಕಳು. ಕಾರ್ಲರವರು ಸಿಂಹಾಸನವನ್ನು ಪುನಃ ಪಡೆಯಲು ೨ ಬಾರಿ ಪ್ರಯತ್ನ ಮಾಡಿದರು. ಆದರೆ ಅವರು ಅಪಯಶಸ್ಸು ಹೊಂದಿದರು. ಆ ಮೇಲೆ ಅವರು ತೀರಿಕೊಂಡರು. ಕಾರ್ಲರವರು ತೀರುವ ಸಮಯ, ಝಿಟಾರವರು ಗರ್ಭವತಿಯಿದ್ದರು. ಹೊಟ್ಟೆಯ ಸಂಸಾರವನ್ನು ಕಷ್ಟದಿಂದ ನಡಿಸುತ್ತಿದ್ದಾಗ ಅವರ ಬಳಿ ಕೆಲವು ರತ್ನಗಳಿದ್ದವು. ಅವನ್ನು ಒಂದೊಂದಾಗಿ ಅವರು ಮಾರಿದರು. ಎಲ್ಲವೂ ಖರ್ಚಾದವು. ಉಳಕೊಂಡ ಮನೆಯ ಭಾಡಿಗೆ ಕೊಡಲಾಗಲಿಲ್ಲ, ಹಾಗೆಯೇ ಪತಿಯರು ತೀರಿಕೊಂಡರು. ಸಂಸಾರದ ಸರಂಜಾಮು ತರಲಾಗಲಿಲ್ಲ. ಆಗಿಂದಾಗ ಮಕ್ಕಳನ್ನು ಕಟ್ಟಿಕೊಂಡು ಅವರು ದೇಶಾಂತರ ಮಾಡಹತ್ತಿದರು. ಈಗ ಅವಳಿಗೆ ಮನೆ ಇಲ್ಲ. ೮ನೇ ಶಿಶುವು ಹುಟ್ಟಿರುತ್ತದೆ. ಕೆಲವು ಔದಾರ್ಯವಂತ ಜನರು ಪಟ್ಟಿ ಕೂಡಿಸಿ ಅವಳಿಗೆ ಒಂದು ಮನೆ ಕಟ್ಟಿಸಿಕೊಟ್ಟರು. ಇಲ್ಲಿ ಅವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡುತ್ತ ಹಾಗೂ ಹೀಗೂ ಮಾಡಿ ಸಂಸಾರ ಮಾಡುತ್ತಿದ್ದಾರೆ. ಚೀನ ದೇಶದ ಮಹಾರಾಣಿಯರಾದವರು ಇಳವಳ ಕಥೆಯೂ ಶೋಚನೀಯವಿದೆ. ಅವಳ ಮದುವೆಯ ಸಾಮರ್ಥ್ಯವೆಷ್ಟೆಂದು ಹೇಳಲಿ? ಒಂದು ವಾರದ ತನಕ ಮೋಜುವಾನಿಗಳಾದವು! ಮಸ್ತಾಗ ಬಾಂಡಗಳು ಹಾರಿಸಲ್ಪಟ್ಟವು. ಸಾವಿರಾರು ಪ್ರಜೆಗಳು ಮಹಾರಾಣಿಯವರಿಗೆ ದೊಡ್ಡ ದೊಡ್ಡ ಕಾಣಿಕೆಗಳನ್ನರ್ಪಿಸಿ ಕೃತಕೃತ್ಯರಾದರು. ಅಂಗರಕ್ಷಕರೆಷ್ಟು! ಸರಂಜಾಮೆಷ್ಟು! ಮಹಾರಾಣಿಯರ ಮಾತು ಆಜ್ಞೆಂ ಪಾಲಿಸಿ ಜೀಕಿ ಪಡೆದ ಯೌವನ ಸಾಗಿ ವರ್ತಿಸುತ್ತಿರುವ ಸೇವಕರೆಷ್ಟು! ಮಹಾರಾಣಿಯರ ಸಂತೋಷಕ್ಕಾಗಿ ಹಗಲಿರುಳು ಪರಿಶ್ರಮಪೂರ್ವಕವಾಗಿ ದುಡಿಯುವವರೆಷ್ಟು! ಆ ಒಡ್ಡೋಲಗವೇನು! ಆ ಉಪವನವೇನು! ಆ ಅರಮನೆಗಳ ಸೊಗಸೇನು! ಎಲ್ಲವೂ ತಿರುಕನ ಕನಸಾಯಿತು. ಒಂದು ದಿನ ಸಮಾಜಸತ್ತಾವಾದಿಗಳು ಅರಮನೆಯನ್ನು ನುಗ್ಗಿ, ದಂಪತಿಗಳಿಗೆ ಹೊರತಳ್ಳಿಬಿಟ್ಟರು. ಈಗ ಕಾನಕೂನರ ಉತ್ಪನ್ನದ ಮೇಲೆ ಅವರ ನಿರ್ವಾಹವಾಗುತ್ತಿದೆ. ಇವು ಪುರಾಣದೊಳಗಿನ ಕಥೆಗಳಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಪ್ರತ್ಯಕ್ಷ ಸಂಭವಿಸಿದ ವೃತ್ತಾಂತಗಳಿವು. ವಿಧಿಬಲಗಳಿರುವ ವರೆಗೆ ಮಾನವನ ಸೊಬಗು. ಧೀಮಂತನು ಆತನೇ, ಶ್ರೀಮಂತನೂ ಆತನೇ. ಅದಿಲ್ಲದಿದ್ದರೆ, ಎಲ್ಲವೂ ತೀರಿತು. ಇವನ್ನೆಲ್ಲ ಅರಿತು ಪ್ರಾಜ್ಞ ಜನರು ನಡಕೊಂಡರೆ, ಇಹಪರ ಸೌಖ್ಯಗಳು ಪ್ರಾಪ್ತವಾಗುವವು.

***

ಬಾಯಿಯಿದ್ದರೆ ಬದುಕೊಂಬೆ !

ಬೀರಬಲ್ಲನ ಕಾಲದ ಒಂದು ಕಥೆ, ಬೀರಬಲ್ಲನ ಮಗನು ಒಮ್ಮೆ ಅಕಬರ ಬಾದಶಹ ಉಪವನದೊಳಗಿಂದ ಗುಲಾಬಿ ಹೂವುಗಳನ್ನು ಕದ್ದನಂತೆ! ದರ್ಬಾರದಲ್ಲಿ ಬೀರಬಲ್ಲನಿಗೆ ಸಿಗುವ ಮನ್ನಣೆಯನ್ನು ನೋಡಿ, ಇತರ ಸರದಾರರಿಗೆ ಅಸೂಯೆಯುಂಟಾಗಿತ್ತು. ಅದರಿಂದ ಆತನಿಗೆ ಮರ್ಯಾದೆಗೇಡು ಮಾಡಲು ಅನೇಕರು ಹೊಂಚಿ ಹಾಕಿಕೊಂಡು ಕೂತಿದ್ದರು. ಗುಲಾಬಿ ಹೂವು ಕದ್ದ ಸುದ್ದಿ ನೋಡಿದೊಡನೆ, ಉಪವನದ ಕಾವಲುಗಾರರು ಹೂವು ಸಹಿತ ಮಗನಿಗೆ ಸೆರೆಹಿಡಿದು ಮೇಣೆಯಲ್ಲಿ ಕುಳ್ಳಿರಿಸಿ ಒಯ್ಯಲಾರಂಭಿಸಿದರು. ಹಾದಿಯಲ್ಲಿ ಬೀರಬಲ್ಲನೇನೋ ಸಿಕ್ಕಿದನಂತೆ! ಆತನಿಗೆ ವೃತ್ತಾಂತವನ್ನು ತಿಳಿಸಲಾಯಿತು. "ಒಳ್ಳೇ ಹೀಗೋ! ಮಗ ಬಾಯಿಯಿದ್ದರೆ ಬದುಕೊಂಬ" ಎಂದು ಉದ್ಗರಿಸಿ ಮುಂದಾದನಂತೆ! ಮಗನಿಗೆ ಈ ಮಾತು ಕೇಳಬಂತು. ಎಷ್ಟಾದರೂ ಬೀರಬಲ್ಲನ ಮಗನಲ್ಲವೇ? ಎಲ್ಲ ಹೂವುಗಳನ್ನು ತಿಂದುಬಿಟ್ಟನಂತೆ. ದರ್ಬಾರದಲ್ಲಿ ಹೋದರೆ ಇವನಷ್ಟು ಸಂಭಾವಿತನು ಬೇರೊಬ್ಬನಿಲ್ಲ. ಅಕಬರನು ರೇಗಿಗೆದ್ದು ಕಾವಲುಗಾರರಿಗೇ ಗದ್ದರಿಸಿಬಿಟ್ಟನಂತೆ. ಆದರೆ ಬೀರಬಲ್ಲನ ಆ ಉಪಾಯವು ಈಗ ಸಾಧ್ಯವಿಲ್ಲ. ಬ್ರಿಟಿಶ ರಾಜ್ಯದಲ್ಲಿ ನಡೆಯದು. ಕಳೆದ ಎಪ್ರಿಲ್ ೩ನೇ ತಾರೀಖಿಗೆ ಟಿನ್‌ಕಾಂ ಚಂದ್ರದಾಸ ಎಂಬೊಬ್ಬ ಬಂಗಾಲಿಯು ಒಂದು ಬಂಗಾಲಿ ಮಾಡಿಬಿಟ್ಟನು! ಚಿಕ್ಕ ಹುಡುಗಿಯೊಬ್ಬಳು ವೈತಾಕಖಾನ ಮಾರ್ಗದ ಬದಿಗೆ ತನ್ನ ಮನೆಯ ಅಂಗಳದಲ್ಲಿ ಆಡುತ್ತಿದ್ದಳು. ಚಂದ್ರದಾಸ ಬಾಬುಗಳು ಆ ಬದಿಯಿಂದ ಹೋಗುತ್ತಿದ್ದರು; ಥಟ್ಟನೆ ಅವಳ ಮೈಮೇಲಿನ ಒಂದು ಆಭರಣವನ್ನು ಹಾರಿಸಿ ಓಡಿದರು. ಜನರು ತಿಳಿದು ಹಿಂದೆಯೇ ಓಡೋಡುತ್ತ ಹೋದರು, ಹಿಡಿದರೆ ಆಭರಣವು ಮಾಯವಾಗಿತ್ತು. "ಬಾಯಿಯಿದ್ದರೆ ಬದುಕೊಂಬೆ" ಎಂಬ ಉಪದೇಶವನ್ನು ಸ್ಮರಿಸಿ, ಟಿನ್‌ಕೌರಿ ಮಹಾರಾಜರು ಆಭರಣವನ್ನು ಬಾಯಿಯಲ್ಲಿ ಹಾಕಿಬಿಟ್ಟರು, ಅದರಿಂದ ಟಿನ್‌ಕೌರಿಯವರ ಎಕ್ಸರೇಪರೀಕ್ಷೆಯಾಗುವದಿದೆ. ಎಕ್ಸರೇ ಕಿರಣಗಳಿಂದ ಮಾನವನ ದೇಹದೊಳಗಿನ ಘನ ಪದಾರ್ಥಗಳು ಸ್ಪಷ್ಟವಾಗಿ ಕಾಣುತ್ತವೆ. ಬರೇ ಬಾಯಿಯಿಂದ ಬ್ರಿಟಿಶ ರಾಜ್ಯದಲ್ಲಿ ಬದುಕಿಕೊಳ್ಳಲು ಬರದು. ತಿಳಿಯಿತೇನು! ಅಷ್ಟು ನಾವು ಈಗ ಮುಂದರಿದಿದ್ದೇವೆ.

***

ಈಶ್ವರೇಚ್ಛಯಾ ಅಮೃತಂ ವಿಷಮ್ ಭವೇತ್ ।

ಕಾಲಿದಾಸ ಕವಿಶ್ರೇಷ್ಠನ ರಘುವಂಶ ಕಾವ್ಯದಲ್ಲಿ ಅಜ ರಾಜನು ಪಟ್ಟದರಸಿಯಾದ ಇಂದುಮತಿ ದೇವಿಯವರೊಡನೆ ಉಪವನದಲ್ಲಿದ್ದಾಗ ಪೂಮಾಲೆಯೊಂದು ಅವಳ ಎದೆಯ ಮೇಲೆ ಬಿದ್ದು ಇಂದುಮತಿ ರಾಣಿಯವರು ಪರಲೋಕವನ್ನೈದಿದರಾಗಿ ವರ್ಣಿಸಲ್ಪಟ್ಟಿದೆ. ಬಮುಶೇಟಪುರದಲ್ಲಿ ಇಂಥ ಒಂದು ಪ್ರಕಾರವು ಸಂಭವಿಸಿದೆ. ಕಿಲಾನಿ ನಾಟಕಗೃಹದ ಬಳಿಯಲ್ಲಿ ಒಂದು ಆಕಳು ಸತ್ತು ಬಿದ್ದಿತ್ತು. ಗಿಡಗ ಪಕ್ಷಿಯು ಅದನ್ನು ಕಂಡು ತಿನ್ನಬಂತು. ರುಚಿಕರವಾದ ಮಾಂಸವನ್ನು ತಿನ್ನಲು ಆಸಕ್ತವಾಗಿ ಆಕಳು ತೆರೆದುಕೊಂಡಿದ್ದ ಬಾಯೊಳಗಿಂದ ಗಂಟಲು ಮಾಂಸವನ್ನು ಚುಚ್ಚಿ ತೆಗೆಯಲು ಬಾಯಿಯಲ್ಲಿ ಚುಂಚು ಹಾಕಿತು; ಒಮ್ಮೆಲೇ ಆಕಳ ಬಾಯಿಯು ಮುಚ್ಚಿಕೊಂಡು ಬಿಟ್ಟಿತು. ಪ್ರಾಣಿಯು ತಪ್ಪಿತೋ ಏನೋ? ಗಿಡಗ ಪಕ್ಷಿಯ ಚುಂಚು ಗಟ್ಟಿಯಾಗಿ ಸಂದಿನೊಳಗೆ ಸಿಕ್ಕಿದಂತಾಯಿತು. ಹೊರತೆಗೆಯಲಾಗಲಿಲ್ಲ; ಗಿಡಗವು ಹಿಂದ್ಯಾಡಿತು; ಜಗ್ಗಾಡಿತು; ಆದರೂ ಚುಂಚು ಹೊರಬರಲೊಲ್ಲದು. ಕೊನೆಗೆ ಪೇಚಾಡಿ ಪೇಚಾಡಿ, ಉಸಿರುಕಟ್ಟಿ ಗಿಡಗ ಪಕ್ಷಿಯು ಮೃತಿಯನ್ನೈದಿತು.

***

ಮಳೆಯ ಯೋಗಗಳು.

ವೈಶಾಖ ಶುದ್ಧ ೧೫ಮೆಗೆ ರವಿ-ಬುಧ ಯುತಿಯಿದೆ. ಈ ಯುತಿಯು ಬಹು ದೊಡ್ಡದು. ಈ ಯೋಗದ ಮೂಲಕ ವೈಶಾಖ ಶು॥ ೧೧ಸಿ ಸೋಮವಾರದಿಂದ ವದ್ಯ ೩ಗೆ ಸೋಮವಾರ ತನಕ ಮಳೆ ಬೀಳುವದು. ಆಷಾಢ ಶು॥ ೧೩ಸಿ ಶುಕ್ರವಾರಕ್ಕೆ ಸಣ್ಣ ಯುತಿಯಿದೆ. ಹಾಗೆಯೇ ೧೩ ದಿನಗಳಲ್ಲಿ ರವಿ-ಶುಕ್ರ ಯುತಿಯಾಗುತ್ತದೆ. ಇದರಿಂದ ಆಷಾಢ ಶು॥ ೧೩ಯಿಂದ ಆಷಾಢ ವದ್ಯ ೩ಗೆ ತನಕ ಮಳೆ ಬೀಳುವದು. ಆಷಾಢ ವ॥ ೧೪ಸಿಗೆ ದೊಡ್ಡ ಬುಧ ಯುತಿಯ ಯೋಗವಿದೆ. ಇದೇ ಸಮಯ ರವಿ-ಚಂದ್ರರ ಹಾಗು ಬುಧ-ಚಂದ್ರರ ಯುತಿಗಳ ಯೋಗವಿದೆ. ಇದರಿಂದ ಆಷಾಢ ವದ್ಯ ೭ಮಿಯಿಂದ ಅಧಿಕ ಶ್ರಾವಣ ಶು॥ ೭ಮಿಯ ತನಕ ಒಂದು ಪಕ್ಷದಲ್ಲಿ ಚಲೋ ಮಳೆ ಬೀಳುವದು.

೬ನೇ ಬುಧವಾರ ತಿಥಿಯು ಅಶ್ವಿನ ಶ|೧೦ವರೆಗೆ ಬರುತ್ತದೆ. ಇದರಿಂದ ಈ ಯುತಿಯ ಮಳೆಯು ಅಶ್ವಿನ ಶು| ೫ಮಿಯಿಂದ ೧೫ರ ತನಕ ಬೀಳುವದು. ಮಾರ್ಗಶೀರ್ಷ ವದ್ಯ ೬ಗೆಗೆ ಮಳೆಯ ಹಿಂದು ಯೋಗವಿದೆ. ಆದರೆ, ಇದರಿಂದ ವಿಶೇಷ ಮಳೆ ಬೀಳುವ ಲಕ್ಷಣವಿಲ್ಲ. ಇತರ ಗ್ರಹಗಳ ಯುತಿಗಳ ಮೇಲಿಂದ ಸಾಮಾನ್ಯವಾಗಿ ಮಳೆ ಬೀಳುವ ದಿನಗಳ್ಯಾವವೆಂದರೆ, ವೈಶಾಖ ಶು| ೧೫ಮೆ, ವದ್ಯ ೮ಮಿ, ಜ್ಯೇಷ್ಠ ಶು| ೨ರ್, ವ| ೧ದೆ, ೨ಗೆ, ೫ಮಿ, ೮ಮಿ, ೧೦ಮಿ, ೩೦ಸ್ಯೆ, ಆಷಾಢ ಶು| ೧ದೆ, ೩ಗೆ, ೭ಮಿ, ೧೦ಮಿ, ೧೨ಶಿ ೧೪ಶಿ, ವದ್ಯ ೨ಗೆ, ೫ಮಿ, ೭ಮಿ, ೧೨ಶಿ, ೧೩ಶಿ; ಅಧಿಕ ಶ್ರಾವಣ ಶು| ೪ರ್ಥಿ, ೫ಮಿ, ೧೧ಶಿ, ೧೪ಶಿ, ೧೫ಮೆ, ವದ್ಯ ೪ರ್ಥಿ, ೫ಮಿ, ೭ಮಿ, ೯ಮಿ; ನಿಜಶ್ರಾವಣ ಶ| ೫ಮಿ, ೮ಮಿ, ೯ಮಿ, ವದ್ಯ ೪ರ್ಥಿ, ೭ಮಿ, ೧೧ಶಿ, ಭಾದ್ರಪದ ಶು| ೬ಷ್ಠಿ, ೭ಮಿ, ೧೦ಮಿ, ೧೫ಮೆ, ವದ್ಯ ೨ದೆ; ಇಷ್ಟು ದಿನ ಮಳೆಯ ಯೋಗವಿರುವದಾಗಿ 'ಕೇಸರಿ'ಯ ಸಂಪಾದಕ ವರ್ಗದೊಳಗಿನ ವಿಖ್ಯಾತ ಜ್ಯೋತಿಷಶಾಸ್ತ್ರವಿಶಾರದರಾದ ಶ್ರೀ| ಜನಾರ್ದನ ಸಖಾರಾಮ ಕರಂದಿಕರರವರು ಪ್ರಕಟಿಸಿದ್ದಾರೆ

***

ಇಂಥ ನ್ಯಾಯಬುದ್ಧಿ ಇರಬೇಕು.

ಮುಂಬಯಿಯ ಹಾಯಕೋರ್ಟಿನಲ್ಲಿ ಈಗ ಒಂದು ಕೊಲೆಪಾತಕ ಖಟ್ಲೆಯ ವಿಚಾರ ನಡೆಯುತ್ತದೆ ನಾರಾಯಣಜಿ ಪ್ರೇಮಜಿ ಎಂಬ ಒಬ್ಬ ಶ್ರೀಮಂತ ಭಾಟಿಯಾ ದಲಾಲರ ಮೇಲೆ ಕೊಲೆಪಾತಕಕ್ಕೆ ಪ್ರಯತ್ನ ಮಾಡಿದ ಆರೋಪ ಬಂದಿದೆ. ಇವರ ತರ್ಫೆನಿಂದ ಬೆರಿಸ್ಟರ ಮಹಮ್ಮದ ಅಲ್ಲಿ ಜಿನ್ನಾರವರು ವಾದಿಸುತ್ತಿದ್ದಾರೆ. ಸರಕಾರಿ ವಕೀಲರಾದ ಬೆರಿಸ್ಟರ ಬಿನ್ನಿಂಗರವರಿಗೂ, ಬೆರಿಸ್ಟರ ಜಿನ್ನಾರವರಿಗೂ ಖಟ್ಲೆ ನಡೆಯುವಾಗ ಕೈಕೊಂಡ ಕ್ರಮಗಳ ಕುರಿತು ಆಗಾಗ ತಕ್ರಾರು ನಡೆಯುತ್ತಿತ್ತು. ಗುರುವಾರಕ್ಕೆ ಪೋಲೀಸ ಇನ್ಸಪೆಕ್ಟರರ ಜಬಾನಿಯಾಯಿತು. ಆ ಸಮಯ ಫಿರ್ಯಾದಿ ಅನಂತ ರಾಮ ದವೇಯವರು ಮೊಟ್ಟಮೊದಲು ಪೋಲೀಸರಿಗೆ ಬರಕೊಟ್ಟ ಯಾದಿಯನ್ನು ಖಟ್ಲೆ ಕಾಗದದಲ್ಲಿ ಸೇರಿಸಬೇಕಾಗಿ ಬೆರಿಸ್ಟರ ಬಿನ್ನಿಂಗರವರು ಪ್ರಯತ್ನಿಸಿದರು. ಆ ಕಾಲಕ್ಕೆ ಅನಂತ ರಾಮ ದವೇಯವರ ಜಬಾನಿ ಆಗಿಹೋಗಿತ್ತು. ಈ ಯಾದಿಯ ವಿಷಯ ಫಿರ್ಯಾದಿಗೆ ಹಿಂದಕ್ಕೆ ಪ್ರಶ್ನೆ ಕೇಳಿದ್ದಿಲ್ಲ. ಮಿ| ಜಿನ್ನಾರವರು ಆಕ್ಷೇಪಿಸಿದರು. ಈ ನಮೂನೆಯಿಂದ ಖಟ್ಲೆ ನಡಿಸುವದು ದೊಡ್ಡ ತಪ್ಪೆಂದು ಧ್ವನಿಸಿದರು. ಬೆರಿಸ್ಟರ ಬಿನ್ನಿಂಗರವರು ಫಿರ್ಯಾದಿಗೆ ಕರೆಯಲಿಕ್ಕೂ ತಯಾರಾದರು. ಜಿನ್ನಾರವರು ನ್ಯಾಯಮೂರ್ತಿಗಳಿಗೆ ಉದ್ದೇಶಿಸಿ ನುಡಿದದ್ದೇನಂದರೆ - "ಈ ದಾಖಲೆಯನ್ನು ನ್ಯಾಯಮೂರ್ತಿಗಳು ಧಿಕ್ಕರಿಸಬೇಕಾಗಿ ನನ್ನ ಹೇಳಿಕೆಯಿದೆ. ಫಿರ್ಯಾದಿಗೆ ಕೇಳದ ಕಾಗದವನ್ನು ದಾಖಲ ಪಡಿಸಲು ಫಿರ್ಯಾದಿಗೆ ಹಕ್ಕಿಲ್ಲ. ಫಿರ್ಯಾದಿಯ ಜಬಾನಿಯನ್ನು ಇನ್ನು ಕೊಳ್ಳಲಿಕ್ಕೂ ಬರುವದಿಲ್ಲ. ಇಂಥ ಮಹತ್ವದ ಖಟ್ಲೆಗಳಲ್ಲಿ ಈ ಪ್ರಕಾರ ನಡೆಯುವದು ಪ್ರಶಸ್ತವಲ್ಲ." ನ್ಯಾಯಮೂರ್ತಿಗಳು ನುಡಿದದ್ದೇನಂದರೆ:- "ಜಿನ್ನಾರವರೇ, ಮೂರನೇ ವರ್ಗದ ಮೆಜಿಸ್ಟ್ರೇಟ ಕೋರ್ಟಿನಲ್ಲಿ ನೀವು ಕೆಲಸ ಮಾಡುವದಿಲ್ಲವಾಗಿ ನೆನಪಿನಲ್ಲಿಡತಕ್ಕದ್ದು. ಬಹುಕಾಲದ ವರೆಗೆ ನೀವು ಕೋರ್ಟಿನ ಬಳಿ ಮಾತಾಡುತ್ತಿದ್ದಿರಿ; ಆದರೆ, ನಿಮ್ಮ ಆಕ್ಷೇಪಕ್ಕೆ ಆಧಾರವಾದ ಕಾನೂನನ್ನು ನೀವು ತೋರಿಸಲಿಲ್ಲ" ಬೆರಿಸ್ಟರ ಜಿನ್ನಾರವರು ನುಡಿದದ್ದೇನಂದರೆ.— "ಬುದ್ಧಿ, ತಾವು ೩ನೇ ವರ್ಗದ ವಕೀಲರೊಡನೆ ಮಾತಾಡುವದಿಲ್ಲ. ತಾವು ನನಗೆ ಸ್ವಲ್ಪ ಅವಕಾಶ ಕೊಟ್ಟಿದ್ದರೆ, ಸೂಚನೆಯಾತೆ(?) ಆಧಾರವನ್ನೇ ನಾನು ತೋರಿಸುತ್ತಿದ್ದೆನಲ್ಲವೇ?" ಆ ಮೇಲೆ ಬೆರಿಸ್ಟರ ಜಿನ್ನಾರವರು ಕಾನೂನನ್ನು ತೋರಿಸಿ, ಈ ದಾಖಲೆಯು ಈ ಸಂದರ್ಭದಲ್ಲಿ ಖಟ್ಲೆ ಕಾಗದಗಳಲ್ಲಿ ಸೇರಿಸಲು ಅನರ್ಹವೆಂದು ಪ್ರತಿಪಾದಿಸಿದರು. ಬೆರಿಸ್ಟರ ಬಿನ್ನಿಂಗರವರು ತಮ್ಮ ಆಧಾರಗಳನ್ನು ತೋರಿಸಿದರು. ಆದರೂ, ನ್ಯಾಯಮೂರ್ತಿ ಬೇಕರರು ಬೆರಿಸ್ಟರ ಜಿನ್ನಾರವರ ಆಕ್ಷೇಪವನ್ನೇ ಎತ್ತಿಹಿಡಿದು ಕಾಗದವನ್ನು ದಾಖಲಪಡಿಸಿಕೊಳ್ಳಲಿಲ್ಲ. ಆದರೆ, ಫಿರ್ಯಾದಿಗೆ ಪುನಃ ಜಬಾನಿಗೆ ಕರೆಯಲು ಅಪ್ಪಣೆ ಕೊಟ್ಟರು. ಸಾಮಾನ್ಯ ನ್ಯಾಯಮೂರ್ತಿಗಳೆಂದರೆ ತಮ್ಮದೇ ಹಟ ಹಿಡಿದು, ಬೆರಿಸ್ಟರ ಜಿನ್ನಾರವರ ಮೇಲೆ ಕೋರ್ಟಿಗೆ ಅಪಮಾನವಾಯಿತೆಂದು ದೊಡ್ಡ ಭೂತವನ್ನೇ ಪ್ರಕಟಿಸುತ್ತಿದ್ದರು. ನ್ಯಾಯಮೂರ್ತಿಗಳು ಈ ಪ್ರಸಂಗವನ್ನು ಚನ್ನಾಗಿ ಲಕ್ಷದಲ್ಲಿಟ್ಟು ವರ್ತಿಸಿದರೆ, ಕ್ಷೇಮವಾಗುವದು.

***

ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರ ತನ್ನ ಮರಿ.

ಮುಲ್ಕಿ ಪರೀಕ್ಷೆಗೆ ಈ ತನಕ ಅಲ್ಲಿಯ ಪರೀಕ್ಷೆಯ ಕಮಿಟಿಯವರು ಉತ್ತರ ಬರೆಯುವ ಕಾಗದಗಳನ್ನು ಪೂರೈಸುತ್ತಿದ್ದರು. ಈ ವರುಷ ಎಜ್ಯುಕೇಶನಲ್ ಇನ್ಸಪೆಕ್ಟರರಾದ ಮಿ| ಶಾಸ್ತ್ರಿ ಸಾಹೇಬರು ತಮ್ಮ ಭಾಗದೊಳಗಿನ ಜಿಲ್ಲೆಗಳಲ್ಲಿ ಉತ್ತರ ಬರೆಯುವ ಕಾಗದಗಳನ್ನು ತಾವೇ ಪೂರೈಸುವಂಥವರಾದರು. ಧಾರವಾಡ, ಬೆಳಗಾವಿ, ವಿಜಾಪುರ ಮತ್ತು ಕಾರವಾರ ಗಳೊಳಗಿನ ಕೆಲವು ಮುದ್ರಣಾಲಯಗಳಿಗೆ ಟೆಂಡರು ಕಳಿಸಬೇಕಿದ್ದರು. ಜೊತೆಗೆ ಉತ್ತರ ಬರೆಯುವ ಕಾಗದಗಳನ್ನು ಕಳಿಸಿದ್ದರಂತೆ. ಟೆಂಡರು ಬಂದ ಬಳಿಕ, ಕಾರವಾರದ "ಮಹಮ್ಮಡನ್ ಪ್ರಿಂಟಿಂಗ ಪ್ರೆಸ್ಸಿ"ನ ಮಿ| ಶೇಕ ಅಹಮದ್ ಸಾಹೇಬರ ಟೆಂಡರು ಮಿ| ಶಾಸ್ತ್ರಿಯವರಿಗೆ ಮಾನ್ಯವಾಯಿತು. ಆ ಟೆಂಡರಿನಂತೆ ಉತ್ತರ ಬರೆಯುವ ಕಾಗದಗಳು ಧಾರವಾಡ, ಬೆಳಗಾವಿ, ವಿಜಾಪುರ, ಕಾರವಾರಗಳಲ್ಲಿ ಕಳಿಸೋಣಾದವು. ಪರೀಕ್ಷೆಯ ಸಮಯ ವಿದ್ಯಾರ್ಥಿಗಳು ಬರೆಯಲಿಕ್ಕೆ ಹೋದರೆ, ಒಂದು ಮಗ್ಗಲಿಗೆ ಬರೆದರೆ, ಎರಡನೇ ಮಗ್ಗಲಿಗೆ ಒಡೆದು ಹೋಗುತ್ತಿತ್ತು. ಅದರಿಂದ ವಿದ್ಯಾರ್ಥಿಗಳಿಗೆ ಬಲು ಉಪದ್ರವವಾಯಿತು. 'ವಿಜಯ' ಮುದ್ರಣಾಲಯಕ್ಕೆ ಟೆಂಡರು ಕಳಿಸಲು ಇನ್ಸಪೆಕ್ಟರರ ಕಡೆಯಿಂದ ಬರೆದುಹೋಗಿತ್ತು. ಆ ಟೆಂಡರಿನ ಜೊತೆಗೆ ಕಳಿಸಿದ ಕಾಗದವನ್ನೂ, ಉತ್ತರ ಬರಕೊಟ್ಟ ಕಾಗದವನ್ನೂ ತುಲನೆ ಮಾಡಿದರೆ, ತಾಕದಲ್ಲಿ ೧೦ ಬಗೆ ೨ ರತ್ತಲಿನ ಅಂತರ ಬರುತ್ತದೆಂದು "ವಿಜಯ"ಕಾರರು ಬರೆಯುತ್ತಾರೆ. ಮುಸಲ್ಮಾನ ಮುದ್ರಣಾಲಯದ ಟೆಂಡರನ್ನೇ ಮಿ| ಶಾಸ್ತ್ರಿಯವರು ಮಂಜೂರ ಮಾಡಿದ ಕಾರಣವೇನು? ಟೆಂಡರಿನಂತೆ ಕಾಗದ ಕಳಿಸಲ್ಪಟ್ಟಿತ್ತೇನು? ಕಾರವಾರದಿಂದ ಧಾರವಾಡ, ವಿಜಾಪುರ, ಬೆಳಗಾವಿಗಳ ತನಕ ಉತ್ತರ ಬರೆಯುವ ಕಾಗದಗಳನ್ನೊಯ್ಯಲು ಖರ್ಚು ಎಷ್ಟು ತಗಲಿತು? ಧಾರವಾಡ, ಬೆಳಗಾವಿ, ವಿಜಾಪುರಗಳೊಳಗಿನ ಮುದ್ರಣಾಲಯಗಳಿಗಿಂತ ಕಡಿಮೆ ದರ ಕೊಡಲು "ಮಹಮ್ಮಡನ್ ಪ್ರೆಸ್ಸಿ"ಗೆ ಹೇಗೆ ಪೂರೈಸಿತು ಎಂಬದೊಂದು ಪ್ರಶ್ನೆ. ಮಿ| ಶಾಸ್ತ್ರಿಯವರು ಇಷ್ಟು ಲಘುತ್ವವನ್ನೇಕೆ ಕೈಕೊಳ್ಳಬೇಕೆಂದು ತಿಳಿಯದು.

— ಗೋಮಾಂತಕದಲ್ಲಿ ಶುದ್ಧಿ ಹೊಂದಿದ ಹಿಂದುಗಳ ಸಂಖ್ಯೆಯು ೫ ಸಾವಿರಕ್ಕೆ ಮುಟ್ಟಿತು. ಪುಣೆಯಲ್ಲಿ ತಾ. ೨೯ನೇಗೆ ಶ್ರೀ| ಚಿತ್ರಾವ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ದೊಡ್ಡದೊಂದು ಸಭೆಯಾಯಿತು ಬ್ರಹ್ಮಚರ್ಯಾಶ್ರಮದ ಶ್ರೀ| ಕ್ಷೀರಸಾಗರರವರು ಶುದ್ಧಿ ಕಾರ್ಯಕ್ಕೆ ೧೦೦೦ ಸ್ವಯಂಸೇವಕರು ಬೇಕೆಂದು ಮಹಾರಾಷ್ಟ್ರಕ್ಕೆ ಬೇಡಿದ್ದಾರೆ ಸಭೆಯಲ್ಲಿ ಶುದ್ಧ ಹೊಂದಿದ ಡಾ| ಸಂತು ನಾರವೇಕರ ಹಾಗು ಶಂಕಳೇಕರರವರು ಭಾಷಣ ಮಾಡಿ ಅತ್ಯಂತ ಸಂತೋಷದಿಂದ ತಾವು ಹಿಂದು ಆಗಿದ್ದೇವೆಂದರು

— ಕಾನಪುರ ಮುನಿಸಿಪಾಲಿಟಿಯ ಮೇಲ ರಾಷ್ಟ್ರಧ್ವಜವನ್ನು ಹಚ್ಚಬೇಕೆಂದು ಮುನಿಸಿಪಾಲಿಟಿಯ ಠರಾವ ವಾಗಿದೆ. ಅನುಕರಣೀಯ'

ನೋಟೀಸು.

ಹೊನ್ನಾವರ ತಾಲೂಕ ಹವ್ಯಕ ಕೋಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾ ಸಭೆಯು ಇದೇ ಬರುವ ಮೇ ತಿಂಗಳ ತಾರೀಕು ೬ ನೇ ರವಿವಾರ ಮಧ್ಯಾಹ್ನ ೨ ಘಂಟೆಗೆ ಕಸಬಾ ಶ್ರೀ ಶಾರದಾಅಮ್ಮನವರ ದೇವಸ್ಥಾನದಲ್ಲಿ ಸೇರುವದು. ಬ್ಯಾಂಕಿನ ಎಲ್ಲಾ ಮೆಂಬರರು ಈ ಸಭೆಗೆ ಅಗತ್ಯ ಬರಬೇಕಾಗಿ ವಿನಂತಿ.

ಸಭೆಯಲ್ಲಿ ತರತಕ್ಕ ಠರಾವ ಯಾ ಸೂಚನೆಗಳನ್ನು ಸಭೆ ಸೇರುವ ೮ ದಿವಸ ಮುಂಚೆ ಸೆಕ್ರೆಟರಿ ಕಡೆ ಲೇಖಿಯಿಂದ ತಿಳಿಸಬೇಕು. ಚರ್ಚಿಸತಕ್ಕ ವಿಷಯ ವಗೈರೆಗಳ ಮಾಹಿತಿ ಬೇಕಿದ್ದರೆ ಆಫೀಸಿನಿಂದ ತಿಳಕೊಳ್ಳತಕ್ಕದ್ದು

ಹೊನ್ನಾವರ,
12-4-1928

ಎಂ. ಡಿ. ಕೆಕ್ರೆ,
ಹೊನ್ನಾವರ.
ಅಧ್ಯಕ್ಷ.

ಮಂಗಳೂರ ತಂಬಾಕಿನ ತಾಜಾ ನಶ್ಯ! ಸುಲಭ ಕ್ರಯ!!
೪೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿ ಹೊಂದಿದ
ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ ಮೋಸಹೋಗಬೇಡಿರಿ!!

ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ.೧ ನೇ ನಶ್ಯದ ಪುಡಿ ೪೪ ತೊಲೆ ಶೇರು ೧ರ ರೂ.೧|
ನಂ. ೨ ನೇ ೧-೨-೦
ನಂ. ೩ ನೇ ೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ— ನಮ್ಮ ನಶ್ಯದ ಉತ್ಕೃಷ್ಟತೆಯ ಬಗ್ಗೆ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟು ಗಳು ದೊರಕಿವೆ.

ವಿಳಾಸ:- ಪುಂಡ್ಲೀಕ ನಾಗೆ ಪೈ,
ಪೋಸ್ಟ- ಹೊನ್ನಾವರ, (ಉತ್ತರ ಕನ್ನಡ)

ಕಾನಡಾ ವೃತ್ತ.

ಮಿತಿ ವಿಭವ ಸಂ। ಚೈತ್ರ ಬ॥ ೧೧ ೬, ಸೋಮವಾರ

ಹೊಲಗಳ ಪುನರ್ಘಟನೆ

(ಪ್ರಾಸ್ತಾವಿಕ)

ನಮ್ಮ ಬ್ರಿಟಿಶ ರಾಜ್ಯಕರ್ತರು ಬೇಸಾಯಗಾರರ ಹಿತಕ್ಕಾಗಿ ಯಾವಾಗಲೂ ತತ್ಪರರು. ಬೇಸಾಯಗಾರರ ಹಿತಕ್ಕಾಗಿ ರೈತವಾರಿ ಪದ್ಧತಿಯನ್ನು ನಿರ್ಮಿಸಿ ಅದಕ್ಕಾಗಿ ಲೆಂಡ ರೆವ್ಹಿನ್ಯೂ ಕೋಡ ಎಂಬ ಹೊಸ ಕಾನೂನನ್ನು ನಿರ್ಮಿಸಿದರು. ತೀರ್ವೆ ಹೇರಿಕೆಯ ಕ್ರಮ, ತೀರ್ವೆ ವಸೂಲಿಯ ಕ್ರಮ, ಮುಂತಾದ ಕ್ರಮಗಳನ್ನು ಘಟಿಸಿ ನೋಡಿದರು ಬೇಸಾಯಗಾರರ ಹಿತವು ಅಷ್ಟೊಂದು ಸಾಧಿಸಲಿಲ್ಲ. ರೈತರಿಗೆ ಸಾಲದಿಂದ ವಿಮೋಚನ ಮಾಡಲಿಕ್ಕೂ, ಸಾವುಕಾರರ ಬಾಯಿಯಿಂದ ತಪ್ಪಿಸಲಿಕ್ಕೂ ರೈತ ಕಾಯಿದೆಯನ್ನೇರ್ಪಡಿಸಿದರು. ಅದರಿಂದಲೂ ಬೇಸಾಯಗಾರರ ಹಿತವಾಗಲಿಲ್ಲ. ಬೇಸಾಯ ಕಾಲೇಜಿನ ಸ್ಥಾಪನೆಯಾಯಿತು. ಬೇಸಾಯ ಪ್ರದರ್ಶನಗಳು ಸೇರಿಸೋಣಾದವು, ಬೇಸಾಯ ಪ್ರಯೋಗ ಹೊಲಗಳು ಸ್ಥಾಪಿಸಲ್ಪಟ್ಟವು. ಬೇಸಾಯಗಾರರ ಹಿತಕ್ಕಾಗಿ, ಬೇಸಾಯ ಸಾಹಿತ್ಯಗಳನ್ನು ಪೂರೈಸಿಕೊಳ್ಳಲು ದ್ರವ್ಯಾನುಕೂಲತೆ ಮಾಡಿಕೊಳ್ಳುವದಕ್ಕಾಗಿ ಪರಸ್ಪರ ಸಹಕಾರದ ಪರಸ್ಪರ ದ್ರವ್ಯಪ್ರಾಪ್ತಿಯ ಕಲ್ಪನೆಯೂ ಹೊರಬಿತ್ತು. ಈ ಎಲ್ಲ ವ್ಯಾಪಾರಗಳೂ ನಡೆದವು. ಆದರೆ, ಯಾವುದರಿಂದಲೂ ಬೇಸಾಯಗಾರರ ಉದ್ಧಾರವಾಗದು. ಲೆಂಡ ರೆವ್ಹಿನ್ಯೂ ಕೋಡಿನ ತೀರ್ವೆಯ ಕ್ರಮದಿಂದ ಬೇಸಾಯಗಾರರು ಸೋತುಹೋದರು. ತೀರ್ವೆಯ ವ್ಯಾಧಿ ಬಂದೊಡನೆ ಉಣ್ಣಲಿಕ್ಕಿಟ್ಟದ್ದ ಕಾಳು-ಕಡಿಗಳನ್ನು ಸಹ ತೆಗೆದು ಮಾರಾಟ ಮಾಡುವ ಭಯಂಕರ ಪ್ರಸಂಗ ಬರುತ್ತದೆ. ರೈತ ಕಾನೂನಿನಿಂದ ರೈತರು ಚಿತ್ತಗೇಡಾಗಿ ನಷ್ಟ ಹೊಂದಿದರು. ಸಾವುಕಾರರು ರೈತರಿಗೆ ಹೊಸ ಹೊಸ ಯುಕ್ತಿ-ಪ್ರಯುಕ್ತಿಗಳಿಂದ ಪೀಡಿಸಹತ್ತಿದರು. ರೈತರಿಗಾದರೂ ಕೋರ್ಟುಗಳ ಮಹಿಮೆಯು ಮಿಗಿಲಾಗಿ, ಅವರು ವ್ಯವಹಾರಗಳಲ್ಲಿ ಸಿಲುಕಿ ದಿಙ್ಮೂಢರಾದರು. ಈಗ ರೈತ ಕಾನೂನನ್ನು ರದ್ದುಪಡಿಸುವ ಆಲೋಚನೆ ನಡೆದಿರುವದಾಗಿ ತಿಳಿದುಬರುತ್ತದೆ. ಪರಸ್ಪರ ಸಹಕಾರದ ಪರಸ್ಪರ ದ್ರವ್ಯಪ್ರಾಪ್ತಿಯಿಂದ ಬೇಸಾಯಗಾರರಿಗೆ ಉಂಟಾದ ಲಾಭವನ್ನು ನಾವು ಹೇಳುವ ಮುಂಚೆಯೇ ಬೇಸಾಯಗಾರರು ತಿಳಿದುಕೊಂಡಿದ್ದಾರೆ. ಪರಸ್ಪರ ಸಹಕಾರದಿಂದ ಬೇಸಾಯಗಾರರಿಗೆ ಲಾಭವಿಲ್ಲೆಂದು ಅಲ್ಲಲ್ಲಿ ಸರಕಾರದವರಾಗಿ ನೇಮಿಸಲ್ಪಟ್ಟ ಚೌಕಶಿ ಮಂಡಳಗಳೇ ಹೇಳತೊಡಗಿವೆ. ಸಾವುಕಾರರಿಗೆ ಮಾತ್ರ ಈ ಸಂಘಗಳಲ್ಲಿ ತಮ್ಮ ಹಣವನ್ನಿಡಲು ಭದ್ರತೆಯೊಂದು ದೊರತಿ ಅವರ ಹಣಕ್ಕೆ ಬಡ್ಡಿಗೂ ಸುರಕ್ಷಿತತೆಯುಂಟಾಯಿತು. ಗ್ರಾಮಗಳು ಸಾಲಗಳಲ್ಲಿ ಕ್ರಮವಾಗಿ ಮುಳುಗಹತ್ತಿವೆ. ಬೇಸಾಯ ಕಾಲೇಜುಗಳಲ್ಲಿ ಕಲಿತ ವಿದ್ಯಾರ್ಥಿಗಳು ಕೃಷಿಸಂಪತ್ತಿನಿಂದ ಅನುಗ್ರಹಿಸಲ್ಪಟ್ಟ ಗ್ರಾಮಾಂತರದೊಳಗಿನ ಬಂಜರು ಭೂಮಿಗಳನ್ನು ಉದ್ಧರಿಸುವ ಬೇಸಾಯಗಾರರ ಕಷ್ಟಗಳನ್ನು ಕೈಕೊಳ್ಳದೆ ಇತರ ಸುಶಿಕ್ಷಿತ(!)ರಂತೆ ಸರಕಾರದ ನೌಕರಿಯನ್ನೇ ಕಾಂಕ್ಷಿಸಹತ್ತಿದ್ದಾರೆ. ಇವರಿಗಾಗಿ ಹೊಸ ಹೊಸ ಅಧಿಕಾರಸ್ಥಾನಗಳು ನಿರ್ಮಾಣ ಹೊಂದುತ್ತಲಿವೆ. ಬೇಸಾಯ ಪ್ರಯೋಗ ಹೊಲಗಳಿಂದ ಉಂಟಾದ ಪ್ರಯೋಜನವನ್ನು ಹೇಳಬರುವದಿಲ್ಲ. ಪ್ರಯೋಗ ಹೊಲಗಳ ಸರಂಜಾಮೂ ಅಲ್ಲಿಯ ಟಾಪಟೀಪೂ, ಆ ಹೊಲದೊಳಗಿನ ಖರ್ಚಿನ ಮಾನವೂ ಸಾಗುವಳಿಯ ಪ್ರಕಾರವೂ ನೋಡಿದರೆ, ಕಣ್ಣಿಗೆ ಕತ್ತಲೆ ಬರುತ್ತದೆ. ಈ ಪ್ರಕಾರದಿಂದ ಹೊಲಗಳನ್ನು ಸಾಮಾನ್ಯ ಬೇಸಾಯಗಾರರು ಸಾಗುವಳಿ ಮಾಡಹತ್ತಿದರೆ, ಕುಬೇರನ ಸಂಪತ್ತು ಕೂಡ ಸಾಲದಾಗಿ ಆತನು ಸಾಲ ಹುಡುಕಲು ದೇವಲೋಕದಲ್ಲಿ ಪರಸ್ಪರ ಸಹಕಾರ ಸಂಘವನ್ನು ನಿರ್ಮಾಣ ಮಾಡಲು, ಇಂದ್ರಾದಿದೇವತೆಗಳಿಗೆ ಮೊರೆ ಇಡಬೇಕಾಗುವದು. ಬೇಸಾಯ ಪ್ರಯೋಗ ಹೊಲದಲ್ಲಿ ಬೇಸಾಯಗಾರರ ಜೀವನಕ್ರಮಕ್ಕೆ ಪ್ರಯೋಗಗಳು ನಡೆಯುವದಿಲ್ಲ. ಸರಕಾರಿ ಕೋಶದಿಂದ ಹಣ ತಂದು ಪ್ರಯೋಗ ಹೊಲಗಳಲ್ಲಿ ವಿಪರೀತವಾಗಿ ಖರ್ಚು ಮುಟ್ಟಿಸಿ ಬೆಳೆಗಳನ್ನೇರ್ಪಡಿಸುತ್ತಾರೆ. ಆ ಬೆಳೆಗಳಿಗೂ, ಆ ಬೆಳೆಯ ಸರಂಜಾಮುಗಳಿಗೂ, ಹುಟ್ಟುವಳಿಗೂ ಬಾಯಿಗೂಡಿ ಬಂದದ್ದೇ ಇಲ್ಲ. ಅಷ್ಟು ವಿಪರೀತವಾಗಿ ಪ್ರಯೋಗಗಳು ಸಾಗಿವೆ. ಈ ಪ್ರಯೋಗಗಳನ್ನು ನೋಡಿ ಬಡ ಬೇಸಾಯಗಾರರಿಗೆ ಪ್ರಯೋಜನವೇನಿದೆ. ಪ್ರದರ್ಶನಗಳ ಹಾಡಾದರೂ ಇದೇ. ಪರ್ಷಾಸನ ಬೇಸಾಯದ ದೊಡ್ಡ ದೊಡ್ಡ ಪ್ರದರ್ಶನಗಳು ಸೇರುತ್ತವೆ. ಪ್ರದರ್ಶನದಲ್ಲಿ ವಿಲಾಯತಿಯೊಳಗಿನ ದೊಡ್ಡ ದೊಡ್ಡ ನೇಗಿಲುಗಳನ್ನು ಕಾಣಬಹುದು, ಅವನ್ನೆಳೆಯಲು ಎತ್ತು-ಕೋಣಗಳಿಲ್ಲದಿದ್ದರೆ ಇಂಜಿನುಗಳನ್ನು ತರಿಸಿಕೊಳ್ಳಬಹುದಲ್ಲವೇ? ತರತರದ ಗೊಬ್ಬರಗಳನ್ನು ಕಾಣಬಹುದು. ಸೊಪ್ಪಿನ ಗೊಬ್ಬರ ಸಾಕಲಾಗದಿದ್ದರೆ ಗಾಡಿ-ಮುಟ್ಟಗಳಿಂದ ಹೊಲಲಾಗದಿದ್ದರೆ, ಅಥವಾ ಅದು ಶಿಗದಿದ್ದರೆ— ಗೋವಧದಿಂದ ಗೊಬ್ಬರ ಶಿಗುವದು ದುರ್ಲಭವಾಗಿದೆ.— ಎಲುಬಿನ ಗೊಬ್ಬರ ಹಾಕಬಹುದು, ಅದು ವಿಲಾಯತಿಯಲ್ಲಿ ಶಿಗುತ್ತದೆ. ಕೂಕ ಮಾಡಿ ಹಾಕುವದು. ಇಷ್ಟೆಲ್ಲ ಅನುಕೂಲತೆಗಳು ಬೇಸಾಯ ಪ್ರದರ್ಶನದಲ್ಲಿ ತೋರಿಸಿಕೊಟ್ಟು ಅವುಗಳಿಂದ ಹುಟ್ಟುವಳಿಯಾದ ಬೆಳೆಗಳನ್ನೂ ತೋರಿಸುತ್ತಾರೆ. ಆ ಬೆಳೆಗಳನ್ನು ನೋಡಿ ಬಡ ಬೇಸಾಯಗಾರರಿಗೆ ಫಲ ಶಿಗಬಹುದೇ? ಎಲುಬಿನ ಗೊಬ್ಬರ ಹಾಕಹೋದರೆ, ಅವರ ಎಲುಬು ಸವಿದುಹೋಗುವವು. ಇಂಜಿನೂ, ನೇಗಿಲೂ ತರಹೋದರೆ ಬೇಸಾಯ ಮಾಡುವ ಹೊಲಗಳನ್ನು ಮೊಟ್ಟಮೊದಲು ಮಾರಬೇಕಾಗುವವು. ಗೋವಧವನ್ನು ನಿಲ್ಲಿಸುವ ಗೊಡವೆಗೆ ನಮ್ಮ ರಾಜ್ಯಾಧಿಕಾರಿಗಳು ಹೋಗುವದಿಲ್ಲ. ಗೋಧನದಿಂದಲೇ ಬೇಸಾಯ ಸಂಪತ್ತಿಯು ಪುರಾತನ ಕಾಲದಲ್ಲಿ ವೈಭವ ಶಿಖರವನ್ನೇರಿತ್ತು. ಇದೆಲ್ಲ ಈ ತನಕ ರಾಜ್ಯಾಧಿಕಾರಿಗಳು ಬೇಸಾಯಗಾರರ ಕಲ್ಯಾಣಕ್ಕಾಗಿ ನಡಿಸಿದ ಯೋಜನೆಗಳ ಸ್ಥೂಲ ಸ್ವರೂಪವಾಯಿತು. ಹೊಸ ಯೋಜನೆಯೊಂದು ಕಲ್ಪಿಸಲ್ಪಡಲಿಕ್ಕಿದೆ. ಆ ಯೋಜನೆಯ ಸ್ವರೂಪವನ್ನು ನಾವು ವಿಸ್ತಾರವಾಗಿ ಚರ್ಚಿಸಬಯಸಿದ್ದೇವೆ. ಈ ಯೋಜನೆಯ ಕಕ್ಷೆಯಲ್ಲಿ ನಮ್ಮ ಬಡ ಉತ್ತರ ಕನ್ನಡ ಜಿಲ್ಲೆಯೂ ಸೇರಲಿಕ್ಕಿದೆ. ಸಾಮಾನ್ಯ ಬೇಸಾಯಗಾರರಿಗೆ ಈ ಯೋಜನೆಯಿಂದ ಕಷ್ಟ-ನಷ್ಟವಾಗುವ ಭೀತಿಯಿದೆ. ಇದರಿಂದ ಬೇಸಾಯಗಾರರು ಹೊಸ ಕಾನೂನನ್ನು ಚನ್ನಾಗಿ ಪರಾಂಬರಿಸಿ ತಮ್ಮ ತಮ್ಮ ಗ್ರಾಮದ ಅಭಿಪ್ರಾಯವನ್ನು ಸರಕಾರಕ್ಕೆ ಮುಂಚಿತವಾಗಿಯೇ ತಿಳಿಸಬೇಕಾಗಿ ಸೂಚನೆ ಇದೆ.

ಹೊಸ ಕಾನೂನಿನ ಹೆಸರು "ಸ್ಮಾಲ ಹೋಲ್ಡಿಂಗ್ಸ ಬಿಲ್ಲ" ಎಂದು. "ಸ್ಮಾಲ ಹೋಲ್ಡಿಂಗ್ಸ" ಅಂದರೆ, ಚಿಕ್ಕ ಹೊಲಗಳು. ಚಿಕ್ಕ ಚಿಕ್ಕ ಹೊಲಗಳಿಂದ ಬೇಸಾಯ ಮಾಡಲು ಅನುಕೂಲವಾಗುವದಿಲ್ಲವಾಗಿಯೂ, ಬೇಸಾಯಗಾರರಿಗೆ ಕ್ರಮಕ್ಕೆ ತಕ್ಕ ಫಲಪ್ರಾಪ್ತಿಯಾಗುವದಿಲ್ಲವಾಗಿಯೂ, ನೂತನ ಸಂಶೋಧನಗಳ ಪ್ರಯೋಗ ಮಾಡಲು ಅನಾನುಕೂಲವಾಗಿರುವದಾಗಿಯೂ ಸರಕಾರದ ಅಭಿಪ್ರಾಯವಾಗಿ ಚಿಕ್ಕಪುಟ್ಟ ಹೊಲಗಳನ್ನು ಪುನರ್ಘಟಿಸಿ ಅವುಗಳಿಂದ ಕ್ರಮಕ್ಕೆ ತಕ್ಕ ಯಾ ಅದಕ್ಕೂ ಮಿಕ್ಕಿ ಫಲಪ್ರಾಪ್ತಿಮಾಡಿಕೊಳ್ಳಲು ಅನುಕೂಲವಾಗುವಷ್ಟು ಕ್ಷೇತ್ರವನ್ನು ಕಾನೂನಿನಿಂದ ನಿಶ್ಚಯಿಸಿ, ಅಷ್ಟು ಕ್ಷೇತ್ರದಿಂದ ಹೊಲಗಳನ್ನು ಬಟ್ಟು ಮಾಡಿ ಅವುಗಳ ಒಡೆಯತನವನ್ನು ಕಾನೂನಿನಂತೆ ನಿಶ್ಚಯಿಸಿ ಕೊಡಬೇಕಾಗಿಯೂ ಸರಕಾರದ ಯೋಜನೆಯಾಗಿದೆ. ಈ ಕಾನೂನು ಈ ಮುಂದೆ ಕಾಯಿದೆ ಕೌನ್ಸಿಲಿನಲ್ಲಿ ಸವಿಸ್ತರವಾಗಿ ಚರ್ಚಿಸಲ್ಪಡುವದು. ಈ ಕಾರಿಕು ಪುಣೆಯ ಶ್ರೀ। ವಿನಾಯಕ ಗಣೇಶ ಕಿಬೆಯವರು ವಿಸ್ತೃತ ವಿವೇಚನದ ಒಂದು ಗ್ರಂಥವನ್ನು ಮುಂಬಯಿಯಿಂದ

ಪ್ರಕಟಿಸಿದ್ದಾರೆ. ಅದಕ್ಕುತ್ತರವಾಗಿ ಮುಂಬಯಿ ಸರಕಾರದ ಸೆಟ್ಲಮೆಂಟ ಕಮೀಶನರರಾದ ಮಿ| ಎಂಡರಸನ್‌ರವರು ಉತ್ತರ ಬರೆದಿದ್ದಾರೆ. ಆ ಉತ್ತರಕ್ಕೆ ಶ್ರೀ| ವಿನಾಯಕ ಗಣೇಶ ತಿಪ್ಪೇಯವರು ಸಮರ್ಪಕವಾದ ಉತ್ತರವನ್ನೂ ಪ್ರಕಟಿಸಿದ್ದಾರೆ. ಈ ಮೂರು ಪುಸ್ತಕಗಳು ನಮ್ಮ ಕಡೆ ಅಭಿಪ್ರಾಯದ ಬಗ್ಗೆ ಬಂದಿರುವವು. ಕಾನೂನಿನೊಳಗಿನ ವಿಷಯವು ಬೇಸಾಯಗಾರರ ಜೀವನಾಧಾರಕ್ಕೆ ಸಂಬಂಧಪಟ್ಟಿದ್ದರಿಂದ ಈ ವಿಷಯವನ್ನು ನಾವು ವಿಸ್ತಾರವಾಗಿ ಚರ್ಚಿಸಬಯಸಿದ್ದೇವೆ. ಸಾಧಕ-ಬಾಧಕ ಪ್ರಮಾಣಗಳುಳ್ಳ ಮೂರೂ ಪುಸ್ತಕಗಳು ನಮ್ಮ ಕೈಸೇರಿದ್ದರಿಂದ ಈ ಕಾನೂನಿನ ಗುಣದೋಷಗಳನ್ನು ಗ್ರಹಿಸಲು ಅತ್ಯಂತ ಅನುಕೂಲವಾಗಿರುವದು. ಶ್ರೀ| ವಿನಾಯಕ ಗಣೇಶ ತಿಪ್ಪೇಯವರು ತಮ್ಮ ವಿಸ್ತೃತ ವಿವೇಚನವನ್ನು ಪರಿಶ್ರಮಪೂರ್ವಕವಾಗಿ ತಯಾರಿಸಿದ್ದರಿಂದ ಮಿ| ಎಂಡರಸನ್‌ರವರಿಗೆ ಸರಕಾರದ ಪರವಾಗಿ ಕೈಫಿಯತನ್ನು ಪ್ರಕಟಿಸಬೇಕಾಯಿತು. ನಾವು ಈ ಮುಂದೆ ಕಾನೂನಿನ ಸ್ಥೂಲ ಸ್ವರೂಪವನ್ನೂ, ಅದರಿಂದೊದಗುವ ಅನರ್ಥವನ್ನೂ ಚರ್ಚಿಸಿ, ಸರಕಾರದ ಅಂಬೋಣವನ್ನೂ ಪ್ರಜೆಗಳ ಹೇಳಿಕೆಯನ್ನೂ ಹೇಳಿ, ಸರಕಾರದ ಉದ್ದೇಶ ಸಾಧ್ಯವಾಗಬೇಕಾದರೆ, ಕಾನೂನಿನಲ್ಲಿ ಕೈಕೊಳ್ಳಬೇಕಾದ ತಿದ್ದುಪಡಿಗಳನ್ನೂ ಸೂಚಿಸುವೆವು. ಶ್ರೀ| ವಿನಾಯಕ ಗಣೇಶ ತಿಪ್ಪೇಯವರೊಡನೆ ಧುಳೆಯ ಶ್ರೀ| ಶಂಕರ ಶ್ರೀಕೃಷ್ಣ ದೇವರವರೂ ಬೇಸಾಯಗಾರರಿಗೆ ಎಚ್ಚರಿಕೆ ಕೊಡಲು ಅಜ್ಞಾಪಿಸಿದ್ದಾರೆ. ಈ ಕಾನೂನಿನಿಂದ ಬೇಸಾಯಗಾರರಿಗೆ ಅಪರಿಮಿತವಾದ ಕೇಡು ಸಂಭವಿಸುವದೆಂದು ಶ್ರೀ ಶಂಕರರಾವ ದೇವರವರು ವಿಚಾರಪೂರ್ವಕವಾಗಿ ಅಭಿಪ್ರಾಯಪಟ್ಟಿದ್ದಾರೆ. ಶ್ರೀ| ಶಂಕರರಾವ ದೇವರವರ ಪರಿಚಯವು ನಮ್ಮ ಜಿಲ್ಲೆಯವರಿಗುಂಟು. ಹಂಗಲ ದೂರುಗಳ ಚೌಕಶಿ ಮಂಡಳದಲ್ಲಿ ಅವರು ಸಭಾಸದರಿದ್ದು ನಮ್ಮ ಕನ್ನಡ ಜಿಲ್ಲೆಗೆ ಚಿಕಿತ್ಸಿಸಿದ್ದರು; ಸಮರ್ಥ ಶ್ರೀ ರಾಮದಾಸರ ಅನನ್ಯ ಭಕ್ತರು; ಮಹಾತ್ಮರ ಏಕನಿಷ್ಠ ಭಕ್ತರು; ಮಹಾರಾಷ್ಟ್ರ ಖಾದಿ ಸೇವಾ ಸಂಘದ ವಿದ್ಯಮಾನ ಶ್ರೀ| ಶಂಕರರಾಯರವರು ಖಾದಿ ಪ್ರಸಾರಕ್ಕಾಗಿ ಗ್ರಾಮಾಂತರಗಳಲ್ಲಿ ಸಂಚರಿಸುತ್ತಿದ್ದಾರೆ. ಇಷ್ಟು ಬೇಸಾಯಗಾರರ ಸ್ಥಿತಿಯನ್ನು ಬಲ್ಲವರು ಕಾನೂನನ್ನು ಸೂಕ್ಷ್ಮವಾಗಿ ಪರಾಂಬರಿಸಿ ಮಾಡಿದ ಉಪದೇಶವದು. ಬೇಸಾಯಗಾರರ ಜೀವನಾಧಾರವನ್ನೇ ಈ ಕಾನೂನು ಬಿನ್ನಿಲೇ ಕುಂದರಿಸುವದೆಂದು ಶ್ರೀ| ದೇವರವರು ಅಭಿಪ್ರಾಯಪಡುವದರಿಂದ ಗ್ರಾಮದವರೂ ಈ ವಿಷಯ ಈಗಿನಿಂದಲೇ ಮುಂಜಾಗ್ರತೆ ವಹಿಸಬೇಕಾಗಿ ನಾವು ಪ್ರಾಸ್ತಾವಿಕ ಸೂಚನೆ ಮಾಡಿ ಈ ಲೇಖವನ್ನು ಇಂದಿಗೆ ಮುಗಿಸುವೆವು.

ಸ್ಫುಟ ಸೂಚನೆಗಳು.

೧ ಪಿಮಣಿ ಎಣ್ಣೆಯ ಮೇಲಿನ ಸರಕಾರಿ ಕೃಪಾಕಟಾಕ್ಷವು ವಿಪರೀತವಾಯಿತು. ಟಾರಿಫ್ ಬೋರ್ಡ ಯಾನೆ ಸ್ವದೇಶಿ ಕೈಗಾರಿಕೆಗಳಿಗೆ ಆಶ್ರಯ ಕೊಡಲು ನೇಮಿಸಿದ ಮಂಡಳಕ್ಕೆ ಸರಕಾರವು ಪಿಮಣಿ ಎಣ್ಣೆಯ ವಿಷಯವನ್ನು ಮುಂದಾಗಿ ಆಲೋಚಿಸಬೇಕೆಂದು ಒತ್ತಾಯ ಮಾಡಿದೆ. ಈ ಮಂಡಳವು ಮುಂಬಯಿಯಲ್ಲಿ ಒತ್ತಟ್ಟಿಗೆ ಸೇರಿ ಆಲೋಚನೆ ಮಾಡುತ್ತಿತ್ತು. ಕೂಡಲೆ, ಬ್ರಹ್ಮದೇಶಕ್ಕೆ ತೆರಳಬೇಕಾಗಿಯೂ, ಅಲ್ಲಿ ಕಂಪನಿಯವರ ಹೇಳಿಕೆಗಳನ್ನು ಇದೇ ತಾರೀಖಿನೊಳಗೆ ಅಂಗೀಕರಿಸಿ ಸರಕಾರಕ್ಕೆ ಮೇ ೧ನೇ ದರರೊಳಗೆ ಅವಶ್ಯವರದಿಯನ್ನು ಸಾದರಪಡಿಸಬೇಕಾಗಿಯೂ ವಿಧಿಸಲಾಗಿದೆ. ಬೋರ್ಡಿನ ಅಧ್ಯಕ್ಷರಾದ ಸರ್ ಜಿನವಾಲಾರವರು ಸರಕಾರದ ಗಾಬರಿಯನ್ನು ನಿಷೇಧಿಸಿದ್ದಾರಂತೆ. ತಮ್ಮ ವಿಚಾರ ಕಾರ್ಯಕ್ರಮವನ್ನು ಥಟ್ಟನೆ ಹಿಂದುಸ್ಥಾನ ಸರಕಾರವು ಬದಲಿಸಿರುವದಾಗಿಯೂ, ಪಿಮಣಿ ಎಣ್ಣೆಯ ವಿಷಯವನ್ನು ಮುಂದಾಗಿ ಆಲೋಚಿಸುವದು ಪ್ರಶಸ್ತವಲ್ಲವಾಗಿಯೂ ನಿಷೇಧಿಸಿದ್ದಾರಾಗಿ ತಿಳಿಯುತ್ತದೆ. ಇಷ್ಟಾಗಿ, ಬ್ರಹ್ಮದೇಶದ "ಬರ್ಮಾ ಆಯಿಲ್ ಕಂಪನಿ"ಯು ಸರಕಾರದ ಕಡೆ ಇನ್ನೂ ತನಗೆ ಸಂರಕ್ಷಣೆಯನ್ನೀಯಲು ಪ್ರಾರ್ಥಿಸಿಕೊಂಡಿಲ್ಲ. ಯಾಕಂದರೆ, ಪಿಮಣಿ ಎಣ್ಣೆಯ ಮೂಲ ಬೆಲೆಯ ಗೌಪ್ಯಸ್ಫೋಟ ಮಾಡಲು ಅವರು ಸಿದ್ಧರಿಲ್ಲ. ಈ ಮಾಹಿತಿಯು ಗುಪ್ತವಾಗಿ ಇಡಲ್ಪಡಬೇಕಾಗಿ ಸರಕಾರವು ವಿಧಿಸಿದರೂ, ಈ ಕಂಪನಿಯವರು ಗೌಪ್ಯಸ್ಫೋಟ ಮಾಡಲು ತಯಾರಿಲ್ಲ. ಹಿಂದುಸ್ಥಾನ ದೇಶವೆಲ್ಲ ತಯಾರಾಗುವ ಶೇಕಡಾ ಐದರಷ್ಟು ಎಣ್ಣೆಯನ್ನು ಈ ಕಂಪನಿಯವರೇ ಪೂರೈಸುತ್ತಾರೆ. ಇವರಿಗೇ ಸಂರಕ್ಷಣೆ ಬೇಡವಾದ ಬಳಿಕ, ಸರಕಾರವು ಒತ್ತಾಯ ಮಾಡುವದೇಕೆ? ಲಾಭ-ನಷ್ಟಗಳಿಗೆ ಆ ಕಂಪನಿಯವರು ಹೊಣೆಗಾರರಿದ್ದಾರೆ. ಇಷ್ಟಾಗಿ, ಕಂಪನಿಗೆ ನಷ್ಟವಿಲ್ಲ. ೧೯೦೫ನೇ ಇಸ್ವಿಯಲ್ಲಿ ೧೦೦ ರೂಪಾಯಿ ಕೊಟ್ಟು ಕೊಂಡ ೧ ಶೇರಿನ ಭಾಂಡವಲು ಈಗ ೪೦೦ಕ್ಕೆ ಮಿಕ್ಕಿದೆ. ಶೇರಿನ ದರವು ಈಗ ರೂ. ೧೮೦೦ ಆಗಿದೆ. ಮುನಾಫೆಯಾದರೋ ೧ ಶೇರಿಗೆ ೧೨॥ ರೂಪಾಯಿ ಸಿಗುತ್ತದೆ. ಅಂದರೆ, ೧೦೦ ರೂಪಾಯಿಗಳಿಗೆ ೧೨॥ ರೂಪಾಯಿ ಲಾಭ ಸಿಗುತ್ತದೆಂದು ಸ್ಪಷ್ಟವಾಯಿತು. ಹೀಗೆ ಲಾಭ ಸಿಗುತ್ತಿರುವಾಗ, ಎಣ್ಣೆಯ ದರವು ಅಮೇರಿಕೆಯ "ಸ್ಟ್ಯಾಂಡರ್ಡ ಆಯಿಲ್ ಕಂಪನಿ"ಯ ಮೇಲಾಟದೊಡನೆ ಕೊಂಚ ಕುಗ್ಗಿದರೆ, ಕಂಪನಿಗೆ ನಷ್ಟವೆಲ್ಲಿದೆ? ಲಾಭದ ಮಾನವು ಕೆಲಮಟ್ಟಿಗೆ ಕುಗ್ಗಬಹುದು. ಆದರೆ, ಶೇಕಡಾ ೧೨॥ಯಂತೆ ಲಾಭವನ್ನು ಶಾಶ್ವತವಾಗಿ ಒದಗಿಸಿಕೊಡಲು ಹಿಂದುಸ್ಥಾನ ಸರಕಾರವು ಬದ್ಧವಿರುವದೇನು? ಬರ್ಮಾ ಆಯಿಲ್ ಕಂಪನಿಯು ಹಿಂದುಸ್ಥಾನ ಸರಕಾರದ ಬಳಿ ಅರಿಕೆ ಮಾಡಿಕೊಂಡಿರಲಿಲ್ಲವಾಗಿಯೂ, ಅಲ್ಲಿಯ ಚಿಕ್ಕಪುಟ್ಟ ಕಂಪನಿಗಳೇ ಹಿಂದುಸ್ಥಾನ ಸರಕಾರದ ಆಶ್ರಯ ಬೇಡಿದವಾಗಿಯೂ "ನಿಹಾರಿ"ಯ ರಂಗೂನಿನ ಚಿತ್ರಗುಪ್ತರು ಪ್ರಕಟಿಸುತ್ತಾರೆ. ಈ ಪ್ರಸಕ್ತಿಯಲ್ಲಿ ತಾನಾಗಿ ಸಂರಕ್ಷಣೆ ಕೊಡಲು ಸರಕಾರವು ಮುಂದಾಗಿ ಬಂದ ಕಾರಣವೇನು? ಬ್ರಹ್ಮದೇಶದೊಳಗಿನ ಪಿಮಣಿ ಎಣ್ಣೆಯ ಕಂಪನಿಗಳೆಲ್ಲ ಬ್ರಿಟಿಶ ಬಂಡುವಲುಗಾರರವೆಂದು ನಾವು ಈ ಮುಂಚೆಯೇ ಹೇಳಿದ್ದೇವೆ. ಈ ಸಾವುಕಾರರಿಗೆ ಮುನಾಫೆಯನ್ನು ಕಡಿಮೆ ಮಾಡಲು ಎಷ್ಟರಮಟ್ಟಿಗೂ ಒಪ್ಪಿಗೆಯಿಲ್ಲ. ಆದರಿಂದ ಹಿಂದುಸ್ಥಾನ ಸರಕಾರಕ್ಕೆ ದಾಕ್ಷಿಣ್ಯಕ್ಕೆ ಹಾಕಿ ಈ ಪ್ರೌಕತಿಯನ್ನು ಅವರು ಪ್ರೇರೇಪಿಸಿದ್ದಾರೆ. ಸ್ವಾರ್ಥಕ್ಕೆ ಸೀಮೆಯಿದೆಯೋ? ಆಶಾವಧಿಯನ್ನು ಕಂಡವರಾರು? ಅದಕ್ಕೆ, ಭಾರತೀಯರ ಕಲ್ಯಾಣದ ಪುರಾಣ ಹೇಳಿ, ಬ್ರಿಟಿಶ ಸಾವುಕಾರರು ಸ್ವಕಲ್ಯಾಣ ಸಾಧಿಸಿಕೊಳ್ಳುವದು ತೀರ ನಿಂದ್ಯವು. ಇಷ್ಟು ಹೇಳಿ, ಹಿಂದುಸ್ಥಾನ ಸರಕಾರದ ಈ ಕೃತ್ಯವನ್ನು ನಾವು ನಿಷೇಧಿಸುವೆವು.

---

೨. ಬೆಳಗಾವಿಯೊಳಗಿನ ಈಗಿನ ದೊಡ್ಡ ಹಳಹಳಿಯೆಂದರೆ, ಮರಾಠಿ ಸಾಹಿತ್ಯ ಸಮ್ಮೇಲನವನ್ನು ಮುಂದಿನ ವರುಷ ಅಲ್ಲಿ ಸೇರಿಸಲು ನಿಶ್ಚಯ ಮಾಡುವದಾಗಿದೆ. ನಮಗೆ ಈ ಪ್ರಯತ್ನದ ಅರ್ಥವೇ ಹೊಳೆಯದು. ಮರಾಠಿ ಸಾಹಿತ್ಯ ಸಮ್ಮೇಲನವು ಬೆಳಗಾವಿಯಲ್ಲಿ ಸೇರಿದೊಡನೆ ಬೆಳಗಾವಿಯು ಬೃಹನ್ಮಹಾರಾಷ್ಟ್ರದಲ್ಲಿ ಸೇರಿಹೋಗುತ್ತದೆಂದು ನಾವು ತಿಳಿಯುವದಿಲ್ಲ. ಕರ್ನಾಟಕ ಪ್ರಾಂತದ ರಾಜ್ಯವು ಬೇರೆ; ಮಹಾರಾಷ್ಟ್ರದ ರಾಜ್ಯವು ಬೇರೆ; ಹೀಗೇನು ಪ್ರಸಂಗವಿಲ್ಲ. ಸಾಹಿತ್ಯ ಸಮ್ಮೇಲನದ ಅಧಿವೇಶನದಿಂದ ರಾಜ್ಯಾಧಿಕಾರವು ನಷ್ಟವಾಗುತ್ತಿದ್ದರೆ, ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ಕರ್ನಾಟಕಸ್ಥರು ಪುಣೆಯಲ್ಲಿ ಸೇರಿಸಬಹುದಲ್ಲವೇ! ಅದಕ್ಕೆ ಯಾರೂ ಅಡ್ಡಿಗಳೆಯಲಾರರು. ಪುಣೆಯೊಳಗಿನ ಕನ್ನಡಿಗರು ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ಸೇರಿಸಲುದ್ಯುಕ್ತರಾದರೆ, ಮಹಾರಾಷ್ಟ್ರೀಯರು ಅದಕ್ಕೆ ಪ್ರತಿಬಂಧ ಮಾಡ್ಯಾರೆಂದು ನಾವು ತಿಳಿಯುವದಿಲ್ಲ. ಬೆಳಗಾವಿಯು ಕನ್ನಡ ಜಿಲ್ಲೆಯಾದರೆ, ಕನ್ನಡಾಭಿಮಾನವು ಅಲ್ಲಿ ಜಾಗೃತವಾಗಿದ್ದರೆ ಕನ್ನಡ ಪ್ರಚಾರವು ಅಲ್ಲಿ ಸುಸಂಘಟಿತವಾಗಿ ನಡೆಯಬೇಕು. ಆದರೆ, ಮಹಾರಾಷ್ಟ್ರೀಯರು ತಾವಾಗಿ ಅಲ್ಲಿ ಸಮ್ಮೇಲನವನ್ನು ಸೇರಿಸಲುದ್ಯುಕ್ತರಾಗಬಾರದು. ಕರ್ನಾಟಕಸ್ಥರು ಮಹಾರಾಷ್ಟ್ರೀಯರಂತೆ ಸುಸಂಘಟಿತವಾಗಿ ಪ್ರಯತ್ನಪಡದೆ ಅನಾವಶ್ಯಕವಾಗಿ ಮಹಾರಾಷ್ಟ್ರ ಬಾಂಧವರಿಗೆ ದೂರಲಾಗದು. ಮರಾಠಿಯ ದ್ವೇಷವೆಂದರೆ ಕನ್ನಡದ ಅಭಿಮಾನವಲ್ಲ. ಮರಾಠಿಯನ್ನು ಹೀಯಾಳಿಸಿದ ಮಾತ್ರಕ್ಕೆ ಕನ್ನಡ ನುಡಿಯ ಸೇವೆಯಾಗುತ್ತಿದ್ದರೆ, ನಾವು ಬಾರಿಬಾರಿಗೂ ಮರಾಠಿಯನ್ನು ನಿಂದಿಸುತ್ತಿದ್ದೆವು; ಇದರಿಂದ ಪ್ರಯೋಜನವಿಲ್ಲ. ಕರ್ನಾಟಕಸ್ಥರು ಕರ್ನಾಟಕ ಸಂಸ್ಕೃತಿಯನ್ನು ಮರೆತಿದ್ದಾರೆ, ಆದರಿಂದಲೇ ಕನ್ನಡ ನುಡಿಯು ದುರವಸ್ಥೆಗೆ ಮುಟ್ಟಿದೆ. ಶಿವಾಜಿ ಮಹಾರಾಜರ ಕಾಲದಲ್ಲಿ ನಮ್ಮೀ ಕರ್ನಾಟಕ ದೇಶವು ವೈಭವ ಶಿಖರವನ್ನೇರಿತ್ತು. ಬೃಹನ್ಮಹಾರಾಷ್ಟ್ರದಲ್ಲಿ ಸೇರಿಕೊಂಡಿದ್ದ ನಾಗಪುರ, ವಿಜಾಪುರ ರಾಜ್ಯ, ಕೊಲ್ಹಾಪುರ, ಸಾತಾರಾ ಪ್ರದೇಶಗಳು ನಮ್ಮ ಕರ್ನಾಟಕ ರಾಜ್ಯದ ಅಂಗಗಳಾಗಿದ್ದವಾಗಿ ಧುಳೆಯ ಸತ್ಕಾರ್ಯೋತ್ತೇಜಕ ಸಭೆಯಿಂದ ಪ್ರಕಟವಾದ ದಾಖಲೆಗಳಿಂದ ತಿಳಿಯುತ್ತದೆ. ಕರ್ನಾಟಕ ಸಂಸ್ಕೃತಿಯೂ, ಶಿಲ್ಪವೂ, ಧರ್ಮಭಕ್ತಿಗಳೂ ಆದರ್ಶಭೂತವಾಗಿದ್ದವಾಗಿ ಸ್ವತಃ ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ಉದ್ಗರಿಸಿದ್ದಾರೆ. ವಿಧಾಯಕ ಅಭಿಮಾನವು ಕರ್ನಾಟಕಸ್ಥರಲ್ಲಿ ಜಾಗರೂಕವಾಗಿಲ್ಲ. ಆದರಿಂದ ಕನ್ನಡ ನುಡಿಯು ದೀನವಾಗಿದೆ. ಇಲ್ಲದಿದ್ದರೆ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನವು ಮುಂದಿನ ವರುಷ ಬೆಳಗಾವಿಯಲ್ಲಿ ಸೇರಲಿಕ್ಕಿದೆ. ಎಂದು ಈಗಲೇ ಗೋಳಿಡುವದೇಕೆ?

ಕರ್ನಾಟಕಕ್ಕೆ ನಷ್ಟವೇನಿದೆ? ಸಮ್ಮೇಲನ ಸಂಬಂಧದ ಬೆಳಗಾವಿಯ ಕನ್ನಡಿಗರಿಗೆ ದೊಡ್ಡದೊಂದು ಲಾಭವಿದೆ. ಮಹಾರಾಷ್ಟ್ರೀಯರು ಸ್ವಭಾಷೆಗಾಗಿ ನಡಿಸುವ ಪ್ರಯತ್ನಗಳು ಪ್ರತ್ಯಕ್ಷವಾಗಿ ನಮಗೆ ಕಂಡು ಆ ಕ್ರಮಶಾಲಿ ಮಹಾರಾಷ್ಟ್ರೀಯರು ಕನ್ನಡ ನುಡಿಯ ಮೇಲೆ ಇನ್ನು ದಾಳಿಯನ್ನಿಟ್ಟಿಸದಂತೆ ಉಪಾಯ ಯೋಜನೆ ಮಾಡಲು ಅನುಕೂಲವಾಗುವದು. ಪರಿಷತ್ತಿನ ನೆವದಿಂದ ಮಹಾರಾಷ್ಟ್ರ ಪ್ರಮುಖರ ಪರಿಚಯವು ಕನ್ನಡಿಗರಿಗುಂಟಾಗಿ ದೇಶಸೇವೆಯ ಮಾರ್ಗಗಳನ್ನು ಕಲಿತುಕೊಳ್ಳಲು ಅನುಕೂಲವಿದೆ. ಇಷ್ಟಾಗಿ ಅತಿಥಿಗಳವರು. ಅವರಿಗೆ ನಾವು ಸತ್ಕರಿಸಲು ಬದ್ಧರಿದ್ದೇವೆ. ಬೆಳಗಾವಿಯೊಳಗಿನ ಮಹಾರಾಷ್ಟ್ರೀಯರು ಇಂಥವರಿಗೆ ನಿಮಂತ್ರಿಸಿ, ಪರಸ್ಪರ ತಮ್ಮ [illegible] ಸಮ್ಮೇಲನ ನಡಿಸುವಾಗಂತೂ ನಾವು ಸುಮ್ಮನೆ ವಿರೋಧಿಸುವದೇಕೆ? ಇದೆಲ್ಲ ಹಿರೇ ಹುಡುಗಾಟಿಕೆ. ಕರ್ನಾಟಕ ಪ್ರಮುಖರು ಇಂಥ ಕುಚೇಷ್ಟೆಗಳಿಗೆ ತಾಗುವದು ಕರ್ನಾಟಕದ ದುರ್ದೈವವಲ್ಲವೆ!

---

೩ ಕೊನೆಗೆ ಮಂಗಳೂರಿನಲ್ಲಿ ಕರ್ನಾಟಕ ಆಯುರ್ವೇದ ಸಮ್ಮೇಲನದ ಚತುರ್ಥ ಅಧಿವೇಶನವು ಸೇರುವ ನಿಶ್ಚಯವಾಗಿದೆಂದು ಈಗ ನಿಶ್ಚಯವಾಗಿ ಹೇಳಬಹುದು. ವೈಶಾಖ ಮಾಸದ ಕೃಷ್ಣಪಕ್ಷದಲ್ಲಿ ಅಂದರೆ ಮೇ ತಿಂಗಳ ಶುಕ್ಲಪಕ್ಷದಲ್ಲಿ ಈ ಸಭೆಯು ಸೇರುವದೆಂದು ಸ್ವಾಗತ ಕಮೀಟಿಯ ಕಾರ್ಯ ಸಚಿವರಾದ ಡಾ| ಪಿ ಅನಂದರಾಯರು ತಿಳಿಸುತ್ತಾರೆ. ದಿನ ನಿಶ್ಚಯವಾಗದಿದ್ದರೂ, ಅಧಿವೇಶನವಾಗುವದು ಈ ವರ್ತಮಾನವು ಸಂತೋಷಕಾರಕವಿದೆ. ಮಂಗಳೂರಿನ ವೈದ್ಯವರ್ಗದಲ್ಲಿ ಕೆಲವು ಕಾಲ ಇತ್ತಂಡತ್ವಾಗಿ ಸಮ್ಮೇಲನವು ಸೇರಲಿಕ್ಕಿಲ್ಲವೆಂದೂ, ದಸರೆಯ ತನಕ ಸಮ್ಮೇಲನವನ್ನು ತಡಿಸಿದ್ದಾರೆಂದೂ ಬಿತ್ತರ ಕೇಳುತ್ತಿ. ಆದರೆ ಸಕಾಲದಲ್ಲಿ ವಿವೇಕ ಸಾಮ್ರಾಜ್ಯತ್ವನೇ ಬಂದು ಮೇಲ್ಕಂಡಂತೆ ನಿರ್ಣಯವಾದ ಬಗ್ಗೆ ಮಂಗಳೂರಿನ ವೈದ್ಯರನ್ನೂ, ಡಾಕ್ಟರರನ್ನೂ ನಾವು ಪುನಃಪೂರ್ವಕವಾಗಿ ಅಭಿನಂದಿಸುವೆವು. ಆಯುರ್ವೇದದ ಮಹಿಮೆಯನ್ನು ನಾವು ವರ್ಣಿಸುವದವಶ್ಯವಿಲ್ಲ. ಭಗವಂತನು ನಿರ್ಮಿಸಿದ ದಿವ್ಯ ವನಸ್ಪತಿಗಳಿಂದ ನಮ್ಮಲ್ಲಿ ಹುಟ್ಟುವ ರೋಗಗಳನ್ನು ಉಪಶಮಿಸುವ ಸುಲಭ ಹಾಗು ಸರಳ ಉಪಾಯಗಳನ್ನು ನಾವು ತೊರೆದು, ಪರದೇಶಗಳಿಂದ ಬಾಟ್ಲಿ ತುಂಬಿ ಬಂದ ಔಷಧಗಳನ್ನು ಸೇವಿಸಿ ದೇಹದಿಂದಲೂ, ಅರ್ಥದಿಂದಲೂ ದುರ್ಬಲರಾಗಿದ್ದೇವೆ, ಪರಾವಲಂಬಿಗಳಾಗಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಆಯುರ್ವೇದದ ಪ್ರಸಾರಕ್ಕಾಗಿ ಶಕ್ತಿ ಮೀರಿ ದುಡಿಯಲಿಕ್ಕೂ, ಆಯುರ್ವೇದ ಪುರಸ್ಕಾರಕ್ಕಾಗಿ ಅವಶ್ಯವಿದ್ದ ಪ್ರಯತ್ನಾನುಕೂಲತೆಯನ್ನು ಪೂರೈಸಲಿಕ್ಕೂ ನಾವು ಬದ್ಧರಿದ್ದೇವೆ. ರಾಜಾಶ್ರಯವಿಲ್ಲದಾಗ ಈ ಕಾರ್ಯವನ್ನು ಜರುಗಿಸಲು ಆಯುರ್ವೇದಾಭಿಮಾನಿಗಳು ವಿಶೇಷವಾಗಿ ಬದ್ಧರಿದ್ದಾರೆ. ಇದನ್ನೆಲ್ಲ ವಿಚಾರಿಸಿ ದಕ್ಷಿಣ ಕನ್ನಡ ಜಿಲ್ಹೆಯವರು, ಕೈಕೊಂಡ ಕಾರ್ಯವನ್ನು ನೆರವೇರಿಸಲು ಔದಾರ್ಯ ಬುದ್ಧಿಯಿಂದ ಸಮ್ಮೇಲನಕ್ಕೆ ನೆರವಾಗಬೇಕಾಗಿ ನಾವು ವಿಜ್ಞಾಪಿಸುತ್ತೇವೆ

---

೪ ಸರ್ವಿಸ್ ಮೋಟಾರುಗಳ ಮೇಲೆ ಡಿಸ್ಟ್ರಿಕ್ಟ ಮ್ಯುನಿಸಿಪಲ್ ಆಕ್ಟಿನನ್ವಯ ಸೇರುವ ತೆರಿಗೆಯು ಜಿಲ್ಹೆಯೊಳಗಿನ ಮ್ಯುನಿಸಿಪಾಲಿಟಿಗಳಲ್ಲಿ ಭಿನ್ನ ಭಿನ್ನವಾಗಿರುತ್ತದೆ. ಕೆಲವು ಕಡೆಗಳಲ್ಲಿ ಸರ್ವಿಸ್ ಮೋಟಾರುಗಳಿಗೆಲ್ಲ ವಾರ್ಷಿಕ ಲೈಸನ್ಸು ಕೊಡುತ್ತಾರೆ. ಕೆಲವು ಕಡೆಗಳಲ್ಲಿ ಪ್ರತ್ಯೇಕ ಟ್ಯಾಕ್ಸ, ಟೋಲ ವಸೂಲ ಮಾಡುತ್ತಾರೆ. ಕಾರವಾರದಲ್ಲಿ ವಾರ್ಷಿಕ ಲೈಸನ್ಸಿನ ಪದ್ಧತಿ ಈಗಲೂ ಇರುವದಾಗಿ ತಿಳಿಯುತ್ತದೆ. ನಮ್ಮ ಕುಮಟೆಯಲ್ಲಿ ಕಳೆದ ವರ್ಷದ ತನಕ ಈ ಪದ್ಧತಿಯಿತ್ತು. ಲೋಕಲ ತಪಾಸಕರ ಆಕ್ಷೇಪದ ಕಾರಣದಿಂದ ಅವರೀಗ ಮ್ಯುನಿಸಿಪಾಲಿಟಿಯು ಒಮ್ಮೆಲೇ ವಿಚಾರ ಮಾಡದೆ ಈ ಪದ್ಧತಿಯನ್ನು ರದ್ದ ಪಡಿಸಿ, ಮೋಟಾರು ವಾಹನಗಳಿಂದ [illegible] ಟೋಲ ವಸೂಲು ಮಾಡಹತ್ತಿತು. ಹಳಿಯಾಳ ಮ್ಯುನಿಸಿಪಾಲಿಟಿಯಲ್ಲಿ ಟೋಲ ವಸೂಲಿಯು [illegible] ತಿಳಿಯುತ್ತದೆ. [illegible] ಮ್ಯುನಿಸಿಪಾಲಿಟಿಯು ಈ ಪ್ರಕಾರ [illegible] ಕೊಡದೆ ಮೋಟಾರ ಮಾ[illegible]ರದಲ್ಲಿಯೂ ಪ್ರಮಾಣದಲ್ಲಿಯೂ [illegible] ಟಾಯಿತು. ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ವಾಸ್ತವ್ಯವಿದ್ದ ಸರ್ವಿಸಿನವರ [illegible] ಲೈಸನ್ಸು ಕೊಡಬೇಕಾಗಿ [illegible], ಆಕ್ಟಿನ [illegible] ಲೈಸನ್ಸು ಪಡೆ[illegible] ಮಾಡಿದರು. ಆ ಅರ್ಜಿಯು [illegible] ತನಕ [illegible] ಈ ಅರ್ಜಿ [illegible] ಸ್ಥಿತಿಯಿದ್ದರೆ ಈ ಸರ್ವಿಸಿನವರಿಗೆ ಮಾರ್ಗದ ತೆರಿಗೆಯು ಅನುಕೂಲತೆಯು ಸಿಕ್ಕದೆ [illegible] ವೆಯು ಕಲಮುಗ[illegible] ಇಂಥವರಿಗೆ ಮಾರ್ಗದ ತೆರಿಗೆಯು ಅನುಕೂಲತೆ ಸಿಗುತ್ತಿದ್ದರೆ, ಇತರರಿಗೆ [illegible] ಅನುಕೂಲತೆ ಸಿಗಲು ಪ್ರತ್ಯವಾಯವಿಲ್ಲ. ಮ್ಯುನಿಸಿಪಲ್ ಆಕ್ಟಿನ [illegible]ನೇ ಕಲಮಿನಂತೆ ಟೆಕ್ಸ ಹಾಗು ಟೋಲ ವಸೂಲ ಮಾಡುವ ಅಧಿಕಾರವು ಮ್ಯುನಿಸಿಪಾಲಿಟಿ ಕಡೆಗೆ [illegible]. 'ಟೆಕ್ಸ' ಎಂಬ ವ್ಯಾಖ್ಯೆಯಲ್ಲಿ ೩ನೇ ಕಲಮಿನಂತೆ ಟೋಲು ಸಹ ಅಭಿಪ್ರೇತವಿರುವದರಿಂದಲೂ ಟೋಲಿನ ವ್ಯಾಖ್ಯೆಯು ಇದೇ ಕಾನೂನಿನಲ್ಲಿ [illegible] ಇದ್ದರಿಂದಲೂ ಟೆಕ್ಸ ಟೋಲ ಗಳಲ್ಲಿ ಭೇದ [illegible] ಬೇಕಿಲ್ಲ. ೫೯ನೇ ಕಲಮಿನಂತೆ ಮ್ಯುನಿಸಿಪಾಲಿಟಿಯ ಹದ್ದಿನೊಳಗೆ ಉಪಯೋಗಕ್ಕೆ ಇಟ್ಟ kept for use within the said district ವಾಹನಗಳ ಮೇಲೆ ತೆರಿಗೆಯನ್ನು ವಸೂಲ ಮಾಡಲು ಮ್ಯುನಿಸಿಪಾಲಿಟಿಗೆ ಅಧಿಕಾರವಿದೆ. ಹೀಗೆ ವಾಹನಗಳ [illegible] ವಸೂಲ ಮಾಡುವ ತೆರಿಗೆಯು ಬಗ್ಗೆ ಒಮ್ಮೆಲೇ [illegible] ರಕಮನ್ನು ಮುಂದಾಗಿ ಕೊಂಡು ೧ ವರ್ಷದ ತನಕ ಲೈಸನ್ಸು ಕೊಡಲಿಕ್ಕೆ ೭೧ನೇ ಕಲಮಿನ ೩ನೇ ಕಾನೂನಿನನ್ವಯ ಮ್ಯುನಿಸಿಪಾಲಿಟಿಗೆ ಅಧಿಕಾರವಿದೆ. ಮ್ಯುನಿಸಿಪಾಲಿಟಿಯವರು ವಾಹನಗಳಿಗೆ ವಾರ್ಷಿಕ ಲೈಸನ್ಸು ಕೊಡುವದು ೭೧ (೩) ನೇ ಕಾನೂನಿನಂತೆ. ಈ ಕಾನೂನಿನಲ್ಲಿ ವಾಸ್ತವ್ಯದ ಉಲ್ಲೇಖವಿಲ್ಲ. ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ಉಪಯೋಗಕ್ಕೆ ಇಟ್ಟ ವಾಹನಗಳೆಂದು ಮಾತ್ರ ಉಲ್ಲೇಖಿಸಲ್ಪಟ್ಟಿದೆ. ಮ್ಯುನಿಸಿಪಾಲಿಟಿ ಹದ್ದಿನೊಳಗೆ ವಾಸಿಸಿ ಸರ್ವಿಸ್ ನಡಿಸುವರೂ ೫೯ನೇ ಕಲಮಿನಂತೆ ಸಂಕರೆಂದು ಹೇಳಲಿಕ್ಕೆ ಅಡ್ಡಿಯೇನಿಲ್ಲ. ಅಂದ ಬಳಿಕ, ದಿನಾ ಸರ್ವಿಸ್ ನಡಿಸುವವರಿಗೆ ವಾರ್ಷಿಕ ಲೈಸನ್ಸು ಕೊಡಲು ಪ್ರತ್ಯವಾಯವೇನಿದೆ? ಟೀಕಾಕಾರ. ೪೬ (1) ಕಲಮಿನ ಆಕ್ಷೇಪ ಕೇಳಬಹುದು. ಆ ಕಲಮಿನಲ್ಲಿ 'ಟೋಲು' ಎಂಬ ಶಬ್ದಗಳನ್ನು ಸೇರಿಸಬೇಕಾಗಿ ಹಿಂದೆ ಸೂಚನೆಯತ್ತು. ಆ ಸೂಚನೆಯು ಮಾನ್ಯವಾಗದೆ ಇದ್ದದರಿಂದ ಟೋಲ ವಸೂಲಿಗೆ ಪಾತ್ರವಿದ್ದ ವಾಹನಗಳಿಗೆ ವಾರ್ಷಿಕ ಲೈಸನ್ಸ ಕೊಡಲು ಕಾಯಿದೆಯಂತೆ ಬರುವದಿಲ್ಲವಾಗಿ ಹಿಂದು ತರ್ಕ. ಆದರೆ 'ಟೆಕ್ಸ' ಶಬ್ದವು ೪೬ನೇ ಕಲಮಿನಲ್ಲಿ ಹೇಳಲ್ಪಟ್ಟಿದ್ದು, ಆ ಶಬ್ದದಲ್ಲಿಯೇ 'ಟೋಲ' ಶಬ್ದವು ಸೇರಿಹೋಗುವದರಿಂದ ಟೋಲಿನ ಪ್ರತ್ಯೇಕ ಉಲ್ಲೇಖವು ಅವಶ್ಯವಿಲ್ಲ. ಈ 'ಟೋಲು' ಶಬ್ದದ ತಿರಸ್ಕಾರ ಕಾಲಕ್ಕೆ ನಮೂದಿಸಿದ ಇನ್ನೊಂದು ಮಾತನ್ನೂ ವಿಚಾರಿಸಬಹುದು. ಮ್ಯುನಿಸಿಪಾಲಿಟಿಯ ಹೊರಗೆ ವಾಹನಗಳನ್ನಿಟ್ಟು ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ವಾಹನಗಳನ್ನು ಉಪಯೋಗಿಸುವವರಿಗೆ ವಾರ್ಷಿಕ ಕರದ ಅನುಕೂಲತೆಯು ದೊರಕಬಾರದೆಂದು 'ಟೋಲ' ಶಬ್ದದ ಲೋಪವಾಯಿತೆಂದು ಮ್ಯುನಿಸಿಪಾಲಿಟಿ ಆಕ್ಟಿನ ಟೀಕಾಕಾರರು ಬರೆಯುತ್ತಾರೆ. ೫೯ನೇ ಕಲಮಿನೊಳಗಿನ (kept for use within the said district) "ಮ್ಯುನಿಸಿಪಾಲಿಟಿ ಹದ್ದಿನೊಳಗೆ ಉಪಯೋಗಕ್ಕೆ ಇಟ್ಟ" ಎಂಬ ಶಬ್ದಗಳನ್ನು ಈ ದೃಷ್ಟಿಯಿಂದ ವಿಚಾರಿಸಿದರೆ, ವಾರ್ಷಿಕ ಲೈಸನ್ಸು ಕೊಡಲು ೨ ಕರಾರುಗಳನ್ನು ಕಲ್ಪಿಸಬೇಕಾಗುತ್ತ. (೧) ವಾಹನವು ಮ್ಯುನಿಸಿಪಾಲಿಟಿಯ ಹದ್ದಿನಲ್ಲಿರಬೇಕು, (೨) ಅದು ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ಉಪಯೋಗಿಸಲ್ಪಡಬೇಕು. ಯಾವುದೊಂದು ಶರ್ತವಿಲ್ಲದಿದ್ದರೆ, ವಾರ್ಷಿಕ ಲೈಸನ್ಸು ಸಿಗದು. ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ವಾಸಿಸುವ ಮೋಟಾರ ಸರ್ವಿಸಿನವರು ಮೊದಲನೇ ಶರ್ತವನ್ನು ಪಾಲಿಸುತ್ತಿದ್ದಗ್ಯೂ, ೨ನೇ ಶರ್ತವನ್ನು ಅವರು ಪಾಲಿಸುವದಿಲ್ಲ. ಮ್ಯುನಿಸಿಪಾಲಿಟಿಯ ಹೊರಗೇ ಅವರ ಸರ್ವಿಸು ನಡೆಯುತ್ತದೆ. ಅಂದ ಬಳಿಕ ಹಿಂದು ಸರ್ವಿಸಿನವರಿಗೆ ಲೈಸನ್ಸು ಕೊಟ್ಟು, ಇನ್ನೊಂದು ಸರ್ವಿಸಿನವರಿಗೆ ಲೈಸನ್ಸು ಕೊಡದಿರುವದು ಅನ್ಯಾಯವಹದೆ. ಕಾಯಿದೆಯ ಅರ್ಥವನ್ನು ಅಪಸ್ವರ ಮುಟ್ಟಿಗೆ ಪ್ರಜಾ ತರ್ಫಿನಿಂದಲೇ ಮಾಡತಕ್ಕದ್ದು. ಲೋಕಲ ತಪಾಸಕರು ಆಕ್ಷೇಪ [illegible] ಕೂಡಲೇ, ಮುಂಚಿನ ಪದ್ಧತಿಯ ಬಗ್ಗೆ ಕಾ[illegible] ಒಮ್ಮೆಲೇ ಅದನ್ನು ತ್ಯಜಿಸುವದು ದೈರ್ಯವಕ್ಕಿ, [illegible] ಕಾನೂನಿಗೆ ವಿರೋಧವಾಗಿ ನಡೆಯ[illegible] ಯಾರೂ ಹೇಳುವರು; ಆದರೆ, ಕಾನೂನಿನ ಅರ್ಥವನ್ನು ಪ್ರಜಾ ತರ್ಫಿನಿಂದಲೇ ಯಾವಾಗಲೂ ಮಾಡಿ ಕರದ ಭಾರವನ್ನು ಕುಗ್ಗಿಸಲು ಕರ ಹೇರುವ ಅಧಿಕಾರಿಗಳು ಪ್ರಯತ್ನಪಡಬೇಕು. ಸರಕಾರವೂ, ಕಮಿಶನರರೂ ಈ ವಿಷಯವನ್ನು ಆಲೋಚಿಸಿ, ಸಮಸ್ತ ಸರ್ವಿಸಿನವರಿಗೆ ವಾಸ್ತವ್ಯದ ಶರ್ತವಿದ್ದ ಲೈಸನ್ಸು ಕೊಡಬೇಕಾಗಿ ನಮ್ಮ ಸೂಚನೆಯಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆ ಬಹಳ ಮೋಡಗಳಾಗುತ್ತಿವೆ. ಮ್ಯುನಿಸಿಪಾಲಿಟಿಯವರು ಪ್ಲೇಗ ಇನ್ಸಪೆಕ್ಟರನ ನೌಕರಿಯನ್ನು ಮುಗಿಸಿದರು. ಈ ತನಕ ೩೦೦ ರೂಪಾಯಿ ಈ ವೆಚ್ಚಕ್ಕೆ ಖರ್ಚ ಬರುವದಂತೆ. ಮಾರ್ಗದ ಮೇಲೆ ನೀರು ಹಾಕುವ ಪ್ರಯೋಗವೊಂದು ನಡೆದಿದೆ. ಹಿಂದಿನ ನಮೂನೆಯಲ್ಲ. ಎಲ್ಲಿಯೂ ಕಾಣುವ ನಮೂನೆಯಲ್ಲ. ಸೀಮೆ[illegible]ಗೆ ನಳ ಹಚ್ಚಿ ನೀರು ಹಾಕುತ್ತಾರೆ. ಇದರಿಂದ ನೀರು ಸರಿಯಾಗಿ ಮಾರ್ಗದ ಮೇಲೆ ಬೀಳುವದಿಲ್ಲ. ಒಂದು ಮಾರ್ಗಲ ಜಾಗದ ಮೇಲೆ ಧಾರೆಗಳು ಬೀಳುತ್ತಿವೆ. ಇದನ್ನು ನೋಡಿದರ, ಈ ಹಿಂದೆ ಈ ಮ್ಯುನಿಸಿಪಾಲಿಟಿಯ

ಸಾಗರದ ಮೇಲೆ ನೀರು ಹಾಕುವ ಯೋಚನೆಯಿತ್ತೆಂದು ಯಾರೋ ಹೇಳಿದರು. ನೀರು ತುಂಬುವ ತಾಮ್ರದ ಪಟ್ಟಿಗಳಿದ್ದವು ಅವುಗಳಿಂದ ನೀರು ಹಾಕಲ್ಪಡುತ್ತಿತ್ತು. ಅವು ಮಾರಲ್ಪಟ್ಟವು. ಅವನ್ನು ಮಾಡಿಸಲಿಕ್ಕೆ ಈ ಮ್ಯುನಿಸಿಪಾಲಿಟಿಗೆ ವ್ಯಥವ ಕಾಲದಲ್ಲಿಯೂ ಗತಿಯಿಲ್ಲ.

ಇಲ್ಲಿ ಹೊಸ ಪೋಲೀಸ ಕಾರಕೀರ್ದಿಯು ಪ್ರಾರಂಭವಾಗಿದೆ. ಪೋಲೀಸರ ಕಾಕದೃಷ್ಟಿಯು ಈ ಬಾರಿ ಹೋಟೆಲನವರ ಮೇಲೆ. ಪೋಲೀಸರು ನಿರ್ಬಂಧಿಸಿ ಕೊಟ್ಟ ಡ್ರೆಸ್ಸು ಇಲ್ಲದ ಬಗ್ಗೆ ೩-೪ ದಿವಸಗಳಲ್ಲಿ ಇಲ್ಲಿಂದ ರಹೋಟೆಲಗಳೂ, ಅಂತಿಗಳೂ ಆಪಾರಕ್ಕೆ ಹೋದವು. ಕೆಲವು ಡ್ರೆಸ್ಸಿನ ಮೇಲೆ ಪೋಲೀಸ ಸಾಹೇಬರು ಅನುಗ್ರಹಿಸಿ ಪ್ರೊಸಿಕ್ಯೂಶನ ಮುಂಜೂರತೆ ಕೊಟ್ಟು ಅವರಿಗೆ ಬಿಟ್ಟುಕೊಟ್ಟರು. ಕೆಲವು ಹೋಟೆಲದವರ ಲೈಸೆನ್ಸು ಸಸ್ಪೆಂಡ ಮಾಡುವ ಹುಕುಮ ಆಯಿತು. ಕೆಲವರಿಗೆ ಸಾಹೇಬರ ದರ್ಶನ ಕೊಡುವ ಆಜ್ಞೆಯಾಯಿತು. ಹೀಗೆಲ್ಲ ಸುರುವಾಗಲು ಕಾರಣವಾದ ಡ್ರೆಸ್ಸಿನ ವಿಷಯ ಒಂದು ಮಾತು. ಡ್ರೆಸ್ಸಿಗೂ ಹೋಟೆಲದವರಿಗೂ ಏನೂ ಸಂಬಂಧವಿಲ್ಲ. ಡ್ರೆಸ್ಸಿನಲ್ಲಿ ಹೆಚ್ಚು-ಕಡಿಮೆಯಾದ ಹಾಗೆ ಹೋಟೆಲಿನ ಊಟದಲ್ಲಿ ಹೆಚ್ಚು-ಕಡಿಮೆಯಾಗುವದಿಲ್ಲ. ಡ್ರೆಸ್ಸು ಜಾತಿಧರ್ಮವನ್ನು, ದರ್ಜೆಯನ್ನು ನೋಡಿ ನಿಶ್ಚಯಿಸುವದಿಲ್ಲ. ಎಲ್ಲರಿಗೂ ಒಂದೇ ಡ್ರೆಸ್ಸು. ಹಿಂದೂ-ಮುಸಲ್ಮಾನ-ಕ್ರಿಶ್ಚನ್ನರವರೆಲ್ಲ ಕ್ರಿಶ್ಚನ್ನರಂತೆ ಡ್ರೆಸ್ಸು ಮಾಡಿಕೊಳ್ಳಬೇಕು. ಅರಿವೆಯು ಸಮಾನ ಸಹ ನಿಶ್ಚಯಿಸಲ್ಪಟ್ಟಿದೆ. ಅವೆಲ್ಲ ತೀರ ವಿಪರೀತ. ಪೋಲೀಸರು ಇಂಥ ನಿರ್ಬಂಧಗಳನ್ನು ಒಮ್ಮೆಲೇ ಕಿತ್ತೊಗೆಯಬೇಕು. ಮೋಟಾರು ಬಿಡಬೇಕಾದರೆ, ಒಂದು ಸ್ಟೇಶನುಗಳಿಂದ ಅರ್ಧ ತಾಸಿನ ಅಂತರದ ವೇಳೆ ಬಿಡಬೇಕು. ಇದರಿಂದ ಪ್ರಯಾಣಿಕರಿಗೆ ಬಹಳೇ ಉಪದ್ರವ. ಕಾರವಾರದಲ್ಲಿ ೧೫ ಮಿನಿಟಿನ ಅಂತರದಿಂದ ಮೋಟಾರುಗಳನ್ನು ಬಿಡುತ್ತಾರೆ. ಇಲ್ಲಿ ಮಾತ್ರ ಅರ್ಧ ತಾಸಿನ ನಿರ್ಬಂಧವೇಕೆ? ಇತ್ಯಾದಿ ಒಬ್ಬರು ಪ್ರಶ್ನಿಸುತ್ತಾರೆ.

ಹೊನ್ನಾವರ— ಮಳೆ ಮೋಡಗಳಾಗುತ್ತವೆ. ಸ್ವಲ್ಪ ಮಳೆ ಸಹ ಹನಿಸಿತು. ವಿಷಮ ಶೀತ ಊರಲ್ಲಿ ವ್ಯಾಪಿಸಿದೆ. ಪ್ರಸಾರವಾಗದಂತೆ ಮ್ಯುನಿಸಿಪಾಲಿಟಿಯವರು ತಕ್ಕ ಉಪಾಯ ಕೈಕೊಳ್ಳಬೇಕು.

ಹೊಸ ಮ್ಯುನಿಸಿಪಾಲಿಟಿಯ ಸಭೆಯಾಗಿ ರಾ। ಉಪೇಂದ್ರ ವಿಠೋಬ ನಾಯ್ಕ ವಕೀಲರವರು ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ. ರಾ। ಬಳಕೂರ ಕೃಷ್ಣಪ್ಪ ಭಂಡಾರಿಯವರು ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ

ಇಲ್ಲಿಯ ರಾ। ಗಜಾನನ ತಿಮ್ಮಪ್ಪ ಭಟ್ಟ ಇವರು ಹ್ಯಾಕೋರ್ಟ ವಕೀಲ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ

ಶ್ರೀ ಸೋಂದ ಮಠದ ಶ್ರೀ ವಿಶ್ವೇಂದ್ರತೀರ್ಥ ಸ್ವಾಮಿಗಳು ಇಲ್ಲಿಯ ಶ್ರೀ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ಇಳಕೊಂಡಿದ್ದಾರೆ. ಶ್ರೀಗಳಿಗೆ ಶಿಷ್ಯರು ಸತ್ಕಾರ ಮಾಡುತ್ತಿದ್ದಾರೆ

ಭಟ್ಕಳದೊಳಗಿನ ಒಬ್ಬನು ಹೆಂಡತಿಗೆ ಕೊಂದ ಬಗ್ಗೆ ಖಟ್ಲೆಯಾಗಿ, ಖಟ್ಲೆಯು ಸೆಶನ್ಸ ಕೋರ್ಟಿಗೆ ಕಳಿಸಲ್ಪಟ್ಟಿದೆ

ಒಬ್ಬರು ತಿಳಿಸುವದೇನಂದರೆ:— ನಮ್ಮಲ್ಲಿ ಪಂಚರಿಗೆ ಬೇಡಿಕೆ ಬಹಳ; ಅಷ್ಟು ಪಂಚನಾಮೆಗಳು ಈಗ ಆಗುತ್ತಿವೆ. ನೆಲಗನ್ನಳಿನ ಪಂಚನಾಮೆಗಳಾದವು; ಇಂಗ್ಲಿ-ಖಂದಕಿನ ಪಂಚನಾಮೆಯಾಯಿತು; ಒಬ್ಬರು ಸಾಗರದ ಬದಿಗೆ ದೋಣಿಯನ್ನಿಟ್ಟರೆಂದು ಒಂದು ಪಂಚನಾಮೆಯಾಯಿತಂತೆ. ಸರಕಾರಿ ಜಾಗದ ಮೇಲೆ ದೋಣಿ ಯಾಕೆ ಇಡೋಣಾಯಿತು? ಎಂಬುದೇ ಪ್ರಶ್ನೆ. ರಾ। ಪುತ್ತಪ್ಪ ಪದ್ಮನಾಭ ಶ್ಯಾನುಭೋಗರ ಮನೆ ಜೀರ್ಣವಾಗಿರುವದಂತೆ! ಅದು ಮುರಿದು ಬೀಳುವದರಿಂದ ಅಪಾಯವಂತೆ!! ರಸ್ತೆಗೆ ಆತಂಕವಂತೆ!!! ಆದ್ದರಿಂದ ಅದರ ಜೀರ್ಣೋದ್ಧಾರವಾಗಬೇಕು, ಅಥವಾ ಮುರಿದು ತೆಗೆಯಬೇಕು! ಅದಕ್ಕೊಂದು ಪಂಚನಾಮೆ! ಮಾಮಲೇದಾರರಿಗೆ ಇದೇ ಮನೆ ದೃಷ್ಟಿಗೆ ಬಿತ್ತು ಕಾರಣವು ತಿಳಿಯಲಿಲ್ಲ. ಇದಕ್ಕೂ ಜೀರ್ಣವಾದ ಅನೇಕ ಮನೆಗಳು ಮಾರ್ಗಕ್ಕೆ ಹೊಂದಿಕೊಂಡಿದ್ದಾವೆ. ಅವುಗಳಿಗೆ ಪಂಚನಾಮೆಯಿಲ್ಲ. ಮಾಮಲೇದಾರರು ಇದನ್ನು ನೋಡಬೇಕು. ಇತ್ಯಾದಿ.

ಯಲ್ಲಾಪುರ— ಮುಂಬಯಿ ಪ್ರಾಂತಾಧಿಪರಾದ ಸರ್ ಲೆಸ್ಲೀ ವಿಲ್ಸನ್‌ರವರು ಎಪ್ರಿಲ್ ೧ನೇ ತಾರೀಖಿನಿಂದ ೧೦ನೇ ತಾರೀಖಿನ ವರೆಗೆ ಇಲ್ಲಿಯ ಅರಣ್ಯದಲ್ಲಿ ಬೇಟೆಯಾಡಿದರು. ಜಿಲ್ಲೆಯ ಪ್ರಜೆಗಳ ಭೆಟ್ಟಿಕೊಳ್ಳಲು ಕಾರ್ಯಕ್ರಮದಲ್ಲಿ ಇಂಬಿಲ್ಲದ್ದರಿಂದ ನಿರುಪಾಯವಾಯಿತು, ಸಮುದಾಯವೂ ಅದೆಲ್ಲ ಗವರ್ನರರು ಸಂಚರಿಸಿದರೆ ವಿಶೇಷ ಲಾಭವಾಗುವದಾಗಿ ತೋರುವದೂ ಇಲ್ಲ. ಪ್ರಾಂತಾಧಿಪರಿಗೆ ಜಂಗಲ ಅಧಿಕಾರಿಗಳು ಸತ್ಕಾರಿಸುತ್ತಿದ್ದರು. ದೊರೆಗಳಿಗೆ ಜಂಗಲುಗಳ ಬೆಳವಣಿಗೆಯಿಂದ ಬೇಟೆ ಮಾಡಲು ಅನುಕೂಲವಾದ್ದರಿಂದ ಜಂಗಲ ಉಪದ್ರವಗಳ ನೋವು ದೊರೆಗಳ ಕಣ್ಣಿಗೆ ಬೀಳಲಿಲ್ಲ ಸಹಜವಿದೆ.

ಮುಂಡಗೋಡ ಪೇಟೆಯಲ್ಲಿ ೫ ಸಾವಿರ ರೂಪಾಯಿಗಳ ಪ್ರಾಪರ್ಟಿ ಕಡಿಮೆ ಮಾಡಿದ ಜಾಹೀರನಾಮೆಗಳು ಪ್ರಕಟವಾಗಿವೆ. ಉಳಿದ ಕಡೆಗಳಲ್ಲಿ ಇನ್ನು ಜಾಹೀರನಾಮೆಗಳು ಹಚ್ಚಿದ ಸುದ್ದಿ ಇಲ್ಲ

ಕಾರವಾರ— ಸೆಕೆಯು ಮಾತ್ರ ದಿನೇ ದಿನೇ ಉಗ್ರವಾಗುತ್ತಿದೆ. ಪಟ್ಟಣದಲ್ಲಿ ಪ್ಲೇಗಿನ ಜ್ವರವು ತಗ್ಗಿತು. ಜನರ ವ್ಯವಹಾರವು ಮುಂಚಿನಂತೆ ಪ್ರಾರಂಭವಾಗಿದೆ.

ಸದಾಶಿವಗಡಕ್ಕೆ ಹೋಗಬೇಕಾದರೆ ಕಾಳೀ ನದಿಯ ತಾರಿ ದಾಟಬೇಕಾಗುತ್ತದೆ. ಈ ತಾರಿಗೆ ೨ ಬಿಲ್ಲಿ ಕೊಡಬೇಕು. ಆದರೆ, ತಾರಿ ದೋಣಿಯ ಮೇಲೆ ದಾಟುವ ಯೋಗವು ಅಪೂರ್ವವು. ಅನೇಕ ಹೊಳೆಗಾರರ ದೋಣಿಕಾರರು ಪ್ರಯಾಣಿಕರಿಂದ ೫ ಬಿಲ್ಲಿ ಹಾಕಲು ಕೊಂಡು, ೨ ಬಿಲ್ಲಿ ತಾರಿಯವನಿಗೆ ಕೊಟ್ಟು ಅದ್ದೇಲಿಯನ್ನು ತಾವೇ ತಕ್ಕೊಳ್ಳುತ್ತಿದ್ದರು. ಈ ದೋಣಿಕಾರರು ಜನರಿಗೆ ತಾರಿ ದಾಟಿಸುವ ಹಕ್ಕಿನ ಬಗ್ಗೆ ೫ ರೂಪಾಯಿ ಕೊಟ್ಟು ಲೈಸನ್ಸ ಪಡೆಯಬೇಕಾಗಿತ್ತು. ಹೊಳೆಗಾರರು ಜನರಿಂದ ೩ ಬಿಲ್ಲಿ ವಸೂಲ ಮಾಡಿದರಂತೆ. ಅದ್ದೇಲಿ ತೈಪಿದಗಳಿಗೆ ನಷ್ಟವಾಯಿತು. ಇಂಜಿನಿಯರ ಖಾತೆಯವರು ಈ ಲೂಟಿ ನಡೆಯಬಾರದೆಂದು ಹೊಳೆಗಾರರಿಗೆ ದೋಣಿ ದಾಟಿಸಬಾರದೆಂದು ವಿಧಿಸಿ ಲೈಸನ್ಸ ಪದ್ಧತಿಯನ್ನು ಬಂದು ಮಾಡಿ ಬಿಟ್ಟರು. ಹೊಳೆಗಾರರ ಉಪಜೀವಿಕೆಯು ನಿಂತು ಹೋಯಿತು. ಹೋದ ವರ್ಷದಲ್ಲಿ ಈ ತಾರಿಯಿಂದ ಪ್ರಯಾಣಿಕರಿಗೆ ಬಹಳೇ ತೊಂದರೆಯಾಯಿತು. ಈ ವರುಷ ಹೊಸಬರ ಲೋಂಚು ಪ್ರಾರಂಭವಾಗಿದೆ. ಲೋಂಚಿಗೆ ೧ ಆಣೆ ವಸೂಲ ಮಾಡುವ ಹಕ್ಕು ಕೊಡಲಾಗಿದೆ. ೨ ಬಿಲ್ಲಿ ತಾರಿಯವನಿಗೆ; ೨ ಬಿಲ್ಲಿ ಲೋಂಚಿನವನಿಗೆ. ೫ ರೂಪಾಯಿ ಲೈಸನ್ಸ ಫೀ ಲೋಂಚಿನಿಂದ ವಸೂಲ ಮಾಡಿಕೊಳ್ಳಲಾಗಿದೆ. ಹೊಳೆಗಾರರು ಅದರಂತೆಯೇ ತಮಗೂ ಲೈಸನ್ಸ ಸಿಗಬೇಕಾಗಿ ಅರ್ಜಿ ಕೊಟ್ಟರೆ ಹಾಗೆ ಲೈಸನ್ಸ ಕೊಡತಕ್ಕದ್ದಿಲ್ಲವಾಗಿ ಇಂಜಿನಿಯರ ಖಾತೆಯವರ ಹುಕುಮವು ಆಗಿದೆ. ಅದ್ದೇಲಿ ಹೆಚ್ಚು ತೆತ್ತು ಪ್ರಜೆಗಳಿಗೆ ನಷ್ಟವಾಗುವದು ಇನ್ನೂ ತೀರದು. ಲೋಂಚಿಗೆ ೨ ಬಿಲ್ಲಿ ವಸೂಲು ಮಾಡಿಕೊಳ್ಳಲು ಅಪ್ಪಣೆ ಕೊಟ್ಟರೆ, ಪ್ರಜೆಗಳಿಗೆ ಲೂಟಿ ಮಾಡಿದಂತಾಗುವದಿಲ್ಲವೇ? ಲೋಂಚು ೨ ಬಿಲ್ಲಿ ವಸೂಲು ಮಾಡಿದರೆ, ಸೆಟ್ಟಿಗೆ ಯಂತ್ರಸಾಮಗ್ರಿಗೆ ಉತ್ತೇಜನ ಸಿಗುತ್ತದೆ, ಹೊಳೆಗಾರರಿಗೆ ಲೈಸನ್ಸು ಕೊಟ್ಟರೆ ಊರೊಳಗಿನ ಕೂಲಿಯವರಿಗೆ ಅನ್ನ ಕೊಟ್ಟಂತಾಗುತ್ತದೆ. ಪ್ರಜೆಗಳ ಸೌಖ್ಯಕ್ಕಾಗಿ ಪ್ರಯತ್ನಪಡುವ ಅಧಿಕಾರಿಗಳು ವಿಚಾರಿಸಿ ಲೈಸನ್ಸು ಕೊಡಬೇಕಾಗಿ ಒಬ್ಬರು ಬಿನ್ನೈಸುತ್ತಾರೆ

ಈ ಜಿಲ್ಲೆಯಲ್ಲಿ ಕಾಗದದ ಕಾರಖಾನೆಗೆ ತಕ್ಕದಾಗಿ ಗಳಗಳ ಪೂರೈಕೆಯಾಗುವದಿಲ್ಲೆಂದು ಸರ್ವೆ ಸರ್ಕಲಿನ ವಿ॥ ರೈಟವರು ಕಾಳೀ ನದಿ, ಗಂಗಾವಳಿ ದಂಡೆಗುಂಟ ಸಂಚರಿಸಿ ಅಭಿಪ್ರಾಯಪಟ್ಟದ್ದಾಗಿ ಸರಕಾರಿ ಉದ್ಯೋಗಿಕ ಖಾತೆಯ ವರದಿಯ ಮೇಲಿಂದ ತಿಳಿಯುತ್ತದೆ. ಈ ಜಿಲ್ಲೆಯೊಳಗಿನ ಅಧಿಕಾರಿಗಳು ಸಹ ಇದೇ ಪ್ರಕಾರ ಅಭಿಪ್ರಾಯಪಟ್ಟಿರುವದಾಗಿಯೂ ತಿಳಿಯುತ್ತದೆ. ಅಂತು ನಮ್ಮ ಜಿಲ್ಲೆಯಲ್ಲಿ ಕಾಗದದ ಕಾರಖಾನೆಯಾಗುವದಿಲ್ಲ

ದಿವಾಣರಾದ ರಾ। ಪ್ರಧಾನರ ಸಂಚಾರದ ಫಲಶ್ರುತಿ.

ಬಳ್ಳಿವರೊಬ್ಬರು ಬರೆಯುವದೇನಂದರೆ:—

ದಿವಾಣರಾದ ರಾ। ಗೋವಿಂದರಾವ ಪ್ರಧಾನರವರು ಶಿರ್ಸಿ, ಕುಮಟಾ, ಹೊನ್ನಾವರಗಳಲ್ಲಿ ಸಂಚರಿಸಿದರು. ಮಿತ್ರರೂ, ಅಧಿಕಾರಿಗಳೂ, ಕೆಲವು ಸಂಸ್ಥೆಗಳೂ ರಾಜಶ್ರೀಗಳಿಗೆ ಮಾನಪತ್ರವನ್ನಿತ್ತರು; ಮೇಜವಾನಿಗಳನ್ನಿತ್ತರು; ಶಿಷ್ಟಮಂಡಳಗಳನ್ನು ಕಳಿಸಿದರು, ಈ ರೀತಿ ಉಪಚಾರಗಳು ನಡೆದವು. ಅವುಗಳಿಂದ ಸಾರ್ವಜನಿಕ ಪ್ರಯೋಜನವೇನಿಲ್ಲ. ಜಂಗಲುಗಳ ವಿಷಯ ದಿವಾಣರು ಸಂಚರಿಸಿದ್ದರು. ಆ ಕುರಿತು ನನಗೆ ಸಿಕ್ಕಿದ ಮಾಹಿತಿಯನ್ನು ಸಂಕ್ಷಿಪ್ತವಾಗಿ ಬರೆದಿದ್ದೇನೆ. ಶಿರ್ಸಿಯಲ್ಲಿ ದಿವಾಣರು ಕಾನಗೆ ಗ್ರಾಮವನ್ನೂ ನೀಲೇಕಣಿ ಗ್ರಾಮವನ್ನೂ ನೋಡಿದರು. ಕುಮಟೆಯಲ್ಲಿ ಜಂಗಲ ಅಧಿಕಾರಿಗಳು ಹಾಗು ಇತರರೊಡನೆ ಆಲೋಚನೆ ನಡಿಸಿದರು. ಬೆಟ್ಟದ ಮಾಲ್ಕಿಯ ವಿಷಯ ಚರ್ಚೆಯಾಗಿ ಅದನ್ನು ರೈತರಿಗೆ ಕೊಡಬೇಕಾಗಿ ನಿಶ್ಚಯವಾಗಿದೆ. ಕುಮಟಾ ತಾಲೂಕಿನಲ್ಲಿ ಬೆಟ್ಟಗಳನ್ನು ಪ್ರತ್ಯೇಕಿಸಿ ಕೊಡಬೇಕಾಗಿಯೂ ದಿವಾಣರ ಅಭಿಪ್ರಾಯವಾಗಿದೆ. ಗೋಚರಾವ ಫೀ ತಗ್ಗುವ ಲಕ್ಷಣಗಳಿಲ್ಲ. ೨ ಆಣೆಯೆಂದರೆ, ಏನೂ ಅಲ್ಲವೆಂದು ದಿವಾಣರ ಅಭಿಪ್ರಾಯವಾದಂತೆ ತೋರುತ್ತದೆ. ಆದರೆ, ಗೋಚರಾವಿಗೆ ಇನ್ನೂ ಕೆಲವು ಪ್ರದೇಶವನ್ನು ಬಿಡಬೇಕೆಂಬ ಮಾತು ದಿವಾಣರಿಗೆ ಗ್ರಾಹ್ಯವಾಗಿದೆ. ಇದೊಂದು ದುಃಖದಲ್ಲಿ ಸುಖ! ಕಾನಬೆಟ್ಟಗಳಲ್ಲಿ ಮೆಣಸಿನ ಬಳ್ಳಿಗಳನ್ನು ಪುರಾತನ ರೂಢಿಯಂತೆ ಬೆಳಿಸಗೊಡಲು ದಿವಾಣರ ಮನೋನಿಶ್ಚಯವಾಗಲಿಲ್ಲ. ಬೇಸಾಯಗಾರರಿಗೆ ಇಂಬುಗೊಟ್ಟರೆ, ಕಾನ ಬೆಟ್ಟವೆಲ್ಲ ಕಡಿದುಹೋಗಿ ಹಳ್ಳಿಯಲ್ಲಿ ಮಳೆ ಬೀಳದೆ ಅನರ್ಥವೊದಗುವದೆಂದು ಜಂಗಲ ಅಧಿಕಾರಿಗಳು ದಿವಾಣರಿಗೆ ಹೆದರಿಸಿದರೋ ಏನೋ! ಅಂತು ಈ ವಿಷಯ "ಸ್ವಯಾರ್ಥಂ ಪರಾರ್ಥಂ" ಎಂಬಂತೆ ರಾಜಿಯಾಯಿತು. ಕೆಲವು ಕಾನಗಳಲ್ಲಿ ಪ್ರಯೋಗಾರ್ಥವಾಗಿ ಮೆಣಸು ಬಳ್ಳಿಗಳನ್ನು ಬೆಳಿಸಗೊಡಬೇಕಾಗಿಯೂ, ಆ ಪ್ರಯೋಗ ನೋಡಿ ಮುಂದೆ ಉಪಾಯ ಮಾಡಬೇಕಾಗಿಯೂ ದಿವಾಣರ ಹಂಚಿಕೆಯಾಗಿರುವದಂತೆ. ಕಾಳಿ ಮರದ ಲೈಸನ್ಸು ಫೀ ತಗ್ಗದೆಂದು ಕಾಳಿಜಕ್ಕೆ ಉಣ್ಣದವರೆಲ್ಲರೂ ನಿಶ್ಚಯವಾಗಿ ತಿಳಿಯಬಹುದು. ಜಂಗಲ ಅಧಿಕಾರಿಗಳು ಹಾಸಲು ತಗ್ಗಿಸಲು ಎಷ್ಟು ಕಷ್ಟಪಟ್ಟದ್ದರಿಂದ ದಿವಾಣರ ನಿರುಪಾಯವಾಯಿತಂತೆ. ಜಂಗಲ ಅಧಿಕಾರಿಗಳ ಅನುಮತಿಯಂತೆ ಹಾಸಲನ್ನು ತಗ್ಗಿಸುವದಾದರೆ, ಹಾಸಲು ತಗ್ಗಿ ಬಹಳ ದಿನಗಳಾಗುತ್ತಿದ್ದವು. ಇದಕ್ಕಾಗಿ ದಿವಾಣರು ಇಲ್ಲಿ ಅನುಗ್ರಹಿಸಿದುದೇಕೆ? ಸ್ಟ್ರಿಪ್ಪುಗಳ ವಿಷಯ ಒಂದು ಸಿದ್ಧಪಡಿಯಾಗುವದು. ೬ ತಿಂಗಳಲ್ಲಿ ಸ್ಟ್ರಿಪ್ಪನ್ನು ಕಡಿದು ಚೊಕ್ಕ ಮಾಡದಿದ್ದರೆ, ಸ್ಟ್ರಿಪ್ಪು ಬಂದ್ದಾಗುತ್ತಿತ್ತು; ಈಗ ಆ ಪ್ರತಿಬಂಧವು ದೂರವಾಗುವದು. ಹಿಮ್ಮೆ ಸ್ಟ್ರಿಪ್ಪು ಕೊಟ್ಟಮೇಲೆ ಅದನ್ನು ಬೇಸಾಯಗಾರರು ಅನುಕೂಲಕೆಯಂತೆ ಚೊಕ್ಕ ಮಾಡಿಕೊಳ್ಳಬಹುದು. ಪ್ರಧಾನರ ಸಂಚಾರದಿಂದ ಉಂಟಾಗಬಹುದಾದ ಲಾಭದ ಸ್ಥೂಲ ಸ್ವರೂಪವಿದು. ಪ್ರತ್ಯಕ್ಷ ಏನು ಸಿಗುತ್ತದೆಂಬುದು ಯಾರಿಗೂ ಹೇಳಬರದು. ವಿಚಾರದಲ್ಲಿಯೇ ಪ್ರಧಾನರ ಕಾರಕೀರ್ದಿಯು ಅಂತ್ಯವಾಗದಿದ್ದರೆ, ಆಚಾರವೇನಾಗುವದೆಂಬುದು ಶೀಘ್ರವೇ ಕಾಣುವದು.

ಮಹಾತ್ಮರ ಆತ್ಮಚರಿತ್ರ.

(೪೪) ಪಕ್ಷಗಾರರು ಜೊತೆಗಾರರಾದರು

ನಾತಾಳದೊಳಗಿನ ಹಾಗು ಟ್ರಾನ್ಸವಾಲದೊಳಗಿನ ವಕೀಲ ವರ್ಗದಲ್ಲಿ ಭೇದವಿಷ್ಟೆ :- ನಾತಾಳದೊಳಗಿನ ವರ್ಗವು ಸಂಯುಕ್ತ, ವಕೀಲ ವರ್ಗವು ಬೇರೆ ಬೇರೆ ಎಡ್ವೊಕೇಟರ ಪಟವಲ್ಲಿ ಬಾಜೂ ಮಾಡಿಕೊಳ್ಳುತ್ತಿತ್ತು. ಆದರಿಂದ ಅವರಿಗೆ ಎಟರ್ನಿಯಾಗಿ ಕೆಲಸ ಮಾಡಲೂ ಬರುತ್ತಿತ್ತು. ಟ್ರಾನ್ಸವಾಲದಲ್ಲಿ ಮುಂಬಯಿಯಂತೆ ನಿಶ್ಚಯವು. ಎಟರ್ನಿಯರ ಕೆಲಸ ಬೇರೆ ಎಡ್ವೊಕೇಟರ ಕೆಲಸ ಬೇರೆ ಬೇರೆ. ಎಡ್ವೊಕೇಟ ಅಥವಾ ಎಟರ್ನಿ ಯಾರಾಗಿ ಬೇಕು ಬಾಜೂ ಮಾಡಬಹುದು, ಆದರೆ ಅದೇ ಕೆಲಸವನ್ನು ನಡಿಸಬೇಕಾಗುತ್ತಿತ್ತು (ಎಡ್ವೊಕೇಟನಿಗೆ ಎಟರ್ನಿಯ ಕೆಲಸ ಮಾಡಬರುತ್ತಿದ್ದಿಲ್ಲ, ಎಟರ್ನಿಯರಿಗೆ ಎಡ್ವೊಕೇಟರ ಕೆಲಸ ಬರುತ್ತಿದ್ದಿಲ್ಲ) ಎಟರ್ನಿಯರು ಕಕ್ಷಿಗಾರರ ಕಡೆಯಿಂದ ಪ್ರಕರಣವನ್ನು ತಯಾರಿಸಿ ಕೊಡುತ್ತಿದ್ದರು. ಹೀಗೆ ತಯಾರಿಸಿಕೊಟ್ಟ ಪ್ರಕರಣವನ್ನು ಕೋರ್ಟಿನಲ್ಲಿ ವಾದಿಸುವ ಕೆಲಸವು ಎಡ್ವೊಕೇಟರದು. ನಾತಾಳದಲ್ಲಿ ನನ್ನ ಹೆಸರನ್ನು ಎಡ್ವೊಕೇಟರ ಪಟದಲ್ಲಿ ದಾಖಲಪಡಿಸಿಕೊಂಡಿದ್ದೆ. ಆದರೆ ಟ್ರಾನ್ಸವಾಲದಲ್ಲಿ ಎಟರ್ನಿಯಾಗಿ ಕೆಲಸ ಮಾಡಲು ನಾನು ಒಪ್ಪಿದೆನು. ಯಾಕೆಂದರೆ ಎಡ್ವೊಕೇಟನಾದರೆ, ಭಾರತೀಯರೊಡನೆ ನನಗೆ ಪ್ರತ್ಯಕ್ಷ ಸಂಬಂಧವುಂಟಾಗುವದಿಲ್ಲ. ಹಾಗು ದಕ್ಷಿಣ ಆಫ್ರಿಕದೊಳಗಿನ ಗೋರರಾದ ಎಟರ್ನಿಯರು ನನ್ನನ್ನು ಎಡ್ವೊಕೇಟರಾಗಿ ನೇಮಿಸಿಕೊಳ್ಳುತ್ತಿದ್ದಿಲ್ಲ.

ಆದರೆ, ಟ್ರಾನ್ಸವಾಲದೊಳಗೆ ಪ್ರೀಟೋರಿಯಾ ಮೊದಲಾದ ಸ್ಥಳಗಳಲ್ಲಿ ಎಟರ್ನಿಯರಿಗೆ ವಕೀಲಿ ನಡಿಸುವ ಅಧಿಕಾರವಿತ್ತು. ಜೋಹಾನ್ಸಬರ್ಗದ ಮೆಜಿಸ್ಟ್ರೇಟ ಕೋರ್ಟಿನಲ್ಲಿ ನಾನೊಂದು ಖಟ್ಲೆಯನ್ನು ನಡಿಸುತ್ತಿದ್ದೆನು. ಆ ಕಾರ್ಯದಲ್ಲಿ ನನ್ನ ಪಕ್ಷಗಾರನು ನನಗೆ ವಂಚಿಸಿದನೆಂದು ತಿಳಿಯಿತು. ಸಾಕ್ಷಿ ಕೊಡುವಾಗ ಅವನು ಸಂಪೂರ್ಣವಾಗಿ ಕೆಳವೇ ಬಿದ್ದನು. ಆದರಿಂದ ನಾನು ನನ್ನ ಪಕ್ಷಗಾರರ ಪಕ್ಷವನ್ನು ವಾದಿಸಲಿಲ್ಲ. ಒಮ್ಮೆಲೇ ನನ್ನ ಪ್ರಕರಣವನ್ನು ನಿಕ್ಕರಿಸಬೇಕಾಗಿ ಮೆಜಿಸ್ಟ್ರೇಟರಿಗೆ ವಿನಂತಿಸಿದೆನು. ಪ್ರತಿವಾದಿಯ ಬೆರಿಸ್ಟರನಿಗೆ ಆಶ್ಚರ್ಯವಾಯಿತು, ಮೆಜಿಸ್ಟ್ರೇಟರಿಗೆ ಸಂತೋಷವಾಯಿತು. ಸುಳ್ಳು ಪ್ರಕರಣವನ್ನು ನನ್ನ ಬಳಿ ತಂದ ಬಗ್ಗೆ ಪಕ್ಷಗಾರನಿಗೆ ಚೆನ್ನಾಗಿ ಬುದ್ಧಿ ಹೇಳಿದೆನು. ಸುಳ್ಳು ಖಟ್ಲೆಗಳನ್ನು ನಾನೆಂದೂ ಅಂಗೀಕರಿಸುವದಿಲ್ಲೆಂದು ಅವನಿಗೆ ಗೊತ್ತಿತ್ತು. ಇದೇ ಮಾತನ್ನು ನಾನು ಅವನಿಗೆ ತಿಳಿಸಿ ಹೇಳಲು, ಅವನು ತಪ್ಪನ್ನು ಒಪ್ಪಿಕೊಂಡನು. ಮೆಜಿಸ್ಟ್ರೇಟರಿಗೆ ಆ ಪ್ರಕಾರ ಹೇಳಿದ ಬಗ್ಗೆ ಅವನು ನನ್ನ ಮೇಲೆ ಸಿಟ್ಟಿಗೆದ್ದವನಾಗಿ ನನಗೆ ತೋರಲಿಲ್ಲ. ಹ್ಯಾಗೂ ಇರಲಿ, ಈ ವರ್ತನೆಯಿಂದ ನನ್ನ ವಕೀಲಿಗೆ ಬಾಧ ತಟ್ಟಲಿಲ್ಲ, ವಿಚಾರಿಸಿದರೆ ನನ್ನ ಕೆಲಸವು ಸುಲಭವಾಯಿತು. ಸತ್ಯಪ್ರಿಯತೆಯಿಂದ ನನ್ನ ಜೊತೆಗಾರ ವಕೀಲರೊಳಗೆ ನನ್ನ ಗೌರವವು ಹೆಚ್ಚಿತು. ವರ್ಣಭೇದವಿದ್ದಾಗ್ಯೂ ಅವರನ್ನು ಮರೆತು ಅನೇಕರು ನನ್ನ ಮೇಲೆ ಸ್ನೇಹಭಾವವನ್ನು ಪ್ರದರ್ಶಿಸಿದರು.

ವಕೀಲಿಯ ಕೆಲಸದಲ್ಲಿ ನನ್ನ ಅಜ್ಞಾನದ ಅಭ್ಯಾಸವಿತ್ತು. ನನ್ನ ಅಜ್ಞಾನವನ್ನು ಪಕ್ಷಗಾರರಿಂದಾಗಲಿ, ಸಹಕಾರಿಗಳಿಂದಾಗಲಿ ನಾನು ಬಚ್ಚಿಡುತ್ತಿದ್ದಿಲ್ಲ. ನನಗೆ ತಿಳಿಯದಿದ್ದಾಗ ನನ್ನ ಪಕ್ಷಗಾರರಿಗೆ ನನಗಿಂತ ಅನುಭವವುಳ್ಳ ವಕೀಲರ ಆಲೋಚನೆ ಪಡೆಯಲು ನಾನು ಹೇಳುತ್ತಿದ್ದೆ. ನನ್ನ ಮೇಲೆ ನಿಷ್ಠೆಯುಳ್ಳವರು, ನನಗಿಂತ ಅನುಭವಿ ವಕೀಲರ ಆಲೋಚನೆ ಪಡೆಯಲು ಅವರಿಂದ ನಾನು ಅಪ್ಪಣೆ ಪಡೆಕೊಳ್ಳುತ್ತಿದ್ದೆ. ಈ ನಿರ್ಮಲತ್ವದ ಸ್ವಭಾವದಿಂದ ಪಕ್ಷಗಾರರು ನನ್ನ ಮೇಲೆ ತುಂಬಾ ನಂಬಿಕೆಯನ್ನೂ ಪ್ರೀತಿಯನ್ನೂ ಇಡುತ್ತಿದ್ದರು. ಬೇರೆ ಬೆರಿಸ್ಟರರೊಡನೆ ಆಲೋಚನೆ ಪಡೆಯ ಬೇಕಾದಾಗ ಆ ಬೆರಿಸ್ಟರರಿಗೆ ಕೊಡತಕ್ಕ ಫೀಯಾದ ವೇತನವನ್ನು ಅವರು ಸಂತೋಷದಿಂದ ಕೊಡುತ್ತಿದ್ದರು. ಈ ಪ್ರೀತಿಯಿಂದಲೂ, ವಿಶ್ವಾಸದಿಂದಲೂ ಸಾರ್ವಜನಿಕ ಸೇವೆಯಲ್ಲಿ ನನಗೆ ಬಹಳ ಪ್ರಯೋಜನ ದೊರೆಯಿತು.

ದಕ್ಷಿಣ ಆಫ್ರಿಕದೊಳಗೆ ಸಮಾಜ ಸೇವೆಗಾಗಿ ವಕೀಲಿಯನ್ನು ನಾನು ನಡಿಸಿದೆನೆಂದು ಈ ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿದ್ದೇನೆ. ಇದಕ್ಕಾಗಿ ಜನರ ವಿಶ್ವಾಸವನ್ನು ಸಂಪಾದಿಸುವದು ಅಗತ್ಯವಿತ್ತು. ಭಾರತೀಯರು ಉದಾರಮನಸ್ಕರು. ವೇತನ ಪಡೆದು ನಾನು ಮಾಡಿದ ವಕೀಲಿಯ ಕೆಲಸವನ್ನು ನಿಷ್ಕಾಮ ಸೇವೆಯೆಂದೇ ಅವರು ಎಣಿಸಿದರು. ಅವರ ಹಕ್ಕುಗಳ ಪ್ರಸ್ತಾಪಕ್ಕಾಗಿ ಕಾರಾಗೃಹವಾಸದ ಕಷ್ಟಗಳನ್ನು ಅನುಭವಿಸಬೇಕಾಗಿ ನಾನು ಹೇಳಲು ಅನೇಕರು ಅದನ್ನು ಸಂತೋಷದಿಂದ ಅಂಗೀಕರಿಸಿದರು. ನಾನು ಮಾರ್ಗದರ್ಶನ ಮಾಡಿದ ಮಾರ್ಗವು ಸರಿಯಾದದೆಂದು ಸ್ವಂತ ಅನುಭವ ಪ್ರಮಾಣದಿಂದ ಅವರು ಗ್ರಹಿಸದೆ ನನ್ನ ಮೇಲಿನ ಪ್ರೀತಿ ವಿಶ್ವಾಸಗಳಿಂದ ಆ ಕಷ್ಟಗಳನ್ನು ಅವರು ಅಂಗೀಕರಿಸಿದರು.

ಇದನ್ನು ಬರೆಯುವಾಗ ಅನೇಕ ಅಮೂಲ್ಯ ಸ್ಮರಣಗಳು ನನಗೆ ಬರುತ್ತವೆ. [illegible] ನೂರಾರು ಪಕ್ಷಗಾರರು ಸಾರ್ವಜನಿಕ ಸೇವೆಯಲ್ಲಿ ನನ್ನ ಜೊತೆಗಾರರಾದರು. ಅವರ ಸಹವಾಸದಿಂದ ನನಗೆ ಆನಂದವಾಯಿತು. ಅವರು ನೆರವಾದ್ದರಿಂದ ಕಷ್ಟಗಳಿಂದಲೂ, ಆಪತ್ತುಗಳಿಂದಲೂ ನನಗೆ ವ್ಯಥೆಯಾಗಲಿಲ್ಲ.

ಕಾಶಿಯ

ಅಪೂರ್ವ ಸಾಮಾನುಗಳು!

ನಾವು ಕಾಶಿಯ ಪಟ್ಟೆ ಮಡಿ, ಸೀರೆ, ಖಣ, ರೇಶ್ಮೆ ಶಲ್ಲೆ, ಬಚ್ಚಾಣಿ, ಕಾಶ್ಮೀರದ ಶಾಲು, ಸಕಲಾತಿ ದ್ರಾಟಳೆ, ರುದ್ರಾಕ್ಷಿ ಸರ, ಕೆಂರಿ, ಗೌರೀಶಂಕರ, ಪಂಚಾಯತನ, ಸ್ಪಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಂಟೆ, ಕಂಬಿ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ -

ವಿಶ್ವನಾಥ ಎಂಡ್ ಬ್ರದರ್ಸ,

ದುರ್ಗಾಘಾಟ, ಬನಾರಸ್ ಸಿಟಿ.

ಪುಕ್ಕಟೆ ! ಪುಕ್ಕಟೆ !! ರೊಕ್ಕ ಇಲ್ಲ !!!

ಈ ಅಪೂರ್ವ ಸಂಧಿಯು ಬಹುಕಾಲ ಬರದು!

ಚಿನ್ನದ ಮುಂಗೈ ಗಡಿಯಾರಗಳು!



ಜೊತೆಗೆ ಅಮೂಲ್ಯ ಇನಾಮುಗಳು!

ಬದಿಗೆ ತೋರಿಸಿದ ನಕ್ಷೆಯೊಳಗಿನ ಗಡಿಯಾರಗಳು ಮುಂಗೈ ಗಡಿಯಾರಗಳು. ಅವುಗಳ ಸಂಗಡ ರೇಶಿಮೆಯ ಚರ್ಮದ ಪಟ್ಟಿ ಸಿಗುತ್ತದೆ. ಎರತಕ್ಕ ಕೂಡಿ ಬೆಲೆ ರೂ. ೫-೧೪-೦ . ೪ ವರ್ಷದ ಗೆರಂಟಿ.

ವ್ಹಿ. ಪಿ. ಖರ್ಚಿನ ಬಗ್ಗೆ ೦-೬-೦ ಪ್ರತ್ಯೇಕ.

೨ ಗಡಿಯಾರಗಳಿಗೆ ರೂ. ೧೫-೨-೦; ೬ ಗಡಿಯಾರಗಳಿಗೆ ರೂ. ೩೮-೦-೦, ಅಂಚೆ ವೆಚ್ಚ ಇಲ್ಲ!

ಇದಲ್ಲದೆ ಗಿರಾಕಿಗಳಿಗೆ ಒಂದೊಂದು ಇನಾಮು ಕೊಡಲಾಗುವದು. ಗಡಿಯಾರಗಳನ್ನು ತರಿಸುವಾಗ ೧ ರಿಂದ ೧೦೦ ರ ಒಳಗೆ ಯಾವುದೇ ಒಂದು ಅಂಕಿಯನ್ನು ಆರಿಸಿ ಬರೆದು ತಿಳಿಸಬೇಕು. ಆ ಅಂಕಿಯಿಂದ ಸೂಚಿತವಾದ ಇನಾಮು ಗಡಿಯಾರದ ಜೊತೆಗೆ ಕಳಿಸಲ್ಪಡುವದು. ಪ್ರತಿಯೊಂದು ಇನಾಮಿಗೆ ಒಂದೊಂದು ಅಂಕಿಯ ನಿರ್ದೇಶವಾಗಿದೆ.

ಟೀಪು — ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು.

ಪತ್ತೆ - THE DILAWAR WATCH COY., (33)

Bhuleshwar, BOMBAY

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ ಮೋಟಾರಿನ ಸಾಧನ, ಉಪಕರಣಗಳನ್ನು ಇಡುವ ತಯಾರಿಸಿದ ಪೆಟ್ಟಿಗೆಗಳು ಚಾಪೆಗಳ ಸಿಗುತ್ತವೆ.

ದರ ಫೂಟಿಗೆ ೦-೨-೬



ಮೋಟಾರಿನ ಹತ್ಯಾರುಗಳು ಇಡುವ ಒಳ್ಳೆ ಚಪಿಗೆ ಪೆಟ್ಟಿಗೆಯಿಂದ ತಯಾರಿಸಿದ ಬಗೆ ಬಗೆಯಾದ ಪೆಟ್ಟಿಗೆಗಳು ಇದಾಗ ಮೋಟಾರ ಬಾಡಿ ಬಗ್ಗೆ ಸ್ಪ್ರಿಂಗ್ಸ ಯೋಗ್ಯ ದರದಿಂದ ದೊರೆಯುತ್ತವೆ. ಪೆಟ್ಟಿಗೆ ೧೮ ಬೆಲೆ ರೂ. ೩ ಸೈಜ ೩'×೧'×೧'

ಪೇರಿಂಗ ಸಹಿತ ಆರ್ಡರು ಸಮೇತ ರೂ. ೨-೦-೦ ಮುಂಗಡವಾಗಿ ಕಳಿಸಬೇಕು.

ವಿಳಾಸ - ಎಸ್. ಎಮ್. ಪಂಡಿತ,

ಮೋಟಾರ ಟಿಕೇಟ ಆಫೀಸ, ದುರ್ಗಾಕೇರಿ. ಹೊನ್ನಾವರ (ಉ. ಕ)

ಗೋವೆಯಲ್ಲಿ ಖರದೂಷಣರು ಶುದ್ಧಿ ಯಜ್ಞ ಕುಂಡವನ್ನು ಭ್ರಷ್ಟಗೊಳಿಸಿದರು.

(೩ನೇ ಪಾನಿನಿಂದ ಮುಂದರಿಸಿದ್ದು)

ಶಿಸವಾಡಿಯಲ್ಲಿ ಪೋಲೀಸರ ಚೇಷ್ಟೆಗಳು ಉಗ್ರಸ್ವರೂಪವನ್ನು ತಾಳಿವೆ. ಹನುಮಜ್ಜಯಂತಿಯ ದಿನ ಶುದ್ಧಿಯ ವಿಧಿಯು ಮಧ್ಯಾನ್ಹಕ್ಕೇ ಪ್ರಾರಂಭವಾಗಿತ್ತು. ಮಧ್ಯರಾತ್ರಿಯ ತನಕ ಆ ಕಾರ್ಯವು ನಡೆಯುತ್ತಿತ್ತು. ರಾತ್ರಿ ೯-೯॥ ಘಂಟೆಗೆ ಒಬ್ಬ ಕಾಪಿತಾನನೂ, ಒಬ್ಬ ಶಾಬನೂ, ೫-೬ ಮಂದಿ ಶಿಪಾಯಿಗಳೂ ಬಂದು ಪಾದರಕ್ಷೆಯ ಸಹಿತ ಪವಿತ್ರ ಸ್ಥಳದಲ್ಲಿ ನುಗ್ಗಿದರು. ಒಬ್ಬ ಪ್ರಾಯಶ್ಚಿತ್ತ ವಿಧಿ ಮಾಡುವ ಕೆಲಸಿಗನಿಗೆ ಲತ್ತಾಪ್ರಹಾರ ಮಾಡಿದನು. ಇನ್ನೊಬ್ಬನು ಹೋಮ ಕುಂಡದ ಬಳಿ ಹೋಗಿ ಶಾಸ್ತ್ರಿ ಬುವಾರವರಿಗೆ ಕುತ್ತಿಗೆ ಹಿಡಿದನು. ಇನ್ನು ಭ್ರಷ್ಟರೆಲ್ಲಿದ್ದಾರೆ? ಎಂದು ಪೋಲೀಸರು ಕೇಳಿದರು. ಒಳಗಿನ ಮನೆಯಲ್ಲಿ ಊಟ ಮಾಡುತ್ತಿದ್ದಾರೆಂದು ಹೇಳಲಾಯಿತು. ಪೋಲೀಸರು ಒಳನುಗ್ಗಿ ಅವರಿಗೆ ಊಟಮಾಡಗೊಡಲಿಲ್ಲ, ನೀರು ಕುಡಿಯಲಿಕ್ಕೂ ಕೊಡಲಿಲ್ಲ. ಒಬ್ಬರಿಗೆ ೨ ಧಪರಾಕುಗಳು ಕೊಡಲ್ಪಟ್ಟವು ಮತ್ತು ಹೋಮ-ಹವನ ಮಾಡುತ್ತಿದ್ದ ಶಾಸ್ತ್ರಿಗಳವರಿಗೆ ಹಿಡಿದು ಮಣಜಿಗೆ ತಂದು ಮಾರನೇ ದಿನ ಗೋವಾಗಳಿಂದ ಹೊರಹಾಕಲ್ಪಟ್ಟರು. ಈ ವೃತ್ತಾಂತವನ್ನು ಒಬ್ಬನು ಗೋವೆಯ ಗವರ್ನರರಿಗೆ ಸಾದರಪಡಿಸಿದರು. "ನಿಮಗೆ ಉಪದ್ರವ ಕೊಟ್ಟವರ ಚೌಕಶಿ ಮಾಡಿ ಅವರಿಗೆ ಶಾಸನ ಮಾಡಲ್ಪಡುವದು. ನಿಮ್ಮ ಧರ್ಮಕೃತ್ಯಕ್ಕಾಗಿ ಪರಪ್ರಾಂತಗಳಿಂದ ಶಾಸ್ತ್ರಿಗಳಿಗೆ ಕರಿಸದೆ, ಇಲ್ಲಿಯ ಪುರೋಹಿತರ ಕಡೆಯಿಂದಲೇ ನಿಮ್ಮ ಕೆಲಸ ಮಾಡಿಸಿಕೊಳ್ಳಿ, ಅವಶ್ಯವಿದ್ದರೆ, ನಿಮಗೆ ಶಾಸ್ತ್ರಿಗಳ ಪ್ರವೇಶವೂ ಮಾಡಲ್ಪಡುವದು," ಎಂದು ಗವರ್ನರರು ಉತ್ತರ ಕೊಟ್ಟರಂತೆ.

ಹೀಗೆ ಪಾವನರಾಗುವವರಿಗೆ ಕಷ್ಟ-ನಷ್ಟ ಮಾಡಿದಾಗ್ಯೂ ಗಾವಡಿಗಳು ಎದೆಗುಂದಲಿಲ್ಲ. ಹನುಮಜ್ಜಯಂತಿಯುದಾರಭ್ಯ ೮ ದಿನಗಳೊಳಗೆ ಪ್ರಿಯೋಳ, ಕುಂಕಳ್ಳಿ, ಮಂಗೇಶ, ಸಾಪಯಿ, ಕೇರಿ, ಕರಮಳಿ ಗ್ರಾಮಗಳಲ್ಲಿ ಕೂಡಿ ೨೫೦ ಕ್ರಿಸ್ತಿಗಳು ಹಿಂದು ಧರ್ಮದಲ್ಲಿ ಸೇರಿದರು. ಮಣಜಿಯಲ್ಲಿ ಹಿಂದು ಸಂಘಟನೆಗಾಗಿ ಹಿಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಈ ಸಂಸ್ಥೆಯು ಘಟನೆಯೊಂದನ್ನು ತಯಾರಿಸಿ ಗೋಮಾಂತಕ ಹಿಂದುಗಳಿಗೆ ಅವಶ್ಯವಿದ್ದ ಸಾಮರ್ಥ್ಯವನ್ನು ಪೂರೈಸುವದು. ಹಿಂದು ಧರ್ಮಪರವಾಗಿ 'ಪ್ರಕಾಶ' ಎಂಬ ಪೋರ್ತುಗೀಜ ಭಾಷೆಯ ದೈನಿಕ ಪತ್ರಿಕೆಯೊಂದು ಸದ್ಯಕ್ಕೇ ಹೊರಡಿಸಲ್ಪಟ್ಟಿದೆ. ನಾಗಪುರದ ಡಾ| ಬಾಳಕೃಷ್ಣ ಶಿವರಾಮ ಮುಂಜೇಯವರು ಸದ್ಯಕ್ಕೆ ಗೋಮಾಂತಕಕ್ಕೆ ಹೋಗುವವರಿದ್ದಾರೆ ಡಾ| ಮುಂಜೇಯವರಿಗೆ ಸ್ವಾಗತ ಕೊಡಲು ಮಣಜಿಯಲ್ಲಿ ಸಿದ್ಧತೆಯಾಗುತ್ತಲಿದೆ. ಮಡಗಾಂವೆಯಲ್ಲಿಯೂ ಹಿಂದು ನಾಗರಿಕರ ಸಭೆಯಾಗಿ ಕ್ರಿಸ್ತಿ ಮಿಶನರಿಗಳು ಎಬ್ಬಿಸಿದ ಸ್ವಾರ್ಥಸಾಧಕ ಹೂಲಿಗಳ ನಿಷೇಧ ಮಾಯಿತು.

Wanted:- Candidates for Telegraph and Station Masters' Classes. Full particulars and Railway Fare Certificate on 2 annas Stamp Apply to:— Imperial Telegraph

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೇರಸಪ್ಪಾ ಜೋಗ (Gersapp Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತಿ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ವಿಚಾರದ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿಯಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ದ್ರಾಕ್ಷಾದಿಯೊಗಿದ್ದು ಬಹಳ ಸೀಮಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೩೦ ವರ್ಷದ ಮುದುಕರ ಕಾಮವಿಕಾರ ತರುಣರಂತೆ ಪರ್ಧವಾನವಾಗುವದು. ನಿಜವಾಗಿ ಒಂದೇ ಸಮಯದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಸಿಯ ಹೋಗಿ ಪುಷ್ಟವಾದ ನರಗಳಿಂದ ಇಲ್ಲದಂತಾಗುವದು ಮೂತ್ರವಿಸರ್ಜನದ ಕಾಲಕ್ಕೆಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಹಿಂದಾಗುವದು — ಪರಮಾ ಹಾಗೂ ಕಾಮಿನಿಂದ ಶೋಷಿತವಾದ ಶರೀರವು ನಿರೋಗಿಯಾಗುವದು. ಮೂರು ದಿವಸದಲ್ಲಿಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅಶಕ್ತರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮತ್ತು ಇವುಗಳು ಶಮನಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಾಸ್ತಿಯಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚ ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತು ೧೩—೦—೦ ಮತು ೧ ಬಾಟಲಿ ಪುಕ್ಕಟ ಸಿಗುವದು. ಟಪಾಲ ಖರ್ಚ ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ವದೇ.

ವೀರ್ಯವು ತಿಳುವಾಗ ವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ. ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ, ವೀರ್ಯಸ್ತಂಭನೆಯಾಗ್ಯಕಾಮವಾಸನೆಯು ಮತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತು ಭಸ್ಮಗಳು "ವೈಸೂರ ಸ್ಟಾರ್" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ ಓದಿಕೊಳ್ಳಿರಿ.

ಮುಂಜಾನೆ ೩ ತೊಲಿಯು ೧ ವರಿ, ರಾತ್ರಿಯು ಭೋಜನವಾದ ನಂತರ ೨ ತೊಲಿಯು ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫| ರೂ, ೩ ಡಬ್ಬಿಗೆ ೧೪| ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ.

ವಿ. ಪಿ. ಖರ್ಚ ಬೇರೆ. ...

झंडूचें

द्राक्षासव- – मृद्विकारिष्ट – शारङ्गधर म अ ७०

रामबाण औषध

सर्दि बाळविणारें
मूक वाढविणारें
श्वासश्वास साफ करणारें
झोप आणणारें
शक्ति देणारें
तेजस्वीपणा आणणारें

पिण्यास रुचिकर

कॅटलॉग मागवा

झंडु फार्मास्युटिकल वर्क्स लिमिटेड
मुंबई नं. १४

ऐजंट— मेसर्स पंडित आणी कंपनी,
तीर्थहळ्ळी

सिसिएजंट एस. एल धाकप्पा आणि ब्रदर

किंमत- एक रत्तलास १॥ रुपये.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ ಯವರ

ಸುಗಂಧಿ ನೈಶದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧಿ ನಸ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿ



ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಸೀನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಹೇಳಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮಾರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಕ್ರಯಿಸಿದರೆ ಎಲ್ಲವೂ ಪರಿಮಾಳವಾಗುವದು. ಇದನ್ನು ಅನೇಕ ಜನರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಗೋಸ ಪ್ರತ್ಯೇಕ ಕಾಗದ ಬರೆ

ಒ ತಿ ಬುದಕ್ಕೆ ಕ್ರಯ ರೂ ೦ ೬ ೦. ಸ್ಟ್ಯಾ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೬-೮-೦ ದಯ ಮಾಡಿ ನಿಮ್ಮ ಹೆಸರನ್ನು ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಏಜ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ, ಮದರಾಸ

ಹಿಂದುಸ್ಥಾನದಲ್ಲೆಲ್ಲ ಅತ್ಯಂತ ಅಗ್ರವಾದ
'ನೆಶನಲ್ ಇನ್‌ಶೂರನ್ಸ ಕಂಪನಿ, (ಲಿಮಿಟೆಡ)
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿ ಕಳೆದ ವರುಷ ಲೆಕ್ಕಾಚಾರದ ಮೇಲೆ 8 40,044 ರೂಪಾಯಿಗಳ ಲಾಭವು ದೊರೆಕಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರ ಷಕ್ಕೆ 10 ರೂಪಾಯಿನಂತೆಯೂ, ಪೂರ್ತಿ ಜೀವ ವಿಮಯ ಪತ್ರದ ಮೇಲೆ ವರುಷಕ್ಕೆ 1೨ ರೂಪಾಯಿ,ನಂತೆಯೂ ಬಹುಮಾನ ಕೊಟ್ಟಿರುವೆವು

ಹೊಂಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಆಷೆಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು	**P D Churi,**
ಬಿ ಸಿ ಶಿರಾಳಕೊಪ್ಪ,	*Branch Secretary*
ಲೋಖಂಡಿ ಬಿಲ್ಡಿಂಗ,	Alice Building
ಹುಬ್ಬಳ್ಳಿ.	*Hornby Road,*
	BOMBAY

U. Narayanacharya & CO
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪೀತಾಂಬರ ಜರಿಕಲಾಬತು ಸೀರೆ, ಶಾಲ್ಮರ್ ಶಾಲು, ಪೀತಾಂಬರ ದ್ರಾಕ್ಷೆ ಕಸ್ತೂರಿ ಶಿಂಗರಗಳೂ ಪ್ರತಿಕಮೂಲ ವ್ಯಾಪಾರವಾಗಲಿಕ್ಕೆ ಸಿಗುತ್ತವೆ ಕ್ಯಾಟಲಾಗು ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು

ವಿಳಾಸ ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪನಿ ಚೌಕಂಬಾ, ಕಾಶೀಕ್ಷೇತ್ರ

ಇದೇ "ಕರಾಮತ" ಗಾಣ—
ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ.



ಈ ಗಾಣದಿಂದ ಶೇಕಡಾ ೭೨ ರಂತೆ ರಸ ಹೊರಡುತ್ತದೆ ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು ಬಾಳಿಕೆಯುಳ್ಳದ್ದು. ವಿಶೇಷ ಯಂತ್ರಸಾಮುಗ್ರಿಯೂ ಇಲ್ಲ. ಸಾಮಾನ್ಯ ರೈತರು ಇದನ್ನು ಸರಿಪಡಿಸಬಲ್ಲರು ಸಾಧಾರಣ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ಬೇರಿಂಗು ಗನ್ ಮೆಟಲ್‌ದವು ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ಅಕ್ಸಲುಗಳು ಉಕ್ಕಿನವು ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ಯಾವ ಗಾಣದಲ್ಲಿಯೂ ದೊರೆಕವು

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦-೧೨ ಕರಾಮತಗಾಣಗಳು ದುಡಿಯುತ್ತಿವೆ ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ. ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; } ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನದ
ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು ಸಂಧಿವಾತ, ಚಳಿ, ಕಮ್ಮು, ಗಂಟ್ಲುಗಾಯ ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣ ಸಿಗುತದೆ. ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದು 'ನೋವು ಚಿಕ್ಕದೆಂದು ಯಾರೂ ತಿರಸ್ಕರಿಸಲಾಗದು ಚಿಕ್ಕ ನೋವಿನಿಂದಲೇ ಜೀವಕ್ಕೆ ಸುಖ ದೊರೆಯುವದಿಲ್ಲ. ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಅಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ ೦- ೧೧—೦

ಎಲ್ಲ ಕಡೆ ಸಿಗುತ್ತದೆ ಅಥವಾ ಅಮೃತಾಂಜನ ಡಿಪೋ,
ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, APRIL 23RD 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೮

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಪರಸ್ಥಳದವರಿಗೆ
ರೂ 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

परपरिविदितकर्ता प्रेष्यतां याति लोके अनपवादितकर्ता स्वच्छते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ
ಪ್ಯಾಯಿಕ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ. 1 0-
೮ ನಂತರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು
ದೊಡ್ಡವಿರುವದೋ ಆ ಮಾಪ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ
ಪತ್ರವ್ಯಾಪಾರ ಯಾ ಸಮಕ್ಷ ತೀರ್ಮಾ
ನಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೩ ಮಾಹೆ ಎಪ್ರಿಲ ಸನ್ ೧೯೨೩ನೇ ಇಸವಿ.)

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯು,
ಹೊಸ ಹೊಸ ಮಾದರಿಯ ಸಾಮಾನುಗಳು
ಸಿಗುತ್ತವೆ - ಕಬ್ಬಿಣ ಮೊಳೆಗಳು,
ಮೋಟಾರ ಉಪಯೋಗದ ಬೋಲ್ಟು
ಗಳು, ಪಿನ್ ಪೊರಕ, ಡಿಸ್ಟಿಲ್ಡ ವಾಟರ
ಸಿಗುತ್ತವೆ, ಬಣ್ಣ ಸಿಗುತ್ತದೆ, ಕನ್ನಡಿಯು
ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂ
ನೆಯ ಸ್ಟೇಶನರಿ ಸಾಮಾನು ಸಿಗುವ
ದುಕಾನೂ ಇದೇ! ಸಾಬೂನುಗಳನ್ನು
ಇಲ್ಲಿಯೇ ಕೊಂಡುಕೊಳ್ಳಿರಿ !! ಎಲ್ಲಾ
ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ
ಸಿಗುತ್ತವೆ ! ಎಲ್ಲಿ ಸಾಮಾನು ಅಗ್ಗ ! ಕಿರ
ಕೋಳ ವ್ಯಾಪಾರಸ್ಥರು ರೋಕ ಮಾಲನ್ನು
ಕೊಂಡರೆ, ಸವಲತ್ತು ಸಿಗುತ್ತೆ
ನಮ್ಮ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು
ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನ್ನಡ)

ಆತ್ಮಾನಂ ಸತತಂ ರಕ್ಷೇತ್ !

ಏರ್-ಪಿಸ್ತೂಲು ಯಾನೆ
ಗಾಳಿ ತುಬಾಕಿ !
ಕಳ್ಳರು, ಪರಭಾರೆಸೋರರು, ಕಾಡು ಪಶ
ಗಳು ಇವುಗಳಿಂದ ಆತ್ಮಸಂರಕ್ಷಣೆ ಮಾಡಿಕೊ
ಳ್ಳಲನುಕೂಲ ಲೈಸನ್ಸು ಬೇಡ!!
ಕಿಂ ರೂ ೪-೮-೦ (೪೦ ಗುಂಡುಗಳ ಸಹಿತ)
ವ್ಹಿ. ಪಿ ಯ ಖರ್ಚ ೦-೬-೦.
೧ ರೂಪಾಯಿಗೆ ೪೦೦ ಗುಂಡುಗಳು ಸಿಗುತ್ತವೆ
ಸೂಚನೆ.—ಪತ್ರವ್ಯವಹಾರವನ್ನು ಇಂಗ್ಲಿಷಿ
ನಲ್ಲಿಯೇ ಮಾಡಬೇಕು.
ಪತ್ತೆ.—The Novelty Stores. (103)

ಏಜಂಟರು ಬೇಕು! ಏಜಂಟರು ಬೇಕು!!



ನಮ್ಮಲ್ಲಿ
ಅತಿ ಮನೋಹರವಾದ
ಸೀಸೆ ಕಟ್ಟಿಗೆಯ
ದೇವರ ಮಂಟಪಗಳೂ,
ಬೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ
ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ
ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ
ಸಾಮಾನು ಸಿಗುತ್ತದೆ
ನಮ್ಮ ವಿಳಾಸ —
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

कारवारांत मुंबई!!!

अर्थात

आमचा टोप्यांचा जंगी कारखाना !

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या सादा अगर फॅशनेबल टोप्या तयार केल्याजातात

माल चोख— फॅशनेबल— स्वस्त— व भरपर

ह्या शिवाय

आमच्या स्वत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टॉवेल, चौक, लहान-मोठे पचे, लीडपाट, चीलपाट, शर्टींग कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या !

टीप:-आमच्या कोणत्याहि मालांवर घाऊक व्यापाऱ्यांस भरपूर कमिशन दिले जाईल.

पत्ता:- मेसर्स गोविंद माधव शेणवि, फोवकार अँड सन्स.

पोस्ट— मुंकेरि (कारवार.

FOR

HAND AND POWER

-- LOOMS --

SHUTTLES,

Roughest and even Finest COUNTS Steel & Brass REEDS.

COTTON HEALDS,
WIRE HEALDS,
BOBBINS
OIL PAINTS,
AND
EMERY PAPERS

Can be had at exceptionally reduced rates

From -

P. P. TRIVEDI & CO.,
BRUCE Street, Fort, BOMBAY

ಫ್ರಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವ್ಮೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಯೂ ಗ್ಲಾಸ ಡೂಮ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗ[illegible]ರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಮ್ಮೆ ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ - ಫೌಂಟನ ಪೇನಾ ೧, ಹೇರಾಯಿಲ್ ಬಾಟ್ಲಿ ೧, ಪಟ್ಟದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಳಿ ೧, ಸುವಾಸನೆ ಸೋಪು ೧, ಪೆನ್ನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ ಗೋಲ್ಡ ನೆಕ್ಲೇಸ್ ಎಂಬ ಕತ್ತಿನ ಹಾರ ೧, ಪಂತದ ಬಾತೋಸ್ ೧, ಕೈ ಗುಂಡಿಗಳ ಸೆಟ್ ೧, ಕೈವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ಮೂರು ವರ್ಷದ ಗ್ಯಾರಂಟಿ ಸಹಿತ ಗಡಿಯಾರ ೧ ಕೆ. ಒಳ್ಳೇ ರೂ ೪-೮-೦

ವಿಳಾಸ - **ಇಂಗ್ಲೀಷ ಎಂಪೋರಿಯಂ,**
ಪೋಸ್ಟ ಬಾಕ್ಸ ನಂ. ೧೦೫, ಮದರಾಸು.

ಟೇಬಲ್ ಟೈಂಪೀಸ ಇನಾಂ



ಈ ಪಕ್ಕದಲ್ಲಿ ಕಂಡ ಫೌಂಟನ್ ಪೇನವು ವಿಶಾಯತಿಯಲ್ಲಿ ತಯಾರಾದದ್ದು ಇದಕ್ಕೆ ೧೪ ಕ್ಯಾರೆಟ್ ಸಂಧ ನಿಬ್ಬು ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹಳ ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ ೨-೮-೦

ವಿಳಾಸ - ಓಟಿರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಉಚಿತ] **ನನ್ನ ಶಾಸ್ತ್ರೀಯವಾದ** [ಉಚಿತ

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂಥ ಶರೀರದಾರ್ಢ್ಯವು ಹೇಗೆ ಒಂದಿತೆಂಬ ವಿವರಣೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ಕಲಿಯುತ್ತಿದವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದುವ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ೩ ಆಣೆಯ ಸ್ಟಾಂಪನ್ನು ಕಳುಹಿ ಈ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿ ರೊಕ್ಕ ಖರೀದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ; ಖರೀದಿ ಚೌಕಿಯಿಂದಾಗುವದ ಪೇಟೆಯಲ್ಲಿರುವ ಧಾರಣೆಗೇ ಆಕರಿಸಲ್ಪಡುವದು. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ದೇಡಿಕೆ ಬಾಡ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ, ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗು ತರಿಸಿಕೊಳ್ಳಿ ಉಚಿತವಾಗಿ ಸಿಗುವದು.

ಪುಕ್ಕಟೆ ! ಪುಕ್ಕಟೆ !! ದುಡ್ಡು ಇಲ್ಲ !!!

ಈ ಅಪೂರ್ವ ಸಂಧಿಯು ಬಹುಕಾಲ ಬರದು!

ಚಿನ್ನದ ಮುಂಗೈ ಗಡಿಯಾರಗಳು!

ಜೊತೆಗೆ ಅಮೂಲ್ಯ ಇನಾಮುಗಳು!

ಬದಿಗೆ ತೋರಿಸಿದ ನಕ್ಷೆಯೊಳಗಿನ ಗಡಿಯಾರಗಳು ಮುಂಗೈ ಗಡಿಯಾರಗಳು. ಅವುಗಳ ಸಂಗಡ ರೇಶಿಮೆಯ ಯಾ ಚರ್ಮದ ಪಟ್ಟಿ ಸಿಗುತ್ತದೆ. ಎರಡಕ್ಕೂ ಕೂಡಿ ಬೆಲೆ ರೂ ೫-೧೫-೦. ೪ ವರುಷದ ಗೆರೆಂಟಿ

ವ್ಹಿ. ಪಿ ಖರ್ಚಿನ ಬಗ್ಗೆ ೦-೭-೦ ಪ್ರತ್ಯೇಕ.

೩ ಗಡಿಯಾರಗಳಿಗೆ ರೂ. ೧೫ ೦-೦, ೬ ಗಡಿಯಾರಗಳಿಗೆ ರೂ. ೩೮-೦-೦, ಅಂಚೆ ವೆಚ್ಚ ಇಲ್ಲ!

ಇದಲ್ಲದೆ ಗಿರಾಕಿಗಳಿಗೆ ಬಂದೊಂದು ಇನಾಮು ಕೊಡಲಾಗುವದು. ಗಡಿಯಾರಗಳನ್ನು ತರಿಸುವಾಗ ೧ ರಿಂದ ೧೦೦ ರ ಒಳಗೆ ಯಾವದೇ ಒಂದು ಅಂಕಿಯನ್ನು ಅವರು ಬರೆದು ತಿಳಿಸಬೇಕು. ಆ ಅಂಕಿಯಿಂದ ಸೂಚಿತವಾದ ಇನಾಮು ಗಡಿಯಾರದ ಜೊತೆಗೆ ಕಳಿಸಲ್ಪಡುವದು ಪ್ರತಿಯೊಂದು ನಂಬರಿಗೆ ಒಂದೊಂದು ಇನಾಮಿನ ನಿರ್ದೇಶವಾಗಿದೆ.

ಟೀಪು — ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು

ಪತ್ತೆ:- THE DILAWAR WATCH COY , (33)
Bhuleshwar, BOMBAY

ಹಿಂದು ಮಹಾಸಭೆ.

ಜಬಲಪುರದಲ್ಲಿ ಹಿಂದು ಮಹಾಸಭೆಯ ೧೧ನೇ ಅಧಿವೇಶನವು ಉತ್ಸಾಹದಿಂದ ನೆರವೇರಿತು. ಪುಣೆಯ 'ಕೇಸರೀ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ|| ನರಸೋಪಂತ ಕೇಳಕರರವರು ಸಭಾಪತಿಗಳಿದ್ದರು. ರಾಜಬಹಾದ್ದೂರ ಮಧುರಾಪ್ರಸಾದಜೀಯವರು ಸ್ವಾಗತಾಧ್ಯಕ್ಷರಿದ್ದರು. ಸ್ವಾಗತಾಧ್ಯಕ್ಷರು ಹಿಂದು 'ಸಮಾಜವು' ಸಂಘಟನೆಯನ್ನು ಕೈಕೊಂಡು ಹಿಂದುಗಳಲ್ಲಿ ಶಾರೀರಿಕ, ಮಾನಸಿಕ, ಆಧ್ಯಾತ್ಮಿಕ, ಆರ್ಥಿಕ ಸಂಪತ್ತಿಯನ್ನು ಬೆಳಿಸಬೇಕಾಗಿ ವಿಶೇಷ ಆಗ್ರಹ ಮಾಡಿದರು. ಎಲ್ಲ ಪ್ರಕಾರಗಳಿಂದಲೂ ಹಿಂದು ಸಮಾಜವು ದುರ್ಬಲವಾಗಿರುತ್ತದಾಗಿ ನುಡಿದು ಹೀಗೆಯೇ ಅಜಾಗ್ರತೆಯಿಂದ ಹಿಂದುಗಳು ನಡೆಕೊಂಡರೆ, ಮುಂದೆ ಹಿಂದು ಸಮಾಜವು ನಷ್ಟಪ್ರಾಯವಾಗುವದಾಗಿಯೂ ಉದ್ಗರಿಸಿದರು. ಇತರ ಧರ್ಮೀಯರು ಧರ್ಮಾಂತರವನ್ನು ಕೈಕೊಂಡು, ಧರ್ಮಾಭಿಮಾನಿಗಳ ಸಂಖ್ಯೆಯನ್ನು ಕ್ರಮವಾಗಿ ಬೆಳಿಸುತ್ತಿರುವಾಗ, ಹಿಂದುಗಳು ಕೂಪಮಂಡೂಕವೃತ್ತಿಯನ್ನು ತಾಳಿ ಕೈಮುಟುಗಿಸಿಕೊಂಡು ಕೂತುಕೊಂಡರೆ ಕ್ಷೀಣವಿಲ್ಲವಾಗಿ ಪ್ರತಿಪಾದಿಸಿ, ಶುದ್ಧಿ ಕಾರ್ಯವನ್ನೂ, ಅಸ್ಪೃಶ್ಯೋದ್ಧಾರವನ್ನೂ ಬೋಧಿಸಿದರು. ಕೆಲಸು ತೆಗೆಯುವ ಹಿಂದುಗಳಿಗೆ ಅಸ್ಪೃಶ್ಯರೆಂದು ಸಂಬೋಧಿಸುವದು ಅಕ್ಷಮ್ಯವೆಂದೂ, ಅವರು ಮಾಡುವ ಕಾರ್ಯವು ಉಚ್ಚತರಗತಿಯ ಸಮಾಜಸೇವೆಯೆಂದೂ, ಬಳಕದಿಂದ ಅವರು ಸ್ಪೃಶ್ಯರಾಗಬೇಕಾಗಿಯೂ ಸ್ವಾಗತಾಧ್ಯಕ್ಷರು ನುಡಿದರು. ಕಾಲಕಾಲಕ್ಕೆ ದೇಶಕಾಲಾನುರೋಧದಿಂದ ಸದಾಚಾರಗಳನ್ನು ಬೋಧಿಸುವ ಸ್ಮೃತಿ ಗ್ರಂಥಗಳಾಗುತ್ತಿದ್ದವು. ೧೦೦೦-೧೨೦೦ ವರ್ಷಗಳಿಂದ ಒಂದು ಸಹ ಸ್ಮೃತಿಗ್ರಂಥವಾಗಲಿಲ್ಲ. ಕಾರಣವು ಸ್ಪಷ್ಟವಿದೆ ಹಿಂದು ಧರ್ಮಾಭಿಮಾನಿ ಹಿಂದು ಧರ್ಮರಕ್ಷಕ ಅರಸರೇ ಹಿಂದು ಸಮಾಜಕ್ಕೆ ಲಭಿಸಲಿಲ್ಲ. ಆದರಿಂದ ಈ ಮಹಾಸಭೆಯು ಹಿಂದು ಸಮಾಜದ ಉತ್ಕರ್ಷವನ್ನು ಸಾಧಿಸಲು ಪ್ರಸಂಗೋಚಿತ ಉಪಾಯಗಳನ್ನು ಕೈಕೊಳ್ಳಬೇಕು:—(೧) ಸಮಾಜಸೇವಕ ದಳಗಳನ್ನು ಗ್ರಾಮಗಳಲ್ಲಿ ಸ್ಥಾಪಿಸತಕ್ಕದ್ದು, (೨) ಅಲ್ಲಲ್ಲಿ ಅನಾಥಾಲಯಗಳು ಸ್ಥಾಪಿಸಲ್ಪಡಬೇಕು. (೩) ಬ್ರಹ್ಮಚರ್ಯರಕ್ಷಣಕ್ಕಾಗಿಯೂ, ಶಾರೀರಿಕ ಸಂಪದಭಿವೃದ್ಧಿಗಾಗಿಯೂ ಉಪಾಯಯೋಜನೆ ಮಾಡಬೇಕು, (೪) ಗೋಹತ್ಯವನ್ನು ಪ್ರತಿಬಂಧಿಸುವ ಕಾಯಿದೆಯು ಮಾಡಲ್ಪಡಬೇಕು, (೫) ಧಾರ್ಮಿಕ ಹಕ್ಕು ಸಂರಕ್ಷಣೆಗಳಿಗಾಗಿ ಉಪಾಯಯೋಜನೆಯಾಗಬೇಕು, (೬) ಧಾರ್ಮಿಕ ಶಿಕ್ಷಣದ ಪ್ರಸಾರವಾಗಬೇಕು; (೭) ಧಾರ್ಮಿಕ ಕಾರ್ಯಗಳಿಗಾಗಿ ಅವಶ್ಯವಿದ್ದ ನಿಧಿಯನ್ನು ಅಲ್ಲಲ್ಲಿಯ ದೇವರ ಭಂಡಾರಗಳಿಂದ ಪೂರೈಸಿಕೊಳ್ಳಬೇಕು, ಪ್ರಾಂತಿಕ ವಿನಿಯೋಗವನ್ನು ಸಾಗಿಸಿ, ಉಳಿದ ಹಣದೊಳಗಿಂದ ಧಾರ್ಮಿಕ ಕಾರ್ಯವನ್ನಾಗಿಸಬೇಕು.

ಅಧ್ಯಕ್ಷರಾದ ಶ್ರೀ|| ನರಸೋಪಂತ ಕೇಳಕರರವರು ತಮ್ಮ ಭಾಷಣದಲ್ಲಿ ಹಿಂದು ಮಹಾಸಭೆಯ ಪ್ರವರ್ತಕರಿಗೂ, ಚಾಲಕರಿಗೂ, ಹಿಂದಿನ ಅಧ್ಯಕ್ಷರಿಗೂ ಭಕ್ತಿಪೂರ್ವಕವಾಗಿ ವಂದನೆಗಳನ್ನರ್ಪಿಸಿ ಹಿಂದು ಸಮಾಜದ ಮೇಲೆ ಹೊರಿಸಲ್ಪಡುವ ಜಾತ್ಯಾಭಿಮಾನದ ಆರೋಪವನ್ನು ಪರಾಂಬರಿಸಿದರು. ವಿಶ್ವಬಂಧುತ್ವವನ್ನು, ಪರಮೇಶ್ವರಪಿತೃತ್ವವನ್ನು ಕಲ್ಪಿಸಿದ ಮಹಾ ಚಿತ್ತವೇಧಕವಿದ್ವಾಂಸರೂ, ಸ್ವಸಮಾಜದ ಉನ್ನತಿಯ ವಿಷಯ ಯಾರಿಗೂ ಅಪಾಗ್ರತೆಯನ್ನು ಹೊಂದಲಾರರೆಂದು ಶ್ರೀ|| ನರಸೋಪಂತರು ಸ್ಪಷ್ಟವಾಗಿ ಹೇಳಿದರು. ಇಡೀ ಮಾನವ ಜಾತಿಯು ಉಚ್ಚ ಪ್ರತಿಯ ಮನೋಭೂಮಿಕೆಯಿಂದ ಪ್ರೇರಿತವಾಗದಿದ್ದಾಗ, ಒಂದು ಸಮಾಜವು ವೇದಾಂತವನ್ನು ತನ್ನಷ್ಟಕ್ಕೆ ಕಲ್ಪಿಸಿಕೊಂಡು ಸೋಮಾರಿಯಾದರೆ, ಮೈಗಳ್ಳನಾದರೆ, ಅದಕ್ಕೆ ಉಳಿಗಾಲ ಉಳಿಯುವದಿಲ್ಲವಾಗಿಯೂ ಶ್ರೀ|| ನರಸೋಪಂತರು ಸೋದಾಹರಣ ಪ್ರತಿಪಾದಿಸಿದರು. ಈ ಆರೋಪಕ್ಕೆ ಹಿಂದುಗಳು ಸೊಪ್ಪು ಹಾಕಬಾರದಾಗಿಯೂ, ಶ್ರೀ|| ನರಸೋಪಂತರು ಎಚ್ಚರಿಕೆ ಕೊಟ್ಟರು. ಹಿಂದು ಸಮಾಜಕ್ಕೆ ಹಿಂದುಸ್ಥಾನದ ಹೊರಗೆ ಆಶ್ರಯಸ್ಥಾನವಿಲ್ಲದ್ದರಿಂದ ಹಿಂದುಗಳು ಹಿಂದುಸ್ಥಾನದಲ್ಲಿಯೇ ವಿಶೇಷ ಧರ್ಮಾಭಿಮಾನದಿಂದ ಮಡಿಯ ಬಿದ್ದರೆ, ಹಿಂದು ಧರ್ಮಕ್ಕೆ ಉಳಿಗಾಲ ಉಳಿಯಲಿಕ್ಕಿಲ್ಲವಾಗಿಯೂ ಶ್ರೀ|| ನರಸೋಪಂತರು ಸಭಿಕರಿಗೆ ತಿಳಿಸಿಕೊಟ್ಟರು. ಮುಸಲ್ಮಾನರಿಗಾಗಲಿ, ಕ್ರೈಸ್ತ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚೆಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನ್ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂದಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚೆಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೩ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲ ಇಲ್ಲವೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ರಿಗಾಗಲಿ ಅರಬಸ್ತಾನ, ತುರ್ಕಸ್ತಾನ, ಪಾಲೆಸ್ಟೈನ, ಯುರೋಪ, ಅಮೇರಿಕೆ ಮುಂತಾದ ಪ್ರದೇಶಗಳಿಂತ್ತವಾಗಿಯೂ ಅಧ್ಯಕ್ಷರು ನುಡಿದರು. ಮಹಾಸಭೆಯು ಮಹಾರಾಷ್ಟ್ರದಲ್ಲಿ ಶುದ್ಧಿಕಾರ್ಯವನ್ನು ಭರದಿಂದ ನಡೆಸುತ್ತಿದ್ದ ಬಗ್ಗೆ ಆನಂದ ಪ್ರದರ್ಶಿಸಿದರು. ಬ್ರಹ್ಮಚರ್ಯಾಶ್ರಮದ ಶ್ರೀ ವಿನಾಯಕ ಮಹಾರಾಜರವರಿಗೆ ಧನ್ಯವಾದಗಳನ್ನರ್ಪಿಸಿದರು. ಇತರ ಪ್ರಾಂತದವರು ಈ ಕಾರ್ಯವನ್ನು ಅಭಿಮಾನದಿಂದ ಪುರಸ್ಕರಿಸಬೇಕಾಗಿಯೂ ಅವರು ಬಿನ್ನೈಸಿಕೊಂಡರು. ಮತಾಂತರ ಹಾಗು ಧರ್ಮಾಂತರ ಕಾರ್ಯಗಳಲ್ಲಿ ದರ್ಪ ಅಥವಾ ಬಲಾತ್ಕಾರ ಪ್ರಯೋಗಗಳಾಗಬಾರದಾಗಿ ಶ್ರೀ| ನರಸೋಪಂತರು ಕೇಳಿ, ಮೊಹಮ್ಮದೀಯರ ಬಳಿ ಹಿಂದು ಧರ್ಮದಲ್ಲಿ ಸಾಕ್ಷಾತ್ ಆಗಿ ಪ್ರಮಾಣ ಪತ್ರವನ್ನು ಬರಿಸಿಕೊಟ್ಟರೆ, ಅವರಿಗೆ ಉದ್ಧಾರಕೊಡಬು ಯಾವದೇ ರೀತಿ ಪ್ರತ್ಯವಾಯವಾಗಬಾರದಾಗಿ ಕೇಳಿ, ಒಂದು ಪರಿಹಾರವನ್ನು ಸೂಚಿಸಿದರು. ಪರಿಸ್ಥಿತಿಯು ಗುಣದೋಷಗಳ ವಿಚಾರದಿಂದ ಹಿಂದು ಸಮಾಜವು ಧರ್ಮಾಚಾರಗಳಲ್ಲಿ ಕೆಟ್ಟ ಪಾಠಗಳನ್ನು ಕೈಕೊಂಡದ್ದರಿಂದ ಸ್ವಸಮಾಜಕ್ಕೆ ವಿಪರೀತವಾದ ನಷ್ಟವುಂಟಾಗಿದೆ ಎಂದಾಗಿಯೂ ಅಧ್ಯಕ್ಷರು ಸೂಚಿಸಿ, ಇತ್ತೀಚೆ ಸನಾತನ ಧರ್ಮಾಭಿಮಾನಿಗಳಲ್ಲಿ ಜಾಗೃತಿಯುಂಟಾಗಿರುತ್ತದಾಗಿಯೂ ಉದ್ಗರಿಸಿದರು. ಹಿಂದು ಸಂಘಟಣವನ್ನು ಹಿಂದು ಸಮಾಜದವರು ಕೈಕೊಂಡ ವ್ಯಾಪಕವಾದ ಹಿಂದು ಧರ್ಮದಲ್ಲಿ ಸೇರಿದ ಸನಾತನಿ, ಆರ್ಯಸಮಾಜ, ಜೈನ ಶೀಖ, ಬೌದ್ಧ, ಬ್ರಹ್ಮೋ ಪ್ರಭೃತಿ ಸಮಾಜಗಳನ್ನು ಒಟ್ಟುಗೂಡಿಸಿ, ಹಿಂದು ಧರ್ಮದ ಪ್ರಾಬಲ್ಯವನ್ನು ಬೆಳಿಸಬೇಕಾಗಿಯೂ ಅಧ್ಯಕ್ಷರು ನುಡಿದರು. ಬ್ರಾಹ್ಮಣ ಬ್ರಾಹ್ಮಣೇತರರೊಳಗಿನ ಕಲಹವು ಐಹಿಕ ಉತ್ಕರ್ಷಕ್ಕಾಗಿ ನಡೆದಿರುವದೆಂದು ಸ್ಪಷ್ಟಮಾಡಿದರು. ಬ್ರಾಹ್ಮಣರು ತಮ್ಮ ಸ್ವಂ[illegible] ಹಕ್ಕುಗಳನ್ನು ಐಕ್ಯಸಾಧನಕ್ಕಾಗಿ ಧಾರೆಯೆರೆಯಲು ಸಿದ್ಧರಾಗಬೇಕಾಗಿಯೂ ಶ್ರೀ| ನರಸೋಪಂತರು ಉಪದೇಶಿಸಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು, ಅವಶ್ಯವಿದ್ದರೆ, ಕಾನೂನನ್ನೇ ಪಾಸುಮಾಡಬೇಕಾಗಿ ಶ್ರೀ| ಕೇಳಕರರವರು ಅಭಿಪ್ರಾಯಪಟ್ಟರು. ದೇವಾಲಯಗಳಲ್ಲಿ ಸ್ಪೃಶ್ಯಾಸ್ಪೃಶ್ಯವೆಂಬ ಭೇದವಿಲ್ಲದೆ ಎಲ್ಲರೀತಿಯೂ ಎಲ್ಲರಿಗೂ ದೇವದರ್ಶನ ಪಡೆಯಲು ಪ್ರತ್ಯವಾಯವಿರಬಾರದಾಗಿ ಅಧ್ಯಕ್ಷರು ಸೂಚಿಸಿದರು.

ಹಿಂದು ಸಮಾಜದಲ್ಲಿ ಜಾತಿ-ಪಂಥ ಭೇದಗಳನ್ನು ಅದೃಶ್ಯರ ಹಿಟ್ಟಿಗೆ ಮುರಿಯಲಿಕ್ಕಿಸಲು ಭಿನ್ನ ಭಿನ್ನ ಜಾತಿಗಳಲ್ಲಿ ವಿವಾಹ ಸಂಬಂಧಗಳನ್ನು ಘಟಿಸಬೇಕಾಗಿಯೂ ಸೂಚನೆಯಾಯಿತು. ಇಂಥ ವಿವಾಹಗಳಿಂದ ಭಾವಿಕರ ಮಂತ್ರ-ತಂತ್ರಗಳಿಗೆ ಉಂಟಾದ ಅವಾಸ್ತವಿಕವಾದ ಆತಂಕವು ದೂರವಾಗಿ ಮೂಲಮಂತ್ರ-ತಂತ್ರಗಳನ್ನೇ ಉಳಿಸಿ, ಹಿಂದು ಸಮಾಜದಲ್ಲಿ ಆಚಾರ-ವಿಚಾರಗಳಲ್ಲಿ ಐಕ್ಯ ಸಾಧಿಸಬೇಕಾಗಿಯೂ ಶ್ರೀ| ನರಸೋಪಂತರು ಉದ್ಗರಿಸಿದರು. ಗೋಸಂರಕ್ಷಣವನ್ನು ವಾದ್ಯ ಪ್ರತಿಬಂಧವನ್ನು ಅಧ್ಯಕ್ಷರು ಪರಾಮರ್ಶಿಸಿ, ಅನಾದಿ ಕಾಲದಿಂದ ಸಮಾಜಕ್ಕಿದ್ದ ಹಕ್ಕುಗಳನ್ನು ಮುಸಲ್ಮಾನರ ಮನವೊಲಿಸುವ [illegible] ಬಲಿಬಿದ್ದು ಕಳಕೊಳ್ಳಬಾರದಾಗಿ ಹೇಳಲಾಯಿತು. ಹಿಂದು-ಮುಸಲ್ಮಾನರ ಐಕ್ಯತೆಯ ವಿಚಾರವನ್ನು ಶ್ರೀ| ನರಸೋಪಂತರು ವಿಸ್ತಾರಪೂರ್ವಕವಾಗಿ ನಡೆಸಿದರು. ಐಕ್ಯದ ಸೂಚನೆಯಾದೊಡನೆ ಮುಸಲ್ಮಾನರು ಹಿಂದುಗಳ ಕಡೆಯಿಂದ ಹೆಚ್ಚೆಚ್ಚು ಹಕ್ಕುಗಳನ್ನು ಕೇಳಕೊಳ್ಳಲು ಪ್ರಯತ್ನಿಸುತ್ತಾರಾಗಿ ಹೇಳಿ ಸಿಂಧ ಪ್ರಾಂತವನ್ನು ಪ್ರತ್ಯೇಕಿಸುವ ಸೂಚನೆಯು ಇದೂ, ಮುಸಲ್ಮಾನರ ಸ್ವಾರ್ಥಸಾಧನೆಯ ದ್ಯೋತಕವೆಂದು ಶ್ರೀ| ನರಸೋಪಂತರು ಸಪ್ರಮಾಣ ಪ್ರತಿಪಾದಿಸಿದರು. ಹಿಂದುಸ್ಥಾನದೊಳಗಿನ ಮುಸಲ್ಮಾನರಿಗೆ ಹಿಂದುಸ್ಥಾನದ ಮೇಲೆ ಪ್ರೇಮ ವಿರುವದಿಲ್ಲವಾಗಿಯೂ ಪರದೇಶಗಳೊಳಗಿನ ಸ್ವಧರ್ಮೀಯರ ಮೇಲೆಯೇ ಅವರು ಯಾವಾಗಲೂ ಬಾಯಿಬಿಡುತ್ತಿದ್ದಾರಾಗಿಯೂ, ಇದು ಅಪ್ರಸಕ್ತವಾಗಿರುವದಾಗಿಯೂ ಅಫಘಾನಿಸ್ತಾನ-ತುರ್ಕಸ್ಥಾನದ ಮುಸಲ್ಮಾನ ಪ್ರದೇಶಗಳಲ್ಲಿ ಇದು ಮುಸ್ಲಿಂ-ಮುಸ್ಲಿಮ ಸ್ಥಳಗಳ ಕುರಿತ [illegible] ಭಕ್ತಿಯಿರದಿದ್ದುದಾಗಿಯೂ [illegible] ಮುಸಲ್ಮಾನರು [illegible] ಗ್ರಂಥದಲ್ಲಿ [illegible] ಮುಸಲ್ಮಾನ ಧರ್ಮ [illegible] ಮೇಲೆ ಹೆಚ್ಚಿನ [illegible] [illegible] ಆದರಿಂದ ಮುಸಲ್ಮಾನರಲ್ಲಿ [illegible] [illegible] ಸಮಾಜದವರು [illegible] ಕಾರ್ಯವನ್ನು ನಡೆಸ[illegible] [illegible] ಗೂಡಿನೊಳಗೆ [illegible] ಕಾರ್ಯವನ್ನು [illegible] ಹಿಂದು ಗಳ ನಡೆವಳಿಕೆಯು [illegible] ಇತ್ಯಾದಿ ಭಾಷಣದ ನಂತರ ಶ್ರೀ| ನರಸೋಪಂತರು [illegible] ಮೊದಲನೇ ದಿವಸ ಕಾರ್ಯಕಲಾಪವನ್ನು ಮುಗಿಸಿದರು.

ಮುಂದಿನ ಅಧಿವೇಶನಗಳಲ್ಲಿ ಸ್ವಾಮಿ ಶ್ರದ್ಧಾನಂದ ಪುರಸ್ಕಾರವನ್ನು ಕೈಕೊಳ್ಳಬೇಕಾಗಿ ವಿಷಯನಿರ್ಧಾರಕ ಸಭೆಯಲ್ಲಿ ಒಂದು ಸೂಚನೆ ಬಂದಿತ್ತು. ಆದರೆ, ಹಿಂದು ಮಹಾಸಭೆಯ ಕಾರ್ಯವು ಧರ್ಮಪ್ರಧಾನವಾಗಿದ್ದರಿಂದ ಆ ಮೂಲಾಗ್ರ ರಾಜಕೀಯ ಪ್ರಶ್ನೆಯನ್ನು ಮಹಾಸಭೆಯು ಕೈಕೊಳ್ಳಬಾರದಾಗಿ ಅಧ್ಯಕ್ಷರು ಅಭಿಪ್ರಾಯಪಟ್ಟದ್ದಕ್ಕೆ ವಿಷಯನಿರ್ಧಾರಕ ಮಂಡಳವು ಪ್ರಚಂಡ ಬಹುಮತದಿಂದ ಒಪ್ಪಿಕೊಂಡಿತು. ಸಂಘಟನೆಯ ಠರಾವನ್ನು ಕಾಶಿಯೊಳಗಿನ ಪಂಡಿತ ಜಗತ್‌ನಾರಾಯಣ [illegible]ರು ಮಂಡಿಸಿದರು. ಆ ಠರಾವು ಏನಂದರೆ:- ಹಿಂದುಗಳು ತಮ್ಮ ಗ್ರಾಮಗಳಲ್ಲಿ ಹಿಂದು ಮಹಾಸಭೆಯ ಶಾಖೆಗಳನ್ನು ಸ್ಥಾಪಿಸಿಕೊಂಡು ಮಹಾಸಭೆಯ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸಬೇಕಾಗಿ ಈ ಮಹಾಸಭೆಯು ಹಿಂದುಗಳಿಗೆಲ್ಲ ಬಿನ್ನೈಸಿಕೊಳ್ಳುತ್ತದೆ. ಈ ಠರಾವಿನ ವೇಳೆ ಸ್ವಾಮಿ ಬ್ರಹ್ಮಾನಂದ ಭಕ್ತ, ಹಾಗು ಪಂಡಿತ ಹರಿಶ್ಚಂದ್ರ ವಾಡೇಗಳವರ ಭಾಷಣಗಳಾದ ಬಳಿಕ, ಪಂಡಿತ ಮದನಮೋಹನ ಮಾಲವೀಯರವರು ಒಳ್ಳೇ ಸ್ಫೂರ್ತಿದಾಯಕವಾದ ಭಾಷಣ ಮಾಡಿದರು. ಪಂಡಿತ ಮಾಲವೀಯರವರು ನುಡಿದದ್ದೇನಂದರೆ- "ಹಿಂದುಗಳೆಂದು ಹೇಳಿಸಿಕೊಳ್ಳಲು ಅನೇಕರಿಗೆ ಲಜ್ಜೆಯಾಗುತ್ತದಂತೆ, ವಾಸ್ತವಿಕವಾಗಿ "ಹಿಂದು" ಎಂದು ಹೇಳಿಸಿಕೊಳ್ಳುವದು ದೊಡ್ಡ ಭಾಗ್ಯವು. ಸ್ವಸಂರಕ್ಷಣವನ್ನು ಕೈಕೊಳ್ಳಲು ಎಲ್ಲರೂ ಪ್ರಯತ್ನಪಡಬೇಕು. ಇದರಿಂದ ಪರಧರ್ಮೀಯರ ದ್ವೇಷವಾಗುವದಿಲ್ಲ, ದ್ವೇಷಬುದ್ಧಿಯೇ ಇಲ್ಲಿ ಆತ್ಮೋನ್ನತಿಗಾಗಿ ಸಂಘಟನೆಯನ್ನು ಹಿಂದು ಸಮಾಜವು ಕೈಕೊಳ್ಳಲುದ್ಯುಕ್ತವಾಗಿದೆ. ಹಿಂದು ಸಮಾಜವು ದುರ್ಬಲವಾಗಿ [illegible] ಇತರರನ್ನವಾದರೆ, ಸಬಲರು, ಪ್ರಬಲರು ಸಮಾಜಕ್ಕೆ ಪೀಡೆ ಪಡಿಸುತ್ತಾರೆ, ದೇಶದಲ್ಲಿ ಶಾಂತತೆಯು ಭಂಗವಾಗುತ್ತದೆ. ಆತತಾಯಿಗಳಿಗೆ ಶಿಕ್ಷೆ ಮಾಡಲು ಶಾಸ್ತ್ರಕಾರರೇ ಅಪ್ಪಣೆ ಕೊಟ್ಟಿದ್ದಾರೆ. ಪುರಾತನ ಕಾಲದಲ್ಲಿ ಮರಾಠಾ ಹಾಗು ರಜಪೂತ ಜಾತಿಯ ಸ್ತ್ರೀಯರು ಕೂಡ ದೆ ಸವಾರಿ ಮಾಡುತ್ತಿದ್ದರು ವೀರ ಮಾತೆಯರೂ, ವೀರ ಕನ್ಯೆಯರೂ ಆ ಕಾಲದಲ್ಲಿ ಹುಟ್ಟುತ್ತಿದ್ದರು. ಅದರಂತೆ ಈಗಲೂ ಹುಟ್ಟಬೇಕು. ಮಹಾಭಾರತದಲ್ಲಿ ಕುಂತಿ ದೇವಿಯವರು ಅಥವಾ ವಿದುಲಾ ದೇವಿಯವರು ಮಗಂದಿರರಿಗೆ ಮಾಡಿದಂಥ ಉಪದೇಶವನ್ನು ಮಾಡುವಷ್ಟು ಪಾತ್ರತೆಯಿದ್ದ ಮಾತೆಯರು, ಭಾಗ್ಯಶಾಲಿ ಮಾತೆಯರು ನಮ್ಮೀ ಭಾರತವರ್ಷದಲ್ಲಿ ಹುಟ್ಟಬೇಕು. ಹಿಂದು ಸಮಾಜದಲ್ಲಿ ಪರಮಾವಧಿಯ ಬ್ರಹ್ಮಚರ್ಯವನ್ನು ನಡಿಸಲು ಸಭೆಯು ಪ್ರಯತ್ನಿಸಬೇಕು" ಇತ್ಯಾದಿ. ಈ ತೀರ್ಮಾನವು ಮನ್ನಿಸಲ್ಪಟ್ಟಿತು.

ಶುದ್ಧಿ ಠರಾವನ್ನು ಬಡೋದೆಯ ಶ್ರೀ| ಆನಂದಪ್ರಿಯ ಪಂಡಿತರವರು ಸೂಚಿಸಿದರು. ಅಹಿಂದುಗಳಿಗೆ ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳುವ ಪ್ರಮಾಣವನ್ನು [illegible] ಜನ್ಮರು ಶ್ರೀ ಶಂಕರಾಚಾರ್ಯರಾದ ಡಾ. ಕುರ್ತಕೋಟಿಯವರಿಗೆ ಧನ್ಯವಾದಗಳನ್ನರ್ಪಿಸಿ, ಶುದ್ಧಿ ಕಾರ್ಯವನ್ನು ಕೈಕೊಳ್ಳುವ ಇತರ ಅನೇಕ ಸಂಸ್ಥೆಗಳಿಗೆ ಅಭಿನಂದಿಸಿ, ಶುದ್ಧಿ ಕಾರ್ಯವನ್ನು ಸುಸಂಘಟಿತವಾಗಿ ನಡಿಸಲು ಮಹಾಸಭೆಯು ಪ್ರತ್ಯೇಕ ಶುದ್ಧಿ ವಿಭಾಗವನ್ನು ನಿರ್ಮಿಸುವ ಈ ಠರಾವಿಗೆ ಮುಸಲ್ಮಾನ ಧರ್ಮದಿಂದ ಹಿಂದುಗಳಾಗಿದ್ದ ಪಂಡಿತ ಶಾಂತಿಸ್ವರೂಪರವರು ಅನುಮೋದನ ಕೊಟ್ಟ ಬಳಿಕ, ಈ ತೀರ್ಮಾನವು ಮಂಜೂರಾಯಿತು. ಗೋಮಾಂತಕದೊಳಗಿನ ಶುದ್ಧಿಯ ತೀರ್ಮಾನವನ್ನು ಶ್ರೀ| ಜಿತೇಂದ್ರ ಶಾಸ್ತ್ರಿಯವರು ಸೂಚಿಸಿದರು. ಮಸೂರದ ಬ್ರಹ್ಮಚರ್ಯಾಶ್ರಮದ ವಿದ್ಯಮಾನ ಗೋಮಾಂತಕದಲ್ಲಿ ನಡೆಯುವ ಶುದ್ಧಿ ಕಾರ್ಯವನ್ನು ಹಿಂದು ಮಹಾಸಭೆಯು ಮನ್ನಿಸಿ, ಆ ಕಾರ್ಯದ ಕುರಿತು ಅಲ್ಲಿನ ಸರಕಾರವು ವಿನಾ ಎಬ್ಬಿಸುವ ಹೂಲಿಗಳನ್ನು ನಿಷೇಧಿಸಿ, ಕ್ರೈಸ್ತ ಪಾದ್ರಿಗಳಂತೆ ಹಿಂದು ಶುದ್ಧಿ ಪ್ರಚಾರಕರಿಗೆ ಧರ್ಮಾಂತರ ಮಾಡಲು ಸ್ವಾತಂತ್ರ್ಯವಿರಬೇಕಾಗಿಯೂ ಸಭೆಯ ಹೇಳಿಕೆಯನ್ನು ಅಲ್ಲಿಯ ಗವ್ಹರ್ನರರ ಬಳಿ ನಿವೇದಿಸಲು ಮಹಾಸಭೆಯು ಹಿಂದು ಶಿಷ್ಟಮಂಡಳವನ್ನು ಕಳಿಸಬೇಕಾಗಿಯೂ ನಿರ್ಧರಿಸುವ ಈ ತೀರ್ಮಾನಕ್ಕೆ ಬ್ರಹ್ಮಚರ್ಯಾಶ್ರಮದ ಶ್ರೀ| ಕ್ಷೀರಸಾಗರರವರು ಅನುಮೋದಿಸಿದ ಬಳಿಕ, ಈ ಠರಾವು ಐಕ್ಯಮತ್ಯದಿಂದ ಮನ್ನಿಸಲ್ಪಟ್ಟಿತು.

ಸಿಂಧ ಪ್ರಾಂತದ ಪ್ರತ್ಯೇಕ ರಚನೆ ಮಾಡಬಾರದಾಗಿ ೩ನೇ ಠರಾವಿನ ಮೇಲೆ ವಿಶೇಷ ಚರ್ಚೆ ನಡೆಯಿತು. ಸಿಂಧ, ಪಂಜಾಬ, ವಾಯುವ್ಯ ಸರಹದ್ದು ಮುಂತಾದ ಪ್ರದೇಶಗಳಲ್ಲಿ ಮುಸಲ್ಮಾನರ ಅಂಬೋಣದಂತೆ ಪ್ರಾಂತಗಳ ರಚನೆಯಾದರೆ, ಹಿಂದುಸ್ಥಾನದಲ್ಲಿ "ಹಿಂದು-ಹಿಂದುಸ್ಥಾನ" ಹಾಗು 'ಮುಸಲ್ಮಾನ-ಹಿಂದುಸ್ಥಾನ" ಹೀಗೆ ಎರಡು ಭಾಗಗಳಾಗಿ ಹಿಂದುಸ್ಥಾನದಲ್ಲಿ ಜಾತೀಯಕಲಹಗಳು ಪ್ರಬಲವಾಗುವವೆಂದೂ, ಹಿಂದುಸ್ಥಾನಕ್ಕೆ ಅತ್ಯಂತ ನಷ್ಟವಾಗುವದೆಂದೂ, ಮುಸಲ್ಮಾನರಿಗೆ ಹಿಂದುಸ್ಥಾನದ ಮೇಲೆ ಪ್ರೀತಿ ಹುಟ್ಟಿ ಹಿಂದು ಮುಸಲ್ಮಾನರು ಬಾಂಧವರೆಂಬ ಭಾವನೆಯಾಗಿ, ಆ ಭಾವನೆಗೆ ತಕ್ಕ ಸಂಧಾನ ಶರ್ತುಗಳು ನಿಶ್ಚಯವಾಗುವ ವರೆಗೆ ಈ ವಿಭಾಗ ವಿಚಾರವನ್ನು ಕೈಕೊಳ್ಳಬಾರದಾಗಿಯೂ, ಪ್ರತ್ಯೇಕ ಪ್ರಾಂತವನ್ನು ರಚಿಸುವದರಿಂದ ಹಿಂದಿನ ಮಾನವು ದೇಶದ ಪ್ರಗತಿಗೆ ನಷ್ಟವಾಗಬಹುದಾಗಿಯೂ ೩ನೇ ಠರಾವಿನಲ್ಲಿ. ಡಾ|| ಮುಂಜೇಯವರು ಈ ಠರಾವಿನ ಮೇಲೆ ಮಾತಾಡುವ(?) ತನಕ ಆವೇಶದಿಂದ ಅಪ್ರತಿಮ ಭಾಷಣ ಮಾಡಿದರು. ಮುಸಲ್ಮಾನರ ಸಾಹಚರ್ಯವು ಹಿಂದುಗಳಿಗೆ ಮಾತ್ರ ಅವಶ್ಯವಿದೆ; ಮುಸಲ್ಮಾನರಿಗೆ ಹಿಂದುಗಳ ಅವಶ್ಯಕತೆಯಿಲ್ಲ; ಎಂಬ ಕಲ್ಪನೆಯಿಂದ ಹಿಂದು ಮುಸಲ್ಮಾನ ಸಂಧಾನ ಶರ್ತುಗಳಾಗುತ್ತಿವೆ. ಹಿಂದುಗಳು ತಲೆ ಬಗ್ಗಿಸಿದಹಾಗೆ ಮುಸಲ್ಮಾನರು ತಮ್ಮಸ್ವ(?) ತಲೆ ಒಗ್ಗಿಸಲು ಆಜ್ಞಾಪಿಸುತ್ತಾರೆ. ಲಖನೌದಲ್ಲಿ ಮುಸಲ್ಮಾನರ ಬೇಡಿಕೆಯನ್ನು ಲೋಕಮಾನ್ಯ ಟಿಳಕ ನಾಯಕರು ಮನ್ನಿಸಿದರು; ಮುಸಲ್ಮಾನರು ಸಂತೋಷಭರಿತರಾದರು; ಈಗ ಆ ಸಂತೋಷವಿಲ್ಲ, ಹೆಚ್ಚಿನ ಅನುಕೂಲ್ಯಗಳನ್ನು ಅವರು ಬೇಡುತ್ತಿದ್ದಾರೆ. ರಾಷ್ಟ್ರೀಯ ಸಭೆಯಾಗಿ ೪೫ ವರ್ಷಗಳಾದರೂ, ಮುಸಲ್ಮಾನರು ರಾಷ್ಟ್ರೀಯ ಸಭೆಯಲ್ಲಿ ಸೇರಿಕೊಳ್ಳುವದಿಲ್ಲ. ಅಷ್ಟು ಮುಸಲ್ಮಾನರ ಮನೋವೃತ್ತಿಯು ರಾಷ್ಟ್ರಹಿತ ವಿಘಾತಕವಾಗಿದೆ. ತಮ್ಮ ಬೇಡಿಕೆಗಳನ್ನು ನೋಡುವಾಗ ರಾಷ್ಟ್ರಹಿತ ವಿಚಾರವು ಅವರಿಗೆ ತೋರುವದಿಲ್ಲ, ಹಿಂದುಗಳಷ್ಟೇ ರಾಷ್ಟ್ರಹಿತವನ್ನು ಕಲ್ಪಿಸಿಕೊಂಡು ಸ್ವರಾಜ್ಯದ ಧ್ಯಾನವನ್ನು ಯಾಕೆ ಸಾಧಿಸಬೇಕು? ಹಿಂದುಗಳನ್ನು ನಿಯಂತ್ರಿಸುವದಕ್ಕಾಗಿ ಹಿಂದುಸ್ಥಾನದೊಳಗಿನ ೫ ಪ್ರಾಂತಗಳಲ್ಲಿ ಮುಸಲ್ಮಾನರ ಪ್ರಾಬಲ್ಯವನ್ನು ಹೆಚ್ಚಿಸಬೇಕಾಗಿ ಮೌ|| ಅಬುಲ್ ಕಲಮ ಆಝಾದ ಮಹಮ್ಮದ ಅಲಿಗಳವರಂಥ ನಿರ್ಮಲಚಿತ್ತದವರೆಂದು ಹೇಳಲ್ಪಡುವ ಲೋಕನಾಯಕರು ನುಡಿಯುತ್ತಾರೆ. ಅಂದರೆ, ಪೇಶಾವರದಿಂದ ಕಲಕತ್ತೆಯ ತನಕ ಮುಸಲ್ಮಾನ-ಹಿಂದುಸ್ಥಾನವನ್ನು ನಿರ್ಮಿಸಿಕೊಂಡು ಮುಸಲ್ಮಾನ ಪ್ರದೇಶವನ್ನು ಬೆಳಿಸಿಕೊಳ್ಳುವ ಹುನ್ನಾರ ನಡೆದಿದೆ. ಇದಕ್ಕೆ ಹಿಂದುಗಳು ಎಷ್ಟುಕಷ್ಟು ಒಪ್ಪಬಾರದಾಗಿ ಡಾ|| ಮುಂಜೇಯವರು ಸಾರಿ ಹೇಳಿದರು. ಸಿಂಧದೊಳಗಿನ ಪ್ರೊ|| ಘಡ್ವಾನಿಯವರು ಸ್ಥಳೀಕ ಪರಿಸ್ಥಿತಿಯನ್ನು ಯಥಾರ್ಥವಾಗಿ ಬಣ್ಣಿಸಿದರು. ಮ್ಯುನಿಸಿಪಾಲಿಟಿ-ಲೋಕಲ್ ಬೋರ್ಡುಗಳಂಥ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರುಬಾರಕ್ಕೆ ಶಿಕ್ಷಣಕ್ಕೆ ಅಲ್ಲಿ ಮುಸಲ್ಮಾನರು ನಡಿಸುವ ಬಲಾತ್ಕಾರವನ್ನು ಹಿಂದುಗಳು ಪರಾಂಬರಿಸಬೇಕು. ಹಿಂದುಗಳು ನಡಿಸುವ ಕೈಗಾರಿಕೆಗಳ ಮೇಲೆ ಕರಗಳು ಹೇರಲ್ಪಡುತ್ತವೆ; ಮುಸಲ್ಮಾನರು ನಡಿಸುವ ಉದ್ಯೋಗಗಳ ಮೇಲೆ ಕರಗಳಿಲ್ಲ. ಈ ಪಕ್ಷಪಾತವನ್ನು ಸ್ವತಃ ಕಲೆಕ್ಟರರೇ ಪ್ರಕಟಿಸಿದ್ದಾರೆ. ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಈ ವಿಷಯ ಪ್ರಶ್ನೆ ಕೇಳಿದರೆ, ಸಿಂಧದ ಮುಸಲ್ಮಾನ ದಿವಾಣರಾದ ನಾ|| ಹಿದಾಯತುಲ್ಲಾರವರು ಮೂಕವೃತ್ತಿಯನ್ನೇ ಧರಿಸುತ್ತಾರೆ. ಸ್ಥಳೀಕ ಹಿಂದು ಸಾವಕಾರರನ್ನು ಮುಳುಗಿಸಿ ಮುಸಲ್ಮಾನ ಸಾಲಗಾರರಿಗೆ ಲಾಭ ಮಾಡಿಕೊಡುವ ಅನ್ಯಾಯದ ಪ್ರಕಾರಗಳು ಸಿಂಧದಲ್ಲಿ ನಡೆದಿವೆ. ಲಾರಕಾನಾ ಪಟ್ಟಣದಲ್ಲಿ ಮುಸಲ್ಮಾನರು ಹಗಲು ಲೂಟಿ ಮಾಡಿದರು. ನ್ಯಾಯ ಕೋರ್ಟಿನಲ್ಲಿ ಎಲ್ಲರೂ ನಿರ್ದೋಷಿಗಳೇ ಇತ್ಯಾದಿ ಸ್ಥಿತಿಯನ್ನು ಪ್ರೊ|| ಘಡ್ವಾನಿಯವರು ಹೇಳಿ ಮುಗಿಸುವಷ್ಟರಲ್ಲಿ ಡಾ|| ಚೊಯಿತರಾಮರವರೂ ತಮ್ಮ ಅನುಭವಗಳನ್ನು ಸ್ವಯಂಸ್ಫೂರ್ತಿಯಿಂದ ಸಭಿಕರಿಗೆ ಹೇಳಲುದ್ಯುಕ್ತರಾದರು. ಖಿಲಾಫತಗಾಗಿ ಸಿಂಧದೊಳಗಿನ ಹಿಂದುಗಳು ಸಾವಿರಾರು ರೂಪಾಯಿಗಳನ್ನು ಕೊಟ್ಟರು, ಮುಸಲ್ಮಾನ ಪ್ರಮುಖರೊಡನೆ ದುಡಿದರು; ಈಗ ಆ ಪ್ರಮುಖರೇ ಹಿಂದುಗಳಿಗೆ ದಣಿಸುತ್ತಾರೆ. ದಿನಾ ಹಿಂದು ಸ್ತ್ರೀಯರಿಗೆ ಭ್ರಷ್ಟ ಮಾಡುವ ಪ್ರಕಾರಗಳು ನಡೆಯುತ್ತಿವೆ. ಬಾಲ ಬಾಲಕಿಯರಿಗೆ ಅಫಘಾಣಿಸ್ಥಾನಕ್ಕೆ ಓಡಿಸಿಕೊಂಡು ಹೋಗುತ್ತಾರೆ. ಪ್ರಮುಖರು ಈ ಥರ ಅತ್ಯಾಚಾರಗಳಿಗೆ ಲಕ್ಷ್ಯ ಮಾಡದಿರುವದು ಆಶ್ಚರ್ಯವಲ್ಲವೇ? ಸಿಂಧ ಪ್ರಾಂತವನ್ನು ಪ್ರತ್ಯೇಕಿಸಲು ವಿರೋಧಿಸುವದು ರಾಷ್ಟ್ರೀಯವಾಗದು. ಮೋಂಟೆಗ್ಯೂ ಸಾಹೇಬರ ಕಾಲಕ್ಕೆ ಸಿಂಧದ ಮುಸಲ್ಮಾನರು ಒಕ್ಕಟ್ಟಾಗಿ ಸಿಂಧ ಪ್ರಾಂತವನ್ನು ಪ್ರತ್ಯೇಕ ಮಾಡಬಾರದಾಗಿ ನಿರ್ಣಯಿಸಿದ್ದಾರೆ. ಆ ಕಾಲಕ್ಕೆ ಮುಸಲ್ಮಾನ ಪ್ರಮುಖರಾದ ಪರಲೋಕವಾಸಿ ಭುರ್ಗ್ರಿಯವರೇ ಅಧ್ಯಕ್ಷರು. ಈಗ ೬ ವರ್ಷಗಳಲ್ಲಿ ಪ್ರತ್ಯೇಕ ಪ್ರಾಂತ ಬೇಕಾಗಿ ಮುಸಲ್ಮಾನರು ಪ್ರಯತ್ನಪಡುತ್ತಿದ್ದಾರೆ. ಇದರ ಗೂಢವೇನು? ಸಿಂಧೀ ಭಾಷೆಯು ದೇವನಾಗರಿ ಲಿಪಿಯಲ್ಲಿ ಬರೆಯಲ್ಪಡುತ್ತಿತ್ತು, ಈಗ ಲಿಪಿಯು ಅರಬೀ ಲಿಪಿಯಾಗಹತ್ತಿದೆ. ಪ್ರಾಥಮಿಕ ಪುಸ್ತಕಗಳಲ್ಲಿ ಸಂಸ್ಕೃತ ಅಥವಾ ಹಿಂದೀ ಶಬ್ದಗಳ ಬದಲಿಗೆ ಉರ್ದು ಶಬ್ದಗಳನ್ನು ಸೇರಿಸುವ ರೂಢಿ ಬಿದ್ದಿದೆ. ಮಹಮ್ಮದ ಕಾಸಿಮನು ಹಿಂದುಸ್ಥಾನದ ದಿಗ್ವಿಜಯ ಮಾಡಲು ಪ್ರವೇಶಿಸಿದ ದಿನಕ್ಕೆ 'ಭಕ್ತೀ ದಿನ'ವೆಂದು ಸಂಬೋಧಿಸಿ ಸಿಂಧ ಪ್ರಾಂತದಲ್ಲಿ ಮುಸಲ್ಮಾನರ ಉತ್ಸವ ನಡೆಯುತ್ತದೆ. ಇದು ದೇಶಪ್ರೇಮವೇ? ಇತ್ಯಾದಿ ನುಡಿದು, ಡಾ|| ಚೊಯಿತರಾಮರು ಸ್ವಸ್ಥಾನಾಪನ್ನರಾದರು. ಸರದಾರ ಸರ್ದಾರಪ್ರತಾಪ ಸಿಂಗರವರು ಈ ಸೂಚನೆಯನ್ನು ವಿರೋಧಿಸಿದರು; ಪಂಡಿತ ಮದನಮೋಹನ ಮಾಲವೀಯರವರೂ ವಿರೋಧಿಸಿದರು. ಇದೇ ಸಭಾಮಂಟಪದಲ್ಲಿ ನಾಲ್ಕೇ ಮಂದಿಗಳು ವಿರೋಧಕರಾಗಿ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು.

ಅಸ್ಪೃಶ್ಯರಿಗೆ ಸ್ಪೃಶ್ಯರಂತೆ ಸಮಸ್ತ ಅನುಕೂಲ್ಯಗಳನ್ನು ಪೂರೈಸಲು ಸಮಸ್ತ ಹಿಂದು ಧರ್ಮಾನುಯಾಯಿಗಳು ಇರಬೇಕಾಗಿ ಘೋಷಣವಾಯಿತು. ವಾದ್ಯಘೋಷದಿಂದ ಸಾರ್ವಜನಿಕ ಮಾರ್ಗಗಳ ಮೇಲಿಂದ ಮೆರವಣಿಗೆಯನ್ನು ತೆರಳಿಸುವ ಅಧಿಕಾರವು ನ್ಯಾಯಾಸನದಿಂದ ನಿರ್ಣಯವಾಗಿದ್ದರೂ, ಸ್ಥಳೀಕ ಅಧಿಕಾರಿಗಳು ಅವುಗಳಿಗೆ ಬೆಂಬಲ ಕೊಡದಿರುವದು ಅನ್ಯಾಯವೆಂದು ಹಿಂದು ಮಹಾಸಭೆಯು ನಿಶ್ಚಯಿಸಿರುತ್ತದೆ. ಇಂಥ ಪ್ರಸಂಗದಲ್ಲಿ ತಮ್ಮ ಹಕ್ಕನ್ನು ಕಾಪಾಡಿಕೊಳ್ಳಲು ಹಿಂದುಗಳು ನ್ಯಾಯ ಉಪಾಯಗಳನ್ನು ಕೈಕೊಂಡಲ್ಲಿ ಅವು ಯೋಗ್ಯವೆಂದು ಮಹಾಸಭೆಯು ಅಭಿಪ್ರಾಯಪಡುವ ೬ನೇ ಠರಾವು ಮನ್ನಿಸಲ್ಪಟ್ಟಿತು. ಹಿಂದುಗಳು ತಮ್ಮ ತಮ್ಮ ಪ್ರಾಂತಗಳಲ್ಲಿ ಲಿಪಿಯ(?) ವಿಷಯ ವಿಚಾರ ಮಾಡುವಾಗ ಹಿಂದು ಮಹಾಸಭೆಯ ಧೋರಣದಂತೆ ನಡೆಕೊಳ್ಳಬೇಕಾಗಿ ವಿಧಿಸುವ ೭ನೇ ಠರಾವು ಮಂಜೂರಾಯಿತು. ಗೋರಕ್ಷಣ ಮುಂತಾದ ಕೀರ್ತನಗಳಾದ(?) ಬಳಿಕ, ಔಪಚಾರಿಕ ವಿಧಿಗಳಾಗಿ ಈ ಅಧಿವೇಶನವು ಕೊನೆಗಂಡಿತು. ಹಿಂದುಗಳು ಮಹಾಸಭೆಯ ಪ್ರವೃತ್ತಿಯನ್ನು ಪರಾಂಬರಿಸಿ, ಅವುಗಳಿಗನುಗುಣವಾಗಿ ನಡೆಕೊಂಡು ಹಿಂದುತ್ವವನ್ನು ಕಾಪಾಡಿಕೊಳ್ಳಲಿಕ್ಕೂ, ಅಭಿವೃದ್ಧಿಗೈಯ್ಯಲಿಕ್ಕೂ ಮುನ್ನಡೆ(?) ದುಡಿಯಬೇಕಾಗಿ ಪ್ರಾರ್ಥನೆ.

— ತಮಿಳನಾಡಿನೊಳಗಿನ ತಿಂಪುರ(?) ಜಿಲ್ಹೆಯ ಒಂದು ಗ್ರಾಮದಲ್ಲಿ ಮಿಂಚು ಬಿದ್ದು ಒಂದು ತೆಂಗಿನ ಮರಕ್ಕೆ ಬೆಂಕಿ ಬಿತ್ತು. ಇದರಿಂದ ಬೆಂಕಿಯು ಸುತ್ತಮುತ್ತಲಿನ ೮೦ ಮನೆಗಳಿಗೆ ತಾಗಿ ಅವೆಲ್ಲ ಸುಟ್ಟು ಹೋದವು.

— ಮುಂಬಯಿಯಲ್ಲಿ ಅಳಿಯನಿಗೂ, ಅತ್ತೆಗೂ ದೊಡ್ಡ ಹೊಡೆದಾಟವಾಯಿತು. ಅಳಿಯನು ತನ್ನ ಮಗಳನ್ನು ಮನೆಗೆ ಕರಕೊಂಡು ಹೋಗುತ್ತೇನೆಂದು ಹೇಳಲು, ಅತ್ತೆಯು ಮೊಮ್ಮಗಳನ್ನು ಕಳಿಸುವದಿಲ್ಲ(?) ಇಬ್ಬರೊಳಗೂ ಮಾತಿನಲ್ಲಿ ಆತ್ಮಬೋಧವಾಗದೆ ಹೊಡೆದಾಟವಾಯಿತು, ಅಳಿಯನು ಅತ್ತೆಗೆ ಹೊಡೆದು ಹಲ್ಲುಮುರಿದುಬಿಟ್ಟನು! ಶಿಕ್ಷೆಯಾಗಿ(?) ಅಳಿಯನಿಗೆ ೪೦ ರೂ. ದಂಡವಾಯಿತು.

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS-BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ
ಮೋಟಾರಿನಲ್ಲಿ ಹಾಸುವಂಥ, ಉತ್ತಮ ರೀತಿಯಿಂದ ತಯಾರಿಸಿದ ಕ್ಯಾನವ್ಹಿಯ ಕತ್ತದ ಚಾಪೆಗಳು ಸಿಗುತ್ತವೆ.

ದರ ಫೂಟಂಕ್ಕೆ ೦-೩-೬

ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಚಿಲೋಕಟ್ಟಿಗೆಯಿಂದ ತಯಾರಿಸಿದ ಬಗೆ ಸಮೋಕವಾದ ಪೆಟ್ಟಿಗೆಗಳು ಹಾಗು ಮೋಟಾರ ಬಾಡಿ ಬಗ್ಗೆ ಸ್ಟೆಟಲಿಂಗ್ಸ ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ. ಪೆಟ್ಟಿಗೆ ೧೮ ಬೆಲೆ ರೂ. ೭ ಸ್ಯಾಜ ೩'x೧'x೧'.

ಬೇಕಾದವರು ಬೆಲೆಯು ಸಮೇತ ರೂ. ೨-೦-೦ ಮುಂಗಡವಾಗಿ ಕಳಿಸಬೇಕು.

ವಿಳಾಸ:— ಎಸ್. ಎಮ್. ಪಂಡಿತ,

ಮೋಟಾರ ಟಿಕೀಟ ಆಫೀಸ, ದುರ್ಗಾಕೇರಿ, ಹೊನ್ನಾವರ. (೫ ೮)

ಕಾನಡಾ ವೃತ್ತ.

[illegible] ವಿಭವ ಸಂ। ವೈಶಾಖ ಶು। ೪ ದಿ[illegible] ಸೋಮವಾರ

ಹೊಲಗಳ ಪುನರ್ಘಟನೆ

ಹೊಸ ಕಾಯಿದೆಯ ಸ್ವರೂಪ

ಹಂಚಿಕೊಂಡು ಬಿದ್ದ ಚಿಕ್ಕ ಚಿಕ್ಕ ಹೊಲಗಳನ್ನು ಪುನರ್ಘಟಿಸುವದಕ್ಕಾಗಿ ಏರ್ಪಡಿಸಲಿಕ್ಕಿದ್ದ ಕಾಯಿದೆಯ ಸ್ವರೂಪವನ್ನು ಇಂದಿನ ವಿವರಿಸುವೆವು. ಈ ವಿವರಣೆಯಿಂದ ಈ ಕಾಯಿದೆಯ ಕ್ರಾಂತಿಕಾರಕ ರೂಪವು ಪ್ರಜೆಗಳಿಗೆ ಸ್ಪಷ್ಟವಾಗುವದು. ಈ ಕಾಯಿದೆಯ ಭಾಗಗಳು ಎರಡು. ಮೊದಲನೇ ಭಾಗದಲ್ಲಿ ನಿಶ್ಚಿತ ಕ್ಷೇತ್ರಕ್ಕೆ ಕಡಿಮೆಯಾಗಿ ಚಿಕ್ಕ ಚಿಕ್ಕ ಹೊಲಗಳಾಗದಂತೆ ಪ್ರತಿಬಂಧಿಸುವ ಉಪಾಯಗಳ ಯೋಜನೆಯಾಗಿದೆ. ಅದಲ್ಲದೆ ಮತ್ತೆ ಈಗಿನ ಹೊಲಗಳನ್ನು ಕ್ರಮವಾಗಿ [illegible] ವಿರೋಧ ಉಂಟಾಗದಂತೆ ಚಿಕ್ಕ ಹೊಲಗಳನ್ನು ದೊಡ್ಡದಾಗಿ ಮಾಡುವ ಯೋಜನೆಯಾಗಿದೆ. ಎರಡನೇ ಭಾಗವು ಕ್ರಾಂತಿಕಾರಕ ಉಪಾಯಗಳನ್ನು ಕಲ್ಪಿಸುತ್ತಿದೆ. ಹಂಚಿಕೊಂಡಿದ್ದ ಹೊಲಗಳನ್ನು ಸರಕಾರವು ಸ್ವಾಧೀನಪಡಿಸಿಕೊಂಡು ಹೊಸ ಪದ್ಧತಿಯಂತೆ ಹಂಚಿಕೊಡುವ ಯೋಜನೆಯಾಗಿದೆ. ಮುಖ್ಯ ಹೇತುವೇನಂದರೆ, ಇಲಾಖೆಯೊಳಗಿನ ಭೂಮಿಯನ್ನೆಲ್ಲ ವಿಶಿಷ್ಟ ಕ್ಷೇತ್ರಕ್ಕೆ ಕಡಿಮೆಯಾಗದಂತೆ ಹಂಚಿಹಾಕಿ ಬೇಸಾಯದ ಏಳ್ಗೆಯನ್ನು ಸಾಧಿಸುವದು.

ಮೊದಲನೇ ಭಾಗದೊಳಗಿನ ೨೬ ಕಲಮುಗಳಲ್ಲಿ ಪ್ರತಿಬಂಧಕ ಉಪಾಯವು ಹೇಳಲ್ಪಟ್ಟಿದೆ. ಸಿಂಧ ಪ್ರಾಂತವನ್ನು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಒಂದು 'ಮಂಡಳ'ವನ್ನೇರ್ಪಡಿಸಬೇಕು. ಆ ಮಂಡಳದ ಅಧ್ಯಕ್ಷರು ಜಿಲ್ಲಾಧಿಪತಿಗಳು. ಜಿಲ್ಲಾ ಬೋರ್ಡಿನ ಮೂವರು ಸಭಾಸದರೂ, ಬೇಸಾಯ ಖಾತೆಯ ಡೈರೆಕ್ಟರರೂ ಈ ಮಂಡಳದ ಸಭಿಕರು. ಈ ಮಂಡಳವು ಬೇಸಾಯಗಾರರಿಗೆ ಸ್ವತಂತ್ರ ನಿರ್ವಾಹವಾಗುವಂಥ ಕ್ಷೇತ್ರವನ್ನು ನಿಶ್ಚಯಿಸತಕ್ಕದ್ದು. ಹಾಗು ಆ ಕ್ಷೇತ್ರಕ್ಕೆ ಕಡಿಮೆಯಾಗಿದ್ದ ಹೊಲಗಳನ್ನೆಲ್ಲ ಹಕ್ಕು ನೋಂದಣಿ ಪತ್ರಿಕೆಗಳಲ್ಲಿ [illegible]ಸಬೇಕು. ಈ ಮಂಡಳದ ನಿರ್ಣಯದ ಮೇಲೆ ಕಮಿಶನರರಿಗೆ ಅಧಿಕಾರವಿದೆ. ಕಮಿಶನರರ ಮೇಲೆ ಸರಕಾರಕ್ಕೆ ಅಧಿಕಾರವಿದೆ. ಜಿಲ್ಲೆಯೊಳಗಿನ ಬೇಸಾಯಗಾರರ ಆಕ್ಷೇಪಗಳನ್ನು ವಿಚಾರಿಸಿ ಈ ಕ್ಷೇತ್ರಮರ್ಯಾದೆಯನ್ನು ನಿಶ್ಚಯಿಸಬೇಕೆಂದು ವಿಧಿಸಲಾಗಿದೆ. ಪ್ರತಿಯೊಂದು ಕ್ರಮ ನಡೆದ ಬಳಿಕ ಕಾಲಕಾಲಕ್ಕೆ ಸಂಬಂಧಪಟ್ಟವರಿಗೆ ತಿಳಿಸಬೇಕೆಂಬ ಯೋಜನೆಯೂ ಆಗಿದೆ. ಹೀಗೆ ನಿಶ್ಚಯವಾದ ಕ್ಷೇತ್ರಕ್ಕೆ ಕಡಿಮೆಯಾಗಿರುವ ಹೊಲಗಳನ್ನು ಈಗಿನಂತೆ ಮುಂದೆ ಸಾಗುವಳಿ ಮಾಡಲು ಪ್ರತ್ಯವಾಯವಿಲ್ಲ. ಆದರೆ ಅವುಗಳನ್ನು ಮಾರುವ ಬಗ್ಗೆ ಕಬ್ಜಾಪತ್ರ ಕೊಡುವ ಬಗ್ಗೆ ಪ್ರತಿಬಂಧಿಸಲಾಗಿದೆ. ನೆರೆಹೊರೆಯವರಿಗೆ ಮಾತ್ರ ಅವುಗಳನ್ನು ಮಾರತಕ್ಕದ್ದು, ಕಬ್ಜಾಪತ್ರ ಮಾಡಿಕೊಡತಕ್ಕದ್ದು. ಇದಕೆ ವಿಕ್ರಿ ನಡೆದಲ್ಲಿ ಅಗ್ರಕ್ರಯಾಧಿಕಾರವನ್ನು ಪ್ರಸ್ಥಾಪಿಸಲು ದಿವಾಣಿ ಕೋರ್ಟುಗಳಲ್ಲಿ ಇಲಾಜು ನಡೆಸಲು ನೆರೆಹೊರೆಯವರಿಗೆ ಅಧಿಕಾರವಿದೆ. ನೆರೆಹೊರೆಯವರೆಂದರೆ ಸ್ವಾಧೀನವಾಗುವ ಹೊಲದ ನೆರೆಹೊರೆಯವರು. ಸ್ವಾಧೀನ ಮಾಡುವ ಮುಂಚೆ ಸ್ವಾಧೀನತೆಯ ಶರ್ತುಗಳನ್ನು ವಿವರಿಸಿ ಮಾಮಲೇದಾರರಿಗೆ ನೋಟೀಸು ಕೊಡಬೇಕು. ಮಾಮಲೇದಾರರು ನೆರೆಹೊರೆಯವರಿಗೆ ತಿಳಿಸಬೇಕು. ಹೀಗೆ ತಿಳಿಸಲಾದ ೨ ತಿಂಗಳೊಳಗೆ ನೆರೆಹೊರೆಯವರು ತಮ್ಮ ಅಗ್ರಕ್ರಯಾಧಿಕಾರವನ್ನು ಉಪಯೋಗಿಸಲು ಸಂತೋಷಪಡದಿದ್ದರೆ, ಬೇರೆಯವರ ಸ್ವಾಧೀನಪಡಿಸಲಿಕ್ಕೆ ಅಡ್ಡಿ ಇಲ್ಲ. ಇದು ಈ ಶಾಸನವಿದ್ದ ಚಿಕ್ಕ ಹೊಲಗಳ ಮಾರಾಟದ ವ್ಯವಸ್ಥೆಯಾಯಿತು. ಈ ಕಾಯಿದೆಯಾದ ಮೇಲೆ ಹೊಸದಾಗಿ [illegible] ಹಂಚಿಕೆಗಳಾದರೆ, ಅವನ್ನು ಸಾಗುವಳಿ ಮಾಡಬಾರದಾಗಿಯೂ ಅಗ್ರಕ್ರಯಾಧಿಕಾರವುಳ್ಳ ನೆರೆಯವರಿಗೇ ಸಾಗುವಳಿಗೆ ಕೊಡಬೇಕಾಗಿಯೂ [illegible] ಶರ್ತು ವಿಧಿಸಲಾಗಿದೆ. ಕಾಯಿದೆಯಾದ ಮೇಲೆ ಕಲೆಕ್ಟರರಿಂದ ಸ್ವಾಧೀನವಾಗುವ ಪ್ರಸಂಗದಲ್ಲಿ ಕಮಿಟಿಯಿಂದ ನಿಶ್ಚಯಿಸಲಾದ ಕ್ಷೇತ್ರಕ್ಕೆ ಮಿಕ್ಕದಂತೆ ಪಾಲುಮಾಡಬೇಕು. ಪಾಲುಗಾರರಲ್ಲಿ ಪಾಲುಮಾಡಲು ಸಾಕಷ್ಟು ಕ್ಷೇತ್ರವಿಲ್ಲದಿದ್ದಲ್ಲಿ ಕಲೆಕ್ಟರರು ಬಂದಷ್ಟು ಜನರಿಗೆ ಭೂಮಿ ಕೊಟ್ಟು, ಉಳಿದ ಜನರಿಗೆ ಹಣಕೊಡಬೇಕು. ಪಾಲು ಮಾಡತಕ್ಕ ಭೂಮಿ [illegible] ಹರಡಿಕೊಂಡು ಬಿದ್ದರೆ, ಮತ್ತು ಹರಡಿಕೊಂಡು ಬಿದ್ದ ತುಂಡುಗಳು ವಿಶಿಷ್ಟ ಕ್ಷೇತ್ರಮರ್ಯಾದೆಗೆ ಕಡಿಮೆಯಾಗಿದ್ದರೆ, ಅವನ್ನು ನೆರೆಹೊರೆಯ ಖಾತೆದಾರರಲ್ಲಿ ಲಿಲಾವು ಮಾಡಿ ಹಣವನ್ನು ಪಾಲುಗಾರರಲ್ಲಿ ಹಂಚಿಕೊಡಬೇಕು. [illegible] ಮೊದಲನೇ ಭಾಗದಲ್ಲಿ ಹೊಲಗಳ ಪುನರ್ಘಟನೆಯಾಗುವಂತೆ ಕ್ರಮ ಹೇಳಲ್ಪಟ್ಟಿದ್ದು [illegible].

[illegible]ವಾಗಿ ಪುನರ್ಘಟನೆಯಾಗುವ ತನಕ [illegible] ಇಲ್ಲದಿದ್ದರೆ ಬೇಸಾಯಗಾರರಿಗೆ [illegible] ಸರಕಾರವು ಗೊತ್ತುಪಡಿಸಿದ್ದು ಎರಡನೇ ಭಾಗದ ಅನುಷ್ಠಾನವಾಗುತ್ತದೆ. ಈ ಭಾಗವನ್ನು ಸರಕಾರವು ನಿಶ್ಚಿತ ಗ್ರಾಮಗಳಲ್ಲಿ ಮಾತ್ರ ಜಾಹೀರನಾಮೆಗಳ ಮೂಲಕ ಪ್ರಚಾರಗೊಳಿಸಬೇಕು. ಕಲೆಕ್ಟರರು ತಮ್ಮ ಅಧಿಕಾರ ಕಕ್ಷೆಯೊಳಗಿನ ಗ್ರಾಮಗಳ ಖಾತೆದಾರರ ಬಹುಮತದಿಂದ ಆ ಗ್ರಾಮದ ಹೊಲಗಳ ಪುನರ್ಘಟನೆಯನ್ನು ಕೈಕೊಳ್ಳಬೇಕು. ಈ ಬಗ್ಗೆ ಸರಕಾರವು ಕೊನ್ಸೊಲಿಡೇಟಿಂಗ ಆಫೀಸರ ಎಂಬ ಪುನರ್ಘಟನೆಯ ಅಧಿಕಾರಿಗಳನ್ನು ನೇಮಿಸುವದು. ಈ ಆಫೀಸರರು ಮೂವರನ್ನು ಬೆಂಬಲಕ್ಕೆ ಪಡಕೊಳ್ಳಬೇಕು. ಒಬ್ಬರು ಗ್ರಾಮದ ಪಟೇಲರು, ಇನ್ನಿಬ್ಬರು ಗ್ರಾಮ ಪಂಚಾಯತಿಯ ಇಬ್ಬರು ಸಭಾಸದರು. ಗ್ರಾಮ ಪಂಚಾಯತಿಯಿಲ್ಲದಿದ್ದರೆ, ಕಲೆಕ್ಟರರು ನೇಮಿಸಬಹುದಾದ ಈರ್ವರು. ಹೀಗೆ ರಚನೆಯಾದ ಮಂಡಳವು ಆ ಗ್ರಾಮದ ನಿರೀಕ್ಷಣೆ ಮಾಡಿ ಖಾತೆದಾರರ ಹಕ್ಕುಗಳನ್ನೂ, ಆ ಹಕ್ಕುಗಳ ಬೆಲೆಯನ್ನೂ ನಿಶ್ಚಯಿಸಿ, ಆ ವೇಳೆ ಆ ಗ್ರಾಮದ ಪುನರ್ಘಟನೆಯನ್ನೂ ಸೂಚಿಸಬೇಕು. ಏನಾದರೂ ಆಕ್ಷೇಪ ಬಂದರೆ, ಆ ಆಕ್ಷೇಪಗಳನ್ನು ಪಂಚಕೋರ್ಟಿನ ದ್ವಾರಾ [illegible] ನಿಶ್ಚಯಿಸಿಕೊಳ್ಳತಕ್ಕದ್ದು. ಪಂಚಕೋರ್ಟೆಂದರೆ, ಡಿಸ್ಟ್ರಿಕ್ಟ ಜಡ್ಜರೊಬ್ಬರು, ಕೊನ್ಸೊಲಿಡೇಟಿಂಗ ಆಫೀಸರರೊಬ್ಬರು, ಜಡ್ಜರು ನೇಮಿಸಿಕೊಳ್ಳಬಹುದಾದ ಸಭ್ಯ ಗೃಹಸ್ಥರೊಬ್ಬರು, ಹೀಗೆ ಘಟಿಸಲ್ಪಟ್ಟ ಪಂಚಕೋರ್ಟಿನಲ್ಲಿ ಕೊನ್ಸೊಲಿಡೇಟಿಂಗ ಆಫೀಸರರು ಕಳಿಸಿದ [illegible] ವಿಷಯದ ಇತ್ಯರ್ಥವಾಗುವದು. ಇದರ ಮೇಲೆ ಅಪೀಲು ಇಲ್ಲ. ಪುನರ್ಘಟನೆಯ ಆಫೀಸರರು ನಿಶ್ಚಯಿಸಿದ ಬೆಲೆಯೇ ಕೊನೆಯದು. ಹೀಗೆ ಆಸ್ತಿಯ ಕಿಮ್ಮತ್ತು ನಿಶ್ಚಯವಾದ ಬಳಿಕ, ಪುನರ್ಘಟನೆಯ ಆಫೀಸರರು, ಆ ಜಿಲ್ಲೆಗೆ ನೇಮಿಸಲ್ಪಟ್ಟ ಕಮಿಟಿಯವರು ನಿರ್ಣಯಿಸಿದ ವಿಶಿಷ್ಟ ಕ್ಷೇತ್ರದ ಹೊಲಗಳನ್ನು ನಿರ್ಮಿಸಿ, ಅವುಗಳನ್ನು ವಿಶಿಷ್ಟ ಖಾತೆದಾರರಿಗೆ ಹಂಚುವರು. ಆ ಬಗ್ಗೆ ಕಲೆಕ್ಟರರಿಂದ ಸನದು ಸಿಗುವದು. ಉಳಿದ ಖಾತೆದಾರರಿಗೆ ಪುನರ್ಘಟನೆಯ ಆಫೀಸರರು ನಿರ್ಣಯಿಸಿದ ಮೊಬಲಗನ್ನು ಸನದು ಕೊಟ್ಟ ಖಾತೆದಾರರ ಕಡೆಯಿಂದ ವಸೂಲ ಮಾಡಿಕೊಡುವರು.

ಈ ಕಾನೂನಿನಂತೆ [illegible] ಪರಾಧೀನತೆಗಳಿಗೆ [illegible] ಇಲ್ಲ; ನೋಂದಣಿ ಫೀ ವಸೂಲಾಗಲಿಕ್ಕಿಲ್ಲ. ೨ನೇ ಭಾಗದಂತೆ ಒಟ್ಟು ಮಾಡಿದ ಗ್ರಾಮದಲ್ಲಿ ೩ ವರ್ಷಗಳ ತನಕ ಅರ್ಧ [illegible] ಮಾಫಿ [illegible]. ಪಂಚಕೋರ್ಟಿನ ಖರ್ಚು, ಪಂಚರ ಖರ್ಚು, ಪುನರ್ಘಟನೆಯ ಖರ್ಚು ಸನದು ಪಡೆದ ಖಾತೆದಾರರಿಂದ ಪುನರ್ಘಟನೆಯ ಅಧಿಕಾರಿಗಳು ಹಂಚಿದಂತೆ, [illegible] ಬಾಕಿಯಂತೆ ವಸೂಲ ಮಾಡಲ್ಪಡುವದು. ಪುನರ್ಘಟನೆಯು ಬೇಸಾಯಗಾರರಿಗೆ ಅವಶ್ಯವಿದ್ದರೆ, ತಗಾವಿ ಸಾಲಗಳೂ ಕೊಡಲ್ಪಡುವವು.

ಪುನರ್ಘಟನೆಗೆ ಒಪ್ಪಿದ ಗ್ರಾಮದಲ್ಲಿ ಪುನರ್ಘಟನೆಯಾಗಬೇಕಾಗಿ ಜಾಹೀರನಾಮೆ ಪ್ರಕಟವಾದಂದಿನಿಂದ ಪುನರ್ಘಟನೆಯಾಗಿ ಕಲೆಕ್ಟರರ ಕಡೆಯಿಂದ ಸನದು ಪಡೆಯುವ ತನಕ ಆ ಇಡೀ ಗ್ರಾಮವು ಸರಕಾರ ಜಪ್ತಿಗೆ ಸರಕಾರದ ಸ್ವಾಧೀನವಿರುವದು. ಎಲ್ಲರ ಹಕ್ಕುಗಳು ನಷ್ಟವಾಗುವವು. ಪುನರ್ಘಟನೆಯಲ್ಲಿ ಗ್ರಾಮರಚನೆ, ಕೆರೆ-ಬಾವಿಗಳು, ದಾರಿಗಳು, ಶಾಲೆಗಳು ಮುಂತಾದ ಲೋಕೋಪಯೋಗಿ ಕೆಲಸಗಳಿಗಾಗಿ ಸ್ಥಳ ಬಿಡಬೇಕು ಹೀಗೆ ೩ನೇ ಭಾಗದಲ್ಲಿ ವ್ಯವಸ್ಥೆಯಾಗಿದೆ.

ಹೊಲಗಳ ಪುನರ್ಘಟನೆಯ ಕಾನೂನಿನೊಳಗಿನ ಮುಖ್ಯ ಮುಖ್ಯ ಕಲಮುಗಳ ತಾತ್ಪರ್ಯವಿದು. ಕಲೆಕ್ಟರ, ಕೊನ್ಸೊಲಿಡೇಟಿಂಗ ಆಫೀಸರ ಇವರ ಅಧಿಕಾರವನ್ನು ಬೇಸಾಯಗಾರರೆಲ್ಲರೂ ಆಳವಾಗಿ ಪರಿಶೀಲಿಸಬೇಕು. ಕಾನೂನಿನಿಂದ ಅವರಿಗೆ ಗ್ರಾಮದಲ್ಲಿ ಹಾವಳಿ ಹಾಕಲು ಎಷ್ಟರ ಮಟ್ಟಿಗೆ ಇಂಬಿಲ್ಲವೆಂದು ನೋಡಬೇಕೇ ಹೊರತು, ಅವರ ಅಧಿಕಾರದ ಪರಮಾವಧಿಯನ್ನು ಗಣಿಸಬಾರದು. ಇಡೀ ಗ್ರಾಮವೇ ಅವರ ಸರ್ವಾಧಿಕಾರಕ್ಕೆ ಒಳಪಟ್ಟದ್ದು. ಕಲೆಕ್ಟರರೂ, ಕೊನ್ಸೊಲಿಡೇಟಿಂಗ ಆಫೀಸರರೂ, ಅಮಾವಾಸ್ಯೆಗೆ ಹುಣ್ಣಿಮೆ ಹೇಳಿದರೂ, ಆ ದಿವಸ ಹುಣ್ಣಿಮೆಯೇ; ಹುಣ್ಣಿಮೆಯ ಬೆಳದಿಂಗಳು ನೋಡಿಕೊಂಡು ಕಗ್ಗತ್ತಲೆಯಾಗಿದೆಂದು ಘಕ್ಕನೆ ಸಾರಿದರೆ, ಆ ದಿನ ಕಗ್ಗತ್ತಲೆಯೇ. ಈ ವಿಷಯ ವಿಸ್ತಾರವಾಗಿ ಈ ಮುಂದೆ ಯಥಾವಕಾಶ ಪರಾಂಬರಿಸಬೇಕಾಗಿದೆ. ಪಿಕ್ಕ ಕ್ಷೇತ್ರ ಮರ್ಯಾದೆ, ಮಂಡಳಿಗಳ ಘಟನೆ, ಪರಾಧೀನ ಮಾಡುವಾಗ್ಗೆ ಆಗುವ ಪ್ರತಿಬಂಧ, ಅಗ್ರಕ್ರಯಾಧಿಕಾರದ ಬಜಾವಣಿ, ಮುಂತಾದ ಕಲಮುಗಳುಳ್ಳ ಕಾನೂನು ಕಾಯಿದೆಯಾದ ಕೂಡಲೆ ಅಮಲಿನಲ್ಲಿ ಬರುವದಿದ್ದದರಿಂದ ಈ ಕುರಿತು ಮೊಟ್ಟಮೊದಲು ವಿಚಾರಿಸಿ, ಮುಂದೆ ವಿಶ್ವಾಮಿತ್ರನ ಸೋಪಾದಿಯಲ್ಲಿ ಹೊಸ ಸೃಷ್ಟಿಯನ್ನು ನಿರ್ಮಿಸಲು ಅಧಿಕಾರಪಟ್ಟ "ಪುನರ್ಘಟನೆಯ ಆಫೀಸರರ. ಪುನರ್ಘಟನೆಯ" ಕ್ರಮವನ್ನು ಚರ್ಚಿಸುವೆವು. ಬೇಸಾಯಗಾರರು ಈ ಕಾನೂನನ್ನು ದುರ್ಲಕ್ಷ ಮಾಡಬಾರದಾಗಿ ನಾವು ಮತ್ತೊಮ್ಮೆ ಸೂಚಿಸುವೆವು. ಸರಕಾರವು ಲೋಕಮತಾನುವರ್ತಿಯಾಗಿರುವದೆಂದೂ, ಊರವರು ನಿಷೇಧಿಸಿದರೆ ಒಮ್ಮೆಲೇ ಹಿಂಜರಿಯುವದೆಂದೂ ನಮ್ಮ ಅಂಬೋಣವಿಲ್ಲ. ಆದರೆ ಬೇಸಾಯಗಾರರು ಈ ಪರಿಯ ತಮ್ಮ ಕಲ್ಯಾಣವನ್ನು ಮಾಡುವದು ಬೇಡವಾಗಿ ನಿಶ್ಚಯದಿಂದ ತಿಳಿಸಿದರೆ, ಬೇಸಾಯಗಾರರ ಕಲ್ಯಾಣದ ಡಂಗುರದ ನಿನಾದವು ಬಹುಮಟ್ಟಿಗೆ ತಗ್ಗುವದೆಂಬ ವಿಚಾರದಿಂದ ನಾವು ಈ ಸೂಚನೆ ಮಾಡಿದ್ದೇವೆ.

ಸ್ಫುಟ ಸೂಚನೆಗಳು.

೧. "ದೈವೋ ದುರ್ಬಲಘಾತಕಃ" ಎಂಬವೊಂದು ನಾಣ್ಣುಡಿ ಇದೆ. ಇದರ ನೆನಪು ಬ್ರಿಟಿಶ ಸಾಮ್ರಾಜ್ಯದಲ್ಲಿ ಅಡಿಗಡಿಗಾಗುತ್ತದೆ. ಒಮ್ಮೆ ಬ್ರಿಟಿಶರ ಕೈಯೊಳಗೆ ಕಾರಣಾಂತರದಿಂದ ದುರ್ಬಲರು ಸಿಲುಕಿಕೊಂಡರೆ ಅವರು ಪ್ರಬಲರಾಗುವದೇ ಬಲು ಕಠಿಣ. ಆದರೆ, ಪ್ರಬಲರಾದರೆ ಬ್ರಿಟಿಶರು ಸ್ವಾತಂತ್ರ್ಯ ಕೊಡಲು ಹಿಗ್ಗಿಲಿನ ಮೇಲೆ ತಯಾರಾಗುತ್ತಾರೆ. ಬ್ರಿಟಿಶ ಸಾಮ್ರಾಜ್ಯ ಸಾಗು ಇಜಿಪ್ತ ದೇಶದೊಳಗೆ ಸ್ವಾತಂತ್ರ್ಯದ ಮಾತು-ಕಥೆ ನಡೆಯುತ್ತಿದೆ. ಬ್ರಿಟಿಶ ರಾಜ್ಯಭಾರಿಗಳು ಸ್ವಾತಂತ್ರ್ಯ ಕೊಡಲು ಎಷ್ಟಕ್ಕೂ ಒಪ್ಪುವದಿಲ್ಲ; ಕೊಡ ಮಾಡಿಲ್ಲವಾಗಿ ಸ್ಪಷ್ಟವಾಗಿ ಹೇಳುವದೂ ಇಲ್ಲ. ಈ ಹಿಂದೆ ಸ್ವಾತಂತ್ರ್ಯದ ವಚನ ಕೊಟ್ಟಿದ್ದನ್ನು ಒಪ್ಪುತ್ತಾರೆ; ಆ ವಚನಗಳು ತಮ್ಮ ತನದ ಆಲೋಚನೆಯಿಂದ ಕೊಟ್ಟದ್ದಲ್ಲವಾಗಿಯೂ ಒಪ್ಪುತ್ತಾರೆ. ಪ್ರಾಮಾಣಿಕತನದಿಂದ ಅವನ್ನು ಪಾರಗಾಣಿಸುವ ಆಲೋಚನೆಯಿಂದ ಕೊಡಲಾಗಿದ್ದವೆಂದೂ ಸಾಮ್ರಾಜ್ಯಕರ್ತರು ತಮ್ಮ ಪ್ರಾಮಾಣಿಕತನವನ್ನು, ಸತ್ಯಾಭಿಲಾಷೆಯನ್ನು ಸಾರುತ್ತಾರೆ. ಬ್ರಿಟಿಶ ಸಾಮ್ರಾಜ್ಯದ ರಾಜ್ಯಭಾರಿಗಳಾದ ಸರ್ ಒಸ್ಟಿನ್ ಚೆಂಬರಲೀನರವರು ಇದೇ ಮಾತನ್ನು ಇಜಿಪ್ತ ದೇಶದ ಪ್ರಮುಖರಾದ ಸರ್ವತ ಪಾಶಾರವರಿಗೆ ಹೇಳಿದರು. ಆದರೆ, ಒಂದೇ ಒಂದು ಆಕ್ಷೇಪವನ್ನು ಚೆಂಬರಲೀನರವರು ಸರ್ವತ ಪಾಶಾರವರ ಬಳಿ ವಿಶದಿಸಿದರು. ವಚನ ಕೊಟ್ಟಂದಿನಿಂದ ಈ ತನಕ ನಡೆದ ಅವಧಿಯಲ್ಲಿ ಸಂಭವಿಸಿದ ಸಂಗತಿಗಳಿಂದ ಸ್ವಾತಂತ್ರ್ಯವನ್ನು ಅರ್ಪಿಸಿದರೆ ಪರಮಾತ್ಮನ ಸಂಕಲ್ಪಕ್ಕೆ ವಿರೋಧವಾಗುವದಾದ್ದರಿಂದ ಸ್ವಾತಂತ್ರ್ಯ ದಾನವನ್ನು ಅರ್ಪಿಸಲು ಆತಂಕವಾಗಿರುವದಾಗಿ ಸವಿ ಸವಿ ಮಾತುಗಳಿಂದ ಬಹಳವಾಗಿ ವ್ಯಥಿಸಿ ನುಡಿದರು. ಇಜಿಪ್ತ ದೇಶದ ಸ್ವಾತಂತ್ರ್ಯಕ್ಕೆ ಬ್ರಿಟಿಶ ಸಾಮ್ರಾಜ್ಯಕರ್ತರ ಅಡ್ಡಿ ಇಲ್ಲವಾಗಿ ಇನ್ನು ಎಲ್ಲರೂ ತಿಳಿದಿರಲಿ; ದೈವಸಂಕಲ್ಪವಿರುವದರಿಂದಲೇ ಇಜಿಪ್ತ ದೇಶಕ್ಕೆ ಪಾರತಂತ್ರ್ಯವು ಪ್ರಾಪ್ತವಾಗಿದೆ. ಬ್ರಿಟೀಶರಿಗೇನು ಸ್ವಾರ್ಥವಿಲ್ಲ. ಸುಯೇಜ ಕಾಲುವೆಗಾಗಿ, ಪಾರುಪತ್ಯದ ಇತರ ಅನುಕೂಲ್ಯಗಳಿಗಾಗಿ ಬ್ರಿಟಿಶರು ಸ್ವಾತಂತ್ರ್ಯವನ್ನು ಪ್ರಸ್ತಾಪಿಸಲು ಹಾಕೊರೆಯುವದಿಲ್ಲ. ಮಹಾಯುದ್ಧಕ್ಕೆ ಕಾರಣವಾಗಿದ್ದ ಜರ್ಮನಿಯು ಬ್ರಿಟಿಶರಷ್ಟು ಧೂರ್ತವಿದ್ದಿದ್ದರೆ, ಇದೇ ಪರಿಭಾಷೆಯನ್ನು ಪ್ರಯೋಗಿಸಿ ಬೆಲ್ಜಿಯಮ್ ದೇಶವಲ್ಲಿಂದಾದ ಪರಿಸ್ಥಿತಿಯಲ್ಲಿ ದೈವಸಂಕಲ್ಪದಿಂದ ಹಿಂದಿನ ಒಪ್ಪಂದವನ್ನು ಅಲ್ಲಗಳೆಯಬೇಕಾಯಿತೆಂಬ ನೆವ ಮಾಡಿ ಬೆಲ್ಜಿಯಮ್ ದೇಶವನ್ನು ಆಕ್ರಾಂತ ಮಾಡಿಕೊಳ್ಳಬೇಕಾಯಿತೆಂದು ಹೇಳಿದ್ದರೆ, ಸ್ವಾರ್ಥಕ್ಕೆ ದೈವಸಂಕಲ್ಪದ ಬಣ್ಣ ಬಂದು ಲೋಕಕ್ಕೆ ಮಹಾಯುದ್ಧದ ಕಷ್ಟ-ನಷ್ಟವು ತಪ್ಪುತ್ತಿತ್ತು. ಜಾಣ ಬ್ರಿಟಿಶರಾದರೂ ಈ ವೇಷವನ್ನು ಹೇಳಬಹುದಿತ್ತು. ಆದರೆ, ಜರ್ಮನರಿಗೆ ಮರೆಯಾಗುವದು ಬ್ರಿಟಿಶರ ಸ್ವಾರ್ಥವಿದ್ದದರಿಂದ ದೈವಸಂಕಲ್ಪದ ಕಲ್ಪನೆಯು ಅವರಿಗೆ ಸೂಚಿಸಲಿಲ್ಲ. ಮೊಟ್ಟಮೊದಲು ಸೂಚಿಸಿದಂತೆ ದುರ್ಬಲರು ಪ್ರಬಲರ ಕೈಯಲ್ಲಿ ಸಿಲುಕಿಕೊಂಡು ಉದ್ಧಾರ ಹೊಂದುವದು ಈಗಿನ ಯುಗದಲ್ಲಿ ಅಸಾಧ್ಯವಾದದ್ದೆಂದು ಎಲ್ಲರೂ ಗ್ರಹಿಸಿ, ಬ್ರಿಟಿಶ ಸಾಮ್ರಾಜ್ಯಕರ್ತರ ವಚನಗಳ ಮೇಲೆ ಎಳ್ಳಷ್ಟು ನಂಬಿಗೆಯನ್ನಿಡಬಾರದಾಗಿ ಈ ತನಕ ತಿಳಿಯದಿದ್ದವರು ಇನ್ನಾದರೂ ತಿಳಿದರಾಯಿತು.

---

೨. ಸರಕಾರದ ಮದ್ಯಪಾನ ಪ್ರತಿಬಂಧದ ನಿರ್ಧಾರವು ಕಳೆದ ವಾರದಲ್ಲಿ ಪ್ರಕಟ ಹೊಂದಿದೆ. ಇದನ್ನು ಕೇಳಿ ಯಾರಿಗೂ ಸ್ಮಿತವಾಗದು; ಅನಪೇಕ್ಷಿತ ಸಂಗತಿ ಘಟಿಸಲಿಲ್ಲ. ಅಪೇಕ್ಷೆಯಂತೆ ಮದ್ಯಪಾನ ನಿಷೇಧವನ್ನು ಕೈಕೊಳ್ಳಲು ಹಣದ ಅನಾನುಕೂಲತೆಯ ಮೂಲಕ ಸಾಧ್ಯವಿಲ್ಲವಾಗಿ ಸರಕಾರವು ನಮೂದಿಸಿ ಸದ್ಯಕ್ಕೆ ಈ ವಿಷಯವನ್ನು ತೀರ್ಮಾನಿಸಿದೆ. ಮದ್ಯಪಾನ ನಿಷೇಧದಿಂದ ೬ ಕೋಟಿ ರೂಪಾಯಿಗಳ ಪೂರೈಕೆ ಮಾಡಿಕೊಳ್ಳಬೇಕಾಗಿಯೂ, ಅಷ್ಟು ರಕಮು ವಿಶೇಷ ಕರಗಳ ಎತ್ತುವಳಿಯಿಂದ ದುಮ್ಮನ ಸಂಭವನಿರುವದಿಲ್ಲವಾಗಿಯೂ ಸರಕಾರವು ಅಭಿಪ್ರಾಯಪಟ್ಟಿದೆ. ಹಣದ ಅಡಚಣೆಯು ನೆವ ಮಾಡಿ ಮದ್ಯಪಾನ ನಿಷೇಧಕ್ಕೆ ಆತಂಕ ಒಡ್ಡಲಿಕ್ಕಿಲ್ಲವಾಗಿ ಸರಕಾರವು ಕೊಟ್ಟ ವಚನವು ಕೊಬ್ಬ್ಯಾಗಿಯೇ ಬಯಲಾಗಿದೆ; ಮೇಲೆ ಮತ್ತೊಂದು ವೇದಾಂತವು ಹೇಳಲ್ಪಟ್ಟಿದೆ. ಮದ್ಯಪಾನ ನಿಷೇಧಕ್ಕಾಗಿ ಇದ್ದ ಹಣವನ್ನು ವಿನಿಯೋಗಿಸಿಬಿಟ್ಟರೆ; ಶಿಕ್ಷಣ ವಿಸ್ತಾರಕ್ಕೆ ತಡೆ ಬಿದ್ದು ಇಲಾಖೆಯ ಸರ್ವಾಂಗೋನ್ನತಿಗೆ ಪ್ರತ್ಯವಾಯ ಬರುವದಾಗಿ ಪ್ರಕಟಿಸಿದ್ದಾರೆ. ಮುಂಬಯಿಯು ಬೆಕ್‌ಬೇ ಉಪಸಾಗರದಲ್ಲಿ ಹೂಳಲು ಬೇಕಷ್ಟು ಹಣವಿದೆ; ಸಿಂಧ ಪ್ರಾಂತದ ಸಕ್ಕರದಲ್ಲಿ ಕಾಲುವೆ ಕಟ್ಟಿ ನದಿ ಪ್ರದೇಶವನ್ನು ಭೂಪ್ರದೇಶವಾಗಿ ಪರಿಣಮಿಸಲಿಕ್ಕೂ ಹಣದ ಕೊರತೆ ಇಲ್ಲ; ಮದ್ಯಪಾನೋಚ್ಚಾಟನಕ್ಕೆ ಮಾತ್ರ ದ್ರವ್ಯಾನುಕೂಲತೆ ಇಲ್ಲದೆ ಕಾರ್ಯಶೂನ್ಯವಾಗಿ ಸರಕಾರವು ಕೈಮುದುಗಿಸಿಕೊಂಡು ಕೂತುಕೊಂಡಿದೆ. ಇದರ ಮೇಲಿಂದ ಪ್ರಜೆಗಳು ಅನ್ಯಥಾ ಗ್ರಹಿಸದಾರದು. ೧೯೨೫ನೇ ಇಸ್ವಿಯ ಫೆಬ್ರುವರಿ ತಿಂಗಳ ೧೬ನೇ ತಾರೀಖಿಗೆ ಪ್ರಕಟಿಸಿದಂತೆ ಮುಂಬಯಿ ಇಲಾಖೆಯೊಳಗಿಂದ ಸಂಪೂರ್ಣವಾಗಿ ಮದ್ಯಪಾನವನ್ನು ಪ್ರತಿಬಂಧಿಸಲು ಸರಕಾರವು ಕೈಕೊಂಡ ನಿರ್ಧಾರವನ್ನು ಇನ್ನೂ ಸರಕಾರವು ಅಲ್ಲಗಳೆಯುವದಿಲ್ಲ; ಅದನ್ನು ನೆರವೇರಿಸುವ ಸಂಕಲ್ಪವು ಈಗಲೂ ಇರುತ್ತದಾಗಿ ಸಾರಿದೆ. ಇದನ್ನು ನೋಡಿ ನಮಗೆ ಬಹಳೇ ಸಂತೋಷವಾಗಿದೆ. ಸತ್ಯಸಂಕಲ್ಪವಿದ್ದಾಗ ಇಂದಿಲ್ಲ, ಕಲ್ಪಾಂತದ ವರೆಗಾದರೂ ಆಶೆ ಮಾಡಲು ಇಂಬಿದೆ. ಆ ಆಶೆಯನ್ನು ನಮ್ಮ ಮುಂಬಯಿ ಸರಕಾರವು ಒಮ್ಮೆಲೇ ಕುಂತರಿಸಿದರೆ ಮದ್ಯಪಾನ ನಿಷೇಧವಾದಿಗಳು ನಿರಾಶರಾಗಿ ಕ್ರಾಂತಿಕಾರಕ ಉಪಾಯಗಳನ್ನು ಕೈಕೊಳ್ಳಬಹುದೆಂದು ಯೋಚಿಸಿದರೋ ಏನೋ? ಹೇಗೂ ಇರಲಿ. ಆಶೆಯೆಂಬದು ದೊಡ್ಡದು. ಅದೊಂದನ್ನು ಭದ್ರವಾಗಿ ಹಿಡಿದುಕೊಂಡು ಮುಂಬಯಿ ಸರಕಾರದ ಮುಕ್ತ್ಯ ವ್ಯಾಪಾರವನ್ನು ಪ್ರಜೆಗಳು ನಿರೀಕ್ಷಿಸುತ್ತಿರಲಿ.

---

೩ ಶಿಕ್ಷಕರು ಸ್ಥಾನಿಕ ಸ್ವರಾಜ್ಯ, ಮ್ಯುನಿಸಿಪಾಲಿಟಿ, ಸಹಕಾರಿ ಸಂಘ ಮುಂತಾದ ರಾಜಕೀಯ ಸಂಸ್ಥೆಗಳಲ್ಲಿ ಸೇರಿ, ಲೋಕೋಪಕಾರ ಸಾಧಿಸುವದು ಅಪ್ರಶಸ್ತವೆಂದು ಅನೇಕರ ಮತವಿದೆ. ಲೋಕೋಪಕಾರದ ರುಚಿಯಿಂದ ಶಿಕ್ಷಣದ ರುಚಿಯು ತಗ್ಗಿ ಶಿಕ್ಷಣದ ಪ್ರಗತಿಯು ಕುಂಠಿತವಾಗುತ್ತಿದೆ; ವಿದ್ಯಾರ್ಥಿಗಳಿಗೆ ನಷ್ಟವಾಗುತ್ತದೆ. ಪುರಾತನ ಕಾಲದಲ್ಲಿ ಶಿಕ್ಷಣ ಕೆಲಸವನ್ನು ನಡಿಸುವ ಮಹರ್ಷಿಗಳು ದೂರ ದೂರ ಗುಡ್ಡಗಾಡು ಪ್ರದೇಶಗಳಲ್ಲಿ ಪರ್ಣಕುಟಿ, ಆಶ್ರಮಗಳ

ನ್ನು ರಚಿಸಿಕೊಂಡು ಪಾವನವಾದ ಜ್ಞಾನದಾನದ ಕಾರ್ಯವನ್ನು ನಡಿಸುತ್ತಿದ್ದರು. ಗುರು-ಶಿಷ್ಯರ ಆಗಿನ ಕಾಲದ ಸಂಬಂಧದಿಂದಲೂ, ಏಕನಿಷ್ಠೆಯಿಂದಲೂ ಬಹಳ ಶ್ರೇಯಸ್ಕರವಾಗಿದೆ. ವಿದ್ಯಾರ್ಥಿಗಳ ಯೋಗ್ಯತೆಯೂ ಮಿಗಿಲಾಗಿದೆ. ಆಲಿಗಡ ವಿಶ್ವವಿದ್ಯಾಲಯದ ಸ್ಥಿತಿಯನ್ನು ಪರಾಂಬರಿಸಲು ರಹಿಮತುಲ್ಲಾ ಮಂಡಳವು ನೇಮಿಸಲ್ಪಟ್ಟಿತ್ತು. ಆ ಮಂಡಳವು ವಿಶ್ವವಿದ್ಯಾಲಯದ ಶಿಕ್ಷಕರ ರಾಜಕಾರಣ ವ್ಯಾಪಾರಗಳ ಕುರಿತು ಬರೆಯುವದೇನಂದರೆ.-

ವಿಶ್ವವಿದ್ಯಾಲಯದವರು ಕಾಯಿದೆ ಕೌನ್ಸಿಲುಗಳ ಇಲೆಕ್ಷನಿನಲ್ಲಿ ಸೇರಿ ರಾಜಕಾರಣವನ್ನು ಕೈಕೊಳ್ಳುವದರಿಂದ ವಿದ್ಯಾದಾನದ ಮೇಲೆ ಉಂಟಾದ ಪರಿಣಾಮವನ್ನು ಸಾಕ್ಷಿಗಾರರನೇಕರು ಹೇಳಿದ್ದಾರೆ. ಈ ಶಿಕ್ಷಕರು ಬಹಳ ರಾಜಕಾರಣವನ್ನು ನಡಿಸುತ್ತಾರೆ. ಕೌನ್ಸಿಲುಗಳಿಗಂತೂ ಹೋಗುತ್ತಾರೆ. ಸರಕಾರ ಕಮಿಟಿಗಳಲ್ಲಿ ಕೆಲಸ ಮಾಡಿ ಬಹುಕಾಲದ ವರೆಗೆ ಗೈರಹಾಜರಾಗುತ್ತಾರೆ. ವಿದ್ಯಾರ್ಥಿಗಳಿಗೆ ಇದರಿಂದ ನಷ್ಟವಾಯಿತೆಂದು ಅನೇಕರು ಹೇಳಿದ್ದೇನು ಆಶ್ಚರ್ಯವಲ್ಲ. ರಾಜಕಾರಣದಲ್ಲಿ ಹೆಸರು ಮಾಡಿಕೊಂಡು ಮುಂದೆ ಕಲ್ಯಾಣ ಮಾಡಿಕೊಳ್ಳಲು ಆಲಿಗಡ ವಿಶ್ವವಿದ್ಯಾಲಯದಲ್ಲಿ ಅನೇಕರು ಸೇರಿ ಆಲಿಗಡಕ್ಕೆ ಅಪಾಯ ಮಾಡುತ್ತಾರೆ

ಸರ್ ಇಬ್ರಾಹಿಮ್ ರಹಿಮತುಲ್ಲಾರವರಂಥ ಮಾನ್ಯರು ವಿಚಾರಪೂರ್ವಕವಾಗಿ ಬರೆದ ವಚನಗಳಿವು. ಶಿಕ್ಷಕರು ಶಿಕ್ಷಣೇತರ ಲೋಕೋಪಕಾರದಲ್ಲಿ ನಿಮಗ್ನರಾದರೆ, ಮೂಲ ಶಿಕ್ಷಣದ ಕರ್ತವ್ಯಕ್ಕೆ ಬಾಧೆ ತಟ್ಟುತ್ತದೆ. ಶಿಕ್ಷಕರ ಲಕ್ಷ್ಯವು ದ್ವಿಧಾ ಆಗಿ ಶಾಲೆಗಳಿಗೆ ನಷ್ಟವಾಗುತ್ತದೆ. ಮೂಲ ಕರ್ತವ್ಯವು ಶಿಕ್ಷಣದ್ದು; ಶಿಕ್ಷಣ ಕೆಲಸ ಮುಗಿಸಿಕೊಂಡು ಉಳಿದ ಸಮಯದಲ್ಲಿ ಬೇರೆ ಲೋಕೋಪಕಾರ ಮಾಡಬಹುದಲ್ಲವೇ ! ಎಂದು ಕೆಲವರು ತರ್ಕಿಸಬಹುದು. ವಿದ್ಯಾರ್ಥಿಗಳ ಶಿಕ್ಷಣವೆಂದರೆ, ಬಿಟ್ಟಿಯ ಕೆಲಸವಲ್ಲ; ಹಗಲಿರುಳು ವಿದ್ಯಾರ್ಥಿಗಳಿಗಾಗಿ ದುಡಿದರೂ ಶಿಕ್ಷಣದ ಕೆಲಸವು ಮುಗಿಯಲಾರದಷ್ಟು ಕೆಲಸದ ವ್ಯಾಪಾರವಿರುವದೆಂದು ಶಿಕ್ಷಕರು ವಿಚಾರಿಸಿದರೆ ಗ್ರಹಿಕೆಯಾಗುವಂತಿದೆ. ಇದನ್ನೆಲ್ಲ ವಿಚಾರಿಸಿ ಶಿಕ್ಷಕರು ಬೇರೆ ಉಸಾಬರಿಗೆ ಹೋಗದೆ, ತಾವು ಕೈಕೊಂಡ ಶಿಕ್ಷಣವೇ ಲೋಕೋಪಕಾರವೆಂದು ಭಾವಿಸಿ — ವಿದ್ಯಾದಾನದಷ್ಟು ಲೋಕೋಪಕಾರವು ಮತ್ತೊಂದಿಲ್ಲ — ಅದಕ್ಕಾಗಿ ಸರ್ವ ಸಮಯವನ್ನೂ, ಸಕಲ ಚೈತನ್ಯವನ್ನೂ ವಿನಿಯೋಗಿಸಬೇಕಾಗಿ ನಮ್ಮದೊಂದು ಸೂಚನೆಯಿದೆ.

---

೪. ಮುಂಬಯಿ ಸರಕಾರದ ಔದ್ಯೋಗಿಕ ಖಾತೆಯು ೧೯೨೬-೨೭ ನೇ ಸಾಲಿನ ರಿಪೋರ್ಟು ನಮ್ಮ ಕಡೆ ಬಂದಿದೆ. ಅದರೊಳಗಿಂದ ನಮ್ಮ ಕನ್ನಡ ಜಿಲ್ಲೆಯಲ್ಲಿ ಕಾಗದದ ಕಾರಖಾನೆಯನ್ನು ತೆರೆಯಲಾಗದೆಂದು ಪ್ರಕಟವಾದ ಅಭಿಪ್ರಾಯವನ್ನು ಕಳೆದ ವಾರ ಕಾರವಾರ ಖಬರಿನಲ್ಲಿ ನಾವು ಪ್ರಕಟಿಸಿದ್ದೇವೆ. ಇಂದಿಗೆ ಆ ರಿಪೋರ್ಟಿನಲ್ಲಿ ನಮೂದಿಸಿದ ಔದ್ಯೋಗಿಕ ಚಟುವಟಿಕೆಯ ಕಾರ್ಯವನ್ನು ನಮೂದಿಸಿದರೆ, ನಮ್ಮ ಮುಂಬಯಿ ಸರಕಾರದ ಲೋಕೋಪಕಾರದ ಸ್ವರೂಪವು ತಿಳಿಯುವಂತಿದೆ. ರಿಪೋರ್ಟಿನಲ್ಲಿ ನಮೂದಿಸಿದ್ದೇನಂದರೆ:—

ಔದ್ಯೋಗಿಕ ಖಾತೆಯವರು ಶಾಸ್ತ್ರೀಯ ಉಪದೇಶವನ್ನು ಕೊಡತಕ್ಕದ್ದು ಈ ಖಾತೆಯ ಮುಖ್ಯ ಕರ್ತವ್ಯವು ಅದೆ. ಆದರೆ ಅದಕ್ಕೆ ಅಷ್ಟು ಜ್ಞಾನವಿದ್ದ ಡೈರೆಕ್ಟರರು ಬೇಕು. ಅಂಥವರು ಈ ಖಾತೆಯಲ್ಲಿ ಈಗ ಇಲ್ಲ. ಹಳೇ ಡೈರೆಕ್ಟರರಿಗೆ ಈ ಜ್ಞಾನವಿತ್ತೆಂಬ ನಂಬಿಗೆ ಇದೆ. ಆದರೆ ಅವರು ತಾವು ಮಾಡಿದ ಯಾವದೇ ಕೆಲಸದ ಟಿಪ್ಪಣಿಯನ್ನಿಡಲಿಲ್ಲ. ಹಳೇ ಡೈರೆಕ್ಟರರು ೫೮ ದಿನ ಸಂಚಾರ ಮಾಡಿದರು. ಸಂಚಾರದಲ್ಲೇನು ಮಾಡಿದರೆಂಬ ಟಿಪ್ಪಣಿ ಇಲ್ಲ. ಅನಂತರ (ಹೊಸ ಡೈರೆಕ್ಟರರು ಬರೆಯುತ್ತಾರೆ) ಸಂಚರಿಸಲು ಆಗಲಿಲ್ಲ. ೧೯೨೫—೨೬ ನೇ ಸಾಲಿನಲ್ಲಿ ೩ ಕಾರಖಾನೆಯವರು ಸರಕಾರದ ಬಳಿ ದ್ರವ್ಯಸಹಾಯವನ್ನು ಬೇಡಿದ್ದರು. ಮೊದಲನೇಯವರು ಓಗಲೇವಾಡಿಯ ಓಗಲೇ ಕಾಜಿನ ಕಾರಖಾನೆಯವರು, ಕರಾಚಿಯ ಅಕ್ಕಿ ಕಾರಖಾನೆಯವರು ಎರಡನೇಯವರು. ಓಗಲೇಯವರಿಗೆ ಸಾಲ ಕೊಡಲು ಸರಕಾರದ ಹತ್ತರ ಹಣದ ಅನುಕೂಲತೆಯಾಗಲಿಲ್ಲ. ಅಕ್ಕಿ ಕಾರಖಾನೆಯವರಿಗೆ ಸಾಲಕೊಡಲು ಔದ್ಯೋಗಿಕ ಖಾತೆಯವರು ಶಿಫಾರಸು ಮಾಡಲಿಲ್ಲ. ನೇಯ್ಗೆಗೆ ಈ ಖಾತೆಯಿಂದ ಸಹಾಯವಾಗುತ್ತಿದೆ. ೧೦ ಕಡೆಗಳಲ್ಲಿ ನೇಯ್ಗೆಯ ಶಾಲೆಗಳಿವೆ. ಧಾರವಾಡ ಜಿಲ್ಲೆಯ ಇಬ್ರಾಹಿಮಪುರದಲ್ಲಿ ನೇಯ್ಗೆಯ ಶಾಲೆಯೊಂದು ಸ್ಥಾಪಿಸಲ್ಪಟ್ಟಿತು. ಕೊಲ್ಲಾಪುರದಲ್ಲಿ ಒಂದು ಪ್ರದರ್ಶನವು ಸೇರಿಸಲ್ಪಟ್ಟಿತು. ಬಣ್ಣ ಕೊಡುವ ಪ್ರಯೋಗಗಳ ಸಲುವಾಗಿ ಮತ್ತು ಕೈಮಗ್ಗಗಳ ಜಿಲ್ಲೆಗಳಲ್ಲಿ ತೋರಿಸಲ್ಪಟ್ಟವು. ಮುಂಬಯಿಯಲ್ಲಿ ಕೆಲವರು ಈ ಖಾತೆಯವರ ಕಡೆಯಿಂದ ಬಣ್ಣ ಕೊಡುವ ಮಾಹಿತಿ ಪಡೆದರು. ಅಂತು ಈ ಖಾತೆಯ ಲೆಖ್ಖಕ್ಕೆ ರಿಪೋರ್ಟಿನ ಸಾಲಿನಲ್ಲಿ ರೂ. ೮೮,೩೪೧ ಖರ್ಚು ಬಂತು.

ಔದ್ಯೋಗಿಕ ಖಾತೆಯ ರಿಪೋರ್ಟಿನೊಳಗಿನ ಸಾರವಿದು. ಮುಖ್ಯ ಪ್ರಾಣವಾದ ಶಾಸ್ತ್ರೀಯ ಔದ್ಯೋಗಿಕ ಜ್ಞಾನವುಳ್ಳವರು ಖಾತೆಯ ಅಧಿಕಾರಿ ಮಂಡಳದಲ್ಲಿ ಇಲ್ಲದ ಬಳಿಕ, ಈ ಖಾತೆಯನ್ನು ಪ್ರಾಂತಿಕ ಸರಕಾರವು ಲೋಕವಂಚನೆಗಾಗಿ ನಡಿಸುತ್ತದೆಂದು ಯಾರಾದರೂ ಹೇಳಿದರೆ, ಅದಕ್ಕೆ ಸಮರ್ಪಕ ಉತ್ತರ ಸಿಗಬಹುದೆ?

ಸ್ಥಾನಿಕ ವೃತ್ತಾಂತ

ಕುಮಟಾ— ಶಕೆ, ಶ್ರೀ ಕಾಪ್ಪೂರ ಕಾಮಾಕ್ಷಿ ದೇವಸ್ಥಾನದಲ್ಲಿ ಈ ಹೊತ್ತಿನಿಂದ ಪ್ರತಿಷ್ಠೆಯು ಆಗಮಕ್ಕೆ ಪ್ರಾರಂಭವಾಗಿದೆ. ಮೂಲ ಗರ್ಭಗುಡಿಯಲ್ಲಿ ಗುರುವಾರಕ್ಕೆ ಪ್ರತಿಷ್ಠೆಯಾಗಿ, ದಶಮಿ ರವಿವಾರಕ್ಕೆ ಅವಭೃತವಾಗಿ ಸಮಾರಂಭವು ಸಾಂಗವಾಗುವದು. ಭಕ್ತರು ಬರುತಿದ್ದಾರೆ

ಶ್ರೀ ಚಿತ್ರಾಪೂರ ಮಠಾಧಿಪರಾದ ಶ್ರೀ ಆನಂದಾಶ್ರಮ ಸ್ವಾಮಿಗಳು ಶಿರಾಲಿಯಿಂದ ಮರಳಿ ಗೋಕರ್ಣಕ್ಕೆ ಮುಟ್ಟಿದರು.

ಪ್ರೇಕ್ಷಕರೊಬ್ಬರು ಬರೆಯುವದೇನಂದರೆ:- ನಾನು ಇತ್ತೀಚಿನ ಪ್ರಯೋಗ ಹೊಲದಲ್ಲಿ ನಡೆಸಿದ ಮಂಡಳಿ ಹಾಗು ಬೇಸಾಯ ಖಾತೆಯ ಆಲೋಚನಾ ಸಭೆಗೆ ಹೋಗಿದ್ದೆ. ವಕೀಲರೂ, ಶ್ಯಾನಭೋಗರೂ, ಬೇಸಾಯ ಹೊಲದ ಸುಪರಿಂಟೆಂಡೆಂಟರೂ, ಆಗ್ರಸ್ವಾಜರರೂ, ಮುಂತಾದವರೂ ಸಭೆ ಸೇರಿದ್ದರು. ಡೆಪ್ಯುಟಿ ಡಾಯರೆಕ್ಟರರಾದ ಮಿ| ಗೋಖಲೆಯವರು ಅಧ್ಯಕ್ಷಸ್ಥಾನಾಪನ್ನರಾದರು. ಅವರು ಮಿ| ಗೋವರ್ಧನ, ಮಿ| ಹಬ್ಬು, ಮಿ| ಹೆಗಡೆಶೆಟ್ಟಿ ಇವರಿಗೆ ಮಾತಾಡಹೇಳಿದರು. ಪ್ರಯೋಗ ಮಾಡಿ ನೋಡಲು ಹೆಗಡೆಯವರು ೧೫ ರೂಪಾಯಿ ಸಂಬಳದ ಮೇಲೆ ೧೦-೧೫ ತೆಂಗಿನ ಮರಗಳಿಗೆ ತರತರದ ಗೊಬ್ಬರದ ಹಾಕಿ ಪರೀಕ್ಷೆ ನೋಡುವ ಕ್ರಮ ನಡೆದದಾಗಿ ಹೇಳಲಾಯಿತು. ಎಲುಬಿನ ಗೊಬ್ಬರದ ವರ್ಣನೆಯಾಯಿತು. ಮಿ| ಹೆಗಡೆಶೆಟ್ಟಿಯವರ ಭಾಷಣವು ಬಹಳ ರುಚಿಯಾಯಿತು. ಹೊಸ ಗೊಬ್ಬರದ ವಿಷಯವನ್ನು ಅವರು ಬಹು ರುಚಿ ಮಾಡಿ ಹೇಳಿದರು. ಅವರು ನುಡಿದದ್ದೇನಂದರೆ:- ನೀವು ತೊಗರಿಬೇಳೆ ಸಾರ ಮಾಡಿದ್ದೀರಿ; (ಹುಬ್ಬಳ್ಳಿ ತೊಗರಿಬೇಳೆಯೋ? ಸುರತ ತೊಗರಿ ಬೇಳೆಯೋ? ಹೇಳಲಿಲ್ಲ.) ಬೆಣ್ತಿಗೆ ಅಕ್ಕಿ ಅನ್ನ ಮಾಡಿದ್ದೀರಿ, ಎರಡನ್ನೂ ಕೂಡಿಸಿ ಉಣ್ಣುವಾಗ ತುಪ್ಪ ಹಾಕಿದರೆ ಕೇಳು ಮೆಚ್ಚುತ್ತದಲ್ಲವೇ? ರುಚಿ ರುಚಿಯಾಗುತ್ತದಲ್ಲವೇ? ಹೊಸ ಗೊಬ್ಬರವು ತುಪ್ಪದಂತಿದೆ. ಮಿ| ಹೆಗಡೆಶೆಟ್ಟಿಯವರ ಭಾಷಣವನ್ನು ಕೇಳಿ ಕೊಳ್ಳೆ ನನಗೆ ಬಾಯಿ ನೀರು ಬಂತು. ಮನೆಗೆ ಹೋಗಿ ಬೆಣ್ತಿಗೆ ಅಕ್ಕಿ, ತೊಗ್ರಿಬೇಳೆ ಸಾರು, ತುಪ್ಪ ಹಾಕಿಕೊಂಡು ಮಿ| ಹೆಗಡೆಶೆಟ್ಟಿಯವರು ಹೇಳಿದ್ದಂತೆ, ರುಚಿ ರುಚಿ ಮಾಡಿಕೊಂಡು ಉಣ್ಣಬಯಸಿದೆ; ಆದರೆ ತೊಗ್ರಿಬೇಳೆಯೂ ಇಲ್ಲ; ಬೆಣ್ತಿಗೆ ಅಕ್ಕಿಯೂ ಇಲ್ಲ; ತುಪ್ಪಕ್ಕೆ ಕಾಸು ಕೇಳಬೇಡಿ! ಓಹೋ! ಮಿ| ಹೆಗಡೆಶೆಟ್ಟಿಯವರು ಹೇಳಿದ ಮಾತು ನನ್ನಂಥ ಬಡವರಿಗಲ್ಲ. ದೊಡ್ಡ ದೊಡ್ಡವರಿಗೆ! ದೇಶಾದ ಸಮೂನೆಯ ಗೊಬ್ಬರವನ್ನು ಹಾಕುವಷ್ಟು ಸಾಮರ್ಥ್ಯವಿದ್ದವರಿಗೆ! ಸರಕಾರಿ ತ್ರಿಜೋರಿಯಂಥ ತ್ರಿಜೋರಿಯಿದ್ದವರಿಗೆ !! ಇಂಥವರು ಎಲುಬಿನ ಗೊಬ್ಬರ ಹಾಕಿದರೆ, ಹಣದ ಅನುಕೂಲತೆಯ ಮೂಲಕ ಅವರ ಎಲುಬಿನ ಗೊಬ್ಬರವಾಗುವದಿಲ್ಲ. ಬೇರೆಯವರು ಹಾಕಹೋದರೆ ಬಹಳ ಕಷ್ಟ. ಹೆಗಣ-ಗೊಬ್ಬರ ಮಾಡಿಕೊಳ್ಳಲು ನಮ್ಮಂಥವರಿಗೆ ಗತಿ ಇಲ್ಲ. ಬಂಗಲ ಉಪದ್ರವಗಳಿಂದ ಬಹು ತೊಂದರೆಯಾಗಿದೆ. ಇಂಥವರಿಗೆ ಎಲುಬಿನ ಗೊಬ್ಬರದಿಂದ ಪ್ರಯೋಜನವೇನು? ಬೇಸಾಯ ಖಾತೆಯವರ ಎಲುಬಿನ ಗೊಬ್ಬರದ ಉತ್ಸಾಹ ನೋಡಿದರೆ, ಇವರು ಎಲುಬಿನ ಗೊಬ್ಬರದ ಕಂಪನಿಗಳ ಏಜಂಟರೇ ಎಂತೆ ಭಾಸವಾಗುತ್ತದೆ. ಇರಲಿ. ಪ್ರಯೋಗಗಳ ಬಗ್ಗೆ ನನ್ನದೊಂದು ಬಡವನ ಸೂಚನೆಯಿದೆ. ಪ್ರಯೋಗಗಳನ್ನು ಇವರು ಒಂದೊಂದು ಮರ ಅಥವಾ ಒಂದೊಂದು ಹೊಲ ಹೀಗೆ ನಡಿಸಿದರೆ ಅದರಿಂದ ಫಲಪ್ರಾಪ್ತಿಯು ತಿಳಿಯುವದಿಲ್ಲ. ಮನೆಯಲ್ಲಿ ಹಿಂದೆರಡು ಕಬ್ಬು ನಟ್ಟುಕೊಂಡು ಅವನ್ನು ಅಕ್ಕರತೆಯಿಂದ ಸಾಕಿ ಸಲುಹಿ ಅವುಗಳಂತೆಯೇ ಇಡೀ ಕಬ್ಬಿನ ಹಕ್ಕಲು ಬೆಳಸಬಹುದೆಂದು ಯಾರಾದರೂ ಸಿದ್ಧಾಂತ ಹೂಡಿದರೆ, ಅದೆಂದೂ ಗ್ರಾಹ್ಯವಾಗದು. ಪ್ರಯೋಗ ಹೊಲದೊಳಗಿನ ಪ್ರಯೋಗಗಳು ಸಾಮಾನ್ಯವಾಗಿ ಇದೇ ಮಾದರಿಯವು. ಪ್ರಯೋಗ ಮಾಡುವವರು ಒಬ್ಬೊಬ್ಬರಿಗೆ ಸಂಪೂರ್ಣ ಕೆಲಸ! ಕೊಡುವಂಥ ೮-೧೦ ಹೊಲಗಳನ್ನು ಈ ತಾಲೂಕಿನಲ್ಲಿ ಸಂಗ್ರಹಿಸಿಕೊಂಡು ಹೊಲಗಳಲ್ಲಿ ತರತರದ ಗೊಬ್ಬರಗಳ ಪ್ರಯೋಗ ಮಾಡಿ ನೋಡಬೇಕು. (೧) ಊರ ಗೊಬ್ಬರ ತಯಾರಿಸಬೇಕು; ಊರೊಳಗೆ ಸಿಗುವ ಸಾಮಗ್ರಿಗಳ ಉಪಯೋಗ ಮಾಡಬೇಕು; ಅವುಗಳ ಖರ್ಚಿನ ಲೆಖ್ಖ ಇಡಬೇಕು; ಕೆಲಸ ಮಾಡುವವರ ಸಂಬಳದ ಲೆಖ್ಖ ಪ್ರತ್ಯೇಕವಿಡಬೇಕು. (೨) ಎಲುಬಿನ ಗೊಬ್ಬರ, ದೊಡ್ಡ ದೊಡ್ಡ ನೇಗಿಲು, ಸುಧಾರಿಸಿದ ನಮೂನೆಗಳನ್ನು ಉಪಯೋಗಿಸಬೇಕು, ಅವುಗಳ ಲೆಖ್ಖ ಇಡಬೇಕು, ಮತ್ತು ಲೆಖ್ಖಾಚಾರದಿಂದಲೂ, ಅನುಕೂಲತೆಯಿಂದಲೂ ಯಾವದು ಶ್ರೇಯಸ್ಕರವೆಂದು ಕಂಡುಹಿಡಿಯಬೇಕು. ಹೀಗೆ ಮಾಡಿದರೆ ದೊಡ್ಡ ದೊಡ್ಡ ಉಪನ್ಯಾಸಗಳ ಆವಶ್ಯಕತೆ ಇಲ್ಲ. ಜನರು ಈ ಹೊಲಗಳನ್ನು ನೋಡಿಕೊಂಡು ಬೋಧ ಪಡೆಯುವರು. ಒಂದೊಂದು ಕರ್ಲಿನಲ್ಲಿ ಹಿಂದೆರಡು ವರುಷ ಪ್ರಯೋಗಗಳನ್ನು ಕ್ರಮದಿಂದ ನಡಿಸಿದರೆ ಬೇಸಾಯಗಾರರಿಗೆ ವಿಶೇಷ ಲಾಭವುಂಟಾಗುವದು, ಇತ್ಯಾದಿ.

ಪಢರೀಪುರ— ೮೬ ಒಡಳ; ವೋಡ ಇವಿ ಶ್ಯಾದ. ಒರಾತ್ತ್ರಿ ಪ್ಯಾರ ಜೋಡಕಣೆ ನಡುಂ ಶಾದ ದೋಗಗಳ ವ ತಾ. ೧೫ನೇಗೆ ಕ್ಷತ್ರಿಯ ಸಂಘದ ಮಹಾಸಭೆ ಸೇರುವ ನಿಮಂತ್ರಣಗಳಾಗಿದ್ದವು. ಆದರೆ ಸಭೆಗೆ ಜನರೇ ಸೇರಲಿಲ್ಲ. ಅದಕ್ಕೆ ಕಾರಣವಿದೆ. ಸಂಘದ ಅಧ್ಯಕ್ಷರ ವರ್ತನವು ಒಡು ನಿರಂಕುಶವಿದ್ದು ಸಮಾಜದವರ ಕಡೆಯಿಂದ ಅರ್ಜ ವಗೈರೆ ಬಂದರೆ ವಿಚಾರವನ್ನೇ ಮಾಡುವದಿಲ್ಲ ಜಿಸ್ತಿ ನೋಟೀಸು ಕೊಟ್ಟಲ್ಲಿ ಸ್ವೀಕರಿಸುವದಿಲ್ಲ ೨-೩ ವರ್ಷಗಳಿಂದ ಒಬ್ಬಂದೇ ಕಾರಭಾರ ನಡೆದದೆ. ಇದರಿಂದ ಸಂಘದ ಸಭಿಕರಲ್ಲಿ ಬಹಳ ಅಸಂತೋಷವುಂಟಾಗಿದೆ. ಚಾಲಕರು ವಿಚಾರ ಮಾಡಿ ಸಮಾಜದೊಡನೆ ಸನ್ಮಾನವಾಗಿ ನಡೆಕೊಳ್ಳಬೇಕಾಗಿ ಸಮಾಜದವರೊಬ್ಬರು ಸೂಚಿಸುತ್ತಾರೆ.

ಶಿರಸಿ— ಈ ವಾರದಲ್ಲಿ ಬಹಳ ಇಲ್ಲಿ ೪೬ ದಾತ್ರ ವಿದರೀತ. ನಟ್ಟಿರಾವಿಯಲ್ಲಿ ಕಳ್ಳತನದಿಂದ ಮದ್ಯ ತಯಾರಿಸುವ ದೊಡ್ಡದೊಂದು ಭಟ್ಟಿಯು ಕೋರ್ಟು ಬಾಬತಿಗೆ ತೆಗೆಯಲ್ಪಟ್ಟಿದೆ. ಕೆಲವರಿಗೆ ಸಿಕ್ಕಿಬಿದ್ದಿರೆ ಭಟ್ಟಿ ನಡೆಯುತ್ತಿ ೨—೩ ವರ್ಷಗಳಾದವಂತೆ! ಅಬಕಾರಿ ಅಧಿಕಾರಿಗಳು ಕಣ್ಮುಚ್ಚಿಕೊಂಡು ತಿರುಗುತ್ತಿದ್ದರೇ ?

ಬೋರಿಂಗ ಕ್ರಮದಿಂದ ತೋಡಿದ ಬಾವಿಯು ಈಗ ಬೇಕಾದರೆ ಸಂಪೂರ್ಣ ತಯಾರಾಯಿತು ಪಂಪಿನಿಂದ ನೀರು ಹತ್ತಲು ಬಲು ಕಿರಿದರೆ. ಸಾಮಾನ್ಯ ಬಾವಿಗಳಲ್ಲಿ ಕೊಡ ತುಂಬುವದೇ ಸುಲಭ ಕೆಲಸವೆಂದು ಈ ಬಾವಿಯಿಂದ ಸಿದ್ಧವಾಗಿರುವದೆ. ಕ್ರಮ ಹೆಚ್ಚು ತಗಲುತ್ತದೆ ಸಮಯ ಹೆಚ್ಚು ತಗಲುತ್ತದೆ ಅದರೊಡನೆ ಖರ್ಚು ಹೆಚ್ಚು. ಪಂಪಿನಿಂದ ಕೊಡ ತುಂಬಿ ತಂದರೆಂದು ಹಾಲು ಕೊಡೆಯಲು ಅಡ್ಡಿ ಇಲ್ಲ ಮುಂದಿನ ವ್ಯವಸ್ಥೆ ನೋಡುವ. ಅಸ್ಪೃಶ್ಯರಿಗಾಗಿ ಇದೇ ಕ್ರಮದಿಂದ ಇನ್ನೊಂದು ಬಾವಿ ತೋಡುವ ಕೆಲಸವು ಮುನಿಸಿಪಾಲಿಟಿಯು ವಿಧ್ಯಮಾನವಾಗಿದೆ. ಬೋರಿಂಗ ಕ್ರಮದಿಂದ ಎತ್ತಿದ ಬಾವಿಯು ಹಾಳಿನಲ್ಲಿ ಖನಿಜ ಪದಾರ್ಥವಿರುವದಾಗಿ ಸಂಶಯ ಬಂದದ್ದರಿಂದ ಅದರ ಪರೀಕ್ಷಣಗಾಗಿ ಕೆಲವು ಮಣ್ಣು ಪರೀಕ್ಷಣಕ್ಕೆ ರವಾನೆಯಾಗಿದೆ. ಸಿಗರೆಟ್ಟುಗಳ ಪ್ರಚಾರವು ಭರದಿಂದ ನಡೆದಿದೆ.

ಬಿಲ್ಲಿಗಗಂ ಸಿಗರೆಟ್ಟುಗಳು ಸಿಗಲಾರಂಭಿಸಿವೆ. ಹಸ್ತಪತ್ರಿಕೆಗಳೂ, ಉಪದೇಶದ ಉಪನ್ಯಾಸಗಳೂ ನಡೆಯುತ್ತವೆ ಇದನ್ನು ವಿಚಾರ ಮಾಡಿ ಈ ಬಲೆಯಲ್ಲಿ ಸಿಲುಕದಂತೆ ಜಾಗ್ರತೆ ವಹಿಸಬೇಕು

ಒಂದು ಎಚ್ಚರಿಕೆ. ಮುನಿಸಿಪಾಲಿಟಿಯವರು ರಾಮಪ್ಪನ ಹೊಂಡದ ಬಗ್ಗೆ ಹಾಗು ದೊಡ್ಡ ಬಾವಿಗಳ ಬಗ್ಗೆ ಹೆಚ್ಚಿನ ಜಾಗ್ರತೆ ಕೊಳ್ಳಬೇಕು. ಅರಿವೆ ತೊಳೆದು ಸ್ನಾನ ಮಾಡಿ ಇವನ್ನು ಕೆಡಿಸಗೊಡಬಾರದು. ಜನರೂ ಜಾಗ್ರತೆ ಕೊಳ್ಳಬೇಕು ಬೋರಿಂಗ ಬಾವಿಗಳಿಗೆ ಮರುಳಾಗಬಾರದ ಬೋರಿಂಗ ಕ್ರಮದಿಂದ ಬಾವಿ ತೆಗೆದರೆ ಎಲ್ಲ ಹೊಲಸು ನೆಟ್ಟನೆ ಯಂತ್ರ ತಯಾರಿಸುವವರಿಗೆ ಕಳಿಸಿದಂತಾಗುತ್ತದೆ ಊರವರಿಂದ ಕಡಿಸಿದರೆ ಒಡಬಗ್ಗರಿಗೊಂದು ಕೂಲಿ ಸಿಗುತ್ತದೆ

— ಬೋರು ಜಾತಿಯ ಗುರುಗಳಾದ ಮುಲ್ಲಾಜಿ ಸಾಹೇಬರು ೮೪ ಲಕ್ಷ ರೂಪಾಯಿಗಳ ಧರ್ಮನಿಧಿಯನ್ನು ಹಂಚಿಸಿದರೆಂದು ಮುಂಬಯಿ ಹೈಕೋರ್ಟಿನಲ್ಲಿ ದಾವೆ ನಡೆದಿದೆ.

— ಬೇಗಂ ಖೂನಿ ಖಟ್ಲೆಯ ಮುಖ್ಯ ವೇಷವಾದ ಮುಮ ತಾಜ ಬೇಗಮಳೊಡನೆ ಅಸ್ಪೃಶ್ಯರಿಂದ ಚರ್ಮಕ ವರ್ತಕನಾದ ಮಿ| ಅಬ್ದುಲ್ ರಹಮಾನರವರು ಮದುವೆಯಾದರೆಂದು ಈ ಹಿಂದೆ ಪ್ರಕಟವಾಗಿತ್ತು. ಮದುವೆ ದಸ್ತೈವಜು ಆಗಿತ್ತು. ಅಬ್ದುಲ್ ರಹಮಾನರವರು ಈಗ ಮುಮ ತಾಜ ಬೇಗಮಳ ಮೇಲೆ ದಂಪತಿ ಹಕ್ಕಿನ ದಾವೆ ಮಾಡಿ ಬೇಗಮಳ ಇದ ಬೇಡಿದ್ದಾಳೆ. ಮದುವೆಯನ್ನೇ ಬೇಗಮಳು ನಿರಾಕರಿಸಿ ತಾನು ಪೂರ್ಣ ಸ್ವತಂತ್ರಳಾಗಿ ಇದ್ದಳೆಂದು ಸಮಾಧಾನ ಕೊಟ್ಟಿದ್ದಾಳೆ.

ವೃತ್ತಸಾರ.

— ಇಂದೋರಿನ ಪದಭ್ರಷ್ಟ ಮಹಾರಾಜರಾದ ಸರ್ ತುಕೋಜಿರಾವ ಹೋಳಕರರವರು ಒರ್ದ್ರಿ ಕಾರ್ಯಕ್ಕಾಗಿ ೨ ಲಕ್ಷ ರೂಪಾಯಿ ಅರ್ಪಿಸಿದ್ದಾರೆ. ಹಿಂದು ಧರ್ಮದಿಂದ ಪತಿತರಾದವರಿಗೆ ಹಿಂದೂ ಮಾಡುವದೂ ಪರಧರ್ಮದವರಿಗೆ ಹಿಂದು ಮಾಡುವದೂ ಈ ನಿಧಿಯ ಉದ್ದೇಶವಿದೆ. ಕರವೀರ ಪೀಠದ ಶ್ರೀ ಶಂಕರಾಚಾರ್ಯರಾದ ಡಾ| ಮಹಾಭಾಗವತ ಕುರ್ತಕೋಟಿಯವರು ಈ ನಿಧಿಯ ವಿನಿಯೋಗವನ್ನು ಮಾಡಿಸಲು ನೇಮಿಸಲ್ಪಟ್ಟಿದ್ದಾರೆ.

— ಹಿಗ್ಗೇರಿಯಾದಲ್ಲಿ ಭೂಕಂಪವಾಗಿ ೩೦ ಮಂದಿ ಸತ್ತ ಸುದ್ದಿ ಬಂದಿದೆ. ಅನೇಕರಿಗೆ ಗಾಯಗಳಾಗಿವೆ. ಆ ದೇಶದ ಜಿನೋವಾ ಗ್ರಾಮದಲ್ಲಿ ಎಲ್ಲ ಸಾರ್ವಜನಿಕ ಕಟ್ಟಡಗಳು ಭೂಕಂಪದಿಂದ ನೆಲಕ್ಕುರುಳಿದವಂತೆ!

— ಲಾಹೋರ ಮ್ಯುನಿಸಿಪಾಲಿಟಿಯೊಳಗಿನ ತೆರಿಗೆಗಾರರು ಸಭೆಸೇರಿ ತಮ್ಮ ಮ್ಯುನಿಸಿಪಾಲಿಟಿ ಹದ್ದಿನೊಳಗಿಂದ ಸಾರಾಯಿಯ ಅಂಗಡಿಗಳನ್ನು ತೆಗೆದುಹಾಕಬೇಕಾಗಿ ಠರಾವನ್ನು ಮಾಡಿದ್ದಾರೆ.

— ನಮ್ಮ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ನಿವಾಸಿ ಪ್ರಸಿದ್ಧ ದೇಶಭಕ್ತರಾದ ಶ್ರೀ| ಮಾಧವರು ೨ ತಾಸಿನಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಿಂದ ಶ್ರೀ| ವಿಠ್ಠಲಭಾಯಿ ಯವರ ಮೂರ್ತಿಯನ್ನು ಪೂರ್ಣವಾಗಿ ತಯಾರಿಸಿದರು. ಶ್ರೀ| ಪಟೇಲರವರು ಶ್ರೀ| ಮಾಧವರವರಿಗೆ ಪತ್ರದ ಕೊಡಬೇಕಾಗಿಯೂ ಉದ್ಗರಿಸಿದರು.

— ಪರದೇಶಿ ವಿಮೆ ಕಂಪನಿಯವರು ಹಿಂದುಸ್ಥಾನದ ಪ್ರತಿ ವರ್ಷ ೧೫ ಕೋಟಿ ರೂಪಾಯಿಗಳನ್ನು ಒಯ್ಯುತ್ತಾರೆ.

— ನಿಜಾಮ ಸಾಹೇಬರು ಬಹಳ ಔದಾರ್ಯವಂತರಾಗಿದ್ದಾರೆ. ತಮ್ಮ ಕಡೆ ಆಶಳತೆಗಾಗಿ ಬಳುಕ್ಕಾದದಿಂದ ಮಸಿಕಿಯೊಂದ ೩ ಪೈಗಾ ಅಸ್ತ್ರಗಳಿಂದ ೩ ಲಕ್ಷ ರೂಪಾಯಿಗಳನ್ನು ಇಂಗ್ಲಂಡದಲ್ಲಿ ಮಸೀದೆ ಕಟ್ಟಲು ಕೊಟ್ಟಿದ್ದಾರೆ ಪರಸ್ಪರ ಧರ್ಮ ಮಾಡುವ ಯೋಜನೆಯನ್ನೊಂದು ನಿಜಾಮ ಸಾಹೇಬರು ತಯಾರಿಸಿದರೆ, ಲೋಕದಲ್ಲಿ ಧರ್ಮ ಬೆಳೆಯುವಂತಿದೆ.

ವ್ಹರ್ನಾಕ್ಯೂಲರ ಫಾಯನಲ್ ಪರೀಕ್ಷೆಯಲ್ಲಿ ಪಾಸಾದವರ ಹೆಸರು.

ಅಜ್ಜಿಬ ದತ್ತು ಬಾಂದಿ ಸೀತ ರಾಮ ವೆಂಕಟರಮಣ ಬಾಳಗಿ, ಮಂಜನಾಥ ತಿಪ್ಪಯ್ಯಾ ಬೈಲೂರ, ನಾರಾಯಣ ಮಹಾಬಲ ಭಟ್ಟ, ನಾರಾಯಣ ದತ್ತಾತ್ರಯ ಭಟ್ಟ ಪುಟ್ಟಪ್ಪಾ ಸುಬ್ರಾಯ ಭಟ್ಟ, ತಿಮ್ಮಣ್ಣಾ ಗಣಪತಿ ಭಟ್ಟ ಗಣಪತಿ ಶಾಯಿ ನಾಗ ಬೈರಮನ, ಬಸಪ್ಪಾ ಮತ್ತಪ್ಪ ಮಾಸ್ತಿ ಗೋವಿಂದ ಚಮಗಾರ, ಅನಂತ ನಾರಾಯಣ ಗಣೇಶ ಮನೆ. ತಮ್ಮಣ್ಣಾ ವೋಸಪ್ಪಾ ಗುಂಡಕರ, ವೆಂಕಟೇಶ ಜನಾರ್ದನ ಗೋಕರ್ಣಕರ, ಮಹಾಬಳೇಶ್ವರ ವಿಶ್ವೇಶ್ವರ ಶಾಸ್ತ್ರಿ ರಾಮಾ ಮಹಾದೇವ ಹಮ್ಮು, ತಿಮ್ಮಪ್ಪಾ ನಾಗೇಂದ್ರ ಹೆಬ್ಬು, ಸುಬ್ರಾಯ ಈಶ್ವರ ಹೆಗಡೆ, ದತ್ತಾತ್ರೇಯ ಶಲಗಟ್ಟಿಕರ ಲಕ್ಷ್ಮೀ ನಾರಾಯಣ ರಾಮಾ ಭಟ್ಟ ಕವಳ, ಶಂಕರ ಶೇಷ ಭಟ್ಟ ಕವಳ, ಲಕ್ಷ್ಮಣ ರಂಗಾ ಕಾಮತ, ಗಣಪತಿ ನರಹರಿ ಭಟ್ಟ ಕಾಮೇಶ್ವರ, ನಾಗೇಶ ಜನಾರ್ದನ ಕಾಣಕೋಣಕರ, ಕಾಶೀನಾಥ ಅನಂತ ಕಾನಿಟಕರ, ಶಿವಾನಂದ ಬಿನ್ ಬುಜೆ ಲಾಯಿಫ್, ಉಮ್ಮರ ಸಾಬ ಅಹಮ್ಮದ ಸಾಬ ಮಳಗಿ, ಬಾಬು ರಾಕು ಮಾಸೋಳಕರ, ವೀರಭದ್ರ ವಿಠ್ಠಲ ಮೇಸ್ತ್ರಿ, ಮಹಾದೇವ ಗಣಪಯ್ಯಾ, ಅಪ್ಪು ರಾಮು ನಾಯ್ಕ, ನಾಗೇಶ ರಾಮ ನಾಯ್ಕ, ಪರಮೇಶ್ವರ ಮಂಜಪ್ಪ ನಾಯ್ಕ ಪಾಂಡುರಂಗ ನಾಗೇಶ ನಾಯ್ಕ, ಸಗು ನಾರಾಯಣ ನಾಯ್ಕ, ಸುಬ್ರಾಯ ಬೀರಣ್ಣಾ ನಾಯ್ಕ, ವಿಠ್ಠಲ ಪುರ್ಸು ನಾಯ್ಕ, ರಾಮಾ ಹಬ್ಬು ನಾಮಧಾರಿ ನಾರಾಯಣ ಸುಕ್ರು ಪಟಾದಾರ, ಸುಬ್ರಾಯ ಬಾಬು ಶೆಟ್ಟಿ, ಪಾಂಡುರಂಗ ತಿಮ್ಮಾ, ಗಣಪತಿ ನಾರಾಯಣ ಶೆಟ್ಟಿ, ವೆಂಕಟರಮಣ ಗಣಪಯ್ಯಾಶೆಟ್ಟಿ, ರಘುವೀರ ನಾಗೇಶ ಶೆಟ್ಟಿ, ಪಾಂಡುರಂಗ ರಾಘೋಬಾ ಶೇಟ, ಅಬ್ದುಲ ಲಥೀಫ ಮಹಮೂದ ಶೇಖ ಅಬ್ದುಲ ಗಫೂರ ವಲ್ಲದ ಇನಾಸ, ಶೇಖ ಹುಸೇನ ಶೇಖ ದಾವೂದ, ನಾರಾಯಣ ಭಾಸ್ಕರ ಶೆಣವಿ, ಜುವಾಂವ ಬಾರಿಸ ಬಸ್ತ್ಯಾಂವ ಸೋಜಾ, ಶಿವಪ್ಪಾ ಅಂಣಪ್ಪಾ, ಅನಂತ ಶಿವರಾಮ ವ್ಯಾಸಭಾಗ, ಶ್ರೀಕೃಷ್ಣ ವೆಂಕಪ್ಪಾ ವ್ಯಾಸಭಾಗ, ಲಕ್ಷ್ಮಣ ಸಾಂತಯ್ಯಾ ವ್ಯಾಸಭಾಗ, ಇಸಾಕ ವಲ್ಲದ ಬುಡಣ ಸಾಹೇಬ

ಜಾಹೀರ ನೋಟೀಸು.

ದಿ ಕುಮಟಾ ಅರಬನ್ ಕೊ-ಒಪರೇಟಿವ್ಹ ಬ್ಯಾಂಕ ಲಿಮಿಟೆಡ್, ಕುಮಟಾ.

ಇದರ ಮೂಲಕ ಯಾವತ್ತು ಠೇವುದಾರರಿಗೆ ವ ಬೇರೆ ಠೇವು ಇಡಲಪೇಕ್ಷಿಸುವ ಜನರಿಗೆ ಮತ್ತು ಸಹಕಾರಿ ಸಂಘಗಳಿಗೆ ತಿಳಿಯಪಡಿಸುವದೇನಂದರೆ:—

ಈ ವರೇಗೆ ಬ್ಯಾಂಕಿನಲ್ಲಿ ಆರು ತಿಂಗಳ ಮುದ್ದತಿನ ಠೇವುಗಳು ಶೇಕಡಾ 3-8-0 ಯಂತೆ, ೧೨ ತಿಂಗಳ ಮುದ್ದತಿನ ಠೇವುಗಳು ಶೇಕಡಾ 5 0-0 ರಂತೆ, ಮತ್ತು ೨೪ ತಿಂಗಳ ಮುದ್ದತಿನ ಠೇವುಗಳು ಶೇಕಡಾ 6-4-0 ಬಡ್ಡೀ ದರದಂತೆ ಸ್ವೀಕರಿಸಲ್ಪಡುತ್ತಿದ್ದವು. ಆದರೆ ಇನ್ನುಮುಂದೆ (ಪುನಃ ಜಾಹೀರ ಮಾಡುವವರೆಗೆ) ಬರುವ ಮೇ ತಿಂಗಳ ತಾ. ೧ ನೇಯಿಂದಾ ೬ ತಿಂಗಳ ಮುದ್ದತಿನ ಠೇವುಗಳು ಶೇಕಡಾ 4-0-0 ರಂತೆ, ೧೨ ತಿಂಗಳ ಮುದ್ದತಿನ ಠೇವುಗಳು ಶೇಕಡಾ 4 8 0 ಯಂತೆ, ಮತ್ತು ೨೪ ತಿಂಗಳ ಮುದ್ದತಿನ ಠೇವುಗಳು ಶೇಕಡಾ 5-0-0 ರಂತೆ ಸ್ವೀಕರಿಸಲಾಗುವವು.

ಮುದ್ದತಿನ ಠೇವುಗಳು ಮುದ್ದತು ತೀರುವ ವರೆಗೆ ಪರತ್ತ ಪಡೆಯಲಿಕ್ಕೆ ಯಾ ಟ್ರಾನ್ಸಫರ ಮಾಡಲಿಕ್ಕೆ ಬರಲಾರದು.

ಸೇವ್ಹಿಂಗ್ಸ ಬ್ಯಾಂಕ ಮತ್ತು ಕರಂಟ ಠೇವುಗಳ ಬಡ್ಡಿ ದರಗಳು ಸಧ್ಯಕ್ಕೆ ಈ ಕೆಳಗಿನಂತೆ ಇರುತ್ತವೆ.

ಸೇವ್ಹಿಂಗ್ಸ ಬ್ಯಾಂಕ ಠೇವು 3-8-0 ರಂತೆ,
ಕರಂಟ ಠೇವು 2-8-0 ರಂತೆ.

ತಾ. ೨೩-೪-೨೮. } Sd/ **Annapa R. Pai,**
Chairman.

ನೋಟೀಸು.

ಹೊನ್ನಾವರ ತಾಲೂಕ ಹವ್ಯಕ ಕೋಆಪರೇಟಿವ್ಹ ಬ್ಯಾಂಕಿನ ವಾರ್ಷಿಕ ಮಹಾ ಸಭೆಯು ಇದೇ ಬರುವ ಮೇ ತಿಂಗಳ ತಾರೀಕು ೬ ನೇ ರವಿವಾರ ಮುಧ್ಯಾನ್ಹ ೨ ಘಂಟೆಗೆ ಕಸಬಾ ಶ್ರೀ ಶಾರದಾಅಮ್ಮನವರ ದೇವಸ್ಥಾನದಲ್ಲಿ ಸೇರುವದು. ಬ್ಯಾಂಕಿನ ಎಲ್ಲಾ ಮೆಂಬರರು ಈ ಸಭೆಗೆ ಅಗತ ಬರಬೇಕಾಗಿ ವಿನಂತಿ.

ಸಭೆಯಲ್ಲಿ ತರತಕ್ಕ ಠರಾವ ಯಾ ಸೂಚನೆಗಳನ್ನು ಸಭೆ ಸೇರುವ ೮ ದಿವಸ ಮುಂಚೆ ಸೆಕ್ರೆಟರಿ ಕಡೆ ಲೇಖಿಯಿಂದ ತಿಳಿಸಬೇಕು. ಚರ್ಚಿಸತಕ್ಕ ವಿಷಯ ವಗೈರೆದರ ಮಾಹಿತಿ ಬೇಕಿದ್ದರೆ ಅಫೀಸಿನಿಂದ ತಿಳಕೊಳ್ಳತಕ್ಕದ್ದು

ಹೊನ್ನಾವರ, } ಎಂ. ಡಿ. ಶೆಟ್ಟಿ,
12 4-1928. } ಹೊನ್ನಾವರ.
ಅಧ್ಯಕ್ಷ.

ಮಹಾತ್ಮರ ಆತ್ಮಚರಿತ್ರ.

(೪೭) ಪಕ್ಷಗಾರನಿಗೆ ಬದುಕಿಸಿದುದು.

ಇಷ್ಟರತನಕ ವಾಚಕರಿಗೆ ಪಾರಸೀ ರುಸ್ತುಮಜಿಯವರ ಪರಿಚಯವಾಗಿರುವದು. ಅವರು ಒಮ್ಮೆಲೇ ನನ್ನ ಪಕ್ಷಗಾರರೂ, ಜೊತೆಗಾರರೂ ಆದರು. ಸತ್ಯಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ಹೇಳಬೇಕಾದರೆ, ಅವರು ಜೊತೆಗಾರರಾದದ್ದು ಮೊದಲು, ಆ ಮೇಲೆ ನನ್ನ ಪಕ್ಷಗಾರರಾದರು. ನನ್ನ ಮೇಲೆ ಅವರ ನಂಬಿಗೆ ಬಹಳ. ಕುಟುಂಬದ ಆಚಾರ-ವಿಚಾರಗಳಲ್ಲಿ ಸಹ ಅವರು ನನ್ನ ಆಲೋಚನೆ ಪಡೆಯುತ್ತಿದ್ದರು. ಆಲಸ್ಯದಲ್ಲಿ ಬಿದ್ದರೂ, ಅವರು ನನ್ನ ಆಲೋಚನೆಯನ್ನೇ ಕೇಳುತ್ತಿದ್ದರು. ನಮ್ಮಿಬ್ಬರ ಆಚಾರ-ವಿಚಾರಗಳು ಭಿನ್ನ ಭಿನ್ನವಾಗಿದ್ದರೂ, ಅನಭಿಜ್ಞನಾದ ನನ್ನ ಔಷಧೋಪಚಾರವನ್ನೇ ಅವರು ಪಡೆಯಲು ಸಂಕೋಚಪಡುತ್ತಿದ್ದಿಲ್ಲ.

ಈ ಗೆಳೆಯರ ಮೇಲೆ ಒಮ್ಮೆ ಒಂದು ದೊಡ್ಡ ಆಪತ್ತು ಬಂತು. ಸಾಮಾನ್ಯವಾಗಿ ತಮ್ಮ ಎಲ್ಲ ವಿಷಯಗಳನ್ನೂ ಅವರು ನನ್ನ ಬಳಿ ಹೇಳುತ್ತಿದ್ದಾಗ್ಯೂ, ಒಂದು ವಿಷಯವನ್ನು ಅವರು ಬುದ್ಧಿಪೂರ್ವಕವಾಗಿ ಬಚ್ಚಿಟ್ಟುಕೊಂಡಿದ್ದರು. ಮುಂಬಯಿ—ಕಲಕತ್ತೆಗಳ ಕಡೆಯಿಂದ ಅವರು ಸರಕುಗಳನ್ನು ತರಿಸುವ ದೊಡ್ಡ ಆಮದಿನ ವ್ಯಾಪಾರ. ಆಗಾಗ ಸುಂಕ ತಪ್ಪಿಸಿಕೊಂಡು ಅವರ ಸಾಮಾನುಗಳನ್ನು ತರುತ್ತಿದ್ದರು. ಕಸ್ಟಮ್ ಅಧಿಕಾರಿಗಳಿಗೂ, ರುಸ್ತುಮಜಿಯವರಿಗೂ ಬಹಳ ನಂಬಿಗೆಯಿದ್ದದರಿಂದ ಯಾರೂ ಅವರ ಮೇಲೆ ಸಂದೇಹಪಡಲಿಲ್ಲ. ಅವರು ತೆರಿಗೆಯನ್ನು ಅವರ ಪಟ್ಟಿಗಳನ್ನು ನಂಬಿಕೊಂಡು, ಅವರು ವಸೂಲ ಕೊಳ್ಳುತ್ತಿದ್ದರು. ಕೆಲವರಿಗೆ ಈ ವಿಷಯ ಗೊತ್ತಿದ್ದರೂ ಇರಬಹುದು, ಆದರೆ, ಆ ಕಡೆ ಅವರು ಅಲಕ್ಷ ಮಾಡುತ್ತಿದ್ದರು.

ನಮ್ಮ ಗುಜರಾತ ದೇಶದ ಅಖಾ ಎಂಬ ಕವಿಯು ಮಾರ್ಮಿಕವಾದ ಒಂದು ಉಕ್ತಿಯನ್ನು ಹೇಳಿದ್ದಾನೆ — ಕಳ್ಳತನವು ಪಾದರಸದಂತಿದೆ, ಅದನ್ನೆಂದೂ ಒತ್ತಿ ನಿಲ್ಲಿಸಲು ಬಾರದು. ಈ ಸಿದ್ಧಾಂತಕ್ಕೆ ರುಸ್ತುಮಜಿಯವರು ಅಪವಾದ. ಒಂದು ದಿನ ರುಸ್ತುಮಜಿಯವರು ನನ್ನ ಕಡೆ ಓಡಿಬಂದರು. ಗಲ್ಲಗಳ ಮೇಲೆಲ್ಲ ಕಣ್ಣೀರು ಸುರಿಯುತ್ತಿದ್ದವು. ಅವರು ನುಡಿದದ್ದೇನಂದರೆ: "ಬಾಂಧವರೇ, ನಾನು ನಿಮಗೆ ವಂಚಿಸಿದೆನು, ನನ್ನ ಅಪರಾಧವು ಇಂದು ಬಯಲಾಗಿದೆ. ಸುಂಕ ತಪ್ಪಿಸಿಕೊಂಡು ನಾನು ಸರಕು ತಂದೆ, ನನ್ನ ಸರ್ವನಾಶವಾಯಿತು, ನಾನೀಗ ಜೈಲಿಗೆ ಹೋಗಬೇಕು. ಈಗ ನನಗೆ ಬೇರೆ ಗತಿಯಿಲ್ಲ. ಈ ಪ್ರಸಂಗದಲ್ಲಿ ನೀವೊಬ್ಬರೇ ನನಗೆ ಕಾಯಬಲ್ಲಿರಿ. ನಾನು ಇದೊಂದನ್ನು ಬಿಟ್ಟು ಎಲ್ಲವನ್ನೂ ನಿಮಗೆ ಹೇಳಿದ್ದೇನೆ. ಆದರೆ ವರ್ತಕರ ಇಂಥ ವ್ಯಾಪಾರಗಳಿಂದ ನಿಮಗೆ ಬೇಸರಗೊಳಿಸುವದು ನನಗೆ ಯುಕ್ತ ತೋರಲಿಲ್ಲ. ಆದರಿಂದ ಸುಂಕ ತಪ್ಪಿಸಿಕೊಳ್ಳುವ ವಿಚಾರವನ್ನು ನಾನು ಇದುವರೆಗೂ ನಿಮಗೆ ಹೇಳಲಿಲ್ಲ. ಈಗ ನನಗೆ ಬಹಳ ಪಶ್ಚಾತ್ತಾಪವಾಗಿದೆ."

ನಾನವರಿಗೆ ಸಮಾಧಾನಪಡಿಸಲು ನುಡಿದದ್ದೇನಂದರೆ: "ನಿಮಗೆ ಕಾಯುವ ಹಾಗು ಕೊಲ್ಲುವ ಅಧಿಕಾರವು ಪರಮಾತ್ಮನ ಕೈಯಲ್ಲಿದೆ. ನನ್ನ ವಿಷಯ ನಿಮಗೇ ಗೊತ್ತೇ ಇದೆ. ಅಪರಾಧವನ್ನು ಒಪ್ಪಿಕೊಂಡು ನಿಮ್ಮನ್ನು ನಾನು ಕಾಯಲು ಯತ್ನಿಸುವೆನು."

ಕೇಳಿದಂತೆ ರುಸ್ತುಮಜಿಯವರಿಗೆ ಬಹಳ ನಾಚಿಕೆಯೆನಿಸಿತು. ಅವರು ನುಡಿದದ್ದೇನಂದರೆ — "ನಿಮ್ಮ ಬಳಿ ಒಪ್ಪಿಗೆ ಕೊಟ್ಟರೆ ಸಾಲದೇನು"?

"ನೀವು ಅಪರಾಧ ಮಾಡಿದ್ದು ಸರಕಾರ ಬಳಿ, ನನ್ನ ಬಳಿಯಲ್ಲ, ಆದರಿಂದ ನನ್ನ ಬಳಿ ಮಾಡಿದ ಒಪ್ಪಿಗೆಯಿಂದ ನಿಮಗೆ ಪ್ರಯೋಜನವೇನಿದೆ?" ಎಂದು ನಾನು ಸಮಾಧಾನದಿಂದ ನುಡಿದೆನು.

"ನಿಮ್ಮ ಅಂಬೋಣದಂತೆ ನಾನು ನಡೆಕೊಳ್ಳಲು ತಯಾರಿದ್ದೇನೆ. ಆದರೆ, ನಾ... ಗಳು ಮುಂಚೆನಿಂದ ನನ್ನ ವಕೀಲರು. ಅವರ ಆಲೋಚನೆಯನ್ನು ಪಡೆಯಲು ನೀವು ಒಪ್ಪಲಿಕ್ಕಿಲ್ಲವೇ? ಅವರಾದರೂ ನನ್ನ ಗೆಳೆಯರೇ."

ಚೌಕಶಿ ಮಾಡಿದರೆ ಸುಂಕ ತಪ್ಪಿಸಿಕೊಳ್ಳುವ ವ್ಯಾಪಾರವು ಬಹುಕಾಲದಿಂದ ನಡೆದು ಬಂದಿತ್ತೆಂದು ತಿಳಿಯಿತು. ಪ್ರತ್ಯಕ್ಷ ಸಿಕ್ಕಿದ್ದು ಒಂದು ಚಿಕ್ಕ ರಕಮಿನ ವಿಷಯದಲ್ಲಿ. ನಾವೀರ್ವರೂ ಆ ವಕೀಲರ ಬಳಿ ಹೋದೆವು. ವಕೀಲರು ಎಲ್ಲ ಕಾಗದ ಪತ್ರಗಳನ್ನು ಪರಾಮರಿಸಿ ನುಡಿದದ್ದೇನಂದರೆ — "ಈ ಖಟ್ಲೆಯು ಪಂಚರ ಮುಖಾಂತರ ಇತ್ಯರ್ಥವಾಗುವದು. ನಾತಾಳದೊಳಗಿನ ಪಂಚರು ಭಾರತೀಯರಿಗೆ ಎಷ್ಟುಕ್ಕೂ ದೋಷಮುಕ್ತ ಮಾಡುವದು ಅಸಾಧ್ಯ. ಆದರೆ ನನಗೆ ಈ ಖಟ್ಲೆಯಲ್ಲಿ (ಗೆಲ್ಲುವ) ಆಶೆ ಇದೆ."

ಈ ವಕೀಲರ ಪರಿಚಯವು ನನಗೆ ಹೆಚ್ಚನೆಯದಿದ್ದಿಲ್ಲ. ಪಾರಸೀ ರುಸ್ತುಮಜಿಯವರು ಮಧ್ಯದಲ್ಲಿಯೇ ನುಡಿದದ್ದೇನಂದರೆ "ನಿಮ್ಮ ಉಪಕಾರವಾಯಿತು. ಈ ಖಟ್ಲೆಯಲ್ಲಿ ಗಾಂಧಿಯವರ ಹೇಳಿಕೆಯಂತೆ ನಡೆಕೊಳ್ಳಬೇಕೆಂದು ನಾನು ಆಲೋಚನೆ ಮಾಡಿದ್ದೇನೆ. ಅವರಿಗೆ ನನ್ನ ವಿಷಯ ಎಲ್ಲ ಸಂಗತಿಗಳೂ ಗೊತ್ತಿವೆ. ಅವಶ್ಯವಿದ್ದಾಗ ನೀವು ಅವರಿಗೆ ಹೇಳಿಕೊಡಬೇಕು." ಈ ಪ್ರಕಾರ ಆ ವಕೀಲರಿಗೆ ಸಮಾಧಾನ ಮಾಡಿ ನಾವು ರುಸ್ತುಮಜಿಯವರ ಅಂಗಡಿಗೆ ಹೋದೆವು. ಇಲ್ಲಿ ನನ್ನ ಅಭಿಪ್ರಾಯವನ್ನು ಅವರಿಗೆ ನಾನು ತಿಳಿಸಿಕೊಟ್ಟೆನು. ನಾನು ನುಡಿದದ್ದೇನಂದರೆ — "ಈ ಖಟ್ಲೆಯನ್ನು ನ್ಯಾಯಾಸನದಲ್ಲೊಯ್ಯಬಾರದೆಂದು ನನ್ನ ಅಭಿಪ್ರಾಯ. ನಿಮ್ಮ ಮೇಲೆ ಖಟ್ಲೆ ಮಾಡುವದು ಯಾ ಬಿಡುವದು ಕಸ್ಟಮ್ ಆಫೀಸರರ ಕೈಯಲ್ಲಿದೆ. ಎಟರ್ನಿ ಜನರಲ್‌ರವರ ಹೇಳಿಕೆಯಂತೆ ಕಸ್ಟಮ್ ಆಫೀಸರರು ನಡೆಕೊಳ್ಳಬೇಕು. ಇವರೀರ್ವರಿಗೂ ಭೆಟ್ಟಿಯಾಗಲು ನಾನು ತಯಾರಿದ್ದೇನೆ. ಅವರು ನಿರ್ಣಯಿಸಿದ ದಂಡದ ರಕಮನ್ನು ತೆರಲು ನೀವು ತಯಾರಿರಬೇಕು. ನನ್ನ ಸೂಚನೆ ಹೀಗಿದ್ದರೆ ಬಹಳ ಮಾಡಿ ಅವರು ಒಪ್ಪುವರು. ಒಪ್ಪದಿದ್ದರೆ ನೀವು ಜೈಲಿಗೆ ಹೋಗಲು ಸಿದ್ಧರಿರಬೇಕು. ನನ್ನ ಮತಿಗೆ ವಿಚಾರಿಸಿದರೆ ಸೆರೆಮನೆಯನ್ನು ಸೇರುವದು ಅಷ್ಟೊಂದು ನಾಚಿಕೆಯ ವಿಷಯವಲ್ಲ, ಅಪರಾಧ ಮಾಡುವದೇ ನಾಚಿಕೆಯ ವಿಷಯವು. ನಾಚಿಕೆಯ ಕೃತ್ಯವು ಆಗಿಹೋಗಿದೆ. ಬಂದಿವಾಸವನ್ನು ನೀವು ಪ್ರಾಯಶ್ಚಿತ್ತವೆಂದು ತಿಳಿಯಬೇಕು. ಇನ್ನು ಮುಂದೆ ಸುಂಕ ತಪ್ಪಿಸಿಕೊಳ್ಳಲಿಕ್ಕಿಲ್ಲವೆಂದು ನೀವು ಪ್ರತಿಜ್ಞೆ ಮಾಡುವದೇ ನಿಜವಾದ ಪ್ರಾಯಶ್ಚಿತ್ತವಾಗುತ್ತದೆ."

ಈ ಎಲ್ಲ ಮಾತುಗಳು [illegible] ಪಾರಸೀ ರುಸ್ತುಮಜಿಯವರಿಗೆ ಒಪ್ಪಿಗೆಯಾಯಿತೆಂದು ನಾ ಹೇಳಲಾರೆ. ಅವರು ಗಟ್ಟಿಗರು, ಆದರೆ ಆ ಕಾಲಕ್ಕೆ ಅವರ ಧೈರ್ಯವು ಕುಗ್ಗಿತ್ತು. ಅವರ ಹೆಸರೇ ಸಂಕಟದಲ್ಲಿ ಸಿಲುಕಿಕೊಂಡಿತ್ತು. ಪರಿಶ್ರಮಪೂರ್ವಕವಾಗಿಯೂ, ಜಾಗ್ರತೆಯಿಂದಲೂ ಜೋಡಿಸಿದ ಅವರ ಕೀರ್ತಿಯೆಲ್ಲ ನಷ್ಟವಾದರೆ, ಅವರ ಮುಂದಿನ ಗತಿಯೇನು?

ರುಸ್ತುಮಜಿಯವರು ನುಡಿದದ್ದೇನಂದರೆ — "ಒಳ್ಳೇದು, ನಿಮಗೆ ಒಪ್ಪಿಸಿದ್ದೇನೆಂದು ನಾನು ಈ ಮೊದಲೇ ಹೇಳಿದ್ದೇನೆ. ನಿಮ್ಮ ಮನಒಪ್ಪಿಗೆಯಾದಂತೆ ನೀವು ಮಾಡಬಹುದು."

ಈ ಪ್ರಕರಣದಲ್ಲಿ ನಾನು ನನ್ನ ಬಳಿ ಇದ್ದ ಮನವೊಲಿಕೆಯ ಸಮಸ್ತ ಉಪಾಯಗಳನ್ನು ಕೈಕೊಂಡೆನು. ಕಸ್ಟಮ್ ಆಫೀಸರರ ಬಳಿ ಎಲ್ಲ ಸಂಗತಿಗಳನ್ನು ನಿರ್ಭಯದಿಂದ ಅವರಿಗೆ ಹೇಳಿದೆನು. ಎಲ್ಲ ಲೆಕ್ಕದ ಪುಸ್ತಕಗಳನ್ನು ಅವರ ಸ್ವಾಧೀನಕ್ಕೆ ಕೊಡುತ್ತೇನೆಂದು ನಾನು ಹೇಳಿದೆನು. ರುಸ್ತುಮಜಿಯವರಿಗೆ ಅತ್ಯಂತ ಪಶ್ಚಾತ್ತಾಪವಾಗಿರುವದಾಗಿಯೂ ನಾನವರಿಗೆ ಹೇಳಿದೆನು.

ಕಸ್ಟಮ್ ಆಫೀಸರರು ನುಡಿದದ್ದೇನಂದರೆ — "ಆ ಮುದಿ ಪಾರಸಿಗೆ ನೋಡಿದರೆ, ನನಗೆ ಸಂತೋಷವಾಗುತ್ತದೆ. ಅವರು ಮೂರ್ಖ ಚೇಷ್ಟೆಯನ್ನಾಡಿದ ಬಗ್ಗೆ ನನಗೆ ವ್ಯಸನವಾಗಿದೆ. ನನ್ನ ಕರ್ತವ್ಯವೇನೆಂದು ನೀವು ಬಲ್ಲವರಿದ್ದೀರಿ. ಎಟರ್ನಿ ಜನರಲ್‌ರವರ ಹೇಳಿಕೆಯಂತೆ ನಾನು ನಡೆಕೊಳ್ಳಬೇಕಾಗಿದೆ. ಅದರಿಂದ ಅವರಿಗೆ ನೀವು ಪ್ರಯತ್ನಪೂರ್ವಕವಾಗಿ ಮನವೊಲಿಸಬೇಕಾಗಿ ನನ್ನ ಹೇಳಿಕೆಯಿದೆ."

"ನೀವು ಅವರ ಮೇಲೆ ಖಟ್ಲೆ ಮಾಡಲು ಆಗ್ರಹ ಮಾಡದಿದ್ದರಾಯಿತು, ಅದೇ ಒಂದು ಉಪಕಾರವು" ಎಂದು ನಾನು ನುಡಿದೆನು.

ಅವರ ಕಡೆಯಿಂದ ಈ ವಚನವನ್ನು ಕೊಂಡು ಎಟರ್ನಿ ಜನರಲ್‌ರ ಕಡೆ ನಾನು ಪತ್ರವ್ಯವಹಾರ ನಡಿಸಿದೆನು. ಅವರಿಗೆ ಭೆಟ್ಟಿಯಾದೆನು, ನನ್ನ ಸ್ಪಷ್ಟೋಕ್ತಿಗಳನ್ನು ಕೇಳಿ ಅವರಿಗೆ ಆನಂದವಾಯಿತು. ನಾನು ಯಾವುದನ್ನೂ ಬಚ್ಚಿಡಲಿಲ್ಲವಾಗಿಯೂ ಅವರಿಗೆ ಮನವರಿಕೆಯಾಯಿತು.

ನನ್ನ ಆಗ್ರಹದಿಂದಲೂ ಸ್ಪಷ್ಟೋಕ್ತಿಯಿಂದಲೂ ಅವರು ಒಂದು ಉದ್ಗಾರ ತೆಗೆದ ನೆನಪು ಕಾಣುತ್ತದೆ — ಈ ಪ್ರಕರಣದ ಸಂಬಂಧ ಅಥವಾ ಇನ್ನೊಂದು ಪ್ರಕರಣದ ಸಂಬಂಧವೆಂದು ಈಗ ನೆನಪಿಲ್ಲ. ಅವರ ಉದ್ಗಾರವೇನಂದರೆ — "ನೀವೆಂದಿಗೂ ಯಾರ ಕಡೆಯಿಂದಲೂ "ಇಲ್ಲ"ವೆಂಬ ಉತ್ತರ ಪಡೆಯಲಾರಿರಿ."

ರುಸ್ತುಮಜಿಯವರ ಪ್ರಕರಣವು ರಾಜಿಯಿಂದ ಇತ್ಯರ್ಥವಾಯಿತು. ಸುಂಕ ತಪ್ಪಿಸಿಕೊಂಡು ತಂದ ಸರಕುಗಳ ಮೇಲೆ ಇಮ್ಮಡಿ ಸುಂಕ ಕೊಡಬೇಕಾಯಿತು. ಈ ಪ್ರಕರಣದ ಸಂಗತಿಗಳನ್ನು ರುಸ್ತುಮಜಿಯವರು ವಿವರಪೂರ್ವಕವಾಗಿ ಬರೆಸಿ ಅದಕ್ಕೆ ಚೌಕಟ್ಟು ಹಾಕಿ ತಮ್ಮ ಆಫೀಸಿನಲ್ಲಿ ಅದನ್ನು ತೂಗಹಾಕಿದರು. ತಮ್ಮ ಉತ್ತರಾಧಿಕಾರಿಗಳಿಗೂ, ವ್ಯಾಪಾರಬಂಧುಗಳಿಗೂ ಇದರಿಂದ ಶಾಶ್ವತವಾದ ಮುಂಜಾಗ್ರತೆ ಸಿಗಬೇಕಾಗಿ ಅವರು ಈ ಯೋಜನೆಯನ್ನು ಕೈಕೊಂಡರು. ರುಸ್ತುಮಜಿಯವರ ವರ್ತಕ ಗೆಳೆಯರು ನನಗೊಂದು ಮುಂಜಾಗ್ರತೆ ಹೇಳಿದರು: ಈ ಪಶ್ಚಾತ್ತಾಪವು ಕ್ಷಣಭಂಗುರವಾದದ್ದೆಂದು ನನಗೆ ಹೇಳಿದರು. ಇದನ್ನು ನಾನು ರುಸ್ತುಮಜಿಯವರಿಗೆ ಹೇಳಲು ಅವರು ನುಡಿದದ್ದೇನಂದರೆ. — "ನಿಮಗೆ ನಾನು ವಂಚಿಸಿದರೆ ನನ್ನ ಗತಿಯೇನು?"

ಕಾಶಿಯ ಅಪೂರ್ವ ಸಾಮಾನುಗಳು!

ನಾವು ಕಾಶಿಯ ಪಟ್ಟೆ ಮಡಿ, ಶೀರೆ, ಖಣ, ಧೋತ್ರ, ಶಲ್ಲೆ, ಬಿಚಾನೆ, ಕಾಶ್ಮೀರದ ಶಾಲು, ಸಕಲಾತಿ ದಾವಳಿ, ರುದ್ರಾಕ್ಷಿ ಸರ, ಕರಿ ಗೌರೀಶಂಕರ, ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಳಿ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ

ವಿಶ್ವನಾಥ ಎಂಡ್ ಬ್ರದರ್ಸ,

ದುರ್ಗಾಘಾಟ, ಬನಾರಸ್ ಸಿಟಿ

Wanted:— Candidates for Telegraph and Station Masters Classes. Full particulars and Railway Fare Certificate on 2 annas Stamp. Apply to:— Imperial Telegraph College, **DELHI.**

ವಿಶೇಷ ಸಂಗತಿಗಳು.

ತೀರ್ಥಹಳ್ಳಿಯಲ್ಲಿ ಪರಶುರಾಮ ಶಿಬಿರದ ಸ್ಥಾಪನೆ.

— ಹುಬ್ಬಳ್ಳಿಯ ಹಿಂದುಸ್ಥಾನೀ ಸೇವಾದಳದವರು ತೀರ್ಥಹಳ್ಳಿಯಲ್ಲಿ ಪರಶುರಾಮ ಸ್ವಯಂಸೇವಕ ಶಿಕ್ಷಣ ಶಿಬಿರವನ್ನು ಇದೇ ಬರುವ ೨೫ನೇ ತಾರೀಖಿನಿಂದ ೫ ವಾರಗಳ ತನಕ ನಡಿಸುವರು. ಶಿಬಿರದಲ್ಲಿ ಸೇವಾದಲದ ಸೈನಿಕರಾಗಲು ಅವಶ್ಯವಾದ ಶಾರೀರಿಕ, ಮಾನಸಿಕ, ವೈದ್ಯಕೀಯ, ಬೌದ್ಧಿಕ ಶಿಕ್ಷಣ ಕೊಡಲಾಗುವದು. ೨೦ ರೂಪಾಯಿ ಖರ್ಚು ಬರುತ್ತದೆ. ಆದರೆ, ಅದರಿಂದ ಹೇರಳ ಲಾಭವಿದೆ. ಶ್ರೀ ಕೆ ವೆಂಕಟರಮಣ್ಯನವರು ಈ ಶಿಬಿರದ ಅಧಿಪತಿಗಳು. ವಿದ್ಯಾರ್ಥಿಗಳು ತೀರ್ಥಹಳ್ಳಿಗೆ ಹೋಗಿ ಈ ಶಿಕ್ಷಣ ಪಡೆದರೆ, ಸ್ವಾರ್ಥ-ಪರಮಾರ್ಥ ಎರಡನ್ನೂ ಸಾಧಿಸುವ ಹಾಗಿದೆ

* * *

ಬಾರ್ಡೋಲಿಯ ಹಕೀಕತು.

ಬಾರ್ಡೋಲಿಯಲ್ಲಿ ತೀವ್ರ ವಸೂಲಿಯ ಬಗ್ಗೆ ಚರ ಜಪ್ತ ಮಾಡಲು ಎಷ್ಟುಕಷ್ಟು ಇಂಬಿಲ್ಲ ಲ್ಲ ಪಟೇಲ-ತಲಾಟಿಗಳು ಸೋತುಹೋದರು. ಜಪ್ತಾದ ಆಸ್ತಿಯನ್ನು ನೆರೆಹೊರೆಯವರು ಕೊಳ್ಳುವ ಲಕ್ಷಣ ತೋರುವದಿಲ್ಲ. ಆಸ್ತಿ ಲಿಲಾವಾದರೆ ಒಕ್ಕಲು ಸಿಗುವದು ಸಹ ದುರ್ಲಭವಿದೆ ಇಷ್ಟು ನಿರ್ಧಾರದಿಂದ ಪ್ರಜೆಗಳು ಅಲ್ಲಿಯೊಂದ ಕಟ್ಟಿದ್ದಾರೆ ಕೆಲವು ಕಡೆಗಳಲ್ಲಿ ಜಕ್ಕಪುಟ್ಟ ದಿಕ ವಸ್ತುಗಳನ್ನು ತಲಾಟಿಗಳು ಕೈಯಿಂದ ತುಂಬಿ ಜನರು ತೀವ್ರ ಕೊಡಲಾರಂಭಿಸಿದರೆಂದು ಹೇಳುತ್ತಾರೆ ಆ ಜನರ ಕಡೆಯಿಂದ ಆ ಹಣವನ್ನು ಯುಕ್ತಿ ಪ್ರಯುಕ್ತಿಯಿಂದ ವಸೂಲ ಮಾಡಲು ಪ್ರಯತ್ನವಾಗುತ್ತದೆ ಒಂದೆಡೆ ಜಪ್ತಿ ಮಾಡಿದ ಸರಕನ್ನು ಒಯ್ಯಲು ಆಳು ಸಿಗಲಿಲ್ಲ. ಮಹಾಲಕರಿಯರು ಪಟೇಲರಿಗೆ ಒಯ್ಯಲು ಹೆದರಿಸಿದರಂತೆ! ಮುಂಬಯಿ ಇಲಾಖೆಯ ದೊಡ್ಡ ಲೋಕಪಕ್ಷೀಯ ಸಂಸ್ಥೆಯಾದ ಮುಂಬಯಿ ಪ್ರಸಿಡೆನ್ಸಿ ಎಸೋಸಿಯೇಶನ್ನು ಸತ್ಯಾಗ್ರಹಿಗಳಿಗೆ ಬೆಂಬಲ ಕೊಟ್ಟಿದೆ ಗುಜರಾಥದೊಳಗಿನ ಅಲ್ಲಲ್ಲಿಯ ಜಾತಿಕೂಟಗಳು ಸತ್ಯಾಗ್ರಹ ಸಮರಕ್ಕೆ ದ್ರವ್ಯಸಹಾಯ ಮಾಡುತ್ತಿವೆ. ಪರೋಪಕಾರಿಗಳೊಬ್ಬರು ಮುಂಬಯಿಯಿಂದ ೧೦೦೦ ರೂಪಾಯಿಗಳನ್ನು ಕಳುಹಿಸಿಕೊಟ್ಟರು ಇಷ್ಟಾಗಿ ದ್ರವ್ಯಸಹಾಯದ ಬಗ್ಗೆ ಇನ್ನೂ ಯಾರ ಬಳಿ ಬೇಡಿಕೆ ಆಗಿಲ್ಲ. ಸ್ವಯಂಸ್ಫೂರ್ತಿಯ ಕಾಣಿಕೆಗಳಿವೆ. ಕಾಯಿದೆ ಕೌನ್ಸಿಲಿನ ಸಭಾಸದರಾದ ದಾದಸಾಹೇಬ ಬಾದುಛಾಯಿ ದೇಸಾಯಿ ಪ್ರಭೃತಿ ನಾಲ್ಕು ಜನರು ಗುಜರಾಥ ಪ್ರಾಂತದ ಸಭಾಸದರು ಸರಕಾರಕ್ಕೆ ಈ ವಿಷಯ ತಮ್ಮ ಹೇಳಿಕೆಯನ್ನು ಬರಕೊಂಡಿದ್ದಾರೆ. ಅದು ಮಾನ್ಯವಾಗದಿದ್ದರೆ, ಅವರು ರಾಜೀನಾಮೆಯನ್ನಿತ್ತು ಇದೇ ವಿಷಯದ ಮೇಲೆ ಪುನಃ ಚುನಾವಣೆಗೆ ನಿಲ್ಲುವರು.

ಮಂಗಳೂರ ತಂಬಾಕಿನ ತಾಜಾ ನಶ್ಯ! ಸುಲಭ ಕ್ರಯ!
೪೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿ ಹೊಂದಿದ

ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ ಮೋಸಹೋಗಬೇಡಿರಿ ! !

ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ !

ನಂ ೧ ನೇ ನಶ್ಯದ ಪುಡಿ ೨೪ ತೊಲೆ ಶೇರುಗಿರ ರೂ. ೧।			
ನಂ ೨ ನೇ	...	...	೧-೨-೦
ನಂ ೩ ನೇ	...	..	... ೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ— ನಮ್ಮ ನಶ್ಯವು ಉತ್ಕೃಷ್ಟವೆಂಬವರ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟುಗಳು ದೊರಕಿವೆ

ವಿಳಾಸ:- ಪುಂಡ್ಲೀಕ ನಾಗ ಶೈ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು-

(೧) ಹುಬ್ಬಳ್ಳಿ- ಯಲ್ಲಾಪುರ — ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ— ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ತಕ್ಕ ವಿಶ್ರಾಂತಿ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಿಥಿಲ, ಹೋಗಿ ಜಾಗ್ರತವಾದೀ ಇಚ್ಛೆ ಸಶಕ್ತವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ನಿಂದುಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಕೆಮ್ಮುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂಚೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ೩ರ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೧-೨

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೋ.ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ವಿಜಾಪುರಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ಕಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ, ಸ್ವಪ್ನಾವಸೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ 'ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದಿ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಹಿಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಇದು) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ನಡು ರಾತ್ರಿಯು ಭೋಜನವಾದ ನಂತರ ೨ ತೊಲಿಯು ಒಂದು ವಾರಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೭೪ ತೊಲೆಯ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- – मृद्विकारिष्ट – शारंगधर म अ १०

रामबाण औषध

सर्दि घालविणारे

मूक घालविणारें

श्वासोच्छ्वास साफ करणारें

झोप आणणारे

शक्ति देणारें

तेजस्वीपणा आणणारें

पिण्यास रोचकर

कॅटलॉग मागवा

झंडु फार्मास्युटिकल वर्क्स लिमिटेड

मुंबई नं. १४

ऐजट— मेसर्स पंडित आणी कंपनी तीर्थहळ्ळी

निर्दिष्ट एजट एम एल धाकप्पा आणि सदर

किमत एक रत्तलास १।। रुपये.

ಕುಂದಾಪೂರದಲ್ಲಿಯ ಅತ್ಯಂತ ಅಗಣ್ಯವಾದ

ನೆಶನಲ್ ಇನ್ಶೂರನ್ಸ ಕಂಪನಿ (ಲಿಮಿ—ಎಂಟ)

ಜೀವ ವಿಮೆಯ ಮಂಡಲಿ

ವರ್ಷ ದಸಪ್ರ ಒಂದು ಕೋಟಿದ ಸ್ಕ ಅ— ದ ಕಳದ ವರುಷ ಲೆಕ್ಕಾಚಾರದ ಮೇಲೆ 5 4 1, 41 ರೂಪಾಯಿಗಳು ಉಳಿವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಹೂರ್ತ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿ ... ಬೋನಸ ಕೊಟ್ಟಿರುವದು

ಹೊಂಗಡೆ 1000 ರೂಪಾಯಿಗಳ ... ಎಷ್ಟು ಕಂತು ಕೂಡುವಿರೋ ... ನಷ್ಟದಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟು ... ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,**

ಬಿ. ಸಿ ಸಿದ್ದಾಪಕೊಪ್ಪ, *Branch Secretary*

ಲಿಟ ಬಂಡಿ ಬಿಲ್ಡಿಂಗ, Alice Building,

ಹುಬ್ಬಳ್ಳಿ *Hornby Road,*

BOMBAY

S U Narayanacharya & CO

Chaukamba BENARES CITY

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪಿತಾಂಬರ ... ಶಾಲ ಸೀರೆ, ಕಾಶ್ಮೀರ ಶಾಲ, ... ರುದ್ರಾಕ್ಷಿ ಕಸ್ತೂರಿ ಲಿಂಗಗಳೂ ... ಮೊದಲಾದವುಗಳು ಗಳು ಸಿಗುತ್ತವೆ ಕ್ಯಾಟಲಾಗು ಬೇಕಾಗುವವರಿಗೆ ಉಚಿತವಾಗಿ ಕಳಿಸಲಾಗುವದು

ವಿಳಾಸ ಶಿರೋಮಣಿ ನಾರಾಯಣಾಚಾರ್ಯ

ಮತ್ತು ಕಂಪನಿ ಚೌಕಬಾ ... ಕ್ಷೇತ್ರ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧಿ ನೃಶದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಿಗೆ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಂಟಾಗತಕ್ಕ ಸರ್ವ ವ್ಯಾಧಿಗಳ, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಹೇಳಲ್ಪಟ್ಟ ಈ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಮಾಡಿ ಎಳೆದರೆ ಎಲ್ಲವೂ ಪರಿಹಾರವಾಗುವದು. ಇದನ್ನು ಅನೇಕ ಜನಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ನಸಿ ಪುಕ್ಕಟೆ ಕಳಿಸಲಾಗುವದಿಲ್ಲ

ಒಡಿ ಒಂದಕ್ಕೆ ಕ್ರಯ ರೂ ೦ ೪ ೦ ವ್ಹಿ ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ ಪಿ. ೦-೮-೦

ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ —ಗುರುಬಸವ ಅಂಡ ಕಂಪನಿ ಲಿಮಿಟೆಡ್ ಪೋ• ಬಾ ೫೧೦, ಜಾರ್ಜಟೌನ, ಮದರಾಸ

ಇದು "ಕರಾಮತ" ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ **ಗಾಣವು** ಇದೇ!



ಕಿರ್ಲೋಸ್ಕರ ಕರಾಮತ ಗಾಣ.

ಈ ಗಾಣದಿಂದ ಶೇಕಡಾ ೭೫ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣದ ... ಬಾಳಿಕೆಯದು ವಿಶೇಷ ಯಂತ್ರಸಾಮುಗ್ರಿಯೂ ಇಲ್ಲಿ ಸಾಮಾನ್ಯ ರೈತರು ಇದನ್ನು ನಡಿಸಬಲ್ಲರು ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ಬೇರಿಂ ೨ ಗನ್‌ಮೆಟಲ್‌ದವು ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು

ಅಕ್ಷಲು ... ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಜರಿಯದು. ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ಯಾವ ಗಾಣದಲ್ಲಿಯೂ ದೊರಕವು

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ

೧೦-೧೨ ಕರಾಮತಗಾಣಗಳು ದುಡಿಯುತ್ತಿವೆ ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ

ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ

ಕಿರ್ಲೋಸ್ಕರ ಬಂಧು ಲಿಮಿಟೆಡ್; } ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, ... ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣವಾಗುತದೆ ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಪರಿಹಾರವು ... ಯಾರೂ ತಿರಸ್ಕರಿಸಲಾಗದು ... ದೊರೆಯುವದಿಲ್ಲ. ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ... ನೋವುಗಳನ್ನು ಕೂಡಲೇ ಪರಿಹರಿಸಬಹುದು ಬೆಲೆ ರೂ ೦—೧೦—೦

ಎಲ ಕಡೆಗೆ ಸಿಗುತ್ತದೆ ಅಥವಾ **ಅಮೃತಾಂಜನ ಡಿಪ್ಪೋ,**

ಮುಂಬಯಿ ಮತ್ತು ಮದ್ರಾಸ

Printed and Published by Krishnarao Keshav Shenvi (Editor) at his Star of Kanara Press, Kumta.

R. No. B. 1870

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೫

ಪತ್ರದ ವರ್ಗಣಿ

ಪೇಟೆಯಲ್ಲಿ ಅಗಾವು
ರೂಪಾಯಿ 2-4-0.
ಪೋಸ್ಟಾರ್ಡರಿಂದ
ರೂ. 3-0-0
ಹಿ ಅಂಚೆವೆಚ್ಚ ಸಹ
ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಸ್ಮಾಲ ಪೈಕಾ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ 1-0-
೮ ಸಂತ್ರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ತಿಳಿಸಲ್ಪಡುವದು.

सर्वोपरिहितकर्ता प्रेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೩ ಮಾಹೆ ಎಪ್ರಿಲ ಸನ್ ೧೯೩೮ನೇ ಇಸವಿ)

ಹೊಸ ಅಂಗಡಿ! ಹೊಸ ಹೊಸ ಮ್ಹಾಲು!!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ,
ಹೊಸ ಹೊಸ ಮಾದರಿಯ ಸಾಮಾನುಗಳು
ಸಿಗುತ್ತವೆ - ಕಬ್ಬಿಣ ಮೊಳೆಗಳು,
ಮೋಟಾರ ಉಪಯೋಗದ ಬೋಲ್ಟು
ಗಳು, ಪಿನ್ ವಾಶರ, ಡಿಸ್ಟಿಲ್ಡ ವಾಟರ
ಸಿಗುತ್ತವೆ, ಬಣ್ಣ ಸಿಗುತ್ತದೆ, ಕನ್ನಡಿಯ
ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂ
ನೆಯ ಸ್ಟೇಶನರಿ ಸಾಮಾನು ಸಿಗುವ
ದುಕಾನೂ ಇದೇ! ಶಾಬೂನುಗಳನ್ನು
ಇಲ್ಲಿಯೇ ಕೊಂಡುಕೊಳ್ಳಿ!! ಎಲ್ಲಾ
ಅಪ್-ಟು ಡೇಟ ಸಾಮಾನುಗಳೂ ಇಲ್ಲಿ
ಸಿಗುತ್ತವೆ! ಎಲ್ಲಿ ಸಾಮಾನು ಅಗ್ಗ! ಕಿರ
ಕೋಳ ವ್ಯಾಪಾರಸ್ಥರು ಥೋಕ ಮ್ಹಾಲನ್ನು
ಕೊಂಡರೆ, ಸವಲತ್ತು ಸಿಗುತ್ತೆ
ನಮ್ಮ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನ್ನಡ)

ಏಜಂಟರು ಬೇಕು! ಏಜಂಟರು ಬೇಕು!!



ನಮ್ಮಲ್ಲಿ
ಅತಿ ಮನೋಹರವಾದ
ಶೀಶಿ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ
ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ಕೊಂಗ
ಖುರ್ಚೆಗಳೂ ಹಾಗೂ ಯಾವತ್ತೂ ತರದ ಮನೇ
ಸಾಮಾನು ಸಿಗುತ್ತದೆ
ನಮ್ಮ ವಿಳಾಸ.—
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यात मखमल, बनात, फर, वेलीच्या, जरीच्या वगैरे हरएक तऱ्हेच्या मादा अगर फॅशनेबल टोप्या तयार केल्याजातात

माल चोख— फॅशनेबल— स्वस्त— व भरपूर

या शिवाय

आमच्या स्वत हातमागावरील नानातऱ्हेच्या डिझायनचीं रंगी-बेरंगी चादरें, फॅशनेबल बाथ टॉवेल, चौक, लहान--मोठे पंचे, सीटपाट, चौलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीपः—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.

पोस्ट— सुंकेरि (कारवार.

ಆತ್ಮಾನಂ ಸತತಂ ರಕ್ಷೇತ್!

ಎರ್-ಪಿಸ್ತೂಲು ಯಾನೆ

ಗಾಳಿ ತುಬಾಕಿ!

ಕಳ್ಳರು, ದರೋಡೆಖೋರರು, ಕಾಡು ಮೃಗಗಳು ಇವುಗಳಿಂದ ಆತ್ಮಸಂರಕ್ಷಣ ಮಾಡಿಕೊಳ್ಳಲನುಕೂಲ ಪ್ರ್ಯಸನ್ನು ನೋಡಿ!!
ಬೆಲೆ ರೂ. ೪-೮-೦ (೪೦ ಗುಂಡುಗಳ ಸಹಿತ)
ಪ್ಯಾ. ಹಿ ಯ ಖರ್ಚು ೮-೬-೦
೧ ರೂಪಾಯಿಗೆ ೫೦ ಗುಂಡುಗಳು ಸಿಗುತ್ತವೆ
ಸೂಚನೆ.—ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.
ಪತ್ತೆ:-The Novelty Stores (103)

FOR

HAND AND POWER

-- LOOMS --

SHUTTLES,

Roughest and even Finest COUNTS Steel & Brass REEDS

COTTON HEALDS

WIRE HEALDS

BOBBINS

OIL PAINTS,

AND

EMERY PAPERS

Can be had at exceptionally reduced rates

From.-

P. P. TRIVEDI & CO.,

BRUCE Street, Fort, BOMBAY

ಫ್ರಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂಬಾಗದ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ ಮೂವ್ಮೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ! ರಿಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧವಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು, ಬಹುಮಾನಗಳ ವಿವರ - ಫೌಂಟನ ಪೇನಾ ೧, ತೇಲಾಲೊಲ್ ಬಾಟ್ಲಿ ೧, ಪಚ್ಚದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಳಿ ೧, ಸವಾಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ ಗೋಲ್ಡ ಬಂಗಾರದ ಉಂಗುರ ೧, ರೋಲ್ಡ ಗೋಲ್ಡ ನೆಕ್ಲೇಸ್ ಎಂಬ ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ಪಟ್ಟಿ ೧, ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರ್ಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ, ಬರೇ ರೂ ೪-೮-೦

ವಿಳಾಸ — ಇಂಗ್ಲೀಷ ಎಂಪ್ರೋರಿಯಂ,

ಪೋಸ್ಟ ಬಾಕ್ಸ ನಂ. ೧೦೫, ಮದರಾಸು.

ಉಚಿತ] ನನ್ನ ಶಾಸ್ತ್ರೀಯ ಪಾದ [ಉಚಿತ

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳು ... ಅಂತಹ ... ಹೇಗೆ ಒಂದಿತೆಂಬು ... ನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿರುವವರ ... ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸುಲಭವಾದ ಮಾರ್ಗವನ್ನು ತಿಳಿದುಕೊಳ್ಳುವರು ... ಈ ಪುಸ್ತಕವನ್ನು ... ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ ಇನ್ನೂ ಈ ಯೋಜನೆಯಲ್ಲಿ ನಿಂತಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನ ... ನಿಬ್ಬು ಹಾಕಿದೆ ಇದರಿಂದ ಬರೆಯುವದರಿಂದ ಅಕ್ಷರಗಳು ... ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೩-೮-೦.

ವಿಳಾಸ ಲೀವರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ ... ಸಾಮಾನುಗಳನ್ನು ಅಗ್ಗವಾಗಿ ತೋಕ ಖರೀದಿ ಮಾಡಿ ಕಳಿಸುತ್ತೇವೆ ದಲಾಲಿ ಹೆಚ್ಚಿಗೆ ತೊರ್ಪಡಿಸುವದಿಲ್ಲ, ಖರೀದಿ ಚೌಕಶಿಯಿಂದಾಗುವ ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುವದು ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಪ್ರಾಮಾಣಿಕತನದಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಾಗದ ಬರೆದು ತಿಳಿಸಿಕೊಳ್ಳಿ ... ಸಿಗುವದು.

ಪುಕ್ಕಟೆ ! ಪುಕ್ಕಟೆ !! ದುಡ್ಡು ಇಲ್ಲ !!!

ಈ ಅಪೂರ್ವ ಸಂಧಿಯು ಬಹುಕಾಲ ಬರದು !

ಚಿನ್ನದ ಮುಂಗೈ ಗಡಿಯಾರಗಳು!

ಜೊತೆಗೆ ಅಮೂಲ್ಯ ಇನಾಮುಗಳು!

ಬದಿಗೆ ತೋರಿಸಿದ ನಕ್ಷೆಯೊಳಗಿನ ಗಡಿಯಾರಗಳು ಮುಂಗೈ ಗಡಿಯಾರಗಳು ... ಬೆಲೆ ರೂ. ೫-೧೫-೦. ೬ ವರುಷದ ಗ್ಯಾರೆಂಟಿ

ವ್ಹಿ. ಪಿ ... ೧-೬-೦ ಪ್ರತ್ಯೇಕ

೨ ಗಡಿಯಾರಗಳಿಗೆ ರೂ ೧೫ ೮-೦, ೬ ಗಡಿಯಾರಗಳಿಗೆ ರೂ. ೩೮-೦-೦, ಅಂಚೆ ವೆಚ್ಚ ಇಲ್ಲ!

ಇದಲ್ಲದೆ ಗಿರಾಕಿಗಳಿಗೆ ಒಂದೊಂದು ಇನಾಮು ಕೊಡಲಾಗುವದು "ಗಡಿಯಾರಗಳನ್ನು ತರಿಸುವಾಗ ೧ ರಿಂದ ೧೦೦ ರ ಒಳಗೆ ... ಒಂದು ಅಂಕಿಯನ್ನು ಅವರು ಬರೆದು ತಿಳಿಸಬೇಕು ಆ ಅಂಕಿಯ ... ಇನಾಮು ಗಡಿಯಾರದ ಜೊತೆಗೆ ಕಳಿಸಲ್ಪಡುವದು ಪ್ರತಿಯೊಂದು ಸಂಖ್ಯೆಗೆ ಒಂದೊಂದು ಇನಾಮಿನ ನಿರ್ದೇಶವಾಗಿದೆ.

ಟೀಪು — ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು

ಪತ್ತೆ:- THE DILAWAR WATCH COY, (33)

Bhuleshwar, BOMBAI

ವಿವಿಧ ಸಂಗ್ರಹ.

ಸಹಕಾರಿ ಜಾಮೀನದಾರರ ಅವಸ್ಥೆ

ಮಂಗಳೂರಿನ "ಸ್ವದೇಶಾಭಿಮಾನಿ" ಪತ್ರಿಕೆಯಲ್ಲಿ ಒಂದು ಗ್ರಾಮದೊಳಗಿನ ಸಹಕಾರಿ ಜಾಮೀನದಾರರ ಅವಸ್ಥೆಯು ವರ್ಣಿಸಲ್ಪಟ್ಟದೆ. ಒಬ್ಬ ಪೃಣ್ಯಾತ್ಮನು ನಿಯಮದಂತೆ ಎರಡು ಜಾಮೀನದಾರರನ್ನು ಕೊಟ್ಟು ಸಾಲ ಕೊಂಡು ಕಾಣ! ದುಡ್ಡು ವಸೂಲಾಗಲಿಲ್ಲ; ಆದರಿಂದ ರೀತಿಯಂತೆ ಫೈಸಲೆಯಾಯಿತು ಎರೇ ಲಂ ರೂಪಾಯಿಯ ಫೈಸಲೆ! ಜಾಮೀನದಾರರ ಮೇಲೆ ದಸ್ತಗಿರಿ ಹೊರಡಿಸಲ್ಪಟ್ಟಿತು. ಜಾಮೀನದಾರರಿಗೆ ಹುಡುಕಲು ಪೇದೆ ಹೋದನು. ಎಲ್ಲಿ ಹುಡುಕಿದರೂ ಜಾಮೀನದಾರರ ಪತ್ತೆಯಾಗದು. ಕೊನೆಗೊಂದು ಹಣ ಹೊತ್ತುಕೊಂಡು ನಾಲ್ವರು ಕಷ್ಟದಿಂದ ಸ್ಮಶಾನಕ್ಕೆ ಹೋಗುತ್ತಿದ್ದರು, ಕಾರಣವೇನೆಂದರೆ, ಈ ಹಣ ಹೊರಲು ಜನರು ಸಿಗಲಿಲ್ಲ ಪೇದೆಯು ಚೌಕಶಿ ಮಾಡಿದನು. ಸತ್ತವನೊಬ್ಬನು ಜಾಮೀನದಾರನೆಂದೂ, ಹೆಗಲು ಕೊಟ್ಟವರಲ್ಲೊಬ್ಬನು ಇನ್ನೊಬ್ಬ ಜಾಮೀನದಾರನೆಂದೂ ತಿಳಿಯಿತು ಹೆಗಲು ಕೊಟ್ಟ ಜಾಮೀನದಾರನಿಗೆ ಪೇದೆಯನ್ನು ನೋಡಿದ ಕೂಡಲೆ ದಸ್ತಗಿರಿ ವಾರಂಟಿನ ನೆನಪಾಗಿ, ಆತನು ಥಟ್ಟನೆ ಹೆಗಲು ತಪ್ಪಿಸಿಕೊಂಡು, ಹತ್ತಿರವೇ ಹರಿಯುತ್ತಿದ್ದ ಹೊಳೆಯಲ್ಲಿ ಹಾರಿ ಈಜಿ ಪಾರಾದನು! ಪೇದೆಯು ದಿಗಿಲುಬಿದ್ದನು!! ಹೆಣಕ್ಕೆ ಹೆಗಲು ಕೊಡಬೇಕೋ, ತಪ್ಪಿಸಿಕೊಂಡು ಹೋದ ಜಾಮೀನದಾರನಿಗೆ ಹಿಡಿಯಬೇಕೋ ಎಂಬುದೊಂದು ಸಮಸ್ಯೆಯಲ್ಲಿ ಸಿಲುಕಿ, ಆತನು ಬಿಂದ ಜಾಡಿಯಿಂದ ಹಿಂತಿರುಗಿದನು. ಪೇಸಂಕವಿದ್ದ ಮುಖವರು ಈ ಪಿಕಲ್ಪಾಟದಲ್ಲಿ ಸ್ವಯಂ ಪ್ರೇರಿತರಾದರು. ಹಾಗೂ ಹೀಗೂ ಮಾಡಿ ಶವಕ್ಕೆ ಸಂಸ್ಕಾರ ಕೊಟ್ಟು, ಸತ್ತುಬಿದ್ದ ಜಾಮೀನದಾರನ ಉತ್ತರ ವ್ಯವಸ್ಥೆ ಮಾಡಿದರು. "ಗತಿಯಿಲ್ಲದವಗೆ ಹೊಣೆಯಾಗದವ ತಾ ಜಾಣ" ಎಂಬ ನಿಜಲಿಂಗ ಶತಕದ ಮರ್ಮವನ್ನು ಜಾಮೀನದಾರರು ಅರಿತುಕೊಂಡಿದ್ದರೆ, ಈ ಅನರ್ಥ ಒದಗುತ್ತಿದ್ದಿಲ್ಲ. "ಪದರಪೆ ದ್ಯಾವೇಂ, ಪಣ ಜಾಮೀನ ನ ವ್ಹಾವೇಂ" ಎಂಬ ಉಕ್ತಿಯನ್ನು ನೆನಿಸಿ, ಜಾಮೀನದಾರರು ಇನ್ನಾದರೂ ಬೋಧಗಲಿತರೆ, ಮುಂದೆ ಕ್ಷೇಮವಿದೆ.

***

ಬಂಗಾಲಿ ದೇಶಾಭಿಮಾನಿಗಳ ಮೇಲೆ ಕಾಯಿದೆಯ ಅತ್ಯಾಚಾರ

ಬಂಗಾಲದಲ್ಲಿ ವಿಚಾರವಿಲ್ಲದೆ ೩೪ ಮಂದಿಗಳು ಇನ್ನೂ ಬಂಧನದಲ್ಲಿದ್ದಾರೆ. ಅವರಿಗೆ ಚಳೋ ರೀತಿಯಿಂದ ನಡೆಸಲ್ಪಡುತ್ತದೆಂಗಿ ಸರಕಾರದಿಂದ ಕಾಲಕಾಲಕ್ಕೆ ಆಶ್ವಾಸನ ಕೊಡಲಾಗುತ್ತದೆ. ಶ್ರೀ| ಪೂರ್ಣಚಂದ್ರ ಸೇನರವರು ಸದ್ಯಕ್ಕೆ ಅತಿಸಾರ ಬೇನೆಯಿಂದ ನರಳುತ್ತಿದ್ದಾರೆ ಅವರು ಓದುವ ಪತ್ರಗಳು ಈ 1 ಪ್ರಕಟ ಹೊಂದಿವೆ. ಶ್ರೀ| ಅನುಕೂಲವರವರು ಅಸ್ವಸ್ಥ ಬಿದ್ದಿದ್ದರು. ಸಾಕಷ್ಟು ಚೈತನ್ಯವಿರಲಿಲ್ಲ; ಆದರೂ, ಅಡಿಗೆ ಪಾತ್ರೆಗಳನ್ನು ಅವರೇ ತಿಕ್ಕಿಕೊಳ್ಳಬೇಕಾಗಿತ್ತು. ಪೇಟೆಗೆ ಹೋಗಿ ಸಾಮಾನು ತಂದು ಸ್ವತಃ ಅಡಿಗೆ ಮಾಡಿಕೊಳ್ಳಬೇಕಾಗಿತ್ತು. ಮಳೆಗಾಲದಲ್ಲಿ ಅವರ ಅವಸ್ಥೆಯು ತೀರ ಕಂಗೆಟ್ಟಿತು. ಶ್ರೀ| ಸೇನರಿಗೆ ಒಂದು ಗುಡಿಸಲಿನಲ್ಲಿ ಪ್ರತಿಬಂಧಿಸಿದ್ದರು. ಮೇಲ್ಛಾವಣಿ ಸೋರುತ್ತಿತ್ತು; ಮಳೆ ನೀರೆಲ್ಲ ಒಳಗೇ ಹೊರತು, ಹೊರಬೀಳುತ್ತಿದ್ದಿಲ್ಲ. ಆದರಿಂದ ರಾತ್ರಿ ಸಮಯ ಒಮ್ಮೊಮ್ಮೆ ಯಾವದಾದರೊಂದೊಂದು ಬದಿಗೆ ನಿಟ್ಟಗೆ ಕೂತುಕೊಂಡು ಕಾಲಹರಣ ಮಾಡಬೇಕಾಗಿತ್ತು. ಜೀವ ಹೋದರೆ ಕ್ಷೇಮವಾಗುತ್ತಿತ್ತಲ್ಲಾ! ಎಂದು ಅವರು ಪ್ರಾರ್ಥಿಸಿಕೊಳ್ಳುತ್ತಿದ್ದರು. ಒಂದು ರಾತ್ರಿಯಂತು ಅವರ ಹಾಸಿಗೆಯ ಮೇಲೆ ಸರ್ಪ ಬಂದು ಮಲಗಿಕೊಂಡಿತ್ತು. ಇದೆಲ್ಲ ವೃತ್ತಾಂತವು ಅಧಿಕಾರಿಗಳಿಗೆ ಕಾಲಕಾಲಕ್ಕೆ ತಿಳಿಸಲಾದರೂ, ಅದಕ್ಕವರ್‍ಯಾರೂ ಕಿವಿಗೊಡಲಿಲ್ಲ. ದಯಾಘನ ಪರಮಾತ್ಮನೇ ಈ ಕಷ್ಟವನ್ನು ಪರಿಹರಿಸಬೇಕಲ್ಲದೆ ಇನ್ಯಾರಿದ್ದಾರೆ? ಬ್ರಿಟಿಶ ರಾಜ್ಯದಲ್ಲಿ ನಿರಪರಾಧಿಗಳ ಮೇಲೆ ನಡೆಯುವ ಇಂಥ ಅಮಾನುಷ ಅತ್ಯಾಚಾರಗಳನ್ನು ನೋಡಿದರೆ, ನೋಗಲಾಯಿಯು ಇದಕ್ಕಿಂತ ಎಷ್ಟೋ ಅಂಶದಿಂದ ಕ್ಷೇಮಕರವಿದ್ದಿತೆಂದು ವಿಚಾರಿಗಳು ಹೇಳುತ್ತಿದ್ದಾರೆ.

***

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅವುಗಳ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವುದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹಿಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

——.0:——

½ ಔನ್ಸಿಗೆ	ರೂ.	೨—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦ ೬—೦

ಒಟ್ಟೋ-ದಿಲ್ ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಬಹಳ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY.**

ಯುರೋಪಿಯನ್ ಮೆಜಿಸ್ಟ್ರೇಟರ ಹಾವಳಿ!

ಪಂಜಾಬದ ಲಾಹೋರ ಪಟ್ಟಣದಲ್ಲಿ ಮಿ| ಫ್ಯಾಲಬಸ್ ಎಂಬೊಬ್ಬ ಯುರೋಪಿಯನ್ ಮೆಜಿಸ್ಟ್ರೇಟರಿದ್ದಾರೆ. ಈ ಮಹಾರಾಯರು ಆರೋಪಿಗಳಿಗೆ ಸ್ವಚ್ಛಂದದಿಂದ ಶಿಕ್ಷೆ ವಿಧಿಸುತ್ತಾರೆ. ಒಂದು ಖಟ್ಲೆಯಲ್ಲಿ ಇವರು ರಾಕ್ಷಸಿ ಶಿಕ್ಷೆಯನ್ನು ವಿಧಿಸಿದರೆಂದು ಸೆಶನ್ಸ ಜಡ್ಜರು ಶರಾ ಹೊಡೆದರು. ಸದ್ಯಕ್ಕೆ ಲಾಹೋರ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಮಿ. ಶೇಕ ಉಮರರವರು ಮೋಘಲಪುರಾದೊಳಗೆ ನಡೆದ ಒಂದು ಖಟ್ಲೆಯೊಳಗಿನ ರಿವಿಜನ ಮೇಲೆ ಆದ ಅಪೀಲಿನಲ್ಲಿ ಫ್ಯಾಲಬಸ್ ಮೆಜಿಸ್ಟ್ರೇಟರ ಕೊಟ್ಟ ತೀರ್ಪನ್ನು ಅಲ್ಲಗಳೆದು, ಅವರ ತೀರ್ಪಿಯನ್ನು ನಿರಪರಾಧಿಗಳೆಂದು ನ್ಯಾಯಮೂರ್ತಿಗಳು ಬಿಟ್ಟುಕೊಟ್ಟರು. ಫ್ಯಾಲಬಸ್‌ರವರ ನ್ಯಾಯ ಪದ್ಧತಿಯನ್ನು ವರ್ಣಿಸುವಾಗ - "ಫರ್ಯಾದೆ ಸಂಗ್ರಹದ ಮೂಲಭೂತ ನಿಯಮಗಳು ಉಲ್ಲಂಘಿಸಲ್ಪಟ್ಟಿವೆ, ಮೆಜಿಸ್ಟ್ರೇಟರಿಗೆ ತರ್ಕಬದ್ಧ ರೀತಿಯ ವಿಚಾರವಾಗಿ ತೋರುವದಿಲ್ಲ. ಪ್ರತಿವಾದಿಗೆ ಗ್ರಾಹ್ಯವಾಗದಂಥ ಹಾಗು ಅಸಂಬದ್ಧ ಪುರಾವೆಯು ಸಹ ಪ್ರಮಾಣವೆಂದು ಹಿಡಿಯಲಾಗಿದೆ. ಫಿರ್ಯಾದಿಯಲ್ಲಿ ಸಿದ್ಧವಾದ ದಾಖಲೆಗಳ ಜೊತೆಗೆ ಸಿದ್ಧವಾಗದ ದಾಖಲೆಗಳೂ ಸೇರಿಸಲ್ಪಟ್ಟಿವೆ. ಸಿದ್ಧ ಸಂಗತಿಗಳ್ಯಾವವು, ಅನುಮಾನಗಳ್ಯಾವವು ಎಂಬುದು ತೀರ್ಪಿನಲ್ಲಿ ಗೋಚರವಾಗುವದಿಲ್ಲ. ಇದರಿಂದ ಮೆಜಿಸ್ಟ್ರೇಟರು ತಮ್ಮ ಕೋರ್ಟಿನ ಸಮಯವನ್ನಂತೂ ಅಪವ್ಯಯ ಮಾಡಿದರು. ಹೈಕೋರ್ಟಿನ ಸಮಯವನ್ನೂ ಅಪವ್ಯಯ ಮಾಡಿದರು. ಸರಕಾರಿ ವಕೀಲರು ಪರಿಶ್ರಮ ಮಾಡಿದಾಗ್ಯೂ, ವಿಶೇಷ ಚಾತುರ್ಯವನ್ನು ಉಪಯೋಗಿಸಿದಾಗ್ಯೂ, ಫ್ಯಾಲಬಸ್‌ರವರ ತೀರ್ಪನ್ನು ಅವರಿಂದ ಸಮರ್ಥಿಸಲಾಗಲಿಲ್ಲ" ಇತ್ಯಾದಿ ಬರೆದಿದ್ದಾರೆ. ಈ ಮೆಜಿಸ್ಟ್ರೇಟರ ಇಂಥ ಕುಚೇಷ್ಟೆಗಳು ಈ ಹಿಂದೆ ಬಹಳೇ ಪ್ರಕಟವಾಗಿದ್ದಾವೆ. ಆದರೂ, ಅವರಿಗೆ ಆ ಹುದ್ದೆ ತಪ್ಪಿಸಲಾಗುವದಿಲ್ಲ. ಅವರು ಡೆಪ್ಯುಟಿ ಕಮಿಶನರರ ಪಟ್ಟ ಹೊಂದಿರುತ್ತಾರೆ, ಮೇಲಾಗಿ ಯುರೋಪಿಯನ್‌ರು. ಅವರಿಗೆ ಶಾಸನ ಮಾಡಲು ಅಥವಾ ಸ್ಥಳಾಂತರ ಮಾಡಲು ಮನಸ್ಸೆಲ್ಲಿ ಬರುತ್ತದೆ? ಪರಮಾತ್ಮನು ಕೊಟ್ಟ ಪ್ರಸಾದವೆಂದು ಫ್ಯಾಲಬಸ್‌ರವರು ಕೊಡುವ ನ್ಯಾಯವನ್ನು ಭಾರತೀಯರು ಸಹಿಸಬೇಕಾಗಿದೆ. ಯಾಕಂದರೆ, ಭರತಖಂಡದ ಆಡಳಿತೆಯನ್ನು ಪರಮಾತ್ಮನೇ ಬ್ರಿಟಿಶರಿಗೆ ಒಪ್ಪಿಸಿಕೊಟ್ಟಿರತಕ್ಕದ್ದೆಂದು ಬ್ರಿಟಿಶರು ಸಾರುತ್ತಾರಲ್ಲವೇ?

***

ಚಿಕ್ಕ ಹುಡುಗಿಯ ಅದ್ಭುತ ಸಾಹಸ

ಮೈಸೂರಿನ ದೊಡ್ಡಬಳ್ಳಾಪುರ ಗ್ರಾಮದಲ್ಲಿ ಒಂದೆಡೆ ಪಂಚಮ ಜಾತಿಯ ಒಂದು ಗುಡಿಸಲಿದೆ. ಆ ಗುಡಿಸಲಿಗೆ ಬೆಂಕಿ ಹತ್ತಿತು. ಆ ಕಾಲಕ್ಕೆ ಆ ಮನೆಯಲ್ಲಿ ಪ್ರಾಯಸ್ಥರ್ಯಾರೂ ಇರಲಿಲ್ಲ. ಹನುಮಿ ಎಂಬ ಚಿಕ್ಕ ೬ ವರ್ಷದ ಹುಡುಗಿಯೂ, ೩ ವರ್ಷದ ಅವಳ ತಮ್ಮನೂ, ೬ ತಿಂಗಳ ಒಂದು ಕೂಸೂ ಆ ಗುಡಿಸಲಿನಲ್ಲಿದ್ದರು. ಬೆಂಕಿ ಹತ್ತಿದ ಕಾಲಕ್ಕೆ ಹನುಮಿಯು ಬಳಿಯಲ್ಲಿಯೇ ಆಡುತ್ತಿದ್ದಳು. ಬೆಂಕಿ ನೋಡಿದ ಕೂಡಲೆ, ಹನುಮಿಯು ತತ್ಪರತೆಯಿಂದ ಒಳಕ್ಕೆ ಸೇರಿ, ೩ ವರ್ಷದ ಹುಡುಗನನ್ನು ಹೊರತಂದು ದೂರ ಇಟ್ಟಳು. ಪುನಃ ಗುಡಿಸಲನ್ನು ಸೇರಿ ೬ ತಿಂಗಳ ಕೂಸನ್ನು ಅಂಬೆಗಾಲಿನಿಂದ ಹೋಗಿ ತಂದಳು. ಕೂಸಿಗೆ ತರುವಾಗ ಹನುಮಿಗೆ ಬೆಂಕಿಯ ಸ್ಪರ್ಶವಾಯಿತು. ತತ್ಕಾಲ ಸನ್ನಿವೇಶದಿಂದ ದೂರ ಇಟ್ಟು ಅವಳಲ್ಲೇ ಬಿದ್ದುಬಿಟ್ಟಳು. ತಾಯಿ-ತಂದೆಗಳಿಗೂ ಇತರರಿಗೂ ಈ ಸಮಾಚಾರ ಗೊತ್ತಾಗಿ ಅವರು ಅಲ್ಲಿ ಬಂದು ಹನುಮಿಗೆ ಆಸ್ಪತ್ರೆಗೆ ಒಯ್ದರು. ಡೆಪ್ಯುಟಿ ಕಮೀಶನರರು ತಂದೆ ತಾಯಿಗಳಿಗಿಂತ ಮುಂಚೆಯೇ ಆ ಸ್ಥಳಕ್ಕೆ ಹೋಗಿದ್ದರು. ಅವರು ಹನುಮಿಯ ಸಾಹಸವನ್ನೂ ಬಂಧುಪ್ರೀತಿಯನ್ನೂ ನೋಡಿ ಬೆರಗಾಗಿ ಅವಳಿಗೆ ೨೫ ಎಕರೆ ಭೂಮಿಯನ್ನು ಉಚಿತವಾಗಿ ಕೊಟ್ಟಿದ್ದಾರೆ. ಇದಲ್ಲದೆ, ಅವಳಿಗೆ ಯೋಗ್ಯ ಇನಾಮು ಕೊಡಬೇಕಾಗಿ ಮೈಸೂರ ಸರಕಾರಕ್ಕೆ ಬರಕೊಂಡಿದ್ದಾರೆ. ಹನುಮಿಯು ಈಗ ಜೀವದಿಂದಿದ್ದಾಳೆ.

***

ಚೇಳು ಕಡಿತಕ್ಕೆ ದಿವ್ಯ ಔಷಧ

ರಾ| ಲಿಮಯೆ ಎಂಬವರು ಹಿಂಗಣಿಯಲ್ಲಿದ್ದಾರೆ. ಅವರು ಚೇಳಿನ ಕಡಿತದ ಮೇಲೆ ದಿವ್ಯ ಔಷಧವನ್ನು ಮುಂಬಯಿ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಇದರ ಸ್ವಾನುಭವದ ಉಪರಾಂತ ರಾ| ಲಿಮಯೆಯವರಿಗೆ ಮೊಣಕಾಲಿಗೆ ಚೇಳು ಕಚ್ಚಿತ್ತು. ಕೂಡಲೆ ಬೆಚ್ಚಗೆ ನೀರ ಕಾಸಿ ಅದರೊಳಗೆ ಚೇಳು ಕಡಿದ ಭಾಗವನ್ನು ಕೆಲವು ಕಾಲ ಮುಳುಗಿಸಿಟ್ಟರು. ಕೂಡಲೆ ಚೇಳಿನ ಕಡಿತದ ವೇದನೆ ಪರಿಪೂರ್ಣವಾಗಿ ಕ್ಷೇಮವಾಯಿತು. ಇತರ ಜನರಿಗೂ ಈ ಉಪಾಯ ಮಾಡಿ ಅವರ ಚೇಳಿನ ವೇದನೆಯನ್ನು ಪರಿಹರಿಸಿದ್ದಾರೆ. ವಾಚಕರು ಈ ಉಪಾಯವನ್ನು ಕೈಕೊಳ್ಳಬಹುದು.

***

ಶಿಕ್ಷಣದ ಪ್ರಗತಿಯೇನಿದು?

ಕಳೆದ ಮಾರ್ಚದಲ್ಲಿ ಈ ತಿಂಗಳಲ್ಲಿ ಸೇರಿದ ಶಿಕ್ಷಣ ಇಲಾಖೆಯೊಳಗಿನ ನೌಕರರ ಪರಿಷತ್ತಿನ ಅಧ್ಯಕ್ಷರಾದ ರಾ| ಕೇ. ಎಸ್. ಮುನಶಿಯವರು ಮುಂಬಯಿ ಸರಕಾರವು ನಡಿಸಿದ ಶಿಕ್ಷಣದ ಸಮಾಲೋಚನೆ ಮಾಡಿದ್ದಾರೆ. ೧೯೨೧-೨೨ ನೇ ಇಸ್ವಿಯಲ್ಲಿ ಮುಂಬಯಿ ಇಲಾಖೆಯಲ್ಲಿ [illegible] ಪ್ರಾಥಮಿಕ ಶಾಲೆಗಳಿದ್ದವು. ೧೯೨೫-೨೬ನೆ ಇಸ್ವಿಯಲ್ಲಿ [illegible] ಶಾಲೆಗಳಾದವು. ವಿದ್ಯಾರ್ಥಿಗಳ ಸಂಖ್ಯೆಯು [illegible] ರಿಂದ [illegible] ಕ್ಕೆ ಏರಿತು ಅಂದರೆ, ೧೯೨೦-೨೧ನೆ ಇಸ್ವಿಯಲ್ಲಿ ೩ನ್ನಿ ಹಳ್ಳಿಗಳಿಗೆ ೧ ಶಾಲೆ ಬಿತ್ತು. ೫ ವರ್ಷಗಳ ೨೬ನೇ ಸಾಲಿನಲ್ಲಿ ಪ್ರಗತಿಯಾಗಿ ೩ನ್ನಿ ಹಳ್ಳಿಗಳಿಗೆ ಒಂದು ಶಾಲೆ ಬಿದ್ದಿದೆ. ಪ್ರತಿ ಗ್ರಾಮದಲ್ಲಿ ಶಾಲೆಯಾಗಬೇಕಾದರೆ, ೫೫ ವರುಷಗಳು ತಗಲುವವು. ೧೯೨೩ನೇ ಇಸ್ವಿಯಲ್ಲಿ ಸರಕಾರವು ಸಕ್ತಿಯ ಪ್ರಾಥಮಿಕ ಶಿಕ್ಷಣ ಕಾನೂನನ್ನು ಮಂಜೂರ ಮಾಡಿದೆ. ಅಂದಿನಿಂದ ಬರೇ ೪ ಲಕ್ಷ ರೂಪಾಯಿಗಳು ಮಾತ್ರ ಪ್ರಾಥಮಿಕ ಶಿಕ್ಷಣದ ವಿಸ್ತಾರಕ್ಕೆ ಖರ್ಚು ಮಾಡಲ್ಪಡುತ್ತವೆ. ಉಳಿದ ಹಣವೆಲ್ಲ ಶಿಕ್ಷಕರ ಬಡತಿ ಮುಂತಾದ ಪರಿವಾರಕ್ಕೇ ಖರ್ಚು. ಸಕ್ತಿಯ ಕಾನೂನ ಮಂಜೂರ ಮಾಡುವಾಗ ಸಾಲಿಯಾನ ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೧೦ ವರ್ಷಗಳೊಳಗೆ ಸಕ್ತಿಯ ಕಾನೂನನ್ನು ಇಡೀ ಇಲಾಖೆಯಲ್ಲಿ ಪಸರಿಸಬೇಕೆಂದು ಸಂಕಲ್ಪವಾಗಿತ್ತು. ಈಗ ೫ ವರ್ಷಗಳಿಂದ ೪ ಲಕ್ಷ ರೂಪಾಯಿಗಳೇ ಮಂಜೂರಾಗುತ್ತವೆ. ಹೀಗೆ ಪ್ರಗತಿಯಾಗುತ್ತ ಹೋದರೆ ಈ ಕಾನೂನು ಇಡೀ ಇಲಾಖೆ ತುಂಬ ಹಬ್ಬಬೇಕಾದರೆ, [illegible] ವರುಷಗಳು ತಗಲುವವು. ಇಷ್ಟಾಗಿ, ಈಗ ಇರುವ ಪ್ರಾಥಮಿಕ ವಿದ್ಯಾರ್ಥಿಗಳಲ್ಲಿ ಹೆಚ್ಚೆಂದರೆ, ಶೇಕಡಾ ೧೦ರಷ್ಟು ವಿದ್ಯಾರ್ಥಿಗಳು ೪ನೇ ಇಯತ್ತೆಯನ್ನು ಕಂಡರೆ, ದೊಡ್ಡದಾಯಿತು. ಉಳಿದವರೆಲ್ಲ ೧ನೇ ೨ನೇ ಇಯತ್ತೆಯೊಳಗೇ ಕಾಣೆಯಾಗುವರು. ಸರಕಾರವು ಪ್ರಾಥಮಿಕ ಶಿಕ್ಷಣದ ಜವಾಬದಾರಿಯನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮೇಲೆ ಹಾಕಿದೆ. ಇದು ಸುಧಾರಿಸಿದ ಸರಕಾರಕ್ಕೆ ಶೋಭಿಸುವದಿಲ್ಲ. ಸಕ್ತಿಯ ಪ್ರಾಥಮಿಕ ಶಿಕ್ಷಣ ಕಾನೂನಿನ ಮೂಲ ತತ್ವಗಳೇ ದೋಷಾಸ್ಪದವಿವೆ. ಈ ಕಾನೂನಿನಂತೆ ಪ್ರಾಥಮಿಕ ಶಿಕ್ಷಣದ ಸರ್ವ ಚಾಲಕತ್ವವನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ವಹಿಸಿ, ಸರಕಾರವು ದೊಡ್ಡ ಆಶ್ರಯದಾತೃವಾಗಿದೆ. ಹೀಗೆ ಮಾಡುವದು ತಪ್ಪು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಬಳಿ ಈ ಜವಾಬದಾರಿಯನ್ನು ಕಡೆಗಾಣಿಸಲು ದ್ರವ್ಯ ಸಂಗ್ರಹ ಕೊಡಲ್ಪಟ್ಟಿಲ್ಲ. ದಿವಾಣರು ಬರೇ ದ್ರವ್ಯಸಹಾಯವನ್ನೀಯುವ ಸಭ್ಯಗೃಹಸ್ಥರಾಗಿ ಪರಿಣಮಿಸಿದ್ದಾರೆ. ಸರಕಾರವು ಕೊಟ್ಟಷ್ಟು ಹಣವನ್ನು ನಿರಭಿಮಾನದಿಂದ ಅವರು ಹಂಚುವವರಾದ್ದರಿಂದ ಶಿಕ್ಷಣ ವಿಸ್ತಾರದ ಚಿಂತೆಯು ಅವರಿಗೆ ಸ್ಪರ್ಶಿಸುವದಿಲ್ಲ. ಈ ಪ್ರಕಾರ ರಾ| ಮುನಶಿಯವರು ಪ್ರಾಥಮಿಕ ಶಿಕ್ಷಣದ ಅವಸ್ಥೆಯನ್ನೂ ಸರಕಾರದ ಮನಸ್ಥಿತಿಯನ್ನೂ ವರ್ಣಿಸಿದ್ದಾರೆ.

***

ತನ್ನ ಮರಿ ಹೊನ್ನ ಮರಿ!

ಬಿಹಾರ ಪ್ರಾಂತದ ಸರಕಾರವು ನಡಿಸಿದ ಸ್ವಾರ್ಥ ನೋಡಿರಿ! ಕಟಕದಲ್ಲಿ ವಿದ್ಯುದ್ದೀಪಗಳನ್ನು ಹಚ್ಚುವ ಯೋಜನೆಯೊಂದು ಕೈಕೊಳ್ಳಲ್ಪಟ್ಟಿದೆ. ಈ ಯೋಜನೆಯಂತೆ ಕೆಲಸ ನಡಿಸಲು ಸರಕಾರವು ಟೆಂಡರುಗಳನ್ನು ಕೇಳಿತು. ಬಿಹಾರದ ಹೆಸರಾದ ಇಂಜನಿಯರರಾದ ಶ್ರೀ| ಬಿ. ದಾಸರವರು ಟೆಂಡರು ಕಳುಹಿಸಿದರು. ಹಾಗೆಯೇ ಕಲಕತ್ತೆಯ ಒಕ್ಟೇವಿಯಸ್ ಸ್ಟೀಲ ಕಂಪನಿಯವರೂ ವಿಲ್ಸನ್ ರೋಯ್ ಕಂಪನಿಯವರೂ ಟೆಂಡರು ಕಳಿಸಿದ್ದರು. ವಿಲ್ಸನ್ ರೋಯ್ ಕಂಪನಿಯು ಬಂಗಾಲಿ ಕಂಪನಿಯು, ಒಕ್ಟೇವಿಯಸ್ ಸ್ಟೀಲ ಕಂಪನಿಯು ಯುರೋಪಿಯನ್ ಕಂಪನಿಯು. ಶ್ರೀ| ದಾಸರೂ, ಒಕ್ಟೇವಿಯಸ್ ಕಂಪನಿಯವರೂ ಸರಕಾರದ ಬಳಿ ೩ ೩ ಲಕ್ಷಗಳ ಸಾಲ ಬೇಡಿದ್ದರು. ಬಂಗಾಲಿ ಕಂಪನಿಯವರು ಮುಂಗಡ ಹಣ ಕೊಳ್ಳದೆ ಕೆಲಸ ಮಾಡಿಕೊಡಲು ಒಪ್ಪಿದ್ದರು. ಆದರೆ, ಸರಕಾರವು ಒಕ್ಟೇವಿಯಸ್ ಕಂಪನಿಯ ಟೆಂಡರನ್ನು ಪಸಂದಿಸಿ ಕೆಲಸವನ್ನು ಆ ಕಂಪನಿಗೆ ಕೊಟ್ಟುಬಿಟ್ಟಿತು! ಈ ಕುರಿತು ಬಿಹಾರದ ಕಾಯಿದೆ ಕೌನ್ಸಿಲಿನಲ್ಲಿ ಹಿಂದೆ ಪ್ರಶ್ನೆ ಕೇಳಿದಾಗ ಒಮ್ಮೆ "ವಿಚಾರ ನಡೆದದೆ"ಂದೂ, ಇನ್ನೊಮ್ಮೆ "ಮಿ| ಬಿ. ದಾಸರ ಹಣದ ಏರ್ಪಾಟು ಅಸಮಾಧಾನಕರ"ವೆಂದೂ ಸರಕಾರದ ಕಡೆಯಿಂದ ಉತ್ತರ ಸಿಕ್ಕಿತು. ಯಾಕೆ ಅಸಮಾಧಾನಕರವೆಂದು ಕೇಳಲು, ಆ ಪ್ರಶ್ನೆಯನ್ನು ಚರ್ಚಿಸಲು ಸರಕಾರದ ಒಪ್ಪಿಗೆಯಿಲ್ಲವಾಗಿ ಉತ್ತರ ಸಿಕ್ಕಿತು. 'ಬಾಪರೆ' ಚರ್ಚಿಸಿದರೆ ಬೆಂಡು ಹೊರಬೀಳುತ್ತದೆ!! ಇಷ್ಟಾಗಿ, ಬ್ರಿಟಿಶ ಸರಕಾರಕ್ಕೆ ಹಿಂದುಸ್ಥಾನದೊಳಗಿನ ಔದ್ಯೋಗಿಕ ಉನ್ನತಿಯಾಗಬೇಕೆಂದು ಹಗಲಿರುಳು ಚಿಂತೆ ನಡೆದಿದೆ ತಿಳಿಯಿತೇನು?

***

ಬ್ರಿಟಿಶ ರಾಜ್ಯದೊಳಗಿನ ಅದ್ಭುತಗಳು.

ನಾಭಾ ಸಂಸ್ಥಾನದ ಮಹಾರಾಜರಾದ ಗುರುಚರಣಸಿಂಗಜಿಯವರಿಗೆ ಬ್ರಿಟಿಶ ಸಾಮ್ರಾಜ್ಯಶಕ್ತಿಯು ೧೯೨೩ನೇ ಇಸ್ವಿಯಲ್ಲಿ ಪಟ್ಟದಿಂದ ಪದಚ್ಯುತ ಮಾಡಿದರು ಆ ಮೇಲೆ, ಅಂದರೆ, ಕಳೆದ ೩ ತಿಂಗಳ ಹಿಂದೆ ಮಹಾರಾಜರಿಗೆ ಬ್ರಿಟಿಶ ಪ್ರಜೆಗಳಿಗೆ ವಿಚಾರ ವಿಲ್ಲದೆ ಸೆರೆಹಿಡಿದು ಹಾಕುವ ಪದ್ಧತಿಯ ಕಾನೂನಿನನ್ವಯ ದಿಲ್ಲಿ ಸ್ಟೇಶನಿನಲ್ಲಿ ಸೆರೆಹಿಡಿದು, ಮದ್ರಾಸ ಪ್ರಾಂತದ ಕೊಡೈಕೆನಾಲದಲ್ಲಿ ಪ್ರತಿಬಂಧಿಸಿದ್ದಾರೆ ಈ ಕುರಿತು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರಶ್ನೆ ಕೇಳಿದರೆ, ಈ ಪ್ರಶ್ನೆ ಕೇಳಲು ಕಾಯಿದೆ ಕೌನ್ಸಿಲಿಗೆ ಅಧಿಕಾರವಿಲ್ಲವಾಗಿ ತಿರಸ್ಕರಿಸಲಾಯಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳಿದರೆ, ನಾಭಾ ಮಹಾರಾಜರಿಗೆ ಪದಭ್ರಷ್ಟರಾಗಲು ಸಾಮ್ರಾಜ್ಯ ಸರಕಾರವೇ ಅಪ್ಪಣೆ ಕೊಟ್ಟಿತ್ತಾಗಿಯೂ, (ಪದಚ್ಯುತಿಯಲ್ಲಿ, ನಾಭಾ ಮಹಾರಾಜರು ಸಂತೋಷದಿಂದ ಸರಕಾರಕ್ಕೆ ರಾಜ್ಯವನ್ನೊಪ್ಪಿಸಿದರು) ಮಹಾರಾಜರು ರಾಜದ್ರೋಹಿ ಪ್ರಯತ್ನ ಮಾಡುತ್ತಿದ್ದದರಿಂದ ಅವರ "ಮಹಾರಾಜ" ಬಿರುದು ರದ್ದು ಮಾಡಲ್ಪಟ್ಟಿತಾಗಿಯೂ, ಅವರಿಗೆ ಪ್ರತಿಬಂಧಿಸಲಾಯಿತಾಗಿಯೂ ಹೇಳಲ್ಪಟ್ಟಿದೆ ಮಹಾರಾಜರು ಕುಪ್ರಸಿದ್ಧ ಚಳವಳಿ ಮಾಡುವವರ ಸಹವಾಸ ಮಾಡಿದರಾಗಿಯೂ ಆರೋಪ ಹೊರಿಸಲ್ಪಟ್ಟಿದೆ ಮಹಾರಾಜರ ಮಗಂದಿರರಾದ ಟಿಕ್ಕಾ ಸಾಹೇಬರವರಿಗೆ ತಂದೆಯವರ ಅಪೇಕ್ಷೆಯಂತೆ ಶಿಕ್ಷಣ ಕೊಡಲ್ಪಡಬೇಕೆಂದು ಸಭಾಸದರೊಬ್ಬರು ಆಶ್ವಾಸನ ಬೇಡಲು, ಪದಭ್ರಷ್ಟರಾಗಲು ಮಹಾರಾಜರು ಅಪ್ಪಣೆ ಬೇಡಿದಾಗ, ಮಗಂದಿರ ಶಿಕ್ಷಣದ ಜವಾಬದಾರಿಯನ್ನು ಹಿಂದುಸ್ಥಾನ ಸರಕಾರದ ಮೇಲೆ ಹೊರಿಸಿದ್ದಾರೆ ಸರ್ವಾಧಿಪತಿಗಳ ಪಂಜಾಬರ ಸಾರುವಪತ್ರದಲ್ಲಿ ಮಗನಿಗೆ ಶಿಕ್ಷಣ ಕೊಡಲಿಕ್ಕೆ ಮಹಾರಾಣಿಯವರು ಒಪ್ಪಿದ್ದಾರೆ. ನೋಡಿರಿ! ಅತ್ಯಂತ ಸಂತೋಷದಿಂದ ಬ್ರಿಟಿಶ ಸರಕಾರಕ್ಕೆ ಮಹಾರಾಜರು ಸರ್ವಸ್ವವನ್ನು ಒಪ್ಪಿಸಿ ಕೊಡೈಕೆನಾಲದಲ್ಲಿ ಬಂಧನದಲ್ಲಿ ಹೋಗಿಬಿದ್ದಿದ್ದಾರೆ ಹೀಗೆ ಪರಿಸ್ಥಿತಿಯಿರಲು, ಸರದಾರ ಶಾಹೋಲಸಿಂಗರವರು ಇದಕ್ಕೆ ಅಲ್ಲದ ಬಣ್ಣ ಕೊಟ್ಟು ಬಿಟ್ಟಿದ್ದಾರೆ ನಾಭಾ ಮಹಾರಾಜರಿಗೂ, ಪತಿಯಾಲಾ ಮಹಾರಾಜರಿಗೂ ಇದ್ದ ಕಲಹದಲ್ಲಿ ಪತಿಯಾಲಾ ಮಹಾರಾಜರ ಪಕ್ಷವನ್ನು ಸಾಮ್ರಾಜ್ಯ ಸರಕಾರವು ವಹಿಸಿತು ಯಾಕೆಂದರೆ, ನಾಭಾ ಮಹಾರಾಜರು ತಮ್ಮ ಸಂಸ್ಥಾನದ ಆಡಳಿತೆಯಲ್ಲಿ ಬ್ರಿಟಿಶ ಸರಕಾರಕ್ಕೆ ಶಿಕ್ಕ ಶಿಕ್ಕಹಾಗೆ ಕೈಹಾಕಗೊಡಲಿಲ್ಲ. ೧೯೨೩ನೇ ಇಸ್ವಿಯಲ್ಲಿ ಮಹಾರಾಜರಿಗೆ ಪದಚ್ಯುತ ಮಾಡಲ್ಪಟ್ಟಿತು ಪದಚ್ಯುತಿಯ ಕಾಗದಕ್ಕೆ ಬಲಾತ್ಕಾರದಿಂದ ಸಹಿ ಕೊಳ್ಳಲ್ಪಟ್ಟಿತ ಟಿಕ್ಕಾ ಸಾಹೇಬರಿಗೆ ಪಟ್ಟ ಕಟ್ಟಿ ಹಿಂದುಸ್ಥಾನ ಸರಕಾರವು ಅವರಿಗೆ ಶಿಕ್ಷಣ ಕೊಡುವ ನೆವ ಮಾಡಿ ಎಚಿಸನ್ ಕೊಲೇಜಿನಲ್ಲಿಟ್ಟು, ಅವರ ಬುದ್ಧಿಯನ್ನೇ ರೂಪಾಂತರಿಸಲೆತ್ನಿಸುತ್ತಿದೆ ಎಚಿಸನ್ ಕೊಲೇಜಿನ ಸರ್ವಾಂತರ್ಯಾಮಿ ಅತ್ಯಂತ ಪತಿಯಾಲಾ ಮಹಾರಾಜರು. ಅವರ ಕಾರ್ಯಪತ್ರದಲ್ಲಿಯೇ ಈ ಕೊಲೇಜಿನ ಕಾರಭಾರವೂ, ಶಿಕ್ಷಣವೂ ನಡೆದಿದೆ ಸರ್ವಾಧಿಪತಿ ರೀಡಿಂಗ ದೊರೆಗಳು ಹೈದರಾಬಾದದ ನಿಜಾಮ ಸಾಹೇಬರಿಗೆ ಬರೆದ ಪತ್ರವನ್ನು ನಿದರ್ಶಕ್ಕೆಂದು ನಾಭಾ ಮಹಾರಾಜರು ಟೀಕಿಸಿದರು. ಅದು ರಾಜದ್ರೋಹದಲ್ಲಿ ಸೇರಿತು. ಆ ಮೇಲೆ ಮಹಾರಾಜರು ದೊರೆಗಳಿಗೂ ಹಿಂದು ಪತ್ರವನ್ನು ವರ್ತಮಾನ ಪತ್ರದಲ್ಲಿ ಪ್ರಕಟಿಸಿ, ಮುಷ್ಟು ಮಗಂದಿರರಾದ ಪತಿಯಾಲಾ ಮಹಾರಾಜರ ಅನ್ಯಾಯವನ್ನು ಬೈಲಿಗೆಳೆದರು ಪಂಡಿತ ಮೋತಿಲಾಲ ನೆಹರೂರವರಿಗೂ, ಶ್ರೀ ಮಾನ್ ಶ್ರೀನಿವಾಸ ಅಯ್ಯಂಗಾರರವರಿಗೂ ಮಹಾರಾಜರು ಮೇಜವಾನಿಯನ್ನಿತ್ತು ಸತ್ಕರಿಸಿದರು ಈ ಬಗ್ಗೆ ಹಿಂದುಸ್ಥಾನ ಸರಕಾರದಿಂದ ಮುಂಜಾಗ್ರತೆ ಕೊಡಲ್ಪಟ್ಟಾದರೂ, ಮಹಾರಾಜರು ಕೇಳಲಿಲ್ಲ. ಮೌ| ಮಹಮ್ಮದ ಅಲ್ಲಿ, ಲಾಲಾ ಲಜಪತರಾಯರವರಂಥವರ ಸಹವಾಸ ಮಾಡಬಾರದೆಂದು ಅಷ್ಟು ಬಂದ ಮಾರನೇ ದಿನವೇ ಮಹಾರಾಜರು ಮೌ| ಮಹಮ್ಮದ ಅಲ್ಲಿಯವರಲ್ಲಿ ಊಟಕ್ಕೆ ಹೋದರು, ಲಜಪತರಾಯರ ಭೆಟ್ಟಿಗೆ ಹೋದರು, ವಿಲಾಯಿತಿಯೊಳಗಿನ ಕಾಮಗಾರ ಪಕ್ಷದ ಸಭಾಸದರು ಹಿಂದುಸ್ಥಾನಕ್ಕೆ ಬಂದಾಗ ಅವರಿಗೆ ಸತ್ಕಾರ ಮಾಡಿದರು ಇದೆಲ್ಲ ಕುಪ್ರಸಿದ್ಧ ಚಳವಳಿಯವರ ಸಹವಾಸದಲ್ಲಿ ಸೇರುತ್ತದೆ ಈ ಸಂಗತಿಯನ್ನು ಕೇಳಿದರೆ, ಬ್ರಿಟಿಶ ರಾಜ್ಯದಲ್ಲಿ ಯಾರೂ, ಎಂದೂ ಸುರಕ್ಷಿತರಲ್ಲವೆಂದು ಹೇಳಲಡ್ಡಿಯಿಲ್ಲ ಸರಕಾರಕ್ಕೆ ಸೇರದ ಯಾವದೇ ಕೃತ್ಯವನ್ನು ಯಾರೂ ಮಾಡಲಾಗದು. ಎಷ್ಟು ಅವರು ದೊಡ್ಡವರಿದ್ದಾಗ್ಯೂ ಅವರಿಗೆ ಸರಕಾರವು ಕ್ಷಣಮಾತ್ರದಲ್ಲಿ ಎಣಿಸುತ್ತದೆ ಅದರೆ, ಹಿಂದು ಪ್ರಶ್ನೆ ಪಂಡಿತ ಮೋತಿಲಾಲ ನೆಹರೂ ಮುಂತಾದವರು ಕುಪ್ರಸಿದ್ಧ ಮುಂದಿಗಳಾದರೆ, ಅವರಿಗೆ ಹಿಮ್ಮೇಕೇ ಪ್ರತಿಬಂಧಿಸದೆ, ಅವರೊಡನೆ ಸಹವಾಸ ಮಾಡಿದ ಪಾಪಕ್ಕೆ ನಾಭಾ ಮಹಾರಾಜರಿಗೆ ಪ್ರತಿಬಂಧಿಸುವದು ಚಮತ್ಕಾರವಲ್ಲವೇ?

Wanted:- Candidates for Telegraph and Station Masters' Classes Full particulars and Railway Fare Certificate on 2 annas Stamp Apply to — Imperial Telegraph College, **DELHI.**

ಹೊನ್ನಾವರದಲ್ಲಿ ಮುಂಬಯಿ!

ಬನ್ನಿರಿ! ಕೊಳ್ಳಿರಿ!! ಕ್ಷುಧಾ-ಶಾಂತಿಹೊಂದಿರಿ!!!

ಮುಂಬಯಿಯ ಶಹರವನ್ನು ನೋಡದವರು ಅನೇಕರಿರುತ್ತಾರೆ ಮುಂಬಯಿಯ ಬಹಳ ಪ್ರಸಿದ್ಧವಾದ ಚಹಾ ಅಂಗಡಿ ನಮೂನೆಯ 'ಮನಮೋಹನ ವಿಲಾಸ' ವೆಂಬ ಹೆಸರಿನಿಂದ ಸಕಲ ವಿಧಗಳಿಂದಲೂ ಆನಂದಕರವಾದ ಹೊಸ ಚಹಾ ದುಕಾನವನ್ನು ನಾವು ಹೊನ್ನಾವರದಲ್ಲಿ ಬರುವ ವೈಶಾಖ ಶುದ್ಧ ೧೪ರ, (ತಾರೀಖು ೩-೫-೨೮) ಯಿಂದ ಪೋಸ್ಟ ಆಫೀಸಿಗೆ ಹೋಗುವ ರಸ್ತೆ ಪಕ್ಕದಲ್ಲಿ ತೆರೆಯುತ್ತೇವೆ ಅರಸರು ತಿನ್ನಲಪೇಕ್ಷಿಸುವಂಥ ಸರಸವಾದ ತರತರದ ತಿನಸುಗಳು ನಮ್ಮಲ್ಲಿ ತಯಾರಾಗುತ್ತವೆ ಅಮೃತತುಲ್ಯವಾದ ಚಹಾ, ಕಾಫಿ, ಕೋಕೋ, ಶರಬತ್ ವಗೈರೆ ಪೇಯ ಪದಾರ್ಥಗಳೂ ಶೀಘ್ರವಾಗಿ ಸಿದ್ಧವಾಗುತ್ತವೆ ಸ್ವಲ್ಪ ಖರ್ಚಿನಿಂದ ಮುಂಬಯಿಯ ಅನುಭವ ಹೊಂದಬೇಕಾದರೆ, ನಮ್ಮ ಈ "ಮನಮೋಹನ ವಿಲಾಸ" ಕ್ಕೆ ಒಮ್ಮೆ ಚಿತ್ತೈಸಬೇಕು ಗ್ರಾಹಕರು ಹಸಿವೆ ತೃಷೆಗಳನ್ನು ಕಳೆದು, ಮನೋರಂಜನ ಮಾಡಲಿಕ್ಕೆ ಈ "ಮನಮೋಹನ ವಿಲಾಸ"ದಷ್ಟು ಸಾಮರ್ಥ್ಯವುಳ್ಳದ್ದು ಇಲ್ಲ ಬೀರ ಗಡಿಮೆ ಕಾರಣ ಅನುಕೂಲವಿದ್ದವರೆಲ್ಲರೂ ಈ 'ವಿಲಾಸ'ಕ್ಕೆ ಬಂದು ವಿಲಾಸ ಹೊಂದಿ ಧನ್ಯರಾಗಬೇಕು

ದರ ವಗೈರೆ ವಿಶೇಷ ಮಾಹಿತಿ 'ವಿಲಾಸ'ದಲ್ಲಿ

ಮಾಲಕರು—" ಮನಮೋಹನ ವಿಲಾಸ, " ಹೊನ್ನಾವರ.

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ ಮೋಟಾರಿನಲ್ಲಿ ಹಾಕುವಂಥ, ಉತ್ತಮ ರೀತಿಯಿಂದ ತಯಾರಿಸಿದ ಕೈನೆಯ್ಗೆಯ ಕತ್ತದ ಚಾಪೆಗಳು ಸಿಗುತ್ತವೆ.



ಮೋಟಾರಿನ ಹತಾರುಗಳು ಇಡುವ ಬಗ್ಗೆ ಚಲೋ ಕಟ್ಟಿಗೆಯಿಂದ ತಯಾರಿಸಿದ ಬೇಗ ಸಮೇತವಾದ ಪೆಟ್ಟಿಗೆಗಳು ಹಾಗು ಮೋಟಾರ ಬೊಡಿ ಬಗ್ಗೆ ಸ್ಯಾಟಲಿಂಗ್ಸ ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ. ಪೆಟ್ಟಿಗೆ ೧ ರ ಬೆಲೆ ರೂ ೩ ಸೈಜ ೩'×೧'×೧'.

ದರ ಫೂಟ ೧ಕ್ಕೆ ೦-೩-೬

ಬೇಕಾದವರು ಅರ್ಧದ ಸಮೇತ ರೂ ೨—೦—೦ ಮುಂಗಡವಾಗಿ ಕಳಿಸಬೇಕು

ವಿಳಾಸ -- ಎಸ್. ಎಮ್. ಪಂಡಿತ,

ಮೋಟಾರ ಟಿಕೇಟ ಆಫೀಸ ದುರ್ಗಾಕೇರಿ. ಹೊನ್ನಾವರ (ಉ ಕ)

ಕಾನಡಾ ವೃತ್ತ.

ಮಿತಿ ವಿಭವ ಸಂ। ವೈಶಾಖ ಶು। ೧೧ ಶ, ಸೋಮವಾರ.

ಹೊಲಗಳ ಪುನರ್ಘಟನೆ.

ಹೇತುಗಳ ಚರ್ಚೆ.

ಮುಂಬಯಿ ಸರಕಾರವು ಈ ಕಾನೂನಿನ ಜನನ ಕಾರಣಗಳನ್ನು ಕೊಟ್ಟಿದೆ. ಅವನ್ನೇ ನಾವು ಮೊಟ್ಟಮೊದಲು ಪರಾಂಬರಿಸಿ, ಕಾನೂನಿನ ಗುಣದೋಷಗಳ ಚರ್ಚೆಯನ್ನು ನಡಿಸುವದು ಪ್ರಶಸ್ತವು. ಹೊಲಗಳು ಹರಡಿಕೊಂಡಿದ್ದರಿಂದ ಬೇಸಾಯಗಾರರ ಸಮಯವು ನಿರರ್ಥಕವಾಗಿ ವ್ಯಯವಾಗುತ್ತಿದೆ, ಶ್ರಮ ಉಳಿಸುವ ಸಾಹಿತ್ಯಗಳನ್ನು ಉಪಯೋಗಿಸಲು ತೊಂದರೆಯಾಗುತ್ತಿದೆ, ಕೂಲಿಕಾರ ಹಾಗು ಬಂಡವಲುಗಾರರ ಸಾಹಚರ್ಯವಾಗುವದಿಲ್ಲ, ಚಿಕ್ಕ ಚಿಕ್ಕ ಹೊಲಗಳಿಗೆ ಪ್ರತ್ಯೇಕಪ್ರತ್ಯೇಕ ಕಾಯುವದಕ್ಕಾಗಿ ಹಾಕುವ ಚತುರ್ಗಡಿಗಳ ಮೂಲಕ ಬಹಳ ಪ್ರದೇಶವು ನಿರುಪಯೋಗಿಯಾಗುತ್ತದೆ, ಬೇಸಾಯಗಾರರಿಗೆ ಬೇಸಾಯದಿಂದಲೇ ಹೊಟ್ಟೆ ತುಂಬುವದಿಲ್ಲ. ಕಾರು ಬೆಳೆ ಯಾ ಎರಡನೇ ಬೆಳೆ ಬೆಳಸಲು ಅಸಾಧ್ಯವಾಗುತ್ತದೆ, ಅನೇಕ ಕಡೆಗಳಲ್ಲಿ ಭೂಮಿಯು ಬಂಜರು ಬೀಳುತ್ತದೆ; ನೆರೆಹೊರೆಯವರೊಡನೆ ದ್ವೇಷ ಬೆಳೆಯುತ್ತದೆ, ಇತ್ಯಾದಿ ಕಾರಣಗಳು ಈ ಕಾನೂನಿನ ಪರಿಸ್ಥಿತಿಯನ್ನು ನಿರ್ದೇಶಿಸುತ್ತವೆ.

ಈ ಕಾರಣಗಳನ್ನು ಒಂದೊಂದಾಗಿ ವಿಚಾರಿಸುವ. ನೆರೆಹೊರೆಯವರ ದ್ವೇಷದ ವಿಚಾರ ಮಾಡುವ ಕಾರಣವಿಲ್ಲ. ಯಾಕೆಂದರೆ, ನೆರೆಹೊರೆಯಲ್ಲಿ ಜನರಿರುವನಕ ದ್ವೇಷ-ಪ್ರೀತಿಗಳು ಕಾರಣಾಂತರದಿಂದ ಉಂಟಾಗುವದು ಸ್ವಾಭಾವಿಕ. ಚತುರ್ಗಡಿಗಳಿಗೆ ನಿರರ್ಥಕವಾಗಿ ಸ್ಥಳ ವ್ಯಯವಾಗುತ್ತದೆಂಬ ಮಾತು ಅಷ್ಟೇನು ಮಹತ್ವದ್ದಲ್ಲ. ಸಮ್ಮಿಶ್ರ ರಾಶಿ ಸಾಮಾನ್ಯವಾಗಿ ಒತ್ತಟ್ಟಿಗೆ ಎಕ್ಕೆಗಟ್ಲೆ ಸ್ಥಳವಿದ್ದಾಗ್ಯೂ, ಸಾಗುವಳಿಯ ಅನುಕೂಲತೆಗಾಗಿ ಪ್ರತ್ಯೇಕಪ್ರತ್ಯೇಕ ಗದ್ದೆಗಳನ್ನು ಮಾಡಿ ಹಾಳೆ ಹಾಕುವ ಪ್ರಘಾತವಿದೆ; ಇವು ಸಾಗುವಳಿಗೆ ಅವಶ್ಯವಿರುವದಾಗಿಯೂ ತಿಳಿಯುತ್ತದೆ. ಇದರಿಂದ ಗಡಿಗಳಿಗೆ ಸ್ಥಳವ್ಯಯವಾಗುತ್ತದೆಂಬ ಮಾತಿನಲ್ಲಿ ತಥ್ಯವಿಲ್ಲ. ಈ ಕಾರಣಗಳನ್ನು ಇಷ್ಟಕ್ಕೇ ಬಿಟ್ಟು, ಉಳಿದವುಗಳನ್ನೇ ವಿಚಾರಿಸುವ. ಪ್ರಾಮುಖ್ಯವಾಗಿ ಎರಡು ಕಾರಣಗಳು ವಿಚಾರಾರ್ಹವಿವೆ. ಬೇಸಾಯಗಾರರಿಗೆ ಒದಗುವ ಹೆಚ್ಚಿನ ಶ್ರಮವನ್ನು ಉಳಿಸುವದು, ಹಾಗು ಶ್ರಮವನ್ನು ಉಳಿಸುವ ಬೇಸಾಯ ಸಾಹಿತ್ಯಗಳನ್ನು ಉಪಯೋಗಿಸಲು ಅನುಕೂಲ ಕ್ಷೇತ್ರವನ್ನು ನಿರ್ಮಿಸಿಕೊಡುವದು ಅಂತು ಬೇಸಾಯಗಾರರ ಶ್ರಮವನ್ನು ಉಳಿಸುವದು, ಅದಕ್ಕಾಗಿ ಈ ಕಾನೂನಿನ ಘಟನೆಯಾಗುತ್ತದೆಂದು ಸಾಮಾನ್ಯವಾಗಿ ಹೇಳಬಹುದು.

ಈ ವಿವರದಿಂದ ಮುಖ್ಯ ಪ್ರಶ್ನೆಯು ಬೇಸಾಯಗಾರರ ಶ್ರಮಪರಿಹಾರದ್ದೆಂದು ಸರಕಾರವು ಗ್ರಹಿಸಿದೆ ಆದರೆ, ನಿಜವಾಗಿ ಬೇಸಾಯಗಾರರು ದೀನರಾದದ್ದು ಶ್ರಮಪರಿಹಾರದ ಸಾಧನಗಳ ಅಭಾವದಿಂದಲೇನು? ಪರಿಶ್ರಮ ಮಾಡಲು, ಮೈನಗಣಿ ದುಡಿಯಲು ಬೇಸಾಯಗಾರರು ಒಗ್ಗಾಲಿನ ಮೇಲೆ ಸಿದ್ಧರಿದ್ದಾರೆ. ಆಳವಾಗಿ ವಿಚಾರಿಸಿದರೆ, ಚಿಕ್ಕ ಚಿಕ್ಕ ಹೊಲಗಳ ಬೇಸಾಯ ಮಾಡುವದಾದರೂ ಪರಿಶ್ರಮದ ತಯಾರಿಯಿಂದಲೇ. ಪರಿಶ್ರಮ ಮಾಡಲು ಬೇಸಾಯಗಾರರು ಹಿಂಜರಿಯುವವರಿದ್ದರೆ, ವಿಶೇಷ ಫಲ ಸಿಗದ ಹೊಲಗಳನ್ನು ಅವರೆಂದೂ ಸಾಗುವಳಿ ಮಾಡುತ್ತಿರಲಿಲ್ಲ ಶ್ರಮ ಮಾಡಲು ಚೈತನ್ಯವಿದೆ ಅದಕ್ಕೆ ತಕ್ಕ ಉದ್ಯೋಗವಿಲ್ಲ ಆದರಿಂದ ಕಡಿಮೆ ಫಲ ಸಿಗುವ ಹೊಲಗಳನ್ನಾದರೂ ಬೇಸಾಯಗಾರರು ನಿರುಪಾಯವೆಂದು ಸಾಗುವಳಿ ಮಾಡಿ ಚರಿತಾರ್ಥ ನಡಿಸುತ್ತಾರೆ. ಇದರ ಮೇಲಿಂದ ಒಂದು ಮಾತು ಸಿದ್ಧವಿದೆ ಗ್ರಾಮಾಂತರಗಳಲ್ಲಿ ಬೇಸಾಯಗಾರರಿದ್ದಾರೆ ಅವರ ಶ್ರಮಕ್ಕೆ ತಕ್ಕಷ್ಟು ಭೂಮಿಯೇ ಇಲ್ಲ. ಹೆಚ್ಚಿನ ಫಲಾಶೆ ಮಾಡಬಿದ್ದರೂ, ಅವರಿಗೆ ಭೂಮಿ ಸಿಗುವದಿಲ್ಲ. ಇದರಿಂದ ಶ್ರಮಪರಿಹಾರ ಮಾಡುವ ಉಪಾಯವು ಬೇಸಾಯಗಾರರಿಗೆ ಪ್ರತಿಕೂಲವೇ ಹೊರತು ಅನುಕೂಲವಲ್ಲ. ಬಂಡವಲುಗಾರರ ಸಹವಾಸ ಮಾಡಿ ಶ್ರಮಪರಿಹಾರದ ಬೇಸಾಯ ಸಾಹಿತ್ಯಗಳನ್ನು ಗ್ರಾಮಾಂತರದಲ್ಲಿ ಪ್ರಚುರಗೊಳಿಸಿದರೆ, ಅನೇಕ ಬೇಸಾಯಗಾರರು ನಿರುದ್ಯೋಗಿಯಾಗಿ ಉಪವಾಸ ಬೀಳಬೇಕಾಗುವದು, ಬಂಡವಲುಗಾರರು ಮತ್ತೂ ಶ್ರೀಮಂತರಾಗಿ, ಬಡ ಬೇಸಾಯಗಾರರು ಕೂಲಿಕಾರರಾಗಿ ಪರಿಣಮಿಸುವರು. ಕೂಲಿಗಾಗಿ ದೇಶಾಂತರಕ್ಕೆ ಅವರು ಹೋಗಬೇಕಾಗುವದು.

ಇನ್ನೊಂದು ಮಾತನ್ನೂ ಜನರು ಪರಾಂಬರಿಸತಕ್ಕದ್ದು. ಬೇಸಾಯದಿಂದ ಇಡೀ ವರುಷ ಹೊಟ್ಟೆ ತುಂಬುವಷ್ಟು ಸ್ಥಳ ಕೊಡುವ ಯೋಜನೆಯೇನೋ ವಿಚಾರರಮಣೀಯವಿದೆ. ಇದರ ಅರ್ಥವನ್ನು ನಾವು ಗ್ರಹಿಸುವ ಬೇಸಾಯದ ಉದ್ಯೋಗವು ಇಡೀ ವರುಷ ಸತತವಾಗಿ ನಡಿಸುವದಲ್ಲ. ಪ್ರಾಯದಲ್ಲಿ ೧೦—೧೫ ದಿವಸ, ಹೆಚ್ಚೆಂದರೆ, ೧ ತಿಂಗಳ ತನಕ ಕೆಲಸ ಮಾಡಿದರಾಯಿತು. ಉಳಿದ ಸಮಯದಲ್ಲೆಲ್ಲ ಮನೆಯಲ್ಲಿ ಕೂತುಕೊಂಡು ಕಳೆಯಬೇಕು. ಸರಾಸರಿ ೬ ತಿಂಗಳಾದರೂ ಬೇಸಾಯಗಾರರು ನಿರುದ್ಯೋಗಿಯಾಗಿ ಉಳಿಯುವ ಪ್ರಸಂಗ ಬರುತ್ತದೆಂದು ಹೇಳಬಹುದು. ಬಿತ್ತಿಗೆಯ, ಸೆಟ್ಟಿಯ ಹಾಗು ಕೊಯ್ಲಿನ ಹಂಗಾಮುಗಳಲ್ಲಿ ಇದ್ದಷ್ಟು ಜನರು ಕಡಿಮೆಯೇ. ಈ ಕಾಲಕ್ಕೆ ಕೂಲಿಯಾಳುಗಳನ್ನು ನೇಮಿಸಿಕೊಂಡರೂ, ಕೆಲಸವು ಸಾಗಿಹೋಗುವದಿಲ್ಲ. ಅಂದ ಬಳಿಕ, ೬ ತಿಂಗಳು ಕೆಲಸ ಮಾಡುವವನಿಗೆ ಇಡೀ ವರುಷ ಉದರನಿರ್ವಾಹವಾಗುವಷ್ಟು ಫಲ ಕೊಡುವ ಹೊಲ ಕೊಡಬೇಕೆಂಬು ಈ ಕಾನೂನಿನ ಉದ್ದೇಶವೆಂಬು ಸ್ಪಷ್ಟವಾಗುತ್ತದೆ. ಹೀಗೆ ಭೂಮಿಯನ್ನು ಹಂಚಿದರೆ, ಬೇಸಾಯಗಾರರ ಕ್ಷೇಮವಾಗುವದೇನು? ಚಿಕ್ಕ ಚಿಕ್ಕ ಹೊಲಗಳಾದರೂ, ಈಗ ಬೇಸಾಯಗಾರರಿಗೆ ಫಲ ಹೆಚ್ಚಾಗಲಿ, ಕಡಿಮೆಯಾಗಲಿ ಸರಾಸರಿ ೬ ತಿಂಗಳು ಕೆಲಸ ಸಿಗುತ್ತದೆ. ಹೊಲಗಳ ವ್ಯಾಪ್ತಿಯು ಬೆಳೆದು, ಬೇಸಾಯಗಾರರ ಸಂಖ್ಯೆಯನ್ನು ಹೊಲಗಳ ಪುನರ್ಘಟನೆಯಿಂದ ಕುಗ್ಗಿಸಿದರೆ, ಕೆಲ ಬೇಸಾಯಗಾರರು ಹೊಟ್ಟೆ ತುಂಬ ಉಣ್ಣುವರು; ಹಲವರು ಕೂಳಿಲ್ಲದೆ ಉಪವಾಸ ಬಿದ್ದು ಸಾಯಬೇಕಾಗುವದು. ಯಾಕೆಂದರೆ, ಹೊಲಗಳ ಪುನರ್ಘಟನೆಯಿಂದ ಗ್ರಾಮದವರಿಗೆಲ್ಲರಿಗೆ ತುಂಬಾ ಕೆಲಸ ಸಿಗದೆಂಬ ಮಾತು ನಿಶ್ಚಯ. ಅನೇಕರು ದೇಶಾಂತರ ಮಾಡಿ ಪಟ್ಟಣಗಳಲ್ಲಿ ಕೂಲಿಕಾರರಾಗಿ ಅಲೆಯಬೇಕಾಗುವದು. ಹಿಂದುಸ್ಥಾನ ದೇಶವು ಪ್ರಾಮುಖ್ಯವಾಗಿ ಬೇಸಾಯದ್ದಿದ್ದದರಿಂದಲೂ, ಬೇಸಾಯದ ಮೇಲೆ ಅವಲಂಬಿಸಿರುವ ಜನರೇ ಹೇರಳವಾಗಿರುವದರಿಂದಲೂ, ಕೂಲಿಕಾರರ ಗ್ರಹದಶೆಯನ್ನು ವರ್ಣಿಸುವದಸದಳವು. ಶ್ರೀ। ಶಿವೇಯವರ ಅಂದಾಜಿನಂತೆ, ಬೇಸಾಯಗಾರರಲ್ಲಿ ಸಾಧಾರಣ ಮುಕ್ಕಾಲು ಪಾಲು ಜನರು ಭೂಮಿ ಕಳಕೊಂಡು ದಿಕ್ಕಿಲ್ಲದೆ ಅಡ್ಡಾಡಬೇಕಾಗುವದು. ಮಿ। ಎಂಡರಸನ್‌ರವರ ಹೇಳಿಕೆಯಂತೆ ಕಾಲು ಪಾಲು ಜನರಾದರೂ ಭೂಮಿ ಕಳಕೊಳ್ಳುವರು. ಅಂಕಿಯ ಮಾತು ವಿಶೇಷವಾಗಿ ಹೊಲದ ಕ್ಷೇತ್ರಮರ್ಯಾದೆಯ ಮೇಲೆ ಅವಲಂಬಿಸಿರುವದರಿಂದ ಆ ಕುರಿತು ನಿಶ್ಚಯಪೂರ್ವಕವಾಗಿ ಅಂಕಿ ಹೇಳಲಾಗದಿದ್ದರೂ, ಹಲವು ಬೇಸಾಯಗಾರರು ನಿರುದ್ಯೋಗಿಯಾಗಿ ಕೂತುಕೊಳ್ಳಬೇಕಾಗುವರೆಂಬ ಮಾತು ನಿಶ್ಚಯವಿದೆ. ಈಗಲೇ ನಿರುದ್ಯೋಗದ ಪ್ರಮಾಣವು ವಿಪರೀತವಿರುವಾಗ, ಈ ಕಾನೂನನ್ನು ಕೈಕೊಳ್ಳುವದು ಕ್ಷೇಮಕರವೇನೆಂದು ವಿಚಾರ ಮಾಡಬಹುದು.

ಇದೇ ಸಮಯ ಬೇಸಾಯ ಖಾತೆಯ ಡ್ಯಾರೆಕ್ಟರರಾಗಿ ನಮ್ಮ ಮುಂಬಯಿ ಇಲಾಖೆಯ ಬೇಸಾಯಗಾರರ ಪರಿಸ್ಥಿತಿ ಬಲ್ಲಿದ ಡಾ। ಹೆರೊಲ್ಡ ಮೆನ್‌ರವರು ಬರೆದ ಒಂದು ಲೇಖವು "ಬೊಂಬೇ ಕೊಆಪರೇಟಿವ್ಹ ಕ್ವಾರ್ಟರ್ಲೀ" ಎಂಬ ತ್ರೈಮಾಸಿಕದಲ್ಲಿ ಪ್ರಕಟವಾಗಿದೆ

ಬೇಸಾಯಗಾರರ ಉದ್ಧಾರದ ಉಪಾಯಗಳನ್ನು ಸ್ವಾನುಭವದಿಂದ ಅವರು ದಿಗ್ದರ್ಶನ ಮಾಡಿದ್ದಾರೆ. ಆ ಲೇಖದ ಅನುವಾದವನ್ನು ಇಂದಿಗೇ ವಾಚಕರಿಗೆ ಅರುಹಬೇಕಾಗಿ ನಮ್ಮ ಸಂಕಲ್ಪವಿತ್ತು; ಆದರೆ, ಹೇತುಗಳ ಪ್ರಾಸ್ತಾವಿಕ ವಿಚಾರದಲ್ಲಿಯೇ ಸ್ಥಳವ್ಯಾಪ್ತಿಯಾದ್ದರಿಂದ, ಡಾ|| ಮೆನ್‌ರವರ ವಿಚಾರಗಳನ್ನು ಮುಂದಿನ ವಾರ ನಿವೇದಿಸಬೇಕಾಗಿದೆಂದು ಹೇಳಿ, ಇಂದಿನ ಲೇಖವನ್ನು ಇಷ್ಟಕ್ಕೆ ಮುಗಿಸುವೆವು

ಸ್ಫುಟ ಸೂಚನೆಗಳು.

೧. ಚೀನ ದೇಶದಲ್ಲಿ ಪುನಃ ರಾಷ್ಟ್ರೀಯರಿಗೂ, ಅರಾಷ್ಟ್ರೀಯರಿಗೂ ಯುದ್ಧವೆದ್ದ ಸುದ್ದಿಗಳು ಬರಹತ್ತಿವೆ. ಈ ಸುದ್ದಿಗಳು ಸುಸಂಗತವಾಗಿ ಕೊಡಲ್ಪಡುವದಿಲ್ಲ. ಅದರಿಂದ ಅಲ್ಲಿಯ ಸ್ಥಿತಿಯು ಸರಿಯಾಗಿ ತಿಳಿಯುವದಿಲ್ಲ. ಆದರೂ, ಈ ತನಕ ಬಂದ ಸುದ್ದಿಗಳ ಮೇಲಿಂದ ಕಂಡುಬಂದ ವೃತ್ತಾಂತವನ್ನಷ್ಟು ನಮೂದಿಸುವದುಚಿತವು. ಕಳೆದ ೭ನೇ ತಾರೀಖಿಗೆ ರಾಷ್ಟ್ರೀಯ ಸೈನ್ಯದ ಅಧಿಪತಿಗಳಾದ ಚೆಂಗ ಕೈಶೇಕರವರು ಸುಚಾಪು ಪಟ್ಟಣದಲ್ಲಿಳಿದು ಹಳದಿ ನದಿಯಗುಂಟ ಸ್ನಟೋ ಪಟ್ಟಣದಿಂದ ಚಾಂಗಚೋ ಪಟ್ಟಣದ ತನಕ ೪೦೦ ಮೈಲಿನ ಪ್ರದೇಶದಲ್ಲಿ ಪ್ರತಿಪಕ್ಷಿಗಳಿಗೆ ಇದಿರಾಗುತ್ತಿದ್ದಾರೆ. ಸೇನಾಪತಿ ಫೆಂಗಯುಸೆನ್‌ರವರು ಚೆಂಗರವರಿಗೆ ನೆರವಾಗುತ್ತಿದ್ದಾರೆ. ಈರ್ವರ ಬಳಿ ೩|| ಲಕ್ಷ ಸೈನಿಕರಿದ್ದಾರೆ. ಇವರಿಗಿದಿರಾಗಿ ಚೀನಿಯರೂ, ೫೦ಸಾವಿರ ಶಾಂಟುಂಗಪವರೂ, ೧|| ಲಕ್ಷ ಫಂಗಿಯವರೂ ನಿಂತಿದ್ದಾರೆ. ಪ್ರತಿಪಕ್ಷಿಗಳ ನಾಯಕರು ಸೇನಾಪತಿ ಸನ್‌ಚುವಾನ್ ಫೆಂಗರವರು. ರಾಷ್ಟ್ರೀಯರು ದಕ್ಷಿಣ ದಿಕ್ಕಿಗೆ ಮೂರು ಕಡೆಗಳಿಂದ ಉತ್ತರಕ್ಕೆ ಸಾಗಿಹೋಗುತ್ತಿದ್ದಾರೆ. ಉತ್ತರ ದಿಕ್ಕಿನ ಫೆಂಗರವರ ಸೈನ್ಯದ ಪ್ರಾಬಲ್ಯವು ಅಷ್ಟೊಂದಿಲ್ಲವಾದ್ದರಿಂದ ಜಪಾನ ದೇಶದಲ್ಲಿ ಗಡಿಬಿಡಿಯಾಗಿದೆ. ಜಪಾನ ದೇಶವು ರಾಷ್ಟ್ರೀಯರಿಗೆ ಅನುಕೂಲವಾಗಿಲ್ಲ. ಕಾರಣ, ಸಿಂಗಟಾವಿಂದ ಸೈನ್ಯವನ್ನು ಶಾಂಟುಂಗಕ್ಕೆ ಕಳಿಸಲು ಅಲ್ಲಿ ತಯಾರಿ ನಡೆದದೆ. ಇತ್ತ ರಾಷ್ಟ್ರೀಯರು ೩೦೦೦೦ ಮಂದಿಗಳನ್ನು ಸೆರೆಹಿಡಿದರಾಗಿ ಹೊಸ ಸುದ್ದಿ. ತ್ಸೂಫೋಶೆನ್ ಪಟ್ಟಣವು ರಾಷ್ಟ್ರೀಯರ ವಶವಾಗುವ ಲಕ್ಷಣಗಳಾಗಿರುವದಾಗಿಯೂ ಸುದ್ದಿ ಬಂದು, ಹೊಸ ವಾರವಾಯಿತು. 'ರ್ಯೂಟರ' ಸುದ್ದಿಗಾರರು ಮುಂದಿನ ಸುದ್ದಿಯನ್ನೇ ಕೊಡುವದಿಲ್ಲ. ಯುದ್ಧಕ್ಕೆ ಶುರು ಮಾಡಿದ ರಾಷ್ಟ್ರೀಯರು ಕೈಮುಡುಗಿಸಿಕೊಂಡು ಹಿಮ್ಮೆಲೇ ಕೂತುಕೊಂಡರೆಂಬಂತೆ ಭಾಸವಾಗುತ್ತದೆ. ಸೈನ್ಯ ಪ್ರಮಾಣದ ಮೇಲಿಂದ ರಾಷ್ಟ್ರೀಯರೇ ಗೆಲ್ಲುವರೆಂದು ಹೇಳಲಡ್ಡಿ ಇಲ್ಲ. ರಾಷ್ಟ್ರೀಯರ ವಿಜಯವನ್ನು ಸಾರುವ ಶುಭಯೋಗವನ್ನು ಎಲ್ಲರೂ ಹಾರೈಸುತ್ತಿದ್ದಾರೆ.

೨. ಚಿಮಣಿ ಎಣ್ಣೆಯ ಚೌಕಶಿಯು ರಂಗೂನಿನಲ್ಲಿ ನಡೆದಿದೆ. ಬರ್ಮಾ ಆಯಿಲ್ ಕಂಪನಿ, ಆಸಾಮ ಆಯಿಲ್ ಕಂಪನಿ ಮುಂತಾದ ಬ್ರಹ್ಮದೇಶದೊಳಗಣ ಕಂಪನಿಗಳ ಚಾಲಕರ ಸಾಕ್ಷಿಗಳಾಗುತ್ತಿವೆ. ಈ ತನಕ ಆದ ಸಾಕ್ಷಿಗಳ ಮೇಲಿಂದ ಒಂದು ಮಾತನ್ನನ್ನಬಹುದು. ಬರ್ಮಾ ಆಯಿಲ್ ಕಂಪನಿಗಳಾದಿ ಬ್ರಿಟಿಶ ಕಂಪನಿಗಳೂ, ಅಮೇರಿಕೆಯ ಸ್ಟೆಂಡರ್ಡ ಓಯಿಲ್ ಕಂಪನಿಯೂ ಒಮ್ಮನಸ್ಸು ಮಾಡಿಕೊಂಡು ಹಿಂದುಸ್ಥಾನದಲ್ಲಿ ಅವಶ್ಯವಿದ್ದಷ್ಟು ಚಿಮಣಿ ಎಣ್ಣೆಯನ್ನು ತರದೆ, ವಿಪರೀತ ದರದಿಂದ ಮಾರಾಟ ಮಾಡುತ್ತಿದ್ದರು. ತಕ್ಕಮಟ್ಟಿಗೆ ದೇಶಕ್ಕೆ ಬೇಕಾಗುವ ತಿರಲ್ಲಿ ೩ ಪಾಲು ಎಣ್ಣೆ ಮಾತ್ರ ಪೂರೈಕೆಯಾಗುತ್ತಿತ್ತೆಂದು ಬರ್ಮಾ ಆಯಿಲ್ ಕಂಪನಿಯ ಮಿ|| ಗ್ರೇಯವರ ಸಾಕ್ಷಿಯ ಮೇಲಿಂದ ತಿಳಿಯುತ್ತದೆ. ವಿಶೇಷ ಸಂಗತಿಗಳು ಇನ್ನೂ ಮುಂದೆ ಪ್ರಕಟವಾಗುವವು. ಚಿಮಣಿ ಎಣ್ಣೆಯ ವಿಷಯು ಈ ಹಿಂದೆ ಪ್ರಕಟವಾದ ಒಂದು ಸಂಗತಿಯನ್ನು ನಮೂದಿಸಿ, ಬರ್ಮಾ ಆಯಿಲ್ ಕಂಪನಿ ಪ್ರಭೃತಿ ಬ್ರಹ್ಮದೇಶದ ಕಂಪನಿಗಳು ಹಿಂದುಸ್ಥಾನದಲ್ಲಿ ನಡಿಯುವ ಸುಲಿಗೆಯನ್ನು ನಿರ್ದೇಶಿಸಬೇಕಾಗಿದೆ. ರಂಗೂನಿನಲ್ಲಿ ೭೦ ಲಕ್ಷ ಪೀಪಾಯಿ ಮಿಶ್ರ ಎಣ್ಣೆಯಿಂದ ೩ ಕೋಟಿ ಗೇಲನ್ ಚೊಕ್ಕ ಎಣ್ಣೆಯನ್ನು ತಯಾರಿಸುತ್ತಾರೆ. ಮಿಶ್ರ ಎಣ್ಣೆಯನ್ನು ಚೊಕ್ಕ ಮಾಡಿ ಇಷ್ಟಂದಿಲ್ಲ ಬ್ರಹ್ಮದೇಶದೊಳಗಿನ ಕಂಪನಿಯವರು ಮಾರುವ ದರದಿಂದ ಸ್ಟೆಂಡರ್ಡ ಆಯಿಲ್ ಕಂಪನಿಗೆ ಶುದ್ಧ ಕ್ರಮವನ್ನು ಕೈಕೊಂಡು ಬಿಲ್ಲ ತಂದು ಮಾರಲು ಪೂರೈಸುತ್ತಿದೆ. ಮೇಲಾಗಿ, ಬ್ರಹ್ಮದೇಶದ ಕಂಪನಿಯವರೊಡನೆ ಮೇಳಾಟವನ್ನೂ ಅವರು ನಡಿಸುತ್ತಾರೆ. ಅಂದ ಬಳಿಕ, ಬ್ರಹ್ಮದೇಶದ ಕಂಪನಿಯವರ ಚಿಮಣಿ ಎಣ್ಣೆಯನ್ನು ಮಾರುವ ದರವು ವಿಪರೀತವಿರವದೆಂದು ಹೇಳಬೇಕೇ? ಬ್ರಹ್ಮದೇಶದ ಕಂಪನಿಯವರು ಜಾಗ್ರತೆಯಿಂದ ಈ ವ್ಯಾಪಾರವನ್ನು ನಡಿಸಿದರೆ, ಸರಕಾರಿ ದ್ರವ್ಯಸಹಾಯವಿಲ್ಲದೆ ಸ್ಟೆಂಡರ್ಡ ಆಯಿಲ್ ಕಂಪನಿ ಕಡೆ ಸ್ವತಂತ್ರವಾಗಿ ಮೇಳಾಟ ನಡಿಸಲಿಕ್ಕೆ ಅವರಿಗೆ ಅನುಕೂಲವಿದೆ. ಹೀಗಿದ್ದ, ಹಿಂದುಸ್ಥಾನ ಸರಕಾರವು ಅವರ ಸಂರಕ್ಷಣೆಗಾಗಿ ಓಡಿಹೋಗುವದುಚಿತವೇ? ಈಗಿನಂತೆಯೇ ವಿಪರೀತ ದರಗಳನ್ನು ಆಕರಿಸಿ ವಿಪರೀತ ಲಾಭ ಪಡೆಯಲು ಬ್ರಿಟಿಶ ದೇಶೀಯರಿಗೆ ಅನುಕೂಲತೆ ಮಾಡಿಕೊಡಲು ಸರಕಾರವು ಲೋಕಕಲ್ಯಾಣದ ವೇಷ ಬರೆದಿದ್ದಾದರೆ ನಮ್ಮದೇನು ಹೇಳುವಾಯವಿಲ್ಲ. ಇರಲಿ. ಈಗಿನ ಚೌಕಶಿಯಲ್ಲಿ ಇನ್ನೇನೇನು ಹೊರಬೀಳುತ್ತದೆಂದ ನಾವೆಲ್ಲರೂ ನಿರೀಕ್ಷಿಸುತ್ತಿರುವ.

೩. ದಿನ ಹೋದ ಹಾಗೆ ಮೊಂಟೆಗ್ಯೂ ಸ್ವರಾಜ್ಯದೊಳಗಡಗಿಕೊಂಡ ನಿರಂಕುಶ ಕಾರಭಾರ ಸ್ವರೂಪವು ಬಯಲಾಗುತ್ತಿದೆ. ರಾಷ್ಟ್ರಸಂಘಕ್ಕೆ ಪ್ರತಿನಿಧಿ ಕಳುಹುವ ದೊಡ್ಡದೊಂದು ಅಧಿಕಾರವು ಬ್ರಿಟಿಶ ಸಾಮ್ರಾಜ್ಯಕರ್ತರ ಅನುಗ್ರಹದಿಂದ ನಮ್ಮೀ ಭರತಖಂಡಕ್ಕೆ ಪ್ರಾಪ್ತವಾಗಿದೆ. ಈ ಪ್ರತಿನಿಧಿಗಳನ್ನು ವರಿಷ್ಠ ಕಾಯಿದೆ ಕೌನ್ಸಿಲಿನವರು ಕಳುಹಬೇಕೆಂದೂ ನಿಯಮಗಳಲ್ಲಿ ಹೇಳಲ್ಪಟ್ಟಿದೆ. ಕಳೆದ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ರಾಷ್ಟ್ರೀಯರಿಗೆ ಕಳುಹಬೇಕೆಂದು ನಿರ್ಧಾರವಾಗಿದೆ. ಈ ನಿರ್ಧಾರವನ್ನು ಸಾಮ್ರಾಜ್ಯ ಸರಕಾರವು ಮನ್ನಿಸುವದೇನೆಂದು ಮಿ|| ಜೊರ್ಜ ಲಿನ್ನಬರಿಯವರು ಪ್ರಶ್ನಿಸಿದರು. ಭಾರತ ಮಂತ್ರಿಗಳಾದ ವಿಂಟರಟನ್ ದೊರೆಗಳು ಇದಕ್ಕೆ ಕೊಟ್ಟ ಉತ್ತರವು ಬೋಧಪ್ರದವಿದೆ. ಹಿಂದುಸ್ಥಾನ ಸರಕಾರವಾಗಲೀ, ಭಾರತ ಮಂತ್ರಿಗಳಾಗಲೀ ಈ ತೀರ್ಮಾನವನ್ನು ಅಂಗೀಕರಿಸಲಿಲ್ಲ. ಅವರ ವಿವೇಕಶಕ್ತಿಯನ್ನು ನಿಯಂತ್ರಿಸುವಂಥ ಯಾವದೇ ತೀರ್ಮಾನವನ್ನು ಅಂಗೀಕರಿಸಲು ಅವರು ಬದ್ಧರಲ್ಲ. ಅಂದರೆ ವರಿಷ್ಠ ಕಾಯಿದೆ ಕೌನ್ಸಿಲು ಕೈಕೊಂಡ ತೀರ್ಮಾನವು ಭಾರತ ಮಂತ್ರಿಗಳಿಗೂ, ಹಿಂದುಸ್ಥಾನ ಸರಕಾರಕ್ಕೂ ಸಮ್ಮತವಿದ್ದರೆ ಮಾತ್ರ ಅದರ ಅನುಷ್ಠಾನವಾಗುವದು; ಇಲ್ಲದಿದ್ದರೆ ಅದು ತಿರಸ್ಕರಿಸಲ್ಪಡುವದು. ಸರಕಾರದ ವಿವೇಕಕ್ಕೆ ಪ್ರಾಧಾನ್ಯ! ಹೊರತು ಮೊಂಟೆಗ್ಯೂ ರಾಜ್ಯದ ಲೋಕಶಾಹಿಯಲ್ಲಿ ಪ್ರತಿನಿಧಿಗಳ ವಿವೇಕಕ್ಕೆ ಬೆಲೆ ಎಷ್ಟಕ್ಕೂ ಇಲ್ಲ. ಇದೇ ಬೋಧವನ್ನು ಭಾರತೀಯರು ಪಡೆದರೆ, ಮೊಂಟೆಗ್ಯೂ ಸ್ವರಾಜ್ಯದಿಂದ ಲೋಕಶಾಹಿಯ ಆಗಮನವಾಯಿತೆಂದು ಹಾರುಳುವವರಿಗೆ ಸ್ವಲ್ಪ ಸಮಾಧಾನವಾಗುವದು. ಸ್ವರಾಜ್ಯವಿರಲಿ, ವಿರದಿರಲಿ; ಜನರು ನಿಂದಿಸಲಿ, ಸ್ತುತಿಸಲಿ ಮೊಂಟೆಗ್ಯೂ ಯುಗವು ಹ್ಯಾಗೂ ತೀರಿತು; ಸ್ಯಾಯಮನ್ ಯುಗದ ಅರುಣೋದಯವಾಗಹತ್ತಿದೆ. ಮೊಂಟೆಗ್ಯೂ ಯುಗದಂತೆ ಜನರು ದಿಙ್ಮೂಢರಾಗಬಾರದೆಂದು ಈ ಅನುಭವಗಳನ್ನು ನಾವು ವಿವರಿಸಿರುವೆವು.

೪. ಬೇಸಾಯ ಪ್ರಯೋಗ ಹೊಲದ ಕುರಿತು ಕಳೆದ ವಾರದಲ್ಲಿ ಪ್ರಕಟಿಸಿದ ಪ್ರೇಕ್ಷಕರ ಅಭಿಪ್ರಾಯವು ವಿಚಾರಾರ್ಹವಿದೆ. ದೊಡ್ಡ ದೊಡ್ಡ ಸಂಬಳ ಪಡೆದು ಬಂಗಲೆಗಳಲ್ಲಿ ಕುಳಿದು ಚಿಕ್ಕ ಪುಟ್ಟ ಪ್ರಯೋಗಗಳನ್ನು ವಿಶೇಷ ಆಸ್ಥೆಯಿಂದ ನಡಿಸಿದರೆ, ಇಷ್ಟಫಲಪ್ರಾಪ್ತಿಯಾಗದೆಂಬದಕ್ಕೆ ನಮ್ಮಲ್ಲಿಯ ಪ್ರಯೋಗ ಹೊಲವೇ ಸಾಕ್ಷಿ. ಈ ಪ್ರಯೋಗ ಹೊಲಕ್ಕೆ ಆದ ವೆಚ್ಚವೆಷ್ಟು? ಅದರಿಂದ ಬೇಸಾಯಗಾರರಿಗುಂಟಾದ ಲಾಭವೆಷ್ಟು? ಎಂಬುದನ್ನು ನಾವು ಲೆಕ್ಕ ಮಾಡಿದರೆ, ಪ್ರಯೋಗ ಹೊಲದ ಪ್ರಸ್ಥಾಪನೆಯಿಂದ ಸಾರ್ವಜನಿಕ ಹಣದ ಅಪವ್ಯಯವಾಯಿತೆಂದು ಯಾರೂ ಹೇಳುವರು. ಬೇಸಾಯ ಶಿಕ್ಷಣವನ್ನು ಪಡೆದು ಬಂದ ಪದವೀಧರರು, ಸ್ವತಃ ದೊಡ್ಡ ದೊಡ್ಡ ಖಾತೆದಾರರಿದ್ದಾಗ್ಯೂ, ತಮ್ಮ ತಮ್ಮ ಭೂಮಿಗಳಲ್ಲಿ ಕಲಿತು ಬಂದ ಪ್ರಯೋಗಗಳನ್ನು ನಡಿಸದೆ, ಪ್ರಯೋಗ ಹೊಲದ ಆಶ್ರಯ ಪಡೆಯುತ್ತಿದ್ದವರಿಂದ ಬೇಸಾಯ ಶಿಕ್ಷಣವಾದರೂ ಅಷ್ಟಕ್ಕಷ್ಟೇ ಎಂದು ವಿಚಾರಿಗಳ ಅಭಿಪ್ರಾಯವಾಗಿದೆ. ಪ್ರಯೋಗ ಹೊಲಗಳ ಪ್ರಯೋಗಗಳು ಯಶಸ್ವಿಯಾಗಬೇಕಾದರೆ, ಒಂದು ಉಪಾಯವಿದೆ. ಬೇಸಾಯ ಶಿಕ್ಷಣ ಪಡೆದವರು ಹಳ್ಳಿಗಳಿಗೆ ಹೋಗಿ ಬೇಸಾಯಗಾರರಂತೆ ಜೀವಿಸಿ, ಹೊಸ ಹೊಸ ಪ್ರಯೋಗಗಳನ್ನು ನಡಿಸಬೇಕು. ಸಂಬಳಕ್ಕಾಗಿ ಸರಕಾರಿ ತಿಜೋರಿಯ ಮೇಲೆ ಲಕ್ಷವನ್ನಿಡದೆ ಪ್ರಯೋಗ ಹೊಲದಲ್ಲಿ ಹುಟ್ಟುವ ಫಲವನ್ನೇ ಹಾರೈಸುತ್ತಿರಬೇಕು. ಗ್ರಾಮಗಳಲ್ಲಿ ವಾಸ ಮಾಡುವದರಿಂದ ಗ್ರಾಮದವರ ಅನುಕೂಲತೆಗಳೂ, ಅನಾನುಕೂಲತೆಗಳೂ ಇವರಿಗೆ ಗೋಚರವಾಗುವವು. ಶಿಕ್ಷಣದ ಸಂಸ್ಕಾರದಿಂದ ಅನಾನುಕೂಲತೆಗಳನ್ನು ಪರಿಹರಿಸಲು ಇವರು ಉಪಾಯಯೋಜನೆ ಮಾಡುವರು. ನೆರೆಹೊರೆಯ ಬೇಸಾಯಗಾರರಿಗೂ ಗ್ರಂಥಗಳೊಳಗಿನ ಪ್ರಯೋಗಗಳನ್ನು ಪ್ರತ್ಯಕ್ಷ ತೋರಿಸುವ ಸುಯೋಗವು ಪ್ರಾಪ್ತವಾಗುವದು. ಇವರ ಜೀವನಕ್ರಮವು ಬೇಸಾಯಗಾರರಂತೆ ಸಾಮಾನ್ಯವಾಗಿ ನಡಿಯುವದರಿಂದ ನೆರೆಹೊರೆಯ ಬೇಸಾಯಗಾರರಿಗೆ ಇವರಲ್ಲಿ ಪ್ರೀತಿ-ವಿಶ್ವಾಸಗಳು ಹುಟ್ಟಿ ಪ್ರಚಾರ ಕಾರ್ಯಕ್ಕೆ ಅನುಕೂಲತೆಯಾಗುವದು. ಇಂಥವರಿಗೆ ಸರಕಾರವು ಅವಶ್ಯವಿದ್ದರೆ ದ್ರವ್ಯಸಹಾಯವನ್ನೂ ಹೊಲಗಳನ್ನೂ ಸಂಗ್ರಹಿಸಿ ಕೊಟ್ಟು ನೆರವಾದ

ರೆ ಸರಕಾರಿ ಹಣದ ಸದ್ವಿನಿಯೋಗವಾಗುವದು. ದೇಸಾಯಿಯ ಹಣಗಾಣಿಕೆ ತೀರಿದ ಬಳಿಕ ಉಳಿಯುವ ಸಮಯದಲ್ಲಿ ಗ್ರಾಮದ ಪರಿಸ್ಥಿತಿಯ ಮೇಲಿಂದಲೂ, ಊರವರ ನಡೆನುಡಿಗಳ ಮೇಲಿಂದಲೂ ಏನಾದರೊಂದು ದೇಸಾಯಿಗಾರರಿಗೆ ಪ್ರಯೋಜನ ಸಿಗುವ ಕೈಗಾರಿಕೆಯನ್ನು ಈ ಪ್ರಯೋಗದವರು ಶೋಧಿಸಿ ತೆಗೆಯಲಿಕ್ಕೂ ಅನುಕೂಲವಿದೆ. ಸರಕಾರವು ಇವರಿಗೆ ಸಹಾಯವನ್ನು ಉಚಿತವಾಗಿ ಕೊಡಬೇಕೆಂದು ನಮ್ಮ ಹೇಳಿಕೆ ಇಲ್ಲ; ಧರ್ಮ ಕೊಳ್ಳುವದು ಯಾವಾಗಲೂ ಭೂಷಣವಲ್ಲ. ದೇಸಾಯಿ ಶಿಕ್ಷಣ ಪಡೆದು ವಿಶೇಷ ಲಾಭವನ್ನು ಸಿದ್ಧಗೊಳಿಸಲು ಮುಂದಾದವರಂತೂ ಧರ್ಮಾರ್ಥ ಹಣವನ್ನು ಬೇಡಲಾರರು. ಪ್ರಯೋಗಗಳಿಂದ ಸಿಕ್ಕಿದ ವಿಶೇಷ ಉತ್ಪನ್ನದಿಂದ ಸರಕಾರವು ಈ ಹಣವನ್ನು ಕ್ರಮವಾಗಿ ತೀರಿಸಿಕೊಳ್ಳಬೇಕು. ಹೀಗೆ ಪ್ರಯೋಗಗಳನ್ನು ನಡಿಸಿದರೆ ದೇಸಾಯಿಯ ಉದ್ಧಾರವಾದೀತೆಂದು ನಮ್ಮ ಅಭಿಪ್ರಾಯ. ಸರಕಾರವು ಈ ಯೋಜನೆಯ ಪ್ರಯೋಗ ಮಾಡಿ ನೋಡಬಹುದಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆ, ಮಡಿವೆ-ಮುಂಜಿಗಳು ಗುತ್ತಿನ, ಅಕ್ಕಿಯ ದರವು ಇಳಿದಿದೆ. ಗಿರಾಕಿ ಕಡಿಮೆ. ಸ್ಟಾಂಡರ್ಡ ಆಯಿಲ್ ಕಂಪನಿಯ ಪೆಟ್ರೋಲ ಎಣ್ಣೆ ತುಂಬಿಬಂದ ಮಚ್ವೆಯೊಂದು ಇಲ್ಲಿಯ ಸಂಗಮದಲ್ಲಿ ಮಂಗಳವಾರ ರಾತ್ರ ಮುಳುಗಿತು. ಮುನಿಸಿಪಾಲಿಟಿಯವರು ಹೊನ್ಮಾಂವ ಮಾರ್ಗ ರಚನೆಗಾಗಿ ಗುಂಡುಗಲ್ಲುಗಳನ್ನು ಸಂಗ್ರಹಿಸಲಾರಂಭಿಸಿದ್ದಾರೆ. ಕಡಗಲ್ಲಿಗೆ ಬರಗಾಲವಂತೇ?

ಶ್ರೀ ಕಾಪ್ಪೂರ ಕಾಮಾಕ್ಷಿ ದೇವಾಲಯದ ಜೀರ್ಣೋದ್ಧಾರ ಪ್ರತಿಷ್ಠೆ ಸಮಾರಂಭವು ಗುರುವಾರಕ್ಕೆ ವಿಜೃಂಭಣೆಯಿಂದ ನೆರವೇರಿತು. ಪ್ರತಿಷ್ಠೆಗಾಗಿ ಊರು-ಪರಊರುಗಳಿಂದ ಭಕ್ತರನೇಕರು ಈ ಮಹೋತ್ಸವಕ್ಕಾಗಿ ಸೇರಿದ್ದರು. ಮಹೋತ್ಸವವೇ ಇದು! ಶ್ರೀ ಸಂಸ್ಥಾನದ ಇತಿಹಾಸದಲ್ಲಿ ಈ ಸಮಾರಂಭವು ಅತ್ಯಾನಂದದಾಯಕವಿದೆ. ೧೧ ವರ್ಷಗಳ ಹಿಂದೆ ಜೀರ್ಣೋದ್ಧಾರದ ಸಂಕಲ್ಪ ಮಾಡಿ ಶ್ರೀ ದೇವಿಯನ್ನು ಹೊರತಂದಿಟ್ಟು ಭಕ್ತರ್‍ಯಾರೂ ಕಳೆದ ಗುರುವಾರದ ದಿನವು ಅಷ್ಟು ವೈಭವಪೂರ್ಣವಾಗುವದೆಂದು ಸ್ವಪ್ನದಲ್ಲಿ ಸಹ ಎಣಿಸಿದ್ದಿಲ್ಲ. ಯೋಗ್ಯ ವ್ಯವಸ್ಥಾಪಕರ ಅಭಾವದಿಂದಲೂ, ದ್ರವ್ಯಾಭಾವದಿಂದಲೂ ೨೦-೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿದ ಸಭಾಮಂಟಪ-ಗೋಪುರ ಮುಂತಾದ ಮಂದಿರಗಳನ್ನು ನೋಡಿದರೆ, ನಿಜವಾಗಿ ಶ್ರೀ ದೇವಿಯೇ ಕಾಲಕಾಲಕ್ಕೆ ಮನುಷ್ಯ ಹಾಗು ದ್ರವ್ಯಸಹಾಯವನ್ನು ಕಲ್ಪಿಸಿ ಈ ಕಾರ್ಯವನ್ನು ಕಡೆಗಾಣಿಸಿಕೊಂಡಿರಬೇಕೆಂದೂ, ಪ್ರತ್ಯಕ್ಷ ವ್ಯವಸ್ಥಾಪಕರು ನಿಮಿತ್ತಮಾತ್ರರೆಂದೂ ಹೇಳಲಡ್ಡಿಯಿಲ್ಲ. ಅಷ್ಟು ಪ್ರಚಂಡ ಅವಸ್ಥಾಂತರವು ಶ್ರೀ ದೇವಾಲಯದಲ್ಲಿ ಉಂಟಾಗಿದೆ. ಸಂತರ್ಪಣೆ, ಉತ್ಸವ, ಅವಭೃಥ ಮುಂತಾದ ಸಮಾರಂಭಗಳು ಯಥಾಸಾಂಗ ನೆರವೇರಿ ಶ್ರೀ ದೇವಿಯು ಭೈರವನ ಹಿರಿದ ಪೀಠದ ಮೇಲೆ ಪುನಃ ವಿರಾಜಮಾನಳಾಗಿದ್ದಾಳೆ. ಈ ಸಮಾರಂಭದಿಂದ ಶ್ರೀ ದೇವಿಯು ಸಂತೋಷಪಟ್ಟು ಭಕ್ತರಿಗೂ, ಇತರರಿಗೂ ಐಹಿಕ ಪಾರಮಾರ್ಥಿಕ ಸುಖವನ್ನು ದಯಪಾಲಿಸಲೆಂದು ಶ್ರೀ ದೇವರಲ್ಲಿ ಪ್ರಾರ್ಥನೆಯಾಯಿತು.

ಹೊನ್ನಾವರ— ಈ ಶಾಲೆಯಿಂದ ಮುಲ್ಕಿ ಪರೀಕ್ಷೆಗೆ ಹೋದವರಲ್ಲಿ ಈ ಮುಂದಿನ ಮೂವರು ತೇರ್ಗಡೆಹೊಂದಿದ್ದಾರೆ. (೧) ಮಂಜುನಾಥ ತಿಮ್ಮಪ್ಪಯ್ಯ ಬೈಲೂರ (೨) ಬಸಪ್ಪ ಮುತ್ತಪ್ಪ, (೩) ಜಾನಮಾರ್ಟಿನ ಬಸ್ತ್ಯಾಂವ ಸೋಜ

ಶಿರಸಿ— ಕೆಲ ಜಾತಗಾರರು ೮-೧೦ ದಿನ ಹಗಲು ವೇಷ ಹಾಕಿಕೊಂಡು ಹೀನ ಪ್ರಕಾರದ ವಿನೋದ ಚೇಷ್ಟೆ ಮುಂತಾದವುಗಳನ್ನು ನಡಿಸಿ, ಕೆಲವು ಹಣ ಸಂಗ್ರಹಿಸಿಕೊಂಡು ಹೋದರು. ಇವರು ಬೋಧಕರವಾದ ವಿನೋದ ಮಾಡಿದ್ದರೆ ಜನರಿಗೆ ಲಾಭವಾಗುತ್ತಿತ್ತು.

ರೇಡಿಯೋ ತರಿಸಿ ೫-೬ ತಿಂಗಳಾದವು. ಸರಿಯಾಗಿ ೧ ತಿಂಗಳು ಸಹ ಇದು ನಡೆಯಲಿಲ್ಲ. ಏನಾಯಿತೆಂಬದು ತಿಳಿಯುವದಿಲ್ಲ. ಚಾಲಕರು ಬೇಸತ್ತರೆಂದು ಒಂದು ಸುದ್ದಿ! ಶ್ರೋತೃಗಳಿಗೆ ಬೇಸರ ಹುಟ್ಟಿತೆಂದು ಇನ್ನೊಂದು ಸುದ್ದಿ! ಯಂತ್ರದ ಪ್ರಾಣವಿಸರ್ಜನೆಯಾಯಿತೆಂದು ಮತ್ತೊಂದು ಸುದ್ದಿ!! ಲೋಕೋಪಕಾರಕ್ಕಾಗಿ ಹಣ ಕೊಟ್ಟು ಈ ಯಂತ್ರ ತರಿಸಲು ನೆರವಾದ ಮುನಿಸಿಪಾಲಿಟಿಯು ಈಗ ಇದರ ಗೊಡವೆಗೆ ಹೋಗುವದಿಲ್ಲೆಂದು ಜನರು ಹೇಳುತ್ತಾರೆ. ವಿಲಾಯತಿಯೊಳಗಿಂದ ಯಂತ್ರಸಾಮಗ್ರಿ ತಂದ ಕೂಡಲೆ ಲೋಕೋಪಕಾರದ ಪರಮಾವಧಿಯಾಯಿತೆಂದು ಇಲ್ಲಿಯ ಸ್ಥಾನಿಕ ಸ್ವರಾಜ್ಯಧುರಂಧರರ ಅಭಿಪ್ರಾಯವಾಗಿರಬೇಕಂತೆ! ಹ್ಯಾಗೂ ಮಾಡಿ ನಮ್ಮ ಕಡೆಯಿಂದ ವಿಲಾಯತಿಗೆ ದುಡ್ಡು ಹೋದರಾಯಿತು.

ಸ್ಕೂಲ ಬೋರ್ಡಿನ ಎಡ್ಮಿನಿಸ್ಟ್ರೇಟರ ಮಿ। ನಮಲಗುಂದರೆಂದು ಈಗ ಎಲ್ಲರಿಗೆ ಪ್ರಸಿದ್ಧವಾಯಿತು. ಸಾಹೇಬರ ಇಲ್ಲಿಯ ಪ್ರಾಥಮಿಕ ಶಾಲೆಗಳಿಗೆ ಬಂದು ಹುಕುಮು ಕೊಟ್ಟು ಬೇಸಿಗೆ ರಜೆ ರದ್ದು ಮಾಡಿದ್ದಾರೆ. ಪ್ಲೇಗಿನ ನಿಮಿತ್ತ ಶಾಲೆಗಳಿಗೆ ರಜೆ ಸಿಕ್ಕಿದ್ದರಿಂದ ಹಿಂದ ಬಿದ್ದ ಅಭ್ಯಾಸವನ್ನು ತುಂಬಲಿಕ್ಕೆ ಅಭಿಲಾಷೆಯಿಂದ ಇದೇ ಮೇ ತಿಂಗಳಲ್ಲಿ ಒಪ್ಪತ್ತು ಶಾಲೆ ನಡಿಸಬೇಕೆಂದು ಹುಕುಮು ಆಗಿದೆ. ಶಿಕ್ಷಕರು ಸಾಹೇಬರಿಗೆ ರಿಪೋರ್ಟ ಮಾಡಿ ತಮ್ಮ ಅಡಚಣಿಗಳನ್ನು ತಿಳಿಸಿದ್ದಾರೆ. ಅಭ್ಯಾಸ ಸಾಗುವದರ್ದೇನೋ ನಿಜ. ಊರಲ್ಲಿ ಕಳೆದ ೬-೮ ತಿಂಗಳುಗಳಿಂದ ಒಂದಿಲ್ಲೊಂದು ಸಾಂಕ್ರಾಮಿಕ ರೋಗವಿದ್ದದರಿಂದ ಹುಡುಗರು ಸರಿಯಾಗಿ ಶಾಲೆಗೆ ಬರಲಿಲ್ಲ. ಇದನ್ನು ಒಪ್ಪತ್ತು ಶಾಲೆಯಿಂದ ತುಂಬಿ ತರುವದು ಸಾಧ್ಯವಿಲ್ಲ. ಶಿಕ್ಷಕರಿಗೆ ಸಂಸಾರದ ಸ್ಥಿತಿ ಮಾಡುವದಕ್ಕಾಗಿ ೧ ತಿಂಗಳ ರಜೆ ಬೇಕಾಗುತ್ತದೆ. ಮುನಿಸಿಪಾಲಿಟಿಯವರು ಹ್ಯಾಸ್ಕೂಲಿನ ರಜೆಯು ತಪ್ಪಿಸಲಿಲ್ಲ. ಇತ್ಯಾದಿ ಬರೆದು ನಮ್ರರಾಗಿಂದ ಸಾಹೇಬರಿಗೆ ಅನುಗ್ರಹಿಸಲು ಪ್ರಾರ್ಥಿಸಲಾಗಿದೆ.

ಮೋಟಾರ ಅಪಘಾತ ಪ್ರಕರಣದ ಮಾಸ್ತರ ಡ್ರೈವ್ಹರನಿಗೆ ೬ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು.

ವೃತ್ತಸಾರ.

— ಸಿಂಧ ಹೈದರಾಬಾದದಲ್ಲಿ ಎಕ್ಸಿಕ್ಯುಟಿವ್ಹ ಇಂಜನಿಯರಾದ ಮಿ। ದಹಾಣುಕರರು ತಮ್ಮ ಮಗನಿಗೆ ೩೫ ಸಾವಿರ ರೂಪಾಯಿ ವರದಕ್ಷಿಣೆ ಪಡಕೊಂಡು ಮದುವೆ ಮಾಡಲುದ್ಯುಕ್ತರಾದ ಬಗ್ಗೆ ಅಲ್ಲಿಯ ವರದಕ್ಷಿಣೆ ವಿರೋಧಕ ಮಂಡಳದವರು ಮದುವೆಯ ಸಮಾರಂಭವನ್ನು ಬಹಿಷ್ಕರಿಸಬೇಕಾಗಿ ನಿರ್ಧರಿಸಿದ್ದಾರೆ. ನರ್ಮದಾಬಾಯಿ ಎಂಬ ಹೆಣ್ಣುಮಗಳು ತನ್ನ ಗಂಡನ ಮೇಲೂ ಅತ್ತೆ-ಮಾವಂದಿರ ಮೇಲೂ ಒಂದು ದಾವೆಯನ್ನು ಮುಂಬಯಿ ಹೈಕೋರ್ಟಿನಲ್ಲಿ ದಾಖಲಪಡಿಸಿದ್ದಾಳೆ. ಮದುವೆಯ ಸಮಯದ ತಾನು ಬೇರೆ ಮದುವೆಯಾಗಲಿಕ್ಕಿಲ್ಲವಾಗಿ ವಚನ ಕೊಟ್ಟ ತನ್ನ ಗಂಡಂದಿರು ಈಗ ಎರಡನೇ ಮದುವೆಯನ್ನು ಮಾಡಿಕೊಳ್ಳಲುದ್ಯುಕ್ತರಾಗಿದ್ದಾರೆಂದೂ, ಹಾಗೆ ಮಾಡಲಿಕ್ಕೆ ಅವರಿಗೆ ಹಕ್ಕಿಲ್ಲವಾಗಿಯೂ ಸಾಧಿಸಿ, ಎರಡನೇ ಮದುವೆ ಮಾಡಿಕೊಳ್ಳದಂತೆ ಕಾಯಂ ತಾಕೀತು ಪಡಕೊಳ್ಳಲು ಈ ದಾವೆಯಾದೆ.

— ಗೋಳಮೇಜಪರಿಷತ್ತಿನಲ್ಲಿ ಪಂಡಿತ ಅನಂತಶಯನ ಅಯ್ಯಂಗಾರ ಪ್ರಭೃತಿಯವರಿಗೆ ಸರಿಹಿಡಿದು ಹದ್ದುಪಾರು ಮಾಡಿದ ವಿಷಯ ಭಾರತ ಮಂತ್ರಿಗಳು ಪರಾಂಷ್ಟ್ರೀಯ ಪ್ರಧಾನರ ಬಳಿ ಚರ್ಚೆ ನಡಿಸುತ್ತಿದ್ದಾರೆಂದು ಪಾರ್ಲಿಮೆಂಟಿನಲ್ಲಿ ಕೇಳಲಾಗಿದೆ.

— ಜೈನ ಸಮಾಜದ ಪ್ರಮುಖ ಗುರುವಾದ ಶ್ರೀ ಶ್ರವಣಬೆಳ್ಗೊಳದ ಉತ್ತರಾಧಿಕಾರಿಗಳಾಗಿ ಸ್ವಸ್ತಿ ಶ್ರೀ ಚಾರುಕೀರ್ತಿ ನೇಮಿಸಾಗರಸ್ವಾಮಿಗಳವರಿಗೆ ಇದೇ ಬರುವ ವೈಶಾಖ ಶು। ೧೩ ಕ್ಕೆ ಪಟ್ಟಾಭಿಷೇಕವಾಗುವದು. ಶ್ರೀ ನೇಮಿಸಾಗರ ಸ್ವಾಮಿಗಳು ಸದ್ಗುಣಿಕರೂ ಸಚ್ಛೀಲರೂ, ಜೈನಧರ್ಮ ಗ್ರಂಥಗಳಲ್ಲಿ ಪಾರಂಗತರೂ ಆಗಿದ್ದು, ಈಗಿನ ಕಾಲದಲ್ಲಿ ಜೈನ ಸಮಾಜಕ್ಕೆ ತಕ್ಕ ಉಪದೇಶವನ್ನು ಕೊಟ್ಟು ಉದ್ಧರಿಸಲು ಸರ್ವಥೈವ ಅರ್ಹರಿದ್ದಾರೆ. ಮೂಡಬಿದ್ರೆ ಮುಂತಾದ ಕಡೆಗಳಲ್ಲಿ ವಿದ್ಯಾಲಯಗಳನ್ನೇರ್ಪಡಿಸಿ, ಧರ್ಮಪ್ರಚಾರದ ಕಾರ್ಯಕ್ಕೆ ಒಹುಮಟ್ಟಿಗೆ ಕಾರಣರಿದ್ದಾರೆ. ಕನ್ನಡ, ಹಿಂದಿ, ತಮಿಳ, ತುಳು, ಸಂಸ್ಕೃತ ಈ ೫ ಭಾಷೆಗಳಲ್ಲಿ ಶ್ರೀಗಳು ಪ್ರವೀಣರಿದ್ದು, ಕೊಂಚ ಇಂಗ್ಲೀಷೂ ಬಲ್ಲವರು. ಶ್ರೀಗಳು ನಿಸ್ಪೃಹಸ್ವಭಾವದವರು. ಮಠದ ಉತ್ಪನ್ನವೆಲ್ಲ ಧರ್ಮಕಾರ್ಯಗಳಿಗೂ, ವಿದ್ಯೋನ್ನತಿಗೂ ಉಪಯೋಗಿಸಬೇಕಾಗಿಯೂ, ತಮ್ಮ ಸುಖಕ್ಕೆ ಈ ಹಣದ ವಿನಿಯೋಗವಾಗಬಾರದಾಗಿಯೂ ಶ್ರೀಗಳಿಗೆ ನಿಮಂತ್ರಣ ಕೊಡಹೋದ ಪ್ರಮುಖರಿಗೆ ಶ್ರೀಗಳು ಅಪ್ಪಣೆ ಮಾಡಿಸಿದ್ದಾರೆ. ಶ್ರೀಗಳ ಪಟ್ಟಾಭಿಷೇಕ ಮಹೋತ್ಸವದ ಪ್ರೀತ್ಯರ್ಥ ಶ್ರೀ ಮಠದಲ್ಲಿ ಶ್ರೀ ವೃಷಭಸ್ವಾಮಿಯವರಿಗೆ ೧೦೮ ಕಲಶಗಳಿಂದ ನಾಂದೀ ಮಂಗಲ ಪೂಜೆ, ಲಘುಶಾಂತಿ ಹೋಮ, ಸಿಂಹಾಸನಾರೋಹಣ ಪಟ್ಟಾಭಿಷೇಕ ಮಹೋತ್ಸವ, ಜೈನ ಮಹಾಸಭೆ, ಶ್ರೀ ಶಾರದಾ ದೇವಿಯ ವಿಹಾರಮಹೋತ್ಸವ, ಜಿನಗುಣಸಂಪತ್ತಿಯ ಆರಾಧನೆ, ವಿಂಧ್ಯಗಿರಿಯ ಶ್ರೀ ಗೊಮ್ಮಟೇಶ್ವರ ಸ್ವಾಮಿಗಳಿಗೆ ಅಷ್ಟೋತ್ತರ ಸಹಸ್ರ ಘಟಗಳಿಂದ ಮಹಾಭಿಷೇಕೋತ್ಸವ, ಚತುಸ್ಸಂಗ ಪೂಜೆ, ಸಂತರ್ಪಣೆ ಮುಂತಾದವುಗಳು ನಡೆಯುವವು.

— ಬಿಹಾರ ಸರಕಾರವು ಸೈಮನ್ ಕಮಿಟಿಗೆ ಸಾದರಪಡಿಸುವದಕ್ಕಾಗಿ ಕೈಪಿಯತನ್ನು ತಯಾರಿಸುತ್ತಿರುವದಂತೆ! ಅದರೊಳಗೆ ಜನತೆ ಇನ್ನೂ ಸ್ಥಾನಿಕ ಸ್ವರಾಜ್ಯ ನಡಿಸಲಿಕ್ಕೂ ಅನರ್ಹರೆಂದು ಪ್ರತಿಪಾದಿಸಿ, ಅದಕ್ಕಾಗಿ ಸರಕಾರಿ ದಾಖಲೆಗಳ ಮೇಲಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಪ್ರಜಾಪ್ರತಿನಿಧಿಗಳು ನಡಿಸಿದ ವಂಚನೆಗಳ ಪ್ರಮಾಣ ನಮೂದಿಸುವದಂತೆ! ಹೇಗೂ ಆಗಲಿ, ಸ್ಥಾನಿಕ ಸ್ವರಾಜ್ಯದ ಸ್ವರಾಜ್ಯ ಒಲ್ಲ ತಾಳದು ಹೋದದ್ದೇ ಸದಿನ. ಈ ಸ್ವರಾಜ್ಯವು ಬೇಡ, ಈ ಸ್ವರಾಜ್ಯದೊಳಗಣ ಪಾರತಂತ್ರ್ಯವೂ ಬೇಡ.

— ಹುಬ್ಬಳ್ಳಿಯೊಳಗೆ ಕರ್ನಾಟಕ ಹಿಂದೀ ಸಮ್ಮೇಲನವು ಇದೇ ಬರುವ ಜೂನ ತಿಂಗಳಲ್ಲಿ ಸೇರುವ ಸಿದ್ಧತೆ ನಡೆದಿದೆ. ಶ್ರೀ। ವಿಳೇಕಂಗಡಿಯವರು ಸ್ವಾಗತ ಮಂಡಳದ ಅಧ್ಯಕ್ಷರಾಗಿದ್ದಾರೆ.

— ಮುಂಬಯಿಯಲ್ಲಿ ೮೦ ಗಿರಣಿಗಳ ೧॥ ಲಕ್ಷ ಕಾಮಗಾರರು ಸಂಪ ಮಾಡಿದ್ದಾರೆ. ಪೋಲೀಸರಿಗೂ, ಸಂಪಗಾರರಿಗೂ ಕಲಹವಾಗಿ ಸಂಪಗಾರರಮೇಲೆ ಗುಂಡು ಹಾರಿಸಲಾದವು. ಪ್ರಾಂತಾಧಿಪರು ಮುಂಬಯಿಗೆ ಹೋಗಿ ಈ ವಿಷಯ ಸರಕಾರ ಹಾಗು ಕಾರ್ಖಾನಾದಾರ ಪ್ರಮುಖರೊಡನೆ ಆಲೋಚಿಸುತ್ತಾರೆ. ಅನೇಕ ಕಾಮಗಾರರು ಗಂಟು ಮೂಟೆ ಕಟ್ಟಿಕೊಂಡು ಗ್ರಾಮಗಳಿಗೆ ಹೋಗಲಾರಂಭಿಸಿದ್ದಾರೆ.

— ನಾವು ಈ ವರುಷ ಯುರೋಪ ಖಂಡಕ್ಕೆ ಹೋಗುತ್ತಿಲ್ಲವಾಗಿ ಮಹಾತ್ಮರು ಪ್ರಕಟಿಸಿದ್ದಾರೆ.

— ಮಹಾತ್ಮರ ಕಕ್ಕನ ಮಗಂದಿರರಾದ ಶ್ರೀ। ಮಗನಲಾಲ ಗಾಂಧಿಯವರು ಪಾಟ್ನಾ ಪಟ್ಟಣದಲ್ಲಿ ಜ್ವರಗ್ರಸ್ತರಾಗಿ ತೀರಿಕೊಂಡರು. ಮಹಾತ್ಮರಿಗೆ ಶ್ರೀ। ಮಗನಲಾಲರು ಪ್ರತಿಯೊಂದು ಕಾರ್ಯದಲ್ಲಿ ನೆರವಾಗುತ್ತಿದ್ದರು. ಸತ್ಯಾಗ್ರಹಾಶ್ರಮದ ಚಾಲಕರೂ ಅವರೇ. ಅಖಿಲ ಭಾರತೀಯ ಖಾದಿ ಸಂಘದ ಪ್ರಾಣರೂ ಅವರು. ಮಹಾತ್ಮರು ಅವರ ನಿಧನದಿಂದ ಉಂಟಾದ ನಷ್ಟವನ್ನು ವರ್ಣಿಸಿ ಬರೆದದ್ದೇನಂದರೆ ‹ನನ್ನ ಕೈ-ಕಾಲು ಕಣ್ಣುಗಳೋಪಾದಿಯಲ್ಲಿ ಅವನು ನನಗೆ ಸಹಾಯ ಮಾಡಿದ್ದಾರೆ. ಇಂಥ ದಕ್ಷ ದೇಶಸೇವಕರು ಇಳದ ವಾರದಲ್ಲಿ ಕಾಲವಾದರು. ಪರಮಾತ್ಮನೇ ಭಾರತೀಯರಿಗೆ ಕಾಯಬೇಕು›

ಬಾರ್ಡೋಲಿಯ ರಣರಂಗ.

ಬಾರ್ಡೋಲಿ ತಾಲೂಕಿನಲ್ಲಿ ಸರಕಾರವೂ, ಸತ್ಯಾಗ್ರಹಿಗಳೂ ಪೂರ್ವತಯಾರಿ ಮಾಡಿ ಮಲ್ಲಯುದ್ಧದಲ್ಲಿ ತೊಡಗುತ್ತಿದ್ದಾರೆ ತೀರ್ವೆ ವಸೂಲಿಗೆ ಅವಶ್ಯವುಳ್ಳ ವಿಶೇಷ ಬಂದೋಬಸ್ತವನ್ನು ಜರುಗಿಸುವದಕ್ಕಾಗಿ ಇಷ್ಟು ಆಫೀಸರರಿಗೆ ನೇಮಿಸಲಾಗಿದೆ. ಕಲೆಕ್ಟರರೂ, ಕಮಿಶನರರೂ ಬೇಸಿಗೆಯ ವಿಶ್ರಾಂತಿಸ್ಥಾನಗಳನ್ನು ತ್ಯಜಿಸಿ. ಬಾರ್ಡೋಲಿ ತಾಲೂಕಿಗೆ ಹೋಗಿದ್ದಾರೆ. ಬಾರ್ಡೋಲಿ ತಾಲೂಕ ಕಚೇರಿಯು ತೀರ್ವೆಯನ್ನು ಶಾಯಿದೆಯಂತೆ ವಸೂಲ ಮಾಡುವ ಆಲೋಚನೆ ನಡೆಯಿತು ಪೋಲೀಸರೂ, ಅಬಕಾರಿ ಅಧಿಕಾರಿಗಳೂ ಈ ತಾಲೂಕಿನಲ್ಲಿಯೇ ಸಂಚರಿಸುತ್ತಿದ್ದಾರೆ. ತಾಲೂಕಿನೊಳಗಿನ ಹಳ್ಳಿಗಳಿಗೆಲ್ಲ ಕರಕಂಡು ಜಪ್ತಿಯ ಕ್ರಮಗಳು ವಿವರಿಸಲ್ಪಡುತ್ತಿವೆ ಕಲೆಕ್ಟರರು ಸ್ವತಃ ಗ್ರಾಮಗಳಲ್ಲಿ ಸಂಚರಿಸುತ್ತಿದ್ದಾರೆ ಜಪ್ತಿ ಮಾಡಿ ತಂದ ಜಿಂದಿಗೆಯನ್ನು ಒಯ್ಯಲು ೬ ಮೋಟಾರ ಬಂಡಿಗಳು ತರಿಸಲ್ಪಟ್ಟಿವೆ ಈ ಬಂಡಿಗಳ ಪೂರ್ವಚರಿತ್ರೆಯು ಚಿತ್ತವೇಧಕವಿದೆ. ಈ ಬಂಡಿಗಳಿಂದ ಅಪಘಾತಗಳು ಬಹಳವಾಗಿದ್ದರಿಂದ ಇವುಗಳಿಗೆ ಲೈಸನ್ಸು ಸಿಕ್ಕಿದ್ದಿಲ್ಲ; ಈಗ ಈ ವಾಹನವೆಲ್ಲ ಸರಕಾರ ಕೊಡಲ್ಪಟ್ಟು, ಅವರಿಗೆ ಜಿಂದಿಗೆ ಒಯ್ಯಲು ಲೈಸನ್ಸು ಕೊಡಲ್ಪಟ್ಟಿದೆ ಈ ಮೋಟಾರಿನವರಿಗೆ ಬಾರ್ಡೋಲಿಯವರು ಬಹಿಷ್ಕಾರ ಹಾಕದಂತೆ ಅವರ ಮೇಲೆ ಸಶಸ್ತ್ರ ಪೋಲೀಸರ ಕಾವಲ ಕಾಯಲಾಗಿದೆ

ಅತ್ತ ಪ್ರಜೆಗಳ ಸಂಘಟನೆಯು ರಭಸದಿಂದ ನಡೆದಿದೆ. ಗ್ರಾಮಗಳೊಳಗಿನ ಮಹಾಜನ ಸಂಸ್ಥೆಗಳು ಸಭೆಸೇರಿ ಜಪ್ತಿಯ ಕ್ರಮದಲ್ಲಿ ನೆರವಾಗದಂತೆ ಜಾತಿಯವರಿಗೆ ಆಜ್ಞಾರಯಗಳನ್ನು ಹೊರಡಿಸಿ ಪೇಟೆಯನ್ನು ಹಗಲಿ ಮುಚ್ಚಿ, ರಾತ್ರಿ ೭ರಿಂದ ೧೨ ಘಂಟೆಯ ತನಕ ವ್ಯಾಪಾರ ನಡಿಸಬೇಕೆಂದೂ, ಗೊತ್ತಾಗಿದೆ. ಸ್ವಯಂಸೇವಕ ಪಥಕದವರು ಗ್ರಾಮದ ಕಾವಲು ಮಾಡಿ ಜನರಿಗೆ ಆಗಿಂದಾಗ ಅವಶ್ಯವುಳ್ಳ ಸಂಗತಿಗಳನ್ನು ತಿಳಿಸುತ್ತಾರೆ. ಬಾರ್ಡೋಲಿಗೆ ಹೋದ ದಿನವೇ ಕಲೆಕ್ಟರರಿಗೆ ಸಂಚಾರಕ್ಕೆ ಹೋಗಲು ಒಂದು ಮೋಟಾರು ಬೇಕಾಗಿತ್ತು, ಒಂದು ಮೋಟಾರನ್ನು ಸಂಪಾದಿಸಬೇಕಾದರೆ, ಪೋಲೀಸರಿಗೂ, ಕಚೇರಿಯವರಿಗೂ ಸಾಕುಬೇಕಾಯಿತು. ಕಲೆಕ್ಟರರು ವಾಹನವಿಲ್ಲದಾಗ ಕರಕೊಂಡು ಸುರಭೋಂ ಗ್ರಾಮಕ್ಕೆ ಹೋದರು. ಗ್ರಾಮದ ಪಟೇಲರು ತೀರ್ವೆ ಕೊಟ್ಟಿದ್ದಿಲ್ಲ; ಕಲೆಕ್ಟರರು ಅವರಿಗೆ ಹೆದರಿಸಿದರು. ಪಟೇಲರು ತೀರ್ವೆ ಏರಿಕೆಯು ಯೋಗ್ಯ ಸರಿಯಾಗಿ ನಡೆದಿರುವದಿಲ್ಲವಾಗಿ ಹೇಳಿ, ವಸ್ತುಸ್ಥಿತಿಯನ್ನು ಸರಕಾರಕ್ಕೆ ತಿಳಿಸಿ, ಈ ಸಂಕಟದೊಳಗಿಂದ ಪ್ರಜೆಗಳಿಗೆ ಕಾಯಲು ಹೇಳಿದರು. ಪುನರಾಲೋಚನೆ ಮಾಡುವದಿಲ್ಲವಾಗಿ ಕಲೆಕ್ಟರರು ಕಟ್ಟನೆ ಹೇಳಿ, ಜನರಿಂದ ತೀರ್ವೆಯನ್ನು ವಸೂಲ ಕೊಳ್ಳಲು ಹೇಳಿದರು. ಇನ್ನೊಬ್ಬರಿಗೂ ಕಲೆಕ್ಟರರು ಹೆದರಿಸಿದರು ಅವರು ಕಲೆಕ್ಟರರಿಗೆ ಸ್ಪಷ್ಟೋಕ್ತಿಗಳಿಂದ ಸತ್ಕರಿಸಿಬಿಟ್ಟರು ಹೀಗೆ ಬಲಾತ್ಕಾರದಿಂದ ತೀರ್ವೆ ವಸೂಲ ಮಾಡಿದರೆ, ರಾಜ-ಪ್ರಜಾಧರ್ಮವು ಇನ್ನು ಮುಂದೆ ಉಳಿಯಲಿಕ್ಕಿಲ್ಲವಾಗಿಯೂ ಮುಂಜಾಗ್ರತೆ ಕೊಟ್ಟರು. ಪಾಟೀದಾರರಿಗೆ ಬಗಲಲ್ಲಿ ಸೇರಿಸಿಕೊಳ್ಳಲು ಸರಕಾರದಿಂದ ಪ್ರಯತ್ನಗಳಾಗುತ್ತಿವೆ. ಕರುಬು ಗುತ್ತಗಳನ್ನು ಇವರೊಳಗಿನವರು ಕೊಂಡದ್ದರಿಂದ ಅಬಕಾರಿ ಅಧಿಕಾರಿಗಳ ಕಡೆಯಿಂದಲೂ ಬಲಾತ್ಕಾರವಾಗಹತ್ತಿದೆ:— "ಈ ಅನ್ಯಾಯವನ್ನು ನಾವು ಸ್ವೀಕರಿಸಲಾರೆವು; ಸರಕಾರವು ಬಲಾತ್ಕಾರ ನಡಿಸಿದರೆ, ಅರಣ್ಯದಲ್ಲಿ ಹೋಗಿ ನಾವು ನಿರ್ವಾಹ ಸಾಗಿಸಬಲ್ಲೆವು," ಎಂದು ಬಟ್ಟು ಪಾಟೀದಾರ ಗೃಹಸ್ಥರು ಅಬಕಾರಿ ಅಧಿಕಾರಿಗಳಿಗೆ ಉತ್ತರವನ್ನಿತ್ತರು ಬುಜವುರದೊಳಗಿನ ಪಟೇಲರೂ ಪಾಟೀದಾರ ಗೃಹಸ್ಥರು. ಅವರ ಮನವೊಲಿಸಲು ಅನೇಕ ಅಧಿಕಾರಿಗಳು ಪ್ರಯತ್ನಿಸಿದರು. "ಆದರೆ, ಪಟ್ಟವುಂಟು ಆಫೀಸರರು ನಮ್ಮ ಗ್ರಾಮಕ್ಕೆ ಬರಲಿಲ್ಲ ನಮ್ಮ ಗ್ರಾಮದ ವಿಮೆಯು ಕಲುಗಾಡೆಯದು ಮೊದಲು ಇಲಿ ೬ ಸಾವಿರ ರೂಪಾಯಿ ತೀರ್ವೆ ಇತ್ತು, ಈಗ ೧೩ ಸಾವಿರಕ್ಕೇರಿಸಲ್ಪಟ್ಟಿದೆ. ಈ ಸಂಗತಿಯನ್ನೆಲ್ಲ ನಾನು ಕಲೆಕ್ಟರರಿಗೆ ತಿಳಿಸುತ್ತೇನೆ." ಎಂದು ಪಟೇಲರು ಶ್ರೀ॥ ವಲ್ಲಭಭಾಯಿಯವರಿಗೆ ಹೇಳಿದರು. ವೇದಚ ಗ್ರಾಮದಲ್ಲಿಯೂ ಜನರು ಎಲ್ಲ ತಯಾರಿ ಮಾಡಿದ್ದಾರೆ. ಇಲ್ಲಿಯೂ ಪಟ್ಟವುಂಟು ಆಫೀಸರರು ಹೋಗಲಿಲ್ಲ. ರಾಣೀಪ್ರಜ ಜಾತಿಗಾಗಿ ಸ್ವರಾಜ್ಯ ಆಶ್ರಮವೊಂದು ಇಲ್ಲಿ ತೆರೆಯಲಾಯಿತು.

ಸರಕಾರವು ಜಪ್ತಿಯ ಕ್ರಮಗಳನ್ನು ಕಳೆದ ವಾರದಲ್ಲಿ ಪ್ರಾರಂಭಿಸಿತು. ಮಾಮಲೇದಾರರು ತಲಾಟಿ, ಮುಖಿ ಹಾಗು ಪೋಲೀಸರನ್ನು ಕರಕೊಂಡು ಜಪ್ತಿಯ ಕ್ರಮವನ್ನು ನಡಿಸುತ್ತಾರೆ. ಪಂಚರೊಬ್ಬರೂ ಸಿಗುವದಿಲ್ಲ. ವಾಡಿವಾಲಾ ಎಂಬವರು ತೀರ್ವೆ ಕೊಡಬೇಕಾಗಿತ್ತು ಆದಕ್ಕಾಗಿ ಅವರ ವಿಧವೆ ತಾಯಿಯ ಎಮ್ಮೆಗಳು ಜಪ್ತ ಮಾಡಲಾದವು. ಬಳಿಕ, ತಪ್ಪು ಕಂಡು, ಆ ಎಮ್ಮೆಗಳು ಬಿಡಲ್ಪಟ್ಟವು ಚಮಗಾರರ ಅಂಗಡಿಗೆ ಹೋಗಿ ಬಂದು ಬಾಂಕು, ೩ ಪೆಟ್ಟಿಗೆಗಳು ಜಪ್ತ ಮಾಡಲಾದವು. ಪಂಚನಾಮೆಯಿಲ್ಲ, ಮುಂದಾಗಿ ನೋಟೀಸೂ ಇಲ್ಲ ಇಬ್ರಾಹಿಮ್ ಪಟೇಲ ಎಂಬ ಮುಸಲ್ಮಾನ ಗೃಹಸ್ಥರ ಮೇಲೆ ಸಾವಿರ ಅಸ್ತಿಯ ಜಪ್ತಿ ನೋಟೀಸು ಹೊರಡಿಸಿ ಸ್ವತಃ ಮಾಮಲೇದಾರರು ಹಚ್ಚಿದರು. ಕಾರಣವೇನು ತಿಳಿಯಲಿಲ್ಲ ವೇರಲೋತದಲ್ಲಿ ಡೆಪ್ಯುಟಿ ಕಲೆಕ್ಟರರು ಕಲೆಕ್ಟರರ ಪ್ರೇರಣೆಯಿಂದ ಕೇಂದಿ ಅಂಗಡಿಯಲ್ಲಿ ಹೋಗಿ ೪ ಸರಾಯಿ ಪೀಪಾಯಿಯನ್ನು ಜಪ್ತ ಮಾಡಿದರು. ನವಾಜಬಾಯಿ ಎಂಬ ಸ್ತ್ರೀಯು ಕೇಂದಿ ಅಂಗಡಿಯ ಗುತ್ತೇದಾರಳು. ಅವಳಿಗೆ ತೀರ್ವೆ ಕೊಡಲು ಎರಡರಿಯಿಂದ ಬೋಧಿಸಲಾಯಿತು. ಅವಳು ಕೇಳದ್ದರಿಂದ ಪೀಪಾಯಿಗಳು ಜಪ್ತ ಮಾಡಿ ಅಂಗಡಿಯಲ್ಲೇ ಇಡಲ್ಪಟ್ಟವು ಅವನ್ನು ಅಂಗಡಿಯಿಂದ ಒಯ್ಯದಿದ್ದರೆ, ತಾನು ಈ ಅಂಗಡಿಯನ್ನು ಇನ್ನು ಮುಂದೆ ನಡಿಸಲಿಕ್ಕಿಲ್ಲವಾಗಿ ಬಾಯಿಯವರು ಹೇಳಿದರು ಆದರೆ, ಕೂಲಿಕಾರರಿಲ್ಲ ಸಿಗುತ್ತಾರೆ? ಪೇಟೆಯನ್ನಿಟ್ಟು ಡೆಪ್ಯುಟಿ ಕಲೆಕ್ಟರರು ಹೋದರು.

ಅನ್ನೊಬ್ಬನು ತೀರ್ವೆ ಕೊಡಬೇಕಾಗಿತ್ತು ಹತ್ತಿ ತುಂಬಿಕೊಂಡು ಅವನು ಗಾಡಿ ಹೊಡಕೊಂಡು ಹೋಗುತ್ತಿದ್ದನು ಹತ್ತಿಯು ಜಪ್ತಾಗಿರುವದೆಂದು ಡೆಪ್ಯುಟಿ ಕಲೆಕ್ಟರರು ಹೇಳಿದೊಡನೆ ಗಾಡಿಕಾರನು ಎದುರಿಂದ ಇಳಿಗಿಳಿದು ಹೋಗಿಬಿಟ್ಟನು. ಪೇಟೆಯು ಗಾಡಿ ಹೊಡಕೊಂಡು ಹೋಗಬೇಕಾಯಿತು.

ಜನರು ಸರಕಾರಿ ಆಫೀಸರರಿಗೆ ಊಟದ ಹಾಗು ತಿಂಡಿಯ ಸಾಮಗ್ರಿಗಳನ್ನು ಸಹ ಪೂರೈಸಬಾರದೆಂದು ಆಲೋಚಿಸಿದ್ದರು, ಆದರೆ, ಅದು ಧರ್ಮವಲ್ಲವಾಗಿ ಶ್ರೀ॥ ವಲ್ಲಭಭಾಯಿ ಪಟೇಲರವರು ಹೇಳಿದ್ದರಿಂದ ಆ ವಿಚಾರವು ತ್ಯಜಿಸಲಾಗಿದೆ ಹಂಡದ ಅಂಗಡಿಯಲ್ಲಿ ಪೀಪಾಯಿಯನ್ನು ಜಪ್ತ ಮಾಡಿದ ಡೆಪ್ಯುಟಿ ಕಲೆಕ್ಟರರಿಗೆ ಶ್ರೀ॥ ಶಿವಾನಂದರೆಂಬ ಸ್ವಯಂಸೇವಕರೇ ಕೃಷಿಗೆ ತಂದುಕೊಟ್ಟರು ಶಿವಾನಂದರು ಗ್ರಾಮದಲ್ಲಿ ಚೊಕ್ಕ ವ್ಯವಸ್ಥೆಯನ್ನಿಟ್ಟಿರುವದಾಗಿ ಡೆಪ್ಯುಟಿ ಕಲೆಕ್ಟರರಾದ ಮಿ॥ ಅಲ್‌ಮೌಲಾರವರೇ ಪ್ರಶಂಸಿಸಿದ್ದಾರೆ. ಶ್ರೀ॥ ಪಟೇಲ ಪ್ರಭೃತಿ ಮುಂದಾಳುಗಳು ಜನರಿಗೆ ನಿಶ್ಚಯಮನಸ್ಕರಾಗಿ ಇರಿಯಲು ಬೋಧಿಸುತ್ತಿದ್ದಾರೆ. ಸತ್ಯಾಗ್ರಹನಿಧಿಯು ೧೦ ಸಾವಿರಕ್ಕೆ ಏರಿದೆ

— ದಾವಣಗೇರಿಯ ಪೇಟೆಯಲ್ಲಿ ಬೆಂಕಿಪೆಟ್ಟಿಗೆಯ ಅಂಗಡಿಗೆ ಬೆಂಕಿ ಬಿದ್ದು ಸುತ್ತುಮುತ್ತಲಿನ ಅಂಗಡಿ ಸುಟ್ಟು ೨೦ ಲಕ್ಷ ರೂಪಾಯಿಗಳ ನಷ್ಟ.

— ಹಿಂದುಸ್ಥಾನೀ ಸೇವಾ ದಲದವರು "ದಲಭೇರಿ" ಎಂಬ ಕನ್ನಡ ಮಾಸಿಕ ಪುಸ್ತಕವನ್ನು ನಾಳೆಯಿಂದ ಹುಬ್ಬಳ್ಳಿಯಲ್ಲಿ ಪ್ರಕಟಿಸುವರು. ಇದರ ವರ್ಗಣಿ ೧೯೨೮ ನೇ ಇಸವಿ ಡಿಸೆಂಬರ ಅಂತ್ಯದ ವರೆಗೆ ಬರೇ ರೂ. ೧—೦—೦

— ರಶಿಯಾ ದೇಶದ ಎಣ್ಣೆ ಕಂಪನಿಯವರು ತಮ್ಮ ಪೆಟ್ರೋಲಿನ ದರವನ್ನು ಇಳಿಸಿ ಇಂಗ್ಲಂಡದಲ್ಲಿ ಹೋರಾಟಕ್ಕೆ ಪ್ರಾರಂಭಿಸಿದ್ದಾರೆ.

— ಲಾಹೋರಿನ ಲಾಲಚಂದ ಹಾಗು ಗುಪ್ತಾ ಇವರು ೧೦೦ ರೂಪಾಯಿಗಳ ನೋಟುಗಳನ್ನು ತಯಾರಿಸುತ್ತಿದ್ದರು ಸುಳಿವು ಪೋಲೀಸರಿಗೆ ಹತ್ತಿ ಅವರಿಗೆ ಸೆರೆಹಿಡಿದಿದ್ದಾರೆ

— ಮಧುರಾ ಕಾಲೇಜಿನಲ್ಲಿ ಉತ್ತರ ಕಡೆಗೆ ಬೆಂಕಿ ಹತ್ತಿ ೩ ಕೋಣೆಗಳು ಸುಟ್ಟು ಹೋದವು. ವಿದ್ಯಾರ್ಥಿಗಳು ಸುದೈವದಿಂದ ಪಾರಾದರು.

ನೋಟೀಸು.

ಹೊನ್ನಾವರ ತಾಲೂಕ ಹವ್ಯಕ ಕೋಆಪರೇಟಿವ್ಹ ಬ್ಯಾಂಕಿನ ವಾರ್ಷಿಕ ಮಹಾ ಸಭೆಯು ಇದೇ ಬರುವ ಮೇ ತಿಂಗಳ ತಾರೀಖು ೬ ನೇ ರವಿವಾರ ಮಧ್ಯಾಹ್ನ ೨ ಘಂಟೆಗೆ ಕಸಬಾ ಶ್ರೀ ಶಾರದಾಅಮ್ಮನವರ ದೇವಸ್ಥಾನದಲ್ಲಿ ಸೇರುವದು. ಬ್ಯಾಂಕಿನ ಎಲ್ಲಾ ಮೆಂಬರರು ಈ ಸಭೆಗೆ ಅಗತ್ಯ ಬರಬೇಕಾಗಿ ವಿನಂತಿ.

ಸಭೆಯಲ್ಲಿ ತರತಕ್ಕ ಠರಾವ ಯಾ ಸೂಚನೆಗಳನ್ನು ಸಭೆ ಸೇರುವ ೮ ದಿವಸ ಮುಂಚೆ ಸೆಕ್ರೆಟರಿ ಕಡೆ ಲೇಖಿಯಿಂದ ತಿಳಿಸಬೇಕು. ಚರ್ಚಿಸತಕ್ಕ ವಿಷಯ ವಗೈರೆದರ ಮಾಹಿತಿ ಬೇಕಿದ್ದರೆ ಆಫೀಸಿನಿಂದ ತಿಳಕೊಳ್ಳತಕ್ಕದ್ದು

ಹೊನ್ನಾವರ, 12-4-1928.	ಎಂ. ಡಿ. ಕರ್ಕಿ, ಹೊನ್ನಾವರ. ಅಧ್ಯಕ್ಷ.

ಮಂಗಳೂರ ತಂಬಾಕಿನ ತಾಜಾ ನಶ್ಯ! ಸುಲಭ ಕ್ರಯ!!
೪೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿಹೊಂದಿದ ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ ಮೋಸಹೋಗಬೇಡಿರಿ!!
ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ.೧ ನೇ ನಶ್ಯದ ಪುಡಿ ೫೪ ತೊಲಿ ಶೇರು ೧ರ	ರೂ.೧।
ನಂ. ೨ ನೇ	೧-೨-೦
ನಂ. ೩ ನೇ	೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ – ನಮ್ಮ ನಶ್ಯವು ಉತ್ಕೃಷ್ಟವೆಂಬವರ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟುಗಳು ದೊರಕಿವೆ

ವಿಳಾಸ:- ಪುಂಡ್ಲೀಕ ನಾಗ ಪೈ,
ಪೋಸ್ಟ- ಹೊನ್ನಾವರ. (ಉತ್ತರ ಕನ್ನಡ.)

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಧರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಇನಾಮಾಗಿ ಕಳಿಸಲಾಗುವದು.

ವಿಳಾಸ – ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಮಹಾತ್ಮರ ಆತ್ಮಚರಿತ್ರೆ.

೫ ನೇ ಭಾಗ.

(೧) ಮೊದಲನೇ ಅನುಭವ

ನಾನು ಹಿಂದುಸ್ಥಾನಕ್ಕೆ ತಲ್ಪುವ ಮುಂಚೆಯೇ ಫೋನಿಕ್ಸದೊಳಗಿಂದ ನನ್ನ ಸಹಕಾರಿಗಳು ಬಂದು ಮುಟ್ಟಿದರು. ಮೂಲ ಆಲೋಚನೆಯಂತೆ ನಾನೇ ಮುಂಚೆ ಬಂದು ತಲ್ಪುವದಿತ್ತು. ಆದರೆ, ಯುದ್ಧದ ಮೂಲಕ ಇಂಗ್ಲಂಡದಲ್ಲಿ ನಾನು ಕೆಲಸ ಮಾಡಬೇಕಾದ್ದರಿಂದ ಮುಂದಿನ ಆಲೋಚನೆಯೆಲ್ಲ ನಷ್ಟವಾಯಿತು. ಇಂಗ್ಲಂಡದಲ್ಲಿ ಕೆಲವು ಕಾಲ ತಡೆದು ಉಳಕೊಳ್ಳುವ ಪ್ರಸಂಗ ಬಂದದರಿಂದ (ಪರಸ್ಪರ ಹಿಂದುಸ್ಥಾನಕ್ಕೆ ಮೂಲ ಆಲೋಚನೆಯಂತೆ ಹಿಂದೆ) ಫೋನಿಕ್ಸದ ಜನರಿಗೆ ಉಳಕೊಳ್ಳಲು ವ್ಯವಸ್ಥೆ ಮಾಡುವದೊಂದು ಪ್ರಶ್ನೆ ಬಂತು. ಸಾಧ್ಯವಿದ್ದರೆ ಎಲ್ಲರೂ ಒಟ್ಟಿಗೇ ಉಳಕೊಳ್ಳಬೇಕೆಂದು ನನ್ನ ಬಯಕೆ ಇತ್ತು. ಫೋನಿಕ್ಸದಲ್ಲಿ ಉಳಕೊಂಡಂತೆ ಇಲ್ಲಿಯೂ ಉಳಕೊಳ್ಳಬೇಕಾಗಿ ನನ್ನ ಅಪೇಕ್ಷೆ ಇತ್ತು. ಅವರಿಗೆ ಬಿಟ್ಟು ತೋರಿಸಿಕೊಡುವಂಥ ಆಶ್ರಮವೇನು ನನಗೆ ಗೊತ್ತಿದ್ದಿಲ್ಲ. ಆದರಿಂದ ಮಿ। ಎಂಡ್ರ್ಯೂಸರವರಿಗೆ ಬೆಟ್ಟಿಯಾಗಿ ಅವರ ಹೇಳಿಕೆಯಂತೆ ನಡಕೊಳ್ಳಿರೆಂದು ನಾನವರಿಗೆ ತಂತಿಯಿಂದ ತಿಳಿಸಿದೆನು.

ಹೀಗೆ ಮೊಟ್ಟಮೊದಲು ಕಾಂಗ್ರಿಯೊಳಗಿನ ಗುರುಕುಲದಲ್ಲಿ ಅವರು ಉಳಕೊಂಡರು. ಸ್ವಾಮಿ ಶ್ರದ್ಧಾನಂದಜೀಯವರು ತಮ್ಮ ಮಕ್ಕಳಂತೆ ಅವರಿಗೆ ನಡಿಸಿಕೊಂಡರು. ಆ ಮೇಲೆ ಶಾಂತಿನಿಕೇತನ ಆಶ್ರಮದಲ್ಲಿ ಅವರ ವ್ಯವಸ್ಥೆಯಾಯಿತು. (ರವೀಂದ್ರನಾಥ ಟಾಗೋರ) ಕವಿಗಳೂ, ಅವರ ಜನರೂ ಅವರಿಗೆ ಬಂಧುಭಾವದಿಂದ ನಡಿಸಿಕೊಂಡರು. ಅಲ್ಲಿ ಅವರಿಗೆ ಈ ಎರಡು ಕಡೆಗಳಲ್ಲಿ ಸ್ವಾತಂತ್ರ್ಯವಾದ ಅನುಭವಗಳಿಂದ ಫೋನಿಕ್ಸದವರಿಗೂ, ನನಗೂ ಬಹಳೇ ಅನುಕೂಲವಾಯಿತು.

ಕವಿಗಳೂ ಶ್ರದ್ಧಾನಂದಜೀಯವರೂ, ಮುಖ್ಯಾಧ್ಯಾಪಕರಾದ ಸುಶೀಲರುದ್ರರವರು ಎಂಡ್ರ್ಯೂಸರವರ ತ್ರಿಮೂರ್ತಿಗಳು. ದಕ್ಷಿಣ ಆಫ್ರಿಕೆಯಲ್ಲಿ ಮೂವರ ಪ್ರಶಂಸೆ ಮಾಡುವದೆಂದರೆ, ಮಿ। ಎಂಡ್ರ್ಯೂಸರವರಿಗೆ ಬಹು ಆನಂದ. ಈ ತ್ರಿಮೂರ್ತಿಗಳ ವಿಷಯ ದಕ್ಷಿಣ ಆಫ್ರಿಕೆಯಲ್ಲಿ ಎಂಡ್ರ್ಯೂಸರು ಆಡಿದ ಮಾತುಗಳ ನೆನಪಾದರೆ, ಈಗಲೂ ಅತ್ಯಾನಂದವಾಗುತ್ತದೆ. ಫೋನಿಕ್ಸದ ಜನರಿಗೆ ಎಂಡ್ರ್ಯೂಸರವರು ಸುಶೀಲರುದ್ರರ ಪರಿಚಯ ಮಾಡಿಕೊಟ್ಟರು. ರುದ್ರರೂ ಆಶ್ರಮ ಹೊಂದಿಸಿದ್ದಿಲ್ಲ. ಆದರಿಂದ ಅವರು ತಮ್ಮ ಮನೆಯನ್ನೇ ಫೋನಿಕ್ಸದ ಜನರಿಗೆ ಒಪ್ಪಿಸಿದರು. ಒಂದೇ ದಿನದಲ್ಲಿ ಇವರಿಗೆ ಅವೇ ಮನೆಯ ಒಬ್ಬಂತೆ ಗೃಹಿಕೆಯಾಗ ಹತ್ತಿತು. ಅವರಿಗೆ ಫೋನಿಕ್ಸ ಬಿಟ್ಟಂತೆ ಸಹ ಅನಿಸಲಿಲ್ಲ.

ಫೋನಿಕ್ಸದ ಜನರು ಶಾಂತಿನಿಕೇತನದಲ್ಲಿದ್ದಾರೆಂದು ಮುಂಬಯಿಯಲ್ಲಿ ಬಂದ ಮೇಲೆ ನನಗೆ ತಿಳಿಯಿತು. ಆದರಿಂದ ಗೋಖಲೇಯವರ ದರ್ಶನ ಪಡೆದ ಕೂಡಲೆ ಅವರ ಬಳಿ ಹೋಗಬೇಕೆಂದ ನಾನು ಆತುರಪಟ್ಟೆನು. ಮುಂಬಯಿಯಲ್ಲಿ ನಡೆದ ಸ್ವಾಗತ ಸತ್ಕಾರಗಳಲ್ಲಿ ಸತ್ಯಾಗ್ರಹದ ಚಿಕ್ಕ ರೂಪವನ್ನೊಂದು ತೋರಿಸುವ ಪ್ರಸಂಗವೊಂದು ನನ್ನ ಮೇಲೆ ಬಂದೊದಗಿತು.

ರಾ। ಜಹಾಂಗೀರ ಪೆಟ್ಟಿಟರವರ ಮನೆಯಲ್ಲಿ ನನಗೊಂದು ಮೇಜವಾನಿ ಕೊಟ್ಟರು. ಅಲ್ಲಿ ಗುಜರಾಥಿಯಿಂದ ಮಾತಾಡಲು ನನಗೆ ಧೈರ್ಯವಾಗಲಿಲ್ಲ. ಅರಮನೆಗಳೋಪಾದಿಯಲ್ಲಿರುವ ಮನೆಗಳಲ್ಲಿ, ಆ ವೈಭವದಲ್ಲಿ ನಾನು ಸಂಪೂರ್ಣವಾಗಿ ಹಳ್ಳಿಗನಾದೆ. ನಾನು ಬಹುತರವಾಗಿ ಕಾಠಿಯಾವಾಡಿ ಪೋಷಾಕಿನಿಂದ ಉಳಕೊಂಡಿದ್ದೆ. ನಾನು ಕಾಠೇವಾಡಿ ಸಿಲುವಂಗಿ, ರುಮಾಲು-ಧೋತರಗಳನ್ನು ಉಟ್ಟುಕೊಂಡಿದ್ದೆ. ಇಂದಿನಕಿಂತ ಆ ಕಾಲಕ್ಕೆ ಕೆಲಮಟ್ಟಿಗೆ ಸುಧಾರಿಸಿದವನಂತೆ ತೋರುತ್ತಿದ್ದೆ. ಆದರೆ, ಪೆಟಿಟರವರ ಅರಮನೆಯ ಅಟ್ಟಹಾಸವನ್ನೂ ಥಳಕನ್ನೂ ನೋಡಿ ನಾನು ದಿಗಿಲುಬಿದ್ದೆ. ಆದರೂ ನಾನು ಸಮಾಧಾನಕರವಾಗಿ ಈ ಪ್ರಸಂಗದೊಳಗಿಂದ ಪಾರಾದೆ. ಸರ್ ಫಿರೋಜಶಹಾ ಮೇಥಾರವರು ನನಗೆ ಬೋಲುಗಾಣಿಸಿದರು.

ಗುರ್ಜರರೂ ಒಂದು ಸಮಾರಂಭ ಮಾಡಿದರು. ನನಗೆ ಸತ್ಕಾರಮಾಡಲು ಅವರು ಅತ್ಯಾತುರರಾಗಿದ್ದರು. ಪ್ರೊ॥ ಮಾ॥ ಉತ್ತಮಲಾಲ ತ್ರಿವೇದಿಯವರು ಈ ಸಮಾರಂಭದ ಚಾಲಕರು. ಈ ಕಾರ್ಯಕ್ರಮವನ್ನು ನಾನು ಮುಂದಾಗಿ ತಿಳಕೊಂಡಿದ್ದೆ. ಮಿ॥ ಜಿನ್ನಾರವರು ಗುಜರಾಥ ಪ್ರಾಂತದವರು, ಆದರಿಂದ ಅವರು ಈ ಸಮಾರಂಭಕ್ಕೆ ಹಾಜರಾಗಿದ್ದರು, ಅಧ್ಯಕ್ಷರಿದ್ದರೋ, ಪ್ರಮುಖ ಉಪನ್ಯಾಸಕರ್ತರೋ ನನಗೆ ನೆನಪು ಸಾಲದು. ಅವರು ಇಂಗ್ಲಿಷದಿಂದ ಚಿಕ್ಕ ಭಾಷಣವನ್ನು ಮಾಡಿದರು. ಭಾಷಣವು ಚಿತ್ತವೇಧಕವಾಯಿತು. ಎಲ್ಲರೂ ಇಂಗ್ಲಿಷಿನಿಂದಲೇ ಮಾತಾಡಿದ ನೆನಪು ಕಾಣುತ್ತದೆ. ನನ್ನ ಪಾಳಿ ಬಂತು. ನಾನು ಗುಜರಾಥಿಯಲ್ಲೇ ಉಪಕಾರ ಮನ್ನಿಸಿದೆನು. ಗುಜರಾಥಿ ಹಾಗು ಹಿಂದುಸ್ಥಾನಿ ಭಾಷೆಗಳ ಮೇಲೆ ನನಗಿರುವ ಹೆಚ್ಚಿನ ಪ್ರೀತಿಯನ್ನು ವಿವರಿಸಿ, ಗುರ್ಜರರ ಸಭೆಯಲ್ಲಿ ಇಂಗ್ಲಿಷಿನಲ್ಲಿ ಮಾತಾಡಿದ ಬಗ್ಗೆ ನಾನು ವಿನಯಪೂರ್ವಕವಾಗಿ ನಿಷೇಧವನ್ನು ಮಾಡಿದೆನು. ಈ ವಿಷಯವು ನನಗೆ ಸಂದೇಹವಿತ್ತು. ನಾನು ದೇಶಾಂತರದಿಂದ ಮರಳಿ ಬಂದ ಅನುಭವವಿಲ್ಲದ ಮನುಷ್ಯ. ಇಂಥವನು ಇಲ್ಲಿ ರೂಢವಾದ ಪ್ರಘಾತಗಳನ್ನು ನಿಷೇಧಿಸುವದು ಸ್ವಾಭಾವಿಕವಲ್ಲೆಂದು ಯಾರಾದರೂ ಎಣಿಸಬಹುದೆಂದ ನನಗೊಂದು ಭೀತಿ ಇತ್ತು. ಆದರೆ ಗುಜರಾಥಿಯಲ್ಲಿ ಆಗ್ರಹದಿಂದ ಉತ್ತರ ಕೊಟ್ಟ ಬಗ್ಗೆ ಯಾರದೂ ತಪ್ಪು ತಿಳುವಳಿಕೆಯಾಗಲಿಲ್ಲ. ಪ್ರತಿಯೊಬ್ಬರಿಗೂ ನನ್ನ ನಿಷೇಧವು ಒಪ್ಪಿಗೆಯಾಯಿತೆಂದು ನಮೂದಿಸಲು ನನಗೆ ಆನಂದವಾಗುತ್ತದೆ.

ಈ ಸಭೆಯಿಂದ ನನಗೆ ಧೈರ್ಯ ಬಂತು. ಹೊಸ ವಿಚಾರಗಳನ್ನು ದೇಶಬಾಂಧವರಿಗೆ ತಿಳಿಸಿ ಹೇಳುವದು ಕಠಿಣವಲ್ಲೆಂದು ನನ್ನ ಗ್ರಹಿಕೆಯಾಯಿತು.

ಈ ಪ್ರಕಾರ ಅನುಭವಗಳನ್ನು ಪಡೆದ ತರುವಾಯ ಮುಂಬಯಿಯೊಳಗಿನ ಮುಕ್ಕಾಮವನ್ನು ತೀರಿಸಿಕೊಂಡು ನಾನು ಪುಣೆಗೆ ತೆರಳಿದೆನು. ಗೋಖಲೇಯವರು ನನಗೆ ಅಲ್ಲಿ [illegible].

ವೃತ್ತಸಾರ.

— ಅಫಗಾನಿಸ್ಥಾನದ ಅಮೀರರಾದ ಅಮಾನುಲ್ಲಾಖಾನರವರು ೩ ವಾರಗಳ ತನಕ ರಶಿಯಾ ದೇಶದಲ್ಲಿ ಸಂಚರಿಸುವರು.

— ಮಂಗಳೂರಿನಲ್ಲಿ 'ರಾಷ್ಟ್ರಬಂಧು'ವೆಂಬ ವಾರಪತ್ರಿಕೆಯು ಮೇ ತಾ ೭ನೇ ಸೋಮವಾರದಿಂದ ಪ್ರಕಟಿಸಲ್ಪಡುವದು. ನೂತನವಾದ ಪತ್ರಿಕೆಯು ರಾಷ್ಟ್ರಬಂಧುವಾಗಲು ತಕ್ಕದಾದ ಸಮಗ್ರ ವಿಷಯಗಳು ಪ್ರಕಟಿಸಲ್ಪಡುವವೆಂದು ಚಾಲಕರು ತಿಳಿಸುತ್ತಾರೆ. ಚಂದಾ ಹಣ ವರ್ಷಕ್ಕೆ ರೂ ೩॥

— ಅಮೇರಿಕೆಯ ಪಶ್ಚಿಮ ವಿರ್ಜಿನಿಯಾ ಪ್ರಾಂತಕ್ಕೊಳಪಟ್ಟ ಜಲಕಿಓನಾ ಗ್ರಾಮದಲ್ಲಿ ದೊಡ್ಡ ಮದುವೆ ಸಮಾರಂಭ ನಡೆದಿತ್ತು. ಮೊತ್ತದವರು, ಥಕ್ಕನೆ ಮನೆಗೆ ಬೆಂಕಿ ಹತ್ತಿ ೧೩ ಮಂದಿಗಳು ತೀರಿಕೊಂಡರು, ೫ ಮುದುಕರೂ, ಮದುಮಗಳೂ ತೀರಿಕೊಂಡರು, ೬ ಮಕ್ಕಳ ಜೊತೆಗೆ ತಾಯಿಯೊಂದು ತೀರಿಕೊಂಡಳು.

— ಬರ್ದ್ವಾನ ಪ್ರಾಂತದಲ್ಲಿ ದಾಮೋದರ ನದಿಯ ಗುಂಟ ೫೦ ಸಾವಿರ ಜನರು ಬರಗಾಲದಲ್ಲಿ ಸಿಲುಕಿದ್ದಾರೆ. ೫೦ ಸಾವಿರ ನೇಕಾರರ ಅರಿವೆಗೆ ಗಿರಾಕಿಯಿಲ್ಲದೆ ಅವರೂ ಬಳಲುತ್ತಿದ್ದಾರೆ.

— ದಾದರದಲ್ಲಿ ಕೆಂದಿ ತೆಗೆಯುವವರೊಬ್ಬನು ಕೆಂದಿ ತೆಗೆಯಲು ತೆಂಗಿನ ಮರ ಹತ್ತಿದನು. ಆ ಕಾಲಕ್ಕೆ ಒಂದು ಕಾಗೆ ಬಂದು ಅವನ ಕಾಲಿಗೆ ಚುಚ್ಚಿತು, ಹಣ್ಣು ಘಾಯವಾಯಿತು. ಆ ಘಾಯವೇ ದೊಡ್ಡದಾಗಿ ೧೦ ದಿನಗಳಲ್ಲಿ ಅವನು ಸತ್ತು ಹೋದನು.

— ರಶಿಯಾ ತುರ್ಕಸ್ಥಾನ ಹಾಗು ಜರ್ಮನ ರಾಷ್ಟ್ರಗಳು ಶಸ್ತ್ರಸನ್ಯಾಸದ ಯೋಜನೆಯನ್ನು ಪುರಸ್ಕರಿಸಿ ಅದನ್ನು ಭೂತಲದ ಮೇಲಿನ ರಾಷ್ಟ್ರಗಳ ಕಡೆಯಿಂದ ಮನ್ನಿಸಿಕೊಳ್ಳುವ ಪ್ರಯತ್ನ ಮಾಡಲು ನಿರ್ಧರಿಸಿರುತ್ತವೆ.

— ಇಂಗ್ಲಂಡದಲ್ಲಿ ಬ್ರಿಟಿಶ ಕಂಪನಿ ಎಣ್ಣೆಯ ಸೂತ್ರಕಾರರು ತಮ್ಮ ಎಣ್ಣೆಗೆ ಸಂರಕ್ಷಣೆ ಬೇಡುವದಿಲ್ಲ. ಅಲ್ಲಿ ಮೋಟಾರಿನ ದರ ತಗ್ಗುತ್ತಿದೆ. ಪೆಟ್ರೋಲ ಗೆಲನಿಗೆ ೧॥ ಪೇನ್ಸ ಅಂದರೆ ೧೧ ಆಣೆ ಇತ್ತು. ಈಗ ೧ ಪೇನ್ಸ ತಗ್ಗಿತು. ಹಿಂದುಸ್ಥಾನದಲ್ಲಿ ಅದೇ ಎಣ್ಣೆಗೆ ರೂಪಾಯಿ ೧ಕ್ಕೆ ವಿಕ್ರಯದರವಿದೆ. ಅದರೂ, ಕಂಪನಿಗೆ ನಷ್ಟ. ಆದರಿಂದ ಸರಕಾರವು ಸಂರಕ್ಷಣೆ ಮಾಡಹೋಗುತ್ತದೆ. ಇದು ... ಈ ಕಂಪನಿಗಳಿಗೆ ಒಂದು ಕಾನೂನು ಮಾಡಿ, ಹಿಂದುಸ್ಥಾನದಲ್ಲಿ ಲೂಟಿ ಮಾಡಲು ಲೈಸನ್ಸು ಕೊಡಬಹುದಲ್ಲವೇ!

— ಜರ್ಮನಿಯಲ್ಲಿ ರಾಕೆಟ ಎಂಬದೊಂದು ಮೋಟಾರ ಬಂಡಿಯಾಗಿದೆ. ಇದು ತಾಸಿಗೆ ೪೩೦ ಮೈಲು ಓಡುತ್ತದೆ. ಹೀಗೆ ಓಡಿ ಓಡಿ ಜನರು ಎಲ್ಲಿ ಹೋಗಬೇಕೆಂದಿದ್ದಾರೋ ಏನೋ. ಈ ಬಂಡಿ ಮತ್ತೂ ರಭಸದಿಂದ ಓಡಬಲ್ಲದಂತೆ.

— ಮೈಸೂರ ಸಂಸ್ಥಾನವು ನಡಿಸುವ ಸಾಬುಕಾರದ ಕಾರಖಾನೆಯಲ್ಲಿ ತರತರದ ಸಾಬುಕಾರವು ತಯಾರಾಗುತ್ತಿದೆ. ಈ ಕಾರಖಾನೆಯ ಲಾಭ ನೋಡಿ ಆ ಸಂಸ್ಥಾನದಲ್ಲಿ ಬೇರೆ ಕಾರಖಾನೆಗಳು ಹೊರಡಿಸಲಾಗಿವೆ. ಈ ಕಾರಖಾನೆಗಳು ವರ್ಷದ ೧-೫ ಲಕ್ಷ ರೂಪಾಯಿಗಳ ವ್ಯಾಪಾರ ಮಾಡುತ್ತಿವೆ. ಕಾರಖಾನೆಗಳಲ್ಲಿ ಇನ್ನೂ ಸುಧಾರಣೆಗಳನ್ನು ಮಾಡಿಕೊಳ್ಳಲು ಸಂಸ್ಥಾನದ ವಿಚಾರವಿದೆ.

— ದಿನಜಾಪುರದ ೮ ವರ್ಷ ವಯಸ್ಸಿನ ಕುಮಾರಿ ಲೀಲಾದೇವಿಯವರು ಕಳೆದ ವರುಷ ೩॥ ಸೇರು ನೂಲು ತಯಾರಿಸಿ ಆ ಪ್ರಾಂತದಲ್ಲಿ ಅಗ್ರಸ್ಥಾನವನ್ನು ಪಡೆದ ಬಗೆ ಅವಳಿಗೊಂದು ಸುವರ್ಣ ಪದಕವು ಅರ್ಪಣೆಯಾಯಿತು. ರೇಣುಬಾಲೆಯವರು ಕುಮುದಕಾಂತ ಮಿತ್ರರೆಂಬ ವಕೀಲರ ಮಗಳು.

— ಮದ್ರಾಸ ತಿರುನೆಲ್ವೆಲಿಯಲ್ಲಿ ಚಿರತೆ ಬಹಳ ಕಾಟ ಕೊಡುತ್ತಿತ್ತು. ಅದರ ಸಮಾಚಾರ ಕೊಳ್ಳಲು ಪೋಲೀಸರು ಹೋದರು. ಪೋಲೀಸರ ಸಳವು ಕೇಳಿ, ಚಿರತೆಯು ತೋಟದಲ್ಲಿ ಅಡಗಿಕೊಂಡಿತು. ಪೋಲೀಸರು ಒಳತೋಟವನ್ನು ಸಂಚರಿಸುತ್ತಿರಲು, ಥಕ್ಕನೆ ಪೋಲೀಸರ ಮೇಲೆ ಅದು ಹಾರಿಬಂತು. ಪೋಲೀಸನೊಬ್ಬನು ಅದಕ್ಕೆ ಗುರಿಯಿಟ್ಟು ಗುಂಡು ಹಾರಿಸಿದನು. ಗುರಿ ತಪ್ಪಿ ಪೋಲೀಸ ಪ್ರಮುಖನು ಗುಂಡಿಗೆ ತುತ್ತಾದನು.

— ಲಾಲಾ ಲಜಪತರಾಯರು ಅಸ್ಪೃಶ್ಯೋದ್ಧಾರಕ್ಕಾಗಿ ದಕ್ಷಿಣ ಹಿಂದುಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಕೊಯಿಮತ್ತೂರಿನಲ್ಲಿ ಅವರೊಂದು ಭಾಷಣದಲ್ಲಿ ಅಸ್ಪೃಶ್ಯರ ಮೇಲಿನ ಅನ್ಯಾಯವನ್ನು ಸರಸವಾಗಿ ನಿವೇದಿಸಿದರು — "ಪ್ರಾಣಿಗೆ ಸ್ಪರ್ಶಿಸಿದರೆ ನೀವು ಜಳಕ ಮಾಡಿ ಪವಿತ್ರರಾಗುವದಿಲ್ಲ. ಅಸ್ಪೃಶ್ಯರಿಗೆ ಮುಟ್ಟಿದರೆ, ನೀವು ಜಳಕ ಮಾಡಿದ ಹೊರತು ಪಾವನರಾಗುವದಿಲ್ಲ. ಇದೆಂಥ ಧರ್ಮ" ಎಂದು ಲಜಪತರಾಯರು ಉದ್ಗರಿಸಿ, ಅಸ್ಪೃಶ್ಯೋದ್ಧಾರವನ್ನು ಸಾಧಿಸಲು ಪ್ರಬೋಧಿಸಿದರು.

— ರಾಮನಾಥ ತಿವಾರಿ ಎಂಬ ಮದ್ದುಗಾರನೊಬ್ಬನು ಸರ್ಪದಂಶಕ್ಕೆ ತನ್ನ ಕಡೆ ದಿವ್ಯೌಷಧವಿರುವದಾಗಿ ರಸ್ತೆಯ ಮಾರ್ಗದ ಬದಿ ದೊಡ್ಡ ಉಪನ್ಯಾಸ ಕೊಡುತ್ತಿದ್ದನು. ಅಬ್ದುಲ ರಜಾಕ ಎಂಬವನು ಆ ಮಾರ್ಗದ ಮೇಲಿಂದ ಹಾದು ಹೋಗುತ್ತಿದ್ದನು. ಅತನಿಗೆ ಈ ಔಷಧ ಪ್ರಯೋಗ ನೋಡುವ ಬುದ್ಧಿಯಾಯಿತು. ಸರ್ಪದಿಂದ ತಿವಾರಿಯು ಕಚ್ಚಿಸಿದನು. ದಿವ್ಯೌಷಧ ಹಚ್ಚಲಾಯಿತು. ಆದರೆ ಗುಣವಾಗಲಿಲ್ಲ. ಆದರಿಂದ ತಿವಾರಿಯ ಮೇಲೆ ಖಟ್ಲೆಯಾಗಿದೆ. ಔಷಧಿಗಳನ್ನು ರೋಗಗಳಿಗೆ ತಕ್ಕೊಳ್ಳುವದು ಮೂರ್ಖತನವು!

ವಿಶೇಷ ಸಂಗತಿಗಳು

ತೀರ್ಥಹಳ್ಳಿಯಲ್ಲಿ ಪರಶುರಾಮ ಶಿಬಿರದ ಸ್ಥಾಪನೆ.

— ಮುಬ್ಬೈಯ ಹಿಂದುಸ್ಥಾನೀ ಸೇವಾದಳದವರು ತೀರ್ಥಹಳ್ಳಿಯಲ್ಲಿ ಪರಶುರಾಮ ಸ್ವಯಂಸೇವಕ ಶಿಕ್ಷಣ ಶಿಬಿರವನ್ನು ಅದೇ ಬರುವ ೨೫ನೇ ತಾರೀಖಿನಿಂದ ೫ ವಾರಗಳ ತನಕ ನಡಿಸುವರು. ಶಿಬಿರದಲ್ಲಿ ಸೇವಾದಲದ ಸೈನಿಕರಿಗೆಲು ಅವಶ್ಯವಾದ ಶಾರೀರಿಕ, ಮಾನಸಿಕ, ವ್ಯಾವಹಾರಿಕ, ಬೌದ್ಧಿಕ ಶಿಕ್ಷಣ ಕೊಡಲಾಗುವದು. ೨೦ ರೂಪಾಯಿ ಖರ್ಚು ಬಂದೀತು ಆದರೆ, ಅಧರಿಂದ ಹೇರಳ ಲಾಭವಿದೆ ಶ್ರೀ ಕೆ ವೆಂಕಟರಮಣ್ಯನವರು ಈ ಶಿಬಿರದ ಅಧಿಪತಿಗಳು. ವಿದ್ಯಾರ್ಥಿಗಳು ತೀರ್ಥಹಳ್ಳಿಗೆ ಹೋಗಿ ಈ ಶಿಕ್ಷಣ ಪಡೆದರೆ, ಸ್ವಾರ್ಥ ಪರಮಾರ್ಥ ಎರಡೂ ಸಾಧಿಸುವ ಹಾಗಿದೆ

***

ಬಾರ್ದೋಲಿಯ ಹಕೀಕತು.

ಬಾರ್ದೋಲಿಯಲ್ಲಿ ತೀವ್ರ ವಸೂಲಿಯ ಬಗ್ಗೆ ಜಪ್ತ ಮಾಡಲು ಎಷ್ಟೆಷ್ಟು ಹುಂಬಿಲ್ಲಿ ಪಟೇಲ-ತಲಾಟಿಗಳು ಸೋತುಹೋದರು. ಜಪ್ತಾದ ವಸ್ತುಯನ್ನು ಸರಿಹೊರೆಯವರು ಕೊಳ್ಳುವ ಲಕ್ಷಣ ತೋರುವದಿಲ್ಲ. ಆಸ್ತಿ ಲಿಲಾವಾದರೆ ಒಕ್ಕಲು ಸಿಗುವದು ಸಹ ದುರ್ಲಭವಿದೆ ಅಷ್ಟು ನಿರ್ಧಾರದಿಂದ ಪ್ರಜೆಗಳು ಅಲ್ಲಿ ಟೊಂಕಕಟ್ಟಿದ್ದಾರೆ ಕೆಲವು ಕಡೆಗಳಲ್ಲಿ ಚಿಕ್ಕಪುಟ್ಟ ರಕಮಗಳನ್ನು ತಲಾಟಿಗಳು ಕೈಯಿಂದ ತುಂಬಿ ಜನರು ತೀರ್ವೆ ಕೊಡಹತ್ತಿದರೆಂದು ಹೇಳುತ್ತಾರೆ. ಆ ಜನರ ಕಡೆಯಿಂದ ಆ ಹಣವನ್ನು ಯುಕ್ತಿ ಪ್ರಯುಕ್ತಿಯಿಂದ ವಸೂಲ ಮಾಡಲು ಪ್ರಯತ್ನವಾಗುತ್ತದೆ ಖಂಡಿತ ಜಪ್ತಿ ಮಾಡಿದ ಸರಕನ್ನು ಒಯ್ಯಲು ಆಳುಗಳಿಲ್ಲ. ಮಹಾಲಕರಿಯರು ಪಟೇಲರಿಗೆ ಬದ್ಲಾಯಿಸುವರಂತೆ! ಮುಂಬಯಿ ಇಲಾಖೆಯ ದೊಡ್ಡ ಲೋಕಪಕ್ಷೀಯ ಸಂಸ್ಥೆಯಾದ ಮುಂಬಯಿ ಕ್ರಾನಿಕಲ್ ಎಸೋಸಿಯೇಷನ್ನು ಸತ್ಯಾಗ್ರಹಿಗಳಿಗೆ ಬೆಂಬಲ ಕೊಟ್ಟಿದೆ. ಗುಜರಾಥದೊಳಗಿನ ಅಲ್ಲಲ್ಲಿಯ ಜಾತಿಕೂಟಗಳು ಸತ್ಯಾಗ್ರಹ ಸಮರಕ್ಕೆ ದ್ರವ್ಯಸಹಾಯ ಮಾಡುತ್ತಿವೆ ಪರೋಪಕಾರಿಗಳೊಬ್ಬರು ಮುಂಬಯಿಯಿಂದ ೧೦೦೦ ರೂಪಾಯಿಗಳನ್ನು ಕಳುಹಿಕೊಟ್ಟರು ಇಷ್ಟಾಗಿ ದ್ರವ್ಯಸಹಾಯದ ಬಗ್ಗೆ ಅನ್ಯಾಯರ ಬೇಡಿಕೆ ಆಗಿಲ್ಲ. ಸ್ವರಾಜ್ಯ ಪಕ್ಷದ ಕಾರ್ಯಕರ್ತರು ಕಾಯದೆ ಕೌನ್ಸಿಲಿನ ಸಭಾಸದರಾದ ರಾವಸಾಹೇಬ ದಾದುಭಾಯಿ ದೇಸಾಯಿ ಪ್ರಭೃತಿ ಮಾಲ್ಕು ಮಂದಿ ಗುಜರಾಥ ಪ್ರಾಂತದ ಸಭಾಸದರು ಸರಕಾರಕ್ಕೆ ಈ ವಿಷಯ ತಮ್ಮ ಹೇಳಿಕೆಯನ್ನು ಬರಕೊಂಡಿದ್ದಾರೆ ಅದು ಮಾನ್ಯವಾಗದಿದ್ದರೆ, ಅವರು ರಾಜೀನಾಮೆಯನ್ನಿತ್ತು ಇದೇ ವಿಷಯದ ಮೇಲೆ ಪುನಃ ಇಲೆಕ್ಷನಿಗೆ ನಿಲ್ಲುವರು.

ಮಂಗಳೂರ ತಂಬಾಕಿನ ತಾಜಾ ನಶ್ಯ ಸುಲಭ ಕ್ರಯ!
೪೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿ ಹೊಂದಿದ
ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ
ಮೋಸಹೋಗದೇಇರಿ!!

ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ ೧ ನೇ ನಶ್ಯದಪುಡಿ ೨೪ ತೊಲೆ ಶೇರುಗೆ ರೂ. ೧।				
ನಂ ೨ ನೇ	.	...	..	೧-೨-೦
ನಂ ೩ ನೇ	...	...	...	೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ— ನಮ್ಮ ನಶ್ಯವು ಉತ್ಕೃಷ್ಟವೆಂಬದರ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟುಗಳು ದೊರಕಿವೆ

ವಿಳಾಸ:- **ಪುಂಡ್ಲೀಕ ನಾಗ ಪೈ.**

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ
ಜೋಗಿಗೆ
ರೆಗ್ಯೂಲರ್
ಸರ್ವೀಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥಾ ವಿಶೇಷವಾಗಿ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪರಿವರ್ತನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಿಥಿಲ. ಹೋಗಿ ಮಾಡಬೇಕಾದ ಸಫಲಕಾರ್ಯವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ ಉದರರೋಗ ಧಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಾಸ್ತಿಯಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಜ ಸಾಫ ಆಗುತ್ತದೆ. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ ಮೂರು ಬಾಟಲಿಯ ಕಿಮ್ಮತು ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ೬ ಜನ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೧-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.]

ವೀರ್ಯವು ಶಿಥಿಲವಾಗುವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ 'ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉತ್ತೇಜಕ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪಡಸೆ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತು ಸಂತತಿ ಆಗಲಿಕ್ಕೆ ಸಹಾಯಕವಾಗುತ್ತದೆ ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಇಾ) ವನಸ್ಪತಿಗಳು ಮುಟ್ಟಿಸಿ "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿದ್ದಾರೆ ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ಗಟಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- – मृद्विकारिष्ट – शारंगधरम अ १०

रामबाण औषध

सर्दि घालविणारें
भूक वाढविणारें
श्वासोच्छ्वास साफ करणारें
झोप आणणारें
शक्ति देणारें
तेजस्वीपणा आणणारें

— विश्वास ठाचकर

कॅटलॉग मागवा

झंडु फार्मास्युटिकल वर्क्स लिमिटेड
मुंबई नं. १४

एजंट— मेसर्स पंडित आणी कंपनी.
तीर्थहळ्ळी

किरकोळ एजंट एस एन धारप्पा आणि ग्रहस

किंमत एक रत्तलास १॥ रुपये.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ. ಯವರ

ಸುಗಂಧಿ ನ್ಯಶದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯು ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ದೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದು ಚಿಟಿಕೆಯ ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಮಂದಿಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸ ಧೃಸ್ಯ ಕಳಿಸಲಾಗಿದೀತು

ಒಂದಿ ಒಂದಕ್ಕೆ ಕ್ರಯ ರೂ ೦ ೪ ೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ ಅಂಡ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕಟೌನ, ಮದರಾಸ

ಪ್ರಖ್ಯಾತ " ಕರಾಮೃತ " ಗಾಣ—

ನೀವು ಅಪೇಕ್ಷಿಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮೃತ ಗಾಣ.

ಈ ಗಾಣದಿಂದ ಶೇಕಡಾ ೭೨ ರಿಂದ ೭೪ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಗಟ್ಟಿಯಿದ್ದು ಬಾಳಿಕೆಯುಳ್ಳದ್ದು. ವಿಶೇಷ ಯಂತ್ರಸಾಮಗ್ರಿಯೂ ಇಲ್ಲಿ ಸಾಮಾನ್ಯ ರೈತರು ಇದನ್ನು ಸರಿಪಡಿಸಬಲ್ಲರು. ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು.

ಬೇರಿಂಗು ಗನ್‌ಮೆಟಲ್‌ದವು. ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ರೋಲುಗಳು ಉಕ್ಕಿನವು. ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಜರಿಯದು. ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು.

ಈ ಹೊತ್ತಿಗೆ ಕನ್ನಡ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦-೧೨ ಕರಾಮೃತಗಾಣಗಳು ನಡೆಯುತ್ತಿವೆ ಎಲ್ಲರೂ ಅನುಭವದಿಂದ ಪ್ರಶಂಸಿಸುತ್ತಾರೆ ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ



೧೮೮೫ನೇ ಇಸವಿಯಲ್ಲಿ ಸ್ಥಾಪಿತವಾದ
ನೆಶನಲ್ ಇನ್‌ಶೂರನ್ಸ ಕಂಪನಿ (ಲಿಮಿಟೆಡ್)
ಎಂಬ
ಜೀವ ವಿಮೆಯ ಮಂಡಲಿ

ಈ ಮಂಡಲಿಯು ... ರೂಪಾಯಿಗಳ ವಿಮೆ ...

... ೧೦ ರೂಪಾಯಿ ... ಬೋನಸ ಕೊಡುವದು

ಹೊಂಗೆ 1000 ರೂಪಾಯಿಗಳ ... ಸುಮಾರು 1000 ರೂಪಾಯಿಗಳ ...

ಎಲ್ಲಾ ಬಗೆಯ ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕರ್ನಾಟಕಕ್ಕೆ ಏಜಂಟರು P D Churi,
ಜಿ. ಸಿ ಶಿರಾಳಕೊಪ್ಪ, *Branch Secretary*
ರೋಯ ಬಿಲ್ಡಿಂಗ, Alice Building,
ಹುಬ್ಬಳ್ಳಿ *Hornby Road,*
BOMBAY

S U Narayanacharya & CO
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪೀತಾಂಬರ ಶಲ್ಲೆ, ಜರಿ ಸೀರೆ, ಶಾಲು, ... ರುದ್ರಾಕ್ಷಿ, ಕಸ್ತೂರಿ ಶಿಂಗರಫ ಮುಂತಾದ ... ಸಿಗುತ್ತವೆ ಕ್ಯಾಟಲಾಗ
ಕೇಳುವವರಿಗೆ ಧರ್ಮವಾಗಿ ಕಳಿಸಲಾದೀತು
ವಿಳಾಸ ಶಿರೋಮಣಿ ನಾರಾಯಣ ಆಚಾರ್ಯರು
ಮು. ಠಾಕರನಿ ಚೌಕಂಬಾ, ಕಾಶೀಕ್ಷೇತ್ರ

ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು ಸಂಧಿವಾತ, ಚಳಿ, ಕೆಮ್ಮು ... ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ... ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದು ... ಚಿಕ್ಕವರಿಂದ ... ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಅಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ರೂ. ೦—೧೦—೦

ಎಲ್ಲ ಕಡೆಯಲ್ಲಿಯೂ ಸಿಗುತ್ತದೆ ಅಥವಾ ಅಮೃತಾಂಜನ ಡಿಪೋ,
ಮುಂಬಯಿ ಮತ್ತು ಮದ್ರಾಸ

Printed and Published by K...rao Keshav Shanvi (Editor) at his Star of Kanara Press, Kumta.

ಶ್ರೀ। ಖುರ್ಶೇದ ನರಿಮಾನರವರ ಮೇಲಣ ಖಟ್ಲೆಯಲ್ಲಿ ಸಾಹಸದ ವಿಜಯ.

ಮುಂಬಯಿ ಇಲಾಖೆಯ ಪ್ರಾಂತಾಧಿಪರಾಗಿದ್ದ ಸರ್ ಜಾರ್ಜ ಲಾಯಿಡ್‌ರವರ ಕಾರಕೀರ್ದಿಯಲ್ಲಿ ಮುಂಬಯಿ ಪಟ್ಟಣದ ಬೆಕ್‌ಬೇ ಉಪಸಾಗರದಲ್ಲಿ ಮಣ್ಣು ತುಂಬಿ ಅಲ್ಲಿ ಕಟ್ಟಡಗಳನ್ನು ಕಟ್ಟಿಸಿ ಬಡ ಕೂಲಿಕಾರರಿಗೆ ಬಿಡಾರುಗಳ ವ್ಯವಸ್ಥೆ ಮಾಡುವ ದೊಡ್ಡದೊಂದು ಯೋಜನೆಯು ಘಟಿಸಲ್ಪಟ್ಟಿತು. ಇದೊಂದು ಘಾತುಕ ಯೋಜನೆಯೆಂದು ಕೆಲ ವಿಚಾರಿಗಳು ಎಚ್ಚರಿಕೆ ಕೊಟ್ಟಿದ್ದರು. ಆದರೆ, ಅಗ್ಗದ(?) ಕಾಲವು. ಮುಂಬಯಿಯಲ್ಲಿ ದುಡ್ಡಿನ ರಾಶಿ! ಮುಂಬಯಿ ಸರಕಾರದಂಥ ಸಾಲಗಾರರು ಸಿಕ್ಕಿದರು. ೬½ ರಷ್ಟು ಬಡ್ಡಿ ಸಿಕ್ಕಿತು. ಅದರಿಂದ ೪ ಕೋಟಿ ಬೇಡಿದರೆ, ೬ ಕೋಟಿ ಸಾಲ ಸಿಕ್ಕಿತು. ಮೂಲ ಯೋಜನೆಯ ಖರ್ಚು ೪ ಕೋಟಿ ಎಂದು ಅಂದಾಜ ಮಾಡಲ್ಪಟ್ಟಿತ್ತು; ೧೧ ಕೋಟಿ ಎಂದು ಅಂದಾಜು ಸಿದ್ಧವಾಯಿತು. ಈಗ ೩-೪ ವರ್ಷಗಳಿಂದ ಕಾರಬಾರ ನಡೆದಿದೆ, ೩-೪ ಕೋಟಿ ರೂಪಾಯಿಗಳು ಖರ್ಚಾದವು, ಆದರೂ, ಇದಕ್ಕೆ ಎಷ್ಟು ಖರ್ಚು ತಗಲೀತೆಂದು ಇನ್ನೂ ಯಾರೂ ಹೇಳಲಾರರು. ಈ ಖಾತೆಯವರು ಲಂಚ ತಿನ್ನುತ್ತಾರೆಂದು ಮುಂಬಯಿಯಲ್ಲೆಲ್ಲ ವದಂತಿಯಾಯಿತು. ಮುಂಬಯಿಯ ಪ್ರಸಿದ್ಧ ನಾಗರಿಕರಾದ ಶ್ರೀ। ಖುರ್ಶೇದ ನರಿಮಾನರವರು ಈ ವಿಷಯದಲ್ಲಿ ಸೂಕ್ಷ್ಮವಾಗಿ ಚೌಕಶಿ ನಡಿಸಿ ವಂಚನೆಯ ಪ್ರಕಾರವನ್ನು ಬೈಲಿಗೆಳೆದರು. ಅದರಿಂದ ಈ ಮಣ್ಣು ತುಂಬುವ ಖಾತೆಯ ಮನೆ ಕಟ್ಟುವ ಯೋಜನೆಯ ಸುಪರಿಂಟೆಂಡಿಂಗ ಇಂಜಿನಿಯರರಾದ ಮಿ। ಥೇಮ್ಸ್ ಹಾರ್ವೇಯವರು ಲಂಚದ ಪ್ರಕಾರವನ್ನು ತಮ್ಮ ಮೇಲೆ ಹೊರಿಸಿದ ಬಗ್ಗೆ ಮಿ। ಹೊರ್ಮಸ್‌ಜಿ(?) ದಸ್ತುರರವರ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದು ದಾಖಲ ಮಾಡಿದರು. ಈ ಫಿರ್ಯಾದಿಯ ವಿಚಾರವು ೧೪ ತಿಂಗಳುಗಳ ತನಕ ನಡೆದು, ಶ್ರೀ। ನರಿಮಾನರವರು ನಿರ್ದೋಷರಾಗಿ ಬಿಡುಗಡೆ ಹೊಂದಿದರು. ಇದೊಂದು ದೊಡ್ಡ ದಿಗ್ವಿಜಯವು. ಬ್ರಿಟಿಶ ರಾಜ್ಯಕಾರಭಾರದಲ್ಲಿ ಅಡಗಿಕೊಂಡಿದ್ದ ವಂಚನೆಯ ಪ್ರಕಾರವನ್ನೂ, ಸುಲಿಗೆಯ ಪ್ರಕಾರವನ್ನೂ ಶ್ರೀ। ನರಿಮಾನರವರು ಧೈರ್ಯದಿಂದಲೂ, ನಿರ್ದಾಕ್ಷಿಣ್ಯದಿಂದಲೂ ಪ್ರಕಟಿಸಿದರು. ಮುಂಬಯಿ ಸರಕಾರವು ಎಲ್ಲ ಪ್ರಕಾರದಿಂದಲೂ ಶ್ರೀ। ನರಿಮಾನರವರಿಗೆ ಪ್ರತಿಕೂಲವಾದರೂ ಅವರು ಚಾತುರ್ಯದಿಂದ ವಿಜಯಶ್ರೀ ವಿಭೂಷಿತರಾಗಿದ್ದಾರೆ. ಈ ಪ್ರಕರಣದ ವೃತ್ತಾರ್ಥ ಮುಂಬಯಿಯ "ಇಂಡಿಯನ್ ನೆಶನಲ್ ಹೆರಲ್ಡ" ಪತ್ರಿಕಾಕರ್ತರು 'ನರಿಮಾನ ಸಂಚಿಕೆ'ಯನ್ನು ಪ್ರಕಟಿಸಿದ್ದಾರೆ. ಸರಕಾರವು ಕೈಕೊಂಡ ಲೋಕಾಪವಾದದ(?) ತರತರದ ಪ್ರಕಾರಗಳು ಹೊರಬಿದ್ದಿವೆ. ಅವು ಇದರಲ್ಲಿ ಸಂಗ್ರಹಿಸಲ್ಪಟ್ಟಿವೆ. ಬ್ರಿಟಿಶರ ರಾಜ್ಯಭಾರವು ಬಹು ಚೊಕ್ಕವೆಂದು ತಮ್ಮಷ್ಟಕ್ಕೆ ಪ್ರಶಂಸಿಸಿ ಭಾರತೀಯರಿಗೆ ಹಳಿಯುವವರು ಈ ಪ್ರಕಾರಗಳನ್ನೊಮ್ಮೆ ಪರಾಂಬರಿಸತಕ್ಕದ್ದು.

* * *

೩ ಇಂಚಿನ ಕಂಬಿಗಳು ಅವಶ್ಯವಿದ್ದಿಲ್ಲ, ಅವನ್ನು [illegible] ಸುಪರಿಂಟೆಂಡಿಂಗ ಇಂಜಿನಿಯರರವರು ೮ ಕೆಲಸಕ್ಕೂ(?) ಅತಿಯಾಗಿ ತರಿಸಿದರು; ಎಂದು ನರಿಮಾನರವರ ಆರೋಪವಿತ್ತು. ಈ ಆರೋಪದ ಪ್ರಕಾರ ೩ ಇಂಚಿನ ೩೦ ಸಾವಿರ ಕಂಬಿಗಳು ತರಿಸಲಾದವೆಂದು ಮೆಜಿಸ್ಟ್ರೇಟ ಕೋರ್ಟಿನಲ್ಲಿ ಸಿದ್ಧವಾಗಿದೆ. ಇವು ಅವಶ್ಯವಿದ್ದಿಲ್ಲ; ೩ ಇಂಚ ಇದ್ದದ್ದನ್ನು [illegible] ೩ ಎಂದು ತಿದ್ದುಪಡಿ ಮಾಡಲಿಕ್ಕೆ ಹಾರ್ವೇಯವರೇ ಕಾರಣರು. ಇದರಿಂದ ೪೬ ಸಾವಿರ ರೂಪಾಯಿಗಳ ನಷ್ಟವಾಗಿದೆ. ಇಷ್ಟು ಕಂಬಿಗಳನ್ನು ನಮ್ಮ ಹಿಂದುಸ್ಥಾನ ಸರಕಾರದ ಇಂಗ್ಲಂಡದ ಪ್ರತಿನಿಧಿಗಳಾದ ಹಾಯ್ ಕಮೀಶನರರ ಕಡೆಯಿಂದ ತರಿಸಿದ್ದರೆ, ೪೬ ಸಾವಿರ ರೂಪಾಯಿ ಉಳಿಯುತ್ತಿತ್ತು. ಹಾಗೆ ಹಾಯ್-ಕಮೀಶನರರ ಕಡೆಯಿಂದ ತರಿಸಬೇಕೆಂದು ಸರಕಾರಿ ನಿಯಮವಿದೆ. ಅದನ್ನು ಹಾರ್ವೇಯವರು ಉಲ್ಲಂಘಿಸಿ ಮುಂಬಯಿಯೊಳಗಿನ ಒಂದು ಕಂಪನಿಯಿಂದ ತರಿಸಿಕೊಂಡರು. ಅದರಿಂದ ಇಲ್ಲಿ ಲಂಚ ತಿನ್ನಲಾಯಿತೆಂದು ನರಿಮಾನರವರ ಹೇಳಿಕೆ. ಅದಕ್ಕೆ ಮೆಜಿಸ್ಟ್ರೇಟರು ಒಪ್ಪುವದಿಲ್ಲ. ಹೀಗೆ ಯಾಕೆ ಇಷ್ಟು ಕಂಬಿಗಳು ತರಿಸಲಾದವೆಂದು ಹಾರ್ವೇಯವರ ವಕೀಲರಿಗೆ ಸಹ ನಿವರಿಸಲಾಗಲಿಲ್ಲವೆಂದು ಮೆಜಿಸ್ಟ್ರೇಟರು ಬರೆದಿದ್ದಾರೆ. ಆದರೆ, ಅಜಾಗ್ರತೆಯಿಂದಾಗಲಿ ತಪ್ಪು ಗ್ರಹಿಕೆಯಿಂದಾಗಲಿ, ತಪ್ಪು ಲೆಕ್ಕದಿಂದಾಗಲಿ ಹೀಗೆ ಆಗಿರಬೇಕೆಂದು ಅಭಿಪ್ರಾಯಪಟ್ಟು ಲಂಚದ ಆರೋಪದೊಳಗಿಂದ ಹಾರ್ವೇಯವರನ್ನು ಬಿಡುಗಡೆ ಮಾಡಿದ್ದಾರೆ. ಕೋರ್ಟಿನ ಪೂರ್ವದಲ್ಲಿ ಫಿರ್ಯಾದು ನಡೆದಾಗ [illegible] ಹಾರ್ವೇಯವರ [illegible] ಕ್ಕಾಗಿ ಇದೇ ಪ್ರಕಾರ ವಾದಿಸಿದ್ದರು. ಆದರೆ, ಅಜಾಗ್ರತೆಯಾಗಿ [illegible] ಗಳನ್ನು ೧ ಲಕ್ಷ ರೂ. [illegible] ಹೆಚ್ಚು ಮಾಡಲಿಕ್ಕೆ ಇವರಾಗಿ(?) ಮೆಜಿಸ್ಟ್ರೇಟರು ಉದ್ಗರಿಸಿದರು. ನರಿಮಾನರ ವಂಚನೆಯ ಆರೋಪವೇ ಯೋಗ್ಯವೆಂದು ಮನಗಂಡಿದ್ದರು(?). ಆ ಕಾಲಕ್ಕೆ ಕೋರ್ಟ ತುಂಬ ಜನರಿದ್ದರು. ಹೀಗಿದ್ದು, ಈ ಅಭಿಪ್ರಾಯವು ಕೋರ್ಟಿನಲ್ಲಿ ಯಾಕೆ ನಮೂದಾಗಲಿಲ್ಲವೆಂದು ಆ ಕಾಲಕ್ಕೆ ಹಾಜರಿದ್ದ ವಕೀಲರೊಬ್ಬರು ಬರೆಯುತ್ತಾರೆ. ನರಿಮಾನರಿಗೂ ಪ್ರಸಿ, ಹಾರ್ವೇಯವರಿಗೂ ಪ್ರಸಿ!! ಹೀಗೆ ಮೆಜಿಸ್ಟ್ರೇಟರು ಮಾಡುವ ಕಾರಣವೇನು? ಇದಕ್ಕಾಗಿ ಮಿ। ದಸ್ತುರರವರು ನಿಸ್ಪಕ್ಷಪಾತಿ ಮೆಜಿಸ್ಟ್ರೇಟರೆಂದ ರಾವ್(?) ಮಾಣಿಕಶಾ(?) ವಟೀಲರವರು ಬರೆದಿದ್ದಾರೆ. ಹಾಗಾದರೆ, ಯಾವ ಮೋಹಪಾಶದಲ್ಲಿ ಸಿಲುಕಿದರು?

* * *

ಈ ಪ್ರಕರಣಕ್ಕೆ ಸಂಬಂಧಪಟ್ಟ ಮಹತ್ವದ ದಾಖಲೆಗಳೇ ಕಾಣೆ! ಮಾಣಿಕಜಿಂದ(?) ಕೇಕೋಬಾಜರವರು ೫೦ ಸಾವಿರ ರೂಪಾಯಿ ಚೆಕ್ ಲಿಮಿಟೆಡ ಖಾತೆಯವರ ಕಡೆಗೆ ಖರ್ಚು ಹಾಕಿದ್ದು ಕಾಣುತ್ತದೆ. ಆದರೆ, ಹಾರ್ವೇಯವರಿಗೆ ಕೊಟ್ಟಿದ್ದೋ, ಬೇರೆಯವರಿಗೆ ಕೊಟ್ಟಿದ್ದೋ ಎಂಬ ಬಗ್ಗೆ ದಾಖಲೆಯಿಲ್ಲ. ಇದೇ ಚೆಕ್ಕಿನ ದಾಖಲೆಯು ಮಾಯವಾಗಿದೆ!

* * *

ಮಿ। ಸಿರ್ಜಿಲೂ ಎಂಬವರು ಈ ಹಾರ್ವೇಯವರ ಮಿತ್ರರು. ಇವರೊಂದು ಇಮಾರತು ಕಟ್ಟುವ ಕಂಪನಿಯನ್ನು ಹೊರಡಿಸಿದರು. ಇವರಿಗೆ ಈ ಕಂಟ್ರಾಕ್ಟಿನ ಬಗ್ಗೆ ೪೫೦ ರೂಪಾಯಿ ಕೊಡಬೇಕಾಗಿತ್ತು. ಇವರಿಗೆ ಅದಕ್ಕೆ ಬದಲು ೧೪೪೫೦ ರೂಪಾಯಿ ಕೊಡಲಾದವು. ಇದನ್ನು ಹಾರ್ವೇಯವರೂ ಮಂಜೂರ ಮಾಡಿದ್ದಾರೆ, ಕಾರಕೂನರು ಮಂಜೂರ ಮಾಡಿದ್ದಾರೆ, ಲೆಖ್ಖತಪಾಸಕರೂ ಮಂಜೂರ ಮಾಡಿದ್ದಾರೆ, ಯಾರಿಗೂ ಈ ತಪ್ಪು ತಿಳಿಯಲಿಲ್ಲ. ಈ ಬಗ್ಗೆ ಹಾರ್ವೇಯವರಿಗೆ ಕೇಳಲು, ಪಕ್ಕಾ(?) ಚಿನ್ನದ ಟಪಾಲಿಗೆ ಅಲ್ಪನಿರಾಸು(?) ಚಿನ್ನದ ಗ್ರಹಿಕೆಯಾಗಿ ೧೪ ಸಾವಿರ ರೂಪಾಯಿಗಳು ಹೆಚ್ಚಿಗೆ ಕೊಡಲಾದವೆಂದು ಅವರು ಹೇಳಿದರು. ಅದೇ ಕಂಪನಿಗೆ ೭ ಸಾವಿರ ರೂಪಾಯಿಗಳು ಇನ್ನೊಂದು ಕಂಟ್ರಾಕ್ಟಿನಲ್ಲಿ ಕೊಡಲಾದವು. ನಷ್ಟಭರಣಾಯೆಂದು(?) ಸಿರ್ಜಿಲೂ ಕಂಪನಿಗೆ ಅರ್ಧ ಲಕ್ಷ ರೂಪಾಯಿ ಸಿಕ್ಕಿದವು. ಕೆಲವು ತಿಂಗಳುಗಳ ತನಕ ೩೦ ೪೦ ಸಾವಿರ ರೂಪಾಯಿಗಳು ಸರಕಾರದಿಂದ ಈ ಕಂಪನಿಗೆ ಮುಂಗಡ ಸಿಗುತ್ತಿದ್ದವು. ಬ್ರಿಟಿಶ ರಾಜ್ಯಭಾರವು ಚೊಕ್ಕವಾಗಿರುತ್ತದೆಂದು ಬ್ರಿಟಿಶರ ಪ್ರಶಂಸೆ ಮಾಡುವವರು ಈ ಪ್ರಕಾರಗಳನ್ನು ವಿಮರ್ಶಿಸಲಿ.

* * *

ಮುಕ್ತೋಂದು(?) ಪ್ರಕಾರವಿದೆ. ಮೇಜರ ವಾಸೆಲ್ ಎಂಬವರು ಹಾರ್ವೇಯವರ ಗೆಳೆಯರು. ಅವರೂ ಒಂದು ಕಂಟ್ರಾಕ್ಟ ಕಂಪನಿ ಹೊರಡಿಸಿದರು. ಅವರಿಗೆ ಕಂಟ್ರಾಕ್ಟ ಕೊಡಲಾಯಿತು. ಹಾರ್ವೇಯವರು ಈ ಕಂಪನಿಗೆ ಖಾತೆಯವರು ತರಿಸಿದ ಉಕ್ಕಿನ ಕಂಬಿ ಹಾಗು ಉಕ್ಕಿನ ಸರಿಗೆಗಳನ್ನು ಪೂರೈಸಲು ಬದ್ಧರಿದ್ದರು. ಅವರ ಕಡೆಯಿಂದ ಈ ಸರಕು ಕೊಳ್ಳುವ ದರವು ಸರಕಾರದಿಂದ ನಿಶ್ಚಯಿಸಲಾಗಿತ್ತು. ೧ ಟನ್ ಸರಿಗೆಗೆ ೩೭೫ ರೂಪಾಯಿ, ೧ ಟನ್ ಕಂಬಿಗೆ ೨೦೦ ರೂಪಾಯಿ, ಈ ದರದಿಂದ ವಾಸೆಲ್ ಕಂಪನಿಯವರಿಗೆ ಈ ಕಂಬಿಗಳೂ, ಸರಿಗೆಗಳೂ ಪೂರೈಸಲಾದವು, ಈ ದರದಂತೆ ಹಣವೂ ವಸೂಲಾಯಿತು. ಕೆಲವು ದಿವಸಗಳಲ್ಲಿ ವಾಸೆಲ್‌ರವರು ಹಾರ್ವೇಯವರಿಗೆ ಅರ್ಜಿ ಮಾಡಿ ಸರಿಗೆಗಳನ್ನು ಟನ್ನಿಗೆ ರೂ. ೨೦೦ ರಂತೆ ಪೂರೈಸಬೇಕಾಗಿ ಬಿನ್ನೈಸಿಕೊಂಡರು. ಹಿಂದೆ ಕೊಟ್ಟ ದರದಲ್ಲಿ ಹೆಚ್ಚಿನ ದರ ಆಕರಿಸಲಾದ್ದರಿಂದ ಟನ್ನಿಗೆ ೧೭೫ ದರದಂತೆ ತನಗೆ ಹಣ ಮರಳಿ ತಿರುಗಬೇಕಾಗಿಯೂ ಬಿನ್ನೈಸಿಕೊಂಡರು. ಎಗ್ಸಿಕ್ಯೂಟಿವ್ಹ ಇಂಜಿನಿಯರರು ಮೇಜಿಯಲ್ಲಿ(?) ಸಹ ರೂ. ೩೭೫ ರ ದರವಿರುವದಾಗಿ ರಿಪೋರ್ಟು ಮಾಡಿದರು. ೨೦೦ ರೂಪಾಯಿಯಂತೆ ದರ ಹಿಡಿದರೆ, ನಷ್ಟವಾಗುವದೆಂದೂ ಬರೆದರು. ಹಾರ್ವೇಯವರು ಎಗ್ಸಿಕ್ಯೂಟಿವ್ಹ ಇಂಜಿನಿಯರರ ಟೀಕೆಗೆ ತಲೆದೂಗದಿದ್ದರು(?). ಕೆಲವು ದಿವಸಗಳಲ್ಲಿಯೇ ೨೦೦ ರಂತೆ ದರ ಹಿಡಿದು ಕೊಡಬೇಕಾಗಿ ಸರಕಾರಕ್ಕೆ ಹಾರ್ವೇಯವರೇ ಶಿಫಾರಸ ಮಾಡಿದರು. ಸರಕಾರಿ ನಿಯಮದಂತೆ ಸರಿಗೆ ಟನ್ನಿಗೆ ರೂ. ೨೦೦ ರಂತೆ ಕೊಡಬೇಕಾಗಿ ಹರಕುಮ್ಮರಾದರು(?). ಆ ಶಿಫಾರಸಿನಲ್ಲಿ ನಮೂದಿಸಿದರು. ಹುಕುಮಿನಲ್ಲಿ ರೂ. ೩೭೫ ರ ದರವಿತ್ತು. ಆದರೂ, ಸರಕಾರಿ ಸೆಕ್ರೆಟರಿಗಳು ಹಾರ್ವೇಯವರ ಶಿಫಾರಸನ್ನು ಮಂಜೂರು ಮಾಡಿದರು. ಟನ್ನಿಗೆ ೧೭೫ ರೂಪಾಯಿಯಂತೆ ಹಿಂದೆ ಪಡೆಕೊಂಡ ಹಣವನ್ನು ತಿರುಗಿ ವಾಸೆಲ್‌ರವರಿಗೆ ಸರಕಾರದಿಂದ ಸಿಕ್ಕಿತು. ಸರಕಾರಿ ಹುಕುಮನ್ನು ಲಕ್ಷ್ಯಕ್ಕೆ ತಾರದಲ್ಲಿ(?) ಹೀಗೆ ಮಾಡುವದು ಯಾರು ಹೇಳುವರು? ಮೋಹಿತರಾದರೆ, ಹೀಗೆ ಆದೀತು. ಅಧಿಕಾರದ ಮೋಹ ಇದಕ್ಕೆ ಕಾರಣ. ಲಂಚದ ಬೈಲಿಗೆ(?) ಬರಬಹುದು. ಲಂಚಿನ ಬೈಲಿಗೆಯಾಗಲಿದ್ದರೆ, ಇನ್ನಾವ ನಡಿಯಾಗಿರಬೇಕು?

* * *

ಶ್ರೀ। ನರಿಮಾನರವರಿಗೆ ಸರಕಾರದ ವಿರೋಧದ ಮೂಲಕ ಸಾಕ್ಷಿಗಾರರನ್ನು ಸಂಪಾದಿಸುವದು ಬಲು ಕಠಿಣವಾಯಿತು. ಮುಂಬಯಿಯ ಈ ಖಾತೆಯಲ್ಲಿ ಹಿಂದೆ ಇದ್ದ ಕಾರಕೂನರಿದ್ದರಾಗಿ ಅವರ ಹಕ್ಕಿನ ಕೆಲವು ದಾಖಲೆಗಳಿದ್ದವು. ಪ್ರತ್ಯಕ್ಷ ವರ್ತಮಾನಪತ್ರದ(?) ಹಸ್ತಿ ದಾಖಲೆಗಳು ದಾಖಲ ಮಾಡಿಸಿಕೊಳ್ಳಲಾದವು. ೧೦ ದಿನಗಳಲ್ಲಿ ಅವರ ಸಾಕ್ಷಿಯಾಗುವದಿತ್ತು. ಅವರು ಮನೆಗೆ ಹೋಗುವ ಸ್ಥಳದಲ್ಲಿ ದೊಡ್ಡವರದೊಂದು ಕೃಂಗರಿಸಲ್ಪಟ್ಟ(?) ಮೋಟಾರು ಬಿಡು. ಅವರಿಗೂ, ಅವರ ಹೆಂಡತಿಯವರಿಗೂ ಗಾಯ ಬಿದ್ದಿತು. ಕಡೆತನಕ ಅವರ ಪತ್ತೆ ಸಿಗಲಿಲ್ಲ. ಅದರೂ ಪತ್ತೆ ಕೊಡಲಿಲ್ಲ. ಕಾರಣ

ಬ್ರಿಟಿಶ ವರ್ತಕರ ಸುಲಿಗೆಗಾಗಿ ಹಿಂದುಸ್ಥಾನದಲ್ಲಿ ಬ್ರಿಟಿಶರ ಆಡಳಿತೆ.

ಪಿದೆ ಅವರಿಗೆ ಚಳಿ [illegible] ಕೊಡಲ್ಪಟ್ಟಿತ್ತೆ [illegible] ಶಿಂದಿಯಿಂದು ಅವ [illegible] ಸ ವಿದಿಂದ ಉದ್ಯೋಗ [illegible] ಪರಿವಾನರವರಿಗೆ ಜಿದ ನಡೆಯಿಸಿದ ಬಳಿಕ ಅವರಿಗೆ ಅಧಿನ ದಿಸಿ ಮುಂಬಯಿಗೆ ತಾನ [illegible] ಅವರ [illegible] ಇದೆಂಥ ನ್ಯಾಯ ಇಂಥ ನ್ಯಾಯ [illegible] ಬ್ರಿಟಿಶ ರಾಜ್ಯದಲ್ಲಿಯೆ ?

**

[illegible] ಗಾರವಿಯು ರೂ ಪಲಪಲ್ಲಿ ಜಿವಿಸ್ತರು [illegible] ವ್ಯಕ್ತಿನಾಗ [illegible] ನಡಿಸಬೇಕ [illegible] ಜಾರಿಗೆ ಅರ್ಜಿ [illegible] ಅವರೂ, [illegible] ವೀ [illegible] ಪ್ರೈಸಿಕ ಸರಕಾರ ದ [illegible] ವ ನೆವಾದ ಪ್ರತ್ಯೇಕ ವಕೀಲರನ್ನ [illegible] ವಾನೇಯವರಿಗೆ ಬೆ [illegible] ಶಿಂಗಳ [illegible] ಪರ ಮುನಸ್ಥಿತಿಯ [illegible] ಗೈದ್ದ [illegible] ವರಿಂದ ಕೆಲಸ ಆಗುವಂತಿದ್ದಿಲ್ಲ [illegible] ಬ್ರಿಟಿಶರ [illegible]

**

ಸ್ಥಿತಿಯನ ನೋಡಿರಿ [illegible] ಲೆಕ್ಕ [illegible] ಬನ್ನಿ [illegible] ಸಭಾಸದರಿಗೆ ಅಧಿಕಾರವಿದೆ [illegible] ರಣೆತೆ ಶ್ರೀ। ಪರಿವಾನರವರು ಉಕ್ತ [illegible] ವಿಷಯ ಮಾಹಿತಿ [illegible] ಇದೇ ಕೊಟ್ಟಿಯನ್ನೆ ಆತಗಿಸುವ ಉತ್ತರ ಶಿಕ್ಕ [illegible] ಈ ಉತ್ತರಗಳಿಂದ ಪರಿವಾನರವರು ಸಮಾಧಾನಪಡದೆ, [illegible] ರರ ವೇಳೆ ನಿರಾಧಾರ [illegible] ಶಿಂದ ಆರೂ ಪ ಮಾಡಿದರಾಗಿ ಮುಂಬಯಿ ಸರಕಾರಕ್ಕೆ ಅಸ [illegible] ಗಿ, ಈ ಖಟಿಗೆ ನಿರುಪಾಯ [illegible] ಸರಕಾರವು ಮಂ ಜೂರಿ ಕೊಡಬೇಕಾಯಿತೆಂದು ಮ. ಜೂರಿ ತುಕಿವಿ ವಲ್ಲಿ ನಮೂದಿಸೋಣಾಗಿದೆ ಕೌನ್ಸಿಲಿನಲ್ಲಿ [illegible] ಉತ್ತರವು ಸುಳ್ಳೆಂದು ಪೆಟಿಟ್ಟೇಕರು ಅಭಿಪ್ರಾಯಪ ಟ್ಟು, ಸುಳ್ಳು ಮಾಹಿತಿ ಪ್ರಕೈಸಿದ ಹಾವೇರಿಯವರು ಮಾನನಷ್ಟದ ಫಿರ್ಯಾದಿ ಮಾಡುವದು ಪ್ರಶಸ್ತ ತೋರುವದಿಲ್ಲವಾಗಿ ಪೆಟಿಟ್ಟೇಕರು ಉದ್ಗರಿಸಿದ್ದಾರೆ ಈ ಶಿಫಾರಸು ಸಾಲದೇ?

**

ಮಣ್ಣು ತುಂಬುವ ಖಾತೆಯ [illegible] ರೂ [illegible] ಸಾವಿರ ಕ್ಕೆ ವಿಕ್ಕಿ ಸಂಬಳ ಪಡೆಯುವ [illegible] ಗುಪ್ತೆಗಳಿದ್ದವು ಅವುಗಳಲ್ಲಿ ೧೯ [illegible] ಪ್ರಗಳು [illegible] ರೋಪಿಯನ್ನರಿಗೆ ೧॥ ಲಕ್ಷ ರೂಪಾಯಿಗಳ ಸಾಲಿಯಾನ ಮೋಳ 'ಬ ಚಾವಸ' ಕಂಪನಿಯ ವರು ಮಣ್ಣು ತುಂಬುವ ಕೆಲಸದ ಮೇಲ್ತನಿಖೆಗಾಗಿ ಶಿನ್ನು [illegible] ಬಂದಿದ್ದಾರೆ ಹೀಗೆಯೇ ೧೨ ಲಕ್ಷ ರೂಪಾಯಿ [illegible] ದೇರೂಂದ ಇಂಜಿನಿಯ ರಿಂಗ ಕಂಪನಿಯವರು ಆಲೋಚನೆ ನಡೆದ ಬಗ್ಗೆ ಪಡೆಕೆ [illegible] ಇಷ್ಟೆಲ್ಲ ಆಲೋಚನೆ, ಪೋಲ್ರ [illegible] ಸ್ನು [illegible] ವೇಳೆ ಯುರೋ [illegible] ಆಡಳಿತೆ, ಹೀಗೆಲ್ಲ ಸಾಲಷ್ಟು ಬದಿಗೆ [illegible] ಸುತ್ತುಗಟ್ಟಿದ ಈ ಯೋಜನೆಯು ಕೆಲಸ [illegible]

**

ಶ್ರೀ। ಪರಿವಾನರವರು ಈ [illegible] ಜನೆಗಳನ್ನು ಚೌಕಶಿ ಮಾಡಲು [illegible] ನೇಮಿಸಬೇಕಾಗಿ [illegible] ತಿಂಗಳ ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶ ನದಲ್ಲಿ ಶಿವರ್ಾನವನ್ನು ಸೂಚಿಸಿದರು ಅದಕ್ಕೆ ಸರಕಾರವು [illegible] ವಿರೋಧಿಸಿತು ಆದರೂ ಬಾಹ್ಯಕೆ ಶರ ಶ್ರೀ। ಪರಿವಾನರವರಿಗೆ ತಮ್ಮ ಬೆಂ ಬಲ ಕೊಟ್ಟ [illegible] ಕದಿಂದ ಆ ಶಿವರ್ಾನವನ್ನು ಮನ್ನಿಸಿಕೊ [illegible] ಮುಸಲ್ಮಾನರು ಅವ ರಿಗೆ ನೆರವಾಗ ಬವರಿದ್ದರ ಆದರೆ ಪಾಪ! ಮುನೋ ಥೈ [illegible] ನಾಲ್ವರಿಗಂತ ಬಹಳೇ ದೊಡ್ಡ ಸಂಕ [illegible] ಪರಿವಾನರವರಿಗೆ ಬೆಂಬಲ ಕೊಡಬೇ ಕೆಂದು ಅಳ ಸರಕಾರದ ಇದಿರಿಗೆ ಅನ ಕೂಲವಾಗ ಲ ದಾಕ್ಷಿಣ್ಯ ಅದರಿಂದ ಚರ್ಚೆ [illegible] ಸದ [illegible] ಸಭೆಯ [illegible] ಹೊರಬಂದವರು ಒಳಗೆ ಹೋಗದೇ ಇಲ್ಲ ಸರಕಾರವು ವಿಗಿಲು ಬಿತ್ತು ದೂಕ [illegible] ಕಳ್ಳಿಸಿ ಕೊಣಾಯಿತು ಪೋಟಾರುಗಳು ಓಡಿದ ವು ಆದರೂ ವರ್ತ್ಮಾನಗಳಿಲ್ಲ ಕೊನೆಗೆ ಸಿಂಧದ [illegible] ಕೌನ್ಸಿಲಿನಲ್ಲಿ ಸ ತ್ಯಾಮುತ್ತಿರುವ ಉ [illegible] ವನದಲ್ಲಿ ಶೋಧಿಸುತ್ತಿರುವಾಗ ಇವರೊಂದು ಕಡೆ ಪ ರವಿತಿಗೆ [illegible] ಗಿಕೊಂಡಿದ್ದು ಕಂಡ ಬಂತ ಕೂಡ ಲೆ [illegible] ದೇಣಗಾಲೂರಿ ಈಶಪ್ರಾರ್ಥನೆಯ [illegible] ರ ಅವರೂ ಅ ಅಧಿಕಾರಿಗಳು ಕೇ [illegible] ಗೆ [illegible] ಹೋದರ ಸರಕಾರದ [illegible] ಅವರು ಮತ ಕೊಟ್ಟರ ಪರಿವಾನರ ವರ [illegible] ಬೆ [illegible] ಆದರೂ, ಪರಿವಾನರವ ರ [illegible] ಬಹ [illegible] ವ ಮು [illegible] ಕೌನ್ಸಿಲಿನ ಸಭಾಸದರ ಅವಸ್ಥೆ ನೋ ಡಿದಿರಾ ! ದುರ್ಬಲರ ಸಕ್ಕರಿದ್ದಾಗ, ಆಗುವ ಗತಿ ಹೀಗಯೆ

**

ಈ [illegible] ದಿನವೃತ್ತ ತವ್ವ ವ ಕಡ್ತಿ ಬೋಧಪ್ರದ ಪಿದೆ ಇಷ್ಟೆಲ್ಲ [illegible] ಸದಿಂದ ಮಂಜೂರ ಮಾಡಿದ ಶಿವರ್ಾನನ್ನು ಸರಕಾರವು ಮನ್ನಿಸಲಿಕ್ಕಿಲ್ಲ ಮಹಾಮಾನಪತ್ರಿಕೆಗಳಲ್ಲಿಯೂ ಕಾಯಿದೆ ಕೌನ್ಸಿಲು ಗಳಲ್ಲಿಯೂ ಕೈಕೊಂಡ ಪ್ರಯತ್ನಗಳೆಲ್ಲ ನಿರರ್ಥಕ ವಾದವು ಶಿವರ್ಾನವು ಮಂಜೂರಾದರೂ, ಸರಕಾ ರವು ಅದರಂತೆ ನಡಕೊಳ್ಳಲಿಕ್ಕಿಲ್ಲವೆ ನು ಚರ್ಚೆ ಇಕ್ಯವಾದ [illegible] ತನಕ ಸರಕಾರವು ಹೇಳಲಿಲ್ಲ ಇದಸ್ಟೆಲ್ಲ [illegible] ಪರಿವಾನರವರು ಈ ಧೋ ರಣವಿ [illegible] ಯ ಲ್ಲಿ ಹರವಿದ ಲ ಚಿದ ಪ್ರಕಾ ರಗಳ [illegible] ಗಳಿಗೆ ಆದಾರ ದೊರಕುತ್ತದಾಗಿ ಸರಕಾರ ಕ್ಕೆ ಒರೆದರ ಆದರೂ, ಸರಕಾರವು ಚೌಕಶಿ ಮಾಡ ಲವಪ್ಪನೆ ಮಿಸಲಿಲ್ಲ

**

ಸರಕಾರವು ಸರ್ ಗ್ರಿವ "ವುಡ" ಮೆರ್ಸರವರ ಅಧ್ಯಕ್ಷತೆಯಲ್ಲಿ ಉಪದೇಶಕ ಮಂಡಳವೊಂದನ್ನು ಘಟಿಸಿದ್ದರು. ಈ ಉಪದೇಶಕ ಮಂಡಳದಲ್ಲಿ ಮುಂಬ ಯಿಯ ಶ್ರೀ। ಮುಸುಭೇದಾರರವರು ಸಭಾಸದರು ಈ ಖಾತೆಯ ಲಿಖ್ಖು ಸರಿಯಿಲ್ಲೆಂದು ಅವರು ಉದ್ಗರಿಸಿ ದ್ದಾರೆ ಮುಂಬಯಿಯ [illegible] ಹೆಸರುಗೊಂಡ "ವಾಲನ ಜೀ ಎಪಲಜೀ ಸನ್ಸ" ಕಂಪನಿಯವರಿಗೂ, "ಪಾ ರ್ಲಂಡ ಗ್ರಾಸ್ಸ" ಕಂಪನಿಯವರಿಗೂ ಹಿಂದು ಸಹ ಈ ಖಾತೆಯ ಕಂಟ್ರಾಕ್ಟ ಶಿಗಲಿಲ್ಲ ಈ ಕಂಪ ನಿಯವರು ಕೊಟ್ಟ ದರವು ಶೀರ ಕಡಿಮೆಯಾಯಿತ [illegible] ರ ಕಡಿಮೆ ದರದಲ್ಲಿ ಚಲೋ ಕೆಲಸವಾಗಲಿಕ್ಕಿ ಲ್ಲೆಂದು ಇವರಿಗೆ ಕೆಲಸ ಕೊಡೋಣಾಗಲಿಲ್ಲ, ಚಲೋ [illegible] ಜಿನಿಸು ದರಿಲ್ಲೆಂಬ ನೆವದಿಂದ ಇನ್ನೊಂದು ಕೆಲಸ ಶಿಗಲಿಲ್ಲ, ಬರೇ ೧॥ ಲಕ್ಷ ಬಾಂದವಲಿನಿಂದ ಈ ಕೆಲಸ ಸಾಗದೆಂಬ ನೆವ ಹೇಳಿ, ಇನ್ನೊಂದು ಕಂಟ್ರಾಕ್ಟ ಕೊಡೋಣಾಗಲಿಲ್ಲ ಹೊಸದಾಗಿ ಬಸ್ಮವನ್ನೆತ್ತಿದ ಕಂಟ್ರಾಕ್ಟರರಿಗೆ ಹೆಚ್ಚಿನ ದರದಿಂದ ಸಹ ಕಂಟ್ರಾಕ್ಟು ಶಿಕ್ಕಿದವೂ ಇನ್ನೆಷ್ಟು ವಿಚಾರ ಹೇ ವಿಷಯಗಳೆಂದು ಶ್ರೀ। ಮುಸುಭೇದಾರರವರು ಸೂಚಕ ವಿಧಾನ ಮಾ ಡಿದ್ದಾರೆ

**

ಈ ಸಭ್ಯತನ ನೋಡಿರಿ ಸರ್ ಗ್ರಿವ್‌ವುಡ್ ಮೆರ್ಸರವರ ಅಧ್ಯಕ್ಷತೆಯಲ್ಲಿ ಉಪದೇಶಕ ಮಂಡಳವು ರಚಿಸೋಣಾಗಿತ್ತು ಈ ಮಂಡಳಕ್ಕೆ ಹಿಂದಿನ ಪಾಪ ವಿಚಾರದ ಅಧಿಕಾರವಿಲ್ಲವಾಗಿ ಶ್ರೀ। ಪರಿವಾನರವರ ತಕ್ರಾರಿತ್ತು ಅದರಿಂದ ಪರಿವಾನರವರು ಈ ಮಂ ಡಳದ ಬಳಿ ಸಾಕ್ಷಿ ಕೊಡಲಿಕ್ಕೆ ಒಪ್ಪೊಂದು ಅತುರ ಪಡ ತ್ತಿರಲಿಲ್ಲ ಆದರೂ, ಮುಂಬಯಿಯಲ್ಲಿ ಅವರಿಗೆ ಸಾಕ್ಷಿ ಕೊಡಲು ನಿಮಂತ್ರಿಸೋಣಾಯಿತು ನಿಮ್ಮ ಅನುಕೂಲತೆಯಂತೆ ಬೇಕಾದ ದಿವಸ ಬರಬಹುದಾಗಿ ೪ ೫ ದಿನಗಳ ಅವಕಾಶವೂ ಪರಿವಾನರವರಿಗೆ ಕೊ ಡೋಣಾಯಿತು ವಂಚನೆ ಮಾಡಿದವರ ಹೆಸರು ಕೊಡಬೇಕಾಗಿಯೂ, ರಕಮಿನ ನಿರ್ದೇಶಮಾಡಬೇ ಕಾಗಿಯೂ ಹೇಳೋಣಾಯಿತು ಇಷ್ಟೆಲ್ಲ ಪ್ರಸ್ತಾವನೆ ಯಾಗಿ ಶ್ರೀ। ಪರಿವಾನರವರ ಸಾಕ್ಷಿ ಕೊಳ್ಳೋಣಾ ಯಿತು ಹೀಗೆ ಕೊಟ್ಟ ಸಾಕ್ಷಿಯಲ್ಲಿ ಮಾನನಷ್ಟವಿರು ವದಾಗಿ ಸರಕಾರದ ಖಟ್ಲೆ ಸಾರ್ವಜನಿಕ ಹಿತಕ್ಕಾಗಿ ಚನ್ನಾಗಿ ನಿವಂತ್ರಿಸಿ ಖಟ್ಲೆ ಮಾಡುವದು ವಿಹಿತವೇ? ಯಾರಾದರೂ ಇಂಥ ಕವಿಟಿಗಳ ಬಳಿ ಇನ್ನು ದೂರುವದುಳಿಯಿತೇನು? ಹೀಗೆ ಅಧಿಕಾರಿಗಳ ಪಾಪ ಗಳನ್ನು ಹೊರಗೆಡಹುವದಿಲ್ಲವಾದರೆ, ಚೌಕಶಿ ಮಂಡ ಳದ ಪಾತ್ರವಾಗಳೇಕೆ?

**

ಕೊನೆಯದೊಂದು ಮಾತು ಮುಂಬಯಿಯ ಸಮುದ್ರದಲ್ಲಿ ಮಣ್ಣು ತುಂಬಿ ಹೊಸ ಸೃಷ್ಟಿ ಮಾಡು ವ ಯೋಜನೆಗೆ ಅವಶ್ಯವಾದ ಅನೇಕ ಯಂತ್ರಸಾ ಮಗ್ರಿಯು ಪ್ರಾಂತಾಧಿಪರಾಗಿದ್ದ ಜೊರ್ಜ ಲೊಯಿ ಡ್ ದೊರೆಗಳ ಖಾಸಗಿ ಪತ್ರಿಯ ಮೇಲೆ ಬಂದಿರುತಿ ತ್ತು ಯಾರಿಗೂ ವಿಚಾರಿಸದೆ ಈ ಯಂತ್ರಸಾಮಗ್ರಿ ಯು ತರಿಸೋಣಾಯಿತು ಇದರ ಮೇಲಿಂದ ಲೊಯಿ ಡ್ ದೊರೆಗಳು ಇಂಗ್ಲಂಡದೊಳಗಿನ ಯಾಂತ್ರಿಕ ಕಾರಖಾನೆಗಳಿಗೆ ಉದ್ಯೋಗ ಸಂಪಾದಿಸಿಕೊಡುವ ಸ್ವಾರ್ಥದಿಂದ ಈ ಲೋಕೋಪಕಾರದ ವೇಷವನ್ನು ದೊರೆಗಳು ಬದಕೊಂಡರೆಂದು ಸೋಲಿಸಿಟರರಾದ ಡಾ। ಬಿ ಡಿ ಶಾಪುರವರು ಬರೆಯುತ್ತಾರೆ ಡಾ। ಎಮ್. ಬಿ ವೇಲಕರ, ಎಲ್ ಎಮ್ ಎಂಡ್ ಎಸ್ ರವರು ಹಿಂದೆ ಸರ್ವಾಧಿಪತಿಗಳಾಗಿದ್ದ ಕರ್ಝೋನ್ ದೊರೆಗಳ ಒಂದು ಉದ್ಗಾರವನ್ನು ನಮೂದಿಸಿ ಬ್ರಿಟಿಶ ರಾಜ್ಯಭಾರದ ಮರ್ಮವನ್ನು ಸೂತ್ರರೂಪ ದಿಂದ ಹೇಳಿದ್ದಾರೆ ಸರ್ವಾಧಿಪತಿ ಕರ್ಝೋನ್ ದೊರೆಗಳು ತಮ್ಮ ಅಧಿಕಾರದ ಶೆ [illegible] ಕೊಂಡು ಸ್ವದೇಶಕ್ಕೆ ತೆರಳುವಾಗ, ಮುಂಬಯಿಯ ಯ ಯುರೋಪಿಯನ್ ವರ್ತಕ ಸಂಘದವರು ಬಾಯಿಖ ಳಾ ಕ್ಲಬ್ಬಿನಲ್ಲಿ ಅವರಿಗೊಂದು ಮೇಜವಾನಿಯನ್ನಿತ್ತು ಸತ್ಕರಿಸಿದರು ಆ ಕಾಲಕ್ಕೆ ಕರ್ಝೋನ್ ದೊರೆಗಳು ನುಡಿದದ್ದೇನಂದರೆ:- "ನಿಮಗೆ (ವರ್ತಕರಿಗೆ) ಹಿಂದು ಸ್ಥಾನವನ್ನು ಸುಲಿಯಲನುವಾಗಬೇಕೆಂದು ನಾವು ಹಿಂದುಸ್ಥಾನದ ಕಾರಭಾರವನ್ನು ನಡಿಸುತ್ತೇವೆ" ಈ ಸೂತ್ರವನ್ನು ಶ್ರೀ। ಪರಿವಾನರವರು ಸಪ್ರಮಾಣ ನಿರೂಪಿಸಿದ್ದಾರೆ ಸರಕಾರಿ ದಾಖಲೆಗಳಿಂದ, ಸರಕಾ ರಿ ಅಧಿಕಾರಿಗಳ ಬಾಯಿಯಿಂದ, ಸರಕಾರಿ ನ್ಯಾಯಾ ಸನದಲ್ಲಿ, ಸರಕಾರಿ ಕಾಯಿದೆಯನ್ವಯ ಈ ಸಿದ್ಧಾಂತ ವನ್ನು ಅವರು ಮಂಡಿಸಿದ್ದಾರೆ. ಇದು ಮುಖ್ಯಕಾ [illegible] ವೆಂದು ಎಲ್ಲರೂ ಅಭಿನಂದಿಸುತ್ತಾರೆ, ನಾವೂ ಅವರಿಗೆ ಅನಂತವಿಂದ ಅಭಿನಂದಿಸುತ್ತೇವೆ